ಶ್ರೀಮದಾನಂದತೀರ್ಥ ಭಗವತ್ಪಾದಾಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೦

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಕ್ಷೀರಾಬ್ಧ್ಯಾನ್ಮಥನಾದಿಕಾತ್ಮಚರಿತಂ ದೇವೈರ್ಗೃಣದ್ಭಿಃ ಸ್ತುತಃ
ಸಜ್ಞಾನಾಯ ಪರಾಶರಾಖ್ಯಮುನಿನಾ ಯಃ ಸತ್ಯವತ್ಯಾಮಭೂತ್ ।
ವ್ಯಾಸತ್ವೇನ ವಿಧಾಯ ವೇದವಿವೃತಿಂ ಶಾಸ್ತ್ರಾಣಿ ಸರ್ವಾಣ್ಯಪಿ
ಜ್ಞಾನಂ ಸತ್ಸು ನಿಧಾಯ ತದ್ಗತಕಲಿಂ ನಿಘ್ನನ್ ಸ ನೋಽವ್ಯಾದ್ ಹರಿಃ ॥ ೧೦ ॥

'ದೇವತೆಗಳು ಹರಿಯ ಕ್ಷೀರಸಮುದ್ರ ಮಥನಾದಿ ಚರಿತ್ರೆಯನ್ನು ಹೊಗಳುತ್ತ ಸಜ್ಞಾನಕ್ಕಾಗಿ ಸ್ತೋತ್ರ ಮಾಡಿದರು. ಹರಿ ಪರಾಶರನೆಂಬ ಮುನಿಯಿಂದ ಸತ್ಯವತಿಯಲ್ಲಿ ವ್ಯಾಸನಾಗಿ ಅವತರಿಸಿ ವೇದ ವಿಭಾಗವನ್ನೂ ಸರ್ವಶಾಸ್ತ್ರಗಳನ್ನೂ ಮಾಡಿ ಜ್ಞಾನವನ್ನು ಸಜ್ಜನರಲ್ಲಿ ನಿಲ್ಲಿಸಿ ಅವರಲ್ಲಿದ್ದ ಕಲಿಯನ್ನು ನಾಶಮಾಡಿದನು. ಅಂಥ ಹರಿ ನಮ್ಮನ್ನು ರಕ್ಷಿಸಲಿ'.

ಶ್ರೀಮದಾನಂದತೀರ್ಥ ಭಗವತ್ಪಾದಾಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೦

ಶ್ರೀವೇದವ್ಯಾಸಾವತಾರ

॥ ಶ್ರೀ ಗುರುಭ್ಯೋ ನಮಃ ಹರಿಃ ಓಂ ॥

ದ್ವಾಪರೇಽಥ ಯುಗೇ ಪ್ರಾಪ್ತೇ ತ್ವಷ್ಟಾವಿಂಶತಿಮೇ ಪುನಃ।
ಸ್ವಯಂಭು ಶರ್ವ ಶಕ್ರಾದ್ಯಾ ದುಗ್ಧಾಬ್ಧೇಸ್ತೀರಮಾಯಯುಃ ॥ ೧ ॥

ಶ್ರೀ ವೇದವ್ಯಾಸರು ಹಿಂದೆ ಅನೇಕ ದ್ವಾಪರಗಳಲ್ಲಿ ಅನೇಕ ಬಾರಿ ಅವತರಿಸಿದ್ದರು. ಪುನಃ ಇಪ್ಪತ್ತೆಂಟನೆ ದ್ವಾಪರದಲ್ಲಿಯೂ ಆ ಯುಗದ ಕೊನೆಯಲ್ಲಿ ಅವತರಿಸಲಿ ಎಂದು ಪ್ರಾರ್ಥಿಸುವುದಕ್ಕಾಗಿ ಬ್ರಹ್ಮ ರುದ್ರ ಇಂದ್ರಾದಿಗಳು ಕ್ಷೀರಸಮುದ್ರತೀರಕ್ಕೆ ಬಂದರು.

ವಿವರಣೆ : ಹಿಂದೆ ಈ ವೈವಸ್ವತ ಮನ್ವಂತರದ ಮೂರನೆ ಏಳನೆ ಹದಿನಾರನೆ ಮತ್ತು ಇಪ್ಪತ್ತೈದನೆ ದ್ವಾಪರಗಳ ಕೊನೆಯಲ್ಲಿ ಶ್ರೀಹರಿ ವೇದವ್ಯಾಸಾವತಾರ ಮಾಡಿದ್ದ[1]. ಪುನಃ ಇಪ್ಪತ್ತೆಂಟನೆ ದ್ವಾಪರದ ಕೊನೆಯಲ್ಲಿಯೂ ಅವತರಿಸಲಿ ಎಂದು ದೇವತೆಗಳ ಬಯಕೆ. ದ್ವಾಪರೇ ಪ್ರಾಪ್ತೇ ಎಂದರೆ ದ್ವಾಪರ ಬಂದಾಗ ದ್ವಾಪರದ ಆದಿಯಲ್ಲಿ ಎಂದರ್ಥವಲ್ಲ. ದ್ವಾಪರಯುಗೇ ಮುಗಿಯುತ್ತ ಬರಲು ಅದರ ಕೊನೆಯಲ್ಲಿ ಎಂದರ್ಥ.[2]

ಪಯೋಬ್ಧೇರುತ್ತರಂ ತೀರಮಾಸಾದ್ಯ ವಿಬುಧರ್ಷಭಾಃ।
ತುಷ್ಟುವುಃ ಪುಂಡರೀಕಾಕ್ಷಮಕ್ಷಯಂ ಪುರುಷೋತ್ತಮಮ್ ॥ ೨ ॥

ಕ್ಷೀರಸಮುದ್ರದ ಉತ್ತರತೀರವನ್ನು ಸೇರಿ ದೇವಶ್ರೇಷ್ಠರು ನಾಶರಹಿತನಾದ ಕಮಲಾಕ್ಷನಾದ ಪುರುಷೋತ್ತಮನನ್ನು ಸ್ತುತಿಸಿದರು.

[3]ಮೂವತ್ತೆರಡು ಲಕ್ಷ ಯೋಜನ ವಿಸ್ತಾರದ ಕ್ಷೀರಸಮುದ್ರದ ನಡುವೆ

---

1. ತೃತೀಯೇ ಸಪ್ತಮೇ ಚೈವ ಷೋಡಶೇ ಪಂಚವಿಂಶಕೇ ।
   ಅಷ್ಟಾವಿಂಶೇ ಯುಗೇ ಕೃಷ್ಣಃ ಸತ್ಯವತ್ಯಾಮಜಾಯತ ॥ -ಭಾಗತಾ.27.7.36
2. ದ್ವಾಪರಯುಗೇ ಪ್ರಾಪ್ತೇ ಪ್ರಕರ್ಷೇಣ ಆಪ್ತೇ ವ್ಯಾಪ್ತೇ ಸಮಾಪ್ತ ಪ್ರಾಯೇ ಸತಿ। -ಜನಾರ್ದನೀಯ
3. ದ್ವಾತ್ರಿಂಶಲ್ಲಕ್ಷಯೋಜನವಿಸ್ಮೃತಕ್ಷೀರಸಮುದ್ರಮಧ್ಯೇ ಶ್ವೇತದ್ವೀಪಃ ಸ ಚ ದಕ್ಷಿಣಕ್ಷೀರ ಸಮುದ್ರಪ್ರವಾಹಸ್ಯ ಉತ್ತರತೀರೇ ಇತಿ ಭಾವಃ । -ವಾದಿರಾಜೀಯ

ಶ್ವೇತದ್ವೀಪವಿದೆ. ಅದರಿಂದ ಅದು ದಕ್ಷಿಣ ಕ್ಷೀರಸಮುದ್ರ ಪ್ರವಾಹದ ಉತ್ತರ ತೀರದಲ್ಲಿದೆ.

ನಮೋ ನಮೋಽಗಣ್ಯಗುಣೈಕಧಾಮ್ನೇ ಸಮಸ್ತವಿಜ್ಞಾನಮರೀಚಿಮಾಲಿನೇ।
ಅನಾದ್ಯವಿಜ್ಞಾನತಮೋ ನಿಹಂತ್ರೇ ಪರಾಮೃತಾನಂದಪದಪ್ರದಾಯಿನೇ ॥ ೩ ॥

ಅಗಣಿತ ಗುಣಗಳಿಗೆ ಮುಖ್ಯಾಶ್ರಯನೂ ಪೂರ್ಣಜ್ಞಾನಪ್ರಕಾಶಗಳ ಮಾಲೆ ಉಳ್ಳವನೂ ಅನಾದಿ[1] ಅಜ್ಞಾನದ ಕತ್ತಲನ್ನೂ ನಾಶಪಡಿಸುವವನೂ ಉತ್ತಮ ಜೀವರಿಗೆ ಶ್ರೇಷ್ಠವಾದ ಶಾಶ್ವತಾನಂದ ರೂಪ ಮೋಕ್ಷ ನೀಡುವವನೂ ಆದ ಹರಿಗೆ ನಮೋನಮಃ

ಅನಾದಿ[1] ಅಜ್ಞಾನ ನಾಶಕನಿಗೆ ಸಾದಿಯಾದ ಗೌತಮ ಶಾಪಜನ್ಯ ಅಜ್ಞಾನ ನಿವಾರಣೆ ಕಷ್ಟ ಸಾಧ್ಯವೆ? ಎನ್ನುವುದನ್ನು ಇಲ್ಲಿ 'ಅನಾದಿ' ಪದ ಸೂಚಿಸುತ್ತಿದೆ.

ದುರ್ವಾಸ ಶಾಪ

ಸ್ವದತ್ತಮಾಲಾಭುವಿಪಾತಕೋಪತೋ ದುರ್ವಾಸಸಃ ಶಾಪತ ಆಶು ಹಿ ಶ್ರಿಯಾ।
ಶಕ್ರೇ ವಿಹೀನೇ ದಿತಿಜೈಃ ಪರಾಜಿತೇ ಪುರಾ ವಯಂ ತ್ವಾಂ ಶರಣಂ ಗತಾಃಸ್ಮಃ ॥ ೪ ॥

ತಾನು ದೇವೇಂದ್ರನಿಗೆ ಕೊಟ್ಟ ಹೂಮಾಲೆ ನೆಲದಲ್ಲಿ ಬಿದ್ದುದನ್ನು ಕಂಡು ಕೋಪದಿಂದ ದುರ್ವಾಸರು ಶಪಿಸಿದರು. ಒಡನೆ ಇಂದ್ರ ಐಶ್ವರ್ಯದಿಂದ ಚ್ಯುತನಾಗಿ ದೈತ್ಯರಿಂದ ಪರಾಜಿತನಾದ. ಅದರಿಂದ ನಾವು ನಿನ್ನನ್ನು ಶರಣು ಹೊಂದಿದ್ದೇವೆ.

ದುರ್ವಾಸಶಾಪ ವೃತ್ತಾಂತ ವಿಷ್ಣುಪುರಾಣದಲ್ಲಿ ಹೀಗೆ ಬರುತ್ತದೆ- ಐರಾವದ ಮೇಲೆ ಪ್ರಯಾಣ ಮಾಡುತ್ತಿದ್ದ ಇಂದ್ರನ ಮೇಲೆ ದುರ್ವಾಸರು ಒಂದು ಹೂಮಾಲೆ ಎಸೆದರು. ಅಹಂಕಾರಿಯಾದ ಇಂದ್ರ ಅದನ್ನು ಅನಾದರದಿಂದ ಐರಾವತದ ತಲೆ ಮೇಲೆ ಎಸೆದ. ಐರಾವತ ಅದನ್ನು ಸೊಂಡಿಲಿನಿಂದ ಎತ್ತಿ ನೆಲಕ್ಕೆ ಎಸೆಯಿತು. ದುರ್ವಾಸರು ಕೋಪಗೊಂಡು, 'ದೇವೇಂದ್ರ, ಐಶ್ವರ್ಯ ಮದಮತ್ತನಾಗಿರುವ ನಿನ್ನ ಮೂಲೋಕದ ಸಿರಿ ಕಣ್ಮರೆಯಾಗಲಿ.' ಎಂದು ಶಾಪವಿತ್ತರು. ಒಡನೆಮೂರ್ಲೋಕದಲ್ಲಿ ವ್ಯಾಪಿಸಿದ್ದ ಮಹಾಲಕ್ಷ್ಮಿ ಅಂತರ್ಧಾನಗೊಂಡಳು.

ಕ್ಷೀರಸಮುದ್ರ ಮಥನ

ತ್ವದಾಜ್ಞಯಾ ಬಲಿನಾ ಸಂದಧಾನಾ ವರಾದ್ ಗಿರೀಶಸ್ಯ ಪರೈರಚಾಲ್ಯಮ್।
ವೃಂದಾರಕಾ ಮಂದರಮೇತ್ಯ ಬಾಹುಭೀರ್ನಶೇಕುರುದ್ಧರ್ತುಮಿಮೇ ಸಮೇತಾಃ ॥೫॥

---

1. ಅನಾದಿಪದಂ ಸಾದಿ ಗೌತಮ ಶಾಪಜಾಜ್ಞಾನ ನಿರ್ಹರಣ ಶಕ್ತಿಃ ಕಿಂ ವಾಚ್ಯೇತಿ ಸೂಚನಾಯ।-ವಾದಿ

ತದಾ ತ್ವಯಾ ನಿತ್ಯಬಲತ್ವಹೇತುತೋ ಯೋಽನಂತನಾಮಾ ಗರುಡಸ್ತದಂಸಕೇ।
ಉತ್ಪಾಟ್ಯ ಚೈಕೇನ ಕರೇಣ ಮಂದರೋ ನಿಧಾಪಿತಸ್ತಂ ಸ ಸಹ ತ್ವಯಾವಹತ್ ॥೬॥

ನಿನ್ನಾಜ್ಞೆಯಂತೆ ಈ ದೇವತೆಗಳು ಬಲಿಚಕ್ರವರ್ತಿಯೊಡನೆ ಸಂಧಿ ಮಾಡಿಕೊಂಡರು. ದೈತ್ಯರಿಂದೊಡಗೂಡಿ, ಶಿವವರದಿಂದ ಬೇರೆಯವರಿಗೆ ಅಲ್ಲಾಡಿಸಲು ಬಾರದ ಮಂದರಪರ್ವತವನ್ನು ತಮ್ಮ ಕೈಗಳಿಂದ ಎತ್ತಿಕೊಳ್ಳಲು ಪ್ರಯತ್ನಿಸಿದರು. ಆದರೆ ಶಕ್ತರಾಗಲಿಲ್ಲ. ಆಗ ನಿತ್ಯಶಕ್ತಿಶಾಲಿಯಾದ ನೀನು ಮಂದಾರವನ್ನು ಎಡಗೈಯಿಂದಲೆ ಕಿತ್ತು ಅನಂತ ಎಂಬ ಇನ್ನೊಂದು ಹೆಸರುಳ್ಳ ಗರುಡನ ಹೆಗಲ ಮೇಲೆ ಇಟ್ಟೆ. ಅವನು ನಿನ್ನ ಜೊತೆಗೆ ಬೆಟ್ಟವನ್ನೂ ಹೊತ್ತ.

'ರೈವತ ಮನ್ವಂತರದಲ್ಲಿ ಮಾತ್ರ ಗರುಡ ಮಂದರವನ್ನು ಹೊರುತ್ತಾನೆ. ಈ ವೈವಸ್ವತ ಮನ್ವಂತರದಲ್ಲಿ ಅನಂತ ಹೊರುತ್ತಾನೆ' ಎನ್ನುತ್ತಿದೆ ಬ್ರಹ್ಮಪುರಾಣ. ಮಹಾಭಾರತವೂ ವೈವಸ್ವತ ಮನ್ವಂತರದಲ್ಲಿ ಅನಂತನೆ ಹೊತ್ತನೆನ್ನುತ್ತಿದೆ. ಭಾಗವತ ಗರುಡ ಹೊತ್ತನೆನ್ನುತ್ತಿದೆ. ಅದರಿಂದ ವಿರೋಧ. ಪರಿಹಾರವನ್ನು ಇಲ್ಲಿ ನಿರ್ಣಯ ಹೇಳುತ್ತಿದೆ- ಅನಂತನೆಂದರೆ ಗರುಡನೆ ಇಲ್ಲಿ ವಿವಕ್ಷಿತ. ಅವನಿಗೇ ಇನ್ನೊಂದು ಹೆಸರು ಅನಂತ ಎಂದು.

ಆದರೆ ಹೀಗೆ ಹೇಳಿದರೂ ಮಹಾಭಾರತದ ವಿರೋಧ ಪರಿಹಾರವಾಗುವುದಿಲ್ಲ.

ಅಚೋದಯದಮೇಯಾತ್ಮಾ ಫಣೀಂದ್ರಂ ಪದ್ಮಲೋಚನಃ।

'ಹರಿ ಫಣೀಂದ್ರನನ್ನು ಮಂದರ ಹೊರಲು ಆಜ್ಞಾಪಿಸಿದ' ಎಂದು ಆದಿಪರ್ವದಲ್ಲಿ ಹೇಳಿದೆ. 'ಅನಂತ' ಎಂಬ ಹೆಸರು ಹರಿಯ ಆವೇಶ ಬಲದಿಂದ ಅನಂತಶಕ್ತಿ ಉಳ್ಳ ಗರುಡನಿಗೆ ಒಪ್ಪುತ್ತದೆ ಎನ್ನೋಣ. ಫಣೀಂದ್ರ ಶಬ್ದ ಹೇಗೆ? ಈ ಪ್ರಶ್ನೆಗೆ ಸಮಾಧಾನ ಲಕ್ಷಾಲಂಕಾರದಲ್ಲಿ ಉಕ್ತವಾಗಿದೆ- ಫಣೆ-ಹಾವುಗಳ, ಈಂ-ಬಲಸಂಪತ್ತನ್ನು, ದ್ರ-ಕಳೆವವನು ಎಂದು ಗರುಡನೆ ಫಣೀಂದ್ರ ಶಬ್ದದಿಂದಲೂ ವಿವಕ್ಷಿತ[1].

ಭಾಗವತದ ಪ್ರಕಾರ ಮಂದರವನ್ನು ದೇವತೆಗಳೆ ಕಿತ್ತರು. ಅದರ

---

1. 'ಈಕಾರೋಽಬ್ಜದಲೇ ಲಕ್ಷ್ಯಂ ವಾಣ್ಯಾಂ ಕಮಲಕೇಸರೇ।' ಇತ್ಯಭಿಧಾನಾತ್ ಫಣಿನಾಂ ಈಂ ಐಶ್ವರ್ಯಂ ದ್ರಾವಯತೀತಿ ವ್ಯುತ್ಪತ್ತ್ಯಾ ಪುಂವತ್ತ್ಯಾಸೇನ ವಾ ಫಣೀಂದ್ರೋ ಗರುಡಃ। ತಸ್ಯೈವ ನ ವಿದ್ಯತೇ ಹರ್ಯಾವೇಶವಶಾತ್ ಬಲಸ್ಯಾಂತೋ ಯಸ್ಯೇತಿ ವ್ಯುತ್ಪತ್ತ್ಯಾ ಅನಂತ ಇತ್ಯಪಿ ನಾಮ। ಮಿಲಿತ್ವೈರ್ದೇವಾಸುರೈರನುದ್ವಾಹ್ಯ ಗಿರ್ಯುದ್ವಹನೇ ಶಕ್ತಿ ಸೂಚನಾಯ ಫಣೀಂದ್ರ ಇತಿ ಅನಂತ ಇತಿ ಚಾಪೂರ್ವಂ ನಾಮೈವೋಕ್ತಂ। ಅನ್ಯಥಾ, 'ಗಿರಿಮಾರೋಪ್ಯ ಗರುಡೇ ಹಸ್ತೇನೈಕೇನ ಲೀಲಯಾ' ಇತಿ ಭಾಗವತೋಕ್ತಿವಿರೋಧಾತ್। -ಲಕ್ಷಾಲಂಕಾರ

ವಿರೋಧವನ್ನು ನಿರ್ಣಯದ ಮುಂದಿನ ಶ್ಲೋಕ ಪರಿಹರಿಸುತ್ತಿದೆ-[1] ಮಂದರವನ್ನು ಹರಿ ಕಿತ್ತು ಗರುಡನ ಮೇಲಿಟ್ಟ ಬಳಿಕ ದೇವತೆಗಳು ತಮಗೆ ಬೆಟ್ಟ ಹೊರಲು ಶಕ್ತಿ ಉಂಟೆ ಇಲ್ಲವೆ ಎಂದು ಪರೀಕ್ಷಿಸಲು ಮಾರ್ಗಮಧ್ಯದಲ್ಲಿ ಗರುಡನ ಹೆಗಲ ಮೇಲಿಂದ ಎತ್ತಿಕೊಂಡರಷ್ಟೆ.

ಪುನಃಪರೀಕ್ಷದ್ಭಿರಸೌ ಗಿರಿಃ ಸುರೈಃ
ಸಹಾಸುರೈರುನ್ನಮಿತಸ್ತದಂಸತಃ।
ವ್ಯಚೂರ್ಣಯತ್ ತಾನಖಿಲಾನ್ ಪುನಶ್ಚತೇ
ತ್ವದೀಕ್ಷಯಾ ಪೂರ್ವವದುತ್ಥಿತಾಃ ಪ್ರಭೋ ॥ ೭ ॥

ಪುನಃ ದೇವತೆಗಳೂ, ಅಸುರರೂ ಕೂಡಿ ತಮ್ಮ ಶಕ್ತಿಯನ್ನು ಪರೀಕ್ಷಿಸಿಕೊಳ್ಳಲು ಗರುಡನ ಹೆಗಲಮೇಲಿಂದ ಬೆಟ್ಟವನ್ನು ಎತ್ತಿದರು. ಆದರೆ ಬೆಟ್ಟ ಬಿದ್ದು ಅವರೆಲ್ಲರನ್ನೂ ಪುಡಿಮಾಡಿತು. ಬಳಿಕ ನಿನ್ನ ದಯೆಯ ನೋಟದಿಂದ ಮೊದಲಿನಂತಾಗಿ ಎದ್ದರು.

ಭಾಗವತದಲ್ಲಿ 'ವಿಜ್ಞಾಯ ಭಗವಾಂಸ್ತತ್ರ ಬಭೂವ ಗರುಢಧ್ವಜಃ' ಎಂದಿದೆ. 'ಮಾರ್ಗಮಧ್ಯದಲ್ಲಿ ದೇವತೆಗಳ ದುರವಸ್ಥೆಯನ್ನು ಕಂಡು ಗರುಡಧ್ವಜನಾದ ಹರಿ ಅಲ್ಲಿಗೆ ಬಂದ' ಎಂದು ಹೇಳಿದಂತೆ ಕಾಣುತ್ತದೆ. 'ವಿವಶಾ ವಿಜಹುಃಪಥಿ' ಮಾರ್ಗಮಧ್ಯದಲ್ಲಿ ಬೆಟ್ಟವನ್ನು ದೇವಾಸುರರು ಬಿಟ್ಟುಬಿಟ್ಟರು ಎಂದೂ ಅಲ್ಲೇ ಹೇಳಿದ್ದರಿಂದ ಮಾರ್ಗಮಧ್ಯದಲ್ಲಿಯೆ ಬೆಟ್ಟವನ್ನು ಗರುಡನ ಹೆಗಲ ಮೇಲಿಟ್ಟಿದ್ದ ಹರಿ, ಹೊರತು ನೆಲದಿಂದ ಕಿತ್ತುಕೊಳ್ಳುವ ಕಾಲದಲ್ಲಿ ಅಲ್ಲ ಎಂದೂ ಕಾಣುತ್ತದೆ. ವಸ್ತುತಃ

---

1. 'ತತಸ್ತೇ ಮಂದರಗಿರಿಮೋಜಸೋತ್ಪಾಟ್ಯ ದುರ್ಮದಾಃ ಇತಿ ಭಾಗವತೋಕ್ತ್ಯಾವಿರೋಧ ಇತಿ ಚೇನ್ನ। ಮಧ್ಯೇ ಮಾರ್ಗಂ ಸ್ವ ವೀರ್ಯ ಪರೀಕ್ಷಣಾಯ ಗರುಡಾಂಸ ಸ್ಥಿತ ಮಂದರಗಿರೇಃ ತದಂಸಾದ್ ಬಲೇನೋರ್ಧ್ವಂ ಪ್ರಾಪಣರೂಪೋತ್ಪಾಟನವಿಷಯತ್ವಾದ್ ಭಾಗವತವಾಕ್ಯಸ್ಯ। ಪಟ ಗತಾವಿತಿದಾತೋಃ॥ ಅತಏವಾಚಾರ್ಯೈಃ ಸುರೈಃ ಸಹಾಸುರೈರುನ್ನಮಿತಸ್ತದಂಸತಇತ್ಯುಕ್ತಂ। ಅನ್ಯಥಾ ಗಿರಿಭಾರೋದ್ವಹನೇऽಪ್ಯಸಮರ್ಥತಯಾ ಚೂರ್ಣಿತಾನಾಂ ದೇವಾಸುರಾಣಾಂ ಭೂಮೇರ್ಮೇರೊಶ್ಚಾಭ್ಯಂತರೇ ಕೀಲಕತಯಾ ಖಚಿತ ಮಂದರಗಿರೇರುತ್ಪಾಟನೇ ಅನಂತ ಬಲಂ ಭಗವಂತಂ ವಿನಾ ಕಥಂ ಶಕ್ತಿಃ ಸ್ಯಾತ್? ಏವಂಚ ಪ್ರಾಥಮಿಕ ಮುತ್ಪಾಟನಂ ನಿಃ ಸೀಮ ಬಲವತಾ ಹರಿಣೈವ ಕೃತಂ। ಅತ ಏವಾಚಾರ್ಯೈರ್ನಿತ್ಯ ಬಲತ್ವ ಹೇತುತ ಇತ್ಯುಕ್ತಂ। ದ್ವಿತೀಯಂ ತು ಯದ್ ಗರುಡಾಂಸಾದುತ್ಪಾಟನಂ ತದ್ ದೇವಾಸುರೈಃ ಕೃತಂ। ಭಗವಾಂಸ್ತತ್ತೇಷಾಂ ಮದ ನಿರ್ಹರಣಾಯ ತತ್ರೈವ ಗರೂಡಾರೂಢಃ ಸನ್ ತೂಷ್ಣೀಂ ಸ್ಥಿತಃ। ಅತಏವ ಭಾಗವತೇ ವಿಜ್ಞಾಯ ಭಗವಾಂಸ್ತತ್ರ ಬಭೂವ ಗರುಡಧ್ವಜ ಇತ್ಯುಕ್ತಂ। ನತು ಮಧ್ಯೇ ಆಗತ ಇತಿ। ಪೂರ್ವಂ ತೂಷ್ಣೀಂ ಬಭೂವ। ಪಶ್ಚಾತ್ ಕರುಣಾಳು ರ್ಬಭೂವೇತ್ಯರ್ಥಃ। ತಸ್ಮಾತ್ ಪುರಾಣತಾತ್ಪರ್ಯಮಪಿ ಮಹಾಭಾರತ ತಾತ್ಪರ್ಯನಿರ್ಣಯಕಾರ ಏವ ವೇದ। -ವಾದಿರಾಜೀಯ

'ಸಮುದ್ಧರ್ತುಮಶಕ್ತಾ ವೈ ಸರ್ವೇ ದೇವಗಣಾಸ್ತದಾ'

-ಎಂದು ದೇವತೆಗಳಿಗೆ ಬೆಟ್ಟವನ್ನೆತ್ತಲು ಶಕ್ತಿ ಇರಲಿಲ್ಲವೆಂದು ಭಾರತದಲ್ಲಿ ಸ್ಪಷ್ಟ ಹೇಳಿರುವುದರಿಂದ ಇಲ್ಲಿಯೂ ಹರಿಯೆ ಬೆಟ್ಟವನ್ನು ಕಿತ್ತು ಗರುಡನ ಮೇಲಿಟ್ಟ ಎನ್ನಬೇಕು. ನೆಲಕ್ಕೆ ಬಿದ್ದ ಬೆಟ್ಟವನ್ನು ಎತ್ತಲು ಗರುಡನಿಗೆ ಹರಿ ಬೇಕೆನ್ನುವುದಾದರೆ ಹನ್ನೊಂದು ಸಾವಿರ ಯೋಜನ ಪರ್ಯಂತ ಕೆಳಗೆ ಎರಡು ಬೆಟ್ಟಗಳ ನಡುವೆ ನೆಲದಲ್ಲಿ ಬೇರೂರಿದ್ದ ಮಂದರವನ್ನು ಎತ್ತಲು ಹರಿ ಬೇಡವೇ? ಅದರಿಂದ 'ಅನಂತ' ನಾಮಕನಾದ ಹರಿಯೂ ಮೊದಲಿಗೆ ಗರುಡನನ್ನು ಆಜ್ಞಾಪಿಸಿ ತಾನೂ ಗರುಡನನ್ನೇರಿ ಅಲ್ಲಿಗೆ ಬಂದಿದ್ದ, ಬಳಿಕ ಮಾರ್ಗಮಧ್ಯದಲ್ಲಿ ದೇವತೆಗಳ ಸ್ಥಿತಿ ಕಂಡು ಕರುಣಾಳುವಾದ. ಈ ಅಭಿಪ್ರಾಯದಿಂದಲೂ 'ಅನಂತ'ಪದ ಪ್ರಯೋಗವಿದೆ ಎಂದು ತಿಳಿಯ ಬೇಕು.[1]

ಪುನಶ್ಚ ವಾಮೇನ ಕರೇಣ ವೀಶ್ವರೇ
ನಿಧಾಯ ತಂ ಸ್ಕಂಧಗತಸ್ತ್ವಮಸ್ಯ।
ಅಗಾಃ ಪಯೋಬ್ಧಿಂ ಸಹಿತಃ ಸುರಾಸುರೈ
ರ್ಮಥ್ನಾ ಚ ತೇನಾಬ್ಧಿಮಥಾಪ್ಯಮಥ್ನಾಃ ॥ ೮ ॥

ಪುನಃ ನೀನು ಎಡಗೈಯಿಂದ ಆ ಬೆಟ್ಟವನ್ನೆತ್ತಿ ಗರುಡನ ಮೇಲಿಟ್ಟು ಅವನ ಹೆಗಲ ಮೇಲೇರಿ ದೇವಾಸುರರೊಂದಿಗೆ ಕ್ಷೀರಸಮುದ್ರಕ್ಕೆ ಹೋದೆ. ಆ ಬೆಟ್ಟವನ್ನು ಕಡಗೋಲನ್ನಾಗಿ ಮಾಡಿ ದೇವಾಸುರರೊಂದಿಗೆ ನೀನೂ ಸಮುದ್ರವನ್ನು ಕಡೆದೆ.

---

1. 'ವಿವಶಾ ವಿಜಹುಃ ಪಥೀ'ತಿ ಭಾಗವತ ವಿವೋಕ್ತೇಃ ಮಾರ್ಗವಿವ ಗರುಡೋಪರ್ಯಾರೋಪಣಂ, ನ ತೂದ್ಧರಣಕಾಲೇ ಇತಿಚೇತ್ ಸತ್ಯಂ 'ಸಮುದ್ಧರ್ತುಮಶಕ್ತಾ ವೈ ಸರ್ವೇ ದೇವಗಣಸ್ತದಾ। ವಿಷ್ಣುಮಾಸೀನಮಭ್ಯೇತ್ಯ ಬ್ರಹ್ಮಾಣಂ ಚೇದಮಬ್ರುವನ್' ಇತಿ ಭಾರತ ವಿವ ಸ್ಪಷ್ಟಂ ದೇವಾನಾಂ ಗಿರ್ಯುದ್ಧರಣಾಶಕ್ತೇರಪ್ಯುಕ್ತತ್ವಾತ್, 'ಏಕತ್ರನಿರ್ಣೀತಃ ಶಾಸ್ತ್ರಾರ್ಥೋ ಽಪರತ್ರಾಪೀ'ತಿ 'ನ್ಯಾಯೇನ ಅತ್ರಾಪಿ ಹರಿಹಸ್ತೇನೈವೋದ್ಧರಣಂ ಗರುಡೋಪರ್ಯಾರೋಪಣಂಚ ವಕ್ತವ್ಯಂ। ಭೂಮೌ ಪತಿತಮಾತ್ರಸ್ಯ ಗಿರೇರುದ್ಧರಣೇ ಹರಿಹಸ್ತಮಪೇಕ್ಷಮಾಣೋ ಗರುಡ ಏಕಾದಶ ಸಹಸ್ರಯೋಜನ ಪರ್ಯಂತಂ ಕೀಲತಯಾ ಗಿರಿಸಂಧೌ ಖಚಿತಂ ಪರ್ವತಮುದ್ಧರ್ತುಂ ಕಥಂ ನ ತಮಪೇಕ್ಷತೇ? ಅತ ಏವ 'ಅನಂತೋ ಭಗವಾನ್ ದೇವೇ ಯತೋ ನಾರಾಯಣಃ ಸ್ಥಿತಃ' ಇತಿ ಉಪರ್ಯನಂತ ಪದೇನ ಭಗವತೋ ಽಪ್ಯಾಹೂತತ್ವಾತ್ ಅತ್ರಾಪಿ 'ತತೋ ಽನಂತಃ ಸಮುತ್ಥಾಯೇ'ತಿ ವಚನಾತ್ ಅನಂತಾಖ್ಯೋ ಭಗವನಾಪಿ ಅಗ್ರತೋ ಗರುಡಮಾಜ್ಞಾಪ್ಯ ಸ್ವಯಮಪಿ ಗರುಡಮಾರುಹ್ಯ ತತ್ರಾಗತಃ। ಏತದರ್ಥಮಪ್ಯನಂತ ಪದಪ್ರಯೋಗ ಇತಿ ಚಾನು ಸಂಧೇಯಂ। -ಲಕ್ಷಾಲಂಕಾರಃ

ನಾನಾ ಬಗೆಯ ಔಷಧಿಗಳನ್ನು ಕ್ಷೀರಸಮುದ್ರದಲ್ಲಿ ಹಾಕಿ ಕಡೆದರು.[1]

ಕೃತಶ್ಚ ಕದ್ರೋಸ್ತನಯೋಽತ್ರ ವಾಸುಕಿ
ರ್ನೇತ್ರಂ ತ್ವಯಾ ಕಶ್ಯಪಜಃ ಸ ನಾಗರಾಟ್ ।
ಮಮಂಥುರಬ್ಧಿಂ ಸಹಿತಾಸ್ತ್ವಯಾ ಸುರಾಃ
ಸಹಾಸುರಾ ದಿವ್ಯಪಯೋಘೃತಾಧಿಕಮ್ ॥ ೯ ॥

ಕದ್ರೂದೇವಿಯ ಪುತ್ರನಾಗಿ ಕಶ್ಯಪನಿಂದ ಜನಿಸಿದ ನಾಗರಾಜನಾದ ವಾಸುಕಿಯನ್ನು ನೀನು ಈ ಸಮುದ್ರಮಥನದಲ್ಲಿ ನೇಣನ್ನಾಗಿ ಮಾಡಿದೆ. ದೇವಾಸುರರು ನಿನ್ನೊಡನೆ ಸೇರಿ ಬಹಳ ತುಪ್ಪದಿಂದ ಯುಕ್ತವಾದ ಎಂದೂ ಕೆಡದಿರುವ ಹಾಲಿನಿಂದ ತುಂಬಿದ್ದು ಶ್ರೇಷ್ಠವೆನಿಸಿದ[2] ಕ್ಷೀರಸಮುದ್ರವನ್ನು ಕಡೆದರು.

ಭಾಗವತ (8.8.17)ದಲ್ಲಿ 'ಮಥ್ನನ್ ಮಥ್ನಾ ಪ್ರತಿಗಿರಿರಿವಾಶೋಭತಾಸೌ ಘೃತಾಬ್ಧಿಂ' ಎಂದು ಘೃತಸಮುದ್ರವನ್ನು ಕಡೆದಂತೆ ಕಾಣುತ್ತದೆ. ಅದರ ವಿರೋಧ ಪರಿಹಾರಕ್ಕಾಗಿ ಘೃತ ಅಧಿಕವಾಗಿರುವ ಕ್ಷೀರಸಮುದ್ರ ಎನ್ನಲಾಗಿದೆ ಎನ್ನುತ್ತದೆ ತಾಮ್ರಪರ್ಣೀಯ.

ನೈಚ್ಛಂತ ಪುಚ್ಛಂ ದಿತಿಜಾ ಅಮಂಗಲಂ
ತದಿತ್ಯಥಾಗ್ರಂ ಜಗೃಹುರ್ವಿಷೋಲ್ಬಣಮ್ ।
ಶ್ರಾಂತಾಸು ತೇಽತೋ ವಿಬುಧಾಸ್ತು ಪುಚ್ಛಂ
ತ್ವಯಾ ಸಮೇತಾ ಜಗೃಹುಸ್ತ್ವದಾಶ್ರಯಾಃ ॥ ೧೦ ॥

ಹಾವಿನ ಬಾಲ ಅಮಂಗಲವೆಂಬ ಭಾವನೆಯಿಂದ ದೈತ್ಯರು ವಾಸುಕಿಯ ಬಾಲ ಹಿಡಿಯಲು ಒಪ್ಪಲಿಲ್ಲ. ವಿಷದಿಂದ ಕ್ರೂರವಾದ ಹೆಡೆಯನ್ನೆ ಹಿಡಿದರು. ಅದರಿಂದ ಆಯಾಸಗೊಂಡರು. ನಿನ್ನನ್ನೆ ಆಶ್ರಯಿಸಿದ ದೇವತೆಗಳು ಮಾತ್ರ ನಿನ್ನೊಂದಿಗೆ ಬಾಲವನ್ನೆ ಹಿಡಿದರು.

ವಾಸುಕಿಯ ಫೂತ್ಕಾರದಿಂದ ಮೋಡಗಳು ಬಾಲದ ಕಡೆಗೆ ಹಾರಿ ದೇವತೆಗಳ ಮೇಲೆ ತಂಪಾದ ಮಳೆಗರೆದುವು. ಇತ್ತ ಫೂತ್ಕಾರದ ಬಿಸಿಯಾ

---

1. ನಾನೌಷಧೀಃ ಸಮಾನೀಯ ದೇವದೈತೇಯ ದಾನವಾಃ ।
   ಕ್ಷಿಪ್ತ್ವಾ ಕ್ಷೀರಾಬ್ಧಿ ಪಯಸಿ ಶರದಭ್ರಾಮಲತ್ವಿಷಿ ।
   ತತೋ ಮಥಿತುಮಾರಾಬ್ಧಾಮೈತ್ರೇಯ ತರಸಾಮೃತಂ ॥ (ವಿಷ್ಣುಪು. 1.9.83)
2. ದಿವ್ಯ ಪಯಸಿ ಘೃತಮಧಿಕಂ ಯಸ್ಮೇತಿ ವಿಗ್ರಹಃ -ವಾದಿರಾಜೀಯ
   ದಿವ್ಯಾಭ್ಯಾಂ ವಿಕಾರರಹಿತಾಭ್ಯಾಂ ಪಯೋ ಘೃತಾಭ್ಯಾಂ ಅಧಿಕಂ ಪ್ರಚುರಂ -ವರದರಾಜೀಯ
   ದಿವ್ಯೇ ನಿರ್ವಿಕಾರೇ ಪಯೋಘೃತೇ ಕ್ಷೀರಾಜ್ಯೇ ತಾಭ್ಯಾಮಧಿಕಃ ಶ್ರೇಷ್ಠಃ -ಜನಾರ್ದನೀಯ

ವಿಷಾನಿಲದಿಂದ ಅಸುರರಿಗೆ ಆಯಾಸ ಹೆಚ್ಚಿತು.[1]

ಕೂರ್ಮಾವತಾರ

ಅಥಾತಿಭಾರಾದವಿಶತ್ ಸುಕಾಂಚನೋ ಗಿರಿಃ ಸ ಪಾತಾಲಮಥ ತ್ವಮೇವ।
ತಂ ಕಚ್ಛಪಾತ್ಮಾ ತ್ವಭರಃ ಸ್ಪೃಪೃಷ್ಠೇ ಹ್ಯನನ್ಯಧಾರ್ಯಂ ಪುರುಲೀಲಯೈವ ॥ ೧೧ ॥

ಬಳಿಕ ಅತಿಯಾದ ಭಾರದಿಂದ ಆ ಚಿನ್ನದ ಬೆಟ್ಟ ಕೆಳಗಿಳಿದು ಪಾತಾಲವನ್ನು ಪ್ರವೇಶಿಸಿತು. ಆಗ ಬೇರೆಯವರಿಗೆ ಹೊರಲು ಅಶಕ್ಯವಾದ ಆ ಬೆಟ್ಟವನ್ನು ನೀನು ಕೂರ್ಮರೂಪನಾಗಿ ಮಹಾಲೀಲೆಯಿಂದಲೆ ನಿನ್ನ ಬೆನ್ನ ಮೇಲೆ ಹೊತ್ತುಕೊಂಡೆ.

ಉಪರ್ಯಧಶ್ಚಾತ್ಮನಿ ನೇತ್ರಗೋತ್ರಯೋ
ಸ್ತ್ವಯಾ ಪರೇಣಾವಿಶತಾ ಸಮೇಧಿತಾಃ।
ಮಮಂಥುರಬ್ಧಿಂ ತರಸಾ ಮದೋತ್ಕಟಾಃ
ಸುರಾಸುರಾಃ ಕ್ಷೋಭಿತನಕ್ರಚಕ್ರಮ್ ॥ ೧೨ ॥

ನೇಣು ಮತ್ತು ಬೆಟ್ಟಗಳ ಒಳಗೂ ಮೇಲೂ ಕೆಳಗೂ ನಮ್ಮೆಲ್ಲರಲ್ಲಿಯೂ ಸರ್ವೋತ್ತಮನಾದ ನೀನು ಪ್ರವೇಶಿಸಿ ಬಲಪಡಿಸಿದ್ದರಿಂದ ದೇವಾಸುರರು ಮದಭರಿತರಾಗಿ ಸಮುದ್ರವನ್ನು ಅದರೊಳಗಿರುವ ಜಲಚರಗಳ ಸಮೂಹ ಕ್ಷೋಭೆಗೊಳ್ಳುವಂತೆ ವೇಗದಿಂದ ಕಡೆದರು.

ಕಳಿತ ಮಾವಿನ ಹಣ್ಣನ್ನು ಹಿಚುಕಿದರೆ ಬೀಜ ಮೇಲೆ ಹಾರುವಂತೆ ಮಥನದ ವೇಗದಿಂದ ಬೆಟ್ಟ ಮೇಲೆ ಹಾರತೊಡಗಿತು. ಶ್ರೀಹರಿ ಪರ್ವತದಂಥ ದೊಡ್ಡ ರೂಪತಳೆದು ಅದನ್ನು ಮೇಲೆ ಕೈಯಿಂದ ಒತ್ತಿಹಿಡಿದ. ಇದು ಸುರಾಸುರರಿಗೆ ಯಾರಿಗೂ ಕಾಣಿಸಲಿಲ್ಲ.[2] ಮೊದಲೆ ಕೂರ್ಮರೂಪದಿಂದ ಕೆಳಗೆ

---

1. ತೇ ತಸ್ಯ ಮುಖ ನಿಃಶ್ವಾಸ ವಹ್ನಿತಾಪ ಹತತ್ವಿಷಃ।
ನಿಸ್ತೇಜಸೋಽಸುರಾಃ ಸರ್ವೇ ಬಭೂವುರಮಿತೌಜಸಃ।
ತೇನೈವ ಮುಖನಿಃಶ್ವಾಸವಾಯುನಾಸ್ತ ಬಲಾಹಕೈಃ।
ಪುಚ್ಛಪ್ರದೇಶೇ ವರ್ಷದ್ಭಿಸ್ತದಾ ಚಾಪ್ಯಾಯಿತಾಃ ಸುರಾಃ ॥ (ವಿಷ್ಣುಪು. 1.9,86)

2. ರೂಪೇಣಾನ್ಯೇನ ದೇವಾನಾಂ ಮಧ್ಯೇ ಚಕ್ರಗದಾಧರಃ।
ಚಕರ್ಷ ನಾಗರಾಜಾನಂ ದೈತ್ಯಮಧ್ಯೇಽಪರೇಣ ಚ।
ಉಪರ್ಯಾಕ್ರಾಂತವಾನ್ ಶೈಲಂ ಬೃಹದ್ರೂಪೇಣ ಕೇಶವಃ।
ತಥಾಪರೇಣ ಮೈತ್ರೇಯ ಯನ್ನ ದೃಷ್ಟಂ ಸುರಾಸುರೈಃ।
ತೇಜಸಾ ನಾಗಾಜಾನಂ ತಥಾಪ್ಯಾಯಿತವಾನ್ ಹರಿಃ।
ಅನ್ಯೇನ ತೇಜಸಾ ದೇವಾನ್ ಉಪಬೃಂಹಿತವಾನ್ ಪ್ರಭುಃ ॥ (ವಿಷ್ಣುಪು.1-9-89-91)

ಬೆನ್ನುಮೇಲೆ ಎತ್ತಿಹಿಡಿದಿದ್ದ. ಹೀಗೆ ಮೇಲೂ ಕೆಳಗೂ ಹರಿಒತ್ತಿದ. ನಡುವೆ ವಾಸುಕಿ ಬಲವಾಗಿ ಬಿಗಿದ. ಅದರಿಂದ ಬೆಟ್ಟ ಪುಡಿಯಾಗುವ ಸಾಧ್ಯತೆ ಇತ್ತು. ಅದಕ್ಕೆ ಹರಿ ಬೆಟ್ಟದೊಳಗೂ ಪ್ರವೇಶಿಸಿದ. ವಾಸುಕಿಗೆ ಶ್ರಮವಾಗಬಾರದೆಂದು ಅವನೊಳಗೂ ಪ್ರವೇಶಿಸಿದ. ಒಂದು ರೂಪದಿಂದ ತಾನೂ ಕಡೆಯುವುದು ಮಾತ್ರವಲ್ಲದೆ ದೇವತೆಗಳೊಳಗೂ ಪ್ರವೇಶಿಸಿ ಬಲ ನೀಡಿದ. ಅದರಿಂದ ಮಥನಕಾರ್ಯ ಬಿರುಸಿಂದ ನಡೆಯಿತು. ಜಲಚರಗಳೆಲ್ಲ ಕ್ಷೋಭೆಗೊಂಡುವು.

ಹಾಲಾಹಲ ವಿಷ

ಶ್ರಾಂತೇಷು ತೇಷ್ವೇಕ ಉರುಕ್ರಮಸ್ತ್ವಂ
ಸುಧಾರಸಾಪ್ತ್ಯೈ ಮುದಿತೋ ಹ್ಯಮಥ್ನಾಃ।
ತದಾ ಜಗದ್ಭಾಸಿ ವಿಷಂ ಸಮುತ್ಥಿತಂ
ತ್ವದಾಜ್ಞಯಾ ವಾಯುರಧಾತ್ ಕರೇ ನಿಜೇ ॥ ೧೩ ॥

ಅವರೆಲ್ಲರೂ ಆಯಾಸಗೊಂಡಾಗ ಸರ್ವಶಕ್ತನಾದ ನೀನೊಬ್ಬನೆ ಆನಂದದಿಂದ ಅಮೃತರಸಪ್ರಾಪ್ತಿಗಾಗಿ ಕಡೆದೆ. ಆಗ ಜಗತ್ತನ್ನೆ ನಾಶಮಾಡಬಲ್ಲ ವಿಷ ಎದ್ದಿತು. ನಿನ್ನಾಜ್ಞೆಯಿಂದ ವಾಯು ಅದನ್ನು ತನ್ನ ಕೈಯಲ್ಲಿ ಎತ್ತಿಕೊಂಡ.

ಕಲೇಃ ಸ್ವರೂಪಂ ತದತೀವ ದುಸ್ಸಹಂ ವರಾದ್ ವಿಧಾತುಃ ಸಕಲೈಶ್ಚ ದುಸ್ಪೃಶಮ್।
ಕರೇ ವಿಮಥ್ಯಾಸ್ತಬಲಂ ವಿಧಾಯ ದದೌ ಸ ಕಿಂಚಿದ್ ಗಿರಿಶಾಯ ವಾಯುಃ ॥ ೧೪ ॥

ಆ ವಿಷ ಕಲಿಯಿಂದ ಅಭಿಮನ್ಯಮಾನವಾಗಿದ್ದು ಬ್ರಹ್ಮನ ವರದಿಂದ ಯಾರಿಗೂ ಅದನ್ನು ತಡೆದುಕೊಳ್ಳಲಾಗುತ್ತಿದ್ದಿಲ್ಲ. ಮುಟ್ಟಲೂ ಸಾಧ್ಯವಿರಲಿಲ್ಲ. ವಾಯು ಅದರಲ್ಲಿ ಸ್ವಲ್ಪವೆ ಕೈಗೆತ್ತಿಕೊಂಡು ಹಿಂಡಿ ನಿರ್ವೀಯವನ್ನಾಗಿ ಮಾಡಿ ಶಿವನಿಗೆ ಇತ್ತ.

ವಾಯು ವಿಷವನ್ನು ಹಿಂಡಿ ಶಿವನಿಗೆ ಕೊಡುವ ಅಂಶ ಭಾರತದಲ್ಲಾಗಲಿ ಭಾಗವತದಲ್ಲಾಗಲಿ ಇಲ್ಲ. ಭಾಗವತ ತಾತ್ಪರ್ಯದಲ್ಲಿ ಬ್ರಹ್ಮಪುರಾಣ ವಚನೋದಾಹರಣಪೂರ್ವಕವಾಗಿ ಹೇಳಲಾಗಿದೆ.

ಶಿವ ನೀಲಕಂಠನಾದ

ಸ ತತ್ ಪಿಬನ್ ಕಂಠಗತೇನ ತೇನ ನಿಪಾತಿತೋ ಮೂರ್ಚ್ಛಿತ ಆಶು ರುದ್ರಃ।
ಹರೇ ಕರಸ್ಪರ್ಶಬಲಾತ್ ಸ ಸಂಜ್ಞಾಮವಾಪ ನೀಲೋಽಸ್ಯಗಲಸ್ತದಾಸೀತ್ ॥೧೫॥

ಆ ಹಾಲಾಹಲ ವಿಷವನ್ನು ಶಿವ ಕುಡಿದಾಗ ಅದು ಕುತ್ತಿಗೆಯಲ್ಲಿಯೆ ನಿಂತಿತು. ಆದರೆ

ತಕ್ಷಣವೆ ಅದು ಅವನನ್ನು ಮೂರ್ಛೆಗೊಳಿಸಿತು. ಹರಿಯ ಕರಸ್ಪರ್ಶ ಬಲದಿಂದ ಆತ ಎಚ್ಚೆತ್ತ. ಆತನ ಕಂಠ ನೀಲವಾಯಿತು.

> ಶಿವ ಕುಡಿದ ವಿಷ ಅತ್ಯಲ್ಪವಾಗಿತ್ತು. ಹೊಟ್ಟೆವರೆಗೆ ಹೋಗಲು ಸಾಕಾಗುವಷ್ಟು ಪ್ರಮಾಣದಲ್ಲಿರಲಿಲ್ಲ.[1] ಆದರೂ ಮೂರ್ಛೆ ಬಂದಿತು. ಮತ್ತು ಆ ವಿಷ ಕಂಠದಲ್ಲಿ ನಿಂತು ನೀಲವರ್ಣ ಉಂಟುಮಾಡಿತು. ಹೀಗೆ ಶಿವ ನೀಲಕಂಠನೆನಿಸಿದ. ನಂಜುಂಡನೆನಿಸಿದ.

ವಿಷಪಾನಗೈದ ವಾಯುದೇವ

> ಅಥ ತ್ವದಾಜ್ಞಾಂ ಪುರತೋ ನಿಧಾಯ
> ನಿಧಾಯ ಪಾತ್ರೇ ತಪನೀಯ ರೂಪೇ।
> ಸ್ವಯಂ ತ್ವನಿರ್ಮಥ್ಯ ಬಲೋಪಪನ್ನಂ
> ಪಪೌ ಸ ವಾಯುಸ್ತದುತಾಸ್ಯ ಜೀರ್ಣಮ್ ॥ ೧೬ ॥

ಬಳಿಕ ನಿನ್ನಾಜ್ಞೆಯನ್ನು ಪುರಸ್ಕರಿಸಿ ವಾಯುದೇವ ಚಿನ್ನದ ಬಟ್ಟಲಲ್ಲಿ ವಿಷವನ್ನು ಇಟ್ಟುಕೊಂಡು ಹಿಂಡದೆಯೆ ಪ್ರಬಲವಾಗಿದ್ದ ಆ ವಿಷಯವನ್ನು ತಾನೇ ಕುಡಿದ.\ಅದೂ ಅವನಿಗೆ ಜೀರ್ಣವಾಯಿತು.

> ಶಿವನೆ ನಂಜುಂಡ, ನೀಲಕಂಠ ಎಂದು ಲೋಕದಲ್ಲಿ ಪ್ರಸಿದ್ಧಿ. ಭಾರತ ಭಾಗವತಗಳಲ್ಲಿಯೂ ಶಿವನೆ ವಿಷ ಕುಡಿದಂತೆ ಕಾಣುತ್ತದೆ! ಆದರೆ ಋಗ್ವೇದದ ವಾಯುಸೂಕ್ತದಲ್ಲಿ ಸ್ಪಷ್ಟವಾಗಿ ವಾಯುವೆ ಹಾಲಾಹಲವನ್ನು ಪೂರ್ತಿ ಕುಡಿದಂತೆ ವರ್ಣನೆ ಇದೆ ಎನ್ನುತ್ತಾರೆ ವಾದಿರಾಜರು–
>
> ವಾಯುರಸ್ಮಾ ಉಪಾಮಂಥತ್ ಪಿನಷ್ಟಿಸ್ಮಾ ಕುನನ್ನಮಾ।
>
> ಕೇಶೀ ವಿಷಸ್ಯ ಪಾತ್ರೇಣ ಯದ್ ರುದ್ರೇಣಾಪಿಬತ್ ಸಹ ॥
>
> 'ವಾಯುಃ ರುದ್ರೇಣ ಸಹ ಅಪಿಬತ್' ವಾಯು ರುದ್ರನೊಡನೆ ವಿಷ ಕುಡಿದ. 'ಸಹ ಯುಕ್ತೇ ಅಪ್ರಧಾನೇ' ಎಂಬ ವ್ಯಾಕರಣ ನಿಯಮದಂತೆ ವಿಷ ಕುಡಿಯುವ ಕಾರ್ಯದಲ್ಲಿ ಶಿವ ಅಪ್ರಧಾನ. ವಾಯುವೆ ಪ್ರಧಾನ ಎನ್ನುತ್ತದೆ. 'ಸಹ' ಶಬ್ದ ಶಿಷ್ಯನೊಡನೆ ಗುರು ಬಂದ ಎಂಬಂತೆ. 'ವಾಯುಃ ಅಸ್ಮೈ ಉಪಾಮಂಥತ್' ವಾಯು ಶಿವನಿಗಾಗಿ ವಿಷ ಹಿಂಡಿದ. ಪೇಷಣ ಮಾಡಿದ. ಅಂದರೆ, ಹಿಂಡಿದ ನಿಃಸಾರವಾದ ಸ್ವಲ್ಪ ವಿಷವನ್ನು ಶಿವ ಕುಡಿದ. ವಾಯು

---

1. ಅಲ್ಪತ್ವಾತ್ ಕಂಠೇ ಲಗ್ನಂ ಸತ್ ತತ್ರೈವ ಸ್ಥಿತಂ। ಉದರಂ ನ ಪ್ರಾಪ್ತಮಿತಿಭಾವಃ। –ಜನಾರ್ದನೀಯ

ಹಿಂಡದೆಯೆ ಎಲ್ಲ ವಿಷ ಕುಡಿದ ಎಂದರ್ಥ. 'ಕುನನ್ನಮಾ' ಕು ಕೆಟ್ಟ ಕಲ್ಯಾದಿಗಳನ್ನು ನನ್ನಮಾ ವಿಶೇಷವಾಗಿ ನರಕದಲ್ಲಿ ಬೀಳಿಸುವವ ವಾಯು. ಅದರಿಂದ ಕಲಿಯಿಂದ ಅಭಿಮಾನ್ಯಮಾನವಾದ ಹಾಲಾಹಲವನ್ನು ಜೀರ್ಣಿಸಿಕೊಂಡಿದ್ದು ವಿಶೇಷವೇನಲ್ಲ. 'ವಾಯು' ಎಂದರೆ ಸದಾ ಸಂಚರಿಸುವವ. ವಿಷ ಕುಡಿದೂ ಶಿವನಂತೆ ಮೂರ್ಛಿತನಾಗಿ ಬೀಳದೆ ಸಂಚಾರ ಸಮರ್ಥನಾಗಿಯೆ ಇದ್ದ ಎನ್ನುತ್ತದೆ 'ವಾಯು' ಶಬ್ದ. ಶಿವ 'ರುದ್ರ' ನೆನಿಸಿದ. ಅಂದರೆ ವಿಷ ಕುಡಿದು ತಡೆದುಕೊಳ್ಳಲಾಗದೆ ರೋಧಿಸಿದ. ವಾಯು 'ಕೇಶಿ' ಯಾಗಿದ್ದ. ಕ-ಸುಖರೂಪನಾದ ಈಶ-ಸ್ವಾಮಿಯಾದ ಹರಿಯನ್ನು ತನ್ನೊಳಗೆ ಇಟ್ಟುಕೊಂಡವನಾಗಿದ್ದ. ಅದರಿಂದ ವಿಷ ಕುಡಿದರೂ ಸುಖವಾಗಿಯೆ ಇದ್ದ. ಹೀಗೆ ಸ್ಪಷ್ಟವಾಗಿ ಶ್ರುತಿ ಹೇಳುತ್ತಿದ್ದರೂ ಗೋಪ್ಯ ವಿಷಯವೇನೆಂದು ಪುರಾಣಗಳು ಸ್ಪಷ್ಟ ಹೇಳುತ್ತಿಲ್ಲ. ಸರ್ವಜ್ಞರಾದ ದೇವತೆಗಳು ಮಾತ್ರ ಶ್ರುತ್ಯುಕ್ತವಾದ ಈ ಪ್ರಮೇಯವನ್ನು ಆದರದಿಂದ ಹೇಳಿ ಸ್ತೋತ್ರ ಮಾಡಿದರು.

ಅತ್ಯಲ್ಪಪಾನಾಚ್ಚಬಭೂವ ಶೂಲಾ
ಶಿವಸ್ಯ ಶೀಷ್ಣ್ಯಸ್ಯ ಕರಾವಶಿಷ್ಟಮ್ ।
ಅಭೂತ್ ಕಲಿಃ ಸರ್ವಜಗತ್ಸುಪೂರ್ಣಂ
ಪೀತ್ವಾವಿಕಾರೋ ನ ಬಭೂವ ವಾಯೋಃ ॥ ೧೭ ॥

ಅತ್ಯಲ್ಪವಾಗಿ ವಿಷ ಕುಡಿದಿದ್ದರೂ ಶಿವನಿಗೆ ತಲೆನೋವು ಉಂಟಾಯಿತು. ಅವನ ಕೈಯಲ್ಲಿ ಇನ್ನೂ ವಿಷ ಉಳಿದಿತ್ತು. ಮುಂದೆ ಅದು ಕಲಿಯ ಶರೀರವಾಗಿ ಎಲ್ಲ ಜಗತ್ತಿನಲ್ಲಿ ಹಬ್ಬಿತು. ಬಳಿಕ ಎಲ್ಲ ವಿಷವನ್ನೂ ವಾಯುದೇವ ಕುಡಿದ. ಆದರೂ ಅದರಿಂದ ಅವನಿಗೆ ಏನೂ ದುಷ್ಪರಿಣಾಮವಾಗಲಿಲ್ಲ.

ವಾಯುದೇವ ಶಿವನಿಗೆ ಕೊಟ್ಟಿದ್ದೇ ಅಲ್ಪವಿಷವನ್ನು. ಅದನ್ನೂ ಶಿವ ಪೂರ್ತಿ ಕುಡಿಯಲಿಲ್ಲ. ಸ್ವಲ್ಪವೆ ಕುಡಿದ. ಅಷ್ಟರಿಂದಲೆ ತಲೆನೋವು ಮೂರ್ಛೆ ಉಂಟಾದವು. ಅದಕ್ಕೆ ಶೈತ್ಯೋಪಚಾರ ರೂಪವಾಗಿ ತಲೆಯಲ್ಲಿ ಚಂದ್ರನನ್ನಿಟ್ಟುಕೊಂಡು ಚಂದ್ರಮೌಳಿ ಎನಿಸಿದ, ಅಭಿಷೇಕಪ್ರಿಯನೆನಿಸಿದ. ಇನ್ನು ಕೈಯಲ್ಲಿ ಉಳಿದಿದ್ದ ವಿಷವೆ ಕಲಿಯ ಅಭಿಮನ್ಯಮಾನವಾಗಿ ಶರೀರರೂಪವಾಗಿ ಲೋಕದಲ್ಲಿ ಎಲ್ಲ ಕಡೆ ವ್ಯಾಪಿಸಿತು.

ಕಲೇಃ ಶರೀರಾದಭವನ್ ಕುನಾಗಾಃಸವೃಶ್ಚಿಕಾಃ ಶ್ವಾಪದ ಯಾತುಧಾನಾಃ।
ಅಥ ತ್ವಯಾಬೌದ್ಧು ವಿಮಥ್ಯಮಾನೇ ಸುರಾಽಭವತ್ ತಾಮಸುರಾ ಅವಾಪುಃ ॥೧೮॥

ಕಲಿಯ ಶರೀರವಾದ ಆ ವಿಷದಿಂದ ದುಷ್ಟ ಸರ್ಪಗಳು ಚೇಳುಗಳು ತೋಳ ಹುಲಿ ಮುಂತಾದವು ಮತ್ತು ರಾಕ್ಷಸರು ಹುಟ್ಟಿದರು. ಬಳಿಕ ನೀನು ಸಮುದ್ರ ಮಥನ ಮಾಡುತ್ತಿದ್ದಂತೆ ಮದ್ಯ ಉದ್ಭವಿಸಿತು. ಅದನ್ನು ಅಸುರರು ಸ್ವೀಕರಿಸಿದರು.

ಉಚ್ಚೈಃಶ್ರವ ಐರಾವತಾದಿಗಳ ಪ್ರಾದುರ್ಭಾವ

ಉಚ್ಚೈಃಶ್ರವಾ ನಾಮ ತುರಂಗಮೋಭೂತ್ ಕರೀ ತಥೈರಾವತನಾಮಧೇಯಃ।
ಅನ್ಯೇ ಚ ದಿಕ್ಪಾಲಗಜಾ ಬಭೂವುರ್ವರಂ ತಥೈವಾಪ್ಸರಸಾಂ ಸಹಸ್ರಮ್ ॥ ೧೯ ॥

ಉಚ್ಚೈಃಶ್ರವ ಎಂಬ ಕುದುರೆ, ಐರಾವತ ಎಂಬ ಹೆಸರಿನ ಆನೆ, ಬೇರೆ ದಿಕ್ಪಾಲಕರ ಆನೆಗಳು ಹುಟ್ಟಿದವು. ಹಾಗೇ ಸಹಸ್ರ ಶ್ರೇಷ್ಠ ಅಪ್ಸರೆಯರೂ ಹುಟ್ಟಿದರು.

'ಉಚ್ಚೈಃಶ್ರವಸ್' ಎಂಬ ಹೆಸರೇ ಹೇಳುವಂತೆ ಆ ಕುದುರೆಗೆ ಮೇಲ್ಮುಖವಾಗಿ ನಿಮಿರಿ ನಿಂತ ಉದ್ದವಾದ ಕಿವಿಗಳು. ಬಿಳಿಬಣ್ಣ ಮತ್ತು ಏಳುಮುಖಗಳು. ಕುದುರೆಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದದು. ಐರಾವತ ಪೂರ್ವದಿಕ್ಕಿನಲ್ಲಿ ಭೂಮಿಯನ್ನು ಹೊತ್ತಿರುವ ಬಿಳಿ ಆನೆ. ಇದಕ್ಕೆ ನಾಲ್ಕು ದಂತಗಳು. ಸೊಂಡಿಲಿನಿಂದ ಗಾಳಿಯನ್ನು ಸೆಳೆದುಕೊಂಡು ಭೂಮಿಯಲ್ಲಿ ಎಲ್ಲಿ ಯಾವಾಗ ಎಷ್ಟು ಗಾಳಿ ಬೀಸಬೇಕೋ ಅಷ್ಟು ಗಾಳಿಯನ್ನು ವ್ಯವಸ್ಥಿತವಾಗಿ ಬಿಡುತ್ತ ಲೋಕವನ್ನು ಕಾಪಾಡುತ್ತದೆ. ಇದೇ ರೀತಿ ಬೇರೆ ದಿಕ್ಪಾಲಕರ ಆನೆಗಳೂ ಭೂಮಿಯನ್ನು ಹೊರುತ್ತವೆ. ಐರಾವತ ಪುಂಡರೀಕ ವಾಮನ ಕುಮುದ ಅಂಜನ ಪುಷ್ಪದಂತ ಸಾರ್ವಭೌಮ ಸುಪ್ರತೀಕ-ಇವೇ ಎಂಟು ಪೂರ್ವಾದಿ ದಿಕ್ಕುಗಳ ಆನೆಗಳು. ಇವೆಲ್ಲವೂ ಸಮುದ್ರಮಥನದಿಂದ ಉದ್ಭವಿಸಿದವು.

ಐರಾವತದ ಮೇಲೆ ಕುಳಿತಿದ್ದ ಇಂದ್ರನಿಗೇ ದೂರ್ವಾಸರು ಶಾಪ ಕೊಟ್ಟಿದ್ದರು. ಬಳಿಕ ಸಮುದ್ರಮಥನದಲ್ಲಿ ಐರಾವತ ಹುಟ್ಟಿತು. ಹೇಗೆ? ಇದೇರೀತಿ ಅತ್ರಿನೇತ್ರದಿಂದ ಉದ್ಭೂತನಾದ ಚಂದ್ರ ಸಮುದ್ರದಿಂದ ಹೇಗೆ ಹುಟ್ಟಿದ? ಐರಾವತ ಚಂದ್ರ ಮುಂತಾದವರೆಲ್ಲ ದೇವತೆಗಳಾದ್ದರಿಂದ ಅವರು ಬೇರೆಬೇರೆ ಅಂಶಗಳಿಂದ ಅನೇಕ ಬಾರಿ ಹುಟ್ಟುತ್ತಾರೆ. ಅದರಿಂದ ವಿರೋಧವಿಲ್ಲ. ಅಥವಾ ಐರಾವತಾದಿಗಳು ಕೆಲವು ಶ್ರೇಷ್ಠಜಾತಿಯ ಆನೆಗಳ ಕುಲನಾಮಗಳು. ಅಪ್ಸರೆಯರೂ ಎಲ್ಲರೂ ಸಮುದ್ರಮಥನದಿಂದಲೆ ಉದ್ಭವಿಸಿದವರಲ್ಲ. ವಾಯುಪುರಾಣ ಹೇಳುವಂತೆ ಬ್ರಹ್ಮನ ಮಾನಸ ಪುತ್ರಿಯರು ಅಹೂತಾ ಎಂಬ ಕುಲದವರು, ಅಗ್ನಿಕನ್ಯೆಯರು ಊರ್ಜಾ ಎಂಬ ಕುಲದವರು ಎಂದು ಮುಂತಾಗಿ ಹದಿನಾಲ್ಕು ಕುಲದ

ಅಪ್ಸರೆಯರಿದ್ದಾರೆ. ಅವರಲ್ಲಿ ಸಮುದ್ರಮಥನದಿಂದ ಬಂದವರು ಅಮೃತಾ ಎಂಬ ಕುಲದವರು. ಅಪ್ಸರೆಯರಲ್ಲಿ ಕೆಲವರು ಅಸುರ ಜಾತಿಯವರೂ ಇರುತ್ತಾರೆ. ಅವರು ವರಬಲದಿಂದ ಅಪ್ಸರೆಯರಾಗಿ ಹುಟ್ಟಿದವರು ಸ್ವಾಭಾವಿಕ ಅಪ್ಸರೆಯರು ಬ್ರಹ್ಮವಾದಿನಿಯರು. ಮಹಾಯೋನಿಯರು. ಅನಿಯತಪತಿಗಳಾದ್ದರಿಂದ ತಮ್ಮಲ್ಲಿಗೆ ಬಯಸಿ ಬಂದ ಪುರುಷರನ್ನು ಪತಿಯೆಂದು ಆರಾಧಿಸುತ್ತಾರೆ.

ತಥಾಯುಧಾನ್ಯಾಭರಣಾನಿ ಚೈವ ದಿವೌಕಸಾಂ ಪಾರಿಜಾತಸ್ತರುಶ್ಚ।
ತಥೈವ ಸಾಕ್ಷಾತ್ಸುರಭಿರ್ನಿಶೇಶೋ ಬಭೂವ ತತ್ಕೌಸ್ತುಭಂ ಲೋಕಸಾರಮ್ ॥೨೦॥

ಹಾಗೇ ದೇವತೆಗಳ ಆಯುಧಗಳು. ಅಭರಣಗಳು ಮತ್ತು ಪಾರಿಜಾತ ವೃಕ್ಷಗಳು ಹುಟ್ಟಿದವು. ಹಾಗೇ ಮುಖ್ಯಕಾಮಧೇನು ಜನಿಸಿದಳು. ಚಂದ್ರ ಜನಿಸಿದ. ಲೋಕದಲ್ಲೆಲ್ಲ ಶ್ರೇಷ್ಠವಾದ ಕೌಸ್ತುಭಮಣಿಯೂ ಹುಟ್ಟಿತು.

ಮುಖ್ಯ ಕಾಮಧೇನು ಎಂದರೆ ಸುರಭಿ. ಅವಳ ಸಂತತಿಯಲ್ಲಿ ಮುಂದೆ ವಸಿಷ್ಠರ ಹೋಮಧೇನುವೆನಿಸಿದ ನಂದಿನಿ ಮುಂತಾದ ಅನೇಕ ಕಾಮಧೇನುಗಳು ಉದ್ಭವಿಸುತ್ತಾರೆ.

ಲಕ್ಷ್ಮೀ-ಧನ್ವಂತರಿ ಪ್ರಾದುರ್ಭಾವ

ಅಥೇಂದಿರಾ ಯದ್ಯಪಿ ನಿತ್ಯದೇಹಾ ಬಭೂವ ತತ್ರಾಪರಯಾ ಸ್ವತನ್ವಾ।
ತತೋ ಭವಾನ್ ದಕ್ಷಿಣಬಾಹುನಾ ಸುಧಾಕಮಂಡಲುಂ ಕಲಶಂ ಚಾಪರೇಣ।
ಪ್ರಗೃಹ್ಯ ತಸ್ಮಾನ್ನಿರಗಾತ್ ಸಮುದ್ರಾದ್ ಧನ್ವಂತರಿರ್ನಾಮ ಹರಿನ್ಮಣಿದ್ಯುತಿಃ ॥೨೧॥

ಬಳಿಕ ಮಹಾಲಕ್ಷ್ಮಿ ನಿತ್ಯಸ್ವರೂಪಳಾಗಿದ್ದರೂ ಇನ್ನೊಂದು ರೂಪದಿಂದ ಕ್ಷೀರ ಸಮುದ್ರದಲ್ಲಿ ಪ್ರಾದುರ್ಭವಿಸಿದಳು. ಬಳಿಕ ಇಂದ್ರನೀಲ ಮಣಿಯಂಥ ಕಾಂತಿಉಳ್ಳ ಧನ್ವಂತರಿಯಾಗಿ ನೀನು ಬಲಗೈಯಿಂದ ಅಮೃತ ಬಡಿಸುವ ಕಮಂಡಲುವನ್ನೂ ಎಡಗೈಯಿಂದ ಅಮೃತ ತುಂಬಿದ ಕಲಶವನ್ನೂ ಹಿಡಿದು ಸಮುದ್ರದಿಂದ ಉದ್ಭವಿಸಿದೆ.

'ಸುಧಾಕಮಂಡಲು' ಎಂದು ಶ್ಲೋಕದಲ್ಲಿ ಹೇಳಿದ್ದು ಸುಧೆಯಿಂದ ತುಂಬಿದ ಕಮಂಡಲು ಅಲ್ಲ. ಮುಂದಿನ ಶ್ಲೋಕದಲ್ಲಿ ಹೇಳುವಂತೆ ದೈತ್ಯರು ಅಪಹರಿಸುವುದು ಸುಧಾಪೂರಿತವಾದ ಕಲಶವನ್ನು ಹೊರತು ಸುಧಾಪೂರಿತವಾದ ಕಮಂಡಲುವನ್ನಲ್ಲ. ಅದರಿಂದ ಕಮಂಡಲು ಇಲ್ಲಿ ಅಮೃತವನ್ನು ಬಡಿಸುವ ಪಾತ್ರೆಯಷ್ಟೆ. ಅದು ಅಮೃತದಿಂದ ತುಂಬಿಲ್ಲ. ತುಂಬಿದ್ದರೆ ಅದನ್ನೂ ದೈತ್ಯರು ಅಪಹರಿಸುತ್ತಿದ್ದರು.

'ಕಲಶ' ಎಂದರೆ ಬರಿಕಲಶವಲ್ಲ. ಮುಂದಿನ ಶ್ಲೋಕದಲ್ಲಿ 'ಸುಧಾಭರಂ ಕಲಶಂ' ಎಂದು ಹೇಳಿದ್ದರಿಂದ ಅಮೃತಪೂರ್ಣವಾದ ಕಲಶವೆಂದೇ ಇಟ್ಟುಕೊಳ್ಳಬೇಕು. ಕಮಂಡಲು ಅಮೃತ ಬಡಿಸುವುದಕ್ಕಾಗಿ ಎಂದ ಮೇಲೆ ಕಲಶ ಅಮೃತದಿಂದ ತುಂಬಿರಲೇಬೇಕು. ಅದರಿಂದ ಅಮೃತಪೂರ್ಣ ಕಲಶ ಎಂದು ಪ್ರತ್ಯೇಕ ಹೇಳಿಲ್ಲ.[1]

'ಚಂದ್ರೌಘಕಾಂತಿಂ' ಎಂದು ತಂತ್ರಸಾರದಲ್ಲಿ ಧನ್ವಂತರಿ ಅನೇಕ ಚಂದ್ರರಂತೆ ಹೊಳೆಯುವವನೆಂದಿದ್ದರೂ ಇಂದ್ರನೀಲಮಣಿಯಂತೆ ಹೊಳೆಯುವುದರಲ್ಲಿ ವಿರೋಧವಿಲ್ಲ.

'ಶ್ಯಾಮಾವದಾತೇ ಜಗದೇಕಸಾರೇ ಸ್ವನಂತ ಚಂದ್ರಾಧಿಕಕಾಂತಿ ಕಾಂತೇ' ಎಂದು ಹಿಂದೆ ನಿರ್ಣಯದಲ್ಲಿ (4-12) ಇದೇ ರೀತಿ ವರ್ಣನೆ ಇದೆ- ತಾಮ್ರಪರ್ಣೀಯ.

ಪೂರೂರವನ ವಂಶದಲ್ಲಿ ದೀರ್ಘತಮನ ಪುತ್ರನಾಗಿ ಧನ್ವಂತರಿ ಇನ್ನೊಮ್ಮೆ ಅವತರಿಸುತ್ತಾನೆ. ಇಬ್ಬರು ಧನ್ವಂತರಿಗಳೂ ಆಯುರ್ವೇದ ಪ್ರವರ್ತಕರು.

ದೈತ್ಯರಿಂದ ಅಮೃತದ ಅಪಹರಣ

ತತೋ ಭವದ್ದಸ್ತಗತಂ ದಿತೇಃ ಸುತಾಃ
ಸುಧಾಭರಂ ಕಲಶಂ ಚಾಪಜಹ್ರುಃ।
ಮುಕ್ತಂ ತ್ವಯಾ ಶಕ್ತಿಮತಾಪಿ ದೈತ್ಯಾನ್
ಸತ್ಯಚ್ಯುತಾನ್ ಕಾರಯಿತುಂ ವಧಾಯ ॥ ೨೨ ॥

ಆಗ ನಿನ್ನ ಕೈಯಲ್ಲಿದ್ದ ಅಮೃತಪೂರ್ಣ ಕಲಶವನ್ನು ದೈತ್ಯರು ಅಪಹರಿಸಿದರು. ನೀನು ಶಕ್ತಿಉಳ್ಳವನಾದರೂ ಬಿಟ್ಟುಬಿಟ್ಟೆ. ದೈತ್ಯರನ್ನು ಸತ್ಯಭ್ರಷ್ಟರನ್ನಾಗಿಸಿ ಮುಂದೆ ಅವರನ್ನು ವಧಿಸುವುದಕ್ಕಾಗಿ.

ದೇವದಾನವರು ಅಮೃತವನ್ನು ಸರಿಯಾಗಿ ಹಂಚಿಕೊಳ್ಳುವುದೆಂದು ಮೊದಲೆ ಒಪ್ಪಂದವಾಗಿತ್ತು. ಆದರೆ ದೈತ್ಯರು ತಮ್ಮ ಸ್ವಭಾವದಂತೆ ಒಪ್ಪಂದ

---

1. ಸುಧಾಕಮಂಡಲುಂ ನ ತು ಸುಧಾಪೂರಿತ ಕಮಂಡಲುಂ। ತಥಾಸತಿ ದೈತ್ಯೈಸ್ತಸ್ಯಾಪ್ಯಪಹಾರ ಪ್ರಸಂಗಾತ್। ಕಿಂತು ಜಲ ಪರಿವೇಷಣ ಕಮಂಡಲುಮಿತಿ ಭಾವಃ। ಕಲಶಂ ಸುಧಾಪೂರಿತ ಕಲಶಂ। ಪರಿವೇಷಣ ಪಾತ್ರಸ್ಯ ಸುಧಾಪಾತ್ರತ್ವೇ ಕಲಶಸ್ಯ ಸುಧಾಪೂರ್ಣತ್ವಂ ಸ್ವತ ಏವ ಸಿದ್ಧಮಿತ್ಯತೋ ನ ಪೃಥಗುಕ್ತಂ। ಸುಧಾಯ ಭರಃ ಭಾರೋ ಯತ್ರ ತಂ ಸುಧಾಭರಂ ಕಲಶಂ ಇತ ವಕ್ಷ್ಯತಿ ಚ। ಜ್ಞಾನಂ ಸುಧಾಕಲಶಮೇವ ಚ ಸಂದಧಾನ ಮಿತಿ ತಂತ್ರ ಸಾರೇ ಸ್ವಯಮೇವ ಗ್ರಂಥಕಾರೈರುಕ್ತತ್ವಾಚ್ಚ ॥
-ವಾದಿರಾಜೀಯ

ಮುರಿದು ಅಮೃತವನ್ನು ಅಪಹರಿಸಿದರು. ಹೀಗೆ ದೈತ್ಯರನ್ನು ಸತ್ಯಭ್ರಷ್ಟರನ್ನಾಗಿ ಮಾಡಿ ಅವರು ಅಮೃತಪಾನಕ್ಕೆ ಅಯೋಗ್ಯರೆಂದು ಲೋಕಕ್ಕೆ ತೋರಿಸಲೆಂದೇ ಧನ್ವಂತರಿ ಸುಮ್ಮನಿದ್ದ. ತಡೆಯಲು ಶಕ್ತಿ ಇರಲಿಲ್ಲವೆಂದಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಇದೆ.[1]

ಹರಿ ಮೋಹಿನೀ ರೂಪ ತಳೆದ

ತತೋ ಭವಾನನುಪಮಮುತ್ತಮಂ ವಪು
ರ್ಬಭೂವ ದಿವ್ಯಪ್ರಮದಾತ್ಮಕಂ ತ್ವರನ್ ।
ಶ್ಯಾಮಂ ನಿತಂಬಾರ್ಪಿತ ರತ್ನಮೇಖಲಂ
ಜಾಂಬೂನದಾಭಾಂಬರಭೃತ್ ಸುಮಧ್ಯಮಮ್ ॥ ೨೩ ॥

ಆಗ ನೀನು ಬೇಗನೆ ಅನುಪಮ ಉತ್ತಮ ದಿವ್ಯಸ್ತ್ರೀರೂಪವಾದೆ. ಆ ರೂಪ ನೀಲವರ್ಣದ್ದು. ನಿತಂಬದಲ್ಲಿ ರತ್ನದ ಒಡ್ಯಾಣ ಧರಿಸಿತ್ತು. ಬಂಗಾರದಂತೆ ಹೊಳೆವ ಸೀರೆ ಉಟ್ಟಿತ್ತು. ಚೆಲುವಾದ ನಡುವಿನದಾಗಿತ್ತು.

ಸ್ತ್ರೀರೂಪಮದ್ಭುತಂ ಕೃತ್ವಾ 'ಅದ್ಭುತ ಸ್ತ್ರೀ ರೂಪ ಧರಿಸಿ' ಎಂದು ಮಹಾಭಾರತ ಹೇಳುವಂತೆ ಹೇಳದೆ ಸ್ತ್ರೀರೂಪವಾದೆ ಎಂದದು ಹರಿಗೂ ಅವನ ಶರೀರಕ್ಕೂ ಭೇದವಿಲ್ಲವೆಂದು ತಿಳಿಸುವದಕ್ಕಾಗಿ.[2]

ಬೃಹನ್ನಿತಂಬಂ ಕಲಶೋಪಮಸ್ತನಂ
ಸತ್ಪುಂಡರೀಕಾಯತನೇತ್ರಮುಜ್ವಲಮ್ ।
ಸಮಸ್ತಸಾರಂ ಪರಿಪೂರ್ಣ ಸದ್ಗುಣಂ
ದೃಷ್ಟ್ವಾತತ್ ಸಂಮುಮುಹುಃ ಸುರಾರಯಃ ॥ ೨೪ ॥

ಹರಿಯ ಆ ಸ್ತ್ರೀರೂಪ ವಿಶಾಲನಿತಂಬ, ಕಲಶದಂಥ ಸ್ತನ, ಒಳ್ಳೆಯ ಕಮಲದಂತೆ ವಿಶಾಲವಾದ ಕಣ್ಣುಗಳುಳ್ಳದ್ದು. ಉಜ್ವಲ, ಸರ್ವಶ್ರೇಷ್ಠ ಪರಿಪೂರ್ಣಸದ್ಗುಣಭರಿತ. ಅದನ್ನು ನೋಡಿಯೆ ದೈತ್ಯರು ಮೋಹಗೊಂಡರು.

ಪರಸ್ಪರಂ ತೇऽಮೃತಹೇತತೋऽಖಿಲಾ ವಿರುಧ್ಯಮಾನಾಃ ಪ್ರದದುಃ ಸ್ಮತೇ ಕರೇ।
ಸಮಂ ಸುಧಾಯಾಃ ಕಲಶಂ ವಿಭಜ್ಯ ನಿಪಾಯಯಾಸ್ಮಾನಿತಿ ವಂಚಿತಾಸ್ತ್ವಯಾ ॥೨೫॥

ನಿನ್ನಿಂದ ವಂಚಿತರಾದ ಅವರೆಲ್ಲರೂ ಅಮೃತನಿಮಿತ್ತವಾಗಿ ಜಗಳವಾಡುತ್ತಿದ್ದವರು

---

1. ತೇಷಾಂ ಸತ್ಯಾಚ್ಚಾಲನಾರ್ಥಂ ಹರಿರ್ಧನ್ವಂತರಿರ್ವಿಭುಃ ।
   ಸಮರ್ಥೋऽಪ್ಯಸುರಾಣಾಂ ತು ಸ್ವಹಸ್ತಾದಮುಚತ್ ಸುಧಾಂ ॥
2. ವಿಷ್ಣೋರ್ವಿಷ್ಣುವಪುಷಶ್ಚಾಭೇದ ಸೂಚನಾಯ ವಪುರ್ಬಭೂವೇತ್ಯುಕ್ತಂ । -ವಾದಿರಾಜೀಯ

'ನೀನು ನಮ್ಮಲ್ಲಿ ಸರಿಯಾಗಿ ಹಂಚಿ ಉಣಿಸು' ಎನ್ನುತ್ತ ನಿನ್ನ ಕೈಯಲ್ಲಿ ಅಮೃತಕಲಶವನ್ನಿತ್ತರು.

ಧರ್ಮಚ್ಛಲಂ ಪಾಪಜನೇಷು ಧರ್ಮ
ಇತಿ ತ್ವಯಾ ಜ್ಞಾಪಯಿತುಂ ತದೋಕ್ತಮ್ ।
ಯದ್ಯತ್ಕೃತಂ ಮೇ ಭವತಾಂ ಯದೀಹ
ಸಂವಾದ ಏವೋದ್ವಿಭಜೇ ಸುಧಾಮಿಮಾಮ್ ॥ ೨೬ ॥

ಧರ್ಮರಕ್ಷಣೆಗಾಗಿ ಪಾಪಿಜನರಲ್ಲಿ ವಂಚನೆ ಮಾಡುವುದೂ ಧರ್ಮವೆ ಎಂದು ತೋರಿಸುವುದಕ್ಕಾಗಿ ನೀನು ನುಡಿದೆ– 'ನಾನೇನು ಮಾಡಿದರೂ ಅದನ್ನು ನೀವು ಒಪ್ಪುವುದಾಗಿದ್ದರೆ ಮಾತ್ರ ಅಮೃತವನ್ನು ಹಂಚುತ್ತೇನೆ.'

ಯಥೇಷ್ಟತೋಽಹಂ ವಿಭಜಾಮಿ ಸರ್ವಥಾ ನ ವಿಶ್ವಸಧ್ವಂ ಮಯಿ ಕೇನಚಿತ್ಕ್ವಚಿತ್ ।
ಇತಿ ಪ್ರಹಸ್ಯಾಭಿಹಿತಂ ನಿಶಮ್ಯ ಸ್ತ್ರೀಭಾವಮುಗ್ಧಾಸ್ತುತಥೇತಿ ತೇಽವದನ್ ॥ ೨೭ ॥

'ನಾನು ನನ್ನಿಚ್ಛಾನುಸಾರವೆ ಹಂಚುವೆ. ನೀವು ಯಾವ ರೀತಿಯಿಂದಲೂ ಯಾವ ವಿಷಯದಲ್ಲಿಯೂ ನನ್ನಲ್ಲಿ ಸರ್ವಥಾ ವಿಶ್ವಾಸವಿಡಬೇಡಿ' ಎಂದು ನಗುತ್ತ ನೀನು ಹೇಳಿದ್ದನ್ನು ಕೇಳಿ ಅವರು ಸ್ತ್ರೀಸ್ವಭಾವಕ್ಕೆ ಮರುಳಾಗಿ 'ಹಾಗೇ ಆಗಲಿ' ಎಂದರು.

'ಅಮೃತವನ್ನು ದೈತ್ಯರಲ್ಲಿ ಹಂಚುತ್ತೇನೆ' ಎಂದು ಮೋಹಿನಿ ಹೇಳಿದ್ದು ಸುಳ್ಳು. ಆದರೆ ಅದು ಲೋಕಶಿಕ್ಷಣಕ್ಕಾಗಿ. ದುರ್ಜನರಲ್ಲಿ ಸತ್ಯ ವ್ಯವಹಾರ ಸಲ್ಲದೆಂದು ತಿಳಿಸುವುದಕ್ಕಾಗಿ. 'ನೀವು ನನ್ನನ್ನು ನಂಬಬೇಡಿ' ಎಂದು ಪುನಃ ಸತ್ಯ ಹೇಳಿದುದು 'ವಿಷ್ಣುವಿನ ಮಾತು ಎಂದೂ ಸುಳ್ಳಾಗುವುದಿಲ್ಲ' ಎಂಬ ನಿಯಮ ರಕ್ಷಣೆಗಾಗಿ.[1]

ತತಶ್ಚ ಸಂಸ್ಥಾಪ್ಯ ಪೃಥಕ್ ಸುರಾಸುರಾಂ-
ಸ್ತವಾತಿರೂಪೋಚ್ಚಲಿತಾನ್ ಸುರೇತರಾನ್ ।
ಸರ್ವಾನ್ ಭವದ್ದರ್ಶನ ಈಕ್ಷ್ಯಲಜ್ಜಿತಾ-
ಸ್ಮ್ಯಹಂ ದೃಶೋ ಮೀಲಯತೇತ್ಯವೋಚಃ ॥ ೨೮ ॥

ಬಳಿಕ ದೇವತೆಗಳನ್ನು ಅಸುರರನ್ನೂ ಬೇರೆ ಬೇರೆಯಾಗಿ ಕುಳ್ಳಿರಿಸಿ, ನಿನ್ನ ಅತಿಯಾದ ಸೌಂದರ್ಯದಿಂದ ಮನಸ್ಸಿನಲ್ಲಿ ಬಹಳ ವಿಚಲಿತರಾದ ಅಸುರರಿಗೆ ನೀನು ಹೇಳಿದೆ. 'ನೀವು ನನ್ನನ್ನು ಹೀಗೆ ನೋಡುತ್ತಿದ್ದರೆ ನೋಡಿ ನಾನು ನಾಚುವೆ. ಕಣ್ಣು ಮುಚ್ಚಿಕೊಳ್ಳಿ.'

---

1. ಲೋಕಶಿಕ್ಷಣಾಯೈವ ಇಮಾಂ ಸುಧಾಂ ಉದ್ವಿಭುಜ ಇತಿ ಪ್ರಾಗನೃತಂ ತ್ವಯೋಕ್ತಂ ನ ವಿಷ್ಣೋರ್ವಚನಂ ಕ್ವಾಪಿ ಮೃಷಾ ಭವತಿ ಕಸ್ಯಚಿದಿತಿ ಸ್ವನಿಯಮರಕ್ಷಣಾಯ ಪುನಃ ಸತ್ಯಮೇವೋಕ್ತಮಿತಿ ಭಾವೇನಾಹುಃ ಯಥೇಪ್ಸತ ಇತಿ। ಇಷ್ಟಂ ಇಚ್ಛಾ। ಭಾವೇ ಕ್ತ। ಮಮೇಚ್ಛಾನುಸಾರತ ಇತ್ಯರ್ಥಃ। –ವಾದಿರಾಜೀಯ

ದೈತ್ಯರು ಕಾಮದ ಕಣ್ಣಿಂದ ನೋಡಿದರೆ ಹರಿ ನಾಚುವುದು ಯುಕ್ತವೆ. ಅತಿಪಾಪಿಗಳು ನೋಡುವುದನ್ನು ಸಹಿಸದೆ ಲಜ್ಜಿಪಡುವುದು ಗುಣವೆ ಹೊರತು ದೋಷವಲ್ಲ. ಆದರಿಂದ ಹರಿ ನಾನು ನಾಚುವೆನೆಂದದ್ದು ಸುಳ್ಳಲ್ಲ. ದೇವತೆಗಳು ಜಗನ್ಮಾತೆ ಎಂಬ ಭಾವನೆಯಿಂದ ಕಾಣುವವರು. ಆದರಿಂದ ಅವರಿಗೆ ಕಣ್ಣುಮುಚ್ಚಲು ಮೋಹಿನಿ ಹೇಳುತ್ತಿಲ್ಲ.1

ರಾಹುಶಿರಶ್ಛೇದ

ನಿಮೀಲಿತಾಕ್ಷೇಷ್ವಸುರೇಷು ದೇವತಾ
ನ್ಯಪಾಯಯಃ ಸಾಧ್ವಮೃತಂ ತತಃ ಪುಮಾನ್ ।
ಕ್ಷಣೇನ ಭೂತ್ವಾಪಿಬತಃ ಸುಧಾಂ ಶಿರೋ
ರಾಹೋರ್ನ್ಯಕೃಂತಶ್ಚಸುದರ್ಶನೇನ ॥ ೨೯ ॥

ಅಸುರರು ಕಣ್ಣು ಮುಚ್ಚಿಕೊಂಡಿರಲು ನೀನು ದೇವತೆಗಳಿಗೇ ಚೆನ್ನಾಗಿ ಅಮೃತವನ್ನು ಉಣಿಸಿದೆ. ಬಳಿಕ ಕ್ಷಣದಲ್ಲಿ ಪುರುಷನಾಗಿ, ಅಮೃತ ಕುಡಿಯುತ್ತಿದ್ದ ರಾಹುವಿನ ಶಿರಸ್ಸನ್ನು ಸುದರ್ಶನದಿಂದ ಕತ್ತರಿಸಿದೆ.

ರಾಹು ಕಶ್ಯಪ ಮುನಿಯಿಂದ ಸಿಂಹಿಕೆ ಎಂಬ ಪತ್ನಿಯಲ್ಲಿ ಜನಿಸಿದ ಅಸುರ. ಅಸುರರೆಲ್ಲ ಸಮುದ್ರಮಥನದಿಂದ ಮೊದಲೇ ಬಂದಿದ್ದ ಮದ್ಯ ಸೇವಿಸಿದ್ದರು. ಮದ್ಯಪಾನಕ್ಕೇ ಅವರು ಯೋಗ್ಯರು. ಆದರೆ ರಾಹು ಅಮೃತಪಾನಕ್ಕಾಗಿ ಮಾಯೆಯಿಂದ ದೇವತಾರೂಪ ತಾಳಿದ. ಆದರೂ ದೇವತೆಗಳ ನಡುವೆ ಕುಳ್ಳಿರಲು ಭಯ. ಅವರ ಪಂಕ್ತಿಯ ಕೊನೆಯಲ್ಲಿ ಕುಳಿತ. ಅದರಿಂದ ಆತ ಅಮೃತ ಕುಡಿಯಲು ತೊಡಗಿದೊಡನೆ ಮೋಹಿನೀರೂಪಿ ಹರಿ ಪುರುಷರೂಪ ತಾಳಿ ಅವನ ಶಿರಶ್ಛೇದಗೈದ. ಪಂಕ್ತಿಯ ಮಧ್ಯದಲ್ಲಿ ಆತ ಕುಳಿತಿದ್ದರೆ ಅಲ್ಲಿಯೆ ಮೋಹಿನಿರೂಪ ಮುಕ್ತಾಯವಾಗುತ್ತಿತ್ತು. ಎಲ್ಲ ದೇವತೆಗಳಿಗೆ ಅಮೃತದ ಊಟ ಇಲ್ಲವಾಗುತ್ತಿತ್ತು.[2]

---

1. ವಸ್ತುತೋ ನಾರಾಯಣಸ್ಯ ಲಜ್ಜಾಭಾವಾದ ನೃತಮಿದಮಿತಿ ನ ಶಂಕನೀಯಂ। ಅತಿ ಪಾಪಿನಾಂ ದರ್ಶನೇ ಲಜ್ಜಾಯಾ ಅಪಿ ಗುಣತ್ವಾತ್। ದೇವಾನಾಂ ತು ರಾಗಂ ವಿಹಾಯೈವ ಮದ್ದರ್ಶನಾತ್ ತಾನ್ ವೀಕ್ಷ್ಯ ನ ಲಜ್ಜೇತಿ ಭಾವಃ । -ವಾದಿರಾಜೀಯ
2. ಪಿಬತಃ ಸುಧಾಮಿತ್ಯುಕ್ತ್ಯಾ ದೇವಪಂಕ್ತಾವವಸಾನೇ ರಾಹುರುಪವಿಷ್ಟ ಇತಿ ಸೂಚ್ಯತೇ। ಸರ್ವೇಷಾಂ ದೇವಾನಾಂ ಸುಧಾಪಾನಾನಂತರಂ ಅಂತೇ ಸುಧಾಂ ಪಿಬತಃ ರಾಹೋಃ ಶಿರಃ ನ್ಯಕೃತಂ ಇತಿ ಯೋಜನಾ। ಅನ್ಯಥಾ ಮಧ್ಯೇ ರಾಹೋಃ ಸ್ಥಿತೌ ಕೇಷಾಂಚಿದ್ ದೇವಾನಾಂ ಸುಧಾಪಾನಂ ನ ಸ್ಯಾತ್। ಪರಿವೇಷಕ ಸ್ತ್ರೀರೂಪಸ್ಯ ತತ್ರೈವ ಪರಿಸಮಾಪ್ತಿ ಪ್ರಸಂಗಾತ್। ಮಾಯಯಾ ದೇವವೇಷಾಧಾರೀ ಭೀತಃ ಸನ್ ಕೋಣ ಏವೋ ಪವಿವೇಶ ಚೇತಿ ಭಾವಃ। -ವಾದಿರಾಜೀಯ

ತೇನಾಮೃಥಾರ್ಥಂ ಹಿ ಸಹಸ್ರ ಜನ್ಮಸು
ಪ್ರತಪ್ಯ ಭೂಯಸ್ತಪ ಆರಿತೋ ವರಃ।
ಸ್ವಯಂಭುವಸ್ತೇನ ಭವಾನ್ ಕರೇಽಸ್ಯ
ಬಿಂದುಂ ಸುಧಾಂ ಪ್ರಾಸ್ಯಶಿರೋ ಜಹಾರ ॥ ೩೦ ॥

ರಾಹು ಅಮೃತಕ್ಕಾಗಿ ಸಾವಿರ ಜನ್ಮಗಳಲ್ಲಿ ಬಹಳ ಚೆನ್ನಾಗಿ ತಪಸ್ಸು ಮಾಡಿ ಬ್ರಹ್ಮನಿಂದ ವರ ಪಡೆದಿದ್ದ. ಅದರಿಂದ ನೀನು ಅವನ ಕೈಗೆ ಒಂದು ತೊಟ್ಟು ಅಮೃತವನ್ನು ಬಡಿಸಿ ಶಿರಸ್ಸನ್ನು ತೆಗೆದೆ.

ರಾಹುಗ್ರಹೋತ್ಪತ್ತಿ

ಶಿರಸ್ತು ತಸ್ಯ ಗ್ರಹತಾಮವಾಪ ಸುರೈಃ
ಸಮಾವಿಷ್ಟಮಥೋ ಸಬಾಹುಃ।
ಕ್ಷಿಪ್ರಃ ಕಬಂಧೋಽಸ್ಯ ಶುಭೋದಸಾಗರೇ
ತ್ವಯಾ ಸ್ಥಿತೋಽದ್ಯಾಪಿ ಹಿ ತತ್ರ ಸಾಮೃತಃ ॥ ೩೧ ॥

ರಾಹುವಿನ ಶಿರಸ್ಸು ಮಾತ್ರ ದೇವತೆಗಳಿಂದ ಆವಿಷ್ಟವಾಗಿ ಗ್ರಹವಾಯಿತು. ಬಳಿಕ ಬಾಹುಸಮೇತವಾದ ಮುಂಡವನ್ನು ನೀನು ಸ್ವಾದೂದಕ ಸಮುದ್ರದಲ್ಲಿ ಎಸೆದೆ. ಅದರಲ್ಲಿ ಅಮೃತ ಪ್ರವೇಶಿಸಿದ್ದರಿಂದ ಇಂದಿಗೂ ನಶಿಸದೆ ಅಲ್ಲಿ ಇದೆ.

ಶಿರಸ್ಸು ಗ್ರಹವಾಯಿತೆಂದರೆ ರಾಹು ಕೇತು ಎಂಬ ಎರಡು ಗ್ರಹಗಳಿಗೆ ಅದೊಂದೇ ಶಿರಸ್ಸು ಅಧಿಷ್ಠಾನವಾಯಿತೆಂದರ್ಥ. ಶ್ರೀಹರಿ ತನ್ನ ಹಸ್ತಚಮತ್ಕಾರದಿಂದ ರಾಹುವಿನ ರುಂಡವನ್ನು ಕತ್ತರಿಸಿದಾಗ ರಾಹು ಅದೇಕ್ಷಣದಲ್ಲಿ ಸತ್ತ. ಅವನಿಗೆ ಅಮೃತಪಾನವಾಗಲೆ ಇಲ್ಲ. ಕುತ್ತಿಗೆವರೆಗೆ ಮಾತ್ರ ಅಮೃತದ ಒಂದು ತೊಟ್ಟು ಇಳಿದಿತ್ತು. ರುಂಡ ಕೆಳಗೆ ಬೀಳಲಿಲ್ಲ. ಮುಂಡದಲ್ಲಿಯೆ ಇದ್ದಿತು. ಇದು ಹರಿಯ ಹಸ್ತ ಚಮತ್ಕಾರ. ಅಮೃತದ ಬಿಂದು ಬಳಿಕ ರುಂಡಬೀಳುವುದಕ್ಕೆ ಮೊದಲು ಅತ್ತ ರುಂಡದಲ್ಲಿಯೂ ಹರಡಿತು. ಇತ್ತ ಮುಂಡದಲ್ಲಿಯೂ ಹರಡಿತು. ಹೀಗಾಗಿ ರಾಹು ಸತ್ತೂ ಅವನ ರುಂಡವೂ ಚಿರಕಾಲಸ್ಥಾಯಿ, ಮುಂಡವೂ ಚಿರಕಾಲಸ್ಥಾಯಿ. 'ರಾಹುಶಿರಸ್ಸಿನಲ್ಲಿ ರಾಹುವಿನ ಅಂಶ ಜ್ಯೇಷ್ಠವಾಗಿ ಇದೆ. ನೂರು ಮಂದಿ ಕೇತುಗಳ ಸನ್ನಿಧಾನವೂ ಇದೆ' ಎಂಬ ಭಾಗವತ ವಚನಾನುಸಾರ ರಾಹುವಿನ ಸ್ವಲ್ಪಸನ್ನಿಧಾನವೂ ಇದೆ. ನೂರು ಮಂದಿ ಕೇತುನಾಮಕರಾದ ದೇವತೆಗಳ ಸನ್ನಿಧಾನವೂ ಇದೆ. ರಾಹುವಿನ ಶಿರಸ್ಸಿಗೆ ರಾಹು ಮುಖ್ಯ ಅಭಿಮಾನಿಯಾದ್ದರಿಂದ ಅವನ ಅಲ್ಪ ಅಂಶವನ್ನೂ ಜ್ಯೇಷ್ಠ ಎನ್ನಲಾಗಿದೆ.

ಕೇತು ದೇವತೆಗಳು ಕನಿಷ್ಠರೆನ್ನುವ ವಿವಕ್ಷೆ. ಹೀಗೆ ರಾಹು ಕೇತು ಎನ್ನುವ ಎರಡು ಗ್ರಹಗಳಿಗೂ ಅಧಿಷ್ಠಾನ ಒಂದೇ ರಾಹುವಿನ ಶಿರಸ್ಸು. ಅದರಿಂದ 'ಶಿರಸ್ಸು ಮಾತ್ರವೆ ಗ್ರಹವೆನಿಸಿತು' ಎನ್ನುತ್ತಾರೆ ಶ್ರೀಮದಾಚಾರ್ಯರು. ರಾಹುನಾಮದಿಂದ ಯಾಜ್ಞಿಕರು ನೀಡುವ ಹವಿಸ್ಸನ್ನು ಕೇತು ದೇವತೆಗಳೇ ಸ್ವೀಕರಿಸುತ್ತಾರೆ. ರಾಹುದೈತ್ಯನಲ್ಲ. ಯಾಗಾಹುತಿ ಸ್ವೀಕರಿಸಲು ದೈತ್ಯರಿಗೆ ಅಧಿಕಾರವಿಲ್ಲ. ಅವನು ಶಿರಸ್ಸಿನಲ್ಲಿ ಸನ್ನಿಹಿತನಾಗಿರುವುದು ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಚಂದ್ರಸೂರ್ಯರನ್ನು ನುಂಗುತ್ತ ದ್ವೇಷ ಸಾಧಿಸುವುದಕ್ಕಾಗಿ ಅವೈಷ್ಣವರು ನೀಡುವ ಆಹುತಿಯಿಂದಲೆ ಅವನ ಜೀವನ.[1] ರಾಹು ದೈತ್ಯನ ತಲೆ ರಾಹುಗ್ರಹವಾಯಿತು. ಬಾಲ ಕೇತುಗ್ರಹವಾಯಿತೆಂಬ ಗ್ರಹಿಕೆ ರಾಹು ದೈತ್ಯನೆ ಗ್ರಹನಾದ ಎಂಬ ಗ್ರಹಿಕೆ ನಿರ್ಣಯಕ್ಕೆ ವಿರುದ್ಧವೆನ್ನುವುದು ಸ್ಪಷ್ಟ.

ಮಾನವರಲ್ಲಿ ಕಲ್ಯಾವೇಶ

ಅಥಾಸುರಾಃ ಪ್ರತ್ಯಪತನ್ನುದಾಯುಧಾಃ ಸಮಸ್ತಶಸ್ತೇ ಚ ಹತಾಸ್ತ್ವಯಾ ರಣೇ।
ಕಲಿಸ್ತು ಸ ಬ್ರಹ್ಮವರಾದಜೇಯೋ ಋತೇ ಭವಂತಂ ಪುರುಷೇಷು ಸಂಸ್ಥಿತಃ ॥೨೩॥

ಬಳಿಕ ಅಸುರರು ಆಯುಧಗಳನ್ನು ಎತ್ತಿಕೊಂಡು ಏರಿಬಂದರು. ಅವರೆಲ್ಲರೂ ನಿನ್ನಿಂದ ಹತರಾದರು. ಕಲಿ ಮಾತ್ರ ಬ್ರಹ್ಮನ ವರದಿಂದ ನಿನಗೆ ಹೊರತು ಇನ್ನಾರಿಗೂ ಅಜೇಯನೆ ಆಗಿದ್ದುದರಿಂದ ಮನುಷ್ಯರಲ್ಲಿ ಸ್ಥಿರವಾಗಿ ನೆಲೆಸಿದ್ದಾನೆ.

---

1. ಶಿರಸ್ತು ತಸ್ಯ ಗ್ರಹತಾಮವಾಪೇತ್ಯತ್ರ ಚಮತ್ಕಾರೇಣ ಛಿದ್ಯಮಾನೇ ಶಿರಸಿ ರಾಹುರ್ಮ್ಯತಃ। ತಸ್ಯ ಸುಧಾಪಾನಂ ನಾಸೀದೇವ। ಶಿರಸ್ತು ಹರೇರ್ಹಸ್ತಲಾಘವಬಲಾತ್ ತತ್ಕ್ಷಣೇ ಲಗ್ನಂ। ನ ತು ತದೈವ ಪತಿತಂ। ಅಥ ತಸ್ಯಾಧರೋಷ್ಠೋಪರಿ ನಿಕ್ಷಿಪ್ತಂ ಕರಸ್ಥಮಮೃತಂ ತು ಛಿನ್ನ ಶಿರಃ ಪಾತಾತ್ ಪೂರ್ವಂ ಆಸ್ಯವಿವರಂ ಪ್ರವಿಶ್ಯ ಗಲ ವಿವರ ದ್ವಾರೇಣ ಕಬಂಧಂ ಪ್ರಾವಿಶತ್। ಶಿರೋಽಪಿ ಪ್ರಾವಿಶತ್। ಅತಃ ಸುಧಾಸತ್ತ್ವಾತ್ ಶಿರೋಽಪಿ ಚಿರಕಾಲಸ್ಥಾಯಿ। ಕಬಂಧೋಪಿ ಚಿರಕಾಲಸ್ಥಾಯೀ। ತಯೋರ್ಮಧ್ಯೇ ಶಿರಸಿ 'ರಾಹುಜ್ಯೇಷ್ಠಂ ಕೇತುಶತಂ' ಇತಿ ವಚನಾತ್ ರಾಹೋರಪೀಷತ್ ಸನ್ನಿಧಾನಂ। ದೇವಾನಾಂ ಶತಸ್ಯಚ ಸನ್ನಿಧಾನಂ। ತತ್ರಾಪಿ ಶಿರೋಽಭಿಮಾನಿತ್ವಾತ್ ರಾಹೋರಂಶಸ್ಯ ಜ್ಯೇಷ್ಠತಾ। ಕೇತೂನಾಂ ಕನಿಷ್ಠತಾ। ಏವಂ ಗ್ರಹದ್ವಯಸ್ಯಾಪ್ಯೇಕಂ ಶಿರ ಏವಾಧಿಷ್ಠಾನಂ। ಅತ ಏವ ಕರೇ ಪ್ರಾಸ್ಯ ಶಿರೋ ಜಹಾರೇತ್ಯುಕ್ತಂ। ರಾಹುನಾಮ್ನಾ ಯಾಜ್ಞಿಕೈರ್ದೀಯಮಾನಂ ಹವಿಃ ದೇವಾ ಏವ ಗೃಹ್ಣಂತಿ। ಯಜ್ಞಾಹುತ್ಯಾಂ ದೈತ್ಯಾನಾಮನಧಿಕಾರಾತ್। ಪರ್ವಣಿ ಪರ್ವಣಿ ಸೂಚಕಯೋಶ್ಚಂದ್ರ ಸೂರ್ಯಯೋ ರ್ದ್ವೇಷಮಾತ್ಪಾಯ ರಾಹುಃ। ಅವೈಷ್ಣವದತ್ತಾ ಹುತ್ಯೈವ ತಸ್ಯ ಜೀವನ ಮಿತಿ ವಿವೇಕಃ॥ -ವಾದಿರಾಜೀಯ

ಪರಶುಕ್ಷತ್ರಯರೆನಿಸಿರುವ ಲಕ್ಷ್ಮೀ ಬ್ರಹ್ಮವಾಯು ಮತ್ತು ಅವರ ಪತ್ನಿಯರು ಕಲಿಯನ್ನು ಜಯಿಸಿದ್ದರೂ ಅದು ಹರಿಯ ಅನುಗ್ರಹದಿಂದಲೆ. ಅದರಿಂದ ಅದನ್ನು ಪ್ರತ್ಯೇಕ ಹೇಳಿಲ್ಲ. ರುದ್ರಾದಿ ದೇವತೆಗಳಲ್ಲಿ ಕಲಿ ನೆಲೆಸಿದ್ದರೂ ತಾತ್ಕಾಲಿಕವಾಗಿ ನೆಲೆಸಿರುತ್ತಾನೆ. ಸ್ಥಿರವಾಗಿ ನೆಲೆಸಿರುವುದು ಮನುಷ್ಯರಲ್ಲಿಯೆ. ಅದರಿಂದ ಅದನ್ನೇ ಪ್ರತ್ಯೇಕ ಹೇಳಿದೆ.[1]

ತಸ್ಯಾರ್ಧದೇಹಾ ಸಮಭೂದಲಕ್ಷ್ಮೀಸ್ತತ್ಪುತ್ರಕಾ ದೋಷಗಣಾಶ್ಚಸರ್ವಶಃ।
ಅಥೇಂದಿರಾ ವಕ್ಷಸಿ ತೇ ಸಮಾಸ್ಥಿತಾ ತತ್ಕಂಠಗಂ ಕೌಸ್ತುಭಮಾಸ ಧಾತಾ ॥ ೩೩ ॥

ಕಲಿಯ ಅರ್ಧಾಂಗಿನಿಯಾದ ಅಲಕ್ಷ್ಮಿಯೂ ಅವಳ ಮಕ್ಕಳಾದ ಸಕಲ ದೋಷಾಭಿಮಾನಿ ದೈತ್ಯ ಸಮೂಹಗಳೂ ಕ್ಷೀರಸಮುದ್ರದಿಂದ ಎದ್ದು ಬಂದರು. ಬಳಿಕ ಮಹಾಲಕ್ಷ್ಮಿ ನಿನ್ನ ಎದೆಯಲ್ಲಿ ನೆಲೆಸಿದಳು. ಬ್ರಹ್ಮನಿಂದ ಅಭಿಮನ್ಯಮಾನವಾದ ಕೌಸ್ತುಭ ನಿನ್ನ ಕಂಠದಲ್ಲಿ ಶೋಭಿಸಿತು.

ದಾರಿದ್ರ್ಯಕ್ಕೆ ಅಭಿಮಾನಿನಿಯಾದ್ದರಿಂದ 'ಅ-ಲಕ್ಷ್ಮಿ' ಎಂದು ಹೆಸರು. ಅವಳ ಮಕ್ಕಳು 'ಪುತ್ರ'ರಲ್ಲ 'ಪುತ್ರಕ'ರು. ಅಂದರೆ ಕೆಟ್ಟಮಕ್ಕಳು. ಕಾಮಕ್ರೋಧಾದಿ ದೋಷಗಳಿಗೆ ಅಭಿಮಾನಿಗಳು. 'ಬಳಿಕ' ಮಹಾಲಕ್ಷ್ಮಿ ಹರಿಯ ಎದೆಯಲ್ಲಿ ನೆಲೆಸಿದಳು ಎನ್ನುವಲ್ಲಿ 'ಬಳಿಕ' ಭಾಗವತ ಸ್ಕಾಂದ ಪುರಾಣೋಕ್ತ ಸ್ವಯಂವರ ವಿವಾಹೋತ್ಸವಗಳಾದ ಬಳಿಕ ಲಕ್ಷ್ಮಿ ಹರಿಯ ಹೃದಯವನ್ನೇರಿ ಕುಳಿತಳು ಎಂದು ಸೂಚಿತವಾಗುತ್ತದೆ.

ಅಮೃತಪಾನ ಪ್ರಸಂಗ ಮೋಕ್ಷಕ್ಕೆ ನಿದರ್ಶನ:

ಯಥಾವಿಭಾಗಂ ಚ ಸುರೇಷು ದತ್ತಾಸ್ತ್ವಯಾ ತಥಾನ್ಯೇಽಪಿ ಹಿ ತತ್ರ ಜಾತಾಃ।
ಇತ್ಥಂ ತ್ವಯಾ ಸಾಧ್ವಮೃತಂ ಸುರೇಷು ದತ್ತಂ ಹಿ ಮೋಕ್ಷಸ್ಯ ನಿದರ್ಶನಾಯ ॥ ೩೪ ॥

ಕ್ಷೀರಸಮುದ್ರದಲ್ಲಿ ಉದ್ಭವಿಸಿದ ಬೇರೆ ರತ್ನಗಳನ್ನೂ ನೀನು ಯಥಾಯೋಗ್ಯವಾಗಿ ವಿಭಾಗ ಮಾಡಿ ಸುರರಿಗೆ ನೀಡಿದೆ. ಹೀಗೆ ಸುರರಿಗೆ ಮಾತ್ರ ಅಮೃತವನ್ನು ಚೆನ್ನಾಗಿ ಉಣಿಸಿದೆ. ಮೋಕ್ಷಕ್ಕೆ ನಿದರ್ಶನ ನೀಡುವುದಕ್ಕಾಗಿ.

ಬೇರೆ ರತ್ನಗಳೆಂದರೆ, ಐರಾವತ ಉಚ್ಚೈಃಶ್ರವಸ್ ಪಾರಿಜಾತಾದಿಗಳನ್ನೂ

---

1. ಪರುಶುಕ್ಲತ್ರಯಸ್ಯ ಕಲಿಜಯೋಽಪಿ ಭವತ್ಪ್ರಸಾದಾದೇವೇತ್ಯತೋ ನ ಸ ಪೃಥಗುಕ್ತಃ। ಪುರುಷೇಷು 'ಪುರುಷಾಃ ಪೂರುಷಾ ನರಾಃ' ಇತ್ಯನುಶಾಸನಾತ್ ಮಾನುಷೇಷು ಸಂಸ್ಥಿತಃ ಸಮ್ಯಕ್ ಸ್ಥಿತಃ। ರುದ್ರಾದಿಷು ಕದಾಚಿತ್ ಕಲ್ಯಾವೇಶ ಇತಿ ಸೂಚನಾಯ ಸಂಸ್ಥಿತ ಇತ್ಯುಕ್ತಂ। -ವಾದಿರಾಜೀಯ

ಅಪ್ಸರೆಯರನ್ನೂ ಇಂದ್ರನಿಗೆ ಕೊಟ್ಟ ಪುಂಡರೀಕ ವಾಮನ ಕುಮುದ ಅಂಜನ ಪುಷ್ಪದಂತ ಸಾರ್ವಭೌಮ ಸುಪ್ರತೀಕ ಎಂಬ ಏಳು ದಿಗ್ಗಜಗಳನ್ನು ಅಗ್ನಿಮುಂತಾದ ಏಳು ದಿಕ್ಪಾಲಕರಿಗೆ ಕೊಟ್ಟ. ಇದೇ ರೀತಿ ಎಲ್ಲ ದೇವತೆಗಳಿಗೆ ಅವರವರ ಆಯುಧ ಆಭರಣಗಳನ್ನೂ ಯಥಾಯೋಗ್ಯವಾಗಿ ಶ್ರೀಹರಿ ವಿಭಾಗ ಮಾಡಿಕೊಟ್ಟ. ಅಳಿಯನಾದ ಹರಿಯ ಇಂಗಿತವರಿತು ಮಾವನಾದ ಸಮುದ್ರರಾಜನೆ ಲಕ್ಷ್ಮೀವಿವಾಹ ಸಂದರ್ಭದಲ್ಲಿ ದೇವತೆಗಳಿಗೆ ಉಡುಗೊರೆಯಾಗಿ ಕೊಟ್ಟನೆಂದು ವಾದಿರಾಜರು ಲಕ್ಷ್ಮೀಶೋಭನ ಪದದಲ್ಲಿ ಹೇಳಿದ್ದಾರೆ.

ಭವೇದ್ಧಿ ಮೋಕ್ಷೋ ನಿಯತಂ ಸುರಾಣಾಂ ನೈವಾಸುರಾಣಾಂ ಸ ಕಥಂಚನ ಸ್ಯಾತ್।
ಉತ್ಸಾಹಯುಕ್ತಸ್ಯ ಚ ತತ್ಪ್ರತೀಪಂ ಭವೇದ್ಧಿ ರಾಹೋರಿವ ದುಃಖರೂಪಮ್ ॥ ೩೫ ॥

ಸುರರಿಗೆ ಮೋಕ್ಷ ನಿಶ್ಚಯವಾಗಿ ಸಿಗುತ್ತದೆ. ಅಸುರ ಸ್ವಭಾವದವರಿಗೆ ಯಾವ ರೀತಿಯಿಂದಲೂ ಮೋಕ್ಷ ಸಿಗಲಾರದು. ಅವರು ಮೋಕ್ಷ ಪಡೆಯಲು ಉತ್ಸಾಹ ಯುಕ್ತರಾದರೆ ಫಲವಿಲ್ಲ. ರಾಹುವಿಗೆ ಹೇಗೋ ಹಾಗೆ ಮೋಕ್ಷಕ್ಕೆ ವಿಪರೀತವಾಗಿ ದುಃಖ ರೂಪವಾದ ತಮಸ್ಸೆ ಸಿಗುವುದು.

ಮಾಯಾಭಿರುತ್ಸಿಸೃಪ್ಸತ ಇಂದ್ರ ದ್ಯಾಮಾರುರುಕ್ಷತಃ।
ಅವ ದಸ್ಯೂಂ ರಧೂನುಥಾಃ ॥ -ಋಗ್ವೇದ

ಆರುರಕ್ಷಂತಿ ಮಾಯಾಭಿರುತ್ಸಿಸೃಪ್ಸಂತಿ ಯೇ ದಿವಂ।
ತಾನ್ ದಸ್ಯೂನ್ ವಿಧುನೋಮ್ಯಜ್ಞಪೂರ್ವಸ್ಮಾಚ್ಚ ಪದಾದಧಃ॥

-ಭಾಗವತ

'ಕಪಟದಿಂದ ಮಹಾತ್ಮರ ಪದವಿಗಳನ್ನು ಏರಲು ಬಯಸುವ ಮತ್ತು ಸ್ವರ್ಗವೇರಲು ಬಯಸುವ ದೈತ್ಯರನ್ನು ಅವರ ಹಿಂದಿನ ಸ್ಥಾನಕ್ಕಿಂತಲೂ ಹೆಚ್ಚು ಕೆಳಕ್ಕೆ ತಳ್ಳುತ್ತೇನೆ.'

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ॥

-ಭಗವದ್ಗೀತಾ

ಅಸುರ ಸ್ವಭಾವದ ಜನರು ಜನ್ಮಜನ್ಮದಲ್ಲಿಯೂ ಅಸುರ ಜಾತಿಯಲ್ಲಿ ಹುಟ್ಟಿ ನನ್ನನ್ನು ದ್ವೇಷಿಸಿ ನನ್ನನ್ನು ಹೊಂದದೆಯೆ ಅಧೋಗತಿಯಾದ ತಮಸ್ಸನ್ನು ಹೊಂದುತ್ತಾರೆ.

ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ ವಿತರ್ದುರಾಣೋ ಅಪರೇಭಿರೇತಿ।

-ಋಗ್ವೇದ

ದೈತ್ಯರಿಗೆ ಭಕ್ತಿ ಇದ್ದರೂ ಅದನ್ನು ಹರಿಯೆ ನಾಶ ಮಾಡುತ್ತಾನೆ. ದೇವತೆಗಳಿಗೆ ಮಾತ್ರ ಮೋಕ್ಷನೀಡುತ್ತಾನೆ.

ಇತ್ಯಾದಿ ಶ್ರುತಿಸ್ಮೃತಿಗಳಿಂದ ಅಮೃತವನ್ನು ಬಯಸಿದ್ದ ರಾಹುವಿಗೆ ಶಿರಶ್ಛೇದವೆ ಉಂಟಾದಂತೆ ಮೋಕ್ಷವನ್ನು ಬಯಸುವ ಅಸುರರಿಗೆ ತಮಸ್ಸೇ ಸಿಗುತ್ತದೆ. ಅವರು ಉತ್ಸಾಹಯುಕ್ತರಾದರೆ ಫಲವಿಲ್ಲ. ಜ್ಞಾನಭಕ್ತ್ಯಾದಿ ರೂಪವಾದ ಉತ್ಸಾಹವನ್ನು ಹರಿಯೆ ನಾಶಮಾಡುತ್ತಾನೆ ಎಂಬುದು ಪ್ರಸಿದ್ಧ.

ಕಲಿ ಪ್ರಾಬಲ್ಯ

ಕಲಿಸ್ತ್ವಯಂ ಬ್ರಹ್ಮವರಾದಿದಾನೀಂ
ವಿಬಾಧತೇಽಸ್ಮಾನ್ ಸಕಲಾಃ ಪ್ರಜಾಶ್ಚ।
ಅಜ್ಞಾನ ಮಿಥ್ಯಾಮತಿರೂಪತೋಽಸೌ
ಪ್ರವಿಶ್ಯ ಸಜ್ಞಾನವಿರುದ್ಧರೂಪಃ ॥ ೩೬ ॥

ಯಥಾರ್ಥಜ್ಞಾನಕ್ಕೆ ವಿರುದ್ಧ ಸ್ವರೂಪನಾದ ಈ ಕಲಿ ಬ್ರಹ್ಮವರದಿಂದ ಈಗ ಅಜ್ಞಾನ ಮಿಥ್ಯಾಜ್ಞಾನರೂಪದಿಂದ ನಮ್ಮನ್ನೂ ಎಲ್ಲ ಜನರನ್ನೂ ಪ್ರವೇಶಿಸಿ ಬಾಧಿಸುತ್ತಿದ್ದಾನೆ.

'ಈಗ ನಮ್ಮನ್ನು ಬಾಧಿಸುತ್ತಿದ್ದಾನೆ' ಎಂದರೆ ಕಲಿ ಸ್ವಭಾವತಃ ಪಿಶಾಚಿಯಂತೆ ಪರಶುಕ್ಷತ್ರಯವನ್ನು ಹೊರತು ಬೇರೆ ಎಲ್ಲ ಜನರನ್ನೂ ಪ್ರವೇಶಿಸಿ ಅವರ ಬುದ್ಧಿಯನ್ನು ಹಾಳುಮಾಡಬಲ್ಲವ. ಅವನಿಗೆ ಹಾಗೆ ಬ್ರಹ್ಮನ ವರವಿದೆ. ಈಗ ಅವನಿಗೆ ಹಾಲಾಹಲ ವಿಷದ ಸಹಾಯವೂ ಸಿಕ್ಕಿದೆ. ಇದರ ಮೇಲೆ ಗೌತಮಶಾಪ ಬೇರೆ. ಪರಿಣಾಮ- ಸ್ವತಃ ಕೋತಿ. ಅದಕ್ಕೆ ಕಳ್ಳು ಕುಡಿಸಿದರೆ, ಚೇಳೂ ಕುಟುಕಿದರೆ, ಅದರ ಮೇಲೆ ಪಿಶಾಚದ ಆವೇಶ ಬಂದರೆ, ಅದರ ಕುಣಿತ ಹೇಗೆ ಇದ್ದೀತು? ಹೇಳಲು ಸಾಧ್ಯವೆ? ಹಾಗೆಯೆ ಕಲಿಯ ಸ್ವಭಾವ ಕೋತಿಯಂತೆ. ಬ್ರಹ್ಮನ ವರ ಕೋತಿಗೆ ಕಳ್ಳು ಕುಡಿಸಿದಂತೆ, ಗೌತಮಶಾಪ ಚೇಳು ಕಚ್ಚಿದಂತೆ. ಕಾಲಕೂಟ ಹರಡಿದುದು ಪಿಶಾಚಾವೇಶದಂತೆ.[1]

---

1. ಸ್ವಯಮಂಪಿ ಪಿಶಾಚಾವೇಶೇನೇವ ಪರಶುಕ್ಷತ್ರಯಂ ವಿನಾ ಅಸ್ಮಾಕಂ ಪ್ರಜಾನಾಂ ಚ ಬುದ್ಧಿಭ್ರಂಶಕರಣೇ ಸಮರ್ಥಃ ಇದಾನೀಂ ಕಾಲಕೂಟ ಸಹಾಯೇ ಸತಿ ಉನ್ಮತ್ತ ಬೀಜೇನೇವ ಬುದ್ಧಿಂ ಭ್ರಾಮಯಿತ್ವಾ ಅಸ್ಮಾನ್ ಕದಾಚಿತ್ ಕದಾಚಿದ್ ಬಾಧತೇ। ಪ್ರಜಾಸ್ತು ದುರ್ಬಲಚಿತ್ತತ್ವಾದ್ ವಿಶೇಷೇಣ ಬಾಧತೇ ಇತಿ ಭಾವಃ। ಯದಾಹ ನೀತಿಕಾರಃ-

ತ್ವದಾಜ್ಞಯಾ ತಸ್ಯ ವರೋಽಬ್ಜಜೇನ ದತ್ತಃ ಸ ಆವಿಶ್ಯ ಶಿವಂ ಚಕಾರ।
ಕದಾಗಮಾಂಸ್ತಸ್ಯ ಕುಯುಕ್ತಿಬಾಧಾಂ ನ ಹಿ ತ್ವದನ್ಯಶ್ಚರಿತುಂ ಸಮರ್ಥಃ ॥ ೩೭ ॥

ನಿನ್ನ ಆಜ್ಞೆಯಿಂದಲೆ ಬ್ರಹ್ಮ ಅವನಿಗೆ ವರವಿತ್ತಿದ್ದ. ಅದರಿಂದ ಆತ ಶಿವನಲ್ಲಿ ಆವೇಶಗೊಂಡು ದುಷ್ಟಶಾಸ್ತ್ರಗಳನ್ನು ರಚಿಸಿದ. ಅವನ ಕುಯುಕ್ತಿಗಳನ್ನು ಖಂಡನ ಮಾಡಲು ನಿನಗಿಂತ ಬೇರೆ ಸಮರ್ಥರಿಲ್ಲ.

ವಾಯುದೇವ ಕಲಿಯನ್ನು ನಿಗ್ರಹಿಸಲು ಸಮರ್ಥ. ಅದರಿಂದಲೆ ಕಲಿಯುಗದಲ್ಲಿ ಹರಿಯ ಆದೇಶದಂತೆ ಅವತರಿಸಿ ಕಾರ್ಯ ಸಾಧಿಸುತ್ತಾನೆ. ಆದರೆ ಆತ ಸ್ವತಂತ್ರನಲ್ಲ. ಸ್ವತಂತ್ರನಾಗಿ ಕಲಿನಿಗ್ರಹ ಮಾಡಲು ಸಮರ್ಥ ಹರಿಯೊಬ್ಬನೆ.

ವೇದಾಶ್ಚ ಸರ್ವೇ ಸಹಶಾಸ್ತ್ರಸಂಘಾ ಉತ್ಸಾದಿತಾಸ್ತೇನ ನ ಸಂತಿ ತೇಽದ್ಯ।
ತತ್ಸಾಧು ಭೂಮಾವವತೀರ್ಯ ವೇದಾನುದ್ಧೃತ್ಯ ಶಾಸ್ತ್ರಾಣಿ ಕುರುಷ್ವಸಮ್ಯಕ್ ॥ ೩೮ ॥

ಶಾಸ್ತ್ರಸಮೂಹಗಳ ಜೊತೆಗೆ ಸಕಲವೇದಗಳೂ ಕಲಿಯಿಂದ ನಾಶಹೊಂದಿವೆ. ಅವು ಈಗ ಇಲ್ಲ. ಅದರಿಂದ ನೀನು ಭೂಮಿಯಲ್ಲಿ ಅವತರಿಸಿ ವೇದಗಳನ್ನು ಉದ್ಧರಿಸಿ ಶಾಸ್ತ್ರಗಳನ್ನೂ ಚೆನ್ನಾಗಿ ರಚಿಸು.

ವೈದಿಕ ಶಿರೋಮಣಿಯಾದ ಗೌತಮಮುನಿ ವೇದಶಾಸ್ತ್ರವಿನಾಶಕವಾದ ಶಾಪವನ್ನು ಕೊಡಲು ಮನಸು ಮಾಡಿದುದು ಕಲ್ಯಾವೇಶದಿಂದಲೆ. ಅದರಿಂದ ಕಲಿಯೆ ವೇದಶಾಸ್ತ್ರಗಳನ್ನು ನಾಶಗೈದನೆನ್ನಲಾಗಿದೆ. ಇಲ್ಲದಿದ್ದರೆ ಅಪರಾಧಗೈದ ಗಜೇಂದ್ರನಿಗೆ ಅಗಸ್ತ್ಯರು ಶಾಪಕೊಟ್ಟಂತೆ ಶಿಷ್ಯರು ಅಪರಾಧ ಮಾಡಿದ್ದಕ್ಕೆ ಶಿಷ್ಯರಿಗೇ ಗೌತಮರು ಶಾಪಕೊಡಬೇಕಾಗಿತ್ತು. ನಿರಪರಾಧಿಯಾದ ವೇದಶಾಸ್ತ್ರವನ್ನು ದ್ವೇಷಿಸಿದುದು ಕಲ್ಯಾವೇಶದಿಂದಲೆ.

ಶಾಸ್ತ್ರಸಮೂಹಗಳೆಂದರೆ ಬಾದರಾಯಣರು ರಚಿಸಿದ ಬ್ರಹ್ಮಸೂತ್ರ ಭಾರತ ಪುರಾಣಾದಿಗಳು. ವೇದಗಳೆಂದು ಋಗ್ವೇದಾದಿ ಮಾತ್ರವಲ್ಲದೆ ಪಂಚರಾತ್ರ ಮುಂತಾದುವೂ ವಿವಕ್ಷಿತವಾಗಿವೆ. ಪಂಚರಾತ್ರಾದಿಗಳು ಅನಾದಿಯಲ್ಲ. ಸಾದಿಯೆ. ಆದರೂ ಅವುಗಳನ್ನು ಆದಿಸೃಷ್ಟಿಯಲ್ಲಿ ಹರಿ ರಚಿಸಿದ್ದರಿಂದ ವ್ಯಾಸಾವತಾರದಲ್ಲಿ ಅವುಗಳನ್ನೇ ಪುನಃ ರಚಿಸುವುದಿಲ್ಲ. ಅದರಿಂದ

ಕಪಿರಪಿ ಚ ಕಾಪಿಶಾಯನ ರಸಮತ್ತೋ ವೃಶ್ಚಿಕೇನ ಸಂದಷ್ಟಃ।
ಅಪಿ ಚ ಪಿಶಾಚ ಗೃಹೀತಃ ಕಿಂ ಬ್ರೂಮೋ ವೈ ಕೃತಂ ತಸ್ಯ?
ಪ್ರಕೃತೇ ವೃಶ್ಚಿಕದಂಶವತ್ ಗೌತಮ ಶಾಪೋಽಸ್ತೀತಿ ಜ್ಞೇಯಮ್ ॥ –ವಾದಿರಾಜೀಯ

ವೇದಪಂಚರಾತ್ರಾದಿಗಳು 'ಈಗ ಇಲ್ಲ' ಎಂದರೆ ವ್ಯಕ್ತವಾಗಿ ಇಲ್ಲ, ಅವುಗಳನ್ನು ವ್ಯಾಸಾವತಾರದಲ್ಲಿ ಹರಿ ವ್ಯಕ್ತಗೊಳಿಸಬೇಕು. ಬ್ರಹ್ಮಸೂತ್ರ ಭಾರತ ಪುರಾಣಾದಿಗಳನ್ನು ಹೊಸದಾಗಿ ರಚಿಸಬೇಕು ಎನ್ನುವುದು ದೇವತೆಗಳ ಅಪೇಕ್ಷೆ.[1]

ಅದೃಶ್ಯಮಜ್ಞೇಯಮತರ್ಕ್ಯರೂಪಂ ಕಲಿಂ ನಿಲೀನಂ ಹೃದಯೇಽಖಿಲಸ್ಯ।
ಸಚ್ಛಾಸ್ತ್ರಶಸ್ತ್ರೇಣ ನಿಹತ್ಯ ಶೀಘ್ರಂ ಪದಂ ನಿಜಂ ದೇಹಿ ಮಹಾಜನಸ್ಯ ॥ ೩೯ ॥

ಕಲಿ ಅದೃಶ್ಯ, ಅಜ್ಞೇಯ. ಅವನ ರೂಪವನ್ನು ಊಹಿಸಲೂ ಸಾಧ್ಯವಿಲ್ಲ. ಎಲ್ಲರ ಹೃದಯದಲ್ಲಿ ಅಡಗಿರುತ್ತಾನೆ. ಅವನನ್ನು ಸಚ್ಛಾಸ್ತ್ರವೆಂಬ ಶಸ್ತ್ರದಿಂದ ವಧಿಸಿ ಬೇಗನೆ ಭಕ್ತಜನರಿಗೆ ನಿನ್ನ ಲೋಕವನ್ನು ನೀಡು.

ಶಾಸ್ತ್ರವೆಂಬ ಶಸ್ತ್ರದಿಂದ ಅಜ್ಞಾನ ಮಿಥ್ಯಾಜ್ಞಾನಾದಿಗಳನ್ನು ಪರಿಹಾರ ಮಾಡಿದರೆ ಅಜ್ಞಾನಾದಿ ಶರೀರಿಯಾದ ಕಲಿಯ ಶರೀರ ನಾಶವಾಗುವುದು. ಅದೇ ಕಲಿವಧೆ.[2]

ಋತೇ ಭವಂತಂ ನ ಹಿ ತಂ ನಿಹಂತಾ
ತ್ವಮೇಕ ಏವಾಖಿಲಶಕ್ತಿಪೂರ್ಣಃ।
ತತೋ ಭವಂತಂ ಶರಣಂ ಗತಾ ವಯಂ
ತಮೋನಿಹತ್ಯೈ ನಿಜಬೋಧವಿಗ್ರಹಮ್ ॥ ೪೦ ॥

ನೀನು ಹೊರತು ಇನ್ಯಾರೂ ಕಲಿಯನ್ನು ಕೊಲ್ಲುವವರಿಲ್ಲ. ನೀನೊಬ್ಬನೇ ಸರ್ವಶಕ್ತಿಪೂರ್ಣ. ಅದರಿಂದ ಅಜ್ಞಾನನಾಶಕ್ಕಾಗಿ ಸ್ವರೂಪಜ್ಞಾನ ಶರೀರಿಯಾದ ನಿನ್ನನ್ನೆ ನಾವು ಶರಣುಹೊಂದಿರುವೆವು.

---

1. ವೈದಿಕ ಶಿರೋಮಣೇರ್ಗೌತಮಸ್ಯ ವೇದಶಾಸ್ತ್ರೋತ್ಸಾದನಾಯ ಶಾಪದಾನೇ ಮನೋಽಪಿ ಕಲ್ಯಾವೇಶಾದೇವ ಜಾತಮಿತಿ ಭಾವೇನೋಕ್ತಂ ತೇನ ಕಲಿನಾ ಉತ್ಸಾದಿತಾ ಇತಿ। ಅನ್ಯಥಾ ಶಿಷ್ಯಾಪರಾಧೇ ಸತಿ ಅಗಸ್ತ್ಯೋ ಗಜೇಂದ್ರಸ್ಯೇವ ಶಿಷ್ಯಾಣಾ ಮೇವ ಶಾಪಂ ದದ್ಯಾತ್। ನಿರಪರಾಧಿ ವೇದಶಾಸ್ತ್ರದ್ವೇಷಸ್ತು ಕಲ್ಯಾವೇಶಾದೇವೇತಿ ಭಾವಃ। ವೇದಶಬ್ದೇನ ಪಂಚರಾತ್ರಾದಿಕಮಪಿ ಗ್ರಾಹ್ಯಂ। ಪಂಚರಾತ್ರಸ್ಯ ಸಾದಿತ್ವೇಽಪಿ ಅದಿಸೃಷ್ಟೌ ಭಗವತೈವ ಕೃತತ್ವೇನ ಪುನಃ ಕರುಣಾಯೋಗಾತ್। ಅತ ಏವ ನ ಸಂತೀತ್ಯಸ್ಯಾಪಿ ವ್ಯಕ್ತತಯಾ ನ ಸಂತೀತ್ಯರ್ಥಃ। ಶಾಸ್ತ್ರೈ ಬ್ರಹ್ಮಸೂತ್ರ ಭಾರತ ಪುರಾಣಾದೀನಿ।
–ವಾದಿರಾಜೀಯ

2. ಮಿಥ್ಯಾಜ್ಞಾನಸ್ಯಾಪಿ ಕಲ್ಯಭಿಮನ್ಯಮಾನತಯಾ ಕಲೇರಪರರೂಪತ್ವಾತ್ ತಸ್ಯ ಹನನಮಪಿ ದೇಹಹನನೇ ಜೀವಹನನವತ್ ಕಲೇರೇವ ಹನನಮಿತಿ ಭಾವೇನೋಕ್ತಂ ಸಚ್ಛಾಸ್ತ್ರಶಸ್ತ್ರೇಣ ಕಲಿಂ ನಿಹತ್ಯೇತಿ। ಅತ ಏವ ಅಜ್ಞಾನ ಮಿಥ್ಯಾಮತಿ ರೂಪತ ಇತಿ ಪ್ರಾಗುಕ್ತಂ। –ವಾದಿರಾಜೀಯ

ಕಲ್ಕಿ ರೂಪದಿಂದ ಹರಿ ಕಲಿಯನ್ನು ಕೊಲ್ಲುವುದು ಪ್ರಸಿದ್ಧವೆ ಇದೆ. ಅದರಿಂದ ಅವನೆ ಕೊಲ್ಲಬೇಕು.[1]

ಇತೀರಿತಸ್ತೈರಭಯಂ ಪ್ರದಾಯ ಸುರೇಶ್ವರಾಣಾಂ ಪರಮೋಽಪ್ರಮೇಯಃ।
ಪ್ರಾದುರ್ಬಭೂವಾಮೃತಭೂರಿಲಾಯಾಃ ವಿಶುದ್ಧ ವಿಜ್ಞಾನ ಘನಸ್ವರೂಪಃ ॥ ೪೧ ॥

ದೇವತೆಗಳು ಹೀಗೆ ಹೇಳಿದಾಗ ಶುದ್ಧಜ್ಞಾನ ಸ್ವರೂಪನೂ ಮುಕ್ತರಿಗೆ ಆಶ್ರಯನೂ ಅಪ್ರಮೇಯನೂ ಸರ್ವೋತ್ತಮನೂ ಆದ ಶ್ರೀಹರಿ ದೇವೋತ್ತಮರಿಗೆ ಅಭಯ ನೀಡಿ, ಭೂಮಿಯಲ್ಲಿ ಪ್ರಾದುರ್ಭವಿಸಿದ.

ದೇವತೆಗಳ ಪ್ರಾರ್ಥನೆಯಂತೆ ಕಲಿನಾಶಕ್ಕಾಗಿ ಶ್ರೀಹರಿ ಭೂಮಿಯಲ್ಲಿ ವೇದವ್ಯಾಸ ರೂಪದಿಂದ ಪ್ರಾದುರ್ಭವಿಸಿದ. ಪ್ರಾದುರ್ಭಾವವೆಂದರೆ ಎಲ್ಲರಂತೆ ಜನನವಲ್ಲ. ಮುಕ್ತರಿಗೆ ಜನನವಿಲ್ಲ. ಮುಕ್ತರಿಗೆ ಆಶ್ರಯನಾದ ಹರಿಗೆ ಜನನ ಉಂಟೆ? ಹರಿ ಹುಟ್ಟಿದನೆಂದರೆ ಅವನ ಹೊಟ್ಟೆಯೊಳಗಿರುವ ಮುಕ್ತರೂ ಹುಟ್ಟಿದರೆಂದಾದೀತು. ಅದರಿಂದ ಅವತರಿಸಿದನೆಂದೇ ಹೇಳಬೇಕು. ಈ ಅಭಿಪ್ರಾಯದಿಂದ ಮುಕ್ತರಿಗೆ ಆಶ್ರಯನಾದ ಹರಿ ಪ್ರಾದುರ್ಭವಿಸಿದ ಎನ್ನಲಾಗಿದೆ.[2]

ಸತ್ಯವತೀ ಪರಾಶರರು:

ವಸಿಷ್ಠನಾಮಾ ಕಮಲೋದ್ಭವಾತ್ಮಜಃ
ಸುತೋಽಸ್ಯ ಶಕ್ತಿಸ್ತನಯಃ ಪರಾಶರಃ।
ತಸ್ಯೋತ್ತಮಂ ಸೋಽಪಿ ತಪೋಽಚರದ್ಧರಿಃ
ಸುತೋ ಮಮ ಸ್ಯಾದಿತಿ ತದ್ಧರಿರ್ದದೌ। **। ೪೨ ॥**

ಬ್ರಹ್ಮನ ಪುತ್ರ ವಸಿಷ್ಠನ ಪುತ್ರ ಶಕ್ತಿ. ಶಕ್ತಿಯ ಪುತ್ರ ಪರಾಶರ. ಪರಾಶರನು ಶ್ರೀಹರಿ ತನಗೆ ಪುತ್ರನಾಗಿ ಅವತರಿಸಬೇಕೆಂದು ಉತ್ತಮವಾದ ತಪಸ್ಸು ಮಾಡಿದ. ಹರಿ ಅವನಿಗೆ ಆ ವರವನ್ನಿತ್ತ.

---

1. ನಹಿ ತಂ ನಿಹಂತೇತ್ಯತ್ರ ಕಲ್ಕಿರೂಪೇಣ ಕಲಿಹನನಂ ಭಗವಂತಃ ಪ್ರಸಿದ್ಧಮಿತಿ ಸೂಚನಾಯ ಹಿಶಬ್ದಃ -ವಾದಿರಾಜೀಯ
2. ಭಗವತಃ ಸಾಕ್ಷಾತ್ ಜನ್ಯಭಾವ ಸೂಚನಾಯ ಅಮೃತಭೂಃ ಪ್ರಾದುರ್ಬಭೂವ ಚೇತ್ಯುಕ್ತಂ। ಅಮೃತ ಭೂಃ ಮುಕ್ತಾಶ್ರಯ ಇತ್ಯರ್ಥಃ ಭಗವತೋ ಜನನೇ ತದುದರ ಗತಾನಾಂ ಮುಕ್ತಾನಾಮಪಿ ಪುನರ್ಭವಃ ಸ್ಯಾದಿತಿ ಭಾವಃ॥ -ವಾದಿರಾಜೀಯ

ಬ್ರಹ್ಮನ ಮಾನಸ ಪುತ್ರನಾದ ವಸಿಷ್ಠ ಕರ್ದಮಪುತ್ರಿ ಅರುಂಧತೀಪತಿ. ರುದ್ರ ಶಾಪದಿಂದ ಸತ್ತ ಬಳಿಕ ಬ್ರಹ್ಮನ ಯಜ್ಞಕುಂಡದಿಂದ ಹುಟ್ಟಿ ಅಕ್ಷಮಾಲೆಯನ್ನು ಮದುವೆಯಾಗಿ ಇಕ್ಷ್ವಾಕುವಂಶದ ರಾಜಪುರೋಹಿತನಾದ. ಅವನೂ ನಿಮಿರಾಜನ ಶಾಪದಿಂದ ಸತ್ತು ಮಿತ್ರಾವರುಣರ ವೀರ್ಯದಿಂದ ಕಲಶದಲ್ಲಿ ಅಗಸ್ತ್ಯನ ಸೋದರನಾಗಿ ಹುಟ್ಟಿ ನಾರದನ ಸೋದರಿಯಾದ ಅರುಂಧತಿಗೆ ಪತಿಯಾಗಿ ಶಕ್ತಿ ಮುಂತಾದ ನೂರು ಮಂದಿ ಮಕ್ಕಳ ತಂದೆಯಾದ. ವಿಶ್ವಾಮಿತ್ರರ ವಿರೋಧದಿಂದ ಆ ಎಲ್ಲ ಮಕ್ಕಳನ್ನೂ ಕಳೆದುಕೊಂಡ. ಅವನ ಮೊಮ್ಮಗ ಪರಾಶರ.

ಉವಾಚ ಚೈನಂ ಭಗವಾನ್ ಸುತೋಷಿತೋ
ವಸೋರ್ಮದೀಯಸ್ಯ ಸುತಾಸ್ತಿ ಶೋಭನಾ।
ವನೇ ಮೃಗಾರ್ಥಂ ಚರತೋಽಸ್ಯ ವೀರ್ಯಂ
ಪಪಾತ ಭಾರ್ಯಾಂ ಮನಸಾ ಗತಸ್ಯ ॥ ೪೩ ॥

ಭಗವಂತ ಸಂತುಷ್ಟನಾಗಿ ಪರಾಶರನಿಗೆ ನುಡಿದ– 'ನನ್ನ ಭಕ್ತನಾದ ವಸುಚಕ್ರವರ್ತಿಗೆ ಪುಣ್ಯವತಿಯಾದ ಮಗಳಿದ್ದಾಳೆ. ಹೇಗೆಂದರೆ ಅವನು ಬೇಟೆಗಾಗಿ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಮಡದಿಯ ನೆನಪಾದುದರಿಂದ ವೀರ್ಯ ಪತನ ಹೊಂದಿತು.

ವಸುಚಕ್ರವರ್ತಿ ಪೂರುವಂಶದ ಅರಸು. ಅವನು ವೈರಾಗ್ಯದಿಂದ ಶಸ್ತ್ರ ಸಂನ್ಯಾಸ ಮಾಡಿ ಆಶ್ರಮದಲ್ಲಿ ವಾಸಮಾಡತೊಡಗಿದಾಗ ಇಂದ್ರಾದಿ ದೇವತೆಗಳು ಅವನ ಮನ ಒಲಿಸಿ ಚೇದಿದೇಶದ ರಾಜನನ್ನಾಗಿ ಮಾಡಿದರು.

'ಊಧಃ ಪೃಥಿವ್ಯಾ ಯೋ ದೇಶಸ್ತಮಾವಸ ನರಾಧಿಪ'

'ಭೂಮಿಯ ಕೆಚ್ಚಲಿನಂತಿರುವ ಚೇದಿ ದೇಶದಲ್ಲಿ ವಾಸವಾಗಿದ್ದು ಭೂಮಂಡಲವನ್ನಾಳು'

–ಎಂದರು ದೇವತೆಗಳು. ಭೂಮಿಯ ಕೆಚ್ಚಲಿನಂತಿರುವ ದೇಶವೆಂದರೆ ಉತ್ತರಾಭಿಮುಖಿಳಾದ ಗೋರೂಪಳಾದ ಪರಶುರಾಮಭೂಮಿಯ ಕೆಚ್ಚಲಿನಂತಿರುವ ಪರಶುರಾಮಕ್ಷೇತ್ರದ ಬಸರೂರು ಪ್ರಾಂತ, ಚೇದಿದೇಶ ಎನ್ನುತ್ತಾರೆ ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ–[1]

---

1. 'ಗೋರೂಪಾಯಾ ಉತ್ತರಾಭಿಮುಖ್ಯಾಃ ಪರಶುರಾಮಭೂಮೇಃ ಗೋಕರ್ಣಾಖ್ಯ ಪ್ರದೇಶಃ ಕರ್ಣಸ್ಥಾನೀಯಃ। ವಸುಪುರಾಖ್ಯ ನಗರೀಂಪರಿತೋ ವಿದ್ಯಮಾನೋ ಯೋ ದೇಶಃ ಸ ಊಧಃಸ್ಥಾನೀಯಃ ಕ್ಷೀರಸ್ಥಾನೀಯೈಃ ಬಹುಸಸ್ಯ ಫಲಾದಿಭಿಃ ಪರಿಪೂರ್ಣ ಇತಿ ಭಾವಃ

ವಸುಪುರವೆ ಬಸರೂರಾಯಿತು. ಆಲ್ಲಿಎಲ್ಲೆಡೆ ಯಜ್ಞವೇದಿಕೆಗಳನ್ನು ನಿರ್ಮಿಸಿ ಯಜ್ಞ ಮಾಡಲು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಸಬೇಕೆಂದು ವಸುಚಕ್ರವರ್ತಿಗೆ ದೇವತೆಗಳು ಆದೇಶ ನೀಡಿದಂತೆ ಕಾಣುತ್ತದೆ. ಮಹಾಭಾರತದಲ್ಲಿ ದೇವೇಂದ್ರ ಈತನಿಗೆ ತನ್ನ ಅರ್ಧಾಸನವಿತ್ತು ದಿವ್ಯವಿಮಾನ ವೈಜಯಂತೀಮಾಲೆ ಬಿದಿರಿನ ಕೋಲುಗಳನ್ನು ಕೊಟ್ಟ. ಸರ್ವಾಭೀಷ್ಟಸಾಧಕವಾದ ಆ ಬಿದಿರಿನ ಕೋಲನ್ನೂರಿ ರಾಜ ಇಂದ್ರನ ಪೂಜೆ ಮಾಡಲಾರಂಭಿಸಿದ. ಇಂದ್ರ ಹಂಸರೂಪದಿಂದ ಕೋಲಲ್ಲಿನಿಂತು ಆ ಪೂಜೆ ಸ್ವೀಕರಿಸಿದ. ಆ ಕೋಲು ಇಂದ್ರಧ್ವಜವೆನಿಸಿತು.

ಬೃಹದ್ರಥ ಪ್ರತ್ಯಗ್ರಹ ಕುಶಾಂಬು ಮಾವೇಲ ಯದು ಎಂದು ಐದುಮಂದಿ ವಸುಚಕ್ರವರ್ತಿಯ ಮಕ್ಕಳು. ಅವರಲ್ಲಿ ಬೃಹದ್ರಥನೆ ಜರಾಸಂಧನ ತಂದೆ ಎಂದು ವಾದಿರಾಜರು ಲಕ್ಷಾಲಂಕಾರದಲ್ಲಿ ಹೇಳಿದ್ದಾರೆ. ಭೂಮಿಯನ್ನು ಐವರು ಮಕ್ಕಳಿಗೆ ಹಂಚಿ ತಾನು ಆಕಾಶದಲ್ಲಿ ಸದಾ ದಿವ್ಯವಿಮಾನದಲ್ಲಿ ಸಂಚರಿಸುತ್ತಿದ್ದುರಿಂದ ಇವನಿಗೇ ಉಪರಿಚರ ಎಂದು ಇನ್ನೊಂದು ಹೆಸರಾಯಿತು. ಸ್ಕಾಂದ ವೈಷ್ಣವ ಖಂಡದ ಪ್ರಕಾರ ಆಯುವಿನ ಮಗ ಅಮಾವಸುವೆ ಉಪರಿಚರವೆನಿಸಿದವ. ಬಳಿಕ ಅವನೆ ಕೃತಯಜ್ಞನೆಂಬ ರಾಜನ ಮಗನಾಗಿ ದ್ವಾಪರದಲ್ಲಿ ಜನಿಸಿದ. ಸತ್ಯವತಿಯನ್ನು ಮಗಳನ್ನಾಗಿ ಪಡೆದ. ಅದರಿಂದ ಜರಾಸಂಧನ ತಾತನೆಂದು ಲಕ್ಷಾಲಂಕಾರ ಹೇಳುವುದು ಕೂಡುತ್ತದೆ.

ವಸುಪುರದ ಬಳಿಯಲ್ಲಿ ಹರಿಯುತ್ತಿದ್ದ ಶುಕ್ತಿಮತೀ ನದಿಯ ಮಗಳು ಗಿರಕೆ ವಸುರಾಜನ ಪತ್ನಿ. ಅವಳು ಒಮ್ಮೆ ಋತು ಸ್ನಾತಳಾಗಿದ್ದಾಗ ಪಿತೃದೇವತೆಗಳು ಬಂದು ವಸುರಾಜನಿಗೆ ಜಿಂಕೆಯ ಮಾಂಸದಿಂದ ತಮಗೆ ಶ್ರಾದ್ಧಭೋಜನ ನೀಡು ಎಂದರು. ರಾಣಿಯನ್ನೇ ನೆನೆಯುತ್ತ ರಾಜ ಬೇಟೆಗೆ ಹೋದ. ಆಯಾಸದಿಂದ ಮರದಡಿ ವಿಶ್ರಮಿಸಿ ಸ್ವಪ್ನಾವಸ್ಥೆಯಲ್ಲಿ ರಾಣಿಯ ಸ್ಪರ್ಶಸುಖ ಅನುಭವಿಸಿದ. ಆಗ ವೀರ್ಯ ಪತನಹೊಂದಿತು.

ವಸುಚಕ್ರವರ್ತಿನಾ ರಕ್ಷಿತತ್ವಾದ್ವಿ ವಸುಪುರಂ। ಬಸುರೂರು ಇತ್ಯಪಭ್ರಂಶ ಭಾಷಾ। ವಸ ವೇದಿಷು ಚೇದಿಪೇತ್ಯತ್ರ ವೇದಿಷು ಸಮುದ್ರಸಹ್ಯಾಚಲ ಯೋರ್ಮಧ್ಯೇ ದೀರ್ಘಾಕಾರೇಣ ತಿರ್ಯಗ್ ವರ್ತಮಾನತ್ವಾತ್ ವೇದಿಸ್ಥಾನೀಯೇಷು ಬಹುಯಜ್ಞವೇದಿ ಭರಿತತ್ವಾದ್ವಾ ವೇದಿಷು ದೇಶೇಷು। ವೇದಿಷ್ಟಿತ್ಯುಕ್ತ್ಯಾ ಯಜ್ಞವೇದಿ ಸಂಪನ್ನಾನ್ ಬ್ರಾಹ್ಮಣಾನ್ ಅಹಿಚ್ಛತ್ರಾದಾನೀಯ ತತ್ರ ಸ್ಥಾಪಯೇತಿ ಸೂಚಯತಿ।' -ಲಕ್ಷಾಲಂಕಾರ

ತಚ್ಛೈ್ಯನ ಹಸ್ತೇ ಪ್ರದದೌ ಸ ತಸ್ಯೈ ।
ದಾತುಂ ತದನ್ಯೇನ ತು ಯುಧ್ಯತೋಽಪತತ್ ।
ಜಗ್ರಾಸ ತನ್ಮತ್ಸ್ಯವಧೂರ್ಯಮಸ್ವಸು
ರ್ಜಲಸ್ಥಮೇನಾಂ ಜಗೃಹುಃಸ್ಮ ದಾಶಾಃ ॥ ೪೪ ॥

'ವೀರ್ಯವನ್ನು ರಾಣಿಗೆ ಕೊಡಲು ಒಂದು ಗಿಡುಗನ ಕೈಗಿತ್ತ ರಾಜ. ಆ ಗಿಡುಗ ಇನ್ನೊಂದು ಗಿಡುಗನೊಡನೆ ಹೋರಾಡುವಾಗ ವೀರ್ಯ ಕೆಳಗೆ ಯಮುನೆಯ ನೀರಲ್ಲಿ ಬಿದ್ದಿತು. ಅದನ್ನು ಒಂದು ಹೆಣ್ಣು ಮೀನು ನುಂಗಿತು. ಮೀನನ್ನು ಬೆಸ್ತರು ಹಿಡಿದರು.

ಈ ಹೆಣ್ಣುಮೀನು ಬ್ರಹ್ಮಶಾಪದಿಂದ ತಿರ್ಯಗ್‌ಯೋನಿಯಲ್ಲಿ ಜನಿಸಿದ್ದ ಅದ್ರಿಕೆ ಎಂಬ ಶ್ರೇಷ್ಠ ಅಪ್ಸರೆ. ಇಬ್ಬರು ಮಾನವಶಿಶುಗಳನ್ನು ಹಡೆದಾಗ ನಿನಗೆ ಶಾಪ ಮೋಕ್ಷ ಎಂದಿದ್ದ ಬ್ರಹ್ಮದೇವ.

ತದ್ಗರ್ಭತೋಽಭೂನ್ನಿಧುನಂ ಸ್ವರಾಜ್ಞೇ
ನ್ಯವೇದಯನ್ಸೋಽಪಿ ವಸೋಃ ಸಮರ್ಪಯತ್ ।
ಪುತ್ರಂ ಸಮಾದಾಯ ಸುತಾಂ ಸ ತಸ್ಮೈ
ದದೌ ಸುತೋಽಭೂದಥ ಮತ್ಸ್ಯರಾಜಃ ॥ ೪೫ ॥

'ಮೀನಿನ ಹೊಟ್ಟೆಯಿಂದ ಹೆಣ್ಣುಗಂಡು ಅವಳಿಮಕ್ಕಳು ಜನಿಸಿದರು. ಅವರನ್ನು ಬೆಸ್ತರು ತಮ್ಮ ಒಡೆಯನಿಗಿತ್ತರು. ಅವನು ವಸುರಾಜನಿಗೆ ನೀಡಿದ. ಆತ ಮಗನನ್ನು ಮಾತ್ರ ಇಟ್ಟುಕೊಂಡು ಮಗಳನ್ನು ಅವನಿಗೇ ಕೊಟ್ಟ. ಬಳಿಕ ಮಗ ಮತ್ಸ್ಯದ ಉದರದಿಂದ ಬಂದವನಾದ್ದರಿಂದ ಮತ್ಸ್ಯರಾಜನೆನಿಸಿದ.'

ಕನ್ಯಾ ತು ಸಾ ದಾಶರಾಜಸ್ಯಸದ್ಮ-
ನ್ಯವರ್ಧತಾತೀವ ಸುರೂಪಯುಕ್ತಾ ।
ನಾಮ್ನಾ ಚ ಸಾ ಸತ್ಯವತೀತಿ ತಸ್ಯಾಂ
ತವಾತ್ಮಜೋಽಹಂ ಭವಿತಾಸ್ಮ್ಯಜೋಽಪಿ ॥ ೪೬ ॥

'ಆ ಕನ್ಯೆ ಬೆಸ್ತರ ಒಡೆಯನ ಮನೆಯಲ್ಲಿ ಅತ್ಯಂತ ಸೌಂದರ್ಯಯುಕ್ತಳಾಗಿ ಬೆಳೆದಿರುವಳು. ಅವಳ ಹೆಸರು ಸತ್ಯವತಿ ಎಂದು. ನಾನು ಜನನರಹಿತನಾಗಿದ್ದರೂ ಅವಳಲ್ಲಿ ನಿನ್ನ ಮಗನಾಗಿ ಹುಟ್ಟುತ್ತೇನೆ' ಎಂದು ಹರಿ ಪರಾಶರನಿಗೆ ವರವಿತ್ತ.

ಇತೀರಿತಶ್ಚಕ್ರಧರೇಣ ತಾಂ ಮುನಿ
ರ್ಜಗಾಮ ಮಾರ್ತಂಡಸುತಾಂ ಸಮುದ್ರಗಾಮ್ ।
ಉತ್ತಾರಯಂತೀಮಥ ತತ್ರ ವಿಷ್ಣುಃ
ಪ್ರಾದುರ್ಬಭೂವಾಶು ವಿಶುದ್ಧ ಚಿದ್ಘನಃ ॥ ೪೭ ॥

ಚಕ್ರಧಾರಿ ಶ್ರೀಹರಿ ಹೀಗೆ ಹೇಳಿದಾಗ ಪರಾಶರ ಸಮುದ್ರಗಾಮಿಯಾದ ಯಮುನಾ ನದಿಯನ್ನು ದಾಟಿಸುತ್ತಿದ್ದ ಸತ್ಯವತಿಯನ್ನು ಕಂಡು ವಿವಾಹ ಮಾಡಿಕೊಂಡ ಬಳಿಕ ಸಂಗ ಮಾಡಿದ. ಅವಳಲ್ಲಿ ತಕ್ಷಣವೆ ಶುದ್ಧ ಜ್ಞಾನ ಸ್ವರೂಪನಾದ ಹರಿ ಪ್ರಾದುರ್ಭವಿಸಿದ.

ಬ್ರಹ್ಮಸೂತ್ರ ಶಾಂಕರಭಾಷ್ಯದಲ್ಲಿ ಅಪಾಂತರತಮನೆಂಬ ಋಷಿ ಹರಿಯಾಜ್ಞೆಯಂತೆ ಕೃಷ್ಣದ್ವೈಪಾಯನನಾಗಿ ಹುಟ್ಟಿದನೆಂದಿದೆ. ಸಾಕ್ಷಾತ್ ಶ್ರೀಹರಿಯೆ ಪ್ರಾದುರ್ಭವಿಸಿದನೆಂದು ನಿರ್ಣಯ ಹೇಳುತ್ತಿದೆ.

ನಿರ್ಣಯದಲ್ಲಿ 'ಅಥ' ಅನಂತರ ಎಂಬ ಶಬ್ದ ನಡುವೆ ಜರುಗಿದ ವಿವಾಹ ವೃತ್ತಾಂತವನ್ನು ಸೂಚಿಸುತ್ತದೆ ಎನ್ನುತ್ತಾರೆ ಶ್ರೀವಾದಿರಾಜರು. ವಸಿಷ್ಠ ಯಾಜ್ಞವಲ್ಕ್ಯ ಮುಂತಾದವರಿಂದ ತುಂಬಿದ ಯಜ್ಞಶಾಲೆಯಲ್ಲಿ ವಿವಾಹ ಹೋಮ ನಡೆಯಿತು. ತಂದೆಯಾದ ವಸುಚಕ್ರವರ್ತಿಯೆ ಬಂದು ಸತ್ಯವತಿಯನ್ನು ಪರಾಶರರಿಗೆ ವಿಧ್ಯುಕ್ತವಾಗಿ ಧಾರೆಯೆರೆದನೆಂದು ಭಾರತದಲ್ಲಿ ಹೇಳಿದೆ. ವಿವಾಹವಾದರೂ ಕನ್ಯಾವಸ್ಥೆಯಲ್ಲಿರುವಾಗಲೆ ಸತ್ಯವತಿ ವ್ಯಾಸರಿಗೆ ಜನ್ಮವಿತ್ತಳು. ಕರ್ಣನಂತೆ ಮದುವೆಯಾಗದ ಕನ್ಯೆಯಲ್ಲಿ ಹುಟ್ಟಿದವರು ವ್ಯಾಸರೆಂಬ ತಪ್ಪುಗ್ರಹಿಕೆಯಿಂದ 'ಕಾನೀನ'ರೆನ್ನುತ್ತಾರೆ ಅಜ್ಞಜನರು. ಅವರು ಮಹಾಭಾರತದಲ್ಲಿಯೆ ಬರುವ ಪರಾಶರ ಸತ್ಯವತೀ ವಿವಾಹ ವೃತ್ತಾಂತವನ್ನು ನೋಡಿಲ್ಲ.[1]

ಕ್ರಿಯಾಹೀನಂ ತು ಗಾಂಧರ್ವಂ ಕರ್ತವ್ಯಮನಾಪದಿ
ಯದಸ್ಯಾಂ ಜಾಯತೇ ಪುತ್ರೋ ವೇದವ್ಯಾಸೋ ಭವೇದೃಷಿಃ
ಕ್ರಿಯಾಹೀನಃ ಕಥಂ ವಿಪ್ರೋ ಭವೇದೃಷಿರುದಾರಧೀಃ॥

(ಮ.ಭಾ.ಆದಿ.64-16)

ಪರಾಶರರು ವಿವಾಹಹೋಮಾದಿ ಕ್ರಿಯಾರಹಿತವಾದ ಗಾಂಧರ್ವವಿಧಿಯಿಂದ ಸತ್ಯವತಿಯನ್ನು ವಿವಾಹವಾಗಲು ಬಯಸಲಿಲ್ಲ. ವಿವಾಹ ಸಂಸ್ಕಾರರಹಿತಳಾದ ಹೆಣ್ಣಿನಲ್ಲಿ ವೇದವ್ಯಾಸರಂಥ ಋಷಿ ಹುಟ್ಟಲಾರ. ಅದಕ್ಕೆ ಬ್ರಾಹ್ಮವಿವಾಹ ಮಾಡಿಕೊಳ್ಳಲು ಬಯಸಿದರು. ಆಗ

---

1. ಉತ್ತಾರಯಂತೀಮಥೇತ್ಯತ್ರ ಅಥಶಬ್ದೇನ ವಸಿಷ್ಠಯಾಜ್ಞವಲ್ಕ್ಯಾದೀನಾಂ ಸದಸಿ ವಿವಾಹ ಹೋಮೇ ಕೃತೇ ಸತಿ, ಪಿತ್ರಾ ವಸುಚಕ್ರವರ್ತಿನಾ ಧಾರಾಪೂರ್ವಕಂ ದಾನಾನಂತರಂ ಇತಿ ಭಾರತೇ ಪ್ರಸಿದ್ಧಂ ಕಥಾಂ ಸ್ಮಾರಯತಿ। ತಸ್ಮಾತ್ ಕಾನೀನೋ ವ್ಯಾಸ ಇತಿ ಯದ್ ಅವಿದುಷಾಂ ವಚನಂ ತದ್ ಭಾರತ ಕಥಾ ಪರಿಜ್ಞಾನ ಶೂನ್ಯತ್ವ ನಿಮಿತ್ತಂ। ವ್ಯಾಸಸ್ಯ ತು ಜನ್ಮ ಭಾರತೋಕ್ತರೀತ್ಯಾ ಪರಮ ಸುಶೋಭನಮೇವೇತಿ ಮಹಾಭಾರತತಾತ್ಪರ್ಯ ನಿರ್ಣಯ ಕೃತೋ ಭಾವಃ। -ವಾದಿರಾಜೀಯ

ಬರ್ಹಿಷದರೆಂಬ ಪಿತೃಗಣದವರು ಬಂದು ನಮ್ಮ ಮಾನಸಕನ್ಯೆ ಅಚ್ಚೋದೆ ನಮ್ಮನ್ನು ತೊರೆದು ವಸುಚಕ್ರವರ್ತಿಯನ್ನು ತಂದೆ ಎಂದು ಸ್ವೀಕರಿಸಿದ ಅಪರಾಧಕ್ಕಾಗಿ ವಸುರಾಜನ ಮಗಳಾಗಿ ಹುಟ್ಟಿಯೂ ಅವನಿಂದ ದೂರವಿದ್ದು ಬೆಸ್ತರ ಗುಡಿಸಲುಗಳಲ್ಲಿ ಬೆಳೆಯಲಿ ಎಂದು ಶಪಸಿದ್ದೆವು. ಅವಳೆ ಸತ್ಯವತಿ. ನೀನು ವಿಧಿಪೂರ್ವಕವಾಗಿ ಅವಳನ್ನು ಮದುವೆಯಾಗು ಎಂದರು. ವಸಿಷ್ಠರು ಯಾಜ್ಞವಲ್ಕ್ಯರನ್ನು ಕರೆಸಿ ವಿವಾಹ ಹೋಮ ಮಾಡಿಸಿದರು. ವಸುಚಕ್ರವರ್ತಿಯಿಂದ ಕನ್ಯಾದಾನ ಮಾಡಿಸಿದರು. ಬಳಿಕ,

ಜಜ್ಞೇಚ ಯಮುನಾದ್ವೀಪೇ ಪಾರಾಶರ್ಯಃ ಸ ವೀರ್ಯವಾನ್ ।
ಜಾತಮಾತ್ರಃ ಸ ವವೃಧೇ ಸಪ್ತವರ್ಷೋ೯ಭವತ್ತದಾ (ಭಾ. ಆದಿ.64-50)

ಯಮುನಾದ್ವೀಪದಲ್ಲಿ ವ್ಯಾಸರು ಜನಿಸಿದರು. ಹುಟ್ಟಿದೊಡನೆಯೆ ಏಳುವರ್ಷದ ಮಗುವಿನಂತೆ ಬೆಳೆದರು. ಅವರಿಗೆ ತಂದೆ ಕೂಡಲೆ ಉಪನಯನ ಮಾಡಿದರು. ಆದರೆ ಮುಂದೆ ಭೀಷ್ಮನಿಗೆ ಸತ್ಯವತಿ ಹೇಳುವ ಒಂದು ಮಾತು ಇದಕ್ಕೆ ಸ್ವಲ್ಪವ್ಯತಿರಿಕ್ತವಾಗಿ ಕಾಣುತ್ತದೆ–

ಅಭಿಭೂಯ ಸ ಮಾಂ ಬಾಲಾಂ ತೇಜಸಾ ವಶಮಾನಯತ್ ।
ತಮಸಾ ಲೋಕಮಾವೃತ್ಯ ನೌಗತಾಮೇವ ಭಾರತ ॥

(ಮ. ಭಾ. ಆದಿ.114-30)

ಮೇಲುನೋಟಕ್ಕೆ 'ಸತ್ಯವತಿ ದೋಣಿಯಲ್ಲಿದ್ದಾಗಲೆ ಸುತ್ತಲೂ ಮಂಜು ಕವಿಯುವಂತೆ ಮಾಡಿ ಅವಳನ್ನು ವಶಪಡಿಸಿಕೊಂಡರು ಪರಾಶರರು' ಎಂದು ಹೇಳಿದಂತೆ ಕಾಣುತ್ತದೆ. ವಸ್ತುತಃ 'ತಮಸಾ ಲೋಕಮಾವೃತ್ಯ ನೌಗತಾಂ' ಎಂದು ಸತ್ಯವತಿಯ ಬಗ್ಗೆ ಹೇಳಿದೆ. 'ತಮಸಾ' ಎಂದರೆ ಅಜ್ಞಾನದಿಂದ. ಸ್ವತಃ ವಸುಚಕ್ರವರ್ತಿಯ ಕುಮಾರಿಯಾಗಿದ್ದರೂ ಲೋಕಕ್ಕೆ ಆ ಬಗ್ಗೆ ಅಜ್ಞಾನವೆ ಇತ್ತು. ಆ ಅಜ್ಞಾನದಿಂದ ಲೋಕವನ್ನು ಆವರಿಸಿ ಬೆಸ್ತರ ಹುಡುಗಿಯಂತೆ ದೋಣಿನಡೆಸುವ ಕೆಲಸದಲ್ಲಿದ್ದಳು ಸತ್ಯವತಿ. 'ನೌಗತಾಂ' ಎಂದರೆ ದೋಣಿ ನಡೆಸುವ ಕೆಲಸದಲ್ಲಿದ್ದಳು ಎಂದಳು. ದೋಣಿಯಲ್ಲಿದ್ದಳೆಂದಲ್ಲ. ಸತ್ಯವತಿ ಹೀಗೆ ಲೋಕವನ್ನು ಅಜ್ಞಾನದಿಂದ ಆವರಿಸಿದ್ದರೂ ಪರಾಶರರು 'ತೇಜಸಾ' ದಿವ್ಯಜ್ಞಾನ ಪ್ರಕಾಶದಿಂದ ಸತ್ಯವತಿಯನ್ನು ಕಂಡು ವಶಪಡಿಸಿಕೊಂಡರು. ಅವರ ವರ್ಚಸ್ಸಿಗೆ ಸತ್ಯವತಿಯೂ ಮಾರು ಹೋಗಿ ವಶಳಾದಳು.

ಹೀಗೆ ಮೇಲಿನ ಶ್ಲೋಕವನ್ನು ಬೇರೆ ರೀತಿಯಿಂದಲೂ ವ್ಯಾಖ್ಯಾನಿಸಲು

ಬರುವಾಗ ಸಂದಿಗ್ಧವಾದ ಆ ಒಂದು ಶ್ಲೋಕಕ್ಕೆ ಹೊಂದಿಕೆಯಾಗುವು ದಿಲ್ಲವೆಂದು ಸತ್ಯವತೀ ವಿವಾಹ ವೃತ್ತಾಂತವನ್ನು ಪ್ರಕ್ಷಿಪ್ತವೆಂದು ಪರಿಗಣಿಸುವುದಾಗದು. ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ ಆ ಭಾಗಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಆದರಿಂದ ವ್ಯಾಸರು ಕರ್ಣನಂತೆ ಕಾನೀನರಲ್ಲ. ಕರ್ಮನಿರ್ಣಯದಲ್ಲಿ 'ಕರ್ಮಬಂಧಂ ಅಭಿನತ್ ಭಗವಾನ್ ಕಾನೀನೋ ಬಾದರಾಯಣಃ' ಎಂದಿದ್ದರೂ ಆದು ವಿವಾಹಿತೆಯಾದ ಕನ್ಯೆಯಲ್ಲಿ. ಅಂದರೆ ಆವಳು ಇನ್ನೂ ಕನ್ಯಾವಸ್ಥೆಯಲ್ಲಿದ್ದಾಗಲೆ ವ್ಯಾಸರು ಜನಿಸಿದರು ಎಂಬ ಅಭಿಪ್ರಾಯದಿಂದ ಹೊರತು ಕರ್ಣನಂತೆ ಅವಿವಾಹಿತ ಕನ್ಯೆಯಲ್ಲಿ ಜನಿಸಿದರು ಎಂದು ಅಲ್ಲ. ಈ ಸೂಕ್ಷ್ಮವನ್ನರಿಯದೆ ಅಜ್ಞ ಜನರು 'ಕರ್ಣಕ್ಷಂತೆಯೆ ವ್ಯಾಸರೂ ಕಾನೀನರು' ಎನ್ನುತ್ತಾರೆ. ಅದು ಅವರಿಗೆ ಭಾರತ ಕಥೆಯ ಪರಿಜ್ಞಾನವಿಲ್ಲದ್ದನ್ನೇ ತೋರಿಸುತ್ತದೆ.

ವ್ಯಾಸಾವತಾರ ದೋಷರಹಿತ:

ವಿದೋಷವಿಜ್ಞಾನಸುಖೈಕರೂಪೋ
ಪ್ಯಜೋ ಜನಾನ್ಮೋಹಯಿತುಂ ಮೃಷೈವ।
ಯೋಷಿತ್ಸು ಪುಂಸೋ ಹ್ಯಜನೀವ ದೃಶ್ಯತೇ
ನ ಜಾಯತೇ ಕ್ವಾಪಿ ಬಲಾದಿ ವಿಗ್ರಹಃ ॥ ೪೮ ॥

ನಿರ್ದೋಷ ಜ್ಞಾನಸುಖ ಮಾತ್ರ ಸ್ವರೂಪನಾದ ಹರಿ ಜನನರಹಿತನಾಗಿದ್ದರೂ ಅಯೋಗ್ಯ ಜನರನ್ನು ಮೋಹಗೊಳಿಸುವುದಕ್ಕಾಗಿ ಪುರುಷನಿಂದ ಸ್ತ್ರೀಯಲ್ಲಿ ಹುಟ್ಟಿದಂತೆ ಸುಮ್ಮನೆ ತೋರಿಸಿಕೊಳ್ಳುತ್ತಾನಷ್ಟೆ ಶಕ್ತಾದಿ ಗುಣಗಳೆ ಅವನ ಶರೀರ. ಎಂದೂ ಅವನು ಹುಟ್ಟುವುದೇ ಇಲ್ಲ.

ಅವತಾರಕ್ಕೆ ಪೂರ್ವದಲ್ಲಿ ಶ್ರೀಹರಿ ತಂದೆಯ ಮೂಲಕ ತಾಯಿಯ ಗರ್ಭಕ್ಕೆ ಬರುತ್ತಾನೆ. ಆದರೆ ಶುಕ್ರಶೋಣಿತಾದಿ ಮಲಸಂಬಂಧ ಅವನಿಗಿರುವುದಿಲ್ಲ. ಶಕಿ ಮುಂತಾದ ಗುಣಗಳೆ ಅವನ ಶರೀರವೆಂದ ಮೇಲೆ ಮಲಸಂಬಂಧ ವಾಗದಂತೆ ಮಾಡಿಕೊಳ್ಳುವ ಶಕ್ತಿ ಅವನಿಗೆ ಇದ್ದೇ ಇದೆ. ಈ ಅಭಿಪ್ರಾಯ ದಿಂದಲೆ 'ಬಲಾದಿ ವಿಗ್ರಹಃ' ಎಂದಿದೆ. ಚಿನ್ಮಯ ಶರೀರವೆಂದಿಷ್ಟೇ ಹೇಳುವ ಅಭಿಪ್ರಾಯ ಇದ್ದಿದ್ದರೆ 'ಚಿದಾದಿ ವಿಗ್ರಹಃ' ಎನ್ನಬಹುದಾಗಿತ್ತು.[1]

---

1. ಬಲಾದಿ ವಿಗ್ರಹ ಇತ್ಯನೇನ ಪಿತೃದ್ವಾರಾ ಮಾತುರುದರ ಪ್ರವೇಶೇಽಪಿ ಯಥಾ ಶುಕ್ಲಶೋಣಿತಾದಿ ಮಲಸಂಬಂಧೋ ನ ಭವತಿ ತಾದೃಶಂ ಸಾಮರ್ಥ್ಯಮಸ್ತೀತಿ ಸೂಚಯತಿ। ಅನ್ಯಥಾ ಚಿದಾದಿ ವಿಗ್ರಹ ಇತ್ಯವಕ್ಷ್ಯತ್॥ –ವಾದಿರಾಜೀಯ

ಯಥಾ ನೃಸಿಂಹಾಕೃತಿರಾವಿರಾಸೀತ್
ಸ್ತಂಭಾತ್ ತಥಾ ನಿತ್ಯತನುತ್ವತೋ ವಿಭುಃ।
ಆವಿರ್ಭವೇದ್ ಯೋಷಿತಿ ನೋ ಮಲೋತ್ಥ-
ಸ್ತಥಾಪಿ ಮೋಹಾಯ ನಿದರ್ಶಯೇತ್ ತಥಾ ॥ ೪೯ ॥

ಶ್ರೀಹರಿ ನರಸಿಂಹರೂಪನಾಗಿ ಕಂಬದಿಂದ ಆವಿರ್ಭವಿಸಿದಂತೆಯೆ ಸ್ತ್ರೀಯಲ್ಲಿಯೂ ವ್ಯಾಸಾದಿರೂಪನಾಗಿ ಆವಿರ್ಭವಿಸುತ್ತಾನೆ. ಶುಕ್ರಶೋಣಿತಾದಿ ಮಲದಿಂದ ಹುಟ್ಟುವುದಿಲ್ಲ. ಏಕೆಂದರೆ ಅವನು ಸರ್ವಶಕ್ತ. ಅವನ ಶರೀರ ನಿತ್ಯ. ಆದರೂ ಹುಟ್ಟಿದಂತೆ ಕಾಣಿಸಿಕೊಳ್ಳುತ್ತಾನೆ, ಅಯೋಗ್ಯ ಜನರನ್ನು ಮೋಹಗೊಳಿಸುವುದಕ್ಕಾಗಿ.

ಸ್ತ್ರೀಪುಂಪ್ರಸಂಗಾತ್ ಪರತೋ ಯತೋ ಹರಿಃ
ಪ್ರಾದುರ್ಭವತ್ಯೇಷ ವಿಮೋಹಯಞ್ಜನಮ್।
ಅತೋ ಮಲೋತ್ಥೋಽಯಮಿತಿ ಸ್ಮ ಮನ್ಯತೇ
ಜನೋಽಶುಭಃ ಪೂರ್ಣಗುಣೈಕ ವಿಗ್ರಹಮ್ ॥ ೫೦ ॥

ಶ್ರೀಹರಿ ಅಜ್ಞಜನರನ್ನು ಮೋಹಗೊಳಿಸುವುದಕ್ಕಾಗಿ ಸ್ತ್ರೀಪುರುಷರ ಸಂಬಂಧವಾದ ಅನಂತರ ಪ್ರಾದುರ್ಭವಿಸುತ್ತಾನೆ. ಅದರಿಂದ ಪೂರ್ಣಗುಣವೆ ಶರೀರವಾಗಿ ಉಳ್ಳ ಅವನನ್ನು ಶುಕ್ರ ಶೋಣಿತಾದಿ ಮಲದಿಂದ ಹುಟ್ಟಿದವನೆಂದು ಪಾಪಿ ಜನರು ತಿಳಿಯುತ್ತಾರೆ.

ದ್ವೀಪೇ ಭಗಿನ್ಯಾಶ್ಚ ಯಮಸ್ಯ ವಿಶ್ವಕೃತ್ ಪ್ರಕಾಶತೇ ಜ್ಞಾನಮರೀಚಿ ಮಂಡಲಃ।
ಪ್ರಭಾಸಯನ್ನಂಡಬಹಿಸ್ಥಾಂತಃ ಸಹಸ್ರಲಕ್ಷಾಮಿತಭಾನುದೀಧಿತಿಃ ॥ ೫೧ ॥

ಯಮುನೆಯ ದ್ವೀಪದಲ್ಲಿ ಸರ್ವಕರ್ತನಾದ ಹರಿ ಪ್ರಕಾಶಿಸುತ್ತಾನೆ. ಜ್ಞಾನದ ಬೆಳಕನ್ನು ಬೀರುವ ಮಂಡಲ ಉಳ್ಳವನಾಗಿ ಬ್ರಹ್ಮಾಂಡದ ಹೊರಗೂ ಒಳಗೂ ಬೆಳಕು ಮಾಡುವವ, ಸಾವಿರಲಕ್ಷ ಅನಂತ ಸೂರ್ಯರ ಕಾಂತಿ ಉಳ್ಳವ.

ವೇದವ್ಯಾಸರ ಕಾಂತಿ ಕೇವಲ ಸಾವಿರ ಸೂರ್ಯರ ಕಾಂತಿಯೂ ಅಲ್ಲ, ಲಕ್ಷ ಸೂರ್ಯರ ಕಾಂತಿಯೂ ಅಲ್ಲ. ಅಧಮಾಧಿಕಾರಿಗಳಿಗೆ ಕೇವಲ ಸಾವಿರ ಸೂರ್ಯರ ಕಾಂತಿ, ಮಧ್ಯಮಾಧಿಕಾರಿಗಳಿಗೆ, ಕೇವಲ ಲಕ್ಷಸೂರ್ಯರ ಕಾಂತಿ. ಉತ್ತಮಾಧಿಕಾರಿಗಳಿಗೆ ಅನಂತ ಸೂರ್ಯರ ಕಾಂತಿ ಗೋಚರವಾಗುವುದು ಎಂಬ ಅಭಿಪ್ರಾಯದಿಂದ 'ಸಹಸ್ರ ಲಕ್ಷಾಮಿತ ಭಾನುದೀಧಿತಿಃ' ಎನ್ನಲಾಗಿದೆ.

ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ ಸಮಸ್ತವಿದ್ಯಾಧಿಪತಿರ್ಜಗದ್ಗುರುಃ।
ಅನಂತಶಕ್ತಿರ್ಜಗದೀಶ್ವರೇಶ್ವರಃ ಸಮಸ್ತದೋಷಾತಿವಿದೂರವಿಗ್ರಹಃ ॥ ೫೨ ॥

ಅಸಂಖ್ಯ ದಿವ್ಯ ಮಹಾಗುಣಗಳ ಸಾಗರ, ಸರ್ವಕರ್ತ, ಎಲ್ಲ ಶಾಸ್ತ್ರಗಳಿಗೆ ಅಧಿಪತಿ, ಜಗತ್ತಿಗೇ ಗುರು. ಅನಂತಶಕ್ತಿಉಳ್ಳವರು, ಜಗದ ಒಡೆಯರಿಗೆಲ್ಲ ಒಡೆಯ. ಸಕಲ ದೋಷಗಳಿಗೆ ಬಲುದೂರವೆನಿಸಿದ ಶರೀರ ಉಳ್ಳವರು ವೇದವ್ಯಾಸರು.

ಶುಭಮರಕತವರ್ಣೋ ರಕ್ತಪಾದಾಬ್ಜನೇತ್ರಾ-
ಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಿಃ।
ರವಿಕರವರಗೌರಂ ಚರ್ಮ ಚೈಣಂ ವಸಾನ-
ಸ್ತ್ವಟಿದಮಲಜಟಾಸಂದೀಪ್ತಚೂಡಂ ದಧಾನಃ ॥ ೫೩ ॥

ಶುದ್ಧ ಇಂದ್ರನೀಲಮಣಿಯಂಥ ವರ್ಣದವರು. ಕೆಂಬಣ್ಣದ ಪಾದಕಮಲ ಕಣ್ಣು ತುಟಿ ಅಂಗೈ ಉಗುರು ನಾಲಿಗೆ ತುದಿಯವರು. ಅಂಗೈ ಅಂಗಾಲುಗಳಲ್ಲಿ ಚಕ್ರ ಶಂಖ ಕಮಲಗಳ ರೇಖೆ ಉಳ್ಳವರು. ಒಳ್ಳೆಯ ಸೂರ್ಯಕಿರಣದಂತೆ ಶುಭ್ರವಾದ ಜಿಂಕೆ ಚರ್ಮ ಉಟ್ಟವರು. ಮಿಂಚಿನಂಥ ನಿರ್ಮಲ ಜಡೆಯಿಂದ ಶೋಭಿಸುವ ಶಿರಉಳ್ಳವರು, ವೇದವ್ಯಾಸರು.

'ಮರಕ' ಎಂದರೆ ಮರಣ. 'ತ' ತರಣ ಮಾಡಿಸುವುದು, ಮರಣದಿಂದ ಪಾರು ಮಾಡುವುದು, ಲಕ್ಷಣಭರಿತವಾಗಿದ್ದರೆ. ಅದೇ ಮರಕತವು ದುರ್ಲಕ್ಷಣ ಯುಕ್ತವಾದರೆ 'ಮರಕ' ಮರಣವನ್ನು 'ತ' ಉಂಟುಮಾಡುತ್ತದೆ. ಹೀಗೆ ಇಂದ್ರನೀಲಮಣಿಗೆ 'ಮರಕತ' ಎಂದು ಹೆಸರು. ಮರತಕ ಎಂದೂ ಪಾಠಾಂತರವಿದೆ.

ಈ ಶ್ಲೋಕದ ದ್ವಿತೀಯ ಪಾದದಲ್ಲಿ ಎರಡು ಅಕ್ಷರಗಳು ಅಧಿಕವಾದರೂ ದೋಷವಿಲ್ಲ. ಒಂದೆರಡು ಅಕ್ಷರಗಳು ಅಧಿಕವಾದ ಮಾತ್ರಕ್ಕೆ ವೇದಮಂತ್ರಕ್ಕೆ ಕುಂದಿಲ್ಲ. ಈ ನಿರ್ಣಯಗ್ರಂಥ ವೇದವಲ್ಲವಾದರೂ ವೇದತುಲ್ಯವೆಂದು ಸೂಚಿಸುವುದಕ್ಕಾಗಿಯೆ ಎರಡು ಅಕ್ಷರಗಳನ್ನು ಅಧಿಕವಾಗಿ ಪ್ರಯೋಗಿಸ ಲಾಗಿದೆ.[1]

ವಿಸ್ತೀರ್ಣವಕ್ತ್ರಃ ಕಮಲಾಯತಾಕ್ಷೋ
ಬೃಹದ್ಭುಜಃ ಕಂಬುಸಮಾನಕಂಠಃ।
ಸಮಸ್ತವೇದಾನ್ಮುಖತಃ ಸಮುದ್ಗಿರನ್
ಅನಂತಚಂದ್ರಾಧಿಕಕಾಂತಿಸನ್ಮುಖಃ ॥ ೫೪ ॥

---

1. ನವಾ ಏಕೇನ ವಾಕ್ಪರೇಣ ಛಂದಾಂಸಿ ವಿಯಂತಿ ನ ದ್ವಾಭ್ಯಾಂ ಇತಿವಚನಾತ್ ಶುಭಮರಕತೇತಿ ಶ್ಲೋಕಸ್ಯ ದ್ವಿತೀಯ ಪಾದೇ ವರ್ಣದ್ವಯಾಧಿಕ್ಯಂ ಛಂದಃ ಸಮಾನತ್ವದ್ಯೋತಕತ್ವಾದ್ ಗುಣವಿವ।
-ವಾದಿರಾಜೀಯ

ವಿಶಾಲವಾದ ಎದೆಯವರು, ಕಮಲದಂಥ ನಿಡಿದಾದ ಕಣ್ಣಿನವರು, ನಿಡಿದಾದ ತೋಳಿನವರು, ಶಂಖವನ್ನು ಹೋಲುವ ಕಂಠದವರು, ಸಮಸ್ತ ವೇದಗಳನ್ನು ಮುಖದಿಂದ ಉಪದೇಶಿಸುವವರು, ಅನಂತ ಚಂದ್ರರಿಗಿಂತಲೂ ಅಧಿಕಕಾಂತಿಯ ಮುಖವುಳ್ಳವರು, ವೇದವ್ಯಾಸರು.

ಪ್ರಬೋಧಮುದ್ರಾಭಯದೋರ್ದ್ವಯಾನ್ವಿತೋ
ಯಜ್ಞೋಪವೀತಿನಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟ-
ಮುಜ್ಜೀವಯಾನೋ ಜಗದತ್ಯರೋಚತ ॥ ೫೫ ॥

ಜ್ಞಾನ ಅಭಯ ಮುದ್ರೆಗಳನ್ನು ತೋರುವ ಎರಡು ಕೈಗಳುಳ್ಳವರು, ಯಜ್ಞೋಪವೀತ ಕೃಷ್ಣಾಜಿನ ಮುಂಜಿಗಳಿಂದ ಶೋಭಿಸುತ್ತ, ಮಹಾಅಜ್ಞಾನವೆಂಬ ಹಾವಿನ ಕಡಿತಕ್ಕೆ ತುತ್ತಾದ ಜಗತ್ತನ್ನು ಕಣ್ಣನೋಟದಿಂದ ಪುನರುಜ್ಜೀವನಗೊಳಿಸುವವರು, ಇಂಥ ವೇದವ್ಯಾಸರು ಜಗತ್ತನ್ನೇ ಮೀರಿಸುವ ಪ್ರಕಾಶದಿಂದ ಬೆಳಗಿದರು.

ಸ ಲೋಕಧರ್ಮಾಭಿರಕ್ಷಯಾ ಪಿತು-
ರ್ದ್ವಿಜತ್ವಮಾಪ್ಯಾಶು ಪಿತುರ್ದದೌ ನಿಜಮ್ ।
ಜ್ಞಾನಂ ತಯೋಃ ಸಂಸ್ಮೃತಿಮಾತ್ರತಸ್ಸದಾ
ಪ್ರತ್ಯಕ್ಷಭಾವಂ ವರಮಾತ್ಮನೋ ದದೌ ॥ ೫೬ ॥

ಲೋಕಮರ್ಯಾದೆಯನ್ನು ಕಾಪಾಡುವ ಇಚ್ಛೆಯಿಂದ ವೇದವ್ಯಾಸರು ತಕ್ಷಣವೆ, ಅಂದರೆ ಪ್ರಾದುರ್ಭವಿಸಿ ಏಳು ದಿನಗಳೊಳಗೆ, ತಂದೆಯಿಂದ ಉಪನಯನ ಸಂಸ್ಕಾರ ಪಡೆದು ತಂದೆಗೆ ತನ್ನ ಜ್ಞಾನವನ್ನು ಉಪದೇಶಿಸಿದರು. ತಂದೆ ತಾಯಿಗಳಿಬ್ಬರಿಗೂ ತಾನು ಸ್ಮರಣಮಾತ್ರದಿಂದಲೆ ಪ್ರತ್ಯಕ್ಷನಾಗುವ ವರವಿತ್ತರು.

ವೇದೋದ್ಧಾರ, ಶಾಸ್ತ್ರರಚನೆ

ದ್ವೈಪಾಯನಃ ಸೋಽಥ ಜಗಾಮ ಮೇರುಂ ಚತುರ್ಮುಖಾದ್ಯೈರನುಗಮ್ಯಮಾನಃ।
ಉದ್ಧೃತ್ಯ ವೇದಾನಖಿಲಾನ್ಸುರೇಭ್ಯೋ ದದೌ ಮುನಿಭ್ಯಶ್ಚ ಯಥಾದಿಸೃಷ್ಟೌ ॥ ೫೭ ॥

ಬಳಿಕ ದ್ವೀಪದಲ್ಲಿ ಅವತರಿಸಿದ ವೇದವ್ಯಾಸರು ಬ್ರಹ್ಮಾದಿಗಳು ತನ್ನನ್ನು ಹಿಂಬಾಲಿಸುತ್ತಿದ್ದಂತೆ ಮೇರು ಪರ್ವತಕ್ಕೆ ಹೋಗಿ ಆದಿ ಸೃಷ್ಟಿಯಲ್ಲಿ ಹೇಗೋ ಹಾಗೆ ಎಲ್ಲ ವೇದಗಳನ್ನೂ ಉದ್ಧರಿಸಿ ದೇವತೆಗಳಿಗೂ ಮುನಿಗಳಿಗೂ ಉಪದೇಶಿಸಿದರು.

ಸರ್ವಾಣಿ ಶಾಸ್ತ್ರಾಣಿ ತಥೈವ ಕೃತ್ವಾ
ವಿನಿರ್ಣಯಂ ಬ್ರಹ್ಮಸೂತ್ರಂ ಚಕಾರ।

ತಚ್ಚುಶ್ರುವುರ್ಬ್ರಹ್ಮಗಿರೀಶಮುಖ್ಯಾಃ
ಸುರಾ ಮುನೀನಾಂ ಪ್ರವರಾಶ್ಚತಸ್ಮಾತ್ ॥ ೫೮ ॥

ವೇದವ್ಯಾಸರು ಸಕಲ ಶಾಸ್ತ್ರಗಳನ್ನೂ ನಿರ್ಮಿಸಿ ಅವೆಲ್ಲಕ್ಕೂ ವಿಶೇಷವಾಗಿ ತಾತ್ಪರ್ಯ ನಿರ್ಣಾಯಕವಾದ ಬ್ರಹ್ಮಸೂತ್ರವನ್ನೂ ರಚಿಸಿದರು. ಅದನ್ನು ಬ್ರಹ್ಮರುದ್ರಾದಿ ದೇವತೆಗಳೂ ಮುನಿಶ್ರೇಷ್ಠರೂ ವೇದವ್ಯಾಸರಿಂದಲೆ ಶ್ರವಣ ಮಾಡಿದರು.

ಸಮಸ್ತಶಾಸ್ತ್ರಾರ್ಥನಿದರ್ಶನಾತ್ಮಕಂ
ಚಕ್ರೇ ಮಹಾಭಾರತ ನಾಮಧೇಯಮ್ ।
ವೇದೋತ್ತಮಂ ತಚ್ಚವಿಧಾತೃಶಂಕರ-
ಪ್ರಧಾನಕೈಸ್ತನ್ಮುಖತಃ ಸುರೈಃ ಶ್ರುತಮ್ ॥ ೫೯ ॥

ಸಕಲ ಶಾಸ್ತ್ರಾರ್ಥಗಳಿಗೂ ನಿದರ್ಶನ ರೂಪವಾಗಿ ವೇದಕ್ಕಿಂತಲೂ ಉತ್ತಮವಾದ ಮಹಾಭಾರತವೆಂಬ ಗ್ರಂಥವನ್ನೂ ವೇದವ್ಯಾಸರು ರಚಿಸಿದರು. ಅದನ್ನೂ ಬ್ರಹ್ಮರುದ್ರಾದಿ ದೇವತೆಗಳು ವೇದವ್ಯಾಸರ ಮುಖದಿಂದಲೆ ಶ್ರವಣ ಮಾಡಿದರು.

ರಾಜಸೂಯಯಾಗದಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆ ದೊರಕಿದುದು ಹರಿಸರ್ವೋತ್ತಮತ್ವಕ್ಕೆ ನಿದರ್ಶನ. ಭೀಮನಲ್ಲಿ ಬಾಲಲೀಲೆಯಿಂದಲೇ ಆರಂಭಿಸಿ ಎಲ್ಲ ಕಾರ್ಯಗಳಲ್ಲಿಯೂ ಎಲ್ಲರಿಗಿಂತ ಹೆಚ್ಚಿನ ಬಲ ಕಂಡುಬಂದಿರುವುದು, ವಿಷಭಕ್ಷಣ ಸರ್ಪದಂಶನಾದಿಗಳಿಂದಲೂ ಮರಣ ಬಾರದಿದ್ದುದು. ಅರಗಿನ ಮನೆಯಿಂದ ಕುಂತಿ ಯುಧಿಷ್ಠಿರಾದಿಗಳೆಲ್ಲರನ್ನೂ ಹೊತ್ತು ಸುರಕ್ಷಿತವಾಗಿ ಹೊರಗೆ ಒಯ್ದುದು, ಯಾರಿಂದಲೂ ಕೊಲ್ಲಲಾಗದಂಥ ಜರಾಸಂಧಾದಿಗಳನ್ನು ಕೊಂದುದು ಇವೆಲ್ಲವೂ ವಾಯುಜೀವೋತ್ತಮತ್ವಕ್ಕೆ ನಿದರ್ಶನ.[1]

ಅಥೋ ಗಿರೀಶಾದಿ ಮನೋನುಶಾಯೀ ಕಲಿರ್ಮಮಾರಾಶು ಸುವಾಙ್ಮಯೈಃ ಶರೈಃ।
ನಿಕೃತ್ತಶೀಷೋ ಭಗವನ್ಮುಖೇರಿತೈಃ ಸುರಾಶ್ಚ ಸಜ್ಞಾನಸುಧಾರಸಂ ಪಪುಃ ॥ ೬೦ ॥

ಭಗವಂತನ ಮುಖದಿಂದ ಹೊರಹೊಮ್ಮಿದ ಒಳ್ಳೆಯ ವಾಙ್ಮಯ ಬಾಣಗಳಿಂದ

---

1. ಸಮಸ್ತ ಶಾಸ್ತ್ರಾರ್ಥ ನಿದರ್ಶನಾತ್ಮಕಮಿತ್ಯತ್ರ ಸಮಸ್ತ ಶಾಸ್ತ್ರಾರ್ಥ ದೃಷ್ಟಾಂತ ರೂಪಮಿತ್ಯರ್ಥಃ। ರಾಜಸೂಯೇ ಅಗ್ರಪೂಜಯಾ ಕೃಷ್ಣಶ್ರೈಷ್ಠ್ಯಸ್ಯ ನಿದರ್ಶಿತತ್ವಾತ್। ಬಾಲಲೀಲಾಮಾರಭ್ಯ ಭೀಮೇ ಸರ್ವೇಭ್ಯೋ ಬಲಾತಿಶಯಸ್ಯ, ವಿಷಭಕ್ಷಣ ಸರ್ಪದಂಶನಾದಿನಾ ಮರಣಾಭಾವ ಸಾಮರ್ಥ್ಯಸ್ಯ, ಲಾಕ್ಷಾಗೃಹಾತ್ ಕುಂತೀಯುಧಿಷ್ಠಿರಾದೀನ್ ಸರ್ವಾನುದೂಹ್ಯ ಗಮನೇನ ಸರ್ವಾಸಾಧ್ಯ ಜರಾಸಂಧಾದಿ ವಧೇನ ಚ ಸಕಲ ದೇವೋತ್ತಮತ್ವಸ್ಯ ಚ ನಿದರ್ಶಿತತ್ವಾದಿತಿ ಭಾವಃ –ವಾದಿರಾಜೀಯ

ರುದ್ರಾದಿಗಳ ಮನದಲ್ಲಿ ಮನೆಮಾಡಿದ್ದ ಕಲಿ ಶಿರಶ್ಛೇದಗೊಂಡು ಬೇಗನೆ ಮರಣಹೊಂದಿದ. ದೇವತೆಗಳು ಒಳ್ಳೆಯ ಜ್ಞಾನಾಮೃತ ರಸವನ್ನು ಪಾನಮಾಡಿದರು.

ಅಥೋ ಮನುಷ್ಯೇಷು ತಥಾಸುರೇಷು
ರೂಪಾಂತರೈಃ ಕಲಿ ರೇವಾವಶಿಷ್ಟಃ।
ತತೋ ಮನುಷ್ಯೇಷು ಚ ಸತ್ಸು ಸಂಸ್ಥಿತೋ
ವಿನಾಶ್ಯ ಇತ್ಯೇವ ಹರಿರ್ವ್ಯಚಿಂತಯತ್ ॥ ೬೧ ॥

ಆದರೂ ಮನುಷ್ಯರಲ್ಲಿ ಮತ್ತು ಅಸುರರಲ್ಲಿ ಬೇರೆ ರೂಪಗಳಿಂದ ಇದ್ದ ಕಲಿ ಇನ್ನೂ ಸಾಯದೆ ಉಳಿದೇ ಇದ್ದ. ಅದರಿಂದ ಮನುಷ್ಯೋತ್ತಮರಲ್ಲಿ ಇರುವ ಕಲಿಯನ್ನು ನಾಶಪಡಿಸಬೇಕೆಂದು ವೇದವ್ಯಾಸರು ಆಲೋಚಿಸಿದರು.

ದೇವತೆಗಳೂ ಮುನಿಗಳೂ ಸಾಕ್ಷಾತ್ ವೇದವ್ಯಾಸರ ಮುಖದಿಂದಲೆ ಶ್ರವಣ ಮಾಡಿ ತಮ್ಮಲ್ಲಿ ಅಜ್ಞಾನ ಮಿಥ್ಯಾಜ್ಞಾನಾದಿ ರೂಪದಿಂದ ನೆಲೆಸಿದ್ದ ಕಲಿಗೆ ಶಿರಶ್ಛೇದ ಮಾಡಿಕೊಂಡರು. ಆದರೂ ಮನುಷ್ಯರು ಮತ್ತು ಅಸುರರು ಹಾಗೆ ಮಾಡಿಕೊಳ್ಳಲಿಲ್ಲ. ಸಾಕ್ಷಾತ್ ವೇದವ್ಯಾಸರ ಮುಖದಿಂದ ಶಾಸ್ತ್ರ ಶ್ರವಣ ಮಾಡುವ ಸಾಮರ್ಥ್ಯ ಅವರಿಗೆ ಇಲ್ಲ. ಅವರಲ್ಲಿ ನಿತ್ಯಸಂಸಾರಿಗಳೂ ತಮೋಯೋಗ್ಯರೂ ಮಿಥ್ಯಾಜ್ಞಾನಕ್ಕೆ ಯೋಗ್ಯರೇ. ಆದರೂ ಮನುಷ್ಯೋತ್ತಮರು ತತ್ವಜ್ಞಾನಕ್ಕೆ ಯೋಗ್ಯರು. ಅವರಲ್ಲಿ ಕಲಿಯನ್ನು ನಾಶಪಡಿಸಬೇಕು. ಹೇಗೆ ಎಂದು ವೇದವ್ಯಾಸರು ಆಲೋಚಿಸಿದರು.[1]

ತತೋ ನೃಣಾಂ ಕಾಲಬಲಾತ್ ಸುಮಂದ-
ಮಾಯುರ್ಮತಿಂ ಕರ್ಮ ಚ ವೀಕ್ಷ್ಯ ಕೃಷ್ಣಃ।
ವಿವ್ಯಾಸ ವೇದಾನ್ಸ ವಿಭುಶ್ಚತುರ್ಧಾ
ಚಕ್ರೇ ತಥಾ ಭಾಗವತಂ ಪುರಾಣಮ್ ॥ ೬೨ ॥

ಮನುಷ್ಯೋತ್ತಮರಿಗೆ ಕಾಲಪ್ರಭಾವದಿಂದ ಆಯುಷ್ಯ ಬುದ್ಧಿ ಕರ್ಮಾಚರಣೆ ಎಲ್ಲವೂ ಕಡಿಮೆಯಾಗಿರುವುದನ್ನು ಕಂಡು ಸರ್ವಶಕ್ತರಾದ ವೇದವ್ಯಾಸರು ಮೂಲವೇದಗಳನ್ನು ನಾಲ್ಕು ಭಾಗವಾಗಿ ವಿಭಾಗಿಸಿದರು. ವೈಷ್ಣವ ಪುರಾಣಗಳನ್ನು ರಚಿಸಿದರು.

---

1. ದೇವಷ್ಯಾದಿ ಸ್ಥಿತಮಿಥ್ಯಾಜ್ಞಾನಾಖ್ಯ ರೂಪಾಣಾಂ ವಾಙ್ಮಯೈಃ ಶರೈರ್ನಿಕೃತ್ತ ಶೀರ್ಷತ್ವೇಽಪಿ ಉತ್ತಮ ಮಧ್ಯಮಾಧಮಾಖ್ಯ ಮನುಷ್ಯೇಷ್ವಸುರೇಷು ಚ ಸ್ಥಿತ ಮಿಥ್ಯಾಜ್ಞಾನಾಖ್ಯ ರೂಪಾಣ್ಯನಿಕೃತ್ತ ಶೀರ್ಷಾಣ್ಯೇವಾವಶಿಷ್ಟಾನಿ। ತತ್ರ ತನ್ಮುಖಾದೇವಾನಂತ ವೇದಶ್ರವಣಾಸಮರ್ಥ ಸನ್ಮನುಷ್ಯಸ್ಥಿತ ಮಿಥ್ಯಾ ಜ್ಞಾನಾಖ್ಯರೂಪಾಣಾಂ ಶಿರಶ್ಛೇದಃ ಕಥಂ ಕಾರ್ಯ ಇತ್ಯಚಿಂತಯದಿತಿ ಭಾವಃ।

–ವಾದಿರಾಜೀಯ

ಮೂಲರೂಪಿ ನಾರಾಯಣನಿಂದ ಮೂಲ ಮಹಾವೇದ ಋಕ್ ಯಜುಸ್ ಸಾಮ ಅಥರ್ವ ಎಂದು ನಾಲ್ಕಾಗಿ ವಿಭಾಗವಾಗಿಯೆ ಇದ್ದಿತು. ಅದರಿಂದ ಕ್ರಮವಾಗಿ ಋಕ್ ಯಜುಸ್ ಸಾಮ ಅಥರ್ವ ಎಂಬ ನಾಲ್ಕು ಉಪವೇದಗಳನ್ನು ಬೇರ್ಪಡಿಸಿ ತೆಗೆದುಕೊಟ್ಟರು ವ್ಯಾಸರು.

ಕೃಮಿಯಿಂದ ರಾಜ್ಯವಾಳಿಸಿದುದು

ಯೇ ಯೇ ಚ ಸಂತಸ್ತಮಸಾನುವಿಷ್ಟಾಸ್ತಾಂಸ್ತಾನ್ಸ್ವಾಕ್ಯೈಸ್ತಮಸೋ ವಿಮುಂಚನ್।
ಚಚಾರ ಲೋಕಾನ್ ಸ ಪಥಿ ಪ್ರಯಾಂತಂ ಕೀಟಂ ವ್ಯಪಶ್ಯತ್ತಮುವಾಚ ಕೃಷ್ಣಃ ॥೬೩॥

ಯಾವ ಯಾವ ಸಜ್ಜನರು ಅಜ್ಞಾನಾವೇಶಕ್ಕೊಳಗಾಗಿದ್ದರೊ ಅವರನ್ನೆಲ್ಲ ಒಳ್ಳೆಯ ಉಪದೇಶಗಳಿಂದ ಅಜ್ಞಾನಮುಕ್ತರನ್ನಾಗಿ ಮಾಡುತ್ತ ವೇದವ್ಯಾಸರು ಲೋಕಸಂಚಾರ ಮಾಡಿದರು. ಒಮ್ಮೆ ದಾರಿಯಲ್ಲಿ ಓಡಾಡುತ್ತಿದ್ದ ಒಂದು ಕೀಟವನ್ನು ಕಂಡರು. ಅದಕ್ಕೆ ಹೀಗೆ ಹೇಳಿದರು.

ಭವಸ್ವ ರಾಜಾ ಕುಶರೀರಮೇತತ್ ತ್ಯಕ್ತ್ವೇತಿ ನೈಚ್ಛತ್ ತದಸೌ ತತಸ್ತಮ್।
ಅತ್ಯಕ್ತದೇಹಂ ನೃಪತಿಂ ಚಕಾರ ಪುರಾ ಸ್ವಭಕ್ತಂ ವೃಷಲಂ ಸುಲುಬ್ಧಮ್ ॥ ೬೪ ॥

'ಈ ಕೆಟ್ಟ ಶರೀರವನ್ನು ತೊರೆದು ರಾಜನಾಗು' ಎಂದು ವೇದವ್ಯಾಸರು ಕೀಟಕ್ಕೆ ಹೇಳಿದರು. ಆದರೆ ಅದು ಶರೀರತ್ಯಾಗ ಮಾಡಲು ಒಪ್ಪಲಿಲ್ಲ. ಅದರಿಂದ ಶರೀರ ತ್ಯಾಗ ಮಾಡಿಸದೆಯೆ ರಾಜನನ್ನಾಗಿ ಮಾಡಿದರು. ಏಕೆಂದರೆ ಅವನು ಹಿಂದಿನ ಜನ್ಮದಲ್ಲಿ ತನ್ನ ಭಕ್ತನೆ ಆದ ಒಬ್ಬ ಶೂದ್ರನಾಗಿದ್ದ. ಆದರೆ ಮಹಾಲೋಭಿ.

ಲೋಭಾತ್ ಸ ಕೀಟತ್ವಮುಪೇತ್ಯ ಕೃಷ್ಣಪ್ರಸಾದತಶ್ಚಾಶು ಬಭೂವ ರಾಜಾ।
ತದೈವ ತಂ ಸರ್ವನೃಪಾಃ ಪ್ರಣೇಮುರ್ದದುಃ ಕರಂ ಚಾಸ್ಯ ಯಥೈವ ವೈಶ್ಯಾಃ ॥ ೬೫ ॥

ಲೋಭದಿಂದ ಕೀಟಜನ್ಮ ಹೊಂದಿದ್ದರೂ ವೇದವ್ಯಾಸರ ಅನುಗ್ರಹದಿಂದ ತಕ್ಷಣವೆ ರಾಜನಾದ. ಆಗಲೆ ಅವನಿಗೆ ಎಲ್ಲ ರಾಜರೂ ತಲೆಬಾಗಿದರು. ವೈಶ್ಯರಂತೆ ಕರವನ್ನೂ ಸಲ್ಲಿಸಿದರು

ಉವಾಚ ತಂ ಭಗವಾನ್ ಮುಕ್ತಿಮಸ್ಮಿಂಸ್ತವ ಕ್ಷಣೇ ದಾತುಮಹಂ ಸಮರ್ಥಃ।
ತಥಾಪಿ ಸೀಮಾರ್ಥಮವಾಪ್ಯ ವಿಪ್ರತನುಂ ವಿಮುಕ್ತೋ ಭವ ಮತ್ಪ್ರಸಾದಾತ್ ॥ ೬೬ ॥

ಭಗವಾನ್ ವ್ಯಾಸರು ಆ ಕೀಟಕ್ಕೆ ಹೇಳಿದರು, 'ನಾನು ನಿನಗೆ ಮುಕ್ತಿಯನ್ನು ಈ ಕ್ಷಣವೆ ಕೊಡಲು ಸಮರ್ಥ. ಆದರೂ ಲೋಕಮರ್ಯಾದಾರಕ್ಷಣೆಗಾಗಿ ಬ್ರಾಹ್ಮಣ ಜನ್ಮ ಹೊಂದಿಯೆ ನನ್ನ ಅನುಗ್ರಹದಿಂದ ಮುಕ್ತನಾಗು.'

ಅನುಶಾಸನಪರ್ವದಲ್ಲಿ ಧರ್ಮರಾಜ ಭೀಷ್ಮರಲ್ಲಿ ಕೇಳುತ್ತಾನೆ. ಶರೀರಧಾರಿಯಾದ ಜೀವನು ಶರೀರ ಎಷ್ಟು ಹೀನವಾಗಿದ್ದರೂ ಅದನ್ನು ತ್ಯಾಗ ಮಾಡಲು ಒಪ್ಪುವುದಿಲ್ಲವೇಕೆ? ಭೀಷ್ಮರು ಉದಾಹರಣೆಯಾಗಿ ಕೀಟದ ಕಥೆಯನ್ನು ಹೇಳುತ್ತಾರೆ (ಅನು. 117ಅ) ಮಾರ್ಗದಲ್ಲಿಯೆ ವೇಗವಾಗಿ ಭಯದಿಂದ ಒಂದು ಕೀಟ ಓಡುತ್ತಿತ್ತು. ವ್ಯಾಸರು ಕಂಡು ಏಕೆ ಓಡುವೆ ಎಂದಾಗ ಬಂಡಿ ನನ್ನ ಮೇಲೆ ಹರಿಯದಿರಲಿ ಎಂದು ಓಡುತ್ತಿದ್ದೇನೆ! ತಿಳಿಯದೆ ಆ ಬಂಡಿಯ ಚಕ್ರದ ಮಾರ್ಗದಲ್ಲಿಯೆ ಆ ಮುಗ್ಧ ಕೀಟ ಓಡುತ್ತಿತ್ತು! ವ್ಯಾಸರು ಕರುಣೆಯಿಂದ 'ಕೀಟವೆ, ನೀನು ಈ ಕೆಟ್ಟ ಶರೀರ ತ್ಯಾಗಮಾಡು. ಮುಂದೆ ನಿನ್ನನ್ನು ರಾಜಕುಮಾರನಾಗಿ ಹುಟ್ಟಿಸುತ್ತೇನೆ' ಕೀಟ ಒಪ್ಪಲಿಲ್ಲ! ಆಗ ಕೀಟವನ್ನೇ ರಾಜನನ್ನಾಗಿ ಮಾಡಿದರು ವ್ಯಾಸರು. ಪ್ರಚಲಿತ ಭಾರತ ಪಾಠದಲ್ಲಿ ಕೀಟ ದಾರಿಯಲ್ಲಿ ಹಾಗೇ ನಿಂತು ಬಂಡಿಯ ಚಕ್ರಕ್ಕೆ ಮೈಯೊಡ್ಡಿ ಸತ್ತು ಬಳಿಕ ರಾಜಕುಮಾರನಾದುದು ತಮ್ಮ ಅನುಗ್ರಹ. ಇನ್ನು ನಾನೇನು ಮಾಡಬೇಕು. ಆಜ್ಞೆಮಾಡಿರಿ' ಎನ್ನುತ್ತದೆ ಕೀಟ. ಆಗ ವ್ಯಾಸರು ಹೇಳುತ್ತಾರೆ–

ಅರ್ಚಿತೋಽಹಂ ತ್ವಯಾ ರಾಜನ್ ವಾಗ್ಬಿರದ್ಯ ಯದೃಚ್ಛಯಾ।
ಅದ್ಯ ತೇ ಕೀಟತಾಂ ಪ್ರಾಪ್ಯ ಸ್ಮೃತಿರ್ಜಾತಾ ಜುಗುಪ್ಸಿತಾ।
ತಿರ್ಯಗ್ ಯೋನೌ ಸ್ಮ ಜಾತೇನ ಮಮ ಚಾಭ್ಯರ್ಚನಾತ್ ತಥಾ।
ಇತಸ್ತ್ವಂ ರಾಜಪುತ್ರತ್ವಾತ್ ಬ್ರಾಹ್ಮಣ್ಯಂ ಸಮವಾಪ್ಸ್ಯಸಿ ॥

'ಈ ಕೀಟ ಜನ್ಮದಲ್ಲಿಯೂ ನೀನು ನನ್ನನ್ನು ಸ್ತೋತ್ರದಿಂದ ಆರಾಧಿಸುವೆ. ಅದರಿಂದ ಈ ಜನ್ಮಕಳೆದ ಮೇಲೆ ಬ್ರಾಹ್ಮಣ ಜನ್ಮ ಪಡೆದು ಯಾಗಾದಿ ಸತ್ಕರ್ಮ ಮಾಡಿ ಮೋಕ್ಷಪಡೆಯುವಿ.'

ಸ್ವರೂಪತಃ ಬ್ರಾಹ್ಮಣನಾದವನು ಚರಮ ಶರೀರದಲ್ಲಿ ಬ್ರಾಹ್ಮಣಾಗಿಯೆ ಹುಟ್ಟಿ ಮುಕ್ತಿಪಡೆಯಬೇಕು. ಇದು ಲೋಕಮರ್ಯಾದೆ. ಅದರ ರಕ್ಷಣೆಗಾಗಿ ವ್ಯಾಸರು ಬ್ರಾಹ್ಮಣ ಜನ್ಮ ಪಡೆ ಎಂದರು. ಹೊರತು ಅದೇ ಶರೀರದಿಂದ ಮುಕ್ತಿನೀಡಲು ಆಶಕ್ತಿಯಿಂದಲ್ಲ.[1] ಕೀಟಶರೀರದಲ್ಲಿಯೆ ರಾಜನನ್ನಾಗಿ ಮಾಡಿ ತನ್ನ ಅಘಟಿತ ಘಟನಾಶಕ್ತಿಯನ್ನು ತೋರಿದ್ದರು ವ್ಯಾಸರು.

ಜ್ಞಾನಂ ಚ ತಸ್ಮೈ ವಿಮಲಂ ದದೌ ಸ ಮಹೀಂ ಚ ಸರ್ವಾಂ ಬಭುಜೇ ತದಂತೇ।
ತ್ಯಕ್ತ್ವಾತನುಂ ವಿಪ್ರವರತ್ವಮೇತ್ಯ ಪದಂ ಹರೇರಾಪ ಸುತತ್ವವೇದೀ ॥ ೬೭ ॥

---

1. ಸ್ವರೂಪತೋ ಬ್ರಾಹ್ಮಣೇನ ಬ್ರಾಹ್ಮಣತ್ವಮವಾಪ್ಯೈವ ಮೋಕ್ಷಃಪ್ರಾಪ್ಯಃ ನತು ರೂಪಾಂತರೇಣೇತಿ ಮರ್ಯಾದಾ ರಕ್ಷಣಾರ್ಥಮಿತಿ ಭಾವಃ ॥ –ವಾದಿರಾಜೀಯ

ಆ ಕೀಟರಾಜನಿಗೆ ವೇದವ್ಯಾಸರು ನಿರ್ಮ ಜ್ಞಾನವಿತ್ತರು. ಆತ ಇಡಿ ಭೂಮಿಯನ್ನು ಆಳಿದ. ಕೊನೆಯಲ್ಲಿ ಆ ಶರೀರವನ್ನು ತೊರೆದು ಶ್ರೇಷ್ಠ ಬ್ರಾಹ್ಮಣ ಜನ್ಮ ಹೊಂದಿ ಒಳ್ಳೆಯ ತತ್ವಜ್ಞಾನಿಯಾಗಿ ಹರಿಪದವನ್ನು ಹೊಂದಿದ.

ಏವಂ ಬಹೂನ್ ಸಂಸೃತಿ ಬಂಧತಃ ಪ್ರಭು-
ರ್ವ್ಯಮೋಚಯದ್ ವ್ಯಾಸತನುರ್ಜನಾರ್ದನಃ।
ಬಹೂನ್ಯಚಿಂತ್ಯಾನಿ ಚ ತಸ್ಯ ಕರ್ಮಾ-
ಣ್ಯಶೇಷದೇವೇಶಸದೋದಿತಾನಿ ॥ ೬೮ ॥

ಹೀಗೆ ಸರ್ವಶಕ್ತನಾದ ವ್ಯಾಸರೂಪಿ ಹರಿ ಅನೇಕ ಮಂದಿಯನ್ನು ಸಂಸಾರ ಬಂಧನದಿಂದ ಬಿಡುಗಡೆ ಹೊಂದಿಸಿದ. ಅವನ ಲೀಲೆಗಳು ಬಹಳ, ಅಚಿಂತ್ಯ. ಎಲ್ಲ ದೇವಶ್ರೇಷ್ಠರು ಅವುಗಳನ್ನು ಸದಾ ಸ್ತುತಿಸುತ್ತಾರೆ.

'ಭಿನತ್ ಕನೀನ ಓದನಂ ಪಚ್ಯಮಾನಂ ಪರೋ ಗಿರಾ।'

- ಕನ್ಯೆಯಲ್ಲಿ ಅವತರಿಸಿದ ಪರವೇದವ್ಯಾಸರು ಭಕ್ತರ ಕರ್ಮಬಂಧನವನ್ನು ವೇದಾಭ್ಯಾಸದಿಂದಲೆ ಪರಿಪಾಕ ಹೊಂದುವಾಗ ನಾಶ ಮಾಡುತ್ತಾರೆ.

'ಸಂಶ್ಲೇಷಾದೋದನಂ ಕರ್ಮ ಪಚ್ಯಮಾನಂ ಗಿರೈವ ಹಿ।
ಅಭಿನದ್ ಭಗವಾನ್ ವ್ಯಾಸಃ ಸ್ವಭಕ್ತಾನಾಮಶೇಷತಃ।'

ಗಾಢಸಂಬಂಧ ಪ್ರಯುಕ್ತ ದುಃಖಕಾರಣವಾದ ದುಷ್ಕರ್ಮಬಂಧನವು ಭಕ್ತರಲ್ಲಿ ವೇದಾಧ್ಯಯನದಿಂದಲೆ ಪಕ್ವವಾದಾಗ ಅದನ್ನು ಭಗವಾನ್ ವ್ಯಾಸರು ಪೂರ್ತಿಯಾಗಿ ನಾಶ ಮಾಡುತ್ತಾರೆ– ಹೀಗೆ ದೇವತೆಗಳು ಭಗವಾನ್ ವ್ಯಾಸರನ್ನು ಅನೇಕ ಶ್ರುತಿ ಸ್ಮೃತಿ ವಚನಗಳಿಂದ ಸದಾ ಸ್ತುತಿಸುತ್ತಾರೆ.

ಶುಕಾವತಾರ

ಅಥಾಸ್ಯ ಪುತ್ರತ್ವಮವಾಪ್ತುಮಿಚ್ಛಂ-
ಶ್ಚಚಾರ ರುದ್ರಃ ಸುತಪಸ್ತದೀಯಮ್ ।
ದದೌ ಚ ತಸ್ಮೈ ಭಗವಾನ್ ವರಂ ತಂ
ಸ್ವಯಂ ಚ ತಪ್ತ್ವೈವ ತಪೋ ವಿಮೋಹಯನ್ ॥ ೬೯ ॥

ರುದ್ರನು ವ್ಯಾಸರ ಮಗನಾಗಿ ಹುಟ್ಟಲು ಬಯಸಿ ಉತ್ತಮ ತಪಸ್ಸನ್ನು ಮಾಡಿದ. ವ್ಯಾಸರು ತಾವು ಶಿವನನ್ನು ಕುರಿತು ತಪಸ್ಸು ಮಾಡಿದಂತೆ ತೋರಿ ಅಯೋಗ್ಯರನ್ನು ಮೋಹಗೊಳಿಸುತ್ತಲೆ ಶಿವನಿಗೆ ಅವನು ಬಯಸಿದ ವರ ನೀಡಿದರು.

ವಿಮೋಹನಾಯಾಸುರಸರ್ಗಿಣಾಂ ಪ್ರಭುಃ
ಸ್ವಯಂ ಕರೋತೀವ ತಪಃ ಪ್ರದರ್ಶಯೇತ್ ।
ಕಾಮಾದಿದೋಷಾಂಶ್ಚ ಮೃಷೈವ ದರ್ಶಯೇ-
ನ್ನತಾವತಾ ತಸ್ಯ ಹಿ ಸಂತಿ ಕುತ್ರಚಿತ್ ॥ ೭೦ ॥

ಸರ್ವಶಕ್ತರಾದ ವ್ಯಾಸರು ಆಸುರ ಸ್ವಭಾವದವರಿಗೆ ಮೋಹ ಉಂಟುಮಾಡುವುದಕ್ಕಾಗಿಯೆ ಸ್ವತಃ ತಪಗೈಯುವಂತೆ ತೋರಿಕೊಳ್ಳುತ್ತಾರೆ. ಕಾಮಾದಿ ದೋಷಗಳನ್ನು ಸುಮ್ಮನೆ ಪ್ರದರ್ಶನ ಮಾಡುತ್ತಾರೆ. ಅಷ್ಟರಿಂದಲೆ ಅವರಿಗೆ ಆ ದೋಷಗಳು ಯಾವ ಕಾಲದಲ್ಲಿಯೂ ಇವೆ ಎಂದಾಗುವುದಿಲ್ಲ.

ವ್ಯಾಸರು ಶಿವನ ಕುರಿತು ತಪಸ್ಸು ಮಾಡಿ ಶುಕಮುನಿಗಳನ್ನು ಮಗನನ್ನಾಗಿ ಪಡೆದಂತೆ ತೋರಿದರು. ಇದು ಅಯೋಗ್ಯರಿಗೆ ಮೋಹ ಉಂಟು ಮಾಡುವುದಕ್ಕಾಗಿ ಮತ್ತು ಅರಣಿ ಮಥನ ಕಾಲದಲ್ಲಿ ಗಿಳಿಯ ರೂಪದಿಂದ ಬಂದ ಘೃತಾಚಿಯನ್ನು ಕಂಡು ಕಾಮ ಪರವಶರಾಗಿ ಅರಣಿಯ ಮೇಲೆ ವೀರ್ಯವನ್ನು ಸುರಿಸಿದಂತೆ ತೋರಿದ್ದೂ ನಟನೆಯೆ. ವ್ಯಾಸರಿಗೆ ಎಂದೂ ಕಾಮ ಪರವಶತೆ ಬರುವುದೂ ಇಲ್ಲ. ವೀರ್ಯಪಾತವೂ ಇಲ್ಲ. ತತ್ಕಾಲದಲ್ಲಿ ಕೃತಕವಾದ ಪ್ರಾಕೃತ ವೀರ್ಯವನ್ನು ನಿರ್ಮಿಸಿ ಸುರಿಸಿದರು. ಇಲ್ಲದಿದ್ದರೆ 'ನ ಸ್ತ್ರೀಕೃತಂ ಕಶ್ಮಲಮಶ್ನುವೀತ' ಎನ್ನುವ ಸ್ಪಷ್ಟ ವಚನ ವಿರೋಧ ಸ್ಪಷ್ಟ.[1]

ತತಸ್ತ್ವರಣ್ಯೋಃ ಸ ಬಭೂವ ಪುತ್ರಕಃ
ಶಿವಸ್ಯ ಸೋಽಭೂಚ್ಛುಕನಾಮಧೇಯಃ।
ಶುಕೀ ಹಿ ಭೂತ್ವಾಹ್ಯಗಮದ್ಘೃತಾಚೀ
ವ್ಯಾಸಂ ವಿಮಥ್ನಂತಮುತಾರಣೀಂ ತಮ್ ॥ ೭೧ ॥

ಹೀಗೆ ಶಿವನಿಗೆ ವ್ಯಾಸರು ವರ ಕೊಟ್ಟಿದ್ದರಿಂದ ಅರಣಿಗಳಲ್ಲಿ ಶಿವ ವ್ಯಾಸರಿಗೆ ಮಗನಾಗಿ ಹುಟ್ಟಿದ. ಮುಂದೆ ಅವನು ಶುಕ ಎಂಬ ಹೆಸರಿನವನಾದ. ಏಕೆಂದರೆ ಅರಣಿ ಮಥನ ಮಾಡುತ್ತಿದ್ದ ವ್ಯಾಸರ ಬಳಿಗೆ ಘೃತಾಚಿ ಎಂಬ ಅಪ್ಸರೆ ಹೆಣ್ಣುಗಿಳಿಯಾಗಿ ತಾನೆ ಬಂದಿದ್ದಳು!

ಶ್ಲೋಕದಲ್ಲಿ 'ಹಿ' ಶಬ್ದ ಪ್ರಸಿದ್ಧಿಯನ್ನು ಹೇಳುತ್ತದೆ. ಮನುಷ್ಯರಿಗೆ ಮನುಷ್ಯ ಸ್ತ್ರೀಯನ್ನು ಕಂಡರೆ ಮಾತ್ರ ಕಾಮಪರಶತೆ ಉಂಟಾಗುವುದು ಸಾಧ್ಯ. ಒಂದು ಹೆಣ್ಣು ಹಕ್ಕಿಯನ್ನು

---

1. ಅರಣ್ಯೋರ್ಮಥನ ಸಮಯೇ ರೇತಃ ಪಾತೋ ಜಾತ ಇತಿ ಕಥಾ ಅಸುರಜನ ಮೋಹನಾರ್ಥಾ। ರೇತಸ್ತು ಪ್ರಾಕೃತಂ ಸೃಷ್ಟಮೇವ, ನ ಸ್ವರೇತ ಇತಿ ಸಿದ್ಧಂ। ಅನ್ಯಥಾ ಸ್ತ್ರೀಕೃತಂ ಕಶ್ಮಲಂ ನಾಶ್ನುವೀತೇತಿ ಸ್ಪಷ್ಟವಚನ ವ್ಯಾಘಾತಾದಿತಿ ಭಾವಃ। -ವಾದಿರಾಜೀಯ

ಕಂಡಾಗ ಸಾಮಾನ್ಯ ಮಾನವನಿಗೂ ಕಾಮ ವಿಕಾರ ಉಂಟಾಗುವುದಿಲ್ಲ. ಇದು ಲೋಕದಲ್ಲಿ ಪ್ರಸಿದ್ಧ ಎನ್ನುತ್ತಿದೆ 'ಹಿ' ಶಬ್ದ.[1]

ಅಕಾಮಯನ್ ಕಾಮುಕವತ್ಸ ಭೂತ್ವಾ
ತಯಾರ್ಥಿತಸ್ತಂ ಶುಕನಾಮಧೇಯಮ್ ।
ಚಕ್ರೇ ಹ್ಯರಣ್ಯೋಸ್ತನಯಂ ಚ ಸೃಷ್ಟ್ವಾ
ವಿಮೋಹಯಂ ಸ್ತತ್ವಮಾರ್ಗೇಷ್ವಯೋಗ್ಯಾನ್ ॥ ೭೨ ॥

ಘೃತಾಚಿಯನ್ನು ವೇದವ್ಯಾಸರು ಕಾಮಿಸಲಿಲ್ಲ. ತತ್ವಮಾರ್ಗಗಳಲ್ಲಿ ಅಯೋಗ್ಯರಾದವರನ್ನು ಮೋಹಗೊಳಿಸುವುದಕ್ಕಾಗಿ ಕಾಮಿಸಿದಂತೆ ತೋರಿಕೊಂಡು ಒಬ್ಬ ಮಗನನ್ನು ಅರಣಿಗಳಲ್ಲಿ ಹುಟ್ಟಿಸಿ ಆ ಮಗನಿಗೆ ಘೃತಾಚಿಯ ಅಪೇಕ್ಷೆಯಂತೆ ಶುಕ ಎಂದೇ ಹೆಸರಿಟ್ಟರು.

ಶುಕಂ ತಮಾಶು ಪ್ರವಿವೇಶ ವಾಯು-
ರ್ವ್ಯಾಸಸ್ಯ ಸೇವಾರ್ಥಮಥಾಸ್ಯ ಸರ್ವಮ್ ।
ಜ್ಞಾನಂ ದದೌ ಭಗವಾನ್ ಸರ್ವ ವೇದಾನ್
ಸ ಭಾರತಂ ಭಾಗವತಂ ಪುರಾಣಮ್ ॥ ೭೩ ॥

ವೇದವ್ಯಾಸರ ಸೇವೆಗಾಗಿ ವಾಯು ಬೇಗನೆ ಶುಕನಲ್ಲಿ ಆವೇಶಗೊಂಡ. ಭಗವಾನ್ ವ್ಯಾಸರು ಆ ಶುಕನಿಗೆ ಸರ್ವಜ್ಞತ್ವವನ್ನು ನೀಡಿದರು. ಎಲ್ಲ ವೇದಗಳನ್ನೂ ಭಾರತವನ್ನೂ ಭಾಗವತ ಮುಂತಾದ ವೈಷ್ಣವ ಪುರಾಣಗಳನ್ನೂ ಉಪದೇಶಿಸಿದರು.

ಸಾಕ್ಷಾತ್ ವ್ಯಾಸರ ಮುಖದಿಂದ ಉಪದೇಶ ಪಡೆಯಲು ವಾಯುದೇವನಿಗೆ ಮಾತ್ರ ಮುಖ್ಯ ಅಧಿಕಾರ. ಅದರಿಂದ ಶಿವಾಂಶರಾದ ಶುಕಮುನಿಯಲ್ಲಿ ವಾಯು ಆವೇಶಗೊಂಡುದರಿಂದಲೆ ಅವರಿಗೆ ವ್ಯಾಸರು ವೇದಾದಿ ಸಕಲಶಾಸ್ತ್ರಗಳನ್ನೂ ಉಪದೇಶಿಸಿದರು. ಭಾಗವತ ಪುರಾಣ ಎಂದರೆ ಶ್ರೀಮದ್ ಭಾಗವತವೂ ಹೌದು. ಭಗವಂತನನ್ನು ಯಥಾಸ್ಥಿತವಾಗಿ ಬಣ್ಣಿಸುವ ಎಲ್ಲ ಸಾತ್ವಿಕ ಪುರಾಣವೂ ಹೌದು. ಪದ್ಮಪುರಾಣದಲ್ಲಿ ಶಿವನೆ ಹೇಳುವಂತೆ, ವಿಷ್ಣು ನಾರದ ಭಾಗವತ ಗರುಡ ಪದ್ಮ ವರಾಹ ಪುರಾಣಗಳು ಆರು ಸಾತ್ವಿಕ. ಉಳಿದ ಹನ್ನೆರಡು ಪುರಾಣಗಳು ಭಗವಂತನನ್ನು ಅನ್ಯಥಾ ವರ್ಣಿಸುವುದರಿಂದ ಅವು 'ಭಾಗವತ' ಪುರಾಣಗಳಲ್ಲ.[2]

---

1. ಶುಕೀ ಹಿ ಭೂತ್ವೇತಿ ಹಿಶಬ್ದೇನ ಮನುಷ್ಯಾಣಾಂ ಮನುಷ್ಯ ಸ್ತ್ರೀರೂಪ ದರ್ಶನಾತ್ ಕಾಮ ಸಂಭವೇಽಪಿ ಶುಕಜಾತೀಯ ಸ್ತ್ರೀರೂಪದರ್ಶನೇ ಮಾನುಷಾಣಾಂ ಕಾಮಸ್ಯಾದೃಷ್ಟ ಚರತ್ವಾದಿತಿ ಯುಕ್ತಿಪ್ರಸಿದ್ಧಿಂ ಸೂಚಯತಿ। -ವಾದಿರಾಜೀಯ
2. ಭಾಗವತಂ ಪುರಾಣಮಿತ್ಯತ್ರ ಭಾಗವತಂ ಭಗವತ್ ಸಂಬಂಧಿ ಪುರಾಣಂ।

ವ್ಯಾಸಶಿಷ್ಯರು

ಶೇಷೋಽಥ ಪೈಲಂ ಮುನಿಮಾವಿಶತ್ ತದಾ
ವೀಶಃ ಸುಮಂತುಮಪಿ ವಾರುಣೇಂ ಮುನಿಮ್ ।
ಬ್ರಹ್ಮಾವಿಶತ್ ತಮುತ ವೈಶಂಪಾಯನಂ
ಶಕ್ರಶ್ಚ ಜೈಮಿನಿಮಥಾವಿಶದ್ ವಿಭುಃ ॥ ೭೪ ॥

ಬಳಿಕ ವೇದವ್ಯಾಸರು ಉಪದೇಶ ಮಾಡುವ ಕಾಲದಲ್ಲಿ ಶೇಷ ಪೈಲಮುನಿಯನ್ನು ಪ್ರವೇಶಿಸಿದ. ಆಗಲೆ ವರುಣಪುತ್ರನಾದ ಸುಮಂತುಮುನಿಯನ್ನು ಗರುಡ ಪ್ರವೇಶಿಸಿದ. ಬ್ರಹ್ಮ ವೈಶಂಪಾಯನನನ್ನೂ ಇಂದ್ರ ಜೈಮಿನಿಯನ್ನೂ ಪ್ರವೇಶಿಸಿದ.

'ವೀಶಃ ಸುಮಂತುಮಪಿ ವಾರುಣೇಂ ಮುನಿಂ'

ಎಂಬಲ್ಲಿ ಜನಾರ್ದನಭಟ್ಟೀಯ ವರದರಾಜೀಯಗಳ ಪ್ರಕಾರ ಗರುಡ ಸುಮಂತುವಿನಲ್ಲಿಯೂ ವರುಣಪುತ್ರನಾದ ಭೃಗುಮುನಿಯಲ್ಲಿಯೂ ಆವೇಶಗೊಂಡ. ಬ್ರಹ್ಮ ಆ ಭೃಗುಮುನಿಯಲ್ಲಿಯೂ ವೈಶಂಪಾಯನನಲ್ಲಿಯೂ ಆವೇಶಗೊಂಡ. ಹೀಗೆ ಭೃಗುವಿನಲ್ಲಿ ಗರುಡಬ್ರಹ್ಮರಿಬ್ಬರ ಆವೇಶ. 'ಬ್ರಹ್ಮಾವಿಶತ್ ತಂ ಉತ ವೈಶಂಪಾಯನಂ ಮುನಿಂ' ಎಂಬಲ್ಲಿ 'ತಂ' ಎಂದರೆ ಹಿಂದೆ ಹೇಳಿದ ವರುಣಪುತ್ರನಾದ ಭೃಗುಮುನಿಯನ್ನೂ ಎಂದರ್ಥ. ಆ ಭೃಗುಮುನಿಯನ್ನೂ ವೈಶಂಪಾಯನನ್ನೂ ಬ್ರಹ್ಮ ಪ್ರವೇಶಿಸಿದ ಎಂದು ವ್ಯಾಖ್ಯಾನ.

ವಾದಿರಾಜರ ಪ್ರಕಾರ ಭೃಗುಮುನಿಯಲ್ಲಿ ಗರುಡಾವೇಶ ಹೇಳಿಲ್ಲ. ಏಕೆಂದರೆ ಮುಂದೆ ಶಾಸ್ತ್ರಪ್ರವರ್ತಕರ ವಿಭಾಗ ಮಾಡುವಾಗ ಭೃಗುಮುನಿ ಈ ಶಾಸ್ತ್ರಕ್ಕೆ ಪ್ರವರ್ತಕ ಎಂದೇನೂ ಹೇಳಿಲ್ಲ. ಕರ್ಮಯೋಗ ಪ್ರವರ್ತಕ ಎಂದು ಮಾತ್ರ ಹೇಳಿದೆ. ಕರ್ಮಯೋಗವೆಂದು ಒಂದು ಪ್ರತ್ಯೇಕ ಶಾಸ್ತ್ರವಿಲ್ಲ. ಆದರಿಂದ ಶಾಸ್ತ್ರಪ್ರವರ್ತಕರಲ್ಲಿ ದೇವತೆಗಳ ಆವೇಶವನ್ನು ಹೇಳುವ ಈ ಸಂದರ್ಭದಲ್ಲಿ ಭೃಗುಮುನಿಯಲ್ಲಿ ಗರುಡನ ಆವೇಶ ಹೇಳುವುದು ಸಂಗತವಾಗುವುದಿಲ್ಲ. ಶೇಷ ಗರುಡ ಬ್ರಹ್ಮ ಇಂದ್ರ ಈ ನಾಲ್ಕು ದೇವತೆಗಳ

ವೈಷ್ಣವಂ ನಾರದೀಯಂ ಚ ತಥಾ ಭಾಗವತಂ ಶುಭಂ।
ಗಾರುಡಂ ಚ ತಥಾ ಪಾದ್ಮಂ ವಾರಾಹಂ ಶುಭದರ್ಶನೇ॥
ಇತಿ ಪಾದ್ಮ ಪುರಾಣೋಕ್ತ ಸಾತ್ವಿಕ ಪುರಾಣ ಷಟ್ಕಂ। ಜಾತಾವೇಕವಚನಮಿತಿ ಭಾವಃ।

–ವಾದಿರಾಜೀಯ

ಆವೇಶವನ್ನು ನಾಲ್ಕು ಮಂದಿ ಮುನಿಗಳಲ್ಲಿ ಹೇಳುವುದು ಉಚಿತ. ಅದರಿಂದ ಐದನೆಯ ಭೃಗುಮುನಿಯನ್ನು ಆ ಶ್ಲೋಕದಲ್ಲಿ ಗ್ರಹಿಸಬೇಕಾಗಿಲ್ಲ. ಅದರಿಂದ 'ವರುಣಪುತ್ರನಾದ ಮುನಿ' ಇಲ್ಲಿ ಸುಮಂತುವೆ ವಿವಕ್ಷಿತ ಎನ್ನಬೇಕು. ಸುಮಂತುವೂ ವರುಣ ಪುತ್ರನೆ.

ಅಥರ್ವಾಂಗಿರಸಾಮಾಸೀತ್ ಸುಮಂತುರ್ವಾರುಣೋ ಮುನಿಃ।

ಎಂದು ಭಾಗವತದಲ್ಲಿ ಸುಮಂತುವನ್ನು ವರುಣಪುತ್ರನೆಂದಿದೆ. ಅದರ ಟೀಕೆಯೂ 'ವಾರುಣೋ ವರುಣಪುತ್ರಃ ಸುಮಂತುರ್ನಾಮ ಮುನಿಃ' ವಾರುಣ ಎಂದರೆ ವರುಣಪುತ್ರನಾದ ಸುಮಂತು ಎಂಬ ಮುನಿ' ಎಂದು ವ್ಯಾಖ್ಯಾನಿಸಿದೆ.

'ನಾರದಂ ಪಾಠಯಿತ್ವಾ' 'ನಾರದರಿಗೆ ತಾನೂ ಉಪದೇಶಿಸಿದರು. ಶುಕಮುನಿಯಿಂದಲೂ ಉಪದೇಶ ಕೊಡಿಸಿದರು' ಎಂದು ಮುಂದೆ ಹೇಳುವುದು ಉಪಲಕ್ಷಣ. ಸೂರ್ಯನಿಗೂ ಹಾಗೇ ತಾನೂ ಉಪದೇಶಿಸಿದ್ದಾರೆ. ಶುಕಮುನಿಯಿಂದಲೂ ಉಪದೇಶ ಕೊಡಿಸಿದ್ದಾರೆ. ಹೀಗೆ ಸೂರ್ಯನಾರದಾದಿಗಳು ಸಾಕ್ಷಾತ್ ವೇದವ್ಯಾಸರಿಂದಲೂ ಶುಕಮುನಿಯಿಂದಲೂ ಉಪದೇಶ ಪಡೆದವರಾದ್ದರಿಂದ ಅವರಿಗೆ ಬೇರೆ ಮುನಿಗಳಲ್ಲಿ ಆವೇಶಗೊಂಡು ಉಪದೇಶ ಪಡೆಯುವ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಆವೇಶ ಹೊಂದಲಿಲ್ಲ. ಬ್ರಹ್ಮಾದಿಗಳು ಸಾಕ್ಷಾತ್ ವ್ಯಾಸಮುಖದಿಂದ ಶ್ರವಣ ಮಾಡಿದ್ದಾರೆ. ವಿಭಾಗಗೊಂಡ ವೇದವನ್ನೂ ಶ್ರವಣ ಮಾಡುವ ಆಸೆ. ಏಕೆಂದರೆ ಅನಂತವಾದ ಮೂಲವೇದದಲ್ಲಿರುವ ಕೆಲವೇ ಸುಂದರವಾಕ್ಯಗಳನ್ನು ಆರಿಸುವ ಮತ್ತು ಶಾಖಾಭೇದಗಳನ್ನು ಮಾಡುವ ಕೌಶಲವನ್ನು ತಾವು ಅಭ್ಯಾಸ ಮಾಡಬೇಕು ಮತ್ತು ಮುನಿಗಳಲ್ಲಿ ಆವಿಷ್ಟರಾಗಿ ಅವರಿಗೆ ಆಯಾ ಶಾಖಾ ಪ್ರವರ್ತನದ ಶಕ್ತಿ ನೀಡಬೇಕು ಎಂಬ ಅಭಿಪ್ರಾಯದಿಂದ ಅವರು ಮುನಿಗಳಲ್ಲಿ ಆವಿಷ್ಟರಾದರು.[1]

---

1. ವೀಶೋ ಗರುಡಃ ಸುಮಂತುಂ ಋಷಿ ವಾರುಣೇಂ ಮುನಿಮಪಿ ವರುಣಪುತ್ರಂ ಭೃಗುಋಷಿಮಪಿ ಇತ್ಯುಭಾವಪಿ ಆವಿಶತ್। ಬ್ರಹ್ಮಾ ತಮುತ ಗರುಡಾವಿಷ್ಟ ವಾರುಣೆಮುನಿಮಪಿ ವೈಶಂಪಾಯನ ಋಷಿಂ ಚೇತ್ಯುಭಾವಪಿ ಆವಿಶತ್। -ಜನಾರ್ದನೀಯ
ವೀಶೋ ಗರುಡಃ ಸುಮಂತುಂ ವಾರುಣಂ ವರುಣಸ್ಯಾಪತ್ಯಂ ಭೃಗುಮುನಿ ಮಪೀತಿ ಉಭೌ ಆವಿಶತ್। ಬ್ರಹ್ಮಾ ತಮುತ ವಾರುಣಂ ವೈಶಂಪಾಯನಂ ಚೇತ್ಯುಭೌ ಆವಿಶತ್। -ವರದರಾಜೀಯ
ವೀಶೋಽಪಿ ವಾರುಣೇಂ ವರುಣಪುತ್ರಂ ಸುಮಂತುಂ ಆವಿಶತ್। ಪ್ರವರ್ತಕ ವಿಭಾಗ ಕಥನೇ ಭೃಗೋರಕಥನಾತ್ ಚತುರ್ಣಾಂ ದೇವಾನಾಂ ಚತುಷ್ಪ್ರೇವ ಪ್ರವೇಶಸ್ಯೋಚಿತತ್ವಾಚ್ಚೋಕ್ತೈವ

ಕೃಷ್ಣಸ್ಯ ಪಾದಪರಿಸೇವನೋತ್ಸುಕಾಃ
ಸುರೇಶ್ವರಾ ವಿವಿಶುರಾಶು ತಾನ್ ಮುನೀನ್ ।
ಸಮಸ್ತವಿದ್ಯಾಃ ಪ್ರತಿಪಾದ್ಯ ತೇಷ್ವಸೌ
ಪ್ರವರ್ತಕಾಂಸ್ತಾನ್ವಿದಧೇ ಹರಿಃ ಪುನಃ ॥ ೭೫ ॥

ಶ್ರೀವೇದವ್ಯಾಸರ ಪಾದಸೇವೆ ಮಾಡುವ ತವಕ ಉಳ್ಳವರಾಗಿ ದೇವೋತ್ತಮರು ಆ ಮುನಿಗಳನ್ನು ಬೇಗನೆ ಪ್ರವೇಶ ಮಾಡಿದರು. ವ್ಯಾಸರು ಎಲ್ಲ ಶಾಸ್ತ್ರಗಳನ್ನೂ ಅವರಿಗೆ ಉಪದೇಶಿಸಿ ಅವರನ್ನು ಆ ಶಾಸ್ತ್ರಗಳಿಗೆ ಪ್ರವರ್ತಕರನ್ನಾಗಿ ಮಾಡಿದರು.

ಮುನಿಗಳಿಗೆ ಸಾಕ್ಷಾತ್ ವ್ಯಾಸರ ಮುಖದಿಂದ ಶ್ರವಣ ಮಾಡುವ ಸಾಮರ್ಥ್ಯವಿಲ್ಲದ್ದರಿಂದ ದೇವತೆಗಳು ಅವರಲ್ಲಿ ಆವಿಷ್ಟರಾದರೆಂದು ಹಿಂದೆ ಹೇಳಿದೆ. ಈಗ ವ್ಯಾಸರ ಪಾದಸೇವೆಯ ತವಕವಿನ್ನೊಂದು ಕಾರಣ ಎನ್ನುತ್ತಿದ್ದಾರೆ.

ಋಚಾಂ ಪ್ರವರ್ತಕಂ ಪೈಲಂ ಯಜುಷಾಂ ಚ ಪ್ರವರ್ತಕಮ್ ।
ವೈಶಂಪಾಯನಮೇವೈಕಂ ದ್ವಿತೀಯಂ ಸೂರ್ಯಮೇವ ಚ ॥ ೭೬ ॥

ಶ್ರೀವ್ಯಾಸರು ಋಗ್ವೇದಕ್ಕೆ ಪೈಲಮುನಿಯನ್ನು ಪ್ರವರ್ತಕನನ್ನಾಗಿ ಮಾಡಿದರು. ಯಜುರ್ವೇದಗಳಿಗೆ ವೈಶಂಪಾಯನನನ್ನು ಒಬ್ಬ ಪ್ರವರ್ತಕನನ್ನಾಗಿಯೂ ಸೂರ್ಯನನ್ನು ಇನ್ನೊಬ್ಬ ಪ್ರವರ್ತಕನನ್ನಾಗಿಯೂ ಮಾಡಿದರು.

ಕೃಷ್ಣಯಜುರ್ವೇದ ಮತ್ತು ಶುಕ್ಲಯಜುರ್ವೇದವೆಂದು ಎರಡು ಬಗೆಯ ಯಜುರ್ವೇದಗಳಿವೆ. ಕೃಷ್ಣಯಜುರ್ವೇದಗಳಿಗೆ ವೈಶಂಪಾಯನರೂ ಶುಕ್ಲಯಜುರ್ವೇದಗಳಿಗೆ ಸೂರ್ಯನೂ ಪ್ರವರ್ತಕರು. ಋಚಾಂ

ಯೋಜನಾ ಗ್ರಂಥಕಾರಸ್ಯಾಭಿಮತಾ। ಅಥರ್ವಾಂಗಿರಸಾಮಾಸೀತ್ ಸುಮಂತುರ್ವಾರುಣೋ ಮುನಿರಿತಿ ಭಾಗವತೇ 'ವಾರುಣೋ ವರುಣಪುತ್ರಃ ಸುಮಂತರ್ನಾಮ ಮುನಿರಿ'ತಿ ತಟ್ಟೀಕಾಯಾಂ ಚ ಸ್ಪಷ್ಟಮುದಿತತ್ವಾದಪಿ ಸುಮಂತುರೇವ ವಾರುಣಃ ನ ತು ಭೃಗುರಿತ್ಯರ್ಥಃ। ಸೂರ್ಯನಾರದಾದ್ಯಾಸ್ತು ಸಾಕ್ಷಾದ್ ವ್ಯಾಸ ಮುಖಾತ್ ಶುಕ ಮುಖಾದ್ವಾ ಪಾಠಯಿತ್ವೈವ ಪ್ರವರ್ತಕಾ ಇತ್ಯತೋ ನ ತೇಷಾಮಾವೇಶಃ ಕಥಿತಃ। ಅತ ಏವ ನಾರದಂ ಪಾಠಯಿತ್ವೇತ್ಯತಃ ಆಕೃಷ್ಯ ಸೂರ್ಯಂ ಪಾಠಯಿತ್ವೇತಿ ಯೋಜ್ಯಂ। ಬ್ರಹ್ಮೇತ ಬ್ರಹ್ಮಾ ಚ। ತಂ ಭಾರತ ಪ್ರವರ್ತಕತ್ವೇನ ಪ್ರಸಿದ್ಧಂ ವೈಶಂಪಾಯನಂ। ಸಾಕ್ಷಾದ್ ವ್ಯಾಸಮುಖಾದೇವ ಬ್ರಹ್ಮಾದಿಭಿರ್ಮೂಲ ರೂಪೇಣೈವ ಅವಿಭಕ್ತ ಸಕಲ ವೇದಾನಾಂ ಶ್ರುತತ್ವಾತ್ ಪುನರ್ವಿಭಕ್ತ ವೇದಶ್ರವಣಾಯ ಕುತೋ ಮುನಿಷು ಪ್ರವೇಶ ಇತಿ ಚೇತ್ ಸತ್ಯಂ। ಆದಿವೇದೇ ಸಂಕಲಯ್ಯೈ ಕತ್ರ ಸ್ಥಿತರ್ಗ್ಯಜುಃ ಸಾಮಾಥರ್ವಭ್ಯ ಏಕಾಂತ ವಿಜಾತೀಯ ವಾಕ್ಯಾನ್ಯುದ್ಧೃತ್ಯ ಋಗಾದಿ ಶಾಖಾಕರಣ ಕೌಶಲಾಭ್ಯಾಸಾರ್ಥಂ ಮುನೀನಾಂ ಪ್ರತ್ಯೇಕ ಶಾಖಾ ಪ್ರವರ್ತಕತ್ವ ಶಕ್ತಿದಾನಾಯ ಚ ಪ್ರವೇಶ ಸಂಭವಾದಿತ್ಯಸ್ಯ ವಿವೇಕಿಭಿರ್ಬೋದ್ಧುಂ ಶಕ್ಯತ್ವಾತ್। –ವಾದಿರಾಜೀಯ

ಯಜುಷಾಂ ಎಂದು ಮುಂತಾಗಿ ಬಹುವಚನ ಪ್ರಯೋಗ ಮಾಡಿರುವುದು ಪ್ರತಿವೇದದಲ್ಲಿಯೂ ಶಾಖಾಭೇದವಿದೆ ಎಂದು ಸೂಚಿಸುವುದಕ್ಕೆ[1] ಉದಾ: ಋಗ್ವೇದದಲ್ಲಿ ಇಪ್ಪತ್ತನಾಲ್ಕು ಯಜುರ್ವೇದದಲ್ಲಿ ನೂರೊಂದು, ಸಾಮವೇದದಲ್ಲಿ ಒಂದು ಸಾವಿರ. ಅಥರ್ವವೇದದಲ್ಲಿ ಹನ್ನೆರಡು ಶಾಖೆಗಳು. ಈ ಶಾಖೆಗಳಲ್ಲಿ ಹೆಚ್ಚಿನವು ಕ್ರಮೇಣ ಲುಪ್ತವಾಗುತ್ತಿವೆ. ಏಕೆಂದರೆ ಮೇಲೆ ಹೇಳಿದ ಸಂಖ್ಯೆ ಸೂತ್ರಭಾಷ್ಯದಲ್ಲಿ ಹೇಳಿದ್ದು. ಆದರೆ ವ್ಯಾಕರಣ ಮಹಾಭಾಷ್ಯದಲ್ಲಿ ಇಪ್ಪತ್ತೊಂದು ಋಗ್ವೇದದಲ್ಲಿ, ನೂರೊಂದು ಯಜುರ್ವೇದದಲ್ಲಿ, ಸಾವಿರ ಸಾಮವೇದದಲ್ಲಿ, ಒಂಬತ್ತು ಅಥರ್ವವೇದದಲ್ಲಿ ಹೀಗೆ ಶಾಖಾಸಂಖ್ಯೆ ಉಕ್ತವಾಗಿದೆ. ಅರ್ಥಾತ್ ಕಾಲಕ್ರಮೇಣ ಶಾಖಾ ಸಂಖ್ಯೆ ಕಡಿಮೆಯಾಗುತ್ತಿದೆ.

ಈಗ ಉಳಿದಿರುವುದು ಋಗ್ವೇದದಲ್ಲಿ ಕೇವಲ ಮೂರು ಶಾಖೆಗಳು, ಶಾಕಲ, ಬಾಷ್ಕಲ, ಸಾಂಖ್ಯಾಯನ ಎಂದು. ಕೃಷ್ಣಯಜುರ್ವೇದದಲ್ಲಿ ತೈತ್ತಿರೀಯ ಮೈತ್ರಾಯಣೀಯ ಕಾಠಕ ಶಾಖೆಗಳಿವೆ. ಆಪಸ್ತಂಬ, ಬೋಧಾಯನ ಸತ್ಯಾಷಾಢ ಹಿರಣ್ಯಕೇಶೀಯ ಶ್ರೌತಸೂತ್ರಗಳೊಂದಿಗೆ ತೈತ್ತಿರೀಯ ಶಾಖೆ ದಕ್ಷಿಣ ಭಾರತದಲ್ಲಿ ಪ್ರಚಲಿತವಾಗಿದೆ. ಮಾನವ ಶ್ರೌತಸೂತ್ರದೊಂದಿಗೆ ಮೈತ್ರಾಯಣೀಯ ಶಾಖೆ ಉತ್ತರಭಾರತದಲ್ಲಿ ಪ್ರಚಲಿತವಾಗಿದೆ. ಶುಕ್ಲಯಜುರ್ವೇದಲ್ಲಿ ಕಾಣ್ವಮಾಧ್ಯಂದಿನ ಶಾಖೆಗಳಿವೆ. ದಕ್ಷಿಣಭಾರತದಲ್ಲಿ ಕಾಣ್ವಶಾಖೆ. ಉತ್ತರ ಭಾರತದಲ್ಲಿ ಮಾಧ್ಯಂದಿನ ಶಾಖೆ. ಕಾತ್ಯಾಯನ ಶ್ರೌತಸೂತ್ರ. ಇವುಗಳಿಗೆ ಅನುಸಾರಿಯಾಗಿದೆ. ಸಾಮವೇದದಲ್ಲಿ ರಾಣಾಯನೀಯ, ಕೌಥುಮ, ಪೈಂಗಿ, ಜೈಮಿನಿ ಶಾಖೆಗಳಿವೆ. ಅಥರ್ವವೇದದಲ್ಲಿ ಶೌನಕ, ಪೈಪ್ಪಲಾದ ಶಾಖೆಗಳಿವೆ.

ಚಕ್ರೇಽಥ ಜೈಮಿನಿಂ ಸಾಮ್ನಾಮಥರ್ವಾಂಗಿರಸಾಮಪಿ।
ಸುಮಂತುಂ ಭಾರತಸ್ಯಾಪಿ ವೈಶಂಪಾಯನಮಾದಿಶತ್ ॥ ೭೭ ॥

ಸಾಮವೇದಕ್ಕೆ ಜೈಮಿನಿಯನ್ನೂ ಅಥರ್ವಾಂಗಿರಸ ವೇದಕ್ಕೆ ಸುಮಂತವನ್ನೂ ಭಾರತಕ್ಕೆ ಪುನಃ ವೈಶಂಪಾಯನನನ್ನೂ ಪ್ರವರ್ತಕರನ್ನಾಗಿ ಮಾಡಿದರು.

ಪ್ರವರ್ತನೇ ಮಾನುಷೇಷು ಗಂಧರ್ವಾದಿಷು ಚಾತ್ಮಜಮ್।
ನಾರದಂ ಪಾಠಯಿತ್ವಾ ಚ ದೇವಲೋಕ ಪ್ರವೃತ್ತಯೇ ॥ ೭೮ ॥

---

1. ಶುಕ್ಲ ಕೃಷ್ಣಭೇದೇನ ದ್ವಿವಿಧಯಜುಷಾಂ ಮಧ್ಯೇ ಯಜುಷಾಂ ಕೃಷ್ಣಯಜುಷಾಂ ಏಕಂ ವೈಶಂಪಾಯನಂ ಪ್ರವರ್ತಕಂ ಚಕ್ರೇ। ಯಜುಷಾಂ ಶುಕ್ಲಯಜುಷಾಂ ದ್ವಿತೀಯಂ ಸೂರ್ಯಮೇವ ಪ್ರವರ್ತಕಂ ಚಕ್ರೇ ಇತ್ಯಾವೃತ್ತ್ಯಾ ಯೋಜನಾ। ಸರ್ವತ್ರಾಪಿ ಶಾಖಾಭೇದ ಸದ್ಭಾವಾತ್ ಬಹುವಚನಂ।-ವಾದಿರಾಜೀಯ

ಆದಿಶತ್ ಸಸೃಜೇ ಸೋಽಥ ರೋಮಾಂಚಾದ್ ರೋಮಹರ್ಷಣಮ್
ತಂ ಭಾರತಪುರಾಣಾನಾಂ ಮಹಾರಾಮಾಣಸ್ಯ ಚ ॥ ೭೯ ॥

ಪಂಚರಾತ್ರಸ್ಯ ಕೃತ್ಸ್ನಸ್ಯ ಪ್ರವೃತ್ತ್ಯರ್ಥಮಥಾದಿಶತ್।
ತಮಾವಿಶತ್ ಕಾಮದೇವಃ ಕೃಷ್ಣಸೇವಾಸಮುತ್ಸುಕಃ ॥ ೮೦ ॥

ಮಗನಾದ ಶುಕಮುನಿಗೆ ಎಲ್ಲ ಶಾಸ್ತ್ರಗಳನ್ನು ಉಪದೇಶಿಸಿ ಮನುಷ್ಯರಲ್ಲಿಯೂ ಗಂಧರ್ವಾದಿಗಳಲ್ಲಿಯೂ ಅವುಗಳನ್ನು ಪ್ರಸಾರ ಮಾಡಲು ಆದೇಶಿಸಿದರು. ನಾರದರಿಗೂ ಉಪದೇಶಿಸಿ ದೇವಲೋಕದಲ್ಲಿ ಪ್ರವರ್ತಿಸಲು ಆದೇಶಿಸಿದರು. ಬಳಿಕ ರೋಮಾಂಚದಿಂದ ರೋಮಹರ್ಷಣನನ್ನು ಹುಟ್ಟಿಸಿದರು. ಅವನಿಗೆ ಭಾರತ ಪುರಾಣಗಳ ಮಹಾರಾಮಾಯಣದ ಮತ್ತು ಸಕಲ ಪಂಚರಾತ್ರಗಳ ಪ್ರವೃತ್ತಿಗೆ ಆದೇಶಿಸಿದರು. ವೇದವ್ಯಾಸರ ಸೇವೆಗೆ ಉತ್ಸುಕನಾದ ಕಾಮದೇವ ರೋಮಹರ್ಷಣನಲ್ಲಿ ಪ್ರವೇಶಿಸಿದ.

ಶುಕಮುನಿಯಿಂದ ಮೊದಲಿಗೆ ಉಪದೇಶ ಪಡೆದ ಪರೀಕ್ಷಿತ ಮನುಷ್ಯನಲ್ಲ. ಚಕ್ರವರ್ತಿ. ಆದರೂ ಮನುಷ್ಯರಲ್ಲಿ ಅಂತರ್ಭಾವ ವಿವಕ್ಷೆಯಿಂದ 'ಮನುಷ್ಯರಲ್ಲಿ ಮತ್ತು ಗಂಧರ್ವಾದಿಗಳಲ್ಲಿ ವೇದಾದಿ ಸಕಲ ಶಾಸ್ತ್ರಪ್ರವರ್ತಕರು ಶುಕಮುನಿಗಳು' ಎಂದಿದೆ. ನಾರದರು ದೇವಲೋಕದಲ್ಲಿ ಸರ್ವಶಾಸ್ತ್ರಪ್ರವರ್ತಕರು ಎಂದರೆ ಬ್ರಹ್ಮವಾಯು ಶೇಷ ಗರುಡ ರುದ್ರ ಇಂದ್ರ ಸೂರ್ಯಾದಿಗಳಿಗಿಂತ ಬೇರೆಯಾದ ದೇವತೆಗಳಿಗೆ ಉಪದೇಶಕರು ಎಂದರ್ಥ. ಈ ಬೇರೆ ದೇವತೆಗಳು ಸಾಕ್ಷಾತ್ ವೇದವ್ಯಾಸರಿಂದ ಉಪದೇಶ ಪಡೆದವರೂ ಅಲ್ಲ. ವ್ಯಾಸ ಶಿಷ್ಯರಲ್ಲಿ ಆವೇಶಗೊಂಡವರೂ ಅಲ್ಲ. ಅದರಿಂದ ನಾರದರು ಅವರಿಗೆ ಉಪದೇಶಕರೆನಿಸಿದರು.[1]

ಶುಕಮುನಿಗಳೂ ನಾರದರೂ ಕೇವಲ ಭಾರತಕ್ಕೆ ಪ್ರವರ್ತಕರು ಎನ್ನುವ ಅಭಿಪ್ರಾಯ ಜನಾರ್ದನಭಟ್ಟೀಯ ವರದರಾಜೀಯಗಳಲ್ಲಿ ಕಾಣುತ್ತದೆ.[2]

---

1. ಶುಕಂ ವೇದಾದೀನಾಂ ಪ್ರವರ್ತನಾಯಾದಿಶತ್। ಶುಕಶಿಷ್ಯ ಪರೀಕ್ಷಿದಾದಿ ಚಕ್ರವರ್ತಿನಾಂ ಮಾನುಷೇಷ್ವಂತರ್ಭಾವಾತ್ ಮನುಷ್ಯೇಷ್ವಿತ್ಯುಕ್ತಂ। ದೇವಲೋಕೇ ಸ್ವರ್ಗೇ ವಾಯುಶೇಷ ಗರುಡ ಬ್ರಹ್ಮ ಶಕ್ರ ಸೂರ್ಯಾದಿ ವ್ಯತಿರಿಕ್ತ ದೇವೇಷು ವೇದಾದಿ ಪ್ರವರ್ತನಾಯ ನಾರದಂ ಪಾಠಯಿತ್ವಾऽऽದಿಶದಿತಿ ಯೋಜನಾ। ತೇಷಾಂ ಸಾಕ್ಷಾಚ್ಛ್ರೋತೃಷು ಋಷಿಷ್ವಪ್ರವೇಶಾತ್ ಸಾಕ್ಷಾದ್ ವ್ಯಾಸಮುಖಾದಶ್ರವಣಾಚ್ಚ ತೇಷು ಪ್ರವರ್ತನಾಯ ನಾರದಸ್ಯಾಜ್ಞೇತಿ ಭಾವಃ ॥ -ವಾದಿರಾಜೀಯ
2. ಶುಕಂ ಭಾರತಸ್ಯ ಪ್ರವರ್ತನೇ ಆದಿಶದಿತಿ ಶೇಷಃ ನಾರದಂ ಭಾರತಂ ಪಾಠಯಿತ್ವಾ ಉಪದೀಶ್ಯೇತ್ಯರ್ಥಃ। ದೇವಲೋಕ ಪ್ರವೃತ್ತಯೇ ದೇವಲೋಕ ಪ್ರವೃತ್ಯರ್ಥಂ ಆದಿಶತ್ ।

ಜನಾರ್ದನೀಯ

ರೋಮಾಂಚದಿಂದ ರೋಮಹರ್ಷಣನನ್ನು ಹುಟ್ಟಿಸಿದರು ಎಂಬುದು ಪಾದಗಳಿಂದ ಶೂದ್ರ ಹುಟ್ಟಿದ ಎಂಬಂತೆ. ಅಂದರೆ, ರೋಮಹರ್ಷಣ ಹುಟ್ಟುವಾಗ ಅವನಲ್ಲಿ ಸೂತಜಾತಿಯೂ ಜೊತೆಯಾಗೇ ಹುಟ್ಟಿತ್ತು. ಅದರಿಂದ ಅವನನ್ನು ವೇದವ್ಯತಿರಿಕ್ತ ಭಾರತಾದಿ ಪೌರುಷೇಯ ಗ್ರಂಥ ಪ್ರವೃತ್ತಿಗೆ ಆದೇಶಿಸಿದರು ಎಂದು ಅರ್ಥಗ್ರಹಿಸಬೇಕು.[1]

ರೋಮಹರ್ಷಣನು ಸಕಲ ಶಾಸ್ತ್ರಕ್ಕೆ ಪ್ರವರ್ತಕ ಎನ್ನುವ ಅಭಿಪ್ರಾಯ ಜನಾರ್ದನಭಟ್ಟೀಯದಲ್ಲಿ ಕಾಣುತ್ತದೆ.[2]

ಸ ತಸ್ಮೈ ಜ್ಞಾನಮಖಿಲಂ ದದೌದ್ವೈಪಾಯನಃ ಪ್ರಭುಃ।
ಸನತ್ಕುಮಾರಪ್ರಮುಖಾಂಶ್ಚಕ್ರೇ ಯೋಗಪ್ರವರ್ತಕಾನ್ ॥ ೮೧ ॥

ಭೃಗ್ವಾದೀನ್ ಕರ್ಮ ಯೋಗಸ್ಯ ಜ್ಞಾನಂ ದತ್ವಾಮಲಂ ಶುಭಮ್।
ಜೈಮಿನಿಂ ಕರ್ಮಮೀಮಾಂಸಾಕರ್ತಾರಮಕರೋತ್ ಪ್ರಭುಃ ॥ ೮೨ ॥

ಪ್ರಭು ವೇದವ್ಯಾಸರು ರೋಮಹರ್ಷಣನಿಗೆ ಸಕಲ ಶಾಸ್ತ್ರಗಳ ಜ್ಞಾನವನ್ನೂ ನೀಡಿದರು. ನಿರ್ಮಲವಾದ ಪುಣ್ಯಕರವಾದ ಜ್ಞಾನ ನೀಡಿ ಸನತ್ಕುಮಾರ ಮುಂತಾದವರನ್ನು ಧ್ಯಾನಯೋಗ ಪ್ರವರ್ತಕರನ್ನಾಗಿಯೂ ಭೃಗು ಮುಂತಾದವರನ್ನು ಕರ್ಮಯೋಗ ಪ್ರವರ್ತಕರನ್ನಾಗಿಯೂ ಜೈಮಿನಿಯನ್ನು ಕರ್ಮಮೀಮಾಂಸಾಕರ್ತನನ್ನಾಗಿಯೂ ಮಾಡಿದರು.

ರೋಮಹರ್ಷಣನಿಗೂ ಅವನಲ್ಲಿ ಅವಿಷ್ಟನಾದ ಕಾಮದೇವನಿಗೂ ಸಕಲ ಪೌರುಷೇಯ ಗ್ರಂಥೋಪದೇಶದ ಮೂಲಕ ವೇದಾದಿ ಸಕಲ ಶಾಸ್ತ್ರಗಳ ಜ್ಞಾನವನ್ನು ವ್ಯಾಸರು ನೀಡಿದರು.[3]

ಸನತ್ಕುಮಾರರನ್ನು ಯೋಗಪ್ರವರ್ತಕರನ್ನಾಗಿ ಮಾಡಿದರು ಎಂದರೆ

---

1. ರೋಮಾಂಚಾದ್ ರೋಮಹರ್ಷಣಂ ಸಸೃಜೇ। ಸಸೃಜ ಇತ್ಯುಕ್ತ್ಯಾ ರೋಮಾಂಚಾತ್ ಸೂತಜಾತೇರಪ್ಯಸ್ಯ ಪದ್ಭ್ಯಾಂ ಶೂದ್ರಸ್ಯೇವ ಸೃಷ್ಟಿರಿತಿ ಗಮ್ಯತೇ। ಅತ ಏವ ಅಥ ಸೃಷ್ಟ್ಯ ನಂತರಂ ರೋಮಹರ್ಷಣಂ ವೇದವ್ಯತಿರಿಕ್ತ ಭಾರತಾದಿ ಪೌರುಷೇಯಗ್ರಂಥ ಪ್ರವೃತ್ತ್ಯರ್ಥಮಾದಿಶದಿತಿ ಯೋಜನಾ। -ವಾದಿರಾಜೀಯ
2. ತಂ ರೋಮಹರ್ಷಣಂ ಕೃತಸ್ನಸ್ಯ ಸರ್ವಶಾಸ್ತ್ರಸಮೂಹಸ್ಯೇತ್ಯರ್ಥಃ ಕೃತ್ಸ್ನಸ್ಯ ಪಂಚರಾತ್ರಸ್ಯೇತಿ ವಾ ಸಂಬಂಧಃ। -ಜನಾರ್ದನೀಯ
3. ಸ ತಸ್ಮೈ ಜ್ಞಾನಮಖಿಲಮಿತ್ಯುಕ್ತ್ಯಾ ಪೌರುಷೇಯ ಗ್ರಂಥೋಪದೇಶ ಮುಖೇನ ವೇದಾದಿ ಸಕಲ ಜ್ಞಾನಮಪಿ ದದಾವಿತಿ ಲಭ್ಯತೇ। ತಸ್ಮೈ ಕಾಮದೇವಾಯ। -ವಾದಿರಾಜೀಯ

ಯೋಗಶಾಸ್ತ್ರಪ್ರವರ್ತಕರನ್ನಾಗಿ ಮಾಡಿದರೆಂದರ್ಥ. ಅಥವಾ ಧ್ಯಾನಯೋಗ ಪ್ರವರ್ತಕರನ್ನಾಗಿ ಮಾಡಿದರು ಎಂದರ್ಥ ಎಂದು ವರದರಾಜೀಯ ಹೇಳುತ್ತಿದೆ.[1]

ಯೋಗಶಾಸ್ತ್ರ ಪ್ರವರ್ತಕರನ್ನಾಗಿ ಮಾಡಿದರೆಂದು ಒಂದು ಅರ್ಥವನ್ನು ಮಾತ್ರ ಜನಾರ್ದನಭಟ್ಟೀಯ ಹೇಳಿದೆ.[2]

ದೇವಮೀಮಾಂಸಕಾದ್ಯಂತಂ ಕೃತ್ವಾಪೈಲಮಥಾದಿಶತ್ ।
ಶೇಷಂ ಚ ಮಧ್ಯಕರಣೇ ಪುರಾಣಾನ್ಯಥ ಚಾಕರೋತ್ ॥ ೮೩ ॥

ದೇವಮೀಮಾಂಸೆಯ ಆದ್ಯಂತ ಭಾಗಗಳನ್ನು ತಾನೆ ರಚಿಸಿ ಮಧ್ಯಭಾಗವನ್ನು ರಚಿಸಲು ಪೈಲಮುನಿಯನ್ನೂ ಶೇಷನನ್ನೂ ಆದೇಶಿಸಿದರು. ಬಳಿಕ ಪುರಾಣಗಳನ್ನು ರಚಿಸಿದರು.

ದೇವಮೀಮಾಂಸೆ ಒಂದು ಸೂತ್ರಗ್ರಂಥ. ಸಂಕರ್ಷಕಾಂಡವೆಂದೂ ಇದಕ್ಕೆ ಇನ್ನೊಂದು ಹೆಸರು. ಅದರ ಆದಿಭಾಗವೆಂದರೆ 'ಅಥಾತೋ ದೈವೀಮೀಮಾಂಸಾ' ಎಂಬ ಮೊದಲ ಸೂತ್ರ. ಕೊನೆಯ ಭಾಗವೆಂದರೆ 'ಸ ವಿಷ್ಣುರಾಹ ಹಿ। ತಂ ಬ್ರಹ್ಮೇತ್ಯಾಚಕ್ಷತೇ॥' ಎಂಬ ಕೊನೆಯ ಎರಡು ಸೂತ್ರಗಳೆಂದು ತತ್ವಪ್ರಕಾಶಿಕಾ. ತತ್ವಪ್ರದೀಪಪ್ರಕಾರ 'ವಿಷ್ಣುರೇವ ಹಿ' 'ತಚ್ಛ್ರುತೇಃ' ಎಂಬ ಎರಡು ಸೂತ್ರಗಳು. ಭಾಷ್ಯದೀಪಿಕಾಕಾರರು ಇದನ್ನು ಪಾಠಭೇದವೆಂದಿದ್ದಾರೆ. ಈ ಆದ್ಯಂತ ಸೂತ್ರಗಳನ್ನು ವ್ಯಾಸರು ತಾವೇ ರಚಿಸಿ ಕೊಟ್ಟು ನಾಲ್ಕು ಅಧ್ಯಾಯಗಳ ನಡುವಿನ ಭಾಗವನ್ನು ರಚಿಸಲು ತಮ್ಮ ಶಿಷ್ಯರಾದ ಪೈಲಮುನಿಯನ್ನೂ ಅವರಲ್ಲಿ ಆವಿಷ್ಟರಾದ ಶೇಷದೇವನನ್ನೂ ಆಜ್ಞಾಪಿಸಿದರು. ಇದು ಉಪಲಕ್ಷಣ. ಹಿಂದೆ ವೈಶಂಪಾಯನ ಜೈಮಿನಿ ಸುಮಂತು ಮುಂತಾದ ಮುನಿಗಳಿಗೆ ಆದೇಶ ನೀಡುವಾಗಲೂ ಅವರೊಳಗೆ ಆವಿಷ್ಟರಾದ ದೇವತೆಗಳಿಗೂ ಆದೇಶ ನೀಡಿದ್ದರೆಂದಿಟ್ಟುಕೊಳ್ಳಬೇಕು ಎನ್ನುತ್ತದೆ ಜನಾರ್ದನಭಟ್ಟೀಯ. ಬ್ರಹ್ಮಮೀಮಾಂಸಾಕರ್ತ ಸ್ವಯಂ ವ್ಯಾಸರೇ ಎಂಬುದು ಪ್ರಸಿದ್ಧ. ಜೈಮಿನಿಯ ಕರ್ಮಮೀಮಾಂಸಾ ಪೈಲನ ದೇವಮೀಮಾಂಸಾ ಮತ್ತು ವ್ಯಾಸರ ಬ್ರಹ್ಮಮೀಮಾಂಸಾ ಮೂರೂ

---

1. ಸನತ್ಕುಮಾರಾದೀನ್ ಯೋಗಶಾಸ್ತ್ರ ಪ್ರವರ್ತಕಾಂಶ್ಚಕ್ರೇ ಇತ್ಯರ್ಥಃ। ಧ್ಯಾನಯೋಗಪ್ರವರ್ತಕಾನಿತಿ ವಾ। -ವರದರಾಜೀಯ
2. ಸನತ್ಕುಮಾರಃ ಪ್ರಮುಖೋ ಯೇಷಾಂ ತೇ ಸನಕ ಸನಂದನಾದಯಃ ತಾನ್ ಯೋಗಶಾಸ್ತ್ರ ಪ್ರವರ್ತಕಾನ್ ಚಕ್ರೇ। -ಜನಾರ್ದನೀಯ

ಪ್ರಮಾಣ ಗ್ರಂಥಗಳು. ವಿಶಿಷ್ಟಾದ್ವೈತಿಗಳು ಮೂರನ್ನೂ ಸೇರಿಸಿ ಒಂದು ಗ್ರಂಥವೆಂದು ಪರಿಗಣಿಸುತ್ತಾರೆ. ಜೈಮಿನಿಯ ಕರ್ಮಮೀಮಾಂಸಾ ಪ್ರಮಾಣವೆ ಆದರೂ ಅದರ ಪ್ರಚಲಿತ ವ್ಯಾಖ್ಯಾನಗಳು ಯಾವುವೂ ಪ್ರಮಾಣವಲ್ಲ.

ಸಾತ್ವಿಕ ರಾಜಸ ತಾಮಸ ಪುರಾಣಗಳು

ಶೈವಾನ್ ಪಾಶುಪತಾಚ್ಚಕ್ರೇ ಸಂಶಯಾರ್ಥಂ ಸುರದ್ವಿಷಾಮ್ ।
ವೈಷ್ಣವಾನ್ ಪಂಚರಾತ್ರಾಚ್ಚ ಯಥಾರ್ಥಜ್ಞಾನಸಿದ್ಧಯೇ ॥ ೮೪ ॥

ದೈತ್ಯರಿಗೆ ತತ್ವವಿಷಯದಲ್ಲಿ ಸಂಶಯ ಭ್ರಾಂತಿಗಳನ್ನು ಉಂಟುಮಾಡುವುದಕ್ಕಾಗಿ ಪಾಶುಪತಾಗಮದಿಂದ ಶಿವಸರ್ವೋತ್ತಮತ್ವವನ್ನು ಹೇಳುವ ಪುರಾಣ ಗ್ರಂಥ ಸಂಗ್ರಹಗಳನ್ನು ವ್ಯಾಸರು ಮಾಡಿದರು. ಸಜ್ಜನರಿಗೆ ಯಥಾರ್ಥ ಜ್ಞಾನಸಿದ್ಧಿಗಾಗಿ ಪಂಚರಾತ್ರಾಗಮದಿಂದ ವಿಷ್ಣು ಸರ್ವೋತ್ತಮತ್ವವನ್ನು ಹೇಳುವ ಪುರಾಣ ಗ್ರಂಥ ಸಂಗ್ರಹಗಳನ್ನು ಮಾಡಿದರು.

'ಪುರಾಣ ಗ್ರಂಥಗಳನ್ನು ಮಾಡಿದರು' ಎನ್ನದೆ ಗ್ರಂಥ 'ಸಂಗ್ರಹ'ಗಳನ್ನು ಮಾಡಿದರು ಎನ್ನುವುದು ಹಿಂದಿನ ಕಲ್ಪಗಳಲ್ಲಿದ್ದ ಪುರಾಣಗಳನ್ನೇ ಶಬ್ದಗಳಲ್ಲಿ ಮಾತ್ರ ವ್ಯತ್ಯಾಸ ಮಾಡಿ ಸಂಗ್ರಹಿಸಿದರು ಎಂಬ ಅಭಿಪ್ರಾಯದಿಂದ ಏಕೆಂದರೆ ವಿಷ್ಣುತತ್ವನಿರ್ಣಯದಲ್ಲಿ ಶ್ರೀಮದಾಚಾರ್ಯರೆ–

ಪುರುಣಾನಿ ತದರ್ಥಾನಿ ಸರ್ಗೇ ಸರ್ಗೇಽನ್ಯಥೈವ ತು।
ಕ್ರಿಯಂತೇಽತಸ್ತ್ವನಿತ್ಯಾನಿ।

ಎಂದು ಇದನ್ನೇ ಹೇಳಿದ್ದಾರೆ ಎನ್ನುತ್ತಿದೆ ಶ್ರೀಸತ್ಯಾಭಿನವತೀರ್ಥರ ದುರ್ಘಟಾರ್ಥ ಪ್ರಕಾಶಿಕೆ. ಸರ್ವ ಪ್ರಮೇಯಗಳನ್ನು ಸಂಗ್ರಹಿಸುವ ಕೃತಿಗಳಾದ್ದರಿಂದ 'ಸಂಗ್ರಹಾನ್' ಎಂದಿದ್ದಾರೆ ಎನ್ನುತ್ತದೆ ಭಾವಪ್ರಕಾಶಿಕೆ.[1] ಪಾಶುಪತಾಗ ಮೂಲಕವಾಗಿದ್ದು ಶಿವಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಪುರಾಣಗಳೆಂದರೆ ಮತ್ಸ್ಯ ಕೂರ್ಮ ಲಿಂಗ ಶಿವ ಸ್ಕಂದ ಅಗ್ನಿ ಎಂಬ ಆರು

---

1. ಪುರಾಣಗ್ರಂಥ ಸಂಗ್ರಹಾನಿತ್ಯತ್ರ ಪುರಾಣಗ್ರಂಥಾನಿತಿ ವಕ್ತವ್ಯೇ ಪುರಾಣಗ್ರಂಥ ಸಂಗ್ರಹಾನಿತ್ಯುಕ್ತ್ಯಾ ಪೂರ್ವಂ ವಿದ್ಯಮಾನಾನಾಂ ಪುರಾಣಾನಾಂ ಅನ್ಯಥಾಕರಣಮೇವ। ನ ತ್ವನ್ಯಪುರಾಣಕರಣಮಿತಿ ಸೂಚಯತಿ। ಪುರಾಣಾನಾಮನ್ಯಕರಣಮೇವ, ನ ತ್ವನ್ಯಕರಣಮಿತ್ಯೇತತ್ ಪ್ರಮೇಯಂ,
ಪುರಾಣಾನಿ ತದಾರ್ಥನಿ ಸರ್ಗೇ ಸರ್ಗೇನ್ಯಥೈವ ತು
ಕ್ರಿಯಂತೇಽತಸ್ತ್ವನಿತ್ಯಾನಿ...। –ದುರ್ಘಟಾರ್ಥ ಪ್ರಕಾಶಿಕಾ
ಇತ್ಯಾದಿ ಪ್ರಮಾಣಸಿದ್ಧಂ॥
ಸರ್ವಸಂಗ್ರಾಹಕತ್ವಾತ್ ಸಂಗ್ರಹಾನಿತ್ಯುಕ್ತಂ। –ವಾದಿರಾಜೀಯ

ತಾಮಸ ಪುರಾಣಗಳು. ಪಂಚರಾತ್ರಾಗಮ ಮೂಲಕವಾಗಿದ್ದು ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಪುರಾಣಗಳು. ಹಿಂದೆ ಹೇಳಿದ 'ಭಾಗವತ' ಪುರಾಣಗಳು-ವಿಷ್ಣು ನಾರದ ಭಾಗವತ ಗರುಡ ಪದ್ಮ ವರಾಹ ಎಂಬ ಆರು ಸಾತ್ವಿಕ ಪುರಾಣಗಳು. ಮುಂದಿನ ಶ್ಲೋಕದಲ್ಲಿ ಹೇಳುವ ಬ್ರಾಹ್ಮ ಪುರಾಣಗಳೆಂದರೆ ಬ್ರಹ್ಮ ಬ್ರಹ್ಮಾಂಡ ಬ್ರಹ್ಮವೈವರ್ತ ಮಾರ್ಕಂಡೇಯ ಭವಿಷ್ಯ ವಾಮನ ಎಂಬ ಆರು ರಾಜಸಪುರಾಣಗಳು. ಹೀಗೆ ಪುರಾಣಗಳ ಮೂರು ವಿಭಾಗಗಳನ್ನು ಮತ್ಸ್ಯ (53.65) ಪದ್ಮ ಮುಂತಾದ ಪುರಾಣಗಳಲ್ಲಿ ಹೇಳಿದೆ. ಹದಿನೆಂಟು ಪುರಾಣಗಳನ್ನು ವೇದವ್ಯಾಸರೇ ರಚಿಸಿದರೆಂದು ಶಿವಪುರಾಣ ರೇವಾಖಂಡ ಹೇಳುತ್ತದೆ- ಅಷ್ಟಾದಶ ಪುರಾಣಾನಾಂ ವಕ್ತಾ ಸತ್ಯವತೀಸುತಃ॥ ದೇವೀ ಭಾಗವತ ಮಹಾಪುರಾಣಗಳಲ್ಲಿ ಸೇರಿಲ್ಲ. ಅದು ಒಂದು ಉಪಪುರಾಣ. ಉಪಪುರಾಣಗಳೂ ಹದಿನೆಂಟು ಎನ್ನುತ್ತಾರೆ. ಆದರೆ ಇನ್ನೂ ಹೆಚ್ಚು ಉಪಪುರಾಣಗಳು ಉಪಲಬ್ಧವಿವೆ. ಅವುಗಳ ಪರಿಗಣನೆಯೂ ಬೇರೆ ಬೇರೆ ರೀತಿ ಇವೆ. ಇದು ಒಂದು ಪರಿಗಣನೆ-

ಗಣಪತಿ, ನಾರದ, ನರಸಿಂಹ, ಕಪಿಲ, ನಂದಿ, ವಿಷ್ಣುರಹಸ್ಯ, ದುರ್ವಾಸ, ಅಂಬಿಕಾ, ಕಾಲಿಕಾ, ಮಾರೀಚ, ಮಹೇಶ್ವರ, ಸೌರ, ಪರಾಶರ, ಮುದ್ಗಲ, ಸನತ್ಕುಮಾರ, ಕುಮಾರ, ಭೃಗು, ಕಲಿ.

ಬ್ರಾಹ್ಮಾಂಶ್ಚ ವೇದತಶ್ಚಕ್ರೇ ಪುರಾಣಗ್ರಂಥಸಂಗ್ರಹಾನ್ ।
ಏವಂ ಜ್ಞಾನಂ ಪುನಃ ಪ್ರಾಪುರ್ದೇವಾಶ್ಚರ್ಷಯಸ್ತಥಾ ॥ ೮೫ ॥

ವೇದದಿಂದ ಬ್ರಾಹ್ಮಪುರಾಣ ಗ್ರಂಥ ಸಂಗ್ರಹಗಳನ್ನು ರಚಿಸಿದರು. ಹೀಗೆ ದೇವತೆಗಳೂ ಋಷಿಗಳೂ ಪುನಃ ಜ್ಞಾನವನ್ನು ಪಡೆದರು.

'ಬ್ರಾಹ್ಮ ಪುರಾಣ'ಗಳೆಂದರೆ 'ಬ್ರಹ್ಮ' ವೇದ. ವೇದದಲ್ಲಿ ಅಲ್ಲಲ್ಲಿ ಅಪಾತತಃ ಕಾಣುವ ಚತುರ್ಮುಖ ಅಗ್ನಿ ದುರ್ಗೆ ಸರಸ್ವತಿಯರ ಸರ್ವೋತ್ತಮತ್ವವನ್ನು ವರ್ಣಿಸುವ ರಾಜಸಪುರಾಣಗಳು. ಅವುಗಳನ್ನು ವೇದದಿಂದ ಎಂದರೆ ವೇದದ ಆಪಾತಾರ್ಥದಿಂದ ರಚಿಸಿದರು.[1]

'ಪುನಃ ಜ್ಞಾನವನ್ನು ಪಡೆದರು' ಎಂದರೆ ಈ ವೈವಸ್ವತ ಮನ್ವಂತರದಲ್ಲಿ ಹಿಂದೆ ಮೂರನೆ ಏಳನೇ ಹದಿನಾರನೆ ಮತ್ತು ಇಪ್ಪತ್ತೈದನೆ ದ್ವಾಪರಗಳಲ್ಲಿ ಹೇಗೋ

---

1. ಯಥಾ ವೇದಮಧ್ಯಸ್ಥಿತ ಹಿರಣ್ಯಗರ್ಭಾಗ್ನೀಂದ್ರಾದಿ ಸೂಕ್ತೇಷು ಆಪಾತತಃ ತಸ್ಯತಸ್ಯೋತ್ಕರ್ಷಃ ಪ್ರತೀಯತೇ ತಥಾ ಕ್ವಚಿದ್ ಭಾಗೇ ಬ್ರಹ್ಮಣಃ ಕ್ವಚಿದಗ್ನೇಃ ಕ್ವಚಿದಿಂದ್ರಾದೇಃ ಕ್ವಚಿಲ್ಲಕ್ಷ್ಮ್ಯಾ ಸರಸ್ವತ್ಯಾದೇಶ್ಚ ಪರತ್ವಂ ಪ್ರತಿಪಾದಯತಃ ಪುರಾಣಗ್ರಂಥ ಸಂಗ್ರಹಾನ್ ಚಕ್ರುರಿತಿ ಭಾವಃ॥ -ವಾದಿರಾಜೀಯ

ಹಾಗೆ ಈ ಇಪ್ಪತ್ತೆಂಟನೆ ದ್ವಾಪರದಲ್ಲಿಯೂ ಇನ್ನೊಮ್ಮೆ ಶ್ರೀಹರಿಯ ಸಾಕ್ಷಾದವತಾರರಾದ ವ್ಯಾಸರಿಂದ ಜ್ಞಾನವನ್ನು ಪಡೆದರು ಎಂದರ್ಥ.

ಸನತ್ಕುಮಾರಪ್ರಮುಖಾ ಯೋಗಿನೋ ಮಾನುಷಾಸ್ತಥಾ।
ಕೃಷ್ಣದ್ವೈಪಾಯನಾತ್ ಪ್ರಾಪ್ಯ ಜ್ಞಾನಂ ತೇ ಮುಮುದುಃ ಸದಾ ॥ ೮೬ ॥

ಸನತ್ಕುಮಾರ ಮುಂತಾದ ಯೋಗಿಗಳೂ ಮಾನವರೂ ಪುನಃ ಜ್ಞಾನವನ್ನು ಪಡೆದರು. ಅವರೆಲ್ಲರೂ ವೇದವ್ಯಾಸರಿಂದ ಜ್ಞಾನವನ್ನು ಪಡೆದು ಸದಾ ಸುಖಿಗಳಾದರು.

ಸಮಸ್ತವಿಜ್ಞಾನ ಗಭಸ್ತಿಚಕ್ರಂ
ವಿತಾಯ ವಿಜ್ಞಾನಮಹಾದಿವಾಕರಃ।
ನಿರಸ್ಯ ಚಾಜ್ಞಾನತಮೋ ಜಗತ್ತಂ
ಪ್ರಭಾಸತೇ ಭಾನುರಿವಾವಭಾಸಯನ್ ॥ ೮೭ ॥

ಜ್ಞಾನಮಯ ಮಹಾಸೂರ್ಯರಾದ ವೇದವ್ಯಾಸರು ಪೂರ್ಣಜ್ಞಾನ ರೂಪದ ಪ್ರಕಾಶ ಪುಂಜವನ್ನು ಎಲ್ಲೆಡೆ ಹರಡಿ ಜಗತ್ತಿನಲ್ಲಿ ವ್ಯಾಪಿಸಿದ ಅಜ್ಞಾನದ ಕತ್ತಲನ್ನು ಓಡಿಸಿ ಸೂರ್ಯನಂತೆ ಎಲ್ಲವನ್ನೂ ಬೆಳಗಿಸುತ್ತ ಹೊಳೆಯುತ್ತಾರೆ.

ಚತುರ್ಮುಖೇಶಾನ ಸುರೇಂದ್ರಪೂರ್ವಕೈಃ
ಸದಾ ಸುರೈಃ ಸೇವಿತಪಾದಪಲ್ಲವಃ।
ಪ್ರಕಾಶಯಂಸ್ತೇಷು ಸದಾತ್ಮಗುಹ್ಯಂ
ಮುಮೋದ ಮೇರೌ ಚ ತಥಾ ಬದರ್ಯಾಮ್ ॥ ೮೮ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ
ಶ್ರೀವೇದವ್ಯಾಸಾವತಾರೋ ನಾಮ ದಶಮೋಧ್ಯಾಯಃ ।

ಬ್ರಹ್ಮರುದ್ರ ದೇವೇಂದ್ರ ಮುಂತಾದ ದೇವತೆಗಳಿಂದ ಸೇವಿತವಾದ ಎಳೆ ಚಿಗುರಿನಂಥ ಪಾದಗಳುಳ್ಳ ವೇದವ್ಯಾಸರು ಆ ದೇವತೆಗಳಲ್ಲಿ ತನ್ನ ರಹಸ್ಯವನ್ನು ಸದಾ ಪ್ರಕಟಪಡಿಸುತ್ತ ಮೇರುಪರ್ವತದಲ್ಲಿಯೂ ಬದರೀಕ್ಷೇತ್ರದಲ್ಲಿಯೂ ಆನಂದಿಸಿದರು.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ
ಶ್ರೀವೇದವ್ಯಾಸಾವತಾರವೆಂಬ ಹತ್ತನೆ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದಾಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೧

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಭೂಪಾ ಯತ್ರ ಪುರೂರವಃ ಪ್ರಭೃತಯೋ ಜಾತಾ ವಿಧೋರನ್ವಯೇ
ಯದ್ವಾದ್ಯಾ ಭರತಾದಯಃ ಕುರುಮುಖಾ ಭೀಷ್ಮಾಂಬಿಕೇಯಾದಯಃ।
ಭೂ ಭಾರಕ್ಷಯಕಾಂಕ್ಷಿಭಿಃ ಸುರವರೈರಭ್ಯರ್ಥಿತಃ ಶ್ರೀಪತಿಃ
ತತ್ರಾವಿರ್ಭವಿತುಂ ಸಮಂ ಸುರವರೈರಿಚ್ಛನ್ ಹರಿಃ ಪಾತು ಮಾಂ ॥ ೧೧ ॥

ಚಂದ್ರವಂಶದಲ್ಲಿ ಪುರೂರವಾದಿಗಳು ಯದು ಮುಂತಾದವರು ಭರತಾದಿಗಳು ಕುರು ಮುಂತಾದವರು ಮತ್ತು ಭೀಷ್ಮ ಧೃತರಾಷ್ಟ್ರಾದಿಗಳು ರಾಜರು ಹುಟ್ಟಿದರು. ಭೂ ಭಾರ ಕಳೆಯ ಬಯಸಿದ ದೇವಶ್ರೇಷ್ಠರುಗಳಿಂದ ಪ್ರಾರ್ಥಿತನಾದ ಶ್ರೀಪತಿ ದೇವಶ್ರೇಷ್ಠರೊಂದಿಗೆ ಅದೇ ವಂಶದಲ್ಲಿ ಆವಿರ್ಭವಿಸಲು ಬಯಸಿದ. ಅಂಥ ಶ್ರೀಹರಿ ನನ್ನನ್ನು ಕಾಪಾಡಲಿ.

ಅಧ್ಯಾಯ ೧೧

ಅಂಶಾವತರಣ

ಚಂದ್ರವಂಶ

॥ ಹರಿಃ ಓಂ ॥

ಶಶಾಂಕ ಪುತ್ರಾದಭವತ್ಪುರೂರವಾಸ್ತಸ್ಯಾಯುರಾಯೋರ್ನಹುಷೋ ಯಯಾತಿಃ।
ತಸ್ಯಾಸ ಪತ್ನೀಯುಗಲಂ ಸುತಾಶ್ಚ ಪಂಚಾಭವನ್ ವಿಷ್ಣುಪದೈಕಭಕ್ತಾಃ ॥ ೧ ॥

ಚಂದ್ರ ಪುತ್ರನಾದ ಬುಧನಿಂದ ಪುರೂರವ ಹುಟ್ಟಿದ. ಅವನ ಮಗ ಆಯು. ಆಯುವಿನ ಮಗ ನಹುಷ. ನಹುಷಪುತ್ರ ಯಯಾತಿ. ಯಯಾತಿಗೆ ಇಬ್ಬರು ಪತ್ನಿಯರು. ವಿಷ್ಣುಪಾದಗಳಲ್ಲಿ ಒಳ್ಳೆಯ ಭಕ್ತರಾದ ಐದು ಮಂದಿ ಮಕ್ಕಳು ಇದ್ದರು.

ಶ್ರೀಕೃಷ್ಣನ ಮತ್ತು ಪಾಂಡವರ ಕಥೆಯನ್ನು ಹೇಳುವುದಕ್ಕೆ ಮೊದಲಿಗೆ ಚಂದ್ರವಂಶವರ್ಣನೆ. ಬ್ರಹ್ಮಪುತ್ರನಾದ ಅತ್ರಿಮುನಿಯ ಪುತ್ರ ಚಂದ್ರ. ಚಂದ್ರನ ಮಗ ಬುಧ. ಬ್ರಹ್ಮಪುತ್ರ ಮರೀಚಿಯ ಪುತ್ರ ಕಶ್ಯಪ. ಕಶ್ಯಪಪುತ್ರ ಸೂರ್ಯ. ಸೂರ್ಯಪುತ್ರ ವೈವಸ್ವತಮನು. ಅವನ ಮಗ ಇಕ್ಷ್ವಾಕು. ಇಕ್ಷ್ವಾಕು ಹುಟ್ಟುವುದಕ್ಕೆ ಮೊದಲು ಸುದ್ಯುಮ್ನನೆಂಬ ಮಗ ಹುಟ್ಟಿದ್ದ. ಅವನು ಇಲಾವೃತ ಖಂಡವನ್ನು ಪ್ರವೇಶಿಸಿದಾಗ ಹೆಣ್ಣಾದ. ಆದರೆ ಶಿವನ ವರದಿಂದ ಒಂದು ತಿಂಗಳು ಹೆಣ್ಣಾಗಿರುತ್ತಿದ್ದ. ಒಂದು ತಿಂಗಳು ಗಂಡಾಗಿರುತ್ತಿದ್ದ. ಗಂಡಾಗಿದ್ದಾಗ ಅವನಿಂದ ಸೂರ್ಯವಂಶ ಮುಂದುವರಿಯಿತು. ಹೆಣ್ಣಾಗಿದ್ದಾಗ ಅವನಲ್ಲಿ ಬುಧನಿಂದ ಪುರೂರವ ಹುಟ್ಟಿದ. ಆ ಪುರೂರವನಿಂದ ಚಂದ್ರವಂಶ ಬೆಳೆಯಿತು. ಹೀಗೆ ಎರಡು ವಂಶವೂ ವೈವಸ್ವತ ಮನುವಿನ ಸಮಕಾಲಿಕವೇ ಆಗಿತ್ತು. ಸೂರ್ಯವಂಶ ನಿಂತ ಬಳಿಕ ಚಂದ್ರವಂಶದ ಆರಂಭವೆಂದೇನಲ್ಲ.

ಯದುಂ ಚ ತುರ್ವಸುಂ ಚೈವ ದೇವಯಾನೀ ವ್ಯಜಾಯತ।
ದ್ರುಹ್ಯಂ ಚಾನುಂ ಚ ಪೂರುಂ ಚ ಶರ್ಮಿಷ್ಠಾ ವಾರ್ಷಪರ್ವಣೀ ॥ ೨ ॥

ಯದುವನ್ನೂ ತುರ್ವಸುವನ್ನೂ ದೇವಯಾನಿ ಹಡೆದಳು. ದ್ರುಹ್ಯ, ಅನು ಮತ್ತು ಪೂರು ಇವರನ್ನು ವೃಷಪರ್ವನ ಮಗಳಾದ ಶರ್ಮಿಷ್ಠೆ ಹಡೆದಳು.

ದೇವಯಾನಿ ಶುಕ್ರಾಚಾರ್ಯರಿಗೆ ಪ್ರಿಯವ್ರತರಾಜನ ಮಗಳಾದ

ಊರ್ಜಸ್ವತಿಯಲ್ಲಿ ಜನಿಸಿದ ಪುತ್ರಿ. ಅವಳು ತನ್ನ ಗೆಳತಿಯಾದ ರಾಕ್ಷಸರಾಜ ವೃಷಪರ್ವನ ಮಗಳಾದ ಶರ್ಮಿಷ್ಠೆಯೊಡನೆ ಜಲಕೇಳಿಯಾಡಿದಳು. ಇಬ್ಬರೂ ಮೇಲೆ ಬಂದರು. ಶರ್ಮಿಷ್ಠೆ ತಿಳಿಯದೆ ದೇವಯಾನಿಯ ಸೀರೆ ಉಟ್ಟಳು. ಅದಕ್ಕೆ ದೇವಯಾನಿ ಜಗಳವಾಡಿದಳು. ಶರ್ಮಿಷ್ಠೆ ಅವಳನ್ನು ಬಾವಿಗೆ ತಳ್ಳಿ ಹೋದಳು. ಯಯಾತಿ ಬೇಟೆಯಾಡುತ್ತ ಆ ದಾರಿಯಾಗಿ ಬಂದು ದೇವಯಾನಿಯನ್ನು ಎತ್ತಿದ. ಬಳಿಕ ಅವಳನ್ನೇ ವಿವಾಹವಾದ. ಶುಕ್ರಾಚಾರ್ಯರು ಕೋಪದಿಂದ ಶರ್ಮಿಷ್ಠೆಯನ್ನು ದೇವಯಾನಿಯ ದಾಸಿಯಾಗುವಂತೆ ಮಾಡಿದರು. ಹೀಗಾಗಿ ಶರ್ಮಿಷ್ಠೆ ದೇವಯಾನಿಗೆ ತಿಳಿಯದಂತೆ ಯಯಾತಿಯಿಂದ ಮಕ್ಕಳನ್ನುಪಡೆದಳು. ಅದರಿಂದ ಶರ್ಮಿಷ್ಠೆ ಯಯಾತಿಯ ಪತ್ನಿ ಎನ್ನುವುದು ಪತ್ನಿತುಲ್ಯಳೆಂಬ ಅಭಿಪ್ರಾಯದಿಂದ. ಪಟ್ಟದ ರಾಣಿ ದೇವಯಾನಿಯೆ.

ಯದೋರ್ವಂಶೇ ಚಕ್ರವರ್ತೀ ಕಾರ್ತವೀರ್ಯಾರ್ಜುನೋಽಭವತ್।
ವಿಷ್ಣೋರ್ದತಾತ್ತ್ರೇಯನಾಮ್ನಃ ಪ್ರಸಾದಾದ್ ಯೋಗವೀರ್ಯವಾನ್ ॥ ೩ ॥

ಯದುವಿನ ವಂಶದಲ್ಲಿ ಕಾರ್ತವೀರ್ಯಾರ್ಜುನನೆಂಬ ಚಕ್ರವರ್ತಿ ಜನಿಸಿದ. ಅವನು ದತಾತ್ತ್ರೇಯನಾಮಕ ವಿಷ್ಣುವಿನ ಅನುಗ್ರಹದಿಂದ ಯೋಗಬಲ ಉಳ್ಳವನಾಗಿದ್ದ.

ಕೃತವೀರ್ಯನ ಮಗನಾದ್ದರಿಂದ ಕಾರ್ತವೀರ್ಯನೆನಿಸಿದ. ಹೈಹಯ ಎಂದು ಇವನಿಗೇ ಇನ್ನೊಂದು ಹೆಸರು.

ತಸ್ಯಾನ್ವಾಯೇ ಯದವೋ ಬಭೂವುರ್ವಿಷ್ಣುಸಂಶ್ರಯಾಃ।
ಪೂರೋರ್ವಂಶೇ ತು ಭರತಶ್ಚಕ್ರವರ್ತೀ ಹರಿಪ್ರಿಯಃ ॥ ೪ ॥

ಕಾರ್ತವೀರ್ಯಾರ್ಜುನನ ವಂಶದಲ್ಲಿ ವಿಷ್ಣುಭಕ್ತರಾದ ಯಾದವರು ಜನಿಸಿದರು. ಪೂರುವಂಶದಲ್ಲಿ ಹರಿಪ್ರಿಯನಾದ ಭರತ ಚಕ್ರವರ್ತಿ ಜನಿಸಿದ.

ದುಷ್ಮಂತ ಶಕುಂತಲೆಯರ ಪುತ್ರ ಭರತ ಚಕ್ರವರ್ತಿ, ದೌಷ್ಮಂತಿ ಎಂದು ಪ್ರಸಿದ್ಧ.

ತದ್ವಂಶಜಃ ಕುರುರ್ನಾಮ ಪ್ರತೀಪೋಽಭೂತ್ ತದನ್ವಯೇ।
ಪ್ರತೀಪಸ್ಯಾಭವನ್ ಪುತ್ರಾಸ್ತ್ರಯಸ್ತ್ರೇತಾಗ್ನಿವರ್ಚಸಃ ॥ ೫ ॥

ಭರತನ ವಂಶದಲ್ಲಿ ಜನಿಸಿದ ಕುರು. ಅವನ ವಂಶದಲ್ಲಿ ಪ್ರತೀಪ ಜನಿಸಿದ. ಅವನಿಗೆ ಮೂರು ಅಗ್ನಿಗಳಂತೆ ವರ್ಚಸ್ಸುಳ್ಳ ಮೂರು ಮಂದಿ ಮಕ್ಕಳು ಹುಟ್ಟಿದರು.

ಭರತವಂಶದವರಾದ್ದರಿಂದ ಭಾರತರೆಂದೇ ಪಾಂಡವರನ್ನು ಕರೆಯಲಾಗಿದೆ. ಕೌರವರೆಂಬ ಹೆಸರು ಕುರುವಿನಿಂದ ಬಂದಿತ್ತು. ಕುರುವಿನ ಅನಂತರ ಕ್ರಮವಾಗಿ ವಿದೂರಥ ಅನಶ್ವಾನ್ ಪರೀಕ್ಷಿತ ಭೀಮಸೇನರು ರಾಜರಾದರು. ಭೀಮಸೇನ ರಾಜನ ಮಗನೆ ಪ್ರತೀಪ. ಪರಿಶ್ರವ ಎಂದು ಇವನಿಗೆ ಇನ್ನೊಂದು ಹೆಸರು. ಪ್ರತೀಪರಾಜನಿಗೆ ಶೈಬ್ಯಾ ಸುನಂದಾ ಇಬ್ಬರು ಪತ್ನಿಯರು. ಅವರಲ್ಲಿ ಮೂರು ಮಕ್ಕಳು. ಆವಹವನೀಯ ಗಾರ್ಹಪತ್ಯ ದಕ್ಷಿಣಾಗ್ನಿ ಎಂಬ ಹೆಸರಿನ ಮೂರು ಅಗ್ನಿಗಳಂತೆ ವರ್ಚಸ್ವಿಗಳಾಗಿದ್ದರು.

ದೇವಾಪಿರಥ ಬಾಹ್ಲೀಕೋ ಗುಣಜ್ಯೇಷ್ಠಶ್ಚ ಶಂತನುಃ।
ತ್ವಗ್ದೋಷಯುಕ್ತೋ ದೇವಾಪಿರ್ಜಗಾಮ ತಪಸೇ ವನಮ್ ॥ ೬ ॥

ದೇವಾಪಿ, ಬಾಹ್ಲೀಕ ಮತ್ತು ಗುಣದಲ್ಲಿ ಶ್ರೇಷ್ಠನಾದ ಶಂತನು ಇವರೇ ಆ ಮೂರು ಮಕ್ಕಳು. ಇವರಲ್ಲಿ ದೇವಾಪಿ ಚರ್ಮರೋಗಯುಕ್ತನಾದ್ದರಿಂದ ತಪಸ್ಸಿಗಾಗಿ ಕಾಡಿಗೆ ಹೋದ.

ದೇವಾಪಿ ಹಿರಿಯನಾದರೂ ಗುಣಶಾಲಿಯಾದರೂ ಪ್ರಜೆಗಳು ಒಪ್ಪದಿದ್ದುದರಿಂದ ರಾಜ್ಯವಾಳಲಿಲ್ಲ. ಏಕೆಂದರೆ ಬಾಲ್ಯದಲ್ಲಿಯೇ ಚರ್ಮರೋಗಯುಕ್ತನಾಗಿದ್ದು ರಾಜನೆನಿಸಲು ಅನರ್ಹನಾಗಿದ್ದ. ತಪಸ್ಸಿಗಾಗಿ ಬದರಿಕಾಶ್ರಮದ ಕಲಾಪ ಗ್ರಾಮಕ್ಕೆ ಹೋದ. ಶಂತನು ಕನಿಷ್ಠನಾದರೂ ಗುಣದಿಂದ ಶ್ರೇಷ್ಠನಾಗಿದ್ದ. ವರುಣನ ಅವತಾರ. ಪಿತೃವಂಶವನ್ನು ಮುಂದುವರಿಸಿದ.

ವಿಷ್ಣೋಃ ಪ್ರಸಾದಾತ್ ಸ ಕೃತೇ ಯುಗೇ ರಾಜಾ ಭವಿಷ್ಯತಿ।
ಪುತ್ರಿಕಾಪುತ್ರತಾಂ ಯಾತೋ ಬಾಹ್ಲೀಕೋ ರಾಜಸತ್ತಮಃ ॥ ೭ ॥

ದೇವಾಪಿ ವಿಷ್ಣುವಿನ ಅನುಗ್ರಹದಿಂದ ಮುಂದೆ ಕೃತಯುಗದಲ್ಲಿ ರಾಜನಾಗಲಿದ್ದಾನೆ. ಬಾಹ್ಲೀಕ ರಾಜಶ್ರೇಷ್ಠನಾದರೂ ಪುತ್ರಿಕಾಪುತ್ರನೆನಿಸಿದ.

ವಿಷ್ಣುವಿನ ಅನುಗ್ರಹದಿಂದ ಚರ್ಮರೋಗ ಮುಕ್ತನಾಗಿ ರಾಜನಾಗುತ್ತಾನೆ ದೇವಾಪಿ.

'ಅಪುತ್ರೇಣ ಮಯಾ ಕನ್ಯಾ ದೀಯತೇ ತವ ಭೋ ವರ।

ಏತಸ್ಯಾಂ ಜಾಯತೇ ಪುತ್ರಃ ಸ ಮೇ ಪುತ್ರೋ ಭವಿಷ್ಯತಿ ॥'

'ವರನೆ, ಪುತ್ರನಿಲ್ಲದ ನಾನು ನಿನಗೆ ಪುತ್ರಿಯನ್ನು ನೀಡುತ್ತಿದ್ದೇನೆ. ಇವಳಲ್ಲಿ ಜನಿಸುವ ನಿನ್ನ ಪುತ್ರ ನನಗೆ ಪುತ್ರನೆನಿಸಲಿ' ಎಂದು ಒಪ್ಪಂದದಿಂದ ಜನಿಸುವ

ಪುತ್ರ ಕನ್ಯಾಪಿತನಿಗೆ ಪುತ್ರಿಕಾ ಪುತ್ರನೆನಿಸುತ್ತಾನೆ. ಬಾಹ್ಲೀಕ ದೇಶದ ರಾಜ ಹೀಗೆ ಬಾಹ್ಲೀಕನನ್ನು ತನ್ನ ಪುತ್ರನನ್ನಾಗಿ ಮಾಡಿಕೊಂಡ. ಅದ್ದರಿಂದ ಆತ ಚಂದ್ರವಂಶದ ರಾಜನಾಗಲಿಲ್ಲ.

ಹಿರಣ್ಯಕಶಿಪೋಃ ಪುತ್ರಃಪ್ರಹ್ಲಾದೋ ಭಗವತ್ಪ್ರಿಯಃ।
ವಾಯುನಾ ಚ ಸಮಾವಿಷ್ಟೋ ಮಹಾಬಲಸಮನ್ವಿತಃ ॥ ೮ ॥

ಬಾಹ್ಲೀಕ ಹಿಂದೆ ಹಿರಣ್ಯಕಶಿಪುವಿನ ಪುತ್ರನಾದ ಪ್ರಹ್ಲಾದ. ಭಗವಂತನಿಗೆ ಪ್ರಿಯ. ವಾಯುವಿನ ಆವೇಶಯುಕ್ತನಾಗಿದ್ದು ಮಹಾಬಲದಿಂದ ಕೂಡಿದವ.

ಯೇನೈವ ಜಾಯಮಾನೇನ ತರಸಾ ಭೂರ್ವಿದಾರಿತಾ।
ಭೂಭಾರಕ್ಷಪಣೇ ವಿಷ್ಣೋರಂಗತಾಮಾಪ್ತುಮೇವ ಸಃ॥ ೯ ॥

ಪ್ರತೀಪಪುತ್ರತಾಮಾಪ್ಯ ಬಾಹ್ಲೀಕೇಷ್ವಭವತ್ ಪತಿಃ।
ರುದ್ರೇಷು ಪತ್ರತಾಪಾಖ್ಯಃ ಸೋಮದತ್ತೋಽಸ್ಯ ಚಾತ್ಮಜಃ ॥ ೧೦ ॥

ಬಾಹ್ಲೀಕ ಹುಟ್ಟುತ್ತಿದ್ದಂತೆಯೆ ಭೂಮಿ ಬಲವಾಗಿ ಬಿರಿಯುವಂತೆ ಮಾಡಿದ್ದ. ಭೂಭಾರ ಕಳೆಯುವುದರಲ್ಲಿ ಶ್ರೀಕೃಷ್ಣನಿಗೆ ಸಹಾಯಕನೆನಿಸಿಕೊಳ್ಳುವುದಕ್ಕಾಗಿಯೆ ಅವನು ಪ್ರತೀಪನ ಮಗನಾಗಿ ಹುಟ್ಟಿ ಬಾಹ್ಲೀಕ ದೇಶದಲ್ಲಿ ರಾಜನಾದ. ರುದ್ರರಲ್ಲಿ ಒಬ್ಬನಾದ ಪತ್ರತಾಪನೆಂಬುವವನು ಇವನಿಗೆ ಸೋಮದತ್ತನೆಂಬ ಮಗನಾಗಿ ಜನಿಸಿದ.

ಅಜೈಕಪಾದಹಿರ್ಬುಧ್ನಿರ್ವಿರೂಪಕ್ಷ ಇತಿ ತ್ರಯಃ।
ರುದ್ರಾಣಾಂ ಸೋಮದತ್ತಸ್ಯ ಬಭೂವುಃ ಪ್ರಥಿತಾಃ ಸುತಾಃ ॥ ೧೧ ॥

ವಿಷ್ಣೋರೇವಾಂಗತಾಮಾಪ್ತುಂ ಭೂರಿರ್ಭೂರಿಶ್ರವಾಃಶಲಃ।
ಶಿವಾದಿ ಸರ್ವರುದ್ರಾಣಾಮಾವೇಶಾದ್ ವರತಸ್ತಥಾ ॥ ೧೨ ॥

ಭೂರಿಶ್ರವಾ ಅತಿಬಲಸತ್ತ್ವಾಸೀತ್ ಪರಮಾಸ್ತ್ರವಿತ್।
ತದರ್ಥಂ ಹಿ ತಪಶ್ಚೀರ್ಣಂ ಸೋಮದತ್ತೇನ ಶಂಭವೇ ॥ ೧೩ ॥

ರುದ್ರರಲ್ಲಿ ಅಜೈಕಪಾತ್ ಅಹಿರ್ಬುಧ್ನಿ ವಿರೂಪಾಕ್ಷ ಎಂಬ ಮೂವರು ಶ್ರೀಕೃಷ್ಣನಿಗೆ ಸಹಾಯ ಮಾಡಲು ಭೂರಿ ಭೂರಿಶ್ರವ ಶಲ ಎಂದು ಮೂವರು ಪ್ರಖ್ಯಾತರಾದ ಮಕ್ಕಳಾಗಿ ಸೋಮದತ್ತನಿಂದ ಜನಿಸಿದರು. ಅವರಲ್ಲಿ ಭೂರಿಶ್ರವನು, ಶಿವ ಮುಂತಾದ ಎಲ್ಲ ರುದ್ರರ ಆವೇಶದಿಂದಲೂ ವರದಿಂದಲೂ ಅತ್ಯಂತ ಬಲಿಷ್ಠನಾಗಿದ್ದ. ಮಹಾ ಅಸ್ತ್ರಜ್ಞನಾಗಿದ್ದ. ಅದಕ್ಕಾಗಿ ಸೋಮದತ್ತ ಶಿವನ ಕುರಿತು ತಪಸ್ಸು ಮಾಡಿದ್ದ.

ದಕ್ಷಪುತ್ರಿ ಭೂತಾದೇವಿಯಲ್ಲಿ ಪ್ರಜಾಪತಿಯಾದ ಭೂತನಿಂದ ಜನಿಸಿದವರು ಏಕಾದಶ ರುದ್ರರು.

ರೈವತೋऽಜೋ ಭವೋ ಭೀಮೋ ವಾಮ ಉಗ್ರೋ ವೃಷಾಕಪಿಃ।

ಅಜೈಕಪಾದಹಿರ್ಬುಧ್ನಿರ್ಬಹುರೂಪೋ ಮಹಾನಿತಿ ॥ (ಭಾಗ. 6.6.18)

ರೈವತ ಅಜ ಭವ ಭೀಮ ವಾಮ ಉಗ್ರ ವೃಷಾಕಪಿ ಅಜೈಕಪಾತ್ ಅಹಿ ರ್ಬುಧ್ನಿ ಬಹುರೂಪ ಮಹಾನ್- ಇವರು ಏಕಾದಶ ರುದ್ರರು. ಇವರಲ್ಲಿ 'ಬಹುರೂಪ'ನಿಗೆ ವಿರೂಪಾಕ್ಷ ಎಂಬುದು ನಾಮಾಂತರ. ಈ ಹನ್ನೊಂದು ಮಂದಿ ರುದ್ರರಲ್ಲಿ ಅಜೈಕಪಾತ್ ಅಹಿರ್ಬುಧ್ನಿ ವಿರೂಪಾಕ್ಷರು ಕ್ರಮವಾಗಿ ಭೂರಿ ಭೂರಿಶ್ರವ ಶಲ ಎಂಬ ಹೆಸರಿನಿಂದ ಅವತರಿಸಿದರು. 'ಭವ'ನೆ ಮಹಾರುದ್ರ ಕೈಲಾಸವಾಸಿ ಶಿವನ ಅವತಾರ. 'ಯೋ ಮೂಲರುದ್ರೋ ಭವಸಂಜ್ಞಃ ಖಗೇಂದ್ರ!' ಎಂದು ಗಾರುಡಬ್ರಹ್ಮಕಾಂಡ ಹೇಳುತ್ತದೆ. (36-25) ಅವನ ಮತ್ತು ಉಳಿದೆಲ್ಲ ರುದ್ರರ ಆವೇಶದೊಂದಿಗೆ ಅಹಿರ್ಬುಧ್ನಿಯೆ ಭೂರಿಶ್ರವನಾಗಿ ಜನಿಸಿದ.

ದತ್ತೋ ವರಶ್ಚತೇನಾಸ್ಯ ತ್ವತ್ಪ್ರತೀಪಾಭಿಭೂತಿಕೃತ್।
ಬಲವೀರ್ಯಗುಣೋಪೇತೋ ನಾಮ್ನಾ ಭೂರಿಶ್ರವಾಃ ಸುತಃ ॥ ೧೪ ॥

ಭವಿಷ್ಯತಿ ಮಯಾವಿಷ್ಟೋ ಯಜ್ಞಶೀಲ ಇತಿಸ್ಮ ಹ।
ತೇನ ಭೂರಿಶ್ರವಾ ಜಾತಃ ಸೋಮದತ್ತಸುತೋ ಬಲೀ ॥ ೧೫ ॥

'ನನ್ನಿಂದ ಆವಿಷ್ಟನಾಗಿದ್ದು ನಿನ್ನ ವಿರೋಧಿಗಳನ್ನು ಅಣಗಿಸಬಲ್ಲವ, ಬಲವೀರ್ಯ ಗುಣಗಳಿಂದ ಕೂಡಿದವ, ಯಜ್ಞಗಳನ್ನು ಮಾಡುವ ಸ್ವಭಾವದವ. ಇಂಥ ಭೂರಿಶ್ರವನೆಂಬ ಹೆಸರಿನ ಪುತ್ರ ನಿನಗೆ ಜನಿಸುವನು' ಎಂದು ಶಿವ ಸೋಮದತ್ತನಿಗೆ ವರ ನೀಡಿದ್ದ. ಆದ್ದರಿಂದ ಭೂರಿಶ್ರವ ಸೋಮದತ್ತನಿಗೆ ಮಗನಾಗಿ ಜನಿಸಿದ.

ಶಂತನು ಮಹಾರಾಜ

ಪೂರ್ವೋದಧೇಸ್ತೀರಗತೇऽಬ್ಜಸಂಭವೇ
ಗಂಗಾಯುತಃ ಪರ್ವಣಿ ಘೂರ್ಣತೋऽಬ್ಧಿಃ।
ಅವಾಕ್ಷಿಪತ್ ತಸ್ಯ ತನೌ ನಿಜೋದ
ಬಿಂದುಂ ಶಶಾಪೈನಮಥಾಬ್ಜಯೋನಿಃ ॥ ೧೬ ॥

ಒಮ್ಮೆ ಒಂದು ಹುಣ್ಣಿಮೆದಿನ ಚತುರ್ಮುಖಬ್ರಹ್ಮ ಪೂರ್ವಸಮುದ್ರತೀರದಲ್ಲಿದ್ದಾಗ

ಗಂಗಾಸಹಿತನಾದ ಸಮುದ್ರರಾಜ ಉಕ್ಕೇರಿದ್ದ. ಅದರಿಂದ ಆತ ಬ್ರಹ್ಮನ ಮೈಯಲ್ಲಿ ತನ್ನ ನೀರಹನಿಯನ್ನು ಎರಚಿದ. ಆಗ ಬ್ರಹ್ಮ ಅವನನ್ನು ಶಾಂತನಾಗೆಂದು ಶಪಿಸಿದ.

'ಒಂದು ಪರ್ವದಿನದಲ್ಲಿ' ಎಂದು ಮಾತ್ರ ಶ್ಲೋಕದಲ್ಲಿ ಹೇಳಿದೆ. ಪರ್ವವೆಂದರೆ ಅಮಾವಾಸ್ಯೆಯೂ ಆಗಬಹುದು. ಹುಣ್ಣಿಮೆಯೂ ಆಗಬಹುದು. ವರದರಾಜೀಯದಲ್ಲಿ ಅಮಾವಾಸ್ಯೆ ಎಂದಿದೆ. ಜನಾರ್ದನಭಟ್ಟೀಯದಲ್ಲಿ ಹುಣ್ಣಿಮೆ ಎಂದಿದೆ. ಜನಾರ್ದನಭಟ್ಟರು ಹರಿವಂಶವಚನದ ಆಧಾರ ಕೊಡುತ್ತಾರೆ–

ಉದ್ಭೂತೈಶ್ಚ ಮಹಾವಾತೈಃ ಪ್ರವೃದ್ಧೈಶ್ಚ ಬಲಾಹಕೈಃ।
ಪರ್ವಣಾ ಚೇಂದುಯುಕ್ತೇನ ತ್ರಿಭಿಃ ಕ್ಷುಬ್ಧೋಽಸ್ಮಿ ಕಾರಣೈಃ॥

'ಇಂದು ಯುಕ್ತವಾದ ಪರ್ವ' ಎಂದರೆ ಹುಣ್ಣಿಮೆ. ವಾದಿರಾಜೀಯ ಕನ್ನಡ ತಾತ್ಪರ್ಯ ನಿರ್ಣಯದಲ್ಲಿ ಅಮಾವಾಸ್ಯೆ ಎಂದಿದೆ. 'ಗಂಗಾಸಹಿತನಾದ ಸಮುದ್ರರಾಜ' ಎಂಬುದರಿಂದ ಬ್ರಹ್ಮ ಸಂಚರಿಸುತ್ತಿದ್ದ ಆ ಪ್ರದೇಶ ಗಂಗಾಸಾಗರಸಂಗಮಪ್ರದೇಶವೆಂದು ತಿಳಿಯುತ್ತದೆ. ಬ್ರಹ್ಮ ಏಕೆ ಸಿಟ್ಟಾದನೆಂಬ ಪ್ರಶ್ನೆಗೆ ಸತ್ಯಾಭಿನವತೀರ್ಥರ ಸಮಾಧಾನ 'ತನ್ನ ನೀರಹನಿ' ಎಂಬಲ್ಲಿ 'ತನ್ನ' ಎಂಬ ಶಬ್ದ ವರುಣ ಮಧುರವಾದ ಗಂಗಾಜಲವನ್ನು ಬ್ರಹ್ಮನ ಮೈಗೆ ಎರಚದೆ ತನ್ನ ಉಪ್ಪು ನೀರನ್ನೆರಚಿದ. ಅದರಿಂದ ಕೋಪ ಎಂದು ಸೂಚಿಸುತ್ತದೆ ಎಂದು. ವಾದಿರಾಜೀಯ ಕನ್ನಡ ತಾತ್ಪರ್ಯ ನಿರ್ಣಯದಲ್ಲಿ ಬೇರೇ ಸಮಾಧಾನ ಉಕ್ತವಾಗಿದೆ- 'ಬ್ರಹ್ಮರಾಯ ಬಂದನೆಂದು ಗಂಡಹೆಂಡಿರು ನಾಚಬೇಕು. ಕಾಮಾತುರ ಉಳ್ಳವರಾಗಿ ನಾಚಲಿಲ್ಲ. ಆದಕಾರಣ ತನ್ನ ಮೇಲೆಲ್ಲ ಮಹಾಭಿಷೇಕವಾಯಿತೆಂದು ಸಮುದ್ರಗೆ ಶಾಪಕೊಟ್ಟನು. ಮನುಷ್ಯರಲ್ಲಿ ಮಹಾಭಿಷೇಕರಾಯ ಎಂದು ನಾಮದಿಂದ ಅರಸಾಗಿ ಹುಟ್ಟಿ...'

ಮಹಾಭಿಷಜ್ ನಾಮ ನರೇಶ್ವರಸ್ತ್ವಂ ಭೂತ್ವಾ ಪುನಃ ಶಂತನುನಾಮಧೇಯಃ।
ಜನಿಷ್ಯಸೇ ವಿಷ್ಣುಪದೀ ತಥೈಷಾ ತತ್ರಾಪಿ ಭಾರ್ಯಾ ಭವತೋ ಭವಿಷ್ಯತಿ ॥ ೧೭ ॥

ನೀನು ಮೊದಲಿಗೆ ಭೂಮಿಯಲ್ಲಿ ಮಹಾಭಿಷಕ್ ಎಂಬ ರಾಜನಾಗಿ ಹುಟ್ಟಿ ಪುನಃ ಶಂತನು ಎಂಬ ಹೆಸರಿನವನಾಗಿಯೂ ಜನಿಸುವಿ. ಗಂಗೆ ದೇವತಾಶರೀರದಲ್ಲಿ ಶಂತನು ಜನ್ಮದಲ್ಲಿ ನಿನಗೆ ಪತ್ನಿಯಾಗುವಳು.

ಮಹಾಭಿಷಕ್ ಔತ್ತರೇಯ ಪಾಠದಲ್ಲಿ 'ಮಹಾಭಿಷ' ಈತ ಸೂರ್ಯವಂಶದ

ರಾಜ. ಸಾವಿರ ಅಶ್ವಮೇಧ ನೂರು ರಾಜಸೂಯ ಯಾಗಗಳನ್ನು ಮಾಡಿದವನೆಂದು ಮಹಾಭಾರತ ಹೇಳಿದೆ (ಆದಿ. 102-2) ಅವನೆ ಮುಂದೆ ಚಂದ್ರವಂಶದಲ್ಲಿ ಶಂತನುವಾಗಿ ಜನಿಸಿದ. ಸಮುದ್ರ ತೀರಕ್ಕೆ ಬ್ರಹ್ಮ ಬಂದಾಗ ವರುಣ ಗಂಗೆಯ ಜೊತೆಗಿದ್ದರೂ ನಾಚದೆ ಉದ್ಧತನಾಗಿದ್ದ. ಆಗ ಗಂಗೆ ಅವನನ್ನು ಎಚ್ಚರಿಸದಿದ್ದ ಅಪರಾಧಕ್ಕೆ ಅವಳಿಗೂ ಶಾಪ-ಉತ್ತಮವಾದ ದೇವತಾ ಶರೀರದಲ್ಲಿಯೆ ನೀನು ನಿಂದ್ಯವಾದ ಮಾನವ ಶರೀರದಲ್ಲಿರುವ ಪತಿಯನ್ನು ಹೊಂದಬೇಕು ಎಂದು.[1]

ಶಾಂತೋ ಭವೇತ್ಯೇವ ಮಯೋದಿತಸ್ತ್ವಂ
ತನುತ್ವಮಾಪ್ತೋಽಥ ತತಶ್ಚ ಶಂತನುಃ।
ಇತೀರಿತಃ ಸೋಽಪಿ ನೃಪೋ ಬಭೂವ
ಮಹಾಭಿಷಜ್ ನಾಮ ಹರೇಃ ಪದಾಶ್ರಯಃ ॥ ೧೮ ॥

'ಶಾಂತನಾಗೆಂದು ನಾನು ಶಪಿಸಿದ್ದರಿಂದ ನೀನು ಶರೀರದಲ್ಲಿ ಶಾಂತನಾದೆ. ಕುಗ್ಗಿದೆ. ಅದರಿಂದ ಶಾಂತತನು, ಶಂತನುವಾಗಿಯೂ ಹುಟ್ಟುವಿ' ಹೀಗೆ ಶಾಪ ಹೊಂದಿದ ವರುಣ ಮಹಾಭಿಷಕ್ ರಾಜನಾಗಿ ಅವತರಿಸಿದ, ಹರಿಪಾದುವನ್ನು ಆಶ್ರಯಿಸಿದ.

'ಶಂತನು' ಎಂಬ ಅವತಾರಕ್ಕೆ ಆ ಹೆಸರು ಬರಲು ಕಾರಣವನ್ನು ಇಲ್ಲಿ ಹೇಳಿದೆ. 'ದ್ಧೌಚಾಪರೌ ವರ್ಣವಿಕಾರ ನಾಶೌ' 'ವರ್ಣಗಳಿಗೆ ವಿಕಾರ ಮತ್ತು ನಾಶ ಎಂದು ಎರಡು ಬಗೆಯ ಅವಸ್ಥೆ ಬರಬಹುದು' ಎಂಬ ನಿರುಕ್ತದ ನಿಯಮದಂತೆ 'ಶಾಂತತನು' ಎಂಬಲ್ಲಿ 'ಆ'ಕಾರಕ್ಕೆ ಹ್ವಸ್ವರೂಪವಾದ ವಿಕಾರ. ಒಂದು 'ತ' ಅಕ್ಷರಕ್ಕೆ ನಾಶ ಬಂದರೆ ಶಂತನು ಎಂದಾಗುತ್ತದೆ. ಇದು ವಾದಿರಾಜರ ವಿವರಣೆ.[2] ಇದರಿಂದ ಮಹಾಭಾರತದಲ್ಲಿ ಪ್ರಚಲಿತವಾದ 'ಶಾಂತನು' ಎಂಬ ಪಾಠ ಅಪಪಾಠವೆಂದು ತಿಳಿಯಬಹುದು. ಮಹಾಭಾರತವೆ 'ಶಂತನು' ನಾಮಕ್ಕೆ ನಿರ್ವಚನವನ್ನು ಹೀಗೆ ಕೊಡುತ್ತದೆ-

ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಸ ಸುಖಮಶ್ನುತೇ।
ಪುನರ್ಯುವಾ ಚ ಭವತಿ ತಸ್ಮಾತ್ ತಂ ಶಂತನುಂ ವಿದುಃ ॥

---

1. ಏಷಾ ವಿಷ್ಣುಪದೀ ಗಂಗಾಮೂಲರೂಪೇಣೈವ ತತ್ರಾಪಿ ದೇವಾನಾಂ ಗರ್ಹಿತ ಮನುಷ್ಯ ಜನ್ಮನ್ಯಪಿ ಭವತೋ ಭಾರ್ಯಾ ಭವಿಷ್ಯತಿ। -ವಾದಿರಾಜೀಯ
2. ನಿರುಕ್ತೇ 'ದ್ಧೌಚಾಪರೌವರ್ಣ ವಿಕಾರನಾಶೌ' ಇತಿ ವರ್ಣ ವಿಕಾರನಾಶಯೋರುಕ್ತತ್ವಾತ್ ಆಕಾರಸ್ಯ ಆಕಾರಾಖ್ಯ ವರ್ಣವಿಕಾರೇಸತಿ ತಕಾರನಾಶೇ ಚ ಸತಿ ಶಾಂತತನುರಿತ್ಯರ್ಥೇ ಶಂತನುರಿತಿ ಪದಂ। -ವಾದಿರಾಜೀಯ

'ಶಂತನು ತನ್ನ ಅಮೃತಹಸ್ತಗಳಿಂದ ಸ್ಪರ್ಶಿಸಿದರೆ ವೃದ್ಧರು ತರುಣರಾಗಿ ಸುಖ ಅನುಭವಿಸಲು ಸಮರ್ಥರಾಗುತ್ತಾರೆ. ಅದರಿಂದ ಅವನಿಗೆ ಶಂತನು ನಾಮ ಸಾರ್ಥಕವಾಗಿತ್ತು.'

'ಶಂ=ಸುಖವನ್ನು ತನು=ಉಂಟು ಮಾಡುತ್ತಾನೆ' ಎಂಬ ನಿರ್ವಚನವನ್ನು ಇಲ್ಲಿ ಹೇಳಿದಂತಾಗಿರುವುದರಿಂದ 'ಶಂತನು' ಎಂಬ ಪಾಠವೆ ಸರಿಯಾದ ಪಾಠ. ಶಾಂತಸ್ಯ ಜಜ್ಞೇ ಸಂತಾನಸ್ತಸ್ಮಾದಾಸೀತ್ ಸ ಶಂತನುಃ 'ವಂಶ ನಿಲ್ಲುವ ಸ್ಥಿತಿಯಲ್ಲಿದ್ದಾಗ ಮುಂದುವರಿಸಿದವನಾದರಿಂದ 'ಶಂತನು' ಎನಿಸಿದ.' ಎಂದು ಮಹಾಭಾರತ ಇನ್ನೊಂದು ಬಗೆಯ ನಿರ್ವಚನವನ್ನೂ ನೀಡುತ್ತದೆ.

ಮೂಲರೂಪದಲ್ಲಿ ಸಮುದ್ರರಾಜನ ಶರೀರ ಉಕ್ಕಿದ್ದಕ್ಕೆ ಬ್ರಹ್ಮ ಶಾಂತನಾಗೆಂದು ಶಪಿಸಿದ. ಆಗಲೆ ಸಮುದ್ರರಾಜ ಶಾಂತನಾಗಿದ್ದ. ಅದರಿಂದ ಮೂಲರೂಪಕ್ಕೇ ಶಾಂತನು ಎಂಬ ಹೆಸರಾಗಬೇಕು. ಅವತಾರಕ್ಕೆ ಏಕೆ ಆ ಹೆಸರು? ಮೂಲಹೆಸರು ಅವತಾರಕ್ಕೂ ಬರಬೇಕೆನ್ನುವುದಾದರೆ ಮಹಾಭಿಷಕ್ ಅವತಾರಕ್ಕೆ ಅದು ಏಕೆ ಬರಲಿಲ್ಲ? ಈ ಪ್ರಶ್ನೆಗೆ ಸಮಾಧಾನ- ಎರಡನೆ ಅವತಾರದಲ್ಲಿಯೆ ವರುಣ ಮನುಷ್ಯತ್ವಾನುಭವದಿಂದ ತನ್ನ ಅಪರಾಧ ಶಮನ ಮಾಡಿಕೊಂಡಿದ್ದರಿಂದ ಅದಕ್ಕೇ ಆ ಹೆಸರು ಯುಕ್ತ ಎಂದು ವಾದಿರಾಜೀಯದಲ್ಲಿ ಉಕ್ತವಾಗಿದೆ.[1]

ಸ ತತ್ರ ಭುಕ್ತ್ವಾಽಚಿರಕಾಲ ಮುರ್ವೀಂ
ತನು ವಿಹಾಯಾಪ ಸದೋ ವಿಧಾತುಃ।
ತತ್ರಾಪಿ ತಿಷ್ಠನ್ ಸುರವೃಂದಸನ್ನಿಧೌ
ದದರ್ಶ ಗಂಗಾಂ ಶ್ಲಥಿತಾಂಬರಾಂ ಸ್ವಕಾಮ್ ॥ ೧೯ ॥

ಮಹಾಭಿಷಕ್ ಆ ಜನ್ಮದಲ್ಲಿ ಭೂಮಿಯನ್ನು ಬಹುಕಾಲ ಆಳಿ ಶರೀರತ್ಯಾಗ ಮಾಡಿ ಬ್ರಹ್ಮನ ಆಸ್ಥಾನವನ್ನು ಸೇರಿದ. ಅಲ್ಲಿರುವಾಗ ಆತನೊಮ್ಮೆ ದೇವತೆಗಳ ಗುಂಪಿನ ಬಳಿ ಇದ್ದು ತನ್ನ ಪತ್ನಿಯಾದ ಗಂಗೆಯನ್ನು ಅವಳು ಉಟ್ಟ ಬಟ್ಟೆ ಗಾಳಿಗೆ ಸರಿದಿದ್ದಾಗ ನೋಡಿದ.

---

1. ಶಾಂತೋ ಭವೇತಿ ಬ್ರಹ್ಮಣೋಕ್ತ ಆಯೋಽಪಶಾಂತಿಂ ಪ್ರಾಪ್ಯತನುತ್ವ ಮಲ್ಪತ್ವಂ ಚ ಪ್ರಾಪ್ಯಸ್ಯ ಮೂಲರೂಪ ಸಮುದ್ರಸ್ಯ ನಾಮಭವತು ಶಂತನುರಿತಿ। ಶಂತನು ಚಕ್ರವರ್ತಿನಃ ಕಥಂ ನಾಮ? ಮೂಲರೂಪಸ್ಯ ನಾಮ ಅವತಾರ ರೂಪೇಽಪಿ ಭವತಿ ಚೇತ್ ಮಹಾಭಿಷಗಾಖ್ಯ ಪ್ರಥಮರೂಪೇ ಕುತೋ ನಾ ಭೂದಿತಿ ಚೇತ್‌ಸತ್ಯಂ। ದ್ವಿತೀಯತನೌ ಮಾನುಷತ್ವಾನುಭವಸಮಯೇ ತಸ್ಯಾಂ ತನೌ ಮಯ್ಯಾಚರಿತಾಪರಾಧಸ್ಯ ಶಾಂತತ್ವಾತ್ ಸಾ ತನುಃ ಶಂತನುರಿತ್ಯುಚ್ಯತೇ ಇತಿ ಬ್ರಹ್ಮಣೋ ಭಾವಸದ್ಭಾವಾತ್। -ವಾದಿರಾಜೀಯ

ಅವಾಙ್ಮುಖೇಷು ದ್ಯುಸದತ್ಸು ಗಂಗಾ
ನಿರೀಕ್ಷಮಾಣಂ ಪುನರಾತ್ಮ ಸಂಭವಃ।
ಉವಾಚ ಭೂಮೌ ನೃಪತಿರ್ಭವಾಶು
ಶಪ್ತೋ ಯಥಾ ತ್ವಂ ಹಿ ಪುರಾ ಮಯೈವ ॥ ೨೦ ॥

ದೇವತೆಗಳೆಲ್ಲರೂ ನಗ್ನಸ್ತ್ರೀಯನ್ನು ನೋಡಕೂಡದೆಂದು ಮುಖವನ್ನು ತಗ್ಗಿಸಿ ಕುಳಿತಿದ್ದಾಗ ಮಹಾಭಿಷಕ್ ತನ್ನ ಪತ್ನಿ ಎಂದು ಅನುರಾಗದಿಂದ ಪುನಃಪುನಃ ನೋಡಿದ. ಆಗ ಬ್ರಹ್ಮ ಶಪಿಸಿದ– 'ಹಿಂದೆ ನಾನು ನಿನಗೆ ಶಾಪ ಕೊಟ್ಟಂತೆಯೆ ಭೂಮಿಯಲ್ಲಿ ರಾಜನಾಗಿ ಬೇಗನೆ ಜನಿಸು.'

ವರುಣ ಎರಡು ಬಾರಿ ಭೂಮಿಯಲ್ಲಿ ರಾಜನಾಗಿ ಹುಟ್ಟುವುದಕ್ಕೂ ಬ್ರಹ್ಮ ನೀಡಿದ್ದ ಮೊದಲನೆಯ ಶಾಪವೆ ಕಾರಣ. ಎರಡನೆ ಶಾಪ ಎರಡನೆ ಜನ್ಮ ಬೇಗನೆ ಬರಲು ಕಾರಣವಾಯಿತಷ್ಟೆ. ಅದರಿಂದಲೆ 'ಬೇಗನೆ ಜನಿಸು' ಎಂದಿದೆ ಎನ್ನುತ್ತವೆ ವಾದಿರಾಜೀಯ ಮತ್ತು ವರದರಾಜೀಯ. ಮೈಗೆ ನೀರು ಬಿದ್ದ ಮಾತ್ರಕ್ಕೆ ಬ್ರಹ್ಮ ವರುಣನಲ್ಲಿ ಸಿಟ್ಟಾಗಿಲ್ಲ. ವರುಣ ಮುಂದೆ ತನ್ನ ಆಸ್ಥಾನದಲ್ಲಿ ನಗ್ನಳಾದ ಪತ್ನಿಯನ್ನು ಕಾಣುವನೆಂದು ಮೊದಲೆ ತಿಳಿದಿದ್ದ ಬ್ರಹ್ಮ ಆ ಅಪರಾಧಕ್ಕೆ ಹಿಂದೆಯೇ ಶಾಪಕೊಟ್ಟಿದ್ದ ಎಂದು ಜನಾರ್ದನಭಟ್ಟೀಯದಲ್ಲಿ ಹೇಳಿದೆ.[1]

ಇತೀರಿತಸತ್ ಕ್ಷಣತಃ ಪ್ರತೀಪಾತ್
ಬಭೂವ ನಾಮ್ನಾ ನೃಪತಿಶ್ಚ ಶಂತನುಃ।
ಅವಾಪ್ಯ ಗಂಗಾಂ ದಯಿತಾಂ ಸ್ವಕೀಯಾಂ
ತಯಾ ಮುಮೋದಾಬ್ದ ಗಣಾನ್ ಬಹೂಂಶ್ಚ ॥ ೨೧ ॥

ಹೀಗೆ ಶಪ್ತನಾದ ಮಹಾಭಿಷಕ್ ತಕ್ಷಣವೇ ಪ್ರತೀಪನಿಂದ ಶಂತನು ನಾಮಕನಾಗಿ ಜನಿಸಿದ. ತನ್ನ ಪ್ರೀತಿಯ ಮಡದಿಯಾದ ಗಂಗೆಯನ್ನೇ ಹೊಂದಿ ಅವಳೊಡನೆ ಬಹುವರ್ಷಗಳ ಕಾಲ ಸುಖಿಪಟ್ಟ.

---

1. ನೃಪತಿರ್ಭಾವಾಶ್ವಿತಿ ವದತಾ ಪೂರ್ವಾರ್ಧೌಬ್ರಹ್ಮದತ್ತ ಶಾಪಸ್ಯ ಮಾನುಷ ಜನ್ಮದ್ವಯಂ ಫಲಂ। ರಾಗೇಣ ಗಂಗಾದರ್ಶನೇ ಸತಿ ಸ್ವಸಭಾಯಾಂ ಬ್ರಹ್ಮದತ್ತ ಶಾಪಸ್ಯ ಶಂತನು ಭವನಮೇವ ಫಲಮಿತಿ ಸೂಚಿತಂ। -ವಾದಿರಾಜೀಯ
ಅನೇನಾಪರಾಧೇನ ಪೂರ್ವಂ ದತ್ತಃ ಶಾಪಃ ಶೀಘ್ರಫಲಪ್ರದೋಽಸ್ತ್ವಿತಿ ಭಾವಃ। -ವರದರಾಜೀಯ
ಇಮಮೇವಾಪರಾಧಂ ಜಾನತಾ ಬ್ರಹ್ಮಣಾ ಏತದರ್ಥಂ ಪುರೈವ ಶಪ್ತ ಇತಿಭಾವಃ।
-ಜನಾರ್ದನೀಯ

ವಸುಗಳಿಗೆ ವಸಿಷ್ಠರ ಶಾಪ

ಅಥಾಷ್ಟಮೋ ವಸುರಾಸೀದ್ ದ್ಯುನಾಮಾ ವರಾಂಗಿನಾಮ್ನ್ಯಸ್ಯ ಬಭೂವಭಾರ್ಯಾ।
ಬಭೂವ ತಸ್ಯಾಶ್ಚ ಸಖೀ ನೃಪಸ್ಯ ಸುವಿಂದನಾಮ್ನೋ ದಯಿತಾ ಸನಾಮ್ನೀ ॥ ೨೨ ॥

ಅಷ್ಟಮ ವಸುವಿಗೆ ದ್ಯು ಎಂಬ ಹೆಸರೂ ಇದ್ದಿತು. ಅವನಿಗೆ ವರಾಂಗಿ ಎಂಬ ಪತ್ನಿ ಇದ್ದಳು. ಅವಳಿಗೆ ತನ್ನ ಹೆಸರಿನವಳೆ ಆದ ಗೆಳತಿ ಇದ್ದಳು. ಅವಳು ಸುವಿಂದ ಎಂಬ ಹೆಸರಿನ ರಾಜನ ಹೆಂಡತಿ.

ಮಹಾಭಾರತದಲ್ಲಿ - ಧರ ಧ್ರುವ ಸೋಮ ಧರ್ಮ ಅನಿಲ ಅನಲ ಪ್ರತ್ಯೂಷ ಪ್ರಭಾಸ.

ಭಾಗವತದಲ್ಲಿ - ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು, ವಿಭಾವಸು.

ಹರಿವಂಶದಲ್ಲಿ - ಆಪ, ಧರ, ಧ್ರುವ, ಸೋಮ ಅನಿಲ ಅನಲ ಪ್ರತ್ಯೂಷ ಪ್ರಭಾಸ.

ಹೀಗೆ ಅಷ್ಟವಸುಗಳ ಹೆಸರುಗಳು ಬೇರೆ ಬೇರೆ ಕಡೆ ಬೇರೆ ಬೇರೆಯಾಗಿ ಬಂದಿವೆ. ಇವರೆಲ್ಲ ದಕ್ಷಪುತ್ರಿ ವಸುವಿನಲ್ಲಿ ಧರ್ಮ ಪ್ರಜಾಪತಿಯಿಂದ ಜನಿಸಿದವರು ಎಂದು ಭಾಗವತ ಹೇಳಿದೆ. ಇವರಲ್ಲಿ ಅಷ್ಟಮ ವಸುವಾದ ಪ್ರಭಾಸ ಅಥವಾ ವಿಭಾವಸುವಿಗೇ ದ್ಯು ಎಂಬುದು ನಾಮಾಂತರ. ಹಾಗೆ ಎಲ್ಲ ಕಡೆ ವ್ಯವಹಾರ. ಆದರೆ ವರಾಂಗಿಯ ಹೆಸರು ವಿಷ್ಣು ಪುರಾಣದಲ್ಲಿ ವರಸ್ತ್ರೀ. ಈಕೆ ಬೃಹಸ್ಪತಿಯ ಸೋದರಿ. ದೇವಶಿಲ್ಪಿಯಾದ ವಿಶ್ವಕರ್ಮನ ಜನನಿ. ಈ ವಿಶ್ವಕರ್ಮನ ಪುತ್ರನೆ ತ್ವಷ್ಟೃ ಪ್ರಜಾಪತಿ. (ವಿಷ್ಣುವು 1.15.118)

ಭಾಗವತ ಪ್ರಕಾರ ಅಂಗಿರಸಿ (ಬೃಹಸ್ಪತಿಯ ಸೋದರಿ) ವಸ್ತು ಎಂಬ ಸಪ್ತಮ ವಸುವಿನ ಭಾರ್ಯೆ. ಇವಳೆ ವಿಶ್ವಕರ್ಮನ ಜನನಿ. ಅಷ್ಟಮ ವಸುವಾದ ವಿಭಾವಸುವಿನ ಭಾರ್ಯೆ ಉಷಾ. (ಭಾಗ. 6.6.15) ಕಲ್ಪಭೇದದಿಂದ ವ್ಯವಸ್ಥೆ ಎನ್ನಬೇಕು.

ವರಾಂಗಿಯ ಗೆಳತಿಯ ಹೆಸರು ಜಿತವತಿ. ಇವಳು ರಾಜಾ ಉಶೀನರನ ಪುತ್ರಿ (ಮ. ಭಾ. ಆದಿ. 106-22) ಇವಳಿಗೂ ವರಾಂಗಿ ಎಂಬುದು ನಾಮಾಂತರ.

ತಸ್ಯಾ ಜರಾಮೃತಿವಿಧ್ವಂಸಹೇತೋ
ರ್ವಸಿಷ್ಠಧೇನುಂ ಸ್ವಮೃತಂ ಕ್ಷರಂತೀಮ್।

ಜರಾಪಹಾಂ ನಂದಿನಿನಾಮಧೇಯಾಂ
ಬದ್ಧಂ ಪತಿಂ ಚೋದಯಾಮಾಸ ದೇವೀ ॥ ೨೩ ॥

ದೇವಿ ವರಾಂಗಿ ತನ್ನ ಗೆಳತಿಯಾದ ವರಾಂಗಿಗೆ ಜರಾ ಮರಣವಿಲ್ಲದಂತೆ ಮಾಡುವ ಉದ್ದೇಶದಿಂದ ಉತ್ತಮ ಅಮೃತವನ್ನು ನೀಡುವ, ಜರೆಯನ್ನು ಕಳೆವ, ನಂದಿನಿ ಎಂಬ ಹೆಸರಿನ ವಸಿಷ್ಠಧೇನುವನ್ನು ಕಟ್ಟಿ ತರಲು ಪತಿಯನ್ನು ಪ್ರೇರಿಸಿದಳು.

ಕಶ್ಯಪರಿಂದ ಸುರಭಿ ಎಂಬ ಕಾಮಧೇನುವಿನಲ್ಲಿ ಹುಟ್ಟಿದವಳು ನಂದಿನಿ ಎಂಬ ಕಾಮಧೇನು. ಅವಳ ಹಾಲನ್ನು ಸೇವಿಸಿದರೆ ಹತ್ತು ಸಾವಿರ ವರ್ಷಗಳ ಆಯುಷ್ಯವೂ ಸ್ಥಿರ ಯೌವನವೂ ಲಭಿಸುತ್ತಿತ್ತು. (ಮ. ಭಾ. ಆದಿ. 106-19)

ತಯಾ ದ್ಯುನಾಮಾ ಸ ವಸುಃ ಪ್ರಚೋದಿತೋ
ಭ್ರಾತೃಸ್ನೇಹಾತ್ ಸಪ್ತಭಿರನ್ವಿತೋಽಪರೈಃ।
ಬಬಂಧ ತಾಂ ಗಾಮಥತಾನ್ ಶಶಾಪ
ವಸಿಷ್ಠ ಸಂಸ್ಥಃ ಕಮಲೋದ್ಭವಃ ಪ್ರಭುಃ ॥ ೨೪ ॥

ವರಾಂಗಿಯಿಂದ ಪ್ರೇರಿತನಾದ ದ್ಯುನಾಮಕನಾದ ವಸು ಸೋದರಸ್ನೇಹದಿಂದ ಬಂದ ಬೇರೆ ಏಳು ಮಂದಿ ವಸುಗಳೊಂದಿಗೆ ಹೋಗಿ ಆ ನಂದಿನಿ ಹಸುವನ್ನು ಕಟ್ಟಿದ. ಆಗ ವಸಿಷ್ಠನಲ್ಲಿದ್ದ ಶಕ್ತಿಶಾಲಿಯಾದ ಬ್ರಹ್ಮ ಶಪಿಸಿದ.

ಅಷ್ಟವಸುಗಳಲ್ಲಿ ಐದನೆಯವ ಅಗ್ನಿ. ಅವನು ದೇವತಾ ತಾರತಮ್ಯದಲ್ಲಿ ಹದಿನೈದನೆಯ ಕಕ್ಷ್ಯೆಯವನು. ವಸಿಷ್ಠ ಹದಿನಾರನೆಯ ಕಕ್ಷೆಯವನು. ಉಳಿದ ವಸುಗಳು ಹದಿನೆಂಟನೇ ಕಕ್ಷೆಯವರಾಗಿದ್ದು ವಸಿಷ್ಠನಿಗಿಂತ ಕಡಿಮೆಯವರಾದರೂ ಅಗ್ನಿ ಅವನಿಗಿಂತ ಉತ್ತಮ. ಅಗ್ನಿಸಮೇತರಾದ ಎಲ್ಲಾ ವಸುಗಳಿಗೂ ಶಾಪ ನೀಡುವ ಸಾಮರ್ಥ್ಯ ವಸಿಷ್ಠನಿಗಿಲ್ಲ. ಅದಕ್ಕೆ ಆತನಲ್ಲಿ ಆವೇಶಗೊಂಡಿದ್ದ ಸಾಮರ್ಥ್ಯಶಾಲಿ ಬ್ರಹ್ಮ ಶಪಿಸಿದ. ಈ ಅಭಿಪ್ರಾಯದಿಂದ 'ಕಮಲೋದ್ಭವಃ ಪ್ರಭುಃ' ಎಂದಿದೆ.[1]

ವಿಶ್ವಾಮಿತ್ರ ತನ್ನ ನೂರುಮಂದಿ ಮಕ್ಕಳನ್ನು ಕೊಂದರೂ ವಸಿಷ್ಠ ಶಾಪಕೊಡಲಿಲ್ಲ. ಅಂಥವನು ಹಸುವನ್ನೊಯ್ದ ವಸುಗಳಿಗೆ ಶಾಪ ಕೊಡುವುದೆಂದರೆ ಬ್ರಹ್ಮದೇವನ ಆವೇಶ ಅದಕ್ಕೆ ಕಾರಣವೆನ್ನುವುದು ಉಚಿತವಾಗುತ್ತದೆ.[2]

---

1. ಅಷ್ಟವಸೂನಾಂ ಮಧ್ಯೇ ಅಗ್ನೇರಪಿ ಸತ್ವಾತ್ ತಸ್ಮಾದಪ್ಯವರಸ್ಯ ವಸಿಷ್ಠಸ್ಯ ಶಾಪದಾನೇ ಕಥಂ ಶಕ್ತಿರಿತ್ಯ ತಸ್ಯಾತ್ಪರ್ಯಮಾಹ-ವಸಿಷ್ಠ ಸಂಸ್ಥಃಕಮಲೋದ್ಭವ ಇತಿ। -ವಾದಿರಾಜೀಯ
2. ವಸಿಷ್ಠೇ ಸ್ವಪುತ್ರಶತವಧೇಽಪಿ ಕೋಪಾಭಾವೇನ ಶಾಪಾಯೋಗಸ್ಯ ಭಾರತ ಏವ ವಿಸ್ಮೃತತ್ವಾತ್ ವಸಿಷ್ಠಸಂಸ್ಥಃ ಕಮಲೋದ್ಭವಃ ಪ್ರಭುರಿತಿ ತಾತ್ಪರ್ಯಮಾಹುಃ। -ಲಕ್ಷ್ಮಣಂಕಾರ

ಮಹಾಭಾರತದಲ್ಲಿ ಮುಂದೆ ಗಂಗೆಯ ಬಳಿ ವಸುಗಳು ಹೇಳುವ ಮಾತು-

ಶಪ್ತಾವೈ ಸ್ಮೋ ಮಹಾನದಿ।
ಅಸ್ವಯಂಕೃತಯಾ, ಬುದ್ಧ್ಯಾ ವಸಿಷ್ಠೇನ ಮಹಾತ್ಮನಾ।

'ಸ್ವಯಂಕೃತವಲ್ಲದ, ಅಂದರೆ ಬ್ರಹ್ಮಾವೇಶ ನಿಮಿತ್ತಕವಾದ ಬುದ್ಧಿಯಿಂದ ವಸಿಷ್ಠರು ನಮಗೆ ಶಾಪವಿತ್ತರು'.[1]

ಅಧರ್ಮವೃತ್ತಾಃ ಪ್ರತಿಯಾತ ಮಾನುಷೀಂ
ಯೋನಿಂ ದ್ರುತಂ ಯತ್ಕೃತೇ ಸರ್ವ ಏವ।
ಧರ್ಮಚ್ಯುತಾಃ ಸ ತಥಾಷ್ಟಾಯುರಾಪ್ಯತಾ
ಮನ್ಯೇ ಪುನಃ ಕ್ಷಿಪ್ರಮಥೋ ವಿಮೋಕ್ಷ್ಯಥ ॥ ೨೫ ॥

'ಅಧರ್ಮದಲ್ಲಿ ಪ್ರವೃತ್ತರಾದ ನೀವು ಬೇಗನೆ ಮನುಷ್ಯ ಜನ್ಮ ಹೊಂದಿರಿ. ಯಾರಿಗಾಗಿ ನೀವೆಲ್ಲರೂ ಧರ್ಮಚ್ಯುತರಾದಿರೋ ಅವನು ಎಂಟೂ ಮಂದಿಗಳ ಆಯುಷ್ಯ ಹೊಂದಿರಲಿ. ಉಳಿದವರು ಬೇಗನೆ ಮುಕ್ತರಾಗಿರಿ.

ದೇವತೆಗಳಿಗೆ ನರಕವಾಸವಿಲ್ಲ. ಮನುಷ್ಯ ಜನ್ಮವೇ ಅವರಿಗೆ ನರಕಸದೃಶ. ಹೀಗೆ ನರಕ ಸಾಧನವಾದ ಗೋಹರಣವನ್ನು ತಾನು ಮಾಡಿದುದು ಮಾತ್ರ ವಲ್ಲದೆ ಉಳಿದವರಿಂದಲೂ ಮಾಡಿಸಿದ ದ್ಯು ಬಹುಕಾಲ ಮನುಷ್ಯನಾಗಿರಲಿ ಎಂಬ ಅಭಿಪ್ರಾಯದಿಂದ ಎಂಟು ಮಂದಿಗಳ ಆಯುಷ್ಯ ಎಂದಿದೆ.

ಪ್ರಚೋದಯಾಮಾಸ ಚ ಯಾ ಕುಮಾರ್ಗೇ ಪತಿಂ ಹಿ ಸಾಂಬೇತಿ ನರೇಷು ಜಾತಾ।
ಅಭರ್ತೃಕಾ ಪುಂಸ್ತ್ವಸಮಾಶ್ರಯೇಣ ಪತ್ಯುರ್ಮೃತೌ ಕಾರಣತ್ವಂ ವ್ರಜೇತ ॥ ೨೬ ॥

'ಪತಿಯನ್ನು ದುರ್ಮಾರ್ಗದಲ್ಲಿ ಪ್ರೇರಿಸಿದ ವರಾಂಗಿ ಅಂಬೆ ಎಂಬ ಹೆಸರಿನಿಂದ ಮನುಷ್ಯ ಜನ್ಮ ಹೊಂದಲಿ. ಪತಿರಹಿತಳಾಗಿ ಪುರುಷತ್ವವನ್ನು ಸಂಪಾದಿಸಿ ಪತಿಯ ಮರಣಕ್ಕೂ ಕಾರಣಳಾಗಲಿ.'

ಭವತ್ವಸೌ ಬ್ರಹ್ಮಚರ್ಯೈಕನಿಷ್ಠೋ ಮಹಾನ್ ವಿರೋಧಶ್ಚತಯೋರ್ಭವೇತ।
ಸ ಗರ್ಭವಾಸಾಷ್ಟಕದುಃಖಮೇವ ಸಮಾಪ್ನುತಾಂ ಶರತಲ್ಪೇ ಶಯಾನಃ ॥ ೨೭ ॥

'ದ್ಯು ಕೇವಲ ಬ್ರಹ್ಮಚರ್ಯದಲ್ಲಿರಲಿ. ಪತಿಪತ್ನಿಯರಿಬ್ಬರೊಳಗೆ ಮಹಾ ವಿರೋಧ ಉಂಟಾಗಲಿ. ಆತ ಶರಮಂಚದಲ್ಲಿ ಮಲಗಿ ಎಂಟು ಗರ್ಭವಾಸಗಳ ದುಃಖ ಹೊಂದಲಿ.'

---

1. ಅಸ್ವಯಂಕೃತಯಾ ಹೃದಿಸ್ಥ ಬ್ರಹ್ಮಾವೇಶ ಬಲೇನ ಕೃತಯಾ ಶಪ್ತಾಃ ಸ್ಮ ಇತಿ ಯೋಜನಾ। -ಲಕ್ಷ್ಮಾಲಂಕಾರ

ಮೃತ್ಯ್ವಷ್ಟಕೋತ್ಥಾಮಪಿ ವೇದನಾಂ ಸ
ಪ್ರಾಪ್ನೋತು ಶಸ್ತ್ರೈರ್ಬಹುಧಾ ನಿಕೃತ್ತಃ।
ಇತೀರಿತಾಸ್ತೇ ಕಮಲೋದ್ಭವಂ ತಂ
ಜ್ಞಾತ್ವಾಸಮುತ್ಸೃಜ್ಯ ಚ ಗಾಂ ಪ್ರಣೇಮುಃ ॥ ೨೮ ॥

'ಎಂಟು ಮರಣಗಳಿಂದಾಗಬಹುದಾದ ವೇದನೆಯನ್ನು ಆತ ಶಸ್ತ್ರಗಳಿಂದ ನಾನಾ ಬಗೆಯಲ್ಲಿ ಛಿನ್ನಭಿನ್ನನಾಗುತ್ತ ಅನುಭವಿಸಲಿ.' ಹೀಗೆ ಶಪ್ತರಾದ ವಸುಗಳು ಶಾಪಕೊಟ್ಟವನು ಬ್ರಹ್ಮನೆ ಎಂದು ತಿಳಿದು ಗೋವನ್ನು ಬಿಟ್ಟು ಕೊಟ್ಟು ತಲೆಬಾಗಿದರು.

ನ ಮಾನುಷಂ ಗರ್ಭಮವಾಪ್ನುಮೋ ವಯಂ
ಭವತ್ವಯಂ ಸರ್ವವಿತ್ ಕೀರ್ತಿಮಾಂಶ್ಚ।
ಮಹಾಸ್ತ್ರವೇತ್ತಾ ಭವದಂಶಯುಕ್ತ
ಸ್ತಥಾ ಬಲಂ ನೋಽಖಿಲಾನಾಮುಪೈತು ॥ ೨೯ ॥

'ನಾವು ಮನುಷ್ಯಸ್ತ್ರೀಯ ಗರ್ಭವನ್ನು ಪ್ರವೇಶಿಸಿದಂತಾಗಲಿ. ಈ ದ್ಯುವಸು ನಿನ್ನ ಅಂಶಯುಕ್ತನಾಗಿದ್ದು ಸರ್ವಜ್ಞನಾಗಲಿ, ಕೀರ್ತಿಶಾಲಿಯಾಗಲಿ. ಮಹಾ ಅಸ್ತ್ರಜ್ಞನೆನಿಸಿ ನಮ್ಮೆಲ್ಲರ ಬಲವನ್ನು ಹೊಂದಿರಲಿ.'

ಇತೀರಿತೇಽಸ್ತ್ವಿತ್ಯುದಿತಾಃ ಸ್ವಯಂಭುವಾ
ವಸಿಷ್ಠಸಂಸ್ಥೇನ ಸುರಾಪಗಾಂ ಯಯುಃ।
ಊಚುಸ್ತಥೈನಾಮುದರೇ ವಯಂ ತೇ
ಜಾಯೇಮಹಿ ಕ್ಷಿಪ್ರಮಸ್ಮಾನ್ ಹನ ತ್ವಮ್ ॥ ೩೦ ॥

ಹೀಗೆ ವಸುಗಳು ಹೇಳಿದಾಗ ವಸಿಷ್ಠನಲ್ಲಿದ್ದ ಬ್ರಹ್ಮ 'ತಥಾಸ್ತು' ಎಂದ. ಬಳಿಕ ವಸುಗಳು ಗಂಗೆಯ ಬಳಿಗೆ ಹೋದರು. 'ನಾವು ನಿನ್ನ ಗರ್ಭದಲ್ಲಿ ಜನಿಸುವೆವು. ಆಗ ನೀನು ಬೇಗನೆ ನಮ್ಮನ್ನು ಕೊಲ್ಲಬೇಕು' ಎಂದರು.

ಬ್ರಹ್ಮಶಾಪದಿಂದ ದೇವತಾಶರೀರದಿಂದಲೆ ಗಂಗೆ ಶಂತನುವಿನ ಪತ್ನಿಯಾಗಲಿದ್ದಾಳೆ ಎಂದು ತಿಳಿದು ದೇವತಾಸ್ತ್ರೀಯ ಗರ್ಭದಲ್ಲಿಯೆ ಮನುಷ್ಯರಾಗಲು ಬಯಸಿದ್ದ ವಸುಗಳು ಗಂಗೆಯ ಬಳಿಗೇ ಬಂದರು.

ಶಂತನು ಗಂಗಾ ಸಮಾಗಮ

ಇತೀರಿತಾ ಸಾ ವರಮಾಶು ವವ್ರೇ
ತೇಭ್ಯೋಽಪ್ಯಪಾಪತ್ವಮಥ ಪ್ರಿಯತ್ವಮ್।

ತೇಷಾಂ ತಥೈವಾತ್ಮನ ಏಕಮೇಷಾಂ
ದೀರ್ಘಾಯುಷಂ ತಾನ್ ಸುಷುವೇ ಶಂತನೋಃ ॥ ೩೧ ॥

ವಸುಗಳು ಹೀಗೆ ಹೇಳಿದಾಗ ಗಂಗೆ ಬೇಗನೆ ಪರ ಬೇಡಿದಳು. 'ನನಗೆ ಮಕ್ಕಳನ್ನು ಕೊಂದ ಪಾಪ ಬರಬಾರದು. ಕೊಂದರೂ ನಾನು ಅವರಿಗೆ ಪ್ರಿಯಳಾಗಿರಬೇಕು. ಅವರಲ್ಲಿ ಒಬ್ಬ ಮಗ ದೀರ್ಘಾಯುಷಿಯಾಗಿ ಬದುಕಿರಬೇಕು' ಎಂದು. ಬಳಿಕ ಗಂಗೆ ಶಂತನುವಿನಿಂದ ಮಕ್ಕಳನ್ನು ಪಡೆದಳು.

ಅವಿಷ್ಣವಸ್ತಾನ್ ವಿನಿಹಂತುಮೇವ
ಪುರಾ ಪ್ರತೀಪಸ್ಯ ಹಿ ದಕ್ಷಿಣೋರುಮ್ ।
ಸಮಾಶ್ರಿತಾ ಕಾಮಿನೀವತ್ ತ್ವಕಾಮಾ
ತತ್ಪುತ್ರಭಾರ್ಯಾ ಭವಿತುಂ ವಿಡಂಬಾತ್ ॥ ೩೨ ॥

ಮಕ್ಕಳನ್ನು ಪಡೆದು ಕೊಲ್ಲುವ ಉದ್ದೇಶದಿಂದ ಮೊದಲಿಗೆ ಶಂತನುವನ್ನು ನಿರ್ವಿಘ್ನವಾಗಿ ಮದುವೆಯಾಗುವುದಕ್ಕಾಗಿ ಗಂಗೆ ಪ್ರತೀಪರಾಜನ ಬಲತೊಡೆಯ ಮೇಲೆ, ತಾನು ಅವನನ್ನು ಕಾಮಿಸದಿದ್ದರೂ ಸಾಧಾರಣ ಮಾನವ ಸ್ತ್ರೀಯನ್ನು ಅನುಕರಿಸುತ್ತ ಕಾಮಿಸಿದವಳಂತೆ, ಕುಳಿತಳು. ಬಲತೊಡೆಯಲ್ಲಿ ಕುಳಿತುದು ಅವನ ಮಗನ ಪತ್ನಿಯಾಗುವುದಕ್ಕಾಗಿ.

ಗಂಗೆ ನೇರವಾಗಿ ಶಂತನುವಿನ ಬಳಿಗೇ ಹೋಗಿದ್ದರೆ ದೇವತಾಸ್ತ್ರೀಯನ್ನು ಮದುವೆಯಾಗಬೇಡವೆಂದು ಪ್ರತೀಪರಾಜ ಶಂತನುವನ್ನು ತಡೆಯುವ ಸಂಭವವಿತ್ತು. ಆಗ ಮದುವೆಯಾಗಿ ಮಕ್ಕಳನ್ನು ಹಡೆದು ಕೊಲ್ಲುವ ಕಾರ್ಯಕ್ಕೆ ವಿಘ್ನ ಉಂಟಾಗುತ್ತಿತ್ತು. ಅದಕ್ಕೆ ಗಂಗೆ ಶಂತನು ಹುಟ್ಟುವ ಮೊದಲೆ ಪ್ರತೀಪರಾಜನ ಬಲತೊಡೆಯಲ್ಲಿ ಕುಳಿತು ಅವನಿಂದಲೇ 'ನೀನು ನನ್ನ ಸೊಸೆ' ಯಾಗೆಂದು ಹೇಳಿಸಿಕೊಂಡಳು. ವಸ್ತುತಃ ಅವಳು ಪ್ರತೀಪನನ್ನು ಕಾಮಿಸಲಿಲ್ಲ. ವರುಣಪತ್ನಿ ತಾನು ಪರಪುರುಷರನ್ನು ಸೇರಬಾರದೆಂಬ ವಿವೇಕವಿತ್ತು.

ತೇನೈವ ಚೋಕ್ತಾ ಭವ ಮೇ ಸುತಸ್ಯ
ಭಾರ್ಯಾ ಯತೋ ದಕ್ಷಿಣೋರುಸ್ಥಿತಾಸಿ।
ಭಾಗೋ ಹಿ ದಕ್ಷೋ ದುಹಿತುಃಸ್ನುಷಾಯಾ
ಭಾರ್ಯಾಭಾಗೋ ವಾಮ ಇತಿ ಪ್ರಸಿದ್ಧಃ ॥ ೩೩ ॥

'ಗಂಗೆ, ನೀನು ಬಲತೊಡೆಯಲ್ಲಿ ಕುಳಿತುದರಿಂದ ನನ್ನ ಮಗನಿಗೆ ಪತ್ನಿಯಾಗು'

ಎಂದು ಪ್ರತೀಪನೇ ಹೇಳಿದ. ಏಕೆಂದರೆ ಬಲಭಾಗ ಮಗಳ ಇಲ್ಲವೆ ಸೊಸೆಯ ಸ್ಥಾನ. ಎಡಭಾಗ ಪತ್ನೀಸ್ಥಾನ ಎಂದು ಪ್ರಸಿದ್ಧ.

ಉವಾಚ ಸಾ ತಂ ನ ತು ಮಾಂ ಸುತಸ್ತೇ
ಕಾಸೀತಿ ಪೃಚ್ಛೇನ್ನ ತು ಮಾಂ ನಿವಾರಯೇತ್।
ಅಯೋಗ್ಯಕರ್ತ್ರಿಮಪಿ ಕಾರಣಂ ಚ
ಮತ್ಕರ್ಮಣೋ ನೈವ ಪೃಚ್ಛೇತ್ ಕದಾಚಿತ್ ॥ ೩೪ ॥

'ನಿನ್ನ ಮಗ ನನ್ನನ್ನು ನೀನಾರೆಂದು ಕೇಳಕೂಡದು. ನಾನು ಅಯುಕ್ತವಾದುದನ್ನು ಏನು ಮಾಡುತ್ತಿದ್ದರೂ ಆತ ತಡೆಯಬಾದು. ನಾನು ಹಾಗೆ ಮಾಡುವುದಕ್ಕೆ ಕಾರಣವನ್ನೂ ಎಂದೂ ಕೇಳಬಾರದು.

ಯದಾ ತ್ರಯಾಣಾಮಪಿ ಚೈಕಮೇಷ ಕರೋತಿ ಗಚ್ಛೇಯಮಹಂ ವಿಸೃಜ್ಯ।
ತದಾ ತ್ವದೀಯಂ ಸುತಮಿತ್ಯದೀರಿತೇ ತಥೇತಿ ರಾಜಾಪ್ಯವದತ್ ಪ್ರತೀಪಃ ॥ ೩೫ ॥

'ಈ ಮೂರರೊಳಗೆ ಒಂದನ್ನು ಮಾಡಿದರೂ ನಾನು ನಿನ್ನ ಮಗನನ್ನು ತೊರೆದು ಹೋಗುವೆನು'. ಗಂಗೆ ಹೀಗೆ ಹೇಳಿದಾಗ ಪ್ರತೀಪರಾಜ 'ಹಾಗೇ ಆಗಲಿ' ಎಂದ.

ಪಿತೃವಿನಾಜ್ಞೆಯನ್ನು ಪುತ್ರ ಮೀರಲಾರನೆಂದು ಪಿತನಿಂದಲೆ ಶಪಥ ಮಾಡಿಸುತ್ತಾಳೆ ಗಂಗೆ. ಹೀಗೆ ಶಪಥ ಮಾಡಿಸಿ ನಿರ್ವಿಘ್ನವಾಗಿ ಮಕ್ಕಳನ್ನು ಕೊಲ್ಲಬೇಕೆಂದೇ ರಾಜನ ಬಲತೊಡೆ ಏರಿದ್ದಳು.

ತಥೈವ ಪುತ್ರಾಯ ಚ ತೇನ ತದ್ವಚೋ ವಧೂಕ್ತಮುಕ್ತಂ ವಚನಾದ್ ದ್ಯುನದ್ಯಾಃ।
ಕನೀಯಸೇ ಸಾ ಹ್ಯವದತ್ ಸುತಸ್ತೇ ನಾನ್ಯಃ ಪತಿಃ ಶಂತನುರೇವ ಮೇ ವೃತಃ ॥ ೩೬ ॥

ಗಂಗೆಯ ಮಾತಿನಂತೆ ಅವಳು ಹೇಳಿದ ಮಾತನ್ನು ಹಾಗೆಯೇ ರಾಜ ತನ್ನ ಮಗನಿಗೆ ಹೇಳಿದ. ಏಕೆಂದರೆ ಅವಳು ಹೇಳಿದ್ದಳು, 'ನಿನ್ನ ಮಗನಾದ ಶಂತನುವೆ ನಾನು ವರಿಸುವ ಪತಿ, ಇನ್ನಾರೂ ಅಲ್ಲ.'

ಗಂಗೆ ಹೀಗೆ ಹೇಳಿದಾಗ ಶಂತನು ಇನ್ನೂ ಹುಟ್ಟಿಯೇ ಇರಲಿಲ್ಲ. ಪ್ರತೀಪ ತಪಸ್ಸು ಮಾಡಿ ಶಂತನುವನ್ನು ಮಗನನ್ನಾಗಿ ಪಡೆದು ಅವನು ದೊಡ್ಡವನಾದಾಗ ಗಂಗೆಯ ಮಾತನ್ನು ತಿಳಿಸಿದ.

ಗಂಗೆ ಕೃತಕೃತ್ಯಳಾದಳು

ತತಸ್ತು ಸಾ ಶಂತನುತೋಽಷ್ಟಪುತ್ರಾನ್
ಅವಾಪ್ಯ ಸಪ್ತನ್ಯಹನತ್ ತಥಾಷ್ಟಮಮ್।

ಗಂತುಂ ತತೋ ಮತಿಮಾಧಾಯ ಹಂತು-
ಮಿವೋದ್ಯೋಗಂ ಸಾ ಹಿ ಮೃಷಾ ಚಕಾರ ॥ ೩೭ ॥

ಬಳಿಕ ಗಂಗೆ ಶಂತನುವಿನಿಂದ ಎಂಟು ಮಕ್ಕಳನ್ನು ಹಡೆದು ಏಳನ್ನು ಕೊಂದಳು. ಶಂತನುವನ್ನು ಬಿಟ್ಟು ಹೋಗುವ ನಿರ್ಧಾರ ಮಾಡಿ ಎಂಟನೇ ಮಗುವನ್ನೂ ಹಾಗೇ ಕೊಲ್ಲಲು ಯತ್ನಮಾಡುವಂತೆ ಸುಮ್ಮನೆ ತೋರಿಕೊಂಡಳು.

ಅವಸ್ಥಿನ್ಯಾತಿಸುಖಾಯ ಮಾನುಷೇ
ಯತಃ ಸುರಾಣಾಮತ ಏವ ಗಂತುಮ್ ।
ಐಚ್ಛನ್ನತಸ್ಯಾ ಹಿ ಬಭೂವ ಮಾನುಷೋ
ದೇಹೋ ನರೋತ್ಥೋ ಹಿ ತದಾಸ ಶಂತನೋಃ ॥ ೩೮ ॥

ದೇವತೆಗಳಿಗೆ ಮನುಷ್ಯರ ಬಳಿ ಇರುವುದು ಹೆಚ್ಚು ಸುಖ ನೀಡುವುದಿಲ್ಲ. ಅದರಿಂದಲೇ ಗಂಗೆ ಹೊರಟುಹೋಗಲು ಬಯಸಿದಳು. ಏಕೆಂದರೆ ಅವಳಿಗೆ ಆಗ ಮನುಷ್ಯ ಶರೀರವಿರಲಿಲ್ಲ. ದೇವತಾ ಶರೀರವೇ ಇತ್ತು. ಶಂತನುವಿಗೆ ಆಗ ದೇವತಾ ಶರೀರವಿರಲಿಲ್ಲ. ಮನುಷ್ಯನಿಂದ ಜನಿಸಿದ ಶರೀರವೆ ಇತ್ತು.

ತಾಂ ಪುತ್ರನಿಧನೋದ್ಯುಕ್ತಾಂ ನ್ಯವಾರಯತ ಶಂತನುಃ।
ಕಾಸಿ ವಂ ಹೇತುನಾ ಕೇನ ಹಂಸಿ ಪುತ್ರಾನ್ ನೃಶಂಸವತ್ ॥ ೩೯ ॥

ಗಂಗೆ ಮಗನನ್ನು ಕೊಲ್ಲಲು ಉದ್ಯುಕ್ತಳಾದಾಗ ಶಂತನು ತಡೆದ. 'ಯಾರು ನೀನು? ಏಕೆ ಮಕ್ಕಳನ್ನು ರಾಕ್ಷಸಿಯಂತೆ ಕೊಲ್ಲುವೆ?' ಎಂದು ಕೇಳಿದ.

ಗಂಗೆ ಯಾವ ಮೂರನ್ನು ಶಂತನು ಮಾಡಬಾರದೆಂದು ಷರತ್ತು ಹಾಕಿದ್ದಳೋ ಆ ಮೂರನ್ನೂ ಶಂತನು ಒಮ್ಮೆಲೆ ಮಾಡಿದ-ನೀನಾರೆಂದು ಕೇಳಿದ. ಮಕ್ಕಳನ್ನು ಕೊಲ್ಲಬೇಡವೆಂದು ತಡೆದ. ಏಕೆ ಕೊಲ್ಲುವೆ ಎಂದು ಕಾರಣವನ್ನೂ ಕೇಳಿದ.

ರೂಪಂ ಸುರವರಸ್ತ್ರೀಣಾಂ ತವ ತೇನ ನ ಪಾತಕಮ್ ।
ಭವೇತ್ ಕರ್ಮ ತ್ವದೀಯಂ ತನ್ಮಹತ್ ಕಾರಣಮತ್ರ ಹಿ ॥ ೪೦ ॥

'ನಿನ್ನ ಈ ರೂಪ ಉತ್ತಮ ದೇವತಾ ಸ್ತ್ರೀರೂಪ. ಅದರಿಂದ ಪಾಪಕರ್ಮ ನಿನ್ನಿಂದ ನಡೆಯಲು ಶಕ್ಯವಿಲ್ಲ. ಈ ನಿನ್ನ ರಾಕ್ಷಸೀಕೃತ್ಯದಲ್ಲಿ ಏನೋ ಮಹತ್ತಾದ ಕಾರಣವಿರಬೇಕು.

ತತ್ ಕಾರಣಂ ವದ ಶುಭೇ ಯದಿ ಮಚ್ಛ್ರೋತ್ರಮರ್ಹತಿ।
ಇತೀರಿತಾವದತ್ ಸರ್ವಂ ಪ್ರಯಯೌ ಚ ಸುರಾಪಗಾ ॥ ೪೧ ॥

। 'ಮಂಗಳ ಸ್ವರೂಪಳೆ, ನನ್ನ ಕಿವಿ ಕೇಳಬಹುದಾಗಿದ್ದರೆ ಹೇಳು, ಆ ಕಾರಣವನ್ನು' ಹೀಗೆ ಶಂತನು ಹೇಳಿದಾಗ ಗಂಗೆ ಎಲ್ಲವನ್ನೂ ಹೇಳಿ ಹೊರಟುಹೋದಳು.

ನ ಧರ್ಮೋ ದೇವತಾನಾಂ ಹಿ ಜ್ಞಾತವಾಸಶ್ಚಿರಂ ನೃಷು।
ಕಾರಣಾದೇವ ಹಿ ಸುರಾ ನೃಷು ವಾಸಂ ಪ್ರಕುರ್ವತೇ ॥ ೪೨ ॥

ಕಾರಣಾಪಗಮೇ ಯಾಂತಿ ಧರ್ಮೋಽಪ್ಯೇಷಾಂ ತಥಾವಿಧಃ।
ಅದೃಶ್ಯತ್ವಮಸಂಸ್ಪರ್ಶೋ ಹ್ಯಸಂಭಾಷಣಮೇವ ಚ ॥ ೪೩ ॥

ಸುರೈರಪಿ ನೃಜಾತೈಸ್ತು ಗುಹ್ಯ ಧರ್ಮೋ ದಿವೌಕಸಾಮ್।
ಅತಃ ಸಾ ವರುಣಂ ದೇವಂ ಪೂರ್ವಭರ್ತಾರಮಪ್ಯಮುಮ್ ॥ ೪೪ ॥

ನೃಜಾತಂ ಶಂತನುಂ ತ್ಯಕ್ತ್ವಾ ಪ್ರಯಯೌ ವರುಣಾಲಯಮ್।
ಸುತಮಷ್ಟಮಮಾದಾಯ ಭರ್ತುರೇವಾಭ್ಯನುಜ್ಞಯಾ।
ವಧೋದ್ಯೋಗಾನ್ನಿವೃತ್ತಾ ಸಾ ದದೌ ಪುತ್ರಂ ಬೃಹಸ್ಪತೌ ॥ ೪೫ ॥

ಮನುಷ್ಯರಲ್ಲಿ ಬಹುಕಾಲ ಜ್ಞಾತವಾಗಿ ವಾಸಮಾಡುವುದು ದೇವತೆಗಳಿಗೆ ಧರ್ಮವಲ್ಲ. ವಿಶೇಷ ಕಾರಣವಿದ್ದಾಗಲೇ ದೇವತೆಗಳು ಮನುಷ್ಯರ ನಡುವೆ ವಾಸಮಾಡುತ್ತಾರೆ. ಆ ಕಾರಣವಿಲ್ಲದಾದಾಗ ಹೊರಟುಹೋಗುತ್ತಾರೆ. ಅವರ ಧರ್ಮವೇ ಹಾಗೆ. ಮನುಷ್ಯರಾಗಿ ಹುಟ್ಟಿದ ದೇವತೆಗಳಿಗೂ ಕಣ್ಣಿಗೆ ಕಾಣಲು ಸಿಗದಿರುವುದು, ಮುಟ್ಟಲು ಸಿಗದಿರುವುದು ಮತ್ತು ಮಾತುಕತೆಗೆ ನಿಲ್ಲದಿರುವುದು, ದೇವತೆಗಳ ರಹಸ್ಯಧರ್ಮ. ಶಂತನು ವರುಣ, ಒಬ್ಬ ದೇವ. ಗಂಗೆಗೆ ಮೊದಲು ಪತಿಯಾಗಿದ್ದವ. ಆದರೆ ಮನುಷ್ಯನಾಗಿ ಹುಟ್ಟಿದ್ದಾನೆ. ಅದರಿಂದ ಅವನನ್ನು ತೊರೆದುಗಂಗೆ ಪರಲೋಕಕ್ಕೆ ಹೋದಳು. ಹೋಗುವಾಗ ಎಂಟನೆ ಮಗನ ವಧೆಯ ಯತ್ನ ಕೈಬಿಟ್ಟು ಪತಿಯ ಅನುಮತಿಯಿಂದ ಅವನನ್ನು ಕರೆದುಕೊಂಡು ಹೋಗಿ ಬೃಹಸ್ಪತಿಯ ಬಳಿ ಬಿಟ್ಟಳು.

> ತತ್ತ್ವಾಭಿಮಾನಿ ದೇವತೆಗಳು ಮನುಷ್ಯರೊಳಗೆ ಅಜ್ಞಾತವಾಗಿ ಸದಾ ವಾಸಮಾಡುತ್ತಾರೆ. ಅದರಿಂದ ಜ್ಞಾತವಾಗಿ ವಾಸ ಮಾಡುವುದು ಮಾತ್ರವೆ ಅಧರ್ಮ ಎನ್ನಲಾಗಿದೆ. ಬಹುಕಾಲ ಜ್ಞಾತವಾಸವಿಲ್ಲ ಎಂದುದು ಭಕ್ತರಿಗೆ ವರ ನೀಡುವುದಕ್ಕಾಗಿ ಸ್ವಲ್ಪಕಾಲ ಅವರೊಡನೆ ಮಾತುಕತೆಯಾಡುವುದೂ, ಕಣ್ಣಿಗೆ ನೋಡಲು ಸಿಗುವುದೂ, ಮುಟ್ಟಲು ಸಿಗುವುದೂ ಧರ್ಮವೇ ಎಂಬ ಅಭಿಪ್ರಾಯದಿಂದ.[1]

---

1. ಪ್ರತ್ಯಕ್ಷೇಣ ಸ್ವಮೂರ್ತೇರ್ಜ್ಞಾತತಯಾ ವಾಸಃ ಜ್ಞಾತವಾಸಃ। ತತ್ತ್ವಾಭಿಮಾನಿತಯಾ ಅಜ್ಞಾತದೇವಾನಾಂ ನೃಷು ವಾಸಂ ವ್ಯಾವರ್ತಯಿತುಂ ಜ್ಞಾತಪದಂ । ಚಿರಮಿತ್ಯನೇನ ವರದಾನಾದ್ಯರ್ಥಂ ಕದಾಚಿದಾವಾಸೋಽಸ್ತೀತಿ ಸೂಚಯತಿ। -ವಾದಿರಾಜೀಯ

ದೇವವ್ರತನ ವಿದ್ಯಾಭ್ಯಾಸ

ದೇವವ್ರತೋಽಸಾವನುಶಾಸನಾಯ ಮಾತ್ರಾ ದತ್ತೋ ದೇವಗುರೌ ಶತಾರ್ಧಮ್।
ಸಂವತ್ಸರಾಣಾಮಖಿಲಾಂಶ್ಚ ವೇದಾನ್ ಸಮಭ್ಯಸತ್ ತದ್ವಶಗಾಂತರಾತ್ಮಾ ॥ ೪೬ ॥

ಈ ಗಂಗಾಪುತ್ರ ದೇವವ್ರತನೆನಿಸಿದ. ವಿದ್ಯಾಭ್ಯಾಸಕ್ಕಾಗಿ ಮಾತೆ ಅವನನ್ನು ದೇವಗುರು ಬೃಹಸ್ಪತಿಯ ಬಳಿಬಿಟ್ಟಳು. ಅವನು ಐವತ್ತು ವರ್ಷಕಾಲ ಗುರುವಿಗೆ ವಿಧೇಯವಾದ ಅಂತಃಕರಣದಿಂದ ಸಕಲ ವೇದಗಳನ್ನೂ ಅಭ್ಯಾಸ ಮಾಡಿದ.

ತತಶ್ಚ ಮಾತ್ರಾ ಜಗತಾಂ ಗರೀಯಸ್ಯನಂತಪಾರೇಽಖಿಲಸದ್ಗುಣಾರ್ಣವೇ।
ರಾಮೇ ಭೃಗೂಣಾಮಧಿಪೇ ಪ್ರದತ್ತಃ ಶುಶ್ರಾವ ತತ್ವಂ ಚ ಶತಾರ್ಧವರ್ಷಮ್ ॥೪೭॥

ಬಳಿಕ ಜಗತ್ತುಗಳಿಗೆ ಶ್ರೇಷ್ಠನೂ ಅಪರಿಮಿತ ಸಕಲ ಸದ್ಗುಣ ಸಾಗರನೂ ಆದ ಭೃಗುಕುಲ ಸ್ವಾಮಿಯಾದ ಪರಶುರಾಮನಲ್ಲಿ ದೇವವ್ರತನನ್ನು ಗಂಗೆ ಕೊಟ್ಟಳು. ಅಲ್ಲಿ ಆತ ಐವತ್ತು ವರ್ಷ ತತ್ವಶ್ರವಣ ಮಾಡಿದ.

ಸ ಪಂಚವಿಂಶತ್ ಪುನರಬ್ದಕಾನಾ-
ಮಸ್ತ್ರಾಣಿ ಚಾಭ್ಯಸ್ಯ ಪತೇರ್ಭೃಗೂಣಾಮ್।
ಮಾತ್ರಾ ಸಮಾನೀಯ ತಟೇ ನಿಜೇ ತು
ಸಂಸ್ಥಾಪಿತಃ ಪ್ರಾರ್ಪಯಿತುಂ ಸ್ವಪಿತ್ರೇ ॥ ೪೮ ॥

ದೇವವ್ರತ ಪುನಃ ಇಪ್ಪತ್ತೈದು ವರ್ಷಕಾಲ ಭೃಗುಕುಲದೊಡೆಯನಾದ ರಾಮನಿಂದ ಅಸ್ತ್ರಗಳನ್ನೂ ಅಭ್ಯಾಸಮಾಡಿದ. ಬಳಿಕ ಮಾತೆ ಅವನನ್ನು ತನ್ನ ತೀರದಲ್ಲಿ ತಂದು ನಿಲ್ಲಿಸಿದಳು. ಇದು ಅವನನ್ನು ತನ್ನ ತಂದೆಗೆ ತಂದೊಪ್ಪಿಸುವುದಕ್ಕಾಗಿ.

ಶಂತನುವಿನ ಬಳಿಯಲ್ಲಿ ದೇವವ್ರತ

ಸ ತತ್ರ ಬಧ್ವಾಶರಪಂಜರೇಣ
ಗಂಗಾಂ ವಿಜಹ್ರೇಽಸ್ಯ ಪಿತಾ ತದೈವ।
ವ್ರಜನ್ ಮೃಗಾರ್ಥೀ ತೃಷಿತೋಽವಲೋಕಯನ್
ಗಂಗಾಮತೋಯಾಮಭವತ್ ಸುವಿಸ್ಮಿತಃ ॥ ೪೯ ॥

ಅಲ್ಲಿ ದೇವವ್ರತ ಬಾಣಗಳ ಪಂಜರದಿಂದ ಗಂಗಾ ಪ್ರವಾಹವನ್ನು ಬಂಧಿಸಿ ನೀರಾಟವಾಡಿದ. ಆಗಲೆ ಅವನ ತಂದೆ ಶಂತನು ಮೃಗ ಬೇಟೆಗಾಗಿ ಸಂಚರಿಸುತ್ತ ಬಾಯರಿ, ಗಂಗೆ ಬಹಳ ಬತ್ತಿದ್ದನ್ನು ಕಂಡು ಅಚ್ಚರಿಗೊಂಡ.

'ಭಾಗೀರಥೀಮಲ್ಪಜಲಾಂ ಶಂತನುರ್ದೃಷ್ಟವಾನ್ ನೃಪ'
'ಗಂಗೆಯಲ್ಲಿ ನೀರು ಕಡಿಮೆಯಾಗಿದ್ದುದನ್ನು ಶಂತನು ಕಂಡ.'
ಎಂದು ಭಾರತದಲ್ಲಿ ಹೇಳಿರುವುದರಿಂದ ನಿರ್ಣಯದಲ್ಲಿ 'ಅತೋಯಾಂ' 'ನೀರೆ ಇಲ್ಲ' ಎಂದಿರುವುದರ ಅಭಿಪ್ರಾಯ ಗಂಗೆ ಪೂರ್ಣ ಬತ್ತಿತ್ತೆಂದಲ್ಲ. ಬಹಳ ಬತ್ತಿತ್ತು. ಸ್ವಲ್ಪವೆ ನೀರು ಇತ್ತು ಎಂದು ಗ್ರಹಿಸಬೇಕು. 'ಅನುದರಾ ಕನ್ಯಾ' ಎಂದರೆ ಕನ್ಯೆಗೆ ಹೊಟ್ಟೆಯೆ ಇಲ್ಲವೆಂದು ಅರ್ಥವಲ್ಲ. ಕೃಶೋದರಿ ಎಂದರ್ಥ. ಹಾಗೇ ಇದು.[1]

ಸ ಮಾರ್ಗಯಾಮಾಸ ತತೋಽಸ್ಯ ಹೇತುಜ್ಞಪ್ತ್ಯೈ ತದಾ ಸ್ವಂ ಚ ದದರ್ಶ ಸೂನುಮ್।
ಕ್ರೀಡಂತಮಸ್ತ್ರೇಣ ಬಭೂವ ಸೋಽಪಿ ಕ್ಷಣಾದದೃಶ್ಯಃ ಪಿತೃದರ್ಶನಾದನು ॥ ೫೦ ॥

ಇದಕ್ಕೆ ಕಾರಣ ತಿಳಿಯಲು ಶಂತನು ಅನ್ವೇಷಣ ಮಾಡಿದ. ಆಗ ಅಸ್ತ್ರದಿಂದ ಆಟವಾಡುತ್ತಿದ್ದ ತನ್ನ ಮಗನನ್ನು ಕಂಡ. ತಂದೆ ಕಂಡೊಡನೆ ಮಗ ಕ್ಷಣದಲ್ಲಿ ಅದೃಶ್ಯನಾದ.

ಪ್ರೀತಿಯ ತಾಯಿಯೇ ತನ್ನನ್ನು ತಂದೆಗೆ ಒಪ್ಪಿಸಬೇಕೆಂಬ ಅಭಿಪ್ರಾಯದಿಂದ ದೇವವ್ರತ ಅದೃಶ್ಯನಾದ.[2]

ಮೀಮಾಂಸಮಾನಂ ತಮವೇಕ್ಷ್ಯ ಗಂಗಾ
ಸುತಂ ಸಮಾದಾಯ ಪತಿಂ ಜಗಾದ।
ಅಯಂ ಸುತಸ್ತೇ ಪರಮಾಸ್ತ್ರವೇತ್ತಾ
ಸಮರ್ಪಿತೋ ವೀರ್ಯಬಲೋಪಪನ್ನಃ ॥ ೫೧ ॥

ಪತಿಯಾದ ಶಂತನು ವಿಚಾರ ಮಾಡುತ್ತಿದ್ದುದನ್ನು ಕಂಡು ಗಂಗೆ ಮಗನನ್ನು ಕರೆದುತಂದು ಹೇಳಿದಳು. 'ಇವನು ನಿನ್ನ ಮಗ, ಒಳ್ಳೆಯ ಅಸ್ತ್ರಜ್ಞ, ವೀರ್ಯ ಬಲಗಳುಳ್ಳವ. ಅವನನ್ನು ನಿನಗೆ ಒಪ್ಪಿಸುತ್ತಿದ್ದೇನೆ.'

ಅಸ್ಯಾಗ್ರಜಾಃ ಸ್ವಾಂ ಸ್ಥಿತಿಮೇವ ಯಾತಾ
ಹರೇಃ ಪದಾಂಭೋಜಸುಪಾವಿತೇ ಜಲೇ।
ತನೂರ್ಮದೀಯೇ ಪ್ರಣಿಧಾಯ ತಸ್ಮಾತ್
ತಾನ್ ಮಾ ಶುಚೋಽನೇನ ಚ ಮೋದಮಾನಃ ॥ ೫೨ ॥

---

1. ಅತೋಯಾಂ ಅಲ್ಪಜಲಾಂ। ಅನುದರಾ ಕನ್ಯೇತಿವತ್। ತದುಕ್ತಂ ಆದಿಪರ್ವಣಿ ಭಾಗೀರಥೀಮಲ್ಪಜಲಾಂ ಶಂತನುರ್ದೃಷ್ಟವಾನ್ ನೃಪ ಇತಿ। -ಜನಾರ್ದನೀಯ
2. ಪರಮೋಪಕರ್ತ್ರ್ಯಮಾತ್ಮೈವಾಹಂ ಪಿತ್ರೇ ದೇಯ ಇತಿ ಮನಸಾಽದೃಶ್ಯೋಽಭೂದಿತಿ ಭಾವಃ। -ವಾದಿರಾಜೀಯ

'ಇವನ ಅಣ್ಣಂದಿರು ಶ್ರೀಹರಿಯ ಪಾದಕಮಲದಿಂದ ಚೆನ್ನಾಗಿ ಪಾವನಗೊಂಡ ನನ್ನ ನೀರಲ್ಲಿ ಶರೀರಗಳನ್ನು ಬಿಟ್ಟು ತಮ್ಮ ಮೂಲರೂಪಗಳನ್ನೆ ಹೊಂದಿದ್ದಾರೆ. ಅದರಿಂದ ನೀನು ಈತನ ಜೊತೆಗೇ ಸಂತೋಷದಿಂದಿರು. ಆ ಮಕ್ಕಳ ಬಗ್ಗೆ ಶೋಕಿಸಬೇಡ.'

ಇತಿ ಪ್ರದಾಯಾಮುಮದೃಶ್ಯತಾಮಗಾತ್
ಗಂಗಾ ತಮಾದಾಯ ಯಯೌ ಗೃಹಂ ಸ್ವಕಮ್ ।
ರಾಜಾಭಿಷಿಚ್ಯಾಥ ಚ ಯೌವರಾಜ್ಯೇ
ಮುಮೋದ ತತ್ಸದ್ಗುಣತರ್ಪಿತೋ ಭೃಶಮ್ ॥ ೫೩ ॥

ಹೀಗೆ ಮಗನನ್ನು ಕೊಟ್ಟು ಗಂಗೆ ಅದೃಶ್ಯಳಾದಳು. ರಾಜ ಅವನನ್ನು ಕರೆದುಕೊಂಡು ತನ್ನ ಅರಮನೆಗೆ ಹೋದ. ಬಳಿಕ ಅವನನ್ನು ಯೌವರಾಜ್ಯ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿ ಅವನ ಸದ್ಗುಣಗಳಿಂದ ತೃಪ್ತಿ ಹೊಂದಿ ಬಹಳ ಸಂತೋಷಪಟ್ಟ.

ಪುನಃ ಸ ಪಿತ್ರಾನುಮತೋ ಬೃಹಸ್ಪತೇರವಾಪ ವೇದಾನ್ ಪುರುಷಾಯುಷೋಽರ್ಧತಃ।
ರಾಮಾತ್ ತಥಾಸ್ತ್ರಾಣಿ ಪುನಸ್ತ್ವವಾಪ ತಾವದ್ಬಿರಬ್ದೈಸ್ತ್ರಿಶತೈಶ್ಚ ತತ್ವಮ್ ॥ ೫೪ ॥

ದೇವವ್ರತ ತಂದೆಯ ಅನುಮತಿ ಪಡೆದು ಪುನಃ ಬೃಹಸ್ಪತಿಯಿಂದ ಪುರುಷಾಯುಷ್ಯದ ಅರ್ಧದಷ್ಟು ಅಂದರೆ ಐವತ್ತು ವರ್ಷಗಳ ಕಾಲ ವೇದಗಳನ್ನು ಕಲಿತ. ಹಾಗೇ ಅಷ್ಟೇ ವರ್ಷಕಾಲ ಪರಶುರಾಮನಿಂದ ಪುನಃ ಅಸ್ತ್ರಗಳನ್ನು ಉಪದೇಶ ಪಡೆದ. ಮತ್ತು ಮುನ್ನೂರು ವರ್ಷ ಕಾಲ ತತ್ವವನ್ನೂ ಉಪದೇಶ ಪಡೆದ.

ಸ ಸರ್ವವಿತ್ತ್ವಂ ಸಮವಾಪ್ಯ ರಾಮಾತ್
ಸಮಸ್ತವಿದ್ಯಾಧಿಪತೇರ್ಗುಣಾರ್ಣವಾತ್ ।
ಪಿತುಃ ಸಮೀಪಂ ಸಮವಾಪ್ಯ ತಂ ಚ
ಶುಶ್ರೂಷಮಾಣಃ ಪ್ರಮುಮೋದ ವೀರಃ ॥ ೫೫ ॥

ವೀರನಾದ ದೇವವ್ರತ ಸಕಲ ವಿದ್ಯಾಧಿಪತಿಯಾದ ಗುಣಸಮುದ್ರನಾದ ಪರಶುರಾಮನಿಂದ ಸರ್ವಜ್ಞತ್ವವನ್ನು ಹೊಂದಿ ತಂದೆಯ ಬಳಿಗೆ ಬಂದು ಅವನನ್ನು ಸೇವಿಸುತ್ತ ಸಂತೋಷಪಟ್ಟ.

ಕೃಪ-ಕೃಪಿ

ಯದೈವ ಗಂಗಾ ಸುಷುವೇಽಷ್ಟಮಂ ಸುತಂ
ತದೈವ ಯಾತೋ ಮೃಗಯಾಂ ಸ ಶಂತನುಃ।
ಶರದ್ವತೋ ಜಾತಮಪಶ್ಯದುತ್ತಮಂ
ವನೇ ವಿಸೃಷ್ಟಂ ಮಿಥುನಂ ತ್ವಯೋನಿಜಮ್ ॥ ೫೬ ॥

ಗಂಗೆ ಎಂಟನೆ ಮಗುವನ್ನು ಪ್ರಸವಿಸಿದಾಗಲೆ, ಶಂತನು ಬೇಟೆಗೆ ಹೋಗಿದ್ದಾಗ ಶರದ್ವಾನ್ ಋಷಿಗಳಿಂದ ಹುಟ್ಟಿದ ಅಯೋನಿಜರಾದ ಉತ್ತಮ ಹೆಣ್ಣು ಗಂಡು ಅವಳಿಮಕ್ಕಳು ಕಾಡಿನಲ್ಲಿ ಪರಿತ್ಯಕ್ತರಾಗಿದ್ದುದನ್ನು ಕಂಡ.

ಊರ್ವಶಿ ಎಂಬ ಅಪ್ಸರೆಯನ್ನು ಕಂಡಾಗ ಶರದ್ವಂತರ ವೀರ್ಯ ಪತನ ಹೊಂದಿತು. ಅದರಿಂದ ಗಂಡುಹೆಣ್ಣು ಅವಳಿ ಮಕ್ಕಳು ಜನಿಸಿದರು. ಮಾತೆಯ ಉದರದಲ್ಲಿ ಅಲ್ಲ. ಹೀಗೆ ಅವರು ಅಯೋನಿಜರು.[1]

ಶ್ಲೋಕದಲ್ಲಿ 'ತು' ಶಬ್ದದಿಂದ ಶರದ್ವಾನ್ ಮುನಿ ತಮ್ಮ ಮಕ್ಕಳನ್ನು ಶಂತನು ಕಂಡು ಎತ್ತಿಕೊಂಡು ರಕ್ಷಿಸುತ್ತಾನೆ ಎಂಬ ವಿಶ್ವಾಸದಿಂದ ಬಿಟ್ಟುಹೋಗಿದ್ದರು ಹೊರತು ಅವರು ನಿಷ್ಕರುಣಿಗಳಲ್ಲ ಎಂಬುದು ಸೂಚಿತವಾಗಿದೆ.[2]

ವಿಷ್ಣುಪುರಾಣದಲ್ಲಿ(4.19.63) ಅಹಲ್ಯಾಪತಿ ಗೌತಮನಿಗೇ ಶರದ್ವಾನ್ ಎಂದು ಹೆಸರು. ಅವನ ಮಗ ಶತಾನಂದ. ಶತಾನಂದನ ಮಗ ಸತ್ಯಧೃತಿ. ಧನುರ್ವೇದ ಪಾರಂಗತ. ಅವನೆ ಕೃಪ ಕೃಪಿಯರಿಗೆ ಜನ್ಮವಿತ್ತನು. ಈ ಸತ್ಯಧೃತಿಗೆ ಶರದ್ವಾನ್ ಎಂದು ಇನ್ನೊಂದು ಹೆಸರು. ಏಕೆಂದರೆ ಮಹಾಭಾರತದಲ್ಲಿ(ಆದಿ. 140.2) ಹಾಗೆ ಕರೆಯಲಾಗಿದೆ.

ಶರದ್ವಾಂಸ್ತು ತಪಃಕುರ್ವನ್ ದದರ್ಶ ಸಹಸೋರ್ವಶೀಮ್ ।
ಚಿಸ್ಕಂದ ರೇತಸಸ್ತ್ಯಾಥ ಶರಸ್ತಂಬೇ ತತೋಽಭವತ್ ॥ ೫೭ ॥

ವಿಷ್ಕಂಭೋನಾಮ ರುದ್ರಾಣಾಂ ಭೂಭಾರಹರಣೇಽಗತಾಮ್ ।
ಹರೇಃ ಪ್ರಾಪ್ತುಂ ತಥಾ ತಾರಾ ಭಾರ್ಯಾ ಯಾ ಹಿ ಬೃಹಸ್ಪತೇಃ ॥ ೫೮ ॥

ಶರದ್ವಾನ್ ತಪಸ್ಸು ಮಾಡುತ್ತಿದ್ದಾಗ ಅಕಸ್ಮಾತ್ ಊರ್ವಶಿಯನ್ನು ಕಂಡ. ಆಗ ಅವನ ರೇತಸ್ಸು ಲಾಳದ ಕಡ್ಡಿಯ ಪೊದರಿನಲ್ಲಿ ಬಿದ್ದಿತು. ಅದರಿಂದ ರುದ್ರರಲ್ಲಿ ವಿಷ್ಕಂಭನೆಂಬವನು ಹರಿಗೆ ಭೂಭಾರಹರಣದಲ್ಲಿ ಸಹಾಯಕನಾಗಬೇಕೆಂದು ಜನಿಸಿದ. ಹಾಗೇ ಬೃಹಸ್ಪತಿಯ ಪತ್ನಿ ತಾರೆಯೂ ಜನಿಸಿದಳು.

ತಾವುಭೌ ಶಂತನುರ್ದೃಷ್ಟ್ವಾ ಕೃಪಾವಿಷ್ಟಃಸ್ವಕಂ ಗೃಹಮ್ ।
ನಿನಾಯ ನಾಮ ಚಕ್ರೇಽಥ ಕೃಪಾಯಾ ವಿಷಯೌ ಯತಃ ॥ ೫೯ ॥

---

1. ಊರ್ವಶೀದರ್ಶನಮಾತ್ರೇಣ ರೇತಃಪಾತಾಖ್ಯಕಾರಣವಿಶೇಷಾತ್ ಅಯೋನಿಜಂ ಮಾತೃಯೋನಾವಜಾತಂ। -ವಾದಿರಾಜೀಯ
2. ಶಂತನುಃ ಪರಿಪಾಲಯಿಷ್ಯತೀತಿ ಕಾರ್ಯವಿಶೇಷೇಣ ವನೇ ವಿಸೃಷ್ಟಂ ಮಿಥುನಮಿತಿ ಸಂಬಂಧಃ । ಅತೋ ಮುನೇರ್ನ ನೈರ್ಘೃಣ್ಯಮಿತಿಭಾವಃ। -ವಾದಿರಾಜೀಯ

ಕೃಪಃ ಕೃಪೀತಿ ಸ ಕೃಪಸ್ತಪೋ ವಿಷ್ಣೋಶ್ಚಚಾರ ಹ।
ತಸ್ಯ ಪ್ರೀತಸ್ತದಾ ವಿಷ್ಣುಃ ಸರ್ವಲೋಕೇಶ್ವರೇಶ್ವರಃ ॥ ೬೦ ॥

ಪ್ರಾದಾದೇಷ್ಯತ್ಸಪ್ತರ್ಷಿತ್ವಮಾಯುಃ ಕಲ್ಪಾಂತಮೇವ ಚ।
ಸ ಶಂತನುಗೃಹೇ ತಿಷ್ಠನ್ ದೇವವ್ರತಸಖಾಭವತ್ ॥ ೬೧ ॥

ಅವರಿಬ್ಬರನ್ನೂ ಕಂಡು ಶಂತನು ದಯೆದುಂಬಿ ತನ್ನ ಅರಮನೆಗೆ ಒಯ್ದು ಕೃಪೆಗೆ ಪಾತ್ರರಾದ್ದರಿಂದ ಅವರಿಗೆ ಕೃಪ ಕೃಪೀ ಎಂದೇ ನಾಮಕರಣ ಮಾಡಿದ. ಕೃಪ ವಿಷ್ಣುವನ್ನು ಕುರಿತು ತಪಸ್ಸು ಮಾಡಿದ. ಆಗ ಎಲ್ಲ ಜಗದೊಡೆಯರಿಗೂ ಒಡೆಯನಾದ ವಿಷ್ಣು ಸಂತುಷ್ಟನಾಗಿ ಅವನನ್ನು ಮುಂದಿನ ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬನನ್ನಾಗಿ ಮಾಡಿದ. ಮನುಕಲ್ಪಾಂತ್ಯದವರೆಗಿನ ಆಯುಷ್ಯವನ್ನೂ ಅವನಿಗೆ ಕೊಟ್ಟ. ಈ ಕೃಪ ಶಂತನುವಿನ ಅರಮನೆಯಲ್ಲಿದ್ದು ದೇವವ್ರತನಿಗೆ ಮಿತ್ರನಾದ.

ಪುತ್ರವಚ್ಛಂತನೋಶ್ಚಾಸೀತ್ ಸ ಚ ಪುತ್ರವದೇವ ತತ್।
ಮಿಥುನಂ ಪಾಲಯಾಮಾಸ ಕೃಪೋಽಪ್ಯಸ್ತ್ರ್ಯವಾಪ ಚ ॥ ೬೨ ॥

ಸರ್ವವೇದಾನಧಿಜಗೌ ಸರ್ವಶಾಸ್ತ್ರಾಣಿಕೌಶಿಕಾತ್।
ತತ್ತ್ವಜ್ಞಾನಂ ತಥಾ ವ್ಯಾಸಾದಾಪ್ಯ ಸರ್ವಜ್ಞತಾಂ ಗತಃ ॥ ೬೩ ॥

ಕೃಪ ಶಂತನುವಿಗೆ ಮಗನಂತಿದ್ದ. ಶಂತನು ಆ ಹೆಣ್ಣು ಗಂಡು ಮಕ್ಕಳಿಬ್ಬರನ್ನೂ ಮಕ್ಕಳಂತೆ ರಕ್ಷಿಸಿದ. ಕೃಪ ಮುಂದೆ ಅಸ್ತ್ರಗಳನ್ನು ಕಲಿತ. ಎಲ್ಲ ವೇದಗಳನ್ನೂ ಅಭ್ಯಾಸ ಮಾಡಿದ. ಎಲ್ಲ ಶಾಸ್ತ್ರಗಳನ್ನೂ ವಿಶ್ವಾಮಿತ್ರರಿಂದ ಕಲಿತ. ತತ್ವಜ್ಞಾನವನ್ನು ವ್ಯಾಸರಿಂದ ಪಡೆದು ಸರ್ವಜ್ಞತ್ವವನ್ನು ಹೊಂದಿದ.

ಕೃಪನಿಗೆ ಅಸ್ತ್ರಗಳನ್ನೂ ವೇದಗಳನ್ನೂ ಉಪದೇಶಿಸಿದವರು ಯಾರೆಂದು ಇಲ್ಲಿ ಹೇಳಿಲ್ಲ. ಮಹಾಭಾರತದಲ್ಲಿ ತಂದೆಯಾದ ಶರದ್ವಾನ್ ರಹಸ್ಯವಾಗಿ ಬಂದು ಎಲ್ಲ ವಿದ್ಯೆಗಳನ್ನು ಉಪದೇಶಿಸಿದ, ಗೋತ್ರಾದಿಗಳನ್ನು ತಿಳಿಸಿಕೊಟ್ಟ ಎಂದಿದೆ.[1]

ದ್ರೋಣನ ಜನನ

ಯದಾಭಿಜಾತಃ ಸ ಕೃಪಸ್ತದೈವ
ಬೃಹಸ್ಪತೇಃ ಸೂನುರಗಾಚ್ಚ ಗಂಗಾಮ್।

---

1. ಅಗತ್ಯ ತಸ್ಯ ಗೋತ್ರಾದಿ ಸರ್ವಮಾಖ್ಯಾತವಾಂಸ್ತದಾ।
ಚತುರ್ವಿಧಂ ಧನುರ್ವೇದಂ ಶಾಸ್ತ್ರಾಣಿ ವಿವಿಧಾನಿ ಚ।
ನಿಖಿಲೇನಾಸ್ಯ ತತ್ ಸರ್ವಂ ಗುಹ್ಯಮಾಖ್ಯಾತವಾನ್ ಪಿತಾ ॥ (ಮ.ಭಾ.ಆದಿ.140-21)

ಸ್ನಾತುಂ ಘೃತಾಚೀಂ ಸ ದದರ್ಶ ತತ್ರ
ಶ್ಲಥದ್ದುಕೂಲಾಂ ಸುರವರ್ಯ ಕಾಮಿನೀಮ್ ॥ ೬೪ ॥

ಕೃಪ ಹುಟ್ಟಿದ ಸಮಯದಲ್ಲಿಯೆ ಬೃಹಸ್ಪತಿಯ ಪುತ್ರ ಭರದ್ವಾಜ ಒಮ್ಮೆ ಸ್ನಾನಕ್ಕಾಗಿ ಗಂಗೆಗೆ ಹೋಗಿದ್ದ. ಅಲ್ಲಿ ದೇವೋತ್ತಮರಿಂದ ಉಪಭೋಗ್ಯಳಾದ ಘೃತಾಚಿಯನ್ನು ಅವಳು ಉಟ್ಟ ಸೀರೆ ಜಾರಿದ್ದಾಗ ನೋಡಿದ.

ತದ್ದರ್ಶನಾತ್ ಸ್ಕನ್ನಮಥೇಂದ್ರಿಯಂ ಸ
ದ್ರೋಣೇ ದಧಾರಾಶು ತತೋಽಭವತ್ ಸ್ವಯಮ್ ।
ಅಂಭೋಜಜಾವೇಶಯುತೋ ಬೃಹಸ್ಪತಿಃ
ಕರ್ತುಂ ಹರೇಃಕರ್ಮ ಭುವೋ ಭರೋದ್ಧೃತೌ ॥ ೬೫ ॥

ಘೃತಾಚಿಯ ದರ್ಶನದಿಂದ ಬಿದ್ದ ವೀರ್ಯವನ್ನು ಭರದ್ವಾಜ ದ್ರೋಣದಲ್ಲಿಟ್ಟ. ಒಡನೆ ಅದರಿಂದ ಸ್ವತಃ ಬೃಹಸ್ಪತಿಯೆ ಬ್ರಹ್ಮಾವೇಶಯುಕ್ತನಾಗಿ ಭೂಭಾರಹರಣದಲ್ಲಿ ಕೃಷ್ಣನಿಗೆ ಸೇವೆ ಮಾಡುವುದಕ್ಕಾಗಿ ಹುಟ್ಟಿದ.

ದ್ರೋಣವೆಂದರೆ ಕಳಸವೆನ್ನುತ್ತಾರೆ ಜನಾರ್ದನ ಭಟ್ಟರು. ವಾದಿರಾಜರ ಪ್ರಕಾರ ಒಂದು ಕೊಳಗ, ಮೂವತ್ತೆರಡು ಸೇರಿನ ಪಾತ್ರೆ. ಅದರಲ್ಲಿ ಭರದ್ವಾಜರು ನೀರು ತುಂಬಿಡುತ್ತಿದ್ದರು. ಅದರಲ್ಲಿ ಅವರು ತಮ್ಮ ವೀರ್ಯವನ್ನಿಟ್ಟೊಡನೆ ಅವರ ತಂದೆಯಾದ ಬೃಹಸ್ಪತಿಯೆ ಮಗನಾಗಿ ಅವತರಿಸಿದ. ಅವನೇ ದ್ರೋಣ. ಅವನು ಅಪ್ಸರೆಯ ಗರ್ಭದಲ್ಲಿ ಜನಿಸದ ಅಯೋನಿಜನಾದ್ದರಿಂದ ಅವನ ಜನ್ಮ ಪರಿಶುದ್ಧ. ಭೀಮಾರ್ಜುನಾದಿಗಳಿಗೆ ಗುರುವಾಗುವವನಾದ್ದರಿಂದ ಬ್ರಹ್ಮಾವೇಶವೂ ಇತ್ತು.[1]

ದ್ರೋಣೇತಿ ನಾಮಾಸ್ಯ ಚಕಾರ ತಾತೋ
ಮುನಿರ್ಭರದ್ವಾಜ ಉತಾಸ್ಯ ವೇದಾನ್ ।
ಅಧ್ಯಾಪಯಾಮಾಸ ಸ ಶಾಸ್ತ್ರಸಂಘಾನ್
ಸರ್ವಜ್ಞತಾಮಾಪ ಚ ಸೋಽಚಿರೇಣ ॥ ೬೬ ॥

ತಂದೆಯಾದ ಭರದ್ವಾಜ ಮುನಿ ಮಗನಿಗೆ ದ್ರೋಣನೆಂದೇ ನಾಮಕರಣ ಮಾಡಿದ. ಅವನಿಗೆ ವೇದಗಳನ್ನೂ ಶಾಸ್ತ್ರ ಸಮೂಹಗಳನ್ನೂ ಕಲಿಸಿದ. ಹೀಗೆ ದ್ರೋಣ ಬೇಗನೆ ಸರ್ವಜ್ಞತ್ವವನ್ನು ಪಡೆದ.

---

1. ವ್ರೀಹ್ಯಾದೀನಾಂ ಮಾನವಿಶೇಷೋ ದ್ರೋಣ ಇತ್ಯುಚ್ಯತೇ। ಕೊಳಗ ಇತ್ಯಪಭ್ರಷ್ಟಭಾಷಾ। ವಿರಕ್ತತ್ವಾತ್ ಜಲಸಂಗ್ರಹಾಯ ತಮಪಿ ಸಹೈವ ನೀತವಾನಿತಿ ಜ್ಞೇಯಂ। ಬೃಹಸ್ಪತೇರಯೋಗ್ಯಂ ಭೀಮಾರ್ಜುನಾದೀನಾಂ ಗುರುತ್ವಂ ಶಿರಸಾವೋಢುಂ ಬ್ರಹ್ಮಾತತ್ರ ಸನ್ನಿಹಿತೋ ಬಭೂವ। -ವಾದಿರಾಜೀಯ

ಬ್ರಹ್ಮಾವೇಶವಿದ್ದುದರಿಂದ ಬೇಗನೆ ಸರ್ವಜ್ಞತ್ವ ಲಭಿಸಿತ್ತು.[1]

ಜಿಹ್ವಾಗ್ರೇ ಚತುರೋ ವೇದಾನ್ ಹಸ್ತಾಗ್ರೇ ಸಶರಂ ಧನುಃ।
ಉಭಯೋದ್ರೋರ್ಣಸಾಮರ್ಥ್ಯಂ ಶಾಪಾದಪಿ ಶರಾದಪಿ ॥

'ನಾಲಿಗೆ ತುದಿಯಲ್ಲಿ ನಾಲ್ಕು ವೇದಗಳನ್ನು ಕೈಯ ತುದಿಯಲ್ಲಿ ಬಿಲ್ಲುಬಾಣಗಳನ್ನು ಧರಿಸುವ ದ್ರೋಣನ ಸಾಮರ್ಥ್ಯ ಶಾಪದಿಂದಲೂ ವ್ಯಕ್ತವಾಗಬಹುದು, ಬಾಣದಿಂದಲೂ ವ್ಯಕ್ತವಾಗಬಹುದು' ಎಂದು ಭಾರತದಲ್ಲಿ ಹೇಳಿದೆ.

ದ್ರುಪದನ ಜನನ

ಕಾಲೇ ಚ ತಸ್ಮಿನ್ ಪೃಷತೋಽನಪತ್ಯೋ
ವನೇ ತು ಪಾಂಚಾಲ ಪತಿಶ್ಚಚಾರ।
ತಪೋ ಮಹತ್ ತಸ್ಯತಥಾ ವರಾಪ್ಸರೋಽ
ವಲೋಕನಾತ್ ಸ್ಕಂದಿತಮಾಶು ರೇತಃ ॥೫೭॥

ಅದೇ ಸಮಯದಲ್ಲಿ ಪಾಂಚಾಲದೇಶದ ದೊರೆ ಪೃಷತ ಮಕ್ಕಳಿಲ್ಲದವನಾದ್ದರಿಂದ ಅರಣ್ಯದಲ್ಲಿ ದೊಡ್ಡ ತಪಸ್ಸು ಮಾಡಿದ. ಅವನಿಗೆ ಒರ್ವ ಉತ್ತಮ ಅಪ್ಸರೆಯ ದರ್ಶನದಿಂದ ತಕ್ಷಣ ವೀರ್ಯ ಕೆಳಗೆ ಬಿದ್ದಿತು.

ಹರ್ಯಶ್ವರಾಜನಿಗೆ ಮುದ್ಗಲ, ಸೃಂಜಯ, ಬೃಹದಿಷು, ಯವೀನರ, ಕಾಂಪಿಲ್ಯ ಎಂದು ಐದು ಮಕ್ಕಳು. ಎಲ್ಲರೂ ಸಮರ್ಥರು. ಐದು ದೇಶಗಳ ರಕ್ಷಣೆಗೆ ಇವರು ಐವರು ಸಾಕು, 'ಪಂಚಾನಾಂ ಅಲಂ' ಎಂದು ತಂದೆ ಹೇಳಿದ್ದರಿಂದ ಅವರು ಪಾಂಚಾಲರೆನಿಸಿದರು. ಅವರ ದೇಶವೂ ಪಾಂಚಾಲವೆನಿಸಿತು. ಪಾಂಚಾಲ ರಾಜವಂಶದಲ್ಲಿ ಬಂದ ಸೋಮಕ ರಾಜನಿಗೆ ನೂರು ಮಂದಿ ಮಕ್ಕಳು. ಅವರಲ್ಲಿ ಕೊನೆಯವನು ಪೃಷತರಾಜ.

ಸ ತದ್ ವಿಲಜ್ಜಾವಶತಃ ಪದೇನ
ಸಮಾಕ್ರಮತ್ ತಸ್ಯ ಬಭೂವ ಸೂನುಃ।
ಹುಹೂ ತು ನಾಮ್ನಾ ಸ ವಿರಿಂಚಗಾಯಕೋ
ನಾಮ್ನಾವಹೋ ಯೋ ಮರುತಾಂ ತದಂಶಯುಕ್ ॥೬೮॥

ಪೃಷತ ನಾಚಿಕೆಯಿಂದ ವೀರ್ಯವನ್ನು ಕಾಲಿಂದ ಮುಚ್ಚಿದ. ಆ ವೀರ್ಯದಿಂದ

---

1. ದ್ರೋಣೇ ಬ್ರಹ್ಮಣಃ ಸನ್ನಿಧಾನಾದಚಿರೇಣೇತ್ಯುಕ್ತಂ। -ವಾದಿರಾಜೀಯ

ಅವನಿಗೆ ಒಬ್ಬ ಮಗ ಜನಿಸಿದ. ಅವನು ವಿಶೇಷವಾಗಿ ಬ್ರಹ್ಮನ ಗಾಯಕ. ಹೆಸರು ಹು ಹೂ ಎಂದು ಅವನು ಮರುತ್ತುಗಳಲ್ಲಿ ಒಬ್ಬನಾದ ಆವಹನ ಅಂಶಯುಕ್ತನಾಗಿದ್ದ.

> ಪೃಷತ ತಪಸ್ಸು ಮಾಡಿ ಪಡೆದ ಅಯೋನಿಜನಾದ ಪುತ್ರ ದ್ರುಪದ. ಈತ ಮೂಲರೂಪದಲ್ಲಿ ಹುಹೂ ಎಂಬ ಗಂಧರ್ವ. ಗಂಧರ್ವರು ದೇವತೆಗಳ ಗಾಯಕರು. ಈತ ಬ್ರಹ್ಮನ ಗಾಯಕ. ಕೆಲವೇಳೆ ಇಂದ್ರಾದಿಗಳ ಸಭೆಯಲ್ಲಿ ಹಾಡುತ್ತಾನೆ. ಹೆಚ್ಚಾಗಿ ಬ್ರಹ್ಮನ ಆಸ್ಥಾನದಲ್ಲಿ ಹಾಡುತ್ತಾನೆ.

ಸ ದ್ರೋಣತಾತಾತ್ ಸಮವಾಪ ವೇದಾನ್
ಅಸ್ತ್ರಾಣಿ ವಿದ್ಯಾಶ್ಚ ತಥಾ ಸಮಸ್ತಾಃ।
ದ್ರೋಣೇನ ಯುಕ್ತಃ ಸ ತದಾ ಗುರೋಃ ಸುತಂ
ಸಹೈವ ನೌ ರಾಜ್ಯಮಿತಿ ಹ್ಯವಾದೀತ್ ॥ ೬೯ ॥

ದ್ರುಪದ ದ್ರೋಣನ ಜೊತೆ ಸೇರಿ ದ್ರೋಣನ ತಂದೆಯಾದ ಭರದ್ವಾಜನಿಂದ ವೇದಗಳನ್ನೂ ಅಸ್ತ್ರಗಳನ್ನೂ ಎಲ್ಲ ವಿದ್ಯೆಗಳನ್ನೂ ಪಡೆದ. ಆಗ ಅವನು ಗುರುಪುತ್ರನಾದ ದ್ರೋಣನಿಗೆ 'ನಾವಿಬ್ಬರೂ ಜೊತೆಯಾಗಿಯೇ ರಾಜ್ಯಸುಖ ಅನುಭವಿಸೋಣ' ಎಂದ.

> ದ್ರುಪದನ ತಂದೆ ಪೃಷತ ಭರದ್ವಾಜನ ಮಿತ್ರನಾಗಿದ್ದ. ಅದರಿಂದ ದ್ರುಪದನಿಗೆ ಭರದ್ವಾಜನಲ್ಲಿ ವಿದ್ಯಾಭ್ಯಾಸವಾಯಿತು.

ದ್ರೋಣನ ಬ್ರಾಹ್ಮಣ ಧರ್ಮ

ಪದೇ ದ್ರುತತ್ವಾದ್ ದ್ರುಪದಾಭಿಧೇಯಃ
ಸ ರಾಜ್ಯಮಾಪಾಥ ನಿಜಾಂ ಕೃಪೀಂ ಸಃ।
ದ್ರೋಣೋಽಪಿ ಭಾರ್ಯಾಂ ಸಮವಾಪ್ಯ ಸರ್ವ-
ಪ್ರತಿಗ್ರಹೋಜ್ಝಚ್ಚ ಪುರೇ ವಸತ್ ಸುಖೀ ॥ ೭೦ ॥

ಕಾಲಿಂದ ಮುಚ್ಚಿದ ಪ್ರಯುಕ್ತ ಅವನಿಗೆ ದ್ರುಪದ ಎಂದೇ ಹೆಸರಾಯಿತು. ಮುಂದೆ ಆತ ರಾಜ್ಯವನ್ನು ಹೊಂದಿದ. ಇತ್ತ ದ್ರೋಣ ತನ್ನವಳೇ ಆದ ಕೃಪಿಯನ್ನು ಮದುವೆಯಾಗಿ ಎಲ್ಲ ಪ್ರತಿಗ್ರಹವನ್ನೂ ಪರಿತ್ಯಜಿಸಿ ಪಟ್ಟಣದಲ್ಲಿ ಸುಖಿಯಾಗಿ ವಾಸಮಾಡಿದ.

> ಪೃಷತ ವೀರ್ಯವನ್ನು ಕಾಲಿಂದ ಮುಚ್ಚಿದಾಗ ಅದರಲ್ಲಿದ್ದ ದ್ರುಪದನೂ ಮುಚ್ಚಿಹೋದನೆಂದು ಅವನಿಗೆ ದ್ರುಪದ ಎಂದು ಹೆಸರಾಯಿತು. ಪದದಲ್ಲಿ ಅಂದರೆ ಪಾದದಲ್ಲಿ ದ್ರುತ, ಪದದ್ರು ಆಗಬೇಕು. ಆದರೆ ಕೆಲವೊಮ್ಮೆ ಸಮಾಸದಲ್ಲಿ ವಿಶೇಷ್ಯದ ಅನಂತರವೂ ವಿಶೇಷಣ ಬರುವುದುಂಟು. ಅದರಿಂದ ದ್ರುಪದ ಎಂದಾಗಿದೆ.

ದ್ರೋಣ ಬೃಹಸ್ಪತಿಯ ಅವತಾರವಾದ್ದರಿಂದ, ಬೃಹಸ್ಪತಿಯ ಪತ್ನಿ ತಾರೆಯೇ ಕೃಪಿಯಾಗಿ ಅವತರಿಸಿದ್ದರಿಂದ, ಅವಳು ನಿಯತಪತ್ನಿ, ತನ್ನವಳು. ಅವಳನ್ನು ದ್ರೋಣ ಮದುವೆಯಾದ.

ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹಗಳೆಂಬ ಷಟ್ಕರ್ಮಗಳಲ್ಲಿ ಯಜನ ಅಧ್ಯಯನ ದಾನಗಳು ಮೂರು ವರ್ಣದವರಿಗೂ ಆವಶ್ಯಕ. ಯಾಜನ ಅಧ್ಯಾಪನ ಪ್ರತಿಗ್ರಹಗಳು ಬ್ರಾಹ್ಮಣನಿಗೆ ಮಾತ್ರ ಜೀವನ ವೃತ್ತಿಯಾಗಿರಲು ಶಾಸ್ತ್ರ ಅನುಮತಿ ನೀಡಿದೆ. ಇದು ಅನುಮತಿ ಮಾತ್ರವೆ ಹೊರತು ಆವಶ್ಯಕವೆಂದು ವಿಹಿತವಾಗಿಲ್ಲ. ಅವನ್ನು ವಿರಕ್ತನಾದ ಬ್ರಾಹ್ಮಣ ಬಿಡಬಹುದು. ಅದರಿಂದ ತಪಸ್ಸು ವೃದ್ಧಿಯಾಗುವುದು. ದ್ರೋಣ ವಿರಕ್ತನಾಗಿದ್ದು ಪ್ರತಿಗ್ರಹವನ್ನೇ ಬಿಟ್ಟಿದ್ದ. ಅಂದರೆ ಕಡು ಬಡವನಾಗಿದ್ದರೂ ಯಾರೇ ದ್ರವ್ಯಾದಿ ದಾನ ಮಾಡಲಿ, ಸ್ವೀಕರಿಸುತ್ತಿದ್ದಿಲ್ಲ. ಅದರಿಂದ ದ್ರುಪದ ಅರ್ಧರಾಜ್ಯ ಕೊಡುವೆನೆಂದು ಮಾತುಕೊಟ್ಟಿದ್ದರೂ ದ್ರೋಣ ಅದನ್ನು ಸ್ವೀಕರಿಸಲು ಎಂದೂ ಬಯಸಲಿಲ್ಲ.

ಬ್ರಾಹ್ಮೇ ದೈವೇ ತಥೇಷ್ವಸ್ತ್ರೇ ಯಮುಪಾಸನ್ ಗುಣಾರ್ಥಿನಃ।
ಬ್ರಾಹ್ಮಣಾ ರಾಜಪುತ್ರಾಶ್ಚ ಸ ಕಥಂ ಮೃತ್ಯುನಾ ಹೃತಃ ?
ಯೋಧೀತ್ಯ ಚತುರೋ ವೇದಾನ್ ಸಾಂಗಾನಾಖ್ಯಾತ ಪಂಚಮಾನ್
ಬ್ರಾಹ್ಮಣಾನಾಂ ಪ್ರತಿಷ್ಠಾಸೀತ್ ಸ್ರೋತಸಾಮಿವ ಸಾಗರಃ ॥

'ಬ್ರಾಹ್ಮಣಾಚಾರಗಳಲ್ಲಿಯೂ ದೇವತಾಕಾರ್ಯಗಳಲ್ಲಿಯೂ ಶಸ್ತ್ರಾಸ್ತ್ರ ಪ್ರಯೋಗ ವಿಷಯಗಳಲ್ಲಿಯೂ ವಿಶೇಷ ಪ್ರಾವೀಣ್ಯಕ್ಕಾಗಿ ಬ್ರಾಹ್ಮಣರೂ ರಾಜಕುಮಾರರೂ ದ್ರೋಣರನ್ನಾಶ್ರಯಿಸುತ್ತಿದ್ದರು. ನಾಲ್ಕೂ ವೇದಗಳನ್ನು ಇತಿಹಾಸಪುರಾಣಗಳನ್ನೂ ತಿಳಿದು ನದಿಗಳಿಗೆ ಸಾಗರದಂತೆ ಬ್ರಾಹ್ಮಣರಿಗೆ ದ್ರೋಣರು ಆಶ್ರಯರಾಗಿದ್ದರು' ಎಂದು ಮಹಾಭಾರತ ಹೇಳುತ್ತಿದೆ.

ಶಿಷ್ಯರಿಂದ ಗುರುದಕ್ಷಿಣೆ ಪಡೆಯಬಹುದು. ಪುತ್ರನ ಸಂಪತ್ತು ಹೇಗೆ ಪಿತನದ್ದೇ ಆಗಿರುವುದೋ ಹಾಗೇ ಶಿಷ್ಯನ ಸಂಪತ್ತು ಗುರುವಿನದೇ ಆಗಿರುತ್ತದೆ. ಇಲ್ಲಿ ಪ್ರತಿಗ್ರಹ ದೋಷಕ್ಕೆ ಅವಕಾಶವಿಲ್ಲ. ಅದರಿಂದ ಕೌರವರ ಅರಮನೆಯಲ್ಲಿ ದ್ರೋಣರು ವಾಸ ಮಾಡಿದರು.

ಪಟ್ಟಣದಲ್ಲಿ ವಾಸ ಮಾಡಿದನೆಂದರೆ ಇಲ್ಲಿ ಹಸ್ತಿನಾಪುರ ವಿವಕ್ಷಿತ ಪುರುವಂಶದ ಸುಹೋತ್ರನ ಮಗ ಹಸ್ತಿ ಎಂಬ ರಾಜ ನಿರ್ಮಿಸಿದ ಪುರ ಹಾಸ್ತಿನಪುರ ಅಥವಾ ಹಸ್ತಿನಾಪುರ. (ಮ.ಭಾ.ಆದಿ. 63-36).

ವಿರಾಟರಾಜ

ಶಿಲೋಂಛ ವೃತ್ತ್ಯೈವ ಹಿ ವರ್ತಯನ್ ಸ ಧರ್ಮಂ ಮಹಾಂತಂ ವಿರಜಂ ಜುಷಾಣಃ।
ಉವಾಸ ನಾಗಾಖ್ಯಪುರೇ ಸಖಾಽಸ ದೇವವ್ರತಸ್ಯಾಥ ಕೃಪಸ್ಯ ಚೈವ ॥ ೭೧ ॥

ಶಿಲವೃತ್ತಿ ಮತ್ತು ಉಂಛವೃತ್ತಿಗಳಿಂದಲೆ ಜೀವನ ನಿರ್ವಹಣೆ ಮಾಡುತ್ತ ನಿರ್ದುಷ್ಟವಾದ ಮಹಾಧರ್ಮವನ್ನು ನಡೆಸುತ್ತ ಹಸ್ತಿನಾಪುರದಲ್ಲಿ ವಾಸಮಾಡಿದ ದ್ರೋಣ ದೇವವ್ರತನಿಗೂ ಕೃಪನಿಗೂ ಮಿತ್ರನಾದ.

'ಹಿ' ಶಬ್ದ ಇಲ್ಲಿ ಉತ್ತಮ ಬ್ರಾಹ್ಮಣನಿಗೆ ಶಿಲೋಂಛವೃತ್ತಿ ಪ್ರಶಸ್ತವೆಂಬುದು ಪ್ರಸಿದ್ಧವೆನ್ನುತ್ತಿದೆ.

ಉಂಛಃ ಕಣಶ ಆದಾನಂ ಕಣಶಾದ್ಯರ್ಜನಂ ಶಿಲಂ।

ಬೆಳೆಯನ್ನು ಕೊಯ್ದ ಮೇಲೆ ಹೊಲದಲ್ಲಿ ಬಿದ್ದಿರುವ ಧಾನ್ಯದ ಕಾಳುಗಳನ್ನು ಎತ್ತಿ ಸಂಗ್ರಹಿಸಿ ಜೀವನ ನಿರ್ವಹಣ ಮಾಡುವುದು ಉಂಛವೃತ್ತಿ. ಹೊಲದಲ್ಲಿ ಬಿದ್ದಿರುವ ತೆನೆಗಳನ್ನು ಸಂಗ್ರಹಿಸಿ ಬದುಕುವುದು ಶಿಲವೃತ್ತಿ.

ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ ಧನಂ।

'ಭಗವಂತ ಕೊಟ್ಟಿದ್ದನ್ನೇ ಉಣ್ಣು ಕಂಡವರ ಎಂಜಲಿಗೆ ಕೈಯೊಡ್ಡಬೇಡ' ಎನ್ನುವ ಈಶೋಪನಿಷತ್ತಿನ ಆದೇಶವನ್ನು ಅಕ್ಷರಶಃ ಪಾಲಿಸಿದ ಉತ್ತಮ ಬ್ರಾಹ್ಮಣ ದ್ರೋಣ. ಆತ ಸ್ವತಃ ಬ್ರಾಹ್ಮಣ್ಯಕ್ಕೆ ಅಭಿಮಾನಿಯಾದ ಬೃಹಸ್ಪತಿಯ ಅವತಾರ. ಬ್ರಾಹ್ಮಣ್ಯಕ್ಕೆ ಮುಖ್ಯಾಭಿಮಾನಿಯಾದ ಚತುರ್ಮುಖನ ಆವೇಶವೂ ಇತ್ತು. ಅದರಿಂದ ಇದು ಸಾಧ್ಯವಾಯಿತು. 'ವಿರಜ' ನಿರ್ದುಷ್ಟ ಅಂದರೆ ನಿಷ್ಕಾಮಕರ್ಮ. ಮಹಾಧರ್ಮ ಎಂದರೆ ವಿಷ್ಣು ಪ್ರೀತಿಕರವಾದ ಧರ್ಮ.

ತೇಷಾಂ ಸಮಾನೋ ವಯಸಾ ವಿರಾಟ-
ಸ್ತ್ವಭೂದ್ಬಹಾ ನಾಮ ವಿಧಾತೃಗಾಯಕಃ।
ಮರುತ್ಸು ಯೋ ವಿವಹೋ ನಾಮ ತಸ್ಯಾ-
ಪ್ಯಂಶೇನ ಯುಕ್ತೋ ನಿಜಧರ್ಮವರ್ತೀ ॥ ೭೨ ॥

ದೇವವ್ರತ, ದ್ರೋಣ, ಕೃಪ, ದ್ರುಪದ ಈ ನಾಲ್ವರಿಗೆ ವಯಸ್ಸಿನಲ್ಲಿ ಸಮಾನನಾಗಿದ್ದ ವಿರಾಟರಾಜ. ಈತ ಹಿಂದೆ ಹಹಾ ಎಂಬುವ, ಬ್ರಹ್ಮಗಾಯಕ. ಮರುತ್ತುಗಳಲ್ಲಿ ವಿವಹ ಎಂಬವನ ಅಂಶದಿಂದ ಕೂಡಿದ್ದು ಸ್ವಧರ್ಮ ನಿಷ್ಠನಾಗಿದ್ದ.

ಹಹಾ ಎಂದೂ ಹಾಹಾ ಎಂದೂ ಈ ಗಂಧರ್ವನಿಗೆ ಹೆಸರುಗಳು. ಹು ಹೂವಿಗೂ ಹುಹು, ಹೂಹೂ, ಹಹೂ ಎಂಬ ಹೆಸರುಗಳಿವೆ. ರೈವತರಾಜ ಬ್ರಹ್ಮಸಭೆಗೆ ಬಂದಾಗ ಅಲ್ಲಿ ಹಹಾ ಹೂಹೂ ಅತಿತಾನವೆಂಬ ದಿವ್ಯಗಾನ ಹಾಡುತ್ತಿದ್ದರು. (ವಿಷ್ಣುಪು.4.1.68)

ಶಂತನು-ಸತ್ಯವತೀ ಸಮಾಗಮ

ತತಃ ಕದಾಚಿನ್ ಮೃಗಯಾಂ ಗತಃ ಸ
ದದರ್ಶ ಕನ್ಯಾಂ ಪ್ರವರಾಂ ತು ಶಂತನುಃ।
ಯಾ ಪೂರ್ವಸರ್ಗೇ ಪಿತೃಪುತ್ರಿಕಾ ಸತೀ
ಚಚಾರ ವಿಷ್ಣೋಸ್ತಪ ಉತ್ತಮಂ ಚಿರಮ್ ॥ ೭೩ ॥

ದೇವವ್ರತನಿಗೆ ಯುವರಾಜ ಪದವಿಯಲ್ಲಿ ಪಟ್ಟಾಭಿಷೇಕವಾದ ಬಳಿಕ ಒಮ್ಮೆ ಬೇಟೆಗೆ ಹೋಗಿದ್ದ ಶಂತನು ಶ್ರೇಷ್ಠಕನ್ಯೆಯೊಬ್ಬಳನ್ನು ಕಂಡ. ಅವಳು ಪೂರ್ವಜನ್ಮದಲ್ಲಿ ಪಿತೃಗಳ ಪುತ್ರಿ, ವಿಷ್ಣುವನ್ನು ಕುರಿತು ಬಹುಕಾಲ ಉತ್ತಮ ತಪಸ್ಸು ಮಾಡಿದ್ದಳು.

ಈ ಕನ್ಯೆ ಸತ್ಯವತಿ ಹಿಂದೆ ಅಚ್ಛೋದೆ ಎಂಬ ನದೀದೇವತೆ. ಹರಿವಂಶ ಹೇಳುವಂತೆ ಅಗ್ನಿಷ್ವಾತ್ತರೆಂಬ ಅಮೂರ್ತ ಪಿತೃಗಣದವರ ಮಾನಸಪುತ್ರಿ. ಸುಕಾಲ ಅಂಗೀರಸ ಸುಸ್ವಧ ಸೋಮಪ ಎಂದು ನಾಲ್ಕು ಗಣಗಳ ಪಿತೃಗಳು ಮೂರ್ತರು. ಅಂದರೆ ರೂಪಉಳ್ಳವರು. ವೈರಾಜ, ಅಗ್ನಿಷ್ವಾತ್ತ ಬರ್ಹಿಷದ ಎಂದು ಮೂರು ಗಣದವರು ಅಮೂರ್ತರು. ಅವರಲ್ಲಿ ಅಗ್ನಿಷ್ವಾತ್ತರ ಮಾನಸಪುತ್ರಿ ಅಚ್ಛೋದೆ ಎಂದು ಹರಿವಂಶ (1-118-26) ಹೇಳಿದೆ. ಮಹಾಭಾರತದಲ್ಲಿ (ಆದಿ 64-17) ಬರ್ಹಿಷದರ ಮಾನಸಪುತ್ರಿ ಎನ್ನಲಾಗಿದೆ.

ಯಸ್ಯೈವರಂ ವಿಷ್ಣುರದಾತ್ ಪುರಾಹಂ
ಸುತಸ್ತವ ಸ್ಯಾಮಿ ಯಾ ವಸೋಃ ಸುತಾ।
ಜಾತಾ ಪುನರ್ದಾಶಗೃಹೇ ವಿವರ್ಧಿತಾ
ವ್ಯಾಸಾತ್ಮನಾ ವಿಷ್ಣುರಭೂಚ್ಚ ಯಸ್ಯಾಮ್ ॥ ೭೪ ॥

ಅಚ್ಛೋದೆಗೆ ವಿಷ್ಣು 'ನಾನು ನಿನ್ನ ಮಗನಾಗುವೆನು' ಎಂದು ವರನೀಡಿದ್ದ. ಅವಳೇ ವಸುಚಕ್ರವರ್ತಿಯ ಮಗಳಾಗಿ ಹುಟ್ಟಿ ಅಂಬಿಗರ ಮನೆಯಲ್ಲಿ ಬೆಳೆಸಲ್ಪಟ್ಟಿದ್ದಳು. ಅವಳಲ್ಲಿ ವಿಷ್ಣು ವ್ಯಾಸರೂಪದಿಂದ ಅವತರಿಸಿದ್ದ.

ತದ್ದರ್ಶನಾನ್ನೃಪತಿರ್ಜಾತಹೃಚ್ಛಯೋ
ವವ್ರೇ ಪ್ರದಾನಾಯ ಚ ದಾಶರಾಜಮ್ ।
ಋತೇ ಸ ತಸ್ಯಾಸ್ತನಯಸ್ಯ ರಾಜ್ಯಂ
ನೈಚ್ಛದ್ದಾತುಂ ತಾಮಥಾಯಾದ್ ಗೃಹಂ ಸ್ವಮ್ ॥ ೭೫ ॥

ಅವಳ ದರ್ಶನದಿಂದ ಅನುರಾಗಯುಕ್ತನಾದ ರಾಜ ಅಂಬಿಗರ ದೊರೆಯ ಬಳಿ ಅವಳನ್ನು ತನಗೆ ಕೊಡಲು ಕೇಳಿಕೊಂಡ. ಅವಳ ಮಗನಿಗೆ ರಾಜ್ಯ ಸಿಗದಿದ್ದಲ್ಲಿ ಅವಳನ್ನು ಕೊಡಲು ಆತ ಒಪ್ಪಲಿಲ್ಲ. ಆಗ ರಾಜ ತನ್ನ ಮನೆಗೆ ಬಂದ.

ತಚ್ಚಿಂತಯಾ ಮ್ಲಾನಮುಖಂ ಜನಿತ್ರಂ ದೃಷ್ಟ್ವೈವ ದೇವವ್ರತ ಅಶ್ವಪೃಚ್ಛತ್।
ತತ್ಕಾರಣಂ ಸಾರಥಿಮಸ್ಯ ತಸ್ಮಾತ್ ಶ್ರುತ್ವಾಖಿಲಂ ದಾಶಗೃಹಂ ಜಗಾಮ ॥ ೭೬ ॥

ಅವಳ ಚಿಂತೆಯಲ್ಲಿ ತಂದೆಯ ಮುಖಬಾಡಿದ್ದನ್ನು ಕಂಡೊಡನೆ ಅದಕ್ಕೆ ಕಾರಣವೇನೆಂದು ಬೇಗನೆ ರಾಜನ ಸಾರಥಿಯನ್ನು ಕೇಳಿದ ದೇವವ್ರತ. ಅವನಿಂದ ಎಲ್ಲವನ್ನೂ ಕೇಳಿ ತಿಳಿದು ಅಂಬಿಗನ ಮನೆಗೆ ಹೋದ.

ಸ ತಸ್ಯ ವಿಶ್ವಾಸಕೃತೇ ಪ್ರತಿಜ್ಞಾಂ ಚಕಾರ ನಾಹಂ ಕರವಾಣಿ ರಾಜ್ಯಮ್ ।
ತಥೈವ ಮೇ ಸಂತತಿತೋ ಭಯಂ ತೇ ವ್ಯೇತೂರ್ಧ್ವರೇತಾಃ ಸತತಂ ಭವಾಮಿ ॥ ೭೭ ॥

ದೇವವ್ರತ ಅಂಬಿಗನಿಗೆ ವಿಶ್ವಾಸ ಉಂಟಾಗುವುದಕ್ಕಾಗಿ 'ನಾನು ರಾಜ್ಯಭಾರ ಮಾಡುವುದಿಲ್ಲ. ನನ್ನ ಸಂತತಿಯಿಂದಲೂ ನಿನಗೆ ಭಯ ದೂರವಾಗಲಿ, ನಾನು ಸದಾ ಊರ್ಧ್ವರೇತನಾಗಿರುತ್ತೇನೆ' ಎಂದು ಪ್ರತಿಜ್ಞೆಗೈದ.

ಊರ್ಧ್ವರೇತನೆಂದರೆ ನೈಷ್ಠಿಕ ಬ್ರಹ್ಮಚಾರಿ. ಮರಣಪರ್ಯಂತವೂ ಸ್ತ್ರೀಪರಿಗ್ರಹ ಮಾಡದಿರುವವ. ಸ್ತ್ರೀಪರಿಗ್ರಹ ಮಾಡಿದರೆ ಅವಳ ಸಂತತಿ ರಾಜ್ಯವನ್ನು ಅಪಹರಿಸುವ ಸಂಭವವಿದೆ. ಅದರಿಂದ ಊರ್ಧ್ವರೇತನಾಗಿರುವ ಪ್ರತಿಜ್ಞೆಮಾಡಬೇಕಾಯಿತು. ಇಂಥ ಪರಿಸ್ಥಿತಿ ಒದಗಿ ಬಂದುದಕ್ಕೆ ದ್ಯುವಸುವಿಗೆ ಬ್ರಹ್ಮದೇವ ನೀಡಿದ್ದ ಶಾಪ ಕಾರಣ.

ಭೀಮವ್ರತತ್ವಾದ್ಧಿತದಾಸ್ಯ ನಾಮ
ಕೃತ್ವಾ ದೇವಾ ಭೀಷ್ಮ ಇತಿ ಹ್ಯಚೀಕ್ಲೃಪನ್ ।
ಪ್ರಸೂನವೃಷ್ಟಿಂ ಸ ಚ ದಾಶದತ್ತಾಂ
ಕಾಲೀಂ ಸಮಾದಾಯ ಪಿತುಃ ಸಮರ್ಪಯತ್ ॥ ೭೯ ॥

ದೇವವ್ರತ ಭಯಂಕರವಾದ ವ್ರತವನ್ನು ಕೈಗೊಂಡುದರಿಂದ ದೇವತೆಗಳು ಆಗ

ಅವನಿಗೆ 'ಭೀಷ್ಮ' ಎಂದು ಹೆಸರಿಟ್ಟು ಹೂಮಳೆಗರೆದರು. ಭೀಷ್ಮ ಅಂಬಿಗನಿತ್ತ ಕಾಳಿಯನ್ನು ಕರೆದುತಂದು ತಂದೆಗೆ ನೀಡಿದ.

ಭೀಷ್ಮಸ್ತು ಖಲು ಪಿತುಃ ಪ್ರಿಯಚಕೀರ್ಷಯಾ ಸತ್ಯವತೀ-
ಮಾನಯಾಮಾಸ ಮಾತರಂ। ಯಮಾಹುಃ ಕಾಲೀತಿ।
(ಮ.ಭಾ.ಆದಿ. 64-51)

ಎಂದು ಸತ್ಯವತಿಗೆ ಕಾಳಿ ಎಂದು ನಾಮಾಂತರ ಭಾರತದಲ್ಲಿ ಇದೆ. ನೈಷ್ಠಿಕ ಬ್ರಹ್ಮಚರ್ಯವ್ರತ ಬಲು ಕಠಿನ. ದೇವವ್ರತ ತಂದೆಯ ಸುಖಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಿ ಈ ವ್ರತವನ್ನು ಕೈಗೊಂಡಾಗ ದೇವತೆಗಳು ಸುಪ್ರೀತರಾಗಿ 'ಭೀಷ್ಮ' ಎಂದು ಹೆಸರಿಟ್ಟರು. 'ಭೀಷ್ಮ' ಎಂದರೆ ಭಯಂಕರ, ಭಯಂಕರ ವ್ರತನಿಷ್ಠ.[1] 'ಭೀಷ್ಮಃ ಸಾಹಸಿಕೋ ಮತಃ' ಎಂದು ಅಮರಮಾಲಾಕೋಶ ಹೇಳುವಂತೆ ಮಹಾಸಾಹಸ ಮಾಡುವವನೆಂದು ದೇವವ್ರತನನ್ನು ದೇವತೆಗಳು 'ಭೀಷ್ಮ'ನೆಂದು ಕರೆದರು.[2]

ಜ್ಞಾತ್ವಾತು ತಾಂ ರಾಜಪುತ್ರೀಂ ಗುಣಾಢ್ಯಾಂ
ಸತ್ಯಸ್ಯ ವಿಷ್ಣೋರ್ಮಾತರಂ ನಾಮತಸ್ತತ್।
ಲೋಕೇ ಪ್ರಸಿದ್ಧಾಂ ಸತ್ಯವತೀತ್ಯುದಾರಾಂ
ವಿವಾಹಯಾಮಾಸ ಪಿತುಃ ಸ ಭೀಷ್ಮಃ ॥ ೭೯ ॥

ಕಾಳಿ ಒಬ್ಬಳು ರಾಜಕುಮಾರಿ, ಗುಣಾಢ್ಯಳು, ಸತ್ಯಸ್ವರೂಪರಾದ ವ್ಯಾಸರಿಗೆ ಜನ್ಮವಿತ್ತು ಸತ್ಯವತಿ ಎಂಬ ಹೆಸರಿಂದ ಲೋಕದಲ್ಲಿ ಪ್ರಸಿದ್ಧಳಾದವಳು, ಉತ್ತಮ ಸ್ತ್ರೀ ಎಂದು ತಿಳಿದೇ ಭೀಷ್ಮ ಅವಳನ್ನು ತಂದೆಗೆ ವಿವಾಹ ಮಾಡಿಸಿದ.

ಸಜ್ಜನರ ಮನಸ್ಸು

ಪ್ರಾಯಃ ಸತಾಂ ನ ಮನಃ ಪಾಪಮಾರ್ಗೇ
ಗಚ್ಛೇದಿತಿ ಹ್ಯಾತ್ಮಮನಶ್ಚ ಸಕ್ತಮ್।
ಜ್ಞಾತ್ವಾಪಿ ತಾಂ ದಾಶಗೃಹೇ ವಿವರ್ಧಿತಾಂ
ಜಗ್ರಾಹ ಸದ್ಧರ್ಮರತಶ್ಚ ಶಂತನುಃ ॥ ೮೦ ॥

---

1. ಹಿಂ ಶಬ್ದೇನ ಊರ್ಧ್ವರೇತಸ್ಕತ್ವಾಖ್ಯ ವ್ರತಸ್ಯ ಇತರಾಸಾಧ್ಯತ್ವಾತ್ ಭಯಂಕರತ್ವಂ ಪ್ರಸಿದ್ಧ ಮಿತಿ ಸೂಚಯತಿ। -ಪಾದಿರಾಜೀಯ
2. ಭೀಷ್ಮಃ ಮಹಾಸಾಹಸಿಕಃ। ಭೀಷ್ಮಃ ಸಾಹಸಿಕೋ ಮತಃ ಇತ್ಯಮರಮಾಲಾ। -ಲಕ್ಷಾಲಂಕಾರ

ಸಜ್ಜನರ ಮನಸ್ಸು ಪ್ರಾಯಃ ಪಾಪಮಾರ್ಗದಲ್ಲಿ ಹೋಗುವುದಿಲ್ಲ. ತನ್ನ ಮನಸ್ಸು ಸತ್ಯವತಿಯಲ್ಲಿ ಆಸಕ್ತವಾಗಿದೆ ಎಂಬ ಕಾರಣದಿಂದಲೂ, ಸತ್ಯವತಿ ಅಂಬಿಗರ ಹೆಣ್ಣೆಂದು ಪ್ರಸಿದ್ಧಳಾದರೂ ಅಂಬಿಗರ ಮನೆಯಲ್ಲಿ ರಾಜಕುಮಾರಿಗೆ ಯೋಗ್ಯವಾದ ರೀತಿಯಿಂದಲೆ ಬೆಳೆದವಳೆಂದು ತಿಳಿದೂ, ಶುದ್ಧಧರ್ಮನಿರತನಾದ ಶಂತನು ಸತ್ಯವತಿಯನ್ನು ಸ್ವೀಕರಿಸಿದ.

ಸಜ್ಜನರ ಮನಸ್ಸೂ ಕೆಲವೊಮ್ಮೆ ಪಾಪಮಾರ್ಗದಲ್ಲಿ ಹೋಗುವುದುಂಟು. ಚಂದ್ರ ಗುರುಪತ್ನಿಯನ್ನೂ ಸುಗ್ರೀವ ವಾಲಿಯ ಹೆಂಡತಿಯನ್ನೂ ಪರಿಗ್ರಹಿಸಿದುದು ಪಾಪಮಾರ್ಗ. ಆದರೆ ಅದಕ್ಕೆ ಬಲವತ್ತಾದ ಕಾರಣ ಉಂಟು. ಕಲ್ಪಾಂತದವರೆಗೂ ಮೇರು ಪ್ರದಕ್ಷಿಣೆ ಮಾಡುತ್ತ ಯೋಗ್ಯತೆಗೆ ಮೀರಿದ ಪುಣ್ಯ ಕಟ್ಟಿಕೊಂಡ ಚಂದ್ರ. ಸುಗ್ರೀವನೂ ರಾಮನ ಸೇವೆ ಮಾಡಿ ಅಧಿಕ ಪುಣ್ಯ ಹೊಂದಿದ. ಅದರಿಂದ ಇಬ್ಬರೂ ಗುರುತಲ್ಪಗಮನ ರೂಪ ಪಾಪಮಾರ್ಗದಲ್ಲಿ ನಡೆದರು. ಶಂತನು ತಾನು ಅಂಥ ಅಧಿಕ ಪುಣ್ಯವೇನೂ ಮಾಡಿಲ್ಲವೆಂದು ಧೈರ್ಯದಿಂದ ತಾನು ಬಯಸಿದ ಹೆಣ್ಣು ನಿಜವಾಗಿ ಅಂಬಿಗರ ಹೆಣ್ಣಾಗಿರಲಾರಳು. ಕ್ಷತ್ರಿಯಳೇ ಇರಬೇಕು. ಲೋಕದಲ್ಲಿ ಅವಳು ಅಂಬಿಗರ ಹೆಣ್ಣೆಂದು ಪ್ರಸಿದ್ಧಳಾಗಿದ್ದರೂ ವಾಸ್ತವದಲ್ಲಿ ರಾಜಕುಮಾರಿಗೆ ಯೋಗ್ಯವಾದ ಅನ್ನಪಾನಾದಿಗಳಿಂದಲೆ ವಿಶೇಷವಾಗಿ ಬೆಳೆಸಲ್ಪಟ್ಟವಳು ಎಂಬುದು ಶಂತನುವಿನ ವಿಚಾರವಾಗಿತ್ತು. ಶುದ್ಧ ಧರ್ಮನಿರತನಾಗಿದ್ದ ಶಂತನು ಈ ಎರಡು ಕಾರಣಗಳಿಂದ ಸತ್ಯವತಿಯನ್ನು ಸ್ವೀಕರಿಸಿದ. 'ವಿವರ್ಧಿತಾ' ಎಂಬಲ್ಲಿ 'ವಿ' ಎಂದರೆ ವಿಶೇಷವಾಗಿ, ರಾಜಕುಮಾರಿಗೆ ಯೋಗ್ಯವಾದ ರೀತಿಯಿಂದ ಬೆಳೆಸಲ್ಪಟ್ಟವಳು ಎಂದರ್ಥ.[1]

---

1. ಚಂದ್ರಸ್ಯ ಸ್ವೋಚ್ಚಬೃಹಸ್ಪತೇರ್ದಾರಪರಿಗ್ರಹಾತ್ ಸುಗ್ರೀವಸ್ಯ ಸ್ವೋಚ್ಚವಾಲಿವಧೂಪರಿಗ್ರಹ ದರ್ಶನಾಚ್ಚ ಪ್ರಾಯ ಇತ್ಯುಕ್ತಂ। ತರ್ಹಿ ತದ್ವದೇವ ಸ್ವಸ್ಯಾಪಿ ಕದಾಚಿತ್ ಪಾಪ ಪ್ರವೃತ್ತಿಃ ಸ್ಯಾದಿತಿ ನ ಶಂಕನೀಯಂ ಚಂದ್ರಸ್ಯ ಅಕಲ್ಪಾಂತಂ ಮೇರುಮಭಿತಃ ಪರ್ಯಟನೇನ ಲಬ್ಧಸ್ವಯೋಗ್ಯತಾತಿರಿಕ್ತ ಪುಣ್ಯಸ್ಯ ಸುಗ್ರೀವಸ್ಯ ಚ ಸ್ವಯೋಗ್ಯತಾತಿರೇಕೇಣ ರಾಮಸೇವಾರ್ಜಿತ ಪುಣ್ಯಸ್ಯ ನಾಶಾಯ ಕದಾಚಿತ್ ಪಾಪೇ ಪ್ರವೃತ್ತಿ ಸಂಭವಾತ್। ಮಮ ತು ತದಭಾವಾತ್ ನ ತಾದೃಶೀ ಪ್ರವೃತ್ತಿರಿತಿ ಭಾವಸಂಭವಾತ್। ಅತ ಏವ ಸತಾಮಿತ್ಯುಕ್ತಂ। ಸ್ವಯೋಗ್ಯತಾ ಯಾವತೀ ತಾವತ್ಯೇವ ಚ ಸತಾಂ ವರ್ತಮಾನಾನಾಂ, ಸತಾಂ ಸಜ್ಜನಾನಾಂ ಇತ್ಯಾವೃತ್ತ್ಯಾ ಯೋಜನೀಯಂ। ಇತಿ ಹೇತೋಃ, ಆತ್ಮಮನಶ್ಚ ಸಕ್ತಮಿತಿ ಹೇತೋಶ್ಚ। ತಾಂ ದಾಶ ಕನ್ಯಾತ್ವೇನ ಪ್ರಸಿದ್ಧಮಪಿ ದಾಶಗೃಹೇ ವಿವರ್ಧಿತಾಂ, ವಿ ವಿಶೇಷೇಣ, ರಾಜಕನ್ಯಾಯೋಗ್ಯಾನ್ನಪಾನ ವಿಶೇಷೇಣ ವರ್ಧಿತಾಂ। ಸರ್ವಂ ವಾಕ್ಯಂ ಸಾವಧಾರಣ ಮಿತಿ ನ್ಯಾಯೇನ ವಿವರ್ಧಿತಾಮೇವ, ನ ತೂತ್ಪನ್ನಾಮಿತ್ಯರ್ಥಃ। ಜ್ಞಾತ್ವಾ ಜಗ್ರಾ ಹೇತಿ ಯೋಜನಾ।

-ವಾದಿರಾಜೀಯ

ಸ್ವಚ್ಛಂದ ಮರಣ

ಸ್ವಚ್ಛಂದಮೃತ್ಯುತ್ವವರಂ ಪ್ರದಾಯ
ತಥಾಪ್ಯಜೇಯತ್ವಮಧೃಷ್ಯತಾಂ ಚ।
ಯುದ್ಧೇಷು ಭೀಷ್ಮಸ್ಯ ನೃಪೋತ್ತಮಃ ಸ
ರೇಮೇ ತಥೈವಾಬ್ದಗಣಾನ್ ಬಹೂಂಶ್ಚ ॥೮೧॥

ನೃಪೋತ್ತಮನಾದ ಶಂತನು ಭೀಷ್ಮನಿಗೆ ಸ್ವಚ್ಛಂದ ಮೃತ್ಯುತ್ವ ವರವನ್ನೂ ಯುದ್ಧಗಳಲ್ಲಿ ಅಜೇಯತ್ವವನ್ನೂ ಅಧೃಷ್ಯತ್ವವನ್ನೂ ನೀಡಿ ಸತ್ಯವತಿಯೊಂದಿಗೆ ಬಹುವರ್ಷಗಳ ಕಾಲ ವಿಹರಿಸಿದ.

ಸ್ವೇಚ್ಛೆಯಿಂದ ಅನಾಯಾಸವಾಗಿ ಶರೀರತ್ಯಾಗ ಮಾಡುವ ಸಾಮರ್ಥ್ಯವೆ ಸ್ವಚ್ಛಂದ ಮೃತ್ಯುತ್ವ ಯುದ್ಧದಲ್ಲಿ ಯಾರಿಂದಲೂ ಸೋಲಿಸಲಾಗದಿರುವುದು ಅಜೇಯತ್ವ ಇನ್ನೊಬ್ಬರ ಬಲಾತ್ಕಾರ ಹಿಂಸೆಗಳಿಗೊಳಗಾಗದಿರುವುದು ಅಧೃಷ್ಯತ್ವ.

ಲೇಭೇ ಸ ಚಿತ್ರಾಂಗದಮತ್ರ ಪುತ್ರಂ ತಥಾ ದ್ವಿತೀಯಂ ಚ ವಿಚಿತ್ರವೀರ್ಯಮ್।
ತಯೋಶ್ಚ ಬಾಲ್ಯೇ ವ್ಯಸೃಜಚ್ಛರೀರಂ ಜೀರ್ಣೇನ ದೇಹೇನ ಚ ಕಿಂ ಮಮೇತಿ ॥೮೨॥

ಶಂತನು ಸತ್ಯವತಿಯಲ್ಲಿ ಚಿತ್ರಾಂಗದನೆಂಬ ಒಬ್ಬ ಮಗನನ್ನೂ ವಿಚಿತ್ರವೀರ್ಯನೆಂಬ ಇನ್ನೊಬ್ಬ ಮಗನನ್ನೂ ಪಡೆದ. ಅವರು ಇನ್ನೂ ಸಣ್ಣವರಾಗಿದ್ದಾಗಲೆ ತಾನು ಶರೀರ ತ್ಯಾಗ ಮಾಡಿದ, ಜೀರ್ಣವಾದ ಶರೀರದಿಂದ ನನಗೆ ಏನು ಪ್ರಯೋಜನ ಎಂದು.

ಭೀಷ್ಮನಿಗೆ ಸ್ವಚ್ಛಂದ ಮರಣದ ವರ ನೀಡಬಲ್ಲ ಶಂತನು ತಾನು ಸ್ವಚ್ಛಂದ ಮರಣೆ ಎಂದು ಬೇರೆ ಹೇಳಬೇಕಾಗಿಲ್ಲ. ಸ್ವೇಚ್ಛೆಯಿಂದಲೆ ಅನಾಯಾಸವಾಗಿ ಮರಣವನ್ನಿಪ್ಪಿದ ಶಂತನು.

ಸ್ವೇಚ್ಛಯಾ ವರುಣತ್ವಂ ಸ ಪ್ರಾಪ ನಾನಿಚ್ಛಯಾ ತನುಃ।
ತಸ್ಮಿನ್ ಕಾಲೇ ತ್ಯಜ್ಯತೇ ಹಿ ಬಲವದ್ಭಿರ್ವಧಂ ವಿನಾ ॥ ೮೩ ॥

ಸ್ವೇಚ್ಛೆಯಿಂದಲೆ ಶಂತನು ವರುಣತ್ವವನ್ನು ಪಡೆದ. ಇಚ್ಛೆಯಿಲ್ಲದೆ ಅಲ್ಲ. ಯೋಗಬಲವುಳ್ಳವರು ಮರಣೇಚ್ಛಾಕಾಲದಲ್ಲಿ ಶತ್ರುಗಳಿಂದ ವಧೆ ಇಲ್ಲದೆಯೆ ಸ್ವೇಚ್ಛೆಯಿಂದ ಶರೀರತ್ಯಾಗ ಮಾಡುತ್ತಾರೆ.

ಶಂತನು ಸ್ವೇಚ್ಛೆಯಿಂದಲೆ ಮರಣಹೊಂದಿ ತನ್ನ ಮೂಲ ರೂಪವಾದ ವರುಣನಲ್ಲಿ ಐಕ್ಯಹೊಂದಿದ. ಇದಕ್ಕೆ ಯೋಗಬಲ ಬೇಕು. ಅದು ಇಲ್ಲದಿದ್ದರೆ

ಶತ್ರುವಿನಿಂದ ವಧೆ ಉಂಟಾದಾಗ ಇಚ್ಛೆಯಿಲ್ಲದೆ ಶರೀರತ್ಯಾಗ ಮಾಡಬಹುದು. ವಧೆ ಇಲ್ಲದೆಯೂ ರೋಗಾದಿಗಳಿಂದ ನರಳುತ್ತ ಇಚ್ಛೆಯಿಲ್ಲದೆಯೆ ಶರೀರತ್ಯಾಗ ಮಾಡಬಹುದು. ಯೋಗಿಗಳಿಗೆ ಅಂಥ ಪ್ರಸಂಗಗಳಿರುವುದಿಲ್ಲ. ದಕ್ಷಪ್ರಜಾಪತಿ ಶಿವನಿಗೆ ಅಪಮಾನ ಮಾಡಿದ್ದನ್ನು ಕಂಡು ಸಹಿಸದೆ ಸತೀದೇವಿ ಹೀಗೆ ಸ್ವೇಚ್ಛೆಯಿಂದಲೆ ಯೋಗಾಗ್ನಿಯಲ್ಲಿ ಶರೀರ ತ್ಯಾಗ ಮಾಡಿದಳು.

ಅತಿಸಕ್ತಾಸ್ತಪೋಹೀನಾಃ ಕಥಂಚಿನ್ಮೃತಿಮಾಪ್ನುಯುಃ।
ಅನಿಚ್ಛಯಾಪಿ ಹಿ ಯಥಾ ಮೃತಶ್ಚಿತ್ತಾಂಗದಾನುಜಃ ॥ ೮೪ ॥

ಅತಿಯಾದ ವಿಷಯಾಸಕ್ತಿ ಹೊಂದಿ ತಪೋಹೀನರಾದವರು ಇಚ್ಛೆಯಿಲ್ಲದಿದ್ದರೂ ಹೇಗೆ ಹೇಗೋ ಮರಣ ಹೊಂದುತ್ತಾರೆ, ಚಿತ್ರಾಂಗದನ ತಮ್ಮ ಹೇಗೆ ಮರಣ ಹೊಂದಿದನೋ ಹಾಗೆ.

ಅತಿಯಾದ ವಿಷಯಾಸಕ್ತಿಯಿಂದ ತಪೋಬಲವಿಲ್ಲದವರು ರೋಗಾದಿಗಳಿಂದ ಇಚ್ಛೆಯಿಲ್ಲದೆಯೆ ಶರೀರತ್ಯಾಗ ಮಾಡಿದ್ದಕ್ಕೆ ಉದಾಹರಣೆ ಚಿತ್ರಾಂಗದನ ತಮ್ಮ ವಿಚಿತ್ರವೀರ್ಯ. ಕ್ಷಯರೋಗದಿಂದ ನರಳಿ ಸತ್ತ.

ಅಥೌರ್ಧ್ವದೈಹಿಕಂ ಕೃತ್ವಾ ಪಿತುರ್ಭೀಷ್ಮೋಽಭ್ಯಷೇಚಯತ್।
ರಾಜ್ಯೇ ಚಿತ್ರಾಂಗದಂ ವೀರಂ ಯೌವರಾಜ್ಯೇಽಸ್ಯ ಚಾನುಜಮ್ ॥ ೮೫ ॥

ಬಳಿಕ ಭೀಷ್ಮ ತಂದೆಗೆ ಉತ್ತರಕ್ರಿಯೆ ಮಾಡಿ ರಾಜ್ಯದಲ್ಲಿ ವೀರನಾದ ಚಿತ್ರಾಂಗದನಿಗೆ ಪಟ್ಟಾಭಿಷೇಕ ಮಾಡಿದ. ಯುವರಾಜ ಪದವಿಯಲ್ಲಿ ಅವನ ತಮ್ಮನಿಗೆ ಪಟ್ಟಾಭಿಷೇಕ ಮಾಡಿದ.

ಚಿತ್ರಾಂಗದನ ಮರಣ

ಚಿತ್ರಾಂಗದೇನ ನಿಹತೋ ನಾಮ ಸ್ವಂ ತ್ವತ್ಪರಿತ್ಯಜನ್।
ಚಿತ್ರಾಂಗದೋಽಕೃತೋದ್ವಾಹೋ ಗಂಧರ್ವೇಣ ಮಹಾರಣೇ ॥ ೮೬ ॥

ಚಿತ್ರಾಂಗದ ಮದುವೆಯಾಗುವುದಕ್ಕೆ ಮೊದಲೆ ಸತ್ತ. ತನ್ನ ಹೆಸರನ್ನು ಬಿಟ್ಟು ಕೊಡಲು ಒಪ್ಪದೆ ಮಹಾಯುದ್ಧದಲ್ಲಿ ಚಿತ್ರಾಂಗದನೆಂಬ ಗಂಧರ್ವನಿಂದ ಕೊಲ್ಲಲ್ಪಟ್ಟ.

ಪರಾಕ್ರಮದಲ್ಲಿ ಚಿತ್ರಾಂಗದನಿಗೆ ಎಣೆಯಾದವರು ಮನುಷ್ಯರಲ್ಲಿ ಯಾರೂ ಇರಲಿಲ್ಲ. ಆದರಿಂದ ದೇವತೆಗಳ ಮತ್ತು ಅಸುರರ ಮೇಲೆ ದಾಳಿ ಮಾಡುತ್ತಿದ್ದ. ಒಮ್ಮೆ ಚಿತ್ರಾಂಗದನೆಂಬ ಗಂಧರ್ವ ತನ್ನ ಹೆಸರು ಲೋಕದಲ್ಲಿ

ಇನ್ನೊಬ್ಬನಿಗಿರುವುದನ್ನು ಸಹಿಸದೆ ಅದನ್ನು ಬಿಟ್ಟುಕೊಡಲು ಚಿತ್ರಾಂಗದನಿಗೆ ಹೇಳಿದಾಗ ಆತ ಒಪ್ಪದೆ ಯುದ್ಧಮಾಡಿ ಮಡಿದ.

ವಿಚಿತ್ರವೀರ್ಯ ವಿವಾಹ

ವಿಚಿತ್ರವೀರ್ಯಂ ರಾಜಾನಂ ಕೃತ್ವಾಭೀಷ್ಮೋಽನ್ವಪಾಲಯತ್।
ಅಥ ಕಾಶಿಸುತಾಸ್ತಿಸ್ರಸ್ತದರ್ಥಂ ಭೀಷ್ಮ ಆಹರತ್।
ಅಂಬಾಮಪ್ಯಂಬಿಕಾನಾಮ್ನೀಂ ತಥೈವಾಂಬಾಲಿಕಾಂ ಪರಾಮ್ ॥ ೮೭ ॥

ಪಾಣಿಗ್ರಹಣಕಾಲೇ ತು ಬ್ರಹ್ಮದತ್ತಸ್ಯ ವೀರ್ಯವಾನ್।
ವಿಜಿತ್ಯ ತಂ ಸಾಲ್ವರಾಜಂ ಸಮೇತಾನ್ ಕ್ಷತ್ರಿಯಾನಪಿ ॥ ೮೮ ॥

ಬಳಿಕ ಭೀಷ್ಮ ವಿಚಿತ್ರವೀರ್ಯನನ್ನು ರಾಜನನ್ನಾಗಿ ಮಾಡಿ ರಾಜ್ಯವನ್ನು ನೋಡಿಕೊಂಡ. ಸಾಲ್ವ ಬ್ರಹ್ಮದತ್ತನ ವಿವಾಹಕಾಲದಲ್ಲಿ ಆ ಸಾಲ್ವರಾಜನನ್ನೂ ಅಲ್ಲಿ ಸೇರಿದ್ದ ಕ್ಷತ್ರಿಯರನ್ನೂ ಗೆದ್ದು ವಿಚಿತ್ರವೀರ್ಯನಿಗಾಗಿ ಅಂಬಾ ಅಂಬಾಲಿಕಾ ಮತ್ತು ಅಂಬಿಕಾ ಎಂಬ ಮೂವರೂ ಕಾಶಿರಾಜನ ಹೆಣ್ಣುಮಕ್ಕಳನ್ನು ತಂದ, ವೀರ್ಯಶಾಲಿ ಭೀಷ್ಮ.

ಅಂಬಾ ವೃತ್ತಾಂತ

ಅಂಬಿಕಾಂಬಾಲಿಕೇ ತತ್ರ ಸಂವಾದಂ ಚಕ್ರತುಃ ಶುಭೇ।
ಅಂಬಾ ಸಾ ಭೀಷ್ಮಭಾರ್ಯೈವ ಪೂರ್ವದೇಹೇ ತು ನೈಚ್ಛತ ॥ ೮೯ ॥

ಅವರಲ್ಲಿ ಪುಣ್ಯವತಿಯರಾದ ಅಂಬಿಕೆ ಮತ್ತು ಅಂಬಾಲಿಕೆಯರು ಒಪ್ಪಿದರು. ಅಂಬೆ ಪೂರ್ವಜನ್ಮದಲ್ಲಿ ಭೀಷ್ಮನ ಭಾರ್ಯೆ. ಆದರಿಂದ ಅವಳು ಮಾತ್ರ ಒಪ್ಪಲಿಲ್ಲ.

ಅಂಬೆ ದೇವತಾ ಸ್ತ್ರೀ. ವಿಚಿತ್ರವೀರ್ಯನೆಂಬ ಒಬ್ಬ ಮನುಷ್ಯನನ್ನು ಮದುವೆಯಾಗಲು ಅವಳು ಒಪ್ಪಲಿಲ್ಲ.

ಶಾಪಾದ್ಧಿರಣ್ಯಗರ್ಭಸ್ಯ ಸಾಲ್ವಕಾಮಾಹಮಿತ್ಯಪಿ।
ಉವಾಚ ತಾಂ ಸ ತತ್ಯಾಜ ಸಾಗಮತ್ ಸಾಲ್ವಮೇವ ಚ ॥ ೯೦ ॥

ಬ್ರಹ್ಮನ ಶಾಪದಿಂದ ಅಂಬೆ ತಾನು ಸಾಲ್ವನನ್ನು ಬಯಸಿದವಳೆಂದು ಹೇಳಿಕೊಂಡಳು. ಭೀಷ್ಮ ಅವಳನ್ನು ಬಿಟ್ಟ. ಅವಳು ಸಾಲ್ವನ ಬಳಿಗೆ ಹೋದಳು.

ಗಂಡನಿಲ್ಲದವಳಾಗೆಂದು ಬ್ರಹ್ಮನ ಶಾಪವಿರುವುದರಿಂದ ಅಂಬೆ ತಾನು ಸಾಲ್ವನನ್ನು ಬಯಸಿದವಳೆಂದು ನಿಂದ್ಯವಾದ ಸುಳ್ಳು ಮಾತನ್ನಾಡಿದಳು.

ವಸ್ತುತಃ ವಿಚಿತ್ರವೀರ್ಯ ಮನುಷ್ಯನೆಂದು ದೇವತಾಸ್ತ್ರೀಯಾದ ತಾನು ಅವನನ್ನು ಮದುವೆಯಾಗಲು ಬಯಸಿರಲಿಲ್ಲ.[1]

ತೇನಾಪಿ ಸಂಪರಿತ್ಯಕ್ತಾ ಪರಾಮೃಷ್ಟೇತಿ ಸಾ ಪುನಃ।
ಭೀಷ್ಮಮಾಪ ಸ ನೋ ಗೃಹ್ಣಾತ್ ಪ್ರಯಯೌ ಸಾಪಿ ಭಾರ್ಗವಮ್ ॥ ೯೦ ॥

ಪರಪುರುಷರಿಂದ ಸ್ಪೃಷ್ಟಳಾದಳೆಂದು ಅಂಬೆ ಸಾಲ್ವನಿಂದಲೂ ಪರಿತ್ಯಕ್ತಳಾದಳು. ಅವಳು ಪುನಃ ಭೀಷ್ಮನ ಬಳಿಗೆ ಬಂದಳು. ಅವನು ಸ್ವೀಕರಿಸಲಿಲ್ಲ. ಅವಳು ಪರಶುರಾಮನ ಬಳಿಗೆ ಹೋದಳು.

ಭೀಷ್ಮ ನಿನ್ನನ್ನು ಬಲಾತ್ಕಾರವಾಗಿ ಸೆಳೆದೊಯ್ದ ಮೇಲೆ ನಾನು ಸ್ವೀಕರಿಸಲಾರೆ ಎನ್ನುತ್ತ ಸಾಲ್ವ ನಿರಾಕರಿಸಿದಾಗ ಅಂಬೆ ತಿರುಗಿ ಭೀಷ್ಮನ ಬಳಿಗೇ ಬಂದಳು. ನನ್ನನ್ನು ಬಲಾತ್ಕಾರದಿಂದ ಸೆಳೆದು ತಂದವನು ನೀನೆ ನನ್ನನ್ನು ಮದುವೆಯಾಗ ಬೇಕೆಂದಳು. ಭೀಷ್ಮ ತಾನು ನೈಷ್ಠಿಕ ಬ್ರಹ್ಮಚರ್ಯವ್ರತ ಕೈಗೊಂಡವನೆನ್ನುತ್ತ ನಿರಾಕರಿಸಿದ. ಅಂಬೆ ಅವನನ್ನು ಒಪ್ಪಿಸಲು ಅವನ ಗುರುವಾದ ಪರಶುರಾಮನೇ ಸರಿಯೆಂದು ಅವನ ಬಳಿಗೇ ಹೋಗಿ ಶರಣಾದಳು.

ಪರಶುರಾಮನ ಶಿಷ್ಯವಾತ್ಸಲ್ಯ

ಭ್ರಾತುರ್ವಿವಾಹಯಾಮಾಸ ಸೋಽಬಿಕಾಂಬಾಲಿಕೇ ತತಃ।
ಭೀಷ್ಮಾಯ ತು ಯಶೋ ದಾತುಂ ಯುಯುಧೇ ತೇನ ಭಾರ್ಗವಃ ॥ ೯೨ ॥

ಬಳಿಕ ಭೀಷ್ಮ ಅಂಬಿಕೆ ಅಂಬಾಲಿಕೆಯರನ್ನು ತಮ್ಮನಾದ ವಿಚಿತ್ರವೀರ್ಯನಿಗೆ ಮದುವೆ ಮಾಡಿಸಿದ. ಭೀಷ್ಮನಿಗೆ ಯಶಸ್ಸನ್ನು ನೀಡುವುದಕ್ಕಾಗಿ ಪರಶುರಾಮ ಅವನೊಡನೆ ಯುದ್ಧ ಮಾಡಿದ.

ಭೀಷ್ಮನ ಬ್ರಹ್ಮಚರ್ಯ ಪ್ರತಿಜ್ಞೆ ಹಾಳಾಗಬಾರದು ಅವನಿಗೆ ಯಶಸ್ಸು ಬರಬೇಕೆಂದು ಶಿಷ್ಯವಾತ್ಸಲ್ಯದಿಂದಲೆ ಪರಶುರಾಮ ಅವನೊಡನೆ ಯುದಮಾಡಿದ.

ಅನಂತ ಶಕ್ತಿರಪಿ ಸನ್ ನ ಭೀಷ್ಮಂ ನಿಜಘಾನ ಹ।
ನ ಚಾಂಬಾಂ ಗ್ರಾಹಯಾಮಾಸ ಭೀಷ್ಮಕಾರುಣ್ಯಯಂತ್ರಿತಃ ॥ ೯೩ ॥

---

1. ದೇವಪತ್ನೀನಾಂ ಮನುಷ್ಯ ಪತ್ನೀತ್ವಾಯೋಗ್ಯತಾಖ್ಯ ವಿಶೇಷೇಣ ನೈಚ್ಛದೇವೇತ್ಯನ್ವಯಃ । ಹಿರಣ್ಯಗರ್ಭಸ್ಯ ಶಾಪಾತ್ ಅಭರ್ತೃಕಾ ಭವೇತಿ ಶಾಪಾತ್ ಅಹಂ ಸಾಲ್ವಕಾಮೇತ್ಯಪಿ ಗರ್ಹಿತಂ ವಾಕ್ಯಮುವಾಚ। ಸ ಭೀಷ್ಮಸ್ತಾಂ ವಿರುದ್ಧ ಭಾಷಿಣೀಂ ತತ್ಯಾಜ। -ವಾದಿರಾಜೀಯ

ಅನಂತಶಕ್ತಿ ಉಳ್ಳವನಾದರೂ ಪರಶುರಾಮ ಭೀಷ್ಮನನ್ನು ಕೊಲ್ಲಲಿಲ್ಲ. ಅಂಬೆಯನ್ನು ಸ್ವೀಕರಿಸುವಂತೆಯೂ ಮಾಡಲಿಲ್ಲ. ಏಕೆಂದರೆ ಅವನು ಭೀಷ್ಮನ ಮೇಲಿನ ಕರುಣೆಯಿಂದ ಬದ್ಧನಾಗಿದ್ದ.

ನನ್ನನ್ನು ಮದುವೆಯಾಗಲು ಭೀಷ್ಮನನ್ನು ಒಪ್ಪಿಸು, ಇಲ್ಲವೆ ಕೊಲ್ಲು ಎಂದು ಅಂಬೆ ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಪರಶುರಾಮ ಭೀಷ್ಮನನ್ನು ಕೊಲ್ಲಲೂ ಇಲ್ಲ. ಮದುವೆಗೆ ಒಪ್ಪಿಸಲೂ ಇಲ್ಲ. ಸೋತಂತೆ ನಟಿಸಿ 'ನಾನು ಸೋತೆ ಇನ್ನೇನು ಮಾಡಲಿ?' ಎಂದು ಹೇಳುತ್ತ ಅವಳನ್ನು ವಂಚಿಸಿದ.

ಅನಂತಶಕ್ತಿಃ ಸಕಲಾಂತರಾತ್ಮಾ ಯಃ ಸರ್ವವಿತ್ ಸರ್ವವಶೀ ಚ ಸರ್ವಜಿತ್ ।
ನ ಯತ್ಸಮೋಽನ್ಯೋಽಸ್ತಿ ಕಥಂ ಚ ಕುತ್ರಚಿತ್ ಕಥಂ ಹ್ಯಶಕ್ತಿಃ ಪರಮಸ್ಯ ತಸ್ಯ ॥ ೯೪ ॥

ಪರಶುರಾಮ ಅಪರಿಮಿತಶಕ್ತಿಉಳ್ಳವ, ಸರ್ವಾಂತರ್ಯಾಮಿ, ಸರ್ವಜ್ಞ, ಸರ್ವಸ್ವಾಮಿ. ಸರ್ವಜಯಿ. ಅವನಿಗೆ ಸಮಾನನಾದವನಿನ್ನೊಬ್ಬ ಎಲ್ಲಿಯೂ ಯಾವ ರೀತಿಯಿಂದಲೂ ಸಿಗಲಾರ. ಅಂಥ ಸರ್ವೋತ್ತಮನಿಗೆ ಅಶಕ್ತಿ ಎಂದರೆ ಹೇಗೆ?

ಭೀಷ್ಮಂ ಸ್ವಭಕ್ತಂ ಯಶಸಾಭಿಪೂರಯನ್ ವಿಮೋಹಯನ್ನಸುರಾಂಶ್ಚೈವ ರಾಮಃ।
ಜಿತ್ವೈವ ಭೀಷ್ಮಂ ನ ಜಘಾನ ದೇವೋ ವಾಚಂ ಚ ಸತ್ಯಾಮಕರೋತ್ ಸ ತಸ್ಯ ॥ ೯೫ ॥

ತನ್ನ ಭಕ್ತನಾದ ಭೀಷ್ಮನನ್ನು ಯಶಸ್ಸಿನಿಂದ ತುಂಬಿಸುವುದಕ್ಕಾಗಿ ಮತ್ತು ಅಸುರರನ್ನು ಮೋಹಗೊಳಿಸುವುದಕ್ಕಾಗಿ ಭೀಷ್ಮನನ್ನು ವಸ್ತುತಃ ಗೆದ್ದೇ ಕೊಲ್ಲಲಿಲ್ಲ. ಅವನ ಪ್ರತಿಜ್ಞೆಯನ್ನೆ ಸತ್ಯವಾಗಿಸಿದ.

ತನ್ನಪ್ರತಿಜ್ಞೆಯನ್ನೆಕಾಪಾಡಿಕೊಂಡ ಹೊರತು ಅಂಬೆಯನ್ನುಪರಿಗ್ರಹಿಸಲಿಲ್ಲ ಎಂಬ ಯಶಸ್ಸು ಭೀಷ್ಮನಿಗೆ ಬರಲಿ, ಪರಶುರಾಮ ಭಗವಂತನಲ್ಲ, ಸಾಮಾನ್ಯ ಋಷಿ ಅದರಿಂದ ಸೋತನೆಂದು ಅಸುರರಿಗೆ ಅನ್ಯಥಾಜ್ಞಾನ ಬರಲಿ ಎಂದು ಪರಶುರಾಮ ಸೋತಂತೆ ನಟಿಸಿದ. ವಸ್ತುತಃ ಅವನೇ ಗೆದ್ದಿದ್ದ.

ವಿದ್ಧವನ್ಮೃಗವಚ್ಚೈವ ಕೇಶವೋ ವೇದನಾರ್ತವತ್ ।
ದರ್ಶಯನ್ನಪಿ ಮೋಹಾಯ ನೈವ ವಿಷ್ಣುಸ್ತಥಾ ಭವೇತ್ ॥ ೯೬ ॥

'ಕೇಶವ ಶಸ್ತ್ರದಿಂದ ಹೊಡೆಸಿಕೊಂಡವನಂತೆ ಆಜ್ಞನಂತೆ ವೇದನೆಯಿಂದ ಬಳಲಿದವನಂತೆ ಅಸುರರಿಗೆ ಮೋಹ ಉಂಟು ಮಾಡಲು ತೋರಿಕೊಂಡರೂ ವಸ್ತುತಃ ಹಾಗೆ ಆಗಿರುವುದಿಲ್ಲ.'

ಏವಮಾದಿಪುರಾಣೋತ್ಥವಾಕ್ಯಾದ್ ರಾಮಃಸದಾ ಜಯೀ।
ಯಶೋ ಭೀಷ್ಮಸ್ಯ ದತ್ವಾತು ಸೋಽಂಬಾಂ ಚ ಶರಣಾಗತಾಮ್ ॥ ೯೭ ॥

ಉನ್ಮುಚ್ಯ ಭರ್ತೃದ್ವೇಷೋತ್ಥಪಾಪಾತ್ ತೇನಾಶ್ವಯೋಜಯತ್।
ಅನಂತರಂ ಶಿಖಂಡಿತ್ವಾತ್ ತದಾ ಸಾ ಶಾಂಕರಂ ತಪಃ ॥೯೮॥

ಭೀಷ್ಮಸ್ಯ ನಿಧನಾರ್ಥಾಯ ಪುಂಸ್ತ್ವಾರ್ಥಂ ಚ ಚಕಾರ ಹ।
ಭೀಷ್ಮೋ ಯಥಾ ತ್ವಾಂ ಗೃಹ್ಣೀಯಾತ್ ತಥಾ ಕುರ್ಯಾಮಿತೀರಿತಮ್।
ರಾಮೇಣ ಸತ್ಯಂ ತಚ್ಚಕ್ರೇ ಭೀಷ್ಮೇ ದೇಹಾಂತರಂ ಗತೇ ॥೯೯॥

ಇವೇ ಮೊದಲಾದ ಪುರಾಣ ವಾಕ್ಯಗಳಿರುವುದರಿಂದ ಪರಶುರಾಮ ಸದಾ ವಿಜಯಿಯೆ. ಭೀಷ್ಮನಿಗೆ ಯಶಸ್ಸನ್ನು ತಂದುಕೊಟ್ಟು ಶರಣಾಗತಳಾದ ಅಂಬೆಗೂ ಅವಳ ಪತಿದ್ರೋಹದಿಂದ ಉಂಟಾಗುವ ಪಾಪದಿಂದ ಮುಕ್ತಿ ನೀಡಿ, ಅವಳ ಶಿಖಿಂಡಿ ಜನ್ಮ ಕಳೆದೊಡನೆಯೆ ಪತಿಯೊಡನೆ ಸಮಾಗಮ ಮಾಡಿಸಿದ.[1] ಅಂಬೆ ಪರಶುರಾಮನ ಬಳಿಯಿಂದ ಹಿಂತಿರುಗಿ ಬಂದು ಭೀಷ್ಮನನ್ನು ಕೊಲ್ಲಲು ಮತ್ತು ಅದಕ್ಕಾಗಿ ಪುರುಷತ್ವವನ್ನು ಹೊಂದಲು ಶಿವನನ್ನು ಕುರಿತು ತಪಸ್ಸು ಮಾಡಿದಳು. ನಿನ್ನನ್ನು ಭೀಷ್ಮ ಪರಿಗ್ರಹಿಸುವಂತೆ ಮಾಡುತ್ತೇನೆ ಎಂದು ಪರಶುರಾಮ ತಾನು ಕೊಟ್ಟಮಾತನ್ನು ಭೀಷ್ಮ ಮೂಲರೂಪದಲ್ಲಿ ವಸುಶರೀರ ಪಡೆದಾಗ ನಡೆಸಿಕೊಟ್ಟ

ಅಂಬೆ ಶರಣಾಗತಳಾಗಿ ತನಗೆ ಪತಿಸಮಾಗಮವನ್ನು ಕರುಣಿಸಬೇಕೆಂದು ಬೇಡಿದಾಗ ಪರಶುರಾಮ ತಥಾಸ್ತು ಎಂದಿದ್ದ. ಇದು ಸುಳ್ಳಾಗಲಿಲ್ಲವೆ? ವಿಷ್ಣುವಚನವೆಂದಾದರೂ ಸುಳ್ಳಾಗುವುದುಂಟೆ? 'ಶರಣಾಗತ ವಜ್ರ ಪಂಜರ' ನೆಂಬ ಹರಿಯ ಬಿರುದಿನ ಗತಿಯಾದರೂ ಏನು? ಇದಕ್ಕೆ ಸಮಾಧಾನ- ಅಂಬೆಯ ಪತಿ ದ್ರೋಹ ಬಹಳ ಮಹತ್ತಾಗಿದ್ದು ಬಹುಜನ್ಮದಲ್ಲಿ ಅದರ ದುಷ್ಪರಿಣಾಮಗಳನ್ನು ಅವಳು ಅನುಭವಿಸಬೇಕಾಗಿತ್ತು. ಪತಿಸಮಾಗಮ ಬಹಳ ವಿಲಂಬವಾಗುತ್ತಿತ್ತು. ಆದರೆ ಅವಳು ಪರಶುರಾಮನನ್ನು ಶರಣಾದುದರಿಂದ ಅವಳು ಮುಂದೆ ಶಿಖಂಡಿಯಾಗಿ ಭೀಷ್ಮವಧೆಗೆ ಕಾರಣ ಳಾಗುವ ಮಹಾಪಾಪವನ್ನು ಕೇವಲ ಒಂದು ಶರಣಾಗತಿಯ ನಿಮಿತ್ತವಾಗಿ ಪರಿಹರಿಸಿ ಬೇಗನೆ ಅಂದರೆ ಶಿಖಂಡಿಜನ್ಮ ಕಳೆದೊಡನೆ ಮೂಲರೂಪದಲ್ಲಿ ಸಮಾಗಮವಾಗುವಂತೆ ಮಾಡಿ ತನ್ನ ಮಾತನ್ನೂ ಸತ್ಯವಾಗಿಸಿದ. ಶರಣಾಗತಳ ರಕ್ಷಣೆಯನ್ನೂ ಮಾಡಿದ ಪರಶುರಾಮ. ಈ ಜನ್ಮದಲ್ಲಿಯೆ ನಿನಗೆ ಪತಿಸಮಾಗಮ ಮಾಡಿಸುವೆ ನೆಂದೇನೂ ಆತ ಮಾತುಕೊಟ್ಟಿಲ್ಲ![2]

---

1. ತರ್ಹಿ ಶರಣಾಗತಾಯಾ ಅಂಬಾಯಾ ಅಭೀಷ್ಟಕರಣಾತ್ ಶರಣಾಗತ ವಜ್ರ ಪಂಜರಇತಿ ಭಗವನ್ಮಹಿಮ್ನೋ ಹಾನಿರಿತ್ಯತ ಅಹ ಅಂಬಾಂ ಚ ಶರಣಾಗತಾಮಿತಿ। -ವಾದಿರಾಜೀಯ
2. ಶಿಖಂಡಿತ್ವಾದನಂತರಂ ಭರ್ತೃಭೂತ ಭೀಷ್ಮಾಚಾರ್ಯಸ್ಯ ದ್ವೇಷಃ ವಧಹೇತುತಾಖ್ಯ ದ್ವೇಷಃ ತಸ್ಮಾದುತ್ಥಪಾಪಾತ್ ಏವಾಯೋಜಯತ್। ಬಹುಜನ್ಮಸ್ವನುಭೋಕ್ತವ್ಯಮಪಿ ಭರ್ತೃಹನನಾಖ್ಯ

ಅಂಬೆಯ ಪತಿ ದ್ರೋಹ

ರುದ್ರಸ್ತುತಸ್ಯಾಸ್ತಪಸಾ ತುಷ್ಟಃ ಪ್ರಾದಾದ್ ವರಂ ತದಾ।
ಭೀಷ್ಮಸ್ಯ ಮೃತಿಹೇತುತ್ವಂ ಕಾಲಾತ್ ಪುಂದೇಹಸಂಭವಮ್ ॥ ೧೦೦ ॥

ಅಂಬೆಯ ತಪಸ್ಸಿಗೆ ಸಂತುಷ್ಟನಾದ ಶಿವ ಅವಳಿಗೆ ಭೀಷ್ಮನ ಮರಣಕ್ಕೆ ಕಾರಣಳಾಗುವ ಮತ್ತು ಸ್ವಲ್ಪ ಕಾಲಾನಂತರ ಪುರುಷಶರೀರವನ್ನು ಹೊಂದುವ ವರ ನೀಡಿದ.

ಮಾಲಾಂ ಚ ಯ ಇಮಾಂ ಮಾಲಾ ಗೃಹ್ಣೀಯಾತ್ ಸ ಹನಿಷ್ಯತಿ।
ಭೀಷ್ಮಮಿತ್ಯೇವ ತಾಂ ಮಾಲಾ ಗೃಹೀತ್ವಾಸಾ ನೃಪಾನ್ ಯಯೌ ॥ ೧೦೧ ॥

ಶಿವ ಅಂಬೆಗೆ ಒಂದು ಮಾಲೆಯನ್ನೂ ಕೊಟ್ಟು 'ಈ ಮಾಲೆಯನ್ನು ಯಾರು ಸ್ವೀಕರಿಸುವನೋ ಅವನು ಭೀಷ್ಮನನ್ನು ಕೊಲ್ಲುವನು' ಎಂದ. ಅಂಬೆ ಆ ಮಾಲೆಯನ್ನು ಹಿಡಿದುಕೊಂಡು ರಾಜರುಗಳ ಬಳಿಗೆ ಹೋದಳು.

ತಾಂ ನಾ ಭೀಷ್ಮಭಯಾತ್ ಕೇಽಪಿ ಜಗೃಹುಸ್ತಾಂ ಹಿ ಸಾ ತತಃ।
ದ್ರುಪದಸ್ಯ ಗೃಹತ್ವಾರಿ ನ್ಯಸ್ಯ ಯೋಗಾತ್ ತನುಂ ಜಹೌ ॥ ೧೦೨ ॥

ಆದರೆ ಭೀಷ್ಮನ ಭಯದಿಂದ ಆ ಮಾಲೆಯನ್ನು ಯಾರೂ ಸ್ವೀಕರಿಸಲಿಲ್ಲ. ಕೊನೆಗೆ ಅದನ್ನು ದ್ರುಪದನ ಅರಮನೆಯ ದ್ವಾರದಲ್ಲಿಟ್ಟು ಯೋಗಬಲದಿಂದ ಶರೀರ ತ್ಯಾಗ ಮಾಡಿದಳು, ಅಂಬೆ.

ಹೆಣ್ಣು ಎಂದೂ ಗಂಡಾಗಳು

ಏತಸ್ಮಿನ್ನೇವ ಕಾಲೇ ತು ಸುತಾರ್ಥಂ ದ್ರುಪದಸ್ತಪಃ।
ಚಕಾರ ಶಂಭವೇ ಚೈನಂ ಸೋಽಬ್ರವೀತ್ ಕನ್ಯಕಾ ತವ ॥ ೧೦೩ ॥

ಭೂತ್ವಾ ಭವಿಷ್ಯತಿ ಪುಮಾನಿತಿ ಸಾಂಬಾ ತತೋಽಜನಿ।
ನಾಮ್ನಾ ಶಿಖಂಡಿನೀ ತಸ್ಯಾಃ ಪುಂವತ್ ಕರ್ಮಾಣಿ ಚಾಕರೋತ್ ॥ ೧೦೪ ॥

ಇದೇ ಸಮಯದಲ್ಲಿ ದ್ರುಪದ ಶಿವನನ್ನು ಕುರಿತು ಗಂಡು ಮಗುವಿಗಾಗಿ ತಪಸ್ಸು

ಭವಿಷ್ಯನ್ಮಹಾಪಾಪಂ ಸ್ವಶರಣಾಗಮನಾಖ್ಯ ಮಹಾಪುಣ್ಯೇನ ಶೀಘ್ರಂಮೋಚಯಿತ್ವಾ ಪತ್ಯಾಸಹಾಯೋಜಯದಿತಿಭಾವಃ। ಅಂಬಾಜನ್ಮನಿ ಪ್ರಾಯಃ ಭೀಷ್ಮಪಾಣಿ ಗ್ರಹಣಾಯೈವ ಭಾರ್ಗವಂ ಪ್ರತಿ ಪ್ರಾರ್ಥಿತತ್ವೇನ ಪಾಪಾಭಾವಾತ್ ಶಿಖಂಡಿತ್ವಾದನಂತರಂ ಭರ್ತೃದ್ವೇಷೋತ್ಥಪಾಪಾದಿತ್ಯುಕ್ತಂ। –ವಾದಿರಾಜೀಯ

ಮಾಡಿದ. ಶಿವ, 'ನಿನಗೆ ಹೆಣ್ಣು ಮಗು ಹುಟ್ಟಿ ಗಂಡಾಗುತ್ತದೆ' ಎಂದ. ಆಗ ಅಂಬೆ ಶಿಖಂಡಿನೀ ಎಂಬ ಹೆಸರಿನಿಂದ ಮಗಳಾಗಿ ಜನಿಸಿದಳು. ಅವಳಿಗೆ ಗಂಡುಮಕ್ಕಳಂತೆ ಚೌಲ ಉಪನಯನಾದಿಕರ್ಮ ಮಾಡಿದ ದ್ರುಪದ.

> ಶಿಖಂಡಿನಿ ಹೀಗೆ ಗಂಡಿನ ವೇಷದಲ್ಲಿದ್ದಾಗ ಒಮ್ಮೆ ಅವಳು ಶಿವ ಅಂಬೆಗೆ ಕೊಟ್ಟಿದ್ದ ಮಾಲೆಯನ್ನು ತಾನು ಹಾಕಿಕೊಂಡಿದ್ದಳಂತೆ. ದ್ರುಪದ ತನ್ನ ಅರಮನೆ ಬಾಗಿಲಲ್ಲಿದ್ದ ಆ ಮಾಲೆಯನ್ನು ಯಾರೂ ಧರಿಸದಂತೆ ಸ್ವಲ್ಪಕಾಲ ರಕ್ಷಿಸಿಟ್ಟಿದ್ದ. ಕೊನೆಗೆ ಯಾರೂ ಧರಿಸುವುದಿಲ್ಲವೆಂಬ ವಿಶ್ವಾಸದಿಂದ ಉಪೇಕ್ಷೆಮಾಡಿದ. ಬಾಡದ ಕಮಲದ ಹೂವಿನ ಸುಂದರ ಮಾಲೆ ಎಂದು ಶಿಖಂಡಿನಿ ಒಮ್ಮೆ ಅದನ್ನು ಧರಿಸಿದಳು. ಮುಂದೆ ಅವಳು ಗಂಧರ್ವ ಶರೀರ ಸಂಪಾದಿಸಿ ಶಿಖಂಡಿಯಾಗಿ ಬಂದು ಭೀಷ್ಮನ ಮರಣಕ್ಕೆ ಕಾರಣಳಾದಳು. ಶಿವವರ ಸುಳ್ಳಾಗಲಿಲ್ಲ. ದ್ರುಪದ ಅದೇ ಮಾಲೆಯನ್ನು ದ್ರೌಪದಿಯ ಕೈಯಲ್ಲಿ ಸ್ವಯಂವರ ಮಾಲೆಯಾಗಿ ಕೊಟ್ಟು ಅರ್ಜುನನ ಕೊರಳಿಗೆ ಹಾಕಿಸಿದ್ದರಿಂದ ಅರ್ಜುನನೂ ಭೀಷ್ಮನ ಮರಣಕ್ಕೆ ಕಾರಣನಾದ. ಅದರಿಂದಲೂ ಶಿವವರ ನಿಜವಾಯಿತು.[1] (ಭಾ. ಆದಿ.110-21)

ತಸ್ಯೈ ಪಾಂಚಾಲರಾಜಃ ಸ ದಶಾರ್ಣಾಧಿಪತೇಃಸುತಾಮ್ ।
ಉದ್ವಾಹಯಾಮಾಸ ಸ ತಾಂ ಪುಂವೇಷೇಣೈವ ಗೂಹಿತಾಮ್ ॥ ೧೦೫ ॥

ಅನ್ಯತ್ರ ಮಾತಾಪಿತ್ರೋಸ್ತು ನ ವಿಜ್ಞಾತಾಂ ಬುಬೋಧ ಹ ।
ಧಾತ್ರೈನ್ಯ ವೇದಯತ್ ಸಾಧ ತತಿತ್ರೈ ಸಾ ನ್ಯವೇದಯತ್ ॥ ೧೦೬ ॥

ಶಿಖಂಡಿನಿಗೆ ದ್ರುಪದ ದಶಾರ್ಣರಾಜನಾದ ಹಿರಣ್ಯವರ್ಮನ ಮಗಳನ್ನು ಮದುವೆ ಮಾಡಿಸಿದ. ಆ ರಾಜಕುಮಾರಿ 'ಈಕೆ ವಸ್ತುತಃ ಪುರುಷವೇಷದಿಂದ ನಿಜರೂಪ ಮರೆ ಮಾಡಿಕೊಂಡಿರುವ ಹೆಣ್ಣು ತಂದೆ ತಾಯಿಗಳ ಹೊರತು ಇನ್ನಾರಿಗೂ ಇವಳ ನಿಜರೂಪ ತಿಳಿದಿಲ್ಲ' ಎಂದು ತಿಳಿದಳು. ದಾದಿಗೆ ತಿಳಿಸಿದಳು. ಅವಳು ಅವಳ ತಂದೆಗೆ ತಿಳಿಸಿದಳು.

ಸ ಕ್ರುದ್ಧಃ ಪ್ರೇಷಯಾಮಾಸ ನಿಹನ್ಮಿತ್ವಾಂ ಸಬಾಂಧವಮ್ ।
ಇತಿ ಪಾಂಚಾಲರಾಜಾಯ ನಿರ್ಜಗಾಮ ಚ ಸೇನಯಾ ॥ ೧೦೭ ॥

---

1. ಅಮ್ಲಾನಪದ್ಮಮಯೀಂ ತಾಂ ಮಾಲಾಂ ದ್ರುಪದಃ ಸ್ವಕೋಶೇ ನಿಕ್ಷಿಪ್ಯ ದ್ರೌಪದೀ ಸ್ವಯಂವರಕಾಲೇ ತಾಮೇವ ಮಾಲಾಂ ಭೀಷ್ಮ ಹಂತುರರ್ಜುನಸ್ಯ ಕಂಠೇ ದ್ರೌಪದೀಕರೇಣಾರ್ಪಯಿಷ್ಯತೀತಿ ಸೂಚಿತಂ। ಅನ್ಯಥಾ ಯ ಇಮಾಂ ಮಾಲಾ ಗೃಹ್ಣೀಯಾತ್ ಸ ಹನಿಷ್ಯತಿ ಭೀಷ್ಮಮಿತಿ ಶಿವದತ್ತವರಸ್ಯ ವೈಯರ್ಥ್ಯ ಪ್ರಸಂಗಾತ್। -ವಾದಿರಾಜೀಯ

ತಂದೆ ಹಿರಣ್ಯವರ್ಮ ಕ್ರುದ್ಧನಾಗಿ 'ನಿನ್ನನ್ನು ಬಂಧುಗಳ ಸಮೇತ ಕೊಲ್ಲುವೆನೆ'ಂದು ದ್ರುಪದನಿಗೆ ಹೇಳಿಕಳಿಸಿ ಸೈನ್ಯ ಸಮೇತನಾಗಿ ಹೊರಟ.

ವಿಶ್ವಸ್ಯ ವಾಕ್ಯಂ ರುದ್ರಸ್ಯ ಪುಮಾನೇವೇತಿ ಪಾರ್ಷತಃ।
ಪ್ರೇಷಯಾಮಾಸ ಧಿಗ್ ಬುದ್ಧಿರ್ಜಿನಾತೇ ಬಾಲವಾಕ್ಯತಃ।
ಅಪರೀಕ್ಷಕಸ್ಯ ತೇ ರಾಷ್ಟ್ರಂ ಕಥಮಿತ್ಯೇವ ನರ್ಮಕೃತ್ ॥ ೧೦೮ ॥

ಶಿವನ ಮಾತನ್ನು ನಂಬಿ ದ್ರುಪದ 'ಶಿಖಂಡಿ ಪುರುಷನೆ. ಏನೂ ಅರಿಯದ ಜನರ ಮಾತಿನಿಂದ ನಿನ್ನ ಬುದ್ಧಿ ಕೆಟ್ಟಿದೆ. ನಿನಗೆ ಧಿಕ್ಕಾರ. ರಾಜನಾದ ನೀನು ಹೀಗೆ ವಿಚಾರಶೂನ್ಯನಾದರೆ ರಾಷ್ಟ್ರ ಹೇಗೆ ಉಳಿದೀತು?' ಎಂದು ಹಾಸ್ಯದ ಮಾತನ್ನು ಹೇಳಿ ಕಳಿಸಿದ.

ಅಥ ಭಾರ್ಯಾಸಮೇತಂ ತಂ ಪಿತರಂ ಚಿಂತಯಾಕುಲಮ್।
ದೃಷ್ಟ್ವಾ ಶಿಖಂಡಿನೀ ದುಃಖಾನ್ಮನ್ನಿಮಿತ್ತಾನ್ನ ನಶ್ಯತು।
ಇತಿ ಮತ್ವಾವನಾಯೈವ ಯಯೌ ಯತ್ರ ಚ ತುಂಬುರುಃ ॥ ೧೦೯ ॥

ತಂದೆತಾಯಿಗಳು ಚಿಂತಾಕುಲರಾಗಿರುವುದನ್ನು ಕಂಡು ಶಿಖಂಡಿನಿ ತನ್ನಿಂದಾಗಿ ಅವರು ನಾಶವಾಗಕೂಡದೆಂದು ಬಗೆದು ದುಃಖದಿಂದ ತುಂಬುರುಗಂಧರ್ವನಿದ್ದ ಕಾಡಿಗೆ ಹೋದಳು.

ಶಿಖಂಡಿನಿ ಮೊದಲಿಗೆ ಇಷೀಕನೆಂಬ ಮುನಿಯನ್ನು ಶರಣುಹೊಂದಿದಳು. ಅವನು ಗಂಗಾದ್ವಾರದಲ್ಲಿ ಗಂಧರ್ವರಾಜನಾದ ತುಂಬುರುವಿನ ಬಳಿ ಅನೇಕ ಗಂಧರ್ವರು ಸ್ತ್ರೀಪುರುಷ ಶರೀರಗಳ ವಿನಿಮಯ ಮಾಡಿಕೊಳ್ಳುತ್ತಾರೆ. ಅಲ್ಲಿ ತುಂಬುರುವಿನ ಅನುಗ್ರಹದಿಂದ ನಿನಗೆ ಪುರುಷಶರೀರ ಸಿಗಬಹುದು. ನಾನೂ ನಿನಗೆ ಈ ವಿಷಯದಲ್ಲಿ ಸಹಾಯ ಮಾಡುವೆನು ಎಂದ. ಹಾಗೆ ಅನೇಕ ಮಂದಿ ಗಂಧರ್ವರು ಶರೀರವಿನಿಮಯ ಮಾಡಿಕೊಂಡರು. ಇಬ್ಬರು ಉಳಿದಿದ್ದರು. ಅವರಲ್ಲಿ ಒಬ್ಬ ತಾನು ಸ್ತ್ರೀಯಾಗಬೇಕೆಂದು ಬಯಸಿದ್ದವ ಶಿಖಂಡಿನಿಗೆ ತನ್ನ ಶರೀರವನ್ನಿತ್ತ. ಶಿಖಂಡಿನಿ ಶಿಖಂಡಿಯಾದಳು. ದ್ರುಪದನ ಬಳಿಗೆ ಬಂದು, 'ಇನ್ನು ನಿನಗೆ ಭೀಷ್ಮನ ಭಯವಿಲ್ಲ, ಹಿರಣ್ಯವರ್ಮನ ಭಯವೂ ಇಲ್ಲ' ಎಂದಳು. (ಮಾ.ಭಾ.ಆದಿ. 110-23) ಉದ್ಯೋಗಪರ್ವದಲ್ಲಿ ಸ್ಥೂಣಾಕರ್ಣನೆಂಬ ಯಕ್ಷ ತನ್ನ ಶರೀರವನ್ನಿತ್ತ ಎಂದಿದೆ. ಅದು ಪ್ರಕ್ಷಿಪ್ತ. ಏಕೆಂದರೆ ಆದಿಪರ್ವದಲ್ಲಿ 'ತತೋ ವಿಭಜನಂ ತತ್ರ ಗಂಧರ್ವಾಣಾಮವರ್ತತ' ಎಂದು ಗಂಧರ್ವರು ಶರೀರವಿನಿಮಯ ಮಾಡಿಕೊಳ್ಳುವುದನ್ನು ಉಲ್ಲೇಖಿಸಲಾಗಿದೆ. ಅಲ್ಲಿ

ಇಬ್ಬರು ಗಂಧರ್ವರಲ್ಲಿ ಒಬ್ಬನೆಂದಿದೆ. ಹೆಸರಿಲ್ಲ. ನಿರ್ಣಯಾನುಸಾರವಾಗಿ ತುಂಬುರುವೆ ಶರೀರವಿತ್ತನೆಂದು ಗ್ರಹಿಸಬೇಕು. ಅವನಿಗೇ ಸ್ಥೂಣಾಕರ್ಣನೆಂದು ಇನ್ನೊಂದು ಹೆಸರು.

ಸ್ಥೂಣಾಕರ್ಣಾಭಿಧೇಯಸ್ತಾಮಪಶ್ಯದ್ ದೃಢಕರ್ಣತಃ।
ಸ ತಸ್ಯಾ ಅಖಿಲಂ ಶ್ರುತ್ವಾ ಕೃಪಾಂ ಚಕ್ರೇ ಮಹಾಮನಾಃ ॥ ೧೧೦ ॥

ದೃಢವಾದ ಕಿವಿಗಳಿದ್ದ ಪ್ರಯುಕ್ತ ಸ್ಥೂಣಾಕರ್ಣನೆಂದೂ ಕರೆಸಿಕೊಂಡಿದ್ದ ವಿಶಾಲಹೃದಯಿಯಾದ ತುಂಬುರು ಶಿಖಂಡಿನಿಯ ಎಲ್ಲ ವೃತ್ತಾಂತವನ್ನು ಕೇಳಿ ಕೃಪೆ ಮಾಡಿದ.

ಸ ತಸ್ಯೈ ಸ್ವಂ ವಪುಃ ಪ್ರಾದಾತ್ ತದೀಯಂ ಜಗೃಹೇ ತದಾ।
ಅಂಶೇನ ಪುಂಸ್ತ್ವಭಾವಾರ್ಥಂ ಪೂರ್ವದೇಹೇ ಸಮಾಸ್ಥಿತಃ ॥ ೧೧೧ ॥

ಶಿಖಂಡಿನಿಗೆ ತನ್ನ ಶರೀರವನ್ನು ಕೊಟ್ಟ. ಅವಳ ಶರೀರವನ್ನು ತಾನು ಸ್ವೀಕರಿಸಿದ. ತಾನು ಕೊಟ್ಟ ಹಿಂದಿನ ಶರೀರದಲ್ಲಿ ಪುರುಷ ಸ್ವಭಾವ ಬರುವುದಕ್ಕಾಗಿ ತಾನೂ ಒಂದು ಅಂಶದಿಂದ ಅದರಲ್ಲಿದ್ದ.

ಪುಂಸಾಂ ಸ್ತ್ರೀತ್ವಂ ಭವೇತ್ ಕ್ವಾಪಿ ತಥಾಪ್ಯಂತೇ ಪುಮಾನ್ ಭವೇತ್।
ಸ್ತ್ರೀಣಾಂ ನೈವ ಹಿ ಪುಂಸ್ತ್ವಂ ಸ್ಯಾದ್ ಬಲವತ್ಕಾರಣೈರಪಿ ॥ ೧೧೨ ॥

ಪುರುಷರಿಗೆ ಸ್ತ್ರೀತ್ವವೆಂದಾದರೂ ಬಂದೀತು. ಆದರೆ ಕೊನೆಗೆ ಅವರು ಪುರುಷರೇ ಆಗುತ್ತಾರೆ. ಸ್ತ್ರೀಯರಿಗೆ ಪುರುಷತ್ವ ಬಲವತ್ತಾದ ಕಾರಣಗಳಿಂದಲೂ ಬರಲಾರದು.

ತುಂಬುರು ಶಿಖಂಡಿನಿಗೆ ತನ್ನ ಪುರುಷ ಶರೀರವನ್ನು ಕೊಟ್ಟರೂ ಪುರುಷತ್ವ ಬರಲಿಲ್ಲ. ಅದಕ್ಕೆ ಆ ಶರೀರದಲ್ಲಿ ತಾನೂ ಒಂದಂಶದಿಂದ ಇರಬೇಕಾಯಿತು. ಶಿವವರಬಲದಿಂದಲೆ ಶಿಖಂಡಿನಿಗೆ ತಾನು ಪಡೆದ ಪುರುಷಶರೀರದಲ್ಲಿ ಪುರುಷತ್ವವೇಕೆ ಬರಬಾರದು ಎಂದರೆ ಸ್ವಾಭಾವಿಕ ಪುರುಷರಿಗೆ ವರಶಾಪಾದಿಗಳಿಂದ ಸ್ತ್ರೀತ್ವ ಬರಬಹುದು. ಆದರೆ ಸ್ವಾಭಾವಿಕ ಸ್ತ್ರೀಯರಿಗೆ ಯಾವ ಬಲವತ್ತಾದ ಕಾರಣದಿಂದಲೂ ಪುರುಷತ್ವ ಬರುವುದಿಲ್ಲವೆಂದು ನಿಯಮ. ಶಿವವರವಿದ್ದರೂ ಶಿಖಂಡಿನಿಗೆ ಸ್ವತಂತ್ರವಾಗಿ, ತುಂಬುರುವಿನ ಅಂಶ ಸನ್ನಿಧಾನವಿಲ್ಲದೆ, ಪುರುಷ ಶರೀರ ಬರಲಿಲ್ಲವೆಂದ ಮೇಲೆ ಪುರುಷತ್ವವೆಲ್ಲಿಂದ ಬರಬೇಕು?

ಅತಃಶಿವವರೇಽಪ್ಯೇಷಾ ಜಜ್ಞೇ ಯೋಷೈವ ನಾನ್ಯಥಾ।
ಪಶ್ಚಾಚ್ಚಪುಂತನುಂ ಸೈಷಾ ಪ್ರವಿವೇಶೈವ ಪುಂಯುತಾಮ್ ॥ ೧೧೩ ॥

ನಾಸ್ಯಾ ದೇಹಃಪುಂಸ್ತ್ವಮಾಪ ನ ಚ ಪುಂಸಾನಧಿಷ್ಠಿತೇ।
ಪುಂದೇಹೇ ನ್ಯವಸತ್ ಸಾಥ ಗಂಧರ್ವೇಣ ತ್ವಧಿಷ್ಠಿತಮ್ ।
ಗಾಂಧರ್ವಂ ದೇಹಮಾವಿಶ್ಯ ಸ್ವಕೀಯಂ ಭವನಂ ಯಯೌ ॥ ೧೧೪ ॥

ಅದರಿಂದ ಶಿವವರವಿದ್ದರೂ ಶಿಖಂಡಿನಿ ಹೆಣ್ಣಾಗಿಯೆ ಹುಟ್ಟಿದಳು. ಗಂಡಾಗಿ ಅಲ್ಲ. ಅನಂತರವೂ ಪುರುಷಜೀವಯುಕ್ತವಾದ ಪುರುಷ ಶರೀರವನ್ನೇ ಪ್ರವೇಶಿಸಿದಳು ಹೊರತು ಅವಳ ಶರೀರ ಪುರುಷ ಶರೀರವಾಗಲೂ ಇಲ್ಲ. ಪುರುಷ ಜೀವನಿಲ್ಲದ ಒಂದು ಪುರುಷಶರೀರದಲ್ಲಿ ಅವಳು ನೆಲೆಸಲೂ ಇಲ್ಲ. ಹೀಗೆ ಅವಳು ಗಂಧರ್ವಾಂಶಯುಕ್ತವಾದ ಗಂಧರ್ವ ಶರೀರವನ್ನು ಪ್ರವೇಶಿಸಿ ತನ್ನ ಮನೆಗೆ ಹೋದಳು.

ಪುರುಷಶರೀರ ಸ್ತ್ರೀಶರೀರವಾಗುವುದುಂಟು. ಉದಾ. ಅರ್ಜುನನ ಶರೀರ ಊರ್ವಶಿಶಾಪದಿಂದ ಸ್ತ್ರೀಶರೀರವಾಯಿತು. ಅದರಲ್ಲಿ ಬೇರೆ ಸ್ತ್ರೀ ಜೀವಾಂಶವಿರಲಿಲ್ಲ. ಆದರೆ ಶಿಖಂಡಿನಿಯ ಸ್ತ್ರೀಶರೀರ ಶಿವವರದಿಂದಲೂ ಪುರುಷ ಶರೀರವಾಗಲಿಲ್ಲ. ಅವಳು ತನ್ನ ಶರೀರವನ್ನು ಗಂಧರ್ವನಿಗೆ ಕೊಟ್ಟು ಅವನ ಅಂಶದಿಂದ ಯುಕ್ತವಾದ ಅವನ ಶರೀರವನ್ನು ಪ್ರವೇಶಿಸಿದಳು. ಗೃಹಸ್ಥನ ಮನೆಯನ್ನು ಪ್ರವೇಶಿಸಿ ಇರುವ ಯತಿ ಹೇಗೆ ಗೃಹಸ್ಥನಾಗಲಾರನೋ ಹಾಗೇ ಒಬ್ಬಪುರುಷಜೀವನ ಪುರುಷಶರೀರವನ್ನು ಪ್ರವೇಶಿಸಿ ಇದ್ದಮಾತ್ರಕ್ಕೆ ಸ್ತ್ರೀ ಪುರುಷಳೆನಿಸುವುದಿಲ್ಲ. ಆದರೂ ಪುರುಷನಂತೆ ಸ್ಥೈರ್ಯ ಧೈರ್ಯ ಗಂಭೀರಸ್ವರ ಉದ್ಧತವಚನ ಮುಂತಾದ ಕಾರ್ಯಗಳು ನಡೆಯುವವು. ಅದರಿಂದ ಬಲವತ್ತಾದ ಕಾರಣದಿಂದಲೂ ಸ್ತ್ರೀಗೆ ಪುರುಷತ್ವ ಬರಲಾರದು ಎಂಬ ನಿಯಮಕ್ಕೆ ಎಂದೂ ಚ್ಯುತಿಯಿಲ್ಲ.[1]

ಸ್ತ್ರೀಗೆ ಸ್ತ್ರೀತ್ವ ವಿಷಯದಲ್ಲಿ ಯಾವುದೇ ವರದ ಅಪೇಕ್ಷೆಯಿಲ್ಲ. ಅವಳಿಗೆ ಪುರುಷತ್ವ ಎಂದೂ ಬಂದಿಲ್ಲ. ಪುರುಷಜೀವಯುಕ್ತವಾದ ಪುರುಷ ಶರೀರವನ್ನು ಶಿಖಂಡಿನಿ ಪ್ರವೇಶಿಸಿದರೂ ಅದು ಗಂಧರ್ವನ ಅನುಗ್ರಹದಿಂದಲೇ ನಡೆಯಿತು. ಹೀಗೆ ಬಲವತ್ತಾದ ಶಿವವರವೂ ಸ್ತ್ರೀಗೆ ಪುರುಷತ್ವ ಬರುವುದಿಲ್ಲವೆಂಬ ನಿಯಮದ ಮುಂದೆ ವ್ಯರ್ಥವಾಯಿತೆಂದ ಮೇಲೆ ಈ ನಿಯಮವನ್ನು ಭಂಗಗೊಳಿಸಲು ಎಂದಿಗೂ ಯಾರಿಂದಲೂ ಶಕ್ಯವಿಲ್ಲ ಎಂದು ಸಿದ್ಧವಾಗುತ್ತದೆ.[2]

---

1. ಅಸೌ ಪುಂದೇಹೋ ಗಂಧರ್ವಸ್ಯೈವ। ಅಸ್ಯಾಸ್ತು ಗೃಹಸ್ಥಗೃಹ ಪ್ರವಿಷ್ಟ ಭಿಕ್ಷುಕವದವಸ್ಥಾನ ಮಾತ್ರಂ। ತಸ್ಮಾದ್ ಭಿಕ್ಷೋರ್ಗೃಹಸ್ಥತ್ವವನ್ನಾಸ್ಯಾಃ ಪುಂಸ್ತ್ವಮಿತಿ ಭಾವಃ। -ವಾದಿರಾಜೀಯ
2. ಸ್ತ್ರಿಯಾಃ ಸ್ತ್ರೀತ್ವೇ ವರಸ್ಯಾನಪೇಕ್ಷಣಾತ್ ಸ್ತ್ರಿಯಾಃ ಪುಂಭಾವಸ್ಯ ಚ ಕದಾಪ್ಯಜಾತತ್ವಾತ್ ಪುಮಧಿಷ್ಠಿತ

ತಸ್ಯಾಸ್ತದ್ದೇಹಸಾದೃಶ್ಯಂ ಗಂಧರ್ವಸ್ಯ ಪ್ರಸಾದತಃ।
ಪ್ರಾಪ ಗಂಧರ್ವದೇಹೋಽಪಿ ತಯಾ ಪಶ್ಚಾದಧಿಷ್ಠಿತಃ ॥ ೧೧೫ ॥

ಶ್ವೋ ದೇಹಿ ಮಮ ದೇಹಂ ಮೇ ಸ್ವಂ ಚ ದೇಹಂ ಸಮಾವಿಶ।
ಇತ್ಯುಕ್ತ್ವಾಸ ತು ಗಂಧರ್ವಃ ಕನ್ಯಾದೇಹಂ ಸಮಾಸ್ಥಿತಃ ॥ ೧೧೬ ॥

ಉವಾಸೈವ ವನೇ ತಸ್ಮಿನ್ ಧನದಸ್ತತ್ರ ಚಾಗಮತ್।
ಅಪ್ರತ್ಯುತ್ಥಾಯಿನಂ ತಂತುಲೀಯಮಾನಂ ವಿಲಜ್ಜಯಾ ॥ ೧೧೭ ॥

ಶಶಾಪ ಧನದೋ ದೇವಶ್ಚಿರಮಿತ್ಥಂ ಭವೇತಿ ತಮ್ ॥ ೧೧೮ ॥

ಗಂಧರ್ವನ ಅನುಗ್ರಹದಿಂದಲೆ ಗಂಧರ್ವಶರೀರ ಶಿಖಂಡಿನಿಯ ಸ್ತ್ರೀಶರೀರದ ಸಾದೃಶ್ಯವನ್ನು ಹೊಂದಿತ್ತು. ಬಳಿಕ ಅವಳು ಆ ಶರೀರವನ್ನು ಪ್ರವೇಶಿಸಿದಳು. 'ನಾಳೆ ನೀನು ನನ್ನ ಶರೀರವನ್ನು ನನಗೇ ಕೊಡು, ನಿನ್ನ ಶರೀರವನ್ನು ನೀನು ಪ್ರವೇಶಿಸು' ಎಂದು ಹೇಳಿ ಆ ತುಂಬುರು ಗಂಧರ್ವ ಸ್ತ್ರೀಶರೀರವನ್ನು ಸ್ವೀಕರಿಸಿ ಆ ಕಾಡಿನಲ್ಲಿಯೆ ಇದ್ದ. ಅಲ್ಲಿಗೆ ಕುಬೇರದೇವ ಬಂದ. ತುಂಬುರು ಎದ್ದು ನಿಂತು ಇದಿರುಗೊಳ್ಳದೆ ನಾಚಿಕೆಯಿಂದ ಪೊದೆಗಳಲ್ಲಿ ಅಡಗಿ ಕುಳಿತುದನ್ನು ಕಂಡು ಶಪಿಸಿದ, 'ನೀನು ಬಹುಕಾಲ ಹೀಗೆ ಇರು' ಎಂದು.

ಯದಾ ಯುದ್ಧೇ ಮೃತಿಂ ಯಾತಿ ಸಾ ಕನ್ಯಾ ಪುಂತನುಸ್ಥಿತಾ
ತದಾ ಪುಂಸ್ತ್ವಂ ಪುನರ್ಯಾಸಿ ಚಪಲತ್ವಾದಿತೀರಿತಃ ॥ ೧೧೯ ॥

'ನಿನ್ನ ಪುರುಷ ಶರೀರದಲ್ಲಿರುವ ಆ ಹೆಣ್ಣು ಮುಂದೆ ಯುದ್ಧದಲ್ಲಿ ಮರಣ ಹೊಂದುವಾಗ ನೀನು ಪುನಃ ನಿನ್ನ ಆ ಪುರುಷ ಶರೀರವನ್ನು ಹೊಂದುತ್ತಿ. ಇದು ನಿನ್ನ ಚಾಪಲ್ಯದ ಫಲ' ಎಂದ ಕುಬೇರ.

ಚಾಪಲ್ಯವೆಂದರೆ ವಿಶೇಷ ಸಾಮರ್ಥ್ಯ. 'ನಿನ್ನ ಶರೀರದಲ್ಲಿರುವ ಶಿಖಂಡಿಯನ್ನು ಅಶ್ವತ್ಥಾಮ ರಾತ್ರಿ ಶಿಬಿರದಲ್ಲಿ ಸಂಹರಿಸುವಾಗ ನೀನು ಯೋಗಸಾಮರ್ಥ್ಯದಿಂದ ನಿನ್ನ ಶರೀರವನ್ನು ಪಡೆ' ಎಂದು ಹೇಳುವುದು ಕುಬೇರನ ಅಭಿಪ್ರಾಯ. ತುಂಬುರು ಗಂಧರ್ವ ತನ್ನ ಯೋಗ ಸಾಮರ್ಥ್ಯದಿಂದ ಶಿಖಂಡಿಯ ಪುರುಷ ಶರೀರವನ್ನು ತತ್‌ಕ್ಷಣವೇ ಆಕರ್ಷಿಸಿಕೊಂಡು ಸ್ತ್ರೀಶರೀರಕೊಟ್ಟು ಅಶ್ವತ್ಥಾಮನ ಖಡ್ಗಕ್ಕೆ ಗುರಿಯಾಗಿ

ಪುಂದೇಹಪ್ರವೇಶಸ್ಯ ಚ ಗಂಧರ್ವ ಪ್ರಸಾದಾದೇವ ಜಾತತ್ವಾತ್ ಬಲವಾನ್ ಶಿವವರೋಽಪಿ ಸ್ತ್ರೀಣಾಂ ಪುಂಸ್ತ್ವಂ ನ ಭವತೀತಿ ಯೇನ ನಿಯಮೇನ ವ್ಯರ್ಥೀಕೃತಃ ತಸ್ಯ ನಿಯಮಸ್ಯ ಕದಾಪಿ ಕೇನಾಪಿ ನ ಭಂಗ ಇತಿ ವಾಕ್ಯಸಮುದಾಯಸ್ಯಾಭಿಪ್ರಾಯಃ। -ವಾದಿರಾಜೀಯ

ಮಾಡಿ ನಿಲ್ಲಿಸಬೇಕು. ಆಗ ಶಿಖಂಡಿ ಎಂದು ತಿಳಿದು ಅಶ್ವತ್ಥಾಮ ಶಿಖಂಡಿನಿಯನ್ನು ಕೊಲ್ಲಬೇಕು' ಎಂದು.[1]

ಅಥವಾ ಚಾಪಲ್ಯವೆಂದರೆ ತುಂಬುರು ತನ್ನ ಪುರುಷ ಶರೀರವನ್ನು ಕೊಟ್ಟು ಸ್ತ್ರೀ ಶರೀರವನ್ನು ಪಡೆದುದು ಬರಿ ಚಪಲತೆ ಹೊರತು ಯೋಗ್ಯವಾದ ಕೆಲಸವಲ್ಲ. ಆದರಿಂದ ನೀನು ಶಿಖಂಡಿಯ ಮರಣಕಾಲ ಪರ್ಯಂತ ಕಾಯಬೇಕು ಎಂದರ್ಥ.[2]

ಅಥವಾ ಚಾಪಲ್ಯವೆಂದರೆ ಅಸ್ಥಿರತೆ. ಶಿಖಂಡಿನಿಗೆ ತುಂಬುರು ಕೊಟ್ಟ ಪುರುಷ ಶರೀರ ಸ್ಥಿರವಲ್ಲ. ಏಕೆಂದರೆ ಹೆಣ್ಣಿಗೆ ಪುರುಷ ಶರೀರ ಸ್ಥಿರವಲ್ಲ ಎಂದರ್ಥ.[3]

ತಥಾವಸತ್ ಸ ಗಂಧರ್ವಃ ಕನ್ಯಾ ಪಿತ್ರೋರಶೇಷತಃ।
ಕಥಯಾಮಾಸಾನುಭೂತಂ ತೌ ಭೃಶಂ ಮುದಮಾಪತುಃ ॥ ೧೨೦ ॥

ಪರೀಕ್ಷ್ಯ ತಾಮುಪಾಯೈಸ್ತು ಶ್ವಶುರೋ ಲಜ್ಜಿತೋ ಯಯೌ ॥ ೧೨೧ ॥

ತುಂಬುರು ಹಾಗೇ ಸ್ತ್ರೀಶರೀರದಲ್ಲಿ ವಾಸ ಮಾಡಿದ. ಶಿಖಂಡಿನಿ ತಂದೆತಾಯಿಗಳಿಗೆ ತನ್ನ ಅನುಭವವನ್ನೆಲ್ಲ ಹೇಳಿಕೊಂಡಳು. ಅವರು ಬಹಳ ಸಂತೋಷಪಟ್ಟರು. ಮಾವ ಅವಳನ್ನು ನಾನಾ ಉಪಾಯಗಳಿಂದ ಪರೀಕ್ಷಿಸಿ ಸೋತು ಲಜ್ಜಿತನಾಗಿ ಹೊರಟುಹೋದ.

ಶ್ವೋಭೂತೇ ಸಾ ತು ಗಂಧರ್ವಂ ಪ್ರಾಪ್ಯ ತದ್ವಚನಾತ್ ಪುನಃ।
ಯಯೌ ತೇನೈವ ದೇಹೇನ ಪುಂಸ್ತ್ವಮೇವ ಸಮಾಶ್ರಿತಾ ॥ ೧೨೨ ॥

ಸ ಶಿಖಂಡೀ ನಾಮತೋಽಭೂದಸ್ತ್ರಶಸ್ತ್ರಪ್ರತಾಪವಾನ್ ॥ ೧೨೩ ॥

ಶಿಖಂಡಿನಿ ಮರುದಿನ ಪುನಃ ಗಂಧರ್ವನ ಬಳಿಗೆ ಹೋಗಿ, ಅವನು ಹೇಳಿದ ಪ್ರಕಾರ ಅದೇ ಶರೀರದಿಂದ ಪುರುಷತ್ವವನ್ನು ತಳೆದೇ ಮನೆ ಸೇರಿದಳು. ಆ ಪುರುಷನೆ ಮುಂದೆ ಅಸ್ತ್ರಶಸ್ತ್ರ ಪ್ರತಾಪಉಳ್ಳವನಾಗಿ ಶಿಖಂಡಿ ಎಂಬ ಹೆಸರಿನಿಂದ ಪ್ರಸಿದ್ಧನಾದ.

---

1. ಚಪಲತ್ವಾತ್ ಚಾಟುತ್ವಾತ್ ದೇಹ ದಾನಾದಾನಾದಿ ಸಾಮರ್ಥ್ಯ ವಿಶೇಷವ್ವಾದಿತ್ಯರ್ಥಃ। ಸ್ವಸ್ಯ ಯೋಗಸಾಮಾರ್ಥ್ಯಾತ್ ತಸ್ಯಾಃಸ್ವಭಾವಭೂತೇ ಅಸ್ಮಿನ್ ದೇಹೇ ತಾಂ ಪ್ರವೇಶ್ಯ, ತವಸ್ವಭಾವ ಭೂತಂ ಗಾಂಧರ್ವಂ ಪುಂದೇಹಂ ಸ್ವಯೋಗಶಕ್ತ್ಯಾ ಪುನರಾದಾಯ ತ್ವಂ ತತ್ರಸುಖೇನ ತಿಷ್ಠೇತಿ ಭಾವಃ। -ವಾದಿರಾಜೀಯ
2. ಚಪಲತ್ವಾತ್ ಅಕಾರ್ಯಕರ್ಮಕರಣತ್ವಾದಿತ್ಯರ್ಥಃ। -ಜನಾರ್ದನೀಯ
3. ಚಪಲತ್ವಾತ್ ಶಿಖಂಡಿನ್ಯೈ ತ್ವಯಾ ದತ್ತದೇಹಸ್ಯ ಚಂಚಲತ್ವಾತ್ ಸ್ವಭಾವತಸ್ತದೀಯ ತ್ವಾಭಾವಾತ್ ಇತಿ ಯಾವತ್। -ವಾದಿರಾಜೀಯ

'ಅವನು ಹೇಳಿದ ಪ್ರಕಾರ' ಎಂದರೆ 'ಇನ್ನು ನಿನ್ನ ಮರಣಪರ್ಯಂತ ಈ ಪುರುಷ ಶರೀರ ನಿನಗೇ ಇರುತ್ತದೆ' ಎಂದು ಹೇಳಿದ ಪ್ರಕಾರ.

ವಿಚಿತ್ರವೀರ್ಯನ ಮರಣ

ವಿಚಿತ್ರವೀರ್ಯಃ ಪ್ರಮದಾದ್ವಯಂ ತತ್
ಸಂಪ್ರಾಪ್ಯ ರೇಮೇಽಬ್ದಗಣಾನ್ ಸುಸಕ್ತಃ।
ತತ್ಯಾಜ ದೇಹಂ ಚ ಸ ಯಕ್ಷ್ಮಣಾರ್ದಿತಃ
ತತೋಽಸ್ಯ ಮಾತಾಸ್ಮರದಾಶು ಕೃಷ್ಣಮ್ ॥ ೧೨೪ ॥

ವಿಚಿತ್ರವೀರ್ಯ ಇಬ್ಬರು ಹೆಂಡತಿಯರನ್ನು ಪಡೆದು ಬಹುವರ್ಷಕಾಲ ಬಹಳ ಆಸಕ್ತನಾಗಿ ರಮಿಸಿದ. ಕ್ಷಯರೋಗದಿಂದ ಪೀಡಿತನಾಗಿ ದೇಹವನ್ನು ತೊರೆದ. ಆಗ ಅವನ ತಾಯಿ ಸತ್ಯವತಿ ಬೇಗನೆ ವೇದವ್ಯಾಸರನ್ನು ನೆನೆದಳು.

ಅಂಬಾಲಿಕಾ ಅಂಬಿಕಾ ಎಂಬ ಇಬ್ಬರು ಹೆಂಡತಿಯರನ್ನು ಹೊಂದಿ ವಿಚಿತ್ರವೀರ್ಯ ಅತ್ಯಂತ ಆಸಕ್ತಿಯಿಂದ ಬಹುವರ್ಷಕಾಲ ವಿಷಯಭೋಗ ಅನುಭವಿಸಿದ. ಬಹುವರ್ಷಕಾಲ ಎಂದರೆ, ಏಳು ವರ್ಷಗಳ ಕಾಲ ಎಂದು ಮಹಾಭಾರತ ಹೇಳುತ್ತಿದೆ (ಆದಿ.111-6) ಬಳಿಕ ಕ್ಷಯರೋಗಕ್ಕೆ ತುತ್ತಾಗಿ ಮಡಿದ. ರಾಜ್ಯಕ್ಕೆ ಉತ್ತರಾಧಿಕಾರಿಯಾಗಬಲ್ಲ ಮಕ್ಕಳು ಬೇಕು. ವಿಚಿತ್ರವೀರ್ಯನಿಗೆ ಮಕ್ಕಳಿರಲಿಲ್ಲ. ಅದಕ್ಕೆ ದ್ವಾಪರ ಯುಗದ ಪ್ರಚಲಿತವಾಗಿದ್ದ ನಿಯೋಗ ಪದ್ಧತಿಯಂತೆ ರಾಣಿಯರು ವೇದವ್ಯಾಸರಿಂದ ಮಕ್ಕಳನ್ನು ಪಡೆಯಲಿ ಎಂದು ಸತ್ಯವತಿ ವೇದವ್ಯಾಸರನ್ನು ನೆನೆದಳು. ಏಕೆಂದರೆ ನೆನೆದಾಗ ಬರುವೆನೆಂದು ಅವರು ಅಂದೇ ವಚನವಿತ್ತಿದ್ದರು.

ಧೃತರಾಷ್ಟ್ರನ ಜನನ

ಆವಿರ್ಬಭೂವಾಶು ಜಗಜ್ಜನಿತ್ರೋ ಜನಾರ್ದನೋ ಜನ್ಮಜರಾಭಯಾಪಹಃ।
ಸಮಸ್ತವಿಜ್ಞಾನತನುಃ ಸುಖಾರ್ಣವಃ ಸಂಪೂಜಯಾಮಾಸ ಚ ತಂ ಜನಿತ್ರೀ ॥ ೧೨೫ ॥

ಒಡನೆ ಜಗಜ್ಜನಕರಾದ, ಜನ್ಮ ಜರಾಭಯ ಪರಿಹಾರಕರಾದ, ಪೂರ್ಣ ವಿಶೇಷಜ್ಞಾನ ಶರೀರರಾದ ಆನಂದಸಾಗರರಾದ ವೇದವ್ಯಾಸರು ಪ್ರತ್ಯಕ್ಷರಾದರು. ತಾಯಿ ಆ ಮಗನನ್ನು ಚೆನ್ನಾಗಿ ಉಪಚರಿಸಿದಳು.

ತಂ ಭೀಷ್ಮಪೂರ್ವೈಃಪರಮಾದರಾರ್ಚಿತಂ
ಸ್ವಭಿಷ್ಟುತಂ ಚಾವದದಸ್ಯ ಮಾತಾ।

ಪುತ್ರೌ ಮೃತೌ ಮೇ ನ ತು ರಾಜ್ಯಮೈಚ್ಛದ್
ಭೀಷ್ಮೋ ಮಯಾ ನಿತರಾಮರ್ಥಿತೋಽಪಿ ॥೧೨೬॥

ಭೀಷ್ಮ ಮುಂತಾದವರೂ ಪರಮಾದರದಿಂದ ವೇದವ್ಯಾಸರನ್ನು ಉಪಚರಿಸಿದರು. ಪ್ರಶಂಸಿಸಿದರು. ತಾಯಿ ಸತ್ಯವತಿ ನುಡಿದಳು. ''ನನ್ನ ಇಬ್ಬರು ಮಕ್ಕಳೂ ಮೃತರಾಗಿರುವರು. ನಾನು ಎಷ್ಟು ಹೇಳಿದರೂ ಭೀಷ್ಮ ರಾಜ್ಯಭಾರ ಕೈಗೊಳ್ಳಲು ಒಪ್ಪಲಿಲ್ಲ.''

ಕ್ಷೇತ್ರೇ ತವ ಭ್ರಾತುರಪತ್ಯಮುತ್ತಮಮುತ್ಪಾದಯಾಸ್ಮತ್ಪರಮಾದರಾರ್ಥಿತಃ।
ಇತೀರಿತಃ ಪ್ರಣತಶ್ಚಾಪ್ಯಭಿಷ್ಟುತೋ ಭೀಷ್ಮಾದಿಭಿಶ್ಚಾಹ ಜಗದ್ಗುರುರ್ವಚಃ ॥೧೨೭॥

'ನಾವು ನಿನ್ನನ್ನು ಪರಮಾದರದಿಂದ ಕೇಳಿಕೊಳ್ಳುತ್ತೇವೆ. ನೀನು ನಿನ್ನ ಸೋದರನ ಪತ್ನಿಯಲ್ಲಿ ಒಳ್ಳೆಯ ಸಂತತಿಯನ್ನು ಹುಟ್ಟಿಸು.' ಹೀಗೆ ಸತ್ಯವತಿ ಹೇಳಿದಳು. ಭೀಷ್ಮ ಮುಂತಾದವರೂ ನಮಿಸಿ ಸ್ತೋತ್ರ ಮಾಡಿದರು. ಆಗ ಜಗದ್ಗುರು ವೇದವ್ಯಾಸರು ಹೇಳಿದರು.

ಋತೇ ರಮಾಂ ಜಾತು ಮಮಾಂಗಸಂಗಯೋಗ್ಯಾಂಗನಾ ನೈವ ಸುರಾಲಯೇಽಪಿ।
ತಥಾಪಿ ತೇ ವಾಕ್ಯಮಹಂ ಕರಿಷ್ಯೇ ಸಾಂವತ್ಸರಂ ಸಾ ಚರತು ವ್ರತಂ ಮೇ ॥೧೨೮॥

'ರಮೆ ಹೊರತು ನನ್ನ ಅಂಗಸಂಗಕ್ಕೆ ಯೋಗ್ಯಳಾದ ಸ್ತ್ರೀಸ್ವರ್ಗದಲ್ಲಿ ಏಕೆ ಸತ್ಯಲೋಕಾದಿಗಳಲ್ಲಿಯೂ ಕೂಡ ಎಂದೂ ಯಾರೂ ಇಲ್ಲ. ಭೂಲೋಕದಲ್ಲಿ ಇನ್ನೇನು? ಆದರೂ ನಾನು ನಿನ್ನ ಮಾತನ್ನು ನಡೆಸಿಕೊಡುತ್ತೇನೆ. ಅದಕ್ಕೆ ಒಂದು ವರ್ಷ ಕಾಲ ವಿಚಿತ್ರವೀರ್ಯನ ಮಡದಿ ವೈಷ್ಣವ ವ್ರತ ಆಚರಿಸಲಿ.'

ಗೋಪಿಯರನ್ನೂ ಹದಿನಾರು ಸಾವಿರ ಹೆಂಡಂದಿರನ್ನೂ ಕೃಷ್ಣ ಆಲಿಂಗಿಸಲು ಅವರಲ್ಲಿ ರಮಾವೇಶವಿದ್ದುದು ಕಾರಣ. ಅದರಿಂದ ರಮಾವೇಶವಿಲ್ಲದೆ ಯಾವ ಸ್ತ್ರೀಯೂ ಭಗವಂತನ ಅಂಗಸಂಗಕ್ಕೆ ಯೋಗ್ಯಳಾಗುವುದಿಲ್ಲ. ವೈಷ್ಣವ ವ್ರತವಾಚರಿಸಿ ವಿಚಿತ್ರವೀರ್ಯನ ಮಡದಿ ರಮಾವೇಶ ಪಾತ್ರಳಾದಾಗಲೆ ತನ್ನ ಅಂಗಸಂಗಕ್ಕೆ ಯೋಗ್ಯಳಾಗುವಳು ಎಂಬುದು ವ್ಯಾಸರ ಅಭಿಪ್ರಾಯ ವಾಗಿತ್ತು.

ಸಾ ಪೂತದೇಹಾಥ ಚ ವೈಷ್ಣವವ್ರತಾನ್ಮತ್ತಃ ಸಮಾಪ್ನೋತು ಸುತಂ ಪರಿಷ್ಕೃಮ್।
ಇತೀರಿತೇ ರಾಷ್ಟ್ರಮುಪೈತಿ ನಾಶಮಿತಿ ಬ್ರುವಂತೀಂ ಪುನರಾಹ ವಾಕ್ಯಮ್ ॥೧೨೯॥

'ವಿಚಿತ್ರವೀರ್ಯನ ಮಡದಿ ವೈಷ್ಣವ ವ್ರತದಿಂದ ಶರೀರ ಪವಿತ್ರವಾದ ಬಳಿಕ ನನ್ನಿಂದ ಉತ್ತಮ ಪುತ್ರನನ್ನು ಪಡೆಯಲಿ.' ಹೀಗೆ ವೇದವ್ಯಾಸರು ಹೇಳಿದಾಗ, ಸತ್ಯವತಿ 'ಅಷ್ಟರೊಳಗೆ ರಕ್ಷಕರಿಲ್ಲದೆ ರಾಷ್ಟ್ರನಾಶವಾಗುವುದು' ಎಂದಳು. ಆಗ ವೇದವ್ಯಾಸರು ಹೇಳಿದರು.

ಸೌಮ್ಯಸ್ವರೂಪೋಽಪ್ಯತಿಭೀಷಣಂ ಮೃಷಾ
ತಚ್ಚಕ್ಷುಷೋ ರೂಪಮಹಂ ಪ್ರದರ್ಶಯೇ।
ಸಹೇತ ಸಾ ತದ್ ಯದಿ ಪುತ್ರಕೋಽಸ್ಯಾ
ಭವೇದ್ ಗುಣಾಢ್ಯೋ ಬಲವೀರ್ಯ ಯುಕ್ತಃ ॥ ೧೩೦ ॥

'ನಾನು ಸೌಮ್ಯಸ್ವರೂಪನಾದರೂ ಅತ್ಯಂತ ಭಯಂಕರ ರೂಪವನ್ನು ಸುಮ್ಮನೆ ಅವಳ ಕಣ್ಣಿಗೆ ತೋರುತ್ತೇನೆ. ಅದನ್ನು ಅವಳು ಸಹಿಸಿಕೊಳ್ಳುವುದಾದರೆ ಅವಳಿಗೆ ಬಲವೀರ್ಯ ಯುಕ್ತನಾದ ಗುಣಾಢ್ಯನಾದ ಪುತ್ರ ಜನಿಸುತ್ತಾನೆ.'

ಮಹಾಭಾರತದಲ್ಲಿ (ಆದಿ.68.83) 'ವಿರೂಪತಾಂ ಮೇ ಸಹತಾಂ' 'ನನ್ನ ವಿರೂಪವನ್ನು ನೋಡಿ ಸಹಿಸಲಿ' ಎನ್ನುತ್ತಾರೆ ವ್ಯಾಸರು. ವಿರೂಪವೆಂದರೆ ಕುರೂಪ ವ್ಯಾಸರಲ್ಲಿ ಇರಲು ಶಕ್ಯವಿಲ್ಲ. ಅವರ ಎಲ್ಲ ರೂಪವೂ ಸುರೂಪವೆ. ಅದರಿಂದ ವಿರುದ್ಧರೂಪ. ಅಂದರೆ ಸೌಮ್ಯರೂಪಕ್ಕೆ ವಿರುದ್ಧವಾದ ಭಯಂಕರ ರೂಪವನ್ನು ಸುಮ್ಮನೆ ತೋರುತ್ತಾರೆ. ಅಂದರೆ, ಶತ್ರುವಧ ಕಾಲದಲ್ಲಿ ತೋರಬೇಕಾದ ಭಯಂಕರ ರೂಪವನ್ನು ನಿಯೋಗ ಕಾಲದಲ್ಲಿ ಸುಮ್ಮನೆ ತೋರುತ್ತಾರೆ. 'ಮೃಷಾ' ಎಂದರೆ ಸುಳ್ಳಲ್ಲ. ಭಯಂಕರ ರೂಪವೂ ವಾಸ್ತವವೆ ಎನ್ನುತ್ತಾರೆ ವಾದಿರಾಜರು. 'ಭಯಂಕರರೂಪಮಪಿ ಭಗವತೋಽಸ್ಯೇವ। ತೇನಾವಿದ್ಯಮಾನಂ ಪಶ್ಯಂತೀತ್ಯಥೋರ್ ನ ಯೌಕ್ತಿಕಃ।'

ಇತೀರಿತೇಽಸ್ತ್ವಿತ್ಯುದಿತಸ್ತಯಾಗಮತ್
ಕೃಷ್ಣೋಽಂಬಿಕಾಂ ಸಾ ತು ಭಯಾನ್ನ್ಯಮೀಲಯತ್।
ಅಭೂಚ್ಚತಸ್ಯಾಂ ಧೃತರಾಷ್ಟ್ರನಾಮಕೋ
ಗಂಧರ್ವರಾಟ್ ಪವನಾವೇಶಯುಕ್ತಃ ॥ ೧೩೧ ॥

ಹೀಗೆ ಹೇಳಿದಾಗ ಸತ್ಯವತಿ ಆಗಲಿ ಎಂದಳು. ವ್ಯಾಸರು ಅಂಬಿಕೆಯ ಬಳಿಗೆ ಬಂದರು. ಅವಳು ಭಯದಿಂದ ಕಣ್ಣುಮುಚ್ಚಿದಳು. ಅವಳಲ್ಲಿ ಗಂಧರ್ವ ರಾಜನೊಬ್ಬ ವಾಯ್ವಾವೇಶಯುಕ್ತನಾಗಿ ಧೃತರಾಷ್ಟ್ರನೆಂಬ ಹೆಸರಿಂದ ಜನಿಸಿದ.

ಸತ್ಯವತಿ ಅಂಬಿಕೆಗೆ ರಾತ್ರಿ ನಿಯೋಗಕ್ಕೆ ಸಿದ್ಧಳಾಗಿರಲು ಹೇಳಿದ್ದಳು. ಅಂಬಿಕೆ ಭೀಷ್ಮನೋ ಇನ್ನಾರೋ ಬಲಿಷ್ಠನಾದ ಸ್ಫುರದ್ರೂಪಿ ತರುಣ ಕ್ಷತ್ರಿಯ ಬರಬಹುದೆಂದು ನಿರೀಕ್ಷಿಸಿದ್ದಳು. ಅನಿರೀಕ್ಷಿತವಾಗಿ ವ್ಯಾಸರು ಬಂದರು. ಮೊದಲೇ ಮುನಿವೇಷದವರು. ಶತ್ರುಗಳಿಗೆ ತೋರುವ ಉಗ್ರರೂಪ ತೋರಿದರು. ಅದರಿಂದ ಅಂಬಿಕೆ ಭಯದಿಂದ ಕಣ್ಣುಮುಚ್ಚಿದಳು.

ಸ ಮಾರುತಾವೇಶವಶಾದ್ ಬಲಾಧಿಕೋ
ಬಭೂವ ರಾಜಾ ಧೃತರಾಷ್ಟ್ರನಾಮಾ।
ಅದಾದ್ ವರಂ ಚಾಸ್ಯ ಬಲಾಧಿಕತ್ವಂ
ಕೃಷ್ಣೋಽಂಧ ಆಸೀತ್ ಸ ತು ಮಾತೃದೋಷತಃ ॥ ೧೩೨ ॥

ಆ ಧೃತರಾಷ್ಟ್ರನಾಮಕನಾದ ರಾಜ ವಾಯ್ವಾವೇಶ ಬಲದಿಂದ ಬಲದಲ್ಲಿ ಶ್ರೇಷ್ಠನಾದ. ಅವನಿಗೆ ಅಧಿಕ ಬಲವಿತ್ತರು ವ್ಯಾಸರು. ಆದರೆ ತಾಯಿಯ ದೋಷದಿಂದ ಅವನು ಹುಟ್ಟುವಾಗಲೆ ಅಂಧನಾಗಿದ್ದ.

'ಅರಿಷ್ಟಾಯಾಸ್ತು ಯಃ ಪುತ್ರೋ ಹಂಸ ಇತ್ಯಭಿವಿಶ್ರುತಃ।
ಸ ಗಂದರ್ವಪತಿರ್ಜಜ್ಞೇ ಕುರುವಂಶ ವಿವರ್ಧನಃ।
ಧೃತರಾಷ್ಟ್ರ ಇತಿ ಖ್ಯಾತಃ ಕೃಷ್ಣದ್ವೈಪಾಯನಾತ್ಮಜಃ।'

'ಅರಿಷ್ಟೆಯ ಪುತ್ರ ಹಂಸ ಎಂಬುವನು ಧೃತರಾಷ್ಟ್ರನಾಗಿ ವ್ಯಾಸರಿಂದ ಜನಿಸಿದ' ಎಂದು ಭಾರತ ಹೇಳುವುದರಿಂದ ಗಂಧರ್ವನ ಹೆಸರು ಹಂಸ' ಎಂನ್ನುತ್ತಾರೆ ವಾದಿರಾಜರು. ನಿರ್ಣಯದಲ್ಲಿ ಮೇಲುನೋಟಕ್ಕೆ 'ಧೃತರಾಷ್ಟ್ರನೆಂಬ ಗಂಧರ್ವರಾಜ ಧೃತರಾಷ್ಟ್ರನೆಂಬ ರಾಜನಾಗಿ ಜನಿಸಿದನೆ'ದು ಹೇಳಿದಂತೆ ಕಾಣುತ್ತದೆ. ಜನಾರ್ದನೀಯ ವರದರಾಜೀಯಗಳಲ್ಲಿ ಹಾಗೇ ವ್ಯಾಖ್ಯಾನಿಸಲಾಗಿದೆ. ನಾರಾಯಣ ಪಂಡಿತಾಚಾರ್ಯರ ಅಂಶಾವತಾರದಲ್ಲಿಯೂ ಹಾಗೇ ಹೇಳಿದೆ-

ಧೃತರಾಷ್ಟ್ರಃ ಪುರಾ ಪ್ರೋಕ್ತೋ ಗಂಧರ್ವಸ್ತು ಸನಾಮಕಃ।

ಪ್ರಾಯಃ ಇವರೆಲ್ಲರೂ ಮಹಾಭಾರತದಲ್ಲಿಯೆ ಆಶ್ರಮವಾಸಿಕ ಪರ್ವದಲ್ಲಿ ವ್ಯಾಸರು ಗಾಂಧಾರಿಗೆ ಹೇಳುವ ಈ ಮಾತನ್ನು ಆಧರಿಸಿ ಹೇಳಿದ್ದಾರೆ-

ಗಂಧರ್ವರಾಜೋ ಯೋ ಧೀಮಾನ್ ಧೃತರಾಷ್ಟ್ರ ಇತಿ ಶ್ರುತಃ।
ಸ ಏವ ಮಾನುಷೇ ಲೋಕೇ ಧೃತರಾಷ್ಟ್ರಃ ಪತಿ ಸ್ತವ ॥(31-8)

ಪಾಂಡು ಜನನ

ಜ್ಞಾತ್ವಾತಮಂಧಂ ಪುನರೇವ ಕೃಷ್ಣಂ
ಮಾತಾಬ್ರವೀಜ್ಜನಯಾನ್ಯಂ ಗುಣಾಢ್ಯಮ್।
ಅಂಬಾಲಿಕಾಯಾಮಿತಿ ತತ್ ತಥಾಕರೋತ್
ಭಯಾಚ್ಚಸಾ ಪಾಂಡುರಭೂನ್ಮೃಷಾದೃಕ್ ॥ ೧೩೩ ॥

ಧೃತರಾಷ್ಟ್ರ ಕುರುಡನಾಗಿ ಜನಿಸಿದುದನ್ನು ತಿಳಿದು ತಾಯಿ ಸತ್ಯವತಿ ವ್ಯಾಸರಿಗೆ

ಹೇಳಿದಳು, 'ಅಂಬಾಲಿಕೆಯಲ್ಲಿಯೂ ಇನ್ನೊಬ್ಬ ಗುಣಶಾಲಿಯಾದ ಮಗನನ್ನು ಹುಟ್ಟಿಸು' ಎಂದು ವ್ಯಾಸರು ಹಾಗೇ ಮಾಡಿದರು. ಆದರೆ ಅವರು ಸುಮ್ಮನೆ ತೋರಿದ ಭಯಂಕರ ರೂಪವನ್ನು ನೋಡುತ್ತ ಅಂಬಾಲಿಕೆ ಭಯದಿಂದ ಪಾಂಡುವರ್ಣ ತಳೆದಳು.

ಅಂಬಾಲಿಕೆಯೂ ನಿಯೋಗಕ್ಕೆ ವ್ಯಾಸರು ಬರುವರೆಂದು ತಿಳಿದಿರಲಿಲ್ಲ.

'ಕೋ ನ್ವೇಷ್ಯತೀತಿ ಧ್ಯಾಯಂತೀ ನಿಯತಾ ಸಂಪ್ರತೀಕ್ಷತೇ।'

ಯಾರು ಬರುವನೆಂದು ಆಲೋಚಿಸುತ್ತ ಕಾದು ಕುಳಿತಿದ್ದಳು. ವ್ಯಾಸರು ಬಂದಾಗ ಕಂಡು ಭಯಗೊಂಡಳು. ಅವಳ ಮೈಯ ಬಂಗಾರದ ಬಣ್ಣ ಕೇದಗೆಯ ಪರಾಗದಂಥ ಬಿಳಿಹಳದಿ ಬಣ್ಣಕ್ಕೆ ತಿರುಗಿತು.

ಪರಾವಹೋ ನಾಮ ಮರುತ್ತತೋಽಭವತ್ ವರ್ಣೇನ ಪಾಂಡುಃ ಸ ಹಿ ನಾಮತಶ್ಚ।
ಸ ಚಾಸ ವೀರ್ಯಾಧಿಕ ಏವ ವಾಯೋರಾವೇಶತಃ ಸರ್ವ ಶಸ್ತ್ರಾಸ್ತ್ರವೇತ್ತಾ ॥೧೩೪॥

ಪರಾವಹನೆಂಬ ಮರುತ್ತು ಪಾಂಡುವರ್ಣದವನಾಗಿ 'ಪಾಂಡು' ಎಂಬ ಹೆಸರಿನಿಂದಲೆ ಜನಿಸಿದ. ವಾಯುವಿನ ಆವೇಶದಿಂದ ಬಲದಲ್ಲಿ ಶ್ರೇಷ್ಠನೆನಿಸಿದ. ಶಸ್ತ್ರಾಸ್ತ್ರ ನಿಪುಣನೆನಿಸಿದ.

ಪ್ರಾಣ ಅಪಾನ ವ್ಯಾನ ಉದಾನ ಸಮಾನ ನಾಗ ಕೃಕಲ ಕೂರ್ಮ ದೇವದತ್ತ ಧನಂಜಯ ಪ್ರವಹ ವಿವಹ ಶಂಯು ಸಂವಹ ಪರಾವಹ ಉದ್ವಹ ಆವಹ ಶಂಕು ಕಾಲ ಶ್ವಾಸ ಅನಿಲ ಅನಲ ಪ್ರತಿಭ ಕುಮುದ ಕಾಂತ ಶುಚಿ ಶ್ವೇತ ಅಜಿತ ಗುರು ಸಂಜ್ಞಸಂವರ್ತಕ ಕೀಲ ದತ್ತ ಸೌಮ್ಯ ಕಪಿ ಜಡ ಮುಂಡೂಕ ಸಂಹೃತ ಸಿದ್ಧಾಮೃತ ಕೃಷ್ಣಪಿಕ ಶುಕ ಯತಿ ಭೀಮ ಹನು ಪಿಂಗ ಅಹಂಪ್ರಾಣ ಕಂಪನ- ಇವರು ನಲವತ್ತೊಂಬತ್ತು ಮಂದಿ ಮರುತ್ತುಗಳೆಂದು ವಿಷ್ಣುರಹಸ್ಯದಲ್ಲಿ ಹೇಳಿದೆ. ಇವರು ಕಶ್ಯಪರಿಂದ ದಿತಿಯಲ್ಲಿ ಹುಟ್ಟಿದ್ದರೂ ದೈತ್ಯರಲ್ಲ. ದೇವತೆಗಳು. ಇವರಲ್ಲಿ ಪರಾಹವನೇ ಮುಖ್ಯಪ್ರಾಣನ ಆವೇಶಯುಕನಾಗಿ ಪಾಂಡುವಾಗಿ ಜನಿಸಿದ.

ತಸ್ಮೈ ತಥಾ ಬಲವೀರ್ಯಾಧಿಕತ್ವಂ ವರಂ
ಪ್ರಾದಾತ್ ಕೃಷ್ಣವಿವಾಥ ಪಾಂಡುಮ್।
ವಿಜ್ಞಾಯ ತಂ ಪ್ರಾಹ ಪುನಶ್ಚ ಮಾತಾ
ನಿರ್ದೋಷಮನ್ಯಂ ಜನಯೋತ್ತಮಂ ಸುತಮ್ ॥ ೧೩೫ ॥

ಪಾಂಡುವಿಗೂ ಬಲವೀರ್ಯಗಳಲ್ಲಿ ಶ್ರೇಷ್ಠನಾಗೆಂದು ವ್ಯಾಸರು ವರವಿತ್ತರು. ಬಳಿಕ

ಪಾಂಡು ಪಾಂಡುವರ್ಣದವನಾದನೆಂದು ತಿಳಿದು ಸತ್ಯವತಿ ಪುನಃ ನಿರ್ದುಷ್ಟನಾದ ಉತ್ತಮನಾದ ಇನ್ನೊಬ್ಬ ಮಗನನ್ನು ಹುಟ್ಟಿಸೆಂದು ವ್ಯಾಸರಲ್ಲಿ ಹೇಳಿದಳು.

ವಿದುರನ ಜನನ

ಉಕ್ತ್ವೇತಿ ಕೃಷ್ಣಂ ಪುನರೇವ ಚ ಸ್ನುಷಾಮಾಹ ತ್ವಯಾಕ್ಷ್ಣೋರ್ಹಿ ನಿಮೀಲನಂ ಪುರಾ।
ಕೃತಂ ತತಸ್ತೇ ಸುತ ಆಸ ಚಾಂಧಃ ತತಃ ಪುನಃ ಕೃಷ್ಣಮುಪಾಸ್ವಾಭಕ್ತಿತಃ ॥೧೩೬॥

ವ್ಯಾಸರಲ್ಲಿ ಹೀಗೆ ಹೇಳಿ ಸತ್ಯವತಿ ಪುನಃ ಸೊಸೆಯ ಬಳಿ ಹೇಳಿದಳು, 'ನೀನು ಹಿಂದೆ ಕಣ್ಣುಮುಚ್ಚಿಕೊಂಡೆ. ಅದರಿಂದ ನಿನಗೆ ಕುರುಡನಾದ ಮಗ ಹುಟ್ಟಿದ. ಅದರಿಂದ ಪುನಃ ವ್ಯಾಸರನ್ನು ಭಕ್ತಿಯಿಂದ ಆರಾಧಿಸು' ಎಂದು.

ಇತೀರಿತಾಪ್ಯಸ್ಯ ಹಿ ಮಾಯಯಾ ಸಾ
ಭೀತಾ ಭುಜಿಷ್ಯಾಂ ಕುಮತಿರ್ನ್ಯಯೋಜಯತ್ ।
ಸಾ ತಂ ಪರಾನಂದತನುಂ ಗುಣಾರ್ಣವಂ
ಸಂಪ್ರಾಪ್ಯ ಭಕ್ತ್ಯಾಪರಯೈವ ರೇಮೇ ॥ ೧೩೭ ॥

ಸತ್ಯವತಿ ಹೀಗೆ ಹೇಳಿದರೂ ವೇದವ್ಯಾಸರ ಇಚ್ಛಾಬಲದಿಂದ ಅಂಬಿಕೆ ಭೀತಳಾಗಿ ದುರ್ಬುದ್ಧಿಯಿಂದ ದಾಸಿಯನ್ನು ಕಳಿಸಿಕೊಟ್ಟಳು. ದಾಸಿ ಗುಣಸಮುದ್ರನಾದ ಉತ್ಕೃಷ್ಟ ಆನಂದ ಶರೀರಿಯಾದ ವ್ಯಾಸರನ್ನು ಹೊಂದಿ ಪರಮಭಕ್ತಿಯಿಂದ ರಮಿಸಿದಳು.

ತಸ್ಯಾಂ ಸ ದೇವೋಽಜನಿ ಧರ್ಮರಾಜೋ
ಮಾಂಡವ್ಯಶಾಪಾದ್ಯ ಉವಾಹ ಶೂದ್ರತಾಮ್ ।
ವಸಿಷ್ಠಸಾಮ್ಯಂ ಸಮಭೀಪ್ಸಮಾನಂ
ಪ್ರಚ್ಯಾವಯನ್ನಿಚ್ಛಯಾ ಶಾಪಮಾಪ ॥ ೧೩೮ ॥

ದಾಸಿಯಲ್ಲಿ ಯಮದೇವ ಅವತರಿಸಿದ. ಆ ಮೂಲಕ ಅವನು ಮಾಂಡವ್ಯ ಶಾಪಪ್ರಯುಕ್ತವಾದ ಶೂದ್ರತ್ವವನ್ನು ಹೊಂದಿದ್ದ. ವಸಿಷ್ಠ ಸಾಮ್ಯವನ್ನು ಬಯಸಿ ತಪಸ್ಸು ಮಾಡುತ್ತಿದ್ದ ಮಾಂಡವ್ಯನನ್ನು ತಪಸ್ಸಿನಿಂದ ಚ್ಯುತಿಗೊಳಿಸುವುದಕ್ಕಾಗಿ ಸ್ವೇಚ್ಛೆಯಿಂದಲೆ ಅವನು ಆ ಶಾಪವನ್ನು ಪಡೆದಿದ್ದ.

ಮಾಂಡವ್ಯ ಒಬ್ಬಸಾಮಾನ್ಯ ಋಷಿ. ಯಮ ದೇವೋತ್ತಮ. ಋಷಿಯ ಶಾಪವನ್ನುಸ್ವೀಕರಿಸದಿರಲು ಸಮರ್ಥ. ಆದರೂ ಸ್ವೀಕರಿಸಿದ. ಸಾಮಾನ್ಯ ಮುನಿಯಾದ ಮಾಂಡವ್ಯ ಬ್ರಹ್ಮರ್ಷಿಗಳಾದ ವಸಿಷ್ಠರ ಸಾಮ್ಯವನ್ನು ಬಯಸಿ ತಪಸ್ಸು ಮಾಡುತ್ತಿದ್ದುದರಿಂದ ಯೋಗ್ಯತೆಗೆ ಮೀರಿದ ಆ ತಪಸ್ಸಿನ ಪುಣ್ಯವನ್ನು

ಕಳೆಯುವುದಕ್ಕಾಗಿ ಸ್ವೋತ್ತಮರಿಗೆ ಶಾಪ ನೀಡುವ ಮಹಾಪಾಪ ಕರ್ಮವನ್ನು ಅವನಿಂದ ಮಾಡಿಸಿ ಆ ಶಾಪವನ್ನು ಸ್ವೇಚ್ಛೆಯಿಂದಲೆ ಸ್ವೀಕರಿಸಿದ ಯಮ.

ಅಣೀಮಾಂಡವ್ಯರಿಗೆ ಶೂಲಶಿಕ್ಷೆ

ಅಯೋಗ್ಯಸಂಪ್ರಾಪ್ತಿಕೃತಪ್ರಯತ್ನ-
ದೋಷಾತ್ ಸಮಾರೋಪಿತಮೇವ ಶೂಲೇ।
ಚೋರೈರ್ಹೃತೇಽರ್ಥೇಽಪಿ ತು ಚೋರಬುದ್ಧ್ಯಾ
ಮಕ್ಷ್ವೀವಧಾದಿತ್ಯವದದ್ ಯಮಸ್ತಮ್ ॥ ೧೩೯ ॥

ಯಾರೋ ಕಳ್ಳರು ಹಣವನ್ನು ಕದ್ದಿದ್ದರು. ಆದರೆ ಮುನಿಯನ್ನು ಕಳ್ಳನೆಂದು ತಿಳಿದು ರಾಜಭಟರು ಅವನನ್ನು ಶೂಲಕ್ಕೆ ಏರಿಸಿದರು. ಇದು ವಸ್ತುತಃ ಮುನಿ ಅಯೋಗ್ಯ ಪದವೀ ಪ್ರಾಪ್ತಿಗಾಗಿ ತಪಸ್ಸು ಮಾಡಿದ ಅಪರಾಧದ ಫಲ ಆದರೂ ನೊಣಕ್ಕೆ ಮಾಡಿದ ಹಿಂಸೆಯ ಫಲ ಎಂದ ಯಮ.

ಅರಮನೆಯಲ್ಲಿ ಕಳ್ಳತನವಾದಾಗ ರಾಜಭಟರು ಕಳ್ಳರನ್ನು ಕಂಡು ಬೆನ್ನಟ್ಟಿದರು. ಕಳ್ಳರು ಮಾಂಡವ್ಯ ಮುನಿಯ ಆಶ್ರಮದಲ್ಲಿ ಹಣವನ್ನಿಟ್ಟು ಅವಿತುಕೊಂಡರು. ಮುನಿ ಅಸಂಪ್ರಜ್ಞಾತ ಸಮಾಧಿಯಲ್ಲಿ ಇದ್ದುದರಿಂದ ಏನೂ ತಿಳಿದಿರಲಿಲ್ಲ. ಭಟರು ಆಶ್ರಮದಲ್ಲಿ ಹಣವಿದ್ದುದನ್ನು ಕಂಡು ಮುನಿಯೂ ಕಳ್ಳರ ಗುಂಪಿಗೇ ಸೇರಿದವನೆಂದು ಬಗೆದು ಶೂಲಕ್ಕೆ ಏರಿಸಿದರು. ಮುನಿ ಶೂಲದಲ್ಲಿಯೆ ಕುಳಿತು ತಪಸ್ಸು ಮಾಡಿದ. ರಾಜ ಭಯದಿಂದ ಅವನನ್ನು ಕೆಳಗೆ ಇಳಿಸಿದ. ಬಳಿಕ ಮುನಿ ಯಮಲೋಕಕ್ಕೆ ಹೋಗಿ ಯಮಧರ್ಮರಾಜನನ್ನು ಕೇಳಿದ. 'ನನಗೆ ಈ ಶಿಕ್ಷೆ ಯಾವ ಪಾಪಕ್ಕೆ?' ವಸಿಷ್ಠರಿಗೆ ತಾನು ಸಮನಾಗಬೇಕೆಂದು ಅಯೋಗ್ಯ ಕಾಮನೆಯಿಂದ ತಪಸ್ಸುಮಾಡಿದ್ದಕ್ಕೆ ನಿನಗೆ ಈ ಶಿಕ್ಷೆಎನ್ನಬೇಕಾಗಿತ್ತು ಯಮ. ಆದರೆ ಆ ಕಾರಣವನ್ನು ಮುಚ್ಚಿಟ್ಟು ಹೇಳಿದ, 'ನೀನು ಮಗುವಾಗಿದ್ದಾಗ ಒಂದು ನೊಣವನ್ನು ಹಿಡಿದು ಮುಳ್ಳಿಂದ ಚುಚ್ಚಿದ್ದೆ. ಅದಕ್ಕೆ ಈ ಶಿಕ್ಷೆ' ಎಂದ. ಒಂದು ಸಣ್ಣ ಪಾಪಕ್ಕಾಗಿ ಶೂಲಾರೋಪಣದಂಥ ಮಹಾಶಿಕ್ಷೆಯೆ? ಆ ಪಾಪ ನನ್ನ ತಪಸ್ಸಿನಿಂದ ಎಂದೋ ಪರಿಹಾರವಾಗಿರುತ್ತದೆ. ಇಲ್ಲವೆಂದು ನೀನು ಸುಳ್ಳು ಹೇಳುತ್ತಿರುವಿ. ಬ್ರಾಹ್ಮಣನ ತಪಸ್ಸನ್ನು ಅವಹೇಳನ ಮಾಡುತ್ತಿರುವಿ. ಅದರಿಂದ ಶೂದ್ರನಾಗಿ ಹುಟ್ಟು' ಎಂದು ಶಪಿಸಿದ ಮುನಿ.

ನಾಸತ್ಯತಾ ತಸ್ಯ ಚ ತತ್ರ ಹೇತುತಃ ಶಾಪಂ ಗ್ರಹೀತುಂ ಸ ತಥೈವ ಚೋಕ್ತ್ವಾ।
ಅವಾಪ ಶೂದ್ರತ್ವಮಥಾಸ್ಯ ನಾಮ ಚಕ್ರೇ ಕೃಷ್ಣಃ ಸರ್ವವಿತ್ತ್ವಂ ತಥಾದಾತ್ ॥೧೪೦॥

ಯಮ ಹೇಳಿದ್ದೂ ಸುಳ್ಳಾಗಿರಲಿಲ್ಲ. ಏಕೆಂದರೆ ಆ ಪಾಪವೂ ಶೂಲಾರೋಪಣಕ್ಕೆ ಒಂದು ಸಣ್ಣಕಾರಣವೇ ಆಗಿತ್ತು. ಆದರೆ ಮುಖ್ಯ ಕಾರಣವನ್ನು ಹೇಳದೆ ಕ್ಷುದ್ರ ಕಾರಣವನ್ನು ಮಾತ್ರ ಹೇಳಿದ್ದು ಮುನಿಗೆ ಕೋಪ ಉಂಟು ಮಾಡಿ ಶಾಪ ಹೊಂದುವುದಕ್ಕಾಗಿ. ಅದರಿಂದ ಯಮ ಹಾಗೇ ಹೇಳಿ ಶೂದ್ರತ್ವವನ್ನು ಹೊಂದಿದ. ವ್ಯಾಸರು ಅವನಿಗೆ ಸರ್ವಜ್ಞಾನವನ್ನು ಅನುಗ್ರಹಿಸಿ ಹಾಗೇ ನಾಮಕರಣವನ್ನೂ ಮಾಡಿದರು.

ನೊಣವನ್ನು ಹಿಂಸಿಸಿದುದು ಕ್ಷುದ್ರ ಪಾಪವೆ ಆಗಿದ್ದರೂ ಅದಕ್ಕೆ ಮುನಿ ಪ್ರಾಯಶ್ಚಿತ್ತ ಮಾಡಿಕೊಂಡಿರಲಿಲ್ಲ.[1] ಅಯೋಗ್ಯ ಕಾಮನೆಯಿಂದ ಹೆಚ್ಚಿನ ಪುಣ್ಯ ಸಂಪಾದಿಸಿದ್ದು ಮಹಾ ಅಪರಾಧವಾಗಿತ್ತು. ಅದರಿಂದ ಮುನಿಗೇ ಅನರ್ಥವಾಗುತ್ತಿತ್ತು. ಆ ಪುಣ್ಯವನ್ನು ಕಳೆಯುವುದಕ್ಕಾಗಿ ಶೂಲಾರೋಪಣ ಶಿಕ್ಷೆಯನ್ನು ಯಮ ಕೊಡಿಸಿದ್ದ. ಇದರಿಂದ ಶೂದ್ರನಾಗಿ ಜನಿಸಿದ. ವ್ಯಾಸರು ಅವನಿಗೆ ಸರ್ವಜ್ಞತ್ವವನ್ನು ಅನುಗ್ರಹಿಸಿ 'ವಿದುರ' 'ಜ್ಞಾನರತ' ಎಂದು ನಾಮಕರಣ ಮಾಡಿದರು.

ವಿದ್ಯಾರತೇರ್ವಿದುರೋ ನಾಮ ಚಾಯಂ ಭವಿಷ್ಯತಿ ಜ್ಞಾನಬಲೋಪಪನ್ನಃ।
ಮಹಾಧನುರ್ಬಾಹುಬಲಾಧಿಕಶ್ಚ ಸುನೀತಿಮಾನಿತ್ಯವದತ್ ಸ ಕೃಷ್ಣಃ ॥೧೪೧॥

'ತತ್ವಜ್ಞಾನದಲ್ಲಿ ಆಸಕ್ತನಾದ್ದರಿಂದ' 'ವಿದುರ'ನೆನಿಸುವ ಈತ ಮುಂದೆ ಜ್ಞಾನಬಲ ಯುಕ್ತನೂ ಮಹಾಧನುರ್ಧರನೂ ಬಾಹುಬಲದಿಂದ ಶ್ರೇಷ್ಠನೂ ಒಳ್ಳೆಯ ನೀತಿಜ್ಞನೂ ಆಗುವನು' ಎಂದರು ವ್ಯಾಸರು.

ಜ್ಞಾತ್ವಾಸ್ಯ ಶೂದ್ರತ್ವಮಥಾಸ್ಯ ಮಾತಾ ಪುನಶ್ಚ ಕೃಷ್ಣಂ ಪ್ರಣತಾ ಯಯಾಚೇ।
ಅಂಬಾಲಿಕಾಯಾಂ ಜನಯಾನ್ಯಮಿತ್ಯಥೋ ನೈಚ್ಛತ್ಸ ಕೃಷ್ಣೋಽಭವದಪ್ಯದೃಶ್ಯಃ॥೧೪೨॥

ವಿದುರನನ್ನು ಶೂದ್ರನೆಂದು ತಿಳಿದು ಸತ್ಯವತಿ ಪುನಃ ವ್ಯಾಸರನ್ನು ನಮಿಸಿ ಅಂಬಾಲಿಕೆಯಲ್ಲಿ ಇನ್ನೊಬ್ಬ ಮಗನನ್ನು ಹುಟ್ಟಿಸೆಂದು ಬೇಡಿದಳು. ಆದರೆ ವ್ಯಾಸರು ಒಪ್ಪಲಿಲ್ಲ. ಅದೃಶ್ಯರೂ ಆದರು.

ಯೋಗ್ಯಾನಿ ಕರ್ಮಾಣಿ ತತಸ್ತು ತೇಷಾಂ ಚಕಾರ ಭೀಷ್ಮೋ ಮುನಿಭಿರ್ಯಥಾವತ್।
ವಿದ್ಯಾಃ ಸಮಸ್ತಾ ಅದದಾಚ್ಚ ಕೃಷ್ಣಃ ತೇಷಾಂ ಪಾಂಡೋರಸ್ತ್ರಶಸ್ತ್ರಾಣಿ ಭೀಷ್ಮಃ ॥೧೪೩॥

---

1. ಅಕೃತ ಪ್ರಾಯಶ್ಚಿತ್ತಸ್ಯ ತಸ್ಯ ಮಕ್ಷ್ವೀವಧೋಽಪಿ ತತ್ರಕಾರಣಮಭೂದಿತಿ ಭಾವಃ। -ವಾದಿರಾಜೀಯ
2. ವಿದ ಜ್ಞಾನೇ ಇತಿ ಧಾತೋಃ ವಿದಿ-ಜ್ಞಾನೇ, ಉ-ತಾಚ್ಛೀಲ್ಯೇನ ರತತ್ವಾದ್ ವಿದುರಃ। ರಮು ಕ್ರೀಡಾಯಾಮಿತಿ ಧಾತೋಃ ಕರ್ತ್ರರ್ಥೇ ಡಪ್ರತ್ಯಯೇ ಕೃತೇ ಸತಿ ರಃ ರತ ಇತ್ಯರ್ಥಃ ಸೇತ್ಸ್ಯತೀತಿ ವ್ಯಾಸಸ್ಯ ಹೃದಯಂ। -ವಾದಿರಾಜೀಯ

ಬಳಿಕ ಭೀಷ್ಮ ಆ ಮಕ್ಕಳಿಗೆ ಯೋಗ್ಯವಾದ ಜಾತಕರ್ಮಾದಿಗಳನ್ನು ಮುನಿಗಳ ಮೂಲಕ ವಿದ್ಯುಕ್ತವಾಗಿ ನೆರವೇರಿಸಿದ. ವ್ಯಾಸರು ಅವರಿಗೆ ಎಲ್ಲ ವಿದ್ಯೆಗಳನ್ನು ಉಪದೇಶಿಸಿದರು. ಭೀಷ್ಮ ಪಾಂಡುವಿಗೆ ಅಸ್ತ್ರಶಸ್ತ್ರಗಳನ್ನು ಉಪದೇಶಿಸಿದ.

ಮಹಾಭಾರತದಲ್ಲಿ ಮಕ್ಕಳಿಗೆ ವಿದ್ಯೋಪದೇಶವಾಯಿತು ಎಂದಿದೆ. ಯಾರಿಂದ ಎಂದು ಹೇಳಿಲ್ಲ. ವಸ್ತುತಃ ವ್ಯಾಸರಿಂದ ಉಪದೇಶವಾಯಿತು.

ತೇ ಸರ್ವವಿದ್ಯಾ ಪ್ರವರಾ ಬಭೂವು
ರ್ವಿಶೇಷತೋ ವಿದುರಃ ಸರ್ವವೇತ್ತಾ।
ಪಾಂಡುಃ ಸಮಸ್ತಾಸ್ತ್ರವಿದೇಕವೀರೋ
ಜಿಗಾಯ ಪೃಥ್ವೀಮಖಿಲಾಂ ಧನುರ್ಧರಃ ॥೧೪೪॥

ಅವರು ಎಲ್ಲ ವಿದ್ಯೆಗಳಲ್ಲಿಯೂ ಪ್ರವೀಣರಾದರು. ವಿದುರ ವಿಶೇಷವಾಗಿ ಸರ್ವಜ್ಞನೆನಿಸಿದ. ಪಾಂಡು ಸರ್ವಾಸ್ತ್ರವೇತ್ತ ಧನುರ್ಧಾರಿ, ಅಪ್ರತಿಮ ವೀರನೆನಿಸಿ ಸಮಸ್ತ ಭೂಮಂಡಲವನ್ನು ಗೆದ್ದ.

ವೈದಿಕಾಧ್ಯಯನ ನೀತಿ ಶಾಸ್ತ್ರಗಳಲ್ಲಿ ಧೃತರಾಷ್ಟ್ರ ಪಾರಂಗತನಾಗಿ ಪಟ್ಟಾಭಿಷಿಕ್ತನಾದ. ಶಸ್ತ್ರಾಸ್ತ್ರಗಳಲ್ಲಿ ನೀತಿ ಶಾಸ್ತ್ರಗಳಲ್ಲಿ ಪಾಂಡು ಪ್ರವೀಣನೆನಿಸಿ ಸೇನಾಧಿಪತಿಯಾದ. ಸರ್ವಧರ್ಮಜ್ಞನಾಗಿ ಸರ್ವಶಾಸ್ತ್ರತತ್ವಜ್ಞನಾಗಿ ಮೂಲೋಕದಲ್ಲಿ ಅಪ್ರತಿಮನೆನಿಸಿದ ವಿದುರ ಮಂತ್ರಿಯಾದ. ಆದರೆ ಮುಂದೆ ಧೃತರಾಷ್ಟ್ರ ಪಾಂಡುವಿಗೇ ಸಿಂಹಾಸನವನ್ನಿತ್ತ.

ಸಂಜಯನ ಜನನ

ಗವಲ್ಗಣಾದಾಸ ತಥೈವ ಸೂತಾತ್
ಸಮಸ್ತಗಂಧರ್ವಪತಿಃ ಸ ತುಂಬುರುಃ।
ಯ ಉದ್ವಹೋ ನಾಮ ಮರುತ್ ತದಂಶ-
ಯುಕ್ತೋ ವಶೀ ಸಂಜಯನಾಮಧೇಯಃ ॥೧೪೫॥

ಎಲ್ಲ ಗಂಧರ್ವರಿಗೆ ಒಡೆಯನಾದ ತುಂಬುರು ಉದ್ವಹನೆಂಬ ಮರುತನ ಅಂಶಯುಕ್ತನಾಗಿ ಗವಲ್ಗಣನೆಂಬ ಸೂತನಿಂದ ಸಂಜಯನಾಮಕನಾಗಿ ಹುಟ್ಟಿದ, ಜಿತೇಂದ್ರಿಯನೆನಿಸಿದ.

ವರದರಾಜೀಯದಲ್ಲಿಯೂ ಹೃಷಿಕೇಶತೀರ್ಥರ ಪಾಠದಲ್ಲಿಯೂ ಗವದ್ಗಣ ಎಂದಿದೆ. ಅದರಿಂದ ಗವದ್ಗಣ ಅಥವಾ ಗವಲ್ಗಣ ವಿಚಿತ್ರವೀರ್ಯನ ಸಾರಥಿ. ಮಹಾಜ್ಞಾನಿಯಾಗಿದ್ದ. ಅವನ ಮಗ ಸಂಜಯನೂ ಜ್ಞಾನಿ. ಧೃತರಾಷ್ಟ್ರನ

ಮಂತ್ರಿ. ಮುಂದೆ ಧರ್ಮರಾಜನಿಗೂ ಅರ್ಥಮಂತ್ರಿಯಾಗಿದ್ದ. ವ್ಯಾಸರು ನೀಡಿದ ದಿವ್ಯದೃಷ್ಟಿಯಿಂದ ಇಡೀ ಮಹಾಭಾರತ ಯುದ್ಧವನ್ನು ಪ್ರತ್ಯಕ್ಷ ಕಂಡು ಧೃತರಾಷ್ಟ್ರನಿಗೆ ಉಪದೇಶಿಸಿದ ಈತ.

ವಿಚಿತ್ರವೀರ್ಯಸ್ಯ ಸ ಸೂತಪುತ್ರಃ ಸಖಾ ಚ ತೇಷಾಮಭವತ್ ಪ್ರಿಯಶ್ಚ।
ಸಮಸ್ತವಿನ್ಮತಿಮಾನ್ ವ್ಯಾಸಶಿಷ್ಯೋ ವಿಶೇಷತೋ ಧೃತರಾಷ್ಟ್ರಾನುವರ್ತೀ ॥೧೪೬॥

ವಿಚಿತ್ರವೀರ್ಯನ ಸಾರಥಿಯಾಗಿದ್ದ ಗವಲ್ಗಣನ ಪುತ್ರ ಸಂಜಯ ಬುದ್ಧಿವಂತ, ಧೃತರಾಷ್ಟ್ರ ಪಾಂಡು ವಿದುರರಿಗೆ ಮೂವರಿಗೂ ಪ್ರಿಯಮಿತ್ರ, ವ್ಯಾಸರ ಶಿಷ್ಯನಾಗಿ ಸರ್ವಜ್ಞನೆನಿಸಿದವ. ವಿಶೇಷವಾಗಿ ಧೃತರಾಷ್ಟ್ರನಿಗೆ ಅನುವರ್ತಿ.

ಶಕುನಿಯ ನಿಜ ಸ್ವರೂಪ, ಗಾಂಧಾರಿಯ ವಿವಾಹ

ಗಾಂಧಾರರಾಜಸ್ಯ ಸುತಾಮುವಾಹ
ಗಾಂಧಾರಿನಾಮ್ನೀಂ ಸುಬಲಸ್ಯ ರಾಜಾ।
ಜ್ಯೇಷ್ಠೋ ಜ್ಯೇಷ್ಠಾಂ ಶಕುನೇರ್ದ್ವಾಪರಸ್ಯ
ನಾಸ್ತಿಕ್ಯರೂಪಸ್ಯ ಕುಕರ್ಮಹೇತೋಃ ॥ ೧೪೭ ॥

ತತ್ವ ಸಂಶಯಾಭಿಮಾನಿ, ನಾಸ್ತಿಕ್ಯ ಪ್ರಸಾರಕ ಮತ್ತು ದುಷ್ಕೃತ್ಯಗಳಿಗೆ ಹೇತು ಆಗಿದ್ದು ಮೂಲರೂಪದಲ್ಲಿ ದ್ವಾಪರನೆನಿಸಿದವ ಶಕುನಿ. ಅವನ ಹಿರಿಯ ಸೋದರಿ ಗಾಂಧಾರಿ ಎಂಬ ಹೆಸರಿನವಳು. ಗಾಂಧಾರರಾಜ ಸುಬಲನ ಪುತ್ರಿ. ಅವಳನ್ನು ಜ್ಯೇಷ್ಠನಾದ ರಾಜಾ ಧೃತರಾಷ್ಟ್ರ ಮದುವೆಯಾದ.

'ದ್ವಾ-ಪರ' ಎಂದರೆ ಎರಡು ವಿರುದ್ಧ ವಿಚಾರ ಸರಣಿಗಳನ್ನು ಸಮನಾಗಿ ಕಾಣುತ್ತ ಸಂಶಯಪಡುವ ಪ್ರವೃತ್ತಿ. ಕೃತಯುಗ ತ್ರೇತಾಯುಗಗಳಲ್ಲಿ ತತ್ವ ಸಂಶಯವಿರಲಿಲ್ಲ. ದ್ವಾಪರಯುಗದಲ್ಲಿ ಸಂಶಯ ಪ್ರಾರಂಭ. ಅದರಿಂದ ಆ ಯುಗಕ್ಕೆ ಆ ಹೆಸರು. ಆ ಯುಗದ ಅಭಿಮಾನಿಯಾದ ಅಸುರ ತತ್ವನಿಶ್ಚಯ ವಿರೋಧಿಯಾದ ಸಂಶಯಕ್ಕೂ ಅಭಿಮಾನಿಯಾದ್ದರಿಂದ ದ್ವಾಪರ ನೆನಿಸಿದ್ದಾನೆ. ಅವನೆ ಶಕುನಿ. ಗಾಂಧಾರರಾಜ ಸುಬಲನ ಮಗ.

ಭೀಷ್ಮ ಸುಬಲಪುತ್ರಿ ಗಾಂಧಾರಿಯ ಬಗ್ಗೆ ಅವಳು ಶಿವನಿಂದ ನೂರುಮಂದಿ ಮಕ್ಕಳ ವರ ಬೇಡಿ ಪಡೆದಿದ್ದ ವೃತ್ತಾಂತವನ್ನು ಕೇಳಿ ತಿಳಿದಿದ್ದ. ಅದರಿಂದ ಅವಳನ್ನು ಧೃತರಾಷ್ಟ್ರನಿಗೆ ಪಟ್ಟದ ರಾಣಿಯನ್ನಾಗಿ ಮಾಡಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿದ. ಸುಬಲ ಅಂಧ ಧೃತರಾಷ್ಟ್ರನ ಕುಲವನ್ನೂ ಖ್ಯಾತಿಯನ್ನೂ ನೋಡಿ ಮಗಳನ್ನು ಕೊಡಲು ಒಪ್ಪಿದ. ಆಗಲೆ ಗಾಂಧಾರಿ ಕಣ್ಣಿಗೆ ಬಟ್ಟೆ

ಕಟ್ಟಿಕೊಂಡಳು. ಶಕುನಿ ಅವಳನ್ನು ಧೃತರಾಷ್ಟ್ರನಿಗೆ ಮದುವೆ ಮಾಡಿಸಿದ. ಜೊತೆಗೆ ಅವಳ ಹತ್ತು ಮಂದಿ ಸೋದರಿಯರನ್ನೂ ಮದುವೆ ಮಾಡಿಕೊಟ್ಟ. ಸತ್ಯವ್ರತೆ, ಸತ್ಯಸೇನೆ, ಸುದೇಷ್ಣೆ ಸಂಹಿತೆ, ತೇಜಃಶ್ರವೆ, ಸುಶ್ರವೆ, ನಿಕೃತಿ, ಶುಭೆ, ಶಂಭ್ವಠೆ, ದಶಾರ್ಣೆ-ಇವರೆ ಆ ಹತ್ತು ಸೋದರಿಯರು. ಹೀಗೆ ಹನ್ನೊಂದು ಮಂದಿ ಸೋದರಿಯರು ಹಸ್ತಿನಾವತಿಗೆ ಬಂದ ಮೇಲೆ ಶಕುನಿಯೂ ಬಂದುದು ಆಶ್ಚರ್ಯವೇನಲ್ಲ.

ಕುಂತಿಯ ಕಥೆ

ಶೂರಸ್ಯ ಪುತ್ರೀ ಗುಣಶೀಲರೂಪ-
ಯುಕ್ತಾದತ್ತಾ ಸಖ್ಯುರೇವ ಸ್ವಪಿತ್ರಾ।
ನಾಮ್ನಾ ಪೃಥಾ ಕುಂತಿಭೋಜಸ್ಯ ತೇನ
ಕುಂತೀ ಭಾರ್ಯಾ ಪೂರ್ವದೇಹೇऽಪಿ ಪಾಂಡೋಃ ॥ ೧೪೮ ॥

ಶೂರರಾಜನ ಮಗಳು ಪೃಥೆ, ಗುಣಶೀಲ ರೂಪಯುಕ್ತಳು. ಅವಳನ್ನು ತಂದೆಯಾದ ಶೂರ ತನ್ನ ಮಿತ್ರನಾದ ಕುಂತಿಭೋಜನಿಗೆ ದತ್ತುಕೊಟ್ಟ. ಅದರಿಂದ ಕುಂತಿ ಎನಿಸಿದ ಪೃಥೆ ಪೂರ್ವಜನ್ಮದಲ್ಲಿಯೂ ಪಾಂಡುವಿನ ಪತ್ನಿಯಾಗಿದ್ದಳು.

ಪಿತುಃ ಸ್ವಸ್ತ್ರೀಯ ಪುತ್ರಾಯ ಸೋऽನಪತ್ಯಾಯ ವೀರ್ಯವಾನ್।
ಅಗ್ರಮಗ್ರೇ ಪ್ರತಿಜ್ಞಾಯ ಸ್ವಸ್ಯಾಪತ್ಯಸ್ಯ ವೈ ತದಾ ॥

ಎಂದು ಮಹಾಭಾರತ ಹೇಳುವಂತೆ ವಸುದೇವನ ತಂದೆಯಾದ ಶೂರರಾಜನಿಗೆ ಸೋದರತ್ತೆಯ ಮಗ ಕುಂತಿಭೋಜ ರಾಜ ವೃದ್ಧನಾದ ಅವನಿಗೆ ಮಕ್ಕಳಿರಲಿಲ್ಲ. ನನಗೆ ಮುಂದೆ ಹುಟ್ಟುವ ಮಗುವನ್ನು ನಿನಗೆ ಕೊಡುವೆನೆಂದು ಶೂರ ಕುಂತಿಭೋಜನಿಗೆ ಮಾತು ಕೊಟ್ಟಿದ್ದ. ಅದರಿಂದ ಪೃಥೆಯನ್ನು ಕೊಟ್ಟ ಪಾಂಡುವಿನ ಮೂಲರೂಪವಾದ ಪರಾವಹ ಎಂಬ ಮರುತನಿಗೆ ಇವಳು ಕುಂತೀ ಎಂಬ ಹೆಸರಿನಿಂದಲೆ ಪತ್ನಿಯಾಗಿದ್ದಳು ಎನ್ನುತ್ತಾರೆ ವಾದಿರಾಜರು. ಆದರೆ,

ಸಿದ್ಧಿರ್ಧೃತಿಶ್ಚ ಯೇ ದೇವ್ಯೌ ಪಂಚಾನಾಂ ಮಾತರೌ ಚ ತೇ।
ಕುಂತೀ ಮಾದ್ರೀ ಚ ಜಜ್ಞಾತೇ ಮತಿಸ್ತು ಸುಬಲಾತ್ಮಜಾ ॥

'ಸಿದ್ಧಿ ಮತ್ತು ಧೃತಿ ಇವರು ಕುಂತಿ ಮಾದ್ರಿಯರಾಗಿ ಜನಿಸಿ ಪಂಚಪಾಂಡವರಿಗೆ ತಾಯಂದಿರಾದರು. ಮತಿ ಗಾಂಧಾರಿಯಾದಳು' ಎಂದು ಮಹಾಭಾರತ ಹೇಳಿರುವುದರಿಂದ ಮೂಲರೂಪದಲ್ಲಿ ಕುಂತಿಗೆ ಸಿದ್ಧಿ ಎಂದು ಹೆಸರು

ಎನ್ನುತ್ತಾರೆ ಜನಾರ್ದನಭಟ್ಟರು. ಪ್ರಾಯಃ ವಾದಿರಾಜರು ಮಹಾಭಾರತ ಪಾಠದಲ್ಲಿ ಈ ಶ್ಲೋಕವನ್ನು ಸ್ವೀಕರಿಸಿಲ್ಲ. ನಾರಾಯಣ ಪಂಡಿತಾಚಾರ್ಯರು ಕುಂತಿ ಮಾದ್ರಿಯರು ಪಾಂಡುವಿಗೆ ಮೂಲರೂಪದಲ್ಲಿಯೂ ಭಾರ್ಯೆಯರಾಗಿದ್ದರೆಂದು ಹೇಳಿದ್ದಾರೆ. ಅವರ ಹೆಸರನ್ನು ಹೇಳಿಲ್ಲ.

ಕುಂತಿಗೆ ಮಂತ್ರೋಪದೇಶ

ಕೂರ್ಮಶ್ಚನಾಮ್ನಾ ಮರುದೇವ ಕುಂತಿ-
ಭೋಜೋಽಥೈನಾಂ ವರ್ಧಯಾಮಾಸ ಸಮ್ಯಕ್।
ತತ್ರಾಗಮಚ್ಛಂಕರಾಂಶೋಽತಿಕೋಪೋ
ದುರ್ವಾಸಾಸ್ತಂ ಪ್ರಾಹ ಮಾಂ ವಾಸಯೇತಿ ॥ ೧೪೯ ॥

ಕುಂತಿಭೋಜ ಮೂಲರೂಪದಲ್ಲಿ ಕೂರ್ಮನೆಂಬ ಮರುತ. ಈ ಕುಂತಿಭೋಜ ಕುಂತಿಯನ್ನು ಚೆನ್ನಾಗಿ ಬೆಳೆಸಿದ. ಅಲ್ಲಿಗೆ ಅತಿ ಕೋಪಿಯಾದ ಶಂಕರಾಂಶನಾದ ದುರ್ವಾಸ ಮುನಿ ಬಂದ. ನನಗೆ ವಾಸಕ್ಕೆ ಏರ್ಪಾಡು ಮಾಡು ಎಂದ.

ಈಗ ಚಾತುರ್ಮಾಸ್ಯ ಕಾಲ, ನಾಲ್ಕು ತಿಂಗಳ ತನಕ ರಾಜಧಾನಿಯಲ್ಲಿ ವಾಸಮಾಡಲು ನನಗೆ ಅವಕಾಶ ಮಾಡಿಕೊಡೆಂದು ಮುನಿ ಕೇಳಿದ.[1]

ತಮಾಹ ರಾಜಾ ಯದಿ ಕನ್ಯಕಾಯಾಃ
ಕ್ಷಮಿಷ್ಯಸೇ ಶಕ್ತಿತಃ ಕರ್ಮಕರ್ತ್ರ್ಯಾಃ।
ಸುಖಂ ವಸೇತ್ಯೋಮಿತಿ ತೇನ ಚೋಕ್ತೇ
ಶುಶ್ರೂಷಣಾಯಾದಿಶದಾಶು ಕುಂತೀಮ್ ॥ ೧೫೦ ॥

ರಾಜ ಮುನಿಗೆ ಹೇಳಿದ, 'ನನ್ನ ಮಗಳು ಶಕ್ತ್ಯನುಸಾರ ಸೇವೆ ಮಾಡುತ್ತಾಳೆ. ನ್ಯೂನಾತಿರೇಕಗಳಾದಲ್ಲಿ ನೀನು ಸಹಿಸುವುದಾದರೆ ವಾಸಮಾಡು'. 'ಆಗಲಿ' ಎಂದ ಮುನಿ. ಬಳಿಕ ರಾಜ ಮುನಿಯ ಸೇವೆಗೆ ಕುಂತಿಯನ್ನು ನೇಮಿಸಿದ.

ಚಕಾರ ಕರ್ಮ ಸಾ ಪೃಥಾ ಮುನೇಃ ಸುಕೋಪನಸ್ಯ ಹಿ।
ಯಥಾ ನ ಶಕ್ಯತೇ ಪರೈಃ ಶರೀರವಾಙ್ಮನೋಽನುಗಾ ॥ ೧೫೧ ॥

ಪೃಥೆ ಶೀಘ್ರಕೋಪಿಯಾದ ಮುನಿಗೆ ಶರೀರ ಮಾತು ಮನಸ್ಸುಗಳಲ್ಲಿ ಅನುವರ್ತಿನಿಯಾಗಿ ಬೇರೆಯವರಿಂದ ಮಾಡಲು ಶಕ್ತವಾಗದಂಥ ರೀತಿಯಲ್ಲಿ ಸೇವೆ ಮಾಡಿದಳು.

---

1. ಮಾಂ ಚಾತುರ್ಮಾಸ್ಯಂ ವಾಸಯ ವಾಸಂ ಕಾರಯೇತಿ ಕುಂತಿಭೋಜಂ ಪ್ರಾಹ। –ಜನಾರ್ದನೀಯ

ಸ ವತ್ಸರತ್ರಯೋದಶಂ ತಯಾ ಯಥಾವದರ್ಚಿತಃ।
ಉಪಾದಿಶತ್ ಪರಂ ಮನುಂ ಸಮಸ್ತದೇವವಶ್ಯದಮ್ ॥ ೧೫೨ ॥

ಹದಿಮೂರುವರ್ಷ ತನಕ ಪೂರ್ತಿಯಾಗಿ[1] ಕುಂತಿಯಿಂದ ಚೆನ್ನಾಗಿ ಸೇವಿಸಲ್ಪಟ್ಟ ಮುನಿ ಅವಳಿಗೆ ಎಲ್ಲ ದೇವತೆಗಳನ್ನು ವಶೀಕರಿಸುವ ಶಕ್ತಿ ನೀಡಬಲ್ಲ ಉತ್ತಮ ಮಂತ್ರವನ್ನು ಉಪದೇಶಿಸಿದ.

ದುರ್ವಾಸಾ ವತ್ಸರಸ್ಯಾಂತೇ ದದೌ ಮಂತ್ರ ಮನುತ್ತಮಂ

-ಎಂದು ಮಹಾಭಾರತ ಹೇಳುವಂತೆ ಒಂದು ವರ್ಷವಾದಾಗ ಮುನಿ ಮಂತ್ರೋಪದೇಶ ಮಾಡುತ್ತಾನೆ. ನಿರ್ಣಯದಲ್ಲಿ ಹದಿಮೂರು ವರ್ಷ ಕಳೆದಾಗ ಎಂದಿದೆ. ದೂರ್ವಾಸರು ಒಂದು ಚಾತುರ್ಮಾಸ್ಯ ಕಳೆಯಲು ಬಂದಿದ್ದರು. ಕುಂತಿಯ ಸೇವೆಗೆ ಮೆಚ್ಚಿ ಹದಿಮೂರು ವರ್ಷಗಳಲ್ಲಿಯೂ ಚಾತುರ್ಮಾಸ್ಯವನ್ನು ಅಲ್ಲಿಯೆ ಕಳೆದರು. ಸುಖವಾಗಿ ಕಾಲ ಕಳೆದುದರಿಂದ ಹದಿಮೂರು ವರ್ಷಕಾಲ ಒಂದು ವರ್ಷದಂತೆ ಕಳೆಯಿತು ಎನ್ನುವುದು ಮಹಾಭಾರತದ ಅಭಿಪ್ರಾಯವಿರಬಹುದು. ಅಥವಾ ಕುಂತಿಯ ವಯಸ್ಸು ಆಗ ಹದಿಮೂರನೆ ವರ್ಷ. ಅದು ಪೂರ್ತಿ ಕಳೆದಾಗ ಆ ವರ್ಷದ ಚಾತುರ್ಮಾಸ್ಯದ ಕೊನೆಯಲ್ಲಿ ಮುನಿ ಮಂತ್ರೋಪದೇಶ ಮಾಡಿದರು ಎಂದೂ ಗ್ರಹಿಸಬಹುದು.

ದುರ್ವಾಸರು ಸನಕಾದಿ ಪರಂಪರೆಯ. ಪರಮಹಂಸ ಸಂನ್ಯಾಸಿಗಳು. ಮುಂದೆ ಹಂಸ ಡಿಭಿಕರ ವೃತ್ತಾಂತದಲ್ಲಿ ಅವರೂ ಅವರ ಶಿಷ್ಯರೂ ಪರಮ ಹಂಸರೆಂದು ಸ್ಪಷ್ಟವಿದೆ. ಅದರಿಂದಲೆ ಚಾತುರ್ಮಾಸ್ಯ ವ್ರತ ಕೈಗೊಂಡರೆಂದು ಜನಾರ್ದನಭಟ್ಟರು ಹೇಳುತ್ತಾರೆ. ಬ್ರಹ್ಮವೈವರ್ತ ಪುರಾಣದಲ್ಲಿ ದುರ್ವಾಸರು ಔರ್ವ ಎಂಬ ಮುನಿಯ ಮಗಳಾದ ಕಂದಳಿಯನ್ನೂ ವಸುದೇವನ ಮಗಳಾದ ಏಕಾನಂಗೆಯನ್ನೂ ಮದುವೆಯಾಗುತ್ತಾರೆ. ಈ ಕಥೆ ಮೋಹ ಉಂಟುಮಾಡುವ ಉದ್ದೇಶದ್ದೆಂದು ಬಿಡಬೇಕಾಗುತ್ತದೆ.

'ಉತ್ತಮ ಮಂತ್ರವನ್ನು' ಎಂಬಲ್ಲಿ ಏಕವಚನದಿಂದ ಒಂದೇ ಮಂತ್ರ, ಒಂದು ಬಾರಿಗೆ ಎಷ್ಟು ದೇವತೆಗಳನ್ನು ಕರೆಯುತ್ತಾಳೋ- ಅಷ್ಟೂ ದೇವತೆಗಳು ಆಗ ಬರುತ್ತಾರೆ ಎಂದು ಸೂಚಿತವಾಗುತ್ತಿದೆ.[1]

---

1. ಕಾಲಾಧ್ವನೋರತ್ಯಂತಸಂಯೋಗ ಇತಿ ವಚನಾತ್ ವತ್ಸರತ್ರಯೋದಶಮಿತಿ ದ್ವಿತೀಯಾ। ತ್ರಯೋದಶವರ್ಷ ಪರ್ಯಂತಮರ್ಚಿತ ಇತಿ ತಾತ್ಪರ್ಯಂ। -ವಾದಿರಾಜೀಯ
2. ಉಪಾದಿಶತ್ ಪರಂ ಮನುಮಿತ್ಯೇಕವಚನೇನ ಏಕ ಏವ ಮನುಃ। ತೇನ ಯಸ್ಯಯಸ್ಯ ದೇವಸ್ಯಾಹ್ವಾನಂ ಕರೋತಿ ಸ ಸರ್ವೋಪಿ ಮಂತ್ರಶಕ್ತ್ಯಾ ಆಯಾತೀತಿ ಸೂಚಿತಂ -ವಾದಿರಾಜೀಯ

ಕರ್ಣನ ಉತ್ಪತ್ತಿ

ಋತೌ ತು ಸಾ ಸಮಾಪ್ಲುತಾ ಪರೀಕ್ಷಣಾಯ ತನ್ಮನೋಃ।
ಸಮಾಹ್ವಯದ್ ದಿವಾಕರಂ ಸ ಚಾಜಗಾಮ ತತ್‌ಕ್ಷಣಾತ್ ॥ ೧೫೩ ॥

ಋತು ಕಾಲದಲ್ಲಿ ಕುಂತಿ ಸುಸ್ನಾತಳಾಗಿ ಆ ಮಂತ್ರದ ಪರೀಕ್ಷೆಗಾಗಿ ಸೂರ್ಯನನ್ನು ಕರೆದಳು. ಅವನು ತಕ್ಷಣೆ ಬಂದ.

ತತೋ ನ ಸಾ ವಿಸರ್ಜಿತುಂ ಶಶಾಕ ತಂ ವಿನಾ ರತಿಮ್ ।
ಸುವಾಕ್‌ಪ್ರಯತ್ನತೋಽಪಿ ತಾಮಥಾಸಸಾದ ಭಾಸ್ಕರಃ ॥ ೧೫೪ ॥

ಒಳ್ಳೆಯ ಮಾತು ಪ್ರಯತ್ನಗಳಿಂದ ಕುಂತಿ ಆಗ ರತಿಕ್ರೀಡೆಯಿಲ್ಲದೆ ಸೂರ್ಯನನ್ನು ಹಿಂದೆ ಕಳಿಸಲು ಶಕ್ತಳಾಗಲಿಲ್ಲ. ಸೂರ್ಯ ಅವಳನ್ನು ಕೂಡಿದ.

'ಒಳ್ಳೆಯ ಮಾತು' ಎಂದರೆ ನೀನು ಬಹಳ ಒಳ್ಳೆಯವನೆಂದು ಸ್ತುತಿಸುವ ಮಾತು. 'ಸೂರ್ಯದೇವ, ನಾನು ಈ ಮಂತ್ರದ ಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿಯೆ ನಿನ್ನನ್ನು ಕರೆದೆನಷ್ಟೆ. ಮದುವೆಯಾಗದಿರುವ ಕನ್ಯೆ ನಾನು. ನನ್ನೊಡನೆ ರತಿಕ್ರೀಡೆ ಬೇಡ. ದಯವಿಟ್ಟು ಹಿಂತಿರುಗಿ ಹೋಗು' ಎಂದು ಮುಂತಾಗಿ ಮನ ಒಲಿಸುವ ಯತ್ನವೆ 'ಪ್ರಯತ್ನ' ಇವೆರಡೂ ಸೂರ್ಯನ ವಿಷಯದಲ್ಲಿ ಸಫಲವಾಗಲಿಲ್ಲ- ಇದು ಜನಾರ್ದನಭಟ್ಟೀಯ ವರದರಾಜೀಯಗಳಲ್ಲಿ.[1] ವಾದಿರಾಜೀಯದಲ್ಲಿ-ಸೂರ್ಯನು ಕುಂತಿಗೆ ಹೇಳುವ 'ಬಾ ಸುಂದರಿ, ನನ್ನೊಡನೆ ಕ್ರೀಡಿಸು' ಎನ್ನುವ ಮಾತು 'ಒಳ್ಳೆಯ ಮಾತು'. ಕೈಹಿಡಿಯುವುದು, ಕಾಲು ಹಿಡಿಯುವುದು ಮುಂತಾಗಿ ಕುಂತಿಯ ಮನಒಲಿಸಲು ಸೂರ್ಯ ಮಾಡುವ ಯತ್ನವೆ 'ಪ್ರಯತ್ನ' ಈ ಒಳ್ಳೆಯ ಮಾತು ಪ್ರಯತ್ನಗಳಿಂದ ಕುಂತಿ ಮನಸೋತು ವಶಳಾದಳು. ಸೂರ್ಯನನ್ನು ಹಾಗೇ ಹಿಂದೆ ಕಳಿಸಲು ಶಕ್ತಳಾಗಲಿಲ್ಲ.[2]

ಸುವಾಕ್ ಪ್ರಯತ್ನ ಶೋಷಿತಾಂ ಅಥಾಸಸಾದ ಭಾಸ್ಕರಃ।

ಎಂದು ಪಾಠಾಂತರವನ್ನೂ ಜನಾರ್ದನ ಭಟ್ಟೀಯದಲ್ಲಿ ತೋರಿಸಿದ್ದರಿಂದ ವಾದಿರಾಜೀಯದ ಅಭಿಪ್ರಾಯ ಅವರಿಗೂ ಸಮ್ಮತವಾಗಿದ್ದಂತೆ ತೋರುತ್ತದೆ.

---

1. ರತಿಂ ವಿನಾ ಗಚ್ಛೇತಿ ಸುವಾಗ್ಭಿಃ ಸ್ತುತಿರೂಪಾವಾಗ್ಭಿಃ ಯಃ ಪ್ರಯತ್ನಃ ಪ್ರಾರ್ಥನಾ ತಸ್ಮಾದಪಿ ಸೂರ್ಯಂ ವಿಸರ್ಜಿತುಂ ನ ಶಶಾಕ। ಸುವಾಕ್ ಪ್ರಯತ್ನ ತೋಷಿತಾಮಿತಿ ಪಾಠೇ ಸುವಾಗ್ಭಿಃತವ ಅಪಯಶೋ ನ ಭವಿಷ್ಯತೀತ್ಯಾದಿ ವಾಕ್ಪ್ರಯತ್ನೇನ ಸಂತೋಷಂ ಪ್ರಾಪಿತಾಮಿತ್ಯರ್ಥಃ। -ಜನಾರ್ದನೀಯ
2. ಮಯಿ ರಮಸ್ವೇತಿ ಸುವಾಕ್। ಕರಗ್ರಹಣಪಾದಗ್ರಹಣಾದಿಷು ಪ್ರಯತ್ನಃ। ತಾಭ್ಯಾಮಂಗೀಕಾರಿತಾ ರತಿಂ ವಿನಾ ತಂ ವಿಸರ್ಜಯಿತುಂ ನ ಶಾಶಾಕ। -ವಾದಿರಾಜೀಯ

ಸ ತತ್ರ ಜಜ್ಞಿವಾನ್ ಸ್ವಯಂ ದ್ವಿತೀಯರೂಪಕೋ ವಿಭುಃ।
ಸವರ್ಮದಿವ್ಯಕುಂಡಲೋ ಜ್ವಲನ್ನಿವ ಸ್ವತೇಜಸಾ ॥ ೧೫೫ ॥

ಕವಚ ದಿವ್ಯಕುಂಡಲಗಳಿಂದ ಯುಕ್ತನಾಗಿ ತನ್ನತೇಜಸ್ಸಿನಿಂದ ಜ್ವಲಿಸುವಂತೆ ಕಾಣುತ್ತ ಇನ್ನೊಂದು ರೂಪದಿಂದ ಸೂರ್ಯ ಸ್ವಯಂ ಕುಂತಿಯಲ್ಲಿ ಜನಿಸಿದ.

ಪುರಾ ಸ ವಾಲಿಮಾರಣಪ್ರಭೂತದೋಷಕಾರಣಾತ್।
ಸಹಸ್ರವರ್ಮನಾಮಿನಾಸುರೇಣ ವೇಷ್ಟಿತೋಽಜನಿ ॥ ೧೫೬ ॥

ಹಿಂದೆ ಸುಗ್ರೀವನಾಗಿ ವಾಲಿಯನ್ನು ಕೊಲ್ಲಿಸಿದ್ದರಿಂದ ಉಂಟಾದ ಪಾಪದಿಂದ ಈಗ ಸಹಸ್ರವರ್ಮನೆಂಬ ಹೆಸರಿನ ಅಸುರನಿಂದ ಆವಿಷ್ಟನಾಗಿ ಜನಿಸಿದ.

ನರಕಾಸುರನೂ ಒಂದು ಅಂಶದಿಂದ ಕರ್ಣನಲ್ಲಿ ಆವೇಶಹೊಂದಿದ್ದ.[1] ಹೀಗೆ ಇಬ್ಬರು ಅಸುರರ ಆವೇಶದಿಂದ ಕರ್ಣ ಪಾಂಡವರನ್ನೂ ದ್ರೌಪದಿಯನ್ನೂ ಬಹಳವಾಗಿ ದ್ವೇಷಿಸಿದ.

ಯಥಾ ಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವ ಹಿ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥ ೧೫೭ ॥

ಮನುಷ್ಯರ ಬುದ್ಧಿ ಪಿಶಾಚಾವೇಶದಿಂದ ಹೇಗೆ ಕೆಡುವುದೋ ಹಾಗೆಯೇ ಸೂರ್ಯ ಸ್ವರೂಪನಾದ ಕರ್ಣನ ಬುದ್ಧಿಯೂ ದೈತ್ಯನ ಆವೇಶದಿಂದ ಕೆಟ್ಟಿತು.

ತಥಾಪಿ ರಾಮಸೇವನಾದ್ಧರೇಶ್ಚ ಸನ್ನಿಧಾನಯುಕ್।
ಸುದರ್ಶನೀಯಕರ್ಣತಃ ಸ ಕರ್ಣನಾಮಕೋಽಭವತ್ ॥ ೧೫೮ ॥

ಆದರೂ ಶ್ರೀರಾಮನಿಗೆ ಸುಗ್ರೀವಾವತಾರದಲ್ಲಿ ಸೇವೆ ಮಾಡಿದ್ದರಿಂದ ಹರಿಯ ಸನ್ನಿಧಾನಕ್ಕೆ ಪಾತ್ರನಾದ. ಸುಂದರವಾದ ಕಿವಿ ಉಳ್ಳವನಾದ್ದರಿಂದ ಕರ್ಣನಾಮಕನಾದ.

ಸ ರತ್ನಪೂರ್ಣಮಂಜುಷಾಗತೋ ವಿಸರ್ಜಿತೋ ಜಲೇ।
ಜನಾಪವಾದಭೀತಿತಸ್ತಯಾ ಯಮಸ್ವಸುರ್ದ್ರುತಮ್ ॥ ೧೫೯ ॥

ಕುಂತಿ ಜನಾಪವಾದ ಭೀತಿಯಿಂದ ಕರ್ಣನನ್ನು ರತ್ನಗಳಿಂದ ತುಂಬಿದ ಪೆಟ್ಟಿಗೆಯಲ್ಲಿ ಇಟ್ಟು ಬೇಗನೆ ಯಮುನೆಯ ಜಲದಲ್ಲಿ ಬಿಟ್ಟಳು.

---

1. ಕರ್ಣೋಽಪ್ಯಾವಿಷ್ಟಚಿತ್ತಾತ್ಮಾ ನರಕಸ್ಯಾಂತರಾತ್ಮನಾ।
ಅರ್ಜುನಸ್ಯ ವಧೇ ಕ್ರೂರಾಂ ಕರೋತಿ ಸ ತದಾ ಮತಿಂ ॥ -(ಮ.ಭಾ.ವನ.252-35)

ಕರ್ಣ ಸೂತಪುತ್ರನೆನಿಸಿದ

ನದೀಪ್ರವಾಹತೋ ಗತಂ ದದರ್ಶ ಸೂತನಂದನಃ।
ತಮಗ್ರಹೀತ್ ಸರತ್ನಕಂ ಚಕಾರ ಪುತ್ರಕಂ ನಿಜಮ್ ॥ ೧೬೦ ॥

ನದೀಪ್ರವಾಹದಲ್ಲಿ ತೇಲಿ ಹೋದ ಕರ್ಣನನ್ನು ಒಬ್ಬ ಸೂತಪುತ್ರ ಕಂಡ ರತ್ನಗಳ ಸಮೇತವಾಗಿ ಅವನನ್ನು ಎತ್ತಿಕೊಂಡ. ತನ್ನ ಮಗನನ್ನಾಗಿ ಮಾಡಿಕೊಂಡ.

ಮದುವೆಯಾಗದ ಕನ್ಯೆ ತಾನು ಮಗುವಿಗೆ ಜನ್ಮವಿತ್ತುದು ಜನಾಪವಾದಕ್ಕೆ ಕಾರಣವಾದೀತೆಂದು ಹೆದರಿ ಕುಂತಿ ಕರ್ಣನನ್ನು ರತ್ನಗಳ ಜೊತೆಗೆ ರತ್ನ ಪೆಟ್ಟಿಗೆಯಲ್ಲಿಟ್ಟು 'ಕರ್ಣನ ಪೆಟ್ಟಿಗೆ' ಎಂದು ಅದರ ಮೇಲೆ ಬರೆದ ಅಶ್ವನದಿಯಲ್ಲಿ ತೇಲಿಬಿಟ್ಟಳು. ಆ ಪೆಟ್ಟಿಗೆ ಮುಂದೆ ಚರ್ಮಣ್ವತೀ ನದಿಯ ಮೂಲಕ ಯಮುನಾ ನದಿಯನ್ನು ಸೇರಿ ಅಲ್ಲಿಂದ ಗಂಗಾನದಿಯನ್ನು ಸೇರಿತು. ಗಂಗಾತೀರದ ಚಂಪಾನಗರಿಯಲ್ಲಿ ಸೂತಪುತ್ರ ಅಧಿರಥ ಪೆಟ್ಟಿಗೆಯನ್ನು ಕಂಡು ಎತ್ತಿಕೊಂಡ. ಕರ್ಣನನ್ನು ತನ್ನ ಮಗನನ್ನಾಗಿ ಮಾಡಿಕೊಂಡ. ಪೆಟ್ಟಿಗೆಯ ಮೇಲಿನ ಹೆಸರಿಂದ ಕರ್ಣನೆಂದೇ ಕರೆದ. ಮುಂದೆ ಕರ್ಣ ಹುಟ್ಟುವಾಗಲೇ ಬಂದಿದ್ದ ಕವಚ ಕುಂಡಲಗಳನ್ನು ಇಂದ್ರನಿಗೆ ಕತ್ತರಿಸಿ ಕೊಟ್ಟುದರಿಂದಲೂ 'ಕರ್ಣ' 'ಕತ್ತರಿಸಿ ಕೊಟ್ಟವನು' ಎಂದು ಕರ್ಣನೆಂಬ ನಾಮ ಸಾರ್ಥಕವಾಯಿತು. 'ವೈಕರ್ತನ' ಎಂದೂ ಇನ್ನೊಂದು ಹೆಸರು ಬಂದಿತು. ವಿಶೇಷವಾಗಿ ಕತ್ತರಿಸಿಕೊಟ್ಟವನೆಂದರ್ಥ.

ಸೂತೇನಾಧಿರಥೇನ ಲಾಲಿತತನುಸ್ತದ್ಭಾರ್ಯಯಾ ರಾಧಯಾ
ಸಂವೃದ್ಧೋ ನಿಖಿಲಾಃಶ್ರುತೀರಧಿಜಗೌ ಶಾಸ್ತ್ರಾಣಿ ಸರ್ವಾಣಿ ಚ।
ಬಾಲ್ಯಾದೇವ ಮಹಾಬಲೋ ನಿಜಗುಣೈಃ ಸಂಭಾಸಮಾನೋಽವಸನ್-
ನಾಮ್ನಾಸೌ ವಸುಷೇಣತಾಮಗಮದಪ್ಯಾಸೀದ್ಧ್ಯಮಾ ತದ್ ವಸು ॥ ೧೬೧ ॥

ಕರ್ಣನನ್ನು ಸೂತನಾದ ಅಧಿರಥ ಲಾಲಿಸಿದ. ಅವನ ಹೆಂಡತಿ ರಾಧೆ ಬೆಳೆಸಿದಳು. ಎಲ್ಲ ವೇದಗಳನ್ನೂ ಎಲ್ಲ ಶಾಸ್ತ್ರಗಳನ್ನೂ ಕರ್ಣ ಅಧ್ಯಯನ ಮಾಡಿದ. ಬಾಲ್ಯದಿಂದಲೆ ಮಹಾಬಲಿಷ್ಠನಾಗಿದ್ದು ತನ್ನ ಔದಾರ್ಯಾದಿಗಳಿಂದ ಪ್ರಕಾಶಿಸುತ್ತಾ ವಾಸಮಾಡಿದ. 'ವಸು' ಅಂದರೆ ಸಂಪತ್ತು ಅವನ ಸಮೀಪದಲ್ಲಿ ಜೊತೆಗೇ ಇದ್ದಿತು. ಅದರಿಂದ ಅವನು 'ವಸುಷೇಣ' ಎಂಬ ಹೆಸರನ್ನು ಪಡೆದ.

'ವಸು' ಸಂಪತ್ತಿನಿಂದ 'ಷೇಣ' ಸಂಬದ್ಧನಾದವ ಎಂಬ ಅರ್ಥದಲ್ಲಿ 'ವಸುಷೇಣ' ಎಂದು ಹೆಸರಾಯಿತೆಂದು ವಾದಿರಾಜೀಯ ಮತ್ತು

ಜನಾರ್ದನೀಯಗಳು. ವರದರಾಜೀಯದಲ್ಲಿ ವಸು ಸೇನೆಯಂತೆ ಬಳಿಯಲ್ಲಿದ್ದುದರಿಂದ ಆ ಹೆಸರೆಂದು ಹೇಳಿದೆ.

ಪಾಂಡು ವಿದುರರ ವಿವಾಹ

ಅಥ ಕುಂತೀ ದತ್ತಾ ಸಾ ಪಾಂಡೋಃಸೋಽಪ್ಯೇತಯಾ ಚಿರಂ ರೇಮೇ।
ಶೂರಾಚ್ಛೂದ್ರಾ ್ಯಂ ಜಾತಾಂ ವಿದುರೋಽವಹದಾರುಣೇಂ ಗುಣಾಢ್ಯಾಂ ಸಃ॥೧೬೨॥

ಬಳಿಕ ಕುಂತಿ ಪಾಂಡುವಿಗೆ ಕೊಡಲ್ಪಟ್ಟಳು. ಅವನು ಅವಳೊಡನೆ ಬಹುಕಾಲ ರಮಿಸಿದ. ಶೂರನಿಂದ ಶೂದ್ರಸ್ತ್ರೀಯಲ್ಲಿ ಜನಿಸಿದ ಗುಣಾಢ್ಯಳಾದ ಆರುಣಿಯನ್ನು ವಿದುರ ವಿವಾಹವಾದ.

ಸ್ವಯಂವರದಲ್ಲಿ ಕುಂತಿ ಪಾಂಡುವನ್ನು ವರಿಸಿದಳು. ಕುಂತಿಭೋಜ ಅವಳನ್ನು ಮದುವೆ ಮಾಡಿಕೊಟ್ಟ. ವಸುದೇವನ ತಂದೆಯಾದ ಶೂರರಾಜನಿಗೆ ಶೂದ್ರಸ್ತ್ರೀಯರಲ್ಲಿ ಹುಟ್ಟಿದ ಮಗಳು ಆರುಣಿ. ಅವಳನ್ನು ಭೀಷ್ಮ ತಂದು ವಿದುರನಿಗೆ ವಿವಾಹ ಮಾಡಿಸಿದ. ಆದರೆ ಮಹಾಭಾರತದಲ್ಲಿ

ಅಥ ಪಾರಶವೀಂ ಕನ್ಯಾಂ ದೇವಕಸ್ಯ ಮಹೀಪತೇಃ।
ರೂಪಯೌವನ ಸಂಪನ್ನಾಂ ಸ ಶುಶ್ರಾವಾಪಗಾಸುತಃ॥
ತತಸ್ತು ವರಯಿತ್ವಾ ತಾಮಾನೀಯ ಭರತರ್ಷಭಃ।
ವಿವಾಹಂ ಕಾರಯಾಮಾಸ ವಿದುರಸ್ಯ ಮಹಾಮತೇಃ॥

'ಶೂದ್ರಸ್ತ್ರೀಯಲ್ಲಿ ಹುಟ್ಟಿದ ದೇವಕನ ಕನ್ಯೆಯನ್ನು ಭೀಷ್ಮ ರೂಪಯೌವನ ಸಂಪನ್ನೆ ಎಂದು ಕೇಳಿ ಅವಳನ್ನು ವಿದುರನಿಗಾಗಿ ವರಿಸಿ ಅವನಿಗೆ ಮದುವೆ ಮಾಡಿಸಿದ' ಎಂದಿದೆ. ಪ್ರಾಯಃ ಸತ್ಯವತಿ ದಾಶರಾಜನ ಕನ್ಯೆ ಎನಿಸಿದಂತೆ ಆರುಣಿ ದೇವಕನ ಸಾಕುಮಗಳಾಗಿರಬಹುದು. ಹುಟ್ಟಿನಿಂದ ನಿರ್ಣಯ ಹೇಳುವಂತೆ ಶೂರರಾಜನ ಮಗಳು.

ಶಲ್ಯನ ಉತ್ಪತ್ತಿ

ಅಥ ಚರ್ತಾಯನನಾಮಾ ಮದ್ರೇಶಃ ಶಕ್ರತುಲ್ಯಪುತ್ರಾರ್ಥೀ।
ಕನ್ಯಾರತ್ನಂ ಚಾಪ್ತುಂ ಚಕ್ರೇ ಬಾಹ್ಮಂ ತಪೋ ವರಂ ಚಾಪ ॥ ೧೬೩ ॥

ಋತಾಯನ ಎಂಬ ಹೆಸರಿನ ಮದ್ರರಾಜ ಇಂದ್ರನಂಥ ಮಗನನ್ನು ಬಯಸಿ ಜೊತೆಗೆ ಕನ್ಯಾರತ್ನವನ್ನೂ ಪಡೆಯಲು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ. ವರವನ್ನು ಪಡೆದ.

ಪ್ರಹ್ಲಾದಾವರಜೋ ಯಃ ಸಹ್ಲಾದೋ ನಾಮತೋ ಹರೇರ್ಭಕ್ತಃ।
ಸೋಽಭೂದ್ ಬ್ರಹ್ಮವರಾಂತೇ ವಾಯೋರಾವೇಶಯುಕ್ ಸುತೋ ರಾಜ್ಞಃ ॥೧೬೪॥

ಪ್ರಹ್ಲಾದನ ತಮ್ಮನಾದ ಸಹ್ಲಾದನೆಂಬ ವಿಷ್ಣುಭಕ್ತ ಬ್ರಹ್ಮನಿಂದ ವರ ಪಡೆದು ಮುಖ್ಯಪ್ರಾಣನ ಆವೇಶಯುಕ್ತನಾಗಿ ಋತಾಯನ ರಾಜನ ಮಗನಾಗಿ ಹುಟ್ಟಿದ.

ಸ ಮಾರುತಾವೇಶವಶಾತ್ ಪೃಥಿವ್ಯಾಂ ಬಲಾಧಿಕೋಽಭೂದ್ ವರತಶ್ಚಧಾತುಃ।
ಶಲ್ಯಶ್ಚ ನಾಮ್ನಾಖಿಲಶತ್ರುಶಲ್ಯೋ ಬಭೂವ ಕನ್ಯಾಸ್ಯ ಚ ಮಾದ್ರಿನಾಮ್ನೀ ॥೧೬೫॥

ಅವನು ವಾಯ್ವಾವೇಶದಿಂದಲೂ ಬ್ರಹ್ಮನ ವರದಿಂದಲೂ ಭೂಮಿಯಲ್ಲಿ ಬಲಿಷ್ಠನಾದ. ಎಲ್ಲ ಶತ್ರುಗಳಿಗೂ ಶಲ್ಯದಂತೆ, ಅಂದರೆ ಈಟಿಯಂತೆ ಇದ್ದು ಶಲ್ಯ ಎಂದೆ ಹೆಸರು ಪಡೆದ. ಋತಾಯನನಿಗೆ ಮುಂದೆ ಮಾದ್ರಿ ಎಂಬ ಹೆಸರಿನ ಕನ್ಯೆಯೂ ಜನಿಸಿದಳು.

ಋತಾಯನನ ಮಗನಾದ್ದರಿಂದ ಶಲ್ಯನಿಗೆ ಆರ್ತಾಯನಿ ಎಂದೂ ಹೆಸರು.

ಸಾ ಪಾಂಡುಭಾರ್ಯೈವ ಚ ಪೂರ್ವಜನ್ಮನ್ಯಭೂತ್ ಪುನಶ್ಚಪ್ರತಿಪಾದಿತಾಸ್ಮೈ।
ಶಲ್ಯಶ್ಚ ರಾಜ್ಯಂ ಪಿತೃದತ್ತಮಂಜೋ ಜುಗೋಪ ಧರ್ಮೇಣ ಸಮಸ್ತಶಾಸ್ತ್ರವಿತ್॥೧೬೬॥

ಮಾದ್ರಿ ಪೂರ್ವಜನ್ಮದಲ್ಲಿ ಪಾಂಡುವಿನ ಇನ್ನೊಬ್ಬ ಹೆಂಡತಿಯೆ ಆಗಿದ್ದಳು. ಪುನಃ ಅವತಾರದಲ್ಲಿಯೂ ಅವಳನ್ನು ಶಲ್ಯ ಪಾಂಡುವಿಗೆ ಕೊಟ್ಟ. ಸಕಲಶಾಸ್ತ್ರವೇತ್ತನಾದ ಆತ ತಂದೆ ಕೊಟ್ಟ ರಾಜ್ಯವನ್ನು ಚೆನ್ನಾಗಿ ಧರ್ಮದಿಂದ ಪಾಲಿಸಿದ.

ಭೀಷ್ಮನ ಅಪೇಕ್ಷೆಯಂತೆ ಶಲ್ಯ ತನ್ನ ತಂಗಿಯಾದ ಮಾದ್ರಿಯನ್ನು ಪಾಂಡುವಿಗೆ ಕೊಟ್ಟ.

ಪಾಂಡುವಿನ ರಾಜ್ಯಭಾರ

ಅಥಾಂಗನಾರತ್ನಮವಾಪ್ಯತದ್ ದ್ವಯಂ
ಪಾಂಡುಸ್ತು ಭೋಗಾನ್ ಬುಭಜೇ ಯಥೇಷ್ಟತಃ।
ಅಪೀಪಲದ್ ಧರ್ಮಸಮಾಶ್ರಯೋ ಮಹೀಂ
ಜ್ಯೇಷ್ಠಾಪಚಾಯೀ ವಿದುರೋಕ್ತಮಾರ್ಗತಃ ॥ ೧೬೭ ॥

ಆ ಎರಡು ಸ್ತ್ರೀರತ್ನಗಳನ್ನು ಪಡೆದು ಪಾಂಡು ಯಥೇಷ್ಟವಾಗಿ ಭೋಗಗಳನ್ನು ಅನುಭವಿಸಿದ. ಧರ್ಮಾವಲಂಬಿಯಾದ ಆತ ವಿದುರ ಹೇಳುವ ಮಾರ್ಗದಿಂದ ಅಣ್ಣ ಧೃತರಾಷ್ಟ್ರನಿಗೆ ಸಂಪತ್ತನ್ನು ತಂದುಕೊಡುತ್ತ ರಾಜ್ಯವಾಳಿದ.

'ಜ್ಯೇಷ್ಠಾಪಚಾಯಿ' ಯಾಗಿದ್ದ. ಅಂದರೆ ಶತ್ರುರಾಜನಿಂದ ತಾನು ಗೆದ್ದ ಸಂಪತ್ತೆಲ್ಲವನ್ನೂ ಜ್ಯೇಷ್ಠನಾದ ಧೃತರಾಷ್ಟ್ರನಿಗೆ ತಂದುಕೊಡುತ್ತಿದ್ದನೆಂದು ವಾದಿರಾಜೀಯ. ಜ್ಯೇಷ್ಠನಾದ ಧೃತರಾಷ್ಟ್ರನಿಗಿಂತ ತಾನು ಕಡಿಮೆಯವನೆಂಬ ಭಾವನೆಯಿಂದ ರಾಜ್ಯವಾಳಿದ ಎಂದು ಜನಾರ್ದನೀಯ.

ಭೀಷ್ಮೋ ಹಿ ರಾಷ್ಟ್ರೇ ಧೃತರಾಷ್ಟ್ರಮೇವ ಸಂಸ್ಥಾಪ್ಯ ಪಾಂಡುಂ ಯುವರಾಜಮೇವ।
ಚಕ್ರೇ ತಥಾಪ್ಯಂಧ ಇತಿ ಸ್ಮ ರಾಜ್ಯಂ ಚಕಾರ ನಾಸಾವರೋಚ್ಚಪಾಂಡುಃ ॥ ೧೬೮ ॥

ಭೀಷ್ಮ ರಾಜ್ಯದಲ್ಲಿ ಧೃತರಾಷ್ಟ್ರನನ್ನು ಮಹಾರಾಜನನ್ನಾಗಿ ಮಾಡಿದ. ಪಾಂಡುವನ್ನು ಯುವರಾಜನನ್ನಾಗಿಯೂ ಮಾಡಿದ. ಆದರೆ ಧೃತರಾಷ್ಟ್ರ ತಾನು ಅಂಧನಾದ್ದರಿಂದ ರಾಜ್ಯಭಾರವನ್ನು ಕೈಗೊಳ್ಳಲಿಲ್ಲ. ಪಾಂಡುವೆ ಕೈಗೊಂಡ.

ಭೀಷ್ಮಾಂಬಿಕೇಯೋಕ್ತಿಪರಃ ಸದೈವ
ಪಾಂಡುಃ ಶಶಾಸಾವನಿಮೇಕವೀರಃ।
ಅಥಾಂಬಿಕೇಯೋ ಬಹುಭೀಶ್ಚಯಜ್ಞೈ-
ರೀಜೇ ಸ ಪಾಂಡುಶ್ಚ ಮಹಾಧನೌಘೈಃ ॥ ೧೬೯ ॥

ಅಪ್ರತಿಮ ವೀರನಾದರೂ ಪಾಂಡು ಸದಾ ಭೀಷ್ಮಧೃತರಾಷ್ಟ್ರರ ಮಾತಿಗೆ ವಿಧೇಯನಾಗಿದ್ದು ಭೂಮಿಯನ್ನು ಆಳಿದ. ಧೃತರಾಷ್ಟ್ರನೂ ಪಾಂಡುವೂ ಮಹಾಧನ ಸಮೂಹಯುಕ್ತವಾದ ಬಹುಯಜ್ಞಗಳನ್ನು ಆಚರಿಸಿದರು.

ಸತ್ಯವತಿ ಅಂಬಿಕಾ ಅಂಬಾಲಿಕೆಯರಿಗೆ ಉತ್ತಮ ಗತಿ

ನೈಷಾ ವಿರೋಧೇ ಕುರುಪಾಂಡವಾನಾಂ
ತಿಷ್ಠೇದಿತಿ ವ್ಯಾಸ ಉದೀರ್ಣಸದ್ಗುಣಃ।
ಸ್ವಮಾತರಂ ಸಾಶ್ರಮಮೇವ ನಿನ್ಯೇ
ಸುಷೇ ಚ ತಸ್ಯಾ ಯಯತುಃ ಸ್ಮ ತಾಮನು ॥ ೧೭೦ ॥

ಮುಂದೆ ಕೌರವ ಪಾಂಡವರೊಳಗೆ ವಿರೋಧ ಉಂಟಾಗುವಾಗ ತನ್ನ ತಾಯಿ ಸತ್ಯವತಿ ಅಲ್ಲಿ ಇರಕೂಡದೆಂದು ಉತ್ತಮ ಸದ್ಗುಣರಾದ ವ್ಯಾಸರು ಅವಳನ್ನು ತನ್ನ ಆಶ್ರಮಕ್ಕೆ ಕರೆದೊಯ್ದರು. ಸೊಸೆಯರಾದ ಅಂಬಿಕಾ ಅಂಬಾಲಿಕೆಯರೂ ಅವಳನ್ನು ಹಿಂಬಾಲಿಸಿದರು.

ಸುತೋಕ್ತಮಾರ್ಗೇಣ ವಿಚಿಂತ್ಯ ತಂ ಹರಿಂ ಸುತಾತ್ಮನಾ ಬ್ರಹ್ಮತಯಾ ಚ ಸಾ ಯಯೌ।
ಪರಂ ಪದಂ ವೈಷ್ಣಮೇವ ಕೃಷ್ಣಪ್ರಸಾದಃ ಸ್ವರ್ಯಯತುಃ ಸುಷೇ ಚ ॥ ೧೭೧ ॥

ವ್ಯಾಸರು ಉಪದೇಶಿಸಿದ ಪ್ರಕಾರದಿಂದಲೆ ಸತ್ಯವತಿ .ಅವರನ್ನು ಮಗನೆಂದೂ ಪರಬ್ರಹ್ಮನೆಂದೂ ಉಪಾಸನೆ ಮಾಡಿ ಅವರ ಅನುಗ್ರಹದಿಂದ ಉತ್ತಮ ವಿಷ್ಣುಲೋಕವನ್ನೇ ಹೊಂದಿದಳು. ಸೊಸೆಯರು ಸ್ವರ್ಗಲೋಕ ಪಡೆದರು.

ಮಾತಾ ಚ ಸಾ ವಿದುರಸ್ಯಾಪ ಲೋಕಂ ವೈರಿಂಚಮನ್ವೇವ ಗತಾಂಬಿಕಾಂ ಸತೀ।
ವ್ಯಾಸಪ್ರಸಾದಾತ್ ಸುತಸದ್ಗುಣೈಶ್ಚ ಕಾಲೇನ ಮುಕ್ತಿಂ ಚ ಜಗಾಮ ಸನ್ಮತಿಃ ॥ ೧೭೨ ॥

•

ವಿದುರನ ತಾಯಿಯೂ ಅಂಬಿಕೆಯನ್ನು ಹಿಂಬಾಲಿಸಿ ಬಂದು ವ್ಯಾಸರ ಅನುಗ್ರಹ ದಿಂದಲೂ ಮಗನ ಸದ್ಗುಣಗಳಿಂದಲೂ ಬ್ರಹ್ಮಲೋಕವನ್ನು ಪಡೆದಳು. ಮುಕ್ತಿಯೋಗ್ಯ ಳಾಗಿದ್ದು ಸದ್ಬುದ್ಧಿ ಉಳ್ಳ ಅವಳು ಕಾಲಕ್ರಮದಿಂದ ಮುಕ್ತಿಯನ್ನೂ ಹೊಂದಿದಳು.

ವಿದುರನ ತಾಯಿ ಅಂಬಿಕೆಯ ದಾಸಿಯಾದ್ದರಿಂದ ಅಂಬಿಕೆಯ ಜೊತೆಗೇ ವ್ಯಾಸಾಶ್ರಮಕ್ಕೆ ಬಂದಿದ್ದಳು. ಅವಳು ದಾಸಿಯಾಗಿದ್ದರೂ ನಿಯೋಗಕಾಲ ದಲ್ಲಿ ವ್ಯಾಸರನ್ನು ಬಹಳ ಭಕ್ತಿಯಿಂದ ರಮಿಸಿದ್ದರಿಂದ ಅವರ ಅನುಗ್ರಹ ಪಾತ್ರಳಾದಳು. ಮುಂದೆ ಮಗನಾದ ವಿದುರ ಯಮಾಂಶನಾದ್ದರಿಂದ ಉತ್ತಮ ಭಕ್ತ್ಯಾದಿ ಗುಣಯುಕ್ತನಾದ. ಅದರಿಂದ ಮಗನ ಪುಣ್ಯವೂ ತಾಯಿಗೆ ಉದ್ಧಾರ ಕಾರಣವಾಯಿತು. ಅವಳು ಚತುರ್ಮುಖ ಬ್ರಹ್ಮಲೋಕವನ್ನು ಸೇರಿ ಮುಂದೆ ಮುಕ್ತಿಯನ್ನು ಹೊಂದಿದಳು. ಸತ್ಯವತಿ ತಾಯಿಯಾದ್ದರಿಂದ ವ್ಯಾಸರು ಮಾತೃಭಕ್ತಿತೋರಿ ಅವಳನ್ನು ತನ್ನಾಶ್ರಮ ಕ್ಕೊಯ್ದು ಕೊನೆಗೆ ತನ್ನ ಲೋಕಕ್ಕೇ ಒಯ್ದರು. ಅಂಬಿಕೆ ಅಂಬಾಲಿಕೆಯರು ನಿಯೋಗಕಾಲದಲ್ಲಿ ಒಳ್ಳೆಯ ಭಕ್ತಿ ಮಾಡಲಿಲ್ಲ. ಬೇರೆ ಸಮಯದಲ್ಲಿ ಮಾಡಿದರು. ಅದರಿಂದ ಅವರಿಗೆ ಸ್ವರ್ಗ ಸಿಕ್ಕಿತು. ಕೊನೆಗೆ ಮುಕ್ತಿಯೂ ದೊರಕಿತು.

ಅಂಬಾಲಿಕಾಪಿ ಕ್ರಮಯೋಗತೋऽಗಾತ್ ಪರಾಂ ಗತಿಂ ನೈವ ತಥಾಂಬಿಕಾ ಯಯೌ।
ಯಥಾ ಯಥಾ ವಿಷ್ಣುಪರಶ್ಚಿದಾತ್ಮಾ ತಥಾ ತಥಾ ಹ್ಯಸ್ಯ ಗತಿಃ ಪರತ್ರ ॥ ೧೭೩ ॥

ಅಂಬಾಲಿಕೆ ಕ್ರಮವಾಗಿ ಸಾಧನೆ ಮಾಡಿ ಉತ್ತಮವಾದ ವೈಕುಂಠಾದಿ ಲೋಕವನ್ನು ಹೊಂದಿದಳು. ಅಂಬಿಕೆ ಹಾಗೆ ವಿಷ್ಣುಲೋಕವನ್ನು ಹೊಂದಲಿಲ್ಲ. ಜ್ಞಾನಸ್ವರೂಪನಾದ ಜೀವಾತ್ಮ ಹೇಗೆ ಹೇಗೆ ವಿಷ್ಣುಭಕ್ತಿ ಉಳ್ಳವನಾಗುವನೋ ಹಾಗೆ ಹಾಗೇ ಅವನಿಗೆ ಪರಗತಿಯಾಗುತ್ತದೆ.

ಅಂಬಿಕೆ ಎರಡನೆ ಬಾರಿ ವ್ಯಾಸರ ಬಳಿಗೆ ತಾನು ಹೋಗದೆ ದಾಸಿಯನ್ನು ಕಳಿಸಿಕೊಟ್ಟ ಅಪರಾಧದಿಂದ ವಿಷ್ಣುಲೋಕ ಪಡೆಯಲಿಲ್ಲ. ಆದರೆ ಮುಕ್ತಿಯೋಗ್ಯರಲ್ಲದವರಿಗೆ ಭಗವಂತನ ಅಂಗಸಂಗ ದೊರಕದು. ವ್ಯಾಸರ ಅಂಗ ಸಂಗ ಪಡೆದ ಅಂಬಿಕೆ ಮುಕ್ತಿಯೋಗಳೇ. ಅದರಿಂದ ಸಾಮಾನ್ಯ ಮುಕ್ತಿಯಾದ ಸಾರೂಪ್ಯವನ್ನು ಮಾತ್ರ ಪಡೆದಳು.[1] ಏಕೆಂದರೆ

---

1. ಅಂಬಿಕಾ ತು ಸ್ವಯಮಗತ್ವಾ ದಾಸೀಪ್ರೇರಣಾಪರಾಧೇನ ತಥಾ ಶ್ವಶ್ರೂವದ್ ಅನುಜಾವದ್ ದಾಸೀವಚ್ಚ ವೈಕುಂಠಾದಿರೂಪಾಂ ಪರಾಂ ಗತಿಂ ನೈವಾಪ। ಕಿಂತು ಸಾರೂಪ್ಯ ಮೋಕ್ಷಮಾತ್ರಂ ಗತಾ।

ಜೀವರ ಭಕ್ತಿತಾರತಮ್ಯಾನುಸಾರವಾಗಿ ಮುಕ್ತಿಯಲ್ಲಿ ತಾರತಮ್ಯವಿದೆ.

ಪಾಂಡುಕೇಶ್ವರದಲ್ಲಿ ಪಾಂಡುವಿನ ವಾಸ

ಪಾಂಡುಸ್ತತೋ ರಾಜ್ಯಭಾರಂ ನಿಧಾಯ
ಜ್ಯೇಷ್ಠೇಽನುಜೇ ಚೈವ ವನಂ ಜಗಾಮ।
ಪತ್ನೀದ್ವಯೇನಾನುಗತೋ ಬದರ್ಯಾ-
ಮುವಾಸ ನಾರಾಯಣಪಾಲಿತಾಯಾಮ್ ॥ ೧೭೪ ॥

ಬಳಿಕ ಪಾಂಡು ರಾಜ್ಯಭಾರವನ್ನು ಧೃತರಾಷ್ಟ್ರನಲ್ಲಿಯೂ ವಿದುರನಲ್ಲಿಯೂ ಇರಿಸಿ ಇಬ್ಬರು ಪತ್ನಿಯರೊಂದಿಗೆ ಕಾಡಿಗೆ ಹೋದ. ನಾರಾಯಣನಿಂದ ಪಾಲಿತವಾದ ಬದರಿಯಲ್ಲಿ ವಾಸಮಾಡಿದ.

ಧರ್ಮ ಮತ್ತು ಮೂರ್ತಿದೇವಿ ದಂಪತಿಗಳಲ್ಲಿ ಅವತರಿಸಿದ ಬದರಿನಾರಾಯಣನ ಕ್ಷೇತ್ರವಾದ ಬದರಿಯಲ್ಲಿ ಪಾಂಡು ಇಬ್ಬರು ಪತ್ನಿಯರೊಡನೆ ವನವಾಸ ಕೈಗೊಂಡ. ಇದಕ್ಕೆ ಕಾರಣ ಮುಂದೆ ಸ್ಪಷ್ಟವಿದೆ.

ಗೃಹಾಶ್ರಮೇಣೈವ ವನೇ ನಿವಾಸಂ
ಕುರ್ವನ್ ಸ ಭೋಗಾನ್ ಬುಭಜೇ ತಪಶ್ಚ।
ಚಕ್ರೇ ಮುನೀಂದ್ರೈಃ ಸಹಿತೋ ಜಗತ್ಪತಿಂ
ರಮಾಪತಿಂ ಭಕ್ತಿಯುತೋಽಭಿಪೂಜಯನ್ ॥ ೧೭೫ ॥

ಗೃಹಸ್ಥಾಶ್ರಮದಿಂದಲೆ ಕಾಡಿನಲ್ಲಿ ವಾಸ ಮಾಡುತ್ತ ಸುಖವನ್ನೂ ಅನುಭವಿಸಿದ, ಮುನಿಶ್ರೇಷ್ಠರಿಂದ ಸಹಿತನಾಗಿ ಜಗದೀಶನಾದ ರಮಾಪತಿಯನ್ನು ಭಕ್ತಿಯುಕ್ತನಾಗಿ ಪೂಜಿಸುತ್ತ ತಪಸ್ಸನ್ನೂ ಆಚರಿಸಿದ.

ಸ ಕಾಮತೋ ಹರಿಣತ್ವಂ ಪ್ರಪನ್ನಂ
ದೈವಾದೃಷಿಂ ಗ್ರಾಮ್ಯಕರ್ಮಾನುಷಕ್ತಮ್।
ವಿದ್ಧ್ವಾಶಾಪಂ ಪ್ರಾಪ ತಸ್ಮಾತ್ ಸ್ತ್ರಿಯಾ ಯುಙ್
ಮರಿಷ್ಯಸೀತ್ಯೇವ ಬಭೂವ ಚಾರ್ತಃ ॥ ೧೭೬ ॥

ವೈಕುಂಠಾದಿತರತ್ರೈವ ಅಧಮ ಮುಕ್ತವತ್ ಸಂಚರಂತೀ ಬಭೂವ। ನ ತು ತದ್ವತ್ ಸಾಲೋಕ್ಯ ಮೋಕ್ಷೋ ಲಬ್ಧ ಇತಿ ತಥೇತಿ ವದತೋ ಗ್ರಂಥಕಾರಸ್ಯಾಭಿಪ್ರಾಯಃ। ಅನ್ಯಥಾ ಪರಾಂ ಗತಿಂ ನೈವ ಯಯಾವಿತ್ಯವಕ್ಷ್ಯತ್। ಏತದೇವಾಭಿಪ್ರೇತ್ಯ ಪ್ರಾಗಸ್ಮಾಭಿಃ ಸರ್ವಾಶ್ಚ ಮುಕ್ತಿಂ ಯಾಸ್ಯಂತೀತ್ಯುಕ್ತಂ। ಮುಕ್ತಿಯೋಗ್ಯತಾಂ ವಿನಾ ವ್ಯಾಸಾಂಗ ಸಂಗಸ್ಯಾಯೋಗಾತ್। –ವಾದಿರಾಜೀಯ

ದೈವಾತ್ ಸ್ವೇಚ್ಛೆಯಿಂದ ಜಿಂಕೆ ರೂಪ ತಾಳಿ ರತಿಕ್ರೀಡೆಯಲ್ಲಿ ನಿರತನಾಗಿದ್ದ ಒಬ್ಬ ಮುನಿಯನ್ನು ಪಾಂಡು ಬಾಣದಿಂದ ಹೊಡೆದು ಅವನಿಂದ 'ಸ್ತ್ರೀಯೊಡನೆ ಕೂಡಿದರೆ ಸಾಯುವಿ' ಎಂದು ಶಾಪವನ್ನು ಹೊಂದಿದ. ದುಃಖಿತನಾದ.

> ಕಿಂದಮಮುನಿ ದಂಪತಿಗಳು ಕಾಡಿನಲ್ಲಿ ಜಿಂಕೆ ರೂಪ ತಳೆದು ರತಿಕ್ರೀಡೆಯಾಡುತ್ತಿದ್ದಾಗ ತಿಳಿಯದೆ ಪಾಂಡು ಬೇಟೆಯಾಡಿದ. ಮುನಿ ಶಾಪವಿತ್ತ. 'ನಾನು ಸ್ತ್ರೀಸಂಗ ಮಾಡುತ್ತಿದ್ದಾಗ ಹೊಡೆದೆಯಾದ ಕಾರಣ ನೀನೂ ಸ್ತ್ರೀಸಂಗ ಮಾಡಿದಾಗ ಸಾಯುವಿ' ಎಂದು:

ನ್ಯಸಿಷ್ಣುರುಕ್ತಃ ಪೃಥಯಾ ಸ ನೇತಿ
ಪ್ರಣಾಮಪೂರ್ವಂ ನ್ಯವಸತ್ ತಥೈವ।
ತಾಭ್ಯಾಂ ಸಮೇತಃ ಶತಶೃಂಗಪರ್ವತೇ
ನಾರಾಯಣಸ್ಯಾಶ್ರಮಮಧ್ಯಗೇ ಪುರಃ ॥ ೧೭೭ ॥

ಪಾಂಡು ಸನ್ಯಾಸ ಸ್ವೀಕರಿಸಲು ಬಯಸಿದಾಗ ಕುಂತಿ ನಮಸ್ಕಾರ ಮಾಡಿ 'ಬೇಡ' ಎಂದಳು. ಅದರಿಂದ ಅವನು ಗೃಹಸ್ಥಧರ್ಮದಲ್ಲಿದ್ದೇ ಇಬ್ಬರು ಪತ್ನಿಯರ ಸಮೇತನಾಗಿ ಉತ್ತರದಲ್ಲಿ ನಡುವೆ ನಾರಾಯಣಾಶ್ರಮ ಯುಕ್ತವಾದ ಶತಶೃಂಗ ಪರ್ವತದಲ್ಲಿ ವಾಸಮಾಡಿದ.

> ಪೂರ್ವಸಮುದ್ರದಿಂದ ಪಶ್ಚಿಮ ಸಮುದ್ರದವರೆಗೂ ಹಬ್ಬಿದ ಒಂದೂಕಾಲು ಲಕ್ಷಶಿಖರಯುಕ್ತವಾದ ಹಿಮಾಲಯ ಪರ್ವತದಲ್ಲಿ ನಡುವೆ ಶತಶೃಂಗ ಪರ್ವತವಿದೆ. ಅದರಲ್ಲಿ ಪೂರ್ವಪಶ್ಚಿಮಗಳಲ್ಲಿ 'ನರ' 'ನಾರಾಯಣ' ಎಂಬ ಎರಡು ಶಿಖರಗಳ ನಡುವೆ ಅಲಕನಂದಾ ನದಿ ಹರಿವ ಪ್ರದೇಶವೆ ಬದರಿಯ ನಾರಾಯಣಾಶ್ರಮ. ಇದು ಪಾಂಡುಕೇಶ್ವರವೆಂಬ ಪುಣ್ಯಕ್ಷೇತ್ರಕ್ಕೆ 'ಪುರಃ' ಮುಂದೆ ಒಂದು ಯೋಜನ ದೂರದಲ್ಲಿದೆ. ದಕ್ಷಿಣದಿಂದ ಬದರೀಯಾತ್ರೆ ಮಾಡುವವರಿಗೆ ಪಾಂಡುಕೇಶ್ವರ ಮೊದಲಿಗೆ ಸಿಗುತ್ತದೆ. ಚಳಿಗಾಲ ಆರುತಿಂಗಳು ಬದರಿಯಲ್ಲಿ ಹಿಮಪಾತವಾಗುವುದರಿಂದ ಜನರಿಗೆ ಆಗ ವಾಸ ಮಾಡಲಾಗುವುದಿಲ್ಲ. ಪಾಂಡುಕೇಶ್ವರಕ್ಕೇ ಬರಬೇಕು. ಅದರಿಂದ ಋಷಿ ಮುನಿಗಳ ಆದೇಶದಂತೆ ಪಾಂಡು ಇಲ್ಲಿಯೆ ವಾಸ ಮಾಡುತ್ತಿದ್ದುದರಿಂದ ಈ ಕ್ಷೇತ್ರ ಪಾಂಡುಕೇಶ್ವರ.[1]

---

1. ಸಪಾದಲಕ್ಷಶೃಂಗವತ್ತ್ವಾತ್ ಪೂರ್ವಾಪರವಾರಿಧಿ ಪರ್ಯಂತಂ ಮಹಾನ್ ಸಪಾದ ಲಕ್ಷಾಖ್ಯಃ ಪರ್ವತೋಽಸ್ತಿ। ತನ್ಮಧ್ಯೇ ಶತಶೃಂಗಾಖ್ಯೋಽವಾಂತರ ಪರ್ವತಃ। ತಸ್ಯ ಮಧ್ಯೇ ಪೂರ್ವತಃ ಪಶ್ಚಿಮತಶ್ಚ ನರನಾರಾಯಣ ಶೃಂಗಾಭ್ಯಾಂ ಮಧ್ಯೇ ಅಲಕನಂದಯಾ ಚಾಲಂಕೃತೋ ಬದರಿಕಾಖ್ಯ

ತಪೋ ನಿತಾಂತಂ ಸ ಚಕಾರ ತಾಭ್ಯಾಂ ಸಮನ್ವಿತಃ ಕೃಷ್ಣಪದಾಂಬುಜಾಶ್ರಯಃ।
ತತ್ಸಂಗಪೂತದ್ಯುಸರಿದ್ವರಾಂಭಃಸದಾವಗಾಹಾತಿಪವಿತ್ರಿತಾಂಗಃ ॥ ೧೭೮ ॥

ಕುಂತಿ ಮಾದ್ರಿಯರಿಂದೊಡಗೂಡಿದ ಪಾಂಡು ಹರಿಯ ಪಾದಕಮಲಗಳನ್ನು ಆಶ್ರಯಿಸಿ ಹರಿಪಾದಸಂಗದಿಂದ ಪವಿತ್ರವಾದ ದೇವನದಿಯ ಉತ್ತಮ ಜಲದಲ್ಲಿ ನಿತ್ಯಸ್ನಾನ ಮಾಡುತ್ತ ಶರೀರ ಪಾವಿತ್ರ್ಯ ಗಳಿಸಿ ಬಹಳ ತಪಗೈದ.

ಕೃಷ್ಣಾವತಾರಕ್ಕಾಗಿ ದೇವತೆಗಳ ಪ್ರಾರ್ಥನೆ

ಏತಸ್ಮಿನ್ನೇವ ಕಾಲೇ ಕಮಲಭವಶಿವಾಗ್ರೇಸರಾಃ ಶಕ್ರಪೂರ್ವಾ
ಭೂಮ್ಯಾ ಪಾಪಾತ್ಮದೈತ್ಯೈರ್ಭುವಿ ಕೃತನಿಲಯೈರಾಕ್ರಮಂ ಚಾಸಹಂತ್ಯಾ।
ಈಯುರ್ದೇವಾಧಿದೇವಂ ಶರಣಮಜಗುರುಂ ಪೂರ್ಣಷಾಡ್ಗುಣ್ಯಮೂರ್ತಿಂ
ಕ್ಷೀರಾಬ್ಧೌ ನಾಗಭೋಗೇ ಶಯಿತಮನುಪಮಾನಂದಸಂದೋಹದೇಹಮ್ ॥೧೭೯॥

ಇದೇ ಕಾಲದಲ್ಲಿ ಇಂದ್ರಾದಿ ದೇವತೆಗಳು ಭೂಲೋಕದಲ್ಲಿ ಮನೆ ಮಾಡಿದ ಪಾಪ ಸ್ವರೂಪರಾದ ದೈತ್ಯರ ಆಕ್ರಮಣವನ್ನು ಸಹಿಸದೆ ಬಂದ ಭೂದೇವಿಯಿಂದ ಸಮೇತರಾಗಿ ಬ್ರಹ್ಮರುದ್ರರನ್ನು ಮುಂದೆ ಮಾಡಿಕೊಂಡು ಪೂರ್ಣಷಡ್ಗುಣ ಸ್ವರೂಪ, ಅನುಪಮ ಆನಂದ ಸಮೂಹ ಶರೀರಿ, ಕ್ಷೀರಸಾಗರದಲ್ಲಿ ಶೇಷನ ಮೈಯಲ್ಲಿ ಪವಡಿಸಿದವ, ಬ್ರಹ್ಮನಿಗೂ ಗುರುವೆನಿಸಿದ-ಇಂಥ ದೇವಾಧಿದೇವನನ್ನು ಶರಣುಹೊಂದಿದರು.

ಹರಿಭಕ್ತಾಗ್ರೇಸರನಾದ ಬ್ರಹ್ಮ ಹರಿಯ ಬಳಿಗೆ ಎಲ್ಲರಿಗಿಂತ ಮುಂದೆ ಹೋಗುತ್ತಾನೆ. ಬಳಿಕ ಶಿವ. ಬಳಿಕ ಇಂದ್ರ. ಅವನನ್ನು ಮುಂದೆ ಮಾಡಿಕೊಂಡು ಇತರ ದೇವತೆಗಳು. ಈ ತಾರತಮ್ಯ ಕ್ರಮವನ್ನು

ನಾರಾಯಣಾಶ್ರಮಸ್ತಿಷ್ಠತಿ। ತಸ್ಯ ದಕ್ಷಿಣಭಾಗೇ ಯೋಜನ ಪ್ರಮಾಣಾದಧಸ್ತಾತ್ ಪಾಂಡುಚಕ್ರವರ್ತಿನಾಧಿಷ್ಠಿತತ್ವಾತ್ ಪಾಂಡುಕೇಶ್ವರಾಖ್ಯಂ ಪುಣ್ಯಕ್ಷೇತ್ರಂ ಚ ವರ್ತತೇ ಇತಿ ವಸ್ತುಸ್ಥಿತಿಃ। ಏವಂ ಚ ದಕ್ಷಿಣತೋ ಬದರಿಕಾಶ್ರಮ ಯಾತ್ರಾಯಾಂ ಕ್ರಿಯಮಾಣಾಯಾಂ ಯಸ್ಮಾದಾಶ್ರಮಾತ್ ಪುರಃ ಪುರತ ಉತ್ತರತ ಇತಿಯಾವತ್ ನಾರಾಯಣಾಖ್ಯಾಶ್ರಮೋ ಮಧ್ಯಗಃ ಶತಶೃಂಗ ಪರ್ವತಮಧ್ಯಸ್ಥಿತಿಷ್ಠತಿ। ತಸ್ಮಿಂಶ್ಚತ ಶೃಂಗ ಪರ್ವತೇ ಶತಶೃಂಗ ಪ್ರದೇಶೇ ನ್ಯವಸದಿತಿ ಸಂಬಂಧಃ। ನಾರಾಯಣಾಶ್ರಮೇ ಹಿಮಕಾಲೇ ಷಣ್ಮಾಸ ಪರ್ಯಂತಂ ಆಕಾಶಾತ್ ಪತಮಾನ ಗಿರಿಶೃಂಗೋಪಮ ಶಿಲೀಭೂತ ಹಿಮಾನೀ ಭಯಾತ್ ತತ್ರತ್ಯಾಃ ಪಶವಃ ಪಕ್ಷಿಣೋ ಮೃಗಾ ಮನುಷ್ಯಾಶ್ಚ ಪಾಂಡುಕ್ಷೇತ್ರಂ ಪ್ರತ್ಯಾಯಾಂತಿ। ಅತೋ ಭಾರ್ಯಾಭ್ಯಾಂ ಪರಿಜನೈಶ್ಚ ಸಹ ನಿರಂತರ ವಾಸಾಯೇದಮೇವ ಸ್ಥಲಂ ಯೋಗ್ಯಮಿತಿ ಋಷೀಣಾಂ ವಚನಾದತ್ರೈವ ನ್ಯವಸದಿತಿ ಭಾವಃ।

ಷಷ್ಠ್ಯಾ ಆಕ್ರೋಶೇ ಅಲುಗಿತಿ ವಚನಾತ್ ನಾರಾಯಣಸ್ಯೇತಿ ಷಷ್ಠ್ಯಾ ಅಲುಕ್ ಸಮಾಸಃ। ತಸ್ಮಿನ್ನಾಶ್ರಮೇ ನಾರಾಯಣಸ್ಯ ಲೋಪಾಭಾವ ಸೂಚನಂ ತತ್ ಫಲಂ॥ -ವಾದಿರಾಜೀಯ

ಸೂಚಿಸುವುದಕ್ಕಾಗಿ 'ಬ್ರಹ್ಮರುದ್ರರನ್ನು ಮುಂದೆ ಮಾಡಿಕೊಂಡು ಇಂದ್ರಾದಿ ದೇವತೆಗಳು ಹರಿಯನ್ನು ಶರಣು ಹೊಂದಿದರು' ಎಂದಿದೆ. ಅಥವಾ ವಿಷ್ಣು ಭಕ್ತರಾದ ಬ್ರಹ್ಮರುದ್ರರು ತಮ್ಮನ್ನು ವಿಷ್ಣುದ್ವೇಷಿಗಳಾದ ದೈತ್ಯರು ಆರಾಧಿಸಿದರೂ ಅವರನ್ನು ನಾಶಪಡಿಸುತ್ತಾರೆ. ಅದರಿಂದ ಹರಿಯನ್ನು ಬಿಟ್ಟು ಬ್ರಹ್ಮರುದ್ರರನ್ನು ಆರಾಧಿಸಲೆಬಾರದು ಎನ್ನುವ ಅಭಿಪ್ರಾಯದಿಂದ ಇಂದ್ರಾದಿಗಳು ಬ್ರಹ್ಮರುದ್ರರನ್ನು ಮುಂದೆ ಮಾಡಿಕೊಂಡು ಹರಿಯನ್ನು ಶರಣು ಹೊಂದಿದರೆಂದಿದೆ.[1]

ಊಚುಃ ಪರಂ ಪುರುಷಮೇನಮನಂತಶಕ್ತಿಂ
ಸೂಕ್ತೇನ ತೇऽಬ್ಜಮುಖಾ ಅಪಿ ಪೌರುಷೇಣ।
ಸ್ತುತ್ವಾಧರಾऽಸುರವರಾಕ್ರಮಣಾತ್ ಪರೇಶ
ಖಿನ್ನಾ ಯತೋऽತಿ ವಿಮುಖಾಸ್ತವ ತೇऽತಿಪಾಪಾಃ ॥ ೧೮೦ ॥

ಬ್ರಹ್ಮಾದಿ ದೇವತೆಗಳು ಸರ್ವಶಕ್ತನಾದ ಆ ಪರಮಪುರುಷನನ್ನು ಪುರುಷಸೂಕ್ತದಿಂದ ಸ್ತುತಿಸಿ 'ಹೇ ಪರಮೇಶ್ವರ, ಮಹಾ ಅಸುರರ ಆಕ್ರಮಣದಿಂದ ಭೂದೇವಿ ಪೀಡಿತಳಾಗಿರುವಳು. ಏಕೆಂದರೆ ಅವರು ಅತಿ ಪಾಪಿಗಳು ನಿನಗೆ ಅತ್ಯಂತ ವಿಮುಖರು.

ದುಸ್ಸಂಗತಿರ್ಭವತಿ ಭಾರವದೇವ ದೇವ
ನಿತ್ಯಂ ಸತಾಮಪಿ ಹಿ ನಃ ಶೃಣು ವಾಕ್ಯಮೀಶ।

---

1. ಭಕಾಗ್ರೇಸರೋ ಬ್ರಹ್ಮೈವ ಪೂರ್ವಂ ಗಚ್ಛತಿ। ತದನಂತರಂ ರುದ್ರಃ। ತತಃ ಪರಂ ಸರ್ವೇ ದೇವಾಃ ಶಕ್ರಂ ಪುರಸ್ಕೃತ್ಯ ಗಚ್ಛಂತೀತಿ ಕ್ರಮ ಸೂಚನಾಯ 'ಕಮಲಭವ ಶಿವಾಗ್ರೇಸರಾಃ ಶಕ್ರಪೂರ್ವಾ' ಇತ್ಯುಕ್ತಂ। ಯದ್ವಾ ಕಮಲಭವಶಿವೌ ಸ್ವಸೇವಕ ದೈತ್ಯಾನಾಂ ಸ್ವಯಮೇವ ಘಾತಕೌ। ತಸ್ಮಾದ್ ಬುಭೂಷುಣಾ ಹರಿಂ ವಿನಾ ತೌ ಪೃಥಙ್ನಸೇವ್ಯೌ ಇತಿ ಸೂಚನಾಯ ತಾವೇವ ಅಗ್ರೇಸರೌ ಪೃಥಗುಕ್ತ್ವಾ ಪಶ್ಚಾತ್ ಶಕ್ರಾದೀನಾಂ ಗತಿ ಮಾಹ ಕಮಲಭವೇತಿ। ತದುಕ್ತಂ ಭಾಗವತೇ-

ಶಾಪಪ್ರಸಾದಯೋ ರೀಶಾ ಬ್ರಹ್ಮವಿಷ್ಣುಶಿವಾದಯಃ।
ಸದ್ಯಃ ಶಾಪ್ರಪ್ರಸಾದೋऽಗ ಶಿವೋ ಬ್ರಹ್ಮಾ ನ ಚಾಚ್ಯುತಃ ॥ ಇತಿ ॥

ಭಗವತೋऽನಂತ ಗುಣಾನಾಮುಪಾಸಕ ಆಚಾರ್ಯೋ ಯತ್ರಯತ್ರ ಸ್ವಗ್ರಂಥೇ ಭಗವತ್ ಪ್ರಸಂಗಸತ್ತ್ರ ತತ್ರ ತದ್ಗುಣಾನನಂತಾನಪಿ ಸ್ವಯೋಗ್ಯಾನ್ ಸಹೈವ ಸ್ಮರತಿ ಇತಿ ವಸ್ತುತತ್ತ್ವಂ। ತಾವತಾಮಪಿ ಗ್ರಂಥೇ ನಿಬಂಧನೇ ಗ್ರಂಥಸ್ಯಾಪ್ಯನಂತತ್ವ ಪ್ರಸಂಗಭಿಯಾ ಪಂಚಷಾನ್ ದಿವ್ಯಾನ್ ಗುಣಾನ್ ಸ್ವಭಕ್ತ ಜನೇಷು ಸ್ವಸ್ವಭಾವಂ ದರ್ಶಯಿತುಂ ಯತ್ರ ಯತ್ರ ಶ್ಲೋಕೇ ವಿಶಿಷ್ಯ ಹರೇಃ ಪ್ರಸಂಗಸತ್ತ್ರ ತತ್ರ ನಿಯಮೇನಾನು ವರ್ಣಯತೀತಿ ಸರ್ವಾತ್ರಾನುಸಂಧೇಯಂ ॥ ಅತಏತಸ್ಮಿನ್ನೇವಕಾಲ ಇತಿಪದ್ಯೇಪಿ ದೇವಾಧಿದೇವಮಿತ್ಯಾದೀನಿ ವಿಶೇಷಣಾನಿ। -ವಾದಿರಾಜೀಯ

ಪೂರ್ವಂ ಹತಾ ದಿತಿಸುತಾ ಭವತಾ ರಣೇಷು
ಹ್ಯಸ್ಮತ್ಪ್ರಿಯಾರ್ಥಮಧುನಾ ಭುವಿ ತೇಽಭಿಜಾತಾಃ ॥ ೧೮೧ ॥

ಹೇ ದೇವ, ದುಷ್ಟರ ಸಂಗ ಸಜ್ಜನರಿಗೆ ಸದಾ ಭಾರದಂತೆಯೆ ಆಗಿರುತ್ತದೆ. ಅದರಿಂದ ಪ್ರಭು, ನಮ್ಮ ಮಾತನ್ನು ಕೇಳು. ಹಿಂದೆ ನೀನು ನಮ್ಮ ಸಂತೋಷಕ್ಕಾಗಿ ಯುದ್ಧಗಳಲ್ಲಿ ದೈತ್ಯರನ್ನು ಕೊಂದೆ. ಈಗ ಅವರು ಭೂಮಿಯಲ್ಲಿ ಹುಟ್ಟಿದ್ದಾರೆ.

ದೇವಾಸುರ ಸಂಗ್ರಾಮ

ಆಸೀತ್ ಪುರಾ ದಿತಿಸುರೈರಮರೋತ್ತಮಾನಾಂ
ಸಂಗ್ರಾಮ ಉತ್ತಮಗಜಾಶ್ವರಥದ್ವಿಪದ್ಭಿಃ।
ಅಕ್ಷೌಹಿಣೀಶತಮಹೌಘಮಹೌಘಮೇವ
ಸೈನ್ಯಂ ಸುರಾತ್ಮಕಮಭೂತ್ ಪರಮಾಸ್ತ್ರಯುಕ್ತಮ್ ॥ ೧೮೨ ॥

ಹಿಂದೆ ದೇವೋತ್ತಮರಿಗೆ ದೈತ್ಯರೊಡನೆ ಯುದ್ಧ ನಡೆಯಿತು. ಆಗ ದೇವತೆಗಳ ಸೈನ್ಯ ಉತ್ತಮ ಅಸ್ತ್ರಯುಕ್ತವಾಗಿದ್ದು ಉತ್ತಮ ಗಜ ಅಶ್ವರಥ ಪದಾತಿಗಳಿಂದ ಯುಕ್ತವಾಗಿದ್ದು ನೂರು ಮಹೌಘ ಮಹೌಘ ಅಕ್ಷೌಹಿಣಿಗಳಷ್ಟಿತ್ತು.

ದೇವತೆಗಳ ಸಂಖ್ಯೆ ಮೂವತ್ತಮೂರು ಕೋಟಿಯೇ ಆದರೂ ಅವರ ಬೇರೆ ಬೇರೆ ಅಂಶಗಳು ಬಹಳ ಇದೆ. ಉದಾ: 'ತ್ರಿಕೋಟಿ ರೂಪಃ ಪವನಃ' ಮುಖ್ಯಪ್ರಾಣನ ರೂಪಗಳು ಮೂರು ಕೋಟಿ. ಅದರಿಂದ ದೇವಸೈನ್ಯದ ಸಂಖ್ಯೆ ನೂರು ಮಹೌಘ ಮಹೌಘ ಅಕ್ಷೌಹಿಣಿ ಎನ್ನುವುದು ಅಸಂಭಾವಿತವಿಲ್ಲ. ಮಹೌಘವೆಂದರೆ-

ಒಂದು ಲಕ್ಷಕೋಟಿ	=	ಒಂದು ಶಂಕು
ಒಂದು ಲಕ್ಷಶಂಕು	=	ಒಂದು ಮಹಾಶಂಕು
ಒಂದು ಲಕ್ಷಮಹಾಶಂಕು	=	ಒಂದು ವೃಂದ
ಒಂದು ಲಕ್ಷವೃಂದ	=	ಒಂದು ಮಹಾವೃಂದ
ಒಂದು ಲಕ್ಷಮಹಾವೃಂದ	=	ಒಂದು ಪದ್ಮ
ಒಂದು ಲಕ್ಷಪದ್ಮ	=	ಒಂದು ಮಹಾಪದ್ಮ
ಒಂದು ಲಕ್ಷಮಹಾಪದ್ಮ	=	ಒಂದು ಖರ್ವ
ಒಂದು ಲಕ್ಷಖರ್ವ	=	ಒಂದು ಮಹಾಖರ್ವ
ಒಂದು ಲಕ್ಷಮಹಾಖರ್ವ	=	ಒಂದು ಧೂಲಿ
ಒಂದು ಲಕ್ಷಧೂಲಿ	=	ಒಂದು ಮಹಾಧೂಲಿ
ಒಂದು ಲಕ್ಷಮಹಾಧೂಲಿ	=	ಒಂದು ಸಮುದ್ರ

ಒಂದು ಲಕ್ಷ ಸಮುದ್ರ = ಒಂದು ಓಘ
ಒಂದು ಲಕ್ಷ ಓಘ = ಒಂದು ಮಹೌಘ

-ಎಂದು ರಾಮಾಯಣ ಯುದ್ಧಕಾಂಡ (28.37) ದಲ್ಲಿ ಹೇಳಿದೆ-

ತಸ್ಮಾನ್ಮಹೌಘಗುಣಮಾಸ ಮಹಾಸುರಾಣಾಂ
ಸೈನ್ಯಂ ಶಿಲಾಗಿರಿಮಹಾಸ್ತ್ರಧರಂ ಸುಘೋರಮ್ ।
ತೇಷಾಂ ರಥಾಶ್ಚ ಬಹುನಲ್ವಪರಿಪ್ರಮಾಣಾ
ದೇವಾಸುರಪ್ರವರಕಾರ್ಮುಕಬಾಣಪೂರ್ಣಾಃ।
ನಾನಾಂಬರಾಭರಣವೇಷವರಾಯುಧಾಢ್ಯಾ
ದೇವಾಸುರಾಃ ಸಸೃಪುರಾಶು ಪರಸ್ಪರಂ ತೇ ॥ ೧೮೩ ॥

ಮಹಾ ಅಸುರರ ಸೈನ್ಯ ದೇವಸೈನ್ಯಕ್ಕಿಂತ ಮಹೌಘಪಾಲು ಅಧಿಕವಾಗಿತ್ತು. ಕಲ್ಲುಬಂಡೆಗಳು ಬೆಟ್ಟಗಳು ಮಹಾಅಸ್ತ್ರಗಳು ಇವುಗಳನ್ನು ಹಿಡಿದು ಮಹಾಘೋರವೆನಿಸಿತ್ತು. ದೇವಾಸುರರ ರಥಗಳೂ ಬಹು ನಲ್ವಪರಿಮಾಣದವುಗಳಾಗಿದ್ದವು. ಅವರ ಶ್ರೇಷ್ಠವಾದ ಧನುರ್ಬಾಣಗಳಿಂದ ತುಂಬಿದ್ದವು. ನಾನಾ ವಸ್ತ್ರಾಭರಣವೇಷಗಳನ್ನೂ ಉತ್ತಮ ಆಯುಧಗಳನ್ನೂ ಧರಿಸಿದ್ದ ಆ ದೇವ ಅಸುರರು ಬೇಗನೆ ಒಬ್ಬರನ್ನೊಬ್ಬರು ಏರಿಹೋದರು. 'ಕಿಷ್ಕುರ್ಹಸ್ತೇ ವಿತಸ್ತೌಚ' 'ನಲ್ವಃ ಕಿಷ್ಕು ಚತುಃಶತಂ' ಎಂಬ ಕೋಶಾನುಸಾರ ನಾನ್ನೂರು ಹಸ್ತಪ್ರಮಾಣವನ್ನು 'ನಲ್ವ' ಎನ್ನುತ್ತಾರೆ. ಇಂಥ ಬಹುನಲ್ವ ಪ್ರಮಾಣವು ದೇವಾಸುರರ ರಥಗಳು.

ಜಘ್ನುರ್ಗಿರೀಂದ್ರತಲಮುಷ್ಟಿಮಹಾಸ್ತ್ರಶಸ್ತ್ರೈ-
ಶ್ಚಕ್ರುರ್ನದೀಶ್ಚ ರುಧಿರೌಘಮಹಾ ಮಹೌಘಮ್ ।
ತತ್ರ ಸ್ಮ ದೇವವೃಷಭೈರಸುರೇಶಚಮ್ವಾ
ಯುದ್ಧೇ ನಿಷೂದಿತ ಉತೌಘಬಲೈಃ ಶತಾಂಶಃ ॥ ೧೮೪ ॥

ದೇವಾಸುರರು ದೊಡ್ಡ ಬೆಟ್ಟಗಳಿಂದ ಕೈಕಾಲುಗಳಿಂದ ಮುಷ್ಟಿಗಳಿಂದ ಮತ್ತು ಮಹಾಅಸ್ತ್ರಗಳಿಂದ ಹೊಡೆದುಕೊಂಡರು. ರಕ್ತದ ಕೋಡಿ ಹರಿಸಿ ಮಹಾಪ್ರವಾಹದ-ನದಿಗಳನ್ನೇ ನಿರ್ಮಿಸಿದರು. ಮಹಾಬಲಿಷ್ಠರಾದ ಉತ್ತಮ ದೇವತೆಗಳು ಆ ಯುದ್ಧದಲ್ಲಿ ಮಹಾ ಅಸುರರ ಸೈನ್ಯದ ನೂರನೆ ಒಂದಂಶವನ್ನು ನಾಶಪಡಿಸಿದರು.

ಅಥಾತ್ಮಸೇನಾಮವಮೃದ್ಯಮಾನಾಂ
ವೀಕ್ಷ್ಯಾಸುರಃ ಶಂಬರನಾಮಧೇಯಃ।
ಸಸಾರ ಮಾಯಾವಿದಸಹ್ಯಮಾಯೋ
ವರಾದುಮೇಶಸ್ಯ ಸುರಾನ್ ವಿಮೋಹಯನ್ ॥ ೧೮೫ ॥

ಬಳಿಕ ತನ್ನ ಸೇನೆ ನಾಶವಾಗುತ್ತಿರುವುದನ್ನು ಕಂಡು ಶಂಬರ ಎಂಬ ಹೆಸರಿನ ಅಸುರನು ಸುರರನ್ನು ಮೋಹಗೊಳಿಸುತ್ತ ಆಕ್ರಮಿಸಿದ. ಮಾಯೆಯಲ್ಲಿ ಪ್ರವೀಣನಾದ ಅವನು ರುದ್ರವರದಿಂದ ಯಾರಿಗೂ ಸಹಿಸಲಾಗದಂಥ ಮಾಯೆಯನ್ನೂ ಹೊಂದಿದ್ದ.

ಮಾಯಾಸಹಸ್ರೇಣ ಸುರಾ ವಿಮರ್ದಿತಾ
ರಣೇ ವಿಷೇದುಃ ಶಶಿಸೂರ್ಯಮುಖ್ಯಾಃ।
ತಾನ್ ವೀಕ್ಷ್ಯ ವಜ್ರೀ ಪರಮೋಖ್ಯವಿದ್ಯಾಂ
ಸ್ವಯಂಭುದತ್ತಾಂ ಪ್ರಯುಯೋಜ ವೈಷ್ಣವೀಮ್ ॥ ೧೮೬ ॥

ಯುದ್ಧದಲ್ಲಿ ಶಂಬರನ ಸಹಸ್ರಾರು ಮಾಯೆಗಳಿಂದ ಚಂದ್ರ ಸೂರ್ಯಾದಿ ದೇವತೆಗಳು ಪೀಡಿತರಾಗಿ ಆಯಾಸಗೊಂಡರು. ಅವರನ್ನು ನೋಡಿ ದೇವೇಂದ್ರ ಬ್ರಹ್ಮದೇವ ಉಪದೇಶಿಸಿದ ವೈಷ್ಣವ ಮಹಾಮಾಯೆಯನ್ನು ಪ್ರಯೋಗಿಸಿದ.

ಸಮಸ್ತಮಾಯಾಪಹಯಾ ತಯೈವ
ವರಾದ್ ರಮೇಶಸ್ಯ ಸದಾಪ್ಯಸಹ್ಯಯಾ।
ಮಾಯಾ ವಿನೇಶುರ್ದಿತಿಜೇಂದ್ರಸೃಷ್ಟಾ
ವಾರೀಶವಹ್ನೀಂದುಮುಖಾಶ್ಚ ಮೋಚಿತಾಃ ॥ ೧೮೭ ॥

ಹರಿಯ ವರದಿಂದ ಯಾರಿಗೂ ಎಂದೂ ಸಹಿಸಲಾಗದಂಥ ಮತ್ತು ಬೇರೆ ಎಲ್ಲ ಮಾಯೆಗಳನ್ನು ಕಳೆಯಬಲ್ಲ ಆ ವಿಷ್ಣುಮಾಯೆಯಿಂದ ಶಂಬರನು ನಿರ್ಮಿಸಿದ ಮಾಯೆಗಳು ನಾಶವಾದುವು. ವರುಣ ಅಗ್ನಿ ಚಂದ್ರ ಮುಂತಾದ ದೇವತೆಗಳು ಮಾಯೆಯಿಂದ ಬಿಡುಗಡೆ ಹೊಂದಿದರು.

ಯಮೇಂದುಸೂರ್ಯಾದಿಸುರಾಸ್ತತೋಽಸುರಾನ್
ನಿಜಘ್ನುರಾಪ್ಯಾಯಿತವಿಕ್ರಮಾಸ್ತದಾ।
ಸುರೇಶ್ವರೇಣೋರ್ಜಿತಪೌರುಷಾ ಬಹೂನ್
ವಜ್ರೇಣ ವಜ್ರೀ ನಿಜಘಾನ ಶಂಬರಮ್ ॥ ೧೮೮ ॥

ಯಮ ಚಂದ್ರ ಸೂರ್ಯ ಮುಂತಾದ ದೇವತೆಗಳು ಮಹಾಪೌರುಷ ಉಳ್ಳವರು. ಇಂದ್ರ ಅವರ ಪರಾಕ್ರಮವನ್ನು ಉತ್ತೇಜಿತಗೊಳಿಸಿದಾಗ ಅವರು ಬಹಳ ಅಸುರರನ್ನು ಕೊಂದರು. ಇಂದ್ರ ವಜ್ರಾಯುಧದಿಂದ ಶಂಬರನನ್ನು ವಧಿಸಿದ.

ದೇವೇಂದ್ರ ವಧಿಸಿದ ಈ ಶಂಬರ ಆದಿ ಶಂಬರ. ಮುಂದೆ ಕೃಷ್ಣಾವತಾರದಲ್ಲಿ ಪ್ರದ್ಯುಮ್ನ ಸಂಹರಿಸುವ ಶಂಬರನಿನ್ನೊಬ್ಬ ಕಾಲಶಂಬರ.

ತಸ್ಮಿನ್ ಹತೇ ದಾನವಲೋಕಪಾಲೇ
ದಿತೇಃ ಸುತಾ ದುದ್ರುವುರಿಂದ್ರಭೀಷಿತಾಃ।
ತಾನ್ ವಿಪ್ರಚಿತ್ತಿರ್ವಿನಿವಾಯ ಧ್ವನೀ
ಸಸಾರ ಶಕ್ರಪ್ರಮುಖಾನ್ ಸುರೋತ್ತಮಾನ್ ॥ ೧೪೯ ॥

ಅಸುರರಾಜನಾದ ಆ ಶಂಬರ ಹತನಾದಾಗ ಇಂದ್ರನಿಗೆ ಹೆದರಿ ದೈತ್ಯರು ಓಡಲು ತೊಡಗಿದರು. ಅವರನ್ನು ಧನುರ್ಧಾರಿಯಾದ ವಿಪ್ರಚಿತ್ತಿ ತಡೆದು ಇಂದ್ರಾದಿ ದೇವೋತ್ತಮರ ಮೇಲೇರಿ ಹೋದ.

ವರಾದಜೇಯನ ವಿಧಾತುರೇವ ಸುರೋತ್ತಮಾಂಸ್ತೇನ ಶರೈರ್ನಿಪಾತಿತಾನ್।
ನಿರೀಕ್ಷ್ಯ ಶಕ್ರಂ ಚ ವಿಮೋಹಿತಂ ದ್ರುತಂ ನ್ಯವಾರಯತ್ತಂ ಪವನಃ ಶರೌಘೈಃ ॥೧೯೦॥

ಬ್ರಹ್ಮನ ವರದಿಂದ ಅಜೇಯನಾದ ವಿಪ್ರಚಿತ್ತಿ ದೇವೋತ್ತಮರನ್ನು ಬಾಣಗಳಿಂದ ಕೆಡವಿದ. ಇಂದ್ರನನ್ನೂ ಮೂರ್ಛೆಗೊಳಿಸಿದ. ಅದನ್ನು ಕಂಡು ಮುಖ್ಯಪ್ರಾಣ ಬಾಣಸಮೂಹಗಳಿಂದ ವಿಪ್ರಚಿತ್ತಿಯನ್ನು ತಡೆದ.

ಅಸ್ತ್ರೈತಸ್ಯಾಸ್ತ್ರವರೈರ್ನಿವಾರ್ಯ
ಚಿಕ್ಷೇಪ ತಸ್ಯೋರಸಿ ಕಾಂಚನೀಂ ಗದಾಮ್।
ವಿಚೂರ್ಣತೋಽಸೌ ನಿಪಪಾತ ಮೇರೌ
ಮಹಾಬಲೋ ವಾಯುಬಲಾಭಿನುನ್ನಃ ॥ ೧೯೧ ॥

ಮುಖ್ಯಪ್ರಾಣನ ವಿಪ್ರಚಿತ್ತಿಯ ಅಸ್ತ್ರಗಳನ್ನು ಉತ್ತಮ ಅಸ್ತ್ರಗಳಿಂದ ತಡೆದು ಅವನ ಎದೆಗೆ ಚಿನ್ನದ ಗದೆಯನ್ನೆಸೆದ. ಮಹಾಬಲಿಷ್ಠನಾದ ಆ ವಿಪ್ರಚಿತ್ತಿ ವಾಯುವಿನ ಬಲದಿಂದ ಕೆಳಗೆ ತಳ್ಳಲ್ಪಟ್ಟು ಮೇರುಪರ್ವತದ ಮೇಲೆ ಬಿದ್ದ. ಚೂರ್ಣಿತನಾದ.

ಅಥಾಸಸಾದಾಶು ಸ ಕಾಲನೇಮಿಸ್ತ್ವ-
ದಾಜ್ಞಯಾ ಯಸ್ಯವರಂ ದದೌಪುರಾ।
ಸರ್ವೈರಜೇಯತ್ವಮಜೋಽಸುರಃ ಸ
ಸಹಸ್ರ ಶೀರ್ಷೋ ದ್ವಿಸಹಸ್ರಬಾಹುಯುಕ್ ॥ ೧೯೨ ॥

ಬಳಿಕ ಕಾಲನೇಮಿ ಧಾವಿಸಿ ಬಂದ. ಅವನಿಗೆ ನಿನ್ನಾಜ್ಞೆಯಿಂದ ಬ್ರಹ್ಮಸರ್ವಾಜೇಯತ್ವ ವರ ನೀಡಿದ್ದ. ಆ ಅಸುರ ಸಾವಿರ ತಲೆಗಳುಳ್ಳವ. ಎರಡು ಸಾವಿರ ತೋಳುಗಳುಳ್ಳವ.

ತಮಾಪತಂತಂ ಪ್ರಸಮೀಕ್ಷ್ಯ ಮಾರುತಸ್ತ್ವದಾಜ್ಞಯಾ ದತ್ತವರಸ್ತ್ವಯೈವ।
ಹಂತವ್ಯ ಇತ್ಯಸ್ಮರದಾಶು ಹಿ ತ್ವಾಂ ತದಾವಿರಾಸೀತ್ತ್ವಮನಂತಪೌರುಷಃ ॥ ೧೯೩ ॥

ಕಾಲನೇಮಿ ಬರುವುದನ್ನು ಕಂಡು ಮುಖ್ಯಪ್ರಾಣ ನಿನ್ನಾಜ್ಞೆಯಿಂದ ವರ ಪಡೆದವನನ್ನು ನೀನೆ ಕೊಲ್ಲಬೇಕೆಂದು ಬೇಗನೆ ನಿನ್ನನ್ನು ನೆನೆದ. ಆಗ ಅನಂತಶಕ್ತಿಉಳ್ಳ ನೀನು ಆವಿರ್ಭವಿಸಿದೆ.

ತಮಸ್ತ್ರಶಸ್ತ್ರೈ ಬಹೂನಿ ಬಾಹುಭಿಃ
ಪ್ರವರ್ಷಮಾಣಂ ಭುವನಾಪದೇಹಮ್ ।
ಚಕ್ರೇಣ ಬಾಹೂನ್ ವಿನಿಕೃತ್ತ್ಯ ಕಾನಿ ಚ
ನ್ಯವೇದಯಶ್ಚಾಶು ಯಮಾಯ ಪಾಪಮ್ ॥ ೧೯೪ ॥

ತೋಳುಗಳಿಂದ ಬಹು ಅಸ್ತ್ರಶಸ್ತ್ರಗಳನ್ನು ಮಳೆಗರೆಯುತ್ತ ಕಾಲನೇಮಿ ಶರೀರದಿಂದ ಲೋಕವನ್ನು ವ್ಯಾಪಿಸಿದ್ದ. ನೀನು ಚಕ್ರದಿಂದ ಅವನ ತೋಳುಗಳನ್ನೂ ತಲೆಗಳನ್ನೂ ತರಿದು ಬೇಗನೆ ಆ ಪಾಪಿಯನ್ನು ಯಮನಿಗಿತ್ತೆ.

ತತೋಽಸುರಾಸ್ತೇ ನಿಹತಾ ಅಶೇಷಾ-
ಸ್ತ್ರ್ಯಾ ತ್ರಿಭಾಗಾ ನಿಹತಾಶ್ಚತುರ್ಥಮ್ ।
ಜಘಾನ ವಾಯುಃ ಪುನರೇವ ಜಾತಾಸ್ತೇ
ಭೂತಲೇ ಧರ್ಮಬಲೋಪಪನ್ನಾಃ ॥ ೧೯೫ ॥

ಬಳಿಕ ಅಸುರರೆಲ್ಲರೂ ನಿಃಶೇಷವಾಗಿ ಹತರಾದರು. ನೀನು ಮೂರು ಭಾಗವನ್ನು ಸಂಹರಿಸಿದೆ. ನಾಲ್ಕನೆ ಭಾಗವನ್ನು ಮುಖ್ಯಪ್ರಾಣ ಸಂಹರಿಸಿದ. ಅವರು ಪುನಃ ಧರ್ಮಬಲಗಳಿಂದ ಯುಕ್ತರಾಗಿ ಭೂಮಿಯಲ್ಲಿ ಹುಟ್ಟಿದ್ದಾರೆ.

ಪಾಪ ಮಾಡಿಸಬೇಕು, ಶಿಕ್ಷೆ ನೀಡಬೇಕು

ರಾಜ್ಞಾಂ ಮಹಾವಂಶಸುಜನ್ಮನಾಂ ತು ತೇಷಾಮಭೂದ್ ಧರ್ಮಮತಿರ್ವಿಪಾಪಾ।
ಶಿಕ್ಷಾಮವಾಪ್ಯ ದ್ವಿಜಪುಂಗವಾನಾಂ ತ್ವದ್ಭಕ್ತಿರಪ್ಯೇಷು ಹಿ ಕಾಚನ ಸ್ಯಾತ್ ॥ ೧೯೬ ॥

ಮಹಾವಂಶದಲ್ಲಿ ಹುಟ್ಟಿದ ಆ ರಾಜರಿಗೆ ಪಾಪರಹಿತ ಧರ್ಮಬುದ್ಧಿ ಉಂಟಾಗಿದೆ. ಬ್ರಾಹ್ಮಣೋತ್ತಮರ ಉಪದೇಶದಿಂದ ಅವರಲ್ಲಿ ಸ್ವಲ್ಪವಾದರೂ ನಿನ್ನಲ್ಲಿ ಭಕ್ತಿ ಬರುವುದು ಸಂಭಾವಿತವೆ.

ತ್ವದ್ಭಕ್ತಿಲೇಶಾಭಿಯುತಃ ಸುಕರ್ಮಾ ವ್ರಜೇನ್ನ ಪಾಪಾಂ ತು ಗತಿಂ ಕಥಂಚಿತ್।
ದೈತ್ಯೇಶ್ವರಾಣಾಂ ಚ ತಮೋಽಧಮೇವ ತ್ವಯೈವ ಕ್ಲೃಪ್ತಂ ನನು ಸತ್ಯಕಾಮ ॥೧೯೭॥

ನಿನ್ನಲ್ಲಿ ಭಕ್ತಿಯ ಲೇಶದಿಂದ ಕೂಡಿದವನೂ ಸತ್ಕರ್ಮಮಾಡಿ ಪಾಪಗತಿಯನ್ನು ಯಾವ

ಪ್ರಕಾರದಿಂದಲೂ ಪಡೆಯಲಾರ. ಆದರೆ, ಹೇ ಸತ್ಯಸಂಕಲ್ಪನಾದ ಹರಿಯೆ, ಮಹಾದೈತ್ಯರಿಗೆ ಅಂಧಂತಮಸ್ಸೇ ಗತಿಯೆಂದು ನೀನೆ ಕ್ಲೃಪ್ತಗೊಳಿಸಿರುವೆ.

> 'ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ' ಎಂದು ಸಕಲಕರ್ಮಗಳನ್ನೂ ಸಂಕಲ್ಪಿಸಿ ಕೊನೆಯಲ್ಲಿ ನಾರಾಯಣನಿಗೆ ಸಮರ್ಪಿಸುವುದು, ಹರಿಗುರುಗಳನ್ನು ನಮಿಸುವುದು ದೇವರ್ಷಿ ಪಿತೃಗಳಿಗೆ ತರ್ಪಣ ಕೊಡುವುದು, ಇವೆಲ್ಲವೂ ಸಜ್ಜನರ ಸ್ವಭಾವ. ಸ್ಫಟಿಕ ಮಣಿಯಲ್ಲಿ ಕೆಂಪುದಾಸವಾಳ ಹೂವಿನ ಸಂಪರ್ಕದಿಂದ ಅಸ್ವಾಭಾವಿಕ ಕೆಂಪುಬಣ್ಣ ಬರುವಂತೆ ಸಜ್ಜನರ ಸಹವಾಸದಿಂದ ಪಾಪ ಸ್ವಭಾವದವರಲ್ಲಿಯೂ ಅಸ್ವಾಭಾವಿಕ ಧರ್ಮಬುದ್ಧಿ ಹರಿಗುರುಭಕ್ತಿಮುಂತಾದವು ಕಂಡುಬರಬಹುದು. ಹರಿಭಕ್ತಿಸ್ವಲ್ಪವಿದ್ದರೂ ದುರ್ಗತಿಯುಂಟಾಗದು. ಆದರೆ,
>
> 'ಶೃಣ್ವೇ ವೀರಮುಗ್ರಮುಗ್ರಂ ದಮಾಯನ್'
>
> 'ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ'
>
> -ಎಂದು ಶ್ರುತಿಸ್ಮೃತಿಗಳು ಸಾರುವಂತೆ ಅಸುರರಿಗೆ ಅಂಧಂತಮಸ್ಸೇ ಗತಿ ಎಂದು ಹರಿಯೆ ನಿಯಮ ಮಾಡಿದ್ದಾನೆ. ಈಗ ಅಸುರ ಸ್ವಭಾವದ ರಾಜರು ಬ್ರಾಹ್ಮಣೋತ್ತಮರ ಉಪದೇಶದ ಪ್ರಭಾವದಿಂದ ವಿಷ್ಣುಭಕ್ತಿ ಸಂಪಾದಿಸಿ ತಮಃಪ್ರಾಪ್ತಿಯಾಗುವುದನ್ನು ತಪ್ಪಿಸಿಕೊಂಡರೆ ಶ್ರುತಿಸ್ಮೃತಿಗಳು ಅಪ್ರಮಾಣವೆಂದಾದೀತು ಎಂಬುದು ದೇವತೆಗಳ ದುಗುಡ.[1]

---

1. ವಂಶೋಚಿತಪುರೋಹಿತಾ ವಂಶಾನುಸಾರೇಣ ಮಂತ್ರಂ ಪಾಠಯಂತಿ। ತದಾ 'ವಿಷ್ಣು ಪ್ರೇರಣಯಾ ವಿಷ್ಣುಪ್ರೀತ್ಯರ್ಥಮಿ'ತ್ಯೇವ ಸರ್ವಕರ್ಮಾಣ್ಯಾರಭಂತೇ। ಅಂತೇ 'ನಾರಾಯಣಾಯೇತಿ ಸಮರ್ಪಯೇತ್ತತ್' ಇತಿ ವಚನಾತ್ 'ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತೀ'ತಿ ಮಂತ್ರಬಲಾಚ್ಚ ಕೃಷ್ಣೇ ಸಮರ್ಪಣಮಪಿ ಕುರ್ವಂತಿ। 'ಅಮುಕ ಶರ್ಮಾಹಂ ಭೋ ಅಭಿವಾದಯೇ' ಇತಿ ಹರಿಂ ಗುರುಂ ಚ ನಮಸ್ಕುರ್ವತೇ। ದೇವರ್ಷಿ ಪಿತ್ರಾದೀನಾಂ ತರ್ಪಣಂ ಚ ಕುರ್ವಂತಿ। ಅತಃ ಸಂಸರ್ಗೋಪಾಧೀನಾ ಧರ್ಮೇ ಮತಿರಪಿ ಜಾಯತೇ। ಹರಾವೀಷದ್ ಭಕ್ತಿರಪಿ ಭವತಿ। ಏವಂ ಧರ್ಮರತಾನಾಂ ಈಷದ್ ಭಕ್ತಿರತಾನಾಂ ಚಾಂಧಂತಮೋ ಭವಿತುಂ ನಾರ್ಹತಿ। ಕಿಂತು ಪರಂ ಪದಮೇವ ಭವೇತ್। ತಥಾಚ 'ಶೃಣ್ವೇ ವೀರಮುಗ್ರಮುಗ್ರಂ ದಮಾಯನ್' ಇತ್ಯಾದಿ ಶ್ರುತೀನಾಂ 'ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮಿ'ತ್ಯಾದಿಸ್ಮೃತೀನಾಂ ಚಾಪ್ರಾಮಾಣ್ಯಂ ಸ್ಯಾದಿತಿ ವಾಕ್ಯ ಸಮುದಾಯಸ್ಯಾಭಿಪ್ರಾಯಃ। ತ್ವದ್ಭಕ್ತಿರಪ್ಯೇಷು ಹೀತ್ಯತ್ರ ಹಿಶಬ್ದೇನ ಸ್ಫಟಿಕೇ ಜಪಾಕುಸುಮೋಪಾಧೇರಿವ ಸತ್ಸಮಾಗಮೋಪಾಧೇರಪಿ ಶಕ್ತಿಃ ಪ್ರಸಿದ್ಧೇತಿ ಸೂಚಯತಿ॥
   -ವಾದಿರಾಜೀಯ

ಧರ್ಮಸ್ಯ ಮಿಥ್ಯಾತ್ವಭಯಾದ್ ವಯಂತ್ವಾ-
ಮಥಾಪಿ ವಾ ದೈತ್ಯಶುಭಾಪ್ತಿಭೀಷಾ।
ಸಂಪ್ರಾರ್ಥಯಾಮೋ ದಿತಿಜಾನ್ ಸುಕರ್ಮಣ-
ಸ್ತ್ವದ್ಭಕ್ತಿತಶ್ಚಾಲಯಿತುಂ ಚ ಶೀಘ್ರಮ್ ॥ ೧೯೮ ॥

ಪುಣ್ಯಕರ್ಮ ವ್ಯರ್ಥವಾದೀತೆಂಬ ಭಯದಿಂದ ದೈತ್ಯರಿಗೆ ಸದ್ಗತಿಯಾದೀತೆಂಬ ಭಯದಿಂದಲೂ ನಾವು ನಿನ್ನನ್ನು ಪ್ರಾರ್ಥಿಸುತ್ತೇವೆ. ಈ ದೈತ್ಯರನ್ನು ಬೇಗನೆ ಸತ್ಕರ್ಮದಿಂದಲೂ ನಿನ್ನ ಭಕ್ತಿಯಿಂದಲೂ ಚ್ಯುತರನ್ನಾಗಿ ಮಾಡು' ಎಂದು.

ಪುಣ್ಯಕರ್ಮ ಮಾಡುವ ದೈತ್ಯರಿಗೆ ಉತ್ತಮ ಲೋಕ ಕೊಡದಿದ್ದರೆ ಆ ಪುಣ್ಯಕರ್ಮ ವ್ಯರ್ಥ. ಕೊಟ್ಟರೆ ದೈತ್ಯರಿಗೆ ತಮಸ್ಸೆಂಬ ನಿಯಮ ಸುಳ್ಳಾದೀತು. ಹೀಗೆ ಉಭಯ ಸಂಕಟ. ಆದಕ್ಕೆ ನೀನು ಕೃಷ್ಣಾವತಾರ ಸಮಯದಲ್ಲಿಯೆ 'ನಿನ್ನನ್ನು ಕೊಲ್ಲುವವ ಗೋಕುಲದಲ್ಲಿ ಹುಟ್ಟಿದ್ದಾನೆ' ಎನ್ನುವ ದುರ್ಗಾ ವಚನದ ಮೂಲಕ ಕಂಸಾದಿಗಳಿಗೆ ನಿನ್ನಲ್ಲಿ ದ್ವೇಷ ಹುಟ್ಟಿಸಿ ಭಕ್ತಿಲೇಶವನ್ನೂ ನಾಶಪಡಿಸುವಿ. ಎಲ್ಲೆಡೆ ಶಿಶುಹತ್ಯೆ ಮಾಡಿಸಿ ಪೂತನಾದಿಗಳ ಧರ್ಮಾ ಸಕ್ತಿಯನ್ನು ನಾಶಪಡಿಸುವಿ. ಅವರಿಂದ ಬಹುಪಾಪಕರ್ಮಗಳನ್ನು ಜಾಣ್ಮೆ ಯಿಂದಲೆ ಮಾಡಿಸುವಿ. ಬಳಿಕ ಅವರಿಗೆ ತಮಸ್ಸನ್ನು ನೀಡುವಿ. ಅದರಿಂದ ಪುಣ್ಯಕರ್ಮ ವ್ಯರ್ಥವಾಗುವುದೂ ಇಲ್ಲ. ದೈತ್ಯರಿಗೆ ತಮಸ್ಸಿನ ನಿಯಮ ತಪ್ಪು ವುದೂ ಇಲ್ಲ. ಅದರಿಂದ ನಿನ್ನನ್ನೆ ಪ್ರಾರ್ಥಿಸುವೆವು ಎನ್ನುತ್ತಾರೆ ದೇವತೆಗಳು.[1]

ಕಂಸನ ಉತ್ಪತ್ತಿ

ಯ ಉಗ್ರಸೇನಃ ಸುರಗಾಯಕಃ ಸ
ಜಾತೋ ಯದುಷ್ವೇವ ತಥಾಭಿಧೇಯಃ।
ತವೈವ ಸೇವಾರ್ಥಮಮುಷ್ಯ ಪುತ್ರೋ
ಜಾತೋಽಸುರಃ ಕಾಲನೇಮಿಃ ಸ ಈಶ ॥ ೧೯೯ ॥

ಪ್ರಭು, ಉಗ್ರಸೇನನೆಂಬ ದೇವತೆಗಳ ಗಾಯಕ ನಿನ್ನ ಸೇವೆಗಾಗಿ ಯದುವಂಶದಲ್ಲಿ

---

1. ಧರ್ಮಸ್ಯ ಮಿಥ್ಯಾತ್ವ ಭಯಾದಿತ್ಯತ್ರ ಮಿಥ್ಯಾತ್ವಂ ವೃಥಾತ್ವಂ। ಧರ್ಮಸ್ಯ ಫಲಾದಾನೇ ವೈಯರ್ಥ್ಯಂಸ್ಯಾತ್। ಫಲದಾನೇ ದೈತ್ಯಾನಾಂ ಶುಭಗತಿಃ ಸ್ಯಾದಿತಿ ಉಭಯತಃ ಪಾಶಾರಜ್ಜುರಿತಿ ಭಾವಃ। ತ್ವಂತು ಕೃಷ್ಣಾವತಾರ ಸಮಯ ಏವ 'ತವ ಮೃತ್ಯು ರ್ಗೋಕುಲೇ ಜಾತ' ಇತಿ ದುರ್ಗಾವಚನೇನ ಸ್ವಸ್ಮಿನ್ ದ್ವೇಷ ಮುತ್ಪಾದ್ಯ ಕಂಸಾದೀನಾಂ ಭಕ್ತಿಲೇಶಮಪಿ ನಾಶಯಿಷ್ಯಸಿ। ಪೂತನಾದೀನಾಂ ಗ್ರಾಮೇ ಗ್ರಾಮೇ ಶಿಶೂನಾಂ ಹಿಂಸಾದಾವತಿದೇಶೇನ ಪ್ರಾಕ್ತನ ಧರ್ಮರತಿಂ ಚ ನಾಶಯಿಷ್ಯಸಿ। ಬಹ್ವಧರ್ಮ ಸಂಪಾದನಂ ಚ ಸ್ವಕೌಶಲೇನೈವ ಕಾರಯಿಷ್ಯಸೀತಿ ಭಾವೇನ ಸುಕರ್ಮಣಸ್ತ್ವದ್ಭಕ್ತಿತಶ್ಚ ದಿತಿಜಾನ್ ಶೀಘ್ರಂ ಚಾಲಯಿತುಂ ತ್ವಾಮೇವ ಸಂಪ್ರಾರ್ಥಯಾಮ ಇತ್ಯಾಹುಃ। -ವಾದಿರಾಜೀಯ

ಅದೇ ಹೆಸರಿನಿಂದ ಹುಟ್ಟಿದ್ದಾನೆ. ಅವನ ಮಗನಾಗಿ ಆ ಅಸುರ ಕಾಲನೇಮಿ ಹುಟ್ಟಿದ್ದಾನೆ.

ಯಸ್ತ್ವತ್ಪ್ರಿಯಾರ್ಥಂ ನ ಹತೋ ಹಿ ವಾಯುನಾ ಭವತ್ ಪ್ರಸಾದಾತ್ ಪರಮೀಶಿತಾಪಿ।
ಸ ಏಷ ಭೋಜೇಷು ಪುನಶ್ಚ ಜಾತೋ ವರಾದುಮೇಶಸ್ಯ ಪರೈರಜೇಯಃ ॥ ೨೦೦ ॥

ಮುಖ್ಯಪ್ರಾಣ ನಿನ್ನ ಅನುಗ್ರಹದಿಂದ ಸಮರ್ಥನೆ ಆಗಿದ್ದರೂ ನಿನ್ನ ಪ್ರೀತಿಗಾಗಿ ಯಾರನ್ನು ಕೊಲ್ಲಲಿಲ್ಲವೋ ಆ ಕಾಲನೇಮಿ ಕಂಸನಾಗಿ ಯದುವಂಶದಲ್ಲಿ ಪುನಃ ಹುಟ್ಟಿದ್ದಾನೆ. ಶಿವವರದಿಂದ ಪರರಿಗೆ ಅಜೇಯನೆನಿಸಿದ್ದಾನೆ.

ಸ ಔಗ್ರಸೇನೇ ಜನಿತೋಽಸುರೇಣ
ಕ್ಷೇತ್ರೇ ಹಿ ತದ್ರೂಪಧರೇಣ ಮಾಯಯಾ।
ಗಂಧರ್ವಜೇನ ದ್ರಮಿಲೇನ ನಾಮ್ನಾ
ಕಂಸೋ ಜಿತೋ ಯೇನ ವರಾಚ್ಛಚೀಪತಿಃ ॥ ೨೦೧ ॥

ಗಂಧರ್ವ ಕುಲದಲ್ಲಿ ಹುಟ್ಟಿದ ದ್ರಮಿಲನೆಂಬ ಹೆಸರಿನ ಅಸುರ ಮಾಯೆಯಿಂದ ಉಗ್ರಸೇನನ ರೂಪ ಧರಿಸಿ ಅವನ ಪತ್ನಿಯನ್ನು ಕೂಡಿದಾಗ ಉತ್ಪಾದಿಸಲ್ಪಟ್ಟವನು ಈ ಕಂಸ. ವರಬಲದಿಂದ ಇಂದ್ರನನ್ನು ಪರಾಭವಗೊಳಿಸಿದವ.

ದ್ರಮಿಲನೂ ಸೌಭಪತಿ, ರಾಜ, ಉಗ್ರಸೇನನ ಮಡದಿ ಋತುಸ್ನಾತಳಾಗಿ ಪತಿ ಸಮಾಗಮ ಬಯಸಿದ್ದಾಗ ಈತ ಪತಿಯ ಆಕಾರ ತಳೆದು ಬಂದು ವಂಚಿಸಿದ. ಮುಂದೆ ಹುಟ್ಟುವ ಮಗುವಿಗೆ ಕಂಸನೆಂದು ನಾಮಕರಣವನ್ನು ಮಾಡಿದ. ರಾಣಿ ಕುಪಿತಳಾಗಿ ನೀನು ಹುಟ್ಟಿಸಿದ ಮಗುವನ್ನು ಮುಂದೆ ನನ್ನ ಪತಿಕುಲದಲ್ಲಿ ಹುಟ್ಟುವ ಸಂತತಿಯೇ ನಾಶಮಾಡುವನೆಂದು ಶಪಿಸಿದಳು. ಹೀಗೆ ಕಂಸ ಕೃಷ್ಣನಿಂದ ಹತನಾಗಲು ಮಾತೃಶಾಪವೂ ಕಾರಣವಾಯಿತು. ದ್ರುಮಿಲನೆಂದೂ ಈ ಗಂಧರ್ವನಿಗೆ ಹೆಸರಿದೆ.

ಕಂಸನಿಗೆ ಜನ್ಮಪ್ರಭೃತಿ ಕೃಷ್ಣದ್ವೇಷ ಉಂಟಾಗಲು ಜನ್ಮಶುದ್ಧಿ ಇಲ್ಲದ್ದೂ ಕಾರಣ.

ಜಿತ್ವಾ ಜಲೇಶಂ ಚ ಹೃತಾನಿ ಯೇನ ರತ್ನಾನಿ ಯಕ್ಷಾಶ್ಚ ಜಿತಾಃ ಶಿವಸ್ಯ।
ಕನ್ಯಾವನಾರ್ಥಂ ಮಗಧಾಧಿಪೇನ ಪ್ರಯೋಜಿತಾಸ್ತೇ ಚ ಹೃತೇ ಬಲೇನ ॥ ೨೦೨ ॥

ಕಂಸ ಸಮುದ್ರರಾಜನನ್ನು ಗೆದ್ದು ಅವನಿಂದ ರತ್ನಗಳನ್ನು ಅಪಹರಿಸಿದ. ಮಗಧ ರಾಜನಾದ ಜರಾಸಂಧನಿಂದ ತನ್ನ ಕನ್ಯೆಯರ ರಕ್ಷಣೆಗಾಗಿ ನೇಮಿಸಲ್ಪಟ್ಟಿದ್ದ ಶಿವನ ಯಕ್ಷರನ್ನೂ ಗೆದ್ದ. ಬಲಾತ್ಕಾರದಿಂದ ಆ ಕನ್ಯೆಯರನ್ನೂ ಅಪಹರಿಸಿದ.

ಜರಾಸಂಧನ ಹುಟ್ಟು

ಸ ವಿಪ್ರಚಿತ್ತಿಶ್ಚ ಜರಾಸುತೋಽಭೂದ್-
ವರಾದ್ ವಿಧಾತುರ್ಗಿರಿಶಸ್ಯ ಚೈವ।
ಸರ್ವೈರಜೇಯೋ ಬಲಮುತ್ತಮಂ ತದ್
ಜ್ಞಾತ್ವೈವ ಕಂಸಸ್ಯ ಮುದಾ ಸುತೇ ದದೌ ॥ ೨೦೩ ॥

ಜರಾಸಂಧ ಹಿಂದೆ ವಿಪ್ರಚಿತ್ತಿಯಾಗಿದ್ದ. ಅವನು ಬ್ರಹ್ಮನ ಮತ್ತು ಶಿವನ ವರದಿಂದ ಸರ್ವರಿಗೂ ಅಜೇಯ. ಕಂಸನ ಉತ್ತಮವಾದ ಬಲವನ್ನು ತಿಳಿದೇ ಅವನಿಗೆ ಕನ್ಯೆಯರನ್ನು ಕೊಟ್ಟ

ಆಸ್ತಿ ಪ್ರಾಸ್ತಿ ಎಂಬ ಇಬ್ಬರು ಹೆಣ್ಣುಮಕ್ಕಳನ್ನು ಬಲಾತ್ಕಾರದಿಂದ ಅಪಹರಿಸಿದ. ಕಂಸನಿಗೆ ಅವನ ಪರಾಕ್ರಮಕ್ಕೆ ಮೆಚ್ಚಿ ಜರಾಸಂಧ ತಾನೆ ಅವರನ್ನು ಮದುವೆ ಮಾಡಿಕೊಟ್ಟ.

ನಿವಾರಯಾಮಾಸ ಕಂಸಮುದ್ಧತಂ
ಶಕ್ತೋಽಪಿ ಯೋ ಯಸ್ಯ ಬಲೇ ನ ಕಶ್ಚಿತ್ ।
ತುಲ್ಯಃ ಪೃಥಿವ್ಯಾಂ ವಿವರೇಷು ವಾ ಕ್ವಚಿತ್
ವಶೇ ಬಲಾಢ್ಯೋ ನೃಪತೀಂಶ್ಚ ಚಕ್ರೇ ॥ ೨೦೪ ॥

ಜರಾಸಂಧನಿಗೆ ಬಲದಲ್ಲಿ ಸಮಾನನು ಭೂಮಿಯಲ್ಲಾಗಲಿ ಪಾತಾಳಗಳಲ್ಲಾಗಲಿ ಎಲ್ಲಿಯೂ ಯಾರೂ ಇರಲಿಲ್ಲ. ಬಲಾಢ್ಯನಾದ ಆತ ರಾಜರನ್ನು ವಶ ಮಾಡಿಕೊಂಡ. ಹೀಗೆ ಶಕ್ತನಾಗಿದ್ದರೂ ಆತ ಉದ್ಧತನಾದ ಕಂಸನನ್ನು ತಡೆಯಲಿಲ್ಲ.

ಹಂಸ ಡಿಭಿಕರ ಉತ್ಪತ್ತಿ

ಹತೌ ಪುರಾ ಯೌ ಮಧುಕೈಟಭಾಖ್ಯೌ ತ್ವಯೈವ ಹಂಸೋ ಡಿಭಿಕಶ್ಚ ಜಾತೌ।
ವರಾದಜೇಯೌ ಗಿರಿಶಸ್ಯ ವೀರೌ ಭಕ್ತೌಜರಾಸಂಧಮನುಸ್ಮೃತೌ ಶಿವೇ ॥ ೨೦೫ ॥

ನಿನ್ನಿಂದ ಹಿಂದೆ ಹತರಾದ ಮಧು ಕೈಟಭರೆಂಬ ಹೆಸರಿನ ಅಸುರರೇ **ಹಂಸ ಮತ್ತು ಡಿಭಿಕರಾಗಿ** ಹುಟ್ಟಿದರು. ಶಿವನ ವರದಿಂದ ಅಜೇಯರು, ವೀರರು, **ಜರಾಸಂಧನ** ಅನಂತರದ ಮುಖ್ಯ ಶಿವಭಕ್ತರು.

ಹರಿ ಹಯಗ್ರೀವಾವಾತಾರದಲ್ಲಿ ವೇದಾಪಹಾರಿಗಳಾದ **ಮಧುಕೈಟಭರನ್ನು** ಸಂಹರಿಸಿದ್ದ. ಅವರೇ ಹಂಸ ಡಿಭಿಕರಾಗಿ ಹುಟ್ಟಿ ಮಹಾ **ಶಿವಭಕ್ತರೆನಿಸಿದರು.** ಶಿವಭಕ್ತರಲ್ಲಿ ಜರಾಸಂಧನ ಅನಂತರದ ಸ್ಥಾನ ಇವರದೇ.

ಅನ್ಯೇಽಪಿ ಭೂಮಾವಸುರಾಃ ಪ್ರಜಾತಾ-
ಸ್ತ್ವಯಾ ಹತಾ ಯೇ ಸುರದೈತ್ಯಸಂಗರೇ।
ಅನ್ಯೇ ತಥೈವಾಂಧತಮಃ ಪ್ರಪೇದಿರೇ
ಕಾರ್ಯಾ ತಥೈಷಾಂ ಚ ತಮೋ ಗತಿಸ್ತ್ವಯಾ ॥ ೨೦೬ ॥

ದೇವಾಸುರ ಸಂಗ್ರಾಮದಲ್ಲಿ ನಿನ್ನಿಂದ ಹತರಾದ ಬೇರೆ ಹಲವು ಅಸುರರು ಭೂಮಿಯಲ್ಲಿ ಹುಟ್ಟಿರುವರು. ಇನ್ನು ಹಲವರು ಹಾಗೇ ತಮಸ್ಸನ್ನು ಪಡೆದಿರುವರು. ಭೂಮಿಯಲ್ಲಿ ಹುಟ್ಟಿದ ಈ ಅಸುರರಿಗೂ ತಮಸ್ಸು ದೊರೆಯುವಂತೆ ನೀನು ಮಾಡಬೇಕು.

ದುರ್ಯೋಧನ ಮುಂತಾದವರು ಹುಟ್ಟಬೇಕು

ವ್ಯಾಸಾವತಾರೇ ನಿಹತಸ್ತ್ವಯಾ ಯಃ ಕಲಿಃ ಸುಶಾಸ್ತ್ರೋಕ್ತಿಭಿರೇವ ಚಾದ್ಯ।
ಶ್ರುತ್ವಾತ್ವದುಕ್ತೀಃ ಪುರುಷೇಷು ತಿಷ್ಠನ್ನೀಷಚ್ಚಕಾರೇವ ಮನಸ್ತ್ವಯೀಶ ॥ ೨೦೭ ॥

ಪ್ರಭು, ವ್ಯಾಸಾವತಾರದಲ್ಲಿ ಸಚ್ಛಾಸ್ತ್ರವಚನಗಳಿಂದ ನೀನು ಕೊಂದಿರುವ ಕಲಿ ಈಗ ಜನರಲ್ಲಿ ನಿಂತು ನಿನ್ನ ಉಪದೇಶಗಳನ್ನು ಕೇಳಿ ನಿನ್ನಲ್ಲಿ ಸ್ವಲ್ಪ ಆದರ ಮಾಡುವವನಂತೆ ಕಾಣುತ್ತಾನೆ.

ವೇದವ್ಯಾಸರು ಸಚ್ಛಾಸ್ತ್ರಗಳ ಮೂಲಕ ವಿಪರೀತ ಜ್ಞಾನವನ್ನು ನಾಶ ಮಾಡಿದ್ದರಿಂದ ಕಲಿ ವಿಪರೀತಜ್ಞಾನವನ್ನು ದೃಢಪಡಿಸಲು ಶಕ್ತನಾಗಲಿಲ್ಲ. ಸಜ್ಜನರೊಳಗಿದ್ದು ಅವರು ಮಾಡುವ ಬ್ರಹ್ಮಸೂತ್ರಾದಿ ಅಧ್ಯಯನದಿಂದ ತತ್ವದ ಬಗ್ಗೆ ಸಂಶಯ ಮಾತ್ರವನ್ನೇ ಮಾಡಿದ. ಅದರಿಂದ ಅವನಿಗೆ ತಮಸ್ಸು ಸಿಗಲಾರದು. ಇನ್ನು ಉಳಿದ ದೈತ್ಯರ ಬಗ್ಗೆ ಏನು ಹೇಳಬೇಕು? ದುರ್ಯೋಧನನಾಗಿ ಕಲಿ ಹುಟ್ಟಬೇಕು. ಮುಖ್ಯಪ್ರಾಣ ಭೀಮನಾಗಿ ಬಂದು ಗದೆಯಿಂದ ಅವನನ್ನು ಕೊಲ್ಲಬೇಕು. ಅದರಿಂದ 'ಹರಿ, ನೀನೆ ಕೊಲ್ಲಬೇಕೆ' ದು ದೇವತೆಗಳು ಪ್ರತ್ಯೇಕ ಕೇಳಿಕೊಳ್ಳಲಿಲ್ಲ.

ರಾಮಾತ್ಮನಾ ಯೇ ನಿಹತಾಶ್ಚ ರಾಕ್ಷಸಾ ದೃಷ್ಟ್ವಾ ಬಲಂ ತೇಽಪಿ ತದಾ ತವಾದ್ಯ।
ಸಮಂ ತವಾನ್ಯಂ ನ ಹಿ ಚಿಂತಯಂತಿ ಸುಪಾಪಿನೋಽಪೀಶ ತಥಾ ಹನೂಮತಃ॥೨೦೮॥

ರಾಮನಾಗಿ ನೀನು ಕೊಂದ ರಾಕ್ಷಸರು ಅತ್ಯಂತ ಪಾಪಿಷ್ಠರಾದರೂ ನಿನ್ನ ಮತ್ತು ಹನುಮಂತನ ಬಲವನ್ನು ಪ್ರತ್ಯಕ್ಷ ಕಂಡ ಬಳಿಕ ಈಗ ನಿನಗೆ ಸಮನಾಗಿ ಬೇರೆ ಯಾರನ್ನೂ ಕಾಣುವುದಿಲ್ಲ. ಹನುಮಂತನಿಗೆ ಸಮನಾಗಿಯೂ ಯಾರನ್ನೂ ಕಾಣುವುದಿಲ್ಲ.

ಯೇ ಕೇಶವ ತ್ವದ್ಬಹುಮಾನಯುಕ್ತಾ-
ಸ್ತಥೈವ ವಾಯೌ ನ ಹಿ ತೇ ತಮೋಂಧಮ್ ।
ಯೋಗ್ಯಾಃ ಪ್ರವೇಷ್ಟುಂ ತದತೋ ಹಿ ಮಾರ್ಗಾ-
ಚ್ಚಾಲ್ಯಾಸ್ತ್ವಯಾ ಜನಯಿತ್ವೈವ ಭೂಮೌ ॥ ೨೦೯ ॥

ಹೇ ಕೇಶವ, ಯಾರು ನಿನ್ನಲ್ಲಿಯೂ ಮುಖ್ಯಪ್ರಾಣನಲ್ಲಿಯೂ ಮಹತ್ತ್ವ ಬುದ್ಧಿ ಉಳ್ಳವರಾಗಿರುವರೊ ಅವರು ಅಂಧಂತಮಸ್ಸನ್ನು ಪ್ರವೇಶಿಸಲು ಅರ್ಹರಾಗುವುದಿಲ್ಲ ಅದರಿಂದ ನೀನು ಅವರನ್ನು ಭೂಮಿಯಲ್ಲಿ ಹುಟ್ಟಿಸಿ ಸನ್ಮಾರ್ಗದಿಂದ ಭ್ರಷ್ಟರನ್ನಾಗಿ ಮಾಡಬೇಕು.

ನಿತಾಂತಮುತ್ಪಾದ್ಯ ಭವದ್ವಿರೋಧಂ
ತಥೈವ ವಾಯೌ ಬಹುಭಿಃ ಪ್ರಕಾರೈಃ।
ಸರ್ವೇಷು ದೇವೇಷು ಚ ಪಾತನೀಯಾ-
ಸ್ತಮಸ್ಯಥಾಂಧೇ ಕಲಿಪೂರ್ವಕಾಸುರಾಃ ॥ ೨೧೦ ॥

ನಿನ್ನಲ್ಲಿಯೂ ವಾಯುವಿನಲ್ಲಿಯೂ ಎಲ್ಲ ದೇವತೆಗಳಲ್ಲಿಯೂ ನಾನಾ ಬಗೆಗಳಿಂದ ತೀವ್ರ ವಿರೋಧ ಹುಟ್ಟಿಸಿ ಬಳಿಕ ಆ ಕಲಿ ಮುಂತಾದ ಅಸುರರನ್ನು ಅಂಧಂತಮಸ್ಸಿನಲ್ಲಿ ಬೀಳಿಸಬೇಕು.

ಶಿಶುಪಾಲ ದಂತವಕ್ರರು

ಹತೌ ಚ ಯೌ ರಾವಣಕುಂಭಕರ್ಣೌ
ತ್ವಯಾ ತ್ವದೀಯೌ ಪ್ರತಿಹಾರಪಾಲೌ।
ಮಹಾಸುರಾವೇಶ ಯುತೌ ಹಿ ಶಾಪಾತ್
ತ್ವಯೈವ ತಾವದ್ಯ ವಿಮೋಚನೀಯೌ ॥ ೨೧೧ ॥

ನಿನ್ನ ದ್ವಾರಪಾಲಕರಾದ ಜಯವಿಜಯರು ಶಾಪದಿಂದ ಮಹಾಸುರವೇಶಯುಕ್ತರಾಗಿ ರಾವಣ ಕುಂಭಕರ್ಣರಾಗಿ ಹುಟ್ಟಿ ನಿನ್ನಿಂದ ಹತರಾದರು. ಈಗ ಶಿಶುಪಾಲ ದಂತವಕ್ರರಾಗಿ ಹುಟ್ಟಿರುವ ಅವರಿಗೆ ನಿನ್ನಿಂದಲೆ ಶಾಪವಿಮೋಚನೆಯಾಗಬೇಕು.

ಯೌ ತೌ ತವಾರೀಹ ತಯೋಃ ಪ್ರವಿಷ್ಟೌ
ದೈತ್ಯೌ ತು ತಾವಂಧತಮಃ ಪ್ರವೇಶ್ಯೌ।
ಯೌ ತೌ ತ್ವದೀಯೌ ಭವದೀಯವೇಶ್ಮ
ತ್ವಯಾ ಪುನಃ ಪ್ರಾಪಣೀಯೌ ಪರೇಶ ॥ ೨೧೨ ॥

ಪರಮೇಶ್ವರ, ಅವರಲ್ಲಿ ಆವಿಷ್ಟರಾದ ನಿನ್ನ ವೈರಿಗಳಾದ ಹಿರಣ್ಯಕಶಿಪು

ಹಿರಣ್ಯಾಕ್ಷರೆಂಬ ದೈತ್ಯರಿಗೆ ಅಂಧಂತಮಸ್ಸಿನಲ್ಲಿ ಪ್ರವೇಶವಾಗಬೇಕು. ನಿನ್ನ ಭಕ್ತರಾದ ಜಯವಿಜಯರಿಗೆ ಪುನಃ ನಿನ್ನ ಮಂದಿರ ಪ್ರಾಪ್ತಿಯೂ ಆಗಬೇಕು.

ಸಾಲ್ವನ ಉತ್ಪತ್ತಿ

ಆವಿಶ್ಯ ಯೋ ಬಲಿಮಂಜಶ್ಚಕಾರ
ಪ್ರತೀಪಮಸ್ಮಾಸು ತಥಾ ತ್ವಯೀಶ।
ಸ ಚಾಸುರೋ ಬಲಿನಾಮೈವ ಭೂಮೌ
ಸಾಲ್ವೋ ನಾಮ್ನಾ ಬ್ರಹ್ಮದತ್ತಸ್ಯ ಜಾತಃ ॥ ೨೧೩ ॥

ಬಲಿಚಕ್ರವರ್ತಿಯಲ್ಲಿ ಚೆನ್ನಾಗಿ ಆವಿಷ್ಟನಾಗಿ ಅವನನ್ನು ನಿನ್ನಲ್ಲಿಯೂ ನಮ್ಮಲ್ಲಿಯೂ ವಿರೋಧಿಯನ್ನಾಗಿ ಮಾಡಿದ್ದ ಬಲಿ ಎಂದೆ ಹೆಸರುಳ್ಳ ಅಸುರ ಸಾಲ್ವ ಎಂಬ ಹೆಸರಿನಿಂದ ಬ್ರಹ್ಮದತ್ತನ ಮಗನಾಗಿ ಜನಿಸಿದ್ದಾನೆ.

ಶಾಲ್ವ ಎಂದೂ ಇವನಿಗೆ ಹೆಸರು. ಶಾಲ್ವದೇಶದ ರಾಜನಾದ್ದರಿಂದ ಆ ಹೆಸರು ಬಂದಿತು.

ಮಾಯಾಮಯಂ ತೇನ ವಿಮಾನಮಗ್ರ್ಯ-
ಮಭೇದ್ಯಮಾಪ್ತಂ ಸಕಲೈರ್ಗಿರೀಶಾತ್।
ವಿದ್ರಾವಿತೋ ಯೋ ಬಹುಶಸ್ತ್ವಯೈವ
ರಾಮಸ್ವರೂಪೇಣ ಭೃಗೂದ್ವಹೇನ ॥ ೨೧೪ ॥

ಭೃಗುಕುಲದಲ್ಲಿ ಅವತರಿಸಿದ ಪರಶುರಾಮ ರೂಪಿಯಾದ ನಿನ್ನಿಂದಲೆ ಅನೇಕ ಬಾರಿ ಓಡಿಸಲ್ಪಟ್ಟ ಆ ಸಾಲ್ವಸರ್ವರಿಗೂ ಅಭೇದ್ಯವಾದ ಮಾಯಾಮಯವಾದ ಶ್ರೇಷ್ಠವಿಮಾನವನ್ನು ರುದ್ರನಿಂದ ಪಡೆದಿದ್ದಾನೆ.

ರುದ್ರನನ್ನು ತಪಸ್ಸಿನಿಂದ ಒಲಿಸಿಕೊಂಡು ಸೌಭವೆಂಬ ವಿಮಾನವನ್ನು ಸಾಲ್ವ ಪಡೆದ. ಈ ವಿಮಾನ ವಸ್ತುತ, ಒಂದು ನಗರ ಆಕಾಶದಲ್ಲಿ ವಿಮಾನದಂತೆ ಸಂಚರಿಸುವುದರಿಂದ ವಿಮಾನವೆನಿಸಿತು. ಮುಂದೆ ಶ್ರೀಕೃಷ್ಣ ಸುದರ್ಶನ ಚಕ್ರದಿಂದ ಮಾಯಾಮಯವಾದ ಈ ವಿಮಾನವನ್ನು ಧ್ವಂಸ ಮಾಡಿದ.

ನಾಸೌ ಹತಃ ಶಕ್ತಿಮಾತಾಪಿ ತತ್ರ ಕೃಷ್ಣಾವತಾರೇ ಸ ಮಯೈವ ವಧ್ಯಃ।
ಇತ್ಯಾತ್ಮಸಂಕಲ್ಪಮೃತಂ ವಿಧಾತುಂ ಸ ಚಾತ್ರ ವಧ್ಯೋ ಭವತಾತಿಪಾಪೀ ॥ ೨೧೫ ॥

'ಸಾಲ್ವ ನನ್ನಿಂದ ಕೃಷ್ಣಾವತಾರದಲ್ಲಿಯೆ ಹತನಾಗಬೇಕು' ಎಂಬ ತನ್ನ ಸಂಕಲ್ಪವನ್ನು ಸತ್ಯವನ್ನಾಗಿ ಮಾಡಲೆಂದೇ ಪರಶುರಾಮಾವತಾರದಲ್ಲಿ ಶಕ್ತನಾಗಿದ್ದರೂ ನೀನು ಅವನನ್ನು

ಕೊಲ್ಲಲಿಲ್ಲ. ಅದರಿಂದ ಅತಿ ಪಾಪಿಯಾದ ಅವನು ಈಗ ಕೃಷ್ಣಾವತಾರದಲ್ಲಿ ನಿನ್ನಿಂದ ಹತನಾಗಬೇಕು.

ಯದೀಯಮಾರುಹ್ಯ ವಿಮಾನಮಸ್ಯ ಪಿತಾಭವತ್ ಸೌಭಪತಿಶ್ಚನಾಮ್ನಾ।
ಯದಾ ಸ ಭೀಷ್ಮೇಷ ಜಿತಃ ಪಿತಾಸ್ಯತದಾ ಸ ಸಾಲ್ವಪ್ತಪಸಿ ಸ್ಥಿತೋಽಭೂತ್ ॥ ೨೧೬ ॥

ಸಾಲ್ವನ ವಿಮಾನವನ್ನು ಅವನ ತಂದೆ ಏರಿ 'ಸೌಭಪತಿ' ಎಂದು ಹೆಸರು ಪಡೆದ. ಅವನು ಭೀಷ್ಮನಿಂದ ಪರಾಜಿತನಾದಾಗ ಸಾಲ್ವ ತಪಸ್ಸು ಮಾಡುತ್ತಿದ್ದ.

ಸೌಭ ವಿಮಾನವನ್ನು ತಪಸ್ಸಿನಿಂದ ಸಂಪಾದಿಸಿದವ ಸಾಲ್ವನೆ. ಆದರೆ ಸೌಭಪತಿ ಎಂಬ ಹೆಸರು ಅವನ ತಂದೆಯಾದ ಬ್ರಹ್ಮದತ್ತನಿಗೆ ಬಂದಿತು. ಅದು ಆತ ಆ ವಿಮಾನವನ್ನು ಏರಿದ್ದರಿಂದ.. ಅವನನ್ನು ಭೀಷ್ಮ ಅಂಬೆಯ ಸ್ವಯಂವರ ಕಾಲದಲ್ಲಿ ಸೋಲಿಸಿದ. ಆ ಸಮಯದಲ್ಲಿ ಸಾಲ್ವಸೌಭ ವಿಮಾನಕ್ಕಾಗಿ ತಪಸ್ಸು ಮಾಡುತ್ತಿದ್ದ. ಆಗಲೆ ವಿಮಾನವನ್ನು ಸಂಪಾದಿಸಿ ಆತ ಬಂದಿರುತ್ತಿದ್ದರೆ ಅದನ್ನೇರಿದ ಬ್ರಹ್ಮದತ್ತನನ್ನು ಭೀಷ್ಮನಿಂದ ಸೋಲಿಸಲಾಗುತ್ತಿದ್ದಿಲ್ಲ.

ಸ ಚಾದ್ಯ ತಸ್ಮಾತ್ ನಿವೃತ್ತೋ ಜರಾಸುತಸ್ಯಾನುಮತೇ ಸ್ಥಿತೋ ಹಿ।
ಅನನ್ಯವಧ್ಯೋ ಭವತಾದ್ಯ ವಧ್ಯಃ ಸ ಪ್ರಾಪಣೀಯಶ್ಚತಮಸ್ಯಥೋಗ್ರೇ ॥ ೨೧೭ ॥

ಆ ಸಾಲ್ವ ಈಗ ತಪಸ್ಸನ್ನು ಮುಗಿಸಿ ಜರಾಸಂಧನಿಗೆ ಅನುವರ್ತಿಯಾಗಿದ್ದಾನೆ. ಅನ್ಯರಿಂದ ವಧ್ಯನಾಗದ ಅವನನ್ನು ನೀನೆ ಈಗ ವಧಿಸಬೇಕು. ಬಳಿಕ ಕ್ರೂರ ತಮಸ್ಸಿನಲ್ಲಿ ಹಾಕಬೇಕು.

ಕೀಚಕನ ಉತ್ಪತ್ತಿ

ಯೋ ಬಾಣಮಾವಿಶ್ಯ ಮಹಾಸುರೋಽಭೂತ್ ಸ್ಥಿತಃ ಸ ನಾಮ್ನಾ ಪ್ರಥಿತೋಽಪಿ ಬಾಣಃ।
ಸ ಕೀಚಕೋ ನಾಮ ಬಭೂವ ರುದ್ರವರಾದವಧ್ಯಃ ಸ ತಮಃ ಪ್ರವೇಶ್ಯಃ ॥ ೨೧೮ ॥

ಬಾಣನನ್ನು ಪ್ರವೇಶಿಸಿ ಅವನಲ್ಲಿ ವಾಸವಾಗಿರುವ ಮಹಾಅಸುರ ಬಾಣ ಎಂಬ ಹೆಸರಿನಿಂದಲೆ ಪ್ರಸಿದ್ಧನಾದವ. ಅವನೆ ಕೀಚಕನಾಗಿಯೂ ಹುಟ್ಟಿದ್ದಾನೆ. ರುದ್ರವರದಿಂದ ಅವಧ್ಯನಾಗಿದ್ದಾನೆ. ಅವನನ್ನೂ ತಮಸ್ಸಿನಲ್ಲಿ ಪ್ರವೇಶಗೊಳಿಸಬೇಕು.

ಬಲಿಚಕ್ರವರ್ತಿಯ ಮಗನಾದ ಬಾಣ ಕರ್ಮಜ ದೇವತೆ. ಅವನ ಬುದ್ಧಿಯನ್ನು ಕೆಡಿಸಲು ಬಾಣನೆಂದೇ ಹೆಸರಿನ ಮಹಾ ಅಸುರ ಆವೇಶಗೊಂಡ. ಅವನೆ ಇನ್ನೊಂದು ಅಂಶದಿಂದ ಸ್ವತಃ ಕೀಚಕನಾಗಿಯೂ ಜನಿಸಿದ.

ಅತಸ್ತ್ವಯಾ ಭುವ್ಯವತೀರ್ಯ ದೇವ-
ಕಾರ್ಯಾಣಿ ಕಾರ್ಯಾಣ್ಯಖಿಲಾನಿ ದೇವ।
ತ್ವಮೇವ ದೇವೇಶ ಗತಿಃ ಸುರಾಣಾಂ
ಬ್ರಹ್ಮೇಶಶಕ್ರೇಂದುಯಮಾದಿಕಾನಾಮ್ ॥ ೨೧೯ ॥

ಅದರಿಂದ ದೇವ, ನೀನು ಭೂಮಿಯಲ್ಲಿ ಅವತರಿಸಿ ಎಲ್ಲ ದೇವಕಾರ್ಯಗಳನ್ನೂ ನಡೆಸಿಕೊಡಬೇಕು. 'ಹೇ ದೇವೇಶ, ನೀನೆ ಬ್ರಹ್ಮ ರುದ್ರ ಇಂದ್ರ ಚಂದ್ರ ಯಮಾದಿ ದೇವತೆಗಳಿಗೆ ಆಶ್ರಯ.'

ತ್ವಮೇವ ನಿತ್ಯೋದಿತಪೂರ್ಣಶಕ್ತಿಸ್ತ್ವಮೇವ ನಿತ್ಯೋದಿತಪೂರ್ಣಚಿದ್ಘನಃ।
ತ್ವಮೇವ ನಿತ್ಯೋದಿತಪೂರ್ಣಸತ್ಸುಖಿಸ್ತ್ವದೃಙ್ನಕಶ್ಚಿತ್ಕುತ ಏವ ತೇऽಧಿಕಃ ॥೨೨೦॥

'ನೀನೆ ನಿತ್ಯ ಅಭಿವ್ಯಕ್ತಪೂರ್ಣಶಕ್ತಿ ಉಳ್ಳವ. ನೀನೆ ನಿತ್ಯಾಭಿವ್ಯಕ್ತಪೂರ್ಣ ಜ್ಞಾನ ಸ್ವರೂಪ. ನೀನೆ ನಿತ್ಯಾಭಿವ್ಯಕ್ತಪೂರ್ಣ ನಿರ್ದುಷ್ಟಸುಖ ಉಳ್ಳವ. ನಿನಗೆ ಸದೃಶ ಯಾರೂ ಇಲ್ಲವೆಂದ ಮೇಲೆ ನಿನಗಿಂತ ಶ್ರೇಷ್ಠನಿನ್ನೆಲ್ಲಿ?'

ಇತೀರಿತೋ ದೇವವರೈರುದಾರ-
ಗುಣಾರ್ಣವೋऽಕ್ಷೋಭ್ಯತಮಾಮೃತಾಕೃತಿಃ।
ಉತ್ಥಾಯ ತಸ್ಮಾತ್ ಪ್ರಯಯಾವನಂತ-
ಸೋಮಾರ್ಕಕಾಂತಿದ್ಯುತಿರನ್ವಿತೋऽಮರೈಃ ॥ ೨೨೧ ॥

ಕ್ಷೋಭೆಗೊಳ್ಳಲು ಅತ್ಯಂತ ಅನರ್ಹ ನಾಶರಹಿತ ಸ್ವರೂಪ, ಉತ್ತಮ ಗುಣ ಸಮುದ್ರನಾದ ಹರಿ ದೇವೋತ್ತಮರಿಂದ ಹೀಗೆ ಪ್ರಾರ್ಥಿತನಾಗಿ ಎದ್ದು ಅನಂತ ಚಂದ್ರಸೂರ್ಯರ ಕಾಂತಿದ್ಯುತಿಗಳಂತೆ ಬೆಳಗುತ್ತ ದೇವತೆಗಳೊಂದಿಗೆ ಅಲ್ಲಿಂದ ಹೊರಟ.

ಕಾಂತಿ ಮತ್ತು ದ್ಯುತಿ ಪರ್ಯಾಯ ಪದಗಳು. ಆದರೆ ಚಂದ್ರನದು ಕೋಮಲ ಕಾಂತಿ, ಸೂರ್ಯನದು ಪ್ರಖರ ದ್ಯುತಿ ಎಂದು ವಿವಕ್ಷಿತವಾದ್ದರಿಂದ ಪುನರುಕ್ತಿ ಇಲ್ಲ.

ಮೇರು ಶಿಖರದಲ್ಲಿ ಮಂತ್ರಾಲೋಚನ ಸಭೆ

ಸ ಮೇರುಮಾಪ್ಯಾಹ ಚತುರ್ಮುಖಂ ಪ್ರಭು-
ರ್ಯತ್ರ ತ್ವಯೋಕ್ತೋऽಸ್ಮಿ ಹಿ ತತ್ರ ಸರ್ವಥಾ।
ಪ್ರಾದುರ್ಭವಿಷ್ಯೇ ಭವತೋ ಹಿ ಭಕ್ತ್ಯಾ
ವಶಸ್ತವಾಹಂ ಸ್ವವಶೋऽಪಿ ಚೇಚ್ಛಯಾ ॥ ೨೨೨ ॥

ಪ್ರಭು ಶ್ರೀಹರಿ ಮೇರುವಿಗೆ ಬಂದು ಚತುರ್ಮುಖನಿಗೆ ಹೇಳಿದ, 'ಸರ್ವಥಾ ನೀನು ಹೇಳಿದಲ್ಲಿಯೆ ನಾನು ಅವತರಿಸುವೆನು. ಸ್ವತಂತ್ರನಾದರೂ ಸ್ವೇಚ್ಛೆಯಿಂದ ನಿನ್ನ ಭಕ್ತಿಗೆ ವಶನಾಗಿದ್ದೇನೆ.

ಬ್ರಹ್ಮ ಗೋರೂಪಳಾದ ಪೃಥ್ವಿ ಹಾಗೂ ರುದ್ರಾದಿ ದೇವತೆಗಳೊಡನೆ ಕ್ಷೀರಸಮುದ್ರದ ಬಳಿಗೆ ಹೋದನೆಂದು ಭಾಗವತ ಹೇಳಿದೆ. ಮಂತ್ರಾಲೋಚನೆಯೂ ಅಲ್ಲಿಯೆ ನಡೆದಂತೆ ಕಾಣುತ್ತದೆ. ಆದರೆ ಹರಿವಂಶದಲ್ಲಿ

ತದಾಗಚ್ಛ ಮಹಾಭಾಗ ಸಹ ವೈ ಮಂತ್ರಕಾರಣಾತ್ ।
ವ್ರಜಾಮೋ ಮೇರುಶಿಖರಂ ಪುರಸ್ಕೃತ್ಯ ವಸುಂಧರಾಂ ।।

'ಶ್ರೀಹರಿ ಬಾ, ಮೇರುಶಿಖರಕ್ಕೆ ಹೋಗೋಣ. ಅಲ್ಲಿ ಮಂತ್ರಾಲೋಚನೆ ಮಾಡೋಣ' ಎಂದು ಹೇಳಿ ಬ್ರಹ್ಮ ಹರಿಯನ್ನು ಕ್ಷೀರಸಮುದ್ರದಿಂದ ಮೇರುಶಿಖರಕ್ಕೆ ಕರೆದೊಯ್ಯುತ್ತಾನೆ. ಅಲ್ಲಿ ಅವನೆ ಯಾರು ಯಾರು ಎಲ್ಲಿ ಅವತರಿಸಬೇಕೆಂದು ಆಜ್ಞೆಯನ್ನು ಮಾಡುತ್ತಾನೆ. ನಿರ್ಣಯ ಭಾಗವತ ಹರಿವಂಶಗಳೆರಡನ್ನೂ ಸಮನ್ವಯಗೊಳಿಸಿ ಹೀಗೆ ಹೇಳುತ್ತದೆ-

ಭಾಗವತದಲ್ಲಿ ಹೇಳಿದಂತೆ ಸತ್ಯಲೋಕದಲ್ಲಿರುವ ಬ್ರಹ್ಮ ಹರಿಯ ಸರ್ವೋತ್ತಮತ್ವವನ್ನೂ ತನಗೆ ಅವನಲ್ಲಿರುವ ದೃಢವಾದ ಭಕ್ತಿಯನ್ನೂ ಲೋಕಕ್ಕೆ ತೋರುತ್ತ ರುದ್ರಾದಿ ಸಮಸ್ತ ದೇವತೆಗಳೊಂದಿಗೆ ಕ್ಷೀರಸಮುದ್ರದ ಬಳಿಗೆ ಹೋಗುತ್ತಾನೆ. ಅಲ್ಲಿ ಶ್ರೀಹರಿ ಬ್ರಹ್ಮಾದಿಗಳೆಲ್ಲರಿಗೂ ಅದೃಶ್ಯನಾಗಿಯೆ ಬ್ರಹ್ಮನಿಗೆ ಮಾತ್ರ ಕೇಳಿಸುವಂತೆ ಅಭಯ ನೀಡಿದ. ಇದರಿಂದ ಎಲ್ಲ ದೇವತೆಗಳಿಗಿಂತ ಜೀವೋತ್ತಮನಾದ ಬ್ರಹ್ಮ ಶ್ರೇಷ್ಠ. ಅವನಿಗಿಂತ ಸರ್ವೋತ್ತಮನಾದ ಹರಿ ಶ್ರೇಷ್ಠ ಎಂದು ವ್ಯಕ್ತವಾಯಿತು. ಮುಂದೆ ಹರಿವಂಶದಲ್ಲಿ ಹೇಳಿದಂತೆ ಹರಿ ಎಲ್ಲ ದೇವತೆಗಳೊಂದಿಗೆ ಮೇರು ಶಿಖರಕ್ಕೆ ಬರುತ್ತಾನೆ. ರಾಜ ಕೋಶರಕ್ಷಕನನ್ನು ಮೆಚ್ಚಿಸಲು ತಾನೇ ಅವನ ಬಳಿಗೆ ಬರುವಂತೆ ಭೂರಕ್ಷಕನಾದ ಬ್ರಹ್ಮನನ್ನು ಮೆಚ್ಚಿಸಲು ಹರಿ ತಾನೆ ಕೃಪೆಯಿಂದ ಅವನ ಬಳಿಗೆ ಬರುತ್ತಾನೆ. ಬ್ರಹ್ಮನ ಬಾಯಿಂದ ಯಾರು ಯಾರು ಎಲ್ಲಿ ಅವತರಿಸಬೇಕೆಂಬುದನ್ನು ಹೇಳಿಸಿ ತಾನೂ ಅದನ್ನು ಶಿರಸಾವಹಿಸಿದಂತೆ ತೋರಿಕೊಳ್ಳುತ್ತಾನೆ. ಸ್ವತಂತ್ರನಾದರೂ ತಾನು ಭಕ್ತಿಗೆ ಸ್ವೇಚ್ಛೆಯಿಂದಲೆ ವಶನಾಗುವನೆಂದೂ ಸ್ಪಷ್ಟಪಡಿಸುತ್ತಾನೆ. ಮುಂದೆ ಮೇರುಶಿಖರದಲ್ಲಿ ದೇವತೆಗಳು ಮಾಡಿದ ಮಂತ್ರಾಲೋಚನೆಯನ್ನು ದೈತ್ಯರು ಕೇಳಿದರೆಂದು ನಿರ್ಣಯದಲ್ಲಿ(12-39) ಹೇಳುವಂತೆ ದೇವತೆಗಳ ಅವತಾರ ಯೋಜನೆಯನ್ನು ದೈತ್ಯರು ಕದ್ದುಕೇಳಿ ಅವರನ್ನು ವಿರೋಧಿಸಲು

ತಾವೂ ಭೂಮಿಯಲ್ಲಿ ಹುಟ್ಟಲು ಪ್ರಚೋದನೆ ಹೊಂದಬೇಕೆನ್ನುವ ಉದ್ದೇಶದಿಂದ ದೈತ್ಯರಿಗೆ ಅಗಮ್ಯವಾದ ಶ್ವೇತದ್ವೀಪವನ್ನು ಬಿಟ್ಟು ಅವರಿಗೆ ಸುಲಭವಾಗಿ ಗಮ್ಯವಾದ ಮೇರು ಶಿಖರದಲ್ಲಿಯೆ ಎಲ್ಲರಿಗೂ ಕಾಣುವಂತೆ ನಿಂತು ಬ್ರಹ್ಮನ ಮಾತಿನ ಪ್ರಕಾರವೆ ತನ್ನ ಎಲ್ಲ ಕಾರ್ಯಗಳನ್ನು ನಡೆಸಿಕೊಂಡ ಶ್ರೀಹರಿ.[1]

ವಸುದೇವನ ಜನನ

ಬ್ರಹ್ಮಾ ಪ್ರಣಮ್ಯಾಹ ತಮಾತ್ಮಕಾರಣಂ ಪ್ರಾದಾಂ ಪುರಾಹಂ ವರುಣಾಯ ಗಾಃ ಶುಭಾಃ।
ಜಹಾರ ತಾಸ್ತಸ್ಯ ಪಿತಾಮೃತಸ್ರವಾಃ ಸ ಕಶ್ಯಪೋ ದ್ರಾಕ್ ಸಹಸಾತಿಗರ್ವಿತಃ ॥ ೨೨೩ ॥

ಬ್ರಹ್ಮ ತನ್ನ ತಂದೆಯಾದ ಹರಿಯನ್ನು ನಮಿಸಿ ಹೇಳಿದ, 'ನಾನು ಹಿಂದೆ ವರುಣನಿಗೆ ಒಳ್ಳೆಯ ಗೋವುಗಳನ್ನು ಕೊಟ್ಟಿದ್ದೆ. ಅಮೃತವನ್ನು ಸುರಿಸುವ ಆ ಗೋವುಗಳನ್ನು ಅವನ ತಂದೆ ಕಶ್ಯಪ ಅತಿಯಾದ ಅಹಂಕಾರದಿಂದ ಬಲಾತ್ಕಾರವಾಗಿ ಅಪಹರಿಸಿದ.

ಮಾತ್ರಾ ತ್ವದಿತ್ಯಾ ಚ ತಥಾ ಸುರಭ್ಯಾ
ಪ್ರಚೋದಿತೇನೈವ ಹೃತಾಸು ತಾಸು।
ಶ್ರುತ್ವಾಜಲೇಶಾತ್ ಸ ಮಯಾಭಿಶಪ್ತಃ
ಕ್ಷತ್ರೇಷು ಗೋಜೀವನಕೋ ಭವೇತಿ ॥ ೨೨೪ ॥

ಮಾತೆಯರಾದ ಅದಿತಿ ಸುರಭಿಯರಿಂದ ಪ್ರಚೋದಿತನಾಗಿ ಕಶ್ಯಪ ವರುಣನ ಗೋವುಗಳನ್ನು ಹೀಗೆ ಅಪಹರಿಸಿದಾಗ ನಾನು ವರಣುನಿಂದ ಎಲ್ಲವನ್ನೂ ಕೇಳಿ ಕಶ್ಯಪನಿಗೆ ಶಾಪವಿತ್ತೆ- 'ಕ್ಷತ್ರಿಯ ಕುಲದಲ್ಲಿ ಜನಿಸಿ ಗೋವುಗಳಿಂದ ಉಪಜೀವನಮಾಡು'.

---

1. ಬ್ರಹ್ಮಾ ತದುಪಧಾರ್ಯಾಥ ಸಹ ದೇವೈಸ್ತಯಾ ಸಹ।
ಜಗಾಮ ಸತ್ರಿನಯನ ಸ್ತೀರಂ ಕ್ಷೀರ ಪಯೋನಿಧೇಃ ॥

ಇತಿ ಭಾಗವತೋಕ್ತೇಃ ಸತ್ಯಲೋಕಸ್ಥಿತೋ ಬ್ರಹ್ಮಾ ವಿಷ್ಣೋಃ ಸರ್ವೋತ್ತಮತ್ವ ಪ್ರದರ್ಶನಾಯ ಸ್ವಸ್ಯ ತಸ್ಮಿನ್ನಿರವಧಿಕ ಭಕ್ತಿ ಪ್ರಕಟನಾಯ ಚ ದೇವೈಃ ಸಹ ಪ್ರಾಕ್ ಶ್ವೇತದ್ವೀಪಂ ಜಗಾಮ। ತತ್ರಾಪಿ ಸರ್ವೈರ ದೃಶ್ಯಃ ಸನ್ ಭಗವಾನ್ ಬ್ರಹ್ಮಣ ಏವ ಸ್ವವಾಚಃ ಶ್ರಾವಯಾಮಾಸ। ತತಸ್ತೈರ್ದೇವೈಃ ಸಹ ರಾಜಾ ಕೋಶರಕ್ಷಕಮಿವ ಭುವೋ ರಕ್ಷಣಾಯ ಮೇರೌ ಸ್ಥಿತಂ ಬ್ರಹ್ಮಾಣಮಪಿ ದಯಯಾನುಕೂಲಯಿತುಂ ತೇನ ಕಶ್ಯಪಸ್ಯ ದತ್ತಶಾಪಂ ಚ ತನ್ಮುಖಾದೇವ ಶ್ರುತ್ವಾ ಮಾನಯಿತುಂ 'ವಸುಂಧರಾ ತಲೋದ್ಭವೋನ್ಮುಖಿಂ ಶ್ರುತಂ ದಿತೇಃಸುತೈ' ಇತಿ ವಕ್ಷ್ಯಮಾಣತ್ವಾತ್ ಅಸುರಾಗಮ್ಯ ಶ್ವೇತದ್ವೀಪಂ ವಿಹಾಯಾಸುರಾಗಮನಾರ್ಹ ಮೇರುಂ ಪ್ರಾಪ್ಯಾಸುರಾನ್ ಪ್ರತ್ಯಪಿ ಸುರಾಣಾಮವತಾರೋದ್ಯೋಗಂ ಶ್ರಾವಯಿತುಂ ಚ ಮೇರಾವಾಗತ್ಯ ದೃಶ್ಯ ಏವ ಸನ್ ತದ್ ವಚನಾದೇವ ಸರ್ವಂ ಕಾರ್ಯಂ ಕೃತವಾನಿತಿ ವಿವೇಕಃ। ಅತೋ ಭಾಗವತ ಹರಿವಂಶೋಕ್ತ್ಯೋರ್ನ ವಿರೋಧ ಇತಿ ಜ್ಞೇಯಂ। -ವಾದಿರಾಜೀಯ

ಮೊದಲಿಗೆ ಒಂದು ಯಾಗಕ್ಕೆ ಬೇಕೆಂದು ಕಶ್ಯಪ ವರುಣನ ಗೋವುಗಳನ್ನು ತರಿಸಿಕೊಂಡ. ಬಳಿಕ ಯಾಗ ಮುಗಿದಾಗ ಗೋವುಗಳನ್ನು ಹಿಂತಿರುಗಿಸಲಿಲ್ಲ. ವರುಣ ಕೇಳಿದರೂ ಅದಿತಿ ಸುರಭಿಯರ ಮಾತನ್ನು ಕೇಳಿ ತಾನು ವರುಣನ ತಂದೆ ಎನ್ನುವ ಅಹಂಕಾರದಿಂದ ಕೊಡಲಾರೆ ಎಂದ. ವರುಣ ಬ್ರಹ್ಮನಲ್ಲಿ ಮೊರೆಯಿಟ್ಟ. ಬ್ರಹ್ಮ ಬ್ರಾಹ್ಮಣನಾದ ಕಶ್ಯಪನನ್ನು ಕ್ಷತ್ರಿಯನಾಗಿ ಹುಟ್ಟಿ ಪಶುಪಾಲನ ರೂಪವಾದ ವೈಶ್ಯ ವೃತ್ತಿಯಿಂದ ಜೀವಿಸು ಎಂದು ಶಪಿಸಿದ.

ಶೂರಾತ್ ಸ ಜಾತೋ ಬಹುಗೋಧನಾಢ್ಯೋ
ಭೂಮೌ ಯಮಾಹುರ್ವಸುದೇವ ಇತ್ಯಪಿ।
ತಸ್ಯೈವ ಭಾರ್ಯಾ ತ್ವದಿತಿಶ್ಚ ದೇವಕೀ
ಬಭೂವ ಚಾನ್ಯಾ ಸುರಭಿಶ್ಚ ರೋಹಿಣೀ ॥ ೨೨೫ ॥

ಕಶ್ಯಪ ಶೂರನಿಂದ ಭೂಮಿಯಲ್ಲಿ ಜನಿಸಿ ಬಹುಗೋಧನದಿಂದ ಆಢ್ಯನೆನಿಸಿದ. ಅದರಿಂದ 'ವಸುದೇವ' ಎಂದೂ ಜನರು ಅವನನ್ನು ಕರೆದರು. ಅದಿತಿ ದೇವಕಿಯಾಗಿ ಜನಿಸಿ ಅವನ ಪತ್ನಿಯಾದಳು. ಇನ್ನೊಬ್ಬಳು ಹೆಂಡತಿ ಸುರಭಿಯೂ ರೋಹಿಣಿಯಾಗಿ ಹುಟ್ಟಿ ಅವನಿಗೆ ಪತ್ನಿಯಾದಳು.

ಕಶ್ಯಪ ಭೂಮಿಯಲ್ಲಿ ಆನಕದುಂದುಭಿ ಎಂಬ ಹೆಸರಿನಿಂದ ಶೂರಸೇನನೆಂಬ ರಾಜನಿಗೆ ಭೋಜಾದೇವಿಯಲ್ಲಿ ಮಗನಾಗಿ ಹುಟ್ಟಿದರೂ ಬಹುಗೋಧನದಿಂದ ಆಢ್ಯನೆನಿಸಿ ವಸುದೇವ ಎಂದೂ ಸಾರ್ಥಕನಾಮದಿಂದ ಪ್ರಸಿದ್ಧನಾದ. ವಸು ಎಂದರೆ ಧನ, ಗೋಧನ. ಅದರಿಂದ ದೇವ ಅಂದರೆ ಶೋಭಿಸುವವ.

'ಮನುಷ್ಯಲೋಕೇ ಕೃತ್ಸ್ನೇऽಪಿ ರೂಪೇ ನಾಸ್ತಿ ಸಮೋ ಭುವಿ।

'ಮನುಷ್ಯಲೋಕದಲ್ಲಿ ವಸುದೇವನಿಗೆ ಸಮನಾದ ಸ್ಫುರದ್ರೂಪಿ ಇನ್ನೊಬ್ಬನಿರಲಿಲ್ಲ.' ಎನ್ನುತ್ತದೆ ಹರಿವಂಶ.

ಅವನು ಹುಟ್ಟಿದಾಗ 'ಈತ ಕೃಷ್ಣನಿಗೆ ತಂದೆಯಾಗಲಿದ್ದಾನೆ' ಎಂದು ಆನಂದದಿಂದ ದೇವ ದುಂದುಭಿ ಮೊಳಗಿತು. ಪುಷ್ಪವೃಷ್ಟಿಯಾಯಿತು. ಅದರಿಂದ 'ಆನಕ ದುಂದುಭಿ' ಎಂದು ಅವನಿಗೆ ಹೆಸರು ಎಂದು ಹರಿವಂಶದಲ್ಲಿ ಹೇಳಿದೆ.

ನಂದಗೋಪನ ಜನನ

ತತ್ ತ್ವಂ ಭವಸ್ವಾಶು ಚ ದೇವಕೀಸುತ-
ಸ್ತಥೈವ ಯೋ ದ್ರೋಣನಾಮಾ ವಸುಃ ಸಃ।
ಸ್ವಭಾರ್ಯಯಾ ಧರಯಾ ತತ್ತತ್ತತ್ತಂ
ಪ್ರಾಪ್ತುಂ ತಪಸ್ತೇಪ ಉದಾರ ಮಾನಸಃ ॥ ೨೨೬ ॥

ಆದ್ದರಿಂದ ಶ್ರೀಹರಿ, ನೀನು ಬೇಗನೆ ದೇವಕೀಪುತ್ರನಾಗಿ ಜನಿಸು. ಹಾಗೇ ದ್ರೋಣ ಎಂಬ ಹೆಸರಿನ ವಸು ನಿನಗೆ ತಂದೆ ಎನಿಸಬೇಕೆಂದು ಒಳ್ಳೆಯ ಮನಸ್ಸಿನಿಂದ ತನ್ನ ಸತಿಯಾದ ಧರೆಯೊಂದಿಗೆ ತಪಸ್ಸು ಮಾಡಿದ.

ತಸ್ಮೈ ವರಃ ಸ ಮಯಾ ಸನ್ನಿಸೃಷ್ಟಃ
ಸ ಚಾಸ ನಂದಾಖ್ಯ ಉತಾಸ್ಯ ಭಾರ್ಯಾ।
ನಾಮ್ನಾ ಯಶೋದಾ ಸ ಚ ಶೂರತಾತ-
ಸುತಸ್ಯ ವೈಶ್ಯಾಪ್ರಭವೋಽಥ ಗೋಪಃ ॥ ೨೨೭ ॥

ಅವನಿಗೆ ಆ ವರವನ್ನು ನಾನು ಕೊಟ್ಟೆ ಅವನು ನಂದ ಎಂಬ ಹೆಸರಿನವನಾಗಿ ಹುಟ್ಟಿದ್ದಾನೆ. ಮತ್ತು ಅವನ ಪತ್ನಿ ಯಶೋದೆ ಎಂಬ ಹೆಸರಿನಿಂದ ಹುಟ್ಟಿದ್ದಾಳೆ. ಈ ನಂದ ಶೂರನ ತಂದೆಯ ಮಗನಿಗೆ ವೈಶ್ಯ ಜಾತಿಯ ಪತ್ನಿಯಲ್ಲಿ ಹುಟ್ಟಿದವ. ಅದರಿಂದ ಆತ ಗೋಪಾಲಕನಾದ.

ಶೂರನ ತಂದೆಯಾದ ದೇವಮೀಢನ ಮಗ ಶೂರನೆ. ಛಂದೋಭಂಗ ಪರಿಹಾರಕ್ಕಾಗಿ ಹಾಗೆ ಹೇಳಿದೆ. ಘಟಾಭಾವವಿಲ್ಲವೆಂದರೆ ಘಟವೆ ಇದೆ ಎಂದರ್ಥ ಹೇಗೋ ಹಾಗೇ ಇದು ಎಂದು ವಾದಿರಾಜೀಯ. ಶೂರನ ತಂದೆಯ ಮಗನೆಂದರೆ ಶೂರನ ಸೋದರ. ಅವನ ಮಗ ನಂದ ಎಂದೂ ಅರ್ಥಗ್ರಹಿಸಬಹುದು ಎನ್ನುತ್ತದೆ ಜನಾರ್ದನೀಯ. ಸತ್ಯಾಭಿನವತೀರ್ಥರು ಶೂರನ ತಂದೆಯ ಮಗ ಎಂದರೆ ತಂದೆಯನ್ನು ಉದ್ಧಾರ ಮಾಡಿ ಒಳ್ಳೆಯ ಮಗ ಶೂರನೆ ಎಂದು ಅಭಿಪ್ರಾಯ ಹೇಳಿದ್ದಾರೆ.[1]

ತೌ ದೇವಕೀವಸುದೇವೌ ಚ ತೇಪತು-
ಸ್ತಪಸ್ತದೀಯಂ ಸುತಮಿಚ್ಛಮಾನೌ।

---

1. ಶೂರಸ್ಯೇತಿ ವಕ್ತವ್ಯೇ ಛಂದೋಭಂಗ ಪರಿಹಾರ್ಥಮೇವ ಮುಕ್ತಿಃ। ಘಟಸ್ಯೇತಿ ವಕ್ತವ್ಯೇ ಘಟಾಭಾವಾಭಾವಸ್ಯೇತಿವತ್ ತರ್ಕಮುದ್ರಯೇತಿ ಜ್ಞೇಯಂ। -ವಾದಿರಾಜೀಯ
ಶೂರಸ್ಯ ತಾತಸ್ತಸ್ಯ ಸುತಃ ಶೂರಭ್ರಾತಾ। -ಜನಾರ್ದನೀಯ
ತಾತಸುತಸ್ಯೇತ್ಯಸ್ಯ ತಾತೋದ್ಧಾರಕ ಸುತಸ್ಯೇತ್ಯರ್ಥೇ ತಾತ್ಪರ್ಯಂ। -ಸತ್ಯಾಭಿನವೀಯ

ತ್ವಾಮೇವ ತಸ್ಮಾತ್ ಪ್ರಥಮಂ ಪ್ರದರ್ಶ್ಯ
ತತ್ರ ಸ್ವರೂಪಂ ಹಿ ತತೋ ವ್ರಜಂ ವ್ರಜ ॥ ೨೨೮ ॥

ದೇವಕೀ ವಸುದೇವರೂ ನಿನ್ನನ್ನು ಮಗನಾಗಿ ಹೊಂದಲು ಬಯಸಿ ನಿನ್ನನ್ನು ಕುರಿತು ತಪಸ್ಸು ಮಾಡಿದ್ದಾರೆ. ಅದರಿಂದ ಅವರಲ್ಲಿ ಮೊದಲಿಗೆ ನಿನ್ನ ಕೃಷ್ಣರೂಪವನ್ನು ತೋರಿ ಬಳಿಕ ವ್ರಜಕ್ಕೆ ಹೋಗು.

ಶ್ರೀಕೃಷ್ಣನನ್ನು ಮಗನನ್ನಾಗಿ ಪಡೆಯಲು ವಸುದೇವ ದೇವಕಿಯರೂ ತಪಸ್ಸು ಮಾಡಿದ್ದಾರೆ. ನಂದಯಶೋದೆಯರೂ ತಪಸ್ಸುಮಾಡಿದ್ದಾರೆ. ಅದಕ್ಕೆ ಮೊದಲಿಗೆ ಕೃಷ್ಣ ವಸುದೇವ ದೇವಕಿಯರಿಗೆ ಮಗನಾಗಬೇಕು. ಬಳಿಕ ಅಲ್ಲಿಂದ ನಂದಗೋಕುಲಕ್ಕೆ ಹೋಗಿ ನಂದ ಯಶೋದೆಯರಿಗೂ ಮಗ ನಾಗಬೇಕು. ಎರಡೂ ಕಡೆ ಕೃಷ್ಣ ಮಗುವಾಗಿ ತೋರಿಕೊಂಡರೆ ಸಾಕು. ಮಗನಾಗುತ್ತಾನೆ. ಏಕೆಂದರೆ ಅವನಿಗೆ ಎಲ್ಲರಂತೆ ಬೇರೆ ಜನನವೆಂಬುದೇ ಇಲ್ಲ.

ಇತೀರಿತಃ ಸೋಽಬ್ಜಭವೇನ ಕೇಶವ-
ಸ್ತಥೇತಿ ಚೋಕ್ತ್ವಾಪುನರಾಹ ದೇವತಾಃ।
ಸರ್ವೇ ಭವಂತೋ ಭವತಾಶು ಮಾನುಷೇ
ಕಾರ್ಯಾನುಸಾರೇಣ ಯಥಾನುರೂಪತಃ ॥ ೨೨೯ ॥

ಹೀಗೆ ಬ್ರಹ್ಮ ಹೇಳಿದಾಗ ಹರಿ ಹಾಗೇ ಆಗಲಿ ಎಂದು ಹೇಳಿ ಪುನಃ ದೇವತೆಗಳಿಗೆ ಹೇಳಿದ, 'ನೀವೆಲ್ಲರೂ ಬೇಗನೆ ಕಾರ್ಯಾನುಸಾರ ಯಥಾಯೋಗ್ಯವಾಗಿ ಮನುಷ್ಯರಾಗಿ ಹುಟ್ಟಿರಿ' ಎಂದು.

'ಯಥಾಯೋಗ್ಯವಾಗಿ' ಎಂದರೆ ಭಾಗವತ ಹರಿವಂಶಾದಿಗಳಲ್ಲಿ ಇವನು ಇವನಿಂದ ಹುಟ್ಟಿದ. ಇವನು ಇವನಿಂದ ಎಂದು ಭೂಮಿಯಲ್ಲಿ ದೇವತೆಗಳ ಮತ್ತು ಮುನಿಗಳ ಜನನವನ್ನು ನಿರೂಪಿಸಿದೆ. ಅದಕ್ಕೆ ಅನುಗುಣವಾಗಿ ಎಂದರ್ಥ. ಅಥವಾ ಯಾರು ಬ್ರಾಹ್ಮಣರಾಗಿ ಹುಟ್ಟಬೇಕೋ ಅವರು ಬ್ರಾಹ್ಮಣರಾಗಿ, ಉದಾ: ಬೃಹಸ್ಪತಿ ಮುಂತಾದವರು. ಯಾರು ಕ್ಷತ್ರಿಯರಾಗಿ ಹುಟ್ಟಬೇಕೋ ಅವರು ಕ್ಷತ್ರಿಯರಾಗಿ. ಉದಾ: ಯಮಧರ್ಮರಾಜ ಮುಂತಾದವರು, ಯಾರು ಶಾಪಾದಿ ನಿಮಿತ್ತದಿಂದ ಶೂದ್ರರಾಗಿ ಹುಟ್ಟಬೇಕೋ ಅವರು ಶೂದ್ರರಾಗಿ, ಉದಾ: ವಿದುರಾದಿಗಳು. ಹೀಗೆ ದೇವತೆಗಳು ಮತ್ತು ಮುನಿಗಳು ಹುಟ್ಟಬೇಕು.[1]

---

1. ಯಥಾನುರೂಪತ ಇತ್ಯತ್ರ ಭಾಗವತ ಹರಿವಂಶಾದಿ ಗ್ರಂಥೇ 'ಅಯಮಸ್ಮಾಜ್ಜಾತಃ ಅಯಮಸ್ಮಾಜ್ಜಾತ' ಇತಿ ನಿರೂಪಿತಂ, ತದನುರೂಪತಃ ಯಸ್ಯ ಬ್ರಾಹ್ಮಣೇಷು ಜನ್ಮೋಕ್ತಂ ಬೃಹಸ್ಪತ್ಯಾದೇಃ ಸ

ಭಗದತ್ತನ ಜನನ

ಅಥಾವತೀರ್ಣಾಃ ಸಕಲಾಶ್ಚ ದೇವತಾ
ಯಥಾ ಯಥೈವಾಹ ಹರಿಸ್ತಥಾ ತಥಾ।
ವಿತ್ತೇಶ್ವರಃ ಪೂರ್ವಮಭೂದ್ಧಿ ಭೌಮಾದ್
ಹರೇಃ ಸುತತ್ವೇಽಪಿ ತದಿಚ್ಛಯಾಽಸುರಾತ್ ॥ ೨೩೦ ॥

ಬಳಿಕ ಎಲ್ಲ ದೇವತೆಗಳೂ ಶ್ರೀಹರಿ ಹೇಳಿದಂತೆಯೆ ಅವತರಿಸಿದರು. ಮೊದಲು ಕುಬೇರ ಹರಿಯ ಇಚ್ಛೆಯಿಂದ ನರಕಾಸುರನಿಂದ ಹುಟ್ಟಿದ್ದ. ನರಕಾಸುರ ಹರಿಯ ಪುತ್ರನಾಗಿದ್ದರೂ ಒಬ್ಬ ಅಸುರನಾಗಿದ್ದ.

ಹರಿಯ ಇಚ್ಛೆಯಿಂದ ಕುಬೇರ ಭಗದತ್ತನಾಗಿ ನರಕಾಸುರನಿಂದ ಹುಟ್ಟಿದ. ನಿರ್ಣಯದಲ್ಲಿ 'ಮೊದಲು ಹುಟ್ಟಿದ್ದ'ನೆಂದಿದೆ. 'ದೇವತೆಗಳು ಹರಿಯಾಜ್ಞೆಯಿಂದ ಹುಟ್ಟುವುದಕ್ಕೆ ಮೊದಲು ಭಗದತ್ತ ಹುಟ್ಟಿದ್ದ' ಎಂದು ವಾದಿರಾಜೀಯ. 'ಹರಿಯಾಜ್ಞೆಯಿಂದ ಹುಟ್ಟಿದವರಲ್ಲೆಲ್ಲ ಮೊದಲಿಗೆ ಭಗದತ್ತ ಹುಟ್ಟಿದ' ಎಂದು ಜನಾರ್ದನೀಯ. ಮೊದಲಿಗೆ ಕುಬೇರನಾಗಿದ್ದವ ಹರೀಚ್ಛೆಯಿಂದ ಭಗದತ್ತನಾಗಿ ಹುಟ್ಟಿದ. ನರಕಾಸುರ ಹರಿಯಿಂದ ಧರಾದೇವಿಯಲ್ಲಿ ಹುಟ್ಟಿದರೂ ಹರೀಚ್ಛೆಯಿಂದಲೆ ಅಸುರನಾಗಿ ಹುಟ್ಟಿದ್ದ ಎಂದು ವರದರಾಜೀಯ. ಅಸುರನಾಗಿದ್ದರೂ ಹರೀಚ್ಛೆಯಿಂದ ಹರಿಯ ಪುತ್ರನಾಗಿ ಹುಟ್ಟಿದ ನರಕಾಸುರ. ಅಥವಾ ಹರಿಯ ಪುತ್ರನಾಗಿದ್ದರೂ ಹರೀಚ್ಛೆಯಿಂದ ಅಸುರನಾಗಿದ್ದ ಎಂದು ಜನಾರ್ದನೀಯ.

ಪಾಪೇನ ತೇನಾಪಹೃತೋ ಹಿ ಹಸ್ತೀ ಶಿವಪ್ರದತ್ತಃ ಸುಪ್ರತೀಕಾಭಿಧಾನಃ ।
ತದರ್ಥಮೇವಾಸ್ಯ ಸುತೋಽಭಿಜಾತೋ ಧನೇಶ್ವರೋ ಭಗದತ್ತಾಭಿಧಾನಃ ॥ ೨೩೧॥

ಪಾಪಿಯಾದ ನರಕಾಸುರ ಕುಬೇರನಿಗೆ ಶಿವನಿತ್ತಿದ್ದ ಸುಪ್ರತೀಕ ಎಂಬ ಹೆಸರಿನ ಆನೆಯನ್ನು ಅಪಹರಿಸಿದ್ದ. ಅದಕ್ಕಾಗಿಯೆ ಕುಬೇರ ಅವನ ಮಗನಾಗಿ ಭಗದತ್ತ ಎಂಬ ಹೆಸರಿನಿಂದ ಹುಟ್ಟಿದ.

ಮಹಾಸುರಸ್ಯಾಂಶಯುತಃ ಸ ಏವ ರುದ್ರಾವೇಶಾದ್ ಬಲವಾನಸ್ತ್ರವಾಂಶ್ಚ।
ಶಿಷ್ಯೋ ಮಹೇಂದ್ರಸ್ಯ ಹತೇ ಬಭೂವ ತಾತೇ ಸ್ವಧರ್ಮಾಭಿರತಶ್ಚ ನಿತ್ಯಮ್ ॥ ೨೩೨॥

ಬ್ರಾಹ್ಮಣರೂಪತಯಾವತರತು । ಯಸ್ಯ ಪುನಃ ಶಾಪಾದಿ ನಿಮಿತ್ತಾತ್ ಶೂದ್ರತಯಾ ಜನ್ಮೋಕ್ತಂ ವಿದುರಾದೇಃ ಸಶೂದ್ರತಯಾವತರತ್ವಿತ್ಯಾದಿಕಂ ಸೂಚಿತಂ । -ವಾದಿರಾಜೀಯ

ಭಗದತ್ತ ಮಹಾ ಅಸುರನ ಅಂಶಯುಕ್ತನಾಗಿದ್ದು **ರುದ್ರಾವೇಶದಿಂದ** ಬಲಿಷ್ಠನಾಗಿದ್ದ. ದೇವೇಂದ್ರನ ಶಿಷ್ಯನಾಗಿದ್ದು ಅಸ್ತ್ರಜ್ಞನೂ ಎನಿಸಿದ್ದ. ತಂದೆ ಹತನಾದಾಗ **ಸದಾ ಸ್ವಧರ್ಮ**ದಲ್ಲಿ ಆಸಕ್ತನಾದ.

ಭಗದತ್ತನಲ್ಲಿ ಅನುಹ್ಲಾದನ ಮಗನಾದ ಬಾಷ್ಕಲ ಎಂಬ **ಅಸುರನ** ಆವೇಶವಿದ್ದಿತು. ಕೃಷ್ಣ ನರಕನನ್ನು ಕೊಂದಾಗ ಭಗದತ್ತನಲ್ಲಿದ್ದ ಅಸುರಾವೇಶವೂ ಶಾಶ್ವತವಾಗಿ ಹೊರಟುಹೋಯಿತು. ಅದರಿಂದ ಸದಾ ವಿಷ್ಣುಧರ್ಮದಲ್ಲಿ ಆಸಕ್ತನಾದ. ಅವನನ್ನು ಕೃಷ್ಣ ರಾಜ್ಯ ಸಿಂಹಾಸನದಲ್ಲಿ ಕೂಡಿಸಿದ ಎಂದು ಜನಾರ್ದನೀಯ ಮತ್ತು ವರದರಾಜೀಯ.

ಸಾತ್ಯಕಿ ಕೃತವರ್ಮರು

ಅಭೂಚ್ಛಿನಿರ್ನಾಮ ಯದುಪ್ರವೀರ-
ಸ್ತಸ್ಯಾತ್ಮಜಃ ಸತ್ಯಕ ಆಸ ತಸ್ಮಾತ್ ।
ಕೃಷ್ಣಃ ಪಕ್ಷೋ ಯುಯುಧಾನಾಭಿಧೇಯೋ
ಗರುತ್ಮತೋಽಶೇನ ಯುತೋ ಬಭೂವ ॥೨೩೩॥

ಶಿನಿ ಎಂಬ ಯಾದವ ವೀರನಿದ್ದ. ಅವನಿಗೆ ಸತ್ಯಕನೆಂಬ ಮಗನಿದ್ದ. ಅವನಿಂದ ಕೃಷ್ಣಪಕ್ಷಾಭಿಮಾನಿದೇವ ಯುಯುಧಾನ ಎಂಬ ಹೆಸರಿನವನಾಗಿ ಗರುಡಾಂಶಯುಕ್ತನಾಗಿ ಜನಿಸಿದ.

ಯಃ ಸಂವಹೋ ನಾಮ ಮರುತ್ ತದಂಶಶ್ಚಕ್ರಸ್ಯ ವಿಷ್ಣೋಶ್ಚ ಬಭೂವ ತಸ್ಮಿನ್।
ಯದುಷ್ವಭೂದ್ಧೃದಿಕೋ ಭೋಜವಂಶೇ ಸಿತಃ ಪಕ್ಷಸ್ತಸ್ಯ ಸುತೋ ಬಭೂವ ॥೨೩೪॥

ಸಂವಹನೆಂಬ ಮರುತನ ಮತ್ತು ವಿಷ್ಣುಚಕ್ರದ ಅಂಶಗಳು ಯುಯುಧಾನನದಲ್ಲಿದ್ದವು. ಯಾದವರಲ್ಲಿ ಭೋಜವಂಶದಲ್ಲಿ ಹೃದಿಕನೆಂಬವನಿದ್ದ. ಅವನಿಗೆ ಶುಕ್ಲಪಕ್ಷಾಭಿಮಾನಿದೇವ ಮಗನಾಗಿ ಜನಿಸಿದ.

ಸ ಪಾಂಚಜನ್ಯಾಂಶಯುತೋ ಮರುತ್ಸು
ತಥಾಂಶಯುಕ್ತಃ ಪ್ರವಹಸ್ಯ ವೀರಃ।
ನಾಮಾಸ್ಯ ಚಾಭೂತ್ ಕೃತವರ್ಮೇತ್ಯಥಾನ್ಯೇ
ಯೇ ಯಾದವಾಸ್ತೇಽಪಿ ಸುರಾಃ ಸಗೋಪಾಃ ॥೨೩೫॥

ಹೃದಿಕನ ಮಗ ಪಾಂಚಜನ್ಯಾಂಶಯುಕ್ತನಾಗಿದ್ದ. ಮರುತ್ತುಗಳಲ್ಲಿ ಪ್ರವಹನ ಅಂಶಯುಕ್ತನೂ ಆಗಿದ್ದ. ವೀರನೆನಿಸಿದ ಅವನಿಗೆ ಕೃತವರ್ಮನೆಂಬ ಹೆಸರು ಉಂಟಾಯಿತು. ಹೀಗೆ ಬೇರೆ ಯಾದವರೂ ಗೋಪಾಲಕರೂ ದೇವಾಂಶ ಸಂಭೂತರಾಗಿದ್ದರು.

ಯುಯುಧಾನನಲ್ಲಿ ಚಕ್ರಾಂಶವೆಂದರೆ ಚಕ್ರಾಭಿಮಾನಿಯಾದ ಪ್ರದ್ಯುಮ್ನನ ಅಂಶ. ಕೃತವರ್ಮನಲ್ಲಿ ಪಾಂಚಜನ್ಯಾಂಶವೆಂದರೆ ಅದರ ಅಭಿಮಾನಿಯಾದ ಅನಿರುದ್ಧನ ಅಂಶ.

ರಾಜರುಗಳಲ್ಲಿ ದೇವಾಂಶ ಅಸುರಾಂಶ ವಿಭಾಗ

ಯೇ ಪಾಂಡವಾನಾಮಭವನ್ ಸಹಾಯಾ
ದೇವಾಶ್ಚ ದೇವಾನುಚರಾಃ ಸಮಸ್ತಾಃ।
ಅನ್ಯೇಽಪಿ ಸರ್ವೇ ತ್ವಸುರಾ ಹಿ ಮಧ್ಯಮಾ
ಯೇ ಮಾನುಷಾಸ್ತೇ ಚಲಬುದ್ಧಿವೃತ್ತಯಃ ॥ ೨೩೬ ॥

ಪಾಂಡವರಿಗೆ ಯಾರು ಸಹಾಯಕರಾಗಿದ್ದರೋ ಅವರೆಲ್ಲರೂ ದೇವತೆಗಳು[1] ಅಥವಾ ದೇವಾನುಚರರು. ಯಾರು ವಿರೋಧಿಗಳಾಗಿದ್ದರೋ ಅವರೆಲ್ಲರೂ ಅಸುರರು. ಉದಾಸೀನರು, ಚಂಚಲ ಬುದ್ಧಿಯವರು, ಮನುಷ್ಯರು.

ಲಿಂಗಂ ಸುರಾಣಾಂ ಹಿ ಪರೈವ ಭಕ್ತಿರ್ವಿಷ್ಣೌ ತದನ್ಯೇಷು ಚ ತತ್ಪ್ರತೀಪತಾ।
ಅತೋಽತ್ರ ಯೇ ಯೇ ಹರಿಭಕ್ತಿತತ್ಪರಾಸ್ತೇ ತೇ ಸುರಾಸ್ತದ್ವಿರಿತಾ ವಿಶೇಷತಃ ॥೨೩೭॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ
ಭಗವದವತಾರ ಪ್ರತಿಜ್ಞಾನಾಮೈಕಾದಶೋಽಧ್ಯಾಯಃ॥

ವಿಷ್ಣುವಿನಲ್ಲಿ ಉತ್ತಮಭಕ್ತಿ ಮಾಡುವುದು ದೇವತೆಗಳ ಲಕ್ಷಣ. ವಿರೋಧಿಗಳಾಗಿರುವುದು ಅಸುರರ ಲಕ್ಷಣ. ಅದರಿಂದ ಕುರು ಪಾಂಡವ ಸೇನೆಯಲ್ಲಿ ಯಾರು ಯಾರು ಹರಿಭಕ್ತಿ ಪರಾಯಣರೋ ಅವರೆಲ್ಲರೂ ದೇವತೆಗಳು, ಅಥವಾ ವಿಶೇಷವಾಗಿ ಅವರಿಂದ ಆವಿಷ್ಟರು. ಯಾರು ಹರಿಭಕ್ತಿಗೆ ವಿಪರೀತವಾಗಿ ದ್ವೇಷ ಪರಾಯಣರೋ ಅವರು ಅಸುರರು ಅಥವಾ ವಿಶೇಷವಾಗಿ ಅವರಿಂದ ಆವಿಷ್ಟರು.

'ಯೇಹರಿಭಕ್ತಿಪರಾಃ' ಎಂಬಲ್ಲಿ ಹರಿಭಕ್ತಿಪರ ಅಹರಿಭಕ್ತಿ ಪರ ಎಂದು ಎರಡೂ ರೀತಿ ಪದಚ್ಛೇದ. 'ತೇಸುರಾಃ' ಎಂಬಲ್ಲಿಯೂ ಸುರ ಅಸುರ ಎಂದು ಎರಡು ರೀತಿ ಪದಚ್ಛೇದ. ಹರಿಭಕ್ತಿಪರರು ಸುರರು. ಅಹರಿಭಕ್ತರು ಅಂದರೆ ಹರಿಭಕ್ತಿಗೆ ವಿರುದ್ಧವಾಗಿ ದ್ವೇಷಪರಾಯಣರು ದುರ್ಯೋಧನಾದಿಗಳು ಅಸುರರು. ಅಂದರೆ ಸುರವಿರೋಧಿಗಳಾದ ದೈತ್ಯರು.

---

1. ಭೀಷ್ಮದ್ರೋಣಾದೀನಾಂ ಕೌರವ ಸೇನಾಸ್ಥತ್ವೇಽಪಿ ಮನಸಾ ಪಾಂಡವ ಸಹಾಯತ್ವಾದ್ ದೇವತ್ವಮಿತಿ ಜ್ಞೇಯಂ। -ವಾದಿರಾಜೀಯ

ಹರಿಭಕ್ತಿಪರರಾದ ಪಾಂಡವರು ಭೀಷ್ಮ ದ್ರೋಣ ಕರ್ಣಾದಿಗಳು ಸುರರು, ದೇವತೆಗಳು. ಹರಿಭಕ್ತಿಪರರಾದ ಧೃತರಾಷ್ಟ್ರದ್ರುಪದ ವಿರಾಟ ಮುಂತಾದವರೂ ಸುರರೆ, ಅಂದರೆ 'ಸು' ಚೆನ್ನಾಗಿ 'ರ' ಹಾಡುವವರು. ಗಂಧರ್ವರು. ಹೀಗೆ ಆವೃತ್ತಿಮಾಡಿ ಎರಡು ರೀತಿಯ ಪದಚ್ಛೇದ ಮಾಡುವುದರಿಂದ ಉಪಕ್ರಮದಲ್ಲಿ ಹೇಳಿದ ಎರಡು ವಿಷಯಗಳನ್ನು ಕೊನೆಯಲ್ಲಿ ಉಪಸಂಹಾರ ಮಾಡಿದಂತಾಗುವುದರಿಂದ ಸರ್ವಜ್ಞರ ವಾಕ್ಯದಲ್ಲಿ ನ್ಯೂನತೆ ಇಲ್ಲ.[1]

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ
ಭಗವದವತಾರ ಪ್ರತಿಜ್ಞೆಎಂಬ ಹನ್ನೊಂದನೆ ಅಧ್ಯಾಯ ಮುಗಿಯಿತು.

---

1. ತಸ್ಮಾದಾರಬ್ಧಾರ್ಥದ್ವಯಸ್ಯೋಪಸಂಹಾರೇಽಪಿ ನಿಗಮನಾತ್ ನ ಸರ್ವಜ್ಞಾಚಾರ್ಯ ವಾಕ್ಯೇ ನ್ಯೂನತಾ ಶಂಕನೀಯಾ। -ವಾದಿರಾಜೀಯ

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೨

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ದೇವಾಕ್ಯಾಂ ವಸುದೇವತೋಽಗ್ರಜಯುತೋ ಜಾತೋ ವ್ರಜಂ ಯೋ ಗತೋ
ಬಾಲಘ್ನೀಶಕಟಾಕ್ಷಹಾ ಸ್ವಜನನೀಮಾನ್ಯಸ್ತೃಣಾವರ್ತಹಾ ।
ಯತ್ಪೂರ್ವಂ ಪರತಶ್ಚ ಪಾಂಡುತನಯಾ ಯತ್ಸೇವನಂ ಜಜ್ಞಿರೇ
ಕರ್ತುಂ ಧರ್ಮಮರುದ್ವೃಷಾಶ್ವಿನ ಇಮಂ ನಂದಾತ್ಮಜಂ ನೌಮ್ಯಹಂ ॥ ೧೨ ॥

ಶ್ರೀಕೃಷ್ಣ ಬಲರಾಮನೊಂದಿಗೆ ವಸುದೇವನಿಂದ ದೇವಕಿಯಲ್ಲಿ ಜನಿಸಿ ಗೋಕುಲಕ್ಕೆ ತೆರಳಿದ. ಪೂತನಾಶಕಟಾಕ್ಷರನ್ನು ಕೊಂದ. ತೃಣಾವರ್ತನನ್ನು ಕೊಂದ. ವಿಶ್ವರೂಪ ತೋರಿ ತಾಯಿಂದ ಮಾನ್ಯನಾದ. ಅವನ ಸೇವೆ ಮಾಡಲು ಧರ್ಮವಾಯು ಇಂದ್ರ ಅಶ್ವಿನಿದೇವತೆಗಳು ಅವನಿಗಿಂತ ಮೊದಲೂ ಅನಂತರವೂ ಪಾಂಡುಪುತ್ರರಾಗಿ ಜನಿಸಿದರು. ಇಂಥ ನಂದಕುಮಾರನನ್ನು ನಾನು ಸ್ತುತಿಸುತ್ತೇನೆ.

ಹನ್ನೆರಡನೇ ಅಧ್ಯಾಯ

ಕೃಷ್ಣಾವತಾರ - ಪಾಂಡವೋತ್ಪತ್ತಿ

ದೇವಕಿಯ ಜನನ

॥ ಹರಿಃ ಓಂ ॥

ಬಭೂವ ಗಂಧರ್ವಮುನಿಸ್ತು ದೇವಕಃ
ಸ ಆಸ ಸೇವಾರ್ಥಮಥಾಹುಕಾದ್ಧರೇಃ।
ಸ ಉಗ್ರಸೇನಾವರಜಸ್ತಥೈವ
ನಾಮಾಸ್ಯ ತಸ್ಮಾದಜನಿ ಸ್ಮ ದೇವಕೀ ॥ ೧ ॥

ದೇವಕನೆಂಬ ಗಂಧರ್ವ ಮುನಿ ಇದ್ದ. ಅವನು ಹರಿಯ ಸೇವೆಗಾಗಿ ಆಹುಕನಿಂದ ಹುಟ್ಟಿದ. ಉಗ್ರಸೇನನ ತಮ್ಮನಾದ ಅವನಿಗೆ ಅದೇ ಹೆಸರು. ಅವನಿಂದ ದೇವಕಿ ಜನಿಸಿದಳು.

ದೇವಕನೆಂಬ ಗಂಧರ್ವ ಮುನಿ ದೇವಕ ಎಂಬ ಹೆಸರಿನಿಂದಲೆ ಆಹುಕನ ಮಗನಾಗಿ ಉಗ್ರಸೇನನ ತಮ್ಮನಾಗಿ ಜನಿಸಿದ.

ಅನ್ಯಾಶ್ಚ ಯಾಃ ಕಶ್ಯಪಸ್ಯೈವ ಭಾರ್ಯಾ
ಜ್ಯೇಷ್ಠಾಂ ತು ತಾಮಾಹುಕ ಆತ್ಮಪುತ್ರೀಮ್।
ಚಕಾರ ತಸ್ಮಾದ್ಧಿ ಪಿತೃಷ್ವಸಾ ಸಾ
ಸ್ವಸಾ ಚ ಕಂಸಸ್ಯ ಬಭೂವ ದೇವಕೀ ॥ ೨ ॥

ಕಶ್ಯಪನ ಬೇರೆ ಪತ್ನಿಯರೂ ದೇವಕನಿಂದ ಹುಟ್ಟಿದರು. ಅವರಲ್ಲಿ ಹಿರಿಯಳಾದ ದೇವಕಿಯನ್ನು ಆಹುಕ ತನ್ನ ಮಗಳನ್ನಾಗಿ ಮಾಡಿಕೊಂಡ. ಅದರಿಂದ ಅವಳು ಕಂಸನಿಗೆ ಸೋದರತೆಯೂ ತಂಗಿಯೂ ಆದಳು.

ಹರಿವಂಶದಲ್ಲಿ ಕಂಸನ ಕೈಯಿಂದ ದುರ್ಗೆ ಆಕಾಶಕ್ಕೆ ಹಾರಿ ಹೋದ ಬಳಿಕ ಕಂಸ ದೇವಕಿಯ ಪಾದಗಳಿಗೆ ತಲೆಯಿಟ್ಟು ನಮಸ್ಕರಿಸಿ ಕ್ಷಮೆ ಬೇಡುತ್ತಾನೆ. ದೇವಕಿಯೂ 'ವತ್ಸ!' ಮಗು ಎಂದೇ ಅವನನ್ನು ಸಂತೈಸುತ್ತಾಳೆ. ಇದು ದೇವಕಿ ಕಂಸನಿಗೆ ಸೋದರತ್ತೆಯಾದ್ದರಿಂದ ಉಚಿತವೆನಿಸುತ್ತದೆ. ದೇವಕ ಉಗ್ರಸೇನರ ತಂದೆಯಾದ ಆಹುಕ ರಾಜನಿಗೆ ದೇವಕಿ ದತ್ತಪುತ್ರಿಯಾದ್ದರಿಂದ ಉಗ್ರಸೇನನಿಗೆ ತಂಗಿಯಾಗಿದ್ದು ಕಂಸನಿಗೆ

ಸೋದರತ್ತೆಯೂ ಆದಳು. ಹುಟ್ಟಿನಿಂದ ದೇವಕನ ಮಗಳಾದ್ದರಿಂದ ಕಂಸನಿಗೆ ತಂಗಿಯೂ ಆದಳು. ಹದಿಮೂರು ಮಂದಿ ದಕ್ಷಪುತ್ರಿಯರು ಕಶ್ಯಪನ ಪತ್ನಿಯರು ಅದಿತಿ ದಿತಿ ದನು ಕಾಷ್ಠಾ ಅರಿಷ್ಟಾ ಸುರಸಾ ಇಲಾ ಮುನಿ ಕ್ರೋಧವಶಾ ತಾಮ್ರಾ ಸುರಭಿ ಸರಮಾ ತಿಮಿ ಎಂದು. ಮರೀಚಿ ಮುನಿಯ ಪುತ್ರನಾಗಿ ಜನಿಸಿದ ಕಶ್ಯಪನಿಗೆ ಮೊದಲು ಅರಿಷ್ಟನೇಮಿ ಎಂದು ಹೆಸರಿತ್ತು. ಬಳಿಕ, ದಕ್ಷ ತನ್ನ ಕನ್ಯೆಯರನ್ನು ಕೊಡದೆ ತಿರಸ್ಕರಿಸಿದ್ದಕ್ಕೆ ಕುಪಿತನಾಗಿ ಅರಿಷ್ಟನೇಮಿ ಮದ್ಯ ಕುಡಿದವನಂತೆ ಕಠೋರ ವಾಕ್ಯಗಳನ್ನಾಡಿದ. 'ಕಶ್ಯ' ಎಂದರೆ ಕಠೋರ ವಚನ. ಅದನ್ನು 'ಪ' ಸೇವಿಸಿದ್ದರಿಂದ 'ಕಶ್ಯಪ'ನೆನಿಸಿದ ಎಂದು ವಾಯುಪುರಾಣ ಹೇಳಿದೆ (65-115). 'ಕಶ್ಯ'ವೆಂದು ಮದ್ಯಕ್ಕೂ ಹೆಸರಿದೆ ಎಂದೂ ಅಲ್ಲಿ ಹೇಳಿದೆ.

ಮೇಲೆ ಹೇಳಿದ ಹದಿಮೂರು ಮಂದಿ ಪತ್ನಿಯರಲ್ಲಿ ಅದಿತಿಯೆ ದೇವಕಿಯಾಗಿ ಹುಟ್ಟಿದಳು. ಸುರಭಿ ದಿತಿ ದನು ಈ ಮೂವರು ಕ್ರಮವಾಗಿ ಬಾಹ್ಲೀಕರಾಜ ಕಾಶಿರಾಜ ಕರವೀರ ರಾಜರ ಮಕ್ಕಳಾಗಿ ಹುಟ್ಟಿ ವಸುದೇವನ ಮಡದಿಯರಾದರು. ಇವರ ಬಗ್ಗೆ ಮುಂದೆ ವಿವರಗಳು ಬರುತ್ತವೆ. ಇನ್ನೂ ಆರು ಮಂದಿ ಕಶ್ಯಪ ಪತ್ನಿಯರು ಧೃತದೇವಾ ಶಾಂತಿದೇವಾ ಉಪದೇವಾ ಶ್ರೀದೇವಾ ದೇವರಕ್ಷಿತಾ ಸಹದೇವಾ ಎಂಬ ಹೆಸರುಗಳಿಂದ ದೇವಕಿಯ ತಂಗಿಯರಾಗಿ ಜನಿಸಿ ವಸುದೇವನ ಪತ್ನಿಯರಾದರು. ಸುರಭಿ ಬಾಹ್ಲೀಕರಾಜನ ಮಗಳಾಗಿ ರೋಹಿಣಿಯಾಗಿ ಹುಟ್ಟಿ ವಸುದೇವನನ್ನು ವರಿಸಿದಳು. ಒಟ್ಟು ವಸುದೇವನಿಗೆ ಹದಿನಾಲ್ಕು ಮಂದಿ ಪತ್ನಿಯರೆಂದು ಹರಿವಂಶ ಹೇಳಿದೆ. ಅವರಲ್ಲಿ ಕಾಶಿರಾಜ ಕರವೀರ ರಾಜಕುಮಾರಿಯರಾದ ಸುತನು ವಡವಾ ಇವರಿಬ್ಬರು ಪತ್ನಿಯರಾಗಿ ಉಳಿಯಲಿಲ್ಲ. ಪುತ್ರಿಕಾ ಪುತ್ರ ಧರ್ಮದಿಂದ ಮದುವೆಯಾಗಿ ಪೌಂಡ್ರಕ ಸೃಗಾಲರ ಜನನವಾದ ಬಳಿಕ ಅವರನ್ನು ಪರಿತ್ಯಾಗ ಮಾಡಿದ ವಸುದೇವ. ಹೀಗಾಗಿ ದೇವಕಿ ಮತ್ತು ಅವಳ ಆರು ಮಂದಿ ಸೋದರಿಯರು, ರೋಹಿಣಿ, ಮದಿರಾ ವೈಶಾಖಿ ಭದ್ರಾ ಸುನಾಮ್ನೀ ಎಂದು ಐದು ಮಂದಿ ಪೂರುವಂಶಜರಾದ ಕನ್ಯೆಯರು ಹೀಗೆ ಹನ್ನೆರಡು ಮಂದಿ ಪತ್ನಿಯರು.

ವಸುದೇವನಿಗೆ ಐದು ಮಂದಿ ಸೋದರಿಯರು- 1. ಪಾಂಡವರ ಮಾತೆ ಪೃಥೆ, ಇವಳಿಗೇ ಕುಂತಿ ಎಂದು ಇನ್ನೊಂದು ಹೆಸರು. 2. ಕೇಕಯರಾಜ ಶೈಬ್ಯನ ರಾಣಿ ಶ್ರುತಕೀರ್ತಿ, ಕೃಷ್ಣನ ಭದ್ರಾ ಎಂಬ ಮಹಿಷಿಯ ಜನನಿ. 3. ಕರೂಷರಾಜ ವೃದ್ಧಶರ್ಮನ ಮಡದಿಯಾಗಿ ದಂತವಕ್ರನನ್ನು ಹಡೆದ

ಶ್ರುತದೇವಿ. 4. ಚೇದಿರಾಜ ಧಮಘೋಷನ ಮಡದಿಯಾಗಿ ಶಿಶುಪಾಲನಿಗೆ ಜನ್ಮವಿತ್ತ ಶ್ರುತಶ್ರವೆ. 5. ಅವಂತೀರಾಜನ ರಾಣಿಯಾಗಿ ಕೃಷ್ಣನ ಮಹಿಷಿ ಮಿತ್ರವಿಂದೆಯನ್ನು ಹಡೆದ ರಾಜಾಧಿದೇವಿ.

ಕಂಸನಿಗೆ ಅಶರೀರವಾಣಿ

ಸೈವಾದಿತಿರ್ವಸುದೇವಸ್ಯ ದತ್ತಾ
ತಸ್ಯಾ ರಥಂ ಮಾಂಗಲಂ ಕಂಸ ಏವ।
ಸಂಯಾಪಯಾಮಾಸ ತದಾ ಹಿ ವಾಯು-
ರ್ಜಗಾದ ವಾಕ್ಯಂ ಗಗನಸ್ಥಿತೋಽಮುಮ್ ॥ ೩ ॥

ಅದಿತಿರೂಪಳಾದ ದೇವಕಿಯನ್ನು ವಾಸುದೇವನಿಗೆ ಕೊಟ್ಟಾಗ ಅವಳ ಗೃಹಪ್ರವೇಶೋತ್ಸವದ ರಥವನ್ನು ಕಂಸನೇ ನಡೆಸಿದ. ಆಗ ಆಕಾಶದಲ್ಲಿ ನಿಂತ ವಾಯು ಕಂಸನಿಗೆ ಒಂದು ಮಾತನ್ನು ನುಡಿದ.

ಭಾಗವತದಲ್ಲಿ

ಪಥಿ ಪ್ರಗ್ರಹಿಣಂ ಕಂಸಮಾಭಾಷ್ಯಾಹಾಶರೀರವಾಕ್।

ಅಶರೀರವಾಣಿ ನುಡಿಯಿತೆಂದಿದೆ. ಶರೀರಾಭಿಮಾನ ರಹಿತನಾದ್ದರಿಂದ ಅಶರೀರನೆನಿಸಿದ ಮುಖ್ಯಪ್ರಾಣನೆ ನುಡಿದ ಎಂಬ ಅಭಿಪ್ರಾಯದಿಂದ 'ವಾಯು ನುಡಿದ' ಎನ್ನಲಾಗಿದೆ. ಮಹಾಭಾರತದಲ್ಲಿ ದೇವದೂತ ನುಡಿದನೆಂದಿದೆ. ಶ್ರೀರಾಮದೂತನೆಂದರ್ಥ.

ವಿನಾಪರಾಧಾದ್ಧಿತತೋ ಗರೀಯಸೋ
ನ ಮಾತುಲೋ ವಧ್ಯತಾಮೇತಿ ವಿಷ್ಣೋಃ।
ಲೋಕಸ್ಯ ಧರ್ಮಾನನುವರ್ತತೋಽತಃ
ಪಿತ್ರೋರ್ವಿರೋಧಾರ್ಥಮುವಾಚ ವಾಯುಃ ॥ ೪ ॥

'ಸೋದರಮಾವ ವಧಾರ್ಹನೆನಿಸುವುದಿಲ್ಲ' ಎಂಬ ಲೋಕಧರ್ಮವನ್ನು ಅನುಸರಿಸುವ ಕೃಷ್ಣನಿಗೆ ಕಂಸ ತನಗಿಂತ ದೊಡ್ಡವರಲ್ಲಿ ಅಪರಾದ ಮಾಡದಿದ್ದರೆ ವಧ್ಯನಾಗುವುದಿಲ್ಲ. ಆದ್ದರಿಂದ ಕೃಷ್ಣನ ತಂದೆ ತಾಯಿಗಳಲ್ಲಿ ಕಂಸನಿಗೆ ವಿರೋಧ ಹುಟ್ಟಿಸುವುದಕ್ಕಾಗಿ ವಾಯು ನುಡಿದ.

ಇಲ್ಲಿ ವಸುದೇವ ದೇವಕಿಯರು ಕಂಸನಿಗಿಂತ ದೊಡ್ಡವರೆಂದಂತಾಯಿತು. ಆದರೆ ದೇವಕಿ ಹಿಂದೆ ಹೇಳಿದಂತೆ ಕಂಸನಿಗೆ ಸೋದರತ್ತೆಯಾಗಿದ್ದರೂ ಹುಟ್ಟಿನಿಂದ ತಂಗಿ. ವಯಸ್ಸಿನಲ್ಲಿ ಸಣ್ಣವಳು. ವಸುದೇವನೂ ಭಾವ.

ಲೋಕದೃಷ್ಟಿಯಿಂದ ಸಮಾನ. ಆದರಿಂದ ಅವರಲ್ಲಿ ಕಂಸ ಅಪಾರಧಗೈದರೆ ಅದು ಹೇಗೆ ಶ್ರೇಷ್ಠಾಪರಾಧವಾಗುತ್ತದೆ? ಈ ಪ್ರಶ್ನೆ ಎತ್ತಿಕೊಂಡು ವಾದಿರಾಜೀಯ ಹೇಳುತ್ತದೆ-ಕೃಷ್ಣನಿಗೆ ತಂದೆತಾಯಿಗಳು ಸೋದರ ಮಾವನಿಗಿಂತ ಶ್ರೇಷ್ಠರು. ಆದರಿಂದ ಅವರಲ್ಲಿ ಕಂಸ ಮಾಡುವ ಅಪರಾಧ ಶ್ರೇಷ್ಠಾಪರಾಧ.[1]

ಮೃತ್ಯುಸ್ತವಾಸ್ಯಾ ಭವಿತಾಷ್ಟಮಃ ಸುತೋ
ಮೂಢೇತಿ ಚೋಕ್ತೋ ಜಗೃಹೇ ಕೃಪಾಣಮ್ ।
ಪುತ್ರಾನ್ ಸಮರ್ಪ್ಯಾಸ್ಯ ಚ ಶೂರಸೂನು
ರ್ನಿಮೋಚ್ಯ ತಾಂ ತತ್ಸಹಿತತೋ ಗೃಹಂ ಯಯೌ ॥ ೫ ॥

'ಮೂಢ, ನಿನಗೆ ಈ ದೇವಕಿಯ ಎಂಟನೆಯ ಮಗ ಮೃತ್ಯುವಾಗುತ್ತಾನೆ' ಎಂದು ವಾಯು ನುಡಿದ. ಕಂಸ ಖಡ್ಗ ಹಿರಿದ. ಆಗ ವಸುದೇವ ಮಕ್ಕಳನ್ನು ವಾಗ್ದಾನ ಮಾಡಿ ದೇವಕಿಯನ್ನು ಬಿಡಿಸಿಕೊಂಡು ಅವಳೊಡನೆ ಗೃಹಪ್ರವೇಶ ಮಾಡಿದ.

ಮುಂದೆ ಹುಟ್ಟಬಹುದಾದ ಎಲ್ಲ ಮಕ್ಕಳನ್ನೂ ಹುಟ್ಟಿದೊಡನೆ ನಿನಗೆ ಒಪ್ಪಿಸುವೆನೆಂದು ವಸುದೇವ ಕಂಸನಿಗೆ ಮಾತುಕೊಟ್ಟು ದೇವಕಿಯನ್ನು ಬಿಡಿಸಿಕೊಂಡ.

ವಸುದೇವ ಪತ್ನಿ ರೋಹಿಣಿ

ಷಟ್ ಕನ್ಯಕಾಶ್ಚಾವರಜಾ ಗೃಹೀತಾ
ಸ್ತೇನೈವ ತಾಭಿಶ್ಚ ಮುಮೋದ ಶೂರಜಃ ।
ಬಾಹ್ಲೀಕಪುತ್ರೀ ಚ ಪುರಾ ಗೃಹೀತಾ
ಪುರಾಸ್ಯ ಭಾರ್ಯಾ ಸುರಭಿಸ್ತು ರೋಹಿಣೀ ॥ ೬ ॥

ದೇವಕಿಯ ಆರು ಮಂದಿ ತಂಗಿಯಂದಿರನ್ನೂ ವಸುದೇವ ಮದುವೆಯಾಗಿ ಅವರೊಡನೆ ಆನಂದಿಸಿದ. ಹಿಂದೆಯೆ ಬಾಹ್ಲೀಕ ರಾಜನ ಮಗಳಾದ ರೋಹಿಣಿಯನ್ನು ಅವನು ಮದುವೆಯಾಗಿದ್ದ. ಇವಳು ಪೂರ್ವದಲ್ಲಿ ಸುರಭಿ ಎಂಬ ಪತ್ನಿಯಾಗಿದ್ದಳು.

ಕಶ್ಯಪನ ಹೆಂಡತಿ ಸುರಭಿ ಬಾಹ್ಲೀಕ ರಾಜನ ಮಗಳಾಗಿ ರೋಹಿಣಿ ಎಂಬ ಹೆಸರಿನಿಂದ ಹುಟ್ಟಿದ್ದಳು. ಅವಳನ್ನು ದೇವಕಿಯ ಅನಂತರ ಅವಳ ಆರು ಮಂದಿ ತಂಗಿಯರಿಗಿಂತ ಮೊದಲಿಗೆ ವಸುದೇವ ವಿವಾಹವಾದ ಎಂದು ಜನಾರ್ದನೀಯ. ಆದರೆ ಅಲ್ಲಿ ಉದಾಹರಿಸಿದ ಹರಿವಂಶ ವಚನ ಹೀಗಿದೆ-

---

1. ಸ್ವಮುಖ್ಯಸಂಬಂಧಿನೋರ್ಮಾತಾಪಿತ್ರೋರ್ವಿರೋಧೇ ಸತಿ ತದಪೇಕ್ಷಯಾ ಸ್ವಾಮುಖ್ಯ ಸಂಬಂಧಿನೋ ಮಾತುಲಸ್ಯ ಲಘೀಯಸ್ತ್ವಾತ್ ವಧೋ ಯೋಗ್ಯಃ । -ವಾದಿರಾಜೀಯ

ಪೌರವೀ ರೋಹಿಣೀ ನಾಮ ಬಾಹ್ಲೀಕಸ್ಯಾತ್ಮಜಾಭವತ್
ಜ್ಯೇಷ್ಠಾ ಪತ್ನೀ ಮಹಾರಾಜ ದಯಿತಾನಕದುಂದುಭೇಃ॥

'ರೋಹಿಣೀ ವಸುದೇವನ ಜ್ಯೇಷ್ಠಪತ್ನಿ' ಎನ್ನಬೇಕಾದರೆ ದೇವಕಿಗಿಂತಲೂ ಮೊದಲೇ ಅವಳನ್ನು ವಿವಾಹವಾಗಿರಬೇಕು. ವರದರಾಜೀಯ ಹಾಗೇ ಹೇಳುತ್ತಿದೆ.

ಪೌಂಡ್ರಕ ವಾಸುದೇವ - ಶೃಂಗಾಲ ವಾಸುದೇವ

ರಾಜ್ಞಶ್ಚ ಕಾಶೀಪ್ರಭವಸ್ಯ ಕನ್ಯಕಾಂ ಸ ಪುತ್ರಿಕಾಪುತ್ರಕಧರ್ಮತೋಽವಹತ್।
ಕನ್ಯಾಂ ತಥಾ ಕರವೀರೇಶ್ವರಸ್ಯ ತೇನೈವ ಧರ್ಮೇಣ ದಿತಿಂ ದನುಂ ಪುರಾ ॥ ೭ ॥

ದಿತಿ ಕಾಶಿರಾಜನ ಮಗಳಾಗಿ ಹುಟ್ಟಿದಳು. ಅವಳನ್ನು ವಸುದೇವ ಪುತ್ರಿಕಾಪುತ್ರ ಧರ್ಮದಿಂದ ಮದುವೆಯಾದ. ಹಾಗೇ ಅದೇ ಧರ್ಮದಿಂದ ಕರವೀರರಾಜನ ಮಗಳಾಗಿ ಹುಟ್ಟಿದ ದನುವನ್ನೂ ಮದುವೆಯಾದ.

ಈ ಮಗಳಲ್ಲಿ ನಿನ್ನಿಂದ ಹುಟ್ಟುವ ಮಗ ನನಗೆ ಮಗನಾಗಬೇಕೆಂದು ಒಪ್ಪಂದ ಮಾಡಿಕೊಂಡು ಮಗಳನ್ನು ಮದುವೆ ಮಾಡಿಕೊಡುವುದು ಪುತ್ರಿಕಾ ಪುತ್ರಧರ್ಮ.

ಯೋ ಮನ್ಯತೇ ವಿಷ್ಣುರೇವಾಹಮಿತ್ಯಸೌ
ಪಾಪೋ ವೇನಃ ಪೌಂಡ್ರಕೋ ವಾಸುದೇವಃ।
ಜಾತಃ ಪುನಃ ಶೂರಜಾತ್ ಕಾಶಿಜಾಯಾಂ
ನಾನ್ಯೋ ಮತ್ತೋ ವಿಷ್ಣುರಸ್ತೀತಿ ವಾದೀ ॥ ೮ ॥

ನಾನೆ ವಿಷ್ಣು ಎಂದು ತಿಳಿಯುವ ಪಾಪಿ ವೇನನೆ ಪೌಂಡ್ರಕ ವಾಸುದೇವನಾಗಿ ವಸುದೇವನಿಂದ ಕಾಶಿರಾಜನ ಮಗಳಲ್ಲಿ ಹುಟ್ಟಿದ. ಹುಟ್ಟಿದ ಬಳಿಕ 'ನನಗಿಂತ ಬೇರೆ ವಿಷ್ಣುವಿಲ್ಲ' ಎಂದೇ ಹೇಳತೊಡಗಿದ.

ಧುಂಧುರ್ಹತೋ ಯೋ ಹರಿಣಾ ಮಧೋಃ ಸುತ
ಆಸೀತ್ ಸುತಾಯಾಂ ಕರವೀರೇಶ್ವರಸ್ಯ।
ಸೃಗಾಲನಾಮಾ ವಾಸುದೇವೋಽಥ ದೇವಕೀ-
ಮುದೂಹ್ಯ ಶೌರಿರ್ನ ಯಯಾವುಭೇ ತೇ ॥ ೯ ॥

ಮಧುದಾನವನ ಮಗನಾದ ಧುಂಧು ಹರಿಯಿಂದ ಹತನಾಗಿದ್ದ. ಅವನು ಕರವೀರ ರಾಜನ ಮಗಳಲ್ಲಿ ವಸುದೇವನಿಂದ ಸೃಗಾಲ ಎಂಬ ಹೆಸರಿನಿಂದ ಹುಟ್ಟಿದ. ವಸುದೇವ ದೇವಕಿಯನ್ನು ಮದುವೆಯಾದ ಬಳಿಕ ಈ ಇಬ್ಬರನ್ನೂ ಸೇರಲಿಲ್ಲ.

ತತಸ್ತತೌ ವೃಷ್ಣಿಶತ್ರೂ ಬಭೂವತು-
ಜ್ಯೇಷ್ಠೌ ಸುತೌ ಶೂರಸುತಸ್ಯ ನಿತ್ಯಮ್ ।
ಅನ್ಯಾಸು ಚ ಪ್ರಾಪ ಸುತಾನುದಾರಾನ್
ದೇವಾವತಾರಾನ್ ವಸುದೇವೋಽಖಿಲಜ್ಞಃ ॥ ೧೦ ॥

ಅಂದಿನಿಂದ ವಸುದೇವನ ಜ್ಯೇಷ್ಠ ಪುತ್ರರಾದ ಪೌಂಡ್ರಕ ಸೃಗಾಲರಿಬ್ಬರೂ ಯಾದವರಿಗೆ ನಿತ್ಯಶತ್ರುಗಳಾದರು. ಸರ್ವಜ್ಞನಾದ ವಸುದೇವ ಮುಂದೆ ಬೇರೆ ಪತ್ನಿಯರಲ್ಲಿ ದೇವಾಂಶ ಸಂಭೂತರಾದ ಉತ್ತಮ ಮಕ್ಕಳನ್ನು ಪಡೆದ.

ರೋಹಿಣಿಯಲ್ಲಿ ವಸುದೇವನಿಗೆ ಬಲಭದ್ರ ಶರ ಸಾರಣ ದುರ್ದಮ ಮೊದಲಾದ ಒಂಭತ್ತು ಮಂದಿ ಗಂಡುಮಕ್ಕಳು ಮತ್ತು ಚಿತ್ರಾ ಅಥವಾ ಸುಭದ್ರಾ ಎಂಬ ಹೆಣ್ಣುಮಗಳು ಹುಟ್ಟಿದರು. ಸುನಾಮ್ನಿಯಲ್ಲಿ ವೃಕದೇವ, ಗದ ಮುಂತಾದವರು ಹುಟ್ಟಿದರು.

ಯೇಯೇ ಹಿ ದೇವಾಃ ಪೃಥಿವೀಂ ಗತಾಸ್ತೇ
ಸರ್ವೇ ಶಿಷ್ಯಾಃ ಸತ್ಯವತೀಸುತಸ್ಯ ।
ವಿಷ್ಣೋರ್ಜ್ಞಾನಂ ಪ್ರಾಪ್ಯ ಸರ್ವೇಽಖಿಲಜ್ಞಾ
ಸ್ತಸ್ಮಾದ್ ಯಥಾಯೋಗ್ಯತಯಾ ಬಭೂವುಃ ॥ ೧೧ ॥

ಭೂಮಿಯಲ್ಲಿ ಅವತರಿಸಿದ ದೇವತೆಗಳೆಲ್ಲರೂ ವೇದವ್ಯಾಸರಿಗೆ ಶಿಷ್ಯರು. ಅವರೆಲ್ಲರೂ ವೇದವ್ಯಾಸರಿಂದ ವಿಷ್ಣುತತ್ವಜ್ಞಾನವನ್ನು ಪಡೆದು ಯೋಗ್ಯತಾನುಸಾರ ಸರ್ವಜ್ಞರಾದರು.

ದೇವಕಿಯ ಮಕ್ಕಳ ಹತ್ಯೆ

ಮರೀಚಿಜಾಃ ಷಣ್ಮುನಯೋ ಬಭೂವು
ಸ್ತೇ ದೇವಲಂ ಪ್ರಾಹಸನ್ ಕಾರ್ಶ್ಯಹೇತೋಃ ।
ತಚ್ಛಾಪತಃ ಕಾಲನೇಮಿಪ್ರಸೂತಾ
ಅವಧ್ಯತಾರ್ಥಂ ತಪ ಏವ ಚಕ್ರುಃ ॥ ೧೨ ॥

ಮರೀಚಿ ಮುನಿಯ ಪುತ್ರರು ಆರು ಮಂದಿ ಮುನಿಗಳಿದ್ದರು. ಅವರು ದೇವಲ ಮುನಿಯನ್ನು ಕೃಶತ್ವ ನಿಮಿತ್ತ ಹಾಸ್ಯ ಮಾಡಿದರು. ಅವನ ಶಾಪದಿಂದ ಕಾಲನೇಮಿಯ ಮಕ್ಕಳಾಗಿ ಜನಿಸಿ ಅವಧ್ಯತ್ವಕ್ಕಾಗಿ ತಪಸ್ಸು ಮಾಡಿದರು.

ದೇವಲ ಮುನಿ ಕಶ್ಯಪಪುತ್ರನಾದ ಅಸಿತಮುನಿಯ ಮಗ. ಹಿಮಾಲಯನ ಮಗಳಾದ ಏಕಪರ್ಣೆ ಇವನ ತಾಯಿ. ಅವಳ ಮಾನಸಪುತ್ರ ಈತ.

ವೇದವ್ಯಾಸರ ಶಿಷ್ಯ. ಬ್ರಹ್ಮವಾದಿ, ಧರ್ಮಶಾಸ್ತ್ರಜ್ಞ ತಪಸ್ಸಿನಿಂದ ಕೃಶನಾಗಿದ್ದ. ಕಾಮಜ್ವರದಿಂದ ಕೃಶನಾಗಿರುವನೆಂದು ಮರೀಚಿ ಪುತ್ರರು ಹಾಸ್ಯ ಮಾಡಿ ಅವನ ಶಾಪದಿಂದ ಸ್ಮರ, ಉದ್ಗೀಥ, ಪರಿಷ್ವಂಗ, ಪತಂಗ, ಕ್ಷುದ್ರಭೃತ್, ಘೃಣೀ ಎಂದು ಆರು ಮಂದಿ ಕಾಲನೇಮಿಯ ಮಕ್ಕಳಾಗಿ ಷಡ್‌ಗರ್ಭರೆಂಬ ಹೆಸರಿನಿಂದ ಅಸುರರಾಗಿ ಜನಿಸಿದರು. ಪಾತಾಳದಲ್ಲಿ ನೀರೊಳಗೆ ಗರ್ಭಗೃಹದಲ್ಲಿಯೆ ಸದಾ ವಾಸಮಾಡುವವರು ಈ ಷಡ್‌ಗರ್ಭರು. ಅವಧ್ಯತ್ವವರ ಪಡೆಯುವುದಕ್ಕಾಗಿ ಬ್ರಹ್ಮನನ್ನು ಕುರಿತು ತಪಸ್ಸುಮಾಡಿದರು.

ಭಾಗವತ ಶ್ರೀಧರಿಯ ಪಾಠ ಪ್ರಕಾರ ಬ್ರಹ್ಮನು ಮಗಳನ್ನು ಮೋಹಿಸಿದನೆಂದು ಹಾಸ್ಯ ಮಾಡಿ ಮರೀಚಿಪುತ್ರರು ಅಸುರರಾಗಿ ಜನಿಸಿದ್ದರು.

ಧಾತಾ ಪ್ರಾದಾದ್ ವರಮೇಷಾಂ ತಥೈವ
ಶಶಾಪ ತಾನ್ ಕ್ಷ್ಮಾತಲೇ ಸಂಭವಧ್ವಮ್ ।
ತತ್ರ ಸ್ವತಾತೋ ಭವತಾಂ ನಿಹಂತೇ
ತ್ಯಾತ್ಮಾನ್ಯತೋ ವರಲಿಪ್ಸೂನ್ ಹಿರಣ್ಯಃ ॥ ೧೩ ॥

ಬ್ರಹ್ಮ ಅವರಿಗೆ ಹಾಗೇ ವರವಿತ್ತ. ಹಿರಣ್ಯಕಶಿಪು ಜಗದೀಶ್ವರ ತಾನೇ ಇರಲು ತನ್ನನ್ನು ಬಿಟ್ಟು ಇನ್ನೊಬ್ಬರಿಂದ ವರಪಡೆಯಲು ಆಶಿಸಿದರೆಂದು ಅವರಿಗೆ ಶಾಪ ನೀಡಿದ. 'ನೀವು ಭೂಮಿಯಲ್ಲಿ ಹುಟ್ಟಿರಿ. ಆಗ ನಿಮ್ಮ ತಂದೆ ನಿಮ್ಮನ್ನು ಕೊಲ್ಲುತ್ತಾನೆ' ಎಂದು.

ಹಿರಣ್ಯಕಶಿಪುವೂ ಬ್ರಹ್ಮನ ವರಬಲದಿಂದಲೆ ಬಲಿಷ್ಠನಾದವ. ಆದರೆ ಮೊದಲಿಗೆ ಅಶಕ್ತನಾಗಿದ್ದಾಗ ಅವನಲ್ಲಿ ಅಹಂಕಾರವಿರಲಿಲ್ಲ. ವರಪಡೆದು ಬಲಿಷ್ಠನಾದ ಮೇಲೆ ಅಹಂಕಾರ ಬಂದಿತು. ತನ್ನ ತಮ್ಮ ಹಿರಣ್ಯಾಕ್ಷನ ಮಗನಾದ ಕಾಲನೇಮಿಯ ಮಕ್ಕಳು ಇವರು. ತಮ್ಮ ತಂದೆಗೂ ದೊಡ್ಡಪ್ಪನಾದ ಜಗದೀಶ್ವರನಾದ ತಾನೆ ಇರಲು ತನ್ನನ್ನು ಬಿಟ್ಟು ತೃಣಪ್ರಾಯನಾದ ಬ್ರಹ್ಮನಿಂದ ಅವಧ್ಯತ್ವವರ ಪಡೆದರೆಂದು ಸಿಟ್ಟಾಗಿ ಹಿರಣ್ಯಕಶಿಪು ಬ್ರಹ್ಮನ ಆ ಅವಧ್ಯತ್ವವರಕ್ಕೆ ವಿಪರೀತವಾಗಿ 'ನೀವು ಇನ್ನೊಮ್ಮೆ ಹುಟ್ಟಿ ನಿಮ್ಮ ತಂದೆಯಿಂದಲೇ ವಧ್ಯರಾಗಿರಿ' ಎಂದು ಶಪಿಸಿದ.

ದುರ್ಗಾ ತದಾ ತಾನ್ ಭಗವತ್ಪ್ರಚೋದಿತಾ
ಪ್ರಸ್ಥಾಪಯಿತ್ವಾಪ್ರಚಕರ್ಷ ಕಾಯಾತ್ ।
ಕ್ರಮಾತ್ ಸಮಾವೇಶಯದಾಶು ದೇವಕೀ-
ಗರ್ಭಾಶಯೇ ತಾನ್ ನ್ಯಹನಚ್ಚ ಕಂಸಃ ॥ ೧೪ ॥

ಭಗವಂತನಿಂದ ಪ್ರೇರಿತಳಾದ ದುರ್ಗೆ ಆ ಕಾಲನೇಮಿಪುತ್ರರನ್ನು ಕ್ರಮವಾಗಿ ನಿದ್ರೆಗೊಳಿಸಿ ಅವರ ಶರೀರದಿಂದ ಸೆಳೆದಳು. ಬೇಗನೆ ದೇವಕಿಯ ಗರ್ಭಾಶಯದಲ್ಲಿ ಪ್ರವೇಶಗೊಳಿಸಿದಳು. ಅವರನ್ನು ಕಂಸ ಕೊಂದ.

ದುರ್ಗೆ ಷಡ್ಗರ್ಭರಲ್ಲಿ ಒಬ್ಬನನ್ನು ಒಂದು ವರ್ಷಕಾಲ ಪರ್ವತ ಗುಹೆಯಲ್ಲಿ ಮಲಗಿಸಿ ಗಾಢನಿದ್ರೆಯಲ್ಲಿ ಇರಿಸುವಳು. ಆಗಲೆ ಒಂದು ಅಂಶದಿಂದ ಅವನನ್ನು ದೇಹದಿಂದ ಹೊರಗೆ ಸೆಳೆದು ತಂದು ದೇವಕಿಯ ಗರ್ಭದಲ್ಲಿರಿಸುವಳು. ನವ ಮಾಸ ತುಂಬಿ ದೇವಕಿ ಹಡೆದಾಗ ಆ ಶಿಶುವನ್ನು ಕಂಸ ಕೊಲ್ಲುತ್ತಾನೆ. ಆಗ ಆ ಜೀವನನ್ನು ತಿರುಗಿ ಗುಹೆಯಲ್ಲಿ ನಿದ್ದೆ ಮಾಡುವ ಶರೀರದಲ್ಲಿ ತಂದು ಸೇರಿಸುತ್ತಾಳೆ. ಅಲ್ಲಿಗೆ ಒಂದು ವರ್ಷವಾಗುವಾಗ ಆ ಜೀವ ನಿದ್ದೆಯಿಂದ ಎಚ್ಚರಗೊಂಡು ಎದ್ದು ಹೊರಟುಹೋಗುತ್ತಾನೆ. ಬಳಿಕ ಇನ್ನೊಬ್ಬ ಷಡ್ಗರ್ಭನ ಸರದಿ. ಹೀಗೆ ಆರು ಮಂದಿಯನ್ನು ದೇವಕಿಯ ಗರ್ಭದಲ್ಲಿ ಹುಟ್ಟಿಸಿ ಕಂಸನ ಕೈಯಿಂದ ಕೊಲ್ಲಿಸುತ್ತಾಳೆ ದುರ್ಗೆ. ಇದರಿಂದ ಯಾವ ಶರೀರದಲ್ಲಿ ಅವಧ್ಯತ್ವ ವರ ಬಂದಿತ್ತೋ ಆ ಶರೀರದಲ್ಲಿ ಅವಧ್ಯರಾಗಿಯೆ ನಿದ್ದೆ ಮಾಡಿದ್ದರಿಂದ ಬ್ರಹ್ಮನ ವರ ಸಾರ್ಥಕವಾಯಿತು. ದೇವಕಿಪುತ್ರ ಶರೀರದಲ್ಲಿ ಕಂಸ ಅವರನ್ನು ಕೊಂದುದರಿಂದ ಹಿರಣ್ಯಕಶಿಪುವಿನ ಶಾಪವೂ ಫಲಿಸಿತು. ಏಕೆಂದರೆ ಕಂಸ ಇನ್ನಾರೂ ಅಲ್ಲ. ಈ ಷಡ್ಗರ್ಭರ ತಂದೆಯಾದ ಕಾಲನೇಮಿಯೆ. ಅದರಿಂದ ತಂದೆಯಿಂದಲೇ ಮರಣ ಬಂದಂತಾಯಿತು. ಹೀಗೆ ಪರಸ್ಪರ ವಿರುದ್ಧವಾದ ವರಶಾಪಗಳೆರಡನ್ನೂ ಅಘಟಿತ ಘಟನಾಶಕ್ತಿ ಉಳ್ಳ ವಿಷ್ಣುಮಾಯೆ ದುರ್ಗೆಯೇ ಕೂಡಿಸಬೇಕೆಂದು ಶ್ರೀಹರಿ ಅವಳಿಗೇ ಆಜ್ಞೆಮಾಡಿದ. ಮುಂದೆ ಈ ಷಡ್ಗರ್ಭರು ಸುತಲದಲ್ಲಿ ಬಲಿಚಕ್ರವರ್ತಿಯ ಬಳಿ ಇದ್ದರು. ದ್ವಾರಕೆಯಲ್ಲಿ ದೇವಕಿ ತನ್ನ ಹಿಂದಿನ ಆರು ಮಕ್ಕಳನ್ನು ನೋಡಲು ಬಯಸಿದಾಗ ಶ್ರೀಕೃಷ್ಣ ಬಲಿಯ ಜೊತೆಗಿದ್ದ ಷಡ್ಗರ್ಭರ ಅವಧ್ಯ ಶರೀರವನ್ನು ನಾಶಪಡಿಸಿ ಎಳೆ ಮಗುವಿನ ರೂಪದಿಂದ ತಂದು ತೋರಿಸಿದ. ಬ್ರಹ್ಮನ ವರವನ್ನೂ ದೇವಲ ಮುನಿಯ ಶಾಪವನ್ನೂ ಸರ್ವಶಕ್ತನಾದ ತಾನು ಉಲ್ಲಂಘಿಸಿ, ತಾನು ಕುಡಿದುಳಿದ ಮಾತೆಯ ಎದೆ ಹಾಲನ್ನು ಸವಿದ ಆ ಮಕ್ಕಳಿಗೆ ದಿವ್ಯಗತಿಯನ್ನು ಕೊಟ್ಟ ಏಕೆಂದರೆ ಕೃಷ್ಣಮೊದಲಿಗೆ ಮೂಲರೂಪ ತೋರಿ ಬಳಿಕ ಶಿಶುರೂಪ ತಾಳಿದೊಡನೆ ದೇವಕಿಯ ಎದೆ ಹಾಲನ್ನು ಕುಡಿದೇ ಗೋಕುಲಕ್ಕೆ ಹೋಗುತ್ತಾನೆ ಎಂಬುದು 'ಪೀತಶೇಷಂ ಗದಾಭೃತಃ' ಎಂಬ ಭಾಗವತವಚನದಿಂದ ಸೂಚಿತವಾಗುತ್ತದೆ.

ಭಾಗವತದಲ್ಲಿ 'ಸುತಾನ್ ಶಪಿತುಮುದ್ಯತಂ' 'ಹಿರಣ್ಯಕಶಿಪೋರ್ಜಾತಾಃ' ಎಂದು ಹಿರಣ್ಯಕಶಿಪು ತನ್ನ ಮಕ್ಕಳನ್ನೇ ಶಪಿಸಿದನೆಂದೂ ಷಡ್ಗರ್ಭರು ಹಿರಣ್ಯಕಶಿಪುವಿನ ಮಕ್ಕಳಾಗಿ ಜನಿಸಿದವರೆಂದೂ ಹೇಳಿದಂತೆ ಕಾಣುತ್ತದೆ. ಇದು ಯುಕ್ತವಾಗುವುದಿಲ್ಲ. ಏಕೆಂದರೆ ಷಡ್ಗರ್ಭರು ಹಿರಣ್ಯಕಶಿಪುವಿನ ಮಕ್ಕಳೇ ಆಗಿದ್ದರೆ ಪುನಃ ದೇವಕಿಯ ಉದರದಲ್ಲಿ ಜನಿಸಲು ಕಾರಣವಿಲ್ಲವೆಂದಾಗುತ್ತದೆ. ಹಿರಣ್ಯಕಶಿಪು ಅಹಂಕಾರದಿಂದ ತನ್ನ ಮಕ್ಕಳನ್ನೇ ಭೂಮಿಯಲ್ಲಿ ಹುಟ್ಟಿರಿ ಎಂದು ಶಪಿಸಿದನೆಂದರೆ ಆ ಶಾಪ ಪ್ರಕಾರ ದೇವಕಿಯ ಮಕ್ಕಳಾಗಿ ಹುಟ್ಟಲಿ, ಕಂಸನಿಂದಲೇ ಎಲ್ಲರೂ ಏಕೆ ಸಾಯಬೇಕು? ಶಾಪಪ್ರಕಾರ ತಂದೆಯಿಂದಲೆ ಸಾಯಬೇಕು ತಾನೆ? ಅದಕ್ಕೆ ಹಿರಣ್ಯಕಶಿಪು ತನ್ನ ಶಾಪಾನುಸಾರ ತಾನೇ ಹುಟ್ಟಿ ಆ ಮಕ್ಕಳನ್ನು ಕೊಲ್ಲಬೇಕಾಗುತ್ತದೆ, ಕಂಸನಲ್ಲ. ಅದರಿಂದ ತನಗೆ ತಾನೇ ಶಾಪಕೊಟ್ಟಂತಾಗುತ್ತದೆ. ಅದರಿಂದ ನಿರ್ಣಯದಲ್ಲಿ ಷಡ್ಗರ್ಭರು ಕಾಲನೇಮಿಯ ಮಕ್ಕಳೆಂದೇ ನಿರ್ಣಯಿಸಲಾಗಿದೆ. ಭಾಗವತದಲ್ಲಿ 'ಹಿರಣ್ಯಕಶಿಪೋರ್ಜಾತಾಃ' ಎಂದರೆ ಹಿರಣ್ಯಕಶಿಪುವಿನ ಶಾಪನಿಮಿತ್ತವಾಗಿ ದೇವಕಿಯ ಉದರದಲ್ಲಿ ಹುಟ್ಟಿದವರು ಎಂದರ್ಥ. ಹಿರಣ್ಯಕಶಿಪುವಿನ ಮಕ್ಕಳಾಗಿ ಹುಟ್ಟಿದವರೆಂದರ್ಥವಲ್ಲ ಎಂದು ವಾದಿರಾಜೀಯದಲ್ಲಿ ಉಕ್ತವಾಗಿದೆ.

ಹರಿವಂಶದಲ್ಲಿ-

'ಷಡ್ಗರ್ಭಾ ನಾಮ ದಾನವಾಃ' 'ಪುತ್ರಾ ವೈ ಕಾಲನೇಮಿನಃ'

'ತೇ ತಾತತಾತಂ ಸಂತ್ಯಜ್ಯ ಹಿರಣ್ಯಕಶಿಪುಂ ಪುರಾ।

ಉಪಾಸಾಂಚಕ್ರಿರೇ ದೈತ್ಯಾಃ ಪುರಾ ಲೋಕಪಿತಾಮಹಂ॥'

ಎಂದು ಮುಂತಾಗಿ ನಿರ್ಣಯದಲ್ಲಿ ಹೇಳಿದಂತೆಯೆ ಸ್ಪಷ್ಟವಾಗಿ ಹೇಳಿದೆ.

'ತಾನ್ ನ್ಯಹನಚ್ಚ ಕಂಸಃ' ಎಂಬಲ್ಲಿ ಚಕಾರದಿಂದ ಕಂಸನಿಗೆ ದೇವಕಿಯ ಎಲ್ಲ ಮಕ್ಕಳಲ್ಲಿಯೂ ಇದು ಎಂಟನೆ ಮಗು, ವಿಷ್ಣುವಿನದೇ ಅವತಾರವೆಂಬ ಭ್ರಾಂತಿ ಬಂದಿತ್ತೆಂದು ವಿವಕ್ಷಿತವಾಗಿದೆ. ನಾರದರು ವಿಷ್ಣುವೇ ನಿನ್ನನ್ನು ಕೊಲ್ಲುತ್ತಾನೆ ಎಂದಿದ್ದರು ಮತ್ತು ಬಲಿಷ್ಠನಾದ ತನ್ನನ್ನು ಕೊಲ್ಲಲು ವಿಷ್ಣುವೇ ಶಕ್ತ. ಬೇರಾರೂ ಶಕ್ತರಲ್ಲ. ಅದರಿಂದ ದೇವಕಿಯ ಮಗಳು ತನಗೆ ಮೃತ್ಯುವೆನಿಸಬೇಕಾದರೆ ಅದು ವಿಷ್ಣುವಿನ ಅವತಾರವೇ ಆಗಿರಬೇಕೆಂದು ಕಂಸ ಊಹಿಸಿಕೊಂಡಿದ್ದಾನೆ. ಅದರಿಂದ ಎಂಟು ಮಕ್ಕಳಲ್ಲಿ ಒಂದು

ನಿರ್ದಿಷ್ಟಕ್ರಮ ವಿವಕ್ಷಿತವಾಗದಿರುವಾಗ ಎಲ್ಲ ಮಕ್ಕಳೂ ಎಂಟನೆಯವ ರಾಗುವುದರಿಂದ ಅವರೆಲ್ಲರೂ ವಿಷ್ಣುವಿನ ಅವತಾರವೇ ಆಗಿರಬೇಕೆಂದು ನಿರ್ಣಯಿಸಿ ಕಂಸ ಎಲ್ಲ ಆರೂ ಮಕ್ಕಳನ್ನೂ ಕೊಂದ. ಕಂಸನ ಈ ಭ್ರಾಂತಿಗೆ ಕಾರಣ ಆರು ಮಂದಿ ಷಡ್ಗರ್ಭರಿಗೂ ಹಿರಣ್ಯಕಶಿಪು ಶಾಪಕೊಡಲು ಕಾರಣವಾದ ಅವರ ಪ್ರಾರಬ್ಧವೇ ಹೊರತು ಬೇರೇನಲ್ಲ ಎಂದು ವಾದಿರಾಜೀಯದಲ್ಲಿ ಹೇಳಿದೆ.[1]

ಆರು ಮಕ್ಕಳ ಹೆಸರುಗಳು – ಕೀರ್ತಿಮಾನ್, ಸುಷೇಣ, ಭದ್ರಸೇನ, ಋಜು, ಸಂಮರ್ದನ ಮತ್ತು ಭದ್ರ ಎಂದು.

---

1. ತೇ ದೇವಲಂ ಪ್ರಾಹಸನ್ ಕಾರ್ಶ್ಯಹೇತೋರಿತ್ಯತ್ರ ಕಾರ್ಶ್ಯಂ ಕಾಮಜ್ವರೇಣ ಕೃಶಾಂಗತ್ವಂ। ನನ್ವೇವಂ 'ಸುತಾಂಶ್ಚಪಿತುಮುದ್ಯತ'ಮಿತಿ ಭಾಗವತವಚನಸ್ಯ ವಿರೋಧಃ। 'ತಚ್ಛ್ರಾಪತಃ ಕಾಲನೇಮಿಪ್ರಸೂತಾಃ' ಇತ್ಯಸ್ಯ 'ಹಿರಣ್ಯಕಶಿಪೋರ್ಜಾತಾ' ಇತಿ ಭಾಗವತೋಕ್ತೇಶ್ಚ ವಿರೋಧ ಇತಿ ಚೇನ್ನ ಹಿರಣ್ಯಕಶಿಪೋಃ ಪುತ್ರತ್ವೇ ಪುನರ್ದೇವಕ್ಯಾಂ ಜನ್ಮನಿ ಕಾರಣಾಭಾವಾತ್ ಶಾಪೋಽವಶ್ಯಂ ವಕ್ತವ್ಯಃ। ಪಿತ್ರಾ ತೇನೈವ ಹಿರಣ್ಯಕಶಿಪುನಾ ಅಹಂಕಾರವಶಾತ್ ಆತ್ಮಾನ್ಯತೋ ವರಲಿಪ್ಸೂನ್ ಪ್ರತಿ ಕುಪಿತೇನ ಶಾಪೋ ದತ್ತಶ್ಚೇತ್ ಭೂಮೌ ಜಾಯಂತಾಂ, ಕಂಸೇನೈವ ಹನನೇ ನ ಕಿಂಚಿತ್ ಕಾರಣಂ। ಸ್ವಸ್ಯೈವ ಪುತ್ರತ್ವೇ ತು ಸ್ವತಾತೋ ಭವತಾಂ ಹಂತೇತಿ ಸ್ವಸ್ಯಾಪಿ ಜನ್ಮಘಟಕಂ ಶಾಪಂ ನ ದದ್ಯಾದೇವ। ಕ್ರೋಧವಶಾದ್ ದದ್ಯಾಚ್ಚೇದಪಿ ಭೂಮೌ ಜಾತೇನ ಹಿರಣ್ಯಕಶಿಪುನೈವ ಹಂತವ್ಯಾಃ, ನತು ಕಂಸೇನ। ಕಾಲನೇಮಿಜಾತತ್ವೇ ತು 'ತತ್ರ ಸ್ವತಾತೋಭವತಾಂ ನಿಹಂತೇ'ತಿ ಹಿರಣ್ಯಕಶಿಪೋಃ ಶಾಪೋಽಪಿ ಅಹಂಕಾರವಶಾತ್ ಆತ್ಮಾನ್ಯತೋ ವರಲಿಪ್ಸಯಾ ಕಾರಣೇನ ಘಟೇತೈವ। ಕಂಸೇನೈವ ಹನನಮಪಿ ಭಾಗವತೋಕ್ತಂ ಸುತರಾಂ ಘಟೇತ। ಅತಸ್ತಾತ್ಪರ್ಯಕಾರೋಕ್ತಮೇವ ತತ್ತ್ವಂ। ಭಾಗವತೋಕ್ತೇಃ ಕಾ ಗತಿರಿತಿ ಚೇದಿತ್ಥಂ। ಅಮುನಾ ಅವದ್ಯಕರ್ಮಣಾ ದೇವಲ ಪರಿಹಾಸಾಖ್ಯಾವದ್ಯಕರ್ಮಣಾ ಜಾತೇನ ತೇನ ಕುಪಿತ ದೇವಲ ಶಾಪೇನ ಅಸುರೀಂ ಕಾಲನೇಮ್ಯಾಖ್ಯಾಸುರ ಸಂಬಂಧಿನೀಂ ಯೋನಿಂ ತದ್ಭಾರ್ಯಾಯೋನಿಮಗುಃ। ಏವಂ ಜಾತಾಸ್ತೇ ಪುತ್ರಾ ಹಿರಣ್ಯಕಶಿಪೋರ್ನಿಮಿತ್ತಾತ್ ಶಾಪಾದಿತಿ ಯಾವತ್। ಯೋಗಮಾಯಯಾ ದುರ್ಗಯಾ ದೇವಾಕ್ಯಾ ಜಠರೇ ಜಾತಾಃ...। ಯೋಗ ಮಾಯಯೇತಿ ವದತಾ 'ಪ್ರಸ್ವಾಪಯಿತ್ವಾಪ್ರಚಕರ್ಷ ಕಾಯಾತ್' ಇತಿ ತಾತ್ಪರ್ಯೋಕ್ತಂ ಪ್ರಮೇಯಂ ಸೂಚಿತಂ। ಅನ್ಯಥಾ ಕಂಸಕರಾನ್ಮರಣಾನಂತರಂ ಸ್ವಮೂಲ ಮುನಿರೂಪ ಪ್ರಾಪ್ತಿರೇವ ಸ್ಯಾತ್। ಪುನರ್ದಾನವ ದೇಹಂ ಪ್ರವಿಶ್ಯ ಮಹಾಬಲಿನಿಕಟೇಽವಸ್ಥಾನೇ ಕಿಂ ಕಾರಣಂ? ಕಥಂ ಚ ತದ್ ಘಟತೇ?...

ಆತ್ಮಾನ್ಯತೋ ವರಲಿಪ್ಸೂನ್ ಹಿರಣ್ಯ ಇತ್ಯತ್ರ ಹಿರಣ್ಯೋ ಹಿರಣ್ಯಕಶಿಪುರಾತ್ಮಾನ್ಯತೋ ಬ್ರಹ್ಮಣೋ ವರಲಿಪ್ಸೂನಿತಿ ಸಂಬಂಧಃ। ತರ್ಹಿ ಸ್ವಯಂ ಚತುರ್ಮುಖಾತ್ ಕಥಂ ವರಂ ಜಗ್ರಾಹೇತಿ ಚೇತ್ ಸತ್ಯಂ। ತದಾ ಮಹಾನಹಂಕಾರೋ ಹಿರಣ್ಯಕಶಿಪೋರ್ನಾಸೀತ್। ಬ್ರಹ್ಮಣೋ ವರದಾನಾನಂತರಂ ದೃಪ್ತಃ ಸನ್ ಭಗವಂತಮಪ್ಯಜಾನಾನೋ ಬ್ರಹ್ಮಾಣಮಪಿ ತೃಣೀಕೃತ್ಯಾಹಂಕಾರವಶಾಚ್ಛಶಾಪೇತಿ ಭಾವಃ।

ತದಾ-ಹಿರಣ್ಯಕಶಿಪು ಶಾಪದಶಾಯಾಂ ಭಗವತ್ ಪ್ರಚೋದಿತಾ ದುರ್ಗಾ ತಾನ್-ಅಸುರದೇಹಸ್ಥಿತ

'ತೇ ದೇವಕಂ ಪ್ರಾಹಸನ್ ಕಾರ್ಶ್ಯಹೇತೋಃ।'

ಎಂದು ಜನಾರ್ದನೀಯ ವರದರಾಜೀಯಾನುಗುಣ ಪಾಠ. ಹೃಷಿಕೇಶತೀರ್ಥರ ಪಾಠವೂ ಹಾಗೇ ಇದೆ. ಪ್ರಾಯಃ ದೇವಲ ಮುನಿಗೇ ದೇವಕ ಎಂದು ಇನ್ನೊಂದು ಹೆಸರು ಇರಬಹುದು. ವಾದಿರಾಜೀಯದಲ್ಲಿ ದೇವಲ ಎಂದೇ ಪಾಠವಿದೆ.

ಕಾಲನೇಮಿ ಪುತ್ರಾನ್, ಪ್ರಸ್ವಾಪಯಿತ್ವಾ ಕ್ರಮೇಣ ವತ್ಸರ ಪರ್ಯಂತಂ ಪ್ರಸ್ವಾಪಯಿತ್ವಾ ಕಾಯಾತ್-ಜೀವಮಾನಾದೇವ ತದೀಯ ದೇಹಾತ್, ಪ್ರಚಕರ್ಷ-ಜೀವಮಾತ್ರಂ ಪ್ರಚಕರ್ಷ। ಕ್ರಮಾತ್ ತಾನ್ ದೇವಕೀಗರ್ಭಾಶಯೇ ಆಶು ಸಮಾವೇಶಯತ್, ಕಂಸಸ್ತಾನ್ ನ್ಯಹನಚ್ಚೇತಿ ಚ ಶಬ್ದೇನ ತದೈವ ದುರ್ಗಾ ಪುನಶ್ಚ ಸುಪ್ತದೇಹೇಷು ಪ್ರಾವೇಶಯದಿತಿ ಸಮುಚ್ಚಿನೋತಿ। ಪ್ರಸ್ವಾಪಯಿತ್ವಾ ಪ್ರಚಕರ್ಷ ಕಾಯಾತ್ ಇತಿ ವಚನಾತ್ ದುರ್ಗಾ ಏಕೈಕಪುತ್ರಂ ದೇವಕೀಗರ್ಭೇ ಸಂವತ್ಸರ ಮಾತ್ರಂ ಸ್ಥಾಪಯಿತ್ವಾ ತತ ಏಕೈಕಶಿಶೋಃ ಕಂಸೇನ ಹನನೇ ಕೃತೇ ಸತಿ ಪುನಃ ಕ್ರಮೇಣ ತಾನ್ ಸ್ವಸ್ವಪೂರ್ವದೇಹೇಷು ಪ್ರವೇಶಯತಿ। ಏವಂ ಚ ಬ್ರಹ್ಮಣಾ ಯೇಷು ದೇಹೇಷ್ವವಧೃತ್ವವರೋ ದತ್ತಃ ತೇಷಾಂ ದೇಹಾನಾಂ ವಧಾಭಾವಾತ್ ಬ್ರಹ್ಮವರೋಽಪಿ ಸಾರ್ಥಕಃ। ದೇಹಾಂತರೇಣ ಭೂಮೌ ಜಾತಾನಾಂ ಕಂಸಾಖ್ಯ ಸ್ವಪಿತೃಭೂತ ಕಾಲನೇಮಿ ಕರೇಣೈವ ವಧಾತ್ ಹಿರಣ್ಯಕಶಿಪೋಃ ಶಾಪೋಽಪಿ ಸಾರ್ಥಕಃ। ಇದಮುಭಯಮಪಿ ಅಘಟಿತ ಘಟಕ ಶಕ್ತಿಮತೀ ವಿಷ್ಣೋರ್ಮಾಯಾ ದುರ್ಗೈವ ಘಟಯಾಮಾಸೇತಿ ಭಾವಃ। ಅತ ಏವ ದೇವಕ್ಯಾ ದ್ವಾರವತ್ಯಾಂ ಷಟ್ ಕುಮಾರಾ ದ್ರಷ್ಟವ್ಯಾ ಇತಿ ಪ್ರಾರ್ಥಿತೇ ಸತಿ ಕೃಷ್ಣೇನ ಬಲಿಲೋಕೇ ಬ್ರಹ್ಮದತ್ತ ವರೇಣಾವಧ್ಯ ಪೂರ್ವದೇಹೇ ಸ್ಥಿತಾಂಸ್ತಾನ್ ಬಲಿಸದನಾತ್ ತೇಷಾಂ ಪೂರ್ವದೇಹಾನ್ ನಾಶಯಿತ್ವಾ ಶಿಶುರೂಪೇಣಾನೀಯ ಮಾತ್ರೇ ದರ್ಶಯಿತ್ವಾ ಬ್ರಹ್ಮವರಂ ದೇವಲಶಾಪಂ ಚ ದುರ್ಬಲತ್ವಾತ್ ಸ್ವಶಕ್ಯ್ಯೋಲ್ಲಂಘ್ಯ ತೇಷಾಂ ದಿವ್ಯಾ ಗತಿರ್ದತ್ತೇತಿ ಭಾಗವತೇ ಕಥಾಪ್ಯುಪಪನ್ನೈವ ಜಾತಾ ॥

ತಾನ್ ನ್ಯಹನಚ್ಚಕಂಸ ಇತ್ಯತ್ರ ಕರಸ್ಥದಶವರಾಹಾಣಾಂ ಏಕೈಕ ಮಾರಭ್ಯ ಸಂಖ್ಯಾಯಾಂ ಸರ್ವೇಽಪಿ ಯಥಾ ದಶಮಾ 'ಭವಂತಿ ಏವಂ ಕ್ರಮಮವಿವಕ್ಷಯಿತ್ವಾ ಸ್ವರೂಪ ಮಾತ್ರಗಣನಾಯಾಂ ಸರ್ವೇಷ್ಯ ಷ್ಟಮಾ ಭವಂತೀತಿ ಸರ್ವತ್ರಾಪ್ಯಷ್ಟಮತ್ವಶಂಕಯಾ ಕಂಸಸ್ತಾನ್ ನ್ಯಹನದಿತಿ ಶಂಕಾಸಮುಚ್ಚಯಾರ್ಥಶ್ಚ ಶಬ್ದಃ। ಅತ ಏವೋಕ್ತಂ ಭಾಗವತೇ ಜಾತಂ ಜಾತಂ ತಯೋಃ ಪುತ್ರಂ ಅಹನ್ನಜನಿ ಶಂಕಯೇತಿ। ಸ್ವವಧಂ ಪ್ರತಿ ದೇವಕ್ಯಾ ಗರ್ಭಸಂಭೂತಂ ವಿಷ್ಣ್ವಂಶಂ ನಾರದವಾಕ್ಯೇನ, ವಿಷ್ಣೋರನ್ಯೋ ಮಾಂ ಹಂತುಂ ನ ಸಮರ್ಥ ಇತಿ ಯುಕ್ತ್ಯಾಚ ಜಾನನ್ ಕಂಸಸ್ತಯೋ ರ್ದೇವಕೀವಸುದೇವಯೋರ್ಜಾತಂ ಜಾತಂ ಪುತ್ರಂ ಅಜನಿ ಶಂಕಯಾ ಜನನರಹಿತ ಪರಮಾತ್ಮೈವ ಜಾತ ಇತಿ ಶಂಕಯಾ ಅಹನ್ನಿತ್ಯರ್ಥಃ। ಅನ್ಯಥಾ ಅಸ್ಯಾಸ್ತ್ವಮಷ್ಟಮೋ ಗರ್ಭೋ ಹಂತಾ ಯಾಂ ನಯಸೇಽಬುಧೇತಿ ಸಾಮಾನ್ಯೋಕ್ತೇಃ ವಿಷ್ಣ್ವಂಶತ್ವ ಜ್ಞಾನಾಸಂಭವಾತ್ ಇದಮೇವ ಹೃದಯಂ ವ್ಯಾಸಸ್ಯೇತಿ ಭಾವಃ। ಬುದ್ಧಿಃ ಕರ್ಮಾನುಸಾರಿಣೀತ್ಯುಕ್ತೇಃ ಹಿರಣ್ಯಕಶಿಪು ಶಾಪಜನಿತ ದುರದೃಷ್ಟಂ ಚೇದೃಶ ಬುದ್ಧಿ ಜನಕಮಿತಿ ಜ್ಞೇಯಂ ॥

ಪೀತಶೇಷಂ ಗದಾಭೃತ ಇತಿ ಭಾಗವತೋಕ್ತ್ಯಾಕೃಷ್ಣೇನ ಚತುರ್ಭುಜ ರೂಪ ಪ್ರದರ್ಶನಾನಂತರಂ ಶಿಶುರೂಪಂ ಧೃತ್ವಾತದೈವ ದೇವಕೀಸ್ತನಂ ಚ ಪೀತ್ವಾಗೋಕುಲಂ ಪ್ರತಿ ಜಗಾಮೇತಿ ಪ್ರಮೇಯಂ ಚ ಸೂಚಿತಂ ।

-ವಾದಿರಾಜೀಯ

ಪಾಂಡುವಿಗೆ ಪುತ್ರೇಚ್ಛೆ

ತದಾ ಮುನೀಂದ್ರಸಂಯುತಃ ಸದೋ ವಿಧಾತುರುತ್ತಮಮ್ ।
ಸ ಪಾಂಡುರಾಪ್ತುಮೈಚ್ಛತ ನ್ಯವಾರಯಂಶ್ಚ ತೇ ತದಾ ॥ ೧೫ ॥

ಆ ಕಾಲದಲ್ಲಿ ಪಾಂಡು ಮುನಿಶ್ರೇಷ್ಠರ ಸಮೂಹದ ನಡುವೆ ಬ್ರಹ್ಮಲೋಕಗಮನದ ಬಯಕೆಯನ್ನು ವ್ಯಕ್ತಮಾಡಿದ. ಆಗ ಮುನಿಗಳು ತಡೆದರು.

'ತದಾ ಮುನೀಂದ್ರ ಸಂಯುತಃ' ಎಂಬಲ್ಲಿ ಪಾಂಡು ದೇಹ ತೊರೆದು ಮುನಿಗಳ ಜೊತೆಗೆ ಬ್ರಹ್ಮಲೋಕಕ್ಕೆ ಪ್ರಯಾಣ ಮಾಡಲು ಬಯಸಿದ. ಆಗ ಮುನಿಗಳು ತಡೆದರು ಎಂದು ಮೇಲುನೋಟಕ್ಕೆ ಕಾಣುತ್ತದೆ. ವಸ್ತುತಃ ಅವನು ಮುನಿಗಳ ಜೊತೆಗೆ ಹೋಗಲು ಬಯಸಿರಲಿಲ್ಲ. ಅದರಿಂದ 'ಸಂಯುತ' ಎಂಬಲ್ಲಿ ಯುಧಾತುವಿಗೆ ಜೊತೆಗೂಡುವುದೂ ಜೊತೆಗೂಡದಿರುವುದೂ ಎರಡೂ ಅರ್ಥವಿರುವುದರಿಂದ ಮುನಿಗಳ ಸಭೆಯಲ್ಲಿ ಜೊತೆಗೂಡಿದ, ಬ್ರಹ್ಮಲೋಕಕ್ಕೆ ಹೋಗುವಾಗ ಜೊತೆಗೂಡಲು ಬಯಸಲಿಲ್ಲ ಎಂದು ಗ್ರಹಿಸಬೇಕೆಂದು ವಾದಿರಾಜೀಯ.

ಯದರ್ಥಮೇಷ ಜಾಯತೇ ಪುಮಾನ್ ಹಿ ತಸ್ಯ ಸೋಽಕೃತೇಃ ।
ಶುಭಾಂ ಗತಿಂ ನ ತು ವ್ರಜೇದ್ ಧ್ರುವಂ ತತೋ ನ್ಯವಾರಯನ್ ॥ ೧೬ ॥

ಜೀವಾತ್ಮ ಯಾವ ಉದ್ದೇಶ ಸಾಧನೆಗಾಗಿ ಹುಟ್ಟುತ್ತಾನೋ ಅದನ್ನು ಸಾಧಿಸದಿದ್ದರೆ ಆತ ನಿಶ್ಚಯವಾಗಿ ಸದ್ಗತಿಯನ್ನು ಹೊಂದುವುದಿಲ್ಲ. ಅದರಿಂದ ಮುನಿಗಳು ತಡೆದರು.

ಪ್ರಧಾನದೇವತಾಜನೇ ನಿಯೋಕ್ತುಮಾತ್ಮನಃ ಪ್ರಿಯಾಮ್ ।
ಬಭೂವ ಪಾಂಡುರೇಷ ತದ್ ವಿನಾ ನ ತಸ್ಯ ಸದ್ಗತಿಃ ॥ ೧೭ ॥

ಪಾಂಡು ಉತ್ತಮ ದೇವತೆಗಳ ಜನನದಲ್ಲಿ ತನ್ನ ಪ್ರಿಯೆಯನ್ನು ನಿಯೋಗ ಮಾಡಲೆಂದೇ ಜನಿಸಿದ್ದ. ಅದನ್ನು ಮಾಡದ ಹೊರತು ಅವನಿಗೆ ಸದ್ಗತಿ ಇಲ್ಲ.

ತನಗೆ ಮಕ್ಕಳ ಪ್ರಾಪ್ತಿ ಇಲ್ಲ. ಕೇವಲ ತಪಸ್ಸಿನಿಂದಲೆ ಸಪತ್ನೀಕನಾಗಿ ಬ್ರಹ್ಮಲೋಕ ಸೇರುವೆನೆಂದು ಪಾಂಡು ತನ್ನ ಬಯಕೆಯನ್ನು ವ್ಯಕ್ತಮಾಡಿದಾಗ ಮುನಿಗಳು ತಡೆದರು. ಏಕೆಂದರೆ ಕೃತ ತ್ರೇತಾ ದ್ವಾಪರ ಯುಗಗಳಲ್ಲಿ ಸಂತತಿ ಇಲ್ಲದ ಪುರುಷನು ನಿಯೋಗದಿಂದ ತನ್ನ ಪತ್ನಿಯಲ್ಲಿ ಮಕ್ಕಳನ್ನು ಪಡೆಯಬಹುದಿತ್ತು. ಪಾಂಡು ಹೀಗೆ ಮಕ್ಕಳನ್ನು ಪಡೆಯಲೆಂದೇ ಜನಿಸಿದವ. ಹಾಗೆ ಮಾಡದ ಹೊರತು ಅವನಿಗೆ ಬ್ರಹ್ಮಲೋಕ ಪ್ರಾಪ್ತಿ ಇಲ್ಲ.

ಅತೋಽನ್ಯಥಾ ಸುತಾನೃತೇ ವ್ರಜಂತಿ ಸದ್ಗತಿಂ ನರಾಃ।
ಯಥೈವ ಧರ್ಮಭೂಷಣೋ ಜಗಾಮ ಸಂಧ್ಯಕಾಸುತಃ ॥ ೧೮ ॥

ಮಕ್ಕಳನ್ನು ಪಡೆಯದಿದ್ದರೂ ಬೇರೆ ರೀತಿಯಿಂದ ಮಾನವರು ಸದ್ಗತಿ ಪಡೆಯಬಲ್ಲರು. ಸಂಧ್ಯಾವಳಿಯ ಪುತ್ರ ಧರ್ಮಾಂಗದ ಹೇಗೋ ಹಾಗೆ.

ಮಕ್ಕಳನ್ನು ಹುಟ್ಟಿಸದಿರಬಹುದು. ನಿಯೋಗ ಪದ್ಧತಿಯಿಂದ ಮಕ್ಕಳನ್ನು ಪಡೆಯದಿರಲೂಬಹುದು. ಆದರೂ ಬೇರೆ ಪುಣ್ಯಕಾರ್ಯದಿಂದ ಸದ್ಗತಿ ಪಡೆಯುವುದು ಸಾಧ್ಯವಿದೆ. ಉದಾ. ವಿದಿಶಾನಗರದ ರಾಜಾ ರುಕ್ಮಾಂಗದನಿಗೆ ಸಂಧ್ಯಾವಳಿಯಲ್ಲಿ ಹುಟ್ಟಿದ ಮಗನೇ ಧರ್ಮಾಂಗದ. ರುಕ್ಮಾಂಗದ ಏಕಾದಶೀ ವ್ರತನಿಷ್ಠ. ತನ್ನ ರಾಜ್ಯದಲ್ಲಿ ಎಲ್ಲರಿಂದಲೂ ವ್ರತ ಮಾಡಿಸುತ್ತಿದ್ದ. ಆದರಿಂದ ಯಾರೂ ನರಕಕ್ಕೆ ಹೋಗುತ್ತಿದ್ದಿಲ್ಲ. ಯಮಪಟ್ಟಣ ಬರಿದಾಯಿತು. ಅದಕ್ಕೆ ಬ್ರಹ್ಮ ಮೋಹಿನಿಯನ್ನು ಕಳಿಸಿದ. ರಾಜ ಅವಳನ್ನು ಬಯಸಿದಾಗ ಅವಳು ಹೇಳಿದಳು. 'ಏಕಾದಶೀ ವ್ರತವನ್ನು ಬಿಡು ಇಲ್ಲವೆ ಮಗನ ಶಿರಸ್ಸನ್ನು ತರಿದುಕೊಡು. ನಾನು ನಿನ್ನವಳಾಗುತ್ತೇನೆ.' ಆಗ ರಾಜನಿಗೆ ಧರ್ಮಾಂಗದ ಹೇಳಿದ, 'ನನ್ನ ಶಿರವನ್ನೇ ತರಿದುಕೊಡು. ಏಕಾದಶೀವ್ರತ ಬಿಡಬೇಡ. ಹೀಗೆ ಹೇಳುತ್ತ ಧರ್ಮಾಂಗದ ತನ್ನ ತಲೆಯನ್ನು ಕತ್ತಿಗೆ ಒಡ್ಡಿದ. ಆಗ ಹರಿ ಪ್ರತ್ಯಕ್ಷನಾಗಿ ಆ ತಂದೆ ತಾಯಿ ಮಕ್ಕಳನ್ನು ಮೂವರನ್ನೂ ಇಹಪರ ಸೌಖ್ಯವಿತ್ತು ಅನುಗ್ರಹಿಸಿದ. ಅದರಿಂದ ಮುನಿಗಳು ಪಾಂಡುವನ್ನು ತಡೆದುದು ಪುತ್ರನಿಲ್ಲದವನಿಗೆ ಸದ್ಗತಿಯಿಲ್ಲ ಎಂಬ ಕಾರಣಕ್ಕಾಗಿ ಅಲ್ಲ. ಧರ್ಮಾಂಗದ ಪುತ್ರನನ್ನು ಹುಟ್ಟಿಸಲೂ ಇಲ್ಲ. ನಿಯೋಗದಿಂದ ಪುತ್ರನನ್ನು ಪಡೆಯಲೂ ಇಲ್ಲ. ಏಕಾದಶೀವ್ರತ ನಿಷ್ಠೆಯೊಂದರಿಂದಲೇ ತಾನು ಸದ್ಗತಿ ಪಡೆದ ಮಾತ್ರವಲ್ಲ ತನ್ನ ತಂದೆತಾಯಿಗಳನ್ನೂ ಜೊತೆಗೆ ಮೋಕ್ಷಕ್ಕೆ ಕರೆದೊಯ್ದ. ಪಾಂಡು ನಿಯೋಗದಿಂದ ಮಕ್ಕಳನ್ನು ಪಡೆಯುವುದಕ್ಕಾಗಿಯೆ ಜನಿಸಿದವನೆಂಬುದು ಮುನಿಗಳಿಗೆ ಗೊತ್ತು. ಆದರಿಂದ ತಡೆದರು ಎಂದು ವಾದಿರಾಜೀಯ.[1]

---

1. ಯಥಾ ಸಂಧ್ಯಕಾಸುತಃ-ಸಂಧ್ಯಾವಲೀ ಸುತಃ ಧರ್ಮಭೂಷಣಃ-ಧರ್ಮಾಂಗದ- ಸಾಕ್ಷಾತ್ ಸಂತಾನಂ, ಪಾಂಡುವತ್ ಸಂತಾನಾರ್ಥಂ ನಿಯೋಗಂ ಚ ವಿನಾ 'ಏಕಾದಶೀ ವ್ರತಂ ತ್ಯಜ ವಾ, ಸ್ವಸುತಶಿರೋ ವಾ ದಿಶೇತಿ ಮೋಹಿನ್ಯೋಕ್ತ ಸ್ವಪಿತ್ರಾಪೃಷ್ಟೇ ಸತಿ, ಏಕಾದಶೀಂ ಸಭಾರ್ಯಸ್ತ್ವಂ ನ ತ್ಯಜ ಅಹಂ ಚ ನ ತ್ಯಜಾಮಿ, ಮಮ ಶಿರಏವ ದಿಶೇತಿ ಏಕಾದಶೀವ್ರತೇ ಪರಮಾದರಾಖ್ಯ ಪುಣ್ಯಕರಣಾತ್ ಮಾತ್ರಾ ಪಿತ್ರಾ ಚ ಸಹ ಪ್ರಸನ್ನ ಹರಿಣಾಽಽದಿಷ್ಟ ವಿಮಾನಸ್ಥಃ ಸನ್ ಸದ್ಗತಿಂ-ವೈಕುಂಠಗತಿಂ ಜಗಾಮ ತಥೇತಿ ಪೂರ್ವೇಣಾನ್ವಯಃ। -ವಾದಿರಾಜೀಯ

ತದಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರಜಿನ್ಮುಖಾಃ।
ವಿಚಿತ್ರವೀರ್ಯನಂದನಪ್ರಿಯೋದರೇ ಹಿ ಗರ್ಭಗಾಃ ॥ ೧೯ ॥

ಆಗ ಕಲಿಯೂ ಇಂದ್ರಜಿತ್ ಮುಂತಾದ ರಾಕ್ಷಸರೂ ಧೃತರಾಷ್ಟ್ರನ ಪತ್ನಿಯ ಗರ್ಭದಲ್ಲಿ ಜನಿಸಿದರು.

ತದಾಸ್ಯ ಸೋಽನುಜೋಽಶೃಣೋನ್ಮುನೀಂದ್ರಭಾಷಿತಂ ಚ ತತ್।
ವಿಚಾರ್ಯ ಚ ಪ್ರಿಯಾಮಿದಂ ಜಗಾದ ವಾಸುದೇವಧೀಃ ॥ ೨೦ ॥

ಆಗ ಮುನಿಗಳು ಹೇಳಿದ ಗಾಂಧಾರಿ ಗರ್ಭವತಿಯಾದ ವಿಷಯವನ್ನೂ ತನಗೆ ಅವರು ಉಪದೇಶಿಸಿದ ಕರ್ತವ್ಯವನ್ನೂ ಹರಿಭಕ್ತನಾದ ಪಾಂಡು ಕೇಳಿ ವಿಚಾರ ಮಾಡಿ ಪ್ರಿಯೆಯಾದ ಕುಂತಿಗೆ ಹೇಳಿದ.

ಯ ಏವ ಮದ್ಗುಣಾಧಿಕಸ್ತತಃ ಸುತಂ ಸಮಾಪ್ನುಹಿ।
ಸುತಂ ವಿನಾ ನ ನೋ ಗತಿಂ ಶುಭಾಂ ವದಂತಿ ಸಾಧವಃ ॥ ೨೧ ॥

'ನನಗಿಂತ ಗುಣದಲ್ಲಿ ಶ್ರೇಷ್ಠನಾದವನಿಂದ ಮಗನನ್ನು ಪಡೆ. ಮಗನಿಲ್ಲದೆ ನಮಗೆ ಸದ್ಗತಿ ಇಲ್ಲವೆಂದು ಸಾಧುಗಳು ಹೇಳುತ್ತಾರೆ.'

ತದಸ್ಯ ಕೃಚ್ಛ್ರತೋ ವಚಃ ಪೃಥಾಗ್ರಹೀಜ್ಜಗಾದ ಚ।
ಮಮಾಸ್ತಿ ದೇವವಶ್ಯದೋ ಮನೂತ್ತಮಃ ಸುತಾಪ್ತಿದಃ ॥ ೨೨ ॥

ಕುಂತಿ ಪಾಂಡುವಿನ ಈ ಮಾತನ್ನು ಕಷ್ಟದಿಂದ ಒಪ್ಪಿದಳು. ಮತ್ತು 'ನನಗೆ ದೇವತೆಗಳನ್ನು ವಶೀಕರಿಸುವ ಮತ್ತು ಪುತ್ರಪ್ರಾಪ್ತಿ ನೀಡುವ ಉತ್ತಮ ಮಂತ್ರೋಪದೇಶ ವಿದೆ' ಎಂದಳು.

ನ ತೇ ಸುರಾನೃತೇ ಸಮಃ ಸುರೇಷು ಕೇಚಿದೇವ ಚ।
ಅತಸ್ತವಾಧಿಕಂ ಸುರಂ ಕಮಾಹ್ವಯೇ ತ್ವದಾಜ್ಞಯಾ ॥ ೨೩ ॥

'ನಿನಗೆ ದೇವತೆಗಳು ಹೊರತು ಬೇರೆ ಯಾರೂ ಸಮರಿಲ್ಲ. ದೇವತೆಗಳಲ್ಲಿಯೂ ಕೆಲವರೆ ನಿನಗೆ ಸಮರು. ಅದರಿಂದ ನಾನು ನಿನ್ನಾಜ್ಞೆಯಿಂದ ನಿನಗಿಂತ ಉತ್ತಮನಾದ ಯಾರನ್ನು ಕರೆಯಲಿ?

ದೇವತಾಸ್ತ್ರೀಯರ ಪಾತಿವ್ರತ್ಯಧರ್ಮ

ವರಂ ಸಮಾಶ್ರಿತಾ ಪತಿಂ ವ್ರಜೇತ ಯಾ ತತೋಽಧಮಮ್।
ನ ಕಾಚಿದಸ್ತಿ ನಿಷ್ಕೃತಿರ್ನ ಭರ್ತೃಲೋಕಮೃಚ್ಛತಿ ॥ ೨೪ ॥

'ಉತ್ತಮವಾದ ಪತಿಯನ್ನು ಹೊಂದಿದವಳು ಯಾರು ಅವನಿಗಿಂತ ಕಡಿಮೆಯವನನ್ನು ಸೇರುವಳೊ ಅವಳಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ. ಅವಳು ಪತಿಲೋಕವನ್ನು ಸೇರುವುದಿಲ್ಲ.

ಕೃತೇ ಪುರಾ ಸುರಾಸ್ತಥಾ ಸುರಾಂಗನಾಶ್ಚ ಕೇವಲಮ್ ।
ನಿಮಿತ್ತತೋಽಪಿ ತಾಃ ಕ್ವಚಿನ್ನತಾನ್ ವಿಹಾಯ ರೇಮಿರೇ ॥ ೨೫ ॥

'ಕೃತಯುಗದಲ್ಲಿ ಮೊದಲಿಗೆ ದೇವತಾ ಪುರುಷರು ಯಾವುದೇ ಕಾರಣದಿಂದ ಎಂದೂ ತಮ್ಮ ನಿಯತ ಸ್ತ್ರೀಯರನ್ನು ಬಿಟ್ಟು ಅನಿಯತರಾದ ಅನ್ಯಸ್ತ್ರೀಯರನ್ನು ರಮಿಸಿದುದಿಲ್ಲ. ಹಾಗೇ ದೇವತೆಗಳ ನಿಯತ ಸ್ತ್ರೀಯರೂ ಎಂದೂ ಯಾವ ಕಾರಣದಿಂದಲೂ ತಮ್ಮ ನಿಯತ ಪತಿಗಳನ್ನು ಬಿಟ್ಟು ಅನ್ಯ ಪುರುಷರನ್ನು ರಮಿಸಲಿಲ್ಲ'.

'ನ ತಾನ್ ವಿಹಾಯ ರೇಮಿರೇ' ಎಂಬಲ್ಲಿ 'ಮೇನಿರೇ' ಎಂದು ವರದರಾಜೀಯಪಾಠ. ಹೃಷೀಕೇಶತೀರ್ಥೀಯ ಪಾಠವೂ 'ಮೇನಿರೇ' ಎಂದಿದೆ. 'ನ ಮೇನಿರೇ ಮನಸಾಪಿ ನಾಪ್ನುಯುಃ' 'ಮನಸ್ಸಿನಿಂದಲೂ ಪರಪುರುಷರನ್ನು ಕೂಡಲಿಲ್ಲ' ಎಂದು ವರದರಾಜೀಯ ವ್ಯಾಖ್ಯಾನ.

ಮನೋವಚಃ ಶರೀರತೋ ಯತೋ ಹಿ ತಾಃ ಪತಿವ್ರತಾಃ ।
ಅನಾದಿಕಾಲತೋಽಭವಂಸ್ತತಃ ಸಭರ್ತೃಕಾಃ ಸದಾ ॥ ೨೬ ॥

ಆ ದೇವತಾಸ್ತ್ರೀಯರು ಅನಾದಿಕಾಲದಿಂದ ಮನೋ ವಾಕ್ ಕಾರ್ಯಗಳಲ್ಲಿ ಪತಿವ್ರತೆಯಾಗಿದ್ದರು. ಅದರಿಂದ ಅವರು ಸದಾ ಪತಿಯುಕ್ತರಾಗಿಯೇ ಇದ್ದರು.

ಪುರುಷರು ಸದಾ ಪತ್ನೀವ್ರತರಾಗಿದ್ದರು ಎಂದು ಸೇರಿಸಿಕೊಳ್ಳಬೇಕೆಂದು ವರದರಾಜೀಯ ಹೇಳಿದೆ.

ಸ್ವಭರ್ತೃಭಿರ್ವಿಮುಕ್ತಿಗಾಃ ಸಹೈವ ತಾ ಭವಂತಿ ಹಿ ।
ಕೃತಾಂತಮಾಪ್ಯ ಚಾಪ್ಸರಃಸ್ತ್ರಿಯೋ ಬಭೂವುರೂರ್ಜಿತಾಃ ॥ ೨೭ ॥

'ಅದರಿಂದ ದೇವತಾಸ್ತ್ರೀಯರು ಪತಿಗಳೊಂದಿಗೇ ಮುಕ್ತಿ ಹೊಂದುತ್ತಾರೆ. ಕೃತಯುಗ ಸಮಾಪ್ತಿ ಹೊಂದಿದಾಗ ಶ್ರೇಷ್ಠರಾದ ಅಪ್ಸರ ಸ್ತ್ರೀಯರು ಜನಿಸಿದರು.

ಅನಾವೃತಾಶ್ಚ ತಾಸ್ತಥಾ ಯಥೇಷ್ಟಭರ್ತೃಕಾಃ ಸದಾ ।
ಅತಸ್ತು ತಾ ನ ಭರ್ತೃಭಿರ್ವಿಮುಕ್ತಿಮಾಪುರುತ್ತಮಾಮ್ ॥ ೨೮ ॥

'ಅಪ್ಸರೆಯರು ಯಾರಿಂದಲೂ ಪತ್ನಿಯರಾಗಿ ವರಿಸಲ್ಪಡದವರು. ಸದಾ ತಮ್ಮಿಚ್ಛೆಯಂತೆ ಯಾರನ್ನಾದರೂ ಪತಿಗಳನ್ನಾಗಿ ಸ್ವೀಕರಿಸುವವರು. ಅದರಿಂದ ಅವರು ನಿಯತ ಪತಿಗಳೊಂದಿಗೆ ಮುಕ್ತಿಯನ್ನು ಹೊಂದುವುದಿಲ್ಲ.

ಅನಾವೃತಾ ಹಿ ಸರ್ವೇಷಾಂ ವರ್ಣಾನಾಮಂಗನಾ ಭುವಿ ।

(ಮ.ಭಾ.ಆದಿ.128-40)

ಶ್ವೇತಕೇತುವಿಗೆ ತಂದೆ ಉದ್ದಾಲಕ ಹೇಳುವ ಮಾತು- 'ಸ್ತ್ರೀಯರು ಹಿಂದೆ ಪಶುಗಳಂತೆ ಎಲ್ಲ ಪುರುಷರಿಗೂ ತಮ್ಮನ್ನು ಅರ್ಪಿಸಿಕೊಳ್ಳುವವರಿದ್ದರು. ಮುಂದೆ ಕಟ್ಟುನಿಟ್ಟಾದ ಪಾತಿವ್ರತ್ಯ ನಿಯಮ ರೂಢಿಗೆ ಬಂದಿತು' ಎಂದು ಹೇಳಿದಂತೆ ಕಾಣುತ್ತದೆ. ಇದು ವಸ್ತುತಃ ಎಲ್ಲ ಸ್ತ್ರೀಯರ ಬಗ್ಗೆ ಹೇಳಿದ ಮಾತಲ್ಲ. ಕೇವಲ ಅಪ್ಸರೆಯರ ಬಗ್ಗೆ ಹೇಳಿದುದೆಂದು ನಿರ್ಣಯ ಸಮಾಧಾನ ನೀಡುತ್ತದೆ. ಅಪ್ಸರೆಯರು ಅಪರೋಕ್ಷಿಗಳು ಬ್ರಹ್ಮವಾದಿನಿಯರು, ಮಹಾಯೋಗಿನಿಯರು. ಆದರೂ ಅವರಿಗೆ ಪಾರ್ವತೀ ಶಚೀ ಮುಂತಾದವರಂತೆ ನಿಯತಪತಿಗಳಿಲ್ಲ. ಯಾರು ಯಾವಾಗ ಬಯಸಿ ಅವರ ಬಳಿಗೆ ಬರುವರೋ ಅವರು ಆವಾಗ ಪತಿಗಳು. ಅವರ ಸೇವೆ ಮಾಡುವ ಕಾಲದಲ್ಲಿ ಬೇರೆ ಯಾರೇ ಬಂದರೂ ಅವರಿಗೆ 'ಅನಾವೃತೆ' ಯರಾಗುವು ದಿಲ್ಲ. ಮುಕ್ತಿಯಲ್ಲಿಯೂ ಅವರಿಗೆ ದೇವತೆಗಳು ಹೀಗೇ ಅನಿಯತ ಪತಿಗಳು. ಅದರಿಂದ ಪತಿಗಳ ಜೊತೆಗೇ ಮುಕ್ತಿ ಎಂಬ ನಿಯಮ ಈ ಸ್ತ್ರೀಯರಿಗೆ ಇಲ್ಲ.

ಸುರಸ್ತ್ರಿಯೋಽತಿಕಾರಣೈರ್ಯದಾನ್ಯಥಾ ಸ್ಥಿತಾಃ ಸದಾ ।
ದುರನ್ವಯಾ ಸುದುಸ್ಸಹಾ ವಿಪತ್ ತತೋ ಭವಿಷ್ಯತಿ ॥ ೨೯ ॥

ನಿಯತ ಪತಿಗಳುಳ್ಳ ದೇವತಾಸ್ತ್ರೀಯರು ಯಾವುದೇ ಪ್ರಬಲ ಕಾರಣಗಳಿಂದ ಪರಪುರುಷ ಸಂಗದಲ್ಲಿದ್ದರೂ ಅದರ ಫಲವಾಗಿ ದುಃಖದಾಯಕ ಅಸಹನೀಯ ವಿಪತ್ತು ಬರುತ್ತದೆ.

ಪ್ರಾರಬ್ಧಾಧೀನವಾಗಿ ಶಾಪಾದಿ ಪ್ರಬಲ ಕಾರಣಗಳಿಂದ ತಾರಾ ಅಹಲ್ಯಾದಿ ಗಳು ಪರಪುರುಷ ಸಂಗ ಮಾಡಿರಬಹುದು. ಆದರೆ ಅದರ ಫಲವಾಗಿ ಅಹಲ್ಯೆಯಂತೆ ಬಹುಕಾಲ ಪತಿವಿಯೋಗದಿಂದ ಅಸಹನೀಯ ದುಃಖ ಉಂಟಾಗಬಹುದು. ಅಥವಾ ತನ್ನಮೂಲರೂಪವನ್ನುಸೇರದೆ ದುಃಖಪಡ ಬಹುದು. ತನ್ನ ಪತಿಗಿಂತ ಹೀನರ ಸಂಗ ಮಾಡಿದರೆ ಪರಲೋಕದಲ್ಲಿ ಮಹಾದುಃಖ. ಪತಿಗಿಂತ ಉತ್ತಮನ ಸಂಗ ಮಾಡಿದರೆ ಪರಲೋಕ ದುಃಖವಿಲ್ಲದಿದ್ದರೂ ಐಹಿಕವಾಗಿ ತನಗೂ ಪತಿಪುತ್ರರಿಗೂ ತಾಯಿಗೂ ದುಃಖ ಉಂಟಾಗುವುದು ಅಪರಿಹಾರ್ಯ ಎನ್ನುತ್ತದೆ ವಾದಿರಾಜೀಯ.

'ದುರನ್ವಯ' 'ಸುದುಃಸಹ'-ಈ ಎರಡು ಪದಗಳೂ ದುಃಖದಾಯಕವೆಂದೇ ಅರ್ಥಕೊಡುವುದರಿಂದ ಪುನರುಕ್ತಿಗೆ

ಅವಕಾಶವಿದೆ. 'ದುರನ್ವಯ' ಎಂದರೆ ಆಪತ್ತು ಬರುವುದಕ್ಕೆ ಮೊದಲು ದುಃಖಕರ 'ಸುದುಃಸಹ' ಎಂದರೆ ಆಪತ್ತು ಬಂದ ಮೇಲೆ ದುಃಖಕರ ಎಂದು ಸತ್ಯಾಭಿನವತೀರ್ಥರು ಪುನರುಕ್ತಿ ಪರಿಹಾರ ತೋರಿಸುತ್ತಾರೆ.

ಅಯುಕ್ತಮುಕ್ತವಾಂಸ್ತತೋ ಭವಾಂಸ್ತಥಾಪಿ ತೇ ವಚಃ।
ಅಲಂಘ್ಯಮೇವ ಮೇ ತತೋ ವದಸ್ವಪುತ್ರದಂ ಸುರಮ್ ॥ ೩೦ ॥

'ಆದರಿಂದ ನೀನು ಅಯುಕ್ತವಾದ ಮಾತನ್ನಾಡಿರುವೆ. ಆದರೂ ನಿನ್ನ ಮಾತು ನನಗೆ ಅನುಲ್ಲಂಘನೀಯ. ಆದರಿಂದ ನನಗೆ ಪುತ್ರನನ್ನು ನೀಡಬೇಕಾದ ದೇವತೆ ಯಾರು ಹೇಳು.'

ಧರ್ಮರಾಜನ ಜನನ

ಇತೀರಿತೋಽಬ್ರವೀನ್ನೃಪೋ ನ ಧರ್ಮತೋ ವಿನಾ ಭುವಃ।
ನೃಪೋಽಭಿರಕ್ಷಿತಾ ಭವೇತ್ ತದಾಹ್ವಯಾಶು ತಂ ವಿಭುಮ್ ॥ ೩೧ ॥

ಕುಂತೀ ಹೀಗೆ ಹೇಳಿದಾಗ ಪಾಂಡು ನುಡಿದ. 'ಧರ್ಮವಿಲ್ಲದೆ ರಾಜ ಭೂಮಿಗೆ ರಕ್ಷಕನಾಗಲಾರ. ಆದರಿಂದ ಬೇಗನೆ ಪ್ರಭುವಾದ ಯಮಧರ್ಮರಾಜನನ್ನು ಕರೆ.'

ಸ ಧರ್ಮಜಃ ಸುಧಾರ್ಮಿಕೋ ಭವೇದ್ಧಿ ಸೂನುರುತ್ತಮಃ।
ಇತೀರಿತೇ ತಯಾ ಯಮಃ ಸಮಾಹುತೋಽಗಮದ್ ದ್ರುತಮ್ ॥ ೩೨ ॥

'ಯಮಧರ್ಮರಾಜನಿಂದ ಹುಟ್ಟುವ ಮಗ ಒಳ್ಳೆಯ ಧಾರ್ಮಿಕನಾಗುತ್ತಾನೆ' ಹೀಗೆ ಪಾಂಡು ಹೇಳಿದಾಗ ಕುಂತಿ ಯಮನನ್ನು ಮಂತ್ರಪೂರ್ವಕವಾಗಿ ಕರೆದಳು. ಅವನು ಬೇಗನೆ ಬಂದ.

ತತಶ್ಚ ಸದ್ಯ ಏವ ಸಾ ಸುಷಾವ ಪುತ್ರಮುತ್ತಮಮ್।
ಯುಧಿಷ್ಠಿರಂ ಯಮೋ ಹಿ ಸ ಪ್ರಪೇದ ಆತ್ಮಪುತ್ರತಾಮ್ ॥ ೩೩ ॥

ಆಗ ತತ್‌ಕ್ಷಣವೇ ಕುಂತಿ ಯುಧಿಷ್ಠಿರನೆಂಬ ಉತ್ತಮ ಪುತ್ರನನ್ನು ಹಡೆದಳು. ಯಮ ಹೀಗೆ ತನಗೆ ತಾನೇ ಪುತ್ರನಾಗಿ ಜನಿಸಿದ.

ಸೂರ್ಯ ತುಲಾರಾಶಿಯಲ್ಲಿದ್ದಾಗ ಪಂಚಮಿ ತಿಥಿ ಜ್ಯೇಷ್ಠಾ ನಕ್ಷತ್ರ ಅಭಿಜಿನ್ಮುಹೂರ್ತ ದಲ್ಲಿ ಯುಧಿಷ್ಠಿರನ ಜನನವೆಂದು ಮಹಾಭಾರತ ಹೇಳಿದೆ.

ದುರ್ಯೋಧನಾದಿಗಳ ಜನನ

ಯಮೇ ಸುತೇ ತು ಕುಂತಿತಃ ಪ್ರಜಾತ ಏವ ಸೌಬಲೀ।
ಅದಹ್ಯತೇರ್ಷ್ಯ ಯಾ ಚಿರಂ ಬಭಂಜ ಗರ್ಭಮೇವ ಚ ॥ ೩೪ ॥

ಕುಂತಿಯಲ್ಲಿ ಯಮ ಮಗನಾಗಿ ಹುಟ್ಟಿದಾಗಲೆ ಗಾಂಧಾರಿ ಅಸೂಯೆಯಿಂದ ಉರಿದಳು. ಕೂಡಲೆ ತನ್ನ ಗರ್ಭವನ್ನು ಹಿಚುಕಿಕೊಂಡಳು.

ಕೌರವರು ಪಾಂಡವರಲ್ಲಿ ಎಷ್ಟು ಮತ್ಸರಿಗಳೆಂಬುದು ಅವರು ಗರ್ಭದಲ್ಲಿರುವಾಗಲೆ ವ್ಯಕ್ತವಾಯಿತು. ಗರ್ಭದ ಗುಣ ತಾಯಲ್ಲಿ ಕಾಣಿಸಿಕೊಳ್ಳುವಷ್ಟು ಪ್ರಬಲವಾಗಿತ್ತು.

ಸ್ವಗರ್ಭಪಾತನೇ ಕೃತೇ ತಯಾ ಜಗಾಮ ಕೇಶವಃ।
ಪರಾಶರಾತ್ಮಜೋ ನ್ಯಧಾದ್ ಘಟೇಷು ತಾನ್ ವಿಭಾಗಶಃ ॥ ೩೫ ॥

ಗಾಂಧಾರಿ ಗರ್ಭಪಾತ ಮಾಡಿಕೊಂಡಾಗ ವೇದವ್ಯಾಸರು ಬಂದರು. ಗರ್ಭದ ತುಣುಕುಗಳನ್ನು ಬೇರೆ ಬೇರೆಯಾಗಿ ಗಡಿಗೆಗಳಲ್ಲಿ ಇರಿಸಿದರು.

ಹೆಬ್ಬೆಟ್ಟಿನ ಸಂಧಿಯಷ್ಟು ಗಾತ್ರದ ನೂರೊಂದು ಭಾಗಗಳನ್ನು ವ್ಯಾಸರು ನೂರೊಂದು ಗಡಿಗೆಗಳಲ್ಲಿ ಬೇರೆಬೇರೆಯಾಗಿರಿಸಿದರು.

ಶತಾತ್ಮನಾ ವಿಭೇದಿತಾಃ ಶತಂ ಸುಯೋಧನಾದಯಃ।
ಬಭೂವುರನ್ವಹಂ ತತಃ ಶತೋತ್ತರಾ ಚ ದುಃಶಲಾ ॥ ೩೬ ॥

ನೂರಾಗಿ ಭಾಗಗೊಂಡು ಸುಯೋಧನ ಮುಂತಾದವರು ನೂರು ಮಂದಿ ದಿನಕ್ಕೊಬ್ಬರಂತೆ ಹುಟ್ಟಿದರು. ನೂರಕ್ಕಿಂತ ಮೇಲಿನವಳು ದುಃಶಲೆ.

ಸ ದೇವಕಾರ್ಯಸಿದ್ಧಯೇ ರರಕ್ಷ ಗರ್ಭಮೀಶ್ವರಃ।
ಪರಾಶರಾತ್ಮಜೋ ವಿಭುರ್ವಿಚಿತ್ರವೀರ್ಯಜೋದ್ಭವಮ್ ॥ ೩೭ ॥

ಸರ್ವಶಕ್ತ ಪ್ರಭು ವೇದವ್ಯಾಸರು ದೇವಕಾರ್ಯಸಿದ್ಧಿಗಾಗಿ ಧೃತರಾಷ್ಟ್ರನಿಂದ ಜನಿಸಿದ ಗರ್ಭವನ್ನು ರಕ್ಷಿಸಿದರು.

ಕಲಿಃ ಸುಯೋಧನೋಽಜನಿ ಪ್ರಭೂತ ಬಾಹುವೀರ್ಯಯುಕ್।
ಪ್ರಧಾನವಾಯುಸನ್ನಿಧೇರ್ಬಲಾಧಿಕತ್ವಮಸ್ಯ ತತ್ ॥ ೩೮ ॥

ಕಲಿ ಸುಯೋಧನನಾಗಿ ಮಹಾ ಬಾಹು ಬಲಯುಕ್ತನಾಗಿ ಜನಿಸಿದ. ಪ್ರಧಾನ ವಾಯುವಿನ ಸನ್ನಿಧಾನದಿಂದ ಅವನಲ್ಲಿ ಅಧಿಕ ಬಲಬಂದಿತ್ತು.

ದುರ್ಯೋಧನ ಹುಟ್ಟುವಾಗ ಕತ್ತೆಯಂತೆ ಧ್ವನಿ ಮಾಡಿದ. ಅದಕ್ಕೆ ಕತ್ತೆಗಳೆಲ್ಲ ಪ್ರತಿಯಾಗಿ ಶಬ್ದ ಮಾಡಿದುವು. ಅಮಂಗಲಕರವಾದ ಅಪಶಕುನವೆಲ್ಲ

ಕಂಡುಬಂದುವು. ಅದರಿಂದ ಈತ ಕುಲನಾಶಕ್ಕೆ ಜನಿಸಿದನೆಂದು ಭವಿಷ್ಯ ನುಡಿದು ಅವನನ್ನು ಪರಿತ್ಯಾಗ ಮಾಡಲು ವಿದುರ ಧೃತರಾಷ್ಟ್ರನಿಗೆ ಸಲಹೆ ಮಾಡಿದ.

ಪುರಾ ಹಿ ಮೇರುಮೂರ್ಧನಿ ತ್ರಿವಿಷ್ಟಪೌಕಸಾಂ ವಚಃ।
ವಸುಂಧರಾತಲೋದ್ಭವೋನ್ಮುಖಂ ಶ್ರುತಂ ದಿತೇಃ ಸುತೈಃ ॥ ೩೯ ॥

ಹಿಂದೆ ಮೇರುಪರ್ವತದ ಶಿಖರದಲ್ಲಿ ದೇವತೆಗಳು ಭೂತಲದಲ್ಲಿ ಅವತರಿಸುವ ಬಗ್ಗೆ ಮಾತನಾಡಿಕೊಂಡುದನ್ನು ದೈತ್ಯರು ಕೇಳಿದ್ದರು.

ತತಸ್ತು ತೇ ತ್ರಿಲೋಚನಂ ತಪೋ ಬಲಾದತೋಷಯನ್ ।
ವೃತಶ್ಚ ದೇವಕಂಟಕೋ ಹ್ಯವಧ್ಯ ಏವ ಸರ್ವತಃ ॥ ೪೦ ॥

ಬಳಿಕ ಅವರು ತಪೋಬಲದಿಂದ ಶಿವನನ್ನು ಸಂತೋಷಗೊಳಿಸಿದರು. ದೇವತೆಗಳಿಗೆ ಕಂಟಕ ಪ್ರಾಯನಾದ ಕಲಿ ಸರ್ವರಿಂದಲೂ ಅವಧ್ಯನಾಗಬೇಕೆಂದು ವರ ಪಡೆದರು.

ಕಲಿ ದೈತ್ಯರಿಗೆಲ್ಲ ಅಗ್ರೇಸರನಾದ್ದರಿಂದ ಅವನ ಏಳಿಗೆಯನ್ನೇ ಎಲ್ಲ ದೈತ್ಯರು ಶಿವನಲಿ ಬೇಡಿದರು.

ವರಾದುಮಾಪತೇಸ್ತತಃ ಕಲಿಃ ಸ ದೇವಕಂಟಕಃ।
ಬಭೂವ ವಜ್ರಕಾಯಯುಕ್ ಸುಯೋಧನೋ ಮಹಾಬಲಃ ॥ ೪೧ ॥

ಶಿವನ ವರದಿಂದ ದೇವಕಂಟಕನಾದ ಆ ಕಲಿ ವಜ್ರಕಾಯ ಉಳ್ಳ ಮಹಾಬಲಿಷ್ಠನಾಗಿ ದುರ್ಯೋಧನನಾಗಿ ಜನಿಸಿದ.

ಅವಧ್ಯ ಏವ ಸರ್ವತಃ ಸುಯೋಧನೇ ಸಮುತ್ಥಿತೇ।
ಘೃತಾಭಿ ಪೂರ್ಣ ಕುಂಭತಃ ಸ ಇಂದ್ರಜಿತ್ ಸಮುತ್ಥಿತಃ ॥ ೪೨ ॥

ತುಪ್ಪದಿಂದ ತುಂಬಿದ ಗಡಿಗೆಯಿಂದ ಸರ್ವರಿಗೂ ಅವಧ್ಯನಾದ ಸುಯೋಧನ ಹುಟ್ಟಿಬರಲು ಅದೇ ರೀತಿಯಲ್ಲಿ ತುಪ್ಪದಿಂದ ತುಂಬಿದ ಇನ್ನೊಂದು ಗಡಿಗೆಯಿಂದ ಇಂದ್ರಜಿತ್ ಹುಟ್ಟಿದ.

ಸ ದುಃಖಶಾಸನೋಽಭವತ್ ತತೋಽತಿಕಾಯಸಂಭವಃ।
ಸ ವೈ ವಿಕರ್ಣ ಉಚ್ಯತೇ ತತಃ ಖರೋಽಭವದ್ ಬಲೀ ॥ ೪೩ ॥

ಇಂದ್ರಜಿತ್ ದುಃಶಾಸನನಾಗಿ ಹುಟ್ಟಿದ. ಬಳಿಕ ಅತಿಕಾಯನ ಉತ್ಪತ್ತಿ. ಅವನು ವಿಕರ್ಣನೆನಿಸುತ್ತಾನೆ. ಬಳಿಕ ಬಲಿಷ್ಠನಾದ ಖರ ಹುಟ್ಟಿದ.

ಸ ಚಿತ್ರಸೇನನಾಮಕಸ್ತಥಾಪರೇ ಚ ರಾಕ್ಷಸಾಃ।
ಬಭೂವುರುಗ್ರಪೌರುಷಾ ವಿಚಿತ್ರವೀರ್ಯಜಾತ್ಮಜಾಃ ॥ ೪೪ ॥

ಖರ ಚಿತ್ರಸೇನ ನಾಮಕನಾದ. ಹಾಗೇ ಬೇರೆ ರಾಕ್ಷಸರೂ ಭಯಂಕರ ಪೌರುಷಉಳ್ಳ ಧೃತರಾಷ್ಟ್ರ ಪುತ್ರರಾಗಿ ಜನಿಸಿದರು.

ಸಮಸ್ತದೋಷರೂಪಿಣಃ ಶರೀರಿಣೋ ಹಿ ತೇಽಭವನ್।
ಮೃಷೇತಿ ನಾಮತೋ ಹಿ ಯಾ ಬಭೂವ ದುಃಶಲಾಸುರೀ ॥ ೪೫ ॥

ಕುಹೂಪ್ರವೇಶಸಂಯುತಾ ಯಯಾರ್ಜುನೇರ್ವಧಾಯ ಹಿ।
ತಪಃ ಕೃತಂ ತ್ರಿಶೂಲಿನೇ ತತೋ ಹಿ ಸಾತ್ರ ಜಜ್ಞಿಷೇ ॥ ೪೬ ॥

ಹೀಗೆ ಗಡಿಗೆಯಲ್ಲಿ ಶರೀರಧಾರಿಗಳಾಗಿ ಜನಿಸಿದವರೆಲ್ಲ ಸಕಲ ದೋಷ ರೂಪರಾದ ರಾಕ್ಷಸರು. ಮೃಷಾ ಎಂಬ ಹೆಸರಿನ ಅಸುರ ಸ್ತ್ರೀ ಕುಹೂದೇವಿಯ ಆವೇಶದಿಂದ ಯುಕ್ತಳಾಗಿ ದುಃಶಲೆಯಾಗಿ ಹುಟ್ಟಿದಳು. ಅಭಿಮನ್ಯುವಿನ ವಧೆಗಾಗಿ ಶಿವನನ್ನು ಒಲಿಸಲು ಅವಳು ತಪಸ್ಸು ಮಾಡಿದ್ದಳು. ಅದರಿಂದ ಅವಳು ಇಲ್ಲಿ ಜನಿಸಿದಳು.

ಮೃಷಾ ಎಂದರೆ ಸುಳ್ಳು. ಸುಳ್ಳಿಗೆ ಅಭಿಮಾನಿನಿಯಾದ ಅಸುರ ಸ್ತ್ರೀಗೂ ಅದೇ ಹೆಸರು. ದುಃಶಲೆಯಾಗಿ ಹುಟ್ಟಿದಾಗ ಅವಳಲ್ಲಿ ಕುಹೂದೇವಿಯ ಆವೇಶ. ಅಮಾವಾಸ್ಯೆಯಂದು ಸ್ವಲ್ಪ ಚತುರ್ದಶಿ ಇದ್ದರೆ ಚಂದ್ರದರ್ಶನವಾಗುತ್ತದೆ. ಆ ಅಮಾವಾಸ್ಯೆಗೆ ಸಿನೀವಾಲೀ ಎಂದು ಹೆಸರು. ಚಂದ್ರದರ್ಶನವಿಲ್ಲದ ಅಮಾವಾಸ್ಯೆ ಕುಹೂ. ಇದೇ ರೀತಿ ಚತುರ್ದಶೀಯುಕ್ತವಾದ ಹುಣ್ಣಿಮೆ ಅನುಮತಿ. ಚತುರ್ದಶೀ ಸ್ಪರ್ಶವಿಲ್ಲದ ಹುಣ್ಣಿಮೆ ರಾಕಾ. ಅಂಗಿರಸ ಮುನಿಯಿಂದ ಶ್ರದ್ಧಾ ಎಂಬ ಪತ್ನಿಯಲ್ಲಿ ಸಿನೀವಾಲೀ ಕುಹೂ ರಾಕಾ ಅನುಮತಿಗಳಿಗೆ ಅಭಿಮಾನಿನಿಯರಾದ ಅವೇ ಹೆಸರಿನ ನಾಲ್ವರು ದೇವಿಯರು ಜನಿಸಿದರೆಂದು ಭಾಗವತ ಹೇಳಿದೆ.

ತಯೋದಿತೋ ಹಿ ಸೈಂಧವೋ ಬಭೂವ ಕಾರಣಂ ವಧೇ।
ಸ ಕಾಲಕೇಯದಾನವಸ್ತದರ್ಥಮಾಸ ಭೂತಲೇ ॥ ೪೭ ॥

ದುಃಶಲೆ ಹೇಳಿದ್ದರಿಂದ ಸೈಂಧವ ಅಭಿಮನ್ಯುವಿನ ವಧೆ ಮಾಡಿಸಿದ. ಸೈಂಧವ ಒಬ್ಬ ಕಾಲಕೇಯ ದಾನವ. ಅವನು ಅಭಿಮನ್ಯು ವಧೆಗಾಗಿಯೆ ಭೂಮಿಯಲ್ಲಿ ಹುಟ್ಟಿದ.

ವೈಶ್ವಾಂತರ ದಾನವನ ಪುತ್ರಿಯರು ಕಾಲಕಾ ಪುಲೋಮಾ ಎಂಬವರು
ಕಶ್ಯಪರನ್ನು ಮದುವೆಯಾಗಿ ಕಾಲಕೇಯ ಪೌಲೋಮರೆಂಬ ಅಸಂಖ್ಯಾತ

ಮಕ್ಕಳನ್ನು ಪಡೆದರು. ಮುಂದೆ ಅರ್ಜುನ ಪಾಶುಪತಾಸ್ತ್ರ ಪಡೆದು ಸ್ವರ್ಗದಲ್ಲಿದ್ದಾಗ ಅವರನ್ನು ಕೊಲ್ಲುತ್ತಾನೆ. ಅವರಲ್ಲಿ ಒಬ್ಬ ಕಾಲಕೇಯ ದಾನವನೇ ಸಿಂಧು ಸೌವೀರದೇಶದ ಅರಸನಾದ ಜಯದ್ರಥ. ದುಃಶಲೆಯ ಗಂಡ. ಅಭಿಮನ್ಯುವನ್ನು ಚಕ್ರವ್ಯೂಹದಲ್ಲಿ ಕೊನೆಯಲ್ಲಿ ಕೊಂದವ ದುಃಶಾಸನನ ಮಗ. ಆದರೆ ದುಃಶಲೆಯ ಮಾತಿನಂತೆ ಸೈಂಧವನೆ ಚಕ್ರವ್ಯೂಹದ ಬಾಗಿಲಲ್ಲಿ ನಿಂತು ಪಾಂಡವರನ್ನು ತಡೆದುದರಿಂದ ಅಭಿಮನ್ಯುವಿಗೆ ಪಾಂಡವರ ರಕ್ಷಣೆ ಇಲ್ಲವಾಯಿತು. ಹೀಗೆ ಅಭಿಮನ್ಯು ವಧೆಗೆ ದುಃಶಲೆಯೂ ಕಾರಣಳಾದಳು.

ತಥಾ ಸ ನಿಋತಾಭಿಧೋಽನುಜಃ ಸ ನಿಋತೇರಭೂತ್ ।
ಸ ನಾಸಿಕಾಮರುದ್ಯುತೋ ಯಯುತ್ಸುನಾಮಕಃ ಕೃತೀ ॥ ೪೮ ॥

ನಿಋತಿಯ ತಮ್ಮ ನಿಋತ ಎಂಬವನು, ಜ್ಞಾನಿ, ನಾಸಿಕ್ಯಪ್ರಾಣ ಯುಕ್ತನಾಗಿ ಯಯುತ್ಸು ನಾಮಕನಾಗಿ ಜನಿಸಿದ.

ಘ್ರಾಣೇಂದ್ರಿಯದ ಗೋಲಕವಾದ ನಾಸಿಕೆಗೆ ಅಭಿಮಾನಿ ನಾಸಿಕ್ಯಪ್ರಾಣ. ಅವನ ಆವೇಶಯುಕ್ತನಾಗಿ ನಿಋತನೆಂಬ ದೇವ ಯುಯುತ್ಸುವಾಗಿ ಅವತರಿಸಿದ.

ಸ ಚಾಂಬಿಕೇಯವೀರ್ಯಜಃ ಸುಯೋಧನಾದನಂತರಃ ।
ಬಭೂವ ವೈಶ್ಯಕನ್ಯಕೋದರೋದ್ಭವೋ ಹರಿಪ್ರಿಯಃ ॥ ೪೯ ॥

ಯುಯುತ್ಸು ವೈಶ್ಯಕನ್ಯೆಯಲ್ಲಿ ಧೃತರಾಷ್ಟ್ರನ ವೀರ್ಯದಿಂದ ಜನಿಸಿದವ. ದುರ್ಯೋಧನನ ತಮ್ಮ. ಹರಿಪ್ರಿಯನಾಗಿದ್ದ.

ಗಾಂಧಾರಿ ಎರಡು ವರ್ಷಕಾಲ ಗರ್ಭ ಧರಿಸಿದ್ದಳು. ಆಗ ಧೃತರಾಷ್ಟ್ರನ ಸೇವೆ ಮಾಡುತ್ತಿದ್ದ ವೈಶ್ಯ ಜಾತಿಯ ಪತ್ನಿ ಯುಯುತ್ಸುವನ್ನು ಹಡೆದಳು. ಈತ ಜ್ಞಾನಿ, ಮಹಾರಥನೂ ಹೌದು. ಧೃತರಾಷ್ಟ್ರ ಪುತ್ರರ ನಡುವೆ ಹನ್ನೊಂದು ಮಂದಿ ಮಹಾರಥರಲ್ಲಿ ಇವನೂ ಒಬ್ಬ. ಪಾಂಡವ ಪಕ್ಷಪಾತಿ. ಪಾಂಡವರು ಬಾಲಕ ಪರೀಕ್ಷಿತನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಮಹಾಪ್ರಸ್ಥಾನಕ್ಕೆ ಹೊರಡುವಾಗ ಯುಯುತ್ಸುವಿಗೇ ರಾಜ್ಯದ ರಕ್ಷಣಾಭಾರ ನೀಡಿದ್ದರು.

ಭೀಮಸೇನನ ಜನನ

ಯುಧಿಷ್ಠಿರೇ ಜಾತ ಉವಾಚ ಪಾಂಡು
ರ್ಬಾಹ್ವೋರ್ಬಲಾಜ್ಜಾತನಬಲಾಚ್ಚಧರ್ಮಃ ।

ರಕ್ಷ್ಯೋಽನ್ಯಥಾ ನಾಶಮುಪೈತಿ ತಸ್ಮಾತ್
ಬಲದ್ವಯಾಢ್ಯಂ ಜನಯಾಶು ಪುತ್ರಮ್ ॥ ೫೦ ॥

ಯುಧಿಷ್ಠಿರ ಹುಟ್ಟಿದಾಗ ಪಾಂಡು ಕುಂತಿಗೆ ಹೇಳಿದ, 'ಧರ್ಮವನ್ನು ಬಾಹುಬಲದಿಂದಲೂ ಜ್ಞಾನಬಲದಿಂದಲೂ ರಕ್ಷಿಸಬೇಕು. ಇಲ್ಲದಿದ್ದರೆ ಅದು ನಾಶಹೊಂದುತ್ತದೆ. ಅದರಿಂದ ಎರಡೂ ಬಲದಿಂದ ಆಢ್ಯನಾದ ಮಗನಿಗೆ ಜನ್ಮನೀಡು.'

ಯಜ್ಞಾಧಿಕೋ ಹ್ಯಶ್ವಮೇಧೋ ಮನುಷ್ಯ
ದೃಶ್ಯೇಷು ತೇಜಸ್ಸ್ವಧಿಕೋ ಹಿ ಭಾಸ್ಕರಃ।
ವರ್ಣೇಷು ವಿಪ್ರಃ ಸಕಲೈರ್ಗುಣೈವರೋ
ದೇವೇಷು ವಾಯುಃ ಪುರುಷೋತ್ತಮಾದೃತೇ ॥ ೫೧ ॥

'ಯಜ್ಞಗಳಲ್ಲಿ ಶ್ರೇಷ್ಠ ಅಶ್ವಮೇಧ. ಮನುಷ್ಯರು ಕಾಣಬಲ್ಲ ತೇಜಸ್ಸುಗಳಲ್ಲಿ ಶ್ರೇಷ್ಠ ಸೂರ್ಯ. ನಾಲ್ಕು ವರ್ಣಗಳಲ್ಲಿ ಶ್ರೇಷ್ಠ ಬ್ರಾಹ್ಮಣ. ದೇವತೆಗಳಲ್ಲಿ ಎಲ್ಲ ಗುಣಗಳಲ್ಲಿಯೂ ಶ್ರೇಷ್ಠ ಪುರುಷೋತ್ತಮನಾದ ಶ್ರೀಹರಿಯನ್ನು ಬಿಟ್ಟರೆ, ವಾಯುವೆ'

ವಿಶೇಷತೋಽಪ್ಯೇಷ ಪಿತೈವ ಮೇ ಪ್ರಭು
ವ್ಯಾಸಾತ್ಮನಾ ವಿಷ್ಣುರನಂತಪೌರುಷಃ।
ಅತಶ್ಚ ತೇ ಶ್ವಶುರೋ ನೈವ ಯೋಗ್ಯೋ
ದಾತುಂ ಪುತ್ರಂ ವಾಯುಮುಪೈಹಿ ತಂ ಪ್ರಭುಮ್ ॥ ೫೨ ॥

'ಅನಂತಶಕ್ತಿ ಉಳ್ಳ ಪ್ರಭುವಾದ ವಿಷ್ಣು ವ್ಯಾಸರೂಪದಿಂದ ನನಗೆ ವಿಶೇಷವಾಗಿ ತಂದೆ. ಅದರಿಂದ ನಿನಗೆ ಮಾವ. ನಿನಗೆ ಪುತ್ರನನ್ನು ನೀಡಲು ತಕ್ಕವನಲ್ಲ. ಅದರಿಂದ ಪ್ರಭುವಾದ ವಾಯುವನ್ನೇ ಆಶ್ರಯಿಸು.

ಪಾಂಡು ವಿಚಿತ್ರವೀರ್ಯನ ಮಗನೇ ಆದರೂ ವಿಚಿತ್ರವೀರ್ಯನ ಮಡದಿಯಲ್ಲಿ ನಿಯೋಗ ಪದ್ಧತಿಯಿಂದ ವೇದವ್ಯಾಸರಿಂದ ಜನಿಸಿದವನಾದ್ದರಿಂದ ಅವನಿಗೆ ವೇದವ್ಯಾಸರೂ ತಂದೆಯೆ. ಅದರಲ್ಲಿಯೂ ಸಾಕ್ಷಾತ್ತಾಗಿ ಹುಟ್ಟಿಸಿದವರಾದ್ದರಿಂದ ವಿಶೇಷವಾಗಿ ತಂದೆ.

ಇತೀರಿತೇ ಪೃಥಯಾಹೂತವಾಯು
ಸಂಸ್ಪರ್ಶಮಾತ್ರಾದಭವದ್ ಬಲದ್ವಯೇ।
ಸಮೋ ಜಗತ್ಯಸ್ತಿ ನ ಯಸ್ಯ ಕಶ್ಚಿತ್
ಭಕ್ತೌ ಚ ವಿಷ್ಣೋರ್ಭಗವದ್ವಶಃ ಸುತಃ ॥ ೫೩ ॥

ಪಾಂಡು ಹೀಗೆ ಹೇಳಲು ಕುಂತಿ ವಾಯುವನ್ನು ಮಂತ್ರಪೂರ್ವಕವಾಗಿ ಕರೆದಳು.

ಅವನ ಸ್ಪರ್ಶಮಾತ್ರದಿಂದ ಬಾಹುಬಲ ಜ್ಞಾನಬಲಗಳೆಂಬ ಎರಡು ಬಲಗಳಲ್ಲಿಯೂ ವಿಷ್ಣುಭಕ್ತಿಯಲ್ಲಿಯೂ ಯಾರಿಗೆ ಸಮನಾದವನು ಜಗತ್ತಿನಲ್ಲಿ ಯಾರೂ ಇಲ್ಲವೋ ಯಾರು ಭಗವಂತನಿಗೆ ಮಾತ್ರ ಅಧೀನನೋ ಅಂಥ ಒಬ್ಬ ಮಗ ಹುಟ್ಟಿದ.

ತಥಾಸ್ತ್ವಿತಿ ಚ ತಾಂ ವಾಯುಃ ಸಮಾಲಭ್ಯ ದಿವಂ ಗತಃ।

'ಹಾಗೇ ಆಗಲಿ' ಎಂದು ಕುಂತಿಯನ್ನು ಸ್ಪರ್ಶಿಸಿ ವಾಯು ತನ್ನ ಲೋಕಕ್ಕೆ ಹೊರಟುಹೋದ ಎನ್ನುತ್ತದೆ ಮಹಾಭಾರತ. ಕುಂತಿ ಯಮಧರ್ಮನನ್ನು ಕರೆದು ವಿಧಿವತ್ತಾಗಿ ಸಂಗ ಮಾಡಿದಳೆಂದು ಮಹಾಭಾರತವೇ ಹೇಳುತ್ತದೆ-

ಋತುಕಾಲೇ ಶುಚಿಃ ಸ್ನಾತ್ವಾ ಶುಕ್ಲವಸ್ತ್ರಾಯಶಸ್ವಿನೀ।
ಶಯ್ಯಾಂ ಜಗ್ರಾಹ ಸುಶ್ರೋಣೀ ಸಹ ಧರ್ಮೇಣ ಸುವ್ರತಾ।
ಧರ್ಮೇಣ ಸಹ ಸಂಗಮ್ಯ ಯೋಗಮೂರ್ತಿಧರೇಣ ಸಾ।
ಲೇಭೇ ಪುತ್ರಂ ಮಹಾಬಾಹುಂ ಸರ್ವಪ್ರಾಣ ಭೃತಾಂ ವರಂ।
ವಾಯು ಮಾತ್ರ ಕೇವಲ ಸ್ಪರ್ಶದಿಂದಲೇ ಮಗುವಿಗೆ ಜನ್ಮವಿತ್ತ.
ಸಂತಿ ದೇವನಿಕಾಯಾಶ್ಚ ಸಂಕಲ್ಪಾಜ್ಜನಯಂತಿ ಯೇ।
ವಾಚಾ ದೃಷ್ಟ್ಯಾ ತಥಾ ಸ್ಪರ್ಶಾತ್ ಸಂಘರ್ಷೇಣೇತಿ ಪಂಚಧಾ ॥

'ಇಚ್ಛಾ ಮಾತ್ರದಿಂದಲೂ, ಕೇವಲ ಮಾತಿನಿಂದಲೂ, ದೃಷ್ಟಿ ಮಾತ್ರದಿಂದಲೂ, ಸ್ಪರ್ಶ ಮಾತ್ರದಿಂದಲೂ, ಮೈಥುನದಿಂದಲೂ ಮಕ್ಕಳನ್ನು ಐದು ವಿಧದಿಂದ ದೇವತೆಗಳು ಉತ್ಪಾದಿಸುತ್ತಾರೆ' ಎಂದು ಮಹಾಭಾರತವೇ ಹೇಳುವಂತೆ ಮುಖ್ಯಪ್ರಾಣ ಕುಂತಿಯ ಉದರವನ್ನು ಸ್ಪರ್ಶಿಸಿಯೇ ಭೀಮನನ್ನು ಹುಟ್ಟಿಸಿದ್ದು ಅಸಂಭಾವಿತವೇನಲ್ಲ.

ಸ ವಾಯುರೇವಾಭವದತ್ರ ಭೀಮ
ನಾಮಾ ಭೃತಾ ಮಾಃ ಸಕಲಾ ಹಿ ಯಸ್ಮಿನ್।
ಸ ವಿಷ್ಣುನೇಶೇನ ಯುತಃ ಸದೈವ
ನಾಮ್ನಾಸೇನೋ ಭೀಮಸೇನಸ್ತತೋಽಸೌ ॥ ೫೪ ॥

ಆ ವಾಯುವೆ ಭೂಮಿಯಲ್ಲಿ ಹುಟ್ಟಿ ಭೀಮನೆಂದು ಹೆಸರು ಪಡೆದ. ಏಕೆಂದರೆ ಅವನಲ್ಲಿ ಎಲ್ಲ ವಿದ್ಯೆಗಳೂ ಪೂರ್ಣವಾಗಿ ಇವೆ. ಒಡೆಯನಾದ ವಿಷ್ಣುವಿನಿಂದ ಸದಾ ಯುಕ್ತನಾಗಿಯೇ ಇರುವುದರಿಂದ ಸೇನ ಎಂದೂ ಅವನಿಗೆ ಹೆಸರು. ಆದರಿಂದ ಭೀಮಸೇನನೆನಿಸಿದ.

'ಭೀ' ಎಂದರೆ ಭೃತ, ಪೂರ್ಣ. 'ಮಾ'-ವಿದ್ಯೆಗಳು. ವಿದ್ಯೆಗಳಿಂದ ಪೂರ್ಣನೆ ಭೀಮ. ಇನ-ಸ್ವಾಮಿಯಾದ ವಿಷ್ಣುವಿನಿಂದ ಸ-ಸಹಿತನಾಗಿರುವವನೆ ಸ ಇನ-ಸೇನ. ಭೀಮನೂ ಸೇನನೂ ಆಗಿರುವುದರಿಂದ ಭೀಮಸೇನ.

ಮಘೇ ಚಂದ್ರಮಸಾ ಯುಕ್ತೇ ಸಿಂಹೇ ಚಾಭ್ಯುದಿತೇ ಗುರೌ।
ದಿವಾ ಮಧ್ಯಗತೇ ಸೂರ್ಯೇ ತಿಥೌ ಪುಣ್ಯೇತ್ರಯೋದಶೇ
ಪಿತ್ರ್ಯೇ ಮುಹೂರ್ತೇ ಸಾ ಕುಂತೀ ಸುಷುವೇ ಭೀಮಮಚ್ಯುತಂ
(ಆದಿ.129-66)

ಫಾಲ್ಗುನ ಶುದ್ಧತ್ರಯೋದಶಿ ಬೆಳಗ್ಗೆ ಶಿವಸರ್ಪ ಮಿತ್ರ ಮುಹೂರ್ತಗಳು ಕಳೆದು ಪಿತೃ ಮುಹೂರ್ತ ಬಂದಾಗ ಅಂದರೆ, ಗಂ-8.24 ರಿಂದ 9.12ರವರೆಗಿನ ಸಮಯದಲ್ಲಿ ಭೀಮಾವತಾರ ಎಂದು ಮಹಾಭಾರತ ಹೇಳಿದೆ.

ತಜ್ಜನ್ಮಮಾತ್ರೇಣ ಧರಾ ವಿದಾರಿತಾ
ಶಾರ್ದೂಲಭೀತಾಜ್ಜನನೀಕರಾದ್ ಯದಾ।
ಪಪಾತ ಸಂಚೂರ್ಣಿತ ಏವ ಪರ್ವತ
ಸ್ತೇನಾಖಿಲೋಽಸೌ ಶತಶೃಂಗನಾಮಾ ॥ ೫೫ ॥

ಭೀಮಸೇನ ಹುಟ್ಟಿದ ಮಾತ್ರಕ್ಕೆ ಭೂಮಿ ಬಿರಿಯಿತು. ಹುಲಿಯನ್ನು ಕಂಡು ನಡುಗಿದ ಕುಂತಿಯ ಕೈಯಿಂದ ಭೀಮ ಬಿದ್ದಾಗ ಶತಶೃಂಗ ಎಂಬ ಹೆಸರಿನ ಆ ಪರ್ವತವಿಡೀ ಪುಡಿಯಾಯಿತು.

ಕುಂತಿ ಭೀಮನನ್ನು ಹೆತ್ತು ಹತ್ತನೇ ದಿನ ಸ್ನಾನ ಮಾಡಿ ಮಗುವನ್ನು ಹೊತ್ತುಕೊಂಡು ದೇವತಾರಾಧನೆಗಾಗಿ ಆಶ್ರಮದಿಂದ ಹೊರಟು ಶತಶೃಂಗ ಬೆಟ್ಟಕ್ಕೆ ಬಂದಾಗ ಹುಲಿಯೊಂದು ಕಾಣಿಸಿಕೊಂಡಿತು. ಸದಾ ಧನುರ್ಧಾರಿಯಾಗಿ ಕಾಯುತ್ತಿದ್ದ ಪಾಂಡು ಹುಲಿಯನ್ನು ಬಾಣದಿಂದ ಹೊಡೆದ. ಆಗ ಅದು ಗರ್ಜಿಸುವುದನ್ನು ಕಂಡ ಕುಂತಿ ಭಯದಿಂದ ನಡುಗಿದಳು. ಕೈಯಿಂದ ಭೀಮ ಕೆಳಗೆ ಬಿದ್ದ. ಬೆಟ್ಟ ಮೊದಲೆ 'ಶತಶೃಂಗ' ನೂರಾರು ಶಿಖರ ಉಳ್ಳದ್ದು. ಅದು ಪುಡಿಯಾಯಿತು.

'ಪರ್ವತಃ ಸಂಚೂರ್ಣಿತಃ। ತೇನ ಅಸೌ ಶತಶೃಂಗನಾಮಾ।'

'ಪರ್ವತ ಪುಡಿಯಾಯಿತು. ಅದರಿಂದ ಶತಶೃಂಗವೆನಿಸಿತು'

ಎಂದು ನಿರ್ಣಯದಲ್ಲಿ ಹೇಳಿದಂತೆ ಕಾಣುತ್ತದೆ. ವರದರಾಜೀಯದಲ್ಲಿ 'ತೇನ

ಭೀಮಸೇನೇನ ಸಂಚೂರ್ಣಿತಃ ಶತಧಾ ವಿಭಕ್ತಃ। ಅತ ಏವ ಶತಶೃಂಗನಾಮಾಭವದಿತ್ಯರ್ಥಃ' ಎಂದು ಈ ಅರ್ಥವನ್ನೇ ಹೇಳಿದೆ. ಶ್ರೀಪಾದರಾಜರ ಮಧ್ವನಾಮದಲ್ಲಿಯೂ,

'ಗಿರಿಯೊಡೆದು ಶತಶೃಂಗವೆಂದೆನಿಸಿತು'

ಎಂದೇ ಹೇಳಿದೆ. ಆದರೆ ಜನಾರ್ದನೀಯದಲ್ಲಿಯೂ ವಾದಿರಾಜೀಯದಲ್ಲಿಯೂ ಈ ಅರ್ಥವನ್ನು ನಿರಾಕರಿಸಲಾಗಿದೆ.

'ಅಸೌ ಶತಶೃಂಗನಾಮಾ ಪರ್ವತಃ ತೇನ ಸಂಚೂರ್ಣಿತಃ'

'ಆ ಶತಶೃಂಗವೆಂಬ ಬೆಟ್ಟ ಭೀಮನಿಂದ ಪುಡಿಯಾಯಿತು'

ಎಂದು ಒಂದೇ ವಾಕ್ಯವಾಗಿ ವ್ಯಾಖ್ಯಾನಿಸಲಾಗಿದೆ. ಅದಕ್ಕೆ ಕಾರಣ-

'ತಾಭ್ಯಾಂ ಸಮೇತಃ ಶತಶೃಂಗ ಪರ್ವತೇ' (11-177)

'ಕುಂತೀಮಾದ್ರೀ ಸಹಿತನಾಗಿ ಪಾಂಡು ಶತಶೃಂಗಬೆಟ್ಟದಲ್ಲಿ ವಾಸಮಾಡಿದ' ಎಂದು ನಿರ್ಣಯದಲ್ಲಿ ಭೀಮಾವತಾರಕ್ಕೆ ಮೊದಲೆ ಬೆಟ್ಟವನ್ನು ಶತಶೃಂಗ ಎಂದು ವ್ಯವಹರಿಸಲಾಗಿದೆ.[1]

ಪ್ರಾಯಃ ವರದರಾಜೀಯಕ್ಕೂ ಮಧ್ವನಾಮಕ್ಕೂ 'ಭೀಮನಿಂದ ಪುಡಿಯಾದ ಬೆಟ್ಟಕ್ಕೆ ಅದರ ಆ ಹೆಸರು ಸಾರ್ಥಕವಾಯಿತು' ಎನ್ನುವ ಅಭಿಪ್ರಾಯವಿರಬಹುದು.

ತಸ್ಮಿನ್ ಪ್ರಜಾತೇ ರುಧಿರಂ ಪ್ರಸುಸ್ರುವು
ರ್ಮಹಾಸುರಾ ವಾಹನಸೈನ್ಯಸಂಯುತಾಃ।
ನೃಪಾಶ್ಚ ತತ್ಕಭವಾಃ ಸಮಸ್ತಾ
ಸ್ತದಾ ಭೀತಾ ಆಸುರಾ ರಾಕ್ಷಸಾಶ್ಚ ॥ ೫೬ ॥

ಭೀಮಸೇನ ಹುಟ್ಟಿದಾಗ ಮೂಲರೂಪದಲ್ಲಿರುವ ಮಹಾಅಸುರರೂ ಅವರ ಪಕ್ಷದಲ್ಲಿ ಜನಿಸಿದ ವಾಹನ ಸೈನ್ಯಯುಕ್ತರಾದ ಅಸುರ ಸ್ವಭಾವದ ರಾಜರೂ ರಾಕ್ಷಸರೂ ಎಲ್ಲರೂ ಭೀತರಾದರು, ರಕ್ತ ಸುರಿಸಿದರು.

---

1. ತೇನಾಖಿಲೋಽಸೌ ಶತಶೃಂಗನಾಮೇತ್ಯತ್ರ ಶತಶೃಂಗನಾಮಾಸೌ ಪರ್ವತಃ ತೇನ ಭೀಮಸೇನಪಾತನೇನ ಚೂರ್ಣಿತ ಇತಿ ಯೋಜನಾ। ನ ತು ತೇನ ಕಾರಣೇನ ಶತಶೃಂಗನಾಮೇತಿ ಯೋಜನಾ। ತಥಾ ಸತಿ 'ತಾಭ್ಯಾಂ ಸಮೇತಃ ಶತಶೃಂಗ ಪರ್ವತೆ' ಇತಿ ಶತಶೃಂಗನಾಮ್ನಃ ಪೂರ್ವಮೇವ ವಿದ್ಯಮಾನ ತ್ವೋಕ್ತಿರಯುಕ್ತಾ ಸ್ಯಾತ್। -ವಾದಿರಾಜೀಯ

ಭೀಮಾವತಾರ ಕಾಲದಲ್ಲಿ ಮಹಾಅಸುರರು ಪಾತಾಲಾದಿಗಳಲ್ಲಿರುವ ತಮ್ಮ ಮೂಲರೂಪದಲ್ಲಿಯೂ ಕಂಸ ಜರಾಸಂಧಾದಿ ರಾಜರಾಗಿ ಭೂಮಿಯಲ್ಲಿ ಜನಿಸಿದ ರೂಪದಲ್ಲಿಯೂ ಭೀತರಾದರು. ಹಿಡಿಂಬ ಬಕ ಕಿರ್ಮೀರಾದಿ ರಾಕ್ಷಸರೂ ಭೀತರಾದರು. ಎಲ್ಲರೂ ಮುಖ ಗುದ ಮೂತ್ರದ್ವಾರಗಳಲ್ಲೆಲ್ಲ ರಕ್ತ ಸುರಿಸಿದರು. ಇದು ಅವರ ವಿನಾಶಕಾಲ ಸೂಚಕ ಉತ್ಪಾತರೂಪವಾಗಿದೆ ಎಂದು ಜನಾರ್ದನೀಯ.[1]

ಬಲರಾಮನ ಜನನ

ಅವರ್ಧತಾತ್ಮೈವ ವೃಕೋದರೋ ವನೇ
ಮುದಂ ಸುರಾಣಾಮಧಿಕಂ ಪ್ರವರ್ಧಯನ್
ತದೈವ ಶೇಷೋ ಹರಿಣೋದಿತೋಽವಿಶತ್
ಗರ್ಭಂ ಸುತಾಯಾ ಅಪಿ ದೇವಕಸ್ಯ ॥ ೫೭ ॥

ವೃಕೋದರ ದೇವತೆಗಳಿಗೆ ಆನಂದವನ್ನು ಬಹಳ ಹೆಚ್ಚಿಸುತ್ತ ಆ ಕಾಡಿನಲ್ಲಿಯೆ ಬೆಳೆದ. ಅದೇ ಕಾಲದಲ್ಲಿ ಹರಿಯಿಂದ ಆಜ್ಞಪ್ತನಾದ ಶೇಷನೂ ದೇವಕಿಯ ಗರ್ಭವನ್ನು ಪ್ರವೇಶಿಸಿದ.

'ವೃಕೋ ನಾಮ ಮಹಾವಹ್ನಿಃ' ಎಂಬಂತೆ ವೃಕ ಎಂಬ ಹೆಸರಿನ ಮಹಾ ಜಾಠರಾಗ್ನಿ ಅಂಗುಷ್ಠ ಪ್ರಮಾಣದಲ್ಲಿ ಭೀಮನ ಉದರದಲ್ಲಿ ಇದೆ. ಇಡೀ ಬ್ರಹ್ಮಾಂಡವನ್ನು ಸುಟ್ಟು ಜೀರ್ಣಮಾಡಿಕೊಳ್ಳಬಲ್ಲುದು ಅದು. ಅದರಿಂದಲೆ,

'ಪೃಕ್ಷೋ ವಪುಃ ಪಿತುಮಾನ್'

ಎಂದು ಬಳಿತ್ಥಾಸೂಕ್ತ ಹೇಳುವಂತೆ 'ಪಿತುಮಾನ್' ಬಂಡಿ ಅನ್ನ ಉಣ್ಣುವವ ಎಂದು ಪ್ರಸಿದ್ಧಿ.

'ಅದೇ ಕಾಲದಲ್ಲಿ' ಎಂದರೆ ಭೀಮ ಜನಿಸಿದ ಕಾಲದಲ್ಲಿ ಎಂದು ಮೇಲುನೋಟಕ್ಕೆ ಕಾಣುತ್ತದೆ. ಹಾಗೇ ವರದರಾಜೀಯವೂ ಹೇಳಿದೆ. ಆದರೆ ಜನಾರ್ದನೀಯದಲ್ಲಿ 'ಬ್ರಹ್ಮಾದಿಗಳು ಹರಿಯನ್ನು ಅವತಾರಕ್ಕೆ ಪ್ರಾರ್ಥಿಸಿ ಅವನಿಂದ ಆಜ್ಞಪ್ತರಾದ ಕಾಲದಲ್ಲಿ' ಎಂದು ವ್ಯಾಖ್ಯಾನವಿದೆ.

---

1. ಪಾತಾಲಾದಿಷು ವರ್ತಮಾನಾ ಮೂಲರೂಪಸ್ಥ ಮಹಾಸುರಾಃ ತತ್ಪಕ್ಷಭವಾ ಮಹಾಸುರ ಪಕ್ಷೀಯತ್ವೇನ ಜಾತಾಃ ಸಮಸ್ತಾ ನೃಪಾಃ ನೃನ್ ಮನುಷ್ಯಾಧಮಾನ್ ಪಾಂತಿ ರಕ್ಷಂತಿ ತೇ ತಥಾ ಆಸುರಾ ಭುವ್ಯುತ್ಪನ್ನ ಜರಾಸಂಧಕೀಚಕಾದಯಃ ರಾಕ್ಷಸಾ ಹಿಡಿಂಬ ಕಿರ್ಮೀರಾದಯಃ ತದಾ ಭೀಮೋತ್ಪತ್ತಿಕಾಲೇ ಭೀತಾಃ ಸಂತಃ ರುಧಿರಂ ರಕ್ತಂ ಪ್ರಸುಸ್ರುವುಃ ಮೂತ್ರದ್ವಾರಾತ್ ಗುದದ್ವಾರಾತ್ ಮುಖಾಚ್ಚ ರಕ್ತಸ್ರಾವಸ್ತೇಷಾಂ ವಿನಾಶಕೋತ್ಪಾತೋ ಜಾತ ಇತಿ ಭಾವಃ। -ಜನಾರ್ದನೀಯ

ಭೀಮ ಹುಟ್ಟಿದಾಗಲೆ ಬಲರಾಮ ಗರ್ಭವನ್ನು ಪ್ರವೇಶಿಸಿದನೆಂದರೆ

ಯದಾ ಸ ಮಾಸದ್ವಿತಯೀ ಬಭೂವ
ತದಾ ರೋಹಿಣ್ಯಾಂ ಬಲದೇವೋಽಭಿಜಾತಃ (12-107)

'ಭೀಮ ಎರಡು ತಿಂಗಳ ಮಗುವಾಗಿದ್ದಾಗ ಬಲರಾಮ ಜನಿಸಿದ' ಎಂದು ನಿರ್ಣಯದಲ್ಲಿ ಮುಂದೆ ಹೇಳುವುದು ಹೊಂದಿಕೆಯಾಗದು. ಅದರಿಂದ ಭೀಮ ಹುಟ್ಟುವುದಕ್ಕಿಂತ ಎಂಟು ತಿಂಗಳು ಮೊದಲೇ ಶೇಷ ಗರ್ಭಪ್ರವೇಶ ಮಾಡಿರಬೇಕು. ಆಗ ದೇವಕಿಯ ಉದರದಲ್ಲಿ ಮೂರು ತಿಂಗಳಿದ್ದು ರೋಹಿಣಿಯ ಉದರದಲ್ಲಿ ಏಳು ತಿಂಗಳಿದ್ದು ಹುಟ್ಟುವಾಗ ಭೀಮ ಎರಡು ತಿಂಗಳ ಮಗುವಾಗಿರುವುದು ಸರಿ ಎನಿಸುತ್ತದೆ.

'ಅದೇ ಕಾಲದಲ್ಲಿ' ಎಂದರೆ ಹಿಂದಿನ ಶ್ಲೋಕದಲ್ಲಿ ಹೇಳಿದಂತೆ,

'ಅವರ್ಧತಾತ್ಕೈವ ವೃಕೋದರೋ ವನೇ'

ಅಂದರೆ ಭೀಮ ಕಾಡಿನಲ್ಲಿ ಬೆಳೆಯುತ್ತ ಎರಡು ತಿಂಗಳು ಮಗುವಾಗಿದ್ದಾಗ ಶೇಷ ಹುಟ್ಟಿದನೆಂದು ಮುಂದಿನ ಶ್ಲೋಕದ

'ಸ್ಥಿತ್ವಾ ಮಾಸಾನ್ ಸಪ್ತ ಜಾತಃ ಪೃಥಿವ್ಯಾಂ'

ಎಂಬಲ್ಲಿಗೆ ಅನ್ವಯಿಸಿದರೂ ವಿರೋಧವಿಲ್ಲ.

ಸ ತತ್ರ ಮಾಸತ್ರಯಮುಷ್ಯ ದುರ್ಗಯಾಽ
ಪವಾಹಿತೋ ರೋಹಿಣೀಗರ್ಭಮಾಶು।
ನಿಯುಕ್ತಯಾ ಕೇಶವೇನಾಥ ತತ್ರ
ಸ್ಥಿತ್ವಾಮಾಸಾನ್ ಸಪ್ತ ಜಾತಃ ಪೃಥಿವ್ಯಾಮ್ ॥ ೫೮ ॥

ಶೇಷ ದೇವಕಿಯ ಗರ್ಭದಲ್ಲಿ ಮೂರು ತಿಂಗಳಿದ್ದು ಹರಿಯಿಂದ ಆಜ್ಞಪ್ತಳಾದ **ದುರ್ಗೆ** ಅವನನ್ನು ರೋಹಿಣಿಯ ಗರ್ಭಕ್ಕೆ ಸಾಗಿಸಿದಾಗ ಅಲ್ಲಿ ಏಳು ತಿಂಗಳು ಇದ್ದು ಭೂಮಿಯಲ್ಲಿ ಜನಿಸಿದ.

ಸ ನಾಮತೋ ಬಲದೇವೋ ಬಲಾಢ್ಯೋ
ಬಭೂವ ತಸ್ಯಾನು ಜನಾರ್ದನಃ ಪ್ರಭುಃ।
ಆವಿರ್ಬಭೂವಾಖಿಲ ಸದ್ಗುಣೈಕ
ಪೂರ್ಣಃ ಸುತಾಯಾಮಪಿ ದೇವಕಸ್ಯ ॥ ೫೯ ॥

ರೋಹಿಣಿಯ ಗರ್ಭದಲ್ಲಿ ಜನಿಸಿದ ಶೇಷ ಬಲಾಢ್ಯನಾಗಿದ್ದು ಬಲದೇವನೆಂದು

ಹೆಸರು ಪಡೆದ. ಬಳಿಕ ಸಕಲ ಸದ್ಗುಣಗಳಿಂದ ಮುಖ್ಯಪೂರ್ಣನಾದ ಪ್ರಭು ಜನಾರ್ದನನೂ ದೇವಕಿಯಲ್ಲಿ ಉದರದಲ್ಲಿ ಪ್ರಾದುರ್ಭವಿಸಿದ.

> ಹರಿ ತಾನು ಗರ್ಭವಾಸವಿಲ್ಲದವನೆಂಬುದನ್ನು ತೋರಿಕೊಳ್ಳುತ್ತ ದೇವಕಿಯ ಗರ್ಭದಲ್ಲಿ ತನ್ನ ಪರಿವಾರದವನೇ ಆದ ಶೇಷನನ್ನು ಪ್ರವೇಶಗೊಳಿಸಿ ಅವನ ಮೂಲಕ ಗರ್ಭಶುದ್ಧಿ ಮಾಡಿಸಿ ಬಳಿಕ ತಾನು ಆ ಗರ್ಭವನ್ನು ಪ್ರವೇಶಿಸಿದ. ರಾಜ ಅರಮನೆಯನ್ನು ಸೇವಕರಿಂದ ಸ್ವಚ್ಛಗೊಳಿಸಿ ಬಳಿಕ ತಾನು ಪ್ರವೇಶಿಸುವಂತೆ . ಎಂದು ವಾದಿರಾಜರು ರುಕ್ಮಿಣೀಶ ವಿಜಯದಲ್ಲಿ ವರ್ಣಿಸಿದ್ದಾರೆ.[1]

ಕೃಷ್ಣಾವತಾರ

ಯಃ ಸತ್ಸುಖಜ್ಞಾನ ಬಲೈಕದೇಹಃ
ಸಮಸ್ತದೋಷಪ್ರಭೃತಿಃ ಸದಾ।
ಅವ್ಯಕ್ತತತ್ಕಾರ್ಯಮಯೋ ನ ಯಸ್ಯ
ದೇಹಃ ಕುತಶ್ಚಿತ್ ಕ್ವಚ ಸ ಹ್ಯಜೋ ಹರಿಃ ॥ ೬೦ ॥

ಸದಾ ದೋಷರಹಿತ ಸುಖಜ್ಞಾನ ಬಲಮಾತ್ರ ಶರೀರಿಯಾದ ಸಮಸ್ತ ದೋಷಗಳ ಸ್ಪರ್ಶವೂ ಇಲ್ಲದ ಯಾವ ಹರಿಯ ಶರೀರ ಎಲ್ಲಿಯೂ ಯಾವ ಕಾರಣದಿಂದಲೂ ಮೂಲಪ್ರಕೃತಿಯಿಂದ : ಮತ್ತು ಅದರ ಕಾರ್ಯವಾದ ಪಂಚಭೂತಗಳಿಂದ ನಿರ್ಮಿತವಾಗಿರುವುದಿಲ್ಲವೋ ಆ ಶ್ರೀಹರಿ ಜನ್ಮರಹಿತ.

ನ ಶುಕ್ಲರಕ್ತಪ್ರಭವೋಽಸ್ಯ ಕಾಯ
ಸ್ತಥಾಪಿ ತದ್ವತ್ತಯೋಚ್ಯತೇ ಮೃಷಾ।
ಜನಸ್ಯ ಮೋಹಾಯ ಶರೀರತೋಽಸ್ಯಾ
ಯದಾವಿರಾಸೀದಮಲಸ್ವರೂಪಃ ॥ ೬೧ ॥

ಹರಿಯ ಶರೀರ ಶುಕ್ಲಶೋಣಿತ ಜನ್ಯವಲ್ಲ. ಆದರೂ ತಂದೆ ತಾಯಿಗಳಿಂದ ಹುಟ್ಟಿದವನೆಂದು ಅಜ್ಞ ಜನರಿಂದ ಸುಮ್ಮನೆ ಹೇಳಿಸಿಕೊಳ್ಳುತ್ತಾನೆ. ಅದರಿಂದ ನಿರ್ಮಲ ಸ್ವರೂಪನಾದರೂ ಹರಿ ಅಯೋಗ್ಯ ಜನರಿಗೆ ಮೋಹ ಉಂಟು ಮಾಡುವುದಕ್ಕಾಗಿ ದೇವಕಿಯ ಶರೀರದಿಂದ ಃ ಪ್ರಕಟನಾದ.

---

1. ನ ಗರ್ಭವಾಸೋ ಮಮ • ನಿರ್ಮಲಸ್ಯೇತ್ಯದೋ ಬುಧಾನ್ ಬೋಧಯಿತುಂ ಹೃದೇವ।
ಫಣೀಶ್ವರಂ ಗರ್ಭಗತಂ ವಿಧಾಯಾಯ ಪುನಃ ಸ್ವಯಂ ಸನ್ನಿಹಿತೋ ಬಭೂವ ॥ -ರು.ವಿ.1.29)

ಆವಿಶ್ಯ ಪೂರ್ವಂ ವಸುದೇವಮೇವ
ವಿವೇಶ ತಸ್ಮಾದೃತುಕಾಲ ಏವ।
ದೇವೀಮುವಾಸಾತ್ರ ಚ ಸಪ್ತಮಾಸಾನ್
ಸಾರ್ಧಾಂಸ್ತತಶ್ಚಾವಿರಭೂದಜೋಽಪಿ ॥ ೬೨ ॥

ಹರಿ ಮೊದಲಿಗೆ ವಸುದೇವನನ್ನು ಪ್ರವೇಶಿಸಿ ಅವನ ಮೂಲಕ ಋತುಕಾಲದಲ್ಲಿ ದೇವಿಯನ್ನು ಪ್ರವೇಶಿಸಿದ. ಅಲ್ಲಿ ಏಳೂವರೆ ತಿಂಗಳ ಕಾಲವಿದ್ದು ತಾನು ಜನನ ರಹಿತನಾಗಿದ್ದರೂ ಜನಿಸಿದ.

ವಸುದೇವ ದೇವಕಿಯರಲ್ಲಿ ಇಬ್ಬರಲ್ಲಿಯೂ ಹರಿಯ ಪ್ರವೇಶ ಕೇವಲ ಭೂತಾವೇಶದಂತೆ ಹೊರತು ಪುರುಷ ವೀರ್ಯದ ಮೂಲಕ ಸ್ತ್ರೀಯ ಶೋಣಿತದಲ್ಲಿ ಬಂದು ಸೇರುವುದಿಲ್ಲ.[1] ಆದರೂ ಎಲ್ಲ ಜೀವರಂತೆ ತಂದೆಯನ್ನು ಸೇರಿ ಮೂರು ತಿಂಗಳಿದ್ದು ಋತುಕಾಲದಲ್ಲಿ ಅಂದರೆ ಗರ್ಭಾಧಾನ ಯೋಗ್ಯಕಾಲದಲ್ಲಿ ತಾಯಿಯ ಗರ್ಭಾಶಯವನ್ನು ಸೇರಿ ಅಲ್ಲಿ ಏಳೂವರೆ ತಿಂಗಳಿದ್ದು ಬಳಿಕ ಪ್ರಕಟನಾದ.

'ಸಾರ್ಧಾನ್ ಸಪ್ತ ಮಾಸಾನ್' ಎಂದರೆ ಏಳೂವರೆ ತಿಂಗಳೆಂದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಕೆಲವರು 'ಸಾರ್ಧ' ಅರ್ಧದಿಂದ ಕೂಡಿದ 'ಸಪ್ತ' ಏಳು. ಏಳರ ಅರ್ಧದಿಂದ ಅಂದರೆ ಮೂರುವರೆಯಿಂದ ಕೂಡಿದ ಏಳು. ಹತ್ತುವರೆ ತಿಂಗಳೆಂದು ವ್ಯಾಖ್ಯಾನಿಸುತ್ತಾರೆ. ಅದು ಸರಿಯಲ್ಲ. 'ಗರ್ಭ ಕಾಲವಿನ್ನೂ ನವಮಾಸ ಪೂರ್ತಿಯಾಗುವುದರೊಳಗೆ ಎಂಟನೇ ತಿಂಗಳಲ್ಲಿಯೆ ದೇವಕಿ ಯಶೋದೆಯರಿಬ್ಬರೂ ಪ್ರಸವಿಸಿದರು' ಎನ್ನುವ ಹರಿವಂಶ ಪ್ರಕಾರ ಕೃಷ್ಣ ಎಂಟನೇ ತಿಂಗಳಿನಲ್ಲಿಯೆ ಜನಿಸಿದ ಹೊರತು ಹತ್ತುವರೆ ತಿಂಗಳಕಾಲ ಗರ್ಭದಲ್ಲಿರಲಿಲ್ಲ-ಜನಾರ್ದನೀಯ2

ಆದರೆ ವಾದಿರಾಜೀಯ ಪ್ರಕಾರ ಹತ್ತುವರೆ ತಿಂಗಳಿಂದೇ ವಿವಕ್ಷಿತ. ಬಲರಾಮ ದೇವಕಿಯ ಗರ್ಭದಲ್ಲಿ ಮೂರು ತಿಂಗಳು, ರೋಹಿಣಿಯ

---

1. ವಸುದೇವಮಾವಿಶ್ಯ ದೇವೀಂ ವಿವೇಶೇತ್ಯುಕ್ತ್ಯಾ ಭೂತಾವೇಶವದ್ ವಸುದೇವೇಽಪ್ಯಾವೇಶ ಏವ, ದೇವ್ಯುದರೇಽಪ್ಯಾವೇಶ ಏವ, ನ ತು ಶುಕ್ಲದ್ವಾರಾ ಯೋನಿಸ್ಥ ಶೋಣಿತೇ ಸಂಕಲನಮಿತಿ ಸೂಚಿತಂ।
-ವಾದಿರಾಜೀಯ

2. ಸಾರ್ಧಾನ್ ಅರ್ಧೇನ ಸಪಾರ್ಧೇನ ಸಾರ್ಧಮಾಸತ್ರಯೇಣ ಸಹಿತಾನ್ ಸಪ್ತ ಮಾಸಾನುವಾಸ। ಸಾರ್ಧದಶಮಾಸಾನುವಾಸೇತ್ಯರ್ಥ ಇತಿ ಕೇಷಾಂಚಿದಾಶಂಕಾ
'ಗರ್ಭಕಾಲೇ ತ್ವಸಂಪೂರ್ಣೇ ಅಷ್ಟಮೇ ಮಾಸಿ ತೇ ಸ್ತ್ರಿಯೌ।
ದೇವಕೀ ಚ ಯಶೋದಾ ಚ ಸುಷುವಾತೇ ಸಮಂ ತದೇತಿ।
ಹರಿವಂಶ ವಾಕ್ಯವಿರೋಧಾನ್ನಿರಸ್ತಾ ವೇದಿತವ್ಯಾ। -ಜನಾರ್ದನೀಯ

ಗರ್ಭದಲ್ಲಿ ಏಳು ತಿಂಗಳು ಹೀಗೆ ದಶಮಾಸದ ಅನಂತರವೇ ಜನಿಸಿದ. ಕೃಷ್ಣನೂ ದೇವಕಿಯ ಗರ್ಭದಿಂದ ಬಲರಾಮ ಹೊರಗೆ ಹೋದ ಬಳಿಕ ಅಲ್ಲಿ ಉಳಿದ ಏಳು ತಿಂಗಳು ವಾಸ ಮಾಡಿ, ಬಲರಾಮ ಜನಿಸಿದ ಮೂರು ತಿಂಗಳ ಅನಂತರ ಜನಿಸಿದ. ಅಂತೂ ಇಬ್ಬರೂ ಹತ್ತು ತಿಂಗಳು ಗರ್ಭವಾಸ ಮಾಡಿ 'ದಶಮೇ ಮಾಸಿ ಜಾಯತೇ' ಎಂಬ ಶ್ರುತಿ ಪ್ರಾಮಾಣ್ಯವನ್ನು ಉಳಿಸಿದರು.[1] ದೇವಕಿಯ ಗರ್ಭದಲ್ಲಿ ಶುಕ್ಲಕೇಶರೂಪದಿಂದ ಮೂರು ತಿಂಗಳ ಕಾಲ ಕೃಷ್ಣವಾಸ ಮಾಡಿದ್ದ. ಬಳಿಕ ಬಲರಾಮ ಗರ್ಭದಿಂದ ಹೊರಗೆ ಹೋಗಿ ಮೂರು ತಿಂಗಳಾದ ಬಳಿಕ ಕೃಷ್ಣನ ಗರ್ಭಪ್ರವೇಶ. ಏಳು ತಿಂಗಳಿದ್ದು ಎಂಟನೆ ತಿಂಗಳಲ್ಲಿ ಜನನ. ಹೀಗೆ ಶುಕ್ಲ ಕೇಶದ ಮೂರು ತಿಂಗಳ ಗರ್ಭವಾಸವನ್ನು ಸೇರಿಸಿ ಹತ್ತೂವರೆ ತಿಂಗಳು. ಬಿಟ್ಟು ಏಳೂವರೆ ತಿಂಗಳು ಎಂದು ಎರಡು ವ್ಯಾಖ್ಯಾನಗಳೂ ಸರಿ.

यथा पुरास्तंभत आविरासीद्
अशुक्लरक्तोऽपि नृसिंहरूपः।
तद्वैव कृष्णोऽपि तथापि माता-
पित्रक्रमादेव विमोहयत्यजः ॥ ೬೩ ॥

ಜನನರಹಿತನಾದ ಹರಿ ಹೇಗೆ ಶುಕ್ಲಶೋಣಿತ ಸಂಬಂಧರಹಿತನಾಗಿದ್ದೇ ಕಂಬದಿಂದ ನರಸಿಂಹರೂಪನಾಗಿ ಮೂಡಿಬಂದನೋ ಹಾಗೆಯೇ ಶುಕ್ಲಶೋಣಿತ ಸಂಬಂಧರಹಿತನಾಗಿದ್ದೇ ದೇವಕಿಯ ಉದರದಿಂದ ಕೃಷ್ಣನಾಗಿ ಪ್ರಕಟನಾದ. ಆದರೂ ಮಾತಾಪಿತೃಕ್ರಮವನ್ನು ಅನುಸರಿಸುವ ಮೂಲಕ ಅಯೋಗ್ಯರನ್ನು ಮೋಹಗೊಳಿಸಿದ.

पित्रक्रमं मोहनार्थं समेति
न तावता शुक्लतो रक्ततश्च।
जातोऽस्य देहस्थिति दर्शनाय
सशंखिचक्राब्जगदः स दृष्टः ॥ ೬೪ ॥

ಅಯೋಗ್ಯರಿಗೆ ಮೋಹ ಉಂಟು ಮಾಡುವ ಉದ್ದೇಶದಿಂದ ಹರಿ ಮಾತಾಪಿತೃಕ್ರಮವನ್ನು ಅನುಸರಿಸುತ್ತಾನೆ. ಅಷ್ಟರಿಂದಲೆ ಅವನ ಶರೀರ ಶುಕ್ಲಶೋಣಿತಗಳಿಂದ ಜನಿಸಿದುದೆಂದಾಗುವುದಿಲ್ಲ ಎಂದು ತೋರಿಸುವುದಕ್ಕಾಗಿ ಶಂಖ ಚಕ್ರ

---

1. अतो दशमे मासि जायत इति श्रुतिं रक्षन् रामोऽपि दशमे मासि जातः। कृष्णोऽपि शौत्र मर्यादा रक्षणाय शेषगमनानंतरं अवशिष्टसप्त मासानुपित्वा रामोत्पत्तेर्मासि त्रयानंतरं उत्पन्नत्वात् दशमे मास्येव जायत इति भावः।
-ವಾದಿರಾಜೀಯ

ಪದ್ಮಗದೆಗಳಿಂದ ಯುಕ್ತನಾಗಿಯೆ ಕಾಣಿಸಿಕೊಂಡ.

ಯಾರಿಗೆ ಕಾಣಿಸಿಕೊಂಡನೆಂದರೆ ಮಾತಾಪಿತೃಗಳಿಗೆ ಎಂದು ಜನಾರ್ದನೀಯ. ಎಲ್ಲ ಸಜ್ಜನರಿಗೆ ಎಂದು ವರದರಾಜೀಯ. ಭಾಗವತದಲ್ಲಿ ಮಾತಾಪಿತೃಗಳಿಗೆ ಕಾಣಿಸಿಕೊಂಡು.

ಏತದ್ ವಾಂ ದರ್ಶಿತಂ ರೂಪಂಪ್ರಾಗ್ ಜನ್ಮಸ್ಮರಣಾಯ ಮೇ।

'ನಿಮಗೆ ಈ ರೂಪ ತೋರಿದುದು ಹಿಂದಿನ ಜನ್ಮದ ಸಂಗತಿಯನ್ನು ನೆನಪಿಸುವುದಕ್ಕಾಗಿ' ಎನ್ನುತ್ತಾನೆ ಕೃಷ್ಣ. ಆದರೂ ಸರ್ವ ಸಜ್ಜನರು ಅಂದರೆ ದೇವತೆಗಳು ನೋಡಿದರೆಂದಿಟ್ಟುಕೊಳ್ಳಬೇಕು.

ಸ ಕಂಜಯೋನಿ ಪ್ರಮುಖೈಃ ಸುರೈಃಸ್ತುತಃ (12-66)

ಎಂದು ನಿರ್ಣಯದಲ್ಲಿಯೇ ಹೇಳಿದೆ. ತಂದೆ ತಾಯಿಗಳಿಗೆ ಇಬ್ಬರಿಗೆ ಹಾಗೆ ಕಾಣಿಸಿಕೊಂಡುದು ಅವರಿಗೆ ಹಿಂದಿನ ಘಟನೆಯನ್ನು ನೆನಪಿಸುವುದಕ್ಕಾಗಿ. ಅದರಿಂದ 'ವಾಂ' 'ನಿಮಗೆ' ಎನ್ನುತ್ತಿದೆ ಭಾಗವತ. ಅದರಿಂದ ವಿರೋಧವಿಲ್ಲ.

ಕೃಷ್ಣ ಹೀಗೆ ಮೂಲರೂಪದಿಂದ ಆವಿರ್ಭೂತನಾಗಿ ಬಳಿಕ ವಸುದೇವ ದೇವಕಿಯರ ಪ್ರಾರ್ಥನೆಯಂತೆ ಶಿಶುರೂಪ ತೋರಿದ. ಈ ಶಿಶುವನ್ನು ಹಡೆದವರು ಯಾರು? ಕೃಷ್ಣನಿಗೆ ಹುಟ್ಟು ಇರುತ್ತಿದ್ದರೆ ಹುಟ್ಟುವಾಗಲೆ ಪೀತಾಂಬರ ಆಯುಧ ಆಭರಣಗಳು ಎಲ್ಲಿಂದ ಬಂದುವು?[1] ವೈಕುಂಠದಲ್ಲಿ ಭೃಗುಮುನಿ ಹರಿಯ ಎದೆಗೆ ಒದ್ದಾಗ ಮೂಡಿದ ಚಿಹ್ನೆ ಶ್ರೀವತ್ಸ ಕೃಷ್ಣನ ಎದೆಯಲ್ಲಿ ಹೇಗೆ ಕಾಣಿಸಿಕೊಂಡಿತು? ಅದರಿಂದ ಆ ವೈಕುಂಠನಾಥನ ಶರೀರ ಬೇರೆಯಲ್ಲ. ಕೃಷ್ಣನ ಶಿಶುಶರೀರ ಬೇರೆಯಲ್ಲ. ಅದರಿಂದ ಕೃಷ್ಣ ಹುಟ್ಟಲಿಲ್ಲ.[2]

---

1. ಸ್ತುತಿಂ ಸ್ವಪಿತ್ರೋರವಧಾರ್ಯಯೋಽಸೌ ಬಭೂವ ಪಶ್ಚಾಚ್ಚಿಶುವೇಷಧಾರೀ।
ಅಸೂತ ತಂ ಕಾ ನು ತದಾ ಮೃಗಾಕ್ಷೀ ಪುರಾ ಪುರಾಣಾಕೃತಿಮಪ್ರಮೇಯಂ?
ಯದೀಹ ಜಾತೋ ವಸುದೇವ ವೀರ್ಯಾತ್ ತದಾ ಕುತಸ್ತ್ಯ ವಿಭೂಷಣಾನಿ?
ವರಾಂಬರಂ ಕೌಸ್ತುಭರತ್ನಮುದ್ಯತ್ ಸುದರ್ಶನಂ ಶಂಖಿಗದಾದಿ ಜಾತಂ? (ರು.ವಿ.1-51, 52)

2. ಯದ್ ವಿಪ್ರಾಂಘ್ರ್ಯಂಕನಂ ವೈಕುಂಠಸ್ಯಮೂರ್ತೇರ್ಹಿ ವಕ್ಷಸಿ।
ತದೇವ ದೇವಕೀಗರ್ಭ ಜಾತಸ್ಯ ಕಿಲ ವಕ್ಷಸಿ॥
ಅತಸ್ತದೇವ ಹಿ ಭವೇದಿದಂ ರೂಪಂ ನ ಚಾಪರಂ॥
ನ ಚೇತ್ಕುಪ್ಯಂತಿ ಯೋಧಾನಾಂ ಕಲಾಕುಶಲ ಮಂತ್ರಿಣಃ॥ (ಯುಕ್ತಿ.ಮ.ಶುದ್ಧಿಸೌ.20-21)

ಅನೇಕ ಸೂರ್ಯಾಭ ಕಿರೀಟಯುಕ್ತೋ
ವಿದ್ಯುತ್ಪ್ರಭೇ ಕುಂಡಲೇ ಧಾರಯಂಶ್ಚ।
ಪೀತಾಂಬರೋ ವನಮಾಲೀ ಸ್ವನಂತ
ಸೂರ್ಯೋರುದೀಪ್ತಿರ್ದದೃಶೇ ಗುಣಾರ್ಣವಃ ॥ ೬೫ ॥

ಅನೇಕ ಸೂರ್ಯರಂತೆ ಹೊಳೆವ ಕಿರೀಟಯುಕನಾಗಿ ಮಿಂಚಿನಂತೆ ಹೊಳೆವ ಕುಂಡಲಗಳನ್ನು ಧರಿಸಿ ಪೀತಾಂಬರ ಉಟ್ಟು ವನಮಾಲೆ ಧರಿಸಿ ಅನಂತ ಸೂರ್ಯರ ಮಹಾಪ್ರಕಾಶಶಾಲಿ ಗುಣಸಮುದ್ರನಾದ ಕೃಷ್ಣ ಕಾಣಿಸಿಕೊಂಡ.

ಆಜಾನುಲಂಭಿನೀ ಮಾಲಾ ಸರ್ವರ್ತುಕುಸುಮೋಜ್ಜ್ವಲಾ।
ಮಧ್ಯೇ ಸ್ಥೂಲ ಕದಂಬಾಢ್ಯಾ ವನಮಾಲೇತಿ ಕೀರ್ತಿತಾ।
'ಮೊಳಕಾಲಿನವರೆಗೂ ಬರುವ, ಎಲ್ಲ ಋತುಗಳ ಹೂಗಳಿಂದ ಶೋಭಿಸುವ, ಮಧ್ಯದಲ್ಲಿ ದೊಡ್ಡ ಕದಂಬ ಪುಷ್ಪಗಳಿಂದ ಕೂಡಿದ ಮಾಲೆ ವನಮಾಲೆ'.

ಗೋಕುಲಕ್ಕೆ ಪ್ರಯಾಣ

ಸ ಕಂಜಯೋನಿಪ್ರಮುಖೈಃ ಸುರೈಃ ಸ್ತುತಃ
ಪಿತ್ರಾ ಚ ಮಾತ್ರಾ ಚ ಜಗಾದ ಶೂರಜಮ್।
ನಯಸ್ವಮಾಂ ನಂದಗೃಹಾನಿತಿ ಸ್ಮ
ತತೋ ಬಭೂವ ದ್ವಿಭುಜೋ ಜನಾರ್ದನಃ ॥ ೬೬ ॥

ಬ್ರಹ್ಮಾದಿ ದೇವತೆಗಳಿಂದ ಮತ್ತು ತಂದೆ ತಾಯಿಗಳಿಂದ ಸ್ತುತನಾದ ಕೃಷ್ಣ 'ನನ್ನನ್ನು ನಂದನ ಮನೆಗೆ ಒಯ್ಯು' ಎಂದು ವಸುದೇವನಿಗೆ ಹೇಳಿದ. ಬಳಿಕ ದ್ವಿಭುಜನಾದ.

ತದೈವ ಜಾತಾ ಚ ಹರೇರನುಜ್ಞಯಾ
ದುರ್ಗಾಭಿಧಾ ಶ್ರೀರನು ನಂದಪತ್ನ್ಯಾಮ್।
ತತಸ್ತಮಾದಾಯ ಹರಿಂ ಯಯೌ ಸ
ಶೂರಾತ್ಮಜೋ ನಂದಗೃಹಾನ್ ನಿಶೀಥೇ ॥ ೬೭ ॥

ಆಗಲೆ ಹರಿಯಾಜ್ಞೆಯಿಂದ ಲಕ್ಷ್ಮೀದೇವಿ ಕೃಷ್ಣನಿಗೆ ಅನುಕೂಲಳಾಗಿ ಕೃಷ್ಣನ ಅನಂತರ ನಂದಗೋಪನ ಪತ್ನಿಯಲ್ಲಿ ದುರ್ಗಾನಾಮಕಳಾಗಿ ಪ್ರಾದುರ್ಭವಿಸಿದಳು. ಬಳಿಕ ವಸುದೇವ ಕೃಷ್ಣನನ್ನು ಹೊತ್ತು ನಡುರಾತ್ರಿಯಲ್ಲಿ ನಂದನ ಮನೆಗೆ ನಡೆದ.

'ದುರ್ಜ್ಞೇಯತ್ವಾದ್ ದುಃಖಿದತ್ವಾತ್ ದುಷ್ಪ್ರಾಪ್ಯತ್ವಾಚ್ಚ ದುರ್ಜನೈಃ।
ಸತಾಮಭಯ ಭೂತ್ವಾಚ್ಚ ದುರ್ಗಾ ತ್ವಂ ಹೃದ್ ಗುಹಾಶ್ರಯಾತ್ ॥

ದುರ್ಜನರಿಗೆ ದುರ್ಜ್ಞೇಯಳು, ದುಃಖದಾಯಕಳು, ದುಷ್ಪ್ರಾಪ್ಯಳು. ಸಜ್ಜನರಿಗೆ ಕೋಟೆಯಂತೆ ಭದ್ರವಾಗಿ ಕಾಪಾಡುವವಳು, ಅವರ ಹೃದಯಗುಹೆಯಲ್ಲಿ ವಾಸಮಾಡುವವಳು-ಈ ಐದು ಕಾರಣಗಳಿಂದ ದುರ್ಗೆ 'ದುರ್ಗೆ' ಎನಿಸಿದ್ದಾಳೆ ಎಂದು ತೀರ್ಥಪ್ರಬಂಧದಲ್ಲಿ ಹೇಳಿದೆ.

'ದುರ್ಗೆ' ಎಂದರೆ ಪಾರ್ವತಿ ಎಂದೇ ಭ್ರಮಿಸಿ ಕೃಷ್ಣನ ತಂಗಿಯಾದ ಪಾರ್ವತಿಗೆ ಪತಿ ಶಿವನಾದ್ದರಿಂದ ಭಾವನೆನಿಸುತ್ತಾನೆ ಎನ್ನುವುದುಂಟು. ಈ 'ದುರ್ಗೆ'ಗೆ ಬ್ರಹ್ಮವೈವರ್ತದಲ್ಲಿ ಶಿವಾವತಾರರಾದ ದುರ್ವಾಸರೊಡನೆ ಮದುವೆ ಮಾಡಿಸಿದ್ದೂ ಉಂಟು. ಇದೆಲ್ಲವೂ ಮೋಹಕ. ದುರ್ಜನರಿಗೆ ದುರ್ಜ್ಞೇಯಳೆನ್ನಲು ನಿದರ್ಶನಗಳು. 'ಶಿವರೂಪಃ ಶಿವೇ ಸ್ಥಿತಃ' ಎಂಬಂತೆ ಹರಿ ಶಿವನಲ್ಲಿ ಶಿವರೂಪದಿಂದಿರುವಂತೆ ದುರ್ಗೆ ಎನಿಸಿದ ಪಾರ್ವತಿಯಲ್ಲಿ ಲಕ್ಷ್ಮೀ ದುರ್ಗಾ ರೂಪದಿಂದ ಇರುವುದರಿಂದ, ಲಕ್ಷ್ಮೀಪಾರ್ವತಿಯರಿಬ್ಬರಿಗೂ 'ದುರ್ಗಾನಾಮವಿರುವುದರಿಂದ ಗೊಂದಲವಾಗುವುದು ಸಹಜ. ವಸ್ತುತಃ ಕೃಷ್ಣನ ತಂಗಿ ದುರ್ಗೆ ಸಾಕ್ಷಾತ್ ಲಕ್ಷ್ಮಿ ಅವಳು ಕನ್ಯಾಕುಮಾರಿಯಲ್ಲಿ ಕನ್ಯಾಕುಮಾರಿಯಾಗಿಯೆ ನೆಲೆಸಿದ್ದಾಳೆ. ವಿಂಧ್ಯಾಚಲ ಮುಂತಾದ ಅನೇಕ ಕಡೆ ಇದ್ದಾಳೆ. ಶ್ರೀಭೂರೂಪಿಣಿ ಲಕ್ಷ್ಮಿಯೆ ರುಕ್ಮಿಣೀ ಸತ್ಯಭಾಮಾ ರೂಪಗಳಿಂದ ಕೃಷ್ಣನ ಮಹಿಷಿ ಎನಿಸಿದ್ದಾಳೆ.

ಭಾಗವತಾದಿಗಳಲ್ಲಿ ಈ ದುರ್ಗೆಯನ್ನು ವಿಷ್ಣುಮಾಯೆ ಎಂದು ಕರೆದಿರುವುದರಿಂದ ಪಾರ್ವತಿ ಎನ್ನುವ ಭ್ರಮೆಗೆ ಅವಕಾಶವಿಲ್ಲ.

ಸಂಸ್ಥಾಪ್ಯ ತಂ ತತ್ರ ತಥೈವ ಕನ್ಯಕಾಂ
ಆದಾಯ ತಸ್ಮಾತ್ ಸ್ವಗೃಹಂ ಪುನರ್ಯಯೌ।
ಹತ್ವಾಸ್ತಸುರ್ಗರ್ಭಷಟ್ಕಂ ಕ್ರಮೇಣ
ಮತ್ವಾಷ್ಟಮಂ ತತ್ರ ಜಗಾಮ ಕಂಸಃ ॥ ೬೮ ॥

ವಸುದೇವ ಗೋಕುಲದಲ್ಲಿ ಕೃಷ್ಣನನ್ನು ಇರಿಸಿ ಹಾಗೇ ಕನ್ನಿಕೆಯನ್ನು ಎತ್ತಿಕೊಂಡು ಅಲ್ಲಿಂದ ತನ್ನ ಮನೆಗೆ ನಡೆದ. ಕಂಸ ತಂಗಿಯ ಆರು ಮಕ್ಕಳನ್ನು ಕ್ರಮವಾಗಿ ಕೊಂದು ಈಗ ಎಂಟನೆ ಮಗು ಹುಟ್ಟಿತೆಂದು ತಿಳಿದು ಅಲ್ಲಿಗೆ ಹೋದ.

ಜಾತಮಾತ್ರಂ ವಾಸುದೇವಂ ಅಥಾಕೃಷ್ಯ ಪಿತಾ ತತಃ।
ಉಪಜಹ್ರೇ ಪರಿಕ್ರೀತಾಂ ಸುತಾಂ ಗೋಪಸ್ಯ ಕಸ್ಯಚಿತ್ ॥

ಈ ಸಭಾಪರ್ವವಚನಕ್ಕೆ ಲಕ್ಷಾಲಂಕಾರದಲ್ಲಿ ಹೀಗೆ ವ್ಯಾಖ್ಯಾನ-
'ವಾಸುದೇವಂ ಗೋಕುಲಂ ಪ್ರತಿ ನೀತ್ವಾ ಗೋಕುಲಾತ್ ಪರಿಕ್ರೀತಾಂ

ಸ್ವಸುತಂ ದತ್ವಾ ತತ್ಕ್ರಯರೂಪೇಣೈವ ಸ್ವೀಕೃತಾಂ' ವಸುದೇವ ಕಳ್ಳನಂತೆ ಮಕ್ಕಳನ್ನು ಅದಲು ಬದಲು ಮಾಡಲಿಲ್ಲ. ಕೃಷ್ಣನನ್ನು ಮೂಲ್ಯವಾಗಿ ಕೊಟ್ಟು ದುರ್ಗೆಯನ್ನು ಕ್ರಯಕ್ಕೆ ಕೊಂಡುತಂದ ಎನ್ನುತ್ತದೆ ಮಹಾಭಾರತ. ಯಶೋದೆಗೆ ಪ್ರಸವಶ್ರಮ ಪ್ರಯುಕ್ತ ಗಾಢನಿದ್ರೆಯನ್ನು ವಿಷ್ಣು ಮಾಯೆ ಉಂಟು ಮಾಡಿದ್ದರಿಂದ ಅವಳಿಗೊಂದೂ ತಿಳಿದಿರಲಿಲ್ಲ. ಆದರೆ ನಂದನಿಗೆ ಎಲ್ಲವೂ ಗೊತ್ತು. ವಾಯು, ಪದ್ಮ, ಬ್ರಹ್ಮಾಂಡ ಮುಂತಾದ ಪುರಾಣಗಳ ಪ್ರಕಾರ ಉಗ್ರಸೇನ ವಸುದೇವ ದೇವಕಿ ನಂದಗೋಪ ಈ ನಾಲ್ವರು ರಹಸ್ಯವಾಗಿ ಮಾತನಾಡಿಕೊಂಡು ವಸುದೇವ ನಂದಗೋಪರು ತಮ್ಮ ಮಕ್ಕಳನ್ನು ವಿನಿಮಯ ಮಾಡಿಕೊಳ್ಳುವುದೆಂದು ಮೊದಲೇ ನಿರ್ಣಯಿಸಿದ್ದರು. ವಾಯುಪುರಾಣ (95-210) ಪ್ರಕಾರ ಉಗ್ರಸೇನನ ಮಾತಿನಂತೆ ವಸುದೇವ ಹರಿಯ ಅನುಜ್ಞೆಪಡೆದು ನಂದಗೋಪನಿಗೆ ಹೇಳುತ್ತಾನೆ- 'ಕೃಷ್ಣ ನಿನ್ನ ಮಗನಾಗಿ ನಮ್ಮೆಲ್ಲರಿಗೂ ಕಲ್ಯಾಣಕಾರಿಯಾಗುತ್ತಾನೆ. ಯದುವಂಶವನ್ನು ಕಂಸನಿಂದ ರಕ್ಷಿಸುತ್ತಾನೆ. ಇವನನ್ನು ನೀನು ರಕ್ಷಿಸು' ಎಂದು. ಭಾಗವತದ ಕಥೆಗೆ ವಿರೋಧವಿಲ್ಲದೆ ಪೂರಕವಾಗಿರುವುದರಿಂದ ಮತ್ತು ಮಹಾಭಾರತ ಲಕ್ಷಾಲಂಕಾರದಲ್ಲಿ ದುರ್ಗೆಯನ್ನು ವಸುದೇವನ ಕ್ರೀತಪುತ್ರಿ ಎಂದಿರುವುದರಿಂದ ಈ ವಿವರಗಳನ್ನು ನಿರ್ಣಯೋಕ್ತವಲ್ಲದಿದ್ದರೂ ಸಂಮತವೆಂದು ಗ್ರಹಿಸಬಹುದು. ಹರಿವಂಶವೂ ದೇವಿಯನ್ನು ದೇವಕಿಯ 'ನವಮ ಗರ್ಭ' ಒಂಬತ್ತನೆಯ ಸಂತತಿ ಎಂದಿದೆ. ನಿರ್ಣಯವೂ ಮುಂದೆ

ನಾಜ್ಞಾಸಿಷು ಸ್ತಾಮಥ ಕೇಚನಾತ್ರ
ಋತೇ ಹಿ ಮಾತಾಪಿತರೌ ಗುಣಾಢ್ಯಾಂ (12-72)

'ದೇವಿ ಇಲ್ಲಿ ಇದ್ದುದನ್ನು ತಂದೆತಾಯಿಗಳು ಹೊರತು ಇನ್ನಾರು ತಿಳಿಯಲಿಲ್ಲ' ಎಂದು ಹೇಳುತ್ತ ವಸುದೇವ ದೇವಕಿಯರನ್ನು ದೇವಿಗೆ ತಂದೆತಾಯಿಗಳೆಂದು ಪರಿಗಣಿಸಿದೆ. ಇದು ದೇವಿ ಕ್ರೀತಪುತ್ರಿ ಎಂಬುದಕ್ಕೆ ಪುಷ್ಟಿ ಕೊಡುತದೆ.

ದೇವಕಿಯ ಮಡಿಲಲ್ಲಿ ದುರ್ಗೆ

ಗರ್ಭಂ ದೇವಕ್ಯಾಃ ಸಪ್ತಮಂ ಮೇನಿರೇ ಹಿ
ಲೋಕಾಃ ಸುತಂ ತ್ವಷ್ಟಮಂ ತಾಂ ತತಃ ಸಃ।
ಮತ್ವಾಹಂತುಂ ಪಾದಯೋಃ ಸಂಪ್ರಗೃಹ್ಯ
ಸಂಪ್ರೋಥಯಾಮಾಸ ಶಿಲಾತಲೇ ಚ ॥ ೬೯ ॥

ದೇವಕಿಯ ಏಳನೆ ಗರ್ಭ ಸ್ರಾವವಾಯಿತೆಂದು ಜನರು ತಿಳಿದಿದ್ದರು. ಅದರಿಂದ ಕಂಸನೂ ಹಾಗೇ ತಿಳಿದು ಕನ್ನಿಕೆಯನ್ನು ಎಂಟನೆ ಗರ್ಭವೆಂದು ಬಗೆದು ಕೊಲ್ಲಲು ಕಾಲುಗಳಲ್ಲಿ ಹಿಡಿದು ಕಲ್ಲು ಬಂಡೆಯ ಮೇಲೆ ಅಪ್ಪಳಿಸಿದ.

ಸಾ ತದ್ಧಸ್ತಾತ್ ಕ್ಷಿಪ್ರಮುತ್ಪತ್ಯ ದೇವೀ
ಖೇಽದೃಶ್ಯತೈವಾಷ್ಟಭುಜಾ ಸಮಗ್ರಾ।
ಬ್ರಹ್ಮಾದಿಭಿಃ ಪೂಜ್ಯಮಾನಾ ಸಮಗ್ರೈ
ರತ್ಯದ್ಭುತಾಕಾರವತೀ ಹರಿಪ್ರಿಯಾ ॥ ೭೦ ॥

ಹರಿಪ್ರಿಯೆ ದೇವಿ ಕಂಸನ ಕೈಯಿಂದ ತಕ್ಷಣ ಮೇಲೆ ಹಾರಿ ಎಂಟು ಭುಜಗಳುಳ್ಳವಳಾಗಿ ಸಕಲ ತರುಣೀ ಲಕ್ಷಣಗಳಿಂದ ಪೂರ್ಣಳಾಗಿ ಅತ್ಯದ್ಭುತ ಆಕಾರ ಉಳ್ಳವಳಾಗಿ ಬ್ರಹ್ಮಾದಿಗಳೆಲ್ಲರಿಂದಲೂ ಪೂಜಿಸಿಕೊಳ್ಳುತ್ತ ಆಕಾಶದಲ್ಲಿ ಕಾಣಿಸಿಕೊಂಡಳು.

ಘಂಟಾಶೂಲಹಲಾನಿ ಶಂಕಮುಸಲೇ ಚಕ್ರಂ ಧನುಃಸಾಯಕಂ
ಹಸ್ತಾಬ್ಜೈರ್ದಧತೀಂ...॥

ಎಂಬಂತೆ, ಘಂಟೆ, ತ್ರಿಶೂಲ, ಹಲ, ಶಂಖ, ಮುಸಲ, ಚಕ್ರ, ಧನುಸ್ಸು ಬಾಣ ಎಂದು ಎಂಟು ಆಯುಧಗಳನ್ನು ಎಂಟು ಕೈಗಳಿಂದ ಹಿಡಿದ ದುರ್ಗಾರೂಪ ಇಲ್ಲಿ ವಿವಕ್ಷಿತವೆನ್ನಬಹುದು.

ಉವಾಚ ಚಾರ್ಯಾ ತವ ಮೃತ್ಯುರತ್ರ
ಕ್ವಚಿತ್ ಪ್ರಜಾತೋ ಹಿ ವೃಥೈವ ಪಾಪ।
ಅನಾಗಸೀಂ ಮಾಂ ವಿನಿಹಂತುಮಿಚ್ಛಸ್ಯ-
ಶಕ್ಯಕಾರ್ಯೇತವ ಚೋದ್ಯಮೋಽಯಮ್ ॥ ೭೧ ॥

ಶ್ರೇಷ್ಠಳಾದ ದುರ್ಗೆ ನುಡಿದಳು, 'ಪಾಪಿ ಕಂಸನೆ, ನಿನ್ನ ಮೃತ್ಯು ಇಲ್ಲಿಯೆ ಒಂದೆಡೆ ಹುಟ್ಟಿದ್ದಾನೆ. ನಿರಪರಾಧಿನಿಯಾದ ನನ್ನನ್ನು ಕೊಲ್ಲಲು ವ್ಯರ್ಥವಾಗಿ ಬಯಸುತ್ತಿರುವೆ ಮತ್ತು ನಿನ್ನ ಈ ಪ್ರಯತ್ನ ಅಶಕ್ಯಕಾರ್ಯದಲ್ಲಿ ತೊಡಗಿಸಲ್ಪಟ್ಟಿದೆ'.

ಉಕ್ತ್ವೇತಿ ಕಂಸಂ ಪುನರೇವ ದೇವಕೀ-
ತಲ್ಪೇಽಶಯದ್ ಬಾಲರೂಪೈವ ದುರ್ಗಾ।
ನಾಜ್ಞಾಪಿಷುಸ್ತಾಮಥ ಕೇಚನಾತ್ರ
ಋತೇ ಹಿ ಮಾತಾಪಿತರೌ ಗುಣಾಢ್ಯಾಮ್ ॥ ೭೨ ॥

ಹೀಗೆ ಕಂಸನಿಗೆ ಹೇಳಿ ದುರ್ಗೆ ಪುನಃ ದೇವಕಿಯ ಹಾಸಿಗೆಯಲ್ಲಿಯೆ ಶಿಶುರೂಪಳಾಗಿ

ಮಲಗಿದಳು. ತಂದೆತಾಯಿಗಳ ಹೊರತು ಇನ್ನಾರೂ ಗುಣಾಢ್ಯಳಾದ ಆ ದೇವಿ ಅಲ್ಲಿ ಇದ್ದುದನ್ನು ತಿಳಿಯಲಿಲ್ಲ.

ಶ್ರುತ್ವಾತಯೋಕ್ತಂ ತು ತದೈವ ಕಂಸಃ
ಪಶ್ಚಾತ್ತಾಪಾದ್ ವಸುದೇವಂ ಸಭಾರ್ಯಮ್ ।
ಪ್ರಸಾದಯಾಮಾಸ ಪುನಃಪುನಶ್ಚ
ವಿಹಾಯ ಕೋಪಂ ಚ ತಮೂಚತುಸ್ತೌ ।
ಸುಖಸ್ಯ ದುಃಖಸ್ಯ ಚ ರಾಜಸಿಂಹ
ನಾನ್ಯಃ ಕರ್ತಾ ವಾಸುದೇವಾದಿತಿ ಸ್ಮ ॥ ೭೩ ॥

ದೇವಿ ಹೇಳಿದ ಮಾತನ್ನು ಕೇಳಿ ಕಂಸ ಆಗಲೆ ಪಶ್ಚಾತ್ತಾಪದಿಂದ ವಸುದೇವ ದೇವಕಿಯರನ್ನು ಮತ್ತೂ ಮತ್ತೂ ಒಲಿಸಿದ. ಅವರು ಕೋಪವನ್ನು ಬಿಟ್ಟು ಹೇಳಿದರು, 'ಮಹಾರಾಜ, ಸುಖಕ್ಕೂ ದುಃಖಕ್ಕೂ ಕರ್ತ ಶ್ರೀಹರಿಗಿಂತ ಅನ್ಯ ಯಾರೂ ಇಲ್ಲ.'

ಕಂಸನಲ್ಲಿ ಜೀವದ್ವಯಾವೇಶವಿದೆ. ತಾಮಸನಾದ ಕಾಲನೇಮಿ ಮತ್ತು ಸಾತ್ವಿಕನಾದ ಭೃಗುಮುನಿ. ಅದರಿಂದ ಕೆಲವೊಮ್ಮೆ ಸಾತ್ವಿಕ ಪ್ರವೃತ್ತಿಯೂ ಕಂಡುಬರುತ್ತದೆ. ದೇವಕಿಯ ಪಾದಗಳಿಗೆ ತಲೆಯಿಟ್ಟು 'ಪುತ್ರವತ್ ತವ ದೇವಕಿ' 'ನಾನು ನಿನಗೆ ಮಗನಂತೆ!' ಎನ್ನುತ್ತಾನೆ. ಇದು ಹರಿವಂಶದಲ್ಲಿ ಸ್ಪಷ್ಟವಿದೆ. ದೇವಕಿ ಆಗ

ಕಾರಣಂ ತ್ವಂ ನ ಮೇ ಪುತ್ರ ಕೃತಾಂತೋಽಪ್ಯತ್ರ ಕಾರಣಂ ।
ಮೃತ್ಯುನಾ ಪ್ರಹೃತೇ ಪೂರ್ವಂ ಶೇಷೋ ಹೇತುಃ ಪ್ರವರ್ತತೇ ।

'ಮಗು, ನನ್ನಮಕ್ಕಳ ಸಾವಿಗೆ ನೀನೊಬ್ಬನೆ ಕಾರಣವಲ್ಲ. ಮೃತ್ಯುವೂ ಕಾರಣ. ಮೃತ್ಯು ಮೊದಲಿಗೆ ಪ್ರಹಾರ ಮಾಡುತ್ತಾನೆ. ಬಳಿಕ ಉಳಿದವರೂ ಮರಣ ಹೇತುಗಳಾಗುತ್ತಾರೆ' ಎನ್ನುತ್ತಾಳೆ. 'ಮಯೈವೈತೇ ನಿಹತಾಃ ಪೂರ್ವಮೇವ ನಿಮಿತ್ತಮಾತ್ರ ಭವ ಸವ್ಯಸಾಚಿನ್' (ಭ.ಗೀ. 11-33) ಎಂದು ಹೇಳಿದಂತೆ 'ಮೃತ್ಯು' ಶ್ರೀಹರಿಯೆ ಇಲ್ಲಿ ವಿವಕ್ಷಿತವೆಂಬ ಅಭಿಪ್ರಾಯದಿಂದ ನಿರ್ಣಯ ಮೇಲಿನಂತೆ ಹೇಳುತ್ತಿದೆ.

ಕಂಸನಿಂದ ಶಿಶುಗಳ ಹತ್ಯಾಕಾಂಡ

ಆನೀಯ ಕಂಸೋಽಥ ಗೃಹೇ ಸ್ವಮಂತ್ರಿಣಃ
ಪ್ರೋವಾಚ ಕನ್ಯಾವಚನಂ ಸಮಸ್ತಮ್ ।
ಶ್ರುತ್ವಾ ಚ ತೇ ಪ್ರೋಚುರತ್ಯಂತಪಾಪಾಃ
ಕಾರ್ಯಂ ಬಾಲಾನಾಂ ನಿಧನಂ ಸರ್ವತೋಽಪಿ ॥ ೭೪ ॥

ಬಳಿಕ ಕಂಸ ತನ್ನ ಮಂತ್ರಿಗಳನ್ನು ಅರಮನೆಗೆ ಕರೆಸಿಕೊಂಡು **ಕನ್ನಿಕೆ** ಹೇಳಿದ ಎಲ್ಲ ಮಾತನ್ನೂ ಹೇಳಿದ. ಅದನ್ನು ಕೇಳಿ, ಮಹಾಪಾಪಿಗಳಾದ ಅವರು ಹೇಳಿದರು, **'ಎಲ್ಲ ಮಕ್ಕಳ ಹತ್ಯೆ ಮಾಡಬೇಕು'**.

ತಥೇತಿ ತಾಂಸತ್ರ ನಿಯುಜ್ಯ ಕಂಸೋ
ಗೃಹಂ ಸ್ವಕೀಯಂ ಪ್ರವಿವೇಶ ಪಾಪಃ।
ಚೇರುಶ್ಚತೇ ಬಾಲವಧೇ ಸದೋದ್ಯತಾ
ಹಿಂಸಾವಿಹಾರಾಃ ಸತತಂ ಸ್ವಭಾವತಃ ॥ ೭೫ ॥

ಪಾಪಿ ಕಂಸ 'ಹಾಗೇ ಆಗಲಿ' ಎನ್ನುತ್ತ ಮಂತ್ರಿಗಳನ್ನು ಆ ಕಾರ್ಯದಲ್ಲಿ ನೇಮಿಸಿ ತನ್ನ ಅಂತಃಪುರವನ್ನು ಪ್ರವೇಶಿಸಿದ. ಆ ಮಂತ್ರಿಗಳು ಸ್ವಭಾವತಃ ಹಿಂಸೆಯನ್ನೇ ವಿಹಾರವಾಗಿ ಮಾಡಿಕೊಂಡವರು. ಅದರಿಂದ ಸದಾ ಮಕ್ಕಳ ಹತ್ಯೆಯಲ್ಲಿ ನಿರತರಾಗಿ ಸಂಚರಿಸಿದರು.

ಅಥ ಪ್ರಭಾತೇ ಶಯನೇ ಶಯಾನಂ
ಅಪಶ್ಯತಾಮಬ್ಜದಲಾಯತಾಕ್ಷಮ್।
ಕೃಷ್ಣಂ ಯಶೋದಾ ಚ ತಥೈವ ನಂದ
ಆನಂದಸಾಂದ್ರಾಕೃತಿಮಪ್ರಮೇಯಮ್ ॥ ೭೬ ॥

ಯಶೋದೆಯೂ ನಂದನೂ ಬೆಳಿಗ್ಗೆ ಹಾಸಿಗೆಯಲ್ಲಿ ಮಲಗಿದ್ದ ಕಮಲದ ದಳದಂಥ ಉದ್ದಕಣ್ಣಿನ ಆನಂದಪೂರ್ಣ ಸ್ವರೂಪನಾದ ಅಪ್ರಮೇಯನಾದ ಕೃಷ್ಣನನ್ನು ಕಂಡರು.

ಮೇನಾತ ಏತೌ ನಿಜಪುತ್ರಮೇನಂ
ಸ್ರಷ್ಟಾರಮಬ್ಜಪ್ರಭವಸ್ಯ ಚೇಶಮ್।
ಮಹೋತ್ಸವಾತ್ ಪೂರ್ಣಮನಾಶ್ಚನಂದೋ
ವಿಪ್ರೇಭ್ಯೋಽದಾಲ್ಲಕ್ಷಮಿತಾಸ್ತದಾ ಗಾಃ ॥ ೭೭ ॥

ನಂದಯಶೋದೆಯರು ಬ್ರಹ್ಮನಿಗೂ ತಂದೆಯಾದ ಈ ಪ್ರಭುವನ್ನು ತಮ್ಮ ಮಗನೆಂದು ತಿಳಿದರು. ಮಹಾ ಆನಂದದಿಂದ ತುಂಬಿದೆದೆಯ ನಂದ ಬ್ರಾಹ್ಮಣರಿಗೆ **ಲಕ್ಷ** ಗೋವುಗಳನ್ನು ದಾನ ಮಾಡಿದ.

ಅತ್ತ ವಸುದೇವನೂ ಹತ್ತು ಸಾವಿರ ಗೋದಾನ ಮಾಡಿದನೆಂದು **ಭಾಗವತ** ಹೇಳಿದೆ-

ಕೃಷ್ಣಾವತಾರೋತ್ಸವ ಸಂಭ್ರಮೋಽಸ್ಪೃಶನ್-
ಮುದಾ ದ್ವಿಜೇಭ್ಯೋಽಯುತಮಾಪ್ಲುತೋ ಗವಾಂ॥

ಆದರೇ ವಸುದೇವ ಕಾರಾಗೃಹದಲ್ಲಿದ್ದುದರಿಂದ ಗೋದಾನ ಸಂಕಲ್ಪ ಮಾತ್ರವೆ ಮಾಡಿದ್ದ. ದಾನ ಮಾಡಿರಲಿಲ್ಲ. ಅದರಿಂದ ನಿರ್ಣಯ ಅದನ್ನು ಹೇಳಿಲ್ಲ.

ಧೇನೂನಾಂ ನಿಯುತೇಪ್ರಾದಾದ್
ವಿಪ್ರೇಭ್ಯಃ ಸಮಲಂಕೃತೇ (ಭಾಗ.10-6-3)

ಎಂದು ಭಾಗವತ ಹೇಳುವಂತೆ ಎರಡು ನಿಯುತ ಗೋವುಗಳನ್ನು ನಂದ ದಾನ ಮಾಡಿದ. ನಿಯುತ ಎಂದರೆ ಲಕ್ಷ

ಶತಂ ಸಹಸ್ರಮಯುತಂ ನಿಯುತಂ ಪ್ರಯುತಂ ತಥಾ।
ಕೋಟಿರರ್ಬುದ ಬೃಂದಾದ್ಯಾಜ್ಞೇಯಾ ದಶಗುಣೋತ್ತರಾಃ॥

ಎಂದು ಅಮರಕೋಶ ಹೇಳುತ್ತಿದೆ. ಅದರಿಂದ ನಿರ್ಣಯದಲ್ಲಿ 'ಲಕ್ಷಮಿತಾಃ' ಎಂದರೆ ಒಂದು ಲಕ್ಷವಲ್ಲ ಎರಡು ಲಕ್ಷವೆಂದಿಟ್ಟುಕೊಳ್ಳಬೇಕು. ಬ್ರಹ್ಮಾಂಡಪುರಾಣದಲ್ಲಿ 'ನಿಯುತ'ವೆಂದರೆ ಹತ್ತು ಲಕ್ಷ

ಏಕಂ ದಶ ಶತಂ ಚೈವ ಸಹಸ್ರಮಯುತಂ ತಥಾ
ಲಕ್ಷಂ ಚ ನಿಯುತಂ ಚೈವ ಕೋಟಿರರ್ಬುದಮೇವ ಚ
ವೃಂದಂ ಖರ್ವೋ ನಿಖರ್ವಶ್ಚಶಂಖ ಪದ್ಮೌ ಚ ಸಾಗರಃ
ಅಂತ್ಯಂ ಮಧ್ಯಂ ಪರಾರ್ಧಂ ಚ ದಶವೃದ್ಧ್ಯಾ ಯಥಾಕ್ರಮಂ

ಈ ಪಕ್ಷದಲ್ಲಿ ಭಾಗವತದ 'ನಿಯುತೇ' ಇಪ್ಪತ್ತು ಲಕ್ಷ ನಿರ್ಣಯದಲ್ಲಿ 'ಲಕ್ಷಮಿತಾಃ' ಎಂದರೂ ಇಪ್ಪತ್ತು ಲಕ್ಷ

ಸುವರ್ಣರತ್ನಾಂಬರಭೂಷಣಾನಾಂ
ಬಹೂನಿ ಗೋಜೀವಿಗಣಾಧಿನಾಥಃ।
ಪ್ರಾದಾದಥೋಪಾಯನಪಾಣಯಸ್ತಂ
ಗೋಪಾ ಯಶೋದಾಂ ಚ ಮುದಾ ಸ್ತ್ರಿಯೋಽಗಮನ್ ॥ ೭೮ ॥

ಗೊಲ್ಲರ ಗುಂಪಿಗೆ ಒಡೆಯನಾದ ನಂದ ಬಹಳ ಸುವರ್ಣ ರತ್ನ ವಸ್ತ್ರಾಭರಣ ರಾಶಿಗಳನ್ನು ದಾನ ಮಾಡಿದ. ಗೊಲ್ಲರು ಉಡುಗೊರೆಗಳನ್ನು ಹಿಡಿದುಕೊಂಡು ಅವನ ಬಳಿಗೆ ಬಂದರು. ಗೋಪಿಯರು ಆನಂದದಿಂದ ಯಶೋದೆಯ ಬಳಿಗೆ ಬಂದರು.

'ಭೂಷಣಾನಿ ಬಹೂನಿ' ಎಂದು ಮುದ್ರಿತವಾದ ಪಾಠ, ಯಾವ ವ್ಯಾಖ್ಯಾನಕಾರರಿಗೂ ಸಮ್ಮತವಲ್ಲ.

'ಸುವರ್ಣ ರತ್ನಾಂಬರಗಳಿಂದ ಭೂಷಣಗಳನ್ನು ಹೊಂದಿದ ಗೋವುಗಳ ಬಹಳ ಹಿಂಡುಗಳನ್ನು ದಾನ ಮಾಡಿದ. ಅಲಂಕೃತವಲ್ಲದ ಗೋವುಗಳನ್ನು ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಲಕ್ಷ ಸಂಖ್ಯೆಯಲ್ಲಿ ದಾನ ಮಾಡಿದ. ಅಥವಾ ಸುವರ್ಣರತ್ನ ಅಂಬರ ಮತ್ತು ಭೂಷಣಗಳ ಬಹಳ ರಾಶಿಗಳನ್ನು ದಾನ ಮಾಡಿದ' ಎಂದು ವಾದಿರಾಜೀಯ[1]

ಗತೇಷು ತತ್ಸೈವ ದಿನೇಷು ಕೇಷುಚಿತ್
ಜಗಾಮ ಕಂಸಸ್ಯ ಗೃಹಂ ಸ ನಂದಃ।
ಪೂರ್ವಂ ಹಿ ನಂದಃ ಸ ಕರಂ ಹಿ ದಾತುಂ
ಬೃಹದ್ವನಾನ್ನಿಃಸೃತಃ ಪ್ರಾಪಕೃಷ್ಣಾಮ್ ॥ ೭೯ ॥

ಕೃಷ್ಣ ಬಂದು ನೆಲೆಸಿದ್ದ ಆ ಯಮುನಾ ತೀರದಲ್ಲಿಯೆ ಕೆಲವು ದಿನಗಳು ಕಳೆದುವು. ಬಳಿಕ ನಂದ ಕರ ನೀಡಲು ಕಂಸನ ಅರಮನೆಗೆ ನಡೆದ. ಯಶೋದೆ ಹಡೆಯುವುದಕ್ಕೆ ಮೊದಲೇ ನಂದ ಕರ ನೀಡಲೆಂದು ಬೃಹದ್ವನದಿಂದ ಹೊರಟು ಯಮುನೆಯ ತೀರಕ್ಕೆ ಬಂದಿದ್ದ.

ಬೃಹದ್ವನದಿಂದ ಪಶ್ಚಿಮಕ್ಕೆ ಎರಡು ಕ್ರೋಶ ದೂರದಲ್ಲಿ ಮಧುರೆ ಇದೆ. ನಡುವೆ ಯಮುನಾ ನದಿಯನ್ನು ದಾಟಬೇಕು. ನಂದ ಕೃಷ್ಣಾವತಾರಕ್ಕೆ ಮೊದಲೇ ವಾರ್ಷಿಕಕರ ಕೊಡಲೆಂದು ಎಲ್ಲ ಗೋಪಾಲಕರ ಜೊತೆಗೆ ಗರ್ಭಿಣಿ ಯಶೋದೆಯನ್ನೂ ಕರೆದುಕೊಂಡು ಬೃಹದ್ವನದಿಂದ ಹೊರಟು ಯಮುನೆಯ ತೀರದವರೆಗೆ ಬಂದಿದ್ದ. ಯಶೋದೆಯ ಪ್ರಸವ ಕಾಲ ಸಮೀಪಿಸಿದ್ದರಿಂದ ಅಲ್ಲಿಯೆ ಶಿಬಿರ ಹಾಕಿ ವಾಸ ಮಾಡಿದ. ಪ್ರಸವವಾದ ಬಳಿಕ ಒಂದು ತಿಂಗಳು ಅಲ್ಲಿಯೆ ವಾಸ ಮಾಡಿ ಕಂಸನ ಬಳಿಗೆ ನಡೆದ.

ಸಹಾಗತಾ ತೇನ ತದಾ ಯಶೋದಾ
ಸುಷಾವ ದುರ್ಗಾಮಥ ತತ್ರ ಶೌರಿಃ।
ನಿಧಾಯ ಕೃಷ್ಣಂ ಪ್ರತಿಗೃಹ್ಯ ಕನ್ಯಕಾಂ
ಗೃಹಂ ಯಯೌ ನಂದ ಉವಾಸ ತತ್ರ ॥ ೮೦ ॥

ಆಗ ನಂದನ ಜೊತೆಗೆ ಬಂದಿದ್ದ ಯಶೋದೆ ದುರ್ಗೆಯನ್ನು ಹಡೆದಳು. ಅಲ್ಲಿ

---

1. ಸುವರ್ಣರತ್ನಾಂಬರೈರ್ಭೂಷಣಾನಿ ಯಾಸಾಂ ತಾಃ ತಾಸಾಂ ಗವಾಂ ಬಹೂನಿ ವೃಂದಾನಿ ಚ ಪ್ರಾದಾದಿತಿ ಸಂಬಂಧಃ। ತೂಷ್ಣೀಂ ಗವಾಂ ಲಕ್ಷಂ ದತ್ತವಾನ್। ಅಲಂಕೃತಾ ಗಾಶ್ಚ ಬಹ್ವೀರ್ದತ್ತವಾನ್ ಇತಿ ಭಾವಃ ಸುವರ್ಣ ರತ್ನಾಂಬರ ಭೂಷಣಾನಾಂ ವೃಂದಾನಿ ಚ ಪ್ರಾದಾದಿತಿ ಪ್ರತ್ಯೇಕಂ ವಾ ಸಂಬಂಧಃ। -ವಾದಿರಾಜೀಯ

ವಸುದೇವ ಕೃಷ್ಣನನ್ನಿರಿಸಿ ಕನ್ಯೆಯನ್ನು ಎತ್ತಿಕೊಂಡು ಮನೆಗೆ ಹೋದ. ನಂದ ಅಲ್ಲಿಯೆ ವಾಸ ಮಾಡಿದ.

ನಿರುಷ್ಯ ತಸ್ಮಿನ್ ಯಮುನಾತಟೇ ಸ
ಮಾಸಂ ಯಯೌ ದ್ರಷ್ಟುಕಾಮೋ ನರೇಂದ್ರಮ್ ।
ರಾಜ್ಞೋಽಥ ತಂ ದತ್ತಕರಂ ದದರ್ಶ
ಶೂರಾತ್ಮಜೋ ವಾಕ್ಯಮುವಾಚ ಚೈನಮ್ ॥ ೮೧ ॥

ಒಂದು ತಿಂಗಳ ಕಾಲ ನಂದ ಯಮುನಾ ತೀರದಲ್ಲಿ ವಾಸ ಮಾಡಿ ಬಳಿಕ ಕಂಸನನ್ನು ಕಾಣಲು ಹೋದ. ಅವನಿಗೆ ಕರವಿತ್ತ. ಆಗ ವಸುದೇವ ನಂದನನ್ನು ಕಂಡು ಹೀಗೆ ಹೇಳಿದ.

ಪೂತನಾವಧ

ಯಾಹ್ಯುತ್ಪಾತಾಃ ಸಂತಿ ತತ್ರೇತ್ಯುದೀರಿತೇ
ಜಗಾಮ ಶೀಘ್ರಂ ಯಮುನಾಂ ಸ ನಂದಃ।
ರಾತ್ರಾವೇವಾಗಚ್ಛಮಾನೇ ತು ನಂದೇ
ಕಂಸಸ್ಯ ಧಾತ್ರೀ ತು ಜಗಾಮ ಗೋಷ್ಠಮ್ ॥ ೮೨ ॥

'ನಂದ, ನೀನು ಬೇಗನೆ ಹಿಂತಿರುಗು. ಅಲ್ಲಿ ಉತ್ಪಾತಗಳಾಗುತ್ತವೆ' ಎಂದು ವಸುದೇವ ಹೇಳಿದಾಗ ನಂದ ಬೇಗನೆ ಯಮುನಾ ತೀರಕ್ಕೆ ಧಾವಿಸಿದ. ರಾತ್ರಿಯಲ್ಲಿ ಅವನು ಬರುತ್ತಿದ್ದಂತೆ ಅದೇ ರಾತ್ರಿಯಲ್ಲಿ ಕಂಸನ ದಾದಿಯೂ ಅಲ್ಲಿಗೆ ಹೋಗಿದ್ದಳು.

ಸಾ ಪೂತನಾ ನಾಮ ನಿಜಸ್ವರೂಪಂ
ಆಚ್ಛಾದ್ಯ ರಾತ್ರೌ ಶುಭರೂಪವಚ್ಚ।
ವಿವೇಶ ನಂದಸ್ಯ ಗೃಹಂ ಬೃಹದ್ವನ
ಪ್ರಾಂತೇ ಹಿ ಮಾರ್ಗೇ ರಚಿತಂ ಪ್ರಯಾಣೇ ॥ ೮೩ ॥

ಅವಳು ಪೂತನೆ. ಮಾಯೆಯಿಂದ ನಿಜರೂಪ ಮರೆಮಾಡಿಕೊಂಡು ಅಂದವಾದ ರೂಪು ತಳೆದು ಗೋಕುಲದ ಬಳಿಯಲ್ಲಿ ಮಧುರೆಗೆ ಹೋಗುವ ದಾರಿಯಲ್ಲಿ ನಿರ್ಮಿತವಾಗಿದ್ದ ನಂದನ ಶಿಬಿರವನ್ನು ರಾತ್ರಿಯಲ್ಲಿ ಪ್ರವೇಶಿಸಿದಳು.

ತೀರೇ ಭಗಿನ್ಯಾಸ್ತು ಯಮಸ್ಯ ವಸ್ತ್ರೀ
ಗೃಹೇ ಶಯಾನಂ ಪುರುಷೋತ್ತಮಂ ತಮ್ ।
ಜಗ್ರಾಹ ಮಾತ್ರಾ ತು ಯಶೋದಯಾ ತಯಾ
ನಿದ್ರಾಯುಜಾ ಪ್ರೇಕ್ಷ್ಯಮಾಣಾ ಶುಭೇವ ॥ ೮೪ ॥

ಯಮುನಾತೀರದ ಆ ಶಿಬಿರದಲ್ಲಿ ಮಲಗಿದ್ದ ಯಶೋದೆಯ ನಿದ್ದೆಗಣ್ಣಿಗೆ ಪೂತನೆ ಸಭ್ಯಳಂತೆಯೆ ಕಂಡುಬಂದಳು. ಆದರಿಂದ ಅವಳು ಮಲಗಿದ್ದ ಕೃಷ್ಣನನ್ನು ಎತ್ತಿಕೊಂಡಳು.

ತನ್ಮಾಯಯಾ ಧರ್ಷಿತಾ ನಿದ್ರಯಾ ಚ
ನ್ಯವಾರಯನ್ನೈವ ಹಿ ನಂದಜಾಯಾ।
ತಯಾ ಪ್ರದತ್ತಂ ಸ್ತನಮೀಶಿತಾಸುಭಿಃ
ಪಪೌ ಸಹೈವಾಶು ಜನಾರ್ದನಃ ಪ್ರಭುಃ ॥ ೮೫ ॥

ಪೂತನೆಯ ಮಾಯೆಯಿಂದಲೂ ನಿದ್ರೆಯಿಂದಲೂ ಪರವಶಳಾಗಿದ್ದ ಯಶೋದೆ ಅವಳನ್ನು ತಡೆಯಲಿಲ್ಲ. ಸರ್ವಶಕ್ತನಾದ ಪ್ರಭು ಶ್ರೀಕೃಷ್ಣ ಅವಳು ನೀಡಿದ ಎದೆಹಾಲನ್ನು ಬೇಗನೆ ಅವಳ ಪ್ರಾಣಸಹಿತವಾಗಿ ಹೀರಿದ.

ಮೃತಾ ಸ್ವರೂಪೇಣ ಸುಭೀಷಣೇನ
ಪಪಾತ ಸಾ ವ್ಯಾಪ್ಯ ವನಂ ಸಮಸ್ತಮ್।
ತದಾಗಮನ್ನಂದಗೋಪೋಽಪಿ ತತ್ರ
ದೃಷ್ಟ್ವಾ ಚ ಸರ್ವೇಽಪ್ಯಭವನ್ ಸುವಿಸ್ಮಿತಾಃ ॥ ೮೬ ॥

ಪೂತನೆ ಭಯಂಕರವಾದ ನಿಜರೂಪದಿಂದ ಇಡೀ ವನವನ್ನು ವ್ಯಾಪಿಸಿಕೊಂಡು ಸತ್ತುಬಿದ್ದಳು. ಆಗಲೆ ನಂದಗೋಪ ಬಂದ. ಎಲ್ಲರೂ ನೋಡಿ ಬಲು ಆಶ್ಚರ್ಯಪಟ್ಟರು.

ಸಾ ತಾಟಕಾ ಚೋರ್ವಶೀಸಂಪ್ರವಿಷ್ಟಾ
ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ।
ಸಾ ತೂರ್ವಶೀ ಕೃಷ್ಣಭುಕ್ತಸ್ತನೇನ
ಪೂತಾ ಸ್ವರ್ಗಂ ಪ್ರಯಯೌ ತತ್‌ಕ್ಷಣೇನ ॥ ೮೭ ॥

ಪೂತನೆ ಊರ್ವಶಿಯಿಂದ ಆವಿಷ್ಟಳಾದ ತಾಟಕೆ. ಕೃಷ್ಣನಲ್ಲಿ ಮಾಡಿದ ಅಪರಾಧದಿಂದ ತಮಸ್ಸನ್ನು ಹೊಕ್ಕಳು. ಊರ್ವಶಿ ಕೃಷ್ಣನು ಉಂಡ ಎದೆ ಹಾಲಿನಿಂದ ಪುನೀತಳಾಗಿ ತತ್‌ಕ್ಷಣವೆ ಸ್ವರ್ಗವನ್ನು ಸೇರಿದಳು.

ತಾಟಕೆ ಕೃಷ್ಣನನ್ನು ಕೊಲ್ಲಲೆಂದು ಕಾಲಕೂಟ ವಿಷಲಿಪ್ತವಾದ ಸ್ತನವನ್ನು ನೀಡಿದಳು. ಕೃಷ್ಣ ಎದೆ ಹಾಲು ಕುಡಿದು ಸ್ತನವನ್ನು ಕಡಿದು ಆ ವಿಷವನ್ನೆ ಸ್ತನದೊಳಗೆ ಪ್ರವೇಶಗೊಳಿಸಿ ತಾಟಕೆಯನ್ನು ಕೊಂದು ತಮಸ್ಸಿಗೆ ಕಳಿಸಿದ. ಆದರೆ ಕೃಷ್ಣ ತನ್ನ ಎದೆ ಹಾಲುಂಡುದರಿಂದ ತಾನು ಪವಿತ್ರಳಾದೆನೆಂದು ತಿಳಿದ ಊರ್ವಶಿ ಪುನೀತಳಾದಳು. ಅಂದರೆ ಮುಂದಿನ ಶ್ಲೋಕದಲ್ಲಿ ಹೇಳುವ ಶಾಪದಿಂದ ವಿಮುಕ್ತಳಾದಳು.

ಸಾ ತುಂಬುರೋಃ ಸಂಗತ ಆವಿವೇಶ
ರಕ್ಷಸ್ತನುಂ ಶಾಪತೋ ವಿತ್ತಪಸ್ಯ ।
ಕೃಷ್ಣಸ್ಪರ್ಶಾಚ್ಛುದ್ಧಭಾವಾ ಪುನರ್ದಿವಂ
ಯಯೌ ತುಷ್ಟೇ ಕಿಮಲಭ್ಯಂ ರಮೇಶೇ ॥ ೮೮ ॥

ಊರ್ವಶಿ ತುಂಬುರುವಿನ ಸಂಗದಿಂದ ಪ್ರಾಪ್ತವಾದ ಕುಬೇರ ಶಾಪದಿಂದ ರಾಕ್ಷಸಿಯ ಶರೀರವನ್ನು ಪ್ರವೇಶಿಸಿದ್ದಳು. ಕೃಷ್ಣ ಸ್ಪರ್ಶದಿಂದ ಶುದ್ಧಭಾವದವಳಾದ ಆ ಊರ್ವಶಿ ಪುನಃ ಸ್ವರ್ಗವನ್ನು ಸೇರಿದಳು. ರಮಾರಮಣನೊಲಿದಾಗ ಅಲಭ್ಯ ಏನಿದ್ದೀತು?

ಊರ್ವಶಿ ಕುಬೇರನ ಬಳಿ ಇದ್ದಾಗ ಅವಳಿಗೆ ಅವನೇ ಪತಿ. ಅವನ ಅನುಮತಿ ಇಲ್ಲದೆ ತುಂಬುರು ಗಂಧರ್ವನ ಸಂಗ ಮಾಡಿದಳು. ಇದು ವ್ಯಭಿಚಾರ. ಕುಬೇರ ಕುಪಿತನಾಗಿ 'ರಾಕ್ಷಸಿಯಾಗಿ ಜನಿಸು' ಎಂದು ಶಾಪನೀಡಿದ. ದೇವತೆಗಳು ರಾಕ್ಷಸ ಜನ್ಮ ಪಡೆಯಬೇಕಾದರೆ, ಅವರ ಸ್ವಭಾವಸಿದ್ಧವಾದ ಜ್ಞಾನಭಕ್ತ್ಯಾದಿಗಳು ಸ್ವಲ್ಪ ಮರೆಯಬೇಕಾದರೆ ರಾಕ್ಷಸರ ಜೊತೆಗೆ ಒಂದು ಶರೀರದಲ್ಲಿ ಇರಬೇಕಾಗುತ್ತದೆ. ಶ್ರೀರಾಮನಿಂದ ಹತಳಾದ ತಾಟಕೆ ರಾಕ್ಷಸಿ. ಅವಳ ಜೊತೆಗೆ ಊರ್ವಶಿ ಪೂತನಾ ಶರೀರದಲ್ಲಿ ವಾಸ ಮಾಡಿದಳು. ತಾಟಕೆ ತನ್ನ ಸ್ವಭಾವಾನುಸಾರ ಕೃಷ್ಣನಲ್ಲಿ ದ್ವೇಷದಿಂದ ವಿಷಯುಕ್ತ ಸ್ತನಪಾನ ಮಾಡಿಸಿದಳು. ತಮಸ್ಸನ್ನು ಪಡೆದಳು. ಆದರೆ ಊರ್ವಶಿ ಕೃಷ್ಣನ ಕರಸ್ಪರ್ಶ ಮುಖ ಸ್ಪರ್ಶಗಳಿಂದ ತನ್ನ ಸ್ತನ ಪವಿತ್ರವಾಯಿತು ಎಂದುಕೊಂಡಳು. ಶಾಪಮುಕ್ತಳಾಗಿ ಸ್ವರ್ಗ ಸೇರಿದಳು.

ಪೂತನಾ ಲೋಕಬಾಲಘ್ನೀ ರಾಕ್ಷಸೀ ರುಧಿರಾಶನಾ ।
ಜಿಘಾಂಸಯಾಪಿ ಹರಯೇ ಸ್ತನಂ ದತ್ವಾऽಪ ಸದ್ಗತಿಂ॥ (ಭಾಗ.7-36)

ಎಂಬಲ್ಲಿ 'ಕೃಷ್ಣನನ್ನು ಕೊಲ್ಲುವ ಬಯಕೆಯಿಂದ ಸ್ತನಪಾನ ಮಾಡಿಸಿದರೂ ಪೂತನೆ ಸದ್ಗತಿ ಪಡೆದಳು' ಎಂದು ಮೇಲುನೋಟಕ್ಕೆ ಕಾಣುವುದು. ಆದರೆ ದ್ವೇಷಫಲ ತಮಸ್ಸೆಂದು ಭಾಗವತದಲ್ಲಿಯೆ ಅನೇಕ ಕಡೆ ಹೇಳಿದೆ. ಉದಾ: 'ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ' 'ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ' ಇತ್ಯಾದಿ. ಭಗವನ್ನಿಂದೆಯನ್ನು ಕೇಳಿ ತಡೆಯದೆ ಇದ್ದರೂ ಅಥವಾ ಆ ಸ್ಥಳದಿಂದ ದೂರಹೋಗದೆ ಇದ್ದರೂ ಅಧೋಗತಿ-

ನಿಂದಾಂ ಭಗವತಃ ಶೃಣ್ವನ್ ತತ್ಪರಸ್ಯ ಜನಸ್ಯ ವಾ ।
ತತೋ ನಾಪೈತಿ ಯಃಸೋऽಪಿ ಯಾತ್ಯಧಃ ಸುಕೃತಾಚ್ಚ್ಯುತಃ।

ದ್ವೇಷದಿಂದಲಾದರೂ ಸರಿಯೆ, ಭಗವಂತನನ್ನು ಸ್ಮರಿಸಿದರೆ

ಮೋಕ್ಷವೆನ್ನುವುದಾದರೆ ಕಾಮಧೇನುವನ್ನು ಕೊಲ್ಲುವುದಕ್ಕಾಗಿ ಹುಲಿ ತೋಳಿಂದ ಬಳಸಿದ ಮಾತ್ರಕ್ಕೆ ಕಾಮಧೇನು ಒಲಿಯಬೇಕಾದೀತು. ತತ್ವಜ್ಞಾನದಿಂದಲೇ ಮೋಕ್ಷವೆಂದು ಎಲ್ಲ ದಾರ್ಶನಿಕರೂ ಒಪ್ಪಿರುವಾಗ ದ್ವೇಷದಿಂದ ಮೋಕ್ಷವೆನ್ನುವುದು ಸಾಹಸದ ಮಾತಾಗುವುದು ಎಂದು ಮುಂತಾಗಿ ರುಕ್ಮಿಣೀಶ ವಿಜಯದಲ್ಲಿ ಸುಂದರವಾಗಿ ನಿರೂಪಿಸಲಾಗಿದೆ. ಅದರಿಂದ ಭಾಗವತದಲ್ಲಿ 'ಪೂತನೆ ಕೃಷ್ಣನನ್ನು ಕೊಲ್ಲುವ ಬಯಕೆಯಿಂದ, ಸ್ತನಪಾನ ಮಾಡಿಸಿದರು ಸದ್ಗತಿ 'ಪಡೆದಳೆಂ'ದರೆ ತಾಟಕ ತಮಸ್ಸನ್ನು ಪಡೆದಳೆಂದೇ ಅರ್ಥ. 'ಸದ್' ಧಾತುವಿಗೆ ವಿಶರಣ ಅವಸಾದನ ಎಂಬ ಅರ್ಥಗಳೂ ಉಂಟು. ಊರ್ವಶಿ ತಾಟಕೆಯ ಜೊತೆಗಿದ್ದು ವಿಷಪೂರಿತ ಸ್ತನಪಾನ ಮಾಡಿಸಿದರೂ ಅವಳು ಶುದ್ಧಭಾವಳಾದ್ದರಿಂದ ಸದ್ಗತಿಯನ್ನು ಅಂದರೆ ಸ್ವರ್ಗವನ್ನು ಹೊಂದಿದಳು ಎಂದು ಎರಡು ಬಗೆಯಿಂದ ವಿಜಯಧ್ವಜೀಯದಲ್ಲಿ ವ್ಯಾಖ್ಯಾನಿಸಲಾಗಿದೆ.

ಶಕಟಾಕ್ಷಸಂಹಾರ

ಯದಾಽಽಪದೇವಶ್ಚತುರೋಽಥಮಾಸಾನ್
ತದೋಪನಿಷ್ಕ್ರಮಣಮಸ್ಯ ಚಾಸೀತ್ ।
ಜನ್ಮರ್ಕ್ಷ ಮಸ್ಮಿನ್ ದಿನ ಏವ ಚಾಸೀತ್
ಪ್ರಾತಃ ಕಿಂಚಿತ್ ತತ್ರ ಮಹೋತ್ಸವೋಽಭೂತ್ ॥ ೮೯ ॥

ಶ್ರೀಕೃಷ್ಣ ನಾಲ್ಕನೇ ತಿಂಗಳಿಗೆ ಕಾಲಿಟ್ಟಾಗ ಅವನಿಗೆ ಉಪನಿಷ್ಕ್ರಮಣ ನಡೆಯಿತು. ಅದೇ ದಿನ ಬೆಳಿಗ್ಗೆ ಜನ್ಮ ನಕ್ಷತ್ರವೂ ಸ್ವಲ್ಪ ಇದ್ದಿತು. ಅದರಿಂದ ಉಪನಿಷ್ಕ್ರಮಣ ಬಲು ವಿಜೃಂಭಣೆಯಿಂದಲೇ ನಡೆಯಿತು.

ಕೃಷ್ಣ ಹುಟ್ಟಿದ್ದು ಭಾದ್ರಪದ ಮಾಸ ರೋಹಿಣಿ ನಕ್ಷತ್ರದಲ್ಲಿ. ಮುಂದೆ ನಾಲ್ಕನೇ ತಿಂಗಳಾದ ಮಾರ್ಗಶೀರ್ಷದಲ್ಲಿ ಉಪನಿಷ್ಕ್ರಮಣ ನಡೆಯಿತು. ಹುಟ್ಟಿದ ಮಗುವನ್ನು ಹನ್ನೆರಡನೆ ದಿನ ಅಥವಾ ಅರ್ಧ ತಿಂಗಳು ಕಳೆದೊಡನೆ ಅಥವಾ ಮೂರು ತಿಂಗಳು ಕಳೆದೊಡನೆ ನಾಲ್ಕನೆ ತಿಂಗಳಲ್ಲಿ ಒಳ್ಳೆಯ ದಿನದಲ್ಲಿ ಮನೆಯಿಂದ ಹೊರಗೆ ತಂದು ಸೂರ್ಯದರ್ಶನ ಮಾಡಿಸಿ, ಸಮೀಪದ ದೇವಾಲಯಕ್ಕೆ ಹೋಗಿ ಬಳಿಕ ಸೋದರಮಾವ ಮುಂತಾದ ಬಂಧುಗಳ ಮನೆಗೂ ಕರೆದುಕೊಂಡು ಹೋಗಬೇಕು. ಇದರಿಂದ ಮಗುವಿಗೆ ಆಯುಸ್ಸು ಬಲ ಮುಂತಾದ ಗುಣ ವೃದ್ಧಿಯಾಗುವುದು. ಈ ಕರ್ಮವನ್ನು ಉತ್ಥಾನಕರ್ಮ ಅಥವಾ ಉಪನಿಷ್ಕ್ರಮಣವೆನ್ನುತ್ತಾರೆ. ಕೃಷ್ಣನ ಉಪನಿಷ್ಕ್ರಮಣ ದಿನದಲ್ಲಿ ಬೆಳಿಗ್ಗೆ ಉದಯ ಕಾಲದಲ್ಲಿ ಸ್ವಲ್ಪ ರೋಹಿಣೀ

ನಕ್ಷತ್ರವಿದ್ದುದರಿಂದ ಆದಿನ ಜನ್ಮನಕ್ಷತ್ರವೆಂದು ಇನ್ನೂ ಹೆಚ್ಚಿನ ವಿಜೃಂಭಣೆ. ಭಾಗವತದಲ್ಲಿ ಔತ್ಥಾನಿಕ ಕೌತುಕವೆಂದು ಇದನ್ನು ಕರೆದಿದೆ. ಇಲ್ಲಿ ಸತ್ಯಧರ್ಮರು ಉತ್ಥಾನವೆಂದರೆ ಮಗು ಬೋರಲಾಗುವುದು. ಆಗ ಮಾಡುವ ಉತ್ಸವ ಔತ್ಥಾನಿಕ ಎಂದಿದ್ದಾರೆ.

ತದಾ ಶಯಾನಃ ಶಕಟಸ್ಯ ಸೋಽಧಃ
ಪದಾಕ್ಷಿಪತ್ ತಂ ದಿತಿಜಂ ನಿಹಂತುಮ್ ।
ಅನಃ ಸಮಾವಿಶ್ಯ ದಿತೇಃ ಸುತೋಽಸೌ
ಸ್ಥಿತಃ ಪ್ರತೀಪಾಯ ಹರೇಃ ಸುಪಾಪಃ ॥ ೯೦ ॥

ಆಗ ಬಂಡಿಯ ಕೆಳಗೆ ಮಲಗಿದ್ದ ಕೃಷ್ಣ ದೈತ್ಯನವನ್ನು ಕೊಲ್ಲಲು ಕಾಲಿಂದ ತಳ್ಳಿದ. ಆ ದೈತ್ಯ ಮಹಾಪಾಪಿ. ಕೃಷ್ಣನಿಗೆ ಅಪಾಯ ಮಾಡಲೆಂದೇ ಬಂಡಿಯಲ್ಲಿ ಆವಿಷ್ಟನಾಗಿದ್ದ.

'ಶಕಟಾಕ್ಷ' ಎಂದರೆ ಬಂಡಿಯ ಅಚ್ಚುಮರ. ಅದರಲ್ಲಿ ಆವಿಷ್ಟನಾಗಿ ಒಬ್ಬ ದೈತ್ಯ ಅಚ್ಚುಮರವನ್ನು ಮುರಿದು ಬಂಡಿಯ ಕೆಳಗೆ ಮಲಗಿದ ಮಕ್ಕಳನ್ನು ಕೊಲ್ಲುತ್ತಿದ್ದ. ಅವನಿಗೆ ಶಕಟಾಕ್ಷ ಎಂದೇ ಹೆಸರು. ಮೂರು ತಿಂಗಳ ಶಿಶು ಕೃಷ್ಣ ಕೈಕಾಲು ಅಲ್ಲಾಡಿಸುತ್ತ ಕಾಲಿಂದ ಅಚ್ಚು ಮರವನ್ನು ಸ್ವಲ್ಪ ತಳ್ಳಿದ. ಅಷ್ಟಕ್ಕೇ ಅಚ್ಚುಮರ ಮುರಿಯಿತು.

ಕ್ಷಿಪ್ತೋಽನಸಿಸ್ಥಃ ಶಕಟಾಕ್ಷನಾಮಾ
ಸ ವಿಷ್ಣುನೇತ್ವಾಸಹಿತಃ ಪಪಾತ ।
ಮಮಾರ ಚಾಶು ಪ್ರತಿಭಗ್ನಗಾತ್ರೋ
ವ್ಯತ್ಯಸ್ತಚಕ್ರಕ್ಷಮಭೂದನಶ್ಚ ॥ ೯೧ ॥

ಕೃಷ್ಣ ತಳ್ಳಿದಾಗ ಬಂಡಿಯಲ್ಲಿದ್ದ ಶಕಟಾಕ್ಷನೆಂಬ ಅಸುರ ಬಂಡಿ ಸಹಿತವಾಗಿ ಬಿದ್ದ. ಅವನ ಮೈ ಪುಡಿಪುಡಿಯಾಯಿತು. ತಕ್ಷಣವೇ ಆತ ಸತ್ತ. ಆಗ ಗಾಡಿಯ ಚಕ್ರಗಳೂ ಅಚ್ಚುಮರವೂ ಅಸ್ತವ್ಯಸ್ತವಾದುವು.

'ಇತ್ವನಾ ಶಕಟೇನ ಆ ಸಮಂತಾತ್ ಸಹಿತಃ' ಎಂದು ವಿಗ್ರಹ ಮಾಡುವ ಅಭಿಪ್ರಾಯದಲ್ಲಿ 'ಇತ್ವಾಸಹಿತಃ' ಎಂದು ಒಂದೇ ಪದ ಎನ್ನುತ್ತದೆ ವಾದಿರಾಜೀಯ. ವರದರಾಜೀಯವೂ ಹಾಗೇ ಹೇಳಿದೆ. ಜನಾರ್ದನೀಯದಲ್ಲಿ 'ಸಹಿತಃ ಇತ್ವಾ ಪಪಾತ್' ಹಾಲುಮೊಸರು ಮುಂತಾದವುಗಳಿಂದ ಸಹಿತವಾಗಿ ಬಂಡಿಬಿದ್ದಿತು ಎಂದು ವ್ಯಾಖ್ಯಾನವಿದೆ. ಇದಕ್ಕೆ ದಶಮಸ್ಕಂಧ ಭಾಗವತದ ಸಮ್ಮತಿಯನ್ನು ತೋರಿಸಲಾಗಿದೆ–

'ವಿಧ್ವಸ್ತ ನಾನಾ ರಸ ಕುಪ್ಯ ಭಾಜನಂ'

ಸಾ ಸಂಭ್ರಮಾತ್ ತಂ ಪ್ರತಿಗೃಹ್ಯ ಶಂಕಯಾ
ಕೃಷ್ಣಂ ಯಶೋದಾ ದ್ವಿಜವರ್ಯಸೂಕ್ತಿಭಿಃ।
ಸಂಸ್ನಾಪಯಾಮಾಸ ನದೀತಟಾತ್ ತದಾ
ಸಮಾಗತಾ ನಂದವಚೋಽಭಿತರ್ಜಿತಾ ॥೯೨॥

ಆಗ ನಂದನ ಮಾತುಗಳಿಂದ ಬೈಸಿಕೊಂಡ ಯಶೋದೆ ನದೀತೀರದಿಂದ ಬಂದು ಕಳವಳಗೊಂಡು ಕೃಷ್ಣನನ್ನು ಎತ್ತಿಕೊಂಡು ಭೂತಬಾಧೆಯ ಶಂಕೆಯಿಂದ ಬ್ರಾಹ್ಮಣೋತ್ತಮರ ವೇದಪಾಠದೊಂದಿಗೆ ಸ್ನಾನ ಮಾಡಿಸಿದಳು.

ಅಕಸ್ಮಾತ್ ಬಂಡಿ ಮುರಿದು ಬೀಳುವುದೆಂದರೆ ಅದು ಉತ್ಪಾತವೇ ಎಂದು ನಂದ ಭಯಗೊಂಡ. ನದಿಗೆ ಹೋಗಿದ್ದ ಯಶೋದೆಯನ್ನು 'ಮಗುವನ್ನು ಬಿಟ್ಟು ಎಲ್ಲಿಗೆ ಹೋಗಿದ್ದೆ?' ಎಂದು ಗದರಿದ. ಯಶೋದೆ ಗಾಬರಿಗೊಂಡು ಕಳವಳಿಸಿ ಧಾವಿಸಿ ಬಂದು ಕೃಷ್ಣನನ್ನು ಎತ್ತಿಕೊಂಡಳು. ಭೂತಪ್ರೇತಗಳ ಬಾಧೆ ಇರಬಹುದೆಂದು ಶಂಕಿಸಿ ಬ್ರಾಹ್ಮಣರಿಂದ ಭಯಶಾಂತಿಗಾಗಿ ಹೋಮ ಸ್ವಸ್ತಿವಾಚನ ಮಾಡಿಸಿ ಸ್ನಾನ ಮಾಡಿಸಿದಳು.

ಹತ್ವಾತು ತಂ ಕಂಸಭೃತ್ಯಂ ಸ ಕೃಷ್ಣಃ
ಶಿಶ್ಯೇ ಪುನಃ ಶಿಶುವತ್ ಸರ್ವಶಾಸ್ತಾ।
ಏವಂ ಗೋಪಾನ್ ಪ್ರೀಣಯನ್ ಬಾಲಕೇಲೀ
ವಿನೋದತೋ ನ್ಯವಸತ್ ತತ್ರ ದೇವಃ ॥೯೩॥

ಕಂಸನ ಭೃತ್ಯನಾದ ಆ ಶಕಟಾಕ್ಷನನ್ನು ಹೀಗೆ ಸಂಹರಿಸಿ ಸರ್ವಶಾಸಕನಾದ ದೇವ ಶ್ರೀಕೃಷ್ಣ ಮಗುವಿನಂತೆ ಪುನಃ ಮಲಗಿದ. ಬಾಲಲೀಲೆ ವಿನೋದಗಳಿಂದ ಗೋಪಾಲಕರನ್ನು ಸಂತೋಷಗೊಳಿಸುತ್ತ ನಂದಗೋಕುಲದಲ್ಲಿ ವಾಸಮಾಡಿದ.

ಅರ್ಜುನನ ಜನನ

ವಿವರ್ಧಮಾನೇ ಲೋಕದೃಷ್ಟ್ಯೈವ ಕೃಷ್ಣೇ
ಪಾಂಡುಃ ಪುನಃ ಪ್ರಾಹ ಪೃಥಮಿದಂ ವಚಃ।
ಧರ್ಮಿಷ್ಠೋ ನೌ ಸೂನುರಗ್ರೇ ಬಭೂವ
ಬಲದ್ವಯಜ್ಯೇಷ್ಠ ಉತಾಪರಶ್ಚ ॥೯೪॥

ಲೋಕದೃಷ್ಟಿಯಿಂದ ಕೃಷ್ಣ ಬೆಳೆಯುತ್ತಿದ್ದಂತೆ ಅತ್ತ ಪಾಂಡು ಪುನಃ ಕುಂತಿಗೆ ಹೇಳಿದ- 'ನಮಗೆ ಮೊದಲಿಗೆ ಧರ್ಮಿಷ್ಠನಾದ ಪುತ್ರ ಜನಿಸಿದ. ಬಳಿಕ ಜ್ಞಾನಬಲ ಬಾಹುಬಲ ಎರಡರಲ್ಲಿಯೂ ಉತ್ತಮನಾದ ಇನ್ನೊಬ್ಬ ಪುತ್ರನೂ ಜನಿಸಿದ.

ಯದ್ಯೆಕ ಏವಾತಿಬಲೋಪಪನ್ನೋ
ಭವೇತ್ ತದಾ ತೇನ ಪರಾವಮರ್ದೇ।
ಪ್ರವರ್ತಮಾನೇ ಸ್ವಪುರಂ ಹರೇಯು
ಶ್ಚೌರ್ಯಾತ್ ಪರೇ ತದ್ ದ್ವಯಮತ್ರ ಯೋಗ್ಯಮ್ ॥ ೯೫ ॥

'ಆದರೂ ಒಬ್ಬನೇ ಮಗ ಇದ್ದರೆ ಅವನು ಅತಿ ಬಲಿಷ್ಠನಾದರೂ ಅವನು ಶತ್ರುಗಳೊಡನೆ ಯುದ್ಧಮಾಡುತ್ತಿರುವಾಗ ಬೇರೆ ಶತ್ರುಗಳು ನಮ್ಮ ಪಟ್ಟಣವನ್ನು ಕಳ್ಳತನದಿಂದ ನುಗ್ಗಿ ಸೂರೆ ಮಾಡಬಹುದು. ಆದ್ದರಿಂದ ಬಲಿಷ್ಠರಾದ ಇಬ್ಬರು ಮಕ್ಕಳಾಗಬೇಕು.

ಶಸ್ತ್ರಾಸ್ತ್ರವಿದ್ ವೀರ್ಯವಾನ್ ನೌ ಸುತೋಽನ್ಯೋ
ಭವೇದ್ ದೇವಂ ತಾದೃಶಮಾಹ್ವಯಾತಃ।
ಶೇಷಸ್ತವ ಭ್ರಾತೃಸುತೋಽಭಿಜಾತ
ಸ್ತಸ್ಮಾನ್ನಾಸೌ ಸುತದಾನಾಯ ಯೋಗ್ಯಃ ॥ ೯೬ ॥

'ಶಸ್ತ್ರಾಸ್ತ್ರಗಳನ್ನು ಬಲ್ಲ ಪರಾಕ್ರಮಿಯಾದ ಇನ್ನೊಬ್ಬ ಮಗ ನಮಗೆ ಜನಿಸಲಿ. ಅದಕ್ಕೆ ಅಂಥ ಒಬ್ಬ ದೇವನನ್ನು ಆಹ್ವಾನಿಸು. ಶೇಷ ನಿನ್ನ ಅಣ್ಣನ ಮಗನಾಗಿ ಹುಟ್ಟಿದ್ದಾನೆ. ಆದ್ದರಿಂದ ಅವನು ನಮಗೆ ಪುತ್ರದಾನ ಮಾಡಲು ಅರ್ಹನಾಗುವುದಿಲ್ಲ.

'ನಮಗೆ ಬೇಕಾಗಿರುವ ಇಬ್ಬರು ಬಲಿಷ್ಠ ಪುತ್ರರಲ್ಲಿ ಮೊದಲನೆಯವನಾಗಿ ವಾಯು ಅವತರಿಸಿದ್ದಾನೆ. ಅನಂತರದ ಬಲಿಷ್ಠರು ಶೇಷಗರುಡರುದ್ರರು. ಅವರಲ್ಲಿ ಶೇಷ ನಿನ್ನ ಅಣ್ಣನಾದ ವಸುದೇವನ ಮಗನಾಗಿ ಬಲರಾಮ ಎಂಬ ಹೆಸರಿನಿಂದ ಹುಟ್ಟಿದ್ದಾನೆ. ಅದರಿಂದ ಸೋದರಳಿಯನಾದ ಆತ ನಿನ್ನ ಅಂಗಸಂಗ ಮಾಡಿ ಪುತ್ರದಾನ ಮಾಡಲು ಅರ್ಹನಾಗುವುದಿಲ್ಲ' ಎನ್ನುತ್ತಾನೆ ಪಾಂಡು.

ನ ವೈ ಸುಪರ್ಣಃ ಸುತದೋ ನರೇಷು ಪ್ರಜಾಯತೇ ಚಾಸ್ಯ ಯತಸ್ತಥಾಜ್ಞಾ।
ಕೃತಾ ಪುರಾ ಹರಿಣಾ ಶಂಕರಸ್ತು ಕ್ರೋಧಾತ್ಮಕಃ ಪಾಲನೇ ನೈವ ಯೋಗ್ಯಃ ॥ ೯೭ ॥

'ಗರುಡ ಪುತ್ರದಾನ ಮಾಡುತ್ತ ಮನುಷ್ಯರಲ್ಲಿ ಹುಟ್ಟುವುದಿಲ್ಲ. ಏಕೆಂದರೆ ಹರಿ ಅವನಿಗೆ ಹಿಂದೆ ಹಾಗೇ ಆಜ್ಞೆ ಮಾಡಿದ್ದಾನೆ. ಶಿವ ಕ್ರೋಧಾಭಿಮಾನಿ. ರಾಜ್ಯಪಾಲನೆಯಲ್ಲಿ ಯೋಗ್ಯನೇ ಅಲ್ಲ.

ಅತೋ ಮಹೇಂದ್ರೋ ಬಲವಾನನಂತರ
ಸ್ತೇಷಾಂ ಸಮಾಹ್ವಾನಮಿಹಾರ್ಹತಿ ಸ್ವರಾಟ್।

ಇತೀರಿತಾ ಸಾಹ್ವಯದಾಶು ವಾಸವಂ
ತತಃ ಪ್ರಜಜ್ಞೇ ಸ್ವಯಮೇವ ಶಕ್ರಃ ॥ ೯೮ ॥

'ಆದ್ದರಿಂದ ಅವರಿಗೆ ಅನಂತರದ ಬಲಿಷ್ಠನಾದ ದೇವ ಮಹೇಂದ್ರ. ಅವನೇ ಪುತ್ರದಾನ ವಿಷಯದಲ್ಲಿ ಆಹ್ವಾನಕ್ಕೆ ಯೋಗ್ಯನಾಗಿರುತ್ತಾನೆ.' ಪಾಂಡು ಹೀಗೆ ಹೇಳಿದಾಗ ಕುಂತಿ ಬೇಗನೆ ದೇವೇಂದ್ರನನ್ನು ಮಂತ್ರಪೂರ್ವಕ ಆಹ್ವಾನಿಸಿದಳು. ಆಗ ಇಂದ್ರ ತಾನೇ ಜನಿಸಿದ.

ಸ ಚಾರ್ಜುನೋ ನಾಮ ನರಾಂಶಯುಕ್ತೋ
ವಿಷ್ಣ್ವಾವೇಶೀ ಬಲವಾನಸ್ತ್ರವೇತ್ತಾ।
ರೂಪ್ಯನ್ಯಃ ಸ್ಯಾತ್ ಸೂನುರಿತ್ಯುಚ್ಯಮಾನಾ
ಭರ್ತ್ರಾ ಕುಂತೀ ನೇತಿ ತಂ ಪ್ರಾಹ ಧರ್ಮಾತ್ ॥ ೯೯ ॥

ಅವನು ಅರ್ಜುನನೆನಿಸಿದ. ನರಾಂಶಯುಕ್ತನಾಗಿದ್ದು ವಿಷ್ಣುವಿನ ಆವೇಶ ಉಳ್ಳವ, ಬಲಿಷ್ಠ ಶಸ್ತ್ರಾಸ್ತ್ರಗಳನ್ನು ಬಲ್ಲವ. 'ಸುಂದರನಾದ ಇನ್ನೊಬ್ಬ ಮಗನೂ ಬೇಕೆಂ'ದು ಪಾಂಡು ಹೇಳಿದಾಗ ಧರ್ಮದೃಷ್ಟಿಯಿಂದ ಬೇಡವೆಂದಳು ಕುಂತಿ.

ದ್ವಾತ್ರಿಂಶಲ್ಲಕ್ಷಣೋಪೇತನಾದ ಭೀಮ ಅತಿ ಸುಂದರ. ಅರ್ಜುನನೂ ಹರಿ ವಾಯು ಶೇಷರ ಅಂಶಯುಕ್ತನಾದ ದೇವೇಂದ್ರನ ಅವತಾರ ಅತ್ಯಂತ ಸುಂದರ. ಆದರೂ ಅವರದು ವಜ್ರಕಾಯ. ಅದರಿಂದ ಮೃದು ಸುಂದರ ಶರೀರದ ಮಗನೊಬ್ಬನನ್ನೂ ಬಯಸಿದ ಪಾಂಡು. ಆದರೆ ಕುಂತಿ ಬೇಡವೆಂದಳು. ನಾವು ಬಯಸಿದಂತೆ ಮೂರು ಮಂದಿ ರತ್ನದಂಥ ಮಕ್ಕಳು ಹುಟ್ಟಿರುವಾಗ ಇನ್ನೂ ಮಕ್ಕಳು ಬೇಕೆಂದು ಪರಪುರುಷ ಸಂಗ ಮಾಡುವುದು ವ್ಯಭಿಚಾರವೆನಿಸುತ್ತದೆ. ಈಗಾಗಲೇ ಮೂರು ಮಂದಿ ಪರಪುರುಷರನ್ನು ಸೇರಿದ್ದಾಯಿತು. ಇನ್ನು ನಾಲ್ಕನೆಯವನನ್ನು ಸೇರಿದರೆ ನಾನು ಸ್ವೈರಿಣಿ ಎನಿಸುತ್ತೇನೆ. ಐದನೆಯವನನ್ನು ಸೇರಿದರೆ ಬಂಧಕಿ ಎನಿಸುತ್ತೇನೆ ಎಂಬುದು ಕುಂತಿಯ ಅಭಿಪ್ರಾಯವೆಂದು ವರದರಾಜೀಯ. ಮಹತ್ತಾದ ಕಾರ್ಯದ ಉದ್ದೇಶವಿಲ್ಲದೆ ಮಕ್ಕಳನ್ನು ಬಯಸಿ ಪರಪುರುಷ ಸಂಸರ್ಗ ಮಾಡುವುದು ಧರ್ಮವಲ್ಲವೆಂದು ಜನಾರ್ದನೀಯ. ರಾಜ್ಯರಕ್ಷಣೆಯಂಥ ಮಹತ್ತಾದ ಕಾರ್ಯಕ್ಕೆ ಧರ್ಮಿಷ್ಠನಾದ ಹಿರಿಯ ಮಗನನ್ನೂ ಅವನ ಸಹಾಯಕ್ಕೆ ಬಲಿಷ್ಠರಾದ ಇಬ್ಬರು ತಮ್ಮಂದಿರನ್ನೂ ಬಯಸುವುದು ನ್ಯಾಯ. ಮೃದು ಶರೀರದ ಸುಂದರನಾದ ಮಗನನ್ನು ಬಯಸುವುದು ರಾಜ ರಕ್ಷಣೆಯಂಥ ಮಹತ್ಕಾರ್ಯದಲ್ಲಿ ಅನಪೇಕ್ಷಿತ. ಅದಕ್ಕಾಗಿ ವ್ಯಭಿಚಾರ ಮಾಡುವುದು ಅಧರ್ಮ ಎಂದು ಅಭಿಪ್ರಾಯ.

ಉದ್ಧವನ ಜನನ

ಬೃಹಸ್ಪತಿಃ ಪೂರ್ವಮಭೂದ್ಧರೇಃ ಪದಂ
ಸಂಸೇವಿತುಂ ಪವನಾವೇಶಯುಕ್ತಃ।
ಸ ಉದ್ಧವೋ ನಾಮ ಯದುಪ್ರವೀರಾತ್
ಜಾತೋ ವಿದ್ವಾನುಪಗವನಾಮಧೇಯಾತ್ ॥ ೧೦೦ ॥

ಹಿಂದೆ ಹರಿಪಾದ ಸೇವೆಗಾಗಿ ದ್ರೋಣನಾಗಿ ಅವತರಿಸಿದ ಬೃಹಸ್ಪತಿಯೆ ವಾಯ್ವಾವೇಶಯುತನಾಗಿ ಜ್ಞಾನಿ ಉದ್ಧವನಾಗಿ ಉಪಗವನೆಂಬ ಯಾದವವೀರನಿಂದ ಜನಿಸಿದ.

ತ್ವಯೋಪಭುಕ್ತಸ್ರಗ್ ಗಂಧ ವಾಸೋಲಂಕಾರ ಚರ್ಚಿತಾಃ।
ಉಚ್ಛಿಷ್ಟ ಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ ॥

ಎನ್ನುತ್ತ ಹರಿನಿರ್ಮಾಲ್ಯಾದಿ ಸೇವನ ರೂಪವಾದ ಹರಿ ಪಾದಸೇವೆ ಮಾಡಿರುವ ಈ ಜ್ಞಾನಿಯಾದ ಉದ್ಧವ. ಹರಿವಂಶದಲ್ಲಿ ಇನ್ನೊಬ್ಬ ಉದ್ಧವ ಬರುತ್ತಾನೆ. ಅವನು ವಸುದೇವನ ತಮ್ಮನಾದ ದೇವಭಾಗನ ಮಗ-

ಉದ್ಧವೋ ದೇವಭಾಗಸ್ಯ ಮಹಾಭಾಗಃ ಸುತೋಽಭವತ್

ದ್ರೋಣಾತ್ಮಕಂ ನಾತಿತರಾಂ ಸ್ವಸೇವಕಂ
ಕುರ್ಯಾದ್ಧರಿರ್ಮಾಮಿತಿ ಭೂಯ ಏವ।
ಸ ಉದ್ಧವಾತ್ಮಾವತತಾರ ಯಾದವೇ-
ಷ್ವಾಸೇವನಾರ್ಥಂ ಪುರುಷೋತ್ತಮಸ್ಯ ॥ ೧೦೧ ॥

ದ್ರೋಣರೂಪದಲ್ಲಿ ತನ್ನನ್ನು ಕೃಷ್ಣ ಆಪ್ತ ಸೇವಕನನ್ನಾಗಿ ಮಾಡಿಕೊಳ್ಳಲಾರ ಎಂದು ಹರಿಯ ಪೂರ್ಣ ಸೇವೆ ಮಾಡುವುದಕ್ಕಾಗಿ ಯಾದವಕುಲದಲ್ಲಿ ಉದ್ಧವನಾಗಿ ಬೃಹಸ್ಪತಿ ಅವತರಿಸಿದ.

ಬೃಹಸ್ಪತಿ ದ್ರೋಣನಾಗಿ ಅವತರಿಸಿದುದು ಹರಿಪಾದ ಸೇವೆಗಾಗಿಯೆ. ಪಾಂಡವರಿಗೆ ಶಸ್ತ್ರವಿದ್ಯಾಭ್ಯಾಸ ಮಾಡಿಸುವ ಮೂಲಕವೂ ಕುರುಕ್ಷೇತ್ರ ಯುದ್ಧದಲ್ಲಿ ಯುದ್ಧಮಾಡಿಯೂ ಹರಿಯ ಭೂಭಾರಹರಣ ಕಾರ್ಯದಲ್ಲಿ ತನ್ನ ಪಾಲಿನ ಸೇವೆ ಮಾಡುತ್ತಾನೆ ದ್ರೋಣ. ಆದರೆ ಪಾಪಿಯಾದ ದುರ್ಯೋಧನನ ಪರವಾಗಿ ಯುದ್ಧಮಾಡುತ್ತಾನೆ. ವಸ್ತುತಃ ತಾನು ಬ್ರಾಹ್ಮಣನಾದ್ದರಿಂದ ಕ್ಷತ್ರಿಯನಾಗಿ ಅವತರಿಸಿದ ಕೃಷ್ಣನಲ್ಲಿ ನಿರ್ಮಾಲ್ಯಧಾರಣ ಉಚ್ಛಿಷ್ಟ ಭೋಜನಾದಿ ರೂಪವಾದ ದಾಸ್ಯಭಕ್ತಿ

ಮಾಡಲು ಅವಕಾಶವಿಲ್ಲವೆಂದು ಕ್ಷತ್ರಿಯನಾಗಿ ಉದ್ಧವಾವತಾರ ಮಾಡಿದ ಬೃಹಸ್ಪತಿ ಎಂದು ವಾದಿರಾಜೀಯದಲ್ಲಿ ಹೇಳಿದೆ.

ಬೃಹಸ್ಪತೇರೇವ ಸ ಸರ್ವ ವಿದ್ಯಾ
ಅವಾಪ ಮಂತ್ರೀ ನಿಪುಣಃ ಸರ್ವವೇತ್ತಾ।
ವರ್ಷತ್ರಯೇ ತತ್ಪರತಃ ಸ ಸಾತ್ಯಕಿ
ರ್ಜಜ್ಞೇ ದಿನೇ ಚೇಕಿತಾನಶ್ಚ ತಸ್ಮಿನ್ ॥ ೧೦೨ ॥

ಉದ್ಧವ ಬೃಹಸ್ಪತಿಯಿಂದಲೆ ಸಕಲ ವಿದ್ಯೆಗಳನ್ನು ಕಲಿತು ಸರ್ವಜ್ಞನೆನಿಸಿ ಕೃಷ್ಣನಿಗೆ ನಿಪುಣನಾದ ಮಂತ್ರಿಯೆನಿಸಿದ. ಉದ್ಧವ ಹುಟ್ಟಿದ ಮೂರು ವರ್ಷಗಳ ಅನಂತರ ಸಾತ್ಯಕಿ ಹುಟ್ಟಿದ. ಅದೇ ದಿನ ಚೇಕಿತಾನನೂ ಹುಟ್ಟಿದ.

ಚೇಕಿತಾನ ಕೃತವರ್ಮ ಯುಧಿಷ್ಠಿರ ಅಶ್ವತ್ಥಾಮ ದುರ್ಯೋಧನ ಭೀಮಸೇನರ ಜನನ ಕ್ರಮ

ಮರುತ್ಸು ನಾಮ ಪ್ರವಹೋ ಯದುಷ್ವಭೂತ್
ಸ ಚೇಕಿತಾನೋ ಹರಿಸೇವನಾರ್ಥಮ್।
ತದೈವ ಜಾತೋ ಹೃದಿಕಾತ್ಮಜೋಽಪಿ
ವರ್ಷತ್ರಯೇ ತತ್ಪರತೋ ಯುಧಿಷ್ಠಿರಃ ॥ ೧೦೩ ॥

ಮರುತ್ತುಗಳಲ್ಲಿ ಪ್ರತಿಭನೆಂಬುವವನು ಹರಿಸೇವೆಗಾಗಿ ಯದುಕುಲದಲ್ಲಿ ಚೇಕಿತಾನನಾಗಿ ಹುಟ್ಟಿದ. ಆಗಲೆ ಕೃತವರ್ಮನೂ ಹುಟ್ಟಿದ. ಅನಂತರ ಮೂರು ವರ್ಷದಲ್ಲಿ ಯುಧಿಷ್ಠಿರ ಹುಟ್ಟಿದ.

ಜನಾರ್ದನೀಯದಲ್ಲಿ ಮರುತನ ನಾಮ ಪ್ರವಹ ಎಂದು ಹೇಳಿ ಪ್ರತಿಭ ಎಂದು ಪಾಠಾಂತರವಿದೆ ಎಂದಿದೆ. ನಾರಾಯಣ ಪಂಡಿತಾಚಾರ್ಯರ ಅಂಶಾವೇಶಾವತಾರ ವರ್ಣನದಲ್ಲಿ 'ಚೇಕಿತಾನಃಪುರಾ ಪ್ರೋಕ್ತಃ ಪ್ರವಹೋ ನಾಮ ವೈ ಮರುತ್' ಎಂದು ಪ್ರವಹನ ಅವತಾರ ಚೇಕಿತಾನ ಎಂದಿದೆ. ವರದರಾಜೀಯದಲ್ಲಿಯೂ ಹೃಷಿಕೇಶತೀರ್ಥೀಯ ಪಾಠದಲ್ಲಿಯೂ 'ಪ್ರತಿಭ' ಎಂದೇ ಇದೆ. ಇದಕ್ಕೆ ಅನುಗುಣವಾಗಿದೆ ಹರಿಕಥಾಮೃತಸಾರ-

'ಪ್ರತಿಭ ವಾತನು ಚೇಕಿತಾನ' -(ಬೃಹತ್ತಾರತಮ್ಯ-30)

ಅದರಿಂದ ಚೇಕಿತಾನ ಪ್ರತಿಭನ ಅವತಾರವೇ ಪ್ರವಹನ ಅವತಾರವೇ ಎಂಬುದನ್ನು ನಿರ್ಧರಿಸುವುದು ಕಷ್ಟ.

ಅಶ್ವತ್ಥಾಮನ ಜನನ

ತತೋಽಬ್ದತೋ ಭೂಭರಸಂಹೃತೌ ಹರೇ-
ರಂಗತ್ವಮಾಪ್ತುಂ ಗಿರಿಶೋಽಜನಿಷ್ಟ।
ಅಶ್ವತ್ಥಾಮಾ ನಾಮತೋಽಶ್ವಧ್ವನಿಂ ಸ
ಯಸ್ಮಾಚ್ಚಕ್ರೇ ಜಾಯಮಾನೋ ಮಹಾತ್ಮಾ ॥ ೧೦೪ ॥

ಯುಧಿಷ್ಠಿರನ ಜನನವಾದ ಒಂದು ವರ್ಷದ ಅನಂತರ ಹರಿಯ ಭೂಭಾರ ಹರಣಕಾರ್ಯದಲ್ಲಿ ಅಂಗತ್ವವನ್ನು ಹೊಂದಲು ಶಿವ ಅಶ್ವತ್ಥಾಮನಾಮದಿಂದ ಅವತರಿಸಿದ. ಆ ಮಹಾತ್ಮ ಹುಟ್ಟುವಾಗ ಅಶ್ವಧ್ವನಿಗೈದ. ಅದರಿಂದ ಆ ಹೆಸರು.

'ಅಶ್ವೇಸ್ಥಿತಃ ಅಶ್ವತ್ಥಃ' ಕುದುರೆಯಲ್ಲಿರುವ ಧ್ವನಿ. 'ಅಶ್ವತ್ಥೇನ ಅಮಾ' ಅಶ್ವಧ್ವನಿಯುಕ್ತನಾದ್ದರಿಂದ ಅಶ್ವತ್ಥಾಮನಿಗೆ ಆ ಹೆಸರಾಯಿತು.

ಸ ಸರ್ವವಿದ್ ಬಲವಾನಸ್ತ್ರವೇತ್ತಾ
ಕೃಪಸ್ವಸಾ ಯಾಂ ದ್ರೋಣವೀರ್ಯೋದ್ಭವೋಽಭೂತ್ ।
ಸುಯೋಧನಸ್ತಚ್ಚತುರ್ಥೇಽಹ್ನಿ ಜಾತ
ಸ್ತಸ್ಯಾಪರೇದ್ಯುರ್ಭೀಮಸೇನಃ ಸುಧೀರಃ ॥ ೧೦೫ ॥

ಸರ್ವಜ್ಞ ಬಲಿಷ್ಠ ಮತ್ತು ಅಸ್ತ್ರಜ್ಞನಾದ ಅಶ್ವತ್ಥಾಮ ಕೃಪನ ತಂಗಿಯಾದ ಕೃಪಿಯಲ್ಲಿ ದ್ರೋಣನ ವೀರ್ಯದಿಂದ ಉದ್ಭವಿಸಿದ. ಅವನು ಜನಿಸಿದ ನಾಲ್ಕನೆ ದಿನದಲ್ಲಿ ಸುಯೋಧನ ಹುಟ್ಟಿದ. ಅದರ ಮರುದಿನ ಬಲು ಧೀರನಾದ ಭೀಮಸೇನ ಜನಿಸಿದ.

'ಕೃಪಸ್ವಸಾಯಾಂ ದ್ರೋಣ ವೀರ್ಯೋದ್ಭವೋಽಭೂತ್ ।

ಎಂಬಲ್ಲಿ 'ಸ್ವಸೃ' ಶಬ್ದವಿಟ್ಟುಕೊಂಡಲ್ಲಿ 'ಸ್ವಸಾಯಾಂ' ಎಂದಾಗುವುದಿಲ್ಲ. ಆದಕ್ಕೆ 'ಸ್ವಸೃ' ಶಬ್ದದ ಮೇಲೆ ಛಾಂದಸವಾದ ಡಾಪ್ರತ್ಯಯಾಂತ 'ಸ್ವಸಾ' ಶಬ್ದವಿಟ್ಟುಕೊಳ್ಳಬೇಕೆಂದು ಸತ್ಯಾಭಿನವತೀರ್ಥರ ವ್ಯಾಖ್ಯಾನ.[1] ವಾದಿರಾಜೀಯದಲ್ಲಿ, 'ಯಾಂ ಕೃಪಸ್ವಸೇತಿ ವದಂತಿ ತಸ್ಯಾಂ' ಎಂದು ಪದಚ್ಛೇದ ಮಾಡಿ ಅನ್ವಯವನ್ನು ಹೇಳಿ, 'ಸ್ವಸಾಯಾಂ' ಎಂಬುದನ್ನು ಒಂದು ಶಬ್ದವೆಂದಿಟ್ಟುಕೊಳ್ಳುವುದಾದರೆ ಸೃಗತೌ ಧಾತುವಿನ ಔಣಾದಿಕ ಡ

---

1. ಕೃಪಸ್ವಸಾಯಾಮಿತ್ಯತ್ರ ಸ್ವಸೃಶಬ್ದಾತ್ ಛಾಂದಸಃ ಡಾಬ್ರೂಪಃ ಸ್ತ್ರೀಪ್ರತ್ಯಯೋ ದ್ರಷ್ಟವ್ಯಃ।
–ದುರ್ಘಟಾರ್ಥ ಪ್ರಕಾಶಿಕಾ

ಪ್ರತ್ಯಯದಿಂದ 'ಸ್ವೇನ ಸಹ ನಿಃಸೃತಾ' ಅಂದರೆ ಸೋದರಿ ಎಂದು ಅರ್ಥಗ್ರಹಿಸಬೇಕು ಎಂದಿದೆ.[1]

ದುರ್ಯೋಧನಾದಯೋ ಬಭೂವುರನ್ವಹಂ'

'ದುರ್ಯೋಧನ ಮುಂತಾದ ನೂರೊಂದು ಮಂದಿ ಪ್ರತಿದಿನ ದಿನಕ್ಕೊಬ್ಬರಂತೆ ಹುಟ್ಟಿದರು' ಎಂದರೆ ಮೊದಲನೆ ಗಡಿಗೆಯಿಂದ ದುರ್ಯೋಧನ ಹುಟ್ಟಿದ ಮರುದಿನ ಕುಂತಿಯಲ್ಲಿ ಭೀಮಸೇನ ಹುಟ್ಟುವಾಗಲೆ ಎರಡನೆ ಗಡಿಗೆಯಿಂದ ದುಃಶಾಸನನೂ ಹುಟ್ಟಿದ. ಹೀಗೆ ದಿನಕ್ಕೊಬ್ಬರಂತೆ ಎಲ್ಲ ಕೌರವರೂ ಜನಿಸಿದರು ಎಂದು ವಾದಿರಾಜೀಯ.[2]

'ಯುಧಿಷ್ಠರ ಜನಿಸಿದ ಒಂದು ವರ್ಷದ ಬಳಿಕ ಅಶ್ವತ್ಥಾಮ, ಅವನು ಹುಟ್ಟಿದ ನಾಲ್ಕನೆ ದಿನದಲ್ಲಿ ದುರ್ಯೋಧನ ಹುಟ್ಟಿದನೆಂದರೆ ಯುಧಿಷ್ಠಿರನಿಗಿಂತ ಒಂದು ವರ್ಷ ನಾಲ್ಕುದಿನ ಕಿರಿಯ ದುರ್ಯೋಧನ ಎಂದಂತಾಯಿತು. ಇದು ಹೇಗೆ ಸಾಧ್ಯ? ಗಾಂಧಾರಿ ಗರ್ಭಿಣಿಯಾದ ವೃತ್ತಾಂತವನ್ನು ಕೇಳಿ ಪಾಂಡು ಕುಂತಿಗೆ ಯಮನಿಂದ ಮಗುವನ್ನು ಪಡೆಯಲು ಆದೇಶ ನೀಡಿದ. ಬಳಿಕ ಕುಂತಿ ಗರ್ಭಧರಿಸಿ ನವಮಾಸ ಕಳೆದು ಯುಧಿಷ್ಠಿರನನ್ನು ಹೆತ್ತಳೆಂದರೆ ಗಾಂಧಾರಿಯ ಗರ್ಭಕ್ಕೂ ಆಗಲೆ ನವಮಾಸ ಕಳೆದುದರಿಂದ ಯುಧಿಷ್ಠಿರ ದುರ್ಯೋಧನರೊಳಗೆ ಒಂದು ವರ್ಷದ ಅಂತರವಿರಲು ಶಕ್ಯವಿಲ್ಲ'- ಈ ಸಂದೇಹವನ್ನು ಎತ್ತಿಕೊಂಡು ಜನಾರ್ದನೀಯದಲ್ಲಿ ಪರಿಹಾರ ನೀಡಲಾಗಿದೆ. ಗರ್ಭಕ್ಕೆ ದಶಮಾಸ ನಿಯಮವೆಂಬುದು ಕಟ್ಟುನಿಟ್ಟಾದ ನಿಯಮವಲ್ಲ. ಕೆಲವುಕಡೆ ಅಧಿಕ ಕಾಲವೂ ಇರುವುದುಂಟು. ಪ್ರಕೃತದಲ್ಲಿ ಗಾಂಧಾರಿಯ ಗರ್ಭ ಎರಡು ವರ್ಷದ್ದೆಂದು ಆದಿಪರ್ವದಲ್ಲಿ ಹೇಳಿದೆ-

ಸಂವತ್ಸರದ್ವಯಂ ತಂ ತು ಗಾಂಧಾರೀ ಗರ್ಭಮಾಹಿತಂ।
ಅಪ್ರಜಾ ಧಾರಯಾಮಾಸ ತತಸ್ತಾಂ ದುಃಖ ಮಾವಿಶತ್ ॥[3]

---

1. ಯಾಂ ಕೃಪಸ್ವಸೇತಿ ವದಂತಿ ತಸ್ಯಾಂ ದ್ರೋಣವೀರ್ಯೋದ್ಭವೋಽ ಭೂದಿತಿ ಯೋಜನಾ। ಯದ್ವಾ ಸೃಸ್ವಗತಾವಿತಿ ಧಾತೋರೌಣಾದಿಕೇ ಡ ಪ್ರತ್ಯಯೇ ಕೃತೇ ಸ್ವೇನ ಸಹ ನಿಃಸೃತಾ ಸ್ವಸಾ ಸಹೋದರೀತ್ಯರ್ಥಃ। -ವಾದಿರಾಜೀಯ
2. ತಸ್ಯ ದುರ್ಯೋಧನಸ್ಯ ಅಪರೇದ್ಯುಃ ಪರದಿನೇ ಭೀಮಸೇನೋಽಭೂತ್। ಏವಂ ಸತಿ 'ಶತಂ ಸುಯೋಧನಾದಯೋ ಬಭೂವುರನ್ವಹಂ' ಇತ್ಯನೇನ ವಿರೋಧ ಇತಿ ನ ಶಂಕನೀಯಂ। ದುರ್ಯೋಧನೋತ್ಪತ್ತೇರಪರದಿನೇ ಕುಂತ್ಯಾಂ ಭೀಮಸೇನೋ ಜಾತಃ। ತಸ್ಮಿನ್ನೇವ ದಿನೇ ದ್ವಿತೀಯ ಘಟಾತ್ ದುಃಶಾಸನಸ್ಯೋತ್ಪತ್ತಿರಿತಿ ಸಂಭವಾತ್॥ -ವಾದಿರಾಜೀಯ
3. ನನ್ವತ್ರ ಸುಯೋಧನೋ ಯುಧಿಷ್ಠಿರತಶ್ಚತುರ್ದಿನಾಧಿಕ ವರ್ಷಾತ್ ನೀಚ ಇತ್ಯುಕ್ತಂ। ಇದಂ ನ ಸಂಗಚ್ಛತೇ। ಪೂರ್ವಂ ತದಾಸ್ಯೇತ್ಯಾದಿನಾ ಪಾಂಡುಃ ಗಾಂಧಾರ್ಯಾ ಗರ್ಭೋ ಧೃತ ಇತಿ ಶ್ರುತ್ವಾ

ಬಲರಾಮ ಏಕೆ ಅಣ್ಣ?

ಯದಾ ಸ ಮಾಸದ್ವಿತಯೀ ಬಭೂವ ತದಾ
ರೋಹಿಣ್ಯಾಂ ಬಲದೇವೋಽಭಿಜಾತಃ।
ಬಲೀ ಗುಣಾಢ್ಯಃ ಸರ್ವವೇದೀ ಯ ಏವ
ಸೇವಾಖಿನ್ನೋ ಲಕ್ಷ್ಮಣೋಽಗ್ರೇ ಹರೇರ್ಭೂತ್ ॥ ೧೦೬ ॥

ಭೀಮಸೇನ ಎರಡು ತಿಂಗಳ ಮಗುವಾಗಿದ್ದಾಗ ರೋಹಿಣಿಯಲ್ಲಿ ಬಲಿಷ್ಠನೂ ಸರ್ವಜ್ಞನೂ ಗುಣಾಢ್ಯನೂ ಆದ ಬಲದೇವ ಹುಟ್ಟಿದ. ಸೇವೆ ಮಾಡಿ ಖಿನ್ನನಾದ್ದರಿಂದ ಕೃಷ್ಣನಿಗಿಂತ ಮೊದಲು ಹುಟ್ಟಿದ.

ಗುಣಾಢ್ಯನಾದ ಲಕ್ಷ್ಮಣ ಭಗವತ್ಸೇವೆಗಾಗಿಯೇ ಅವತರಿಸಿದವ. ಸೇವೆಯಿಂದ ಖಿನ್ನನಾದನೆನ್ನುವುದು ಹೇಗೆ ಯುಕ್ತವಾದೀತು? ಎಂಬ ಪ್ರಶ್ನೆ ಎತ್ತಿಕೊಂಡು ಸತ್ಯಾಭಿನವರು ಪರಿಹಾರ ಮಾಡುತ್ತಾರೆ- 'ಖಿನ್ನ' ಎಂದರೆ ದುಃಖಿ ಎಂದರ್ಥವಲ್ಲ. ಅತೃಪ್ತ ಎಂದರ್ಥ. ಭಗವತ್ಸೇವೆಯಲ್ಲಿ ಇನ್ನೂ ತೃಪ್ತಿ ಹೊಂದಲಿಲ್ಲ. ಪುನಃ ಸೇವೆ ಮಾಡಬೇಕೆಂದು ಮಹಾ ಆದರಿಂದ ಹರಿಯ ಅವತಾರಕ್ಕೆ ಮೊದಲೇ ಅವತರಿಸಿ ಕಾದಿದ್ದ. ಖೇದವೆಂದರೆ ಅತೃಪ್ತಿ ಎಂದು ಬ್ರಾಹ್ಮಪುರಾಣ ವಚನ ಹೇಳುತ್ತದೆ.[1]

ಕುಂತೀಂ ಪುತ್ರೋತ್ಪತ್ತ್ಯರ್ಥಂ ಪ್ರೇರಯಮಾಸೇತ್ಯುಕ್ತತ್ವಾತ್। ಗರ್ಭಸ್ಯ ದಶಮಾಸ್ಯತ್ವಸ್ಯ ಶ್ರುತ್ಯಾ ಉಕ್ತತ್ವಾಚ್ಚೇತಿ ಚೇತ್ ಸತ್ಯಂ। ದಶಮಾಸ್ಯತ್ವಂ ತು ಪ್ರಾಯಿಕಂ। ಕುತ್ರಚಿದಾಧಿಕ್ಯಸ್ಯಾಪಿ ದೃಷ್ಟತ್ವಾತ್। ಅತ್ರ ಗಾಂಧಾರ್ಯಾ ವರ್ಷದ್ವಯಂ ಗರ್ಭಸ್ಯ ಧೃತತ್ವಾತ್ ಚತುರ್ದಿನಾಧಿಕ ವರ್ಷಾನ್ನೀಚತ್ವಂ ಯುಜ್ಯತೇ। ಗಾಂಧಾರ್ಯಾ ವರ್ಷದ್ವಯಂ ಗರ್ಭಸ್ಯ ಧಾರಣಂ ಆದಿಪರ್ವಣ್ಯುಕ್ತಂ ತಥಾಪಿ-

ಸಂವತ್ಸರದ್ವಯಂ ತಂ ತು ಗಾಂಧಾರೀ ಗರ್ಭಮಾಹಿತಂ
ಅಪ್ರಜಾ ಧಾರಯಾಮಾಸ ತತಸ್ತಾಂ ದುಃಖಿಮಾವಿಶತ್। ಇತಿ॥ ಜನಾರ್ದನೀಯ

1. ಸೇವಾಖಿನ್ನಃ ಲಕ್ಷ್ಮಣಃ ಅಗ್ರೇ ಹರೇರ್ಭೂತ್ ಇತ್ಯಸ್ಯ ಸೇವಾಖಿನ್ನಃ ಭಗವತ್ಸೇವಾಯಾಂ ಖಿನ್ನಃ ಅಲಂಬುದ್ಧಿ ರಹಿತಃ ಲಕ್ಷ್ಮಣಃ ಹರೇಃ ಅಗ್ರೇ ಭೂತ್ ಅಭೂದಿತ್ಯರ್ಥಃ। ಏತೇನ ಗುಣಾಢ್ಯಸ್ಯ ಲಕ್ಷ್ಮಣಸ್ಯ ಭಗವತ್ಸೇವಾರ್ಥಮವತಾರಕಾಲೇ ಭಗವತ್ಸೇವಾ ನಿಮಿತ್ತಕ ಕ್ಲೇಶಾಯೋಗಾತ್ ಗುಣಾಢ್ಯೋ ಲಕ್ಷ್ಮಣಃ ಭಗವತ್ಸೇವಯಾ ಕ್ಲೇಶಂ ಪ್ರಾಪ್ತ ಇತಿ ಕಥನಮಾನುಪಪನ್ನಮಿತಿ ದೂಷಣಂ ಪರಾಸ್ತಂ। ಸೇವಾಖಿನ್ನ ಇತ್ಯಸ್ಯ ಭಗವತ್ಸೇವಯಾ ಕ್ಲೇಶಂ ಪ್ರಾಪ್ತ ಇತ್ಯರ್ಥಮನಂಗೀಕೃತ್ಯ,

ಅತುಷ್ಟಿರಪ್ರಸಾದಶ್ಚ ಖೇದೋಽತೃಪ್ತಿಸ್ತಥೈವ ಚ।
ಅನಲತ್ವಂ ವದಂತ್ಯೇತೇ ಸರ್ವೇ ಪರ್ಯಾಯ ವಾಚಕಾಃ ॥

ಇತಿ ಬ್ರಾಹ್ಮವಾಕ್ಯಾನುಸಾರೇಣ ಭಗವತ್ಸೇವಾವಿಷಯಕಾಲಂಬುದ್ಧಿರಹಿತ ಇತ್ಯರ್ಥಸ್ಯೋಕ್ತತ್ವಾತ್। ಲಕ್ಷ್ಮಣಸ್ಯ ಭಗವತ್ಸೇವಾವಿಷಯೇ ಮಹಾನಾದರೋಽಸ್ತೀತಿ ಸೂಚಯಿತುಂ ಹರೇರಗಜೋಽಭೂದಿತ್ಯನುಕ್ತ್ವಾ ಹರೇರಗ್ರೇಽಭೂದಿತ್ಯುಕ್ತಂ। -ದುರ್ಘಟಾರ್ಥದೀಪಿಕಾ

ವರದರಾಜೀಯದಲ್ಲಿ 'ಖಿನ್ನ' ಎಂದರೆ ಅತೃಪ್ತ ಎಂದು ವ್ಯಾಖ್ಯಾನಿಸಲಾಗಿದೆ. ಜನಾರ್ದನೀಯದಲ್ಲಿ 'ಖಿನ್ನ' ಎಂದರೆ 'ಶ್ರಾಂತ' ಎಂದು ಅರ್ಥೈಸಿ ತೃಪ್ತಿಯಾಗದೆ 'ಯದ್ವಾ' ಎನ್ನುತ್ತ 'ಅತೃಪ್ತ' ಎಂದೇ ಅರ್ಥೈಸಿದ್ದಾರೆ.[1]

ವಾದಿರಾಜರು 'ಖಿನ್ನ' ಎಂದರೆ ಶ್ರಮಪಟ್ಟವನೆಂದೇ ಅರ್ಥೈಸಿ ಅಭಿಪ್ರಾಯವನ್ನು ಹೀಗೆ ಹೇಳಿದ್ದಾರೆ- ರಾಮಾವತಾರದಲ್ಲಿ ನಾನು ಬಹಳ ಸೇವೆ ಮಾಡಿ ಆಯಾಸಗೊಂಡಿದ್ದೇನೆ. ಪುನಃ ಸೇವೆ ಮಾಡಲು ಶಕ್ತನಾಗಲಾರೆ. ಕೃಷ್ಣನಿಗೂ ನಾನು ತಮ್ಮನಾಗಿ ಅವತರಿಸಿದರೆ ಹಿಂದಿನಂತೆಯೇ ಬಹಳ ಸೇವೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ವಿಧಿಯ ಉಲ್ಲಂಘನ ಮಾಡಿದ ದೋಷ ಬಂದೀತು. ಆದ್ದರಿಂದ ಅಣ್ಣನಾಗಿ ಅವತರಿಸುತ್ತೇನೆ ಎಂದು ಆಲೋಚಿಸಿ ಅಣ್ಣನಾಗಿ ಜನಿಸಿದ ಶೇಷ. 'ಏಧಮಾನದ್ವಿಟ್' ಎಂಬುದು ಭಗವಂತನ ಒಂದು ಮಹಿಮೆ. ಅಧಿಕ ಸೇವೆ ಮಾಡಿ ಗಳಿಸಿದ ಪುಣ್ಯವನ್ನು ನಾಶಮಾಡುವ ಉದ್ದೇಶದಿಂದ ಹರಿಯೇ ಇಂಥ ಬುದ್ಧಿಯನ್ನು ಶೇಷನಿಗೆ ಕೊಟ್ಟ. ದೇವೇಂದ್ರ ಶ್ರೀಕೃಷ್ಣನಿಗೆ ಗೋವರ್ಧನೋ ದ್ಧಾರ ಕಾಲದಲ್ಲಿ ಅಪಾರಧಗೈದುದೂ ಇದೇ ಕಾರಣದಿಂದ. ಅಸುರಾವೇಶದಿಂದ ಹೀಗೆ ಮಾಡಿದನೆನ್ನಲೂ ಅಡ್ಡಿಯಿಲ್ಲ. 'ರಾಮಾವತಾರ ದಲ್ಲಿ ನಾನು ಮಾಡಿದ ಸೇವೆ ನನಗೆ ತೃಪ್ತಿಕರವಾಗಿರಲಿಲ್ಲ ಎಂದು ಖಿನ್ನನಾದ' ಎಂದು ವ್ಯಾಖ್ಯಾನ ಮಾಡುವುದು ಪೂರ್ವೋತ್ತರ ವಿರುದ್ಧ. ಅಣ್ಣನಾಗಿ ಅವತರಿಸಿದ ಬಲರಾಮ ಕೃಷ್ಣನಿಂದ ಕಾಲೊತ್ತಿಸಿಕೊಳ್ಳುವಂಥ ಸೇವೆ ಪಡೆಯುತ್ತಾನೆಯೇ ಹೊರತು ಸೇವೆ ಮಾಡುವುದಿಲ್ಲ. 'ರಾಮಾವತಾರ ಕಾಲದಲ್ಲಿ ಯೋಗ್ಯತೆಗೆ ಮೀರಿ ಅಧಿಕ ಪುಣ್ಯ ಮಾಡಿದವರು ಕೃಷ್ಣಾವತಾರದಲ್ಲಿ ಅದನ್ನು ಕಡಿಮೆ ಮಾಡಿಕೊಂಡರು' ಎಂದು ಶ್ರೀಮದಾಚಾರ್ಯರು ಹೇಳುವುದಕ್ಕೂ ವಿರುದ್ಧವಾಗುವುದು.[2]

---

1. ಸೇವಾಖಿನ್ನಃ ಶ್ರೀರಾಮಸ್ಯ ಸೇವಾಯಾಂ ಖಿನ್ನೋಽನಲಂ ಬುದ್ಧಿಮಾನ್। -ವರದರಾಜೀಯ
ಅಗ್ರೇ ಪೂರ್ವತ್ರೇತಾಮಿತ್ಯರ್ಥಃ। ಹರೇಃ ಶ್ರೀರಾಮಚಂದ್ರಸ್ಯ ಸೇವಯಾ ಖಿನ್ನಃ ಶ್ರಾಂತೋ ಯೋ ಲಕ್ಷ್ಮಣಃ ಸ ಏವ ನಾಮ್ನಾ ಬಲದೇವಃ ಸನ್ ರೋಹಿಣ್ಯಾಮಭಿಜಾತಃ। ಯದ್ವಾ ಅಗ್ರೇ ರಾಮಾವತಾರ ಸಮಾಪ್ತಿಕಾಲೇ ಮಮ ಸೇವಾ ನಾಭೂದಿತಿ ಸೇವಾಯಾಂ ಸೇವಾ ನಿಮಿತ್ತಂ ಖಿನ್ನೋಽನಲಂಬುದ್ಧಿರ್ಯೋ ಲಕ್ಷ್ಮಣಃ ಸ ರೋಹಿಣ್ಯಾಮಭಿಜಾತಃ। ಅತ ಏವೋಕ್ತಂ ಪೂರ್ವಂ ಭಕ್ತಿಖೇದೋಽಚ್ಯುತಾಶ್ರಯ ಇತಿ ಪಾದ್ಮೇ। -ಜನಾರ್ದನೀಯ
2. ರಾಮಾವತಾರೇ ಕೃತ ಬಹುಸೇವಯಾ ಖಿನ್ನಃ ಶ್ರಮವಾನಹಂ। ಅತಃ ಪರಮಪಿ ತಥಾ ಕರ್ತುಂ ನ ಶಕ್ನೋಮಿ ಇತಿ ಮನಃಖೇದವಾನಿತಿ ಯಾವತ್। ಅನುಜತ್ವೇ ಅತ್ರಾಪಿ ತಥೈವ ಸೇವಾ ಕಾರ್ಯಾ। ಅನ್ಯಥಾ ವಿಧ್ಯುಲ್ಲಂಘನ ದೋಷಃ ಸ್ಯಾತ್। ಅತೋಽಗ್ರಜೋ ಭವಾಮೀತಿ ಬುದ್ಧ್ಯಾ

ಬಲರಾಮನ ಜನನ ಕ್ರಮ

ಯದಾ ಹಿ ಪುತ್ರಾನ್ ವಿನಿಹಂತುಮೇತೌ
ಸಹೈವ ಬದ್ಧೌ ಗತಿ ಶೃಂಖಿಲಾಯಾಮ್ ।
ಕಂಸೇನಾಪಾಪೌ ದೇವಕೀಶೂರಪುತ್ರೌ
ವಿಯೋಜಿತಾಃ ಶೌರಿಭಾರ್ಯಾಃ ಪರಾಶ್ಚ ॥ ೧೦೭ ॥

ಕಂಸ ನಿರಪರಾಧಿಗಳಾದ ದೇವಕೀ ವಸುದೇವರನ್ನು, ಅವರ ಮಕ್ಕಳನ್ನು ಕೊಲ್ಲುವುದಕ್ಕಾಗಿ, ನಡೆಸಂಕೋಲೆಯಲ್ಲಿ ಜೊತೆಗೆ ಬಂಧಿಸಿದಾಗ ವಸುದೇವನ ಬೇರೆ ಪತ್ನಿಯರನ್ನು ದೂರ ಕಳಿಸಿದ್ದ.

'ಗತಿಶೃಂಖಲಾ' ಎಂದರೆ ಗತಿಗೆ ಅಂದರೆ ನಡೆಯುವುದಕ್ಕೆ ಅಡ್ಡಿಯಾಗದ ಸಂಕೋಲೆ. ನಡೆಸಂಕೋಲೆ ಎಂದು ವಾದಿರಾಜೀಯ. ಸತ್ಯಾಭಿನವರು ಇದನ್ನು ಒಪ್ಪುವುದಿಲ್ಲ. ಏಕೆಂದರೆ ಅದರಿಂದ ಕಂಸನ ದೌರ್ಜನ್ಯವನ್ನು ಹೇಳಿದಂತಾಗುವುದಿಲ್ಲ. 'ಗತಿ' ಎಂದರೆ ಸ್ತ್ರೀ ಪುರುಷರು ಜೊತೆಗೂಡುವುದು. ಅದಕ್ಕೆ ಅನುಕೂಲವಾದ ಶೃಂಖಲೆ ಪುತ್ರೋತ್ಪತ್ತಿಗೆ ಕಾರಣವಾಗುತ್ತದೆ. ಆಗ ಪುತ್ರವಧೆ ಮಾಡಬಹುದು ಎಂಬುದು ಕಂಸನ ದುರಭಿಪ್ರಾಯ ಎನ್ನುತ್ತಾರೆ. ನಡೆಸಂಕೋಲೆಯನ್ನಿಟ್ಟುಕೊಂಡರೂ ಇದೇ ಅಭಿಪ್ರಾಯ ಬರಬಹುದು.

ವಿನಿಶ್ಚಯಾರ್ಥಂ ದೇವಕೀಗರ್ಭಜಾನಾ-
ಮನ್ಯಾ ಭಾರ್ಯಾ ಧೃತಗರ್ಭಾಃ ಸ ಕಂಸಃ।
ಸ್ಥಾನಾಂತರೇ ಪ್ರಸವೋ ಯಾವದಾಸಾಂ
ಸಂಸ್ಥಾಪಯಾಮಾಸ ಸುಪಾಪಬುದ್ಧಿಃ ॥ ೧೦೮ ॥

ಅತಿ ಪಾಪ ಬುದ್ಧಿಯವನಾದ ಕಂಸ ದೇವಕಿಯ ಗರ್ಭದಲ್ಲಿ ಹುಟ್ಟಿದ ಮಕ್ಕಳನ್ನು

ಅಗ್ರೇಽಭೂದಿತಿ ಯೋಜನಾ। ಅತ ಏವ ಲಕ್ಷ್ಮಣ ಜನ್ಮನಿ ಖೇದ ಸೂಚನಾಯ ಲಕ್ಷ್ಮಣಪದಂ। ಏಧಮಾನದ್ವಿಡಿತಿ ಹಿ ಭಗವತೋ ಮಹಿಮಾ। ಅಧಿಕ ಸೇವಾ ಜನಿತ ಪುಣ್ಯನಾಶಾಯ ಭಗವಾನೇವ ತಾದೃಶೀಂ ಬುದ್ಧಿಂ ದದೌ। ಕಥಮನ್ಯಥಾ ಭಗವದ್ಭಕ್ತಃ ಶಕ್ರೋ ಗೋವರ್ಧನ ಗಿರ್ಯುದ್ಧರಣ ಸಮಯೇ ಕೃಷ್ಣಾವಜ್ಞಾಂ ಕೃತವಾನ್? ಅಸುರಾವೇಶಾತ್ ತಚ್ಚೇತ್ ಇದಮಪಿ ತಥೇತಿ ಸಂತೋಷ್ಟವ್ಯಂ। ರಾಮಾವತಾರೇ ಮಮ ಸೇವಾ ಸಮ್ಯಙ್ ನಾಭೂದಿತಿ ಸೇವಾಖಿನ್ನ ಇತಿ ವ್ಯಾಖ್ಯಾನಂ ಪೂರ್ವೋತ್ತರ ವಿರುದ್ಧಂ। ಅಗ್ರಜನ್ಮನಿ ಪಾದಸಂವಾಹನಾದಿನಾ ಸೇವ್ಯತ್ವಸ್ಯೈವ ಸಂಭವೇನ ಸೇವಾಯಾ ಅಸಂಭವಾತ್। 'ಅಧಿಕಂ ಯೈಃಕೃತಂ ತತ್ರ ತೈರೂನಂ ಕೃತಮತ್ರ ತದಿ'ತಿ ಆಚಾರ್ಯ ವಚನ ವಿರುದ್ಧಂ ಚ।
–ವಾದಿರಾಜೀಯ

ನಿಃಸಂದಿಗ್ಧವಾಗಿ ತಿಳಿಯುವ ಉದ್ದೇಶದಿಂದ ಬೇರೆ ಪತ್ನಿಯರು ಗರ್ಭಿಣಿಯರಾದೊಡನೆ ಪ್ರಸವವಾಗುವವರೆಗೂ ಅವರನ್ನು ಬೇರೆ ಕಡೆ ಇರಿಸುತ್ತಿದ್ದ.

ಹಿಂದಿನ ಶ್ಲೋಕದಲ್ಲಿ ಕಂಸ ದೇವಕಿಯನ್ನು ಹೊರತು ಉಳಿದೆಲ್ಲ ವಸುದೇವ ಪತ್ನಿಯರನ್ನು ದೂರಕಳಿಸಿದ ಎಂದಿದೆ. ಆದರೆ ಇದು ಒಮ್ಮೆಗೇ ಅಲ್ಲ. ಅವರು ಗರ್ಭಿಣಿಯರಾದಾಗೆಲ್ಲ ಕಳಿಸುತ್ತಿದ್ದ. ಅವರು ಜೊತೆಗಿದ್ದರೆ ದೇವಕಿ ತನ್ನ ಮಗುವನ್ನು ವ್ಯತ್ಯಾಸ ಮಾಡುವ ಸಂಭವ ಉಂಟು. ಅದರಿಂದ ತನ್ನ ಮೃತ್ಯು ತಲೆತಪ್ಪಿಸಿಕೊಂಡು ಹೋಗಿ ಮುಂದೆ ತನಗೆ ಮರಣ ಉಂಟು ಮಾಡಬಹುದು ಎಂದು. ಆದ್ದರಿಂದ ಗರ್ಭಿಣಿಯರಲ್ಲದಿದ್ದಾಗ ಬೇರೆ ಪತ್ನಿಯರು ತಮ್ಮಿಚ್ಛೆಯಂತೆ ವಸುದೇವನ ಬಳಿಯೋ ಅಥವಾ ನಂದಗೋಪ ವಸುದೇವನ ತಮ್ಮನಾದ್ದರಿಂದ ಅವನ ಮನೆಯಲ್ಲಿಯೋ ಇರುತ್ತಿದ್ದರು. ಹೀಗಾಗಿ ರೋಹಿಣಿಯೂ ಕೂಡ.

ರೋಹಿಣೀ ವಸುದೇವಸ್ಯ ಭಾರ್ಯಾಸ್ತೇ ನಂದಗೋಕುಲೇ

ಎಂದು ಭಾಗವತದಲ್ಲಿ ಹೇಳಿದಂತೆ ವಸುದೇವನಿಂದ ಗರ್ಭವತಿಯಾಗಿ ನಂದಗೋಕುಲದಲ್ಲಿದ್ದಳು. ಯೋಗಮಾಯೆಯ ಪ್ರಭಾವದಿಂದ ದೇವಕಿಗೆ ಗರ್ಭಸ್ರಾವವಾಯಿತು. ಹರಿವಂಶ ಹೇಳುವಂತೆ ಅತ್ತ ನಂದಗೋಕುಲದಲ್ಲಿ ರೋಹಿಣಿಗೂ ಗರ್ಭಸ್ರಾವವಾಯಿತು. ಅವಳಿಗೆ ನಿದ್ರೆಯಲ್ಲಿ ಗರ್ಭಸ್ರಾವದ ಅನುಭವ. ಅವಳು ಕಳವಳಗೊಂಡಾಗ ಸ್ವಪ್ನದಲ್ಲಿ ದುರ್ಗೆ ಕಾಣಿಸಿಕೊಂಡು ನಿನ್ನ ಗರ್ಭದಲ್ಲಿ ಸಂಕರ್ಷಣ ಪ್ರವೇಶಿಸಿ ಹುಟ್ಟುತ್ತಾನೆ ಎಂದು ಸಂತೈಸಿದಳು. ನಿದ್ದೆಯಿಂದ ಎಚ್ಚೆತ್ತು ನೋಡಿದಾಗ ತಾನು ಹಿಂದಿನಂತೆಯೆ ಮೂರುತಿಂಗಳ ಗರ್ಭಿಣಿಯೆ ಆಗಿದ್ದಳು. ಆದ್ದರಿಂದ ವಸುದೇವನಿದ್ದುದು ಮಥುರೆಯಲ್ಲಿ ರೋಹಿಣಿ ನಂದಗೋಕುಲದಲ್ಲಿ. ಗರ್ಭ ಹೇಗೆ ಉಂಟಾಯಿತೆಂದು ಜನರು ಆಡಿಕೊಳ್ಳಲು ಅವಕಾಶವಿರಲಿಲ್ಲ.[1]

---

1. ನ ಸಹೈವ ಸರ್ವಾ ವಿಯೋಜಿತಾ ಇತಿ ಭಾವೇನೋಕ್ತಂ ವಿನಿಶ್ಚಯಾರ್ಥಮಿತಿ। ದೇವಕೀವ್ಯತಿರಿಕ್ತಾ ವಸುದೇವಸ್ಯ ಭಾರ್ಯಾಃ ಸಹ ವಾ ತಿಷ್ಠಂತಿ। ಭ್ರಾತೃತ್ವಾನ್ನಂದಗೇಹೇ ವಾ ತಿಷ್ಠಂತಿ ಅತೋ ರೋಹಿಣ್ಯಪಿ,

ರೋಹಿಣೀ ವಸುದೇವಸ್ಯ ಭಾರ್ಯಾಸ್ತೇ ನಂದಗೋಕುಲೇ।
ತತ್ ಸನ್ನಿಕೃಷ್ಯ ರೋಹಿಣ್ಯಾ ಜಠರೇ ಸನ್ನಿವೇಶಯ ॥

ಇತಿ ಭಾಗವತೋಕ್ತೇಃ ನಂದಗೋಕುಲೇ ಜಾತಂ ದೈವಿಕಂ ಗರ್ಭಮಜಾನಾನಾ ದೇವಕೀ ಗರ್ಭಸ್ರಾವಾನಂತರಂ ತಾಂ ವಿಚಾರಯಿತುಮಾಗತಾ। ಗರ್ಭಚಿಹ್ನೇ ಕಂಸೇನಾಪಿ ಜ್ಞಾತೇ ಪುನರ್ನಂದ ಗೇಹಂ ಪ್ರತಿ ಪ್ರೇಷಿತಾ। ತತ್ರೈವ ರಾಮಂ ಸುಷುವೇ। ತೇನ ಪತಿರೇಕತ್ರ ಭಾರ್ಯಾನ್ಯತ್ರ, ಕಥಂ ವಾ

ಹೇತೋರೇತಸ್ಮಾದ್ ರೋಹಿಣೇ ನಂದಗೇಹೇ
ಪ್ರಸೂತ್ಯರ್ಥಂ ಸ್ಥಾಪಿತಾ ತೇನ ದೇವೀ।
ಲೇಭೇ ಪುತ್ರಂ ಗೋಕುಲೇ ಪೂರ್ಣಚಂದ್ರ
ಕಾಂತಾನನಂ ಬಲಭದ್ರಂ ಸುಶುಭ್ರಮ್ ॥ ೧೦೯ ॥

ಈ ಕಾರಣದಿಂದ ಕಂಸ ನಂದಗೋಪನ ಮನೆಯಲ್ಲಿ ರೋಹಿಣಿಯನ್ನು ಹೆರಿಗೆಗಾಗಿ ಇರಿಸಿದ್ದ. ಅದರಿಂದ ದೇವಿ ಗೋಕುಲದಲ್ಲಿಯೆ ಉತ್ತಮ ಶುಭ್ರ ವರ್ಣದ ಪೂರ್ಣಚಂದ್ರನಂಥ ಸುಂದರ ಮುಖದ ಬಲಭದ್ರನನ್ನು ಮಗನನ್ನಾಗಿ ಪಡೆದಳು.

ಯದಾ ತ್ರಿಮಾಸಃ ಸ ಬಭೂವ ದೇವ
ಸ್ತದಾವಿರಾಸೀತ್ ಪುರುಷೋತ್ತಮೋಽಜಃ।
ತೌ ಕೃಷ್ಣಶೇಷಾವಾಪ್ತಕಾಮೌಸುತೌ ಹಿ
ತಪಶ್ಚಕ್ರಾತೇ ದೇವಕೀಶೂರಪುತ್ರೌ ॥ ೧೧೦ ॥

ಬಲರಾಮ ಮೂರು ತಿಂಗಳ ಮಗುವಾದಾಗ ಜನನರಹಿತನಾದ ಪುರುಷೋತ್ತಮ ಆವಿರ್ಭೂತನಾದ. ಹರಿಯನ್ನೂ ಶೇಷನನ್ನೂ ಮಕ್ಕಳನ್ನಾಗಿ ಪಡೆಯಲು ದೇವಕೀ ವಸುದೇವರು ತಪಸ್ಸು ಮಾಡಿದ್ದರು.

ವಿಷ್ಣ್ವಾವೇಶೀ ಬಲವಾನ್ ಯೋ ಗುಣಾಧಿಕಃ
ಸ ಮೇ ಸುತಃ ಸ್ಯಾದಿತಿ ರೋಹಿಣೇ ಚ।
ತೇಪೇ ತಪೋಽತೋ ಹರಿಶುಕ್ಲಕೇಶ
ಯುತಃ ಶೇಷೋ ದೇವಕೀರೋಹಿಣೇಜಃ ॥ ೧೧೧ ॥

ವಿಷ್ಣುವಿನ ಆವೇಶಯುಕ್ತನಾದ ಅಧಿಕಗುಣಶಾಲಿ ಬಲಿಷ್ಠನಾದ ಒಬ್ಬ ದೇವ ತನಗೆ ಮಗನಾಗಿ ಜನಿಸಲಿ ಎಂದು ರೋಹಿಣಿಯೂ ತಪಸ್ಸು ಮಾಡಿದ್ದಳು. ಆದ್ದರಿಂದ ಹರಿಯ ಶುಕ್ಲಕೇಶಾವೇಶಯುಕ್ತನಾದ ಶೇಷ ದೇವಕಿಯಲ್ಲಿಯೂ ರೋಹಿಣಿಯಲ್ಲಿಯೂ ಹುಟ್ಟಿದ.

ಪುತ್ರ ಸಂಪತ್ತಿರಿತಿ ಮಂದಾನಾಮಾಶಂಕಾ ಗರ್ಭಸ್ರಾವೇಣೈವ ಗತಾ। ಗರ್ಭವತ್ಯಾ ಅಪಿ ಸಹವಾಸೇ ವರ್ಷೇ ವರ್ಷೇ ದೇವಕ್ಯಾ ಅಪಿಗರ್ಭಸ್ಯ ಜಾಯಮಾನತ್ವಾತ್ ಮಯಿ ದ್ವೇಷಾತ್ ಉತ್ಪತ್ತಿ ಸಮಯ ಏವ ಪುತ್ರವ್ಯತ್ಯಾಸೇ ಕೃತೇ ಸತಿ ಮಮ ಮರಣಂ ಸ್ಯಾದೇವೇತಿ ಭಿಯಾ ಗರ್ಭೇ ಜಾತೇ ದೇವಕೀವ್ಯತಿರಿಕ್ತಾಃ ಸರ್ವಾ ಅನ್ಯತ್ರ ಪ್ರೇಷಯತಿ। ಏತದಪ್ಯುಕ್ತಂ ವಿ ವಿಶೇಷೇಣ ನಿಶ್ಚಯಾರ್ಥಮಿತಿ।
-ವಾದಿರಾಜೀಯ

ವಸುದೇವಸ್ಯ ರೋಹಿಣೇನಾಮ್ನೀ ಭಾರ್ಯಾ ನಂದಗೋಕುಲೇ ಆಸ್ತೇ। ಸಾಂಕುರಿತೇ ಗರ್ಭೇ ಬಹಿರ್ಯಾಪಿತಾ ತತ್ರಾಸ್ತೇ। ತಸ್ಯಾಃ ಪ್ರಾಕ್ತನಂ ಗರ್ಭಂ ಬಹಿಷ್ಕೃತ್ಯೈತನ್ನಿವೇಶಯೇತ್ಯಸ್ಯ ಭಾವೋಽವಸೇಯಃ॥
-ಭಾಗವತ ಸತ್ಯಧರ್ಮೀಯ ಟೀಕಾ

ಅವರ್ಧತಾಸೌ ಹರಿಶುಕ್ಲಕೇಶ
ಸಮಾವೇಶೀ ಗೋಕುಲೇ ರೌಹಿಣೇಯಃ।
ಕೃಷ್ಣೋಽಪಿ ಲೀಲಾ ಲಲಿತಾಃ ಪ್ರದರ್ಶಯನ್
ಬಲದ್ವಿತೀಯೋ ರಮಯಾಮಾಸ ಗೋಷ್ಠಮ್ ॥ ೧೧೨ ॥

ಹರಿಯ ಶುಕ್ಲಕೇಶಾವೇಶಉಳ್ಳ ರೋಹಿಣೀಪುತ್ರನಾದ ಬಲರಾಮ ಗೋಕುಲದಲ್ಲಿ ಬೆಳೆದ. ಆ ಬಲರಾಮನ ಜೊತೆಗೆ ಕೃಷ್ಣನೂ ಮನೋಹರ ಲೀಲೆಗಳನ್ನು ತೋರುತ್ತ ಗೋಕುಲದ ಜನರನ್ನು ಸಂತೋಷಗೊಳಿಸಿದ.

ಪ್ರಥಮ ವಿಶ್ವರೂಪ ದರ್ಶನ

ಸ ಪ್ರಾಕೃತಂ ಶಿಶುಮಾತ್ಮಾನಮುಚ್ಚೈ
ರ್ವಿಜ್ಞಾನಂತ್ಯಾ ಮಾತುರಾದರ್ಶನಾಯ।
ವಿಜೃಂಭಮಾಣೋಽಖಿಲಮಾತ್ಮಸಂಸ್ಥಂ
ಪ್ರದರ್ಶಯಾಮಾಸ ಕದಾಚಿದೀಶಃ ॥ ೧೧೩ ॥

ಜಗದೀಶನಾದ ಕೃಷ್ಣ ತನ್ನನ್ನು ಸಾಮಾನ್ಯ ಶಿಶುವೆಂದು ತಿಳಿದ ತಾಯಿಗೆ ಒಮ್ಮೆ ತನ್ನ ನಿಜರೂಪ ತೋರುವುದಕ್ಕಾಗಿ ಬಾಯಿ ತೆರೆದು ತನ್ನೊಳಗಿದ್ದ ಸಮಸ್ತ ಪ್ರಪಂಚವನ್ನು ತೋರಿದ.

ಸಾಂಡಂ ಮಹಾಭೂತಮನೋಽಭಿಮಾನ
ಮಹತ್ಪ್ರಕೃತ್ಯಾವೃತಮಬ್ಜಜಾದಿಭಿಃ।
ಸುರೈಃ ಶಿವೇತೈರ್ನರದೈತ್ಯಸಂಘೈ
ರ್ಯುತಂ ದದರ್ಶಾಸ್ಯತನೌ ಯಶೋದಾ ॥ ೧೧೪ ॥

ಯಶೋದೆ ಕೃಷ್ಣನ ಶರೀರದಲ್ಲಿ ಪಂಚ ಮಹಾಭೂತ ಮನಸ್ತತ್ವ ಅಹಂಕಾರತತ್ವ ಮಹತ್ತತ್ವ ಮೂಲಪ್ರಕೃತಿಗಳಿಂದ ಆವೃತವಾಗಿದ್ದು ರುದ್ರ ಸಮೇತರಾದ ಬ್ರಹ್ಮಾದಿ ದೇವತೆಗಳಿಂದಲೂ ಮಾನವರ ಮತ್ತು ದಾನವರ ಸಮೂಹಗಳಿಂದಲೂ ಕೂಡಿದ ಬ್ರಹ್ಮಾಂಡವನ್ನು ಕಂಡಳು.

ಪಂಚಮಹಾಭೂತ ಶಬ್ದದಿಂದ ಪಂಚಮಹಾಭೂತಗಳೊಡನೆ ಪಂಚತನ್ಮಾತ್ರೆಗಳನ್ನೂ ಇಟ್ಟುಕೊಳ್ಳಬೇಕು. ಮನಸ್ತತ್ವದ ಜೊತೆಗೆ ಪಂಚಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯ ಬುದ್ಧಿತತ್ವಗಳನ್ನೂ ಇಟ್ಟುಕೊಳ್ಳಬೇಕು. ಅಭಿಮಾನವೆಂದರೆ ಅಹಂಕಾರ ತತ್ವ ಮಹತ್ ಎಂದರೆ ಮಹತ್ತತ್ವ ಹೀಗೆ ಇಪ್ಪತ್ತನಾಲ್ಕು ತತ್ವಗಳನ್ನೂ ಸಂಗ್ರಹವಾಗಿ

ಹೇಳಿದಂತಾಯಿತು. ಪ್ರಕೃತಿ ಎಂದು ಇವೆಲ್ಲಕ್ಕೂ ಮೂಲತತ್ವವಾದ ಅವ್ಯಕ್ತವನ್ನು ಹೇಳಿದೆ. 'ಆವೃತ' ಎಂದರೆ ಶಾಸ್ತ್ರೋಕ್ತ ರೀತಿಯಿಂದ ಒಂದಕ್ಕಿಂತ ಒಂದು ಅಧಿಕಪ್ರಮಾಣದಲ್ಲಿ ಇಪ್ಪತ್ತನಾಲ್ಕು ತತ್ವ ಮತ್ತು ಮೂಲಪ್ರಕೃತಿಗಳಿಂದ ಬ್ರಹ್ಮಾಂಡ ಆವೃತವಾಗಿದೆ ಎಂದರ್ಥ. ಎಲ್ಲ ಇಪ್ಪತ್ತೈದು ತತ್ವಗಳನ್ನೂ ಸಂಗ್ರಹವಾಗಿ ಹೇಳುವುದಕ್ಕಾಗಿ ಶ್ರೀಮದಾಚಾರ್ಯರು ಹೀಗೆ ಹೇಳಿದ್ದಾರೆ. ಭಾಗವತದಲ್ಲಿ-

ಅಬಗ್ನೀರ ನಭೋಽಹಂಕೃನ್ಮಹತ್ತ್ವ ಗುಣತ್ರಯೈಃ।

ಕ್ರಮಾದ್ದಶೋತ್ತರೈಃ.....।

ಎಂದು ಒಂಬತ್ತೇ ಆವರಣಗಳು ಉಕ್ತವಾಗಿವೆ. ಆದರೂ ವಿರೋಧವಿಲ್ಲ. ಏಕೆಂದರೆ 'ಕ್ರಮಾದ್ ದಶೋತ್ತರೈಃ' ಕ್ರಮವಾಗಿ ಒಂದಕ್ಕಿಂತ ಒಂದು ಹತ್ತುಪಟ್ಟು ಅಧಿಕಪ್ರಮಾಣದಲ್ಲಿ' ಎಂದು ತಾನು ಹೇಳಿದ ಪರಿಮಾಣಕ್ಕೆ ಅನುಸಾರವಾಗಿ ಭಾಗವತ ಹಾಗೇ ಹೇಳಬೇಕಾಗುತ್ತದೆ.

ಪರಸ್ಪರ ಮಿಶ್ರಣಹೊಂದಿದ ಇಪ್ಪತ್ತನಾಲ್ಕು ತತ್ವಗಳೇ ಅಂಡಕಟಾಹದ ಒಳಗೆ ಸದಾ ಇರುತ್ತವೆ. ಇಲ್ಲದಿದ್ದರೆ ಇಪ್ಪತ್ತನಾಲ್ಕು ತತ್ವಮಯವಾದ ಎಂಬತ್ತನಾಲ್ಕು ಲಕ್ಷಯೋನಿಗಳ ಅನಂತ ಶರೀರಗಳು ಕಾಲಕಾಲಕ್ಕೆ ಹೇಗೆ ಹುಟ್ಟಬಲ್ಲುವು? ಆದ್ದರಿಂದ ಆವರಣವೆಂದರೆ ಬೇರೆ ತತ್ವಗಳಿಂದ ಮಿಶ್ರಿತವಾಗದ ಶುದ್ಧ ತತ್ವಗಳ ಆವರಣ.

ಶುದ್ಧಪ್ರಥಿವೀ ತತ್ವವೇ ನೂರು ಕೋಟಿ ಯೋಜನ ದಪ್ಪದ ಚಿನ್ನದ ಕಟಾಹರೂಪವಾಗಿ ಐವತ್ತುಕೋಟಿ ಯೋಜನ ವಿಸ್ತಾರದ ಬ್ರಹ್ಮಾಂಡವನ್ನು ಆವರಿಸಿದೆ. ಇದು ಮೊದಲನೆ ಆವರಣ. ಶುದ್ಧ ಜಲತತ್ವ ನೂರು ಕೋಟಿಗೆ ಹತ್ತುಪಟ್ಟು ಅಧಿಕ ಎಂದರೆ ಸಾವಿರಕೋಟಿ ಯೋಜನ ಪ್ರದೇಶದಲ್ಲಿ ಕಟಾಹವನ್ನು ಆವರಿಸಿದೆ. ಇದು ಎರಡನೇ ಆವರಣ. ಶುದ್ಧ ತೇಜಸ್ತತ್ವ ಸಾವಿರಕೋಟಿಗೆ ಹತ್ತುಪಟ್ಟು ಅಧಿಕ ಎಂದರೆ ಹತ್ತು ಸಾವಿರ ಕೋಟಿ ಯೋಜನ ಪ್ರದೇಶದಲ್ಲಿ ಜಲಾವರಣವನ್ನು ಆವರಿಸಿದೆ. ಇದು ಮೂರನೇ ಆವರಣ. ಸುತ್ತಲೂ ಆವರಿಸಿದ ಬೆಂಕಿಯ ಜ್ವಾಲೆಯ ಆಘಾತಕ್ಕೆ ಸಿಲುಕಿದ ಆವರಣ ಜಲ ನಿರಾಧಾರವಾಗಿದ್ದರೂ ಕೆಳಗೆ ಬೀಳುವುದಿಲ್ಲ. ಆಚೆಈಚೆ ಹರಿಯುವುದೂ ಇಲ್ಲ. ಕುದಿದು ಮೇಲೆ ಉಕ್ಕುವುದೂ ಇಲ್ಲ. ನೀರಿನೊಳಗೆ ನಾರಾಯಣನಿರುವುದರಿಂದ ನೀರು ಸುರಕ್ಷಿತವಾಗಿದೆ. ಬೆಂಕಿಯಟ ಶಾಖಕ್ಕೆ ಬತ್ತುವುದೂ ಇಲ್ಲ. ಏಕೆ, ಬಿಸಿಯಾಗುವುದೂ ಇಲ್ಲ. ಬಿಸಿಯಾಗುತ್ತಿದ್ದರೆ

ತ್ರಿವಿಕ್ರಮನ ಪಾದನಖ ಸ್ಪರ್ಶಮಾತ್ರದಿಂದ ಬಿರುಕು ಬಿಟ್ಟ ಕಟಾಹದ ಸಂದಿನಿಂದ ಒಳಗೆ ಹರಿದು ಬಂದ ಗಂಗಾಜಲ ಅತಿ ಶೀತಲವಾಗಿರು ತ್ತಿರಲಿಲ್ಲ. ಕಟಾಹದ ಸಂದಿನಿಂದ ಆ ಜಲಾವರಣ ನೀರು ಸುರಿದುದರಿಂದ ಕಟಾಹಕ್ಕಿಂತ ಬೇರೆ ಇನ್ನೊಂದು ಪೃಥಿವೀ ಆವರಣ ಉಂಟೆನ್ನುವುದು ಕೇವಲ ಕಲ್ಪನೆಯೇ ಸರಿ. ಹೀಗೆಯೇ ತೇಜಸ್ಸಿನಿಂದಾಗಲಿ ಬೇರೆ ತತ್ವದಿಂದಾಗಲಿ ಮಿಶ್ರವಾಗದ ಶುದ್ಧವಾಯುವಿನ ಆವರಣ, ವಾಯುವಿನಿಂದಲೂ ಸ್ವಲ್ಪವೂ ಮಿಶ್ರವಾಗದ ಶುದ್ಧ ಆಕಾಶಾವರಣ ಮುಂತಾದುವು ಒಂದಕ್ಕಿಂತ ಒಂದು ಹತ್ತುಪಟ್ಟು ಅಧಿಕವಾಗಿದೆ.

ಆದರೆ ಆಕಾಶಾವರಣ ಅಹಂಕಾರಾವರಣಗಳ ನಡುವೆ ಇರುವ ಪಂಚತನ್ಮಾತ್ರೆ ಕರ್ಮೇಂದ್ರಿಯ ಜ್ಞಾನೇಂದ್ರಿಯ ಮನಸ್ತತ್ವ ಬುದ್ಧಿತತ್ವಗಳೆಂಬ ಹದಿನೇಳು ಆವರಣಗಳು ಒಂದಕ್ಕಿಂತ ಇನ್ನೊಂದು ಹೆಚ್ಚಿದ್ದರೂ ಹತ್ತುಪಟ್ಟು ಹೆಚ್ಚೆಂಬ ಸಂಖ್ಯಾನಿಯಮವಿಲ್ಲ. ಅದರಿಂದ ಆ ಆವರಣಗಳನ್ನು ಪ್ರಧಾನವಾದ ಅಹಂಕಾರ ತತ್ವಾವರಣದಲ್ಲಿಯೇ ಸೇರಿಸಿ ಹೇಳುವ ಅಭಿಪ್ರಾಯದಿಂದ ಭಾಗವತದಲ್ಲಿ ಪ್ರತ್ಯೇಕ ಆವರಣಗಳೆಂದು ಪರಿಗಣಿಸ ಲಿಲ್ಲ. ಶ್ರೀಮದಾಚಾರ್ಯರು ಸಂಖ್ಯಾನಿಯಮ ವಿವಕ್ಷೆ ಮಾಡದೆ ಕೇವಲ ಆವರಣ ಸ್ವರೂಪ ಪರಿಚಯ ಮಾಡಿಕೊಡುವ ಅಭಿಪ್ರಾಯದಿಂದ ಇಪ್ಪತ್ತೈದು ಆವರಣಗಳನ್ನು ಪ್ರತ್ಯೇಕವಾಗಿ ಹೇಳಿದ್ದಾರೆ. ಅದರಿಂದ ಗುರುಶಿಷ್ಯರುಗಳಾದ ಭಾಗವತಾಚಾರ್ಯರು ಮತ್ತು ನಿರ್ಣಯಾಚಾರ್ಯ ರೊಳಗೆ ಭಿನ್ನಾಭಿಪ್ರಾಯವಿದೆ ಎಂದು ತಿಳಿಯಲು ಅವಕಾಶವಿಲ್ಲ ಎಂದು ವಾದಿರಾಜೀಯದಲ್ಲಿ ಹೇಳಿದೆ.[1]

---

1. ಮಹಾಭೂತಪದೇನ ಮಾತ್ರಾ ಪಂಚಕಮಪಿ ಲಕ್ಷ್ಯತೇ। ಮನಃ ಪದೇನ ಚ ದಶೇಂದ್ರಿಯಾಣಿ ಬುದ್ಧಿತತ್ವಂಚ ಲಕ್ಷ್ಯತೇ। ಅಭಿಮಾನಪದೇನ 'ಗರ್ವೋಽಭಿಮಾನೋಽಹಂಕಾರ' ಇತ್ಯಭಿಧಾನಾತ್ ಅಹಂಕಾರ ತತ್ವಮುಚ್ಯತೇ। ಮಹತ್ಪದೇನ ಮಹತ್ತತ್ವಮುಚ್ಯತೇ। ಏವಂ ಚತುರ್ವಿಂಶತಿ ತತ್ವಾನಿ ಸಂಗೃಹೀತಾನಿ। ಪ್ರಕೃತಿ ಪದೇನಾವ್ಯಕ್ತಾಖ್ಯಂ ಮೂಲತತ್ವಮುಚ್ಯತೇ। ಆವೃತಂ ಮಹಾಭೂತ ಮನೋಽಭಿಮಾನ ಮಹತ್ಪ್ರಕೃತಿಭಿಶ್ಚತುರ್ವಿಂಶತಿ ತತ್ವ ಮೂಲತತ್ವರೂಪಾಭಿಃ ಯಥಾಯೋಗ್ಯಮುತ್ತರೋತ್ತರಾಧಿಕ್ಯೇನಾ ವೃತಂ। ಸಕಲ ತತ್ವಸಂಗ್ರಹಾಯಾಚಾರ್ಯೈರೇವಮುಕ್ತಂ। ಭಾಗವತಕಾರೈಸ್ತು ಕ್ರಮಾದ್ದಶಗುಣೋತ್ತರತ್ವರೂಪೋಕ್ತಸಂಖ್ಯಾರಕ್ಷಣಾಯ 'ಅಬಗ್ನೀರನಭೋಹಂ ಕೃನ್ಮಹತ್ತತ್ವ ಗುಣತ್ರಯೈಃ ಕ್ರಮಾದ್ದಶೋತ್ತರೈರಿತಿ' ನವಾನಾಮೇವ ಗ್ರಹಣಂ ಕೃತಂ। ವಸ್ತುತಸ್ತು ಮಿಲಿತಾನಿ ಚತುರ್ವಿಂಶತಿ ತತ್ವಾನಿ ಅಂಡಕಟಾಹಾಂತಃ ಸರ್ವದಾ ಸಂತಿ। ಅನ್ಯಥಾ ಚತುರ್ವಿಂಶತಿತತ್ವಾತ್ಮಕ ಚತುರಶೀತಿ ಲಕ್ಷಯೋನಿಭೇದೇನ ನಾನಾವಿಧಾನಂತ ದೇಹಾನಾಂ ಸಮಯೇ ಕಥಮುತ್ಪತ್ತಿಃ ಸ್ಯಾತ್? ಅತ ಆವರಣಂ ನಾಮಾನ್ತರಾಮಿಲಿತ ಪೃಥಿವೀ ತತ್ವಸ್ಯೈವ ಸೌವರ್ಣ

ವರದರಾಜೀಯದಲ್ಲಿ 'ಮನೋಭಿಮಾನ' ಶಬ್ದದಿಂದ ಅಹಂಕಾರ ತತ್ವ ಒಂದನ್ನೆ ಇಟ್ಟುಕೊಂಡು ಪಂಚಭೂತಗಳು ಅಹಂಕಾರ ಮಹತ್ತತ್ವ ಗುಣತ್ರಯಗಳೆಂದು ದಶಾವರಣಗಳೇ ಇಲ್ಲಿ ವಿವಕ್ಷಿತವೆಂದಿದೆ.

ಜನಾರ್ದನೀಯದಲ್ಲಿ 'ಮಹಾಭೂತ'ಗಳು ಜಲಾದಿ ನಾಲ್ಕು ಭೂತಗಳು, 'ಮನೋऽಭಿಮಾನ' ಅಂದರೆ ಅಹಂಕಾರತತ್ವ. ಬಳಿಕ ಮಹತ್ತತ್ವ, ಗುಣತ್ರಯಗಳೆಂದು ನವಾವರಣಗಳು ಇಲ್ಲಿ ವಿವಕ್ಷಿತವಾಗಿವೆ. 'ಮಹಾಭೂತ' ಪದದಿಂದ ಪೃಥಿವ್ಯಾದಿ ಪಂಚಭೂತಗಳನ್ನೂ 'ಮನಸ್' ಪದದಿಂದ ಮನಸ್ತತ್ವವನ್ನೂ ಗ್ರಹಿಸಿದರೆ ನವಾವರಣಗಳೆನ್ನುವುವು

ಶತಕೋಟಿ ಪ್ರಮಾಣ ಬ್ರಹ್ಮಾಂಡಕಟಾಹರೂಪೇಣ ಯಾವಸ್ಥಿತಿಃ ಸಾ ಪೃಥಿವ್ಯಾಖ್ಯಂ ಪ್ರಥಮಾವರಣಂ। ಪೃಥಿವೀ ಭಾಗೇನಾಪ್ಯಮಿಶ್ರಿತ ಕೇವಲ ಧವಲ ಜಲ ಸಮೂಹಾನಾಂ ಶತಕೋಟೇರ್ದಶಗುಣಿತ ಸಹಸ್ರ ಕೋಟಿ ಪ್ರಮಾಣ ಪ್ರದೇಶೇ ವಿಸ್ಮೃತಾನಾಂ ಬ್ರಹ್ಮಾಂಡಕಟಾಹಮಾವೃತ್ಯ ಯಾ ಸ್ಥಿತಿಃ ಸಾ ದ್ವಿತೀಯಾವರಣಂ। ಏವಂ ಜಲಭಾಗಾಮಿಶ್ರಿತ ಕೇವಲ ತೇಜೋರಾಶೀನಾಂ ಶತಕೋಟಿ ಸಹಿತ ಸಹಸ್ರ ಕೋಟೇಃ ದಶೋತ್ತರ ಪದೋಕ್ತ ದಶಸಹಸ್ರ ಕೋಟಿಯೋಜನ ಪ್ರಮಾಣಪ್ರದೇಶೇ ಯಾ ಸ್ಥಿತಿಃ ಸಾ ತೃತೀಯಾವರಣಮುಚ್ಯತೇ। ಅತ ಏವ ಹಿ ಪರಿತೋ ಜಾಜ್ವಲ್ಯಮಾನ ಜ್ವಲನ ಜ್ವಾಲಯಾ ಸದಾಭಿಘಾತಾತ್ ನಿರಾಧಾರಮಪಿ ಜಲಂ ನಾಧಃ ಪತತಿ, ನ ಪರ್ಯಕ್ ಸ್ರವತಿ, ನಾಪಿ ಕ್ವಥನೇ ಸತ್ಯೂರ್ಧ್ವಂ ಗಚ್ಛತಿ। ಜಲಸ್ಥಿತ ನಾರಾಯಣ ಸನ್ನಿಧಾನಾಚ್ಚ ನ ಶುಷ್ಯತಿ, ನಾಪಿ ಸರ್ವತ್ರೋಷ್ಣೀಭವತಿ। ಕತಮನ್ಯಥಾ ತ್ರಿವಿಕ್ರಮ ವಾಮಪಾದ ನಖನಿರ್ಭಿನ್ನಾಂಡ ಕಟಾಹವಿವರಾತ್ ಶೀತಲ ಶುಕ್ಲರೂಪ ಗಂಗಾಪ್ರವಾಹಸ್ಯಾಧಃ ಸ್ರವಣಂ? ಅತ ಏವಾಂಡಕಟಾಹಾಖ್ಯ ಪೃಥಿವ್ಯಾವರಣಾದ್ಬಿನ್ನ ಪೃಥಿವ್ಯಾವರಣ ಕಲ್ಪನಮಪಿ ನಿರ್ಮೂಲತ್ವಾತ್ ಸ್ವಕಪೋಲಕಲ್ಪನಮೇವ।... ಏವಂ ಸ್ಥಿತಾಕಾಶತತ್ವಾದಧಿಕ ವೃತ್ತೀನಾಂ ಅಹಂಕಾರತತ್ವಾದೂನ ವೃತ್ತೀನಾಂ ಸ್ವಯಂ ಚ ಕ್ರಮೇಣಾಧಿಕವೃತ್ತೀನಾಂ ಪಂಚತನ್ಮಾತ್ರ ಕರ್ಮೇಂದ್ರಿಯ ಜ್ಞಾನೇಂದ್ರಿಯಾಂತಃ ಕರಣಾಖ್ಯ ಮನೋರೂಪೇಂದ್ರಿಯ ಭೇದೇನ ಷೋಡಶ ತತ್ವಾನಾಂ ದಶೋತ್ತರತ್ವ ನಿಯಮಾಭಾವಾತ್ ತ್ರಿಂಶತ್ ಸಹಸ್ರಕೋಟಿ ಪರಿಮಿತಾಕಾಶತತ್ವಾತ್ ಸಂಭಾವಿತ ಪಂಚಪಂಚಾಧಿ ಕತಯಾ ಗಣನೇऽಶೀತಿ ಸಹಸ್ರಕೋಟಿಭ್ಯೋಪ್ಯುಪರಿ ಪಂಚ ಸಹಸ್ರಕೋಟಿ ಪ್ರಮಾಣ ಪ್ರದೇಶೇऽವಸ್ಥಾನಂ ಜಾಯತೇ। ಬುದ್ಧಿ ತತ್ವಸ್ಯ ಪಾರ್ವತ್ಯಭಿಮಾನಿತಯಾ ಈದೃಶಸ್ಯೈವಾಧಿ ಕ್ಯಸ್ಯಾನುಚಿತತ್ವಾತ್ ಸಂಭಾವಿತ ಪಂಚಪಂಚಕೇನಾಧಿಕ್ಯೇ ಪೂರ್ವೋಕ್ತೇಭ್ಯೋऽಪ್ಯುಪರಿ ಪಂಚವಿಂಶತ್ ಸಹಸ್ರಕೋಟಿಯೋಜನ ಪ್ರಮಾಣದೇಶೇऽವಸ್ಥಾನಂ ಜಾಯತೇ। ಏವಂ ಮಿಲಿತ್ವಾ ಉಕ್ತ ಸಪ್ತದಶತತ್ತ್ವಾನಾಂ ಶತಸಹಸ್ರ ಕೋಟಿಭ್ಯೋಪ್ಯುಪರಿ ದಶಸಹಸ್ರ ಕೋಟಿ ಪ್ರಮಾಣಪ್ರದೇಶೇ ವ್ಯಾಪ್ತಿರ್ಜಾಯತೇ। ಅಹಂಕಾರ ತತ್ವಂ ತು ಇತೋऽಪಿ ನವತಿ ಸಹಸ್ರಕೋಟಿ ಯೋಜನೋಚ್ಛ್ರಿತಂ। ಏತೇಷಾಂ ಮುಖ್ಯಾವರಣ ಭೂತಾಹಂಕಾರತತ್ವ ಏವಾಂತರ್ಭೂತತ್ವಾತ್ ದಶೋತ್ತರತ್ವಾಭಾವಾಚ್ಚ ನ ಪೃಥಗ್ಗ್ರಹಣಂ। ಆಚಾರ್ಯೈಸ್ತು ಸಂಖ್ಯಾನಿಯಮಂ ವಿನಾ ಉಕ್ತವಿಧಯಾ ಚತುರ್ವಿಂಶತಿ ತತ್ವಾನಾಂ ಭಾಗವತ ಕೃತೋऽಪ್ಯಭಿಮತಸ್ವರೂಪಮಾತ್ರಗಣನೈವ ಕೃತೇತಿ ನ ಕ್ವಾಪಿ ಗುರುಶಿಷ್ಯಯೋರನಯೋರ್ವಿರೋಧ ಇತಿ ಜ್ಞೇಯಂ॥ –ವಾದಿರಾಜೀಯ

ಕೂಡಲಾರದು ಮತ್ತು 'ಅಬಗ್ನೀರನ ಭೋಹಂಕೃನ್ಮಹತ್ತತ್ವ ಗುಣತ್ರಯೈಃ' ಎಂಬ ವಚನದಲ್ಲಿ ಮನಸ್ತತ್ವವನ್ನು ಹೇಳದೆ ಅಹಂಕಾರ ತತ್ವವನ್ನೇ ಹೇಳಿದ್ದರಿಂದ ಅದರ ವಿರೋಧವೂ ಬಂದೀತು ಎಂದಿದೆ.

ನಮೀಲಯಚ್ಚಾಕ್ಷಿಣೀ ಭೀತಭೀತಾ
ಜುಗೂಹ ಜಾತ್ಮಾನಮಥೋ ರಮೇಶಃ।
ವಪುಃ ಸ್ವಕೀಯಂ ಸುಖಚಿತ್ ಸ್ವರೂಪಂ
ಪೂರ್ಣಂ ಸತ್ಸುಜ್ಞಾಪಯಂಸ್ತದ್ವ್ಯದರ್ಶಯತ್ ॥ ೧೧೫ ॥

ಅತ್ಯಂತ ಭೀತಳಾಗಿ ಯಶೋದೆ ಕಣ್ಣುಮುಚ್ಚಿದಳು. ಕೃಷ್ಣ ತನ್ನ ವಿಶ್ವರೂಪವನ್ನು ಮರೆಮಾಡಿದ. ತನ್ನ ಶರೀರ ಆನಂದ ಜ್ಞಾನರೂಪವಾಗಿದ್ದು ಪರಿಪೂರ್ಣವಾದುದೆಂದು ಸಜ್ಜನರಲ್ಲಿ ತಿಳಿಸಿಕೊಡಲು ಕೃಷ್ಣ ಈ ವಿಶ್ವರೂಪವನ್ನು ತೋರಿದ್ದ.

ತೃಣಾವರ್ತವಧ

ಕದಾಚಿತ್ ತಂ ಲಾಲಯಂತೀ ಯಶೋದಾ
ವೋಢುಂ ನಾಶಕ್ನೋದ್ ಭೂರಿಭಾರಾಧಿಕಾರ್ತಾ।
ನಿಧಾಯಂ ತಂ ಭೂಮಿತಲೇ ಸ್ವಕರ್ಮ
ಯದಾ ಚಕ್ರೇ ದೈತ್ಯ ಆಗಾತ್ ಸುಘೋರಃ ॥ ೧೧೬ ॥

ಒಮ್ಮೆ ಕೃಷ್ಣನನ್ನು ಆಡಿಸುತ್ತಿದ್ದಂತೆ ಯಶೋದೆ ಅಧಿಕಭಾರದಿಂದ ಬಹಳ ಪೀಡಿತಳಾಗಿ ಕೃಷ್ಣನನ್ನು ಹೊತ್ತುಕೊಳ್ಳಲು ಅಶಕ್ತಳಾದಳು. ಆದ್ದರಿಂದ ನೆಲದ ಮೇಲಿಟ್ಟು ಮನೆಗೆಲಸ ಮಾಡತೊಡಗಿದಳು. ಆಗ ಮಹಾಕ್ರೂರನಾದ ದೈತ್ಯ ಬಂದ.

ತೃಣಾವರ್ತೋ ನಾಮತಃ ಕಂಸಭೃತ್ಯಃ
ಸೃಷ್ಟಾತ್ಯುಗ್ರಂ ಚಕ್ರವಾತಂ ಶಿಶುಂ ತಮ್।
ಆದಾಯಾಗಾದಂತರಿಕ್ಷಂ ಸ ತೇನ
ಶಸ್ತಃ ಕಂಠಗ್ರಾಹಸಂರುದ್ಧವಾಯುಃ ॥ ೧೧೭ ॥

ಅವನು ತೃಣಾವರ್ತನೆಂಬ ದೈತ್ಯ. ಕಂಸನ ಸೇವಕ. ಭಯಂಕರ ಸುಳಿಗಾಳಿಯನ್ನು ಉಂಟುಮಾಡಿ ಶಿಶು ಕೃಷ್ಣನನ್ನು ಎತ್ತಿಕೊಂಡು ಅಂತರಿಕ್ಷಕ್ಕೆ ಏರಿದ. ಆದರೆ ಕೃಷ್ಣ ಅವನ ಕುತ್ತಿಗೆ ಹಿಡಿದು ಉಸಿರನ್ನು ತಡೆದು ಪೀಡಿಸಿದ.

'ಶಸ್ತ' ಎಂದರೆ ಪೀಡಿತನೆಂದು ಅರ್ಥ. ಹತ ಎಂದರ್ಥವಿಟ್ಟುಕೊಂಡರೆ ಮುಂದಿನ ಶ್ಲೋಕದಲ್ಲಿ 'ಹತ' ಶಬ್ದವಿರುವುದರಿಂದ ಪುನರುಕ್ತಿಯಾದೀತು.

ಪಪಾತ ಕೃಷ್ಣೇನ ಹತಃ ಶಿಲಾತಲೇ
ತೃಣಾವರ್ತಃ ಪರ್ವತೋದಗ್ರದೇಹಃ।
ಸುವಿಸ್ಮಯಂ ಚಾಪುರಥೋ ಜನಾಸ್ತೇ
ತೃಣಾವರ್ತಂ ವೀಕ್ಷ್ಯ ಸಂಚೂರ್ಣಿತಾಂಗಮ್ ॥ ೧೦೮ ॥

ಪರ್ವತದಂಥ ಮಹಾಶರೀರದ ತೃಣಾವರ್ತ ಕೃಷ್ಣನಿಂದ ಹತನಾಗಿ ಬಂಡೆಕಲ್ಲಿನ ಮೇಲೆ ಬಿದ್ದ. ಅವನು ಹೀಗೆ ಬಿದ್ದು ಜರ್ಜರಿತ ಶರೀರಿಯಾದುದನ್ನು ಕಂಡು ಜನರು ಬಹು ಅಚ್ಚರಿಗೊಂಡರು.

ನವನೀತಚೋರ ಕೃಷ್ಣ

ಅಕ್ರುಧ್ಯತಾಂ ಕೇಶವೋಽನುಗ್ರಹಾಯ
ಶುಭಂ ಸ್ವಯೋಗ್ಯಾದಧಿಕಂ ನಿಹಂತುಮ್।
ಸ ಕ್ರುಧ್ಯತಾಂ ನವನೀತಾದಿ ಮುಷ್ಣಂ
ಶ್ಚಚಾರ ದೇವೋ ನಿಜಸತ್ಸುಖಾಂಬುಧಿಃ ॥ ೧೦೯ ॥

ಕೋಪಿಸಿಕೊಳ್ಳದವರಿಗೆ ಅನುಗ್ರಹ ಮಾಡುವುದಕ್ಕೂ, ಕೋಪಿಸಿಕೊಳ್ಳುವವರಿಗೆ ಅಧಿಕಪುಣ್ಯವನ್ನು ನಾಶಪಡಿಸುವುದಕ್ಕೂ ದೇವ ಬೆಣ್ಣೆ ಮುಂತಾದುದನ್ನು ಕದಿಯುತ್ತ ಸಂಚರಿಸಿದ. ವಾಸ್ತವದಲ್ಲಿ ಸ್ವರೂಪಭೂತ ನಿರ್ದುಷ್ಟ ಆನಂದದ ಸಾಗರ ಆತ.

ನಕುಲ ಸಹದೇವರ ಜನನ

ಯಸ್ಮಿನ್ನಬ್ದೇ ಭಾದ್ರಪದೇ ಸ ಮಾಸೇ
ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ।
ಉದೈತ್ ತತಃ ಫಾಲ್ಗುನೇ ಫಲ್ಗುನೋಽಭೂತ್
ಗತೇ ತತೋ ಮಾದ್ರವತೀ ಬಭಾಷೇ ॥ ೧೧೦ ॥

ಯಾವ ವರ್ಷದ ಭಾದ್ರಪದ ಮಾಸದಲ್ಲಿ ಗುರು ಸೂರ್ಯರು ಸಿಂಹರಾಶಿಯಲ್ಲಿದ್ದಾಗ ಶ್ರೀಕೃಷ್ಣ ಅವತರಿಸಿದನೋ ಅದೇ ವರ್ಷ ಫಾಲ್ಗುನ ಮಾಸನದಲ್ಲಿ ಅರ್ಜುನ ಹುಟ್ಟಿದ. ಆ ವರ್ಷ ಕಳೆದಾಗ ಪಾಂಡುವಿಗೆ ಮಾದ್ರಿ ನುಡಿದಳು.

ಸೂರ್ಯ ಸಿಂಹರಾಶಿಯಲ್ಲಿರುವುದು ಶ್ರಾವಣದಲ್ಲಿ ಹೊರತು ಭಾದ್ರಪದದಲ್ಲಿ ಅಲ್ಲ. ಏಕೆಂದರೆ ಕನ್ಯಾರಾಶಿಯಲ್ಲಿ ಸೂರ್ಯನಿರುವ ಮಾಸವೆ ಭಾದ್ರಪದ. ಆದರೂ 'ಭಾದ್ರಪದದಲ್ಲಿ ಸಿಂಹದಲ್ಲಿ ರವಿ' ಎಂದುದು ಹೇಗೆ? ಕೃಷ್ಣಾವತಾರ ಶ್ರಾವಣ ಕೃಷ್ಣಾಷ್ಟಮಿಯಲ್ಲಿ ಎಂದು ಪ್ರಸಿದ್ಧ.

'ಭಾದ್ರಪದದಲ್ಲಿ' ಎಂದುದು ಹೇಗೆ? ಎಂದು ಎರಡು ಪ್ರಶ್ನೆಗಳನ್ನು ಎತ್ತಿಕೊಂಡು ವರದರಾಜೀಯದಲ್ಲಿ ಹೇಳಿದೆ- ವ್ರತಾದಿಗಳಿಗೆ ಶ್ರಾವಣ ಹುಣ್ಣಿಮೆಯಿಂದ ಭಾದ್ರಪದವೆ. ಮತ್ತು ಸೌರಮಾನವಿಟ್ಟುಕೊಂಡು ಶ್ರಾವಣವನ್ನೆ ಭಾದ್ರಪದವೆಂದು ವ್ಯವಹರಿಸಿದ್ದಾರೆ ಆಚಾರ್ಯರು ಎಂದು.[1]

ಜನಾರ್ದನೀಯದಲ್ಲಿ ಸೌರಮಾನದ ಮೀನಾದಿಯನ್ನೆ ಚಾಂದ್ರಮಾನದ ಚೈತ್ರಾದಿ ಎಂದು ಪರಿಗಣಿಸಿ ಸಿಂಹವನ್ನು ಭಾದ್ರಪದ ಎನ್ನಬಹುದು ಎಂದಿದ್ದಾರೆ.[2]

ವಾದಿರಾಜೀಯದಲ್ಲಿ ಹೀಗೆ ಹೇಳಿದೆ- 'ಯಾವ ವರ್ಷದಲ್ಲಿ ಭಾದ್ರಪದದಲ್ಲಿ ಗುರುಸೂರ್ಯರಿಬ್ಬರೂ ಸಿಂಹರಾಶಿಯಲ್ಲಿ ಇದ್ದಾಗ ಕೃಷ್ಣ ಅವತರಿಸಿದನೋ ಆದೇ ವರ್ಷದಲ್ಲಿ ಅರ್ಜುನ ಜನಿಸಿದ, ಎಂದು ಅನ್ವಯ. ಯಾವ ವರ್ಷದಲ್ಲಿ ಭಾದ್ರಪದ ಅಧಿಕಮಾಸವಿರುತ್ತದೋ ಆ ವರ್ಷದಲ್ಲಿ ಭಾದ್ರಪದದಲ್ಲಿ ಸೂರ್ಯ ಸಿಂಹರಾಶಿಯಲ್ಲಿ ಇರುತ್ತಾನೆ. ದರ್ಶಮಾಸರೀತ್ಯಾ ಆಗ ಭಾದ್ರಪದ. ಸೌರಮಾಸರೀತ್ಯಾ ಶ್ರಾವಣ. ಹೀಗೆ ಎರಡು ಬಗೆಯ ಮಾಸ ಒಂದಾಗುವ ಯೋಗ ಅಧಿಕಮಾಸ ಬಂದಾಗಲೆ ಹೊರತು ಯಾವಾಗಲೂ ಆಲ್ಲ. ಇಂಥ ವಿಲಕ್ಷಣವಾದ ಭಾದ್ರಪದ.ಮಾಸದ ಅಭಿಪ್ರಾಯದಿಂದ 'ಯಾವ ವರ್ಷದಲ್ಲಿ' ಎಂದಿದೆ. ಇಲ್ಲದಿದ್ದರೆ 'ಒಂದು ಶುಭವರ್ಷದಲ್ಲಿ' ಎಂದು ಮಾತ್ರ ಹೇಳಬಹುದಿತ್ತು. ಸಾಂವತ್ಸರಿಕ ತಿಥಿ ಮಾಡುವಾಗ ಈ ಯೋಗ ಸಿಗದಿದ್ದರೆ 'ಸೋಮಾಭಾವೇ ಪ್ರೊತಿಕಾಗ್ರಹಣಂ' ಎಂಬಂತೆ ಕೇವಲ ಸಿಂಹಮಾಸವನ್ನೆ ಸೌರರೀತ್ಯಾ ಶ್ರಾವಣವೆಂದು ಗ್ರಹಿಸುತ್ತಾರೆ.[3]

---

1. ನನುರವೇಃ ಸಿಂಹಸ್ಥತ್ವಂ ಶ್ರಾವಣ ಮಾಸ್ಯೇವ। ನತು ಭಾದ್ರಪದೇ ಮಾಸಿ। ಕನ್ಯಾಯುಕ್ತ ರವಿಸಂಬಂಧಸ್ಯ ಭಾದ್ರಪದೋ ಪಾಧಿತ್ವಾತ್। ತಥಾ ಶ್ರೀಕೃಷ್ಣಾವತಾರಸ್ಯ ಶ್ರಾವಣ ಕೃಷ್ಣಾಷ್ಟಮ್ಯಾಂ ಜಾತತ್ವ ಪ್ರಸಿದ್ಧೇಃ ಭಾದ್ರಪದೇ ಮಾಸೇ ಇತ್ಯಾದಿ ಕಥಂ ಯುಜ್ಯತೇ ಇತಿ ಚೇತ್ ಸತ್ಯಂ। ವ್ರತಾದ್ಯಪೇಕ್ಷಯಾ ಶ್ರಾವಣ ಪೌರ್ಣಮಾಸೀಮಾರಭ್ಯ ಬಾದ್ರಪದತ್ವಾತ್। ಸೌರಮಾನಮಾದಾಯ ಶ್ರಾವಣಮಾಸಮಪಿ ತಂ ಮಾಸಂ ಭಾದ್ರಪದತ್ವೇನ ವ್ಯವಹೃತವಾನಾಚಾರ್ಯ ಇತಿ ಸಂತೋಷ್ಟವ್ಯಂ। -ವರದರಾಜೀಯ
2. ಪೌರ್ಣಮಾಸ್ಯಾಂತು ಚಂದ್ರಗ್ರಹಣೇನ ಭಾದ್ರಪದತ್ವಂ। ಮೀನಾದಿ ಸೌರಗ್ರಹಣೇನ ಚ ರವೇರ್ಭಾದ್ರಪದತ್ವಂ ದ್ರಷ್ಟವ್ಯಂ। -ಜನಾರ್ದನೀಯ
3. ಯಸ್ಮಿನ್ ಸಂವತ್ಸರೇಽಧಿಕ ಮಾಸ ಪ್ರಾಪ್ತೌ ಸತ್ಯಾಂ ಭಾದ್ರಪದೇ ಮಾಸಿ ರವಿಃ ಸಿಂಹ ರಾಶಿಂ ಗತೋ ಭವತಿ, ಕೃಷ್ಣಾವತಾರ ಸಮಯೇ ಗುರುರಪಿ ಸಿಂಹರಾಶಿ ಸ್ಥಿತೋಽಭೂತ್, ತದಾ ದರ್ಶಮಾಸರೀತ್ಯಾ ಭಾದ್ರಪದ ಮಾಸೋಽಪಿ ಭವತಿ, ಸೌರಮಾಸರೀತ್ಯಾ ಶ್ರಾವಣಮಾಸಶ್ಚ ಭವತಿ। ತಸ್ಮಿನ್ ಸಂವತ್ಸರೇ ಕೃಷ್ಣಾವತಾರ ಇತಿ ಭಾವೇನ 'ಯಸ್ಮಿನ್ನಬ್ದ' ಇತ್ಯಾದ್ಯುಕ್ತಂ। ಏವಂ, ದ್ವಿವಿಧ ಮಾಸ ಸಂಪ್ರಯೋಗೋಽಧಿಕ ಮಾಸ ಪ್ರಾಪ್ತಾವೇವ ಭವತಿ, ನ ಸರ್ವದಾ। ಅತೋ ಯಸ್ಮಿನ್ನಬ್ದ ಇತ್ಯುಕ್ತಂ। ಅನ್ಯಥಾ 'ಅಬ್ದೇ ಶುಭೇ

ಜಾತಾಃ ಸುತಾಸ್ತೇ ಪ್ರವರಾಃ ಪೃಥಾಯಾ
ಮೇಕಾನಪತ್ಯಾಹಮತಃ ಪ್ರಸಾದಾತ್ ।
ತವೈವ ಭೂಯಾಸಮಹಂ ಸುತೇತಾ
ವಿಧತ್ಸ್ವಕುಂತೀಂ ಮಮ ಮಂತ್ರದಾತ್ರೀಮ್ ॥ ೧೨೧ ॥

'ಕುಂತಿಯಲ್ಲಿ ನಿನಗೆ ಒಳ್ಳೆಯ ಮಕ್ಕಳು ಹುಟ್ಟಿದ್ದಾರೆ. ನಾನು ಮಾತ್ರ ಮಕ್ಕಳಿಲ್ಲದವಳಾದೆ. ನಿನ್ನ ಅನುಗ್ರಹದಿಂದ ನಾನೂ ಪುತ್ರವತಿಯೆನಿಸಬೇಕು. ಕುಂತಿ ನನಗೆ ಮಂತ್ರ ಉಪದೇಶಿಸುವಂತೆ ಮಾಡು.'

ಇತೀರಿತಃ ಪ್ರಾಹ ಪೃಥಾಂ ಸ ಮಾದ್ರ್ಯೈ
ದಿಶಸ್ವಮಂತ್ರಂ ಸುತದಂ ವರಿಷ್ಠಮ್ ।
ಇತ್ಯೂಚಿವಾಂಸಂ ಪತಿಮಾಹ ಯಾದವೀ
ದದ್ಯಾಂ ತ್ವದರ್ಥೇ ತು ಸಕೃತ್ಫಲಾಯ ॥ ೧೨೨ ॥

ಹೀಗೆ ಮಾದ್ರಿ ಹೇಳಿದಾಗ ಪಾಂಡು ಕುಂತಿಗೆ ಹೇಳಿದ, 'ಮಾದ್ರಿಗೆ ಪುತ್ರದಾಯಕ ಮಂತ್ರವನ್ನು ಉಪದೇಶಿಸು'. ಹೀಗೆ ಪತಿ ಹೇಳಿದಾಗ ಕುಂತಿ ಹೇಳಿದಳು, 'ನಿನಗಾಗಿ ಅವಳಿಗೆ ಈ ಮಂತ್ರವನ್ನು ಉಪದೇಶಿಸುತ್ತೇನೆ. ಆದರೆ ಒಂದೇ ಬಾರಿ ಅದು ಫಲ ನೀಡುವುದು.'

ಉವಾಚ ಮಾದ್ರ್ಯೈ ಸುತದಂ ಮನುಂ ಚ
ಪುನಃ ಫಲಂ ತೇ ನ ಭವಿಷ್ಯತೀತಿ ।
ಮಂತ್ರಂ ಸಮಾದಾಯ ಚ ಮದ್ರಪುತ್ರೀ
ವ್ಯಚಿಂತಯತ್ ಸ್ಯಾಂ ನು ಕಥಂ ದ್ವಿಪುತ್ರೀ ॥ ೧೨೩ ॥

ಕುಂತಿ ಪುತ್ರದಾಯಕ ಮಂತ್ರವನ್ನು ಮಾದ್ರಿಗೆ ಉಪದೇಶಿಸಿದಳು. 'ಎರಡನೆ ಬಾರಿ ನಿನಗೆ ಇದರಿಂದ ಫಲ ಸಿಗಲಾರದು' ಎಂದಳು. ಮಂತ್ರ ಉಪದೇಶ ಪಡೆದು ಮಾದ್ರಿ ಆಲೋಚಿಸಿದಳು. 'ಇಬ್ಬರು ಮಕ್ಕಳನ್ನು ನಾನು ಹೇಗೆ ಪಡೆಯಲಿ?' ಎಂದು.

ಸದಾವಿಯೋಗೌ ದಿವಿಜೇಷು ದಸ್ರೌ
ನ ಚೈತಯೋರ್ನಾಮಭೇದಃ ಕ್ವಚಿದ್ಧಿ ।
ಏಕಾ ಭಾರ್ಯಾ ಸೈತಯೋರಪ್ಯುಷಾ ಹಿ
ತದಾಯಾತಃ ಸಕೃದಾವರ್ತನಾದ್ ದ್ವೌ ॥ ೧೨೪ ॥

ಭಾದ್ರಪದೇऽಥ ಮಾಸೇ' ಇತ್ಯೇವಾವಕ್ಷ್ಯತ್। ಏತದ್ಯೋಗಾಲಾಭೇ ಸಾಂವತ್ಸರಿಕ ತಿಥೇಃ ಕರ್ತವ್ಯತ್ವಾತ್ 'ಶ್ರಾವಣ್ಯಾಂ ಚಾಸಿತೇ ಪಕ್ಷೇ' ಇತ್ಯಾದಿ ಪ್ರಮಾಣಾನುಸಾರೇಣ ಸೋಮಾಭಾವೇ ಪೂತಿಕಾಗ್ರಹಣವತ್ ಕೇವಲಸಿಂಹಮಾಸೇऽಪಿ ಕ್ರಿಯತೇ। -ವಾದಿರಾಜೀಯ

ದೇವತೆಗಳಲ್ಲಿ ಅಶ್ವಿನೀ ದೇವತೆಗಳು ಸದಾ ಜೊತೆಗೇ ಇರುವವರು. ಅವರಿಬ್ಬರಿಗೆ ಹೆಸರಿನಲ್ಲಿಯೂ ಎಲ್ಲಿಯೂ ಭೇದವಿಲ್ಲ. ಹೆಂಡತಿಯೂ ಒಬ್ಬಳೇ, ಉಷೆ. ಅದರಿಂದ ಒಮ್ಮೆ ಮಂತ್ರ ಉಚ್ಚರಿಸಿದರೆ ಇಬ್ಬರೂ ಬರುತ್ತಾರೆ.

ತ್ವಷ್ಟೃಪುತ್ರಿ ಸಂಜ್ಞಾದೇವಿ ಹೆಣ್ಣು ಕುದುರೆಯ ರೂಪದಿಂದ ಅಂತರಿಕ್ಷದಲ್ಲಿ ತನ್ನ ಪತಿಯಾದ ಸೂರ್ಯನಿಂದ ಪಡೆದ ಇಬ್ಬರು ಅವಳಿ ಮಕ್ಕಳು ಈ ಅಶ್ವಿನೀಕುಮಾರರು. ಸ್ಫುರದ್ರೂಪಿಗಳು, ದೇವವೈದ್ಯರು. ಚ್ಯವನ ಮುನಿಗೆ ಯೌವನ ಪ್ರದಾನ ಮಾಡಿ ಅವನ ಪ್ರಭಾವದಿಂದ ಯಜ್ಞಗಳಲ್ಲಿ ಸೋಮಪಾನಾಧಿಕಾರ ಪಡೆದವರು. ಅಶ್ವಿನೀತೀರ್ಥ ಸ್ನಾನದಿಂದ ಸುಂದರರೂಪ ಲಾಭವೆಂದು ಮಹಾಭಾರತ ಹೇಳಿದೆ. ಅಶ್ವಿನೀಕುಮಾರರಲ್ಲಿ ಒಬ್ಬನಿಗೆ 'ನಾಸತ್ಯ' ಎಂದೂ ಇನ್ನೊಬ್ಬನಿಗೆ 'ದಸ್ರ' ಎಂದೂ ಹೆಸರು ಪ್ರತ್ಯೇಕವಾಗಿ ಇದೆ. ಆದರೆ ಅವೇ ಹೆಸರುಗಳು ಇಬ್ಬರಿಗೆ ಸಾಮಾನ್ಯ ಹೆಸರೂ ಆಗುತ್ತವೆ. 'ನಾಸತ್ಯರು' 'ದಸ್ರರು' ಎಂದೂ ಇಬ್ಬರನ್ನು ಕರೆಯಬಹುದು. ಅದರಿಂದ 'ಇಬ್ಬರಿಗೆ ಹೆಸರಿನಲ್ಲಿ ಭೇದವಿಲ್ಲ' ಎನ್ನಲಾಗಿದೆ.

ಇತೀಕ್ಷಂತ್ಯಾಕಾರಿತಾವಶ್ವಿನೌ ತೌ
ಶೀಘ್ರಂ ಪ್ರಾಪ್ತೌಪುತ್ರಕೌ ತತ್ಪ್ರಸೂತೌ।
ತಾವೇವ ದೇವೌ ನಕುಲಃ ಪೂರ್ವಜಾತಃ
ಸಹದೇವೋಽಭೂತ್ ಪಶ್ಚಿಮಸ್ತೌಯಮೌಹಿ ॥ ೧೨೫ ॥

ಹೀಗೆ ಆಲೋಚಿಸುತ್ತ ಮಾದ್ರಿ ಅಶ್ವಿನೀ ದೇವತೆಗಳನ್ನು ಆಹ್ವಾನಿಸಿದಳು. ಅವರು ಬೇಗನೆ ಬಂದರು. ಇಬ್ಬರು ಮಕ್ಕಳಾಗಿ ಅವರೇ ಅವರಿಂದ ಹುಟ್ಟಿದರು. ನಕುಲ ಅಣ್ಣನಾದ, ಸಹದೇವ ತಮ್ಮನಾದ. ಇಬ್ಬರೂ ಅವಳಿ ಮಕ್ಕಳು.

ಪುನರ್ಮನೋಃ ಫಲವತ್ತ್ವಾಯ ಮಾದ್ರೀ
ಸಂಪ್ರಾರ್ಥಯಾಮಾಸ ಪತಿಂ ತದುಕ್ತಾ।
ಪೃಥಾವಾದೀತ್ ಕುಟಿಲೈಷಾ ಮದಾಜ್ಞಾ-
ಮೃತೇ ದೇವಾನಾಹ್ವಯಾಮಾಸ ದಸ್ರೌ ॥ ೧೨೬ ॥

'ಮಂತ್ರವು ಇನ್ನೊಮ್ಮೆ ನನಗೆ ಫಲಪ್ರದವಾಗಲಿ' ಎಂದು ಮಾದ್ರಿ ಪತಿಯನ್ನು ಬೇಡಿದಳು. ಅವನು ಹಾಗೇ ಕುಂತಿಗೆ ಹೇಳಿದಾಗ ಕುಂತಿ ಹೇಳಿದಳು, 'ಈ ಮಾದ್ರಿ ಮೋಸಗಾರಳು. ನನ್ನ ಅನುಮತಿ ಇಲ್ಲದೆ ಇಬ್ಬರು ಅಶ್ವಿನಿ ದೇವತೆಗಳನ್ನು ಆಹ್ವಾನಿಸಿದಳು.

ಮಾದ್ರಿ ಉಪಾಯದಿಂದ ಇಬ್ಬರು ದೇವತೆಗಳನ್ನು ಒಂದೇ ನಾಮದಿಂದ

ಕರೆದು ಒಮ್ಮೆಲೆ ಇಬ್ಬರು ಮಕ್ಕಳನ್ನು ಪಡೆಯುವಳೆಂದು ಕುಂತಿ ನಿರೀಕ್ಷಿಸಿರಲಿಲ್ಲ. ಹಾಗೆ ನಿರೀಕ್ಷಿಸಿದ್ದರೆ ಅವಳು ಮಾದ್ರಿಗೆ ಅನುಮತಿಯನ್ನೇ ನೀಡುತ್ತಿದ್ದಿಲ್ಲ.

ಅತೋ ವಿರೋಧಂ ಚ ಮದಾತ್ಮಜಾನಾಂ
ಕುರ್ಯಾದೇಷೇತ್ಯೇವ ಭೀತಾಂ ನ ಮಾಂ ತ್ವಮ್ ।
ನಿಯೋಕ್ತುಮರ್ಹಃ ಪುನರೇವ ರಾಜ-
ನ್ನಿತೀರಿತೋಽಸೌ ವಿರರಾಮ ಕ್ಷಿತೀಶಃ ॥ ೧೨೭ ॥

'ಅದರಿಂದ ನನ್ನ ಮಕ್ಕಳಿಗೆ ಇವಳು ವಿರೋಧ ಮಾಡಬಹುದು ಎಂದು ನನಗೆ ಭಯವಾಗುತ್ತದೆ. ರಾಜನೇ, ನನಗೆ ಪುನಃ ಆಜ್ಞೆ ಮಾಡಬೇಡ' ಹೀಗೆ ಕುಂತಿ ಹೇಳಿದಾಗ ಪಾಂಡು ಸುಮ್ಮನಾದ.

ಮಾದ್ರಿಗೆ ಇನ್ನೂ ಹೆಚ್ಚು ಮಕ್ಕಳಾದರೆ ಅವರಿಂದ ತನ್ನ ಮಕ್ಕಳಿಗೆ ಅಪಾಯ ಬರಬಹುದೆಂದು ಕುಂತಿಗೆ ಭಯ.

ವಿಶೇಷನಾಮ್ನೈವ ಸಮಾಹುತಾಃ ಸುರಾ
ದದ್ಯುಃ ಸುತಾನಿತ್ಯವಿಶೇಷಿತಂ ತಯೋಃ ।
ವಿಶೇಷನಾಮಾಪಿ ಸಮಾಹ್ವಯತ್ ತ್ವಾ
ಮಂತ್ರಾವೃತಿರ್ನಾಮಭೇದೇಽಸ್ಯ ಚೋಕ್ತಾ ॥ ೧೨೮ ॥

ವಿಶೇಷನಾಮದಿಂದ ಕರೆದರೆ ಮಾತ್ರ ದೇವತೆಗಳು ಮಕ್ಕಳನ್ನು ನೀಡುವರು. ಅಶ್ವಿನೀ ದೇವತೆಗಳಿಗೆ ವಿಶೇಷನಾಮವೂ ಉಭಯ ಸಾಧಾರಣವೆ. ಅದರಿಂದ ಮಾದ್ರಿ ಅವರನ್ನೇ ಆಹ್ವಾನಿಸಿದಳು. ವಿಶೇಷನಾಮ ಬೇರೆ ಇರುವಾಗ ಮಂತ್ರವನ್ನು ವಿಶೇಷನಾಮಯುಕ್ತವಾಗಿ ಪುನಃ ಉಚ್ಚರಿಸಬೇಕಾಗುತ್ತದೆ.

ಮಾದ್ರಿಗೆ, ಬಹುಮಂದಿ ಪುತ್ರರನ್ನು ಪಡೆಯುವ ಆಸೆ. ಆದರೆ ಕುಂತಿ 'ಈ ಮಂತ್ರ ನಿನಗೆ ಒಮ್ಮೆ ಮಾತ್ರ ಫಲ ಕೊಡಲಿ' ಎಂದಿದ್ದಳು. ಅದರಿಂದ ಅನೇಕ ಬಾರಿ ಮಂತ್ರ ಉಚ್ಚರಿಸಿದರೆ ಫಲವಿಲ್ಲವೆಂದು ಒಂದೇ ಬಾರಿ ಉಚ್ಚರಿಸಿ ಇಬ್ಬರು ದೇವತೆಗಳನ್ನು ಒಂದೇ ನಾಮದಿಂದ ಆಹ್ವಾನಿಸಿ ಇಬ್ಬರು ಮಕ್ಕಳನ್ನು ಪಡೆದಳು. ಸಾಮಾನ್ಯ ನಾಮದಿಂದ ಕರೆದರೆ ದೇವತೆಗಳು ತಮ್ಮಲ್ಲಿ ಯಾರನ್ನು ಈಕೆ ಕರೆಯುತ್ತಿದ್ದಾಳೆ ಎಂದು ನಿರ್ಣಯವಾಗದೆ ಯಾರೂ ಬರುವುದಿಲ್ಲ. ಅದಕ್ಕೆ ವಿಶೇಷ ನಾಮದಿಂದಲೇ ಕರೆಯಬೇಕು. 'ದೇವ' ಎಂಬ ಹೆಸರಿನಿಂದ ಒಮ್ಮೆಲೇ ಎಲ್ಲ ದೇವತೆಗಳನ್ನೂ ಕರೆಯಲಾಗುವುದಿಲ್ಲ.

ಅದು ದೇವತೆಗಳೆಲ್ಲರ ಸಾಮಾನ್ಯ ನಾಮ. ಮರುತ್ ವಸು ರುದ್ರ ಆದಿತ್ಯ ಮುಂತಾದ ನಾಮಗಳನ್ನು ಕೆಲವು ದೇವತೆಗಳ ವಿಶೇಷ ನಾಮಗಳಾಗಿದ್ದರೂ ಬೇರೆ ಬೇರೆ ಮರುತ್‌ಗಳಿಗೆ ಪ್ರಾಣ ಅಪಾನ ವ್ಯಾನ ಮುಂತಾದ ವಿಶೇಷ ನಾಮಗಳಿರುವಾಗ ಅವುಗಳಿಗೆ ಹೋಲಿಸಿದರೆ 'ಮರುತ್' ಎಂಬುದೂ ಎಲ್ಲ ಮರುತ್ತುಗಳ ಸಾಮಾನ್ಯ ನಾಮವಾಗುತ್ತದೆ. ಈಗ 'ಅಶ್ವಿನೀ' ನಾಮವೂ ನಾಸತ್ಯ ದಸ್ರ ಎಂಬ ವಿಶೇಷ ನಾಮಗಳಿಗೆ ಹೋಲಿಸಿದಾಗ ಅಶ್ವಿನೀ ದೇವತೆಗಳ ಸಾಮಾನ್ಯ ನಾಮವೇ ಆಗುತ್ತದೆ. ಅದರಿಂದ ಅಶ್ವಿನೀ ನಾಮದಿಂದ ಮಾದ್ರಿ ಅಶ್ವಿನೀಕುಮಾರರನ್ನು ಹೇಗೆ ಕರೆದಳು? ಅಶ್ವಿನೀ ಶಬ್ದದಂತೆಯೇ ಪುಷ್ಪದಂತ ಶಬ್ದ. ಅದು ಸೂರ್ಯಚಂದ್ರರನ್ನು ಹೇಳುತ್ತದೆ. ಆ ಶಬ್ದದಿಂದ ಅವರನ್ನು ಕರೆಯಬಹುದಾಗಿತ್ತು.

ಈ ಪ್ರಶ್ನೆಗಳಿಗೆ ವಾದಿರಾಜೀಯದಲ್ಲಿ ಸಮಾಧಾನವಿದೆ- 'ಪುಷ್ಪದಂತ' ಎಂಬಲ್ಲಿ 'ಪುಷ್ಪ' ಎಂದರೆ ಸೂರ್ಯ. 'ದಂತ' ಎಂದರೆ ಚಂದ್ರ. ಅದರಿಂದ ಪುಷ್ಪದಂತ ಶಬ್ದದಿಂದ ಇಬ್ಬರನ್ನೂ ಜೊತೆಗೇ ಕರೆಯಬೇಕು. ಒಬ್ಬನನ್ನೇ ಕರೆಯಲಾಗದು. ಅದರಿಂದ ಅದು ಅವರ ವಿಶೇಷನಾಮವಲ್ಲ. ಅದರಿಂದ ಮಾದ್ರಿ ನಾಸತ್ಯ ಅಥವಾ ದಸ್ರ ಶಬ್ದದಿಂದ ಇಬ್ಬರು ಅಶ್ವಿನೀ ದೇವತೆಗಳನ್ನು ಆಹ್ವಾನಿಸಿದಳು. ಏಕೆಂದರೆ ಆ ಶಬ್ದಗಳು ಇಬ್ಬರಿಗೆ ಸಾಮಾನ್ಯ ನಾಮಗಳಾಗಿರುವಂತೆ ಪ್ರತಿಯೊಬ್ಬನಿಗೆ ವಿಶೇಷ ನಾಮಗಳೂ ಆಗಿವೆ. ಅಂದರೆ ಆ ಶಬ್ದದಿಂದ ಪ್ರತ್ಯೇಕವಾಗಿ ಒಬ್ಬನನ್ನೂ ಕರೆಯಬಹುದು. ಜೊತೆಯಾಗಿ ಇಬ್ಬರನ್ನೂ ಕರೆಯಬಹುದು. ಒಬ್ಬನನ್ನು ಕರೆವಾಗ ಅದು ಅವನೊಬ್ಬನ ವಿಶೇಷನಾಮ. ಇಬ್ಬರನ್ನು ಕರೆವಾಗ ಅದೇ ಇಬ್ಬರಿಗೂ ಸಾಮಾನ್ಯನಾಮ. 'ಪಿತರೌ' ಎಂಬ ಶಬ್ದ 'ಮಾತಾ ಚ ಪಿತಾ ಚ' ಎಂದು ಮಾತೃ ಪಿತೃ ಶಬ್ದಗಳು ಸೇರಿದಾಗ ಏಕಶೇಷದಿಂದ ಮಾತೃ ಶಬ್ದಲೋಪವಾಗಿ ಸಿದ್ಧವಾದ ಶಬ್ದ. ಶಕ್ತಿವೃತ್ತಿಯಿಂದ ತಂದೆಯನ್ನೂ ಲಕ್ಷಣಾವೃತ್ತಿಯಿಂದ ತಾಯಿಯನ್ನು ಹೇಳುತ್ತದೆ. ಶಕ್ತಿಯಿಂದಾಗಲಿ, ಲಕ್ಷಣೆಯಿಂದಾಗಲಿ ಒಂದೇ ರೀತಿ ಇಬ್ಬರನ್ನೂ ಹೇಳುವುದಿಲ್ಲ. ನಾಸತ್ಯ ದಸ್ರ ಶಬ್ದಗಳು ಶಕ್ತಿಯಿಂದಲೆ ಇಬ್ಬರನ್ನೂ ಹೇಳಬಲ್ಲುದು. ಅದರಿಂದ ಹಾಗೇ ಇಬ್ಬರನ್ನು ಮಾದ್ರಿ ಕರೆದಳು.[1]

---

1. ಹೇ ದೇವ ಆಯಾಹೀತಿ ಸಾಮಾನ್ಯನಾಮ್ನಾ ಆಹ್ವಾನೇ ತೇ ದೇವಾಃ ಕಸ್ಯ ವಾಹ್ವಾನಂ ಕೃತಮಿತಿ ಶಂಕಯಾ ನಾಯಾಂತ್ಯೇವ। ಕಿಂತು ಇಂದ್ರ ವಾಯು ಯಮಾದಿ ವಿಶೇಷನಾಮ್ನಾ ಆಹೂತಾ ಏವ ಸುರಾಃ ಪುತ್ರಾನ್ ದದ್ಯುಃ। ಅತೋ ವಿಶೇಷ ನಾಮವತಾಂ ತತ್ತನ್ನಾಮ್ನಾ ಸಕೃದಾಹ್ವಾನೇ ಏಕ ಏವ ಪುತ್ರೋ ಭವತಿ। ನ ದ್ವೌ। ಅಶ್ವಿನೌ ದಸ್ರೌ ಇತ್ಯಾದಿ ರೂಪೇಣ ಇಂದ್ರಾದಿಭ್ಯೋ ಯದ್ ವಿಶೇಷನಾಮ ತದಪಿ ಅಶ್ವಿನೋಃ ಪರಸ್ಪರಾಪೇಕ್ಷಯಾಽವಿಶೇಷಮೇವ। 'ಏಕಯೋಕ್ತ್ಯಾ ಪುಷ್ಪದಂತೌ

ಪಾಂಡುಪುತ್ರರಲ್ಲಿ ಮುಖ್ಯಪ್ರಾಣೋವೇಶ

ಯುಧಿಷ್ಠಿರಾದ್ಯೇಷು ಚತುರ್ಷು ವಾಯುಃ
ಸಮಾವಿಷ್ಟಃ ಫಲ್ಗುನೇಽತೋ ವಿಶೇಷಾತ್ ।
ಯುಧಿಷ್ಠಿರೇಸೌಮ್ಯರೂಪೇಣ ವಿಷ್ಟೋ
ವೀರೇಣ ರೂಪೇಣ ಧನಂಜಯೇಽಸೌ ॥ ೧೨೯ ॥

ಯುಧಿಷ್ಠಿರ ಮುಂತಾದವರಲ್ಲಿ ನಾಲ್ವರಲ್ಲಿಯೂ ವಾಯು ಆವೇಶಗೊಂಡ. ಅವರಲ್ಲಿಯೂ ಅರ್ಜುನನಲ್ಲಿ ವಿಶೇಷ ಆವೇಶ. ಯುಧಿಷ್ಠಿರನಲ್ಲಿ ಸೌಮ್ಯ ರೂಪದಿಂದ ಮತ್ತು ಅರ್ಜುನನಲ್ಲಿ ವೀರ ರೂಪದಿಂದ ಆವೇಶ.

ಶೃಂಗಾರರೂಪಂ ಕೇವಲಂ ದರ್ಶಯಾನೋ
ವಿವೇಶ ವಾಯುರ್ಯಮಜೌ ಪ್ರಧಾನಃ।
ಶೃಂಗಾರ ಕೈವಲ್ಯಮಭೀಪ್ಸಮಾನಃ
ಪಾಂಡುರ್ಹಿ ಪುತ್ರಂ ಚಕಮೇ ಚತುರ್ಥಮ್ ॥ ೧೩೦ ॥

ಕೇವಲ ಸುಂದರ ರೂಪವನ್ನು ಪ್ರಕಟಪಡಿಸುತ್ತ ವಾಯು ನಕುಲ ಸಹದೇವರಲ್ಲಿ ಆವೇಶಗೊಂಡ. ಪಾಂಡು ಕೇವಲ ಸುಂದರರೂಪವನ್ನೆ ಬಯಸಿ ನಾಲ್ಕನೆ ಮಗನನ್ನು ಬಯಸಿದ್ದ.

ಶೃಂಗಾರರೂಪೋ ನಕುಲೇ ವಿಶೇಷಾತ್
ಸುನೀತಿರೂಪಃ ಸಹದೇವಂ ವಿವೇಶ।
ಗುಣೈಃ ಸಮಸ್ತೈಃ ಸ್ವಯಮೇವ ವಾಯು
ರ್ಬಭೂವ ಭೀಮೋ ಜಗದಂತರಾತ್ಮಾ ॥ ೧೩೧ ॥

ಅದರಿಂದ ನಕುಲ ಸಹದೇವರಲ್ಲಿಯೂ ವಿಶೇಷವಾಗಿ ನಕುಲನಲ್ಲಿಯೇ ವಾಯು

ದಿವಾಕರ ನಿಶಾಕರೌ' ಇತ್ಯುಕ್ತೇಃ ಪುಷ್ಪದಂತ ನಾಮಾಪಿ ಪುಷ್ಪಪದೇನ ದಿವಾಕರಂ ದಂತ ಪದೇನ ನಿಶಾಕರಂ ಚ ವಕ್ತಿ। ನ ತ್ವೇಕಪದೇನ ದಸ್ರಾವಿತಿವತ್ ಉಭೌ ವಕ್ತಿ। ಪಿತರಾವಿತ್ಯತ್ರಾಪಿ ಪಿತೃಪದಂ ಮಾತಾ ಚ ಪಿತಾ ಚ ಪಿತರಾವಿತಿ ಸಮಾಸೇ ಪೂರ್ವಪದ ಲೋಪೇ ತದರ್ಥಂ ಕಾಕೇಭ್ಯೋ ದಧಿ ರಕ್ಷ್ಯತಾಂ ಇತಿವತ್ ಅಜಹತ್ ಸ್ವಾರ್ಥ ಲಕ್ಷಣಯಾ ಮಾತರಂ ವಕ್ತಿ। ಪಿತರಂ ತು ಶಕ್ತ್ಯೈವ ವಕ್ತಿ। ನ ತ್ವೇಕವಿಧಯಾಶ್ವಿನಾವಿತಿವದುಭೌ ವಕ್ತಿ। ತಸ್ಮಾದುಭಯ ನಿಯಮವಂತಾವಶ್ವಿನಾವೇವೇತಿ ಹೇತೋಃ ತೌ ಸಕೃದಾಹ್ವಾನೇ ಸತಿ ದ್ವಾವಪಿ ಸಹೈವಾಯಾತಃ। ತದಾ ಮಂತ್ರಸ್ಯಾಪಿ ಸಕೃದಾವೃತ್ತಿರೇವ। ಅತ ಏವ ಮಾದ್ರ್ಯಾ ಕುಂತೀವಚನಮಪಿ ನೋಲ್ಲಂಘಿತಂ। ಪುತ್ರದ್ವಯಾಖ್ಯ ಕಾರ್ಯಂ ಚ ಸಂಪಾದಿತಂ।

–ವಾದಿರಾಜೀಯ

ಸುಂದರ ರೂಪದಾಯಕನಾಗಿ ಆವೇಶಗೊಂಡ. **ಒಳ್ಳೆಯ ನೀತಿದಾಯಕನಾಗಿ** ಸಹದೇವನನ್ನು ಪ್ರವೇಶಿಸಿದ. ಜಗದಂತರಾತ್ಮನಾದ ವಾಯು **ಈ ಎಲ್ಲ ಗುಣಗಳಿಂದ ಕೂಡಿ** ಭೀಮನಾಗಿ ತಾನೇ ಜನಿಸಿದ.

> ಭೀಮ ಮಾತ್ರವಲ್ಲದೆ ಎಲ್ಲ ಪಾಂಡವರೂ ವಾಯುವಿನ **ಅವತಾರವೆಂದು** ಪುರಾಣಗಳಲ್ಲಿ ಹೇಳಿದುದು ಈ ಅಭಿಪ್ರಾಯದಿಂದ **ಎಂದು** ವರದರಾಜೀಯ ಜನಾರ್ದನೀಯಗಳು ಹೇಳಿವೆ.

ಸುಪಲ್ಲವಾಕಾರತನುರ್ಹಿ ಕೋಮಲಃ
ಪ್ರಾಯೋಜನ್ಯೈಃ ಪ್ರೋಚ್ಯತೇ ರೂಪಶಾಲೀ।
ತತಃ ಸುಜಾತೌ ವರ ವಜ್ರಕಾಯೌ
ಭೀಮಾರ್ಜುನಾವಪ್ಯೃತೇ ಪಾಂಡುರೈಚ್ಛತ್ ॥ ೧೩೨ ॥

ಪ್ರಾಯಃ ಎಳೆಚಿಗುರಿನಂಥ ಕೋಮಲ ಶರೀರದವನನ್ನೇ ಜನರು ರೂಪಶಾಲಿ ಎನ್ನುತ್ತಾರೆ. ಅದರಿಂದ ಉತ್ತಮ ವಜ್ರಕಾಯದವರಾದ ಭೀಮಾರ್ಜುನರು ಮಾತ್ರವಲ್ಲದೆ ಬೇರೆ ಕೋಮಲ ಶರೀರದ ಮಕ್ಕಳೂ ಹುಟ್ಟಬೇಕೆಂದು ಪಾಂಡು ಬಯಸಿದ.

ಭೀಮಾರ್ಜುನರು ಅತ್ಯಂತ ಸುಂದರರೆ. ಉತ್ತಮ ಲಕ್ಷಣ ಭರಿತರು. ಆದರೆ ವಜ್ರದಂತೆ ಗಟ್ಟಿ ಶರೀರದವರು. ಸಾಮಾನ್ಯವಾಗಿ ಸ್ಥೂಲದೃಷ್ಟಿಯ ಜನರು ಕೋಮಲ ಶರೀರದವರನ್ನೇ ಸುಂದರರೆನ್ನುತ್ತಾರೆ.[1]

ಅಪ್ರಾಕೃತಾನಾಂ ತು ಮನೋಹರಂ ಯದ್
ರೂಪಂ ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಮ್।
ತನ್ಮಾರುತೋ ನಕುಲೇ ಕೋಮಲಾಭ
ಏವಂ ವಾಯುಃ ಪಂಚರೂಪೋಽತ್ರ ಚಾಸೀತ್ ॥ ೧೩೩ ॥

ಸೂಕ್ಷ್ಮ ದೃಷ್ಟಿಯವರಿಗೆ ಮಾತ್ರ ಮೂವತ್ತೆರಡು ಲಕ್ಷಣಗಳಿಂದ ಕೂಡಿದ ಉತ್ತಮ ಶರೀರವೆ ಸುಂದರವಾಗಿ ಕಾಣುವುದು. ಅಜ್ಞಾನಿಗಳಿಗೆ ಅಲ್ಲ ಅದರಿಂದ ವಾಯು ನಕುಲದಲ್ಲಿ ಕೋಮಲ ಕಾಂತಿಪ್ರದನಾಗಿ ನಿಂತ. ಹೀಗೆ ವಾಯು ಕೃಷ್ಣಾವತಾರ ಕಾಲದಲ್ಲಿ ಐದು ರೂಪದವನಾಗಿ ಅವತರಿಸಿದ.

---

1. ಭೀಮಾರ್ಜುನಯೋರತಿ ಸುಂದರತ್ವೇಽಪಿ ಕಠೋರಾಂಗತ್ವೇನ **ಪ್ರಾಯಃ ಪ್ರಾಕೃತಜನ್ಯೈಃ ರೂಪಶಾಲಿತ್ವೇನಾಕಥನಾತ್ ಕಾರಣಾತ್ ವರವಜ್ರಕಾಯೌ ಭೀಮಾರ್ಜುನಾವೃತೇಽಪಿ ಪಲ್ಲವ ಕೋಮಲಾಂಗತ್ವೇನ ಜಾತೌ ಪುತ್ರೌ ಪಾಂಡುರೈಚ್ಛದಿತ್ಯನ್ವಯಃ**।

[1]ವಾಯುವಿನ ನಿಜರೂಪ ದಷ್ಟಪುಷ್ಟವಾಗಿ ಮೂವತ್ತೆರಡು ಲಕ್ಷಣಗಳಿಂದ ಯುಕ್ತವಾಗಿದ್ದು ಅತ್ಯಂತ ಮನೋಹರವೇ ಆಗಿದೆ. ನಕುಲನಲ್ಲಿ ಅವನು ಅದನ್ನು ವ್ಯಕ್ತಮಾಡಲಿಲ್ಲ. ಕೇವಲ ಕೋಮಲ ಕಾಂತಿಯನ್ನೆ ವ್ಯಕ್ತಗೊಳಿಸಿದ. ನರಸಿಂಹ ಹಿರಣ್ಯಕಶಿಪುವಿನ ಉದರವನ್ನು ಬಗಿವ ಕಾಲದಲ್ಲಿ ತೋರಿದ ಉಗ್ರ ಕಠಿನ ಆಕಾರವನ್ನು ರಮಾದೇವಿಯ ಸ್ತನಗಳನ್ನು ಅಪ್ಪುವ ಕಾಲದಲ್ಲಿ ಮರೆಮಾಡಿ ಕೇವಲ ಕೋಮಲ ಮನೋಹರ ರೂಪವನ್ನು ವ್ಯಕ್ತಗೊಳಿಸುತ್ತಾನೆ. ಭೀಮನೂ ಜರಾಸಂಧನ ಕಠಿನವಾದ ಅವಯವ ಸಂಧಿಯನ್ನು ಮುರಿಯುವ ಕಾಲದಲ್ಲಿ ತೋರಿದ ಕಾಠಿನ್ಯವನ್ನು ದ್ರೌಪದಿಯ ಆಲಿಂಗನ ಕಾಲದಲ್ಲಿ ಮರೆಮಾಡಿ ಮೃದುತ್ವವನ್ನೇ ವ್ಯಕ್ತಗೊಳಿಸುತ್ತಾನೆ. ಹಾಗೆಯೇ ವಾಯು ಮೂಲರೂಪದ ದ್ವಾತ್ರಿಂಶಲ್ಲಕ್ಷಣೋಪೇತವಾದ ವಜ್ರಕಾಯದ ಕಾಠಿನ್ಯವನ್ನು ಭೀಮರೂಪದಲ್ಲಿ ತೋರಿದರೂ ನಕುಲನಲ್ಲಿ ಅದನ್ನು ಮರೆಮಾಡಿ ಕೇವಲ ಕೋಮಲ ಸೌಂದರ್ಯವನ್ನೇ ತೋರಿದನೆಂದು ವಾದಿರಾಜೀಯದಲ್ಲಿ ಹೇಳಿದೆ.

ಪಾಂಡವರೆಲ್ಲರೂ ಇಂದ್ರರು

ಅತೀತೇಂದ್ರಾ ಏವ ತೇ ವಿಷ್ಣುಷಷ್ಠಾಃ
ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ।
ಸ ವೈ ಕೃಷ್ಣೋ ವಾಯುರಥ ದ್ವಿತೀಯಃ
ಸ ಭೀಮಸೇನೋ ಧರ್ಮ ಆಸೀತ್ ತೃತೀಯಃ ॥ ೧೩.೪ ॥

ಪಂಚ ಪಾಂಡವರೂ ವಿಷ್ಣುವೂ ಸೇರಿ ಆರು ಮಂದಿಯೂ ಇಂದ್ರರೇ ಆಗಿದ್ದರು. ಮೊದಲಿನ ಇಂದ್ರನೆ ಯಜ್ಞನಾಮಕನಾದ ವಿಷ್ಣು. ಅವನೆ ಕೃಷ್ಣನಾದ. ಬಳಿಕ ಎರಡನೆ ಇಂದ್ರನೆ ವಾಯು. ಅವನೆ ಭೀಮಸೇನನಾದ. ಯಮಧರ್ಮ ಮೂರನೆ ಇಂದ್ರನಾಗಿದ್ದ.

ಯುಧಿಷ್ಠಿರೋಽಸಾವಥ ನಾಸತ್ಯದಸ್ರೌ
ಕ್ರಮಾತ್ ತಾವೇತೌ ಮಾದ್ರವತೀಸುತೌ ಚ

---

1. ಹಿರಣ್ಯಕಶಿಪೂದರವಿದಾರಣ ಸಮಯೇ ಪ್ರದರ್ಶಿತಂ ಕಾಠಿನ್ಯಮವ್ಯಕ್ತೀಕೃತ್ಯ ರಮಾಕುಚಕುಂಭ ಪರಿರಂಭಣ ಕಾಲೇ ಮಾರ್ದವಂ ಪ್ರದರ್ಶಯನ್ನರಸಿಂಹ ಇವ, ಜರಾಸಂಧ ಕಠೋರಾಂಗ ವಿದಾರಣಸಮಯವರ್ತಿ ಕಾಠಿನ್ಯಮವ್ಯಕ್ತೀಕೃತ್ಯ ದ್ರೌಪದೀಪರಿರಂಭ ಸಂಭ್ರಮ ಸಮಯ ಸಂಭೂತ ಮಾರ್ದವಮಿವ ನಕುಲದೇಹೇಽಪಿ ಕೋಮಲಾಭಃ ಸನ್ ಪಲ್ಲವವತ್ ಮಾರ್ದವಮೇವ ದರ್ಶಯಾಮಾಸೇತಿ ಯೋಗ್ಯಕ್ರಿಯಾಧ್ಯಾಹಾರೇಣಾನ್ವಯಃ। -ವಾದಿರಾಜೀಯ

ಪುರಂದರಃ ಷಷ್ಠ ಉತಾತ್ರ ಸಪ್ತಮಃ
ಸ ಏವೈಕಃ ಫಲ್ಗುನೋ ಹ್ಯೇತ ಇಂದ್ರಾಃ ॥ ೧೨.೫ ॥

ಆ ಯಮಧರ್ಮನೆ ಯುಧಿಷ್ಠಿರನಾಗಿ ಜನಿಸಿದ. ಬಳಿಕ ನಾಸತ್ಯ ಮತ್ತು ದಸ್ರರು ಇಂದ್ರರಾದರು. ಅವರೆ ಕ್ರಮವಾಗಿ ಮಾದ್ರಿಯ ಮಕ್ಕಳಾಗಿ ಜನಿಸಿದರು. ಪುರಂದರನೊಬ್ಬನೆ ಆರನೆ ಇಂದ್ರನಾದ ಮತ್ತು ಏಳನೆಯ ಇಂದ್ರನೂ ಆದ. ಅವನೆ ಅರ್ಜುನನಾಗಿ ಜನಿಸಿದ. ಹೀಗೆ ಇವರೆಲ್ಲರೂ ಇಂದ್ರರೆ.

ಮಹಾಭಾರತದಲ್ಲಿ ಪಂಚೇಂದ್ರರೆ ಪಂಚಪಾಂಡವರಾಗಿ ಹುಟ್ಟಿದರು ಎಂದಿದೆ. ಆದರ ಅಭಿಪ್ರಾಯವನ್ನು ನಿರ್ಣಯ ಸ್ಪಷ್ಟಪಡಿಸುತ್ತಿದೆ. ಸ್ವಾಯಂಭುವ ಸ್ವಾರೋಚಿಷ ಉತ್ತಮ ರೈವತ ತಾಪಸ ಚಾಕ್ಷುಷ ಎಂದು ಕಳೆದ ಆರು ಮನ್ವಂತರಗಳಲ್ಲಿ ಯಜ್ಞರೋಚನ ಸತ್ಯಜಿತ್ ತ್ರಿಶಿಖ ಶಂಭು ಮಂದ್ರದ್ಯುಮ್ನ ಈ ಆರು ಮಂದಿ ಇಂದ್ರ ಪದವಿಯನ್ನು ಆಳಿದರು. ಇವರು ಕ್ರಮವಾಗಿ ವಿಷ್ಣು ವಾಯು ಯಮ ನಾಸತ್ಯ ದಸ್ರ ಮತ್ತು ಪುರಂದರರುಗಳ ಅವತಾರ ಭೂತರು. ಆರನೆ ಮನ್ವಂತರದಲ್ಲಿ ಮಂದ್ರದ್ಯುಮ್ನನಾಗಿ ಆಳಿದ ಪುರಂದರನೆ ಈ ಏಳನೆ ವೈವಸ್ವತ ಮನ್ವಂತರದಲ್ಲಿಯೂ ಪುರಂದರ ಎಂಬ ಹೆಸರಿನಿಂದ ಆಳುತ್ತಿದ್ದಾನೆ. ಅಶ್ವಿನೀ ದೇವತೆಗಳಿಬ್ಬರೂ ಎರಡು ಮನ್ವಂತರಗಳಲ್ಲಿ ಜೊತೆಯಾಗಿಯೆ ಇಂದ್ರಪದವಿಯನ್ನು ಆಳಿದರು. ಆದರೂ ಒಂದೊಂದು ಮನ್ವಂತರದಲ್ಲಿ ಒಬ್ಬೊಬ್ಬನಿಗೆ ಪ್ರಾಧಾನ್ಯ. ಅದರಿಂದ ನಾಸತ್ಯ ದಸ್ರ ಎಂದು ಬೇರೆಬೇರೆಯಾಗಿ ಹೇಳಿದೆ. 'ಕ್ರಮವಾಗಿ ಮಾದ್ರಿಯ ಮಕ್ಕಳಾಗಿ ಜನಿಸಿದರು' ಎಂದರೆ ಅವತಾರ ರೂಪದಲ್ಲಿ ಕ್ರಮವಿದೆ ಎಂದರ್ಥ. ಅವತಾರ ರೂಪದಲ್ಲಿ ಒಬ್ಬನನ್ನು ಬಿಟ್ಟು ಇನ್ನೊಬ್ಬನು ಇರುತ್ತಾನೆ, ಹೋಗುತ್ತಾನೆ ಉಣ್ಣುತ್ತಾನೆ ವಿಹರಿಸುತ್ತಾನೆ ಮಕ್ಕಳನ್ನು ಪಡೆಯುತ್ತಾನೆ. ಹೀಗೆ ಎಲ್ಲವೂ ಸಂಭವಿಸುತ್ತದೆ. ನಕುಲ ಎಂಬ ಹೆಸರು ನಕುಲನಿಗೇ, ಸಹದೇವ ಎಂಬ ಹೆಸರು ಸಹದೇವನಿಗೇ. ಇಬ್ಬರಿಗೆ ಪ್ರತ್ಯೇಕನಾಮವಿಲ್ಲ ಎನ್ನುವ ನಿಯಮ ಮೂಲರೂಪಕ್ಕೆ ಮಾತ್ರ ಅನ್ವಯಿಸುತ್ತದೆ.[1]

---

1. ದ್ವಯೋರಪಿ ಪೃಥಗ್ ನಾಮಾಭಾವಾದ್ ವಿಯೋಗಾಭಾವಾಚ್ಚ ನಾಸತ್ಯಾವಪ್ಯಶ್ವಿನಾವೇವ। ದಸ್ರಾವಪ್ಯಶ್ವಿನಾವೇವ। ತಥಾಪ್ಯೇಕದಾ ದ್ವಯೋರಿಂದ್ರ ಪದವ್ಯಾಂ ಸತ್ಯೇಽಪ್ಯೇಕಸ್ಯ ಪ್ರಾಧಾನ್ಯಂ... ತಾವೇತೌ ಕ್ರಮಾತ್ ಮಾನುಷಾವತಾರ ಯೋಗ್ಯ ಕ್ರಮಾತ್ ನಕುಲಃ ಸಹದೇವ ಇತಿ ಮಾದ್ರೀಸುತೌ ಬಭೂವತುಃ। ಮಾನುಷದೇಹೇ ಏಕಂ ವಿಹಾಯೈಕಸ್ತಿಷ್ಠತಿ ಗಚ್ಛತಿ ಭುಂಕ್ತೇ ರಮತೇ ಪುತ್ರ ಮುತ್ಪಾದಯತಿ ಚೇತ್ಯಾದಿ ಮೂಲರೂಪಾದ್ ವಿಲಕ್ಷಣ ಪ್ರಮೇಯ ಭೇದೋಽಪಿ ಸೂಚಿತಃ। ವಿಶೇಷನಾಮಾಪ್ಯ ವಿಶೇಷಿತಂ ಯಯೋರಿತಿ ನಿಯಮಸ್ತು ಮೂಲರೂಪ ಏವೇತಿ ಭಾವಃ।

-ವಾದಿರಾಜೀಯ

ಪಾಂಡವರು ಶ್ರುತಿ ಪ್ರತಿಪಾದ್ಯರು

ಕ್ರಮಾತ್ ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ
ತೇಽವರ್ಧಂತ ಸ್ವತವಸೋ ಮಹಿತ್ವನಾ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋಪಪನ್ನಾಃ
ಸರ್ವೇ ಭಕ್ತಾಃ ಕೇಶವೇಕತ್ಯಂತಯುಕ್ತಾಃ ॥ ೧೩೬ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ ಶ್ರೀಕೃಷ್ಣಾವತಾರೇ
ಪಾಂಡವೋತ್ಪತ್ತಿರ್ನಾಮ ದ್ವಾದಶೋಧ್ಯಾಯಃ ॥

ಪಾಂಡವರು ಕ್ರಮವಾಗಿ ಕ್ಷತ್ರಿಯೋಚಿತ ಸಂಸ್ಕಾರಗಳನ್ನು ಹೊಂದಿ ಸ್ವರೂಪ ಸಾಮರ್ಥ್ಯದಿಂದ ಪ್ರವರ್ಧಮಾನರಾದರು. ಅವರು ಎಲ್ಲರೂ ಸರ್ವಜ್ಞರು. ಸಕಲ ಧರ್ಮಾಚಾರ ಯುಕ್ತರು, ಭಕ್ತರು, ಕೇಶವನಲ್ಲಿ ಅತ್ಯಂತ ಪ್ರೀತಿಯುಕ್ತರು.

'ತೇಽವರ್ಧಂತ ಸ್ವತವಸೋ ಮಹಿತ್ವನಾ' ಎಂದು ಆಶ್ವಲಾಯನ ಶಾಖಾಶ್ರುತಿ ಇದೆ. ಅದನ್ನು ಉದಾಹರಿಸುತ್ತ ಪಾಂಡವರು ಶ್ರುತಿಪ್ರತಿಪಾದ್ಯರೆಂಬುದನ್ನು ಶ್ರೀಮದಾಚಾರ್ಯರು ಸೂಚಿಸುತ್ತಿದ್ದಾರೆ ಎನ್ನುತ್ತದೆ ಜನಾರ್ದನೀಯ.[1]

ಶ್ರುತಿವಾಕ್ಯವನ್ನು ಉದಾಹರಿಸಿ ತಾನು ಮಾಡಿದ ನಿರ್ಣಯ ಶ್ರುತಿಸಮ್ಮತವೆಂದು ಸೂಚಿಸುತ್ತಿದ್ದಾರೆ ಎನ್ನುತ್ತದೆ ವರದರಾಜೀಯ.[2]

ಶ್ಲೋಕಪಾದವಾಗಿ ಶ್ರುತಿಪಾದವನ್ನು ಸೇರಿಸಿ ತನ್ನ ಈ ಕೃತಿ ಇಡಿಯಾಗಿ ವೇದತುಲ್ಯವೆಂದು ಸೂಚಿಸುತ್ತಿದ್ದಾರೆ.

ಪಾಂಡವರು ಇಂದ್ರರೆಂಬುದು ಶ್ರುತಿಸಿದ್ಧವೆಂದೂ ಸೂಚಿಸುತ್ತಿದ್ದಾರೆ-

ತೇಽವರ್ಧಂತ ಸ್ವತವಸೋ ಮಹಿತ್ವನಾ
ನಾಕಂ ತಸ್ಥುರುರು ಚಕ್ರಿರೇ ಸದಃ।

---

1. ಪಾಂಡವಾಃ ಶ್ರುತೌ ಪ್ರತಿಪಾದ್ಯಾ ಇತಿ ಜ್ಞಾಪನಾರ್ಥಂ ತೇಽವರ್ಧಂತೇತಿ ಆಶ್ವಲಾಯನ ಶಾಖಾಯಾಂ ವಿದ್ಯಮಾನ ಶ್ರುತಿರಧ್ಯಾಯಾಂತೇ ಉದಾಹೃತಾ। -ಜನಾರ್ದನೀಯ
2. ಉಕ್ತಾರ್ಥಸ್ಯ ವೇದೋಕ್ತತ್ವಸೂಚನಾರ್ಥಂ ವೈದಿಕಃ ಪಾದೋಽಂತೇ ಪಠಿತಃ। -ವರದರಾಜೀಯ

ವಿಷ್ಣುರ್ಯದ್ಧಾವದ್ ವೃಷಣಂ ಮದ ಚ್ಯುತಂ
ವಯೋ ನ ಸೀದನ್ನಧಿ ಬರ್ಹಿಷಿ ಪ್ರಿಯೇ ॥

(ಋಗ್ವೇದ 1.85.7. ತೈತ್ತಿ.ಸಂ.4.1.11.3)

ಯೇ ನಾಕಂ ತಸ್ಥುಃ, ಯೇ ನಾಕಂ ಉರು ಸದಃ ಚಕ್ರಿರೇ, ವಿಷ್ಣುಃ **ವೃಷಣಂ** ಸನ್ ಮದಚ್ಯುತಂ ಯತ್ ಯೇಷಾಂ ನಾಕಂ ಆವತ್, ವಯಃ ಯೇ **ಪ್ರಿಯೇ** ಅಧಿ ಬರ್ಹಿಷಿ ನ ಸೀದನ್, ಯೇ ಸ್ವತವಸಃ, ತೇ ಮಹಿತ್ವನಾ ಅವರ್ಧಂತ॥

ಯಾರು ಬೇರೆ ಬೇರೆ ಮನ್ವಂತರಗಳಲ್ಲಿ ದೇವೇಂದ್ರನ ಸಿಂಹಾಸನದಲ್ಲಿ ಕುಳಿತು ಸ್ವರ್ಗವನ್ನು ಗಂಧರ್ವಾಪ್ಸರೆಯರ ಸಂಗೀತ ನಾಟ್ಯಗಳ ದೊಡ್ಡಸಭೆಯನ್ನಾಗಿ ಮಾಡಿದರೋ, ಯಾರ ಮದದಿಂದ ದುರ್ವಾಸಶಾಪ ನಿಮಿತ್ತವಾಗಿ ಕೈತಪ್ಪಿ ಹೋಗಿದ್ದ ಸ್ವರ್ಗವನ್ನು ವಿಷ್ಣುವಾಮನನಾಗಿ ಅಭೀಷ್ಟದಾಯಕನಾಗಿ ರಕ್ಷಿಸಿದನೋ, ಶ್ರೇಷ್ಠರಾದ ಯಾರು ಪ್ರಿಯವಾದ ಉತ್ತಮವಾದ ಯಾಗಗಳಲ್ಲಿ ದರ್ಭಾಸನದಲ್ಲಿದ್ದು ಶತ್ರುಗಳ ಉಪದ್ರವದಿಂದ ವಿಷಣ್ಣರಾಗಲಿಲ್ಲವೋ ಯಾರು ತಮ್ಮ ಸ್ವಭಾವಾನುಸಾರ ಕೃಷ್ಣಸೇವೆಗಾಗಿ ಭೂಮಿಯಲ್ಲಿ ಅವತಾರ ರೂಪದ ವಿಸ್ತಾರವನ್ನು ಹೊಂದಿದರೋ ಆ ಪಂಚಪಾಂಡವರು ತಮ್ಮ ಮಹಿಮೆಯಿಂದಲೆ ದಿನೇ ದಿನೇ ಪ್ರವರ್ಧಮಾನರಾದರು-

ಹೀಗೆ ಪಾಂಡವರನ್ನು ಇಂದ್ರರೆಂದು ವೇದ ಸ್ಪಷ್ಟವಾಗಿ ಹೊಗಳಿದ ಎನ್ನುತ್ತದೆ ವಾದಿರಾಜೀಯ.[1]

---

1. ತೇವರ್ಧಂತ ಸ್ವತವಸೋ ಮಹಿತ್ವನೇತಿ ಶ್ರುತೇಃ ಪಾದಂ ಸ್ವಶ್ಲೋಕೇ ಪಾದತ್ವೇನ ಕಥಯತಾऽऽಚಾರ್ಯೇಣ ಸ್ವಗ್ರಂಥಸ್ಯ ಛಂದಃಸಮಾನತಾ ಸೂಚಿತಾ। ನಹಿ ಸೌವರ್ಣ ಸರ್ವಾಂಗಂ ವಿನಾ ಪಾದ ಮಾತ್ರಂ ಸೌವರ್ಣ ಕ್ವಾಪಿ ದೃಷ್ಟಂ। ಅತಃ ಶ್ಲೋಕೈಕ ಪಾದಸ್ಯ ಶ್ರೌತತ್ವೇ ಸರ್ವೋಪಿ ಶ್ಲೋಕಃ ಶ್ರುತಿಸಮಾನ ಏವೇತಿ ಕಥಂ ನ ಸಿಧ್ಯೇದಿತಿ ಭಾವಃ। ಪಂಚಪಾಂಡವಾನಾಂ ಪೂರ್ವೇಂದ್ರತ್ವಂ ಶ್ರೌತಮಿತ್ಯಪಿ ಸೂಚಿತಂ। ತಥಾ ಹಿ ಯೇ ನಾಕಂ ತಸ್ಥುಃ ಸ್ಥಾಪಯಾಮಾಸುಃ ಪಾಲಯಾಮಾಸುರಿತಿ ಯಾವತ್, ಯೇ ತಂ ನಾಕಂ ಉರುಸದಃ ಸಭಾಂ ಚಕ್ರಿರೇ, ವಿಷ್ಣುಃ ವಿಷ್ಣುರೂಪೀ ವಾಮನಃ **ವೃಷಣಂ** ಸರ್ವಾಭೀಷ್ಟವರ್ಷಣ ಸಮರ್ಥಃ ಮದಚ್ಯುತಂ ಐಶ್ವರ್ಯಮದೇನ ಚ್ಯುತಂ ಶಕ್ರೇಣಾಹಂಕಾರೇ ಕೃತೇ ಸತಿ ದುರ್ವಾಸಸಃ ಶಾಪೇನ ಚ್ಯುತಮಿತ್ಯರ್ಥಃ ಯತ್ ನಾಕಸ್ಥಾನಂ ಆವತ್ ಅವ ರಕ್ಷಣ ಇತಿ ಧಾತೋಃ ಅರಕ್ಷತ್ ಹ ಪ್ರಸಿದ್ಧಂ, ಯೇ ವಯಃ ವೀತ್ಯುಪಸರ್ಗಸ್ಯ ವಿಶಿಷ್ಟವಾಚಕತ್ವಾತ್ ವಿಃ ವೀ ವಯ ಇತಿ ರೂಪನಿಷ್ಪತ್ತ್ಯಾ ವಯಃ ಶ್ರೇಷ್ಠಾಃ ಪ್ರಿಯೇ ಅಧಿ ಅಧಿಕೇ ಬರ್ಹಿಷಿ ಯಜ್ಞೇ ಬರ್ಹಿಷಿ ನ ಸೀದನ್ ಅಸೀದನ್, ಷದ್ಲ್ ವಿಶರಣ ಗತ್ಯವಸಾದನೇಷ್ವಿತಿ ಧಾತೋಃ ದೈತ್ಯೈರ್ವಿಘ್ನೇಕೃತೇऽಪಿ ನ ಸನ್ನಾ ವಿಷಣ್ಣಾ ಅಸನ್ನಿತ್ಯರ್ಥಃ, ತನು ವಿಸ್ತಾರ ಇತಿ ಧಾತೋರ್ಭಾವಾರ್ಥೇ ಔಣಾದಿಕೇ ಡ್ವುಸುನ್ ಪ್ರತ್ಯಯೇ

ಪಾಂಡು ಅಪುತ್ರನಾಗಿಯೆ ವನವಾಸ ಕೈಗೊಂಡು ಕಂದಮೂಲಗಳನ್ನು ಸೇವಿಸುತ್ತ ತಾಪಸನಾದನೆಂದು ವಸುದೇವ ಮುಂತಾದ ಯಾದವರು ದುಃಖಿಸುತ್ತಿದ್ದರು. ಅವನಿಗೂ ಮಕ್ಕಳಾದರೆಂದು ತಿಳಿದಾಗ ಬಹಳ ಸಂತೋಷಪಟ್ಟರು. ವಸುದೇವ ಕಾಶ್ಯಪನೆಂಬ ಪುರೋಹಿತನನ್ನು ಕಳಿಸಿಕೊಟ್ಟು ಕಾಲಕಾಲಕ್ಕೆ ಗರ್ಭಾಧಾನ ಚೌಲೋಪನಯನಾದಿ ಕರ್ಮಗಳನ್ನು ಕ್ಷತ್ರಿಯೋಚಿತ ರೀತಿಯಿಂದಲೆ ಮಾಡಿಸಿದ. ಉಪನಯನವಾದ ಬಳಿಕ ವೇದಾಧ್ಯಯನವನ್ನೂ ಮಾಡಿಸಿದ. ರಾಜಾ ಶರ್ಯಾತಿಯ ಮಗ ಶುಕ್ರ ಮಹಾರಾಜ (ಇವನಿಗೆ ಶುಕ ಎಂದೂ ಹೆಸರಿದೆ) ಸಮಸ್ತ ಭೂಮಂಡಲವನ್ನು ಗೆದ್ದು ನೂರು ಅಶ್ವಮೇಧ ಯಾಗ ಮಾಡಿ ಕೊನೆಯಲ್ಲಿ ವಾನಪ್ರಸ್ಥ ಸ್ವೀಕರಿಸಿ ಶತಶೃಂಗ ಪರ್ವತದಲ್ಲಿಯೆ ತಪಸ್ಸು ಮಾಡುತ್ತಿದ್ದ. ಅವನು ಪಾಂಡವರಿಗೆ ಎಲ್ಲ ಶಸ್ತ್ರಾಸ್ತ್ರಗಳನ್ನೂ ಕಲಿಸಿದ. ಒಂದೊಂದು ವರ್ಷ ಅಂತರದ ವಯಸ್ಸಿನ ಮಕ್ಕಳು ಪಾಂಡವರು ಶತಶೃಂಗವಾಸಿಗಳಿಗೆಲ್ಲ ಬಹಳ ಪ್ರಿಯರಾಗಿ ದಿನೇ ದಿನೇ ಪ್ರವರ್ಧಮಾನರಾದರು.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಕೃಷ್ಣಾವತಾರ ಪಾಂಡವೋತ್ಪತ್ತಿ ಎಂಬ ಹನ್ನೆರಡನೆ ಅಧ್ಯಾಯ ಮುಗಿಯಿತು.

ಕೃತೇ ತವೋ ವಿಸ್ತಾರಃ। ಸ್ವ ತವಸಃ ಸ್ವಭಾವೇನೈವ ತವೋ ವಿಸ್ತಾರೋ ಯೇಷಾಂ ತೇ ಸ್ವತವಸಃ, ಭೂಮೌಕುಂತಿಮಾದ್ಯೋರ್ಜಾತಾಃ, ತೇ ಪಂಚೇಂದ್ರಾಃ ಮಹಿತ್ವಾನಾ ಮಹಿಮ್ನಾ ಅವರ್ಧಂತ ದಿನೇ ದಿನೇ ಅಭಿವೃದ್ಧಿಂ ಪ್ರಾಪ್ತಾ ಇತ್ಯರ್ಥ ಪರ್ಯಾಲೋಚನಯಾ ಪಂಚ ಪಾಂಡವಾನಾಮಪಿ ಪಂಚೇಂದ್ರತಾಯಾಃ ಸ್ಪಷ್ಟತ್ವಾದಿತಿ ಗ್ರಂಥಕಾರಸ್ಯ ಭಾವಃ। -ವಾದಿರಾಜೀಯ

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೩

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಸಂಸ್ಕಾರಾನ್ ಪ್ರಾಪ್ಯಗರ್ಗಾದ್ ಬಹುಶಿಶುಚರಿತೈಃ

ಪ್ರೀಣಯನ್ ಗೋಪಗೋಪೀಃ

ವತ್ಸಾನ್ ಧೇನೂಶ್ಚ ರಕ್ಷನ್ನಹಿಪತಿದಮನೋ ಯಃ ಪಪೌ ಕಾನನಾಗ್ನಿಂ ।

ವಿಪ್ರಸ್ತ್ರೀ ಪ್ರೀತಿಕಾರಿ ಧೃತಧರಣಿಧರೋ ಗೋಪಿಕಾಭಿರ್ನಿಶಾಸು

ಕ್ರೀಡನ್ ಮಲ್ಲಾಂಶ್ಚ ಕಂಸಂ ನ್ಯಹನದುಪಗತೋಽವ್ಯಾತ್

ಸ ಕೃಷ್ಣಃ ಪುರೀಂ ಸ್ವಾಮ್ ॥ ೧೩ ॥

ಶ್ರೀಕೃಷ್ಣ ಗರ್ಗಮುನಿಯಿಂದ ಜಾತಕರ್ಮಾದಿ ಸಂಸ್ಕಾರಗಳನ್ನು ಹೊಂದಿ ಗೋಪಗೋಪಿಯನ್ನು ಅನೇಕ ಬಾಲಲೀಲೆಗಳಿಂದ ಸಂತೋಷಗೊಳಿಸುತ್ತ ಕರುಗಳನ್ನೂ ದನಗಳನ್ನು ಕಾದ. ಕಾಳಿಯನನ್ನು ತುಳಿದ. ವಿಪ್ರಪತ್ನಿಯರಿಗೆ ಮುದಉಂಟು ಮಾಡಿದ. ಬೆಟ್ಟವನ್ನೆತ್ತಿದ. ಗೋಪಿಯರೊಡನೆ ರಾತ್ರಿಗಳಲ್ಲಿ ವಿಹರಿಸಿದ. ಮಧುರೆಗೆ ಹೋಗಿ ಮಲ್ಲರನ್ನೂ ಕಂಸನನ್ನೂ ಕೊಂದ. ಇಂಥ ಕೃಷ್ಣ ತನ್ನವರನ್ನು ಪೊರೆಯಲಿ.

ಹದಿಮೂರನೇ ಅಧ್ಯಾಯ

ಕಂಸವಧ

ಕೃಷ್ಣರಾಮರಿಗೆ ನಾಮಕರಣ

॥ ಹರಿಃ ಓಂ ॥

ಗರ್ಗಃ ಶೂರಸುತೋಕ್ಷ್ಯವ್ರಜಮಾಯಾತ್ ಸಾತ್ವತಾಂ ಪುರೋಧಾಃ ಸಃ।
ಚಕ್ರೇ ಕ್ಷತ್ರಿಯ ಯೋಗ್ಯಾನ್ ಸಂಸ್ಕಾರಾನ್ ಕೃಷ್ಣರೋಹಿಣೀಸೂನ್ವೋಃ ॥ ೧ ॥

ಯಾದವರ ಪುರೋಹಿತನಾದ ಗರ್ಗ ಮುನಿ ವಾಸುದೇವನ ಮಾತಿನಿಂದ ನಂದಗೋಕುಲಕ್ಕೆ ಬಂದ. ಕೃಷ್ಣರಾಮರಿಗೆ ಕ್ಷತ್ರಿಯೋಚಿತ ಸಂಸ್ಕಾರಗಳನ್ನು ನಡೆಸಿದ.

ಸತ್ವನ ಮಗನಾದ ಸಾತ್ವತನಿಂದ ಯಾದವರಲ್ಲಿ ಸಾತ್ವತ ಎಂದು ಒಂದು ಒಳಪಂಗಡ ಉಂಟಾಯಿತು. ಈ ಸಾತ್ವತರಿಗೆ ಕುಲಪುರೋಹಿತ ಗರ್ಗ ಮುನಿ. ಋಗ್ವೇದದ ಆರನೇ ಮಂಡಲದ ನಲವತ್ತೇಳನೆ ಸೂಕ್ತ ಈತನಿಂದ ದೃಷ್ಟವಾಗಿದೆ. ಉತಥ್ಯನ ಮಗನಾದ ಈತ ಶೇಷನಾಗನಿಂದ ಜ್ಯೋತಿಃಶಾಸ್ತ್ರವನ್ನು ಕಲಿತು ಮಹಾಜ್ಯೋತಿರ್ವೇತ್ತನಾದ. ಈತ ಧರ್ಮಶಾಸ್ತ್ರಪ್ರವರ್ತಕ. ಒಂದು ಆಂಗಿರಸ ಪಂಚಾರ್ಷೇಯ ಗೋತ್ರ ಪ್ರವರ್ತಕನೂ ಹೌದು. ಇವನನ್ನು ವಸುದೇವ ನಂದಗೋಕುಲಕ್ಕೆ ಕಳಿಸಿದ. ಏಕೆಂದರೆ ಕ್ಷತ್ರಿಯ ಕುಲದಲ್ಲಿ ಹುಟ್ಟಿದರೂ ಕ್ಷತ್ರಿಯೋಚಿತ ಸಂಸ್ಕಾರವಿಲ್ಲದೆ ಕ್ಷತ್ರಿಯರೆನಿಸುವುದಿಲ್ಲ. ಅದರಿಂದ ಕೃಷ್ಣರಾಮರಿಗೆ ಕ್ಷತ್ರಿಯ ಸಂಸ್ಕಾರ ಬೇಕು. ಅದನ್ನೂ ಕಂಸನಿಗೆ ತಿಳಿಯದಂತೆ ಗುಟ್ಟಾಗಿ ನಡೆಸಬೇಕು. ಅದಕ್ಕೆ ಗರ್ಗನನ್ನು ಕಳಿಸಿದ್ದ ವಸುದೇವ.

ಊಚೇ ನಂದ ಸುತೋಽಯಂ ತವ ವಿಷ್ಣೋರ್ನಾವಮೋ ಗುಣೈಃ ಸರ್ವೈಃ।
ಸರ್ವೇ ಚೈತತ್ತ್ರಾತಾಃ ಸುಕಮಾಪ್ಸ್ಯಂತ್ಯುನ್ನತಂ ಭವತ್ಪೂರ್ವಾಃ ॥ ೨ ॥

ಗರ್ಗ ನಂದನಿಗೆ ಹೇಳಿದ, 'ನಂದ, ನಿನ್ನ ಈ ಮಗ ಎಲ್ಲ ಗುಣಗಳಲ್ಲಿಯೂ ವಿಷ್ಣುವಿಗಿಂತ ಏನೂ ಕಡಿಮೆಯವನಲ್ಲ. ನೀನೂ ನಿಮ್ಮವರೂ ಎಲ್ಲರೂ ಇವನಿಂದ ರಕ್ಷಿತರಾಗಿ ಉನ್ನತಸೌಖ್ಯವನ್ನು ಹೊಂದಲಿರುವಿರಿ.'

ವಿಷ್ಣುವಿಗೆ ಕಡಿಮೆಯಿಲ್ಲದವ ವಿಷ್ಣುವೆ. ಅದರಿಂದ ಕೃಷ್ಣ ಸಾಕ್ಷಾತ್ ವಿಷ್ಣು ಎಂದಾಯಿತು. 'ನಾರಾಯಣ ಸಮ ಇತಿ ನಾರಾಯಣ ಏವೇತ್ಯರ್ಥಃ'

ಇತ್ಯುಕ್ತಃ ಸ ಮುಮೋದ ಪ್ರಯಯೌ ಗರ್ಗೋಽಪಿ ಕೇಶವೋಽಥ್ಯಾದಃ।
ಸ್ವಪದೈರಗ್ರಜಯುಕ್ತಶ್ಚಕ್ರೇ ಪುಣ್ಯಂ ವ್ರಜನ್ ವ್ರಜೋದ್ದೇಶಮ್ ॥ ೩ ॥

ಗರ್ಗ ಹೀಗೆ ಹೇಳಿದಾಗ ನಂದ ಆನಂದಪಟ್ಟ ಬಳಿಕ ಗರ್ಗ ಹೊರಟುಹೋದ. ಆದಿಪುರುಷ ಶ್ರೀಕೃಷ್ಣ ಅಣ್ಣನೊಡಗೂಡಿ ಓಡಾಡಿ ಗೋಕುಲದ ಉತ್ತಮ ಪ್ರದೇಶವನ್ನು ತನ್ನ ಹೆಜ್ಜೆಗಳಿಂದ ಪಾವನಗೊಳಿಸಿದ.

ಎರಡನೆ ಬಾರಿ ವಿಶ್ವರೂಪದರ್ಶನ

ಸ ಕದಾಚಿಚ್ಛಿಶುಭಾವಂ ಕುರ್ವಂತ್ಯಾ ಮಾತುರಾತ್ಮನೋ ಭೂಯಃ।
ಅಪನೇತುಂ ಪರಮೇಶೋ ಮೃದಂ ಜಘಾಸೇಕ್ಷತಾಂ ವಯಸ್ಯಾನಾಮ್ ॥ ೪ ॥

ತನ್ನನ್ನು ಶಿಶುವೆಂದು ಬಗೆದಿದ್ದ ಯಶೋದೆಯ ಆ ಭ್ರಾಂತಿಯನ್ನು ಕಳೆಯಲು ಪರಮೇಶ್ವರನಾದ ಕೃಷ್ಣ ಒಮ್ಮೆ ಜೊತೆಯ ಮಕ್ಕಳು ನೋಡುತ್ತಿದ್ದಂತೆಯೇ ಮಣ್ಣುತಿಂದ.

ಮಾತ್ರೋಪಾಲಬ್ಧ ಈಶೋ ಮುಖಿವಿವೃತಿಮಕರ್ನಾಂಬ ಮೃದ್ಭಕ್ಷಿತಾಹಮ್
ಪಶ್ಯೇತ್ಯಾಸ್ಯಾಂತರೇ ತು ಪ್ರಕೃತಿವಿಕೃತಿಯುಕ್ ಸಾ ಜಗತ್ ಪರ್ಯಪಶ್ಯತ್।
ಇತ್ಥಂ ದೇವೋಽಪ್ಯಚಿಂತ್ಯಾಮಪರದುರಧಿಗಾಂ ಶಕ್ತಿಮುಚ್ಚಾಂ ಪ್ರದರ್ಶ್ಯ
ಪ್ರಾಯೋ ಜ್ಞಾತ್ಮತತ್ತ್ವಂ ಪುನರಪಿ ಭಗವಾನಾವೃಣೋದಾತ್ಮಶಕ್ತ್ಯಾ ॥ ೫ ॥

ತಾಯಿ ಗದರಿದಾಗ ಕೃಷ್ಣ 'ಅಮ್ಮ! ಪರಮಪುರುಷನಾದ ನಾನು ಮಣ್ಣು ತಿಂದೆ, ನೋಡು!' ಎಂದು ಬಾಯಿ ತೆರೆದ. ಆಗ ಅವಳು ಬಾಯೊಳಗೆ ಪ್ರಕೃತಿ ಮತ್ತು ಅದರ ಕಾರ್ಯಗಳಿಂದ ಯುಕ್ತವಾದ ಜಗತ್ತನ್ನೇ ಕಂಡಳು. ಹೀಗೆ ಭಗವಾನ್ ಕೃಷ್ಣ ಇನ್ನೊಬ್ಬರಿಗೆ ತಿಳಿಯಲಾಗದ ಅಚಿಂತ್ಯನಾದ ಉನ್ನತಶಕ್ತಿಯನ್ನು ತೋರಿ ಅವಳು ತನ್ನ ಸ್ವರೂಪ ಶಕ್ತಿಯನ್ನು ಹೆಚ್ಚು ತಿಳಿದೊಡನೆ ಪುನಃ ತನ್ನ ಶಕ್ತಿಯಿಂದ ಆವರಿಸಿದ.

'ಕೃಷ್ಣ! ಮಣ್ಣುತಿಂದೆಯೇನೋ?' ಎಂದು ತಾಯಿ ಗದರಿದಾಗ ಕೃಷ್ಣ ಹೇಳುವುದು ಭಾಗವತದಲ್ಲಿ 'ನಾಹಂ ಭಕ್ಷಿತವಾನಂಬ'. ನಿರ್ಣಯದಲ್ಲಿ 'ನಾಂಬ ಮೃದ್ಭಕ್ಷಿತಾಹಂ' ಎರಡೂ ಕಡೆ ಮೇಲುನೋಟಕ್ಕೆ ಕೃಷ್ಣ ತಾನು ಮಣ್ಣುತಿಂದಿಲ್ಲ ಎನ್ನುತ್ತಿದ್ದಾನೆ. ಆದರೆ ಅಂತರ್ಯ ಬೇರೆಯೆ ಇದೆ ಎನ್ನುತ್ತಾರೆ. ಸತ್ಯಧರ್ಮ ತೀರ್ಥರು. ಭಾಗವತ ಟೀಕೆಯಲ್ಲಿ- 'ನಿರುಪಾದಾನ ಸೃಷ್ಟಿ ಕೂಡುವುದಿಲ್ಲ. ಅದರಿಂದ ನನ್ನ ಬಾಯೊಳಗೆ ಅಚಿಂತ್ಯಶಕ್ತಿಯಿಂದ ಹೊಸದಾಗಿ ತತ್ಕಾಲದಲ್ಲಿ ಬ್ರಹ್ಮಾಂಡ ಒಂದನ್ನು ಸೃಷ್ಟಿ ಮಾಡಿ ಯಶೋದೆಗೆ ತೋರಬೇಕೆಂದರೆ ಉಪಾದಾನವಾದ ಮಣ್ಣನ್ನು ತಿನ್ನಬೇಕು.

ಭೂಭಾರಹರಣಕ್ಕಾಗಿ ಅವತರಿಸಿದ ತನ್ನನ್ನು ಭೂದೇವಿ ಸ್ವಲ್ಪವಾದರೂ ಸೇವಿಸಲು ಬಯಸಿದ್ದಾಳೆ. ಅದರಿಂದಲೂ ಸ್ವಲ್ಪಮಣ್ಣು ತಿನ್ನಬೇಕು ಎಂದು ಕೃಷ್ಣ ಮಣ್ಣು ತಿಂದ. ಸುಳ್ಳಿಗಿಂತ ಹೆಚ್ಚಿನ ಪಾಪವಿಲ್ಲ ಎಂದು ತಿಳಿದ ತಾನು, ಅದನ್ನು ಲೋಕಕ್ಕೆ ತಿಳಿಸಬೇಕಾದವನು. ತಾಯಿಗೆ ಸುಳ್ಳು ಹೇಳಬಹುದೆ? ಎಂದು ಆಲೋಚಿಸಿ 'ನಾ=ಪರಮ ಪುರುಷನಾದ ನಾನು. ಮಣ್ಣನ್ನು ತಿಂದೆ, ನೋಡು' ಎಂಬ ಗೂಢಾಭಿಪ್ರಾಯವಿಟ್ಟುಕೊಂಡು 'ನಾಹಂ ಭಕ್ಷಿತವಾನಂಬ' ಎನ್ನುತ್ತಾನೆ. ಬಾಯಿತೆರೆದು 'ಅಮ್ಮ ನೋಡು, ನಾನು ಮಣ್ಣು ತಿಂದುದಕ್ಕೆ ಈ ಬ್ರಹ್ಮಾಂಡ ಬಾಯೊಳಗೆ ಇರುವುದೇ ಸಾಕ್ಷಿ ಏಕೆಂದರೆ ಕಾರ್ಯದಿಂದ ಕಾರಣವನ್ನು ಊಹಿಸುವುದು ಸುಲಭ. ಪಂಚೀಕರಣ ಪಕ್ವದಲ್ಲಿ ಸರ್ವಭೂತ ಮೇಲನವಾಗುವುದರಿಂದ ಮಣ್ಣು ತಿಂದ ಮಾತ್ರಕ್ಕೆ ಅಂತರಿಕ್ಷಾದಿ ಎಲ್ಲ ಕಾರ್ಯವನ್ನು ತೋರಿಸುವುದು ಯುಕ್ತ' ಎಂದು.[1]

ಸತ್ಯಧರ್ಮರ ಈ ವ್ಯಾಖ್ಯಾನಕ್ಕೆ ರುಕ್ಮಿಣೀಶ ವಿಜಯ ಮೂಲ.

'ತನ್ನ ಶಕ್ತಿಯಿಂದ ಯಶೋದೆಯನ್ನು ಆವರಿಸಿದ' ಎಂದರೆ 'ಕೃಷ್ಣ ಪರದೇವತೆ' ಎಂದು ಯಶೋದೆ ತಿಳಿದುಕೊಂಡಾಗ ಆ ಪ್ರಜ್ಞೆಯನ್ನು ಕೃಷ್ಣ ತನ್ನ ಮಾಯೆಯಿಂದ ಆವರಿಸಿ ಪುನಃ ಶಿಶು ಎಂಬ ಭಾವನೆಯನ್ನು ಉಂಟು ಮಾಡಿದ ಎಂದರ್ಥ.

ಕೃಷ್ಣ ದಾಮೋದರನಾದ

ಇತಿ ಪ್ರಭುಃ ಸ ಲೀಲಯಾ ಹರಿರ್ಜಗದ್ ವಿಡಂಬಯನ್।
ಚಚಾರ ಗೋಷ್ಠಮಂಡಲೇಽಪ್ಯನಂತ ಸೌಖ್ಯಚಿದ್ಘನಃ ॥ ೬ ॥

---

1. ನ ನಿರುಪಾದಾನಾ ಸೃಷ್ಟಿಃ ಸಂಭವೇತಿ ಸಾ ತದಾನೀಮಾಸ್ಯೇ ದರ್ಶನೀಯೇತಿ ಧಿಯಾ, ತದ್ಬಾರಾವತಾರಾಯಾಯಮವತಾರ ಇತಿ ತಯಾ ಚ ಧರಯಾ ಕಿಂಚಿದುಪಯೋಗಿನ್ಯಾ ಭಾವ್ಯಮಿತಿ ಮತಿತೋ ಮೃದದನಮುಚಿತಮಚ್ಯುತಸ್ಯ। ತರ್ಹೀಶ್ವರೋ ನಾನೃತಾತ್ ಪಾತಕಂ ಪರಮಿತಿ ಜಾನನ್ ಕಥಂ ಜನನೀಂ ಪ್ರತಿ ಜನ ನೀತಿಶಾಸಕಃ ಅನೃತಮವಾದೀದಿತ್ಯತ ಆಂತರಂಗಿಕೋ ಭಗವತೋ ಭಾವಃ ಶ್ಲೋಕಸ್ಯ-ನಾ ಪರಮಪುರುಷೋಽಹಂ ಮೃದಂ ಭಕ್ತವಾನ್। ಸರ್ವ ಏತೇಽಮಿಥ್ಯಾಭಿಶಂಸಿನಃ। ಹೇ ಸತಿ ಮಾತಃ ಸರ್ವೇಽಗಿರಸೂತ್ಪ್ಲೀಕಾ ಯದಿ ತರ್ಹ್ಯಗಿರೋ ಮಮ ಮುಖಂ ಸಮಕ್ಷಂ ಪಶ್ಯ। ಕಾರ್ಯೇಣ ಕಾರಣಮವಗತಂ ಭವತೀತಿ। ಶಿಷ್ಟಂ ಶ್ಲಿಷ್ಟಂ। ಪಂಚೀಕರಣ ಪಕ್ಷೇ ಸರ್ವಭೂತ ಮೇಲನಾದ್ ಏಕಸ್ಯಾಂ ಮೃದಿ ಭಕ್ಷಿತಾಯಾಂ ಅಂತರಿಕ್ಷಾದ್ಯುಪಾದೇಯ ಪ್ರದರ್ಶನಂ ನಾಸಂಭವೀತಿ ವರ್ಣಯಂತಿ। -ಸತ್ಯಧರ್ಮೀಯ

ಹೀಗೆ ಅನಂತ ಆನಂದ ಜ್ಞಾನಸ್ವರೂಪನಾದ ಪ್ರಭು ಶ್ರೀಕೃಷ್ಣ ಲೀಲೆಯಿಂದ ಲೋಕಾನುಕರಣೆಯನ್ನು ಮಾಡುತ್ತ ಗೋಕುಲ ಪ್ರದೇಶದಲ್ಲಿ ಓಡಾಡಿದ.

ಕದಾಚಿದೀಶ್ವರಃ ಸ್ತನಂ ಪಿಬನ್ ಯಶೋದಯಾ ಪಯಃ।
ಸೃತಂ ನಿಧಾತುಮುದ್ಧತೋ ಬಭಂಜ ದಧ್ಯಮತ್ರಕಮ್ ॥ ೭ ॥

ಸರ್ವಶಕ್ತನಾದ ಕೃಷ್ಣ ಒಮ್ಮೆ ಸ್ತನಪಾನ ಮಾಡುತ್ತಿದ್ದಾಗ ಯಶೋದೆ ಒಲೆಯ ಮೇಲೆ ಉಕ್ಕುತ್ತಿದ್ದ ಹಾಲನ್ನು ಕೆಳಗೆ ಇಳಿಸುವುದಕ್ಕಾಗಿ ಕೃಷ್ಣನನ್ನು ಕೆಳಗೆ ಇಟ್ಟಳು. ಆಗ ಕೃಷ್ಣ ಮೊಸರು ಗಡಿಗೆಯನ್ನು ಒಡೆದ.

ಸ್ವತಃ ಪೂರ್ಣ ನಿತ್ಯತೃಪ್ತನಾದ ಕೃಷ್ಣ ಸ್ತನಪಾನ ಪೂರ್ತಿಯಾಗಲಿಲ್ಲವೆಂದು ।
ಅತೃಪ್ತಿಗೊಂಡವನಂತೆ ತೋರಿಕೊಂಡು ಕೋಪದಿಂದ ಮೊಸರ
ಗಡಿಗೆಯನ್ನು ಒಡೆದ.

ಪ್ರಮಥ್ಯಮಾನದಧ್ನ್ಯುಪಪ್ರಜಾತಮಿಂದುಸನ್ನಿಭಮ್ ।
ನವಂ ಹಿ ನೀತಮಾದದೇ ರಹೋ ಜಘಾಸ ಚೇಶಿತಾ ॥ ೮ ॥

ಕಡೆದ ಮೊಸರಲ್ಲಿ ದೊಡ್ಡ ಮುದ್ದೆಯಾಗಿ ಬಂದ, ಚಂದ್ರನಂತೆ ಬಿಳಿಯಾದ ಹೊಸ ಬೆಣ್ಣೆಯನ್ನು ಎತ್ತಿಕೊಂಡು ಸರ್ವಶಕ್ತನಾದ ಕೃಷ್ಣ ಗುಟ್ಟಾಗಿ ತಿಂದ.

ಪ್ರಜಾಯತೇ ಹಿ ಯತ್ಕುಲೇ ಯಥಾ ಯುಗಂ ಯಥಾ ವಯಃ।
ತಥಾ ಪ್ರವರ್ತನಂ ನ ಭವೇದ್ ದಿವೌಕಸಾಂ ಸಮುದ್ಭವೇ ॥ ೯ ॥
ಇತಿ ಸ್ವಧರ್ಮಮುತ್ತಮಂ ದಿವೌಕಸಾಂ ಪ್ರದರ್ಶಯನ್ ।
ಅಧರ್ಮಪಾವಕೋಽಪಿ ಸನ್ ವಿಡಂಬತೇ ಜನಾರ್ದನಃ ॥ ೧೦ ॥

ದೇವತೆಗಳು ಭೂಮಿಯಲ್ಲಿ ಅವತರಿಸಿದಾಗ ಅವರು ಯಾವ ಯುಗದಲ್ಲಿ ಯಾವ ಕುಲದಲ್ಲಿ ಹುಟ್ಟುವರೋ ಆ ಯುಗಾನುಸಾರ ಆ ಕುಲಧರ್ಮದಂತೆ ವಯಸ್ಸಿಗೆ ಅನುಸಾರವಾಗಿ ನಡೆಯಬೇಕು. ದೇವತೆಗಳ ಈ ಧರ್ಮ ತನಗೆ ಇಷ್ಟವೆಂದು ತೋರುತ್ತ ಶ್ರೀಕೃಷ್ಣ ತಾನು ಅಧರ್ಮಕ್ಕೆ ಬೆಂಕಿಯಂತೆ ವಿರೋಧಿಯಾಗಿದ್ದರೂ, ಲೋಕಾನುಕರಣೆ ಮಾಡಿದ.

ಕದಿಯುವುದು ಪಾಪ. ಶ್ರೀಕೃಷ್ಣ ಪಾಪಕರ್ಮಕ್ಕೆ ಬಹುವಿರೋಧಿ. ಆದರೂ ಗೊಲ್ಲರ ಮನೆಮಕ್ಕಳು ಬೆಣ್ಣೆ ಕದಿಯುವುದು ಸಾಮಾನ್ಯ. ಆ ವಯಸ್ಸಿಗೆ ಇದು ಸ್ವಾಭಾವಿಕ. ಆದರಿಂದ ಕೃಷ್ಣ ಬೆಣ್ಣೆ ಕದ್ದ. ದೇವತೆಗಳೆಲ್ಲರೂ ಭೂಮಿಯಲ್ಲಿ ಅವತರಿಸಿದಾಗ ಆಯಾದೇಶ ಕಾಲ ವಯೋಧರ್ಮಕ್ಕೆ ಅನುಗುಣವಾಗಿ

ವರ್ತಿಸಬೇಕು. ಅದು ತನಗೆ ಇಷ್ಟ ಎಂದು ತೋರಿಸಲು ಕೃಷ್ಣ ಹಾಗೆ ಮಾಡಿದ. ಚೋರತ್ವವನ್ನು ಮಾಡಿದ ಪಾಪಕ್ಕೆ ನವನೀತ ಚೋರನೆಂದರೆ ಸಾಲದೆ? ಎಂದು ವ್ಯಾಸರಾಜರು ಹೇಳುತ್ತ 'ಚೌರ್ಯ ಸಾಮಾನ್ಯವಾಗಿ ಪಾಪಕರವೆಂದು ನಿಯಮವಿದ್ದರೂ ದೇವತೆಗಳು ಅವತಾರ ಕಾಲದಲ್ಲಿ ಲೋಕಾನುಕರಣಕ್ಕಾಗಿ ಮಾಡುವ ಇಂಥ ಚೌರ್ಯಪಾಪಕರವಲ್ಲ. ಅದು ಭಗವಂತನಿಗೆ ಪ್ರೀತಿಕರವಾದ ಧರ್ಮ. ಈ ರಹಸ್ಯವನ್ನು ತಿಳಿದರೆ ತ್ರಿಕರಣ ಜನ್ಯವಾದ ಚೌರ್ಯದ ಪಾಪ ಪರಿಹಾರವಾಗುತ್ತದೆ' ಎಂದು ತಿಳಿಸುತ್ತಿದ್ದಾರೆ.

ನೃತಿರ್ಯಗಾದಿರೂಪಕಃ ಸ ಬಾಲ್ಯಯೌವನಾದಿಯುಕ್ ।
ಕ್ರಿಯಾಶ್ಚ ತತ್ತದುದ್ಭವಾಃ ಕರೋತಿ ಶಾಶ್ವತೋಽಪಿ ಸನ್ ॥ ೧೧ ॥

ಮನುಷ್ಯ, ಪ್ರಾಣಿ ಮುಂತಾದ ರೂಪಗಳಿಂದ ಅವತರಿಸುವ ಆ ಹರಿ ಸದಾ ಏಕಪ್ರಕಾರ ಇದ್ದರೂ ಬಾಲ್ಯ ಯೌವನಾದಿಗಳಿಂದ ಯುಕ್ತನಾದವನಂತೆ ಆಯಾ ವಯಸ್ಸಿನಲ್ಲಿ ಉಂಟಾಗುವ ಪ್ರವೃತ್ತಿಗಳನ್ನು ಮಾಡುತ್ತಾನೆ.

ಶ್ರೀಹರಿ ರಾಮಕೃಷ್ಣಾದಿ ಅವತಾರಗಳಲ್ಲಿ ಮನುಷ್ಯನಂತೆ, ಮತ್ಸ್ಯಕೂರ್ಮಾದಿಗಳಾಗಿ ಪ್ರಾಣಿಗಳಂತೆ, ನರಸಿಂಹ ಹಯಗ್ರೀವಾದಿಗಳಾಗಿ ಉಭಯ ರೂಪಿಗಳಂತೆ ಅವತರಿಸುತ್ತಾನೆ. ಅವತಾರದಲ್ಲಿ ಬಾಲ್ಯ ಕೌಮಾರಾದಿ ವಯಸ್ಸನ್ನು ಕ್ರಮವಾಗಿ ಹೊಂದಿದಂತೆ ಕಂಡರೂ ಎಲ್ಲವೂ ಬರಿ ತೋರಿಕೆಯಷ್ಟೆ. ಶಾಶ್ವತನಾದ ಭಗವಂತ ಕಾಲಾತೀತ. ವಯೋವಿಕಾರಗಳಿಲ್ಲದವ. ಅವನು ತೋರುವ ಬಾಲ್ಯ ಕೌಮಾರಾದಿ ಅವಸ್ಥೆಗಳು ಕಾಲದಿಂದಾದುದಲ್ಲ.

ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ
ನಮೋ ಯುವಭ್ಯೋ ನಮ ಆಶೀನೇಭ್ಯಃ ॥

ಎಂದು ವೇದ ಹೇಳುವಂತೆ ಬಾಲ ಕುಮಾರ ಮುಂತಾದ ಎಲ್ಲ ವಿಷ್ಣು ರೂಪಗಳೂ ಅನಾದಿ ನಿತ್ಯ, ಶಾಶ್ವತ. ಅವುಗಳಲ್ಲಿ ಬಾಲಕೃಷ್ಣರೂಪ ಒಂದು. ಬಾಲಕರಿಗೆ ಉಚಿತವಾದ ಬೆಣ್ಣೆ ಕದ್ದು ಮೆಲ್ಲುವುದು ಮುಂತಾದ ಚೇಷ್ಟೆಗಳನ್ನು ತೋರುತ್ತದೆ.

ಸ ವಿಪ್ರರಾಜಗೋಪಕಸ್ವರೂಪಕಸ್ತದುದ್ಭವಾಃ ।
ತದಾತದಾ ವಿಚೇಷ್ಟತೇ ಕ್ರಿಯಾಃ ಸುರಾನ್ ವಿಶಿಕ್ಷಯನ್ ॥ ೧೨ ॥

ಶ್ರೀಹರಿ ಬ್ರಾಹ್ಮಣರ ರಾಜರ ಗೋಪಾಲಕರ ರೂಪದಿಂದಿದ್ದಾಗ ಆಯಾ ಜಾತಿಗಳಲ್ಲಿ

ಉಂಟಾಗುವ ಪ್ರವೃತ್ತಿಗಳನ್ನು ದೇವತೆಗಳಿಗೆ ತೋರಿಸುವುದಕ್ಕಾಗಿ ಆಯಾ ಕಾಲಗಳಲ್ಲಿ ಅವುಗಳನ್ನು ಮಾಡುತ್ತಾನೆ.

ವ್ಯಾಸ ಪರಶುರಾಮಾದಿಗಳು ಬ್ರಾಹ್ಮಣ ರೂಪಗಳು. ಶ್ರೀರಾಮ ವೃಷಭ ಚಕ್ರವರ್ತಿ ಮುಂತಾದವು ರಾಜರೂಪಗಳು. ಶ್ರೀಕೃಷ್ಣಗೋಪಾಲಕ.

ತಥಾಪ್ಯನನ್ಯದೇವತಾಸಮಂ ನಿಜಂ ಬಲಂ ಪ್ರಭುಃ।
ಪ್ರಕಾಶಯನ್ ಪುನಃ ಪುನಃ ಪ್ರಕಾಶಯತ್ಯಜೋ ಗುಣಾನ್ ॥ ೧೩ ॥

ಜನನ ರಹಿತನಾದ ಸರ್ವಶಕ್ತನಾದ ಕೃಷ್ಣ ಅನ್ಯ ದೇವತೆಗಳಿಗೆ ಹೋಲಿಸಲಾಗದ ತನ್ನ ಬಲವನ್ನು ತೋರುತ್ತ ಸರ್ವಜ್ಞತ್ವಾದಿ ಗುಣಗಳನ್ನು ಪುನಃ ಪುನಃ ತೋರುತ್ತಾನೆ.

ಅಥಾತ್ತಯಷ್ಟಿಮೀಕ್ಷ್ಯ ತಾಂ ಸ್ವಮಾತರಂ ಜಗದ್ಗುರುಃ।
ಸ ಪುಪ್ಲುವೇ ತಮನ್ವಗಾನ್ಮನೋವಿದೂರಮಂಗನಾ ॥ ೧೪ ॥

ಮೊಸರಿನ ಗಡಿಗೆಯನ್ನು ಒಡೆದ ಬಳಿಕ ಜಗದ್ಗುರು ಶ್ರೀಕೃಷ್ಣ ತನ್ನ ತಾಯಿ ಕೋಲು ಹಿಡಿದುದನ್ನು ಕಂಡು ಓಡತೊಡಗಿದ. ಮನಸಿಗೂ ಸಿಗದ ಅವನನ್ನು ಯಶೋದೆ ಹಿಂಬಾಲಿಸಿದಳು.

ಪುನಃ ಸಮೀಕ್ಷ್ಯ ತಚ್ಛ್ರಮಂ ಜಗಾಮ ತತ್ಕರಗ್ರಹಮ್।
ಪ್ರಭುಃ ಸ್ವಭಕ್ತವಶ್ಯತಾಂ ಪ್ರಕಾಶಯನ್ನುರುಕ್ರಮಃ ॥ ೧೫ ॥

ಉರುಕ್ರಮನೆನಿಸಿದ ಶಕ್ತ ಶ್ರೀಕೃಷ್ಣ ಯಶೋದೆ ಆಯಾಸಗೊಂಡುದನ್ನು ಕಂಡು ಭಕ್ತಪರಾಧೀನತೆಯನ್ನು ಮೆರೆಯುತ್ತ ಕೈಗೆ ಸಿಕ್ಕಿದ.

ಸದಾ ವಿಮುಕ್ತಮೀಶ್ವರಂ ನಿಬದ್ಧುಮಂಜಸಾದದೇ।
ಯದೈವ ದಾಮ ಗೋಪಿಕಾ ನ ತತ್ ಪುಪೂರ ತಂ ಪ್ರತಿ ॥ ೧೬ ॥

ನಿತ್ಯಮುಕ್ತನಾದ ಕೃಷ್ಣನನ್ನು ಚೆನ್ನಾಗಿ ಕಟ್ಟಲು ಗೋಪಿ ಹಗ್ಗವನ್ನು ಎತ್ತಿಕೊಂಡಾಗ ಅದು ಅವನಿಗೆ ಸಾಲದಾಯಿತು.

ಸಮಸ್ತದಾಮಸಂಚಯಃ ಸುಸಂಧಿತೋಽಪ್ಯಪೂರ್ಣತಾಮ್।
ಯಯಾವನಂತವಿಗ್ರಹೇ ಶಿಶುತ್ವಸಂಪ್ರದರ್ಶಕೇ ॥ ೧೭ ॥

ಶಿಶುವಾಗಿ ತೋರಿಕೊಂಡ ಕೃಷ್ಣನ ವಸ್ತುತಃ ಅಪರಿಮಿತ ಗಾತ್ರದ ಆ ಶರೀರಕ್ಕೆ ಎಲ್ಲ ಹಗ್ಗಗಳ ರಾಶಿಯನ್ನು ಗಂಟುಹಾಕಿ ಜೊತೆ ಸೇರಿಸಿದರೂ ಸಾಲದಾಯಿತು.

ಅಬಂಧಯೋಗ್ಯತಾಂ ಪ್ರಭುಃ ಪ್ರದರ್ಶ್ಯ ಲೀಲಯಾ ಪುನಃ।
ಸ ಏಕವತ್ಸಪಾಶಕಾಂತರಂ ಗತೋಽಖಿಲಂಭರಃ ॥ ೧೮ ॥

ಸುತಸ್ಯ ಮಾತೃವಶ್ಯತಾಂ ಪ್ರದರ್ಶ್ಯ ಧರ್ಮಮೀಶ್ವರಃ।
ಬಭಂಜ ತೌ ದಿವಿಸ್ಪೃಸೌ ಯಮಾರ್ಜುನೌ ಸುರಾತ್ಮಜೌ ॥ ೧೯ ॥

ವಿಶ್ವಂಭರನಾದ ಪ್ರಭು ಶ್ರೀಕೃಷ್ಣ ತಾನು ಬಂಧನಕ್ಕೆ ಸಿಲುಕುವವನಲ್ಲ ಎಂಬುದನ್ನು ತೋರಿಸಿ ಪುನಃ ಲೀಲೆಯಿಂದ ಒಂದು ಕರು ಕಟ್ಟುವ ಹಗ್ಗದಲ್ಲಿ ಬಂಧನಕ್ಕೆ ಸಿಕ್ಕಿದ. ಹೀಗೆ ತಾಯಿಗೆ ವಶನಾಗುವುದು ಮಗನ ಧರ್ಮ ಎಂಬುದನ್ನು ತೋರಿಸಿ ಗಗನಚುಂಬಿಗಳಾದ ಜೋಡಿ ಅರ್ಜುನ ವೃಕ್ಷಗಳನ್ನು ಕಿತ್ತ. ಇವರು ಕುಬೇರನ ಪುತ್ರರು.

'ವಿಶ್ವಂಭರನಾದ ಕೃಷ್ಣ' ಎಂಬುದರಿಂದ ಕೃಷ್ಣನ ಉದರದಲ್ಲಿ ಮುಕ್ತಾಮುಕ್ತ ಪ್ರಪಂಚ ಎಲ್ಲ ಇದೆ. ಆತ ತಾನು ನಿತ್ಯಮುಕ್ತ ತನ್ನ ಉದರದಲ್ಲಿ ಅಸಂಖ್ಯಮುಕ್ತರು. ಬಂಧನ ಹೇಗೆ ಸಾಧ್ಯ ಎಂದು ಸೂಚನೆ ಸಿಗುತ್ತದೆ. ಹಾಗೇ ರುಕ್ಮಿಣೇಶ ವಿಜಯದಲ್ಲಿ ಇದೆ. ಯಶೋದೆ ಕೃಷ್ಣನನ್ನು ಒಂದು ಒರಳಿಗೆ ಕಟ್ಟಿದಳು. ಕೃಷ್ಣ ಆ ಒರಳನ್ನೆ ಎಳೆದು ಎರಡು ಮತ್ತಿ ಮರಗಳ ನಡುವಿನಿಂದ ತೂರಿದಾಗ ಆ ಮರಗಳೇ ಬೇರು ಸಹಿತ ಕಿತ್ತುಬಂದುವು. ಕೃಷ್ಣ ಇಡೀ ಜಗತ್ತನ್ನೇ ತನ್ನ ನಿಯಾಮಕ ಶಕ್ತಿಯಿಂದ ಸೆಳೆದೂ ಕೃಷ್ಣನೆನಿಸಿದವ, ಈಗ ಮತ್ತಿಮರಗಳನ್ನು ಸೆಳೆದೂ ಕೃಷ್ಣನೆನಿಸಿದ. 'ದಾಮ' ಅಂದರೆ ಹಗ್ಗ 'ಉದರ'ದಲ್ಲಿ ಕಟ್ಟಿದ್ದರಿಂದ 'ದಾಮೋದರ'ನೆನಿಸಿದ.

ಯಮಳಾರ್ಜುನ ಭಂಜನ

ಪುರಾ ಧುನಿಶ್ಚಮುಸ್ತಥಾಪಿ ಪೂತನಾಸಮನ್ವಿತೌ।
ಅನೋಕ್ಷಸಂಯುತೌ ತಪಃ ಪ್ರಚಕ್ರತುಃ ಶಿವಾಂ ಪ್ರತಿ।
ತಯಾ ವರೋಽಪ್ಯವಧ್ಯತಾ ಚತುರ್ಷು ಚ ಪ್ರಯೋಜಿತಃ ॥ ೨೦ ॥

ಹಿಂದೆ ಧುನಿ ಮತ್ತು ಚಮು ಇಬ್ಬರು ಪೂತನಾ ಶಕಟಾಕ್ಷ ಸಮೇತರಾಗಿ ಪಾರ್ವತಿಯನ್ನು ಕುರಿತು ತಪಸ್ಸು ಮಾಡಿದ್ದರು. ದೇವಿ ಆ ನಾಲ್ವರಿಗೂ ಅವಧ್ಯತ್ವ ವರ ನೀಡಿದ್ದಳು.

ಅನಂತರಂ ತೃಣೋದ್ಭ್ರಮಿಸ್ತಪೋಽಚರದ್ ವರಂ ಚ ತಮ್।
ಅವಾಪ ತೇ ತ್ರಯೋ ಹತಾಃ ಶಿಶುಸ್ವರೂಪವಿಷ್ಣುನಾ ॥ ೨೧ ॥

ತೃಣಾವರ್ತನೂ ತಪಸ್ಸು ಮಾಡಿದ್ದ. ಅವಧ್ಯತ್ವ ವರವನ್ನು ಪಡೆದಿದ್ದ. ಶಿಶುರೂಪನಾದ ಹರಿಯಿಂದ ಆ ಮೂವರು ಹತರಾದರು.

ಧುನಿಶ್ಚಮುಶ್ಚ ತೌ ತರೂ ಸಮಾಶ್ರಿತೌ ನಿಷೂದಿತೌ।
ತರುಪ್ರಭಂಗತೋಽಮುನಾ ತರೂ ಚ ಶಾಪಸಂಭವೌ ॥ ೨೨ ॥

ಧುನಿ ಚಮುಗಳು ಜೋಡಿ ಅರ್ಜುನ ವೃಕ್ಷಗಳನ್ನು ಸೇರಿಕೊಂಡರು. ಕೃಷ್ಣ ಆ ಮರಗಳನ್ನು ಮುರಿಯುವ ಮೂಲಕ ಅವರನ್ನೂ ಕೊಂದ. ಮರಗಳೂ ಶಾಪದಿಂದ ಹುಟ್ಟಿದವುಗಳು.

ಪುರಾ ಹಿ ನಾರದಾಂತಿಕೇ ದಿಗಂಬರೌ ಶಶಾಪ ಸಃ।
ಧನೇಶ ಪುತ್ರಕೌ ದ್ರುತಂ ತರುತ್ವಮಾಪ್ನುತಂ ತ್ವಿತಿ ॥ ೨೩ ॥

ಹಿಂದೆ ಕುಬೇರನ ಮಕ್ಕಳು ನಾರದ ಮುನಿಯ ಬಳಿ ದಿಗಂಬರರಾಗಿ ನಿಂತರು. ಅವರನ್ನು ಬೇಗನೆ ಮರಗಳಾಗಿ ಹುಟ್ಟಿರೆಂದು ಮುನಿ ಶಪಿಸಿದ.

ನಳಕೂಬರ ಮಣಿಗ್ರೀವರೆಂಬ ಇಬ್ಬರು ಕುಬೇರ ಪುತ್ರರು ಮದ್ಯಪಾನ ಮಾಡಿ ಭಾಗೀರಥೀ ತೀರದ ಕೈಲಾಸದ ಉಪವನದಲ್ಲಿ ಅಪ್ಸರ ಸ್ತ್ರೀಯರೊಡನೆ ಜಲಕ್ರೀಡೆಯಾಡುತ್ತಿದ್ದಾಗ ನಾರದರು ಬಂದರು. ಸ್ತ್ರೀಯರು ಗಡಿಬಿಡಿಯಿಂದೆದ್ದು ಬಟ್ಟೆ ಹಾಕಿಕೊಂಡರೂ ಇವರು ಮಾತ್ರ ಅಹಂಕಾರದಿಂದ ಬೆತ್ತಲೆಯಾಗಿಯೇ ಮುನಿಯ ಬಳಿಗೆ ಬಂದು ನಿಂತು ನಗಲು ತೊಡಗಿದರು. ಮುನಿ ಕುಪಿತನಾಗಿ 'ಹೀಗೇ ವೃಕ್ಷಗಳಾಗಿ ದೇವಮಾನದ ನೂರುವರ್ಷ ಕಾಲ ನಿಂತಿರಿ' ಎಂದು ಶಪಿಸಿ, ಬಳಿಕ ಮರುಕಗೊಂಡು, ಕೃಷ್ಣ ನಿಮ್ಮನ್ನು ಉದ್ಧರಿಸುವನೆಂದು ವಿಶಾಪವನ್ನು ನೀಡಿದರು.

ತತೋ ಹಿ ತೌ ನಿಜಾಂ ತನುಂ ಹರೇಃ ಪ್ರಸಾದತಃ ಶುಭೌ।
ಅವಾಪತುಃ ಸ್ತುತಿಂ ವಿಭೋರ್ವಿಧಾಯ ಜಗ್ಮತುರ್ಗೃಹಮ್ ॥ ೨೪ ॥

ಸಜ್ಜನರಾದ ಅವರು ಈಗ ಕೃಷ್ಣನ ಅನುಗ್ರಹದಿಂದ ನಿಜರೂಪವನ್ನು ಪಡೆದರು. ಪ್ರಭುವಿನ ಸ್ತೋತ್ರ ಮಾಡಿ ತಮ್ಮ ಲೋಕಕ್ಕೆ ತೆರಳಿದರು.

ನಲಕೂಬರಮಣಿಗ್ರೀವೌ ಮೋಚಯಿತ್ವಾ ಚ ಶಾಪತಃ।
ವಾಸುದೇವೋಽಥ ಗೋಪಾಲೈರ್ವಿಸ್ಮಿತೈರಭಿವೀಕ್ಷಿತಃ ॥ ೨೫ ॥

ಕೃಷ್ಣನು ನಲಕೂಬರ ಮಣಿಗ್ರೀವರನ್ನು ಹೀಗೆ ಶಾಪದಿಂದ ಬಿಡುಗಡೆ ಮಾಡಿದ್ದನ್ನು ಗೋಪಾಲಕರು ವಿಸ್ಮಿತರಾಗಿ ನೋಡಿದರು.

ಕೋಟಿ ಕೋಟಿ ವೃಕಾವತಾರ

ವೃಂದಾವನ ಯಿಯಾಸುಃ ಸನ್ ನಂದಸೂನುರ್ಬ್ರಹದ್ವನೇ।
ಸಸರ್ಜ ರೋಮಕೂಪೇಭ್ಯೋ ವೃಕಾನ್ ವ್ಯಾಘ್ರಸಮಾನ್ ಬಲೇ ॥ ೨೬ ॥

ಕೃಷ್ಣ ವೃಂದಾವನಕ್ಕೆ ಹೋಗ ಬಯಸಿ ಗೋಕುಲದಲ್ಲಿ ಬಲದಲ್ಲಿ ಹುಲಿಗಳಂತಿರುವ ತೋಳಗಳನ್ನು ರೋಮಕೂಪಗಳಿಂದ ಸೃಜಿಸಿದ.

ನಂದಾಗಿ ಗೋಪರು ಗೋಕುಲವನ್ನು ಬಿಟ್ಟು ವೃಂದಾವನಕ್ಕೆ ವಲಸೆ ಹೋಗಬೇಕೆಂದರೆ, ಗೋಕುಲದಲ್ಲಿ ಭಯಂಕರ ಉತ್ಪಾತವಾಗಬೇಕು. ಅದಕ್ಕೆ ಕೃಷ್ಣ ಕೋಟಿ ಗಟ್ಟಲೆ ತೋಳಗಳನ್ನು ರೋಮಕೂಪಗಳಿಂದ ಆವಿರ್ಭಾವಗೊಳಿಸಿದ. ಈ ತೋಳಗಳ ವೃತ್ತಾಂತ ಭಾಗವತದಲ್ಲಿ ಸ್ಪಷ್ಟವಿಲ್ಲ. ಉತ್ಪಾತಗಳಾದುವೆಂದು ಮಾತ್ರ ಹೇಳಿದೆ. ಹರಿವಂಶದಲ್ಲಿ ತೋಳಗಳ ಬಗ್ಗೆ ಹೇಳಿದೆ. 'ನಿಶ್ಚೇರುಸ್ತಸ್ಯ ಗಾತ್ರೇಭ್ಯಃ ಶ್ರೀವತ್ಸಕೃತಲಕ್ಷಣಾಃ' ಎಂದು ಈ ತೋಳಗಳ ಎದೆಯಲ್ಲಿ ಶ್ರೀವತ್ಸ ಚಿಹ್ನೆಯನ್ನು ವರ್ಣಿಸಿದೆ. ಅದರಿಂದ ಇವು ಹರಿಯ ವೃಕಾವತಾರಗಳೆಂದು ತಿಳಿಯಬೇಕು ಎನ್ನುತ್ತಾರೆ ಸತ್ಯಧರ್ಮರು.[1]

ಅನೇಕಕೋಟಿಸಂಘೈಸ್ತೈಃ ಪೀಡ್ಯಮಾನಾ ವ್ರಜಾಲಯಾಃ।
ಯಯುರ್ವೃಂದಾವನಂ ನಿತ್ಯಾನಂದಮಾದಾಯ ನಂದಜಮ್ ॥ ೨೭ ॥

ಅನೇಕಕೋಟಿ ತೋಳಗಳ ಹಿಂಡುಗಳಿಂದ ಗೋಕುಲ ವಾಸಿಗಳ ಪೀಡಿತರಾಗಿ ನಿತ್ಯಾನಂದನಾದ ನಂದನಂದನನ್ನು ಕರೆದುಕೊಂಡು ವೃಂದಾವನಕ್ಕೆ ವಲಸೆ ಹೋದರು.

ಇಂದಿರಾಪತಿರಾನಂದಪೂರ್ಣೋ ವೃಂದಾವನೇ ಪ್ರಭುಃ।
ನಂದಯಾಮಾಸ ನಂದಾದೀನುದ್ದಾಮತರಚೇಷ್ಟಿತೈಃ ॥ ೨೮ ॥

ಆನಂದಪೂರ್ಣನಾದ ಇಂದಿರಾಪತಿ ಪ್ರಭು ವೃಂದಾವನದಲ್ಲಿ ಅತ್ಯುತ್ತಮ ಲೀಲೆಗಳಿಂದ ನಂದ ಮುಂತಾದವರನ್ನು ಆನಂದಗೊಳಿಸಿದ.

ಸ ಚಂದ್ರತೋ ಹಸತ್ಕಾಂತವದನೇನೇಂದುವರ್ಚಸಾ।
ಸಹಿತೋ ರೌಹಿಣೇಯೇನ ವತ್ಸಪಾಲೋ ಬಭೂವ ಹ ॥ ೨೯ ॥

---

1. ಉತ್ಪಾತಾ ವೃಕಾದ್ಯಾಃ ಯಥೋಕ್ತಂ ಹರಿವಂಶೇ ನಿಶ್ಚೇರುಸ್ತಸ್ಯ ಗಾತ್ರೇಭ್ಯಃ ಶ್ರೀವತ್ಸ ಕೃತ ಲಕ್ಷಣಾ ಇತಿ। ತೇ ಚ ಸ್ಥಲಾಂತರಗಮನಗಮನಸಾ ಶ್ರೀಕೃಷ್ಣೇನ ಬಹಿರಾವಿರ್ಭಾವಿತಾಸ್ತದಾತ್ಮಕಾ ಇತಿ ಜ್ಞೇಯಂ। ಶ್ರೀವತ್ಸಕೃತಲಕ್ಷಣಾ ಇತಿ ತದ ಸಾಧಾರಣ ಲಕ್ಷಣೋಕ್ತೇಃ। -ಸತ್ಯಧರ್ಮೀಯ

ಕೃಷ್ಣ ಚಂದ್ರನನ್ನು ಧಿಕ್ಕರಿಸುವ ಸುಂದರವದನನಾದ ಚಂದ್ರನಂಥ ಕಾಂತಿಯ ಬಲರಾಮನ ಜೊತೆಗೆ ಕರು ಕಾಯುವವನಾದ.

ವತ್ಸಾಸುರ ಬಕಾಸುರ ಸಂಹಾರ

ದೈತ್ಯಂ ಸ ವತ್ಸತನುಮಪ್ರಮಯಃ ಪ್ರಗೃಹ್ಯ
ಕಂಸಾನುಗಂ ಹರವರಾದಪರೈರವಧ್ಯಮ್ ।
ಪ್ರಕ್ಷಿಪ್ಯ ವೃಕ್ಷಶಿರಸಿ ನ್ಯಹನದ್ ಬಕೋಽಪಿ
ಕಂಸಾನುಗೋಽಥ ವಿಭುಮಚ್ಯುತಮಾಸಸಾದ ॥ ೩೦ ॥

ಶಿವವರದಿಂದ ಇತರರಿಗೆ ಅವಧ್ಯನಾಗಿದ್ದ ಕರುವಿನ ರೂಪದಿಂದ ಬಂದ ಕಂಸಭೃತ್ಯನಾದ ದೈತ್ಯನನ್ನು ಅಪ್ರಮೇಯನಾದ ಕೃಷ್ಣ ಹಿಡಿದು ಮರದ ತುದಿಗೆ ಬೀಸಿ ಎಸೆದು ಕೊಂದ. ಬಳಿಕ ಕಂಸಭೃತ್ಯನಾದ ಬಕನೂ ಸರ್ವಶಕ್ತನಾದ ಕೃಷ್ಣನ ಬಳಿಗೆ ಬಂದ.

ಕೃಷ್ಣ ವತ್ಸಾಸುರನ ಎರಡು ಹಿಂಗಾಲು ಮತ್ತು ಬಾಲಗಳನ್ನು ಒಟ್ಟಿಗೆ ಹಿಡಿದು ಗರಗರನೆ ಬೀಸಿದ. ಆಗಲೆ ಅಸುರ ಸತ್ತ. ಅವನನ್ನು ಬೇಲದ ಮರದ ಮೇಲೆ ಎಸೆದು ಹಣ್ಣುಗಳನ್ನು ಉದುರಿಸಿದ. ಗೋಪಬಾಲಕರು ಆ ಹಣ್ಣುಗಳನ್ನು ಆನಂದದಿಂದ ತಿಂದರು.

ಸ್ಕಂದಪ್ರಸಾದಕವಚಃ ಸ ಮುಖೇ ಚಕಾರ
ಗೋವಿಂದಮಗ್ನಿವದಮುಂ ಪ್ರದಹಂತಮುಚ್ಚೈಃ।
ಚಚ್ಛರ್ದ ತುಂಡಶಿರಸೈವ ನಿಹಂತುಮೇನಂ
ಆಯಾಂತಮೀಕ್ಷ್ಯ ಜಗೃಹೇಽಸ್ಯ ಸ ತುಂಡಮೀಶಃ ॥ ೩೧ ॥

ಸ್ಕಂದನ ವರವನ್ನು ರಕ್ಷಾ ಕವಚವಾಗಿ ಹೊಂದಿದ್ದ ಬಕ ಕೃಷ್ಣನನ್ನು ನುಂಗಿದ. ಕೃಷ್ಣ ಬೆಂಕಿಯಂತೆ ಬಹಳವಾಗಿ ಸುಡಲು ತೊಡಗಿದುದರಿಂದ ವಮನ ಮಾಡಿದ. ಬಳಿಕ ಕೊಕ್ಕಿನ ತುದಿಯಿಂದಲೆ ಕೊಲ್ಲಲು ಬಂದ. ಕೃಷ್ಣ ನೋಡಿ ಅವನ ಕೊಕ್ಕನ್ನು ಹಿಡಿದ.

ಈ ಬಕಾಸುರ ಭೀಮನಿಂದ ಹತನಾದ ಬಕಾಸುರನಲ್ಲ. ಬಕರೂಪದಿಂದ, ಅಂದರೆ ಬಿಳಿ ಕೊಕ್ಕರೆಯ ರೂಪದಿಂದ ಬಂದ ಇನ್ನೊಬ್ಬ ಅಸುರ. ಪೂತನೆಯ ಸೋದರ. ಕಂಸಭೃತ್ಯ. ಷಣ್ಮುಖನ ವರದಿಂದ ಅವಧ್ಯನೆನಿಸಿದ್ದವ. ಅವನು ಕೃಷ್ಣನನ್ನು ನುಂಗಿದಾಗ ಕೃಷ್ಣ ಗಂಟಲೊಳಗೆ ಉಸಿರಾಟವನ್ನು ತಡೆದು ನಿಲ್ಲಿಸಿದನೆಂದು ರುಕ್ಮಿಣೀಶ ವಿಜಯ ಹೇಳಿದೆ.

ತುಂಡದ್ವಯಂ ಯದುಪತಿಃ ಕರಪಲ್ಲವಾಭ್ಯಾಂ
ಸಂಗೃಹ್ಯ ಚಾಶು ವಿದದಾರ ಹ ಪಕ್ಷಿದೈತ್ಯಮ್ ।

ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ
ಸಾಯಂ ಯಯೌ ವ್ರಜಭುವಂ ಸಹಿತೋಽಗ್ರಜೇನ ॥ ೩೨ ॥

ಚಿಗುರಿನಂಥ ಕೈಗಳಿಂದ ಕೃಷ್ಣ ಬಕನ ಎರಡು ಕೊಕ್ಕುಗಳನ್ನು ಬೇಗನೆ ಹಿಡಿದು ಪಕ್ಷಿರೂಪದ ಆ ದೈತ್ಯನನ್ನು ಸೀಳಿದ. ಬ್ರಹ್ಮಾದಿಗಳು ಹೂಮಳೆಗರೆಯುತ್ತ ಸ್ತೋತ್ರ ಮಾಡುತ್ತಿದ್ದಂತೆ ಅಣ್ಣ ಬಲರಾಮನೊಂದಿಗೆ ಸಂಜೆ ಗೋಕುಲಕ್ಕೆ ಹಿಂತಿರುಗಿದ.

ಏವಂ ಸ ದೇವವರವಂದಿತಪಾದಪದ್ಮೋ
ಗೋಪಾಲಕೇಷು ವಿಹರನ್ ಭುವಿ ಷಷ್ಠಮಬ್ದಮ್ ।
ಪ್ರಾಪ್ತೋ ಗವಾಮಖಿಲಪೋಽಪಿ ಸ ಪಾಲಕೋಽಭೂದ್
ವೃಂದಾವನಾಂತರಗಸಾಂದ್ರಲತಾವಿತಾನೇ ॥ ೩೩ ॥

ದೇವೋತ್ತಮರಿಂದ ಪಾದಕಮಲ ವಂದನೆ ಕೈಗೊಳ್ಳುವ ಕೃಷ್ಣ ಭೂಮಿಯಲ್ಲಿ ಗೊಲ್ಲರ ನಡುವೆ ವಿಹರಿಸುತ್ತ ಆರನೆ ವರ್ಷಕ್ಕೆ ಕಾಲಿಟ್ಟ. ವೃಂದಾವನದೊಳಗಿನ ನಿಬಿಡವಾದ ಲತಾಕುಂಜದಲ್ಲಿ ಸರ್ವಪಾಲಕ ಕೃಷ್ಣ ಗೋಪಾಲಕನೆನಿಸಿದ.

ಕಾಲಿಯ ಮರ್ದನ

ಜ್ಯೇಷ್ಠಂ ವಿಹಾಯ ಸ ಕದಾಚಿದಚಿಂತ್ಯಶಕ್ತಿ
ರ್ಗೋಗೋಪಗೋಗಣಯುತೋ ಯಮುನಾತಟೇಷು ।
ರೇಮೇ ಭವಿಷ್ಯದನುವೀಕ್ಷ್ಯ ಹಿ ಗೋಪದುಃಖಂ
ತದ್ಬೋಧನಾಯ ನಿಜಮಗ್ರಜಮೇಷು ಸೋಽಧಾತ್ ॥ ೩೪ ॥

ಅಚಿಂತ್ಯ ಶಕ್ತಿಯುಳ್ಳ ಕೃಷ್ಣ ಒಮ್ಮೆ ಬಲರಾಮನನ್ನು ಬಿಟ್ಟು ಒಬ್ಬನೇ ಗೊಲ್ಲರ ಮತ್ತು ಹಸುಗಳ ಗುಂಪಿನೊಡನೆ ಯಮುನೆಯ ತೀರಗಳಲ್ಲಿ ವಿಹರಿಸಿದ. ಮುಂದೆ ಗೊಲ್ಲರಿಗೆ ಕಳವಳವಾಗಲಿರುವುದನ್ನು ಮೊದಲೇ ತಿಳಿದು ಅವರಿಗೆ ಸಮಾಧಾನಪಡಿಸಲೆಂದು ಅಣ್ಣನನ್ನು ಅವರ ನಡುವೆ ನಿಲ್ಲಿಸಿದ್ದ.

ತಂ ಬ್ರಹ್ಮಣೋ ವರಬಲಾದುರಗಂ ತ್ವವಧ್ಯಂ
ಸರ್ವೈರವಾರ್ಯವಿಷವೀರ್ಯಮೃತೇ ಸುಪರ್ಣಾತ್ ।
ವಿಜ್ಞಾಯ ತದ್ವಿಷವಿದೂಷಿತಪಾರಿಪಾನ
ಸನ್ನಾನ್ ಪಶೂನಪಿ ವಯಸ್ಯಜನಾನ್ ಸ ಆವೀತ್ ॥ ೩೫ ॥

ಬ್ರಹ್ಮನ ವರಬಲದಿಂದ ಅವಧ್ಯನಾಗಿದ್ದು ಗರುಡನಿಗೆ ಹೊರತು ಇನ್ನಾರಿಗೂ ತಡೆಯಲು ಸಾಧ್ಯವಾದ ವಿಷಬಲ ಉಳ್ಳ ಕಾಳಿಯ ನಾಗ ಯಮುನೆಯ

ಮಡುವಿನಲ್ಲಿರುವನೆಂದು ತಿಳಿದು ಕೃಷ್ಣ ಅವನ ವಿಷದೂಷಿತ ಜಲಪಾನದಿಂದ ಮೃತರಾದ ಸಂಗಡಿಗರನ್ನೂ ಹಸುಗಳನ್ನೂ ರಕ್ಷಿಸಿದ.

ತದ್ದೃಷ್ಟಿದಿವ್ಯಸುಧಯಾ ಸಹಸಾಭಿವೃಷ್ಟಾಃ
ಸರ್ವೇಽಪಿ ಜೀವಿತಮವಾಪುರಥೋಚ್ಚಶಾಖಮ್ ।
ಕೃಷ್ಣಃ ಕದಂಬಮಧಿರುಹ್ಯ ತತೋಽತಿತುಂಗಾದ್
ಆಸ್ಫೋಟ್ಯ ಗಾಢರಶನೋ ನ್ಯಪತದ್ ವಿಷೋದೇ ॥ ೩೬ ॥

ಕೃಷ್ಣನ ಕಣ್ಣ ನೋಟದ ದಿವ್ಯ ಅಮೃತದಿಂದ ತೋಯ್ದು ಎಲ್ಲರೂ ಕೂಡಲೇ ಬದುಕಿಕೊಂಡರು. ಬಳಿಕ ಕೃಷ್ಣ ಉನ್ನತ ಶಾಖೆಗಳುಳ್ಳ ಕದಂಬ ವೃಕ್ಷವನ್ನೇರಿ ಸೊಂಟಕ್ಕೆ ಉತ್ತರೀಯವನ್ನು ಬಿಗಿದು ಕಟ್ಟಿಕೊಂಡು ಭುಜತಟ್ಟಿ ಎತ್ತರದಿಂದ ಕೆಳಗೆ ವಿಷಜಲದಲ್ಲಿ ಧುಮುಕಿದ.

ಕಾಳಿಯನ ಉಗ್ರವಾದ ವಿಷಜ್ವಾಲೆಯಲ್ಲಿ ಮಡುವಿನ ಬಳಿಯ ಎಲ್ಲ ಮರಗಿಡಗಳೂ ಸುಟ್ಟುಹೋಗಿದ್ದುವು. ಕದಂಬ ವೃಕ್ಷ ಅಂದರೆ ಈಚಲು ಮರ ಒಂದೇ ಬದುಕಿ ಉಳಿದಿತ್ತು. ಏಕೆಂದರೆ ಗರುಡ ಸರ್ಪಮಾತೆಯಾದ ಕದ್ರೂದೇವಿಗೆ ಅಮೃತವನ್ನು ಒಯ್ಯುವಾಗ ದಾರಿಯಲ್ಲಿ ಈ ಮರದ ಮೇಲೆ ಅಮೃತವನ್ನಿಟ್ಟು ಮೀನುಗಳನ್ನು ಬೇಟಿಯಾಡಿದ್ದ. ಆಗ ಆದ ಅಮೃತಸ್ಪರ್ಶದಿಂದ ಮರ ಬದುಕಿತ್ತು. ಚೆಂಡು ತರುವ ನೆಪದಿಂದ ಕೃಷ್ಣ ಆ ಮರದ ಮೇಲಿಂದ ಮಡುವಿಗೆ ಧುಮುಕಿದ.

ಸಾರ್ಪಹ್ರದಃ ಪುರುಷಸಾರನಿಪಾತವೇಗ
ಸಂಕ್ಷೋಭಿತೋರಗವಿಷೋಚ್ಛ್ವಸಿತಾಂಬುರಾಶಿಃ।
ಪರ್ಯಕ್ ಪ್ಲುತೋ ವಿಷಕಷಾಯವಿಭೀಷಣೋರ್ಮಿ
ಭೀಮೋ ಧನುಃಶತಮನಂತಬಲಸ್ಯ ಕಿಂ ತತ್ ॥ ೩೭ ॥

ಪುರುಷೋತ್ತಮ ಶ್ರೀಕೃಷ್ಣ ಧುಮುಕಿದ ವೇಗಕ್ಕೆ ಕ್ಷೋಭೆಗೊಂಡ ಕಾಲಿಯನ ವಿಷದಿಂದ ಮಡುವಿನ ಜಲರಾಶಿ ಉಕ್ಕಿತು. ವಿಷದಿಂದ ಕುದಿಯುತ್ತ ಭೀಕರ ತರಂಗಗಳಿಂದ ಭೀಕರವಾದ ಮಡು ಸುತ್ತಲೂ ನೂರು ಧನುಸ್ಸುಗಳಷ್ಟು ಪ್ರದೇಶವನ್ನು ಮುಳುಗಿಸಿತು. ಆದರೆ ಅನಂತ ಬಲ ಉಳ್ಳ ಕೃಷ್ಣನಿಗೆ ಅದೆಷ್ಟರದು?

ನಾಲ್ಕುಮೊಳ = ಒಂದು ದಂಡ

ಹನ್ನೆರಡು ದಂಡ = ಒಂದು ಧನುಸ್

ಅದರಿಂದ ನೂರು ಧನುಸ್ಸುಗಳೆಂದರೆ ನಾಲ್ಕು ಸಾವಿರದೆಂಟು ನೂರು

ಮೊಳಗಳು. ಅನಂತಬಲ ಉಳ್ಳ ಕೃಷ್ಣನಿಗೆ 'ಅದು' ಅಂದರೆ ಮಡುವಿನ ನೀರನ್ನು ನೂರು ಧನುಸ್ಸಿನಷ್ಟು ಪ್ರದೇಶದಲ್ಲಿ ಹರಡುವಂತೆ ಮಾಡಿದುದು ಎಷ್ಟರದು? ಮತ್ತು 'ಅದು' ಎಂದರೆ ಕ್ಷೋಭೆಗೊಂಡ ಕಾಲಿಯನ ವಿಷವನ್ನು ಸಹಿಸಿಕೊಂಡುದುದು ಎಷ್ಟರದು? ಎಂದು ಎರಡೂ ಅರ್ಥ ವಿವಕ್ಷಿತ. ಮೊದಲನೆ ಅರ್ಥದಲ್ಲಿ 'ಅನಂತಬಲ' ಎಂದರೆ ಅಪರಿಮಿತಶಕ್ತಿ. ಎರಡನೇ ಅರ್ಥದಲ್ಲಿ ಅನಂತ=ಶೇಷ. ಬಲ=ವನ, ಶೇಷನದಲ್ಲಿ ಮಲಗುವವ, ಮತ್ತು ಅನಂತ=ಗರುಡ. ವಲ=ಗರುಡನ ಮೇಲೇರಿ ಸಂಚಾರ ಮಾಡುವವ. ಶೇಷಶಾಯಿಗೆ, ಗರುಡವಾಹನನಿಗೆ ವಿಷದ ಭಯವೆಲ್ಲಿ? ಎಂದು ಅಭಿಪ್ರೇತವಾಗುತ್ತದೆ ಎಂದು ಸತ್ಯಧರ್ಮೀಯ.

ತಂ ಯಾಮುನಹ್ರದವಿಲೋಲಕಮಾಪ್ಯ ನಾಗಃ
ಕಾಲ್ಯೋ ನಿಜೈಃ ಸಮದಶತ್ ಸಹ ವಾಸುದೇವಮ್ ।
ಭೋಗೈರ್ಬಬಂಧ ಚ ನಿಜೇಶ್ವರಮೇನಮಜ್ಞಃ
ಸೇಹೇ ತಮೀಶ ಉತ ಭಕ್ತಿಮತೋಽಪರಾಧಮ್ ॥ ೩೮ ॥

ಯಮುನೆಯ ಮಡುವನ್ನು ಕದಡುತ್ತಿದ್ದ ಕೃಷ್ಣನ ಬಳಿಗೆ ಅಜ್ಞನಾದ ಕಾಲಿಯನಾಗ ತನ್ನವರೊಡನೆ ಬಂದು ಕಚ್ಚಿದ. ತನ್ನ ಪ್ರಭುವನ್ನು ಮೈಯಿಂದ ಸುತ್ತಿ ಬಿಗಿದ. ಆದರೆ ಪ್ರಭು ಭಕ್ತನ ಈ ಅಪರಾಧವನ್ನು ಸಹಿಸಿದ.

ಇಲ್ಲಿ 'ಕಾಲಿಯ'ನನ್ನು 'ಕಾಲ್ಯ' ಎಂದಿದೆ. 'ಕಾಳ್ಯ' ಎಂದೂ ಒಂದು ಪಾಠವಿದೆ. 'ಕಾಲಿಯ' ಕಾಲೀಯನೂ ಆಗಬಹುದು, ಕಾಲ್ಯನೂ ಆಗಬಹುದು. 'ಕಾಳಿಯ' ಕಾಳೀಯನೂ ಆಗಬಹುದು. ಕಾಳ್ಯನೂ ಆಗಬಹುದು.

ಉತ್ಪಾತಮೀಕ್ಷ್ಯ ತು ತದಾಖಿಲಗೋಪಸಂಘ
ಸ್ತತ್ರಾಜಗಾಮ ಹಲಿನಾ ಪ್ರತಿಬೋಧಿತೋಽಪಿ ।
ದೃಷ್ಟ್ವಾನಿಜಾಶ್ರಯಜನಸ್ಯ ಬಹೋಃ ಸುದುಃಖಂ
ಕೃಷ್ಣಃ ಸ್ವಭಕ್ತಮಪಿ ನಾಗಮಮುಂ ಮಮರ್ದ ॥ ೩೯ ॥

ಬಲರಾಮ ಎಷ್ಟು ಹೇಳಿದರೂ ಎಲ್ಲ ಗೊಲ್ಲರ ಗುಂಪು ಉತ್ಪಾತವನ್ನು ಕಂಡು ಕಳವಳದಿಂದ ಮಡುವಿನ ಬಳಿಗೆ ಬಂದಿತು. ಕೃಷ್ಣ ತನ್ನನ್ನು ಆಶ್ರಯಿಸಿದ ಬಹು ಜನರ ಕಳವಳವನ್ನು ಕಂಡು ತನ್ನ ಭಕ್ತನೇ ಆದ ಆ ನಾಗನನ್ನು ಮರ್ದಿಸಿದ.

ಭೂಕಂಪಾದಿ ಉತ್ಪಾತಗಳನ್ನು ಕಂಡು ಗೊಲ್ಲರು 'ಕೃಷ್ಣನಿಗೇನಾಯಿತೋ!' ಎಂದು ಕಳವಳಗೊಂಡು ಮಡುವಿನ ಬಳಿಗೆ ಧಾವಿಸಿದರು. ಅಲ್ಲಿ ಭಯಂಕರ ಸರ್ಪ ಬಾಲಕೃಷ್ಣನನ್ನು ಬಲವಾಗಿ ಸುತ್ತಿ ಬಿಗಿದು ಕಚ್ಚುತ್ತಿರುವುದನ್ನು ಕಂಡು

ದಿಗ್ಭ್ರಾಂತರಾಗಿ ನೀರಿಗೆ ಹಾರಲು ಯತ್ನಿಸಿದರು. ಬಲರಾಮ ಎಲ್ಲರನ್ನೂ ತಡೆದ. ಆದರೂ ಅವರ ದುಃಖವನ್ನು ನೋಡಲಾರದೆ ಕೃಷ್ಣ ಒಮ್ಮೆ ಮೈ ಉಬ್ಬಿಸಿಕೊಂಡ. ಕಾಳಿಯನ ಮೈಯ ಬಂಧನದ ಬಿಗಿ ಸಡಿಲಿತು. ಒಡನೆ ಸಣ್ಣವನಾಗಿ ನುಸುಳಿ ಬಂಧನದಿಂದ ಹೊರಗೆ ಬಿದ್ದ. ಬಾಲ ಹಿಡಿದು ಹೆಡೆಯ ಮೇಲೇರಿ ತುಳಿಯಲು ತೊಡಗಿದ. ಕೊಡೆಯಂತೆ ಹರಡಿದ ಹೆಡೆಗಳನ್ನು ಒಂದೊಂದಾಗಿ ಲಯಬದ್ಧವಾಗಿ ತುಳಿಯುತ್ತ ತಾಂಡವವನ್ನೇ ಆಡಿದ.

ತಸ್ಯೋನ್ನತೇಷು ಸ ಫಣೇಷು ನನರ್ತ ಕೃಷ್ಣೋ
ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ।
ಆರ್ತೋ೯ ಮುಖೈರುರು ವಮನ್ ರುಧಿರಂ ಸ ನಾಗೋ
ನಾರಾಯಣಂ ತಮರಣಂ ಮನಸಾ ಜಗಾಮ ॥ ೪೦ ॥

ಕಾಲಿಯನಾಗನ ಉನ್ನತ ಫಣಗಳಲ್ಲಿ ಕೃಷ್ಣ ಕುಣಿದಾಡಿದ. ಬ್ರಹ್ಮಾದಿಗಳು ಹೂಮಳೆಗರೆದು ಸ್ತೋತ್ರ ಮಾಡಿದರು. ನಾಗ ಆರ್ತನಾಗಿ ಮುಖಗಳಿಂದ ಬಹಳ ರಕ್ತ ಕಾರುತ್ತ ಮನಸ್ಸಿನಿಂದ 'ಶ್ರೀಕೃಷ್ಣ ನಾರಾಯಣನೆ' ಎಂದು ತಿಳಿದು ಅವನನ್ನು ಶರಣು ಹೊಂದಿದ, ಹೋರಾಟ ನಿಲ್ಲಿಸಿದ.

'ಅರಣ' ಎಂದರೆ ಶರಣು ಹೊಂದುವುದೂ ಆಗಬಹುದು,
ಅ-ರಣ=ರಣವನ್ನು ಅಂದರೆ ಹೋರಾಟವನ್ನು ನಿಲ್ಲಿಸುವುದೂ ಆಗಬಹುದು.

ಅ ನೀನನದತ್ ಪದ್ಮಭವೋ ಮೃದಂಗಂ
ಜಗೌ ಹನೂಮಾನ್ ಜಗತಾಮಧೀಶಂ।
ಅದರ್ಶಯತ್ ತಾಲಗತೀಃ ಕಪರ್ದೀ
ನನರ್ತ ಗೋಪಾಲಕಬಾಲಮೌಲಿಃ ॥

'ಕೃಷ್ಣ ಕುಣಿದಾಗ ಬ್ರಹ್ಮ ಮೃದಂಗ ಬಾರಿಸಿದ, ಹನುಮ ಹಾಡಿದ, ಶಿವ ತಾಳ ಹಾಕಿದ' - ಎಂದು ರುಕ್ಮಿಣೀಶ ವಿಜಯ ವರ್ಣಿಸಿದೆ.

ತಚ್ಚಿತ್ರತಾಂಡವವಿರುಗ್ಣಫಣಾತಪತ್ರಂ
ರಕ್ತಂ ವಮಂತಮುರು ಸನ್ನಧಿಯಂ ನಿತಾಂತಮ್ ।
ದೃಷ್ಟ್ವಾಹಿರಾಜಮುಪಸೇದುರಮುಷ್ಯಪತ್ನ್ಯೋ
ನೇಮುಶ್ಚ ಸರ್ವಜಗದಾದಿಗುರುಂ ಭುವೀಶಮ್ ॥ ೪೧ ॥

ಕೃಷ್ಣನ ವಿಚಿತ್ರ ತಾಂಡವದಿಂದ ಕೊಡೆಯಂತೆ ಹರಡಿದ್ದ ಕಾಲಿಯನ ಹೆಡೆಗಳು ಜರ್ಜರಿತವಾದುವು. ಆತ ಬಹಳ ರಕ್ತ ಕಾರುತ್ತ ಬಹುವಾಗಿ ಬುದ್ಧಿಭ್ರಮಣ ಹೊಂದಿದ. ಈ ಅವಸ್ಥೆಯಲ್ಲಿ ಸರ್ಪರಾಜನನ್ನು ಕಂಡು ಅವನ ಪತ್ನಿಯರು ಕೃಷ್ಣನ ಬಳಿ ಬಂದರು. ಭೂಮಿಗೆ ಬಂದ ಸರ್ವಜಗದಾದಿ ಗುರುವಾದ ಪ್ರಭುವಿಗೆ ನಮಿಸಿದರು.

ತಾಭಿಃ ಸ್ತುತಃ ಸ ಭಗವಾನಮುನಾ ಚ ತಸ್ಮೈ
ದತ್ತಾಭಯಂ ಯಮಸಹೋದರವಾರಿತೋಽಮುಮ್ ।
ಉತ್ಸೃಜ್ಯ ನಿರ್ವಿಷಜಲಾಂ ಯಮುನಾಂ ಚಕಾರ
ಸಂಸ್ತೂಯಮಾನಚರಿತಃ ಸುರಸಿದ್ಧಸಾಧ್ಯೈಃ ॥ ೪೨ ॥

ಕಾಲಿಯನೂ ಅವನ ಪತ್ನಿಯರೂ ಸ್ತುತಿಸಿದರು. ಭಗವಂತ ಅವನಿಗೆ ಅಭಯ ನೀಡಿ ಯಮುನಾ ಜಲದಿಂದ ದೂರ ಕಳಿಸಿ ನೀರನ್ನು ವಿಷರಹಿತವನ್ನಾಗಿ ಮಾಡಿದ. ದೇವತೆಗಳೂ ಸಿದ್ಧರೂ ಸಾಧ್ಯರೂ ಕೃಷ್ಣನ ಲೀಲೆಯನ್ನು ಹೊಗಳಿದರು.

ಗರುಡ ಸರ್ಪಗಳನ್ನೆಲ್ಲ ಒಮ್ಮೆಗೇ ತಿನ್ನದಂತೆ 'ದಿನಕ್ಕೊಂದು ಸರ್ಪವನ್ನು ನಿನಗೆ ಆಹಾರ ನೀಡಲು ಕಳಿಸುವೆವೆ'ದು ಒಪ್ಪಂದ ಮಾಡಿಕೊಂಡಿದ್ದುವು. ಕಾಳಿಯನ ಸರದಿ ಬಂದಾಗ ಅವನು ಅಹಂಕಾರದಿಂದ ಗರುಡನಿಗೆ ಆಹಾರ ಕೊಡದೆ ತಾನೆ ತಿಂದು ಅವನೊಡನೆ ಹೋರಾಟಕ್ಕೇ ನಿಂತ. ಆದರೆ ಸೋತು ಪಲಾಯನ ಮಾಡಿದ. ಯಮುನೆಯ ಮಡುವಿನಲ್ಲಿ ಅವಿತುಕೊಂಡ. ಸೌಭರಿಮುನಿ ಗರುಡನಿಗೆ 'ನೀನು ಈ ಮಡುವಿಗೆ ಬಂದರೆ ಸಾಯುವಿ' ಎಂದು ಶಾಪನೀಡಿದ್ದರಿಂದ ಮಡು ಕಾಳಿಯನಿಗೆ ಅನುಕೂಲವಾದ ಸುರಕ್ಷಿತ ಸ್ಥಳವಾಗಿತ್ತು. ಕೃಷ್ಣ ಅವನನ್ನು ಅಲ್ಲಿಂದ ಹೊರಡಿಸುವಾಗ 'ನಿನ್ನ ತಲೆ ಮೇಲೆ ನನ್ನ ಹೆಜ್ಜೆಯ ಗುರುತು ಇದೆ. ಅದನ್ನು ಕಂಡು ಗರುಡ ನಿನ್ನನ್ನು ಬಿಟ್ಟುಬಿಡುತ್ತಾನೆ' ಎಂದು ಅಭಯ ನೀಡಿದ. ಅಮೃತಹಸ್ತದಿಂದ ತಲೆ ಮೈಸವರಿ ನೋವು ಕಳೆದು ಸಮುದ್ರದ ನಡುವಿನ ರಮಣದ್ವೀಪಕ್ಕೆ ಕಳಿಸಿದ. ಯಮುನೆಯ ನೀರನ್ನು ತನ್ನ ಅಮೃತಪೂರ್ಣ ದೃಷ್ಟಿಯಿಂದ ಕಂಡು ವಿಷರಹಿತವನ್ನಾಗಿ ಅಮೃತವನ್ನಾಗಿ ಮಾಡಿದ.

ಮೊದಲನೇ ದಾವಾಗ್ನಿ ಪಾನ

ಗೋಪೈರ್ಬಲಾದಿಭಿರುದೀರ್ಣತರಪ್ರಮೋದೈಃ
ಸಾರ್ಧಂ ಸಮೇತ್ಯ ಭಗವಾನರವಿಂದನೇತ್ರಃ।
ತಾಂ ರಾತ್ರಿಮತ್ರ ನಿವಸನ್ ಯಮುನಾತಟೇ ಸ
ದಾವಾಗ್ನಿಮುದ್ಧತಬಲಂ ಚ ಪಪೌ ವ್ರಜಾರ್ಥೇ ॥ ೪೩ ॥

ಬಲರಾಮನಿಗೂ ಇತರ ಗೋಪಾಲಕರಿಗೂ ಬಹಳ ಸಂತೋಷವಾಯಿತು. ನೀರಲ್ಲಿದ್ದ ಕಮಲಾಕ್ಷನಾದ ಭಗವಾನ್ ಕೃಷ್ಣ ದಡಕ್ಕೆ ಬಂದ. ಆಗ ರಾತ್ರಿಯಾದ್ದರಿಂದ ಎಲ್ಲರೊಂದಿಗೆ ಆ ರಾತ್ರಿ ಯಮುನಾ ತೀರದಲ್ಲಿಯೆ ವಾಸ ಮಾಡುತ್ತ ಅತ್ಯಂತ ಪ್ರಬಲವಾದ ಕಾಡುಗಿಚ್ಚನ್ನು ಗೋಕುಲದ ರಕ್ಷಣೆಗಾಗಿ ಕುಡಿದ.

ಉಗ್ರಾಸುರ ಸಂಹಾರ

ಇತ್ಥಂ ಸುರಾಸುರಗಣೈರವಿಚಿಂತ್ಯದಿವ್ಯ
ಕರ್ಮಾಣಿ ಗೋಕುಲಗತೇಽಗಣಿತೋರುಶಕ್ತೌ।
ಕುರ್ವತ್ಯಜೇ ವ್ರಜಭುವಾಮಭವದ್ ವಿನಾಶ
ಉಗ್ರಾಭಿಧಾದಸುರತಸ್ತರುರೂಪತೋಽಲಮ್ ॥ ೪೪ ॥

ಹೀಗೆ ಗೋಕುಲದಲ್ಲಿ ವಾಸ ಮಾಡುತ್ತಿದ್ದ ಅಪರಿಮಿತ ಮಹಾಶಕ್ತಿಉಳ್ಳ ಶ್ರೀಕೃಷ್ಣ ದೇವದಾನವ ಸಮೂಹಗಳಿಗೆ ಆಲೋಚಿಸಲೂ ಆಗದಂಥ ದಿವ್ಯ ಕಾರ್ಯಗಳನ್ನು ಮಾಡುತ್ತಿದ್ದಾಗ ವೃಕ್ಷರೂಪಿ ಉಗ್ರನಾಮಕ ಅಸುರನಿಂದ ಗೋಕುಲದವರಿಗೆ ಅಪಾಯ ಬಂದೊದಗಿತು.

ತದ್ಗಂಧತೋ ನೃಪಶುಮುಖ್ಯ ಸಮಸ್ತ ಭೂತಾ
ನ್ಯಾಪುರ್ಮೃತಿಂ ಬಹಲರೋಗನಿಪೀಡಿತಾನಿ।
ಧಾತುರ್ವರಾಜ್ಜಗದಭಾವ ಕೃತೈಕಬುದ್ಧಿ
ರ್ವಧ್ಯೋ ನ ಕೇನಚಿದಸೌ ತರುರೂಪದೈತ್ಯಃ ॥ ೪೫ ॥

ಆ ವೃಕ್ಷದ ದುರ್ಗಂಧದಿಂದ ಮನುಷ್ಯರು ಪಶುಗಳು ಮುಂತಾದ ಎಲ್ಲ ಜೀವಿಗಳೂ ಬಹಳ ರೋಗ ಪೀಡೆಗೊಳಗಾಗಿ ಮರಣ ಹೊಂದಿದುವು. ಜಗತ್ತಿನ ನಾಶ ಒಂದನ್ನೆ ಬಯಸಿದ ಆ ವೃಕ್ಷರೂಪಿ ದಾನವ ಬ್ರಹ್ಮನ ವರಬಲವಿದ್ದುದರಿಂದ ಯಾರಿಗೂ ವಧ್ಯನಾಗಿರಲಿಲ್ಲ.

ಸಂಕರ್ಷಣೇಽಪಿ ತದುದಾರವಿಷಾನುವಿಷ್ಟೇ
ಕೃಷ್ಣೋ ನಿಜಸ್ಪರ್ಶತಸ್ತಮಪೇತರೋಗಮ್।
ಕೃತ್ವಾಬಭಂಜ ವಿಷವೃಕ್ಷಮಮುಂ ಬಲೇನ
ತಸ್ಯಾನುಗೈಃ ಸಹ ತದಾಕೃತಿಭಿಃ ಸಮಸ್ತೈಃ ॥ ೪೬ ॥

ಅವನ ಮಹಾವಿಷ ಬಲರಾಮನಲ್ಲಿಯೂ ಪ್ರವೇಶಿಸಿತು. ಆಗ ಕೃಷ್ಣ ತನ್ನ ಅಂಗಸ್ಪರ್ಶದಿಂದ ಅವನ ಸಂತಾಪವನ್ನು ಪರಿಹರಿಸಿದ. ಬಲಿಷ್ಠನಾದ ಆ ವಿಷ ವೃಕ್ಷ ರೂಪಿ ದಾನವನ್ನೂ, ಜೊತೆಗೆ ಅದೇ ಆಕಾರವುಳ್ಳ ಅವನ ಎಲ್ಲ ಅನುಚರರನ್ನೂ ಕಿತ್ತಿದ.

ವಿಷದ ಹಾವುಗಳಿಗೆಲ್ಲ ರಾಜನಾದ ಶೇಷನ ಅವತಾರ ಬಲರಾಮ. ಅವನಿಗೂ ಈ ವಿಷವೃಕ್ಷದ ವಿಷವನ್ನು ತಡೆದುಕೊಳ್ಳಲಾಗಲಿಲ್ಲ ಮೂರ್ಛಿತನಾದ, ಎಂದಮೇಲೆ ಆ ವಿಷವೆಷ್ಟು ದಾರುಣವಿದ್ದೀತು? ಕೃಷ್ಣ ಬಲರಾಮನನ್ನು ಆಲಿಂಗಿಸಿ ತನ್ನ ಅಂಗಸ್ಪರ್ಶದಿಂದ ವಿಷಬಾಧೆಯನ್ನು ಪರಿಹರಿಸಿದ. ಉಗ್ರಾಸುರನ ಅನುಚರರೂ ಅವನಂತೆಯೆ ವೃಕ್ಷರೂಪದಿಂದ ಕಾಡಿನಲ್ಲೆಲ್ಲ ತುಂಬಿದ್ದರು. ಕೃಷ್ಣ ಈ ಎಲ್ಲ ವೃಕ್ಷಗಳನ್ನೂ ಬೇರು ಸಹಿತ ಕಿತ್ತ.

ದೈತ್ಯಾಂಶ್ಚ ಗೋವಪುಷ ಅತ್ತವರಾನ್ ವಿರಿಂಚಾತ್
ಮೃತ್ಯೂಜ್ಝಿತಾನಪಿ ನಿಪಾತ್ಯ ದದಾಹ ವೃಕ್ಷಾನ್ ।
ವಿಕ್ರೀಡ್ಯ ರಾಮಸಹಿತೋ ಯಮುನಾಜಲೇ ಸ
ನೀರೋಗಮಾಶು ಕೃತವಾನ್ ವ್ರಜಮಬ್ಜನಾಭಃ ॥ ೪೭ ॥

ಪದ್ಮನಾಭ ಬ್ರಹ್ಮದೇವನಿಂದ ವರ ಪಡೆದು ಮರಣರಹಿತರಾಗಿದ್ದ ಗೋರೂಪಿ ದೈತ್ಯರನ್ನು ಕೆಡಹಿ ಅವರನ್ನೂ ವೃಕ್ಷಗಳನ್ನೂ ಸುಟ್ಟ ಬಲರಾಮ ಸಹಿತನಾಗಿ ಯಮುನಾ ಜಲದಲ್ಲಿ ವಿಹರಿಸಿ ಗೋಕುಲವನ್ನು ಬೇಗನೆ ನೀರೋಗಿಯನ್ನಾಗಿ ಮಾಡಿದ.

ಉಗ್ರಾಸುರನ ಹೆಂಡಂದಿರು ಹಸುಗಳಾಗಿದ್ದರು. ಮಕ್ಕಳು ಕರುಗಳಾಗಿದ್ದರು. ಕೃಷ್ಣ ಅಸುರಸ್ವರೂಪಿ ವೃಕ್ಷಗಳನ್ನು ಕಿತ್ತು ಅವುಗಳಿಂದಲೆ ಅಸುರ ಸ್ವರೂಪಿ ಹಸುಕರುಗಳನ್ನು ಹೊಡೆದು ಕೊಂದ. ಬಳಿಕ ಆ ವೃಕ್ಷಗಳೊಂದಿಗೆ ಈ ಹಸುಕರುಗಳನ್ನು ಸುಟ್ಟು ಬೂದಿ ಮಾಡಿದ. ತಿರುಗಿ ಅವು ಹುಟ್ಟಬಾರದು ಎಂದು.

ನೀಲಾವಿವಾಹ

ಸಪ್ತೋತ್ಕ್ಷಣೋಽತಿಬಲವೀರ್ಯಯುತಾನದಮ್ಯಾನ್
ಸರ್ವೈರ್ಗಿರೀಶವರತೋ ದಿತಿಜಪ್ರಧಾನಾನ್ ।
ಹತ್ವಾಸುತಾಮಲಭದಾಶು ವಿಭುರ್ಯಶೋದಾ-
ಭ್ರಾತುಃ ಸ ಕುಂಭಕಸಮಾಹ್ವಯಿನೋಽಪಿ ನೀಲಾಮ್ ॥ ೪೮ ॥

ಶಿವವರದಿಂದ ಅತ್ಯಂತ ಬಲವೀರ್ಯ ಯುಕ್ತರೂ ಎಲ್ಲರಿಗೂ ಅದಮ್ಯರೂ ಆಗಿದ್ದ ಎತ್ತಿನ ರೂಪದ ಏಳು ಮಹಾದೈತ್ಯರನ್ನು ಕೃಷ್ಣ ಬೇಗನೆ ಕೊಂದು ಯಶೋದೆಯ ಸೋದರನಾದ ಕುಂಭಕನೆಂಬ ಹೆಸರಿನ ಗೊಲ್ಲನ ಮಗಳಾದ ನೀಲೆಯನ್ನು ಪಡೆದ.

ಏಳು ಎತ್ತುಗಳೂ ದೈತ್ಯರು, ಕಾಲನೇಮಿಪುತ್ರರು, ಹರಿವಂಶದಲ್ಲಿ ಕೃಷ್ಣ ಬಲರಾಮನಿಗೆ ಹಾಗೇ ಹೇಳುತ್ತಾನೆ-

ಕಾಲನೇಮಿಸುತಾ ಆರ್ಯ ಮಾಂ ಹಂತುಮಿಹ ಸಂಗತಾಃ।

'ಅಣ್ಣ ಕಾಲನೇಮಿಯ ಮಕ್ಕಳಾದ ಆ ಗೋರೂಪದ ದೈತ್ಯರು ನನ್ನನ್ನು ಕೊಲ್ಲಲು ಬಂದರು' ಅದರಿಂದ ಈ ಗೋವಧೆ ದೋಷವಲ್ಲ.

ಮುಂದೆ ಕೃಷ್ಣನ ಅಷ್ಟಮಹಿಷಿಯರಲ್ಲಿ ಒಬ್ಬಳು ನೀಲೆ ಬರುತ್ತಾಳೆ. ಅವಳು ನಗ್ನಜಿದ್ ರಾಜನ ಮಗಳು. ಇವಳು ಕುಂಭಕನೆಂಬ ಗೊಲ್ಲನ ಮಗಳು. ಇಬ್ಬರೂ ಸ್ವಯಂವರ ವಿಧಾನದಿಂದಲೆ ಕೃಷ್ಣನನ್ನು ವರಿಸಿದರು. ಸ್ವಯಂವರ ವಿಧಾನವೂ ಒಂದೇ. ಶಿವವರಬಲದಿಂದ ಅದಮ್ಯ ಹಾಗೂ ಅವಧ್ಯವಾದ ಏಳು ಎತ್ತುಗಳನ್ನು ಏಕಕಾಲದಲ್ಲಿ ಕಟ್ಟಿಹಾಕುವ ಪಣವನ್ನು ಗೆದ್ದರೆ ಕನ್ಯೆ ವರಮಾಲೆ ಹಾಕುತ್ತಾಳೆ ಎಂದು. ಇಬ್ಬರು ನೀಲೆಯರು ಬೇರೆ ಬೇರೆಯಾದರೆ 'ಅಷ್ಟಮಹಿಷಿ'ಯರು ಎನ್ನುವುದು ಕೂಡಲಾರದು. ಒಂಬತ್ತು ಮಹಿಷಿಯರೆನ್ನಬೇಕಾದೀತು. ಒಬ್ಬಳೆ ಎಂದರೆ ಕಾಲ ವ್ಯತ್ಯಾಸ ಕೂಡದು. ಈ ಸಮಸ್ಯೆಯನ್ನು ಶ್ರೀಮದಾಚಾರ್ಯರು ಮುಂದೆ (ಅ.20 ಶ್ಲೋಕ 47) ಒಬ್ಬಳೆ ನೀಲೆ ಎರಡು ಬಾರಿ ಜನಿಸಿದಳೆಂದೂ ಮೊದಲು ಜನಿಸಿದ ರೂಪ ಎರಡನೇ ರೂಪದೊಂದಿಗೆ ಸೇರಿ ಐಕ್ಯ ಹೊಂದಿತೆಂದೂ ಹೇಳಿದ್ದಾರೆ. ಆ ಏಳು ಎತ್ತುಗಳೂ ಈ ಏಳು ಎತ್ತುಗಳೂ ಪ್ರಾಯಃ ಬೇರೆಯಲ್ಲ. ಅವೂ ಎರಡು ಬಾರಿ ಹುಟ್ಟಿರಬೇಕು. ಏಕೆಂದರೆ ಇಲ್ಲಿ 'ಸಪ್ತೋತ್ಕ್ಷಣೋ ಹತ್ವಾ' ಏಳು ಎತ್ತುಗಳನ್ನೂ ಕೊಂದು ಎಂದಿದೆ. ಅಲ್ಲಿ 'ಸಪ್ತ ವೃಷಾನಗೃಹ್ಣಾತ್' ಏಳು ಎತ್ತುಗಳನ್ನು ಹಿಡಿದು ಕಟ್ಟಿದ ಎಂದಿದೆ. ಎತ್ತುಗಳನ್ನು ಕೊಲ್ಲುವುದು ಸ್ವಯಂವರದ ಪಣವಾಗಿರಲಾರದು. ಆದರೂ ಶಿವಧನುಸ್ಸನ್ನು ರಾಮ ಹೆದೆ ಏರಿಸದೆ ಮುರಿದಂತೆ ಕೃಷ್ಣನೂ ಎತ್ತುಗಳನ್ನು ಕಟ್ಟಿಹಾಕದೆ ಕೊಂದಿರಬೇಕು. ಅವು ಸತ್ತ ಎರಡನೆ ಸ್ವಯಂವರ ಕಾಲದಲ್ಲಿ ಪುನರ್ಜನ್ಮ ಹೊಂದಲು ಅಣಿಯಾಗಿರಬೇಕು. ರುಕ್ಮಿಣೀಶ ವಿಜಯದಲ್ಲಿ(5-20)

ನೀಲಾಂ ಕುಂಭಕ ಸಂಭವಾಮಲಭತ ಸ್ವೀಯಾಂ ಸ ಜಿತ್ವಾವೃಷಾನ್।

-ಎಂಬಲ್ಲಿ ಎತ್ತುಗಳನ್ನು 'ಜಿತ್ವಾ' ಗೆದ್ದು ಎಂದಿದೆ. ಕೊಂದು ಎಂದು ಸ್ಪಷ್ಟ ಹೇಳಿಲ್ಲ. ಆದರೆ ನಿರ್ಣಯಾನುಸಾರ ಅದೇ ಅಭಿಪ್ರಾಯ ಹೇಳಬೇಕು.

ಗರುಡಪುರಾಣ ಬ್ರಹ್ಮಕಾಂಡದಲ್ಲಿ ನೀಲೆ ಪಿತೃದೇವತೆಗಳಲ್ಲಿ ಒಬ್ಬನಾದ ಕವ್ಯಬಾಲನ ಪುತ್ರಿ. ಅವಳು ಶ್ರೀಹರಿಯನ್ನು ಪಡೆಯಲು ತಪಸ್ಸು ಮಾಡಿ ವರಪಡೆದಿದ್ದಳು. ಬಳಿಕ ಕವ್ಯಬಾಲನು ಕುಂಭಕನಾಗಿ ಹುಟ್ಟಿದ. ನೀಲೆ ನೀಲೆ ಎಂಬ ಹೆಸರಿನಿಂದಲೆ ಅವನ ಮಗಳಾಗಿ ಹುಟ್ಟಿದಳು. ಕೃಷ್ಣ ಆಗ,

ದಿತಿಜಾನ್ ತಾನ್ ನಿಹತ್ಯೈವ ನೀಲಾಮಾಪ ಖಗೇಶ್ವರ।

'ಎತ್ತುಗಳಾಗಿ ಹುಟ್ಟಿದ ಏಳುಮಂದಿ ದೈತ್ಯರನ್ನು 'ಕೊಂದು' ನೀಲೆಯನ್ನು ಮದುವೆಯಾದ'.

ಯಾ ಪೂರ್ವಜನ್ಮನಿ ತಪಃ ಪ್ರಥಮೈವ ಭಾರ್ಯಾ
ಭೂಯಾಸಮಿತ್ಯಚರದಸ್ಯ ಹಿ ಸಂಗಮೋ ಮೇ।
ಸ್ಯಾತ್ ಕೃಷ್ಣಜನ್ಮನಿ ಸಮಸ್ತವರಾಂಗನಾಭ್ಯಃ
ಪೂರ್ವಂ ತ್ವಿತಿ ಸ್ಮ ತದಿಮಾಂ ಪ್ರಥಮಂ ಸ ಆಪ ॥ ೪೯ ॥

ನೀಲಾದೇವಿ ಪೂರ್ವಜನ್ಮದಲ್ಲಿ ಶ್ರೀಹರಿಗೆ ಕೃಷ್ಣಾವತಾರದಲ್ಲಿ ತಾನು ಮೊದಲನೆಯ ಪತ್ನಿಯಾಗಬೇಕೆಂದೂ ಎಲ್ಲ ಉತ್ತಮ ಸ್ತ್ರೀಯರಿಗಿಂತಲೂ ಮೊದಲೆ ತನಗೆ ಅವನ ಅಂಗಸಂಗವಾಗಬೇಕೆಂದೂ ತಪಸ್ಸು ಮಾಡಿದ್ದಳು. ಅದರಿಂದ ಕೃಷ್ಣ ಎಲ್ಲ ಸ್ತ್ರೀಯರಿಗಿಂತ ಮೊದಲಿಗೆ ಅವಳನ್ನೇ ಮದುವೆಯಾದ.

ಬರಿ ಅಂಗಸಂಗಗಳನ್ನು ಬೇಡಿದರೆ ಪರಭಾರ್ಯೆಯರಾದ ಗೋಪಾಂಗನೆಯರಿಗೂ ಅಂಗಸಂಗ ಕೊಟ್ಟಿದ್ದಾನೆ. ಅದು ಅವರಿಗೆ ಪೂರ್ವಜನ್ಮದಲ್ಲಿ ಅಪ್ಸರೆಯರಾದ್ದರಿಂದ ಯೋಗ್ಯವೆ. ತಾನು ಷಣ್ಮಹಿಷಿಯರಲ್ಲಿ ಒಬ್ಬಳಾದ್ದರಿಂದ ಅಂಥ ಅಂಗಸಂಗ ಬೇಡ. ತಾನು ಭಾರ್ಯೆಯಾಗಬೇಕೆಂದು ಬೇಡಿದರೆ, ಭಾರ್ಯೆಯೆ ಆದ ನಂದಕುಮಾರಿಗೆ ಅಂಗಸಂಗ ಸಿಗದಿದ್ದುದರಿಂದ ತನಗೂ ಹಾಗೆ ಆಗುವ ಭಯವಿಲ್ಲದಿಲ್ಲ. ಅದಕ್ಕಾಗಿ ತಾನು ಹರಿಯ ಭಾರ್ಯೆಯೂ ಆಗಬೇಕು, ಅವನ ಅಂಗಸಂಗವನ್ನೂ ಪಡೆಯಬೇಕೆಂದು ಎರಡು ವರಗಳನ್ನು ಪಡೆದಳು ಎನ್ನುತ್ತದೆ ವಾದಿರಾಜೀಯ.[1]

ಅಗ್ರೇ ದ್ವಿಜತ್ವತ ಉಪಾವಹದೇಷ ನೀಲಾಂ
ಗೋಪಾಂಗನಾ ಅಪಿ ಪುರಾ ವರಮಾಪಿರೇ ಯತ್।
ಸಂಸ್ಕಾರತಃ ಪ್ರಥಮಮೇವ ಸುಸಂಗಮೋ ನೋ
ಭೂಯಾತ್ ತವೇತಿ ಪರಮಾಪ್ಸರಸಃ ಪುರಾ ಯಾಃ ॥ ೫೦ ॥

ಉಪನಯನ ಸಂಸ್ಕಾರಕ್ಕಿಂತ ಮೊದಲಿಗೇ ನಿನ್ನ ಸಂಗ ನಮಗಾಗಲೆಂದು ಹಿಂದೆ

---

1. ಗೋಪಾಂಗನಾವತ್ ಪರಭಾರ್ಯಾಯಾಃ ಸತ್ಯಾ ಅಂಗಸಂಗೋ ಮಾ ಭೂದಿತಿ ಭಾವೇನ ಭಾರ್ಯ್ಯೈವ ಭೂಯಾಸಮಿತ್ಯುಕ್ತಂ। ಸ್ವಭಾವತೋ ಭಾರ್ಯಾಯಾಃ ನಂದಕುಮಾರ್ಯಾ ಅಂಗಸಂಗಾಭಾವಾತ್ ಉಭಯಮಪಿ ಪ್ರಾರ್ಥಿತ ಮಿತಿ ಜ್ಞೇಯಂ। -ವಾದಿರಾಜೀಯ

ಉತ್ತಮ ಅಪ್ಸರೆಯರಾಗಿದ್ದ ಗೋಪಾಂಗನೆಯರೂ ವರ ಪಡೆದಿದ್ದರಿಂದ ಕೃಷ್ಣ ಉಪನಯಕ್ಕಿಂತ ಮೊದಲಿಗೇ ನೀಲೆಯನ್ನು ಮದುವೆಯಾದ.

'ಗೋಪ ಕನ್ಯೆಯರು' ಎನ್ನದೆ 'ಗೋಪಾಂಗನೆಯರು' ಎಂದುದರಿಂದ ಗೋಪಕನ್ನೆಯರು ಮಾತ್ರವಲ್ಲದೆ ವಿವಾಹಿತೆಯರಾದ ಗೋಪಸ್ತ್ರೀಯರೂ ಕೃಷ್ಣನ ಅಂಗಸಂಗ ಪಡೆದರು. ಅವರೆಲ್ಲರೂ ಹಿಂದೆ ಉಪನಯನಕ್ಕಿಂತ ಮೊದಲೇ ಕೃಷ್ಣನ ಅಂಗಸಂಗವಾಗಲೆಂದು ವರ ಪಡೆದಿದ್ದರು. ವಿವಾಹವನ್ನು ಬೇಡಿರಲಿಲ್ಲ. ಏಕೆಂದರೆ ಮೂಲತಃ ಅವರು ಅಪ್ಸರೆಯರು. ಅವರಿಗೆ ವಿವಾಹ ಬೇಕಾಗಿಲ್ಲ. ಕೃಷ್ಣನಿಗೆ ಉಪನಯನವಾಯಿತೆಂದರೆ ಬ್ರಹ್ಮಚಾರಿಯಾಗಿ ಸ್ತ್ರೀಸಂಗ ಬಿಟ್ಟುಬಿಡುತ್ತಾನೆ ಎಂದು ಉಪನಯನಕ್ಕಿಂತ ಮೊದಲೆ ಅಂಗಸಂಗವಾಗಲೆಂದು ವರಬೇಡಿದ್ದರು. ಹೀಗಾಗಿ ಅವರಿಗೆ ಉಪನಯನಕ್ಕಿಂತ ಮೊದಲೇ ಅಂಗಸಂಗ ನೀಡುವುದಾದರೆ ನೀಲೆ ಎಲ್ಲ ಸ್ತ್ರೀಯರಿಗಿಂತ ಮೊದಲಿಗೇ ಅದನ್ನು ಬೇಡಿದ್ದರಿಂದ ಅವಳನ್ನು ಉಪನಯನಕ್ಕಿಂತ ಮೊದಲೆ ಮದುವೆಯಾಗಬೇಕಾಯಿತು.

ಧೇನುಕಾಸುರ ಸಂಹಾರ

ತತ್ರಾಥ ಕೃಷ್ಣಮವದನ್ ಸಬಲಂ ವಯಸ್ಯಾಃ
ಪಕ್ವಾನಿ ತಾಲಸುಫಲಾನ್ಯನುಭೋಜಯೇತಿ।
ಇತ್ಯರ್ಥಿತಃ ಸಬಲ ಆಪ ಸ ತಾಲವೃಂದಂ
ಗೋಪೈರ್ದುರಾಸದಮತೀವ ಹಿ ಧೇನುಕೇನ ॥ ೫೧ ॥

ಬಲರಾಮ ಸಮೇತನಾದ ಕೃಷ್ಣನ ಬಳಿ ಒಮ್ಮೆ ಜೊತೆಯ ಬಾಲಕರು ಹೇಳಿದರು, 'ನಮಗೆ ಮಾಗಿದ ತಾಳೆಹಣ್ಣುಗಳನ್ನು ಉಣಿಸು' ಎಂದು. ಅವರು ಹೀಗೆ ಬೇಡಿದಾಗ ಕೃಷ್ಣ ಬಲರಾಮ ಸಮೇತನಾಗಿ ತಾಳೆ ಮರಗಳ ತೋಪನ್ನು ಪ್ರವೇಶಿಸಿದ. ಅಲ್ಲಿ ಧೇನುಕಾಸುರನಿದ್ದುದರಿಂದ ಗೋವಳರಿಗೆ ಅದು ಅತ್ಯಂತ ದುರ್ಗಮವೆನಿಸಿತ್ತು.

ವಿಘ್ನೇಶತೋ ವರಮವಾಪ್ಯ ಸುದುಷ್ಟದೈತ್ಯೋ
ದೀರ್ಘಾಯುರುತ್ತಮಬಲಃ ಕದನಪ್ರಿಯೋಽಭೂತ್।
ನಿತ್ಯೋದ್ಧತಃ ಸ ಉತ ರಾಮಮವೇಕ್ಷ್ಯ ತಾಲ
ವೃಂದಾತ್ ಫಲಾನಿ ಗಲಯಂತಮಧಾಭ್ಯದಾವತ್ ॥ ೫೨ ॥

ಧೇನುಕಾಸುರ ಬಲು ದುಷ್ಟನಾದ ದೈತ್ಯ. ಗಣಪತಿಯಿಂದ ವರ ಪಡೆದು ಚಿರಾಯುವಾಗಿದ್ದ. ಉತ್ತಮ ಬಲಶಾಲಿಯಾಗಿ ಯುದ್ಧಪ್ರಿಯನಾಗಿದ್ದ. ಸದಾ

ಅಹಂಕಾರಿಯಾಗಿದ್ದ. ಬಲರಾಮ ತಾಳೆಯ ತೋಪಿನಿಂದ ಹಣ್ಣುಗಳನ್ನು ಉದುರಿಸುತ್ತಿದ್ದುದನ್ನು ಕಂಡು ಅಲ್ಲಿಗೆ ಧಾವಿಸಿ ಬಂದ.

ತಸ್ಯ ಪ್ರಹಾರಮಭಿಕಾಂಕ್ಷತ ಆಶು ಪೃಷ್ಠ
ಪಾದೌ ಪ್ರಗೃಹ್ಯ ತೃಣರಾಜಶಿರೋಽಹರತ್ ಸಃ।
ತಸ್ಮಿನ್ ಹತೇ ಖರತರೇ ಖರರೂಪದೈತ್ಯೇ
ಸರ್ವೇ ಖರಾಶ್ಚ ಖರತಾಲವನಾಂತರಸ್ಥಾಃ।
ಪ್ರಾಪುಃ ಖರಸ್ವರತರಾಃ ಖರರಾಕ್ಷಸಾರಿಂ
ಕೃಷ್ಣಂ ಬಲೇನ ಸಹಿತಂ ನಿಹತಾಶ್ಚತೇನ ॥ ೫೩ ॥

ಬಲರಾಮ ತನ್ನನ್ನು ಒದೆಯಲು ಬಯಸಿದ್ದ ಧೇನುಕನ ಹಿಂಗಾಲುಗಳನ್ನೆತ್ತಿ ತಾಳೆಮರದ ತುದಿಗೆ ಎಸೆದ. ಕತ್ತೆಯ ರೂಪದ ಅತಿಕ್ರೂರನಾದ ಆ ದೈತ್ಯ ಹತನಾದ. ಆಗ ತಾಳೆಯ ತೋಪಿನೊಳಗಿದ್ದ ಅತಿ ಕರ್ಕಶ ಧ್ವನಿಯ ಎಲ್ಲ ಕತ್ತೆಗಳೂ ಕ್ರೂರ ರಾಕ್ಷಸ ಶತ್ರುವಾದ ಬಲರಾಮ ಸಮೇತನಾದ ಕೃಷ್ಣನನ್ನು ಮುತ್ತಿದರು ಮತ್ತು ಅವನಿಂದ ಹತರಾದರು.

ಸರ್ವಾನ್ ನಿಹತ್ಯ ಖರರೂಪಧರಾನ್ ಸ ದೈತ್ಯಾನ್
ವಿಘ್ನೇಶ್ವರಸ್ಯ ವರತೋಽನ್ಯಜನೈರವಧ್ಯಾನ್।
ಪಕ್ವಾನಿ ತಾಲಸುಫಲಾನಿ ನಿಜೇಪು ಚಾದಾದ್
ದುರ್ವಾರ ಪೌರುಷಗುಣೋದ್ಭರಿತೋ ರಮೇಶಃ ॥ ೫೪ ॥

ಗಣಪತಿಯ ವರದಿಂದ ಬೇರೆಯವರಿಗೆ ಅವಧ್ಯರಾಗಿದ್ದ ಕತ್ತೆರೂಪದ ಎಲ್ಲ ದೈತ್ಯರನ್ನು ಕೊಂದು ಮಾಗಿದ ಒಳ್ಳೆಯ ತಾಳೆಹಣ್ಣುಗಳನ್ನು ತನ್ನವರಿಗೆ ನೀಡಿದ. ಅಪ್ರತಿಹತ ಪೌರುಷಗುಣ ಭರಿತನಾದ ರಮೇಶ.

ಪ್ರಲಂಬಾಸುರ ಸಂಹಾರ

ಪಕ್ಷದ್ವಯೇನ ವಿಹರತ್ಸ್ವಥ ಗೋಪಕೇಷು
ದೈತ್ಯಃ ಪ್ರಲಂಬ ಇತಿ ಕಂಸವಿಸೃಷ್ಟ ಆಗಾತ್।
ಕೃಷ್ಣಸ್ಯ ಪಕ್ಷಪು ಜಯತ್ಸು ಸ ರಾಮಮೇತ್ಯ
ಪಾಪಃ ಪರಾಜಿತ ಉಪಾಹ ತಮುಗ್ರರೂಪಃ ॥ ೫೫ ॥

ಗೋಪಾಲಕರು ಎರಡು ತಂಡಗಳಾಗಿ ಆಟವಾಡುತ್ತಿದ್ದಾಗ ಕಂಸ ಕಳಿಸಿದ ಪ್ರಲಂಬನೆಂಬ ದೈತ್ಯ ಬಂದ. ಕೃಷ್ಣನ ಪಕ್ಷದವರು ಗೆದ್ದಾಗ ಉಗ್ರರೂಪದ ಪಾಪಿ ದೈತ್ಯ ಪರಾಜಿತನಾಗಿ ಬಲರಾಮನ ಬಳಿ ಬಂದು ಅವನನ್ನು ಹೊತ್ತುಕೊಂಡ.

ಕೃಷ್ಣನ ತಂಡ, ರಾಮನ ತಂಡವೆಂದು ಗೋಪಬಾಲಕರು ಎರಡು ತಂಡಗಳಾಗಿ ವಿಷ್ಣುಪುರಾಣ ಹೇಳುವಂತೆ 'ಹರಿಣಾಕ್ರೀಡನ' ಎಂಬ ಹೆಸರಿನ ಆಟ ತೊಡಗಿದರು. ಕೃಷ್ಣನ ತಂಡದ ಒಬ್ಬ ಬಾಲಕ ರಾಮನ ತಂಡದ ಒಬ್ಬ ಬಾಲಕನೊಡನೆ ಸ್ಪರ್ಧಿಸುತ್ತ ಭಾಂಡೀರವೆಂಬ ಒಂದು ಆಲದ ಮರದ ವರೆಗೆ ಓಡಿ ಹಿಂತಿರುಗಿ ಬರಬೇಕು. ಮೊದಲು ಬಂದವರು ಗೆಲ್ಲುತ್ತಾನೆ. ಗೆದ್ದವನನ್ನು ಸೋತವ ಹೊತ್ತುಕೊಂಡು ಅದೇ ಭಾಂಡೀರ ವೃಕ್ಷದವರೆಗೆ ಹೋಗಿ ಬರಬೇಕು. ಪ್ರಲಂಬಾಸುರ ರಾವಣನಂಥ ಬಲಶಾಲಿ. ಷಣ್ಮುಖನ ವರದಿಂದ ಅವಧ್ಯ. ಆದರೂ ಕೃಷ್ಣನನ್ನು ಹೊತ್ತು ಓಡುವ ಧೈರ್ಯ ಮಾಡದೆ ಕೃಷ್ಣನ ತಂಡವನ್ನು ಸೇರಿ ಆ ತಂಡದಲ್ಲಿ ಬೇರೆ ಎಲ್ಲ ಗೆದ್ದರೂ ತಾನು ಮಾತ್ರ ಬೇಕೆಂದೇ ಸೋತು ಆಟದ ನಿಯಮಾನುಸಾರ ಗೆದ್ದ ಬಲರಾಮನನ್ನು ಹೊತ್ತು ಓಡಿದ. ಭಾಂಡೀರ ವೃಕ್ಷದಿಂದಲೂ ಮುಂದೆ ಓಡಿದ.

ಭೀತೇನ ರೋಹಿಣಿಸುತೇನ ಹರಿಃ ಸ್ತುತೋಽಸೌ
ಸ್ವಾವಿಷ್ಟತಾಮುಪದಿದೇಶ ಬಲಾಭಿಪೂರ್ತ್ಯೈ ।
ತೇನೈವ ಪೂರಿತಬಲೋಽಬರಚಾರಿಣಂ ತಂ
ಪಾಪಂ ಪ್ರಲಂಬಮುರುಮುಷ್ಟಿಹತಂ ಚಕಾರ ॥ ೫೬ ॥

ಬಲರಾಮ ಭೀತನಾಗಿ ಕೃಷ್ಣನನ್ನು ಸ್ತುತಿಸಿದ. ಕೃಷ್ಣ ಅವನಲ್ಲಿ ಬಲವನ್ನು ತುಂಬುವುದಕ್ಕಾಗಿ ತಾನು ಆವೇಶಗೊಂಡಿರುವುದನ್ನು ತಿಳಿಸಿದ. ಅದರಿಂದ ತುಂಬಿದ ಬಲ ಉಳ್ಳವನಾದ ಬಲರಾಮ ಆಕಾಶದಲ್ಲಿ ಸಂಚರಿಸುತ್ತಿದ್ದ ಆ ಪ್ರಲಂಬನನ್ನು ದೃಢಮುಷ್ಟಿಯಿಂದ ಹೊಡೆದು ಕೊಂದ.

ಬಲರಾಮನನ್ನು ಹೊತ್ತು ಓಡುತ್ತಿದ್ದ ಅಸುರ ನೆಲದಲ್ಲಿ ಓಡುವುದನ್ನು ಬಿಟ್ಟು ಆಕಾಶದಲ್ಲಿ ಹಾರತೊಡಗಿದ. ಬಲರಾಮ ಭೀತನಾದ. ಕೃಷ್ಣ ನೀನೆ ರಕ್ಷಿಸಬೇಕೆಂದು ಸ್ತುತಿಸಿದ. ಆಗ ಕೃಷ್ಣ ಅವನಲ್ಲಿ ಶಕ್ತಿ ತುಂಬುವುದಕ್ಕಾಗಿ 'ಅಣ್ಣ ನಿನ್ನಲ್ಲಿ ನಾನು ಶುಕ್ಲಕೇಶರೂಪದಿಂದ ಆವಿಷ್ಟನಾಗಿದ್ದೇನೆ ಭಯಪಡಬೇಡ. ಅಸುರನನ್ನು ನೀನು ಕೊಲ್ಲಬಲ್ಲೆ' ಎಂದು ಹುರಿದುಂಬಿಸಿದ. ಒಡನೆ ಬಲರಾಮನಲ್ಲಿ ಶಕ್ತಿ ವ್ಯಕ್ತವಾಯಿತು. ಅದರಿಂದ ಅಸುರನ ತಲೆಯನ್ನು ಬಲವಾಗಿ ಗುದ್ದಿ ಕೊಂದ. ಹೀಗೇ ಶುಕ್ಲಕೇಶಾವೇಶ ಬಲದಿಂದಲೇ ಧೇನುಕನನ್ನೂ ಬಲರಾಮ ಕೊಂದುದರಿಂದ ಕೃಷ್ಣನೆ ಬಲರಾಮನ ಕೈಯಿಂದ ಕೊಲ್ಲಿಸಿದ್ದರಿಂದ 'ಧೇನುಕಾಸುರ ಭಂಜನಃ' ಎಂದು ಕೃಷ್ಣೋಷ್ಟೋತ್ತರ ಶತನಾಮಗಳಲ್ಲಿ ಒಂದು ನಾಮ ಬರುತ್ತದೆ. ಹರಿಕಥಾಮೃತಸಾರ ಕರುಣಾಸಂಧಿಯಲ್ಲಿ ದಶಾವತಾರಗಳ ನಡುವೆ,

'ಧೇನುಕಾಸುರ ಮಥನ, ತ್ರಿಪುರದ ಹಾನಿಗೈಸಿದ ನಿಪುಣ' ಎಂದು ಹೇಳಿದುದೂ ಇದೇ ಅಭಿಪ್ರಾಯದಿಂದ.

ಎರಡನೇ ದಾವಾಗ್ನಿ ಪಾನ

ತಸ್ಮಿನ್ ಹತೇ ಸುರಗಣಾ ಬಲದೇವನಾಮ
ರಾಮಸ್ಯ ಚಕ್ರುರತಿತೃಪ್ತಿಯುತಾ ಹರಿಶ್ಚ।
ವಹ್ನಿಂ ಪಪೌ ಪುನರಪಿ ಪ್ರದಹಂತಮುಚ್ಚೈಃ
ಗೋಪಾಂಶ್ಚ ಗೋಗಣಮಗಣ್ಯಗುಣಾರ್ಣವೋಽಪಾತ್ ॥ ೫೭ ॥

ಪ್ರಲಂಬಾಸುರ ಹತನಾದಾಗ ಅತ್ಯಂತ ತೃಪ್ತರಾದ ದೇವತೆಗಳ ಗುಂಪುಗಳು ರಾಮನಿಗೆ ಬಲದೇವನೆಂದು ನಾಮಕರಣ ಮಾಡಿದವು. ಎಣಿಸಲಾಗದ ಗುಣಗಳ ಸಮುದ್ರನಾದ ಕೃಷ್ಣ ಇನ್ನೊಮ್ಮೆ ಬಹಳ ಸುಡುವ ಬೆಂಕಿಯನ್ನು ಕುಡಿದ. ಗೋಪರನ್ನೂ ಗೋವುಗಳ ಹಿಂಡನ್ನೂ ರಕ್ಷಿಸಿದ.

ಪ್ರಲಂಬವಧೆಯ ಗೊಂದಲದಲ್ಲಿ ಗೋವುಗಳ ಕಡೆಗೆ ಯಾರೂ ಲಕ್ಷ್ಯವಿಡಲಿಲ್ಲ. ಅವು ಭಾಂಡೀರದಿಂದ ಬಲು ದೂರಕ್ಕೆ ಹೋಗಿ ಮುಂಜಾಟವಿಯನ್ನು ಪ್ರವೇಶಿಸಿದುವು. ಗೋಪಾಲಕರಿಗೆ ಇದು ತಿಳಿಯಲಿಲ್ಲ. ಅವರು ಕಳವಳಗೊಂಡರು. ಆದಕ್ಕೆ ಕೃಷ್ಣ ಒಂದು ಎತ್ತರದ ಮರವೇರಿ ನಿಂತು ಗೋವುಗಳ ಹೆಸರು ಹಿಡಿದು ಕೂಗಿಕರೆದ. ಆಗ ಅವು ಪ್ರತಿಯಾಗಿ ಕೂಗಿದುವು. ಎಲ್ಲರೂ ಮುಂಜಾಟವಿಗೆ ಬಂದರು. ಅಲ್ಲಿ ಕಾಳ್ಗಿಚ್ಚು ಸುತ್ತುವರಿಯಿತು. ಕೃಷ್ಣನೆಂದ 'ಎಲ್ಲರೂ ಕಣ್ಣುಮುಚ್ಚಿರಿ' ಅವರು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಕೃಷ್ಣ ಬೆಂಕಿಯನ್ನು ಕುಡಿದಿದ್ದ. ಇದು ಎರಡನೆ ಬಾರಿ ಕಾಳ್ಗಿಚ್ಚಿನ ಪಾನ.

ವಿಪ್ರಪತ್ನಿಯರಲ್ಲಿ ಅನ್ನಯಾಚನೆ

ಕೃಷ್ಣಂ ಕದಾಚಿದತಿದೂರಗತಂ ವಯಸ್ಯಾ
ಊಚುಃ ಕ್ಷುಧಾರ್ದಿತತರಾ ವಯಮಿತ್ಯುದಾರಮ್।
ಸೋಽಪ್ಯಾಹ ಸತ್ರಮಿಹ ವಿಪ್ರಗಣಾಶ್ಚರಂತಿ
ತಾನ್ ಯಾಚತೇತಿ ಪರಿಪೂರ್ಣ ಸಮಸ್ತಕಾಮಃ ॥ ೫೮ ॥

ಒಮ್ಮೆ ಗೋಕುಲದಿಂದ ಬಲುದೂರಕ್ಕೆ ಬಂದಿದ್ದ ಸರ್ವೋತ್ತಮನಾದ ಕೃಷ್ಣನಲ್ಲಿ ಜೊತೆಯ ಬಾಲಕರು 'ನಾವು ಹಸಿವಿನಿಂದ ಬಹಳ ಪೀಡಿತರಾಗಿದ್ದೇವೆ' ಎಂದರು.

ಪರಿಪೂರ್ಣ ಸಮಸ್ತ ಕಾಮನಾದ ಕೃಷ್ಣ ಹೇಳಿದ, 'ಇಲ್ಲಿಯೆ ಸಮೀಪದಲ್ಲಿ ಬ್ರಾಹ್ಮಣರು ಸತ್ರ ಮಾಡುತ್ತಿದ್ದಾರೆ, ಅವರಲ್ಲಿ ಅನ್ನ ಬೇಡಿರಿ' ಎಂದು.

ಸತ್ರವೆಂದರೆ ಒಂದು ಬಗೆಯ ಯಾಗ. ಬೇರೆ ಯಾಗಗಳಲ್ಲಿ ಒಬ್ಬ ಯಜಮಾನ. ಯಜಮಾನ ಪತ್ನಿ ಹದಿನಾರು ಮಂದಿ ಋತ್ವಿಜರು ಇರುತ್ತಾರೆ. ಯಾಗಫಲ ಯಜಮಾನನಿಗೆ. ಋತ್ವಿಜರಿಗೆ ದಕ್ಷಿಣೆ ಮಾತ್ರ. ಸತ್ರದಲ್ಲಿ ಋತ್ವಿಜರೆಲ್ಲರೂ ಯಜಮಾನರೂ ಆಗಿರುತ್ತಾರೆ. ಯಾಗ ಫಲವಾದ ಸ್ವರ್ಗಾದಿಗಳು ಅವರಿಗೂ ಲಭಿಸುತ್ತದೆ. ಬ್ರಾಹ್ಮಣರು ಇಂಥ ಆಂಗಿರಸ ಎಂಬ ಒಂದು ಸತ್ರಯಾಗದಲ್ಲಿ ನಿರತರಾಗಿದ್ದರು. ಕೃಷ್ಣ ಅವರ ಬಳಿಗೆ ಗೊಲ್ಲ ಬಾಲಕರನ್ನು ಕಳಿಸಿದ.

ತಾನ್ ಪ್ರಾಪ್ಯ ಕಾಮಮನವಾಪ್ಯ ಪುನಶ್ಚ ಗೋಪಾಃ
ಕೃಷ್ಣಂ ಸಮೀಯುರಥ ತಾನವದತ್ ಸ ದೇವಃ।
ಪತ್ನೀಃ ಸಮರ್ಥಯತ ಮದ್ವಚನಾದಿತಿ ಸ್ಮ
ಚಕ್ರುಶ್ಚತೇ ತದಪಿ ತಾ ಭಗವಂತಮಾಪುಃ ॥ ೫೯ ॥

ಗೋಪಾಲಕರು ಬ್ರಾಹ್ಮಣರ ಬಳಿಗೆ ಹೋದರೂ ಬೇಡಿದುದನ್ನು ಪಡೆಯದೆ ತಿರುಗಿ ಕೃಷ್ಣನ ಬಳಿಗೆ ಬಂದರು. ಅವರಿಗೆ ದೇವ ಹೇಳಿದ, 'ಪತ್ನಿಯರಲ್ಲಿ ಕೇಳಿರಿ, ನಾನು ಹೇಳಿದೆನೆಂದೂ ಹೇಳಿರಿ' ಎಂದು. ಅವರು ಹಾಗೇ ಮಾಡಿದರು. ಆಗ ಪತ್ನಿಯರು ಭಗವಂತನ ಬಳಿಗೇ ಬಂದರು.

ತಾಃ ಷಡ್ವಿಧಾನ್ನಪರಿಪೂರ್ಣಕರಾಃ ಸಮೇತಾಃ
ಪ್ರಾಪ್ತಾ ವಿಸೃಜ್ಯ ಪತಿಪುತ್ರ ಸಮಸ್ತಬಂಧೂನ್ ।
ಆತ್ಮಾರ್ಚನೈಕಪರಮಾ ವಿಸಸರ್ಜ ಕೃಷ್ಣ
ಏಕಾ ಪತಿಪ್ರವಿಧೃತಾ ಪದಮಾಪ ವಿಷ್ಣೋಃ ॥ ೬೦ ॥

ಪತಿಪುತ್ರರನ್ನೂ ಎಲ್ಲ ಬಂಧುಗಳನ್ನೂ ಬಿಟ್ಟು ಕೈತುಂಬ ಷಡ್ರಸಾನ್ನ ಹಿಡಿದುಕೊಂಡು ತನ್ನ ಆರಾಧನೆಯ ಒಂದೇ ಉದ್ದೇಶದಿಂದ ಬಂದ ವಿಪ್ರಪತ್ನಿಯರನ್ನು ಕೃಷ್ಣ ಹಿಂದೆ ಕಳಿಸಿಕೊಟ್ಟ. ಒಬ್ಬಳು ಮಾತ್ರ ತನ್ನ ಪತಿ ತಡೆದುದರಿಂದ ವಿಷ್ಣುಪದವನ್ನೆ ಹೊಂದಿದಳು.

ಬ್ರಾಹ್ಮಣ ಪತ್ನಿಯರು ಪತಿಪುತ್ರಾದಿಗಳ ಇಚ್ಛೆಗೆ ವಿರುದ್ಧವಾಗಿ ಕೃಷ್ಣನ ಅಂಗಸಂಗ ಪಡೆಯಲೆಂದೇ ಬಂದಿದ್ದರು. ಹಿಂದೆ ಹೋಗಲು ಸಿದ್ಧರಿರಲಿಲ್ಲ. ಹೋದರೂ ಬಂಧುಗಳು ಅವರನ್ನು ತಿರುಗಿ ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಕೃಷ್ಣ ಅವರಿಗೆ ಉಪದೇಶಿಸಿದ. 'ನೀವು ಈಗ ಹಿಂತಿರುಗಿ ಸತ್ರವನ್ನು ಪೂರೈಸಿರಿ.

ಬಳಿಕ ನನ್ನನ್ನೆ ಸ್ಮರಿಸುತ್ತ ಕಾಲ ಕಳೆಯಿರಿ. ಪರಲೋಕದಲ್ಲಿ ನನ್ನನ್ನು ಪಡೆಯುವಿರಿ. ಈಗ ನಿಮ್ಮ ಬಂಧುಗಳು ನಿಮ್ಮನ್ನು ತಿರಸ್ಕರಿಸದಂತೆ, ಆದರದಿಂದ ಕಾಣುವಂತೆ ಅನುಗ್ರಹಿಸುತ್ತೇನೆ, ಹೋಗಿರಿ' ಎಂದು. ಅವರೆಲ್ಲ ಹಿಂತಿರುಗಿದರು. ಒಬ್ಬಳಿಗೆ ಮಾತ್ರ ಕೃಷ್ಣನ ಬಳಿಗೆ ಹೋಗಲು ಶಕ್ಯವಾಗಲಿಲ್ಲ. ಪತಿ ತಡೆದು ಕೋಣೆಯಲ್ಲಿ ಬಂಧಿಸಿ ಇಟ್ಟಿದ್ದ. ಅವಳು ಅಲ್ಲಿಯೆ ಹರಿಧ್ಯಾನ ಮಾಡುತ್ತ ಯೋಗಬಲದಿಂದ ಶರೀರ ತ್ಯಾಗ ಮಾಡಿ ವಿಷ್ಣು ಲೋಕವನ್ನು ಪಡೆದಳು. ಅವಳಿಗೆ ಹೀಗೆ ಸದ್ಗತಿ ನೀಡುವ ಉದ್ದೇಶದಿಂದಲೆ ಕೃಷ್ಣ ಈ ಅನ್ನಯಾಚನೆಯ ನಾಟಕವಾಡಿದ್ದ.

'ಪತಿ ಪ್ರವಿಧೃತಾ' ಎಂದರೆ ಪತಿಯಿಂದ ತ್ಯಕ್ತಳಾದಳು 'ಪತ್ಯಾ ವಿಧೃತಾ, ನ ಧೃತೇತ್ಯಕ್ಷರಾರ್ಥಃ' ಹೀಗೆ ತ್ಯಕ್ತಳಾದ ಪತ್ನಿ ಶರೀರ ತೊರೆದಳು ಎನ್ನುತ್ತದೆ ವರದರಾಜೀಯ. ಆದರೆ ಹಾಗೆ ಹೇಳಿದರೆ 'ನಿಮ್ಮ ಬಂಧುಗಳು ಯಾರೂ ನಿಮ್ಮನ್ನು ತಿರಸ್ಕರಿಸುವುದಿಲ್ಲ' ಎಂದು ಕೃಷ್ಣ ಹೇಳಿದ್ದು ಸುಳ್ಳಾದೀತು. ಮತ್ತು 'ತತ್ಸೈಕಾ ವಿಧೃತಾ ತತ್ರ ಭಗವಂತಂ ಯಥಾ ಶ್ರುತಂ' ಭಗವಂತನನ್ನು ತಾನು 'ಕೇಳಿ ತಿಳಿದ' ಆಕಾರವನ್ನು ನೆನೆದು ಶರೀರ ತ್ಯಾಗ ಮಾಡಿದಳೆಂದು ಭಾಗವತ ಹೇಳುವುದೂ ಸರಿಯಾಗದು. ತಾನು 'ಕಣ್ಣಾರೆ ಕಂಡ' ಆಕಾರದಲ್ಲಿ ಎನ್ನಬೇಕಾಗಿತ್ತು ಎನ್ನುತ್ತದೆ ವಾದಿರಾಜೀಯ.

ಭುಕ್ತ್ವಾಥ ಗೋಪಸಹಿತೋ ಭಗವಾಂಸ್ತದನ್ನಂ
ರೇಮೇ ಚ ಗೋಕುಲಮವಾಪ್ಯ ಸಮಸ್ತನಾಥಃ।
ಆಜ್ಞಾತಿಲಂಘನಕೃತೇಃ ಸ್ವಕೃತಾಪರಾಧಾತ್
ಪಶ್ಚಾತ್ ಸುತಪ್ತಮನಸೋಽಪ್ಯಭವಂಶ್ಚ ವಿಪ್ರಾಃ ॥ ೬೧ ॥

ಬಳಿಕ ಸರ್ವೇಶ್ವರನಾದ ಭಗವಾನ್ ಕೃಷ್ಣ ಗೋಪರಿಂದೊಡಗೂಡಿ ಆ ಅನ್ನವನ್ನು ಉಂಡು ಗೋಕುಲಕ್ಕೆ ಬಂದು ವಿಹಾರ ಮಾಡಿದ. ಕೃಷ್ಣನ ಆಜ್ಞೆಯನ್ನು ಉಲ್ಲಂಘಿಸಿದ ಸ್ವಯಂಕೃತಾಪರಾಧದಿಂದ ವಿಪ್ರರು ಮನಸಿನಲ್ಲಿ ಬಹಳ ಪಶ್ಚಾತ್ತಾಪಪಟ್ಟರು.

ಬ್ರಾಹ್ಮಣರೂ ಜ್ಞಾನಿಗಳೇ, ಕೃಷ್ಣನನ್ನು ಭಗವಂತನೆಂದೇ ತಿಳಿದಿದ್ದರು. ಆದರೂ ತಿಳಿಯದಂತೆ ನಟಿಸಿದರು. ಏಕೆಂದರೆ ಪೂರ್ಣಕಾಮನಿಗೆ ಹಸಿವೆ ಅಸಂಭಾವಿತ. ಲೀಲೆಯಿಂದ ಹಸಿವು ತೋರಿದರೂ ನಾವು ಯಜ್ಞದಲ್ಲಿ ಆಹುತಿ ನೀಡುವುದು ಅವನಿಗೇ ತಾನೆ? ಅಜ್ಞರಾದ ಈ ಗೊಲ್ಲರ ಕೈಯಲ್ಲಿ ಬೇರೆ ಅನ್ನ ಏಕೆ ಕಳಿಸಿಕೊಡಬೇಕು? ಎಂದು ಆಲೋಚಿಸಿದರು. ಇದು ಕೇವಲ ನೆಪ ಮಾತ್ರ. ವಸ್ತುತಃ ಕಂಸನ ಭಯದಿಂದ ಅವರು ಕೃಷ್ಣನ ಬಗ್ಗೆ

ತಮಗೆ ಏನೂ ತಿಳಿಯದು ಎಂದು ನಟಿಸಿದ್ದರು. ಹೀಗಾಗಿ ಅವರು ಅನ್ನವನ್ನು ನೀಡುವೆವೆನ್ನಲಿಲ್ಲ. ಇಲ್ಲವೆಂದು ಹೇಳಲಿಲ್ಲ. ಆದರೆ ಪತ್ನಿಯರು ಕೃಷ್ಣನನ್ನು ಆರಾಧಿಸಿ ಬಂದಾಗ ತಾವು ತಮ್ಮ ಬಗ್ಗೇ ಬೇಸರಪಟ್ಟುಕೊಂಡರು. 'ನಮ್ಮ ಪತ್ನಿಯರು ಕೃಷ್ಣನಿಗೆ ಅನ್ನ ನೀಡಿ ಸುಲಭವಾಗಿ ಅವನ ಅನುಗ್ರಹ ಪಡೆದರು. ನಾವು ಮಾತ್ರ ಕಷ್ಟಪಟ್ಟು ಶಾಸ್ತ್ರಾಧ್ಯಯನ ಯಾಗ ಹೋಮಗಳನ್ನು ಮಾಡಿಯೂ ಅವನ ಅನುಗ್ರಹದಿಂದ ವಂಚಿತರಾದೆವು. ಅನ್ನ ನೀಡಿರೆಂದು ಅವನು ಸ್ವತಃ ಬೇಡಿದಾಗ ನಾವು ಕೊಡದಿದ್ದುದು ದೊಡ್ಡತಪ್ಪು' ಎಂದು ಪಶ್ಚಾತ್ತಾಪಪಟ್ಟರು. ಅಂದಿನಿಂದ 'ವಿಪ್ರಾಃ ಪಶ್ಚಿಮ ಬುದ್ಧಯಃ' 'ಬ್ರಾಹ್ಮಣರಿಗೆ ಯಾವಾಗಲೂ ಕೆಟ್ಟ ಮೇಲೆಯೆ ಬುದ್ಧಿ' ಎಂಬ ಗಾದೆ ಪ್ರಚಲಿತವಾಯಿತು.

ಗೋವರ್ಧನೋದ್ಧಾರ

ಕೃಷ್ಣೋಽಥ ವೀಕ್ಷ್ಯ ಪುರುಹೂತಮಹಪ್ರಯತ್ನಂ
ಗೋಪಾನ್ ನ್ಯವಾರಯದವಿಸ್ಮರಣಾಯ ತಸ್ಯ।
ಮಾ ಮಾನುಷೋಽಯಮಿತಿ ಮಾಮವಗಚ್ಛತಾತ್ ಸ
ಇತ್ಯವ್ಯಯೋಽಸ್ಯ ವಿದಧೇ ಮಹಭಂಗಮೀಶಃ ॥ ೬೨ ॥

ಇಂದ್ರ ಯಜ್ಞದ ಸಿದ್ಧತೆ ನಡೆಯುತ್ತಿರುವುದನ್ನು ಕಂಡು ಕೃಷ್ಣ ಗೋಪಾಲಕರನ್ನು ತಡೆದ. ಇಂದ್ರ ತನ್ನನ್ನು ಮನುಷ್ಯನೆಂದು ತಿಳಿಯದಿರಲಿ ಎಂದುಕೊಂಡು ಅವನಿಗೆ ತನ್ನ ವಿಸ್ಮರಣೆಯಾಗದಿರುವುದಕ್ಕಾಗಿ ನಾಶರಹಿತನಾದ ಪ್ರಭು ಇಂದ್ರ ಯಜ್ಞವನ್ನು ಕೆಡಿಸಿದ.

ಗೋಪಾಂಶ್ಚತಾನ್ ಗಿರಿಮಹೋಽಸ್ಮದುರುಸ್ವಧರ್ಮ
ಇತ್ಯುಕ್ತಿಸಚ್ಛಲತ ಆತ್ಮಮಹೇಽವತಾರ್ಯ।
ಭೂತ್ವಾತಿ ವಿಸ್ತೃತ ತನುರ್ಬುಭುಜೇ ಬಲಿಂ ಸ
ನಾನಾವಿಧಾನ್ನರಸಪಾನಗುಣೈಃ ಸಹೈವ ॥ ೬೩ ॥

'ಗಿರಿಯಜ್ಞವೆ ನಮಗೆ ಉತ್ತಮವಾದ ಸ್ವಧರ್ಮ' ಎಂಬ ಉಪದೇಶದ ಒಳ್ಳೆಯ ಛಲದಿಂದ, ನೆಪದಿಂದ ಕೃಷ್ಣ ಗೊಲ್ಲರನ್ನು ತನ್ನ ಯಜ್ಞದಲ್ಲಿ ತೊಡಗಿಸಿ ಮಹಾಬೃಹತ್ಕಾಯನಾಗಿ ಸಾಂಗವಾಗಿ ಅನ್ನರಸ ಪಾನರೂಪವಾದ ಬಲಿಯನ್ನು ಉಂಡ.

'ನೆಪ' ಎಂದರೆ ವಂಚನೆ, ಗಿರಿಯಜ್ಞ ಮಾಡಬೇಕೆಂದು ಕೃಷ್ಣ ಹೇಳುವುದು ಕೇವಲ ವಂಚನೆ ಛಲ. ಹೇಗಾದರೂ ಇಂದ್ರಯಜ್ಞವನ್ನು ನಿಲ್ಲಿಸಬೇಕಾಗಿತ್ತು. ಅಥವಾ 'ಗಿರಿಯಜ್ಞ' ಎಂಬ ಶಬ್ದವೆ ಛಲದಿಂದ ಕೂಡಿದೆ. ಅಂದರೆ ದ್ವಂದ್ವಾರ್ಥದಲ್ಲಿ ಇದೆ. ಆದರಲ್ಲಿ ನಿಗೂಢವಾದ ಬೇರೆ ಅಭಿಪ್ರಾಯವಿದೆ.

ಏಕೆಂದರೆ 'ಗಿರಿ' ಎಂದರೆ ಗೋವರ್ಧನಗಿರಿ ಎಂದು ಮೇಲುನೋಟಕ್ಕೆ ಅರ್ಥ. ವಸ್ತುತಃ ಸರ್ವಶಬ್ದವಾಚ್ಯನಾದ ಕೃಷ್ಣನೇ 'ಗಿರಿ'. ಇದು ಒಳ್ಳೆಯ ಛಲ. ದ್ವಂದ್ವಾರ್ಥವಿರುವಲ್ಲಿ ಅನಭಿಪ್ರೇತವಾದ ಅರ್ಥ ತೆಗೆದುಕೊಂಡರೆ ಅದು ಕೆಟ್ಟ ಛಲವಾಗುತ್ತದೆ. ಪ್ರಕೃತದಲ್ಲಿ 'ಗಿರಿ' ಶಬ್ದದಿಂದ ಕೃಷ್ಣನನ್ನು ತೆಗೆದುಕೊಳ್ಳುವುದು 'ನಾಮಾನಿ ಸರ್ವಾಣಿ ಯಮಾವಿಂಶತಿ' 'ಅರ್ಚಂತು ಪುತ್ರಕಾಉತ ಪುರಂ ನ ಧೃಷ್ಣ್ವರ್ಚತ' ಇತ್ಯಾದಿ ಪ್ರಮಾಣಾನುಗುಣವಾದ್ದರಿಂದ ಅಭಿಪ್ರೇತವಾದ ಅರ್ಥ, ಒಳ್ಳೆಯ ಛಲವೆ. ಲೀಲೆಯಿಂದ ಕೃಷ್ಣ ಹೇಳಿದ ಮಾತೂ ಸುಳ್ಳಾಗಿರಲಿಲ್ಲ ಎಂದು ವಾದೀರಾಜೀಯ ಹೇಳಿದೆ.[1]

'ಗಿರಿ' ಶಬ್ದದಿಂದ ಮುಖ್ಯಪ್ರಾಣನನ್ನೂ ತೆಗೆದುಕೊಳ್ಳಬೇಕು. 'ಗಿರಿಃ ಪ್ರಾಣಃ ಸಮುದ್ದಿಷ್ಟಃ' ಎಂದು ಭಾಗವತ ತಾತ್ಪರ್ಯದಲ್ಲಿ ಹೇಳಿದೆ. ಗಿರಿಯಜ್ಞದೊಂದಿಗೆ ಗೋಯಜ್ಞ ದ್ವಿಜಯಜ್ಞಗಳನ್ನೂ ಮಾಡಲು ಕೃಷ್ಣ ಪ್ರೇರಿಸಿದನೆಂದು ಭಾಗವತ ಹೇಳಿದೆ ಎಂದು ಸತ್ಯಧರ್ಮರು ಹೇಳುತ್ತಾರೆ. ಛಲವೆಂದರೆ ವಂಚನೆಯಿಂದ ಉಂಟಾಗುವ ಮಿಥ್ಯಾಜ್ಞಾನ ಇಲ್ಲಿ ವಿವಕ್ಷಿತ. ಸಚ್ಛಲವೆಂದರೆ ಒಳ್ಳೆಯ ಮಿಥ್ಯಾಜ್ಞಾನ. ಇಂದ್ರನ ಪೂಜೆಯನ್ನು ಬಿಟ್ಟು ಗಿರಿಪೂಜೆ ಮಾಡಬೇಕೆನ್ನುವ ಜ್ಞಾನ ಮಿಥ್ಯಾಜ್ಞಾನವೇ. ಆದರೂ ಕೃಷ್ಣ ಗಿರಿಯೊಳಗಿದ್ದು ಆ ಪೂಜೆಯನ್ನು ಸ್ವೀಕರಿಸಲು ಸಂಕಲ್ಪ ಮಾಡಿದ್ದರಿಂದ ಗೊಲ್ಲರಿಗೆ ಗಿರಿಪೂಜೆ ಅಭೀಷ್ಟದಾಯಕವಾಯಿತು. ಅದರಿಂದ ಈ ಮಿಥ್ಯಾಜ್ಞಾನವೂ ಒಳ್ಳೆಯದೇ ಆಯಿತು ಎಂದು ಸತ್ಯಾಭಿನವರ ವ್ಯಾಖ್ಯಾನವಿದೆ.[2]

---

1. ಛಲೇನ 'ಗಿರಿಪೂಜಾ ಕಾರ್ಯೇ'ತಿ ಛದ್ಮನಾ ಸಹಿತಾ ಉಕ್ತಿಃ ಉಕ್ತಿಸಚ್ಛಲಮಿತಿ ವಿಶೇಷಣಸ್ಯೋಪರಿ ನಿಪಾತೋ ಜ್ಞೇಯಃ। 'ಕಪಟೋಽಸ್ತ್ರೀ ವ್ಯಾಜದಂಭೋಽನೃತಂ ಛದ್ಮ ಛಲಃ ಪುಮಾನ್' ಇತಿ ಹ್ಯನುಶಾಸನಂ। ಯದ್ವಾ ಉಕ್ತೌಸತ್ ಸಮೀಚೀನಂ ಛಲಂ ದ್ವ್ಯರ್ಥಕ ಪದ ಪ್ರಯೋಗಃ, ತಸ್ಮಾತ್। ಗಿರಿಶಬ್ದೋ ಹಿ ಗಿರತಿ ನದ್ಯಾದಿಕಮಿತಿ ಪರ್ವತಮಪಿ ವಕ್ತಿ। ಸರ್ವಶಬ್ದವಾಚ್ಯಂ ಸರ್ವಾಂತರ್ಗತಂ ಸ್ವಾತ್ಮಾನಮಪಿ ವಕ್ತಿ। ತತ್ರಾನಭಿಪ್ರೇತಾರ್ಥ ಗ್ರಹಣೇಽಸಮೀಚೀನಚ್ಛಲಂ ಭವತಿ। ಇದಂ ಚ ಗಿರಿಶಬ್ದೇನ 'ನಾಮಾನಿ ಸರ್ವಾಣೀ'ತಿ ಶ್ರುತೇಃ, 'ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತೇ'ತಿ ಶ್ರುತೇಶ್ಚ ವಾಚ್ಯತಯಾ ಪೂಜ್ಯತಯಾ ಚ ದ್ವೇಧಾಪಿ ಸ್ವಾತ್ಮ ಗ್ರಹಣಂ ಉಚಿತತರಮಿತಿ ಭಾವಃ। ಅತೋ ಲೀಲಯೋಕ್ತಮಪಿ ಭಗವದ್ವಚನಂ ನಾನೃತಮಿತಿ ಜ್ಞೇಯಂ। ಅತ ಏವಾತ್ಮಮಹೇಽವತಾರ್ಯೇತ್ಯುಕ್ತಂ। -ವಾದಿರಾಜೀಯ

2. ಅತ್ರ ಸಚ್ಛಲತ ಇತಿ ಛದ್ಮವಾಚಕಚ್ಛಲ ಶಬ್ದೇನ ಛದ್ಮಕಾರ್ಯ ಮಿಥ್ಯಾ ಜ್ಞಾನಂ ಗೃಹತೇ।... ಮಿಥ್ಯಾ ಜ್ಞಾನಸ್ಯಾಪಿ ಗಿರ್ಯಂತರ್ಗತಾತ್ಮ ಪೂಜಾದ್ವಾರಾ ಅಭೀಷ್ಟ ಹೇತುತ್ವಾತ್ ಸಮೀಚೀನತ್ವಮಿತಿ ಜ್ಞಾಪಯಿತುಂ ಸದಿತ್ಯುಕ್ತಂ। -ಸತ್ಯಾಭಿನವೀಯ

ಇಂದ್ರೋಽಥ ವಿಸ್ಮೃತರಥಾಂಗಧರಾವತಾರೋ
ಮೇಘಾನ್ ಸಮಾದಿಶದುರೂದಕಪೂಗವೃಷ್ಟ್ಯೈ।
ತೇ ಪ್ರೇರಿತಾಃ ಸಕಲಗೋಕುಲನಾಶನಾಯ
ಧಾರಾ ವಿತೇರುರುರುನಾಗಕರಪ್ರಕಾರಾಃ ॥ ೬೪ ॥

ಚಕ್ರಧಾರನಾದ ಹರಿಯ ಅವತಾರ ಶ್ರೀಕೃಷ್ಣ ಎಂಬುದನ್ನು ಮರೆತಿದ್ದ ಇಂದ್ರ ಮೋಡಗಳಿಗೆ ಮಹಾಜಲಧಾರೆಗಳನ್ನು ಸುರಿಸಲು ಆಜ್ಞಾಪಿಸಿದ. ಅವನಿಂದ ಪ್ರೇರಿತನಾದ ಮೋಡಗಳು ಇಡೀ ಗೋಕುಲವನ್ನೇ ನಾಶಪಡಿಸಲು ದೊಡ್ಡ ಆನೆಯ ಸೊಂಡಿಲ ಗಾತ್ರದ ಜಲಧಾರೆಗಳನ್ನು ಸುರಿಸಿದುವು.

'ಚಕ್ರಧರ' ಎಂಬ ವಿಶೇಷಣದಿಂದ ಕೃಷ್ಣ ಅಂದಿನವರೆಗೆ ಎಂದೂ ಚಕ್ರವನ್ನು ಹಿಡಿಯದಿದ್ದುದೂ ಇಂದ್ರನಿಗೆ ಕೃಷ್ಣ ಹರಿಯ ಅವತಾರವೆಂಬುದರ ವಿಸ್ಮರಣೆಗೆ ಕಾರಣವಾಯಿತು ಎಂದು ಸೂಚಿತವಾಗುತ್ತದೆ ಎಂದು ವಾದಿರಾಜೀಯದಲ್ಲಿ ಹೇಳಿದೆ.[1]

'ಇಂದ್ರ' ಎಂಬ ಶಬ್ದವೂ ತಾನು ಇಂದ್ರ ಪದವಿಯಾಳುತ್ತಿರುವವ, ಕೃಷ್ಣ ಕೇವಲ 'ಉಪೇಂದ್ರ' ನನ್ನ ತಮ್ಮ, ಅಣ್ಣನಾದ ನನ್ನ ಪೂಜೆಯನ್ನು ನಿಲ್ಲಿಸಿದನೆಂಬ ಕೋಪ ಅಹಂಕಾರಗಳಿಗೆ ಸೂಚಕವೆನ್ನುಬಹುದು.

ಮೋಡಗಳೆಂದರೆ ಇಲ್ಲಿ ಪ್ರಳಯ ಕಾಲದ 'ಸಂವರ್ತಕ' ವೆಂಬ ಮೋಡಗಳು. ಹಾಗೆ ಭಾಗವತ ಹೇಳುತ್ತಿದೆ.

ತಾಭಿರ್ನಿಪೀಡಿತಮುದೀಕ್ಷ್ಯ ಸ ಕಂಜನಾಭಃ
ಸರ್ವಂ ವ್ರಜಂ ಗಿರಿವರಂ ಪ್ರಸಭಂ ದಧಾರ।
ವಾಮೇನ ಕಂಜದಲಕೋಮಲಪಾಣಿನೈವ
ತತ್ರಾಖಿಲಾಃ ಪ್ರವಿವಿಶುಃ ಪಶುಪಾಃ ಸ್ವಗೋಭಿಃ ॥ ೬೫ ॥

ಆ ಜಲಧಾರೆಗಳಿಂದ ಇಡೀ ಗೋಕುಲ ಬಹಳ ಪೀಡಿತವಾದುದನ್ನು ಕಂಡು ಪದ್ಮನಾಭ ಪದ್ಮದಳದಂಥ ಕೋಮಲವಾದ ಎಡಗೈಯಿಂದ ಗೋವರ್ಧನ ಪರ್ವತವನ್ನು ಬಲವಾಗಿ ಹಿಡಿದೆತ್ತಿದ. ಅಲ್ಲಿ ಎಲ್ಲ ಗೋಪಾಲಕರೂ ತಮ್ಮ ಗೋವುಗಳೊಂದಿಗೆ ಪ್ರವೇಶಿಸಿದರು.

ವೃಷ್ಟೋರು ವಾರ್ಯಥ ನಿರಂತರಸಪ್ತರಾತ್ರಂ
ತ್ರಾತಂ ನಿರೀಕ್ಷ್ಯ ಹರಿಣಾ ವ್ರಜಮಶ್ರಮೇಣ

---

1. ವಿಷ್ಣ್ವವತಾರ ಇತ್ಯನುಕ್ತಾ ರಥಾಂಗಧರಾವತಾರ ಇತಿವದತಾ ಬಾಲರೂಪಕೃಷ್ಣಕರೇ ತದಾನೀಂ ಚಕ್ರಾದರ್ಶನಂ ಚ ವಿಸ್ಮರಣ ಬೀಜಮಿತಿ ಸೂಚಿತಂ। –ವಾದಿರಾಜೀಯ

ಶಕ್ರೋಽನುಸಂಸ್ಮೃತಸುರಪ್ರವರಾವತಾರಃ
ಪಾದಾಂಬುಜಂ ಯದುಪತೇಃ ಶರಣಂ ಜಗಾಮ ॥ ೬೬ ॥

ಇಂದ್ರ ನಿರಂತರ ಏಳು ದಿನ ಬಹಳ ನೀರು ಸುರಿದರೂ ಕೃಷ್ಣ ಅನಾಯಾಸವಾಗಿ ಗೋಕುಲವನ್ನು ರಕ್ಷಿಸಿದ. ಅದನ್ನು ಕಂಡು ಇಂದ್ರ 'ಕೃಷ್ಣ ದೇವೋತ್ತಮನ ಅವತಾರ'ವೆಂಬುದನ್ನು ನೆನಪಿಗೆ ತಂದುಕೊಂಡು ಯದುಪತಿಯ ಪಾದಕಮಲವನ್ನು ಶರಣು ಹೊಂದಿದ.

ತುಷ್ಟಾವ ಚೈನಮುರುವೇದಶಿರೋಗತಾಭಿ
ರ್ಗೀರ್ಭಿಃ ಸದಾಗಣಿತಪೂರ್ಣಗುಣಾರ್ಣವಂ ತಮ್ ।
ಗೋಭೃದ್ ಗುರುಂ ಹರಗುರೋರಪಿ ಗೋಗಣೇನ
ಯುಕ್ತಃ ಸಹಸ್ರಗುರಗಾಧಗುಮಗ್ರ್ಯಮಗ್ರ್ಯಾತ್ ॥ ೬೭ ॥

ಶಿವನ ಗುರುವೆನಿಸಿದ ಬ್ರಹ್ಮನಿಗೂ ಗುರುವಾದ, ಸದಾ ಅಗಣಿತ ಪೂರ್ಣಗುಣಗಳ ಸಮುದ್ರನಾದ, ಅಪಾರ ಕಾಂತಿಯುಳ್ಳ, ಉತ್ತಮರಿಗಿಂತ ಸರ್ವೋತ್ತಮನಾದ ಶ್ರೀಕೃಷ್ಣನನ್ನು ಕಾಮಧೇನು ಸಮೂಹಯುಕ್ತನಾದ ಸಹಸ್ರಾಕ್ಷನಾದ ಇಂದ್ರ ಶ್ರೇಷ್ಠವಾದ ಉಪನಿಷತ್ತಿನ ಮಂತ್ರಗಳಿಂದ ಸ್ತುತಿಸಿದ.

ಕೃಷ್ಣ ಗೋಬ್ರಾಹ್ಮಣಪ್ರಿಯನಾದ್ದರಿಂದ ಅವನನ್ನು ಒಲಿಸಿಕೊಳ್ಳಲು ಇಂದ್ರ ಕಾಮಧೇನುಗಳನ್ನು ಮುಂದೆ ಮಾಡಿಕೊಂಡು ಬಂದ. ಇಂದ್ರನನ್ನು 'ಸಹಸ್ರಾಕ್ಷ' ಎಂದುದು ಅರ್ಥಗರ್ಭಿತವಾಗಿದೆ. ಕೃಷ್ಣನ ಮಾಹಾತ್ಮ್ಯದ ಬಗ್ಗೆ ಅಸುರಾವೇಶದಿಂದ ಅಂಧನಾಗಿದ್ದ ಇಂದ್ರ ಈಗ ಅಸುರಾವೇಶ ಮುಕ್ತನಾಗಿ ಸಾವಿರ ಕಣ್ಣುಗಳಿಂದ ಕೃಷ್ಣನನ್ನು ಚೆನ್ನಾಗಿ ವೀಕ್ಷಿಸಿದ ಎಂದರ್ಥ.

ತ್ವತ್ತೋ ಜಗತ್ ಸಕಲಮಾವಿರಭೂದಗಣ್ಯ
ಧಾಮ್ನಸ್ತ್ವಮೇವ ಪರಿಪಾಸಿ ಸಮಸ್ತಮಂತೇ ।
ಅತ್ತಿತ್ತಯೈವ ಜಗತೋಽಸ್ಯ ಹಿ ಬಂಧಮೋಕ್ಷೌ
ನ ತ್ವತ್ಸಮೋಽಸ್ತಿ ಕುಹಚಿತ್ ಪರಿಪೂರ್ಣಶಕ್ತೇ ॥ ೬೮ ॥

'ಅಗಣಿತ ತೇಜಸ್ಸುಳ್ಳ ನೀನು ಸಕಲ ಜಗತ್ತನ್ನೂ ಸೃಜಿಸುವೆ, ರಕ್ಷಿಸುವೆ, ಕೊನೆಯಲ್ಲಿ ಎಲ್ಲವನ್ನೂ ನೀನೆ ಲಯ ಮಾಡುವೆ. ನಿನ್ನಿಂದಲೆ ಜಗತ್ತಿಗೆ ಬಂಧಮೋಕ್ಷಗಳು. ಪರಿಪೂರ್ಣ ಶಕ್ತಿಯುಳ್ಳ ಹರಿಯೆ, ನಿನಗೆ ಸಮಾನ ಎಲ್ಲಿಯೂ ಇಲ್ಲ.'

ಕ್ಷಂತವ್ಯಮೇವ ಭವತಾ ಮಮ ಬಾಲ್ಯಮೀಶ
ತ್ವತ್ಸಂಶ್ರಯೋಽಸ್ಮಿ ಹಿ ಸದೇತ್ಯಭಿವಂದಿತೋಽಜಃ ।

ಕ್ಷಾಂತಂ ಸದೈವ ಭವತಸ್ತವ ಶಿಕ್ಷಣಾಯ
ಪೂಜಾಪಹಾರವಿಧಿರಿತ್ಯವದದ್ ರಮೇಶಃ ॥ ೬೯ ॥

'ಪ್ರಭು, ನನ್ನ ಹುಡುಗುತನವನ್ನು ನೀನು ಮನ್ನಿಸಲೇಬೇಕು. ಏಕೆಂದರೆ ನನಗೆ ಸದಾ ನೀನೆ ಆಶ್ರಯ'. ಹೀಗೆ ಹೇಳಿ ಇಂದ್ರ ನಮಿಸಿದಾಗ ಕೃಷ್ಣ ಹೇಳಿದ, 'ನಿನ್ನ ತಪ್ಪನ್ನು ನಾನು ಸದಾ ಮನ್ನಿಸಿಯೆ ಇದ್ದೇನೆ. ನಿನಗೆ ಕಣ್ಣು ತೆರೆಸಲೆಂದೇ ನಿನ್ನ ಪೂಜೆಯನ್ನು ಕಸಿದುಕೊಂಡೆನಷ್ಟೆ.'

ಗೋವಿಂದ ಪಟ್ಟಾಭಿಷೇಕ

ಗೋವಿಂದಮೇನಮಭಿಷಿಚ್ಯ ಸ ಗೋಗಣೇಶೋ
ಗೋಭಿರ್ಜಗಾಮ ಗುಣಪೂರ್ಣಮಮುಂ ಪ್ರಣಮ್ಯ।
ಗೋಪೈರ್ಗಿರಾಂಪತಿರಪಿ ಪ್ರಣತೋಽಭಿಗಮ್ಯ
ಗೋವರ್ಧನೋದ್ಧರಣಸಂಗತಸಂಶಯೈಃ ಸಃ ॥ ೭೦ ॥

ಗೋವುಗಳ ಸಮೂಹದೊಡೆಯನಾದ ಇಂದ್ರ ದೇವಗಂಗಾಜಲದಿಂದ ಗುಣಪೂರ್ಣನಾದ ಗೋವಿಂದನಿಗೆ ಅಭಿಷೇಕಗೈದು ನಮಿಸಿ ಹೊರಟುಹೋದ. ಗೊಲ್ಲರಿಗೆ ಕೃಷ್ಣನ ಬಗ್ಗೆ ಸಂಶಯ ಗೋವರ್ಧನೋದ್ಧಾರದಿಂದ ಪೂರ್ತಿ ನಿವಾರಣೆಯಾಯಿತು. ಅವರು ವೇದಪತಿಯಾದ ಕೃಷ್ಣನ ಮುಂದೆ ಬಂದು ನಮಿಸಿದರು.

'ಗೋವುಗಳ ಸಮೂಹದೊಡೆಯ' ಎಂಬ ವಿಶೇಷಣದಿಂದ ಸುರಭಿ ಮುಂತಾದ ಗೋ ಲೋಕದ ಹಸುಗಳು ಬಂದು ಕೃಷ್ಣನಿಗೆ ಕ್ಷೀರಾಭಿಷೇಕ ಮಾಡಿದುವು ಎಂದು ಭಾಗವತದಲ್ಲಿ ಹೇಳಿದ ಕಥೆ ಸೂಚಿತವಾಗುತ್ತದೆ. 'ಗೋವಿಂದನಿಗೆ ಅಭಿಷೇಕ' ಎಂದರೆ ಗೋವಿಂದ ಪಟ್ಟಾಭಿಷೇಕ. ಹರಿವಂಶದಲ್ಲಿ ಹೀಗೆ ಹೇಳಿದೆ-

ಅಹಂ ಕಿಲೇಂದ್ರೋ ದೇವಾನಾಂ ತ್ವಂ ಗವಾಮಿಂದ್ರತಾಂ ಗತಃ।
ಗೋವಿಂದ ಇತಿ ಲೋಕಾಸ್ತ್ವಂ ಸ್ತೋಷ್ಯಂತಿ ಭುವಿ ಶಾಶ್ವತಂ ॥

ನಾನು ದೇವತೆಗಳಿಗೆ ಇಂದ್ರ, ನೀನು ಗೋವುಗಳಿಗೆ ಇಂದ್ರನಾಗಿರುವೆ. ಆದರಿಂದ ಲೋಕ ನಿನ್ನನ್ನು 'ಗೋವಿಂದ' ಎನ್ನುತ್ತದೆ.

ಇಲ್ಲಿಮೇಲುನೋಟಕ್ಕೆ ಇಂದ್ರ ಕೃಷ್ಣನಿಗೆ 'ಗೋವಿಂದ' ಎಂದು ಬಿರುದನ್ನಿತ್ತು ಗೋವಿಂದ ಪದವಿಯಲ್ಲಿ ಪಟ್ಟಾಭಿಷೇಕ ಮಾಡಿದ. ಆದರೆ ವಸ್ತುಸ್ಥಿತಿ ಬೇರೆಯೆ. ರುಕ್ಮಿಣೀಶ ವಿಜಯದಲ್ಲಿ ಹೇಳಿದೆ- ದೇವೇಂದ್ರ ತಾನು ಮಾಡಿದ

ಅಪರಾಧದ ಪರಿಮಾರ್ಜನೆಗಾಗಿ ನಮಸ್ಕಾರಗೈದ. ಕಾಮಧೇನುಗಳ ಕೆಚ್ಚಲಿಂದ ಕ್ಷೀರಾಭಿಷೇಕ ಮಾಡಿಸಿದ, ಆಕಾಶಗಂಗಾ ಜಲವನ್ನು ರತ್ನಕಲಶಗಳಲ್ಲಿ ತುಂಬಿಸಿ ಐರಾವತದ ಸೊಂಡಿಲಿನಿಂದೆತ್ತಿ ಅಭಿಷೇಕ ಮಾಡಿಸಿದ. ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಮಾಡಿದ. ಹಾಗೆ ಮಾಡುವುದು ಸಕಲ ಪಾಪಗಳಿಗೆ ಪ್ರಾಯಶ್ಚಿತ್ತ ರೂಪ. ಅದರಿಂದ ಹೊಸದಾಗಿ 'ಗೋವಿಂದ' ಎಂಬ ಹೆಸರನ್ನಿತ್ತನೆನ್ನಲಾಗದು.

ಅನಾದಿ ಕಾಲದಿಂದಲೆ ಆವನಿಗೆ ಆ ನಾಮವಿದೆ.[1]

ಕೃಷ್ಣಂ ತತಃ ಪ್ರಭೃತಿ ಗೋಪಗಣಾ ವ್ಯಜನಾನ್
ನಾರಾಯಣೋಽಯಮಿತಿ ಗರ್ಗವಚಶ್ಚನಂದಾತ್ ।
ನಾರಾಯಣಸ್ಯ ಸಮ ಇತ್ಯುದಿತಂ ನಿಶಮ್ಯ
ಪೂಜಾಂ ಚ ಚಕ್ರುರಧಿಕಾಮರವಿಂದನೇತ್ರೇ ॥ ೭೧ ॥

ಅಂದಿನಿಂದ ಗೊಲ್ಲರ ಗುಂಪುಗಳು ಶ್ರೀಕೃಷ್ಣನನ್ನು ಸಾಕ್ಷಾತ್ ನಾರಾಯಣನೆಂದೇ ತಿಳಿದುಕೊಂಡರು. ಕೃಷ್ಣ ನಾರಾಯಣನಿಗೆ ಸಮಾನನೆಂದು ಅಂದೇ ಗರ್ಗಮುನಿ ಹೇಳಿದ್ದ ಮಾತನ್ನು ನಂದನಿಂದ ಕೇಳಿ ತಿಳಿದರು. ಕಮಲಾಕ್ಷನಾದ ಕೃಷ್ಣನಲ್ಲಿ ಅಧಿಕ ಆದರ ಮಾಡಿದರು.

ಸ್ಕಂದಾದುಪಾತ್ತವರತೋ ಮರಣಾದಪೇತಂ
ದೃಷ್ಟ್ವಾ ಚ ರಾಮನಿಹತಂ ಬಲಿನಂ ಪ್ರಲಂಬಮ್ ।
ಚಕ್ರುರ್ವಿನಿಶ್ಚಯಮಮುಷ್ಯ ಸುರಾಧಿಕತ್ವೇ ಗೋಪಾ
ಅಥಾಸ್ಯ ವಿದಧುಃ ಪರಮಾಂ ಚ ಪೂಜಾಮ್ ॥ ೭೨ ॥

ಷಣ್ಮುಖನ ವರದಿಂದ ಮರಣರಹಿತನಾಗಿದ್ದ ಬಲಿಷ್ಠನಾದ ಪ್ರಲಂಬಾಸುರ ಬಲರಾಮನಿಂದ ಹತನಾದುದನ್ನು ಕಂಡು ಗೊಲ್ಲರು ಬಲರಾಮ ದೇವೋತ್ತಮನೆಂಬ ವಿಷಯದಲ್ಲಿಯೂ ನಿಶ್ಚಯ ಹೊಂದಿದರು. ಅವನಿಗೂ ಒಳ್ಳೆಯ ಆದರ ತೋರಿದರು.

---

1. **ನಾಥಾಪರಾಧ ಕೃದುಪೇತ್ಯ ಸುಲಜ್ಜಿತೋಽಥೋ**
ಶಕ್ರೋಽಚ್ಯುತಂ ರಹಸಿ ರಮ್ಯತಮಂ ತ್ರಿಲೋಕ್ಯಾಂ ।
ಮೂರ್ಧ್ನಾ ಪ್ರಣಮ್ಯ ಸದಯಂ ಸುಧಯಾಭ್ಯಷಿಂಚತ್
ಗೋವಿಂದನಾಮ ಚ ಪತನ್ ಸ್ವಕೃತಾಘಶಾಂತ್ಯೈ ॥ -(ರುಕ್ಮಿಣೀಶ ವಿ.6-21)

ವಿಷ್ಣು ಪ್ರಣಾಮಾಭಿಷೇಕ ನಾಮೋಚ್ಚಾರಣಾನಾಂ ಮಹಾಪಾಪ ಪರಿಹಾರ ಹೇತುತ್ವಂ
ವಿಷ್ಣುದ್ರೋಹಸ್ಯ ಮಹಾಪಾತಕತ್ವಂ ಚಾನೇನ ದ್ಯೋತ್ಯತೇ ।

-ರುಕ್ಮಿಣೀಶ ವಿಜಯವ್ಯಾಖ್ಯಾ

'ಅಥ' ಎಂಬ ಶಬ್ದದಲ್ಲಿ ಕೃಷ್ಣನಲ್ಲಿಯೆ ಬಹು ಹೆಚ್ಚಿನ ಆದರ, ಅನಂತರ ಬಲರಾಮನಲ್ಲಿ ಆದರ ಎಂಬುದರ ಸೂಚನೆ ಇದೆ.[1]

ಗೋಪಿಯರೊಡನೆ ವಿಹಾರ

ಕಾತ್ಯಾಯನೀವ್ರತಧರಾಃ ಸ್ವಪತಿತ್ವಹೇತೋಃ
ಕನ್ಯಾ ಉವಾಹ ಭಗವಾನಪರಾಶ್ಚ ಗೋಪೀಃ।
ಅನ್ಯೈರ್ಹೃತಾ ಅಯುಗಬಾಣಶರಾಭಿನುನ್ನಾಃ
ಪ್ರಾಪ್ತಾನಿಶಾಸ್ವರಮಯಚ್ಛಶಿರಾಜಿತಾಸು ॥ ೭೩ ॥

ಭಗವಾನ್ ಶ್ರೀಕೃಷ್ಣ ತನ್ನನ್ನು ಪತಿಯನ್ನಾಗಿ ಪಡೆವ ಉದ್ದೇಶದಿಂದ ಕಾತ್ಯಾಯನೀ ವ್ರತವನ್ನು ಕೈಗೊಂಡಿದ್ದ ಕನ್ಯೆಯರನ್ನು ಮದುವೆಯಾದ. ಬೇರೆ ಗೊಲ್ಲರಿಂದ ವಿವಾಹಿತೆಯರಾದ ಬೇರೆ ಗೋಪಿಯರೂ ಚಂದ್ರನಿಂದ ಬೆಳಗಿದ ರಾತ್ರಿಗಳಲ್ಲಿ ಮನ್ಮಥನ ಬಾಣಗಳಿಂದ ಪ್ರೇರಿತರಾಗಿ ಬಂದಾಗ ಕೃಷ್ಣ ಅವರನ್ನು ರಮಿಸಿದ.

ಕಾತ್ಯಾಯನಿ ಮಹಾಮಾಯೇ ಮಾಹಾಯೋಗಿನ್ಯಧೀಶ್ವರಿ।
ನಂದಗೋಪ ಸುತಂ ದೇವಿ ಪತಿಂ ಮೇ ಕುರು ತೇ ನಮಃ॥

'ಮಹಾಮಾಯೆ, ಮಹಾಯೋಗಿನಿ, ಅಧೀಶ್ವರಿಯಾದ ದೇವಿ ಕಾತ್ಯಾಯನಿ. ನನಗೆ ನಂದಗೋಪ ಕುಮಾರನನ್ನು ಪತಿಯನ್ನಾಗಿ ಮಾಡು', ಎಂಬ ಮಂತ್ರದಿಂದ ದುರ್ಗಾರೂಪಳಾದ ಮಹಾಲಕ್ಷ್ಮಿಯನ್ನು ಗೋಪಕನ್ಯೆಯರು ಆರಾಧಿಸಿದರು. ಅವರು ಅರುಣೋದಯ ಕಾಲದಲ್ಲಿ ವ್ರತಸ್ನಾನ ಮಾಡುವಾಗ ವಿವಸ್ತ್ರರಾಗಿ ನೀರಿಗೆ ಇಳಿಯುತ್ತಿದ್ದರು. ಅದು ಅದೇ ಕಾಲದಲ್ಲಿ ನದೀ ಸ್ನಾನಕ್ಕೆ ಬರುವ ದೇವತೆಗಳಿಗೆ ಅಪಚಾರವಾಗುವುದರಿಂದ ವ್ರತಲೋಪವಾಗುವುದೆಂದು ಮುಗ್ಧ ಕನ್ಯೆಯರಿಗೆ ಅದನ್ನು ಬೋಧಿಸುವುದಕ್ಕಾಗಿ ಕೃಷ್ಣ ಸೀರೆಗಳನ್ನು ಕದ್ದ. ಮತ್ತು ಧರ್ಮವನ್ನು ಬೋಧಿಸಿ ಪ್ರಾಯಶ್ಚಿತ್ತ ರೂಪವಾಗಿ ನಮಸ್ಕಾರ ಮಾಡಿಸಿಕೊಂಡ. ಹೀಗೆ ವ್ರತಲೋಪ ಪ್ರಾಯಶ್ಚಿತ್ತವಾದ್ದರಿಂದ ವ್ರತದ ಸಂಪೂರ್ಣ ಫಲವಾಗಿ ಆ ಕನ್ಯೆಯರಲ್ಲಿ ಮಹಾಲಕ್ಷ್ಮಿಯ ಆವೇಶ ಉಂಟಾಯಿತು. ಕೃಷ್ಣನ ಅಂಗಸಂಗ ಪಡೆಯಲು ಅರ್ಹತೆ ದೊರೆಯಿತು. ಆದರೂ ವಿವಾಹ ಸಂಸ್ಕಾರವಿಲ್ಲದೆ ಪರಿಗ್ರಹ

---

1. ನನು ಕೃಷ್ಣಸ್ಯಾಧಿಕಾಂ ಪೂಜಾಂ ಯಥಾ ಚಕ್ರುಸ್ತಥಾ ಚಕ್ರುಃ ಕಿಮಿತ್ಯ ತೋ ನೇತ್ಯಾಹ ಅಥೇತಿ। ಅಸ್ಯ ಕೃಷ್ಣಸ್ಯ ಅಥ ಅನಂತರಂ, ಅಸಮಾನ ಮಿತ್ಯರ್ಥಃ। ಪರಮಾಂ ಸ್ವೋತ್ತಮೇಭ್ಯಃ ಪರಮಾಮಿತ್ಯರ್ಥಃ।
-ಜನಾರ್ದನೀಯ

ಯೋಗ್ಯರಾಗುವುದಿಲ್ಲವೆಂದು ವಿವಾಹವನ್ನೂ ಮಾಡಿಕೊಂಡ. ಶ್ರೀಕೃಷ್ಣ ಕೃಷ್ಣನಿಗೆ ಆಗ ಇನ್ನೂ ಏಳು ವರ್ಷ ವಯಸ್ಸು. ಕನ್ಯೆಯರಿಗೂ ಹತ್ತು ಹನ್ನೆರಡು ವಯಸ್ಸು. ಅದರಿಂದ ಕೃಷ್ಣನಿಗೆ ಕಾಮಾಸಕ್ತಿಯನ್ನು ಶಂಕಿಸುವುದು ಅನುಚಿತ.

ಹತ್ತು ವರುಷದ ಕೆಳಗೆ ಮಕ್ಕಳಾಟಿಕೆಯಲ್ಲಿ ಚಿತ್ತ ಸ್ತ್ರೀಯರಿಗೆ ಎರಗುವುದೆ?

-ಎಂದು ಲಕ್ಷ್ಮೀಶೋಭಾನೆಯಲ್ಲಿ ವಾದಿರಾಜರು ಕೇಳುತ್ತಾರೆ. ಅದರಿಂದ ಗೋಪೀವಸ್ತ್ರಾಪಹರಣ ಒಂದು ಸಮಸ್ಯೆಯೆ ಅಲ್ಲವೆಂದು ನಿರ್ಣಯ ಅದನ್ನು ಪ್ರಸ್ತಾಪಿಸಲಿಲ್ಲ.

ತಾಸತ್ರ ತೇನ ಜನಿತಾ ದಶಲಕ್ಷಪುತ್ರಾ
ನಾರಾಯಣಾಹ್ವಯಯುತಾ ಬಲಿನಶ್ಚ ಗೋಪಾಃ।
ಸರ್ವೇಽಪಿ ದೈವತಗಣಾ ಭಗವತ್ತುತತ್ವಂ
ಅಪ್ತುಂ ಧರಾತಲಗತಾ ಹರಿಭಕ್ತಿಹೇತೋಃ ॥ ೭೪ ॥

ಕೃಷ್ಣ ತಾನು ಮದುವೆಯಾದ ಕನ್ಯೆಯರಲ್ಲಿ ಹತ್ತು ಲಕ್ಷ ಗಂಡು ಮಕ್ಕಳನ್ನು ಹುಟ್ಟಿಸಿದ. ಅವರೆಲ್ಲರೂ ನಾರಾಯಣ ಎಂಬ ಹೆಸರಿನ ಬಲಿಷ್ಠ ಗೋಪಾಲಕರಾದರು. ಹರಿಭಕ್ತಿ ಮಾಡುವುದಕ್ಕಾಗಿ ಭಗವಂತನ ಪುತ್ರರಾಗಬೇಕೆಂದು ಭೂಮಿಗೆ ಬಂದ ದೇವತಾ ಸಮೂಹಗಳೇ ಆಗಿದ್ದರು ಅವರು.

ಕೃಷ್ಣ ಕ್ಷತ್ರಿಯನೇ ಆದರೂ ಹುಟ್ಟಿದ ಈ ಮಕ್ಕಳು ಮಾತ್ರ ಮಾತೃ ಜಾತಿಯಿಂದ ಗೊಲ್ಲರಾದರು. ಮಕ್ಕಳಾಗಿ ಹುಟ್ಟಿದರೆ ಕೃಷ್ಣನನ್ನು ತಂದೆ ಎಂದು ಹೆಚ್ಚು ಸೇವೆ ಮಾಡಬಹುದೆಂದು ಗೊಲ್ಲರ ಸ್ತ್ರೀಯರಲ್ಲಿ ಅವರು ಹುಟ್ಟಿದರು. ಮುಂದೆ ಮಹಾಭಾರತ ಯುದ್ಧದಲ್ಲಿ ನಾರಾಯಣೀಸೇನೆಯಾಗಿ ಕೌರವರ ಪಕ್ಷದಲ್ಲಿ ನಿಂತು ಹೋರಾಡಿ ಭೀಷ್ಮ ದ್ರೋಣಾದಿಗಳಂತೆ ಭೂಭಾರಹರಣ ಕಾರ್ಯದಲ್ಲಿ ಕೃಷ್ಣನ ಸೇವೆ ಮಾಡಿ ಮಡಿದರು.

ತಾಸತ್ರ ಪೂರ್ವವರದಾನಕೃತೇ ರಮೇಶೋ
ರಾಮಾದ್ ದ್ವಿಜತ್ವಗಮನಾದಪಿ ಪೂರ್ವಮೇವ।
ಸರ್ವಾ ನಿಶಾಶ್ವರಮಯತ್ ಸಮಭೀಪ್ಸಿದ್ಧಿ
ಚಿಂತಾಮಣಿರ್ಹಿ ಭಗವಾನಶುಭೈರಲಿಪ್ತಃ ॥ ೭೫ ॥

ತಾನು ಹಿಂದೆ ವರಕೊಟ್ಟಿದ್ದರಿಂದ ಬಲರಾಮನಿಗಿಂತ ಮೊದಲು, ತನಗೆ

ಉಪನಯನವಾಗುವುದಕ್ಕೂ ಮೊದಲು, ಕೃಷ್ಣ ಆ ಎಲ್ಲ ಸ್ತ್ರೀಯರನ್ನೂ ರಾತ್ರಿಗಳಲ್ಲಿ ರಮಿಸಿದ. ಅಭೀಷ್ಟಗಳನ್ನು ಪೂರೈಸುವುದರಲ್ಲಿ ಭಗವಂತ ಚಿಂತಾಮಣಿ ತಾನೆ? ಅವನು ಪಾಪಕರ್ಮ ಲೇಪರಹಿತನೂ ಆಗಿದ್ದಾನೆ.

> ಕೃಷ್ಣ ಗೋಪಿಯರನ್ನು ರಮಿಸಿದುದು ತನ್ನ ಸುಖಕ್ಕಾಗಿ ಅಲ್ಲ. ಭಕ್ತರಿಗೆ ಇಷ್ಟಾರ್ಥಗಳನ್ನು ಪೂರೈಸುವುದರಲ್ಲಿ ಚಿಂತಾಮಣಿಯಂತಿರುವನಾದ್ದರಿಂದ ಭಕ್ತರ ಸುಖಕ್ಕಾಗಿಯೆ ಕೃಷ್ಣ ಅವರೊಂದಿಗೆ ವಿಹರಿಸಿದ. ಚಿಂತಾಮಣಿಯಂತೆ ಶಕ್ತನಾದ್ದರಿಂದಲೆ ಒಬ್ಬನೇ ಕೃಷ್ಣ ಅಸಂಖ್ಯ ಸ್ತ್ರೀಯರನ್ನು ರಾಸಲೀಲೆಯಲ್ಲಿ ತೃಪ್ತಿಪಡಿಸಿದ. ಆ ಸ್ತ್ರೀಯರು ಏಕಕಾಲದಲ್ಲಿ ಒಂದು ರೂಪದಿಂದ ತಮ್ಮ ತಮ್ಮ ಮನೆಗಳಲ್ಲಿಯೂ ಇನ್ನೊಂದು ರೂಪದಿಂದ ರಾಸಮಂಡಲದಲ್ಲಿಯೂ ಇರುವಂತೆ ಮಾಡಿ ಯೋಗೇಶ್ವರನಾದ ಕೃಷ್ಣ ರಮಿಸಿದ್ದರಿಂದ ಅವರಿಗೆ ಪತಿ ಪುತ್ರಾದಿ ಬಾಂಧವರೊಡನೆ ವಿರಸ ಉಂಟಾಗಲಿಲ್ಲ. ಅಣ್ಣನಾದ ಬಲರಾಮನಿಗೆ ಮದುವೆಯಾಗುವುದಕ್ಕಿಂತ ಮೊದಲು ತಮ್ಮನಾದ ತಾನು ಮದುವೆಯಾದರೂ ಕೃಷ್ಣನಿಗೇನೂ ದೋಷವಿಲ್ಲ. ಏಕೆಂದರೆ ಅವನು ಕರ್ಮಲೇಪವಿಲ್ಲದವ, ಸ್ವತಂತ್ರ.

ಸಂಪೂರ್ಣ ಚಂದ್ರಕರರಾಜಿತಸದ್ರಜನ್ಯಾಂ
ವೃಂದಾವನೇ ಕುಮುದುಕುಂದಸುಗಂಧವಾತೇ।
ಶ್ರುತ್ವಾಮುಕುಂದಮುಖನಿಃಸೃತಗೀತಸಾರಂ
ಗೋಪಾಂಗನಾ ಮುಮುಹುರತ್ರ ಸಸಾರ ಯಕ್ಷಃ ॥ ೭೬ ॥

ಪೂರ್ಣಚಂದ್ರನ ಕಿರಣಗಳಿಂದ ಬೆಳಗಿದ ಉತ್ತಮ ರಾತ್ರಿಗಳಲ್ಲಿ ಕನ್ನೈದಿಲೆ ಮಲ್ಲಿಗೆ ಹೂಗಳ ಸುಗಂಧಮಯವಾದ ಗಾಳಿ ಬೀಸುವ ವೃಂದಾವನದಲ್ಲಿ ಮುಕುಂದನ ಮುಖದಿಂದ ಹೊರಹೊಮ್ಮಿದ ಉತ್ತಮ ಗಾನವನ್ನು ಕೇಳಿ ಗೋಪಾಂಗನೆಯರು ಮೈಮರೆತರು. ಅಲ್ಲಿಗೆ ಒಬ್ಬ ಯಕ್ಷ ಬಂದ.

> 'ಮುಕುಂದನ ಮುಖದಿಂದ ಹೊರಹೊಮ್ಮಿದ ಗಾನ'ವೆನ್ನುವಲ್ಲಿ ಕೊಳಲಿನ ಪ್ರಸ್ತಾವವಿಲ್ಲದುದರಿಂದ ಕೇವಲ ಕೊಳಲಿನ ಗಾನ ಮಾತ್ರವೆ ಅಲ್ಲ ಅದ್ಭುತವಾದ ಬಾಯಿ ಹಾಡಿಕೆಯೂ ಇತ್ತೆಂದು ಸೂಚಿತವಾಗುತ್ತದೆ.[1]

---

1. ಮುಖ ನಿಃಸೃತ ಗೀತಸಾರಮಿತಿ ವದತಾ ವೇಣುಂ ವಿನಾ ಸ್ವಮುಖೇನೈವ ಅದ್ಭುತ ಸಂಗೀತರಸಃ ಪ್ರದರ್ಶಿತ ಇತಿ ಸೂಚಿತಂ। ಅತ ಏವ ಮುಮುಹುಃ ಮೂರ್ಛಾಂ ಗತಾ ಇತ್ಯುಕ್ತಂ॥
–ವಾದಿರಾಜೀಯ

ಶಂಖಚೂಡ ವಧ

ರುದ್ರಪ್ರಸಾದಕೃತರಕ್ಷ ಉತಾಸ್ಯ ಸಖ್ಯೆ,
ಭೃತ್ಯೋ ಬಲೀ ಖರತರೋಽಪಿ ಚ ಶಂಖಚೂಡಃ।
ತಾಃ ಕಾಲಯನ್ ಭಗವತಸ್ತಲತಾಡನೇನ
ಮೃತ್ಯುಂ ಜಗಾಮ ಮಣಿಮಸ್ಯ ಜಹಾರ ಕೃಷ್ಣಃ ॥ ೭೭ ॥

ಶಿವನ ಅನುಗ್ರಹ ಒಬ್ಬ ಯಕ್ಷನಿಗೆ ರಕ್ಷಣೆ ಉಂಟು ಮಾಡಿತ್ತು. ಮತ್ತು ಆತ ಶಿವನ ಮಿತ್ರನಾದ ಕುಬೇರನ ಸೇವಕನಾಗಿದ್ದ. ಮಹಾಕ್ರೂರಿ. ಬಲಿಷ್ಠ ಶಂಖಚೂಡ ಎಂದು ಹೆಸರು. ಅವನು ಗೋಪಿಯರನ್ನು ದೂರಕ್ಕೆ ಒಯ್ಯುತ್ತಿದ್ದ. ಭಗವಂತನ ಕೈಯ ಏಟಿನಿಂದ ಅಸು ನೀಗಿದ. ಅವನ ಮಣಿಯನ್ನು ಕಿತ್ತುಕೊಂಡ ಕೃಷ್ಣ.

ಶಂಖಚೂಡ ರಾತ್ರಿಕಾಲದಲ್ಲಿ ಯಾರಿಗೂ ತಿಳಿಯದಂತೆ ಬಂದು ಎಲ್ಲಿ ಗೋಪಿಯರನ್ನು ಭೋಗಿಸುವ ಉದ್ದೇಶದಿಂದ ಆಕಳ ಹಿಂಡನ್ನು ಹೊಡೆದು ಕೊಂಡು ಹೋಗುವಂತೆ ಹೋದ. ಕೃಷ್ಣನನ್ನು ಕಂಡೊಡನೆ ಗೋಪಿಯರನ್ನು ಬಿಟ್ಟು ಒಬ್ಬನೆ ಓಡತೊಡಗಿದ. ಆಗ ಬಲರಾಮ ಗೋಪಿಯರ ರಕ್ಷಣೆಗೆ ನಿಂತ. ಕೃಷ್ಣ ಶಂಖಚೂಡನನ್ನು ಬೆನ್ನಟ್ಟಿ ಹೋಗಿ ಒಂದು ಕೈಯ ಏಟಿನಿಂದಲೇ ಕೊಂದು ಅವನ ತಲೆಯಲ್ಲಿದ್ದ ಒಂದು ಅಮೂಲ್ಯ ರತ್ನವನ್ನು ಕಿತ್ತು ತಂದು ಸ್ತ್ರೀಯರು ನೋಡುತ್ತಿದ್ದಂತೆ ಬಲರಾಮನಿಗೆ ಇತ್ತ. ತನಗೆ ಆ ಸ್ತ್ರೀರತ್ನಗಳೆ ಸಾಕೆಂದ ಮತ್ತು ಯಶೋರತ್ನಗಳೆ ಸಾಕೆಂದ!

ಅರಿಷ್ಟಾಸುರ ವಧ

ನಾಮ್ನಾಪ್ಯರಿಷ್ಟ ಉರುಗಾಯವಿಲೋಮಚೇಷ್ಟೋ
ಗೋಷ್ಠಂ ಜಗಾಮ ವೃಷಭಾಕೃತಿರಪ್ಯವಧ್ಯಃ।
ಶಂಭೋರ್ವರಾದನುಗತಶ್ಚ ಸದೈವ ಕಂಸಂ
ಗಾ ಭೀಷಯಂತಮಮುಮಾಹ್ವಯದಾಶು ಕೃಷ್ಣಃ ॥ ೭೮ ॥

ಎತ್ತಿನ ರೂಪದಲ್ಲಿ ಅರಿಷ್ಟನೆಂಬ ಹೆಸರಿನ ಅಸುರನೂ ಗೋಕುಲಕ್ಕೆ ಬಂದ. ಶಿವವರದಿಂದ ಅವಧ್ಯನಾಗಿದ್ದು ಸದಾ ಕಂಸನ ಸೇವಕನಾಗಿದ್ದ. ಅವನು ಕೃಷ್ಣನಿಗೆ ವಿರೋಧವಾಗಿ ನಡೆದುಕೊಳ್ಳುತ್ತ ಗೋವುಗಳನ್ನು ಬೆದರಿಸುತ್ತಿದ್ದಾಗ ಕೃಷ್ಣ ಬೇಗನೆ ಅವನನ್ನು ಹೋರಾಟಕ್ಕೆ ಕರೆದ.

ಈ ವೃಷಭಾಸುರ ಒಮ್ಮೆ ಗುಟುರು ಹಾಕಿದರೆ ಗರ್ಭಿಣಿ ಹಸುಗಳಿಗೆ ಗರ್ಭಪಾತವಾಗುತ್ತಿತ್ತು. ಹೀಗೆ ಗೋವುಗಳನ್ನು ಬೆದರಿಸುವುದು,

ಅವುಗಳೊಡನೆ ಬಲಾತ್ಕಾರದಿಂದ ಮೈಥುನ ನಡೆಸುವುದು ಕೃಷ್ಣನಿಗೆ ವಿರೋಧಿಯಾದ ವರ್ತನೆ. 'ಉರುಗಾಯ' ಎಂದರೆ ಉರು=ಶ್ರೇಷ್ಠರಾದ ಬ್ರಹ್ಮಾದಿಗಳ ಉರು=ಶ್ರೇಷ್ಠವಾದ ವೇದಮಂತ್ರಗಳಿಂದ, ಗಾಯ= ಹೊಗಳಿಕೆಗೆ ಪಾತ್ರನಾದ ಶ್ರೀಕೃಷ್ಣ ಅಥವಾ ಉರು=ಉತ್ತಮವಾಗಿ ಸಾಮಾದಿಗಳನ್ನು, ಗಾಯ=ಗಾಯನ ಮಾಡುವವ ಅಂದರೆ, ಉಪದೇಶ ಮಾಡುವವ, ಶ್ರೀಕೃಷ್ಣ.[1]

ಸೋಽಪ್ಯಾಸಸಾದ ಹರಿಮುಗ್ರವಿಷಾಣಕೋಟಿ
ಮಗ್ರೇ ನಿಧಾಯ ಜಗೃಹೇಽಸ್ಯ ವಿಷಾಣಮೀಶಃ।
ಭೂಮೌ ನಿಪಾತ್ಯ ಚ ವೃಷಾಸುರಮುಗ್ರವೀರ್ಯಂ
ಯಜ್ಞೇ ಯಥಾ ಪಶುಮಮರಯದಗ್ರ್ಯಶಕ್ತಿಃ ॥ ೭೯ ॥

ಅರಿಷ್ಟಾಸುರ ಮೊನಚಾದ ಕೊಂಬಿನ ತುದಿಯನ್ನು ಮುಂದೆ ಮಾಡಿ ಇರಿಯಲು ಕೃಷ್ಣನ ಕಡೆಗೆ ಬಂದ. ಉತ್ತಮ ಬಲವುಳ್ಳ ಕೃಷ್ಣ ಅವನ ಕೊಂಬನ್ನು ಹಿಡಿದ. ನೆಲದಲ್ಲಿ ಬೀಳಿಸಿ ಯಜ್ಞದಲ್ಲಿ ಪಶುವನ್ನು ಕೊಲ್ಲುವಂತೆ ಮಹಾಬಲಿಷ್ಠನಾದ ಆ ವೃಷಾಸುರನನ್ನು ಕೊಂದ. ಯಜ್ಞದಲ್ಲಿ ಪಶುವನ್ನು ಆಯುಧದಿಂದ ಕೊಲ್ಲುವುದಿಲ್ಲ. ಉಸಿರು ಕಟ್ಟಿಸುವುದು ಮುಂತಾದ ರೀತಿಯಿಂದಲೇ ಕೊಲ್ಲುತ್ತಾರೆ. ಬಳಿಕ ಆಯುಧದಿಂದ ಅದರ ವಪಾ ಮುಂತಾದ ಅವಯವಗಳನ್ನು ತೆಗೆದು ಹೋಮಿಸುತ್ತಾರೆ. ಹಾಗೆ ಆಯುಧವಿಲ್ಲದೆಯೆ ಕೈಗಳಿಂದಲೆ ಮರ್ದಿಸಿ ವೃಷಭಾಸುರನ ಕಂಠವನ್ನು ಒದ್ದೆ ಬಟ್ಟೆ ಹಿಂಡುವಂತೆ ಹಿಂಡಿ ಕೊಂಬುಗಳನ್ನು ಕಿತ್ತು ಅವುಗಳಿಂದಲೆ ಕೊಂದ ಕೃಷ್ಣ

ಕೇಶಿಸಂಹಾರ

ಕೇಶೀ ತು ಕಂಸವಿಹಿತಸ್ತುರಗಸ್ವರೂಪೋ
ಗಿರ್ಯಾತ್ಮಜಾವರಮವಾಪ್ಯ ಸದಾ ವಿಮೃತ್ಯುಃ।
ಪಾಪಃ ಸ ಕೇಶವಮವಾಪ ಮುಖೇಽಸ್ಯ ಬಾಹುಂ
ಪ್ರಾವೇಶಯತ್ ಸ ಭಗವಾನ್ ವವೃಧೇಽಸ್ಯ ದೇಹೇ ॥ ೮೦ ॥

ಕಂಸ ಕಳಿಸಿದ ಕುದುರೆಯ ಆಕೃತಿಯ ಪಾಪಿ ಕೇಶಿಯು ಪಾರ್ವತಿಯ ವರವನ್ನು ಹೊಂದಿ ಸದಾ ಮರಣರಹಿತನಾಗಿದ್ದ. ಅವನೂ ಕೃಷ್ಣನ ಬಳಿಗೆ ಬಂದ. ಭಗವಂತ ಅವನ ಬಾಯಲ್ಲಿ ತೋಳನ್ನು ತೂರಿದ. ತೋಳು ಅವನ ಶರೀರದೊಳಗೆ ಉಬ್ಬಿತು.

---

1. ಉರುಭಿರ್ಗೀಯತ ಇತಿ ಉರುಗಾಯಃ ಉರುಧಾ ಸಾಮಾದಿನಾ ಗಾಯತೀತಿವಾ ಉರುಗಾಯಃ
-ವಾದಿರಾಜೀಯ

ತತ್ಪಾದನಾಯ ಕುಮತಿಃ ಸ ಕೃತಪ್ರಯಾಸಃ
ಶೀರ್ಣಾಸ್ಯದಂತದಶನಚ್ಛದರುದ್ಧವಾಯುಃ।
ದೀರ್ಣಃ ಪಪಾತ ಚ ಮೃತೋ ಹರಿರಪ್ಯಶೇಷೈಃ
ಬ್ರಹ್ಮೇಶಶಕ್ರದಿನಕೃತ್ಪಮುಖೈಃ ಸುತೋಽಭೂತ್ ॥ ೮೧ ॥

ಕೃಷ್ಣನ ತೋಳನ್ನು ತಿನ್ನಲು ದುರ್ಬುದ್ಧಿಯ ಆ ಅಸುರ ಯತ್ನಿಸಿದ. **ಆದರೆ ಅವನ** ಬಾಯಿ ಹಲ್ಲು ತುಟಿಗಳೇ ನಶಿಸಿದುವು. ಉಸಿರಾಟಕ್ಕೆ ತಡೆಯುಂಟಾಯಿತು. **ಶರೀರ ಎರಡು** ಭಾಗವಾಗಿ ಸೀಳಿತು. ಆತ ಸತ್ತುಬಿದ್ದ. ಬ್ರಹ್ಮ, ರುದ್ರ, ಇಂದ್ರ, ಸೂರ್ಯ **ಮುಂತಾದ ಎಲ್ಲ** ದೇವತೆಗಳೂ ಕೃಷ್ಣನನ್ನು ಕೊಂಡಾಡಿದರು.

ಪ್ರತಿ ಒಂದು ಭಾಗದಲ್ಲಿ ಎರಡು ಕಾಲು, ಒಂದು ಕಣ್ಣು ಒಂದು ಕಿವಿ, ಅರ್ಧ ಮೂಗು, ಅರ್ಧ ಬೆನ್ನು ಮತ್ತು ಅರ್ಧ ಬಾಲವಿರುವಂತೆ ಶರೀರ ಇಬ್ಭಾಗವಾಗಿ ಸೀಳಿತೆಂದು ವಿಷ್ಣುಪುರಾಣ ಹೇಳಿದೆ-

'ದ್ವಿಪಾದೇ ಪೃಷ್ಠಪುಚ್ಛಾರ್ಧೇ ಶ್ರವಣೈಕಾಕ್ಷಿನಾಸಿಕೇ...।'

ವ್ಯೋಮಾಸುರ ಸಂಹಾರ

ವ್ಯೋಮಶ್ಚ ನಾಮ ಮಯಸೂನುರಜಪ್ರಸಾದಾತ್
ಲಬ್ಧಾಮಿತಾಯುರಖಿಲಾನ್ ವಿದಧೇ ಬಿಲೇ ಸಃ।
ತಂ ಶ್ರೀಪತಿಃ ಸುರಪತಿಃ ಪಶುವದ್ ವಿಶಸ್ಯ
ನಿಃಸಾರಿತಾನ್ ಬಿಲಮುಖಾದಖಿಲಾಂಶ್ಚಕಾರ ॥ ೮೨ ॥

ವ್ಯೋಮನೆಂದು ಪ್ರಸಿದ್ಧನಾದ ಮಯಾಸುರನ ಪುತ್ರ ಬ್ರಹ್ಮನ ಅನುಗ್ರಹದಿಂದ ಅಮಿತವಾದ ಆಯುಸ್ಸನ್ನು ಪಡೆದವ. ಅವನು ಎಲ್ಲ ಗೊಲ್ಲ ಬಾಲಕರನ್ನೂ ಗುಹೆಯಲ್ಲಿ ಅಡಗಿಸಿಟ್ಟ. ದೇವಾಧಿಪತಿ ಶ್ರೀಕೃಷ್ಣ ಅವನನ್ನೂ ಪಶುವನ್ನು ಕೊಲ್ಲುವಂತೆ ಕೊಂದು ಎಲ್ಲರನ್ನೂ ಗುಹೆಯ ಬಾಗಿಲಿನಿಂದ ಹೊರಗೆ ಹೊರಡಿಸಿದ.

ಒಮ್ಮೆ ಗೊಲ್ಲಬಾಲಕರು ಕುರಿಗಳು ಕಳ್ಳರು ಮತ್ತು ರಾಜಭಟರ ಆಟವಾಡಿದರು. ಕೆಲವು ಬಾಲಕರು ಕುರಿಗಳಾದರು, ಕೆಲವು ಕಳ್ಳರಾದರು, ಕೆಲವರು ರಾಜಭಟರಾದರು. ಕಳ್ಳರು ಕುರಿಗಳನ್ನು ಕದ್ದು ಬಚ್ಚಿಡಬೇಕು, ರಾಜಭಟರು ಕಳ್ಳರನ್ನು ಹಿಡಿದು ಅವರಿಂದ ಕುರಿಗಳನ್ನು ಬಿಡಿಸಿ ತರಬೇಕು. ವ್ಯೋಮಾಸುರ ಗೊಲ್ಲ ಬಾಲಕನಾಗಿ ಬಂದು ಆಟದಲ್ಲಿ ಸೇರಿಕೊಂಡ. ಕೃಷ್ಣ ಏನೂ ಅರಿಯದವನಂತಿದ್ದ. ಅಸುರ ಕಳ್ಳನಾಗಿ ಕುರಿಗಳಾದ ಬಾಲಕರನ್ನೆಲ್ಲ ಕದ್ದು ಗುಹೆಯಲ್ಲಿ ಬಚ್ಚಿಟ್ಟ. ಭಟರಿಗೆ ಅವನನ್ನು ಹಿಡಿಯಲಾಗಲಿಲ್ಲ. ಕೊನೆಗೆ

ಕೃಷ್ಣನೆ ಹಿಡಿದು ಪಶುವನ್ನು ಕೊಲ್ಲುವಂತೆ ಕೊಂದು ಗುಹೆಯೊಳಗೆ ಬಂಧಿತರಾಗಿ ಕಳವಳಿಸುತ್ತಿದ್ದ ಬಾಲಕರನ್ನು ಹೊರಗೆ ತಂದು ಕಾಪಾಡಿದ. ಈ ಬಾಲಕರೆಲ್ಲರೂ ದೇವಾಂಶಸಂಭೂತರು. ದೇವಾಧಿಪತಿಯಾದ ಶ್ರೀಕೃಷ್ಣ ಅವರನ್ನು ಕಾಪಾಡಿದಾಗ ಬ್ರಹ್ಮಾದಿಗಳು ಆನಂದದಿಂದ ಕೊಂಡಾಡಿದರು. ಸಜ್ಜನರನ್ನು ಸಂಸಾರಬಂಧನದಿಂದ ಬಿಡಿಸಿ ಕಾಪಾಡುವವ ತಾನೆಂದು ಈ ನೆಪದಿಂದ ತೋರಿಕೊಂಡ ಶ್ರೀಕೃಷ್ಣ

ವಸುದೇವ ದೇವಕಿಯರ ಬಂಧನ

ಕುರ್ವತ್ಯನನ್ಯವಿಷಯಾಣಿ ದುರಂತಶಕ್ತೌ
ಕರ್ಮಾಣಿ ಗೋಕುಲಗತೇಽಖಿಲಲೋಕನಾಥೇ।
ಕಂಸಾಯ ಸರ್ವಮವದತ್ ಸುರಕಾರ್ಯಹೇತೋಃ
ಬ್ರಹ್ಮಾಂಕಜೋ ಮುನಿರಕಾರಿ ಯದೀಶಪಿತ್ರಾ ॥ ೮೩ ॥

ಅನಂತ ಶಕ್ತಿಯುಳ್ಳ ಅಖಿಲಲೋಕನಾಥ ಶ್ರೀಕೃಷ್ಣ ಹೀಗೆ ಇತರರಿಗೆ ಅಸಾಧ್ಯವಾದ ಕಾರ್ಯಗಳನ್ನು ಮಾಡುತ್ತ ಗೋಕುಲದಲ್ಲಿದ್ದಾಗ ನಾರದಮುನಿ ದೇವಕಾರ್ಯ ನಿಮಿತ್ತವಾಗಿ ವಸುದೇವ ಹಿಂದೆ ಮಾಡಿದ್ದೆಲ್ಲವನ್ನೂ ಕಂಸನಿಗೆ ಹೇಳಿದ.

ಕಂಸವಧೆಯಾಗಬೇಕೆಂಬುದು ದೇವತೆಗಳಿಗೆ ಇಷ್ಟವಾದ ಕಾರ್ಯ. ಅದು ನಡೆಯಬೇಕಾದರೆ ಕಂಸ ಮಹಾ ಅಪರಾಧ ಮಾಡಬೇಕು. ನಿರಪರಾಧಿಯನ್ನು ಕೊಲ್ಲಲಾಗದು. ಅದಕ್ಕೆ ನಾರದರು ಬಂದು ವಸುದೇವನ ಬಗ್ಗೆ ಅವನು ಹಿಂದೆ ಮಾಡಿದ ಎಲ್ಲ ಕಾರ್ಯಗಳ ಬಗ್ಗೆ ಕಂಸನಿಗೆ ತಿಳಿಸಿದರು. ಆದರಿಂದ ಕಂಸ ಕುಪಿತನಾಗಿ ವಸುದೇವ ದೇವಕಿಯರನ್ನು ಬಂಧಿಸಬೇಕು. ಆ ಅಪರಾಧಕ್ಕೆ ಕೃಷ್ಣ ಕಂಸನನ್ನು ಕೊಲ್ಲಬೇಕು ಎಂಬುದು ನಾರದರ ಮನೋಗತವಾಗಿತ್ತು.

ಶ್ರುತ್ವಾತಿ ಕೋಪರಭಸೋಚ್ಚಲಿತಃ ಸ ಕಂಸೋ
ಬಧ್ವಾ ಸಭಾರ್ಯಮಥ ಶೂರಜಮುಗ್ರಕರ್ಮಾ।
ಅಕ್ರೂರಮಾಶ್ವದಿಶದಾನಯನಾಯ ವಿಷ್ಣೋ
ರಾಮಾನ್ವಿತಸ್ಯ ಸಹ ಗೋಪಗಣೈ ರಥೇನ ॥ ೮೪ ॥

ನಾರದರ ಮಾತನ್ನು ಕೇಳಿ ಕ್ರೂರಕರ್ಮಿಯಾದ ಆ ಕಂಸ ಕೋಪಾವೇಗದ ಭರದಲ್ಲಿ ಎದ್ದು ವಸುದೇವ ದೇವಕಿಯರನ್ನು ಬಂಧಿಸಿದ. ಕೃಷ್ಣನನ್ನು ಬಲರಾಮನೊಡನೆ ಮತ್ತು ಗೊಲ್ಲರ ಗುಂಪುಗಳೊಡನೆ ಬಿಲ್ಲಹಬ್ಬಕ್ಕೆ ಬೇಗನೆ ಕರೆತರಲು ರಥದಿಂದ ಅಕ್ರೂರನನ್ನು ಕಳಿಸಿದ.

ಗೋಕುಲಕ್ಕೆ ಅಕ್ರೂರ

ಸಂಸೇವನಾಯ ಸ ಹರೇರಭವತ್ ಪುರೈವ
ನಾಮ್ನಾ ಕಿಶೋರ ಇತಿ ಯಃ ಸುರಗಾಯಕೋಽಭೂತ್ ।
ಸ್ವಾಯಂಭುವಸ್ಯ ಚ ಮನೋಃ ಪರಮಾಂಶಯುಕ್ತ
ಆವೇಶಯುಕ್ ಕಮಲಜಸ್ಯ ಬಭೂವ ವಿದ್ವಾನ್ ॥ ೮೫ ॥

ಅಕ್ರೂರ ಹಿಂದೆ ಕಿಶೋರ ಎಂಬ ದೇವಗಂಧರ್ವನಾಗಿದ್ದ. ಈಗ ಸ್ವಾಯಂಭುವ ಮನುವಿನ ಉತ್ತಮ ಅಂಶಯುಕ್ತನಾಗಿ ಬ್ರಹ್ಮನ ಆವೇಶದಿಂದಲೂ ಕೂಡಿ ಹರಿಸೇವೆಗಾಗಿ ಹುಟ್ಟಿದ್ದ. ಜ್ಞಾನಿಯಾಗಿದ್ದ.

ಸೋಽಕ್ರೂರ ಇತ್ಯಭವದುತ್ತಮಪೂಜ್ಯಕರ್ಮಾ
ವೃಷ್ಣಿಷ್ವಥಾಸ ಸ ಹಿ ಭೋಜಪತೇಶ್ಚ ಮಂತ್ರೀ ।
ಆದಿಷ್ಟ ಏವ ಜಗದೀಶ್ವರ ದೃಷ್ಟಿಹೇತೋ
ರಾನಂದ ಪೂರ್ಣಸುಮನಾ ಅಭವತ್ ಕೃತಾರ್ಥಃ ॥ ೮೬ ॥

ಉತ್ತಮ ಗೌರವಾಸ್ಪದ ಕರ್ಮಗಳನ್ನು ಮಾಡುತ್ತಿದ್ದ ಆವನು ವೃಷ್ಣಿ ವಂಶದಲ್ಲಿ ಅಕ್ರೂರನೆಂದು ಪ್ರಸಿದ್ಧನಾಗಿದ್ದ. ಕಂಸನ ಮಂತ್ರಿಯಾಗಿದ್ದು ಅವನ ಆಜ್ಞೆ ಬಂದೊಡನೆ ತನಗೆ ಜಗದೀಶನ ದರ್ಶನವಾಗುವುದೆಂದು ಆನಂದ ತುಂಬಿದ ಮನಸ್ಸಿನವನಾದ, ಕೃತಾರ್ಥನಾದ.

ಸರ್ವಶಕ್ತನಾದ ಕೃಷ್ಣನಿಗೆ ಕಂಸನಿಂದೇನು ಅಪಾಯ? ನನಗೇ ಈ ನೆಪದಿಂದ ಭಗವಂತನ ದರ್ಶನ ಲಾಭವಾಗುವುದೆಂದು ಅಕ್ರೂರ ಹರ್ಷಗೊಂಡ.

ಆರುಹ್ಯ ತದ್ರಥವರಂ ಭಗವತ್ಪದಾಬ್ಜ
ಮಬ್ಜೋದ್ಭವ ಪ್ರಣತಮಂತರಮಂತರೇಣ ।
ಸಂಚಿಂತಯನ್ ಪಥಿ ಜಗಾಮ ಸ ಗೋಷ್ಠಮಾರಾತ್
ದೃಷ್ಟ್ವಾಪದಾಂಕಿತಭುವಂ ಮುಮುದೇ ಪರಸ್ಯ ॥ ೮೭ ॥

ಅಕ್ರೂರ ಶ್ರೇಷ್ಠವಾದ ರಥವನ್ನೇರಿ, ಬ್ರಹ್ಮನು ವಂದಿಸುವ ಭಗವಂತನ ಪಾದಕಮಲವನ್ನು ಹೃದಯ ಕಮಲದಲ್ಲಿರಿಸಿಕೊಂಡು, ಮಾರ್ಗದಲ್ಲಿ ಮನಸ್ಸಿನಿಂದ ನಿರಂತರ ಧ್ಯಾನಿಸುತ್ತ ಗೋಕುಲವನ್ನು ಸೇರಿದ. ಕೃಷ್ಣನ ಪಾದಚಿಹ್ನೆಯಿಂದ ಕೂಡಿದ ನೆಲವನ್ನು ಸಮೀಪದಲ್ಲಿ ಕಂಡು ಆನಂದಿಸಿದ.

ಸೋಽವೇಷ್ಟತಾತ್ರ ಜಗದೀಶಿತುರಂಗಸಂಗಾತ್
ಲಬ್ಧೋಚ್ಚಯೇನ ನಿಖಿಲಾಘವಿದಾರಣೇಷು ।

ಪಾಂಸುಷ್ವಜೇಶಪುರುಹೂತಮುಖೋಚ್ಚವಿದ್ಯುದ್
ಭ್ರಾಜತ್ಕಿರೀಟ ಮಣಿಲೋಚನಗೋಚರೇಷು ॥ ೮೮ ॥

ಜಗನ್ನಾಥನ ಅಂಗಸಂಗದ ಮಹತ್ವದಿಂದ ಸಕಲ ಪಾಪ ಪರಿಹಾರಕವಾಗಿದ್ದು ಬ್ರಹ್ಮ, ರುದ್ರ, ಇಂದ್ರ ಮುಂತಾದ ಉತ್ತಮ ದೇವತೆಗಳ ಮಿಂಚಿನ ಕಾಂತಿಯ ಕಿರೀಟ ಮಣಿಗಳಲ್ಲಿಯೂ ಕಣ್ಣುಗಳಲ್ಲಿಯೂ ಗೋಚರಿಸುತ್ತಿದ್ದ ಧೂಳಿನಲ್ಲಿ ನೆಲದ ಮೇಲೆ ಅಕ್ರೂರ ಹೊರಳಾಡಿದ.

ಕೃಷ್ಣನ ಪಾದಧೂಳಿ ದೇವತೆಗಳ ಮಿಂಚಿನ ಕಾಂತೀಯ ಕಿರೀಟ ಮಣಿಗಳಲ್ಲಿ ಗೋಚರಿಸಲು ಅವರು ತಲೆಬಾಗಿ ಕೃಷ್ಣನ ಪಾದಗಳಿಗೆ ನಮಿಸುವುದೇ ಕಾರಣ. ಮಿಂಚಿನಕಾಂತಿಯ ಕಣ್ಣುಗಳಲ್ಲಿ ಗೋಚರಿಸುವುದೆಂದರೆ ದೇವತೆಗಳು ಹರಿಯ ಪಾದ ಧೂಳಿಯ ದರ್ಶನ ಮಾಡುವರೆಂದು ಅಭಿಪ್ರಾಯ.[1] ಧೂಳಿಯನ್ನು ದೇವತೆಗಳು ಆದರದಿಂದ ಕಣ್ಣಿಗೆ ಒತ್ತಿಕೊಳ್ಳುವರೆಂದೂ ಒಂದು ಅಭಿಪ್ರಾಯವಿದೆ.[2]

ಸೋಽಪಶ್ಯತಾಥ ಜಗದೇಕಗುರುಂ ಸಮೇತಂ
ಅಗ್ರೋದ್ಭವೇನ ಭುವಿ ಗಾ ಅಪಿ ದೋಹಯಂತಮ್ ।
ಆನಂದಸಾಂದ್ರತನುಮಕ್ಷಯಮೇನಮೀಕ್ಷ್ಯ
ಹೃಷ್ಟಃ ಪಪಾತ ಪದಯೋಃ ಪುರುಷೋತ್ತಮಸ್ಯ ॥ ೮೯ ॥

ಕೃಷ್ಣ ಆನಂದ ಪೂರ್ಣಶರೀರಿಯೂ ನಾಶರಹಿತನೂ ಜಗತ್ತಿಗೆ ಮುಖ್ಯ ಗುರುವೂ ಆಗಿದ್ದರೂ ಭೂಮಿಯಲ್ಲಿ ಅಣ್ಣಬಲರಾಮನೊಡಗೂಡಿ ಹಸುಗಳನ್ನು ಕರೆಯುತ್ತಿದ್ದುದನ್ನು ಅಕ್ರೂರ ಕಂಡು ಹರ್ಷಗೊಂಡ. ಪುರುಷೋತ್ತಮನ ಪಾದಗಳಲ್ಲಿ ಬಿದ್ದ.

ಉತ್ಥಾಪ್ಯ ತಂ ಯದುಪತಿಃ ಸಬಲೋ ಗೃಹಂ ಸ್ವಂ
ನೀತ್ವೋಪಚಾರಮಖಿಲಂ ಪ್ರವಿಧಾಯ ತಸ್ಮಿನ್ ।
ನಿತ್ಯೋದಿತಾಕ್ಷಯಚಿದಪ್ಯಖಿಲಂ ಸ ತಸ್ಮಾತ್
ಶುಶ್ರಾವ ಲೋಕಚರಿತಾನುವಿಡಂಬನೇನ ॥ ೯೦ ॥

ಬಲರಾಮ ಸಮೇತನಾದ ಕೃಷ್ಣ ಅಕ್ರೂರನನ್ನು ಎಬ್ಬಿಸಿ ಮನೆಗೆ ಕರೆದೊಯ್ದು ಎಲ್ಲ

---

1. ಕಿರೀಟ ಮಣೀನಾಂ ಲೋಚನಾನಾಂ ಚ ಗೋಚರೇಷು, ಶಿರೋಭಿರ್ನಮ್ಯಮಾನೇಷು ಲೋಚನೈಃ ಸಾದರಂ ದೃಶ್ಯಮಾನೇಷು, ಇತ್ಯರ್ಥಃ । ವಾದಿರಾಜೀಯ
2. ನ ಕೇವಲಂ ಮಣಿಷು, ಲೋಚನೋಪರಿಭಾಗೇ ಷು ಚ ಸಂಗ್ಲೇಷ್ವಿತ್ಯರ್ಥಲಾಭಾರ್ಥಂ ಮಣಿಲೋಚನ ಗೋಚರೇಷ್ವಿತ್ಯುಕ್ತಂ । -ಸತ್ಯಾಭಿನವೀಯ

ಉಪಚಾರ ನೀಡಿ ನಿತ್ಯವ್ಯಕ್ತವಾದ ಅಕ್ಷಯಜ್ಞಾನ ಉಳ್ಳವನಾದರೂ ಲೋಕವ್ಯವಹಾರವನ್ನು ಅನುಕರಿಸುವ ನಿಮಿತ್ತದಿಂದ ಅವನಿಂದ ಎಲ್ಲವನ್ನೂ ಕೇಳಿ ತಿಳಿದುಕೊಂಡ.

ಶ್ರುತ್ವಾಸ್ಯ ಕಂಸಹೃದಿ ಸಂಸ್ಥಿತಮಬ್ಜನಾಭಃ
ಪ್ರಾತಸ್ತು ಗೋಪಸಹಿತೋ ರಥಮಾರುರೋಹ।
ರಾಮಶ್ಚಫಲ್ಕತನಯಾಭಿಯುತೋ ಜಗಾಮ
ಯಾನೇನ ತೇನ ಯಮುನಾತಟಮವ್ಯಯಾತ್ಮಾ ॥೯೦॥

ನಾಶರಹಿತ ಶರೀರಿಯಾದ ಪದ್ಮನಾಭ ಕಂಸನ ಮನೋಗತವನ್ನು ಕೇಳಿ ತಿಳಿದು ಬೆಳಿಗ್ಗೆ ಗೊಲ್ಲರ ಸಮೇತ ರಥವೇರಿದ. ಬಲರಾಮ ಅಕ್ರೂರರೊಂದಿಗೆ ಆ ರಥದಿಂದ ಯಮುನೆಯ ತೀರಕ್ಕೆ ಪ್ರಯಾಣ ಮಾಡಿದ.

ಅಕ್ರೂರನಿಗೆ ವಿಶ್ವರೂಪ ದರ್ಶನ

ಸಂಸ್ಥಾಪ್ಯ ತೌ ರಥವರೇ ಜಗತಾಭಿವಂದ್ಯೌ
ಶಾಫಲ್ಕಿರಾಶ್ವವತತಾರ ಯಮಸ್ವಸಾರಮ್।
ಸ್ನಾತ್ವಾಸ ತತ್ರ ವಿಧಿನೈವ ಕೃತಾಘಮರ್ಷಃ
ಶೇಷಾಸನಂ ಪರಮಪೂರುಷಮತ್ರ ಚೈಕ್ಷತ್ ॥೯೧॥

ಯಮುನೆಯ ತೀರಕ್ಕೆ ಬಂದಾಗ ಜಗದ್ ವಂದ್ಯರಾದ ಕೃಷ್ಣರಾಮರನ್ನು ಶ್ರೇಷ್ಠ ರಥದಲ್ಲಿ ಇರಿಸಿ ಅಕ್ರೂರ ತಾನು ಬೇಗನೆ ಯಮುನಾ ನದಿಗೆ ಇಳಿದ. ಅಲ್ಲಿ ವಿಧಿ ಪೂರ್ವಕವಾಗಿ ಅಘಮರ್ಷಣ ಸ್ನಾನ ಮಾಡಿ, ಆ ನೀರಿನಲ್ಲಿ ಶೇಷಶಾಯಿಯಾದ ಪರಮಪುರುಷನಾದ ಶ್ರೀಕೃಷ್ಣನನ್ನು ಕಂಡ.

ನಿತ್ಯಂ ಹಿ ಶೇಷಮಭಿಪಶ್ಯತಿ ಸಿದ್ಧಮಂತ್ರೋ
ದಾನೇಶ್ವರಃ ಸ ತು ತದಾ ದದೃಶೇ ಹರಿಂ ಚ।
ಅಗ್ರೇ ಹಿ ಬಾಲತನುಮತ್ರ ಸಮೀಕ್ಷ್ಯ ಕೃಷ್ಣಃ
ಕಿಂ ನಾಸ್ತಿ ಯಾನ ಇತಿ ಯಾನಮುಖೋ ಬಭೂವ ॥೯೨॥

ಅಕ್ರೂರ ಮಂತ್ರಸಿದ್ಧಿ ಉಳ್ಳವ. ನಿತ್ಯವೂ ಶೇಷನನ್ನು ಮಾತ್ರ ಕಾಣುತ್ತಿದ್ದ. ಆ ದಿನ ಹರಿಯನ್ನೂ ಕಂಡ. ತನ್ನ ಮುಂದೆ ನೀರೊಳಗೆ ಬಾಲ ಶರೀರಿಯಾದ ಕೃಷ್ಣನನ್ನು ಕಂಡು 'ಕೃಷ್ಣ ರಥದಲ್ಲಿ ಇಲ್ಲವೆ?' ಎಂದು ರಥದ ಕಡೆಗೆ ಮುಖಮಾಡಿದ.

ತತ್ರಾಪಿ ಕೃಷ್ಣಮಭಿವೀಕ್ಷ್ಯ ಪುನರ್ನಿಮಜ್ಯ
ಶೇಷೋರುಭೋಗಶಯನಂ ಪರಮಂ ದದರ್ಶ।

ಬ್ರಹ್ಮೇಶಶಕ್ರಮುಖದೇವಮುನೀಂದ್ರವೃಂದ
ಸಂ ವಂದಿತಾಂಘ್ರಿಯುಗಮಿಂದಿರಯಾ ಸಮೇತಮ್ ॥ ೯೪ ॥

ರಥದಲ್ಲಿಯೂ ಕೃಷ್ಣನಿರುವುದನ್ನು ಕಂಡು ಪುನಃ ಮುಳುಗಿ, ಅಲ್ಲಿಯೂ ಕೃಷ್ಣನನ್ನು ಕಂಡ. ಕೇವಲ ಕೃಷ್ಣನನ್ನಲ್ಲ. ಶೇಷನ ಉತ್ತಮ ಶರೀರದ ಮೇಲೆ ಪವಡಿಸಿದ, ಬ್ರಹ್ಮ ರುದ್ರ ಇಂದ್ರಾದಿ ದೇವತೆಗಳ ಮತ್ತು ಶ್ರೇಷ್ಠ ಮುನಿಗಳ ಸಮೂಹಗಳಿಂದ ವಂದಿತವಾದ ಪಾದದ್ವಂದ್ವ ಉಳ್ಳ, ರಮಾಸಮೇತನಾದ ಆ ಪರಮ ಪುರುಷ ಕೃಷ್ಣನನ್ನೇ ಕಂಡ.

ಸ್ತುತ್ವಾವರಸ್ತುತಿಭಿರವ್ಯಯಮಬ್ಜನಾಭಂ
ಸೋಽತರ್ಹಿತೇ ಭಗವತಿ ಸ್ವಕಮಾರುರೋಹ।
ಯಾನಂ ಚ ತೇನ ಸಹಿತೋ ಭಗವಾಞ್ಜಗಾಮ
ಸಾಯಂ ಪುರೀಂ ಸಹಬಲೋ ಮಧುರಾಮನಂತಃ ॥ ೯೫ ॥

ಅಕ್ರರ ನಾಶರಹಿತನಾದ ಪದ್ಮನಾಭನನ್ನು ಉತ್ತಮ ಸ್ತೋತ್ರಗಳಿಂದ ಸ್ತುತಿಸಿ, ಭಗವಂತ ಮರೆಯಾದಾಗ ತನ್ನ ರಥವನ್ನೇರಿದ. ಅವನೊಡನೆ ಭಗವಾನ್ ಶ್ರೀಕೃಷ್ಣ ಬಲರಾಮಸಹಿತನಾಗಿ ಸಾಯಂಕಾಲದಲ್ಲಿ ಮಧುರಾಪುರಿಯನ್ನು ಸೇರಿದ.

ಅಗ್ರೇಽಥ ದಾನಪತಿಪಕ್ಷಯಪೌರುಷೋಽಸಾ
ವೀಶೋ ವಿಸೃಜ್ಯ ಸಬಲಃ ಸಹಿತೋ ವಯಸ್ಯೈಃ।
ದ್ರಷ್ಟುಂ ಪುರೀಮಭಿಜಗಾಮ ನರೇಂದ್ರಮಾರ್ಗೇ
ಪೌರೈಃ ಕುತೂಹಲಯುತೈರಭಿಪೂಜ್ಯಮಾನಃ ॥ ೯೬ ॥

ನಾಶರಹಿತ ಪೌರುಷ ಉಳ್ಳ ಪ್ರಭು ಶ್ರೀಕೃಷ್ಣ ಮೊದಲಿಗೆ ಅಕ್ರೂರನನ್ನು ಕಳಿಸಿಕೊಟ್ಟು ಬಲರಾಮ ಸಮೇತನಾಗಿ ಸ್ನೇಹಿತರಿಂದಲೂ ಒಡಗೂಡಿ ನಗರ ದರ್ಶನಕ್ಕೆ ಹೊರಟ. ರಾಜಮಾರ್ಗದಲ್ಲಿ ಪಟ್ಟಣಿಗರು ಕುತೂಹಲಯುಕ್ತರಾಗಿ ಅವನನ್ನು ಆರಾಧಿಸಿದರು.

ಅಗಸನ ವಧೆ

ಆಸಾದ್ಯ ಕುಂಜರಗತಂ ರಜಕಂ ಯಯಾಚೇ
ವಸ್ತ್ರಾಣಿ ಕಂಸದಯಿತಂ ಗಿರಿಜಾವರೇಣ।
ಮೃತ್ಯೋರ್ಜಿತಂ ಸಪದಿ ತೇನ ದುರುಕ್ತಿವಿದ್ಧಃ
ಪಾಪಂ ಕರಾಗ್ರಮೃದಿತಂ ವ್ಯನಯದ್ ಯಮಾಯ ॥ ೯೭ ॥

ಪಾರ್ವತಿಯ ವರದಿಂದ ಮರಣರಹಿತನಾಗಿದ್ದು ಕಂಸನಿಗೆ ಪ್ರಿಯನಾಗಿದ್ದ ಒಬ್ಬ ಅಗಸ ಆನೆಯ ಮೇಲೆ ಕುಳಿತು ಬರುವುದನ್ನು ಶ್ರೀಕೃಷ್ಣ ನೋಡಿ ವಸ್ತ್ರಗಳನ್ನು ಬೇಡಿದ. ಅಗಸ

ಕೆಟ್ಟ ಮಾತುಗಳಿಂದ ಬೈದ. ಪಾಪಿಯಾದ ಅವನನ್ನು ಕೃಷ್ಣ ಕೂಡಲೆ ಕೈಯ ತುದಿಯಿಂದ ಕೊಂದು ಯಮನ ಬಳಿಗೇ ಅಟ್ಟಿದ.

ಹತ್ವಾತಮಕ್ಷತಬಲೋ ಭಗವಾನ್ ಪ್ರಗೃಹ್ಯ
ವಸ್ತ್ರಾಣಿ ಚಾತ್ಮಸಮಿತಾನಿ ಬಲಸ್ಯ ಚಾದಾತ್।
ದತ್ವಾಪರಾಣಿ ಸಖಿಗೋಪಜನಸ್ಯ ಶಿಷ್ಟಾ
ನ್ಯಾಸ್ತೀರ್ಯ ತತ್ರ ಚ ಪದಂ ಪ್ರಣಿಧಾಯ ಚಾಗಾತ್ ॥ ೯೮ ॥

ನಾಶರಹಿತ ಶಕ್ತಿಉಳ್ಳ ಭಗವಂತ ಅವನನ್ನು ಕೊಂದು, ತನಗೆ ಯೋಗ್ಯವಾದ ಬಟ್ಟೆಗಳನ್ನು ಎತ್ತಿಕೊಂಡು, ಬಲರಾಮನಿಗೂ ಅವನಿಗೆ ಯೋಗ್ಯವಾದುದನ್ನು ತೆಗೆದು ಕೊಟ್ಟ ಬೇರೆ ಬಟ್ಟೆಗಳನ್ನು ಮಿತ್ರರಾದ ಗೊಲ್ಲ ಜನರಿಗೂ ಕೊಟ್ಟು ಉಳಿದವುಗಳನ್ನು ರಸ್ತೆ ಮೇಲೆ ಹಾಸಿ ಅವುಗಳ ಮೇಲೆ ಹೆಜ್ಜೆಯಿಟ್ಟು ನಡೆದ.

ಕೌಶಿಕ ಹೂವಾಡಿಗರ ಸೇವೆ

ಗ್ರಾಹ್ಯಾಪಹೇಯರಹಿತೈಕಚಿದಾತ್ಮಸಾಂದ್ರ
ಸ್ವಾನಂದಪೂರ್ಣವಪುರಪ್ಯಯಶೋಷಹೀನಃ।
ಲೋಕಾನ್ ವಿಡಂಬ್ಯ ನರವತ್ ಸಮಲಕ್ತಕಾದ್ಯೈ
ರ್ವಪ್ತ್ರಾವಿಭೂಷಿತ ಇವಾಭವದಪ್ರಮೇಯಃ ॥ ೯೯ ॥

ಅಪ್ರಮೇಯವಾದ ಕೃಷ್ಣ ಉಪಾದೇಯ ಹೇಯ ರಹಿತ ಉತ್ತಮ ಜ್ಞಾನಾತ್ಮಕ ಸಾಂದ್ರ ಸ್ವರೂಪಭೂತ ಆನಂದಮಯ ಶರೀರಿ. ವೃದ್ಧಿಹ್ರಾಸರಹಿತ. ಆದರೂ ಲೋಕದ ಜನರನ್ನು ಅನುಕರಣ ಮಾಡಿ ಮಾನವನಂತೆ ಕೌಶಿಕನಿಂದ ಅಲಕ್ತಕಾದಿಗಳಿಂದ ಅಲಂಕೃತನಾದವನಂತೆ ತೋರಿಕೊಂಡ.

ಉಪಾದೇಯ ರಹಿತ=ಅಲಕ್ತಕ ಮುಂತಾದ ಸೌಂದರ್ಯ ಸಾಧನಗಳು ಬೇರೆಯವರಿಗೆ ಉಪಾದೇಯ, ಸ್ವೀಕಾರಯೋಗ್ಯ. ಭಗವಂತನಿಗೆ ಅದರ ಅಪೇಕ್ಷೆ ಇಲ್ಲ. ಹೇಯರಹಿತ=ಶರೀರದಿಂದ ಕತ್ತರಿಸಿ ತೆಗೆಯಬೇಕಾದ ಹೇಯವಾದ ಕೂದಲು ಉಗುರು ಮುಂತಾದವು ಇಲ್ಲ.[1] ಏಕೆಂದರೆ ವೃದ್ಧಿಹ್ರಾಸರಹಿತ. ವೃದ್ಧಿರಹಿತನಾದ್ದರಿಂದ ಅನಪೇಕ್ಷಿತವಾದ ಕೂದಲು ಉಗುರು ಮುಂತಾದುವು ಬೆಳೆಯುವುದಿಲ್ಲ. ಹ್ರಾಸರಹಿತನಾದ್ದರಿಂದ ಸೌಂದರ್ಯ ಅಳಿಯುವುದಿಲ್ಲ. ಸೌಂದರ್ಯ ವರ್ಧಕವಾದ ಅಲಕ್ತಕಾದಿಗಳ

---

1. ಗ್ರಾಹ್ಯೇಣ ಸ್ವೀಕರ್ತುಂ ಯೋಗ್ಯ ಮಂಡನ ದ್ರವ್ಯೇಣ, ಅಪಹೇಯೇನ ಪರಿತ್ಯಾಗ ಯೋಗ್ಯೇನ ನಖಲೋಮಾದಿನಾ ರಹಿತಂ। -ಜನಾರ್ದನೀಯ

ಅಪೇಕ್ಷೆ ಉಂಟಾಗುವುದಿಲ್ಲ. ಇದಕ್ಕೆ ಕಾರಣ ಶ್ರೀಹರಿ ಅಪ್ರಾಕೃತ ಜ್ಞಾನಾನಂದಾತ್ಮಕ ಶರೀರ ಉಳ್ಳವ. ಪ್ರಾಕೃತ ಶರೀರ ಅವನಿಗೆ ಇಲ್ಲ. ಮಾನವನಲ್ಲ ಮಾನವನಂತೆ ಕಾಣುತ್ತಾನೆ. ಅಥವಾ ಹರಿಯ ಶರೀರದಲ್ಲಿ ಮಾನವ ಶರೀರದಲ್ಲಿರುವಂತೆ ಎಡಗೈ ಹೇಯ. ಬಲಗೈ ಉಪಾದೇಯ ಎಂದು ಮುಂತಾಗಿ ಹೇಯೋಪಾದೇಯಗಳಿಲ್ಲ. ಎಲ್ಲ ಅಂಗಗಳೂ ಉಪಾದೇಯವೆ.[1]

ಅಪ್ರಮೇಯನಾದ್ದರಿಂದ ತೋರಿಕೆಗೆ ಮಾನವನಂತಿದ್ದರೂ ವಾಸ್ತವದಲ್ಲಿ ಚಿನ್ಮಯವಾದ ಕೂದಲು ಉಗುರುಗಳನ್ನು ಎಷ್ಟು ಬೇಕೋ ಅಷ್ಟು ಪ್ರಮಾಣಕ್ಕೆ ಸಂಕೋಚಗೊಳಿಸಿ ಅದರ ಮೇಲ್ಭಾಗದಲ್ಲಿ ಅನಪೇಕ್ಷಿತವಾದ ಪ್ರಾಕೃತ ಕೂದಲು ಉಗುರುಗಳನ್ನು ನಿರ್ಮಿಸಿ ಅವುಗಳನ್ನು ಮಾತ್ರ ಕ್ಷೌರಿಕನ ಕತ್ತಿಗೆ ಒಡ್ಡುತ್ತಾನೆ ಶ್ರೀಹರಿ. ಇಲ್ಲದಿದ್ದರೆ ಅತಿ ಕಠಿನವಾದ ನೂರು ಕೋಟಿ ಯೋಜನ ದಪ್ಪದ ಸ್ವರ್ಣಮಯ ಬ್ರಹ್ಮಾಂಡ ಕಟಾಹವನ್ನು ಭೇದಿಸಿಯೂ ತಾನು ಒಂದಿಷ್ಟೂ ಮುರಿಯದ ಹರಿಯ ಪಾದನಖವನ್ನು ಯಾವ ಕ್ಷೌರಿಕನ ಕತ್ತಿ ತುಂಡರಿಸೀತು?[2] ಹರಿ ಅಲಕ್ತಕಾದಿಗಳಿಂದ ಅಲಂಕರಿಸಿಕೊಂಡಾಗ ಮೇಲುನೋಟಕ್ಕೆ ಬೇರೆ ಸೌಂದರ್ಯ ಉಂಟಾದಂತೆ ಕಂಡರೂ ಅದು ವಸ್ತುತಃ ಹಿಂದೆ ಇದ್ದ ಸ್ವಾಭಾವಿಕ ಸೌಂದರ್ಯವೆ ವ್ಯಕ್ತವಾಗಿರುತ್ತದೆ.

ಮಾಲಾಮವಾಪ್ಯ ಚ ಸುದಾಮತ ಆತ್ಮತಂತ್ರ
ಸ್ತಾವಕ್ಷಯೋಽನುಜಗೃಹೇ ನಿಜಪಾರ್ಷದೌ ಹಿಂ।
ಪೂರ್ವಂ ವಿಕುಂಠಸದನಾದ್ದರಿಸೇವನಾಯ
ಪ್ರಾಪೌತ್ಥುವಂ ಮೃಜನಪುಷ್ಪಕರೌ ಪುರಾಪಿ ॥ ೧೦೦ ॥

---

1. ಗ್ರಾಹ್ಯಾಪಹೇಯೇತ್ಯತ್ರ ಭಾವಪ್ರಧಾನೋ ನಿರ್ದೇಶಃ ಗ್ರಾಹ್ಯತ್ವಾಪಹೇಯತ್ವಾಭ್ಯಾಂ ರಹಿತಂ, ಕೇವಲಂ ಗ್ರಾಹ್ಯಮೇವೇತ್ಯರ್ಥಃ ಮನುಷ್ಯ ದೇಹೇಷು ವಾಮಕರಾದಿಕಮಪಹೇಯಂ, ದಕ್ಷಿಣಕರಾದಿಕಂ ಗ್ರಾಹ್ಯಮಿತಿ ವಿಭಾಗೋಽಸ್ತಿ ಭಗವದ್ವಪುಃ ಸರ್ವತ್ರ ಮಂಗಲಕರ ಮಿತ್ಯರ್ಥಃ।
-ವಾದಿರಾಜೀಯ

2. ಪಪ್ರಾ ಅಲಂಕಾರಾಯ ನಖಿಶ್ಮಶ್ರ್ವಾದೀನಾಂ ಯಥಾಯೋಗ್ಯಂ ಈಷದೀಷಚ್ಛೇದನ ಕಾಲೇ ಆನಂದಮಯ ಸ್ವನಖಾದಿಕಂ ಸ್ವಶಕ್ತ್ಯೈವ ಯಥಾಲಂಕಾರೋ ಭವತಿ ತಥಾ ಸಂಕೋಚಯಿತ್ವಾ ಪ್ರಾಕೃತನಖಿನ ಕೇಶಾಗ್ರಾದಿಕಂ ನಿರ್ಮಾಯಾಧಃ ಪಾತಯತಿ। ಮಂದಾನಾಂ ಬುದ್ಧಿಂ ಮೋಹಯತಿ। ಜ್ಞಾನಿನಾಂ ತು ಅಸ್ಮದುಕ್ತ ವಿಧಯಾ ತತ್ವಮೇವ ಬೋಧಯತಿ। ಅನ್ಯಥಾ ಘನೀಭೂತ ಶತಕೋಟಿ ಯೋಜನ ಸೌವರ್ಣ ಬ್ರಹ್ಮಾಂಡ ಭೇದನೇಽಪ್ಯಚ್ಛಿನ್ನ ನಖಾಗ್ರಂ ಕಶ್ಚಿಂದ್ಯಾದಿತ್ಯನುಸಂಧೇಯಂ ।
-ವಾದಿರಾಜೀಯ

ನಾಶರಹಿತನಾದ ಕೃಷ್ಣ ಸ್ವತಂತ್ರನಾದರೂ ಸುದಾಮನಿಂದ ಮಾಲೆಯನ್ನು ಪಡೆದು ಆ ಕೌಶ್ಲಿಕ ಹೂವಾಡಿಗರಿಬ್ಬರನ್ನೂ ಅನುಗ್ರಹಿಸಿದ. ಅವರಿಬ್ಬರೂ ಹಿಂದೆ ತನ್ನ ಸೇವಕರೇ ಆಗಿದ್ದರು. ವೈಕುಂಠದಿಂದ ಹರಿಸೇವೆಗಾಗಿ ಭೂಮಿಗೆ ಬಂದಿದ್ದರು. ಹಿಂದೆಯೂ ಅವರು ಕೌಶ್ಲಿಕ ಹೂವಾಡಿಗರೇ ಆಗಿದ್ದರು.

ಕುಚೇಲನೆಂದು ಪ್ರಸಿದ್ಧನಾದ ಸುದಾಮ ಬೇರೆ. ಈ ಹೂವಾಡಿಗ ಸುದಾಮ ಬೇರೆ. ಜಯವಿಜಯರಂತೆ ವೈಕುಂಠದ ಅಮುಕ್ತ ಸ್ಥಾನದಲ್ಲಿರುವ ಭಗವದ್ರೂಪವನ್ನು ಸೇವಿಸುವವರು ಈ ಕೌಶ್ಲಿಕ ಹೂವಾಡಿಗರು. ಅಲ್ಲಿಯೂ ಅದೇ ಸೇವೆ ಮಾಡುತ್ತಿದ್ದರು. ಹೊರತು, ಮುಕ್ತಸ್ಥಾನವನ್ನು ಪ್ರವೇಶಿಸಿದವರು ಯಾರೂ ಭೂಮಿಯಲ್ಲಿ ಹುಟ್ಟುವುದಿಲ್ಲ. ಹರಿವಂಶದಲ್ಲಿ ಸುದಾಮನನ್ನು ಗುಣಕ ಎಂದು ಹೆಸರಿಸಲಾಗಿದೆ.

ತ್ರಿವಕ್ರೆಯ ಭಾಗ್ಯ

ಸರ್ವೇಷ್ಟಪುಷ್ಟಿಮಿಹ ತತ್ರ ಸರೂಪತಾಂ ಚ
ಕೃಷ್ಣಸ್ತಯೋರ್ವರಮದಾದಥ ರಾಜಮಾರ್ಗೇ।
ಗಚ್ಛನ್ ದದರ್ಶ ವನಿತಾಂ ನರದೇವಯೋಗ್ಯಂ
ಆದಾಯ ಗಂಧಮಧಿಕಂ ಕುಟಿಲಾಂ ವ್ರಜಂತಿಮ್ ॥ ೧೦೧ ॥

ಶ್ರೀಕೃಷ್ಣ ಆ ಕೌಶ್ಲಿಕ ಹೂವಾಡಿಗರಿಗೆ ಈ ಲೋಕದಲ್ಲಿ ಸರ್ವಾಭೀಷ್ಟಸಿದ್ಧಿಯನ್ನೂ ವೈಕುಂಠದಲ್ಲಿ ಸಾರೂಪ್ಯವನ್ನೂ ವರವಾಗಿ ನೀಡಿದ. ಬಳಿಕ ರಾಜಮಾರ್ಗದಲ್ಲಿ ನಡೆಯುತ್ತ ರಾಜಯೋಗ್ಯ ಉತ್ತಮ ಗಂಧವನ್ನು ಹಿಡಿದುಕೊಂಡು ಹೋಗುತ್ತಿದ್ದ ಗೂನಿ ಹೆಂಗಸನ್ನು ಕಂಡ.

ತೇನಾರ್ಥಿತಾ ಸಪದಿ ಗಂಧಮದಾತ್ ತ್ರಿವಕ್ರಾ
ತೇನಾಗ್ರಜೇನ ಸಹಿತೋ ಭಗವಾನ್ ಲಿಲಿಂಪೇ।
ತಾಂ ಚಾಶ್ವಜುತ್ವಮನಯತ್ ಸ ತಯಾರ್ಥಿತೋಽಲಂ
ಆಯಾಮಿ ಕಾಲತ ಇತಿ ಪ್ರಹಸನ್ನಮುಂಚತ್ ॥ ೧೦೨ ॥

ಕೃಷ್ಣ ಕೇಳಿದೊಡನೆ ಆ ತ್ರಿವಕ್ರೆ ಗಂಧ ನೀಡಿದಳು. ಬಲರಾಮ ಸಮೇತನಾದ ಭಗವಂತ ಅದನ್ನು ಲೇಪಿಸಿಕೊಂಡ. ಅವಳನ್ನು ಬೇಗನೆ ನೆಟ್ಟಗಾಗಿಸಿದ. ಅವಳು ಅವನ ಅಂಗಸಂಗವನ್ನು ಬಹುವಾಗಿ ಬೇಡಿಕೊಂಡರೂ ಇನ್ನೊಮ್ಮೆ ಎಂದಾದರೂ ಬರುತ್ತೇನೆ ಎಂದು ಹೇಳಿ ನಗುತ್ತ ಅವಳನ್ನು ಬಿಟ್ಟು ಹೊರಟುಹೋದ.

ತ್ರಿವಕ್ರೆಗೆ ಮೂರು ಕಡೆ ವಕ್ರತೆ. ಕೃಷ್ಣ ಕಾಲಿಂದ ಅವಳ ಕಾಲೊತ್ತಿ ಕೈಯಿಂದ

ಗಲ್ಲ ಹಿಡಿದೆತ್ತಿದ. ಆವಳು ನೆಟ್ಟಗಾದಳು. ಮೊದಲೆ ಸುಂದರಿ. ಈಗ ಅಪ್ಸರೆಯಂತಾದಳು.

ಅಮುಂಚತ್ ಎಂದು ಮುಂತಾಗಿ ಕೆಲವೆಡೆ ಲೌಕಿಕ ಪ್ರಯೋಗವನ್ನೆ ಮಾಡುತ್ತೇನೆ. ಕೆಲವೆಡೆ 'ಅಮುಚತ್' ಎಂದು ಮುಂತಾಗಿ ವೈದಿಕ ಪ್ರಯೋಗ ಮಾಡುತ್ತೇನೆ. ಆದರಿಂದ ನಾನು ಲೌಕಿಕ ಅಲೌಕಿಕ ಉಭಯ ಪಾಂಡಿತ್ಯ ಚತುರನಾದ್ದರಿಂದ ತ್ರಿಲೋಕ ಗುರುವಾಗಿದ್ದೇನೆ' ಎಂದು ಶ್ರೀಮದಾಚಾರ್ಯರು ಇಲ್ಲಿ ಸೂಚನೆ ನೀಡುತ್ತಿದ್ದಾರೆ.[1]

ಶಿವಧನುರ್ಭಂಗ

ಪೂರ್ಣೇಂದುವೃಂದನಿವಹಾಧಿಕಕಾಂತಿಕಾಂತ
ಸೂರ್ಯಾಮಿತೋರುಪರಮದ್ಯುತಿ ಸೌಖ್ಯದೇಹಃ।
ಪೀತಾಂಬರಃ ಕನಕಭಾಸುರಗಂಧಮಾಲ್ಯಃ
ಶೃಂಗಾರವಾರಿಧಿರಗಣ್ಯ ಗುಣಾರ್ಣವೋಽಗಾತ್ ॥೧೦೩॥

ಪೂರ್ಣಚಂದ್ರರ ಸಮೂಹಗಳ ಸಮೂಹಗಳಿಗಿಂತ ಅಧಿಕ ಕಾಂತಿಯಿಂದ ಮನೋಹರವಾದ, ಅನಂತ ಸೂರ್ಯನಿಂದಲೂ ಹೋಲಿಸಲಾಗದ ಬಹು ಉತ್ಕೃಷ್ಟ ಪ್ರಕಾಶಉಳ್ಳ ಸುಖಮಯ ಶರೀರ ಉಳ್ಳವ, ಪೀತಾಂಬರ ಉಟ್ಟವ, ಬಂಗಾರದಂತೆ ಹೊಳೆವ ಗಂಧಮಾಲೆಗಳುಳ್ಳವ, ಸೌಂದರ್ಯಸಾಗರ, ಅಪರಿಮಿತ ಗುಣ ಸಮುದ್ರನಾದ ಕೃಷ್ಣ ರಾಜಮಾರ್ಗದಲ್ಲಿ ಹೊರಟ.

> ಶ್ರೀಕೃಷ್ಣರಾಜಮಾರ್ಗದಲ್ಲಿ ಹೆಜ್ಜೆ ಇಡುತ್ತ ನಡೆವಾಗ ಭಕ್ತರಿಗೆ ಅನಂತ ಚಂದ್ರರಂಥ ಆಹ್ಲಾದಕರ ಕಾಂತಿ ಬೆಳಗುತ್ತಾನೆ. ದ್ವೇಷಿಗಳಿಗೆ ಅನಂತ ಮಧ್ಯಾಹ್ನ ಸೂರ್ಯರ ಪ್ರಖರ ತೇಜಸ್ಸಿನಿಂದ ಉರಿಯುತ್ತಾನೆ
> -ವಾದಿರಾಜೀಯ[2]

ಪ್ರಾಪ್ಯಾಥ ಚಾಯುಧಗೃಹಂ ಧನುರೀಶದತ್ತಂ
ಕೃಷ್ಣಃ ಪ್ರಸಹ್ಯ ಜಗೃಹೇ ಸಕಲೈರಭೇದ್ಯಮ್।

---

1. ಕ್ವಚಿದಮುಂಚದಿತ್ಯಾದಿನಾ ಲೌಕಿಕ ಪ್ರಯೋಗಂ ಕರೋಮಿ। ಕ್ವಚಿದ್ ಅಮುಚದಿತ್ಯಾದಿನಾ ವೈದಿಕ ಪ್ರಯೋಗಂ ಕರೋಮಿ। ಅತೋಽಹಂ ಲೌಕಿಕಾ ಲೌಕಿಕ ಪಾಂಡಿತ್ಯ ಚತುರತ್ವಾತ್ ತ್ರೈಲೋಕ್ಯಾಚಾರ್ಯ ಇತಿ ಸೂಚಿತಂ। -ವಾದಿರಾಜೀಯ
2. ಭಕ್ತಾನಾಂ ಚಂದ್ರರಾಶಿವದತಿ ಶಾಂತತಯಾ ದೃಶ್ಯಮಾನಃ, ವಿದ್ವಿಷಾಂ ಮಧ್ಯಂದಿನ ಸೂರ್ಯವತ್ ಅತ್ಯುಗ್ರತಯಾ ದೃಶ್ಯಮಾನ ಇತಿ ಭಾವಃ -ವಾದಿರಾಜೀಯ

ಕಾಂಸಂ ಸ ನಿತ್ಯಪರಿಪೂರ್ಣಸಮಸ್ತಶಕ್ತಿ
ರಾರೋಪ್ಯ ಚೈತದನುಕೃಷ್ಣ ಬಭಂಜ ಮಧ್ಯೇ ॥ ೧೦೪ ॥

ಬಳಿಕ ಆಯುಧಶಾಲೆಗೆ ಹೋಗಿ ಶಿವನಿಂದ ದತ್ತವಾದ ಸರ್ವಾಬೇದ್ಯವಾದ ಕಂಸನ ಬಿಲ್ಲನ್ನು ಬಲಾತ್ಕಾರವಾಗಿ ಎತ್ತಿ ಹೆದೆಯೇರಿಸಿ ಸೆಳೆದು ನಡುವಿನಲ್ಲಿ ಮುರಿದ, ನಿತ್ಯಪರಿಪೂರ್ಣ ಸರ್ವಶಕ್ತಿಉಳ್ಳ ಕೃಷ್ಣ.

ತಸ್ಮಿನ್ ಸುರಾಸುರಗಣೈರಖಿಲೈರಭೇದ್ಯೇ
ಭಗ್ನೇ ಬಭೂವ ಜಗದಂಡವಿಭೇದಭೀಮಃ।
ಶಬ್ದಃ ಸ ಯೇನ ನಿಪಪಾತ ಭುವಿ ಪ್ರಭಗ್ನ
ಸಾರೋಽಸುರೋ ಧೃತಿಯುತೋಽಪಿ ತದೈವ ಕಂಸಃ ॥ ೧೦೫ ॥

ಎಲ್ಲಾ ಸುರಾಸುರ ಸಮೂಹಗಳಿಗೂ ಅಭೇದ್ಯವಾಗಿದ್ದ ಆ ಬಿಲ್ಲು ಮುರಿದಾಗ ಬ್ರಹ್ಮಾಂಡ ಒಡೆದಂಥ ಭೀಕರ ಶಬ್ದ ಉಂಟಾಯಿತು. ಅಸುರ ಕಂಸ ಧೈರ್ಯಶಾಲಿಯೆ ಆಗಿದ್ದರೂ ಆ ಶಬ್ದದಿಂದ ತಕ್ಷಣವೆ ಶಕ್ತಿ ಉಡುಗಿ ಸಿಂಹಾಸನದಿಂದ ನೆಲಕ್ಕೆ ಬಿದ್ದ.

ಆದಿಷ್ಟಮಪ್ಯುರುಬಲಂ ಭಗವಾನ್ ಸ ತೇನ
ಸರ್ವಂ ನಿಹತ್ಯ ಸಬಲಃ ಪ್ರಯಯೌ ಪುನಶ್ಚ।
ನಂದಾದಿಗೋಪಸಮಿತಿಂ ಹರಿರತ್ರ ರಾತ್ರೌ
ಭುಕ್ತ್ವಾಪಯೋಽನ್ವಿತಶುಭಾನ್ನಮುವಾಸ ಕಾಮಮ್ ॥ ೧೦೬ ॥

ಭಗವಾನ್ ಕೃಷ್ಣ ಕಂಸನಿಂದ ಕಳಿಸಲ್ಪಟ್ಟ ಎಲ್ಲ ಮಹಾಸೈನ್ಯವನ್ನೂ ಕೊಂದು ಪುನಃ ನಂದಾದಿ ಗೋಪಾಲಕರ ಗುಂಪನ್ನು ಸೇರಿದ. ರಾತ್ರಿಯಲ್ಲಿ ಸವಿಯಾದ ಹಾಲನ್ನು ಉಂಡು ನಿರ್ಭಯವಾಗಿ ಅಲ್ಲಿ ವಾಸ ಮಾಡಿದ.

ಕಂಸನಿಗೆ ಭಯ

ಕಂಸೋಽಪ್ಯತೀವ ಭಯಕಂಪಿತಹೃತ್ಸರೋಜಃ
ಪ್ರಾತರ್ನರೇಂದ್ರಗಣಮಧ್ಯಗತೋಽಧಿಕೋಚ್ಚಮ್।
ಮಂಚಂ ವಿವೇಶ ಸಹ ಜಾನಪದೈಶ್ಚ ಪೌರೈ
ರ್ನಾನಾನುಮಂಚಕಗತೈರ್ಯುವತೀಸಮೇತೈಃ ॥ ೧೦೭ ॥

ಕಂಸನ ಹೃದಯ ಕಮಲ ಅತಿಯಾದ ಭಯದಿಂದ ನಡುಗಿತು. ಅವನು ಬೆಳಿಗ್ಗೆ ನಾನಾ ಸಣ್ಣ ಆಸನಗಳಲ್ಲಿ ಪತ್ನೀ ಸಮೇತರಾಗಿ ಕುಳಿತ ನಾಗರಿಕರ, ದೇಶವಾಸಿಗಳ ಜೊತೆಗೆ, ರಾಜರ ಸಮೂಹಗಳ ನಡುವೆ, ಬಲು ಎತ್ತರದ ಆಸನದಲ್ಲಿ ಕುಳಿತ.

ಸಂಸ್ಥಾಪ್ಯ ನಾಗಮುರುರಂಗಮುಖೇ ಕುವಲ್ಯಾ
ಪೀಡಂ ಗಿರೀಂದ್ರಸದೃಶಂ ಕರಿಸಾದಿಯುಕ್ತಮ್ ।
ಚಾಣೂರಮುಷ್ಟಿಕಮುಖಾನಪಿ ಮಲ್ಲವೀರಾನ್
ರಂಗೇ ನಿಧಾಯ ಹರಿಸಂಯಮನಂ ಕಿಲೈಚ್ಛತ್ ॥ ೧೦೮ ॥

ರಂಗದ ಹೆಬ್ಬಾಗಿಲಲ್ಲಿ ಕುವಲಯಾಪೀಡವೆಂಬ ಬೆಟ್ಟದಂಥ ದೊಡ್ಡ ಆನೆಯನ್ನು ಮಾವುತ ಸಮೇತ ನಿಲ್ಲಿಸಿ, ರಂಗದಲ್ಲಿ ಚಾಣೂರ ಮುಷ್ಟಿಕ ಮುಂತಾದ ಮಲ್ಲವೀರರನ್ನು ನೇಮಿಸಿ ಕೃಷ್ಣನ ನಿಗ್ರಹ ಮಾಡಲು ಬಯಸಿದ, ಕಂಸ.

ಐರಾವತಕುಲದಲ್ಲಿ ಹುಟ್ಟಿ ಐರಾವತದಂತೆಯೆ ಬಲಿಷ್ಠವಾದ ಕಂಸನ ಈ ಆನೆಗೆ 'ಕುವಲಯಾಪೀಡ' ಎಂದು ಹೆಸರು. 'ಕು-ವಲಯ' ಅಂದರೆ ಭೂಮಂಡಲ. ಅಧಕ್ಕೆ ಅಪೀಡ ಅಂದರೆ ಈ ಆನೆ ಒಂದು ಹೆಜ್ಜೆ ಇಟ್ಟರೆ ಸಾಕು, ಭೂ ಮಂಡಲ. ಅದುರುತ್ತದೆ ಎಂದು ಅದಕ್ಕೆ ಆ ಹೆಸರು. ನಿರ್ಣಯದಲ್ಲಿ 'ಕುವಲ್ಯಾಪೀಡ' ಎಂದಿದೆ. ಇದು ಛಂದೋಭಂಗದ ಭಯದಿಂದ ಮಾಡಿದ ವ್ಯತ್ಯಾಸವೆಂದು ತಿಳಿಯಬಾರದು. ಶ್ರೀಮದಾಚಾರ್ಯರ ಆಶಕ್ತಿ ಎಂದು ಭಾವಿಸಬಾರದು. 'ಕುವಲ್ಲಿ'ಯನ್ನು ಅಂದರೆ ಭೂಮಿ ಎಂಬ ಬಳ್ಳಿಯನ್ನು, ಬಳ್ಳಿಯಂತೆ ಕೋಮಲೆಯಾದ ಭೂದೇವಿಯನ್ನು 'ಆ'=ಬಹಳವಾಗಿ 'ಪೀಡ'=ಪೀಡಿಸುತ್ತದೆ. ಭೂಭಾರಭೂತವಾದ ಈ ದುಷ್ಟ ಗಜ ಎಂಬ ಅರ್ಥದಲ್ಲಿ 'ಕುವಲ್ಲ್ಯಾಪೀಡ' ಎಂಬುದು ಇನ್ನೊಂದು ಹೆಸರು ಎನ್ನುತ್ತದೆ ವಾದಿರಾಜೀಯ.[1]

ಚಾಣೂರಾದಿ ಮಲ್ಲರು ಮಹಾಅಸುರರು ಎನ್ನುತ್ತದೆ ವಿಷ್ಣುಪುರಾಣ.

ಅಕ್ಷೌಹಿಣೀಗಣಿತಮಸ್ಯ ಬಲಂ ಚ ವಿಂಶದ್
ಆಸೀದಸಹ್ಯಮುರುವೀರ್ಯಮನನ್ಯವಧ್ಯಮ್ ।
ಶಂಭೋರ್ವರಾದಪಿ ಚ ತಸ್ಯ ಸುನೀಥನಾಮಾ
ಯಃ ಪೂರ್ವಮಾಸ ವೃಕ ಇತ್ಯಸುರೋಽನುಜೋಽಭೂತ್ ॥ ೧೦೯ ॥

ಕಂಸನ ಸೈನ್ಯ ಇಪ್ಪತ್ತು ಅಕ್ಷೌಹಿಣಿಗಳಷ್ಟಿದ್ದು ಶಿವವರದಿಂದ ಮಹಾಬಲಶಾಲಿಯಾಗಿತ್ತು. ಯಾರಿಗೂ ಇದಿರಿಸಲಾಗದುದಾಗಿತ್ತು. ಅನ್ಯರಿಂದ ವಧಿಸಲಾಗದುದೂ ಆಗಿತ್ತು. ಅವನಿಗೆ ಸುನೀಥ ಎಂಬ ಹೆಸರಿನ ತಮ್ಮನಿದ್ದ. ಅವನು ಹಿಂದೆ ವೃಕ ಎಂಬ ಅಸುರ.

---

1. ಕುಃ ಪೃಥಿವೀ। ಸೈವ ವಲ್ಲೀ। ತಾಮಾ ಸಮಂತಾತ್ ಪೀಡಯತೀತಿ ಕುವಲ್ಯಾಪೀಡಃ। ಭೂಭಾರಭೂತ ಇತ್ಯರ್ಥಃ। ತಸ್ಯೈವ ಕುವಲಯಾಪೀಡ ಇತಿ ನಾಮಾಂತರಂ। -ವಾದಿರಾಜೀಯ

ಸಪ್ತಾನುಜಾ ಅಪಿ ಹಿ ತಸ್ಯ ಪುರಾತನಾ ಯೇ
ಸರ್ವೇಽಪಿ ಕಂಸಪೃತನಾಸಹಿತಾಃ ಸ್ಮ ರಂಗೇ।
ತಸ್ಥುಃ ಸರಾಮಮಭಿಯಾಂತಮುದೀಕ್ಷ್ಯ ಕೃಷ್ಣಂ
ಅತ್ತಾಯುಧಾ ಯುಧಿ ವಿಜೇತುಮಜಂ ಸುಪಾಪಾಃ ॥ ೧೧೦ ॥

ಸುನೀಥನಿಗೆ ಏಳು ಮಂದಿ ತಮ್ಮಂದಿರು. ಅವರು ಅವನಿಗೆ ಪೂರ್ವಜನ್ಮದಲ್ಲಿಯೂ ತಮ್ಮಂದಿರಾಗಿದ್ದರು. ಎಲ್ಲರೂ ಕಂಸನ ಸೈನ್ಯದೊಂದಿಗೆ ರಂಗದಲ್ಲಿ ನಿಂತಿದ್ದರು. ಮಹಾಪಾಪಿಗಳಾದ ಅವರು ಬಲರಾಮ ಸಮೇತನಾಗಿ ಕೃಷ್ಣ ಬರುವುದನ್ನು ಕಂಡು ಜನ್ಮರಹಿತನಾದ ಅವನನ್ನು ಯುದ್ಧದಲ್ಲಿ ಗೆಲ್ಲಲು ಆಯುಧವೆತ್ತಿದರು.

ಕೃಷ್ಣೋಽಪಿ ಸೂರ್ಯ ಉದಿತೇ ಸಬಲೋ ವಯಸ್ಯೈ ಃ
ಸಾರ್ಧಂ ಜಗಾಮ ವರರಂಗಮುಖಂ ಸುರೇಶೈಃ।
ಸಂಸ್ತೂಯಮಾನ ಉರುವಿಕ್ರಮ ಆಸುರಾಣಾಂ
ನಿರ್ಮೂಲನಾಯ ಸಕಲಾಚರಿತೋರುಶಕ್ತಿಃ ॥ ೧೧೧ ॥

ಸೂರ್ಯೋದಯವಾದಾಗ ಮಹಾಪರಾಕ್ರಮಿ ಸರ್ವಕಾರ್ಯ ಸಮರ್ಥ ಮಹಾ ಶಕ್ತಿಶಾಲಿ ಶ್ರೀಕೃಷ್ಣ ದೇವೋತ್ತಮರು ಸ್ತೋತ್ರ ಮಾಡುತ್ತಿದ್ದಂತೆ, ಅಸುರರ ನಿರ್ಮೂಲನಕ್ಕಾಗಿ ಬಲರಾಮ ಸಮೇತನಾಗಿ ಮಿತ್ರರೊಂದಿಗೆ ರಂಗದ ಹೆಬ್ಬಾಗಿಲಿಗೆ ಬಂದ.

ಕುವಲಯಾಪೀಡ ವಧ

ಆಯನ್ ಜಗದ್ಗುರುತಮೋ ಬಲಿನಂ ಗಜೇಂದ್ರಂ
ರುದ್ರಪ್ರಸಾದಪರಿರಕ್ಷಿತಮಾಶ್ವಪಶ್ಯತ್।
ದುಷ್ಟೋರುರಂಗಮುಖಿಸಂಸ್ಥಿತಮೀಕ್ಷ್ಯ ಚೈಭ್ಯಂ
ಪಾಪಾಪಯಾಹಿ ನಚಿರಾದಿತಿ ವಾಚಮೂಚೇ ॥ ೧೧೨ ॥

ರಂಗದ ಹೆಬ್ಬಾಲಿಗೆ ಬರುತ್ತ ಜಗತ್ತಿಗೆ ಮುಖ್ಯ ಗುರುವಾದ ಶ್ರೀಕೃಷ್ಣ ರುದ್ರಾನುಗ್ರಹದಿಂದ ರಕ್ಷಿತನಾದ ಬಲಿಷ್ಠನಾದ ಗಜರಾಜನನ್ನು ಕಂಡ. ಆ ಆನೆ ದುಷ್ಟಕಂಸನ ಮಹಾರಂಗಸ್ಥಳದ ಹೆಬ್ಬಾಗಿಲಲ್ಲಿ ನಿಂತಿದ್ದನ್ನು ನೋಡಿ, ಮಾವುತನಿಗೆ 'ಪಾಪಿ! ತಡಮಾಡದೆ ತೊಲಗು' ಎಂದ.

ಕ್ಷಿಪ್ತಃ ಸ ಈಶ್ವರತಮೇನ ಗಿರೀಶಲಬ್ಧಾದ್
ದೃಪ್ತೋ ವರಾಜ್ಜಗತಿ ಸರ್ವಜನೈರವಧ್ಯಃ।
ನಾಗಂ ತ್ವವಧ್ಯಮಭಿಯಾಪಯತೇ ತತೋಽಗ್ರೇ
ಪಾಪೋ ದುರಂತಮಹಿಮಂ ಪ್ರತಿ ವಾಸುದೇವಮ್ ॥ ೧೧೩ ॥

ಆ ಮಾವುತ ಶಿವನಿಂದ ವರ ಪಡೆದಿದ್ದ. ಜಗತ್ತಿನಲ್ಲಿ ಸರ್ವಜನರಿಗೂ ಅವಧ್ಯನಾಗಿ ಅಹಂಕಾರಿಯಾಗಿದ್ದ, ಅವನನ್ನು ಸರ್ವೇಶ್ವರ ಆಕ್ಷೇಪಿಸಿದ. ಆದರೂ ಆ ಪಾಪಿ ರಂಗದ್ವಾರದಿಂದ ಮುಂದಕ್ಕೆ, ನಿಸ್ಸೀಮ ಮಹಿಮನಾದ ವಾಸುದೇವನ ಮೇಲೆ, ಆನೆಯನ್ನು ನಡೆಸಲು ತೊಡಗಿದ.

ವಿಕ್ರೀಡ್ಯ ತೇನ ಕರಿಣಾ ಭಗವಾನ್ ಸ ಕಿಂಚಿ
ದ್ಧಸ್ತೇ ಪ್ರಗೃಹ್ಯ ವಿನಿಕೃಷ್ಯ ನಿಪಾತ್ಯ ಭೂಮೌ।
ಕುಂಭೇ ಪದಂ ಪ್ರತಿನಿಧಾಯ ವಿಷಾಣಯುಗ್ಮಂ
ಉತ್ಕೃಷ್ಯ ಹಸ್ತಿಪಮಹನ್ನಿಪಪಾತ ಸೋಽಪಿ ॥ ೧೧೪ ॥

ಭಗವಾನ್ ಶ್ರೀಕೃಷ್ಣ ಆನೆಯ ಜೊತೆಗೆ ಸ್ವಲ್ಪ ಆಟವಾಡಿ ಸೊಂಡಿಲಿನಲ್ಲಿ ಹಿಡಿದು ಸೆಳೆದು ನೆಲದಲ್ಲಿ ಬೀಳಿಸಿ ಕುಂಭಸ್ಥಳದ ಮೇಲೆ ಕಾಲಿಟ್ಟು ಎರಡೂ ದಂತಗಳನ್ನು ಕಿತ್ತು ಅವುಗಳಿಂದ ಮಾವುತನನ್ನು ಹೊಡೆದ. ಅವನೂ ಸತ್ತುಬಿದ್ದ.

ನಾಗಂ ಸಸಾದಿನಮವಧ್ಯಮಸೌ ನಿಹತ್ಯ
ಸ್ಕಂಧೇ ವಿಷಾಣಮವಸಜ್ಯ ಸಹಾಗ್ರಜೇನ।
ನಾಗೇಂದ್ರಸಾಂದ್ರಮದಬಿಂದುಭಿರಂಚಿತಾಂಗಃ
ಪೂರ್ಣಾತ್ಮಶಕ್ತಿರಮಲಃ ಪ್ರವಿವೇಶ ರಂಗಮ್ ॥ ೧೧೫ ॥

ಅವಧ್ಯವಾದ ಆನೆಯನ್ನು ಮಾವುತ ಸಮೇತ ಕೊಂದು ಗಜರಾಜನ ದಪ್ಪವಾದ ಮದಜಲ ಬಿಂದುಗಳಿಂದ ಕಂಗೊಳಿಸುವ ಮೈಯುಳ್ಳವನಾಗಿ ದಂತವನ್ನು ಹೆಗಲಿಗೇರಿಸಿ ಕೊಂಡು ಪೂರ್ಣಸ್ವರೂಪ ಶಕ್ತಿಉಳ್ಳ ನಿರ್ಮಲವಾದ ಕೃಷ್ಣ ಬಲರಾಮನೊಂದಿಗೆ ರಂಗಸ್ಥಳವನ್ನು ಪ್ರವೇಶಿಸಿದ.

ವಿಷ್ಣುಪುರಾಣದಲ್ಲಿ ಆನೆಯನ್ನು ಬಲರಾಮ ಕೊಲ್ಲುತ್ತಾನೆ. ಪುರಾಣದ ಭಾಷೆಯಲ್ಲಿ ಕೃಷ್ಣ ಕೊಂದನೆಂದೇ ಅಭಿಪ್ರಾಯ. ಇದು ಪುರುಷ ವ್ಯತ್ಯಾಸ.

ವಿಷ್ಟೇ ಜಗದ್ಗುರುತಮೇ ಬಲವೀರ್ಯಮೂರ್ತೌ
ರಂಗಂ ಮುಮೋದ ಚ ಶುಶೋಷ ಜನೋಽಖಿಲೋಽತ್ರ।
ಕಂಜಂ ತಥಾಪಿ ಕುಮುದಂ ಚ ಯಥೈವ ಸೂರ್ಯ
ಉದ್ಯತ್ಯಜೇಽನುಭವಿನೋ ವಿಪರೀತಕಾಶ್ಚ ॥ ೧೧೬ ॥

ಬಲಪರಾಕ್ರಮಶರೀರಿಯಾದ, ಜಗತ್ತಿಗೆ ಮುಖ್ಯಗುರುವಾದ ಕೃಷ್ಣ ರಂಗಸ್ಥಳವನ್ನು ಪ್ರವೇಶಿಸಿದಾಗ ಎಲ್ಲ ಭಕ್ತಜನತೆ ಮುದಗೊಂಡಿತು. ಎಲ್ಲ ದ್ವೇಷಿ ಜನಸಮೂಹ ಕಳವಳದಿಂದ ನಿಸ್ತೇಜವಾಯಿತು. ಸೂರ್ಯ ಉದಿಸುವಾಗ ಕಮಲಗಳು ಅರಳುವಂತೆ,

ನೈದಿಲೆ ಮುದುಡುವಂತೆ, ಕೃಷ್ಣ ಕಣ್ಣಿಗೆ ಗೋಚರನಾದಾಗ ಜ್ಞಾನಿಗಳು ಹರ್ಷಗೊಂಡರು, ಅಜ್ಞಾನಿಗಳು ಖಿನ್ನರಾದರು.

'ಅನುಭವಿ'ಗಳೆಂದರೆ ಭಗವದಪರೋಕ್ಷಾನುಭವಿಗಳು. ಜ್ಞಾನಿಗಳು ಎಂದು ಜನಾರ್ದನೀಯ. ಭಗವಂತನಿಗೆ ಅನುಕೂಲವಾಗಿ ಭೂಮಿಯಲ್ಲಿ ಅವತರಿಸಿದ ಸಜ್ಜನರು ಎಂದು ವಾದಿರಾಜೀಯ.

ಚಾಣೂರ ಮುಷ್ಟಿಕ ವಧ

ರಂಗಂ ಪ್ರವಿಷ್ಟಮಭಿವೀಕ್ಷ್ಯ ಜಗಾದ ಮಲ್ಲಃ
ಕಂಸಪ್ರಿಯಾರ್ಥಮಭಿಭಾಷ್ಯ ಜಗನ್ನಿವಾಸಮ್ ।
ಚಾಣೂರ ಇತ್ಯಭಿಹಿತೋ ಜಗತಾಮವಧ್ಯಃ
ಶಂಭುಪ್ರಸಾದತ ಇದಂ ಶೃಣು ಮಾಧವೇತಿ ॥ ೧೧೭ ॥

ಶ್ರೀಕೃಷ್ಣ ರಂಗಸ್ಥಳವನ್ನು ಪ್ರವೇಶಿಸಿದ್ದನ್ನು ನೋಡಿ ಶಿವವರದಿಂದ ಜಗತ್ತಿನಲ್ಲಿ ಅವಧ್ಯನಾದ ಚಾಣೂರ ಎಂಬ ಹೆಸರಿನ ಮಲ್ಲ ಕಂಸನನ್ನು ಮೆಚ್ಚಿಸುವುದಕ್ಕಾಗಿ ಜಗನ್ನಿವಾಸನಾದ ಕೃಷ್ಣನನ್ನು ಕರೆದುಹೇಳಿದ, 'ಮಾಧವ, ಈ ಮಾತನ್ನು ಕೇಳು' ಎಂದು.

ರಾಜೈವ ದೈವತಮಿತಿ ಪ್ರವದಂತಿ ವಿಪ್ರಾ
ರಾಜ್ಞಃ ಪ್ರಿಯಂ ಕೃತವತಃ ಪರಮಾ ಹಿ ಸಿದ್ಧಿಃ ।
ಯೋತ್ಸ್ಯೇವ ತೇನ ನೃಪತಿಪ್ರಿಯಕಾಮ್ಯಯಾವಾಂ
ರಾಮೋಽಭಿಯುಧ್ಯತು ಬಲೀ ಸಹ ಮುಷ್ಟಿಕೇನ ॥ ೧೧೮ ॥

'ರಾಜನೇ ದೈವವೆಂದು ವಿಪ್ರರು ಹೇಳುತ್ತಾರೆ. ರಾಜನಿಗೆ ಸಂತೋಷ ಉಂಟು ಮಾಡಿದವನಿಗೆ ಪರಗತಿ ಉಂಟಾಗುತ್ತದೆ. ಅದರಿಂದ ರಾಜನಿಗೆ ಸಂತೋಷ ಉಂಟುಮಾಡುವ ಉದ್ದೇಶದಿಂದ ನಾವಿಬ್ಬರೂ ಹೋರಾಡಬೇಕು. ಬಲಿಷ್ಠನಾದ ರಾಮ ಮುಷ್ಟಿಕನೊಡನೆ ಹೋರಾಡಲಿ'.

ಇತ್ಯುಕ್ತ ಆಹ ಭಗವಾನ್ ಪರಿಹಾಸಪೂರ್ವಂ
ಏವಂ ಭವತ್ವಿತಿ ಸ ತೇನ ತದಾಭಿಯಾತಃ ।
ಸಂದರ್ಶ್ಯ ದೈವತಪತಿರ್ಯುಧಿ ಮಲ್ಲಲೀಲಾಂ
ಮೌಹೂರ್ತಿಕೀಮಥ ಪದೋರ್ಜಗೃಹೇ ಸ್ವಶತ್ರುಮ್ ॥ ೧೧೯ ॥

ಚಾಣೂರ ಹೀಗೆ ಹೇಳಿದಾಗ ಭಗವಾನ್ ಶ್ರೀಕೃಷ್ಣನಕ್ಕು 'ಹೀಗೇ ಆಗಲಿ' ಎಂದ. ಆಗ ಚಾಣೂರ ಹೋರಾಡಲು ಬಂದ. ದೇವಾಧಿಪತಿ ಒಂದು ಮುಹೂರ್ತಕಾಲ ಯುದ್ಧದಲ್ಲಿ ಮಲ್ಲಕ್ರೀಡೆ ತೋರಿ ಬಳಿಕ ತನ್ನ ಶತ್ರುವನ್ನು ಕಾಲುಗಳಲ್ಲಿ ಹಿಡಿದ.

'ಹೀಗೇ ಆಗಲಿ' ಎಂದರೆ 'ನಿಮಗೆ ಕಂಸನೇ ದೈವವೆಂದಾಗಲಿ. ಅವನನ್ನು ಮೆಚ್ಚಿಸಿ ನಿಮ್ಮ ಪರಗತಿಯನ್ನು ಅಂದರೆ ನಿಮಗೆ ಯೋಗ್ಯವಾದ ತಮಸ್ಸನ್ನು ಪಡೆಯಿರಿ' ಎಂದು ನಗುತ್ತ ಹೇಳಿದ ಕೃಷ್ಣ. ಒಂದು ಮುಹೂರ್ತ ಕಾಲವೆಂದರೆ ಎರಡು ಗಳಿಗೆ. ಅಂದರೆ ನಲವತ್ತೆಂಟು ನಿಮಿಷ ಕಾಲ.

ಉತ್ಕ್ಷಿಪ್ಯ ತಂ ಗಗನಗಂ ಗಿರಿಸನ್ನಿಕಾಶಂ
ಉದ್ಭ್ರಾಮ್ಯ ಚಾಥ ಶತಶಃ ಕುಲಿಶಾಕ್ಷತಾಂಗಮ್ ।
ಆವಿಧ್ಯ ದುರ್ಧರಬಲೋ ಭುವಿ ನಿಪ್ಪಿಷೇಷ
ಚೂರ್ಣೀಕೃತಃ ಸ ನಿಪಪಾತ ಯಥಾ ಗಿರೀಂದ್ರಃ ॥೧೨೦॥

ಯಾರಿಗೂ ಇದಿರಿಸಲಾಗದಂಥ ಶಕ್ತಿಯುಳ್ಳ ಶ್ರೀಕೃಷ್ಣ ವಜ್ರಾಯುಧದಿಂದಲೂ ಗಾಯ ಹೊಂದದ ಮೈಯುಳ್ಳ ಪರ್ವತಾಕಾರನಾದ ಆ ಮಲ್ಲಚಾಣೂರನನ್ನು ಮೇಲೆತ್ತಿ ಆಕಾಶದಲ್ಲಿ ನೂರು ಬಾರಿ ತಿರುಗಿಸಿ ನೆಲದಲ್ಲಿ ಅಪ್ಪಳಿಸಿ ಕಾಲಿಂದ ತುಳಿದ. ಆಗ ಪುಡಿಯಾದ ದೊಡ್ಡ ಬೆಟ್ಟದಂತಾಗಿ ಆತ ಸತ್ತು ಬಿದ್ದ.

ಕಂಸನ ಪರಲೋಕ ಪ್ರಯಾಣಕ್ಕೆ ವಿಘ್ನ ಕಳೆಯಲು ಇಡಿಗಾಯಿ ಒಡೆದಂತಾಯಿತು ಇದು ಎಂದು ರುಕ್ಮಿಣೀಶ ವಿಜಯ.

ಕೃಷ್ಣಂ ಚ ತುಷ್ಟುವುರಥೋ ದಿವಿ ದೇವಸಂಘಾ
ಮರ್ತ್ಯಾ ಭುವಿ ಪ್ರವರಮುತ್ತಮಪೂರುಷಾಣಾಮ್ ।
ತದ್ವದ್ ಬಲಸ್ಯ ದೃಢಮುಷ್ಟಿನಿಪಿಷ್ಟಮೂರ್ಧ್ನಾ
ಭ್ರಷ್ಟಸ್ತದೈವ ನಿಪಪಾತ ಸ ಮುಷ್ಟಿಕೋಽಪಿ ॥೧೨೧॥

ಉತ್ತಮ ಪುರುಷರಲ್ಲೆಲ್ಲ ಉತ್ತಮನಾದ ಕೃಷ್ಣನನ್ನು ಆಕಾಶದಲ್ಲಿ ದೇವ ಸಮೂಹಗಳೂ ಭೂಮಿಯಲ್ಲಿ ಮಾನವರೂ ಕೊಂಡಾಡಿದರು. ಅದೇ ರೀತಿ ಮುಷ್ಟಿಕನೂ ಬಲರಾಮನ ದೃಢವಾದ ಮುಷ್ಟಿಯಿಂದ ತಲೆಯೊಡೆದು ಆಗಲೇ ಸತ್ತುಬಿದ್ದ.

ಮುಷ್ಟಿನೈಕೇನ ತೇಜಸ್ವೀ ಸಾಶನಿಸ್ತನಯಿತ್ನುನಾ ।
ಶಿರಸ್ಯಭ್ಯಹನದ್ ವೀರೋ ವಜ್ರೀಣೇವ ಮಹಾಗಿರಿಂ ॥

ಎಂದು ಹರಿವಂಶ ವಚನವನ್ನು ಮೇಲಿನ ನಿರ್ಣಯಕ್ಕೆ ಆಧಾರವಾಗಿ ಜನಾರ್ದನೀಯದಲ್ಲಿ ಹೇಳಿದೆ. ಆದರೆ ಇದಕ್ಕೆ ಭಾಗವತ ವಿರೋಧ ಕಾಣುತ್ತದೆ-

ತಥೈವ ಮುಷ್ಟಿಕಃ ಪೂರ್ವಂ ಸ್ವಮುಷ್ಟ್ಯಾಭಿಹತೇನ ವೈ ।
ಬಲಭದ್ರೇಣ ಬಲಿನಾ ತಲೇನಾಭಿಹತೋ ಭೃಶಂ ॥

'ಬಲರಾಮ ಮುಷ್ಟಿಯಿಂದ ಹೊಡೆಯಲಿಲ್ಲ. ಮುಷ್ಟಿಕನೆ ಮುಷ್ಟಿಯಿಂದ ಬಲರಾಮನನ್ನು ಹೊಡೆದ. ಆಗ ಬಲರಾಮ ಅಂಗೈಯಿಂದ ಮುಷ್ಟಿಕನನ್ನು ಹೊಡೆದ. ಇಲ್ಲಿ ನಿರ್ಣಯ ವಿರೋಧವನ್ನು ಪರಿಹರಿಸಲು ಸತ್ಯಧರ್ಮತೀರ್ಥರು, 'ಬಲಿನಾ ತಲೇನ' ಎಂಬಲ್ಲಿ 'ಬಲಿನಾ ಅತಲೇನ' ಎಂದು ಪದಚ್ಛೇದ ಮಾಡಿ, 'ಅ ತಲೇನ-ತಲಭಿನ್ನೇನ ತಲಸದೃಶೇನ ಮುಷ್ಟಿನೇತ್ಯರ್ಥಃ। ಭೃಶಮಭಿಹತಃ। ತಥಾಚ ಮುಷ್ಟಿಃ ಕೇ ಯಸ್ಯಸ ಇತಿ ವ್ಯುತ್ಪತ್ತ್ಯಾ ತನ್ನಾಮಾನ್ವರ್ಥಕಯಮಾಸ.ಬಲ ಇತಿ ತಾತ್ಪರ್ಯಂ ಜ್ಞೇಯಮಿತಿ ಸೂಚಿತಂ ಭವತಿ। 'ತದ್ವದ್ ಬಲಸ್ಯ ದೃಢಮುಷ್ಟಿನಿಪಿಷ್ಟ ಮೂರ್ಧಾ ಭ್ರಷ್ಟಸ್ತದೈವ ನಿಪಪಾತ ಸ ಮುಷ್ಟಿಕೋಽಪೀತ್ಯಾಚಾರ್ಯೋಕ್ತೇಃ।'

'ತಲ ಭಿನ್ನ ತಲಸದೃಶ ಅಂದರೆ ಮುಷ್ಟಿ. ಮುಷ್ಟಿಯಿಂದ ಹೊಡೆದ. ಮುಷ್ಟಿ ತಲೆಯ ಮೇಲೆ ಯಾರಿಗೆ ಬಿದ್ದಿತೋ ಅವನು 'ಮುಷ್ಟಿಕ' ಎಂದು ಅವನ ಹೆಸರನ್ನು ಸಾರ್ಥಕಗೊಳಿಸಿದ ಬಲರಾಮ. ಇದೇ ಅಭಿಪ್ರಾಯದಿಂದ 'ದೃಢವಾದ ಮುಷ್ಟಿಯಿಂದ ಬಲರಾಮ ಹೊಡೆದಾಗ ಮುಷ್ಟಿಕ ತಲೆಯೊಡೆದು ಸತ್ತುಬಿದ್ದ' ಎಂದು ನಿರ್ಣಯ ಹೇಳಿದೆ.'

ಆದರೆ ಈ ಸತ್ಯಧರ್ಮರ ಅಭಿಪ್ರಾಯವನ್ನು ಸ್ವೀಕರಿಸಿದರೆ ರುಕ್ಮಿಣೀಶ ವಿಜಯದ ವಿರೋಧ. ಅಲ್ಲಿ

ನ ಮೇ ಮುಷ್ಟಿಪ್ರಹಾರಸ್ಯ ಲಕ್ಷ್ಯೋಽಯಮಿತಿ ಲಕ್ಷಯನ್ ।
ರಾಮಸ್ತಂ ತಲಘಾತೇನ ಜಘಾನಾಪಾರ್ಥನಾಮಕಂ ॥

'ಬಲರಾಮನ ಮುಂದೆ ಈ ಮುಷ್ಟಿಕ ಏನೂ ಅಲ್ಲ. ಅದರಿಂದ ಬಲರಾಮ ದೃಢವಾದ ಮುಷ್ಟಿಯಿಂದ ಮುಷ್ಟಿಕನ ತಲೆಗೆ ಹೊಡೆದರೆ ಅವನ 'ಮುಷ್ಟಿ-ಕ' ಎಂಬ ಹೆಸರು ಅನ್ವರ್ಥಕವಾದೀತು. ಆಗಬಾರದು. ಅಪಾರ್ಥಕವಾಗಬೇಕೆಂದು ಅಂಗೈನಿಂದಲೇ ಹೊಡೆದುಕೊಂದ' ಎಂದು ಸ್ಪಷ್ಟವಾಗಿ ಹೇಳಿದೆ. ಈಗ ರುಕ್ಮಿಣೀಶ ವಿಜಯದ ಅಭಿಪ್ರಾಯ ಸ್ವೀಕರಿಸಿದರೆ ಹರಿವಂಶ ನಿರ್ಣಯಗಳ ವಿರೋಧ.

ಹರಿವಂಶ, ಭಾಗವತ, ರುಕ್ಮಿಣೀಶವಿಜಯ, ನಿರ್ಣಯ, ಭಾಗವತ ಸತ್ಯಧರ್ಮೀಯ - ಇವೆಲ್ಲಕ್ಕೂ ಏಕಾಭಿಪ್ರಾಯ ಹೇಳುವುದು ಕಷ್ಟ. ಕಲ್ಪಭೇದೇನ ವ್ಯವಸ್ಥೆ 'ಕಾಷ್ಣೇರಂ ರಾಮಾಯಣಂ ತಥಾ' ಎಂಬ ಭಾಗವತ ತಾತ್ಪರ್ಯ ಹೇಳುವಂತೆ ಕೃಷ್ಣಕಥೆಯಲ್ಲಿ ಶಕ್ಯವಿಲ್ಲ.

ಪ್ರಾಯಃ ಬೇರೆ ಬೇರೆ ಅಭಿಪ್ರಾಯಗಳಿಂದ ಹೊರಟ ಈ ಮಾತುಗಳು

ಪರಸ್ಪರ ಅವಿರುದ್ಧವಾಗಿವೆ. ನಿರ್ಣಯದಲ್ಲಿಯೂ ಹರಿವಂಶದಲ್ಲಿಯೂ 'ದೃಢಮುಷ್ಟಿ' ಎಂದುದು ದುರ್ಬಲನಾದ ಮುಷ್ಟಿಕನ ಪಾಲಿಗೆ ಬಲರಾಮನ ಸಾಧಾರಣ ಮುಷ್ಟಿ 'ದೃಢ'ವಾಗಿತ್ತು ಹೊರತು, ಬಲರಾಮನ ದೃಷ್ಟಿಯಲ್ಲಿ ಅದೇನೂ ದೃಢವಾಗಿರಲಿಲ್ಲ. 'ತಲೇನ ತಲಸದೃಶೇನ ಮುಷ್ಟಿನಾ' ಎಂದು ಸತ್ಯಧರ್ಮರು ಹೇಳುವಂತೆ ಅಂಗೈಗೇ ಸಮವಾಗಿತ್ತು. ಬಲವಾಗಿ ಮುಷ್ಟಿ ಬಿಗಿದಿರಲಿಲ್ಲ. ಬಲರಾಮ ಎನ್ನುತ್ತಿದೆ ಭಾಗವತ ಮತ್ತು ರುಕ್ಮಿಣೀಶವಿಜಯ. ಅದರಿಂದ ದೃಢವಾದ ಮುಷ್ಟಿ ದುರ್ಬಲನಾದ ಮುಷ್ಟಿಕನ ತಲೆಗೆ ಬೀಳದಿದ್ದುದರಿಂದ ಅವನ ಹೆಸರು ಈ ಅರ್ಥದಲ್ಲಿ ಅಪಾರ್ಥಕ. ಸತ್ಯಧರ್ಮೀಯದಲ್ಲಿ ಸಾಧಾರಣ ಮುಷ್ಟಿಯಿಂದ ನಾಮ ಸಾರ್ಥಕವಾಯಿತೆಂದು ಅಭಿಪ್ರಾಯ. ಅದರಿಂದ ಅವನು ದುರ್ಬಲನೆಂದಂತಾಯಿತು.

ಈ ಮುಷ್ಟಿಕ ಒಬ್ಬ ಆಂಧ್ರ ಎಂಬ ಮ್ಲೇಚ್ಛ ಜಾತಿಯವ. ಅದರಿಂದ 'ಚಾಣೂರಾಂಧ್ರ ನಿಷೂದನ' ಎಂದು ಕೃಷ್ಣನಿಗೆ ಒಂದು ನಾಮ.

ಕೂಟಶ್ಚ ಕೋಸಲ ಉತ ಚ್ಛಲನಾಮಧೇಯೋ
ದ್ವೌತತ್ರ ಕೃಷ್ಣನಿಹತಾವಪರೋ ಬಲೇನ।
ಕಂಸಸ್ಯ ಯೇ ತ್ವವರಜಾಶ್ಚ ಸುನೀಮುಖ್ಯಾಃ
ಸರ್ವೇ ಬಲೇನ ನಿಹತಾಃ ಪರಿಘೇಣ ವೀರಾಃ ॥ ೧೨೨ ॥

ಕೂಟ ಮತ್ತು ಕೋಸಲ ಎಂಬ ಇಬ್ಬರು ಮಲ್ಲರು ಯುದ್ಧದಲ್ಲಿ ಕೃಷ್ಣನಿಂದ ಹತರಾದರು. ಇನ್ನೊಬ್ಬ ಮಲ್ಲ ಛಲ ಎಂದು ಹೆಸರುಳ್ಳವ ಬಲರಾಮನಿಂದ ಹತನಾದ. ವೀರರಾದ ಸುನೀಥ ಮುಂತಾದ ಕಂಸನ ಸೋದರರೆಲ್ಲರೂ ಬಲರಾಮನ ಪರಿಘಾಯುಧದಿಂದ ಹತರಾದರು.

ಕೋಸಲನಿಗೆ ಕೋಶಲ, ತೋಷಲ, ತೋಶಲ, ತೋಸಲ ಎಂದೂ ಹೆಸರುಗಳಿವೆ. ಛಲನಿಗೂ ಶಲ ಎಂಬುದು ನಾಮಾಂತರ. ಸುನೀಥನನ್ನು ವಿಷ್ಣುಪುರಾಣ ಸುಮಾಲಿ ಎಂದೂ ಹರಿವಂಶ ಸುನಾಮ ಎಂದು ಕರೆದಿದೆ.

ಕಂಸನ ಸೈನ್ಯ ನಾಶ

ತಾಭ್ಯಾಂ ಹತಾನಭಿಸಮೀಕ್ಷ್ಯ ನಿಜಾನ್ ಸಮಸ್ತಾನ್
ಕಂಸೋ ದಿದೇಶ ಬಲಮಕ್ಷಯಮುಗ್ರವೀರ್ಯಮ್।
ರುದ್ರಪ್ರಸಾದಕೃತರಕ್ಷಮವಧ್ಯಮೇತೌ
ನಿಸ್ಸಾರ್ಯ ದಂಡಮಧಿಕಂ ಕುರುತೇತಿ ಪಾಪಃ ॥ ೧೨೩ ॥

ತನ್ನವರೆಲ್ಲರೂ ಕೃಷ್ಣರಾಮರಿಂದ ಹತರಾದುದನ್ನು ಕಂಡು ಪಾಪಿಯಾದ ಕಂಸ ರುದ್ರನ ಅನುಗ್ರಹದಿಂದ ರಕ್ಷಿತವಾಗಿದ್ದು ಅವಧ್ಯ ಅವಿನಾಶಿ ಎನಿಸಿದ ಭಯಂಕರ ಪರಾಕ್ರಮ ಶಾಲಿಯಾದ ಸೈನ್ಯವನ್ನು ಆಜ್ಞಾಪಿಸಿದ, 'ಕೃಷ್ಣರಾಮರನ್ನು ಪಟ್ಟಣದಿಂದ ಹೊರಕ್ಕೆ ಒಯ್ದು ಹೆಚ್ಚಿನ ಶಿಕ್ಷೆಗೆ ಗುರಿ ಮಾಡಿ' ಎಂದು.

ಶ್ರುತ್ವೈವ ರಾಜವಚನಂ ಬಲಮಕ್ಷಯಂ ತ-
ದಕ್ಷೌಹಿಣೀದಶಕಯುಗ್ಮಮನಂತವೀರ್ಯಮ್ ।
ಕೃಷ್ಣಂ ಚಕಾರ ವಿವಿಧಾಸ್ತ್ರಧರಂ ಸ್ವಕೋಷ್ಠೇ
ಸಿಂಹಂ ಯಥಾಖಿಲಸೃಗಾಲಬಲಂ ಸಮೇತಮ್ ॥ ೧೨೪ ॥

ನಾನಾ ಶಸ್ತ್ರ ಹಿಡಿದು ಅವಿನಾಶಿ ಎನಿಸಿದ್ದ ಆ ಇಪ್ಪತ್ತು ಅಕ್ಷೌಹಿಣಿ ಸೈನ್ಯವು ರಾಜಾಜ್ಞೆಯನ್ನು ಕೇಳಿ ಅನಂತಶಕ್ತಿ ಉಳ್ಳ ಕೃಷ್ಣನನ್ನು ಸುತ್ತುವರಿಯಿತು. ಇದು ಎಲ್ಲ ನರಿಗಳ ಸೈನ್ಯ ಒಟ್ಟುಗೂಡಿ ಸಿಂಹವನ್ನು ಸುತ್ತುವರಿದರೆ ಹೇಗೋ ಹಾಗಾಯಿತು.

ಕಂಸನ ಸೈನ್ಯದಲ್ಲಿ ಮೂವತ್ತೆರಡು ಲಕ್ಷ ಎಂಟು ಲಕ್ಷ ಒಂದು ಕೋಟಿ ಸಂಖ್ಯೆಯಲ್ಲಿ ಕ್ರಮವಾಗಿ ಅಶ್ವ, ಗಜ, ರಥ, ಪದಾತಿಗಳಿದ್ದರೆಂದು ಮಹಾಭಾರತ ಹೇಳಿದೆ.

ಜಾನನ್ನಪೀಶ್ವರಮನಂತಬಲಂ ಮಹೇಂದ್ರಃ
ಕೃಷ್ಣಂ ನಿಜಂ ರಥಮಯಾತಯದಾಯುಧಾಢ್ಯಮ್ ।
ಶುಶ್ರೂಷಣಾಯ ಪರಮಸ್ಯ ಯಥಾ ಸಮುದ್ರಂ
ಅರ್ಘ್ಯೇಣ ಪೂರಯತಿ ಪೂರ್ಣಜಲಂ ಜನೋಽಯಮ್ ॥ ೧೨೫ ॥

ಕೃಷ್ಣನನ್ನು ಅನಂತಶಕ್ತಿಉಳ್ಳ ಪ್ರಭುವೆಂದು ತಿಳಿದೂ ದೇವೇಂದ್ರ ಸರ್ವೋತ್ತಮನ ಸೇವೆಗಾಗಿ ಆಯುಧಗಳಿಂದ ತುಂಬಿದ ತನ್ನ ರಥವನ್ನು ಕಳಿಸಿದ. ಇದು ಈ ಲೋಕದ ಜನರು ಪೂರ್ಣಜನಉಳ್ಳ ಸಮುದ್ರವನ್ನು ಅರ್ಘ್ಯದಿಂದ ಹೇಗೆ ತುಂಬಿಸುವರೋ ಹಾಗಾಯಿತು.

ಆಸಿಕ್ಕ ಜನರು ಸಮುದ್ರಸ್ನಾನದಲ್ಲಿ ಸಮುದ್ರದಿಂದ ಬೊಗಸೆ ನೀರೆತ್ತಿ 'ಸಮುದ್ರಃ ತೃಪ್ಯತು' ಎಂದು ಸಮುದ್ರಕ್ಕೇ ಅರ್ಘ್ಯ ಕೊಡುವಂತೆ ಭಗವಂತ ನೀಡಿದ ರಥವನ್ನೇ ದೇವೇಂದ್ರ ಭಗವಂತನಿಗೆ ಆರಾಧನಾ ರೂಪವಾಗಿ ನೀಡಿದ. ಭಗವಂತನಿಗೆ ಆ ರಥ ಬಂದುದರಿಂದ ಉಪಕಾರವಿಲ್ಲ. ಬಾರದಿರುತ್ತಿದ್ದರೆ ತೊಂದರೆಯೂ ಇರಲಿಲ್ಲ. ಅವನು ಅನಂತಶಕ್ತಿ ಉಳ್ಳವ.

ಸ್ವಂ ಸ್ಯಂದನಂ ತು ಭಗವಾನ್ ಸ ಮಹೇಂದ್ರದತ್ತಂ
ಆರುಹ್ಯ ಸೂತವರಮಾತಲಿಸಂಗೃಹೀತಮ್ ।

ನಾನಾಯುಧೋಗ್ರಕಿರಣಸ್ತರಣೇರ್ಯದ್ವೈವ
ಧ್ವಾಂತಂ ವ್ಯನಾಶಯದಶೇಷತ ಆಶು ಸೈನ್ಯಮ್ ॥ ೧೨೬ ॥

ಭಗವಾನ್ ಶ್ರೀಕೃಷ್ಣ ಉತ್ತಮ ಸಾರಥಿ ಮಾತಲಿ ನಡೆಸುತ್ತಿರುವ ದೇವೇಂದ್ರ ದತ್ತವಾದ, ವಸ್ತುತಃ ತನ್ನದೇ ಆದ, ರಥವನ್ನೇರಿ ನಾನಾ ಆಯುಧಗಳ ಪ್ರಖರ ಪ್ರಕಾಶದಿಂದ ಬೆಳಗುತ್ತ ಸೂರ್ಯನು ಕತ್ತಲನ್ನು ನಾಶಪಡಿಸುವಂತೆ ಎಲ್ಲ ಸೈನ್ಯವನ್ನೂ ಬೇಗನೆ ನಾಶಪಡಿಸಿದ.

ಕಂಸವಧ

ನಿಃಶೇಷತೋ ವಿನಿಹತೇ ಸ್ವಬಲೇ ಸ ಕಂಸ
ಶ್ಚರ್ಮಾಸಿ ಪಾಣೇರಭಿಯಾತುಮಿಯೇಷ ಕೃಷ್ಣಮ್ ।
ತಾವತ್ ತಮೇವ ಭಗವಂತಮಭಿಪ್ರಯಾಂತಂ
ಉತ್ತುಂಗಮಂಚಶಿರಸಿ ಪ್ರದದರ್ಶ ವೀರಮ್ ॥ ೧೨೭ ॥

ತನ್ನ ಸೈನ್ಯ ನಿಃಶೇಷವಾಗಿ ಹತವಾದಾಗ ಕಂಸ ಗುರಾಣಿ ಕತ್ತಿಗಳನ್ನು ಹಿಡಿದು ಕೃಷ್ಣನ ಮೇಲೇರಿ ಹೋಗಲು ಬಯಸಿದ. ಆದರೆ ಅಷ್ಟರಲ್ಲಿ ವೀರನಾದ ಭಗವಂತನೇ ಉನ್ನತವಾದ ಆಸನದ ಮೇಲೆ ತನ್ನ ಮೇಲೆ ಏರಿ ಬಂದುದನ್ನು ಕಂಡ.

ತಂ ಶ್ಯೇನವೇಗಮಭಿತಃ ಪ್ರತಿಸಂಚರಂತಂ
ನಿಶ್ಚಿದ್ರಮಾಶು ಜಗೃಹೇ ಭಗವಾನ್ ಪ್ರಸಹ್ಯ ।
ಕೇಶೇಷು ಚೈನಮಭಿಮೃಶ್ಯ ಕರೇಣ ವಾಮೇ-
ನೋದ್ಧೃತ್ಯ ದಕ್ಷಿಣಕರೇಣ ಜಘಾನ ಕೇಽಸ್ಯ ॥ ೧೨೮ ॥

ಕಂಸ ಹದ್ದಿನಂತೆ ವೇಗವಾಗಿ ಸುತ್ತಲೂ ಎಡೆಬಿಡದೆ ತಿರುಗತೊಡಗಿದ. ಭಗವಾನ್ ಕೃಷ್ಣ ಬೇಗನೆ ಅವನನ್ನು ಬಲತ್ಕಾರವಾಗಿ ಹಿಡಿದ. ತಲೆಗೂದಲುಗಳಲ್ಲಿ ಹಿಡಿದು ಎಡಗೈಯಿಂದ ಎತ್ತಿ ಬಲಗೈಯಿಂದ ತಲೆಗೆ ಹೊಡೆದ.

ಸಂಚಾಲಿತೇನ ಮುಕುಟೇನ ವಿಕುಂಡಲೇನ
ಕರ್ಣದ್ವಯೇನ ವಿಗತಾಭರಣೋರಸಾ ಚ ।
ಸ್ರಸ್ತಾಂಬರೇಣ ಜಘನೇನ ಸುಶೋಚ್ಯರೂಪಃ
ಕಂಸೋ ಬಭೂವ ನರಸಿಂಹಕರಾಗ್ರಸಂಸ್ಥಃ ॥ ೧೨೯ ॥

ಪುರುಷೋತ್ತಮ ಕೃಷ್ಣ ಕಂಸನನ್ನು ಹಿಡಿದಾಗ ಕಿರೀಟ ಬಿದ್ದಿತು. ಎರಡೂ ಕಿವಿಗಳಿಂದ ಕುಂಡಲಗಳು ಉದುರಿದವು. ಎದೆಯ ಆಭರಣಗಳು ಜಾರಿದುವು. ಸೊಂಟದ ಬಟ್ಟೆ ಬಿಚ್ಚಿಹೋಯಿತು. ಅವನ ವೇಷ ನರಸಿಂಹನ ಕೈಗೆ ಸಿಕ್ಕಿದ ಹಿರಣ್ಯಕಶಿಪುವಿನಂತೆ ಶೋಚನೀಯವಾಯಿತು.

'ನರಸಿಂಹ' ಎಂದರೆ ಪುರುಷೋತ್ತಮ ಎಂದೂ ನರಸಿಂಹಾವತಾರವೆಂದೂ ಎರಡು ಅರ್ಥವಿವಕ್ಷಿತವಾಗಿವೆ. ಅದರಿಂದ ಪುರುಷೋತ್ತಮನಾದ ಕೃಷ್ಣನ ಕೈಯಲ್ಲಿ ಕಂಸನಿಗೆ ನರಸಿಂಹನ ಕೈಗೆ ಸಿಲುಕದ ಹಿರಣ್ಯಕಶಿಪುವಿನ ಪಾಡು ಬಂದೊದಗಿತು.

ಉತ್ಕೃಷ್ಯ ತಂ ಸುರಪತಿಃ ಪರಮೋಚ್ಚಮಂಚಾದ್
ಅನ್ಯೈರಜೇಯಮತಿವೀರ್ಯಬಲೋಪಪನ್ನಮ್ ।
ಅಬ್ಜೋದ್ಭವೇಶವರಗುಪ್ತಮನಂತಶಕ್ತಿ
ಭೂರ್ಮೌ ನಿಪಾತ್ಯ ಸ ದದೌಪದಯೋಃ ಪ್ರಹಾರಮ್ ॥ ೧೩೦ ॥

ದೇವಾಧಿಪತಿ ಕೃಷ್ಣ ಅತ್ಯುನ್ನತವಾದ ಮಂಚದಿಂದ ಕಂಸನನ್ನು ಎತ್ತಿ ಕೆಳಗೆ ರಂಗಸ್ಥಳದ ನೆಲಕ್ಕೆ ಎಸೆದ. ಕಂಸ ಅನ್ಯರಿಗೆ ಅಜೇಯ. ಅತ್ಯಂತ ವೀರ್ಯಬಲಗಳಿಂದ ಕೂಡಿದವ. ಬ್ರಹ್ಮ ರುದ್ರರ ವರಗಳಿಂದ ರಕ್ಷಿತನಾದವ. ಆದರೂ ಅನಂತಶಕ್ತಿ ಉಳ್ಳ ಕೃಷ್ಣ ಅವನನ್ನು ನೆಲದಲ್ಲಿ ಕೆಡಹಿ ಕಾಲುಗಳಿಂದ ಒದೆದ.

ದೇಹೇ ತು ಯೋಽಭವದಮುಷ್ಯ ರಮೇಶಬಂಧು
ರ್ವಾಯುಃ ಸ ಕೃಷ್ಣತನುಮಾಶ್ರಯದನ್ಯಪಾಪಮ್ ।
ದೈತ್ಯಂ ಚಕರ್ಷ ಹರಿರತ್ರ ಶರೀರಸಂಸ್ಥಂ
ಪಶ್ಯತ್ಸು ಕಂಜಜಮುಖೇಷು ಸುರೇಷ್ವನಂತಃ ॥ ೧೩೧ ॥

ಕಂಸನ ದೇಹದಲ್ಲಿದ್ದ ಹರಿಯ ಬಂಧುವಾದ ವಾಯು ಕೃಷ್ಣನ ಶರೀರವನ್ನು ಪ್ರವೇಶಿಸಿದ. ಅದೇ ಶರೀರದಲ್ಲಿದ್ದ ಇನ್ನೊಬ್ಬ ಪಾಪಿ ದೈತ್ಯನನ್ನು ಬ್ರಹ್ಮಾದಿ ದೇವತೆಗಳು ನೋಡುತ್ತಿದ್ದಂತೆ ನಾಶರಹಿತನಾದ ಕೃಷ್ಣ ತಮಸ್ಸಿಗೆ ಸೆಳೆದ.

ಭಾಗವತದಲ್ಲಿ ಕಂಸನಿಗೆ ಭಯದಿಂದ ಮೋಕ್ಷಸಿದ್ಧಿಸಿತೆಂದು ಹೇಳಿದೆ. ಅದರ ಅಭಿಪ್ರಾಯ ಹೀಗೆ - ಕಂಸನ ಶರೀರದಲ್ಲಿ ವಿಷ್ಣು ವೈಷ್ಣವ ದ್ವೇಷಸಾಧನೆಗೆ ಆವಶ್ಯಕವಾಗಿರುವ ಮಹಾಬಲವನ್ನು ತುಂಬುವುದಕ್ಕಾಗಿ ಬಲದೇವತೆಯಾದ ಮುಖ್ಯಪ್ರಾಣ ನೆಲೆಸಿದ್ದ. ಅವನು ಶ್ರೀಕೃಷ್ಣನಿಗೆ ಬಂಧು ಹೇಗೆಂದರೆ ವಾಸುದೇವನ ಅವತಾರನಾದ ಕೃಷ್ಣನಿಗೆ 'ಮೊಮ್ಮಗ'. ಅಂದರೆ ವಾಸುದೇವನ ಪುತ್ರನಾದ ಸಂಕರ್ಷಣನ ಪುತ್ರ ಮುಖ್ಯಪ್ರಾಣ. 'ಉರುಕ್ರಮಸ್ಯ ಸ ಹಿ ಬಂಧುಃ' ಎಂದು ಋಗ್ವೇದ ಹಾಗೇ ಹೇಳಿದೆ. ಅವನು ಕೃಷ್ಣನ ಉದರವನ್ನು ಪ್ರವೇಶಿಸಿದ. ಕಂಸನ ಶರೀರದಲ್ಲಿ ಭೃಗು ಮುನಿಯೂ ಇದ್ದ. ಅವನು ಶಿವ ಧನುರ್ಭಂಗದ ಮಹಾಶಬ್ದವನ್ನು ಕೇಳಿ ನಡುಗಿ ರಾತ್ರಿ

ಎಲ್ಲ ಅನ್ನ ನಿದ್ರೆ ತೊರೆದು ಕೃಷ್ಣನನ್ನೇ ಧ್ಯಾನಿಸಿ ಭಯಪೂರ್ವಕವಾದ ಭಕ್ತಿಯ ಫಲವಾಗಿ ಉತ್ತಮ ಲೋಕವನ್ನು ಪಡೆದ. ಅದೇ ಶರೀರದಲ್ಲಿದ್ದು ಕೃಷ್ಣನನ್ನು ದ್ವೇಷಿಸಿದ ಕಾಲನೇಮಿ ದೈತ್ಯ ತಮಸ್ಸಿಗೆ ನಡೆದ. ಹರಿವಂಶದಲ್ಲಿ ಹೇಳಿದಂತೆ ಕಂಸನಿಗೆ ಕೃಷ್ಣ ಯುದ್ಧ ಮಾಡಲು ಅವಕಾಶ ಕೊಡದೆ ಗಂಟಲನ್ನೊತ್ತಿ ಕಾಲಿಂದ ಒದ್ದು ಸಾಯಿಸಿದ್ದರಿಂದ ಯುದ್ಧದಲ್ಲಿ ಆಯುಧದೇಟೆಂದು ಮಡಿದವರಿಗೆ ಸಿಗುವ ವೀರಸ್ವರ್ಗವೂ ಕಂಸನಿಗೆ ಇಲ್ಲವಾಯಿತು ಎನ್ನುತ್ತಾರೆ ಸತ್ಯಧರ್ಮರು.[1]

ದ್ವೇಷಾತ್ ಸ ಸರ್ವಜಗದೇಕ ಗುರೋಃ ಸ್ವಕೀಯೈಃ
ಪೂರ್ವಂ ಪ್ರಮಾಪಿತಜನ್ಯೈಃ ಸಹಿತಃ ಸಮಸ್ತೈಃ।
ಧಾತ್ರ್ಯಾದಿಭಿಃಪ್ರತಿಯಯೌ ಕುಮತಿಸ್ತಮೋಽಧ
ಮನ್ಯೇಪಿ ಚೈವಮುಪಯಾಂತಿ ಹರಾವಭಕ್ತಾಃ ॥ ೧೩೨ ॥

ಸಕಲ ಜಗತ್ತಿಗೆ ಮುಖ್ಯಗುರುವಾದ ಹರಿಯಲ್ಲಿ ದ್ವೇಷ ಮಾಡಿದ್ದರ ಫಲವಾಗಿ ದುರ್ಬುದ್ಧಿಯಾದ ಕಾಲನೇಮಿ ಹಿಂದೆ ಹತರಾದ ಪೂತನೆ ಮುಂತಾದ ತನ್ನವರೆಲ್ಲರೊಡನೆ ಅಂಧಂತಮನಸ್ಸಿನ ಕಡೆಗೆ ನಡೆದ. ಹರಿದ್ವೇಷಿಗಳು ಇತರರೂ ಹೀಗೆ ತಮಸ್ಸನ್ನು ಹೊಂದುತ್ತಾರೆ.

ಮುಕ್ತಿಗೆ ಹೋಗುವವರು ಬ್ರಹ್ಮಪ್ರಳಯದವರೆಗೆ ಕಾಯಬೇಕು. ಆದರೆ ತಮಸ್ಸಿಗೆ ಹೋಗುವವರು ಬ್ರಹ್ಮನ ಪ್ರತಿ ಹಗಲಿನಲ್ಲಿಯೂ, ಅವತಾರವೆತ್ತುವ ಶ್ರೀಹರಿಯ ಕೈಯಿಂದ ಹತರಾಗಿ, ಒಂದೊಂದು ಅಂಶದಿಂದ ತಮಸ್ಸನ್ನು ಪ್ರವೇಶಿಸುತ್ತಾರೆ. ಬ್ರಹ್ಮಪ್ರಳಯದವರೆಗೂ ಕಾಯುವುದಿಲ್ಲ.

ನಿತ್ಯಾತಿದುಃಖಮನಿವೃತ್ತಿಸುಖವ್ಯಪೇತಂ
ಅಂಧಂ ತಮೋ ನಿಯತಮೇತಿ ಹರಾವಭಕ್ತಃ।
ಭಕ್ತೋಽಪಿ ಕಂಜಜಗಿರೀಶಮುಖೇಷು ಸರ್ವ
ಧರ್ಮಾರ್ಣವೋಽಪಿ ನಿಖಿಲಾಗಮನಿರ್ಣಯೇನ ॥ ೧೩೩ ॥

ಬ್ರಹ್ಮರುದ್ರಾದಿಗಳಲ್ಲಿ ಭಕ್ತನಾಗಿದ್ದೂ ಸರ್ವಧರ್ಮಸಾಗರನಾಗಿದ್ದೂ ಹರಿ ದ್ವೇಷಿಯಾದರೆ ಅವನು ನಿತ್ಯ ಅತಿದುಃಖಭರಿತವಾದ, ಪುನರಾವೃತ್ತಿರಹಿತವಾದ,

---

1. ಸಮಸಮರಾಕರಣಾತ್ ಅನಾಯುಧಘಾತಾನ್ನ ವೀರಸ್ವರ್ಗಸ್ತಸ್ಯೇತಿ ಮಂತವ್ಯಂ। ಯಥೋಕ್ತಂ ಹರಿವಂಶೇ 'ಅಸಂಗ್ರಾಮ ಹತಃ ಕಂಸಃ ಸ ಬಾಣೈರಪರಿಕ್ಷತಃ। ಕಂಠಗ್ರಾಹಾನ್ನಿರಸ್ತಾಸುಃ ಸ್ವರ್ಗ ಮಾರ್ಗಾನ್ನಿರಾಕೃತ' ಇತಿ। -ಸತ್ಯಧರ್ಮೀಯ

ಸುಖರಹಿತವಾದ ಅಂಧಂತಮಸ್ಸನ್ನು ತಪ್ಪದೆ ಹೊಂದುತ್ತಾನೆ. ಸಕಲಶಾಸ್ತ್ರಗಳ ನಿರ್ಣಯವಿದು.

ಯೋ ವೇತ್ತಿ ನಿಶ್ಚಿತ ಮತಿರ್ಹರಿಮಬ್ಜಜೇಶ
ಪೂರ್ವಾಖಿಲಸ್ಯ ಜಗತಃ ಸಕಲೇಽಪಿ ಕಾಲೇ।
ಸೃಷ್ಟಿಸ್ಥಿತಿ ಪ್ರಲಯಮೋಕ್ಷದಮಾತ್ಮತಂತ್ರಂ
ಲಕ್ಷ್ಮೀಪತಿಂ ಅಪೀಶಮತಿಭಕ್ತಿಯುತಃ ಸ ಮುಚ್ಯೇತ್ ॥ ೧೩೪ ॥

ಬ್ರಹ್ಮರುದ್ರಾದಿ ಸಮಸ್ತ ಪ್ರಪಂಚಕ್ಕೆ ಎಲ್ಲ ಕಾಲದಲ್ಲಿಯೂ ಸೃಷ್ಟಿಸ್ಥಿತಿಲಯ ಮೋಕ್ಷಗಳನ್ನು ನೀಡುವವ, ಲಕ್ಷ್ಮಿಗೂ ಪತಿ, ಸ್ವತಂತ್ರ ಎಂದು ಯಾರು ಹರಿಯನ್ನು ನಿಶ್ಚಯವಾಗಿ ತಿಳಿದು ಅತ್ಯಂತ ಭಕ್ತಿಯುಕ್ತನಾಗಿರುವನೋ ಅವನು ಮೋಕ್ಷವನ್ನು ಪಡೆಯುವನು.

ತಸ್ಮಾದನಂತಗುಣಪೂರ್ಣಮಮಂ ರಮೇಶಂ
ನಿಶ್ಚಿತ್ಯ ದೋಷರಹಿತಂ ಪರಯೈವ ಭಕ್ತ್ಯಾ।
ವಿಜ್ಞಾಯ ದೈವತಗಣಾಂಶ್ಚ ಯಥಾಕ್ರಮೇಣ
ಭಕ್ತ್ಯಾ ಹರೇರಿತಿ ಸದೈವ ಭಜೇತ ಧೀರಃ ॥ ೧೩೫ ॥

ಅದರಿಂದ ದೃಢಭಕ್ತಿಉಳ್ಳವನು ರಮಾರಮಣನನ್ನು ಅನಂತ ಗುಣಪೂರ್ಣನೆಂದೂ ದೋಷರಹಿತನೆಂದೂ ನಿಶ್ಚಯಿಸಿ ಪರಮಭಕ್ತಿಯಿಂದ ಸದಾ ಭಜಿಸಬೇಕು. ದೇವತಾಸಮೂಹಗಳನ್ನೂ ತಾರತಮ್ಯಕ್ರಮದಿಂದ ತಿಳಿದು ಹರಿಭಕ್ತರೆಂದು ಸದಾ ಭಜಿಸಬೇಕು.

ನಿಹತ್ಯ ಕಂಸಮೋಜಸಾ ವಿಧಾತೃಶಂಭುಪೂರ್ವಕೈಃ।
ಸ್ತುತಃ ಪ್ರಸೂನವರ್ಷಿಭಿರ್ಮುಮೋದ ಕೇಶವೋಽಧಿಕಮ್ ॥ ೧೩೬ ॥

ಕಂಸನನ್ನು ಬಲಾತ್ಕಾರದಿಂದ ಕೊಂದ ಕೃಷ್ಣನಿಗೆ ಬ್ರಹ್ಮರುದ್ರಾದಿಗಳು ಹೂಮಳೆಗರೆದರು. ಸ್ತೋತ್ರ ಮಾಡಿದರು. ಕೃಷ್ಣ ಬಹಳ ಪ್ರಸನ್ನನಾದ.

ಸದೈವ ಮೋದರೂಪಿಣೋ ಮುದೋಕ್ತಿರಸ್ಯ ಲೌಕಿಕೀ।
ಯಥೋದಯೋ ರವೇರ್ಭವೇತ್ ಸದೋದಿತಸ್ಯ ಲೋಕತಃ ॥ ೧೩೭ ॥

ಸದಾ ಆನಂದರೂಪನಾಗಿಯೆ ಇರುವ ಕೃಷ್ಣನಿಗೆ ಆನಂದವಾಯಿತೆನ್ನುವುದು ಬರಿ ಲೋಕದೃಷ್ಟಿಯಿಂದ. ಸದಾ ಉದಿತನಾಗಿಯೆ ಇರುವ ಸೂರ್ಯನಿಗೆ ಉದಯವಾಗುವುದೆಂದು ಲೋಕ ಹೇಳುವಂತೆಯೆ ಇದು.

ಅನಂತಚಿತ್ಸುಖಾರ್ಣವಃ ಸದೋದಿತೈಕರೂಪಕಃ।
ಸಮಸ್ತದೋಷವರ್ಜಿತೋ ಹರಿರ್ಗುಣಾತ್ಮಕಃ ಸದಾ ॥ ೧೩೮ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ ಕಂಸವಧೋ ನಾಮ ತ್ರಯೋದಶೋಽಧ್ಯಾಯಃ ॥

ಶ್ರೀಹರಿ ಸದಾ ಅಮಿತ ಜ್ಞಾನಾನಂದ ಸಾಗರ. ಸದಾ ಉದಿತ ಉತ್ತಮಸ್ವರೂಪದವ. ಸಕಲ ದೋಷರಹಿತ. ಆನಂದಾದಿ ಗುಣ ಸ್ವರೂಪವಾದ ಶರೀರವುಳ್ಳವ.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಕಂಸವಧವೆಂಬ ಹದಿಮೂರನೆ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೪

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಪಿತ್ರೋರ್ಬಂಧಂ ನಿರಸ್ಯ ಕ್ಷಿತಿಪತಿಮಕರೋದುಗ್ರಸೇನಂ ಗುರೋರ್ಯಃ
ಪುತ್ರಂ ಪ್ರಾದಾತ್ ಪರೇತಂ ಯುಧಿ ವಿಜಿತ ಜರಾಸಂಧಪೂರ್ವಾರಿವರ್ಗಃ।
ಪಾರ್ಥಾನ್ ಪಿತ್ರಾ ವಿಹೀನಾನ್ ಉಪಗತತನಗರಾನ್
ಯಸ್ತ್ವಜೋಽಪಾದ್ ವಿಪದ್ಭ್ಯಃ
ನಂದಾದೀನ್ ಉದ್ಧವೋಕ್ತ್ಯಾ ಗತವಿರಹ ಶುಚಃ ಕಾರಯನ್
ಸೋಽವತಾನ್ನಾಮ್ ॥ ೧೪ ॥

ಶ್ರೀಕೃಷ್ಣ ತಂದೆತಾಯಿಗಳ ಬಂಧನವನ್ನು ತೊಡೆದು ಉಗ್ರಸೇನನನ್ನು ದೊರೆಯನ್ನಾಗಿ ಮಾಡಿದ. ಮೃತನಾದ ಗುರುಪುತ್ರನನ್ನು ತಂದುಕೊಟ್ಟ ಯುದ್ಧದಲ್ಲಿ ಜರಾಸಂಧಾದಿಶತ್ರುವರ್ಗವನ್ನು ಮಣಿಸಿದ. ಪಾಂಡವರು ತಂದೆ ಇಲ್ಲದವರಾಗಿ ಹಸ್ತಿನಾವತಿಗೆ ಬಂದಾಗ ಅವರನ್ನು ಆಪತ್ತುಗಳಿಂದ ರಕ್ಷಿಸಿದ. ಉದ್ಧವನ ಮಾತಿನ ಮೂಲಕ ನಂದಾದಿಗಳ ವಿರಹ ದುಃಖವನ್ನು ಕಳೆದ. ಅಂಥ ಶ್ರೀಕೃಷ್ಣ ನಮ್ಮನ್ನು ಕಾಪಾಡಲಿ.

ಹದಿನಾಲ್ಕನೆ ಅಧ್ಯಾಯ

ಅಸುರ ಸಂಹಾರ

ಕೃಷ್ಣರಾಮರಿಗೆ ವಿದ್ಯಾಭ್ಯಾಸ

॥ ಹರಿಃ ಓಂ ॥

ಕೃಷ್ಣೋ ವಿಮೋಚ್ಯ ಪಿತರಾವಭಿವಂದ್ಯ ಸರ್ವ
ವಂದ್ಯೋಽಪಿ ರಾಮಸಹಿತಃ ಪ್ರತಿಪಾಲನಾಯ।
ಧರ್ಮಸ್ಯ ರಾಜ್ಯಪದವೀಂ ಪ್ರಣಿಧಾಯ ಚೋಗ್ರ
ಸೇನೇ ದ್ವಿಜತ್ವಮುಪಗಮ್ಯ ಮುಮೋಚ ನಂದಂ ॥ ೧ ॥

ಬಲರಾಮಸಮೇತನಾದ ಶ್ರೀಕೃಷ್ಣ ತಂದೆ ತಾಯಿಗಳನ್ನು ಕಾರಾಗೃಹದಿಂದ ಬಿಡಿಸಿ, ತಾನು ಸರ್ವವಂದ್ಯನಾದರೂ ಶಿಷ್ಟಾಚಾರ ಪರಿಪಾಲನೆಗಾಗಿ ಅವರನ್ನು ನಮಿಸಿ, ರಾಜ್ಯಪದವಿಯನ್ನು ಉಗ್ರಸೇನನಲ್ಲಿ ಇರಿಸಿ, ದ್ವಿಜ ಸಂಸ್ಕಾರ ಪಡೆದು ನಂದನನ್ನು ಕಳಿಸಿಕೊಟ್ಟ.

ಯದು ಸಂತತಿ ರಾಜ್ಯವಾಳದಿರಲೆಂದು ಯಯಾತಿಯ ಶಾಪವಿದ್ದರೂ ಕೃಷ್ಣನ ಅನುಗ್ರಹ ಬಲದಿಂದ ಉಗ್ರಸೇನ ಸಿಂಹಾಸನವೇರಿದ ಎಂದು ವಿಷ್ಣು ಪುರಾಣ ಹೇಳಿದೆ. ಕೃಷ್ಣ ಅವನ ಸಿಂಹಾಸನವನ್ನು ಅವನಿಗೇ ಕೊಟ್ಟ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರು ಮೂವರೂ ದ್ವಿಜರು. ಅದರಿಂದ ದ್ವಿಜಸಂಸ್ಕಾರವೆಂದರೆ ಕ್ಷತ್ರಿಯೋಚಿತ ಸಂಸ್ಕಾರ.

ನಂದೋಽಪಿ ಸಾಂತ್ವವಚನೈರನುನೀಯ ಮುಕ್ತಃ
ಕೃಷ್ಣೇನ ತಚ್ಚರಣಪಂಕಜಮಾತ್ಮಸಂಸ್ಥಂ
ಕೃತ್ವಾಜಗಾಮ ಸಹ ಗೋಪಗಣೇನ ಕೃಚ್ಛ್ರಾದ್
ಧ್ಯಾಯಾನ್ ಜನಾರ್ದನಮುವಾಸ ವನೇ ಸಭಾರ್ಯಃ ॥ ೨ ॥

ಕೃಷ್ಣ ನಂದನನ್ನು ಸಾಂತ್ವವಚನಗಳಿಂದ ಸಮಾಧಾನಪಡಿಸಿ ಬೀಳ್ಕೊಟ್ಟ ಅವನ ಪಾದಕಮಲವನ್ನು ಅಂತಃಕರಣದಲ್ಲಿ ಇರಿಸಿಕೊಂಡು ನಂದ ಕಷ್ಟದಿಂದ ಪತ್ನೀಸಮೇತನಾಗಿ ಗೋಪಾಲಕರ ಸಮೂಹದೊಂದಿಗೆ ಹೊರಟ. ಕೃಷ್ಣನನ್ನು ಸ್ಮರಿಸುತ್ತ ವೃಂದಾವನದಲ್ಲಿ ವಾಸಮಾಡಿದ.

ಕೃಷ್ಣೋಽಪ್ಯವಂತಿಪುರವಾಸಿನಮೇತ್ಯ ವಿಪ್ರಂ
ಸಾಂದೀಪನಿಂ ಸಹ ಬಲೇನ ತತೋಽಧ್ಯಗೀಷ್ಟ।

ವೇದಾನ್ ಸಕೃನ್ನಿಗದಿತಾನ್ ನಿಖಿಲಾಶ್ಚ ವಿದ್ಯಾಃ
ಸಂಪೂರ್ಣಸಂವಿದಪಿ ದೈವತಶಿಕ್ಷಣಾಯ ॥ ೩ ॥

ಶ್ರೀಕೃಷ್ಣ ಬಲರಾಮನೊಂದಿಗೆ ಅವಂತೀ ನಗರವಾಸಿ ಸಾಂದೀಪನಿ ಎಂಬ ಬ್ರಾಹ್ಮಣನ ಶಿಷ್ಯತ್ವ ವಹಿಸಿ ಒಂದು ಬಾರಿ ಹೇಳಿಕೊಟ್ಟ ಮಾತ್ರಕ್ಕೆ ವೇದಗಳನ್ನು ಎಲ್ಲ ವಿದ್ಯೆಗಳನ್ನು ಪೂರ್ಣಜ್ಞಾನಸ್ವರೂಪನಾದರೂ ದೇವತೆಗಳ ಶಿಕ್ಷಣಕ್ಕಾಗಿ ಕಲಿತುಕೊಂಡ.

ಎಲ್ಲ ವಿದ್ಯೆಗಳೆಂದರೆ ಚತುಃ ಪಷ್ಟಿ ಕಲೆಗಳು, ಅರವತ್ತನಾಲ್ಕು ಕಲೆಗಳನ್ನೂ ಅರವತ್ತನಾಲ್ಕು ದಿನಗಳಲ್ಲಿ ಕೃಷ್ಣರಾಮರು ಕಲಿತರು.

ಧರ್ಮೋಹಿ ಸರ್ವವಿದುಷಾಮಪಿ ದೈವತಾನಾಂ
ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ।
ಜ್ಞಾನಾದಿಗೂಹನಮುತಾಧ್ಯಯನಾದಿರತ್ರ
ತಜ್ಜ್ಞಾಪನಾರ್ಥಮವಸದ್ ಭಗವಾನ್ ಗುರೌ ಚ ॥ ೪ ॥

ದೇವತೆಗಳು ಸರ್ವಜ್ಞರಾದರೂ ಮನುಷ್ಯರಲ್ಲಿ ಅವತಾರ ಪ್ರಾಪ್ತವಾದಾಗ ಮನುಷ್ಯರಂತೆಯೆ ನಡೆದುಕೊಳ್ಳುವುದು, ಜ್ಞಾನಾದಿಗಳನ್ನು ಮರೆಮಾಡಿಕೊಳ್ಳುವುದು ಮತ್ತು ಅಧ್ಯಯನ ಮುಂತಾದುದು ಅವರಿಗೆ ಧರ್ಮ. ಅದನ್ನು ತಿಳಿಸುವುದಕ್ಕಾಗಿ ಕೃಷ್ಣ ಗುರುವಿನ ಬಳಿ ವಾಸಮಾಡಿದ.

ಗುರ್ವರ್ಥಮೇಷ ಮೃತಪುತ್ರಮದಾತ್ ಪುನಶ್ಚ
ರಾಮೇಣ ಸಾರ್ಧಮಗಮನ್ಮಧುರಾಂ ರಮೇಶಃ।
ಪೌರೈಃ ಸಜಾನಪದಬಂಧುಜನೈರಜಸ್ರ-
ಮಭ್ಯರ್ಚಿತೋ ನ್ಯವಸದಿಷ್ಟಕೃದಾತ್ಮಪಿತ್ರೋಃ ॥ ೫ ॥

ಶ್ರೀಕೃಷ್ಣಗುರುವಿಗೆ ಮೃತಪುತ್ರನನ್ನು ತಿರುಗಿ ಬದುಕಿಸಿಕೊಟ್ಟ ರಾಮನೊಂದಿಗೆ ಮಧುರೆಗೆ ತೆರಳಿದ. ಗ್ರಾಮಸ್ಥರು ಮತ್ತು ಬಂಧುಜನ ಸಮೇತರಾಗಿ ಪೌರರು ತನ್ನನ್ನು ಆದರಿಸುತ್ತಿದ್ದಂತೆ ಸದಾ ತನ್ನ ತಂದೆತಾಯಿಗಳ ಅಭೀಷ್ಟಗಳನ್ನು ಸಲ್ಲಿಸುತ್ತ ವಾಸಮಾಡಿದ.

ಶ್ರೀಕೃಷ್ಣ ಪ್ರಭಾಸದಲ್ಲಿ ಸಮುದ್ರದಲ್ಲಿದ್ದ ಪಂಚಜನನೆಂಬ ರಾಕ್ಷಸನನ್ನು ಕೊಂದು ಪಾಂಚಜನ್ಯವನ್ನು ತಯಾರಿಸಿ ಯಮಪಟ್ಟಣಕ್ಕೆ ಹೋಗಿ ಪಾಂಚಜನ್ಯ ಊದಿ ಯಮನಿಂದ ಪೂಜಿತನಾದ. ಅಲ್ಲಿಂದ ಗುರುಪುತ್ರನನ್ನು ತಂದು ಗುರುದಕ್ಷಿಣೆಯಾಗಿ ನೀಡಿದ.

ಸರ್ವೇಽಪಿ ತೇ ಪತಿಮವಾಪ್ಯ ಹರಿಂ ಪುರಾ ಹಿ
ತಪ್ತಾ ಹಿ ಭೋಜಪತಿನಾ ಮುಮುದುರ್ನಿತಾಂತಂ।

ಕಿಂ ವಾಚ್ಯಮತ್ರ ಸುತಮಾಪ್ಯ ಹರಿಂ ಸ್ವಪಿತ್ರೋ-
ರ್ಯತ್ರಾಖಿಲಸ್ಯ ಸುಜನಸ್ಯ ಬಭೂವ ಮೋದಃ ॥ ೬ ॥

ಪೌರರೆಲ್ಲರೂ ಹಿಂದೆ ಕಂಸನಿಂದ ಪೀಡಿತರಾಗಿದ್ದವರು ಕೃಷ್ಣನನ್ನು ಒಡೆಯನನ್ನಾಗಿ ಪಡೆದ ಮೇಲೆ ಬಹಳ ಆನಂದಪಟ್ಟರು. ಹೀಗೆ ಎಲ್ಲ ಸಜ್ಜನರಿಗೂ ಆನಂದವಾಯಿತೆಂದರೆ ಮಗನಾದ ಕೃಷ್ಣನನ್ನು ಪಡೆದ ಅವನ ತಂದೆತಾಯಿಗಳಿಗೆ ಆನಂದವಾಯಿತೆಂದು ಏನು ಹೇಳಬೇಕು?

ಕೃಷ್ಣಾಶ್ರಯೋ ವಸತಿ ಯತ್ರ ಜನೋಽಪಿ ತತ್ರ
ವೃದ್ಧಿರ್ಭವೇತ್ ಕಿಮು ರಮಾಧಿಪತೇರ್ನಿವಾಸೇ।
ವೃಂದಾವನಂ ಯದಧಿವಾಸತ ಆಸ ಸದ್ಮ್ಯ ಃಙ್
ಮಾಹೇಂದ್ರಸದ್ಮಸದೃಶಂ ಕಿಮು ತತ್ರ ಪುರ್ಯಾಂ ॥ ೭ ॥

ಕೃಷ್ಣನನ್ನು ಆಶ್ರಯಿಸಿದ ಜನರು ವಾಸಮಾಡುವಲ್ಲಿಯೆ ಎಲ್ಲ ಸಮೃದ್ಧಿಯಾಗುವುದು. ಕೃಷ್ಣನೇ ವಾಸಮಾಡುವಲ್ಲಿ ಇನ್ನೇನು? ಕೃಷ್ಣ ವಾಸಮಾಡಿದ್ದರಿಂದ ವೃಂದಾವನವೇ ಚೆನ್ನಾಗಿ ಸ್ವರ್ಗ ಸಮಾನವಾಯಿತೆಂದ ಮೇಲೆ ಮಥುರೆಯಲ್ಲಿ ಸಮೃದ್ಧಿಯಾಯಿತೆಂದು ಬೇರೆ ಏನು ಹೇಳಬೇಕು?

ಯೇನಾಧಿವಾಸ ಮೃಷಭೋ ಜಗತಾಂ ವಿಧತ್ತೇ
ವಿಷ್ಣುಸ್ತತೋ ಹಿ ವರತಾ ಸದನೇ ವಿಧಾತುಃ।
ತಸ್ಮಾತ್ ಪ್ರಭೋರ್ನಿವಸನಾನ್ಮಧುರಾಪುರೀ ಸಾ
ಶಶ್ವತ್ ಸಮೃದ್ಧಜನಸಂಕುಲಿತಾ ಬಭೂವ ॥ ೮ ॥

ಜಗದುತ್ತಮನಾದ ವಿಷ್ಣು ವಾಸ ಮಾಡುವುದರಿಂದ ತಾನೆ ಬ್ರಹ್ಮಲೋಕಕ್ಕೆ ಉತ್ತಮತೆ? ಅದರಿಂದ ಪ್ರಭು ವಾಸಮಾಡಿದ್ದರಿಂದಲೇ ಮಥುರಾಪುರಿ ಸದಾ ಸಮೃದ್ಧರಾದ ಜನರಿಂದ ತುಂಬಿತು.

ಜರಾಸಂಧನ ಪರಾಭವ

ರಕ್ಷತ್ಯಜೇ ತ್ರಿಜಗತಾಂ ಪರಿರಕ್ಷಕೇಽಸ್ಮಿನ್
ಸರ್ವಾನ್ ಯದೂನ್ ಮಗಧರಾಜಸುತೇ ಸ್ವಭರ್ತುಃ।
ಕೃಷ್ಣಾನ್ಮೃತಿಂ ಪಿತುರವಾಪ್ಯ ಸಮೀಪಮಸ್ತಿ
ಪ್ರಾಸ್ತೀ ಶಶಂಸತುರತೀವ ಚ ದುಃಖಿತೇಽಸ್ಮೈ ॥ ೯ ॥

ಮೂರುಲೋಕದ ರಕ್ಷಕನಾದ ಕೃಷ್ಣ ಎಲ್ಲ ಯಾದವರನ್ನೂ ರಕ್ಷಿಸುತ್ತಿದ್ದಾಗ ಅಸ್ತಿ ಪ್ರಾಸ್ತಿ

ಎಂಬ ಇಬ್ಬರು ಮಗಧರಾಜಕುಮಾರಿಯರು ಅತ್ಯಂತ ದುಃಖಿತರಾಗಿ ತಂದೆಯ ಬಳಿಬಂದು ತಮ್ಮ ಪತಿಯಾದ ಕಂಸ ಕೃಷ್ಣನಿಂದ ಮರಣ ಹೊಂದಿದ್ದನ್ನು ಬಣ್ಣಿಸಿದರು.

ಶ್ರುತ್ವೈವ ತನ್ಮಗಧರಾಜ ಉರುಪ್ರರೂಢ
ಬಾಹ್ವೋರ್ಬಲೇನ ನ ಜಿತೋ ಯುಧಿ ಸರ್ವಲೋಕೈಃ।
ಬ್ರಹ್ಮೇಶಚಂಡಮುನಿದತ್ತವರೈರಜೇಯೋ
ಮೃತ್ಯೋರ್ಜಿತಶ್ಚ ವಿಜಯೀ ಜಗತಶ್ಚುಕೋಪ ॥ ೧೦ ॥

ಮಗದರಾಜ ಜರಾಸಂಧ ಚೆನ್ನಾಗಿ ಬಲಿತ ತೋಳುಗಳ ಬಲದಿಂದಲೂ ಬ್ರಹ್ಮ ರುದ್ರರು, ಚಂಡಕೌಶಿಕರು, ದುರ್ವಾಸರು ಕೊಟ್ಟ ವರಗಳಿಂದಲೂ ಯುದ್ಧದಲ್ಲಿ ಪರಾಜಿತನಾಗದೆ ಎಲ್ಲ ಜನರಿಗೂ ಅಜೇಯ, ಮರಣರಹಿತ, ಜಗದ್ವಿಜಯಿಯಾಗಿದ್ದವ. ಅವನು ಮಕ್ಕಳ ಆ ಮಾತನ್ನು ಕೇಳಿ ಕುಪಿತನಾದ.

ವಿಪ್ರಚಿತ್ತಿ ಎಂಬ ಮಹಾದೈತ್ಯ. ಹಿಂದೆ ದೇವಾಸುರ ಸಂಗ್ರಾಮದಲ್ಲಿ ಮುಖ್ಯಪ್ರಾಣನಿಂದ ಹತನಾಗಿದ್ದ. ಅವನೇ ಜರಾಸಂಧನಾಗಿ ಹುಟ್ಟಿದ. ತಂದೆ ಮಗದರಾಜನಾದ ಬೃಹದ್ರಥ. ಉಪರಿಚರವಸುವಿನ ಮಗ. ಕಾಶಿರಾಜನ ಅವಳಿ ಹೆಣ್ಣುಮಕ್ಕಳು ಬೃಹದ್ರಥನ ರಾಣಿಯರು. ಚಂಡಕೌಶಿಕ ಮುನಿ ಅಭಿಮಂತ್ರಿಸಿ ಕೊಟ್ಟ ಫಲವನ್ನು ಇಬ್ಬಾಗವಾಗಿ ಕೊಯ್ದು ಇಬ್ಬರು ಭಕ್ಷಿಸಿದಾಗ ಇಬ್ಬರೂ ಗರ್ಭಧಾರಣ ಮಾಡಿ ಶಿಶುವಿನ ಎರಡು ಸೀಳುಗಳನ್ನು ಹೆತ್ತರು. ವಿಕಾರವೆಂದು ಶಿಶುವನ್ನು ದಾದಿಯರ ಮೂಲಕ ತಿಪ್ಪೆಗೆ ಹಾಕಿಸಿದರು. ಗ್ರಾಮದೇವತೆಯಾದ ಜರಾ ಎಂಬ ರಾಕ್ಷಸಿ ಆ ಸೀಳುಗಳನ್ನು ತಿನ್ನಲು ಎತ್ತಿ ಜೋಡಿಸುವಷ್ಟರಲ್ಲಿ ಅವೆರಡೂ ಸೇರಿ ಒಂದು ಗಂಡುಮಗುವಾಯಿತು. ಒಡನೆ ಆ ಶಿಶುವನ್ನು ರಾಕ್ಷಸಿ ಬೃಹದ್ರಥನಿಗೆ ನೀಡಿದಳು. ಜರೆಯಿಂದ ಸಂಧಿ ಸಲ್ಪಟ್ಟವನೆಂದು ಜರಾಸಂಧನೆಂಬ ಹೆಸರು ಶಿಶುವಿಗೆ ಬಂದಿತು.

ಜರಾಸಂಧ ಭೈರವೋಪಾಸಕ. ಭೈರವ ಪ್ರೀತಿಗಾಗಿ ಪುರುಷಮೇಧ ಮಾಡಲು ಎಂಬತ್ತಾರು ಸಾವಿರ ಮಂದಿ ರಾಜಕುಮಾರರನ್ನು ಸೆರೆಯಲ್ಲಿಟ್ಟಿದ್ದ. ಮುಂದೆ ಈ ರಾಜಕುಮಾರರೆಲ್ಲರೂ ರಹಸ್ಯವಾಗಿ ಶ್ರೀಕೃಷ್ಣನಿಗೆ ಹೇಳಿ ಕಳುಹಿಸಿ, ತಮ್ಮ ಪ್ರಾಣ ಉಳಿಸಬೇಕೆಂದು ಬೇಡಿಕೊಂಡರು. ಕೃಷ್ಣ ಭೀಮನಿಂದ ಇಪ್ಪತ್ತೇಳು ದಿನಗಳ ದೀರ್ಘಯುದ್ಧದಲ್ಲಿ ಕೊನೆಗೆ ಇವನನ್ನು ಕೊಲ್ಲಿಸುತ್ತಾನೆ. ಇವನ ಇಬ್ಬರು ಮಕ್ಕಳು ಆಸ್ತಿ, ಪಾಸ್ತಿಯರು ಕಂಸನ ರಾಣಿಯರಾಗಿದ್ದರು. ಪ್ರಾಸ್ತಿಯನ್ನು ಪ್ರಾಪ್ತಿ ಎಂದೂ ಕೆಲವೆಡೆ ಹೆಸರಿಸಲಾಗಿದೆ.

ಅಳಿಯ ಕಂಸನನ್ನು ಕೃಷ್ಣ ವಧಿಸಿದನೆಂದು ಕೋಪದಿಂದ ಜರಾಸಂಧ ಹದಿನೆಂಟು ಬಾರಿ, ಇಪ್ಪತ್ತಮೂರು ಅಕ್ಷೋಹಿಣಿ ಸೈನ್ಯದೊಂದಿಗೆ ಮಥುರೆಯನ್ನು ಮುತ್ತಿದ. ಪ್ರತಿಬಾರಿಯೂ ಸೋತು ಹಿಂತಿರುಗಿದ. ಅವನ ಉಪದ್ರವವನ್ನು ನಾಗರಿಕರಿಗೆ ತಪ್ಪಿಸುವುದಕ್ಕಾಗಿ ಕೃಷ್ಣ ದೂರದ ಸಮುದ್ರ ದ್ವೀಪದಲ್ಲಿ ದ್ವಾರಕಾನಗರ ನಿರ್ಮಾಣ ಮಾಡಿದ.

ಕ್ಷುಬ್ಧೋಽತಿಕೋಪವಶತಃ ಸ್ವಗದಾಮಮೋಘಾಂ
ದತ್ತಾಂ ಶಿವೇನ ಜಗೃಹೇ ಶಿವಭಕ್ತವಂದ್ಯಃ।
ಶೈವಾಗಮಾಖಿಲವಿದತ್ರ ಚ ಸುಸ್ಥಿರೋಽಸೌ
ಚಿಕ್ಷೇಪ ಯೋಜನಶತಂ ಸ ತು ತಾಂ ಪರಸ್ಮೈ ॥ ೧೧ ॥

ಜರಾಸಂಧ ಶೈವಾಗಮಗಳಲ್ಲಿ ಸರ್ವಜ್ಞ ಮತ್ತು ಅವುಗಳಲ್ಲಿ ಒಳ್ಳೆಯ ನಿಷ್ಠೆಯಿಂದ ಇದ್ದವ. ಶಿವಭಕ್ತರಿಗೆಲ್ಲ ವಂದ್ಯ. ಆದರಿಂದ ಕೃಷ್ಣನಲ್ಲಿ ಅತಿಕೋಪವಶದಿಂದ ಕ್ಷೋಭೆ ಹೊಂದಿ ಅಮೋಘವಾದ ತನ್ನ ಗದೆಯನ್ನು ತನ್ನ ಅರಮನೆಯಲ್ಲಿ ನಿಂತೇ ನೂರು ಯೋಜನದಷ್ಟು ದೂರ ಕೃಷ್ಣನಿಗೆ ಎಸೆದ.

ಅರ್ವಾಕ್ಪಪಾತ ಚ ಗದಾ ಮಥುರಾಪ್ರದೇಶಾತ್
ಸಾ ಯೋಜನೇನ ಯದಿಮಂ ಪ್ರಜಗಾದ ಪೃಷ್ಟಃ।
ಏಕೋತ್ತರಾಮಪಿ ಶತಾಚ್ಚತಯೋಜನೇತಿ
ದೇವರ್ಷಿರತ್ರ ಮಥುರಾಂ ಭಗವತ್ಪ್ರಿಯಾರ್ಥೇ ॥ ೧೨ ॥

ಆದರೆ ಆ ಗಧೆ ಮಥುರೆಯ ಪ್ರದೇಶಕ್ಕಿಂತ ಒಂದು ಯೋಜನ ಈಚೆಗೇ ಬಿದ್ದಿತು. ಏಕೆಂದರೆ ಮಗಧರಾಜಧಾನಿಯಿಂದ ಮಥುರೆ ನೂರೊಂದು ಯೋಜನ ದೂರದಲ್ಲಿದ್ದರೂ ಜರಾಸಂಧ ಕೇಳಿದಾಗ ನಾರದರು ಭಗವಂತನ ಪ್ರೀತಿಗಾಗಿ ನೂರು ಯೋಜನ ಎಂದಿದ್ದರು.

ಶಕ್ತಸ್ಯ ಚಾಪಿ ಹಿ ಗದಾಪ್ರತಿಘಾತನೇ ತು
ಶುಶ್ರೂಷಣಂ ಮದುಚಿತಂ ತ್ವಿತಿ ಚಿಂತಯಾನಃ।
ವಿಷ್ಣೋರ್ಮನಿಃ ಸ ನಿಜಗಾದ ಹಿ ಯೋಜನೋನಂ
ಮಾರ್ಗಂ ಪುರೋ ಭಗವತೋ ಮಗಧೇಶಪೃಷ್ಟಃ ॥ ೧೩ ॥

ಗದೆಯನ್ನು ಇದಿರಿಸಲು ಕೃಷ್ಣ ಶಕ್ತನಾಗಿದ್ದರೂ ನಾರದರು ತಾವು ಅವನ ಸೇವೆ ಮಾಡುವುದು ಉಚಿತವೆಂದು ಬಗೆದು, ಜರಾಸಂಧ ಕೇಳಿದಾಗ ಭಗವಂತನ ನಗರದ ಮಾರ್ಗವನ್ನು ಒಂದು ಯೋಜನ ಕಡಿಮೆಯಾಗಿ ಹೇಳಿದ್ದರು.

ನಾರದರ ಮಾತನ್ನು ನಂಬಿ ಜರಾಸಂಧ ತನ್ನ ಗದೆಯನ್ನು ನೂರು ಬಾರಿ

ಮಾತ್ರ ತಿರುಗಿಸಿ ಎಸೆದ. ವಸ್ತುತಃ ಮಗಧರಾಜಧಾನಿಯಾದ ಗಿರಿವ್ರಜದಿಂದ ಮಧುರೆ ನೂರೊಂದು ಯೋಜನ ದೂರದಲ್ಲಿತ್ತು. ನೂರೊಂದು ಬಾರಿ ತಿರುಗಿಸಿ ಎಸೆದಿದ್ದರೆ ಮಧುರೆಗೇ ಹೋಗಿ ಬೀಳುತ್ತಿತ್ತು.

ಕ್ಷಿಪ್ತಾ ತು ಸಾ ಭಗವತೋಽಥ ಗದಾ ಜರಾಖ್ಯಾಂ
ತತ್ಸಂಧಿನೀಮಸುಭಿರಾಶು ವಿಯೋಜ್ಯ ಪಾಪಾಮ್ ।
ಮತ್ಯಾರ್ಶನೀಂ ಭಗವತಃ ಪುನರಾಜ್ಞಯೈವ
ಯಾತಾ ಗಿರೀಶಸದನಂ ಮಗಧಂ ವಿಸೃಜ್ಯ ॥ ೧೪ ॥

ಭಗವಂತನಿಗೆ ಎಸೆದ ಗದೆ ಜರಾಸಂಧನ ಶರೀರದ ಎರಡು ಸೀಳುಗಳನ್ನು ಸಂಯೋಜನೆ ಮಾಡಿದ್ದ ಪಾಪಿಷ್ಠಳಾದ ಜರಾ ಎಂಬ ನರಭಕ್ಷಕ ರಾಕ್ಷಸಿಗೆ ಪ್ರಾಣವಿಯೋಜನೆ ಮಾಡಿಸಿ ಭಗವಂತನ ಆಜ್ಞೆಯಿಂದಲೆ ಜರಾಸಂಧನನ್ನು ತೊರೆದು ಶಿವಲೋಕವನ್ನು ಸೇರಿತು.

ಜರೆ ರಾಕ್ಷಸಿಯಾದರೂ ಗಿರಿವ್ರಜದಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಗೋಡೆಯ ಮೇಲೆ ಅವಳ ಚಿತ್ರ ಬರೆದು ಪೂಜಿಸುತ್ತಿದ್ದರು. ಪೂಜಿಸಿದರೆ ಸಮೃದ್ಧಿ ಪೂಜಿಸದಿದ್ದರೆ ಹಾನಿಯಾಗುತ್ತಿತ್ತು. ಬೃಹದ್ರಥನ ಅರಮನೆಯಲ್ಲಿಯೂ ಅವಳ ಪೂಜೆ ನಡೆಯುತ್ತಿತ್ತು. ಜರಾಸಂಧನಿಗಂತೂ ಅವಳು ತಾಯಿ. ಬಹಳ ಪೂಜ್ಯಳು. ಅವಳನ್ನೇ ಗದೆ ಕೊಂದಿತು. ಮಹಾಭಾರತ ಪ್ರಚಲಿತ ಪಾಠದಲ್ಲಿ ಗಿರಿವ್ರಜದಿಂದ ಮಧುರೆ ನೂರು ಯೋಜನ ದೂರದಲ್ಲಿತ್ತು. ಜರಾಸಂಧ ತೊಂಬತ್ತೊಂಬತ್ತು ಬಾರಿ ಗದೆಯನ್ನು ತಿರುಗಿಸಿ ಎಸೆದ. ಅದರಿಂದ ಅದು ಮಧುರೆಗೆ ಬೀಳದೆ ಮಧುರೆಗೆ ಸಮೀಪದಲ್ಲಿ ಬಿದ್ದಿತು. ಆ ಪ್ರದೇಶಕ್ಕೆ 'ಗದಾವಸಾನ' ಎಂದು ಹೆಸರಾಯಿತು ಎಂದು ಸಭಾಪರ್ವದಲ್ಲಿ ಹೇಳಿದೆ. ಆದರೆ ದ್ರೋಣಪರ್ವದಲ್ಲಿ ಗದೆಯನ್ನು ತಡೆಯಲು ಬಲರಾಮ ಸ್ಥೂಣಾಕರ್ಣಾಸ್ತ್ರವನ್ನು ಪ್ರಯೋಗಿಸಿದ. ಅದರಿಂದ ಗದೆಗೆ ತಡೆ ಉಂಟಾಗಿ ಕೆಳಗೆ ಬಿದ್ದಿತು. ಆ ಗದೆಯೂ ಸ್ಥೂಣಾಕರ್ಣಾಸ್ತ್ರವೂ ಸೇರಿ ಜರೆಯನ್ನೂ ಅವಳ ಮಕ್ಕಳನ್ನೂ ಬಾಂಧವರನ್ನೂ ನಾಶಮಾಡಿದುವು ಎಂದಿದೆ.

ರಾಜಾ ಸ್ವಮಾತೃತ ಉತೋ ಗದಯಾ ಚ ಹೀನಃ
ಕ್ರೋಧಾತ್ಸಮಸ್ತನೃಪತೀನಭಿಸನ್ನಿಪಾತ್ಯ ।
ಅಕ್ಷೌಹಿಣೀತ್ರ್ಯಧಿಕವಿಂಶಯುತೋಽತಿವೇಲಂ
ದರ್ಪೋದ್ಧತಃ ಸಪದಿ ಕೃಷ್ಣಪುರೀಂ ಜಗಾಮ ॥ ೧೫ ॥

ರಾಜಾ ಜರಾಸಂಧ ಹೀಗೆ ತನ್ನ ತಾಯಿಯನ್ನು ಕಳೆದುಕೊಂಡ. ಗದೆಯನ್ನೂ

ಕಳೆದುಕೊಂಡ. ಕ್ರೋಧದಿಂದ ಕೂಡಲೇ ಎಲ್ಲ ರಾಜರುಗಳನ್ನೂ ಕೂಡಿಸಿ ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯಯುಕ್ತನಾಗಿ ಬಹಳ ದರ್ಪದಿಂದ ಉದ್ಧತನಾಗಿ ಮಥುರೆಯ ಮೇಲೆ ಏರಿಹೋದ.

ಸರ್ವಾಂ ಪುರೀಂ ಪ್ರತಿನಿರುಧ್ಯ ದಿದೇಶ ವಿಂದ-
ವಿಂದಾನುಜೌ ಭಗವತಃ ಕುಮತಿಃ ಸ ದೂತೌ।
ತಾ ಊಚತುರ್ಭಗವತೇಽಸ್ಯ ವಚೋಽತಿದರ್ಪ-
ಪೂರ್ಣಂ ತಥಾ ಭಗವತೋಽಪ್ಯಪಹಾಸಯುಕ್ತಮ್ ॥ ೧೬ ॥

ದುರ್ಬುದ್ಧಿಯವನಾದ ಜರಾಸಂಧ ಇಡೀ ಮಥುರಾನಗರಿಯನ್ನು ತಡೆಹಿಡಿದು ವಿಂದ ಅನುವಿಂದರನ್ನು ಭಗವಂತನ ಬಳಿಗೆ ದೂತರನ್ನಾಗಿ ಕಳಿಸಿದ. ಅವರು ಭಗವಂತನಿಗೆ ಅಪಹಾಸಕರವಾದ ಅತಿದರ್ಪಪೂರ್ಣವಾದ ಅವನ ಮಾತನ್ನು ಹೇಳಿದರು.

ವಸುದೇವನ ಸೋದರಿ ರಾಜಾಧಿದೇವಿಯಲ್ಲಿ ಅವಂತಿ ದೇಶದ ರಾಜನಿಂದ ಹುಟ್ಟಿದವರು ವಿಂದ ಅನುವಿಂದರು. ಅಂದರೆ ಕೃಷ್ಣನ ಸೋದರತ್ತೆ ಮಕ್ಕಳು. ಆದರೆ ಅವರು ದುರ್ಯೋಧನನ ಭಕ್ತರು. ತಮ್ಮ ತಂಗಿಯಾದ ಮಿತ್ರವಿಂದಾ ದೇವಿಯನ್ನು ದುರ್ಯೋಧನ ಮದುವೆಯಾಗಬೇಕೆಂದು ಬಯಸಿದ್ದರು. ಸ್ವಯಂವರದಲ್ಲಿ ಕೃಷ್ಣನನ್ನೆ ದೇವಿ ವರಿಸಿದಾಗ ಇವರು ಪ್ರತಿಭಟಿಸಿ ಕೃಷ್ಣನೊಡನೆ ಕಾದಿ ಸೋತರು. ಮುಂದೆ ಕುರುಕ್ಷೇತ್ರದಲ್ಲಿ ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ದುರ್ಯೋಧನನ ಪಕ್ಷದಲ್ಲಿ ನಿಂತು ಹೋರಾಡಿ ಅರ್ಜುನನಿಂದ ಹತರಾದರು.

ಲೋಕೇ ಪ್ರತೀತಬಲಪೌರುಷಸಾರರೂಪ
ಸ್ತ್ವಂ ಹ್ಯೇಕ ಏಷ್ಯಭವತೋ ಬಲವೀರ್ಯಸಾರಮ್।
ಜ್ಞಾತ್ವಾ ಸುತೇ ನ ತು ಮಯಾ ಪ್ರತಿಪಾದಿತೇ ಹಿ
ಕಂಸಸ್ಯ ವೀರ್ಯರಹಿತೇನ ಹತಸ್ತ್ವಯಾ ಸಃ ॥ ೧೭ ॥

'ಲೋಕ ಪ್ರಸಿದ್ಧವಾದ ಬಲಪೌರುಷಗಳಿಂದ ಶ್ರೇಷ್ಠ ಸ್ವರೂಪನೆನಿಸಿದವನು ನೀನೊಬ್ಬನೆ. ಆದರೆ ನಿರ್ವೀರ್ಯನಾದ ನಾನು ಮುಂದೆ ಹುಟ್ಟಲಿದ್ದ ನಿನ್ನ ಬಲವೀರ್ಯ ಮಹತ್ವವನ್ನು ತಿಳಿಯದೆ ನನ್ನ ಮಕ್ಕಳನ್ನು ಕಂಸನಿಗೆ ಕೊಟ್ಟುಬಿಟ್ಟೆ. ಈಗ ಅವನು ನಿನ್ನಿಂದ ಹತನಾಗಿದ್ದಾನೆ.'

'ಲೋಕೇಪ್ರತೀತ' ಎಂಬಲ್ಲಿ ಪ್ರತೀತ ಎಂದು ಸಂಧಿಬಿಡಿಸಿ ಅರ್ಥಾನುವಾದ ಮಾಡಿದೆ. ಅಪ್ರತೀತವೆಂದು ಸಂಧಿಬಿಡಿಸಿದರೆ ಲೋಕದಲ್ಲಿ ಅಪ್ರಸಿದ್ಧವಾದ

ಬಲಪೌರುಷ ಎಂದಾಗುತ್ತದೆ. ನೀನು ಹುಟ್ಟಿ ಕಂಸನನ್ನು ಕೊಲ್ಲುವವರೆಗೆ ನಿನ್ನ ಬಲ ಪೌರುಷಗಳು ಲೋಕ ಪ್ರಸಿದ್ಧವಾಗಿರಲಿಲ್ಲ. ಅದರಿಂದ ನಾನು ತಿಳಿಯದೆ ನನ್ನ ಮಕ್ಕಳನ್ನು ಕಂಸನಿಗೆ ಮದುವೆ ಮಾಡಿಕೊಟ್ಟೆ ಎಂದು ಜನಾರ್ದನೀಯ.[1]

ಮುಂದೆ ಹುಟ್ಟಲಿದ್ದ ನಿನ್ನ ಬಲವೀರ್ಯಗಳನ್ನು ತಿಳಿದು ನಾನು ಮಕ್ಕಳನ್ನು ಕಂಸನಿಗೆ ಕೊಡಲಿಲ್ಲ. ಅವನೇ ಬಂದು ಬಲಾತ್ಕಾರದಿಂದ ಅಪಹರಿಸಿದ ಎಂದು ವಾದಿರಾಜೀಯ.[2]

ನನ್ನ ಮಕ್ಕಳ ಮದುವೆಯ ಕಾಲದಲ್ಲಿ ಅತಿ ಸಮರ್ಥನಾದ ನೀನಿರುತ್ತಿದ್ದರೆ ಕಂಸನಿಗೆ ಕೊಡುತ್ತಿದ್ದಿಲ್ಲ. ಮುಂದೆ ಹುಟ್ಟಲಿದ್ದ ನಿನ್ನ ಸಾಮರ್ಥ್ಯವನ್ನು ತಿಳಿಯದೆ ಮಕ್ಕಳನ್ನು ಕಂಸನಿಗೆ ಕೊಟ್ಟು ತಪ್ಪು ಮಾಡಿದೆ ಎಂದು ಪರಿಹಾಸವನ್ನೂ ವಾದಿರಾಜೀಯದಲ್ಲಿ ತೋರಿಸಲಾಗಿದೆ.[3]

ಜೊತೆಗೆ, 'ನಿರ್ವೀರ್ಯನಾದ ನೀನು ಕಂಸನನ್ನು ಕೊಂದೆ' ಎಂದು ದರ್ಪದ ಮಾತನ್ನೂ ತೋರಿಸಲಾಗಿದೆ. ಮುಂದೆ ಹತ್ತೊಂಬತ್ತನೇ ಶ್ಲೋಕದಲ್ಲಿ ಕೃಷ್ಣ ಜರಾಸಂಧನ ಈ ಮಾತನ್ನು ಸತ್ಯ, ಅರ್ಥವತ್ತಾದುದೆನ್ನುತ್ತಾನೆ. ಏಕೆಂದರೆ ಕೃಷ್ಣ ತನ್ನ ನಿಜವಾದ ವೀರ್ಯ ಪರಾಕ್ರಮವನ್ನು ತೋರಿಸದೆ ನಿರ್ವೀರ್ಯನಂತೆಯೆ ಇದ್ದು ಸುಲಭವಾಗಿ ಕಂಸನನ್ನು ಕೊಂದ. ಒಂದು ಕಟಾಕ್ಷದಿಂದಲೆ ಬ್ರಹ್ಮಾಂಡವನ್ನು ನಾಶ ಮಾಡಬಲ್ಲವ ತುಚ್ಛನಾದ ಕಂಸನನ್ನು ಕೊಲ್ಲಲು ತನ್ನ ವೀರ್ಯಪರಾಕ್ರಮಗಳನ್ನು ತೋರುವನೆ? ಒಂದು ಹುಲ್ಲುಕಡ್ಡಿಯನ್ನು ಎತ್ತಲು ಆನೆ ತನ್ನ ಸರ್ವಶಕ್ತಿಯನ್ನು ಪ್ರಯೋಗಿಸುವುದೆ? ಎಂಬ ಅಭಿಪ್ರಾಯದ ಸೂಚನೆ ಇದೆ ಎನ್ನುತ್ತಿದೆ ವಾದಿರಾಜೀಯ.[4]

---

1. ಜಗತಿ ಅಪ್ರತೀತೇ ಅಪ್ರಸಿದ್ಧೇ ಯೇ ಬಲಪೌರುಷೇ ತಾಭ್ಯಾಂ ಸಾರರೂಪಃ ಶ್ರೇಷ್ಠ ರೂಪಸ್ತ್ವಮೇಕ ಇತಿ ಹಿ ಪ್ರಸಿದ್ಧಿಃ। ವೀರ್ಯವತೇನ ಮಯಾ ವಿಷ್ಯಸ್ಯ ಭವಿಷ್ಯತೋ ಭವತಸ್ತವ ಬಲವೀರ್ಯಯೋಃ ಸಾರಮಾಧಿಕ್ಯಂ ನ ಜ್ಞಾತ್ವಾವಿಜ್ಞಾಯ ಸುತೇ ಕಂಸಸ್ಯ ಪ್ರತಿಪಾದಿತೇ। -ಜನಾರ್ದನೀಯ
2. ಭವಿಷ್ಯತೋ ಬಲ ವೀರ್ಯಸಾರಂ ಜ್ಞಾತ್ವಾ ಮಯಾ ಕಂಸಸ್ಯ ಸುತೇ ನ ಪ್ರತಿಪಾದಿತೇ। ಕಿಂತು ಸ ಏವ ಬಲಾನ್ನೀತವಾನಿತಿ ಭಾವಃ। -ವಾದಿರಾಜೀಯ
3. ವಿವಾಹಸಮಯೇ ಅತಿಸಮರ್ಥಸ್ತ್ವಂ ವರ್ತಸೇ ಚೇತ್ ಅಹಂ ಸುತೇ ನ ದದ್ಯಾಂ। ಭವಿಷ್ಯತಸ್ತವ ಸಾಮರ್ಥ್ಯಮಜ್ಞಾತ್ವಾ ಸುತೇ ಪ್ರಾದಾಮಿತಿ ಪರಿಹಾಸಃ। -ವಾದಿರಾಜೀಯ
4. ತದ್ ವಚಃ ಸತ್ಯಮರ್ಥವದಿತಿ ವದತಾ ಭಗವತಾ ಕಟಾಕ್ಷಕ್ಷೇಪ ಮಾತ್ರೇಣ ಬ್ರಹ್ಮಾಂಡ ಚೂರ್ಣೀಕರಣ ಸಮರ್ಥೋಽಹಂ ತೃಣಮುದ್ಧರ್ತುಂ ಸರ್ವಂ ನಿಜಬಲಮಪ್ರಯುಂಜಾನೋ ಗಜ ಇವ ತುಚ್ಛ ಕಂಸ ವಧಾಯ ನಿಜ ವೀರ್ಯಂ ನೋಪಾದದಂ। ಅತೋ ವೀರ್ಯ ರಹಿತೇನ ನಿಜವೀರ್ಯರಹಿತೇನ ಮಯಾ ಕಂಸೋ ಹತ ಇತಿ ವಚೋಽಪ್ಯರ್ಥವದಿತಿ ಸೂಚಿತಂ। -ವಾದಿರಾಜೀಯ

'ಲೋಕೇಽಪ್ರತೀಪ' ಎಂದು ವರದರಾಜೀಯ ಪಾಠ. ಲೋಕದಲ್ಲಿ ಸಾಟಿ ಇಲ್ಲದ ವೀರ್ಯ ಪರಾಕ್ರಮಉಳ್ಳವ ಎಂದು ಅರ್ಥ.

ಸೋಽಹಂ ಹಿ ದುರ್ಬಲತಮೋ ಬಲಿನಾಂ ವರಿಷ್ಠಂ
ಕೃತ್ವೈವ ದೃಷ್ಟಿವಿಷಯಂ ವಿಗತಪ್ರತಾಪಃ।
ಯಾಸ್ಯೇ ತಪೋವನಮಥೋ ಸಹಿತಃ ಸುತಾಭ್ಯಾಂ
ಕ್ಷಿಪ್ರಂ ಮಮಾದ್ಯ ವಿಷಯೋ ಭವ ಚಕ್ಷುಷೋಽತಃ ॥ ೧೮ ॥

ನಾನು ಅತ್ಯಂತ ದುರ್ಬಲ. ಪ್ರತಾಪವಿಲ್ಲದವ. ಬಲಿಷ್ಠರಲ್ಲಿ ಶ್ರೇಷ್ಠನಾದ ನಿನ್ನನ್ನು ಕಂಡೇ ಧನ್ಯನಾಗಿ ಮಕ್ಕಳೊಂದಿಗೆ ತಪೋವನಕ್ಕೆ ಹೋಗುವೆನು. ಅದರಿಂದ ಬೇಗನೆ ನನ್ನ ಕಣ್ಣುಗಳಿಗೆ ಗೋಚರನಾಗು.

ನಿನ್ನನ್ನು ಕಂಡರೆ ಸಾಕು, ನನ್ನ ಪ್ರತಾಪ ಇಳಿದುಹೋಗುತ್ತದೆ. ಬಳಿಕ ನಾನು ಮಕ್ಕಳೊಂದಿಗೆ ತಪಸ್ಸಿಗಾಗಿ ಕಾಡಿಗೇ ಹೋಗಬೇಕಾಗುತ್ತದೆ ಎಂದು ಹೇಳುತ್ತಿದ್ದಾನೆ, ಜರಾಸಂಧ!

ಸಾಕ್ಷೇಪಮೀರಿತಮಿದಂ ಬಲದರ್ಪಪೂರ್ಣ-
ಮಾತ್ಮಾಪಹಾಸಸಹಿತಂ ಭಗವಾನ್ನಿಶಮ್ಯ।
ಸತ್ಯಂ ತದಿತ್ಯುರುವಚೋಽರ್ಥವದಭ್ಯುದೀರ್ಯ
ಮಂದಂ ಪ್ರಹಸ್ಯ ನಿರಗಾತ್ ಸಹಿತೋ ಬಲೇನ ॥ ೧೯ ॥

ಜರಾಸಂಧನ ಮಾತು ಆಕ್ಷೇಪಗರ್ಭಿತವಾಗಿತ್ತು. ಬಲ ದರ್ಪ ಪೂರ್ಣವಾಗಿತ್ತು. ಅಪಹಾಸದಿಂದ ಕೂಡಿದ್ದ ಆ ಮಾತನ್ನು ಭಗವಂತ ಕೇಳಿ ಅದು ಸತ್ಯ ಅರ್ಥಗರ್ಭಿತವೆಂದು ಅರ್ಥಗರ್ಭಿತವಾದ ಮಾತನ್ನು ಹೇಳಿ ನಕ್ಕು ಬಲರಾಮನೊಂದಿಗೆ ಹೊರಟ.

ಆಕ್ಷೇಪಗರ್ಭಿತವಾದ ಮಾತು ಆಕ್ಷೇಪವನ್ನು ಬಿಟ್ಟರೆ ಸತ್ಯವಾಗಿಯೆ ಇದೆ. 'ನಾನು ವೀರ್ಯರಹಿತ ಅತ್ಯಂತ ದುರ್ಬಲ' ಎಂದು ಹೇಳಿದುದು ನಿಜವೆ. ಜರಾಸಂಧ ವೀರ್ಯರಹಿತನೆ. ದುರ್ಬಲನೆ. 'ನೀನು ಲೋಕಪ್ರಸಿದ್ಧ ಪರಾಕ್ರಮಿ' ಎನ್ನುವುದೂ ನಿಜವೆ. ಕೃಷ್ಣ ಲೋಕಪ್ರಸಿದ್ಧ ಪರಾಕ್ರಮಿಯೆ. ಜರಾಸಂಧನಿಗೆ ಈ ಕಟುಸತ್ಯವನ್ನು ಒಪ್ಪಲು ಮನಸ್ಸಿಲ್ಲ. ಅದರಿಂದ ಆತ 'ನಾನು ತಿಳಿಯಲಿಲ್ಲ' ಎನ್ನುವುದೂ ನಿಜವೆ. 'ಕೃಷ್ಣನ ದರ್ಶನ ಮಾತ್ರದಿಂದ ಜರಾಸಂಧನ ಪ್ರತಾಪ ಇಳಿದುಹೋಗುತ್ತದೆ' ಎನ್ನುವುದೂ ಆಕ್ಷೇಪವನ್ನು ಬಿಟ್ಟರೆ ನಿಜವೆ. ಸರ್ವಶಕ್ತನಾದ ಕೃಷ್ಣ ವೀರ್ಯಸಹಿತನಾಗಿ ಕಂಸನನ್ನು ಕೊಲ್ಲುವುದಿಲ್ಲ. ಅಂದರೆ ವೀರ್ಯಪ್ರಯೋಗ ಮಾಡುವುದಿಲ್ಲ. ಅದರಿಂದ ಕೃಷ್ಣ ವೀರ್ಯರಹಿತನೆಂದರೂ ಸರಿಯೆ.

ಜನಾರ್ದನೀಯದಲ್ಲಿ 'ಸತ್ಯ' ಎಂದರೆ ಅರ್ಥಾಂಗೀಕಾರವೆಂದಿಟ್ಟುಕೊಂಡು, ಜರಾಸಂಧ ಹೇಳಿದ್ದರಲ್ಲಿ ಪೂರ್ಣಸತ್ಯವಿಲ್ಲ. ಕೃಷ್ಣನ ದರ್ಶನ ಮಾತ್ರದಿಂದ ಜರಾಸಂಧ ತನ್ನ ಪ್ರತಾಪವನ್ನು ಕಳೆದುಕೊಳ್ಳುತ್ತಾನೆ ಎಂಬ ಅಂಶ ಅಂಗೀಕಾರಾರ್ಹ. ತಪಸ್ಸಿಗೆ ಕಾಡಿಗೆ ಹೋಗುತ್ತಾನೆ ಎಂಬ ಅಂಶ ಅಂಗೀಕಾರಾರ್ಹವಲ್ಲ ಎಂದು ವಿವರಣೆ ಇದೆ.[1]

ದ್ವಾರೇಷು ಸಾತ್ಯಕಿಪುರಸ್ಸರಮಾತ್ತಸೈನ್ಯಂ
ತ್ರಿಷ್ವಭ್ಯುದೀರ್ಯ ಭಗವಾನ್ ಸ್ವಯಮುತ್ತರೇಣ।
ರಾಮದ್ವಿತೀಯ ಉದಗಾನ್ಮಗಧಾಧಿರಾಜಂ
ಯೋದ್ಧುಂ ನೃಪೇಂದ್ರಕಟಕೇನ ಯುತಂ ಪರೇಶಃ ॥ ೨೦ ॥

ಪರಮೇಶ್ವರನಾದ ಭಗವಾನ್ ಶ್ರೀಕೃಷ್ಣ ಸಾತ್ಯಕಿಯ ನಾಯಕತ್ವದ ತನ್ನ ಸೈನ್ಯವನ್ನು ನಗರದ ಮೂರು ದ್ವಾರಗಳಲ್ಲಿ ನೇಮಿಸಿ ಉತ್ತರದ್ವಾರದಿಂದ ದೊಡ್ಡ ರಾಜರ ಸಮೂಹದಿಂದ ಕೂಡಿದ್ದ ಜರಾಸಂಧನೊಡನೆ ಯುದ್ಧ ಮಾಡಲು ತಾನೇ ಬಲರಾಮನೊಂದಿಗೆ ಹೊರಟ.

ತಸ್ಯೇಚ್ಛಯೈವ ಪೃಥಿವೀಮವತೇರುರಾಶು
ತಸ್ಯಾಯುಧಾನಿ ಸಬಲಸ್ಯ ಸುಭಾಸ್ವರಾಣಿ।
ಶಾರ್ಙ್ಗಾಸಿಚಕ್ರದರತೂಣಗದಾಃ ಸ್ವಕೀಯಾ
ಜಗ್ರಾಹ ದಾರುಕಗೃಹೀತರಥೇ ಸ್ಥಿತಃ ಸಃ ॥ ೨೧ ॥

ಇಚ್ಛಾಮಾತ್ರದಿಂದ ಕೃಷ್ಣನಿಗೂ ಬಲರಾಮನಿಗೂ ಪ್ರಕಾಶಮಾನವಾದ ಆಯುಧಗಳು ಬೇಗನೆ ಭೂಮಿಗೆ ಇಳಿದು ಬಂದವು. ದಾರುಕನ ಸಾರಥ್ಯದ ರಥದಲ್ಲಿ ಕುಳಿತು ಕೃಷ್ಣ ತನ್ನ ಬಿಲ್ಲು, ಖಡ್ಗ, ಚಕ್ರ, ಶಂಕ, ಬತ್ತಳಿಕೆ, ಗದೆಗಳನ್ನು ಕೈಗೆ ಎತ್ತಿಕೊಂಡ.

ಆರುಹ್ಯ ಭೂಮಯರಥಂ ಪ್ರತಿಯುಕ್ತಮಶ್ವೈ-
ರ್ವೇದಾತ್ಮಕೈರ್ಧನುರಧಿಜ್ಯಮಥ ಪ್ರಗೃಹ್ಯ।
ಶಾರ್ಙ್ಗಂ ಶರಾಂಶ್ಚ ನಿಶಿತಾನ್ಮಗಧಾಧಿರಾಜ
ಮುಗ್ರಂ ನೃಪೇಂದ್ರಸಹಿತಂ ಪ್ರಯಯೌ ಜವೇನ ॥ ೨೨ ॥

ಶ್ರೀಕೃಷ್ಣ ವೇದಾತ್ಮಕ ಅಶ್ವಗಳನ್ನು ಕಟ್ಟಿದ್ದ ಭೂಮಿಮಯ ರಥವನ್ನೇರಿ ಹೆದೆ ಏರಿಸಿದ ಶಾರ್ಙ್ಗಧನುಸ್ಸನ್ನೂ ತೀಕ್ಷ್ಣ ಬಾಣಗಳನ್ನೂ ಧರಿಸಿ ವೇಗದಿಂದ ಶ್ರೇಷ್ಠರಾಜರಿಂದೊಡ ಗೂಡಿದ ಕ್ರೂರ ಜರಾಸಂಧನ ಮೇಲೆ ಏರಿಹೋದ.

---

1. ತತ್ ಜರಾಸಂಧೋಕ್ತಂ ವಿಗತಪ್ರತಾಪ ಇತ್ಯುಕ್ತಂ ಸ್ಯಾದೇವ। ತಪೋವನಂ ಯಾಸ್ಯ ಇತ್ಯುಕ್ತಂ ನ ಸ್ಯಾದಿತ್ಯಭಿಪ್ರಾಯೇಣ ಸತ್ಯಮಿತ್ಯರ್ಥಾಂಗೀಕಾರಪ್ರಯೋಗಃ। ಜನಾರ್ದನೀಯ

ರಾಮಃ ಪ್ರಗೃಹ್ಯ ಮುಸಲಂ ಸಹಲಂ ಚ ಯಾನ
ಮಾಸ್ಥಾಯ ಸಾಯಕಶರಾಸನತೂಣಯುಕ್ತಃ।
ಸೈನ್ಯಂ ಜರಾಸುತಸುರಕ್ಷಿತಮಭ್ಯಧಾವ-
ದ್ದರ್ಪಾನ್ನದನ್ನುರುಬಲೋಽರಿಬಲೈರಧೃಷ್ಯಃ ॥ ೨೩ ॥

ಮಹಾಬಲಿಷ್ಠ ಶತ್ರು ಸೈನ್ಯಕ್ಕೆ ಮಣಿಯದವ ಬಲರಾಮ. ಅವನು ರಥವನ್ನೇರಿ ಹಲ ಮುಸಲ, ಬಾಣ, ಬಿಲ್ಲು, ಬತ್ತಳಿಕೆಗಳನ್ನು ಧರಿಸಿ ಉತ್ಸಾಹದಿಂದ ಸಿಂಹನಾದ ಮಾಡುತ್ತ ಉತ್ತಮ ರಕ್ಷಣೆಯಲ್ಲಿದ್ದ ಜರಾಸಂಧನ ಸೈನ್ಯದ ಮೇಲೆ ಏರಿಹೋದ.

ಉದ್ವೀಕ್ಷ್ಯ ಕೃಷ್ಣಮಭಿಯಾಂತಮನಂತಶಕ್ತಿಂ
ರಾಜೇಂದ್ರಬೃಂದಸಹಿತೋ ಮಗಧಾಧಿರಾಜಃ।
ಉದ್ವೇಲಸಾಗರವದಾಶ್ವಭಿಯಾಯ ಕೋಪಾ-
ನ್ನಾನಾವಿಧಾಯುಧವರೈರಭಿವರ್ಷಮಾಣಃ ॥ ೨೪ ॥

ದೊಡ್ಡ ರಾಜರುಗಳ ಸಮೂಹದಿಂದ ಕೂಡಿದ ಜರಾಸಂಧ ಅನಂತಶಕ್ತಿಯುಳ್ಳ ಕೃಷ್ಣ ಇದಿರಾದುದನ್ನು ಕಂಡು ಕೋಪದಿಂದ ಎಲ್ಲೆ ಮೀರಿದ ಸಾಗರದಂತೆ ಸುತ್ತುವರಿದು ನಾನಾವಿಧ ಶ್ರೇಷ್ಠ ಆಯುಧಗಳ ಮಳೆಗರೆದ.

ತಂ ವೈ ಚುಕೋಪಯಿಷುರಗ್ರತ ಉಗ್ರಸೇನಂ
ಕೃಷ್ಣೋ ನಿಧಾಯ ಸಮಗಾತ್ ಸ್ವಯಮಸ್ಯ ಪಶ್ಚಾತ್।
ದೃಷ್ಟ್ವಾಗ್ರತೋ ಮಗಧರಾಟ್ ಸ್ಥಿತಮುಗ್ರಸೇನಂ
ಕೋಪಾಚ್ಚಲತ್ತನುರಿದಂ ವಚನಂ ಬಭಾಷೇ ॥ ೨೫ ॥

ಜರಾಸಂಧನನ್ನು ಕೋಪಗೊಳಿಸಲು ಬಯಸಿದ ಕೃಷ್ಣ ಉಗ್ರಸೇನನನ್ನು ಮುಂದೆ ಮಾಡಿಕೊಂಡು ತಾನು ಹಿಂದಿನಿಂದ ಬಂದ. ಜರಾಸಂಧ ತನ್ನೆದುರಿನಲ್ಲಿ ಉಗ್ರಸೇನನನ್ನು ಕಂಡು ಕೋಪದಿಂದ ಮೈಯಲ್ಲಿ ನಡುಗುತ್ತ ಈ ಮಾತನ್ನು ನುಡಿದ.

ಪಾಪಾಪಯಾಹಿ ಪುರತೋ ಮಮ ರಾಜ್ಯಕಾಮ
ನಿರ್ಲಜ್ಜಪುತ್ರವಧಕಾರಣ ಶತ್ರುಪಕ್ಷ।
ತ್ವಂ ಜೀರ್ಣಬಸ್ತಸದೃಶೋ ನ ಮಯೇಹ ವಧ್ಯಃ
ಸಿಂಹೋ ಹಿ ಸಿಂಹಮಭಿಯಾತಿ ನ ವೈ ಸೃಗಾಲಮ್ ॥ ೨೬ ॥

'ಛೀ, ಪಾಪಿ! ನನ್ನೆದುರಿಂದ ತೊಲಗು. ಮಗನ ಹತ್ಯೆ ಮಾಡಿಸಿ ರಾಜ್ಯವಾಳಲು ಬಯಸಿದವ. ಲಜ್ಜೆ ಇಲ್ಲದವ. ಶತ್ರುಪಕ್ಷದಲ್ಲಿರುವವ. ಮುದಿ ಆಡಿನಂತಿರುವ ನಿನ್ನನ್ನು ನಾನು ಯುದ್ಧದಲ್ಲಿ ಕೊಲ್ಲುವುದು ಸರಿಯಲ್ಲ. ಸಿಂಹ ಸಿಂಹದ ಮೇಲೇರಿ ಹೋಗುತ್ತದೆ, ನರಿಯ ಮೇಲಲ್ಲ.

ಆಕ್ಷಿಪ್ತ ಇತ್ಥಮಮುನಾऽಥ ಸ ಭೋಜರಾಜ
ಸೂತ್ಕಾತ್ ಪ್ರಗೃಹ್ಯ ನಿಶಿತಂ ಶರಮಾಶು ತೇನ।
ಛಿತ್ವಾ ಜರಾಸುತಧನುರ್ಬಲವಾನ್ ನನಾದ
ವಿವ್ಯಾಧ ಸಾಯಕಗಣೈಶ್ಚ ಪುನಸ್ತಮುಗ್ರೈಃ ॥ ೨೭ ॥

ಜರಾಸಂಧ ಹೀಗೆ ಆಕ್ಷೇಪಿಸಿದಾಗ ಬಲಿಷ್ಠನಾದ ಉಗ್ರಸೇನ ಬತ್ತಳಿಕೆಯಿಂದ ತೀಕ್ಷ್ಣವಾದ ಬಾಣವನ್ನು ತೆಗೆದು ಅದರಿಂದ ಬೇಗನೆ ಜರಾಸಂಧನ ಬಿಲ್ಲನ್ನು ಕಡಿದು ಸಿಂಹನಾದ ಮಾಡಿದ. ಭಯಂಕರ ಬಾಣಸಮೂಹಗಳಿಂದ ಅವನನ್ನು ಪುನಃ ಹೊಡೆದ.

ಅನ್ಯಚ್ಚರಾಸನವರಂ ಪ್ರತಿಗೃಹ್ಯ ಕೋಪಾತ್
ಸಂರಕ್ತನೇತ್ರಮಭಿಯಾತಮುದೀಕ್ಷ್ಯ ಕೃಷ್ಣಃ।
ಭೋಜಾಧಿರಾಜವಧಕಾಂಕ್ಷಿಣಮುಗ್ರವೇಗಂ
ಬಾರ್ಹದ್ರಥಂ ಪ್ರತಿ ಯಯೌ ಪರಮೋ ರಥೇನ ॥ ೨೮ ॥

ಉಗ್ರವೇಗಿ ಜರಾಸಂಧ ಉಗ್ರಸೇನನ ವಧಾಕಾಂಕ್ಷಿಯಾಗಿ ಕೋಪದಿಂದ ಕಣ್ಣು ಕೆಂಪಗೆ ಮಾಡಿ ಬೇರೆ ಬಿಲ್ಲನ್ನೆತ್ತಿಕೊಂಡು ಬಂದುದನ್ನು ನೋಡಿ ಸರ್ವೋತ್ತಮನಾದ ಕೃಷ್ಣ ಅವನ ಇದಿರಿಗೆ ರಥದಿಂದ ಬಂದ.

ಆಯಾಂತಮೀಕ್ಷ್ಯ ಭಗವಂತಮನಂತವೀರ್ಯಂ
ಚೈದ್ಯೇಶಪೌಂಡ್ರಮುಖರಾಜಗಣೈಃ ಸಮೇತಃ।
ನಾನಾವಿಧಾಸ್ತ್ರವರಶಸ್ತ್ರಗಣೈರ್ವವರ್ಷ
ಮೇರುಂ ಯಥಾ ಘನ ಉದೀರ್ಣರವೋ ಜಲೌಘೈಃ ॥ ೨೯ ॥

ಅನಂತಶಕ್ತಿ ಉಳ್ಳ ಭಗವಂತ ಬರುವುದನ್ನು ನೋಡಿ ಶಿಶುಪಾಲ ,ಪೌಂಡ್ರಕ ಮುಂತಾದ ರಾಜರ ಸಮೂಹಗಳಿಂದ ಕೂಡಿದ ಜರಾಸಂಧ ನಾನಾ ವಿಧ ಮಹಾ ಅಸ್ತ್ರಶಸ್ತ್ರಗಳನ್ನು ಮಳೆಗರೆದ. ಇದು ಮೋಡ ದೊಡ್ಡ ಧ್ವನಿ ಮಾಡುತ್ತ ಮೇರುಪರ್ವತದ ಮೇಲೆ ಜಲಧಾರೆಗಳನ್ನು ಸುರಿಸಿದಂತಾಯಿತು.

ಶಸ್ತ್ರಾಸ್ತ್ರವೃಷ್ಟಿಮಭಿತೋ ಭಗವಾನ್ ವಿವೃಶ್ಚ್ಯ
ಶಾರ್ಙ್ಗೋತ್ಥಸಾಯಕಗಣೈರ್ವಿರಥಾಶ್ಚ ಸೂತಮ್।
ಚಕ್ರೇ ನಿರಾಯುಧಮಸೌ ಮಗಧೇಂದ್ರಮಾಶು
ಛಿನ್ನಾತಪತ್ರವರಕೇತುಮಚಿಂತ್ಯಶಕ್ತಿಃ ॥ ೩೦ ॥

ಅಚಿಂತ್ಯಶಕ್ತಿಉಳ್ಳ ಭಗವಂತ ಆ ಶಸ್ತ್ರಾಸ್ತ್ರಗಳ ಮಳೆಯನ್ನು ಶಾರ್ಙ್ಗದಿಂದ ಹೊರಡುವ ಬಾಣ ಸಮೂಹಗಳಿಂದ ಎಲ್ಲೆಡೆ ಛೇದಿಸಿ ತಕ್ಷಣವೇ ಜರಾಸಂಧನನ್ನು ರಥ, ಕುದುರೆ

ಸಾರಥಿಗಳಿಂದಲೂ ಆಯುಧಗಳಿಂದಲೂ ರಹಿತನನ್ನಾಗಿ ಮಾಡಿದ. ಅವನ ಛತ್ರ ಧ್ವಜಗಳನ್ನೂ ಕತ್ತರಿಸಿದ.

ನೈನಂ ಜಘಾನ ಭಗವಾನ್ ಸುಶಕಂ ಚ ಭೀಮೇ
ಭಕ್ತಿಂ ನಿಜಾಂ ಪ್ರಥಯಿತುಂ ಯಶ ಉಚ್ಚಧರ್ಮಮ್ ।
ಚೇದೀಶಪೌಂಡ್ರಕಸಕೀಚಕಮದ್ರರಾಜ
ಸಾಲ್ವೈಕಲವ್ಯಕಮುಖಾನ್ ವಿರಥಾಂಶ್ಚಕಾರ ॥ ೩೧ ॥

ಭಗವಂತ ಭೀಮಸೇನನಿಗೆ ತನ್ನಲ್ಲಿರುವ ಭಕ್ತಿಯನ್ನೂ ಯಶಸ್ಸನ್ನೂ ಉನ್ನತ ಧರ್ಮವನ್ನೂ ಪ್ರಸಿದ್ಧಿಗೊಳಿಸುವುದಕ್ಕಾಗಿಯೇ ಜರಾಸಂಧನನ್ನು ಕೊಲ್ಲುವುದು ಬಲು ಸುಲಭವಾಗಿದ್ದರೂ ಕೊಲ್ಲಲಿಲ್ಲ. ಶಿಶುಪಾಲ, ಪೌಂಡ್ರಕ, ಕೀಚಕ, ಶಲ್ಯ, ಸಾಲ್ವ, ಏಕಲವ್ಯ ಮುಂತಾದವರನ್ನು ವಿರಥರನ್ನಾಗಿಸಿದ.

ಯೇ ಚಾಪಿ ಹಂಸಡಿಭಕದ್ರುಮರುಕ್ಮಿಮುಖ್ಯಾಃ
ಬಾಹ್ಲೀಕಭೌಮಸುತಮೈಂದಪುರಸ್ಸರಾಶ್ಚ।
ಸರ್ವೇ ಪ್ರದುದ್ರುವುರಜಸ್ಯ ಶರೈರ್ವಿಭಿನ್ನಾ
ಅನ್ಯೇ ಚ ಭೂಮಿಪತಯೋ ಯ ಇಹಾಕ್ಕಸುರುವ್ಯಾಮ್ ॥ ೩೨ ॥

ಹಂಸ, ಡಿಭಿಕ, ದ್ರುಮ, ರುಕ್ಮಿ ಮುಂತಾದವರೂ ಬಾಹ್ಲೀಕ, ಭಗದತ್ತ ಮೈಂದ ಮುಂತಾದವರೂ ಭೂಮಿಯಲ್ಲಿದ್ದ ಬೇರೆ ರಾಜರೂ ಎಲ್ಲರೂ ಕೃಷ್ಣನ ಬಾಣಗಳ ಏಟು ತಿಂದು ಪಲಾಯನ ಮಾಡಿದರು.

ಛಿನ್ನಾಯುಧಧ್ವಜಪತಾಕರಥಾಶ್ವಸೂತ
ವರ್ಮಾಣ ಉಗ್ರಶರತಾಡಿತಭಿನ್ನಗಾತ್ರಾಃ।
ಸ್ರಸ್ತಾಂಬರಾಭರಣಮೂರ್ಧಜಮಾಲ್ಯಹೀನಾ
ರಕ್ತಂ ವಮಂತ ಉರು ದುದ್ರುವುರಾಶು ಭೀತಾಃ ॥ ೩೩ ॥

ರಾಜರುಗಳ ಆಯುಧ, ಧ್ವಜಪತಾಕೆಗಳು, ರಥ, ಕುದುರೆ, ಸಾರಥಿಗಳು, ಕವಚಗಳು ಕಡಿದುಬಿದ್ದುವು. ಶರೀರ ಭಯಂಕರ ಬಾಣಗಳ ಏಟಿಗೆ ಗಾಯಗೊಂಡಿತು. ವಸ್ತ್ರಾಭರಣಗಳು ಕಳಚಿದುವು. ಕೂದಲು ಬಿಚ್ಚಿದುವು. ಮಾಲೆಗಳು ಬಿದ್ದುವು. ಬಹಳ ರಕ್ತ ಕಾರುತ್ತಾ ಭೀತರಾಗಿ ಬೇಗನೆ ಓಡಿದರು.

ಶೋಚ್ಯಾಂ ದಶಾಮುಪಗತೇಷು ನೃಪೇಶು ಸರ್ವೇ-
ಷ್ವಸ್ತ್ರಾಯುಧೇಷು ಹರಿಣಾ ಯುಧಿ ವಿದ್ರವತ್ಸು।

ನಾನಾಯುಧಾಢ್ಯಮಪರಂ ರಥಮುಗ್ರವೀರ್ಯ
ಆಸ್ಥಾಯ ಮಾಗಧಪತಿಃ ಪ್ರಸಸಾರ ರಾಮಮ್ ॥ ೩೪ ॥

ಎಲ್ಲ ರಾಜರೂ ಯುದ್ಧದಲ್ಲಿ ಕೃಷ್ಣನಿಂದ ನಿರಾಯುಧರಾಗಿ ಶೋಚನೀಯ ಸ್ಥಿತಿ ಹೊಂದಿ ಓಡಿಹೋದಾಗ, ಮಹಾಶಕ್ತಿಶಾಲಿಯಾದ ಜರಾಸಂಧ ನಾನಾ ಆಯುಧಗಳಿಂದ ತುಂಬಿದ ಇನ್ನೊಂದು ರಥವನ್ನೇರಿ ಬಲರಾಮನ ಕಡೆಗೆ ಧಾವಿಸಿದ.

ಆಧಾವತೋಽಸ್ಯ ಮುಸಲೇನ ರಥಂ ಬಭಂಜ
ರಾಮೋ ಗದಾಮುರುತರೋರಸಿ ಸೋಽಪಿ ತಸ್ಯ।
ಚಿಕ್ಷೇಪ ತಂ ಚ ಮುಸಲೇನ ತತಾಡ ರಾಮ
ಸ್ತಾವುತ್ತಮೌ ಬಲವತಾಂ ಯುಯುಧಾತ ಉಗ್ರಮ್ ॥ ೩೫ ॥

ಬಲರಾಮ ತನ್ನಕಡೆಗೆ ಧಾವಿಸಿ ಬರುತ್ತಿದ್ದ ಜರಾಸಂಧನ ರಥವನ್ನು ಮುಸಲದಿಂದ ಮುರಿದ. ಜರಾಸಂಧ ರಾಮನ ಅತಿವಿಶಾಲವಾದ ಎದೆಯ ಮೇಲೆ ಗದೆಯನ್ನೆಸೆದ. ಅವನನ್ನು ರಾಮ ಮುಸಲದಿಂದ ಹೊಡೆದ. ಬಲಿಷ್ಠರಲ್ಲಿ ಉತ್ತಮರಾದ ಅವರಿಬ್ಬರೂ ಘೋರವಾಗಿ ಯುದ್ಧಮಾಡಿದರು.

ತೌ ಚಕ್ರತುಃ ಪುರು ನಿಯುದ್ಧಮಪಿ ಸ್ಮ ತತ್ರ
ಸಂಚೂರ್ಣ್ಯ ಸರ್ವಗಿರಿವೃಕ್ಷಶಿಲಾಸಮೂಹಾನ್।
ದೀರ್ಘಂ ನಿಯುದ್ಧಮಭವತ್ ಸಮವೇತಯೋಸ್ತು
ವಜ್ರಾದ್ ದೃಢಾಙ್ಗತಮಯೋರ್ಬಲಿನೋರ್ನಿತಾಂತಂ ॥ ೩೬ ॥

ಅವರಿಬ್ಬರೂ ಅಲ್ಲಿ ಸಮೀಪದ ಎಲ್ಲ ಬೆಟ್ಟ ಮರ ಕಲ್ಲುಗಳ ಸಮೂಹಗಳನ್ನು ಪುಡಿ ಮಾಡುತ್ತ ದೊಡ್ಡ ಮುಷ್ಟಿ ಯುದ್ಧ ಮಾಡಿದರು. ವಜ್ರಕ್ಕಿಂತ ಅತಿ ಕಠಿನವಾದ ಮೈಯವರೂ ಬಹಳ ಬಲಿಷ್ಠರೂ ಆದ ಇವರಿಬ್ಬರ ದೀರ್ಘವಾದ ಮುಷ್ಟಿ ಯುದ್ಧ ಸಮವಾಗಿತ್ತು.

ಶ್ರುತ್ವಾಥ ಶಂಖಿರವಮಂಬುಜಲೋಚನಸ್ಯ
ವಿದ್ರಾವಿತಾನಪಿ ನೃಪಾನಭಿವೀಕ್ಷ್ಯ ರಾಮಃ।
ಯುದ್ಧ್ಯಂತಮೀಕ್ಷ್ಯ ಚ ರಿಪುಂ ವವೃಧೇ ಬಲೇನ
ತ್ಯಕ್ತ್ವಾ ರಿಪುಂ ಮುಸಲಮಾದದ ಅಶ್ವಮೋಘಮ್ ॥ ೩೭ ॥

ಬಳಿಕ ರಾಮ ಶ್ರೀಕೃಷ್ಣನ ಶಂಖನಾದವನ್ನು ಕೇಳಿ, ರಾಜರುಗಳು ಓಡಿದ್ದನ್ನೂ ನೋಡಿ, ಇನ್ನೂ ಜರಾಸಂಧ ಹೋರಾಡುವುದನ್ನು ಕಂಡು ಬಲದಿಂದ ತುಂಬಿಕೊಂಡ. ಶತ್ರುವನ್ನು ಬಿಟ್ಟು ಬೇಗನೆ ಅಮೋಘವಾದ ಮುಸಲವನ್ನು ಎತ್ತಿಕೊಂಡ.

ತೇನಾಹತಃ ಶಿರಸಿ ಸಮ್ಮುಮಹೇಽತಿವೇಲಂ
ಬಾರ್ಹದ್ರಥೋ ಜಗೃಹ ಏನಮಥೋ ಹಲೀ ಸಃ।
ತತ್ಕೈಕಲವ್ಯ ಉತ ಕೃಷ್ಣಶರೈಃ ಪಲಾಯ-
ನ್ನಸ್ತ್ರೈಃ ರಾಮಶಿರಸಿ ಪ್ರಮುಮೋಚ ಶೀಘ್ರಮ್ ॥ ೩೮ ॥

ಬಲರಾಮ ಮುಸಲದಿಂದ ತಲೆಗೆ ಹೊಡೆದಾಗ ಜರಾಸಂಧ ಬಹಳ ಮೂರ್ಛೆಗೊಂಡ. ಅವನನ್ನು ರಾಮ ಸೆರೆ ಹಿಡಿದ. ಅಷ್ಟರಲ್ಲಿ ಕೃಷ್ಣನ ಬಾಣಗಳಿಂದ ಪಲಾಯನಗೈಯುತ್ತಿದ್ದ ಏಕಲವ್ಯ ಬೇಗನೆ ರಾಮನ ತಲೆಗೆ ಅಸ್ತ್ರಗಳನ್ನು ಎಸೆದ.

ಪ್ರದ್ಯುಮ್ನ ಏಕಲವ್ಯರ ಜನನ

ಭೀತೇನ ತೇನ ಸಮರಂ ಭಗವಾನನಿಚ್ಛನ್
ಪ್ರದ್ಯುಮ್ನಮಾಶ್ವಸೃಜದಾತ್ಮಸುತಂ ಮನೋಜಂ।
ಪ್ರದ್ಯುಮ್ನ ಏನಮಭಿಯಾಯ ಮಹಾಸ್ತ್ರಜಾಲೈಃ
ರಾಮಸ್ತು ಮಾಗಧಮಥಾತ್ಮರಥಂ ನಿನಾಯ ॥ ೩೯ ॥

ಶ್ರೀಕೃಷ್ಣ ಭೀತನಾದ ಏಕಲವ್ಯನೊಡನೆ ಯುದ್ಧ ಮಾಡಲೊಲ್ಲದೆ ತನ್ನ ಮಗನಾದ ಮನ್ಮಥನನ್ನು ಪ್ರದ್ಯುಮ್ನನನ್ನಾಗಿ ತತ್ಕಾಲದಲ್ಲಿ ಹುಟ್ಟಿಸಿದ. ಪ್ರದ್ಯುಮ್ನ ಏಕಲವ್ಯನನ್ನು ಮಹಾಸ್ತ್ರ ಸಮೂಹಗಳಿಂದ ಬೆನ್ನಟ್ಟಿದ. ರಾಮ ಜರಾಸಂಧನ ಕಡೆಗೆ ತನ್ನ ರಥವನ್ನು ನಡೆಸಿದ.

ಯುಧ್ವಾ ಚಿರಂ ರಣಮುಖೇ ಭಗವತ್ತುತೋಽಸೌ
ಚಕ್ರೇ ನಿರಾಯುಧಮಮುಂ ಸ್ಥಿರಮೇಕಲವ್ಯಮ್।
ಅಂಶೇನ ಯೋ ಭುವಮಗಾನ್ಮಣಿಮಾನಿತಿ ಸ್ಮ
ಸ ಕ್ರೋಧತಂತ್ರಕಗಣೇಷ್ವಧಿಪೋ ನಿಷಾದಃ ॥ ೪೦ ॥

ಯುದ್ಧದಲ್ಲಿ ಸ್ಥಿರವಾಗಿ ನಿಂತ ಏಕಲವ್ಯನೊಡನೆ ಪ್ರದ್ಯುಮ್ನ ದೀರ್ಘಕಾಲ ಹೋರಾಡಿ ನಿರಾಯುಧನನ್ನಾಗಿ ಮಾಡಿದ. ಈ ಏಕಲವ್ಯ ಹಿಂದೆ ಕ್ರೋಧವಶರೆಂಬ ರಾಕ್ಷಸಗಣಗಳ ಅಧಿಪತಿಯಾಗಿದ್ದು ಮಣಿಮಂತನೆಂದು ಪ್ರಸಿದ್ಧನಾದವ. ಒಂದು ಅಂಶದಿಂದ ಭೂಮಿಯಲ್ಲಿ ಹುಟ್ಟಿದ, ಬೇಡನಾದ.

ಏಕಲವ್ಯ ಬೇಡನಾಗಿ ಹುಟ್ಟಲಿಲ್ಲ. ಹುಟ್ಟಿ ಬೇಡನಾದ. ಕರ್ಣನಂತೆ ಏಕಲವ್ಯನೂ ಹುಟ್ಟಿನಿಂದ ಕ್ಷತ್ರಿಯ. ಕೃಷ್ಣನ ತಮ್ಮನೆ ಆಗಬೇಕು. ಏಕೆಂದರೆ ವಸುದೇವನ ತಮ್ಮನಾದ ದೇವಶ್ರವನ ಮಗನಾಗಿ ಶತ್ರುಘ್ನ ಎಂಬ ಹೆಸರಿನಿಂದ ಹುಟ್ಟಿ ಯಾವುದೋ ಕಾರಣದಿಂದ ಪರಿತ್ಯಕ್ತನಾಗಿದ್ದ ಈತ ಹಿರಣ್ಯಧನು ಎಂಬ ಬೇಡನ ಸಾಕುಮಗನಾಗಿ ಬೆಳೆದು ಲೋಕದ ಕಣ್ಣಿಗೆ

ಬೇಡನೆನಿಸಿದ ಎಂದು ಹರಿವಂಶ ಹೇಳುತ್ತಿದೆ-

ನಿವೃತ್ತಶತ್ರುಂ ಶತ್ರುಘ್ನಂ ದೇವಶ್ರವಾ ವ್ಯಜಾಯತ।
ದೇವಶ್ರವಃ ಪ್ರಜಾತಸ್ತು ನೈಷಾದಿರ್ಯಃ ಪ್ರತಿಶ್ರುತಃ॥
ಏಕಲವ್ಯೋ ಮಹಾರಾಜ ನಿಷಾದ್ಯೈಃ ಪರಿವರ್ಧಿತಃ॥ (1-34-32)

ಪ್ರದ್ಯುಮ್ನಮಾತ್ಮನಿ ನಿಧಾಯ ಪುನಃ ಸ ಕೃಷ್ಣಃ
ಸಂಹೃತ್ಯ ಮಾಗಧಬಲಂ ನಿಖಿಲಂ ಶರೌಘೈಃ।
ಭೂಯಶ್ಚಮೂಮಭಿನೇತುಮುದಾರಕರ್ಮಾ
ಬಾರ್ಹದ್ರಥಂ ತ್ವಮುಚದಕ್ಷಯಪೌರುಷೋಽಜಃ ॥೪೧॥

ಅಕ್ಷಯ ಪೌರುಷಶಾಲಿ, ಜನನರಹಿತ ಮತ್ತು ಉತ್ತಮಕರ್ಮ ಉಳ್ಳವನಾದ ಶ್ರೀಕೃಷ್ಣ ಪ್ರದ್ಯುಮ್ನನನ್ನು ಪುನಃ ತನ್ನೊಳಗೆ ಸೇರಿಸಿಕೊಂಡು ಜರಾಸಂಧನ ಸೈನ್ಯವನ್ನೆಲ್ಲ ಬಾಣಸಮೂಹಗಳಿಂದ ಸಂಹರಿಸಿ ಅವನು ಇನ್ನೂ ಸೈನ್ಯ ತರಲಿ ಎಂದು ಬಿಟ್ಟುಬಿಟ್ಟ

ವ್ರೀಡಾನತಾಚ್ಛವಿಮುಖಃ ಸಹಿತೋ ನೃಪೈಸ್ತೈ
ರ್ಬಾರ್ಹದ್ರಥಃ ಪ್ರತಿಯಯೌ ಸ್ವಪುರೀಂ ಸ ಪಾಪಃ।
ಆತ್ಮಾಭಿಷಿಕ್ತಮಪಿ ಭೋಜವರಾಧಿಪತ್ಯೇ
ದೌಹಿತ್ರಮಗ್ರತ ಉತ ಪ್ರಣಿಧಾಯ ಮಂದಃ ॥೪೨॥

ಬುದ್ಧಿಶೂನ್ಯ ಪಾಪಿ ಜರಾಸಂಧ ಭೋಜಶ್ರೇಷ್ಠರ ಆಧಿಪತ್ಯದಲ್ಲಿ ತಾನು ಅಭಿಷೇಕ ಮಾಡಿದ್ದ ತನ್ನ ಮಗಳ ಮಗನನ್ನು ಪುನಃ ಮುಂದೆ ಮಾಡಿಕೊಂಡು ನಾಚಿಕೆಯಿಂದ ತಗ್ಗಿದ ಕಳೆಗುಂದಿದ ಮುಖ ಉಳ್ಳವನಾಗಿ ರಾಜರುಗಳೊಡಗೂಡಿ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಯದುವಂಶದಲ್ಲಿ ಪ್ರಖ್ಯಾತನಾದ ಸಾತ್ವತನ ಏಳನೇ ಮಗ ಮಹಾಭೋಜರಾಜನಿಂದ ಭೋಜವಂಶ ಪ್ರಾರಂಭವಾಯಿತು. ಈ ವಂಶದವರಿಗೆ ಉಗ್ರಸೇನ ರಾಜನಾಗಿದ್ದ. ಉಗ್ರಸೇನನನ್ನು ಕಂಸ ಕಾರಾಗೃಹಕ್ಕೆ ತಳ್ಳಿ ತಾನು ರಾಜನಾದ. ಕೃಷ್ಣ ಕಂಸನನ್ನು ಕೊಂದು ತಿರುಗಿ ಉಗ್ರಸೇನನನ್ನು ಸಿಂಹಾಸನದಲ್ಲಿ ಕೂಡಿಸಿದ. ಇದನ್ನು ಕೇಳಿ ಜರಾಸಂಧ ಅಹಂಕಾರದಿಂದ ತನ್ನ ಮಗಳಲ್ಲಿ ಕಂಸನಿಂದ ಹುಟ್ಟಿದ ಮಗುವನ್ನು ಭೋಜರ ದೊರೆಯೆಂದು ಸಾರಿ ಅಭಿಷೇಕವನ್ನು ನಡೆಸಿದ. ಆ ಮಗುವನ್ನು ಮುಂದಿಟ್ಟುಕೊಂಡೇ ಮಥುರೆಯ ಮೇಲೆ ಆಕ್ರಮಣ ಮಾಡಿದ. ಅದಕ್ಕೇ ಕೃಷ್ಣನೂ ತಾನು ಭೋಜರ ಸಿಂಹಾಸನದಲ್ಲಿ ಕೂಡಿಸಿದ ಉಗ್ರಸೇನನನ್ನೇ ಮುಂದಿಟ್ಟುಕೊಂಡು ಜರಾಸಂಧನೊಡನೆ ಹೋರಾಡಿ ಪರಾಭವ

ಗೊಳಿಸಿದ. ಇದರಿಂದ ಜರಾಸಂಧನಿಗೆ ಬಹಳ ಅವಮಾನವಾಯಿತು. ಲಜ್ಜೆಯಿಂದ ಅವನ ಮುಖ ಕಳೆಗುಂದಿತು. ಆದರೂ ಅಭಿಮಾನದಿಂದ ತಿರುಗಿ ಆ ಮಗುವನ್ನೇ ಮುಂದೆ ಮಾಡಿಕೊಂಡು ಪಲಾಯನ ಮಾಡಿದ ಬುದ್ಧಿಶೂನ್ಯನಾದ ಜರಾಸಂಧ.

ಜಿತ್ವಾ ತಮೂರ್ಜಿತಬಲಂ ಭಗವಾನಜೇಶ
ಶಕ್ರಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ।
ರಾಮಾದಿಭಿಃ ಸಹಿತ ಆಶು ಪುರೀಂ ಪ್ರವಿಶ್ಯ
ರೇಮೇಽಭಿವಂದಿತಪದೋ ಮಹತಾಂ ಸಮೂಹೈಃ ॥ ೪೩ ॥

ಭಗವಂತ ಉತ್ತಮ ಬಲಯುಕ್ತನಾದ ಜರಾಸಂಧನನ್ನು ಗೆದ್ದು ಬ್ರಹ್ಮ ರುದ್ರ ಇಂದ್ರಾದಿಗಳಿಂದ ಪುಷ್ಪ ವೃಷ್ಟಿ ಮಾಡಿಸಿಕೊಂಡ, ಹೊಗಳಿಸಿಕೊಂಡ. ಬಲರಾಮ ಮುಂತಾದವರಿಂದ ಕೂಡಿಕೊಂಡು ಬೇಗನೆ ಮಥುರೆಯನ್ನು ಪ್ರವೇಶಿಸಿ ಮಹಾ ಜನಸಮೂಹಗಳಿಂದ ಪಾದವಂದನೆ ಕೈಗೊಳ್ಳುತ್ತ ಆನಂದಿಸಿದ.

ಪಾಂಡುವಿನ ಮರಣ

ವರ್ಧತ್ಸು ಪಾಂಡುತನಯೇಷು ಚತುರ್ದಶಂ ತು
ಜನ್ಮರ್ಕ್ಷಮಾಸ ತನಯಸ್ಯ ಸಹಸ್ರದೃಷ್ಟೇಃ।
ಪ್ರತ್ಯಾಬ್ದಿಕಂ ಮುನಿಗಣಾನ್ ಪರಿವೇಷಯಂತೀ
ಕುಂತೀ ತದಾಸ ಬಹುಕಾರ್ಯಪರಾ ನಯಜ್ಞಾ ॥ ೪೪ ॥

ಇತ್ತ ಪಾಂಡವರು ಬೆಳೆಯುತ್ತಿದ್ದಾಗ ಅರ್ಜುನನಿಗೆ ಹದಿನಾಲ್ಕನೆ ವಾರ್ಷಿಕ ಜನ್ಮ ನಕ್ಷತ್ರದ ದಿನ ಬಂದಿತ್ತು. ಆಗ ನೀತಿಜ್ಞಳಾದ ಕುಂತಿ ಮುನಿ ಸಮೂಹಗಳಿಗೆ ಅನ್ನ ಬಡಿಸುತ್ತ ಬಹಳ ಕಾರ್ಯತತ್ಪರಳಾಗಿದ್ದಳು.

ತತ್ಕಾಲ ಏವ ನೃಪತಿಃ ಸಹ ಮಾದ್ರವತ್ಯಾ
ಪುಂಸ್ಕೋಕಿಲಾಕುಲಿತಪುಲ್ಲವನಂ ದದರ್ಶ।
ತಸ್ಮಿನ್ ವಸಂತಪವನಸ್ಪರ್ಶೇಧಿತಃ ಸ
ಕಂದರ್ಪಮಾರ್ಗಣವಶಂ ಸಹಸಾ ಜಗಾಮ ॥ ೪೫ ॥

ಅದೇ ಕಾಲದಲ್ಲಿ ಪಾಂಡುರಾಜ ಮಾದ್ರಿಯೊಂದಿಗೆ ಕೋಗಿಲೆಗಳಿಂದ ತುಂಬಿದ, ವಿಕಸಿತವಾದ ವನವನ್ನು ಕಂಡ. ಅಲ್ಲಿ ವಸಂತ ಮಾರುತಸ್ಪರ್ಶದಿಂದ ಉದ್ರಿಕ್ತನಾದ ಪಾಂಡು ಅಕಸ್ಮಾತ್ ಮನ್ಮಥನ ಬಾಣಕ್ಕೆ ವಶನಾದ.

ಅರ್ಜುನನ ಜನ್ಮನಕ್ಷತ್ರ ಫಾಲ್ಗುನ ಮಾಸದಲ್ಲಿ ಬರುತ್ತದೆ. ಅವನಿಗೆ ಫಲ್ಗುನ ಎಂದೇ ಇನ್ನೊಂದು ಹೆಸರಿದೆ. ಆದರೂ ಸೌರಮಾನರೀತ್ಯಾ ಫಾಲ್ಗುನದಲ್ಲಿಯೂ ವಸಂತ ಬರಬಹುದು ಎನ್ನುತ್ತದೆ ಜನಾರ್ದನೀಯ.[1]

ಜಗ್ರಾಹ ತಾಮಥ ತಯಾ ರಮಮಾಣ ಏವ
ಯಾತೋ ಯಮಸ್ಯ ಸದನಂ ಹರಿಪಾದಸಂಗೀ।
ಪೂರ್ವಂ ಶಚೀರಮಣಮಿಚ್ಛತ ಏಷ ವಿಘ್ನಂ
ಶಕ್ರಸ್ಯ ತದ್ದರ್ಶನೋಪಗತೋ ಹಿ ಚಕ್ರೇ ॥ ೪೬ ॥

ಪಾಂಡು ರತಿಕ್ರೀಡೆಗಾಗಿ ಮಾದ್ರಿಯನ್ನು ಹಿಡಿದುಕೊಂಡ. ಅವಳೊಡನೆ ರಮಿಸುತ್ತಿದ್ದಂತೆ ಹರಿಪಾದಾಸಕ್ತನಾದ ಆತ ಯಮಸದನವನ್ನು ಸೇರಿದ. ಹಿಂದೆ ಇಂದ್ರ ಶಚಿಯೊಡನೆ ರಮಿಸಲು ಬಯಸಿದ್ದಾಗ ಈತ ಅವನ ದರ್ಶನಕ್ಕಾಗಿ ಹೋಗಿ ವಿಘ್ನ ಮಾಡಿದ್ದ.

ಯಮಸದನವನ್ನು ಸೇರಿದನೆಂದರೆ ನರಕ ಹೊಂದಿದ ಎಂದು ಅರ್ಥವಲ್ಲ. ಪುಣ್ಯವಂತರಾದ ರಾಜರು ಯಮನ ಸಭಾಸದನದಲ್ಲಿ ವಿರಾಜಮಾನ ರಾಗುತ್ತಾರೆ. ಹಾಗೇ ಪಾಂಡುವೂ ಯಮನ ಸಭಾಸದನವನ್ನು ಸೇರಿದ. ಅವನು ರತಿಕ್ರೀಡೆಯಾಡುತ್ತ ಅಶುಚಿಯಾಗಿದ್ದಾಗ ಮರಣ ಹೊಂದಿದರೂ ಹರಿಪಾದಾಸಕ್ತನಾದ್ದರಿಂದ ಯಮನ ಸಭಾಂಗಣವನ್ನೆ ಪ್ರವೇಶಿಸಿದನೆಂದು ಜನಾರ್ದನೀಯ.[2]

ತೇನೈವ ಮಾನುಷಮವಾಪ್ಯ ರತಿಸ್ಥ ಏವ
ಪಂಚತ್ವಮಾಪ ರತಿವಿಘ್ನಮಪುತ್ರತಾಂ ಚ।
ಸ್ವಾತ್ಕೋತ್ತಮೇಷ್ವಥ ಸುರೇಷು ವಿಶೇಷತಶ್ಚ
ಸ್ವಲ್ಪೋಽಪಿ ದೋಷ ಉರುತಾಮಭಿಯಾತಿ ಯಸ್ಮಾತ್ ॥ ೪೭ ॥

ಅದರಿಂದಲೇ ಮನುಷ್ಯ ಜನ್ಮ ಹೊಂದಿ ರತಿಕ್ರೀಡೆಯಲ್ಲಿದ್ದಾಗ ಮರಣಹೊಂದಿದ. ಅದರಿಂದಲೇ ಅವನಿಗೆ ರತಿಕ್ರೀಡೆಗೆ ವಿಘ್ನ ಬಂದಿತ್ತು. ಮಕ್ಕಳೂ ಆಗಲಿಲ್ಲ. ಏಕೆಂದರೆ ತನಗಿಂತ ಉತ್ತಮರಾದವರಲ್ಲಿ ಮಾಡುವ ಅಲ್ಪಾಪರಾಧವೂ ಮಹತ್ತಾಗುತ್ತದೆ. ವಿಶೇಷವಾಗಿ ಸ್ವೋತ್ತಮ ದೇವತೆಗಳಲ್ಲಿ ಮಾಡುವ ಅಪರಾಧ ಇನ್ನೂ ಮಹತ್ತಾಗುತ್ತದೆ.

ಪಾಂಡುವಿಗೆ ಕಿಂದಮಮುನಿಯ ಶಾಪದಿಂದಲೆ ರತಿಕ್ರೀಡಾ ಕಾಲದಲ್ಲಿ

---

1. ಸೌರಮಾಸಾನುಸಾರೇಣ ಕ್ವಚಿತ್ ಫಾಲ್ಗುನೇ ಮಾಸಿ ವಂಸತರ್ತುರ್ಭವತಿ। -ಜನಾರ್ದನೀಯ
2. ರತಿಕಾಲೇ ಮೃತಸ್ಯಾಪಿ ಸುಪುಣ್ಯೈ ರಾಜಭಿಃ ಪ್ರಾಪ್ಯಸ್ಯ ಯಮಸದನಸ್ಯ ಪ್ರಾಪ್ತೌ ಹರಿಪಾದ ಸಂಗಿತ್ವಮೇವ ಕಾರಣಮಿತಿ ಭಾವಃ। -ಜನಾರ್ದನೀಯ

ಮರಣವಾಗಬೇಕಿತ್ತು. ಆದರೆ ಪಾಂಡು ಹಿಂದೆ ಪರಾವಹ ನಾಮಕ ಮರುತ್ತು, ಒಬ್ಬ ದೇವತೆ. ಸಾಮಾನ್ಯನಾದ ಓರ್ವ ಮುನಿಯ ಶಾಪ ಅವನ ಮರಣಕ್ಕೆ ಪ್ರಬಲ ಕಾರಣವಾಗದು. ಪ್ರಬಲ ಕಾರಣ ಬೇರೆಯೆ ಇದ್ದಿತು ಎನ್ನುತ್ತಾರೆ ಶ್ರೀಮದಾಚಾರ್ಯರು. ದೇವಾಧಿಪತಿಯಾದ ಇಂದ್ರನಿಗೆ ಒಮ್ಮೆ ಪರಾವಹ ರತಿ ವಿಘ್ನ ಮಾಡಿದ್ದ. ಅದೇನೂ ಉದ್ದೇಶಪೂರ್ವಕವಾಗಿರಲಿಲ್ಲ. ಇಂದ್ರನ ಸಂದರ್ಶನಕ್ಕೆ ಈತ ಹೋಗಿದ್ದುದರಿಂದ ಆಗ ಇಂದ್ರನಿಗೆ ಶಚಿಯ ಬಳಿಗೆ ಹೋಗಲು ಅವಕಾಶವಾಗಲಿಲ್ಲ. ಇದು ಅಲ್ಪವಾದ ಅಪರಾಧ ನಿಜ. ಆದರೂ ಸ್ವೋತ್ತಮರಲ್ಲಿ ತತ್ರಾಪಿ ದೇವತೆಗಳಲ್ಲಿ ಮಾಡುವ ಅತ್ಯಲ್ಪ ಅಪರಾಧವೂ ಮಹತ್ತಾಗುತ್ತದೆ. ಈ ಸ್ವೋತ್ತಮಾಪರಾಧದಿಂದಲೆ ರತಿಕಾಲದಲ್ಲಿ ಮರಣ ಉಂಟಾಯಿತು. ಈ ಸ್ವೋತ್ತಮಾಪರಾಧದಿಂದಲೆ ಋಷಿ ಶಾಪ ಬಂದಂದಿನಿಂದ ರತಿಕ್ರೀಡೆಗೆ ವಿಘ್ನ ಉಂಟಾಗಿತ್ತು ಮತ್ತು ಅವನಿಗೆ ಔರಸ ಪುತ್ರರಿಲ್ಲದಂತಾಗಿತ್ತು. ಋಷಿಶಾಪ ಈ ಎಲ್ಲಕ್ಕೂ ನಿಮಿತ್ತಮಾತ್ರ.[1]

ಮಾದ್ರೀ ಪತಿಂ ಮೃತಮವೇಕ್ಷ್ಯ ರುರಾವ ದೂರಾತ್
ತಚ್ಚುಶ್ರುವುಶ್ಚ ಪೃಥಯಾ ಸಹ ಪಾಂಡುಪುತ್ರಾಃ।
ತೇಷ್ವಾಗತೇಷು ವಚನಾದಪಿ ಮಾದ್ರವತ್ಯಾಃ
ಪುತ್ರಾನ್ನಿವಾರ್ಯ ತು ಪೃಥಾ ಸ್ವಯಮೇವ ಚಾಗಾತ್ ॥ ೪೮ ॥

ಪತಿ ಮೃತನಾದುದನ್ನು ಕಂಡು ಮಾದ್ರಿ ಕೂಗಿಕೊಂಡಳು. ಕುಂತಿಯೊಂದಿಗೆ ಪಾಂಡವರೂ ದೂರದಿಂದಲೇ ಅದನ್ನು ಕೇಳಿದರು. ಬರಲು ಹೊರಟರು. ಆದರೆ ಕುಂತಿ ಮಾದ್ರಿಯ ಮಾತನ್ನು ಕೇಳಿ ಅವರನ್ನು ತಡೆದು ತಾನೊಬ್ಬಳೆ ಮಾದ್ರಿಯ ಬಳಿಗೆ ಬಂದಳು.

ಮಾದ್ರಿ ಕೂಗಿಕೊಂಡ ಧ್ವನಿಯನ್ನು ಪಾಂಡವರು ಕೇಳಿದರು. ಕುಂತಿಯೊಡನೆ ಹೊರಟರು. ಆದರೆ ಕುಂತಿಗೆ ಅವರು ಬರುವುದು ಬೇಡ ಎನಿಸಿತು. ಮಾದ್ರಿ ದೂರದಿಂದಲೆ ಕುಂತಿಗೆ ಹೇಳಿದಳು. 'ಮಕ್ಕಳನ್ನು ಬಿಟ್ಟು ನೀನೊಬ್ಬಳೆ ಬಾ' ಎಂದು. ಅದರಿಂದಲೂ ಕುಂತಿ ಪಾಂಡವರನ್ನು ತಡೆದು ನಿಲ್ಲಿಸಿ ತಾನೊಬ್ಬಳೆ ಮಾದ್ರಿಯ ಬಳಿಗೆ ಬಂದಳು.[2]

---

1. ಋಷಿ ಶಾಪಾನಂತರಂ ಏತಾವತ್ ಕಾಲ ಪರ್ಯಂತಂ ರತೇರಭಾವಾತ್ ರತಿವಿಘ್ನ ಮಿತ್ಯುಕ್ತಂ। ಯದ್ಯಪಿ ಋಷಿಶಾಪೋಽಪ್ಯಸ್ತಿ ನಿಮಿತ್ತಂ। ತಥಾಪಿ ಋಷೇ ರ್ನೀಚತ್ವಾತ್ ತಚ್ಛಾಪೋ ನ ಪ್ರಬಲಂ ನಿಮಿತ್ತಂ। ಕಿಂತು ಇಂದ್ರಕ್ರೋಧ ಏವ ಮರಣೇ ಮುಖ್ಯನಿಮಿತ್ತಮಿತಿ ಭಾವೇನ ಪೂರ್ವಂ ಶಚೀರಮಣಮಿತ್ಯಾದ್ಯುಕ್ತಂ। -ವಾದಿರಾಜೀಯ
2. ಪುತ್ರಾನ್ನಾನಯ, ತ್ವಮೇವಾಯಾಹೀತಿ ರುದತ್ಯಾ ಮಾದ್ರವತ್ಯಾ ವಚನಾದಪೀತ್ಯರ್ಥಃ। -ವಾದಿರಾಜೀಯ

ಪತ್ಯುಃ ಕಲೇವರಮವೇಕ್ಷ್ಯ ನಿಶಮ್ಯ ಮಾದ್ರ್ಯಾ ಃ
ಕುಂತೀ ಭೃಶಂ ವ್ಯಥಿತಹೃತ್ಕಮಲೈವ ಮಾದ್ರಿಮ್ ।
ಧಿಕ್ಕೃತ್ಯ ಚಾನುಮರಣಾಯ ಮತಿಂ ಚಕಾರ
ತಸ್ಯಾಃ ಸ್ವನೋ ರುದಿತಜಃ ಶ್ರುತ ಆಶು ಪಾರ್ಥೈಃ ॥ ೪೯ ॥

ಕುಂತಿ ಪತಿಯ ಮೃತಶರೀರವನ್ನು ಕಂಡು, ಮರಣ ಹೇಗಾಯಿತೆನ್ನುವುದನ್ನು ಮಾದ್ರಿಯಿಂದ ಕೇಳಿ, ಬಹಳ ವ್ಯಥೆ ತುಂಬಿದ ಹೃದಯ ಕಮಲ ಉಳ್ಳವಳಾಗಿ ಮಾದ್ರಿಯನ್ನು ಬೈದು ಪತಿಸಹಗಮನಕ್ಕೆ ಸಂಕಲ್ಪ ಮಾಡಿದಳು. ಕೂಡಲೆ ಅವಳು ಅಳುವ ಶಬ್ದ ಪಾಂಡವರಿಗೆ ಕೇಳಿಸಿತು.

ತೇಷ್ವಾಗತೇಷ್ವಧಿಕ ಆಸ ವಿರಾವ ಏತಂ
ಸರ್ವೇಽಪಿ ಶುಶ್ರುವು ಋಷಿಪ್ರವರಾ ಅಥಾತ್ರ ।
ಆಜಗ್ಮುರುತ್ತಮಕೃಪಾ ಋಷಿಲೋಕಮಧ್ಯೇ
ಪತ್ನೀನೃಪಾನುಗಮನಾಯ ಚ ಪಸ್ಪೃಧಾತೇ ॥ ೫೦ ॥

ಅವರು ಬಂದಾಗ ಅಳುವ ಧ್ವನಿ ಇನ್ನೂ ಹೆಚ್ಚಿತು. ಅಲ್ಲಿದ್ದ ಶ್ರೇಷ್ಠ ಋಷಿಗಳೆಲ್ಲರೂ ಅದನ್ನು ಕೇಳಿದರು. ಋಷಿ ಜನರುಗಳ ನಡುವೆ ಹೆಚ್ಚು ಕೃಪಾಶಾಲಿಗಳಾದ ಅವರು ಬಂದರು. ರಾಜನೊಡನೆ ಸಹಗಮನಕ್ಕೆ ಇಬ್ಬರು ಪತ್ನಿಯರೂ ಸ್ಪರ್ಧಿಸಿದರು.

ಮಕ್ಕಳು ಇನ್ನೂ ಸಣ್ಣವರಾಗಿರುವಾಗ ಇಬ್ಬರು ತಾಯಂದಿರೂ ಸಹಗಮನ ಮಾಡುವುದು ಯುಕ್ತವಾಗುವುದಿಲ್ಲ. ಒಬ್ಬಳು ಮಾತ್ರ ಮಾಡಬಹುದು. ಆದರೆ ಯಾರು? ಈ ಪ್ರಶ್ನೆ ಬಂದಾಗ ನಾನು ನಾನೆಂದು ಇಬ್ಬರೂ ಸ್ಪರ್ಧಿಸಿದರು ಎಂದು ವಾದಿರಾಜೀಯ[1]

ಮಾದ್ರಿಯ ಪತಿಸಹಗಮನ

ತೇ ಸನ್ನಿವಾರ್ಯ ತು ಪೃಥಾಮಥ ಮಾದ್ರವತ್ಯಾ
ಭರ್ತುಃ ಸಹಾನುಗಮನಂ ಬಹುಶೋಽರ್ಥಯಂತ್ಯಾಃ।
ಸಂವಾದಮೇವ ನಿಜದೋಷಮವೇಕ್ಷ್ಯ ತಸ್ಯಾ
ಶಕ್ರುಃ ಸದಾವಗತ ಭಾಗವತೋಚ್ಚಧರ್ಮಾಃ ॥ ೫೧ ॥

ಸದಾ ಉತ್ತಮ ಭಾಗವತ ಧರ್ಮಜ್ಞರಾದ ಆ ಋಷಿಗಳು ಕುಂತಿಯನ್ನು ತಡೆದು

---

1. ಬಾಲೇಷು ಸುತೇಷು ಸತ್ಸುದ್ವಯೋರನುಗಮನ ಮನುಚಿತಂ। ತತ್ರ ಏಕಸ್ಯಾಃ ಪತ್ನ್ಯಾಃ ನೃಪಾನುಗಮನಂ ಪತ್ನೀನೃಪಾನುಗಮನಂ ತಸ್ಮೈ ಅಹಂ ಗಚ್ಛಾಮಿ ಅಹಂಗಚ್ಛಾಮೀತಿ ಉಭೇ ಪಸ್ಪೃಧಾತೇ ಇತಿಯೋಜನಾ। –ವಾದಿರಾಜೀಯ

ಪತಿಯೊಡನೆ ಸಹಗಮನಕ್ಕಾಗಿ ಬಹಳವಾಗಿ ಬೇಡುತ್ತಿದ್ದ ಮಾದ್ರಿಗೇ ಅವಳ ತಪ್ಪನ್ನು ಗಮನಿಸಿ ಸಮ್ಮತಿಸಿದರು.

ಭರ್ತುರ್ಗುಣೈರನಧಿಕೌ ತನಯಾರ್ಥಮೇವ
ಮಾದ್ರ್ಯಾ ಕೃತೌ ಸುರವರಾವಧಿಕೌ ಸ್ವತೋಽಪಿ।
ತೇನೈವ ಭರ್ತೃಮೃತಿಹೇತುರಭೂತ್ ಸಮಸ್ತ
ಲೋಕೈಶ್ಚ ನಾತಿಮಹಿತಾ ಸುಗುಣಾಪಿ ಮಾದ್ರೀ ॥ ೫೨ ॥

ಮಾದ್ರೀ ಅಶ್ವಿನೀ ದೇವತೆಗಳನ್ನು ಸಂತತಿಗಾಗಿ ಆಹ್ವಾನಿಸಿದಳು. ಅವಳಿಗೆ ಅವರು ತನಗಿಂತ ಹೆಚ್ಚಿನವರಾದರೂ ತನ್ನ ಪತಿಯ ಗುಣಗಳಿಗಿಂತ ಹೆಚ್ಚಿನ ಗುಣದವರಲ್ಲ. ಅದರಿಂದಲೆ ಅವಳು ಪತಿಯ ಮರಣಕ್ಕೆ ಕಾರಣಳಾದಳು. ಸುಗುಣವತಿಯಾಗಿದ್ದೂ ಜನರಿಂದ ಹೆಚ್ಚಿನ ಪ್ರಶಂಸೆ ಪಡೆಯಲಾರದೆ ಹೋದಳು.

ವಿಷ್ವಕ್ಸೇನೋಽಶ್ವಿನೌ ತೌ ಗಣಪತಿಧನಪಾ-
ವುಕ್ತಶೇಷಾಃ ಶತಸ್ಥಾ ದೇವಾಶ್ಚೋಕ್ತೇತರಾ ಯೇ।

ಎಂಬಲ್ಲಿ ಚ ಶಬ್ದವಿರುವುದರಿಂದ ಶೇಷ ಶತಸ್ಥ ದೇವತೆಗಳಲ್ಲಿ ಒಬ್ಬನಾದ ಪರಾವಹ ವಾಯುವಿನ ಕಕ್ಷ್ಯೆಯಲ್ಲಿಯೇ ಅಶ್ವಿನೀ ದೇವತೆಗಳಿದ್ದಾರೆ. ಅದರಿಂದ ಪಾಂಡುವಿಗಿಂತ ಅಶ್ವಿನಿಗಳು ಹೆಚ್ಚಿನವರಲ್ಲ ಎಂದಿದೆ -ವಾದಿರಾಜೀಯ.[1]

ಒಂದು ಕಕ್ಷ್ಯೆಯಲ್ಲಿದ್ದರೂ ತಿರುಗಿ ಅವಾಂತರ ತಾರತಮ್ಯವಿರುತ್ತದೆ. ಈ ತಾರತಮ್ಯದಲ್ಲಿ ಪರಾವಹ ವಾಯುವಿಗಿಂತಲೂ ಅಶ್ವಿನಿಗಳು ಕಡಿಮೆಯವರು. ಹೀಗೆ ಕಕ್ಷ್ಯಾತಾರತಮ್ಯದಲ್ಲಿ ಸಮಾನರೂ ಹೌದು. ಅವಾಂತರ ತಾರತಮ್ಯದಲ್ಲಿ ಕಡಿಮೆಯವರೂ ಹೌದು. ಅಂತೂ ಹೆಚ್ಚಿನವರಲ್ಲ ಎಂಬ ಅಭಿಪ್ರಾಯದಿಂದ ಶ್ರೀಮದಾಚಾರ್ಯರು ಅನಧಿಕೌ ಎಂದಿದ್ದಾರೆ ಎಂದು ಜನಾರ್ದನೀಯ.[2]

---

1. ವಿಷ್ವಕ್ಸೇನೋಽಶ್ವಿನೌ ತೌ ಗಣಪತಿ ಧನಪಾ
ವುಕ್ತಶೇಷಾಃ ಶತಸ್ಥಾ ದೇವಾಶ್ಚೋಕ್ತೇತರಾ ಯೇ
ಇತಿ ಚಶಬ್ದಾತ್ ಪ್ರಾಕ್ ಸಂಗೃಹೀತಯೋರಶ್ವಿನೋಃ ಶತಸ್ಥ ದೇವೇಷು ಪರಿತಸ್ಯ ಪಾಂಡು ಮೂಲ ರೂಪ ಪರಾವಹಾಖ್ಯಮರುತಶ್ಚ 'ಸಾಮ್ಯೇನ ಪಾಂಡೋಃ ಸಕಾಶಾತ್ ಅಶ್ವಿನೋರಾಧಿಕ್ಯಾಭಾವಾತ್ ಭರ್ತುರ್ಗುಣೈರನಧಿಕಾವಿತ್ಯುಕ್ತಂ। -ವಾದಿರಾಜೀಯ
2. ಮಾದ್ರ್ಯಾಃ ಭರ್ತುಃ ಸಕಾಶಾದ್ ಗುಣೈರನಧಿಕೌ ನ ಅಧಿಕೌ, ಸಮೌ ನೀಚೌ ಚ। ಉಕ್ತಶೇಷ ಶತಸ್ಥತ್ವೇನ ಸಾಮ್ಯೇಽಪಿ

ಪಾಂಡೋಃ ಸುತಾ ಮುನಿಗಣೈಃ ಪಿತೃಮೇಧಮತ್ರ
ಚಕ್ರುರ್ಯಥಾವದಥ ತೇನ ಸಹೈವ ಮಾದ್ರೀ।
ಹುತ್ವಾತ್ಮದೇಹಮುರುಪಾಪಮದಃ ಕೃತಂ ಚ
ಸಮ್ಮಾರ್ಜ್ಯ ಲೋಕಮಗಮನ್ನಿಜಭರ್ತುರೇವ ॥ ೫೩ ॥

ಪಾಂಡವರು ಬದರಿಕಾಶ್ರಮದಲ್ಲಿ ಮುನಿ ಸಮೂಹಗಳ ಸಹಾಯದಿಂದ ಪಿತೃಯಜ್ಞವನ್ನು ವಿಧ್ಯುಕ್ತವಾಗಿ ಮಾಡಿದರು. ಬಳಿಕ ಮಾದ್ರಿ ಪತಿಯ ಶರೀರದೊಂದಿಗೆ ತನ್ನ ಶರೀರವನ್ನು ಚಿತಾಗ್ನಿಯಲ್ಲಿ ಹೋಮಿಸಿಕೊಂಡು ಈ ಜನ್ಮದಲ್ಲಿ ಮಾಡಿದ ಮಹಾಪಾಪವನ್ನು ಪರಿಹರಿಸಿಕೊಂಡು ತನ್ನ ಪತಿಲೋಕವನ್ನೇ ಸೇರಿದಳು.

ಪಾಂಡುಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾತ್
ಕೃಷ್ಣಾತ್ಮಜಃ ಸತತಮಸ್ಯ ಪದೈಕಭಕ್ತಃ।
ಲೋಕಾನವಾಪ ವಿಮಲಾನ್ ಮಹಿತಾನ್ ಮಹದ್ಭಿಃ
ಕಿಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ ॥ ೫೪ ॥

ಪಾಂಡು ಸಾಕ್ಷಾತ್ ವ್ಯಾಸರ ಔರಸಪುತ್ರ. ಸದಾ ಅವರ ಪಾದಗಳಲ್ಲಿಯೇ ಭಕ್ತಿ ಇಟ್ಟುಕೊಂಡವ. ಅವನು ಮಕ್ಕಳ ಸದ್ಗುಣಗಳಿಂದಲೂ ತನ್ನ ಸದ್ಗುಣಗಳಿಂದಲೂ ಮಹಾತ್ಮರು ಆದರಿಸುವ ಪವಿತ್ರ ಲೋಕಗಳನ್ನೆ ಸಂಪಾದಿಸಿದ. ಹರಿಪಾದಗಳಲ್ಲಿ ಭಕ್ತಿಪೂರ್ಣ ಹೃದಯಶಾಲಿಯಾದ ಪಾಂಡುರಾಜನಿಗೆ ಉತ್ತಮಲೋಕ ಪ್ರಾಪ್ತಿಯಾದರೆ ಏನಾಶ್ಚರ್ಯ?

ಹಸ್ತಿನಾಪುರಕ್ಕೆ ಪಾಂಡವರು

ಪಾಂಡೋಃ ಸುತಾಶ್ಚ ಪೃಥಯಾ ಸಹಿತಾ ಮುನೀಂದ್ರೈ
ರ್ನಾರಾಯಣಾಶ್ರಮತ ಆಶು ಪುರಂ ಸ್ವಕೀಯಮ್।
ಜಗ್ಮುಸ್ತಥೈವ ಧೃತರಾಷ್ಟ್ರಪುರೋ ಮುನೀಂದ್ರಾ
ವೃತ್ತಂ ಸಮಸ್ತಮವದನ್ನನುಜಂ ಮೃತಂ ಚ ॥ ೫೫ ॥

ಪಾಂಡವರು ಕುಂತೀಸಹಿತರಾಗಿ ಮುನಿಶ್ರೇಷ್ಠರಿಂದಲೂ ಕೂಡಿ ಬದರಿಕಾಶ್ರಮದಿಂದ ಬೇಗನೆ ತಮ್ಮ ಹಸ್ತಿನಾವತಿ ನಗರಕ್ಕೆ ಹೋದರು. ಮುನಿಶ್ರೇಷ್ಠರು ಧೃತರಾಷ್ಟ್ರನ ಮುಂದೆ ನಡೆದುದನ್ನೆಲ್ಲ ಯಥಾವತ್ತಾಗಿ ಹೇಳಿದರು. ತಮ್ಮನಾದ ಪಾಂಡುವಿನ ಮರಣವಾರ್ತೆಯನ್ನು ತಿಳಿಸಿದರು.

ದೇವಾದಿಷ್ವೇಷು ಸರ್ವೇಷು ಪ್ರೋಕ್ತಾ ಅಪಿ ವಿಶೇಷಿಣಃ।
ಪಂಚಾಂಶತೋ ದಶಾಂಶಾದ್ವಾ ಸ್ವಸ್ವಜಾತ್ಯಾ ಪರಸ್ಪರಂ ॥
ಇತಿ ವಚನಾತ್ ಅವಾಂತರ ತಾರತಮ್ಯಾಪೇಕ್ಷಯಾ ನೀಚತ್ವಂ ಜ್ಞೇಯಂ। ಅತ ಏವಾಚಾರ್ಯೈಃ ಸಮೌ ನೀಚಾವಿತ್ಯನುಕ್ತ್ವಾ ಸಾಧಾರಣಾನಧಿಕ ಪದಪ್ರಯೋಗಃ ಕೃತಃ। -ಜನಾರ್ದನೀಯ

ತೂಷ್ಣೀಂ ಸ್ಥಿತೇ ಚ ನೃಪತೌ ತನುಜೇ ಚ ನದ್ಯಾಃ
ಕ್ಷತ್ತುರ್ಯುತಾಪ ಉರುಮೋದಮತೀವ ಪಾಪಾಃ।
ಊಚುಃ ಸುಯೋಧನಮುಖಾಃ ಸಹ ಸೌಬಲೇನ
ಪಾಂಡೋರ್ಮೃತಿಃ ಕಿಲ ಪುರಾ ತನಯಾಃ ಕ್ವ ತಸ್ಯ ॥ ೫೬ ॥

ಧೃತರಾಷ್ಟ್ರನೂ ಭೀಷ್ಮನೂ ಸುಮ್ಮನಿರಲು, ವಿದುರನು ಬಹಳ ಸಂತೋಷಪಡುತ್ತಿರಲು ಅತ್ಯಂತ ಪಾಪಿಗಳಾದ ಸುಯೋಧನಾದಿಗಳು ಹೇಳಿದರು, 'ಪಾಂಡುವಿನ ಮರಣ ಹಿಂದೆಯೆ ಆಗಿಹೋಗಿತ್ತು! ಅವನಿಗೆಲ್ಲಿಯ ಮಕ್ಕಳು?' ಎಂದು.

ಧೃತರಾಷ್ಟ್ರ ಭೀಷ್ಮರು ಸುಮ್ಮನಿದ್ದುದೇಕೆ? ವಿದುರ ಬಹಳ ಸಂತೋಷಪಟ್ಟಿದ್ದೇಕೆ? ಎಂದರೆ ಧೃತರಾಷ್ಟ್ರ ಭೀಷ್ಮರಿಗೆ ಪಾಂಡುವಿನ ವಿಯೋಗ ಅಸಹನೀಯವೆನಿಸಿತು. ಅದರಿಂದ ದುಃಖದಿಂದ ಸುಮ್ಮನಿದ್ದರು. ವಿದುರ ತತ್ವಜ್ಞಾನಿಯ ನಿರ್ಲಿಪ್ತತೆಯಿಂದ ಆ ದುಃಖವನ್ನು ನುಂಗಿಕೊಂಡು ಸಜ್ಜನರಾದ ಪಾಂಡವರ ಸಮಾಗಮವಾಯಿತೆಂದು ಆನಂದಪಟ್ಟ. ಅಥವಾ ಧೃತರಾಷ್ಟ್ರ ಭೀಷ್ಮರು ಸುಮ್ಮನಿದ್ದರೆಂದರೆ ಪಾಂಡವರು ಪಾಂಡುವಿನ ಮಕ್ಕಳೆಂಬ ವಿಷಯದಲ್ಲಿ ಏನೂ ಅಭಿಪ್ರಾಯ ವ್ಯಕ್ತಮಾಡಲಿಲ್ಲ, ಸುಮ್ಮನಿದ್ದರು ಎಂದರ್ಥ. ಅವರು ಹಾಗೆ ಸುಮ್ಮನಿದ್ದುದನ್ನು ಕಂಡು ವಿದುರನಿಗೆ ಒಂದು ಶಂಕೆ ಕಳವಳ ದೂರವಾಯಿತು. ಒಂದು ವೇಳೆ ಧೃತರಾಷ್ಟ್ರ ಭೀಷ್ಮರು ಪಾಂಡವರನ್ನು ಪಾಂಡುಪುತ್ರರೆಂದು ಸ್ವೀಕರಿಸದಿದ್ದರೆ ಮುಂದೇನು ಗತಿ ಎಂದು ಆತ ಚಿಂತಿಸುತ್ತಿದ್ದ. ಅವರು ಮೌನವಾಗಿದ್ದರಿಂದ 'ಮೌನಂ ಸಂಮತಿ ಲಕ್ಷಣಂ' ಎಂಬಂತೆ ಪಾಂಡವರು ಸ್ವೀಕಾರಾರ್ಹರೆಂದು ಹೇಳಿದಂತೆಯೇ ಆಯಿತು. ಇನ್ನು ಆ ಪಾಂಡವರ ಒಡನಾಟ ತನಗೆ ನಿರಾತಂಕವಾಗಿ ಲಭಿಸುವುದೆಂದು ಬಹಳ ಸಂತೋಷವಾಯಿತು.

ಪಾಂಡು ಸತ್ತು ಇಂದಿಗೆ ಹದಿನೇಳು ದಿವಸಗಳಾದುವು ಎಂದು ಬದರಿಕಾಶ್ರಮವಾಸಿಗಳಾದ ಮುನಿಗಳು ಹೇಳಿದರೂ ದುರ್ಯೋಧನಾದಿಗಳು ಕುಹಕದಿಂದ ಹೇಳುತ್ತಾರೆ. 'ನೀವು ಹೇಳುವುದು ಸುಳ್ಳು, ಪಾಂಡು ಎಂದೋ ಸತ್ತಿದ್ದಾನೆ. ಬಳಿಕ ಕುಂತಿ ವ್ಯಭಿಚಾರದಿಂದ ಈ ಮಕ್ಕಳನ್ನು ಪಡೆದಳು. ಅದರಿಂದ ಇವರಿಗೆ ರಾಜ್ಯಾಧಿಕಾರ ಸಲ್ಲದು, ನಮ್ಮ ಅರಮನೆಯಲ್ಲಿ ವಾಸವೂ ಸಿಗಲಾರದು' ಎಂದು. ಈ ಅಂಶ ಮಹಾಭಾರತ ಪ್ರಚಲಿತ ಪಾಠದಲ್ಲಿಲ್ಲ.

ನ ಕ್ಷೇತ್ರಜಾ ಅಪಿ ಮೃತೇ ಪಿತರಿ ಸ್ವಕೀಯೈಃ
ಸಮ್ಯಙ್ನಿಯೋಗಮನವಾಪ್ಯ ಭವಾಯ ಯೋಗ್ಯಾಃ।

ತೇಷಾಮಿತೀರಿತ ವಚೋಽನು ಜಗಾದ ವಾಯು
ರಾಭಾಷ್ಯ ಕೌರವಗಣಾನ್ ಗಗನಸ್ಥ ಏವ ॥ ೫೭ ॥

'ತಂದೆ ಸತ್ತಮೇಲೆ ತಾಯಿ ತಮ್ಮ ಬಂಧುಗಳಿಂದ ಸರಿಯಾಗಿ ನಿಯೋಗ ಪಡೆಯದೆ ಇದ್ದಾಗ ಹುಟ್ಟುವ ಮಕ್ಕಳು ಕ್ಷೇತ್ರಜ ಪುತ್ರರೂ ಆಗುವುದಿಲ್ಲ' ಎಂದರು ದುರ್ಯೋಧನಾದಿಗಳು. ಅವರು ಈ ಮಾತನ್ನು ಹೇಳಿದೊಡನೆ ವಾಯುದೇವ ಆಕಾಶದಲ್ಲಿ ನಿಂತು ಕೌರವ ಸಮೂಹಗಳನ್ನು ಕರೆದು ಹೇಳಿದ.

ತಂದೆ ಸತ್ತಮೇಲೆ ಹುಟ್ಟಿದ್ದರಿಂದ ಔರಸ ಪುತ್ರರಂತೂ ಅಲ್ಲ. ತಾಯಿ ಅಧಿಕೃತವಾಗಿ ಬಂಧುಗಳಿಂದ ನಿಯೋಗ ಹೊಂದದೆ ವ್ಯಭಿಚಾರದಿಂದ ಮಕ್ಕಳನ್ನು ಹೆತ್ತರೆ ಇವರು ಕ್ಷೇತ್ರಜಪುತ್ರರೂ ಆಗುವುದಿಲ್ಲ. ಅದರಿಂದ ಇವರು ಪಾಂಡುಪುತ್ರರೆ ಅಲ್ಲ ಎಂದು ದುರ್ಯೋಧನಾದಿಗಳ ವಾದ. ಅವರು ಹೀಗೆ ವಾದಿಸುತ್ತಿದ್ದಂತೆ ಆಕಾಶದಲ್ಲಿ ಅಶರೀರವಾಣಿಯೊಂದು ಕೇಳಿಬಂದಿತು. 'ಅಶರೀರ' ಎಂದರೆ ಶರೀರಾಭಿಮಾನ ರಹಿತನಾದ ವಾಯುವೆ. ಅವನೆ ಆಕಾಶದಲ್ಲಿ ಅದೃಶ್ಯನಾಗಿ ನಿಂತು ನುಡಿದ.

ಏತೇ ಹಿ ಧರ್ಮಮರುದಿಂದ್ರಭಿಷಗ್ವರೇಭ್ಯೋ
ಜಾತಾಃ ಪ್ರಜೀವತಿ ಪಿತರ್ಯುರುಧರ್ಮಸಾರಾಃ।
ಶಕ್ಯಾಶ್ಚ ನೈವ ಭವತಾಂ ಕ್ವಚಿದಗ್ರಹಾಯ
ನಾರಾಯಣೇನ ಸತತಂ ಪರಿರಕ್ಷಿತಾ ಯತ್ ॥ ೫೮ ॥

'ಪಾಂಡವರು ತಂದೆ ಚೆನ್ನಾಗಿ ಬದುಕಿದ್ದಾಗಲೇ ಯಮ, ವಾಯು, ಇಂದ್ರ, ಅಶ್ವಿನೀದೇವತೆಗಳಿಗೆ ಹುಟ್ಟಿದವರು. ಮಹಾಧರ್ಮಿಷ್ಠರು, ಉತ್ತಮರು, ಯಾವ ದೃಷ್ಟಿಯಿಂದಲೂ ಇವರು ನಿಮಗೆ ಪರಿತ್ಯಾಗ ಮಾಡಲು ಶಕ್ಯರಲ್ಲ. ಏಕೆಂದರೆ ವೇದವ್ಯಾಸರಿಂದ ಸದಾ ರಕ್ಷಿತರಾಗಿದ್ದಾರೆ.'

'ತಂದೆ ಚೆನ್ನಾಗಿ ಬದುಕಿದ್ದಾಗಲೆ' ಎಂದರೆ ಉನ್ಮಾದ ಮೂರ್ಛಾದಿ ಅವಸ್ಥೆಯಲ್ಲಿ ಇಲ್ಲದೆ ಆರೋಗ್ಯವಾಗಿದ್ದು ಪತ್ನಿಯರಿಗೆ ನಿಯೋಗದಿಂದ ಮಕ್ಕಳನ್ನುಪಡೆಯುವಂತೆ ಆಜ್ಞೆಮಾಡುವ ಸ್ಥಿತಿಯಲ್ಲಿದ್ದ ಪಾಂಡು. ಅದರಿಂದ ಅವನಾಜ್ಞೆಯಂತೆ ತಾಯಂದಿರು ಮಕ್ಕಳನ್ನು ಪಡೆದುದರಿಂದ ಕ್ಷೇತ್ರಜರೆನಿಸಲು ಯಾವ ಬಾಧಕವೂ ಇಲ್ಲ ಎಂದು ಅಭಿಪ್ರಾಯ. ಶ್ರೀವೇದವ್ಯಾಸರು ನಿಮಗೆ ಪಿತಾಮಹರು. ಅವರೇ ಪಾಂಡವರನ್ನು ಸದಾ ಅಂದರೆ ಅವರ ಮೂಲರೂಪದಲ್ಲಿಯೂ ಅವತಾರ ರೂಪದಲ್ಲಿಯೂ ಮುಂದೆ ಮೋಕ್ಷದಲ್ಲಿಯೂ ರಕ್ಷಿಸುತ್ತಾರೆ. ಅದರಿಂದ ನೀವು ಅವರನ್ನು ಪರಿತ್ಯಾಗ ಮಾಡುವಂತಿಲ್ಲ ಎಂದು ವಾಯುದೇವ ಹೇಳುತ್ತಿದ್ದಾನೆ.

ವಾಯೋರದೃಶ್ಯವಚನಂ ಪರಿಶಂಕಮಾನೇ-
ಷ್ವಾವಿರ್ಬಭೂವ ಭಗವಾನ್ ಸ್ವಯಮಬ್ಜನಾಭಃ।
ವ್ಯಾಸಸ್ವರೂಪ ಉರುಸರ್ವಗುಣೈಕದೇಹ
ಆದಾಯ ತಾನಗಮದಾಶು ಚ ಪಾಂಡುಗೇಹಮ್ ॥ ೫೯ ॥

ವಾಯುದೇವನ ಅದೃಶ್ಯವಾಣಿಯನ್ನು ಕೌರವರು ನಂಬದಿದ್ದಾಗ ಭಗವಾನ್ ವ್ಯಾಸರೂಪಿ ಪದ್ಮನಾಭ ಸ್ವತಃ ಮೈದೋರಿದ. ಪೂರ್ಣ ಸರ್ವಗುಣರೂಪ ಶರೀರದವನಾದ ಹರಿ ಪಾಂಡವರನ್ನು ಬೇಗನೆ ಪಾಂಡುವಿನ ಅರಮನೆಗೇ ಒಯ್ದ.

ತತ್ಸ್ವೀಕೃತೇಷು ಸಕಲಾ ಅಪಿ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಃ ಪರಿಪೂಜ್ಯ ಸರ್ವಾನ್।
ಕುಂತ್ಯಾ ಸಹೈವ ಜಗೃಹುಃ ಸುಭೃಶಂ ತದಾರ್ತಾ
ವೈಚಿತ್ರವೀರ್ಯತನಯಾಃ ಸಹ ಸೌಬಲೇನ ॥ ೬೦ ॥

ವ್ಯಾಸರು ಪಾಂಡವರನ್ನು ಸ್ವೀಕರಿಸಿದಾಗ ಧೃತರಾಷ್ಟ್ರ ಸಮೇತರಾಗಿ ಭೀಷ್ಮಾದಿಗಳೆಲ್ಲರೂ ಎಲ್ಲ ಪಾಂಡವರನ್ನು ಕುಂತಿಯೊಂದಿಗೆ ಆದರಪೂರ್ವಕವಾಗಿ ಸ್ವೀಕರಿಸಿದರು. ಆಗ ಕೌರವರೂ ಶಕುನಿಯೂ ಬಹಳ ಸಂಕಟಪಟ್ಟರು.

ಭೀಮಸೇನನ ಬಾಲಲೀಲೆ

ವೈಚಿತ್ರವೀರ್ಯತನಯಾಃ ಕೃಪತೋ ಮಹಾಸ್ತ್ರ-
ಣ್ಯಾಪುಶ್ಚ ಪಾಂಡುತನಯೈಃ ಸಹ ಸರ್ವರಾಜ್ಞಾಮ್।
ಪುತ್ರಾಶ್ಚತತ್ರ ವಿವಿಧಾ ಅಪಿ ಬಾಲಚೇಷ್ಟಾಃ
ಕುರ್ವತ್ಸು ವಾಯುತನಯೇನ ಜಿತಾ ಸಮಸ್ತಾಃ ॥ ೬೧ ॥

ಕೌರವರೂ ಪಾಂಡವರೊಂದಿಗೆ ಬೇರೆ ಎಲ್ಲ ರಾಜಕುಮಾರರೂ ಕೃಪಾಚಾರ್ಯರಿಂದ ಮಹಾ ಅಸ್ತ್ರಗಳನ್ನು ಉಪದೇಶ ಪಡೆದರು. ಆ ಕಾಲದಲ್ಲಿ ಅವರು ನಾನಾ ಬಗೆಯ ಬಾಲಚೇಷ್ಟೆ ಮಾಡುತ್ತಿದ್ದಾಗ ಭೀಮನಿಂದ ಎಲ್ಲರೂ ಪರಾಜಿತರಾಗುತ್ತಿದ್ದರು.

ಪಕ್ವೋರುಭೋಜ್ಯಫಲಸನ್ನಯನಾಯ ವೃಕ್ಷೇ-
ಷ್ವಾರೂಢರಾಜತನಯಾನಭಿವೀಕ್ಷ್ಯ ಭೀಮಃ।
ಪಾದಪ್ರಹಾರಮುರುವೃಕ್ಷತಲೇ ಪ್ರದಾಯ
ಸಾಕಂ ಫಲೈರ್ವಿನಿಪತತ್ಸು ಫಲಾನ್ಯಭುಂಕ್ತ ॥ ೬೨ ॥

ಮಾಗಿದ ದೊಡ್ಡ ಭೋಜ್ಯ ಫಲಗಳನ್ನು ತರಲು ರಾಜಕುಮಾರರು ಮರಗಳನ್ನು ಏರಿದಾಗ ಭೀಮಸೇನ ಕಂಡು ಆ ಹೆಮ್ಮರದ ಬುಡಕ್ಕೆ ಕಾಲಿಂದ ಒದ್ದು ಹಣ್ಣುಗಳ ಜೊತೆಗೆ ಅವರೆಲ್ಲರೂ ಬೀಳುತ್ತಿದ್ದರೆ ತಾನು ಆ ಹಣ್ಣುಗಳನ್ನು ತಿನ್ನುತ್ತಿದ್ದ.

ಯುದ್ಧೇ ನಿಯುದ್ಧ ಉತ ಧಾವನ ಉತ್‌ಪ್ಲವೇ ಚ
ವಾರಿಪ್ಲವೇ ಚ ನಿಖಿಲಾನ್ ಸಹಿತಾನ್ ಕುಮಾರಾನ್।
ಏಕೋ ಜಿಗಾಯ ತರಸಾ ಪರಮಾರ್ಯಕರ್ಮಾ
ವಿಷ್ಣೋಃ ಸುಪೂರ್ಣಸದನುಗ್ರಹತಃ ಸುನಿತ್ಯಾತ್ ॥ ೬೩ ॥

ಯುದ್ಧದಲಾಗಲಿ ನಿಯುದ್ಧದಲಾಗಲಿ ಓಟದಲಾಗಲಿ ಹಾರಾಟದಲಾಗಲಿ ನೀರಾಟದಲ್ಲಾಗಲಿ ಎಲ್ಲ ರಾಜಕುಮಾರರೂ ಒಂದಾಗಿ ಸೇರಿದರೂ ಅವರನ್ನು ಪರಮ ಉತ್ತಮ ಕರ್ಮಕಾರಿಯಾದ ಭೀಮನೊಬ್ಬನೆ ಹರಿಯ ನಿರಂತರ ಪೂರ್ಣ ಪರಮಾನುಗ್ರಹದಿಂದ ಬೇಗನೆ ಗೆಲ್ಲುತ್ತಿದ್ದ.

ಯುದ್ಧವೆಂದರೆ ಎರಡು ಗುಂಪುಗಳಾಗಿ ಮಾಡುವ ಹೋರಾಟ. ನಿಯುದ್ಧವೆಂದರೆ ಇಬ್ಬರ ದ್ವಂದ್ವ ಯುದ್ಧ. 'ವಾರಿಪ್ಲವ' ಎಂದರೆ ನೀರಾಟ. 'ಪಾರಿಪ್ಲವ' ಎಂದು ವಾದಿರಾಜೀಯ ಪಾಠ. ಎಲ್ಲ ಕುಮಾರರು ಒಟ್ಟಾಗಿ ನಡುವೆ ನಿಂತಿರುವಾಗ ಸುತ್ತಲೂ ಓಡುತ್ತ ಆಡುವ ಆಟ ಎಂದರ್ಥ.

ಸರ್ವಾನ್ ಪ್ರಗೃಹ್ಯ ವಿನಿಮಜ್ಜತಿ ವಾರಿಮಧ್ಯೇ
ಶ್ರಾಂತಾನ್ ವಿಸೃಜ್ಯ ಹಸತಿ ಸ್ಮ ಸ ವಿಷ್ಣುಪದ್ಯಾಮ್।
ಸರ್ವಾನುದೂಹ್ಯ ಚ ಕದಾಚಿದುರುಪ್ರವಾಹಾಂ
ಗಂಗಾಂ ಸ ತಾರಯತಿ ಸಾರಸುಪೂರ್ಣಪೌಂಸ್ಯಃ ॥ ೬೪ ॥

ಭೀಮ ಎಲ್ಲರನ್ನೂ ಹಿಡಿದುಕೊಂಡು ಗಂಗೆಯಲ್ಲಿ ನೀರಿನ ನಡುವೆ ಮುಳುಗುತ್ತಿದ್ದ. ಅವರು ಆಯಾಸಗೊಂಡಾಗ ನಡುವೆ ಬಿಟ್ಟು ನಗುತ್ತಿದ್ದ. ಉತ್ತಮ ಪರಿಪೂರ್ಣ ಪೌರುಷಉಳ್ಳ ಆತ ಕೆಲವೊಮ್ಮೆ ಎಲ್ಲರನ್ನೂ ಹೊತ್ತು ಮಹಾಪ್ರವಾಹ ಪೂರ್ಣವಾದ ಗಂಗಾನದಿಯನ್ನು ದಾಟಿಸುತ್ತಿದ್ದ.

ದ್ವೇಷಂ ಹ್ಯ ತೇ ನ ಹಿ ಹರೌ ತಮಸಿ ಪ್ರವೇಶಃ
ಪ್ರಾಣೇ ಚ ತೇನ ಜಗತೀಮನು ತೌ ಪ್ರಪನ್ನೌ।
ತತ್ಕಾರಣಾನ್ಯಕುರುತಾಂ ಪರಮೌ ಕರಾಂಸಿ
ದೇವದ್ವಿಷಾಂ ಸತತವಿಸ್ಮತಸಾಧುಪೌಂಸ್ಯೌ ॥ ೬೫ ॥

ಹರಿಯಲ್ಲಿಯೂ ವಾಯುವಿನಲ್ಲಿಯೂ ದ್ವೇಷಮಾಡದ ಹೊರತು ಅಸುರರಿಗೆ ತಮಸ್ಸಿನಲ್ಲಿ ಪ್ರವೇಶವಿಲ್ಲ. ಅದರಿಂದ ನಿರಂತರ ಮಹತ್ತಾದ ಸ್ವಾಭಾವಿಕ ಪೌರುಷಉಳ್ಳ ಉತ್ತಮರಾದ ಕೃಷ್ಣ ಭೀಮರು ಜೊತೆಯಾಗಿ ಭೂಮಿಗೆ ಬಂದು ಅಸುರರಿಗೆ ತಮ್ಮಲ್ಲಿ ದ್ವೇಷಮೂಡುವಂತೆ ಕರ್ಮಗಳನ್ನು ಮಾಡುತ್ತಿದ್ದರು.

ದೃಷ್ಟ್ವಾಮಿತಾನ್ಯಥ ಕರಾಂಸಿ ಮರುತ್ಸುತೇನ
ನಿತ್ಯಂ ಕೃತಾನಿ ತನಯಾ ನಿಖಿಲಾಶ್ಚ ರಾಜ್ಞಾಮ್ ।
ತಸ್ಯಾಮಿತಂ ಬಲಮುದೀಕ್ಷ್ಯ ಸದೋರು ವೃದ್ಧ
ದ್ವೇಷಾ ಬಭೂವುರಥ ಮಂತ್ರಮಮಂತ್ರಯಂಶ್ಚ ॥ ೬೬ ॥

ನಿತ್ಯವೂ ಭೀಮ ಮಾಡುತ್ತಿದ್ದ ಅನುಪಮವಾದ ಕರ್ಮಗಳನ್ನು ಕಂಡು, ಅವನ ಅಪರಿಮಿತ ಶಕ್ತಿಯನ್ನು ತಿಳಿದು, ರಾಜಕುಮಾರರು ಎಲ್ಲರೂ ನಿರಂತರ ಬಲು ದೀರ್ಘ ದ್ವೇಷಮಾಡಿದರು. ರಹಸ್ಯವಾಗಿ ಸೇರಿ ಮಾತನಾಡಿಕೊಂಡರು.

ಯೇ ಯೇ ಹಿ ತತ್ರ ನರದೇವಸುತಾಃ ಸುರಾಂಶಾಃ
ಪ್ರೀತಿಂ ಪರಾಂ ಪವನಜೇ ನಿಖಿಲಾ ಅಕುರ್ವನ್ ।
ತಾಂಸ್ತಾನ್ ವಿಹಾಯ ದಿತಿಜಾ ನರದೇವವಂಶ-
ಜಾತಾ ವಿಚಾರ್ಯ ವಧನಿಶ್ಚಯಮಸ್ಯ ಚಕ್ರುಃ ॥ ೬೭ ॥

ಯಾರು ಯಾರು ದೇವಾಂಶರಾದ ರಾಜಕುಮಾರರು ಭೀಮನಲ್ಲಿ ಬಹಳ ಪ್ರೀತಿ ಮಾಡಿದರೋ ಅವರೆಲ್ಲರನ್ನೂ ದೂರವಿಟ್ಟು ರಾಜವಂಶ ಜಾತರಾದ ದೈತ್ಯರು ವಿಚಾರ ಮಾಡಿ ಭೀಮನನ್ನು ಕೊಲ್ಲುವ ನಿರ್ಣಯವನ್ನು ಕೈಗೊಂಡರು.

ಅಸ್ಮಿನ್ ಹತೇ ವಿನಿಹತಾ ಅಖಿಲಾಶ್ಚ ಪಾರ್ಥಾಃ
ಶಕ್ಯೋ ಬಲಾಚ್ಚ ನ ನಿಹಂತುಮಯಂ ಬಲಾಢ್ಯಃ।
ಛದ್ಮಪ್ರಯೋಗತ ಇಮಂ ವಿನಿಹತ್ಯ ವೀರ್ಯಾತ್
ಪಾರ್ಥಂ ನಿಹತ್ಯ ನಿಗಡೇ ಚ ವಿದಧ್ಮಹೇಽನ್ಯಾನ್ ॥ ೬೮ ॥

'ಭೀಮನೊಬ್ಬ ಹತನಾದರೆ ಎಲ್ಲ ಪಾರ್ಥರೂ ಹತರಾದಂತೆಯೆ. ಆದರೆ ಭೀಮ ಬಲಾಢ್ಯ. ಬಲದಿಂದ ಕೊಲ್ಲಲು ಶಕ್ಯನಲ್ಲ. ಅದರಿಂದ ಅವನನ್ನು ವಂಚನ ಪ್ರಯೋಗದಿಂದಲೂ ಅರ್ಜುನನ್ನು ಬಲಪ್ರಯೋಗದಿಂದಲೂ ಕೊಂದು ಇತರರನ್ನು ಬಂಧನದಲ್ಲಿಡೋಣ'.

ಏವಂಕೃತೇ ನಿಹತಕಂಟಕಮಸ್ಯ ರಾಜ್ಯಂ
ದುರ್ಯೋಧನಸ್ಯ ಹಿ ಭವೇನ್ನತತೋಽನ್ಯಥಾ ಸ್ಯಾತ್ ।
ಅಸ್ಮಿನ್ ಹತೇ ನಿಪತಿತೇ ಚ ಸುರೇಂದ್ರಸೂನೌ
ಶೇಷಾ ಭವೇಯುರಥ ಸೌಬಲಿಪುತ್ರದಾಸಾಃ ॥ ೬೯ ॥

'ಹೀಗೆ ಮಾಡಿದಾಗಲೆ ದುರ್ಯೋಧನನಿಗೆ ರಾಜ್ಯ ನಿಷ್ಕಂಟಕವಾದೀತು. ಬೇರೆ ರೀತಿಯಿಂದ ಆಗದು. ಭೀಮ ಹತನಾಗಬೇಕು. ಅರ್ಜುನನು ಬೀಳಬೇಕು. ಆಗ ಉಳಿದವರು ಕೌರವರ ದಾಸರಾಗುವರು'.

ಭೀಮನಿಗೆ ವಿಷ ಪ್ರಯೋಗ

ಏವಂ ವಿಚಾರ್ಯ ವಿಷಮುಲ್ಬಣಮಂತಕಾಭಂ
ಕ್ಷೀರೋದಧೇರ್ಮಥನಜಂ ತಪಸಾ ಗಿರೀಶಾತ್ ।
ಶುಕ್ರೇಣ ಲಬ್ಧಮಮುತಃ ಸುಬಲಾತ್ಮಜೇನ
ಪ್ರಾಪ್ತಂ ಪ್ರತೋಷ್ಯ ಮರುತಸ್ತನಯಾಯ ಚಾದುಃ ॥ ೭೦ ॥

ಹೀಗೆ ವಿಚಾರ ಮಾಡಿ ಮೃತ್ಯುವಿನಂತೆ ಘೋರವಾದ ವಿಷವನ್ನು ಭೀಮನಿಗೆ ಉಣಿಸಿದರು. ಆ ವಿಷ ಕ್ಷೀರಸಮುದ್ರದ ಮಥನದಿಂದ ಉದ್ಭವಿಸಿದುದು. ಶುಕ್ರಾಚಾರ್ಯರು ತಪಸ್ಸಿನ ಮೂಲಕ ಶಿವನಿಂದ ಪಡೆದುದು. ಶುಕ್ರಾಚಾರ್ಯರನ್ನು ಒಲಿಸಿ ಅವರಿಂದ ಶಕುನಿ ಪಡೆದುದು.

ಸಮ್ಮಂತ್ರ್ಯ ರಾಜತನಯೈರ್ಧೃತರಾಷ್ಟ್ರಜೈಸ್ತು
ದತ್ತಂ ಸ ಸೂದಮುಖತೋಽಖಿಲ ಭಕ್ಷ್ಯಭೋಜ್ಯೇ।
ಜ್ಞಾತ್ವಾ ಯುಯುತ್ಸುಗದಿತಂ ಬಲವಾನ್ ಸ ಭೀಮೋ
ವಿಷ್ಣೋರನುಗ್ರಹಬಲಾಜ್ಜರಯಾಂಚಕಾರ ॥ ೭೧ ॥

ರಾಜಕುಮಾರರೊಡನೆ ಕೌರವರು ಮಂತ್ರಾಲೋಚನೆ ಮಾಡಿ ಅಡುಗೆಯವನ ಮೂಲಕ ಎಲ್ಲ ಭಕ್ಷ್ಯಭೋಜ್ಯಗಳಲ್ಲಿ ವಿಷ ವಿಕ್ಕಿದರು. ಅದನ್ನು ಯುಯುತ್ಸು ಹೇಳಿದ್ದರಿಂದ ಮೊದಲೇ ತಿಳಿದಿದ್ದರೂ ಬಲಿಷ್ಠನಾದ ಭೀಮ ಉಂಡು ವಿಷ್ಣುವಿನ ಅನುಗ್ರಹ ಬಲದಿಂದ ಜೀರ್ಣಿಸಿಕೊಂಡ.

ಗಂಗೆಯ ಮಡುವಿನಲ್ಲಿ ಪ್ರವೇಶ

ಜೀರ್ಣೇ ವಿಷೇ ಕುಮತಯಃ ಪರಮಾಭಿತಪ್ತಾಃ
ಪ್ರಾಸಾದಮಾಶು ವಿದಧುರ್ಹರಿಪಾದತೋಯೇ।
ಜ್ಞಾತ್ವಾ ಯುಯುತ್ಸುಮುಖಿತಃ ಸ್ವಯಮತ್ರ ಚಾಂತೇ
ಸುಷ್ವಾಪ ಮಾರುತಿರಮಾ ಧೃತರಾಷ್ಟ್ರಪುತ್ರೈಃ ॥ ೭೨ ॥

ಭೀಮ ಉಂಡ ವಿಷ ಜೀರ್ಣವಾದಾಗ ದುರ್ಬುದ್ಧಿಗಳಾದ ಕೌರವರು ಬಹಳ ಸಂತಾಪಪಟ್ಟು ಬೇಗನೆ ಗಂಗಾಪ್ರವಾಹದಲ್ಲಿ ಒಂದು ಮಾಳಿಗೆ ಮನೆಯನ್ನು ಕಟ್ಟಿಸಿದರು. ಅದರ ಉದ್ದೇಶವನ್ನೂ ಯುಯುತ್ಸುವಿನ ಮುಖದಿಂದ ಭೀಮ ಮೊದಲೇ ತಿಳಿದರೂ ಆ ಮಾಳಿಗೆ ಮನೆಯಲ್ಲಿ ಕೌರವರೊಂದಿಗೆ ಸಮೀಪದಲ್ಲಿ ತಾನೆ ಮಲಗಿದ.

ದೋಷಾನ್ ಪ್ರಕಾಶಯಿತುಮೇವ ವಿಚಿತ್ರವೀರ್ಯ-
ಪುತ್ರಾತ್ಮಜೇಷು ನೃವರಂ ಪ್ರತಿಸುಪ್ತಮೀಕ್ಷ್ಯ ।

ಬಧ್ವಾಭಿಮಂತ್ರಣ ದೃಢೈರಯಸಾ ಕೃತೈಸ್ತಂ
ಪಾಶೈರ್ವಿಚಿಕ್ಷಿಪುರುದೇ ಹರಿಪಾದಜಾಯಾಃ ॥ ೭೩ ॥

ಕೌರವರ ದುರ್ಬುದ್ಧಿಯನ್ನು ಲೋಕಕ್ಕೆ ತೋರಿಸುವುದಕ್ಕಾಗಿಯೆ ಹಾಗೆ ಮಲಗಿದ್ದ ಜೀವೋತ್ತಮನಾದ ಭೀಮ. ಅದನ್ನು ಕಂಡು ಕೌರವರು ಮಂತ್ರಶಕ್ತಿಯಿಂದ ದೃಢವಾಗಿಸಿದ್ದ ಕಬ್ಬಿಣದ ಸರಪಣಿಗಳಿಂದ ಅವನನ್ನು ಕಟ್ಟಿ ಗಂಗಾಜಲದಲ್ಲಿ ಎಸೆದರು.

ತತ್ಕೋಟಿಯೋಜನಗಭೀರಮುದಂ ವಿಗಾಹ್ಯ
ಭೀಮೋ ವಿಜಂಭೃಣತ ಏವ ವಿವೃಶ್ಚ್ಯ ಪಾಶಾನ್ ।
ಉತ್ತೀರ್ಯ ಸಜ್ಜನಗಣಸ್ಯ ವಿಧಾಯ ಹರ್ಷಂ
ತಸ್ಥಾವನಂತಗುಣವಿಷ್ಣುಸದಾತಿಹಾರ್ದಃ ॥ ೭೪ ॥

ಅನಂತಗುಣಭರಿತನಾದ ವಿಷ್ಣುವಿನಲ್ಲಿ ಸದಾ ಮಹಾಭಕ್ತಿಉಳ್ಳ ಭೀಮ ಕೋಟಿಯೋಜನ ಆಳದ ಆ ಜಲವನ್ನು ಹೊಕ್ಕು ಆಕಳಿಕೆಯಿಂದ ಸರಪಣಿಗಳನ್ನು ಕಡಿದುಕೊಂಡು ಮೇಲೆ ಬಂದು ಸಜ್ಜನ ಸಮುದಾಯಕ್ಕೆ ಹರ್ಷ ಉಂಟುಮಾಡುತ್ತ ನಿಂತ!

ಗಂಗಾನದಿ ಕೆಲವೆಡೆ ವೇಗದಿಂದ ಮಡುಗಳಲ್ಲಿ ನೆಲವನ್ನು ಕೊರೆದು ಕೆಳಗೆ ಇಳಿದು ಘನೋದಕವನ್ನು ಹೊಕ್ಕು ಕೂರ್ಮ ಪೃಷ್ಠ ಪರ್ಯಂತವೂ ಪ್ರವಹಿಸುತ್ತದೆ. ಅದರಿಂದ ಮಾಳಿಗೆ ಮನೆ ಸಮೀಪದಲ್ಲಿ ಮಡು ಒಂದು ಕೋಟಿ ಯೋಜನ ಆಳವಾಗಿತ್ತು. ಅದರಿಂದ ಲಕ್ಷಯೋಜನ ಪ್ರಮಾಣದ ಭೂಮಿಯ ಮೇಲೆ ಗಂಗೆ ಕೋಟಿ ಯೋಜನದಷ್ಟು ಆಳವಾಗಿರುವುದು ಹೇಗೆ ಸಾಧ್ಯ ಎನ್ನಬಾರದು. ಎನ್ನುತ್ತದೆ ವಾದಿರಾಜೀಯ. 'ಪ್ರಮಾಣಕೋಟೇಃ ಸ ಹಿ ಹೇಲಯಾಗಾತ್' ಎಂದು ಸುಮಧ್ವವಿಜಯ ಈ ಮಡುವನ್ನು 'ಪ್ರಮಾಣಕೋಟಿ' ಎಂದು ಕರೆದಿದೆ. ಜನಾರ್ದನೀಯದಲ್ಲಿ ಕೋಟಿ ಎಂದರೆ ಉತ್ಕೃಷ್ಟವಾದ ಯೋಜನ ಪ್ರಮಾಣದ ಮಡು ಎಂದೂ ಒಂದು ವ್ಯಾಖ್ಯಾನವಿದೆ.

ವಿಷಸರ್ಪ ಪ್ರಯೋಗ

ತಂ ವೀಕ್ಷ್ಯ ದುಷ್ಟಮನಸೋಽತಿವಿಷಣ್ಣಚಿತ್ತಾಃ
ಸಮ್ಮಂತ್ರ್ಯ ಭೂಯ ಉರುನಾಗಗಣಾನಥಾಷ್ಟೌ।
ಶುಕ್ರೋಕ್ತಮಂತ್ರಬಲತಃ ಪುರ ಆಹ್ವಯಿತ್ವಾ
ಪಶ್ಚಾತ್ ಸುಪಂಜರಗತಾನ್ ಪ್ರದದುಃ ಸ್ವಸೂತೇ ॥ ೭೫ ॥

ಅವನನ್ನು ನೋಡಿ ದುರ್ಬುದ್ಧಿಗಳಾದ ಕೌರವರು ಅತ್ಯಂತ ವಿಷಣ್ಣಚಿತ್ತರಾಗಿ, ಮತ್ತೂ

ಮಂತ್ರಾಲೋಚನ ಮಾಡಿ, ಎಂಟು ಮಹಾನಾಗಸಮೂಹಗಳನ್ನು ಶುಕ್ರಾಚಾರ್ಯರು ಉಪದೇಶಿಸಿದ ಮಂತ್ರಬಲದಿಂದ ಎದುರಿಗೆ ಆಹ್ವಾನಿಸಿ, ಒಳ್ಳೆಯ ಪಂಜರದಲ್ಲಿ ಹಿಡಿದಿಟ್ಟು ತಮ್ಮ ಸಾರಥಿಯ ವಶದಲ್ಲಿ ಕೊಟ್ಟರು.

'ಅನಂತಂ ವಾಸುಕಿಂ ಚೈವ ತಕ್ಷಂ ಕರ್ಕೋಟಕಂ ತಥಾ।
ಪದ್ಮಂ ಚೈವ ಮಹಾಪದ್ಮಂ ಶಂಖಂ ಚ ಗುಲಿಕಂ ತಥಾ ॥'

ಅನಂತ, ವಾಸುಕಿ, ತಕ್ಷಕ, ಕರ್ಕೋಟಕ, ಪದ್ಮ, ಮಹಾಪದ್ಮ, ಶಂಖ, ಗುಲಿಕ-ಇವರು ಅಷ್ಟಮಹಾನಾಗರು. ಸರ್ವಪೂಜ್ಯರು ಸಂತಾನ ಸೌಭಾಗ್ಯದಾಯಕರು. ಇವರಲ್ಲಿ ಕರ್ಕೋಟಕನಿಗೆ ಕರ್ಕಟ ಎಂದೂ, ಗುಲಿಕನಿಗೆ ಕುಲೀರ ಎಂದೂ ನಾಮಾಂತರವಿದೆ. ಈ ನಾಗರನ್ನೂ ಅವರ ಕುಲದ ಬೇರೆ ಹಾವುಗಳನ್ನೂ ಪಂಜರಗಳಲ್ಲಿ ಹಿಡಿದಿಟ್ಟರು.

ದುರ್ಯೋಧನೇನ ಪೃಥುಮಂತ್ರಬಲೋಪಹೂತಾನ್
ತತ್ಸಾರಥಿಃ ಫಣಿಗಣಾನ್ ಪವನಾತ್ಮಜಸ್ಯ।
ಸುಪ್ತಸ್ಯ ವಿಸ್ತೃತ ಉರಸ್ಯಮುಚದ್ ವಿಶೀರ್ಣ-
ದಂತಾ ಬಭೂವುರಮುಮಾಶು ವಿದಶ್ಯ ನಾಗಾಃ ॥ ೭೬ ॥

ದುರ್ಯೋಧನ ಮಹಾಮಂತ್ರಬಲದಿಂದ ತಂದಿರಿಸಿದ್ದ ಈ ಹಾವುಗಳ ಸಮೂಹಗಳನ್ನು ಅವನ ಸಾರಥಿ ಮಲಗಿದ್ದ ಭೀಮನ ವಿಶಾಲವಾದ ಎದೆಯ ಮೇಲೆ ಬಿಟ್ಟ. ಆ ಹಾವುಗಳು ಭೀಮನನ್ನು ಕಡಿದು ತಕ್ಷಣ ಹಲ್ಲುಗಳನ್ನು ಕಳೆದುಕೊಂಡವು.

ಕ್ಷಿಪ್ತ್ವಾ ಸುದೂರ ಉರುನಾಗಗಣಾನಥಾಷ್ಟೌ
ತದ್ವಂಶಜಾನ್ ಸ ವಿನಿಹತ್ಯ ಪಿಪೀಲಿಕಾವತ್।
ಜಘ್ನೇ ಚ ಸೂತಮಪಹಸ್ತ ಏವ ಭೀಮಃ
ಸುಷ್ವಾಪ ಪೂರ್ವವದನುತ್ಥಿತ ಏವ ತಲ್ಪಾತ್ ॥ ೭೭ ॥

ಭೀಮ ಎಂಟು ಮಹಾನಾಗ ಸಮೂಹಗಳನ್ನು ಬಲುದೂರಕ್ಕೆ ಎಸೆದು ಅವುಗಳ ವಂಶದಲ್ಲಿ ಹುಟ್ಟಿದ ಕೆಟ್ಟ ಹಾವುಗಳನ್ನು ಇರುವೆಗಳಂತೆ ಕೊಂದು ಸಾರಥಿಯನ್ನೂ ಮುಂಗೈಯಿಂದಲೆ ಕೊಂದ. ಹಾಸಿಗೆಯಿಂದ ಏಳದೆ ಹಿಂದಿನಂತೆಯೇ ಮಲಗಿದ.

ಭೀಮಬಲ - ಪ್ರಹ್ಲಾದ ಬಲ

ತತ್ ತಸ್ಯ ನೈಜಬಲಮಪ್ರತಿಮಂ ನಿರೀಕ್ಷ್ಯ
ಸರ್ವೇ ಕ್ಷಿತೀಶತನಯಾ ಅಧಿಕಂ ವಿಷೇದುಃ।

ನಿಶ್ವಾಸತೋ ದರ್ಶನಾದಪಿ ಭಸ್ಮ ಯೇಷಾಂ
ಭೂಯಾಸುರೇವ ಭುವನಾನಿ ಚ ತೇ ಮೃಷಾಸನ್ ॥ ೭೮ ॥

ಭೀಮನ ಅಪ್ರತಿಮವಾದ ಸ್ವಾಭಾವಿಕವಾದ ಬಲವನ್ನು ಕಂಡು ಎಲ್ಲ ರಾಜಕುಮಾರರೂ ಬಹಳ ವಿಷಾದ ಹೊಂದಿದರು. ಯಾವ ಹಾವುಗಳ ನಿಶ್ವಾಸದಿಂದಲೂ ದರ್ಶನದಿಂದಲೂ ಲೋಕಗಳು ಭಸ್ಮವಾಗುವುವೋ ಅವು ವ್ಯರ್ಥವಾದುವು.

ದದ್ಭಿರ್ವಿದಶ್ಯ ನ ವಿಕಾರಮಮುಷ್ಯ ಕರ್ತುಂ
ಶೇಕುರ್ಭುಜಂಗಮವರಾ ಅಪಿ ಸುಪ್ರಯತ್ನಾಃ।
ಕಸ್ಯಾಪಿ ನೇದೃಶಬಲಂ ಶ್ರುತಪೂರ್ವಮಾಸೀತ್
ದೃಷ್ಟಂ ಕಿಮು ಸ್ಮ ತನಯೇಽಪಿ ಹಿರಣ್ಯಕಸ್ಯ ॥ ೭೯ ॥

ಮಹಾಸರ್ಪಗಳು ಹಲ್ಲುಗಳಿಂದ ಕಡಿದು ಬಹಳ ಪ್ರಯತ್ನ ಮಾಡಿಯೂ ಭೀಮನಿಗೆ ನೋವು ಉಂಟು ಮಾಡಲು ಶಕ್ತವಾಗಲಿಲ್ಲ. ಇನ್ನು ಯಾರಿಗೂ ಇಂಥ ಬಲ ಹಿಂದೆ ಕೇಳಿಲ್ಲ. ಕಂಡಿಲ್ಲವೆಂದು ಇನ್ನೇನು ಹೇಳಬೇಕು? ಪ್ರಹ್ಲಾದನಲ್ಲಿಯೂ ಇಂಥ ಬಲವಿತ್ತೆಂದು ಕೇಳಿಲ್ಲ.

ಸ್ವಾತ್ಮಾವನಾರ್ಥಮಧಿಕಾಂ ಸ್ತುತಿಮೇವ ಕೃತ್ವಾ
ವಿಷ್ಣೋಃ ಸ ದೈತ್ಯತನಯೋ ಹರಿಣಾವಿತೋಽಭೂತ್।
ನ ತ್ವೌರಸಂ ಬಲಮಮುಷ್ಯ ಸ ಕೃಷ್ಯತೇ ಹಿ
ಭೃತ್ಯೈರ್ಬಲಾತ್ ಸ್ವಪಿತುರೌರಸಮಸ್ಯ ವೀರ್ಯಮ್ ॥ ೮೦ ॥

ಪ್ಲಹ್ಲಾದ ತನ್ನ ರಕ್ಷಣೆಗಾಗಿ ವಿಷ್ಣುವನ್ನು ಬಹಳ ಸ್ತುತಿ ಮಾಡಿಯೆ ವಿಷ್ಣುವಿನಿಂದ ರಕ್ಷಿತನಾಗಿದ್ದ. ಅವನದು ಸ್ವಾಭಾವಿಕ ಬಲವಲ್ಲ. ಏಕೆಂದರೆ ತನ್ನ ತಂದೆಯ ಭಟರು ಅವನನ್ನು ಬಲಾತ್ಕಾರವಾಗಿ ಸೆಳೆಯುತ್ತಿದ್ದರು. ಭೀಮನ ಬಲ ಸ್ವಾಭಾವಿಕ.

ಭೀಮ ಎಂದೂ ತನ್ನ ರಕ್ಷಣೆಗೆ ಮಂತ್ರಶಕ್ತಿಯನ್ನು ಬಳಸಿಕೊಳ್ಳುತ್ತಿರಲಿಲ್ಲ. ವಿದ್ಯೋಪಜೀವನ ಮಾಡುತ್ತಿರಲಿಲ್ಲ. ಹಾಗೆ ಮಾಡಿದ್ದರೆ ಅದು ಕಾಮ್ಯಕರ್ಮವಾಗುತ್ತಿತ್ತು. ಕಾಮ್ಯಕರ್ಮಿ ಋಜುಯೋಗಿ ಎನಿಸುವುದಿಲ್ಲ. ಭೀಮ ಋಜುಯೋಗಿ.

ಭೀಮದ್ವೇಷ - ಕೃಷ್ಣದ್ವೇಷ

ನೈಸರ್ಗಿಕಂ ಪ್ರಿಯಮಿಮಂ ಪ್ರವದಂತಿ ವಿಪ್ರಾ
ವಿಷ್ಣೋರ್ನಿತಾಂತಮಪಿ ಸತ್ಯಮಿದಂ ಧ್ರುವಂ ಹಿ।
ನೈವಾನ್ಯಥೌರಸಬಲಂ ಭವತೀದೃಶಂ ತ-
ದುತ್ಪಾದ್ಯ ಏವ ಹರಿಣೈಷ ಸಹೈಷನೋಽರ್ಥಃ ॥ ೮೧ ॥

'ವಿಷ್ಣುವಿಗೆ ಭೀಮ ಸ್ವಾಭಾವಿಕವಾಗಿ ಅತ್ಯಂತ ಪ್ರಿಯನೆಂದು ಬ್ರಾಹ್ಮಣರು ಹೇಳುತ್ತಿರುತ್ತಾರೆ. ಇದು ನಿಶ್ಚಯವಾಗಿಯೂ ಸತ್ಯ. ಇಲ್ಲದಿದ್ದರೆ ಇಂಥಾ ಸ್ವಾಭಾವಿಕ ಬಲ ಸರ್ವಥಾ ಇರಲಾರದು. ಅದರಿಂದ ಹರಿಯೊಂದಿಗೇ ಈತನನ್ನು ನಾಶಗೊಳಿಸಬೇಕು. ಇದೇ ನಮಗೆ ಇಷ್ಟ

ಕೃಷ್ಣಃ ಕಿಲೈಷ ಚ ಹರಿರ್ಯದುಷು ಪ್ರಜಾತಃ
ಸೋಽಸ್ಯಾಶ್ರಯಃ ಕುರುತ ತಸ್ಯ ಬಹುಪ್ರತೀಪಮ್ ।
ಸಮ್ಮಂತ್ರ್ಯ ಚೈವಮತಿಪಾಪತಮಾ ನರೇಂದ್ರ-
ಪುತ್ರಾ ಹರೇಶ್ಚ ಬಹು ಚಕ್ರುರಥ ಪ್ರತೀಪಮ್ ॥ ೮೨ ॥

'ಯಾದವರಲ್ಲಿ ಹುಟ್ಟಿದ ಕೃಷ್ಣ ಹರಿಯೇ ಎನ್ನುತ್ತಾರೆ. ಅವನೆ ಈ ಭೀಮನಿಗೆ ಆಶ್ರಯ. ಅದರಿಂದ ಅವನಿಗೇ ಎಲ್ಲರೂ ಬಹಳ ವಿರೋಧ ಮಾಡಿರಿ' ಎಂದು ಮಂತ್ರಾಲೋಚನೆ ಮಾಡಿ ಅತ್ಯಂತ ಪಾಪಿಷ್ಠರಾದ ರಾಜಕುಮಾರರು ಕೃಷ್ಣನಿಗೆ ಬಹಳ ವಿರೋಧ ಮಾಡಿದರು.

ತೈಃ ಪ್ರೇರಿತಾ ನೃಪತಯಃ ಪಿತರಶ್ಚ ತೇಷಾಂ
ಸಾಕಂ ಬೃಹದ್ರಥಸುತೇನ ಹರೇಃ ಸಕಾಶಮ್ ।
ಯುದ್ಧಾಯ ಜಗ್ಮುರಮುನಾಷ್ಟದಶೇಷು ಯುದ್ಧೇ-
ಷ್ವತ್ಯಂತ ಭಗ್ನಬಲದರ್ಪಮದಾ ನಿವೃತ್ತಾಃ ॥ ೮೩ ॥

ಅವರಿಂದ ಪ್ರೇರಿತರಾದ ರಾಜರೂ, ಅವರ ತಂದೆಗಳೂ ಜರಾಸಂಧನೊಡನೆ ಕೃಷ್ಣನ ಬಳಿ ಯುದ್ಧಕ್ಕೆ ಹೋದರು. ಹದಿನೆಂಟು ಯುದ್ಧಗಳಲ್ಲಿಯೂ ಕೃಷ್ಣ ಅವರ ಬಲ ದರ್ಪ ಅಹಂಕಾರಗಳನ್ನು ಬಹಳವಾಗಿ ಮುರಿದ. ಅವರು ಹಿಂತಿರುಗಿದರು.

ತೇನಾಗೃಹೀತರಥವಾಜಿಗಜಾ ನಿತಾಂತಂ
ಶಸ್ತ್ರೈಃ ಪರಿಕ್ಷತತನೂಭಿರಲಂ ವಮಂತಃ।
ರಕ್ತಂ ವಿಶಸ್ತ್ರಕವಚಧ್ವಜವಾಜಿಸೂತಾಃ
ಸ್ರಸ್ತಾಂಬರಾಃ ಶ್ಲಥಿತಮೂರ್ಧಜಿನೋ ನಿವೃತ್ತಾಃ ॥ ೮೪ ॥

ಕೃಷ್ಣ ಅವರ ರಥ ಕುದುರೆ ಆನೆಗಳನ್ನು ಅಪಹರಿಸಿದ. ಶಸ್ತ್ರ ಕವಚ ಧ್ವಜ ಕುದುರೆ ಸಾರಥಿಗಳನ್ನು ನಾಶಪಡಿಸಿದ. ಅವರ ಅಂಗಗಳು ಕೃಷ್ಣನ ಶಸ್ತ್ರಗಳಿಂದ ಬಹಳ ಗಾಯಗೊಂಡುವು. ಬಟ್ಟೆಗಳು ಜಾರಿದವು. ಕೂದಲು ಬಿಚ್ಚಿದುವು. ಚೆನ್ನಾಗಿ ರಕ್ತಕಾರುತ್ತ ಅವರು ಹಿಂತಿರುಗಿದರು.

ಏವಂ ಬೃಹದ್ರಥಸುತೋಽಪಿ ಸುಶೋಚ್ಯರೂಪ
ಆತೋರ್ಣ ಯಯೌ ಬಹುಶ ಏವ ಪುರಂ ಸ್ವಕೀಯಮ್ ।

ಕೃಷ್ಣೇನ ಪೂರ್ಣಬಲವೀರ್ಯಗುಣೇನ ಮುಕ್ತೋ
ಜೀವೇತ್ಯತೀವ ವಿಜಿತಃ ಶ್ವಸಿತಾವಶೇಷಃ ॥ ೮೫ ॥

ಹೀಗೆ ಜರಾಸಂಧನೂ ಅನೇಕ ಬಾರಿ ಬಹಳ ಶೋಚನೀಯ ಆಕಾರದವನಾಗಿ ದುಃಖದಿಂದಲೆ ತನ್ನ ಪಟ್ಟಣಕ್ಕೆ ಹಿಂತಿರುಗಿದ. ಪೂರ್ಣ ಬಲವೀರ್ಯಗುಣಉಳ್ಳ ಕೃಷ್ಣ ಅವನನ್ನು ಬಲು ಪರಾಭವಗೊಳಿಸಿ 'ಬದುಕಿಕೊಳ್ಳು' ಎನ್ನುತ್ತ ಶ್ವಾಸಮಾತ್ರ ಉಳಿಸಿ ಬಿಟ್ಟುಬಿಟ್ಟ.

ಏವಂ ಗತೇಷು ಬಹುಶೋ ನತಕಂಧರೇಷು
ರಾಜಸ್ವಜೋಽಪಿ ಮಧುರಾಂ ಸ್ವಪುರೀಂ ಪ್ರವಿಶ್ಯ।
ರಾಮೇಣ ಸಾರ್ಧಮಖಿಲೈರ್ಯದುಭಿಃ ಸಮೇತೋ
ರೇಮೇ ರಮಾಪತಿರಚಿಂತ್ಯಬಲೋ ಜಯಶ್ರೀಃ ॥ ೮೬ ॥

ಹೀಗೆ ಅನೇಕ ಬಾರಿ ತಲೆ ತಗ್ಗಿಸಿಕೊಂಡು ರಾಜರು ಹೊರಟು ಹೋದಾಗ ಅಚಿಂತ್ಯಶಕ್ತಿಉಳ್ಳ ಕೃಷ್ಣ ಜಯಲಕ್ಷ್ಮೀ ಸಮೇತನಾಗಿ ತನ್ನ ಪಟ್ಟಣವಾದ ಮಧುರೆಯನ್ನು ಪ್ರವೇಶಿಸಿ ರಾಮನಿಂದಲೂ ಮತ್ತು ಎಲ್ಲ ಯಾದವರಿಂದಲೂ ಸಮೇತನಾಗಿ ವಿಹರಿಸಿದ.

ಭೀಮಸೇನ ದಿಗ್ವಿಜಯ

ವ್ಯರ್ಥೋದ್ಯಮಾಃ ಪುನರಪಿ ಸ್ಮ ಸಧಾರ್ತರಾಷ್ಟ್ರಾ
ಭೀಮಂ ನಿಹಂತುಮುರುಯತ್ನಮಕುರ್ವತಾಜ್ಞಾಃ।
ರಾಜ್ಞಾಂ ಸುತಾಸ್ತಮಖಿಲಂ ಸ ಮೃಷ್ಯೈವ ಕೃತ್ವಾ
ಚಕ್ರೇ ಜಯಾಯ ಚ ದಿಶಾಂ ಬಲವಾನ್ ಪ್ರಯತ್ನಮ್ ॥ ೮೭ ॥

ಕೌರವ ಸಮೇತರಾದ ಅಜ್ಞರಾಜಕುಮಾರರು ತಮ್ಮ ಪ್ರಯತ್ನ ವ್ಯರ್ಥವಾದರೂ ಭೀಮನನ್ನು ಕೊಲ್ಲಲು ಪುನಃ ಮಹಾ ಪ್ರಯತ್ನ ಮಾಡಿದರು. ಬಲಿಷ್ಠನಾದ ಭೀಮ ಅದೆಲ್ಲವನ್ನೂ ವ್ಯರ್ಥಗೊಳಿಸಿ ದಿಗ್ವಿಜಯಕ್ಕೆ ಪ್ರಯತ್ನ ಮಾಡಿದ.

ಪ್ರಾಚೀಂ ದಿಶಂ ಪ್ರಥಮಮೇವ ಜಿಗಾಯ ಪಶ್ಚಾತ್
ಯಾಮ್ಯಾಂ ಜಲೇಶಪರಿಪಾಲಿತಯಾ ಸಹಾನ್ಯಾಮ್।
ಯೌ ತೌ ಪುರಾತನದಶಾನನಕುಂಭಕರ್ಣೌ
ಮಾತೃಷ್ವಸಾತನಯತಾಂ ಚ ಗತೌ ಜಿಗಾಯ ॥ ೮೮ ॥

ಭೀಮಸೇನ ಮೊದಲಿಗೆ ಪೂರ್ವದಿಕ್ಕನ್ನು ಗೆದ್ದ. ಬಳಿಕ ದಕ್ಷಿಣ ದಿಕ್ಕನ್ನೂ ಪಶ್ಚಿಮ ಉತ್ತರಗಳನ್ನೂ ಗೆದ್ದ. ಹಿಂದೆ ರಾವಣ ಕುಂಭಕರ್ಣರಾಗಿದ್ದವರು ಭೀಮನ ಚಿಕ್ಕಮ್ಮನ ಮಕ್ಕಳಾಗಿ ಹುಟ್ಟಿದ್ದರು. ಅವರನ್ನೂ ಭೀಮಗೆದ್ದ

ಪೂರ್ವಸ್ತಯೋರ್ಹಿ ದಮಘೋಷಸುತಃ ಪ್ರಜಾತಃ
ಪ್ರಾಹುಶ್ಚ ಯಂ ನೃಪತಯಃ ಶಿಶುಪಾಲನಾಮ್ನಾ।
ಅನ್ಯಂ ವದಂತಿ ಚ ಕರೂಶನೃಪಂ ತಥಾನ್ಯಂ
ಮಾತೃಷ್ವಸಾತನಯಮೇವ ಚ ದಂತವಕ್ರಮ್ ॥ ೮೯ ॥

ಅವರಲ್ಲಿ ಹಿರಿಯನಾದ ರಾವಣ ದಮಘೋಷರಾಜನ ಮಗನಾಗಿ ಹುಟ್ಟಿದ ಅವನನ್ನು ರಾಜರು 'ಶಿಶುಪಾಲ' ಎಂಬ ಹೆಸರಿನಿಂದ ಕರೆಯುತ್ತಾರೆ. ಇನ್ನೊಬ್ಬ ಕರೂಷ ರಾಜನಾಗಿ, ಚಿಕ್ಕಮ್ಮನ ಮಗನಾಗಿ ಹುಟ್ಟಿದ. ಅವನನ್ನು ದಂತವಕ್ರನೆಂದು ಕರೆಯುತ್ತಾರೆ.

ಕರೂಶದೇಶವನ್ನು 'ಕರೂಷ' ಎನ್ನುವುದೂ ಉಂಟು. ದಂತವಕ್ರನೂ 'ದಂತವಕ್ತ್ರ'ನಾಗುತ್ತಾನೆ.

ಜಿತ್ವೈವ ತಾವಪಿ ಜಿಗಾಯ ಚ ಪೌಂಡ್ರಕಾಖ್ಯಂ
ಶೌರೇಃ ಸುತಂ ಸುತಮಜೈದಥ ಭೀಷ್ಮಕಸ್ಯ।
ಯಃ ಪೂರ್ವಮಾಸ ದಿತಿಜೋ ನರಹೇಲ್ವಲಾಖ್ಯೋ
ರುಕ್ಮೀತಿ ನಾಮ ಚ ಬಭೂವ ಸ ಕುಂಡಿನೇಶಃ ॥ ೯೦ ॥

ಭೀಮ ಅವರಿಬ್ಬರನ್ನೂ ಗೆದ್ದು ಪೌಂಡ್ರಕನೆಂಬ ವಸುದೇವಸುತನನ್ನೂ ಗೆದ್ದ. ಬಳಿಕ ಭೀಷ್ಮಕನ ಮಗನಾದ ರುಕ್ಮಿಯನ್ನೂ ಗೆದ್ದ. ಹಿಂದೆ ಇಲ್ವಲನೆಂಬ ನರಹಂತಕ ದೈತ್ಯನಾಗಿದ್ದವನೇ ಕುಂಡಿನಪುರದ ಅಧೀಶನಾಗಿ ರುಕ್ಮಿ ಎಂದು ಪ್ರಸಿದ್ಧನಾಗಿದ್ದ.

ಇಲ್ವಲನೆಂಬ ದೈತ್ಯ ಮಹಾಧನಿಕನಾಗಿದ್ದ. ನನಗೆ ಇಂದ್ರನಂಥ ಬಲಿಷ್ಠನಾದ ಮಗನನ್ನು ಅನುಗ್ರಹಿಸೆಂದು ಒಬ್ಬ ಬ್ರಾಹ್ಮಣನಲ್ಲಿ ಅವನು ಬೇಡಿದ. ಬ್ರಾಹ್ಮಣ ಅಂಥ ಮಗನನ್ನು ಕೊಡಲಿಲ್ಲ. ಅದರಿಂದ ಎಲ್ಲ ಬ್ರಾಹ್ಮಣರನ್ನು ಕೊಲ್ಲಲು ತೊಡಗಿದ. ತಮ್ಮನಾದ ವಾತಾಪಿ ಕಾಮರೂಪಿ. ಅವನು ಕುರಿಯರೂಪ ತಾಳುತ್ತಾನೆ. ಅವನನ್ನು ಕಡಿದು ಮಾಂಸದ ಅಡುಗೆ ಮಾಡಿ ಬ್ರಾಹ್ಮಣರಿಗೆ ಉಣಿಸುತ್ತಾನೆ ಇಲ್ವಲ. ಬಳಿಕ 'ವಾತಾಪಿ ಹೊರಗೆ ಬಾ' ಎಂದು ಕರೆದ ಮಾತ್ರ ವಾತಾಪಿ ಬ್ರಾಹ್ಮಣರ ಹೊಟ್ಟೆ ಬಗಿದು ಹೊರಗೆ ಬರುತ್ತಾನೆ. ಅಗಸ್ತ್ಯರು ಲೋಪಾಮುದ್ರೆ ಎಂಬ ರಾಜಕುಮಾರಿಯನ್ನು ಮದುವೆಯಾಗಲು ಬಯಸಿ ಅವಳ ಕೇಳಿಕೆಯಂತೆ ಧನಸಂಗ್ರಹಕ್ಕಾಗಿ ಇಲ್ವಲನ ಬಳಿಗೆ ಬಂದರೆ ಇಲ್ವಲ ಎಂದಿನಂತೆ ವಾತಾಪಿಯ ಮಾಂಸದ ಅಡುಗೆ ಉಣಿಸಿದ, 'ವಾತಾಪಿ, ಹೊರಗೆ ಬಾ' ಎಂದ. ಅಗಸ್ತ್ಯರು ಅಷ್ಟರಲ್ಲಿ ಅವನನ್ನು ಜೀರ್ಣಿಸಿಕೊಂಡಿದ್ದರು. ಬಳಿಕ ಅವರು ಇಲ್ವಲನಿಂದ ತಮಗೆ ಬೇಕಾದಷ್ಟು ಧನಸಂಪತ್ತನ್ನು ಪಡೆದು ಹೊರಟರು. ಇಲ್ವಲ ಮೋಸದಿಂದ

ಅವರನ್ನು ಕೊಲ್ಲಲು ಯತ್ನಿಸಿ ಮುನಿಯ ಹುಂಕಾರದಿಂದ ಸುಟ್ಟು ಬೂದಿಯಾದನೆಂದು ಭಾರತ ವನಪರ್ವದಲ್ಲಿ ಕತೆ ಇದೆ. ಈ ಇಲ್ವಲನೆ ಕುಂಡಿನಪುರದ ರಾಜನಾದ ಭೀಷ್ಮಕನ ಮಗನಾಗಿ ಹುಟ್ಟಿ ರುಕ್ಮಿ ಎಂಬ ಹೆಸರಿನಿಂದ ಪ್ರಸಿದ್ಧನಾದ.

ಭಾಗೇತ ಏವ ತನಯಸ್ಯ ಸ ಏವ ವಹ್ನೇ
ರ್ನಾಮ್ನಾ ಶುಚೇಃ ಸ ತು ಪಿತಾಸ್ಯ ಹಿ ಮಿತ್ರಭಾಗಃ।
ರಾಹ್ವಂಶಯುಕ್ ತದನುಜೌ ಕ್ರಥ ಕೈಶಿಕಾಖ್ಯೌ
ಭಾಗೌ ತಥಾಗ್ನಿಸುತಯೋಃ ಪವಮಾನಶುಂಧ್ಯೋಃ ॥೯೦॥

ರುಕ್ಮಿ ಶುಚಿನಾಮಕನಾದ ಪ್ರಧಾನ ವಹ್ನಿಪುತ್ರನ ಅಂಶದಿಂದ ಕೂಡಿದವ. ಇವನ ತಂದೆ ಭೀಷ್ಮಕ ಮಿತ್ರನೆಂಬ ಆದಿತ್ಯನ ಅಂಶ. ರಾಹುವಿನ ಅಂಶದಿಂದ ಯುಕ್ತನಾಗಿದ್ದ ಅವನ ತಮ್ಮಂದಿರಾದ ಕ್ರಥ ಕೈಶಿಕರಿಬ್ಬರು ವಹ್ನಿಪುತ್ರರಾದ ಪವಮಾನ ಶುಂಧಿಗಳ ಅಂಶರು.

ರುಕ್ಮಿ ಕೇವಲ ಇಲ್ವಲನೆಂಬ ದೈತ್ಯನೇ ಆಗಿದ್ದರೆ ರುಕ್ಮಿಣಿಗೆ ಸೋದರನಾಗಿ, ಕೃಷ್ಣನಿಗೆ ಭಾವನಾಗಿ, ಸಬಂಧಿಯಾಗುವ ಅರ್ಹತೆ ಬರುತ್ತಿರಲಿಲ್ಲ. ಅವನಲ್ಲಿ ಪ್ರಧಾನಾಗ್ನಿಯ ಪುತ್ರನಾದ ಶುಚಿ ಎಂಬ ಅಗ್ನಿಯ ಒಂದು ಅಂಶವೂ . ಇದ್ದುದರಿಂದ ಆ ಅರ್ಹತೆ ಬಂದಿತ್ತು. ಭೀಷ್ಮಕ ಕೇವಲ ಮಿತ್ರನೆಂಬ ಆದಿತ್ಯನೆ ಆಗಿರುತ್ತಿದ್ದರೆ ರುಕ್ಮಿಣಿಯನ್ನು ಶಿಶುಪಾಲನಿಗೆ ಮದುವೆ ಮಾಡಿ ಕೊಡಲು ಸಿದ್ಧನಾಗುತ್ತಿರಲಿಲ್ಲ. ಅವನಲ್ಲಿ ರಾಹುದೈತ್ಯನ ಅಂಶವಿದ್ದುದರಿಂದ ಹಾಗೆ ಮಾಡಿದ.[1]

ಬಂಧೋರ್ನಿಜಸ್ಯ ತು ಬಲಂ ಸುಪರೀಕ್ಷಮಾಣಃ
ಶಲ್ಯೋಽಪಿ ತೇನ ಯುಯುಧೇ ವಿಜಿತಸ್ತಥೈವ।
ಭೀಮೋ ಜಿಗಾಯ ಯುಧಿ ವೀರಮಥೈಕಲವ್ಯಂ
ಸರ್ವೇ ನೃಪಾಶ್ಚ ವಿಜಿತಾ ಅಮುನೈವಮೇವ ॥೯೨॥

ತನ್ನ ಬಂಧುವಾದ ಭೀಮನ ಬಲವನ್ನು ಪರೀಕ್ಷಿಸುವುದಕ್ಕಾಗಿ ಶಲ್ಯನೂ ಅವನೊಡನೆ ಯುದ್ಧಮಾಡಿದ. ಶಿಶುಪಾಲಾದಿಗಳಂತೆ ಪರಾಜಿತನೂ ಆದ. ಬಳಿಕ ಭೀಮ ಯುದ್ಧದಲ್ಲಿ ವೀರ ಏಕಲವ್ಯನನ್ನೂ ಗೆದ್ದ. ಹೀಗೇ ಎಲ್ಲ ರಾಜರೂ ಭೀಮನಿಂದ ಪರಾಜಿತರಾದರು.

---

1. ಸ ಏವ ಪೂರ್ವೋಕ್ತರುಗ್ಮ್ಯೇವ ನಾಮ್ನಾ ಶುಚೇಃ ವಹ್ನೇಃ ಸುತಸ್ಯ ಭಾಗೇತ ಏವ ಭಾಗೇನಾಂಶೇನ ಇತಃ ಸಹಿತ ಏವ, ನತು ಸ ಏವೇತ್ಯೇವಕಾರಾರ್ಥಃ। ದೈತ್ಯಸ್ಯ ಭಗವತ್ಸಂಬಂಧಿತ್ವಾಯೋಗಾತ್ ಭಾಗೇತ ಇತ್ಯುಕ್ತಂ। ಅಸ್ಯಪಿತಾ ಭೀಷ್ಮಕಃ ಮಿತ್ರಭಾಗಃ ಮಿತ್ರಾಖ್ಯ ಸೂಯಾಂಶಃ ಶಿಶುಪಾಲ ವಿವಾಹೋರರೀಕರಣಾತ್ ರಾಹ್ವಂಶಯುಗಿತ್ಯುಕ್ತಂ। -ವಾದಿರಾಜೀಯ

ತದ್ಭಾಹುವೀರ್ಯಪರಿಪಾಲಿತ ಇಂದ್ರಸೂನುಃ
ಶೇಷಾನ್ ನೃಪಾಂಶ್ಚ ಸಮಜೈದ್ ಬಲವಾನಯತ್ನಾತ್ ।
ಸಾಲ್ವಂ ಚ ಹಂಸಡಿಭಕೌ ಚ ವಿಜಿತ್ಯ ಭೀಮೋ
ನಾಗಾಹ್ವಯಂ ಪುರಮಗಾತ್ ಸಹಿತೋಽರ್ಜುನೇನ ॥ ೯೩ ॥

ಭೀಮನ ಬಾಹುಬಲದಿಂದ ರಕ್ಷಿತನಾಗಿದ್ದ ಬಲಿಷ್ಠನಾದ ಅರ್ಜುನ ಉಳಿದ ರಾಜರನ್ನು ಅನಾಯಾಸವಾಗಿ ಗೆದ್ದ. ಸಾಲ್ವನನ್ನೂ ಹಂಸಡಿಭಕರನ್ನೂ ಗೆದ್ದು ಭೀಮ ಅರ್ಜುನ ಸಮೇತನಾಗಿ ಹಸ್ತಿನಾಪುರವನ್ನು ಸೇರಿದ.

ತದ್ಭಾಹುವೀರ್ಯಮಥ ವೀಕ್ಷ್ಯ ಮುಮೋದ ಧರ್ಮ-
ಸೂನುಃ ಸಮಾತೃಯಮಜೋ ವಿದುರಃ ಸ ಭೀಷ್ಮಃ ।
ಅನ್ಯೇ ಚ ಸಜ್ಜನಗಣಾಃ ಸಹ ಪೌರರಾಷ್ಟ್ರಾಃ
ಶ್ರುತ್ವೈವ ಸರ್ವಯದವೋ ಜಹೃಷುರ್ನಿತಾಂತಮ್ ॥ ೯೪ ॥

ಭೀಮನ ಬಾಹುಬಲವನ್ನು ನೋಡಿ ಧರ್ಮರಾಜನೂ ಕುಂತಿಯೂ ನಕುಲ ಸಹದೇವರೂ ಭೀಷ್ಮವಿದುರರೂ ಇತರ ಸಜ್ಜನ ಸಮೂಹಗಳೂ ಪಟ್ಟಣಿಗರೂ ದೇಶದ ಪ್ರಜೆಗಳೂ ಆನಂದಿಸಿದರು. ಎಲ್ಲ ಯಾದವರು ಕೇಳಿಯೆ ಬಹಳ ಆನಂದಪಟ್ಟರು.

ಧೃತರಾಷ್ಟ್ರನಿಗೆ ಅಕ್ರೂರನ ಉಪದೇಶ

ಕೃಷ್ಣಃ ಸುಯೋಧನಮುಖಾಕ್ರಮಮಾಂಬಿಕೇಯಂ
ಜಾನನ್ ಸ್ವಪುತ್ರವಶವರ್ತಿನಮೇವ ಗತ್ವಾ।
ಶ್ವಾಫಲ್ಕಿನೋ ಗೃಹಮಮುಂ ಧೃತರಾಷ್ಟ್ರಶಾಂತ್ಯೈ
ಗಂತುಂ ದಿದೇಶ ಗಜನಾಮ ಪುರಂ ಪರೇಶಃ ॥ ೯೫ ॥

ಧೃತರಾಷ್ಟ್ರ ದುರ್ಯೋಧನ ಮುಂತಾದವರ ಪ್ರಭಾವಕ್ಕೊಳಗಾದವ, ತನ್ನ ಮಕ್ಕಳ ವಶದಲ್ಲಿಯೆ ಇರುವವ ಎಂದು ತಿಳಿದ ಪರಮೇಶ್ವರನಾದ ಶ್ರೀಕೃಷ್ಣ ಅಕ್ರೂರನ ಮನೆಗೆ ಹೋಗಿ ಅವನನ್ನು ಧೃತರಾಷ್ಟ್ರನ ದುರ್ನಡತೆಯ ನಿವಾರಣೆಗಾಗಿ ಹಸ್ತಿನಾವತಿಗೆ ಹೋಗಲು ಆದೇಶಿಸಿದ.

ಸೋಽಯಾದ್ ಗಜಾಹ್ವಯಮಮುತ್ರ ವಿಚಿತ್ರವೀರ್ಯ-
ಪುತ್ರೇಣ ಭೀಷ್ಮಸಹಿತೈಃ ಕುರುಭಿಃ ಸಮಸ್ತೈಃ।
ಸಂಪೂಜಿತಃ ಕತಿಪಯಾನವಸಚ್ಚ ಮಾಸಾನ್
ಜ್ಞಾತುಂ ಹಿ ಪಾಂಡುಷು ಮನಃಪ್ರಸೃತಿಂ ಕುರೂಣಾಮ್ ॥ ೯೬ ॥

ಅಕ್ರೂರ ಹಸ್ತಿನಾವತಿಯನ್ನು ಸೇರಿದ. ಅಲ್ಲಿ ಧೃತರಾಷ್ಟ್ರ ಭೀಷ್ಮ ಮತ್ತು ಎಲ್ಲ ಕೌರವರೂ

ಅವನನ್ನು ಆದರಿಸಿದರು. ಪಾಂಡವರ ವಿಷಯದಲ್ಲಿ ಕೌರವರ ಮನಃಪ್ರವೃತ್ತಿಯನ್ನು ತಿಳಿದುಕೊಳ್ಳುವುದಕ್ಕಾಗಿ ಕೆಲವು ತಿಂಗಳ ಕಾಲ ಅವನು ಅಲ್ಲಿ ವಾಸಮಾಡಿದ.

ಜ್ಞಾತ್ವಾಸ ಕುಂತಿವಿದುರೋಕ್ತಿತ ಆತ್ಮನಾ ಚ
ಮಿತ್ರಾರಿಮಧ್ಯಮಜನಾಂಸ್ತನಯೇಷು ಪಾಂಡೋಃ।
ವಿಜ್ಞಾಯ ಪುತ್ರವಶಗಂ ಧೃತರಾಷ್ಟ್ರಮಂಜಃ
ಸಾಮ್ನೈವ ಭೇದಸಹಿತೇನ ಜಗಾದ ವಿದ್ವಾನ್ ॥೯೭॥

ಅಕ್ರೂರ ಕುಂತಿವಿದುರರ ಮಾತುಗಳಿಂದಲೂ ಸ್ವಾನುಭವದಿಂದಲೂ ಪಾಂಡವರ ವಿಷಯದಲ್ಲಿ ಮಿತ್ರರನ್ನು ಶತ್ರುಗಳನ್ನು ಮತ್ತು ತಟಸ್ಥರನ್ನು ತಿಳಿದು ಧೃತರಾಷ್ಟ್ರ ಮಕ್ಕಳ ಅಧೀನನೆಂಬುದನ್ನೂ ತಿಳಿದು ನೀತಿಕೋವಿದನಾದ ಅಕ್ರೂರ ಭೇದಯುಕ್ತವಾದ ಸಾಮದಿಂದಲೆ ಅವನಿಗೆ ಚೆನ್ನಾಗಿ ಉಪದೇಶಿಸಿದ.

ಪುತ್ರೇಷು ಪಾಂಡುತನಯೇಷು ಚ ಸಾಮ್ಯವೃತ್ತಿಃ
ಕೀರ್ತಿಂ ಚ ಧರ್ಮಮುರುಮೇಷಿ ತಥಾರ್ಥಕಾಮೌ।
ಪ್ರೀತಿಂ ಪರಾಂ ತ್ವಯಿ ಕರಿಷ್ಯತಿ ವಾಸುದೇವಃ
ಸಾಕಂ ಸಮಸ್ತಯದುಭಿಃ ಸಹಿತಃ ಸುರಾದ್ಯೈಃ ॥೯೮॥

ನೀನು ನಿನ್ನ ಮಕ್ಕಳಲ್ಲಿಯೂ ಪಾಂಡವರಲ್ಲಿಯೂ ಸಮಾನವಾಗಿ ನಡೆದುಕೊಳ್ಳುವುದರಿಂದ ಕೀರ್ತಿಯನ್ನೂ ಮಹತ್ತಾದ ಧರ್ಮವನ್ನೂ ಅರ್ಥಕಾಮಗಳನ್ನೂ ಹೊಂದುವಿ. ಶ್ರೀಕೃಷ್ಣನೂ ಸಮಸ್ತಯಾದವರೂ ದೇವಾದಿಗಳೂ ನಿನ್ನಲ್ಲಿ ಬಹಳ ಪ್ರೀತಿ ಮಾಡುವರು.

ಧರ್ಮಾರ್ಥಕಾಮಸಹಿತಾಂ ಚ ವಿಮುಕ್ತಿಮೇಷಿ
ತತ್ಪ್ರೀತಿತಃ ಸುನಿಯತಂ ವಿಪರೀತವೃತ್ತಿಃ।
ಯಾಸ್ಯೇವ ರಾಜವರ ತತ್ಫಲವೈಪರೀತ್ಯ-
ಮಿತ್ಥಂ ವಚೋ ನಿಗದಿತಂ ತವ ಕಾರ್ಷ್ಣಮದ್ಯ ॥೯೯॥

ಮಹಾರಾಜ, ಕೃಷ್ಣನೊಲಿದನೆಂದರೆ ನೀನು ನಿಶ್ಚಯವಾಗಿ ಧರ್ಮ ಅರ್ಥ ಕಾಮಸಹಿತನಾಗಿ ಮೋಕ್ಷವನ್ನೂ ಹೊಂದುವಿ. ಇದಕ್ಕೆ ವಿಪರೀತವಾಗಿ ನಡೆದುಕೊಂಡೆಯಾದರೆ ನಿಶ್ಚಯವಾಗಿ ವಿಪರೀತ ಫಲವನ್ನೆ ಹೊಂದುವಿ. ಇದು ಕೃಷ್ಣ ನಿನಗೆ ಹೇಳಿ ಕಳಿಸಿರುವ ಮಾತು. ಅದನ್ನು ನಿನಗೆ ಈಗ ಹೇಳಿದ್ದೇನೆ.

ಅಕ್ರೂರನ ಉಪದೇಶ ವಿಫಲ

ಇತ್ಥಂ ಸಮಸ್ತಕುರುಮಧ್ಯ ಉಪಾತ್ತವಾಕ್ಯೋ
ರಾಜಾಪಿ ಪುತ್ರವಶಗೋ ವಚನಂ ಜಗಾದ।

ಸರ್ವಂ ವಶೇ ಭಗವತೋ ನ ವಯಂ ಸ್ವತಂತ್ರಾ
ಭೂಭಾರಸಂಹೃತಿಕೃತೇ ಸ ಇಹಾವತೀರ್ಣಃ ॥ ೧೦೦ ॥

ಎಲ್ಲ ಕೌರವರ ನಡುವೆ ಕುಳಿತಿದ್ದ ರಾಜಾಧೃತರಾಷ್ಟ್ರ ಮಕ್ಕಳ ಅಧೀನನೆ ಆಗಿದ್ದುದರಿಂದ ಅಕ್ರೂರನ ಮಾತನ್ನು ಕೇಳಿ 'ಎಲ್ಲವೂ ಭಗವಂತನ ಅಧೀನ. ನಾವು ಸ್ವತಂತ್ರರಲ್ಲ. ಭೂಭಾರಹರಣಕ್ಕಾಗಿ ಅವನು ಭೂಮಿಯಲ್ಲಿ ಅವತರಿಸಿದ್ದಾನೆ' ಎಂದ.

ಏವಂ ನಿಶಮ್ಯ ವಚನಂ ಸ ತು ಯಾದವೋಽಸ್ಯ
ಜ್ಞಾತ್ವಾಮನೋಽಸ್ಯ ಕಲುಷಂ ತವ ನೈವ ಪುತ್ರಾಃ।
ಇತ್ಯೂಚಿವಾನ್ ಸಹ ಮರುತ್ತನಯಾರ್ಜುನಾಭ್ಯಾಂ-
ಪ್ರಾಯಾತ್ ಪುರೀಂ ಚ ಸಹದೇವಯುತಃ ಸ್ವಕೀಯಾಮ್ ॥ ೧೦೧ ॥

ಹೀಗೆ ಧೃತರಾಷ್ಟ್ರ ಹೇಳಿದ್ದನ್ನು ಕೇಳಿ ಅವನ ಮನಸ್ಸು ಕಲುಷಿತವಾಗಿದೆ ಎಂಬುದನ್ನು ತಿಳಿದು ಅಕ್ರೂರ 'ನಿನ್ನ ಮಕ್ಕಳು ಉಳಿಯುವುದಿಲ್ಲ' ಎಂದ. ಭೀಮಾರ್ಜುನರನ್ನೂ ಸಹದೇವನನ್ನೂ ಜೊತೆಗೆ ಕರೆದುಕೊಂಡು ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಭೀಮಸೇನನ ಗದಾಭ್ಯಾಸ

ಜ್ಞಾನಂ ತು ಭಾಗವತಮುತ್ತಮಮಾತ್ಮಯೋಗ್ಯಂ
ಭೀಮಾರ್ಜುನೌ ಭಗವತಃ ಸಮವಾಪ್ಯ ಕೃಷ್ಣಾತ್।
ತತ್ರೋಷತುರ್ಭಗವತಾ ಸಹ ಯುಕ್ತಚೇಷ್ಟೌ
ಸಂಪೂಜಿತೌ ಯದುಭಿರುತ್ತಮಕರ್ಮಸಾರೌ ॥ ೧೦೨ ॥

ಉತ್ತಮ ಕಾರ್ಯಗಳಿಂದ ಉತ್ತಮರೆನಿಸಿ ಯುಕ್ತವಾದ ಪ್ರವೃತ್ತಿಯನ್ನೆ ಮಾಡುತ್ತಿದ್ದ ಭೀಮಾರ್ಜುನರು ತಮಗೆ ಯೋಗ್ಯವಾದ ಉತ್ತಮ ಭಗವದ್‌ಜ್ಞಾನವನ್ನು ಭಗವಾನ್ ಕೃಷ್ಣನಿಂದಲೆ ಪಡೆದು ಯಾದವರ ಗೌರವಾದರಗಳಿಗೆ ಪಾತ್ರರಾಗಿ ಭಗವಂತನ ಜೊತೆಗೇ ಮಧುರೆಯಲ್ಲಿ ವಾಸ ಮಾಡಿದರು.

ಪ್ರತ್ಯುದ್ಯಮೋ ಭಗವತಾಪಿ ಭವೇದ್ಗದಾಯಾಃ
ಶಿಕ್ಷಾಯದಾ ಭಗವತಾ ಕ್ರಿಯತೇ ನ ಚೇಮಮ್।
ಕುರ್ಯಾಮಿತಿ ಸ್ಮ ಭಗವತ್ಸಮನುಜ್ಞಯೈವ
ರಾಮಾದಶಿಕ್ಷದುರುಗಾಯಪುರಃ ಸ ಭೀಮಃ ॥ ೧೦೩ ॥

ಭೀಮ ಭಗವಂತನೊಡನೆ ತಾನು ಗದಾಭ್ಯಾಸ ಮಾಡುವಾಗ ಭಗವಂತ ತನ್ನ ಮೇಲೆ ಗದೆ ಎತ್ತುತ್ತಾನೆ. ಆಗ ಪ್ರತಿಯಾಗಿ ತಾನೂ ಅವನ ಮೇಲೆ ಗದೆ ಎತ್ತಬೇಕಾಗುವುದು. ನಾನು

ಹಾಗೆ ಮಾಡಲಾರೆ ಎಂಬ ಅಭಿಪ್ರಾಯದಿಂದ ಭಗವಂತನ ಅನುಜ್ಞೆ ಪಡೆದು ಅವನ ಸಂಮುಖದಲ್ಲಿ ಬಲರಾಮನಿಂದಲೆ ಶಿಕ್ಷಣ ಪಡೆದ.

ರಾಮೋಽಪಿ ಶಿಕ್ಷಿತಮರೀಂದ್ರಧರಾತ್ ಪುರೋಽಸ್ಯ
ಭೀಮೇ ದದಾವಥ ಪರಾಣಿ ಹರೇರವಾಪ।
ಅಸ್ತ್ರಾಣಿ ಶಕ್ರತನಯಃ ಸಹದೇವ ಆರ
ನೀತಿಂ ತಥೋದ್ಧವಮುಖಾತ್ ಸಕಲಾಮುದಾರಾಮ್ ॥ ೧೦೪ ॥

ಬಲರಾಮನೂ ಕೃಷ್ಣನಿಂದ ಕಲಿತುದನ್ನು ಅವನ ಸಂಮುಖದಲ್ಲಿ ಭೀಮನಿಗೆ ಹೇಳಿಕೊಟ್ಟ ಅರ್ಜುನ ಕೃಷ್ಣನಿಂದಲೆ ಉತ್ತಮವಾದ ಅಸ್ತ್ರಗಳನ್ನು ಪಡೆದ. ಸಹದೇವ ಉದ್ಧವನ ಮುಖದಿಂದ ಶ್ರೇಷ್ಠವಾದ ಎಲ್ಲ ನೀತಿ ಶಾಸ್ತ್ರವನ್ನೂ ಉಪದೇಶ ಪಡೆದ.

ಬಲರಾಮ ಸಾಂದೀಪನಿಯ ಬಳಿ ಗದಾವಿದ್ಯೆಯನ್ನು ಕಲಿಯುವ ಸಮಯದಲ್ಲಿ ವಿನೋದಕ್ಕಾಗಿ ಕೃಷ್ಣನೊಡನೆಯೂ ಅಭ್ಯಾಸಮಾಡಿ ಅವನಿಂದಲೂ ಅನೇಕ ವರಸೆಗಳನ್ನು ಕಲಿತುಕೊಂಡಿದ್ದ. ಅವುಗಳನ್ನು ಕೃಷ್ಣನ ಅನುಮತಿಯಿಂದ ಅವನ ಸಂಮುಖದಲ್ಲಿ ಭೀಮನಿಗೂ ಕಲಿಸಿದ.[1]

। ನಂದಗೋಕುಲಕ್ಕೆ ಉದ್ಧವ

ಕೃಷ್ಣೋಽಥ ಚೌಪಗವಿಮುತ್ತಮನೀತಿಯುಕ್ತಂ
ಸಂಪ್ರೇಷಯನ್ನಿದಮುವಾಚ ಹ ಗೋಕುಲಾಯ।
ದುಃಖಂ ವಿನಾಶಯ ವಚೋಭಿರರೇ ಮದೀಯೈ
ರ್ನಂದಾದಿನಾಂ ವಿರಹಜಂ ಮಮ ಚಾಶು ಯಾಹಿ ॥ ೧೦೫ ॥

ಕೃಷ್ಣ ಉತ್ತಮ ನೀತಿಜ್ಞನಾದ ಉದ್ಧವನನ್ನು ನಂದಗೋಕುಲಕ್ಕೆ ಕಳಿಸಿಕೊಡುತ್ತ ಹೇಳಿದ 'ನಂದಗೋಪ ಮುಂತಾದವರಿಗೆ ನನ್ನ ವಿರಹದಿಂದಾಗುವ ದುಃಖವನ್ನು ನನ್ನ ಮಾತಿನಿಂದ ಕಳೆ, ಬೇಗನೆ ಹೋಗು.'

ಮತ್ತೋ ವಿಯೋಗ ಇಹ ಕಸ್ಯಚಿದಸ್ತಿ ನೈವ
ಯಸ್ಮಾದಹಂ ತನುಭೃತಾಂ ನಿಹಿತೋಽತರೇವ।
ನಾಹಂ ಮನುಷ್ಯ ಇತಿ ಕುತ್ರ ಚ ವೋಽಸುಬುದ್ಧಿ
ರ್ಬ್ರಹ್ಮೈವ ನಿರ್ಮಲತಮಂ ಪ್ರವದಂತಿ ಮಾಂ ಹಿ ॥ ೧೦೬ ॥

---

1. ಸಾಂದೀಪನಿ ಪುರತಃ ಲೀಲಯಾಽನ್ಯೋನ್ಯಂ ಗದಾಭ್ಯಾಸ ಕರಣಸಮಯೇ ಅರೀಂದ್ರ ಧರಾತ್ ನೂತನತಯಾ ಶಿಕ್ಷಿತಂ ಅಭ್ಯಾಸಂ ಅಸ್ಯ ಕೃಷ್ಣಸ್ಯ ಪುರಃ ಭೀಮೇ ದದಾವಿತಿ ಸಂಬಂಧಃ

–ವಾದಿರಾಜೀಯ

ನಾನು ಎಲ್ಲ ದೇಹಿಗಳ ಒಳಗೇ ಇರುವುದರಿಂದ ಯಾರಿಗೂ ನನ್ನಿಂದ ವಿಯೋಗವಿಲ್ಲ. ನಾನು ಮನುಷ್ಯನೆಂಬ ಭಾವನೆ ನಿಮಗೆ ಎಂದೂ ಇರಕೂಡದು. ನನ್ನನ್ನು ಅತ್ಯಂತ ಶುದ್ಧನಾದ ಬ್ರಹ್ಮನೇ ಎಂದು ಬಲ್ಲವರು ಹೇಳುತ್ತಾರೆ.

ಪೂರ್ವಂ ಯದಾ ಹ್ಯಜಗರೋ ನಿಜಗಾರ ನಂದಂ
ಸರ್ವೇ ನ ಶೇಕುರಥ ತತ್ಪ್ರ ವಿಮೋಕ್ಷಣಾಯ।
ಮತ್ಪಾದಸಂಸ್ಪರ್ಶತಃ ಸ ತದಾತಿದಿವ್ಯೋ
ವಿದ್ಯಾಧರಸ್ತದುದಿತಂ ನಿಖಿಲಂ ಸ್ಮರಂತು ॥ ೧೦೭ ॥

ಹಿಂದೆ ಹೆಬ್ಬಾವು ನಂದಗೋಪನನ್ನು ನುಂಗಿದಾಗ ಅವನನ್ನು ಬಿಡಿಸಲು ಎಲ್ಲರೂ ಅಶಕ್ತರಾದರು. ಆಗ ನನ್ನ ಪಾದಸ್ಪರ್ಶದಿಂದ ಹೆಬ್ಬಾವು ಅತಿದಿವ್ಯ ವಿದ್ಯಾಧರರೂಪ ತಳೆಯಿತು. ಆ ವಿದ್ಯಾಧರ ಆಗ ಹೇಳಿದ್ದನ್ನೆಲ್ಲ ನೀವು ನೆನೆದುಕೊಳ್ಳಿರಿ.

ಪೂರ್ವಂ ಸ ರೂಪಮದತಃ ಪ್ರಜಹಾಸ ವಿಪ್ರಾನ್
ನಿತ್ಯಂ ತಪಃ ಕೃಶತರಾಂಗಿರಸೋ ವಿರೂಪಾನ್।
ತೈಃ ಪ್ರಾಪಿತಃ ಸಪದಿ ಸೋಽಜಗರತ್ವಮೇವ
ಮತ್ತೋ ನಿಜಾಂ ತನುಮವಾಪ್ಯ ಜಗಾದ ನಂದಮ್ ॥ ೧೦೮ ॥

ಹಿಂದೆ ಆ ವಿದ್ಯಾಧರ ಸೌಂದರ್ಯಮದದಿಂದ ನಿರಂತರ ತಪಸ್ಸು ಮಾಡಿ ಬಹಳ ಕೃಶರಾಗಿದ್ದ ಆಂಗೀರಸರೆಂಬ ಬ್ರಾಹ್ಮಣರನ್ನು ಕುರೂಪಿಗಳೆಂದು ಅಪಹಾಸ ಮಾಡಿದ. ಅದರಿಂದ ಕೂಡಲೆ ಹೆಬ್ಬಾವಾಗೆಂದು ಶಾಪ ಪಡೆದ. ನನ್ನಿಂದ ನಿಜರೂಪ ಪಡೆದ ಬಳಿಕ ನಂದನಿಗೆ ಹೇಳಿದ.

ನಾಯಂ ನರೋ ಹರಿರಯಂ ಪರಮಃ ಪರೇಭ್ಯೋ
ವಿಶ್ವೇಶ್ವರಃ ಸಕಲಕಾರಣ ಆತ್ಮತಂತ್ರಃ।
ವಿಜ್ಞಾಯ ಚೈನಮುರುಸಂಸೃತಿತೋ ವಿಮುಕ್ತಾ
ಯಾಂತ್ಯಸ್ಯ ಪಾದಯುಗಲಂ ಮುನಯೋ ವಿರಾಗಾಃ ॥ ೧೦೯ ॥

'ಈ ಕೃಷ್ಣ ಮಾನವನಲ್ಲ. ಉತ್ತಮರಾದ ಬ್ರಹ್ಮಾದಿಗಳಿಗಿಂತ ಉತ್ತಮನಾದ ಹರಿ. ವಿಶ್ವೇಶ್ವರ, ಸರ್ವಕರ್ತ, ಸ್ವತಂತ್ರ. ಇವನನ್ನು ಚೆನ್ನಾಗಿ ತಿಳಿದು ವಿರಕ್ತರಾಗಿ ಸಂಸಾರದಿಂದ ಮುಕ್ತರಾಗಿ ಮುನಿಗಳು ಇವನ ಚರಣ ದ್ವಂದ್ವವನ್ನೆ ಸೇರುತ್ತಾರೆ'.

ಒಂದುದಿನ ಗೊಲ್ಲರೆಲ್ಲರೂ ಕುಲದೇವಿ ಯಾತ್ರೆಗಾಗಿ ಅಂಬಿಕಾವನಕ್ಕೆ ಹೋಗಿ ರಾತ್ರಿ ಅಲ್ಲಿ ಮಲಗಿದ್ದಾಗ ಒಂದು ಹೆಬ್ಬಾವು ನಂದನ ಕಾಲನ್ನು ಹಿಡಿದು ನುಂಗಲು ತೊಡಗಿತು. ಎಲ್ಲ ಗೊಲ್ಲರೂ ಬೆಂಕಿಕೊಳ್ಳಿಗಳಿಂದ

ಹೆಬ್ಬಾವನ್ನು ಹೊಡೆದರೂ ಫಲಕಾರಿಯಾಗಲಿಲ್ಲ. ಕೊನೆಗೆ ಕೃಷ್ಣ ಬಂದು ಒಮ್ಮೆ ಕಾಲಿಂದ ಒದ್ದ. ಒಡನೆ ಹಾವು ವಿದ್ಯಾಧರ ರೂಪು ತಳೆಯಿತು. 'ಯಾರು ನೀನು' ಎಂದು ಕೃಷ್ಣ ಕೇಳಿದ. ಸ್ವತಃ ಸರ್ವಜ್ಞನಾದರೂ ಗೊಲ್ಲರ ತಿಳುವಳಿಕೆಗಾಗಿ ಕೃಷ್ಣ ಹಾಗೆ ಕೇಳಿದ. ಆಗ ಆ ವಿದ್ಯಾಧರ ತನ್ನ ಶಾಪ ವೃತ್ತಾಂತವನ್ನು ತಿಳಿಸಿ ಶ್ರೀಕೃಷ್ಣನ ಸ್ವರೂಪದ ಬಗ್ಗೆ ಗೊಲ್ಲರಿಗೆ ಸರಿಯಾದ ತಿಳಿವಳಿಕೆ ನೀಡಿದ.

ನಂದಂ ಯದಾ ಚ ಜಗೃಹೇ ವರುಣಸ್ಯ ದೂತ
ಸತ್ತ್ವಾಪಿ ಮಾಂ ಜಲಪತೇರ್ಗೃಹಮಾಶು ಯಾಂತಮ್ ।
ಸಂಪೂಜ್ಯ ವಾರಿಪತಿರಾಹ ವಿಮುಚ್ಯ ನಂದಂ
ನಾಯಂ ಸುತಸ್ತವ ಪುಮಾನ್ ಪರಮಃ ಸ ಏಷಃ ॥ ೧೧೦ ॥

ವರುಣನ ಭೃತ್ಯನೊಬ್ಬ ನಂದನನ್ನು ಹಿಡಿದಾಗ ಆಗಲೂ ನಾನು ಬೇಗನೆ ವರುಣನ ಮನೆಗೆ ಹೋದೆ. ವರುಣ ನನ್ನನ್ನು ಸತ್ಕರಿಸಿ ನಂದನನ್ನು ಬಿಡುಗಡೆ ಮಾಡಿ ಹೇಳಿದ. 'ಕೃಷ್ಣ ನಿನ್ನ ಮಗನಲ್ಲ. ಪರಮಪುರುಷ'.

ಒಮ್ಮೆ ನಂದ ಏಕಾದಶಿ ಉಪವಾಸ ಮಾಡಿ ಮರುದಿನ ಬೇಗನೆ ಪಾರಣೆ ಮಾಡುವ ತವಕದಿಂದ ನಡುರಾತ್ರಿಯೆ ಸ್ನಾನಕ್ಕಾಗಿ ಯಮುನೆಯಲ್ಲಿ ಇಳಿದ. ಅದು ಅಕಾಲವಾದ್ದರಿಂದ ವರುಣದೂತನೊಬ್ಬ ನಂದನನ್ನು ಹಿಡಿದು ವರುಣಲೋಕಕ್ಕೆ ಒಯ್ದ. ಬಳಿಕ ಕೃಷ್ಣವರುಣಲೋಕಕ್ಕೆ ಹೋಗಿ ಅವನಿಂದ ಸತ್ಕೃತನಾಗಿ ನಂದನನ್ನು ಬಿಡಿಸಿಕೊಂಡು ಬಂದ.

ಸಂದರ್ಶಿತೋ ನನು ಮಯೈವ ವಿಕುಂಠಲೋಕೋ
ಗೋಜೀವಿನಾಂ ಸ್ಥಿತಿರಪಿ ಪ್ರವರಾ ಮದೀಯಾ ।
ಮಾನುಷ್ಯಬುದ್ಧಿಮಪನೇತುಮಜೇ ಮಯಿ ಸ್ಮ
ತಸ್ಮಾನ್ಮಯಿ ಸ್ಥಿತಿಮವಾಪ್ಯ ಶಮಂ ಪ್ರಯಾಂತು ॥ ೧೧೧ ॥

ವೈಕುಂಠಲೋಕವನ್ನೂ ನಾನೆ ಗೊಲ್ಲರಿಗೆ ತೋರಿದೆನಲ್ಲವೆ? ಜನನರಹಿತನಾದ ನನ್ನ ಬಗ್ಗೆ ಮಾನವನೆಂಬ ಭಾವನೆಯನ್ನು ದೂರಮಾಡಲು ನನ್ನ ಉತ್ತಮ ಮಹಿಮೆಯನ್ನು ತೋರಿದೆ. ಅದರಿಂದ ನೀವೆಲ್ಲರೂ ನನ್ನಲ್ಲಿ ನಿಷ್ಠೆ ಹೊಂದಿ ಮನಃಶಾಂತಿ ಪಡೆಯಿರಿ.'

'ನೀನು ನಾರಾಯಣನೆನ್ನುವುದಾದರೆ ನಿನ್ನ ವೈಕುಂಠಲೋಕವನ್ನು ಒಮ್ಮೆ ನಮಗೆ ತೋರು' ಎಂದು ಗೊಲ್ಲರು ಬೇಡಿಕೊಂಡಾಗ ಕೃಷ್ಣ ಅವರಿಗೆ ವೈಕುಂಠಲೋಕ ತೋರಿದ.

ಶ್ರುತ್ವೋದ್ಧವೋ ನಿಗದಿತಂ ಪರಮಸ್ಯ ಪುಂಸೋ
ವೃಂದಾವನಂ ಪ್ರತಿ ಯಯೌ ವಚನೈಶ್ಚ ತಸ್ಯ ।
ದುಃಖಿಂ ವ್ಯಪೋಹ್ಯ ನಿಖಿಲಂ ಪಶುಜೀವನಾನಾ-
ಮಾಯಾತ್ ಪುನಶ್ಚರಣಸನ್ನಿಧಿಮೇವ ವಿಷ್ಣೋಃ ॥ ೧೧೨ ॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯೇ ಶ್ರೀಕೃಷ್ಣಚರಿತೇ
ಅಸುರಸಂಹಾರೋ ನಾಮ ಚತುರ್ದಶೋಽಧ್ಯಾಯಃ

ಪರಮಪುರುಷ ಶ್ರೀಕೃಷ್ಣ ಹೇಳಿದ್ದನ್ನು ಕೇಳಿ ಉದ್ಧವ ವೃಂದಾವನಕ್ಕೆ ಹೋಗಿ ಆ ಕೃಷ್ಣನ ಮಾತುಗಳಿಂದಲೆ ಎಲ್ಲ ಗೊಲ್ಲರ ದುಃಖವನ್ನು ದೂರಮಾಡಿ ತಿರುಗಿ ಕೃಷ್ಣನ ಚರಣ ಸನ್ನಿಧಿಗೇ ಬಂದ.

ಇಲ್ಲಿಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಅಸುರ ಸಂಹಾರವೆಂಬ
ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೫

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಯಸ್ಮಾದ್ ವ್ಯಾಸಸ್ವರೂಪಾದಪಿ ವಿದಿತಸುವಿದ್ಯಾ ಅವಾಪುಃ ಪ್ರಮೋದಂ
ಪಾರ್ಥಾ ದ್ರೋಣಃ ಸುತಾರ್ಥಂ ಪ್ರತಿಗತಭೃಗುಪೋ ಯನ್ನಿಯತ್ಯಾರ್ಥಕಾಮಃ।
ಯಸ್ಮಾದಾಪ್ತೋರುವಿದ್ಯೋ ದ್ರುಪದಮುಪಗತೋಽನಾಪ್ತಕಾಮೋಽಸ್ತ್ರವಿದ್ಯಾಃ
ಶಿಷ್ಯೇಭ್ಯಃ ಕೌರವೇಭ್ಯೋ ರವಿಜ ನಿರಸನೋಽದಾತ್
ಸನೋಽವ್ಯಾನ್ಮುರಾರಿಃ ॥೧೫॥

ವ್ಯಾಸ ಸ್ವರೂಪನಾದ ಕೃಷ್ಣನಿಂದ ಪಾಂಡವರು ಎಲ್ಲ ವಿದ್ಯೆಗಳನ್ನೂ ತಿಳಿದು ಸಂತೋಷಪಟ್ಟರು. ಅವನಿಚ್ಛೆಯಂತೆ ದ್ರೋಣ ಮಗನಿಗಾಗಿ ಗೋಸಂಪತ್ತನ್ನು ಬಯಸಿ ಪರಶುರಾಮನ ಬಳಿಗೆ ತೆರಳಿದ. ಪರಶುರಾಮನಿಂದ ಬಹಳ ವಿದ್ಯೆಗಳನ್ನು ಪಡೆದು ದ್ರುಪದನ ಬಳಿಗೆ ಬಂದೂ ಬಯಸಿದುದನ್ನು ಹೊಂದಲಿಲ್ಲ. ಕರ್ಣನಿಗೆ ಅಸ್ತ್ರವಿದ್ಯೆಗಳನ್ನು ನಿರಾಕರಿಸಿ ಶಿಷ್ಯರಾದ ಕುರು ಪಾಂಡವರಿಗೇ ಕೊಟ್ಟ ಅಂಥ ಮುರಾರಿ ನಮ್ಮನ್ನು ಕಾಪಾಡಲಿ.

ಹದಿನೈದನೆಯ ಅಧ್ಯಾಯ

ಪಾಂಡವ ಶಸ್ತ್ರಾಭ್ಯಾಸ

ವೇದವ್ಯಾಸರಲ್ಲಿ ಪಾಂಡವರ ವಿದ್ಯಾಭ್ಯಾಸ

॥ ಹರಿಃ ಓಂ ॥

ಏವಂ ಪ್ರಶಾಸತಿ ಜಗತ್ ಪುರುಷೋತ್ತಮೇ೭ಸ್ಮಿನ್
ಭೀಮಾರ್ಜುನೌ ತು ಸಹದೇವಯುತಾವನುಜ್ಞಾಮ್ ।
ಕೃಷ್ಣಾದವಾಪ್ಯ ವರ್ಷತ್ರಿತಯಾತ್ ಪುರಂ ಸ್ವ-
ಮಾಜಗ್ಮತುರ್ಹರಿಸುತೇನ ವಿಶೋಕನಾಮ್ನಾ ॥ ೧ ॥

ಪುರುಷೋತ್ತಮ ಶ್ರೀಕೃಷ್ಣ ಹೀಗೆ ಜಗತ್ತನ್ನು ಆಳುತ್ತಿದ್ದಾಗ ಭೀಮ ಅರ್ಜುನ ಸಹದೇವರು ಅವನ ಬಳಿ ಮೂರು ವರ್ಷಕಾಲವಿದ್ದು ಅವನ ಅನುಮತಿ ಪಡೆದು ಅವನ ಮಗನಾದ ವಿಶೋಕನೊಂದಿಗೆ ಹಸ್ತಿನಾವತಿಗೆ ಹಿಂತಿರುಗಿ ಬಂದರು.

ಸೈರಂಧ್ರಿಕೋದರಭವಃ ಸ ತು ನಾರದಸ್ಯ
ಶಿಷ್ಯೋ ವೃಕೋದರರಥಸ್ಯ ಬಭೂವ ಯಂತಾ ।
ಯಾ ಪಿಂಗಲಾ೭ನ್ಯಭವ ಆತ್ಮನಿ ಸಂಸ್ಥಿತಂ ತಂ
ಸಂಸೃತ್ಯ ಕಾಂತಮುರುಗಾಯಮಭೂತ್ ತ್ರಿವಕ್ರಾ ॥ ೨ ॥

ವಿಶೋಕ ಶ್ರೀಕೃಷ್ಣನಿಂದ ತ್ರಿವಕ್ರೆಯ ಉದರದಲ್ಲಿ ಜನಿಸಿದವ. ನಾರದರ ಶಿಷ್ಯ. ಅವನು ಭೀಮನ ರಥಕ್ಕೆ ಸಾರಥಿಯಾದ. ತ್ರಿವಕ್ರೆ ಪೂರ್ವಜನ್ಮದಲ್ಲಿ ಪಿಂಗಳೆ ಎಂಬ ವೇಶ್ಯೆ ತನ್ನೊಳಗಿದ್ದ ಹರಿಯನ್ನೆ ಪತಿಯೆಂದು ಧ್ಯಾನಿಸಿ ತ್ರಿವಕ್ರೆಯಾಗಿ ಜನಿಸಿದಳು.

ಹರಿಯನ್ನು ಧ್ಯಾನಿಸಿದ್ದರ ಫಲವಾಗಿ ಮಥುರೆಯಲ್ಲಿ ಜನಿಸಿದಳು.
ತ್ರಿವಕ್ರೆಯಾಗಿ ಜನಿಸಿದ್ದು ಪ್ರಾರಬ್ಧವಶದಿಂದ ಎನ್ನುತ್ತದೆ ಸತ್ಯಾಭಿನವೀಯ.

ತಂ ಪಂಚರಾತ್ರವಿದಮಾಪ್ಯ ಸುಸಾರಥಿಂ ಸ
ಭೀಮೋ ಮುಮೋದ ಪುನರಾಪ ಪರಾತ್ಮವಿದ್ಯಾಮ್ ।
ವ್ಯಾಸಾತ್ ಪರಾತ್ಮತ ಉವಾಚ ಚ ಫಲ್ಗುನಾದಿ
ದೈವೇಷು ಸರ್ವವಿಜಯೀ ಪರವಿದ್ಯಯೈಷಃ ॥ ೩ ॥

ಪಂಚರಾತ್ರವೇತ್ತನಾದ ಆ ವಿಶೋಕನನ್ನು ಒಳ್ಳೆಯ ಸಾರಥಿಯನ್ನಾಗಿ ಪಡೆದು ಭೀಮ ಸಂತೋಷಗೊಂಡ. ಬಳಿಕ ಪರವಿದ್ಯಾಬಲದಿಂದ ಸರ್ವತ್ರ ವಿಜಯಿಯಾದ ಭೀಮ ಪುನಃ

ಪರಮಾತ್ಮ ಸ್ವರೂಪರಾದ ವೇದವ್ಯಾಸರಿಂದ ತತ್ವಜ್ಞಾನ ಪಡೆದು ಅರ್ಜುನ ಮುಂತಾದ ದೇವಾಂಶಸಂಭೂತರಿಗೆ ಉಪದೇಶಿಸಿದ.

ಸರ್ವಾನಭಾಗವತಶಾಸ್ತ್ರಪಥಾನ್ ವಿಧೂಯ
ಮಾರ್ಗಂ ಚಕಾರ ಸ ತು ವೈಷ್ಣವಮೇವ ಶುಭ್ರಮ್ ।
ಕ್ರೀಡಾರ್ಥಮೇವ ವಿಜಿಗಾಯ ತಥೋಭಯಾತ್ಮಃ
ಯುದ್ಧೇ ಬಲಂ ಚ ಕರವಕ್ಕ್ಭವೇಽಮಿತಾತ್ಮಾ ॥ ೪ ॥

ಎಲ್ಲ ಅವೈಷ್ಣವಶಾಸ್ತ್ರ ಮಾರ್ಗಗಳನ್ನು ತಡೆದು ಭೀಮ ಶುದ್ಧ ವೈಷ್ಣವ ಮಾರ್ಗವನ್ನೇ ಊರ್ಜಿತಗೊಳಿಸಿದ. ಸರ್ವಜ್ಞನಾದ ಆತ ವಿನೋದಕ್ಕಾಗಿ ಬಾಹುಯುದ್ಧ ವಾಗ್ಯುದ್ಧ ರೂಪವಾದ ಎರಡು ಯುದ್ಧಗಳಲ್ಲಿಯೂ ಬಲರಾಮನನ್ನು ಸೋಲಿಸಿದ.

ನಿತ್ಯಪ್ರಭೂತಸುಶುಭಪ್ರತಿಭೋಽಪಿ ವಿಷ್ಣೋಃ
ಶ್ರುತ್ವಾ ಪರಾಂ ಪುನರಪಿ ಪ್ರತಿಭಾಮವಾಪ ।
ಕೋ ನಾಮ ವಿಷ್ಣ್ವನುಪಜೀವಕ ಆಸ ಯಸ್ಯ
ನಿತ್ಯಾಶ್ರಯಾದಭಿಹಿತಾಽಪಿ ರಮಾ ಸದಾ ಶ್ರೀಃ ॥ ೫ ॥

ಭೀಮಸೇನ ಸದಾ ಬಹಳ ಉತ್ತಮ ಪ್ರತಿಭಾಶಾಲಿಯಾಗಿದ್ದರೂ ವೇದವ್ಯಾಸರಿಂದ ಶಾಸ್ತ್ರಶ್ರವಣ ಮಾಡಿ ಪುನಃ ವಿಶೇಷ ಜ್ಞಾನವನ್ನು ಸಂಪಾದಿಸಿದ. ಹರಿಯನ್ನು ಆಶ್ರಯಿಸದಿರುವವನು ಯಾರು ತಾನೆ ಇದ್ದಾನೆ? ರಮಾದೇವಿಯೂ ಸದಾ ಅವನನ್ನು ಆಶ್ರಯಿಸಿ ಶ್ರೀದೇವಿ ಎನಿಸಿದ್ದಾಳೆ!

ವ್ಯಾಸಾದವಾಪ ಪರಮಾತ್ಮಸುತತ್ತ್ವವಿದ್ಯಾಂ
ಧರ್ಮಾತ್ಮಜೋಽಪಿ ಸತತಂ ಭಗವತ್ಪ್ರಪನ್ನಃ ।
ತೇ ಪಂಚ ಪಾಂಡುತನಯಾ ಮುಮುದುರ್ನಿತಾಂತಂ
ಸದ್ಧರ್ಮಚಾರಿಣ ಉರುಕ್ರಮಶಿಕ್ಷಿತಾರ್ಥಾಃ ॥ ೬ ॥

ಸದಾ ಭಗವಂತನನ್ನು ಆಶ್ರಯಿಸಿದವನಾದ ಧರ್ಮರಾಜನೂ ವ್ಯಾಸರಿಂದಲೆ ಪರಮಾತ್ಮ ತತ್ವಜ್ಞಾನವನ್ನು ಹೊಂದಿದ. ಐದು ಮಂದಿ ಪಾಂಡವರೂ ಸದ್ಧರ್ಮಚಾರಿಗಳಾಗಿ ಹರಿಯಿಂದ ಪುರುಷಾರ್ಥೋಪದೇಶ ಹೊಂದಿ ಬಹಳ ಆನಂದಪಟ್ಟರು.

ಅಶ್ವತ್ಥಾಮ ಹಾಲು ಕುಡಿದ

ಯದಾ ಭರದ್ವಾಜಸುತಸ್ತ್ವಸಂಚಯೀ ಪ್ರತಿಗ್ರಹೋಜ್ಜ್ವೀ ನಿಜಧರ್ಮವರ್ತೀ।
ದ್ರೌಣಿಸ್ತದಾ ಧಾರ್ತರಾಷ್ಟ್ರೈಃ ಸಮೇತ್ಯ ಕ್ರೀಡನ್ ಪಯಃ ಪಾತುಮುಪೈತಿ ಸದ್ಮ ॥ ೭ ॥

ದ್ರೋಣ ಸ್ವಧರ್ಮದಲ್ಲಿದ್ದವ ಸಂಪತ್ತನ್ನು ಕೂಡಿಡುತ್ತಿರಲಿಲ್ಲ. ಇನ್ನೊಬ್ಬರಿಂದ ಸ್ವೀಕರಿಸುತ್ತಲೂ ಇರಲಿಲ್ಲ. ಆಗ ಅವನ ಮಗ ಅಶ್ವತ್ಥಾಮ ಕೌರವರೊಡಗೂಡಿ ಆಟವಾಡುತ್ತಿದ್ದು ಹಾಲು ಕುಡಿಯಲು ಮನೆಗೆ ಬರುತ್ತಿದ್ದ.

ತಸ್ಮೈ ಮಾತಾ ಪಿಷ್ಟಮಾಲೋಡ್ಯ ಪಾತುಂ
ದದಾತಿ ಪೀತ್ವೈತಿ ತದೈಷ ನಿತ್ಯಮ್।
ಪೀತಕ್ಷೀರಾನ್ ಧಾರ್ತರಾಷ್ಟ್ರಾನ್ ಸಮೇತ್ಯ
ಮಯಾ ಪೀತಂ ಕ್ಷೀರಮಿತ್ಯಾಹ ನಿತ್ಯಮ್ ॥ ೮ ॥

ತಾಯಿ ನಿತ್ಯ ಹಿಟ್ಟು ಕಲಸಿ ಅಶ್ವತ್ಥಾಮನಿಗೆ ಕುಡಿಯಲು ಕೊಡುತ್ತಿದ್ದಳು. ಅವನು ಕುಡಿದು ಹೋಗುತ್ತಿದ್ದ. ನಿತ್ಯ ಹಾಲನ್ನೆ ಕುಡಿಯುತ್ತಿದ್ದ ಕೌರವರ ಬಳಿಗೆ ಬಂದು ನಾನು ಹಾಲು ಕುಡಿದೆನೆನ್ನುತ್ತಿದ್ದ.

ನೃತ್ಯಂತಮೇನಂ ಪಾಯಯಾಮಾಸುರೇತೇ ಪಯಃ ಕದಾಚಿದ್ ರಸಮಸ್ಯ ಸೋಽವೈತ್।
ಪುನಃ ಕದಾಚಿತ್ ಸ ತು ಮಾತೃದತ್ತೇ ಪಿಷ್ಟೇ ನೇದಂ ಕ್ಷೀರಮಿತ್ಯಾರುರಾವ ॥ ೯ ॥

ಕುಣಿಯುತ್ತಿದ್ದ ಅಶ್ವತ್ಥಾಮನಿಗೆ ಕೌರವರು ಒಮ್ಮೆ ಹಾಲು ಕುಡಿಸಿದರು. ಅವನು ಅದರ ರುಚಿ ಕಂಡ. ಬಳಿಕ ತಾಯಿ ಹಿಟ್ಟು ಕಲಸಿದ ನೀರನ್ನು ಕೊಟ್ಟಾಗ ಇದು ಹಾಲಲ್ಲವೆನ್ನುತ್ತ ಅಳತೊಡಗಿದ.

ದೃಷ್ಟ್ವಾರುವಂತಂ ಸುತಮಾತ್ಮಜಸ್ಯ
ಸ್ನೇಹಾನ್ನಿಯತ್ಯೈವ ಜನಾರ್ದನಸ್ಯ।
ಸಂಪ್ರೇರಿತಃ ಕೃಪಯಾ ಚಾರ್ತರೂಪೋ
ದ್ರೋಣೋ ಯಯಾವಾರ್ಜಯಿತುಂ ತದಾ ಗಾಮ್ ॥ ೧೦ ॥

ಮಗ ಅಳುವುದನ್ನು ಕಂಡು ದ್ರೋಣ ಹರೀಚ್ಛೆಯಿಂದ ಉಂಟಾದ ಪುತ್ರ ಸ್ನೇಹದಿಂದ ಮತ್ತು ಕರುಣೆಯಿಂದ ಪ್ರೇರಿತನಾಗಿ ದುಃಖಿತನಾಗಿ ಗೋವನ್ನು ಸಂಪಾದಿಸಲು ಹೊರಟ.

ಪರಶುರಾಮರ ಬಳಿಗೆ ದ್ರೋಣ

ಪ್ರತಿಗ್ರಹಾತ್ ಸನ್ನಿವೃತ್ತಃ ಸ ರಾಮಂ
ಯಯೌ ನ ವಿಷ್ಣೋರ್ಹಿ ಭವೇತ್ ಪ್ರತಿಗ್ರಹಃ।
ದೋಷಾಯ ಯಸ್ಮಾತ್ ಸ ಪಿತಾಖಿಲಸ್ಯ
ಸ್ವಾಮೀ ಗುರುಃ ಪರಮಂ ದೈವತಂ ಚ ॥ ೧೧ ॥

ಇನ್ನೊಬ್ಬರಿಂದ ಏನೂ ಸ್ವೀಕರಿಸುವುದನ್ನೇ ಬಿಟ್ಟಿದ್ದರೂ ದ್ರೋಣ ಪರಶುರಾಮನ

ಬಳಿಗೆ ಹೋದ. ಹರಿಯಿಂದ ಸ್ವೀಕರಿಸುವುದು ದೋಷಕರವಲ್ಲ ತಾನೆ! ಏಕೆಂದರೆ ಅವನು ಎಲ್ಲರಿಗೂ ತಂದೆ, ಸ್ವಾಮಿ, ಗುರು ಮತ್ತು ಪರದೇವತೆ!

ದೃಷ್ಟ್ವಾ ಚೈನಂ ಜಾಮದಗ್ನ್ಯೋಽಪ್ಯಚಿಂತಯತ್
ದ್ರೋಣಂ ಕರ್ತುಂ ಕ್ಷಿತಿಭಾರಾಪನೋದೇ।
ಹೇತುಂ ಸುರಾಣಾಂ ನರಯೋನಿಜಾನಾಂ
ಹಂತಾ ಚಾಯಂ ಸ್ಯಾತ್ ಸಹ ಪುತ್ರೇಣ ಚೇತಿ ॥ ೧೨ ॥

ಪರಶುರಾಮ ದ್ರೋಣನನ್ನು ಕಂಡು ಈತ ಮಗನೊಂದಿಗೆ ಮಾನವಯೋನಿಯಲ್ಲಿ ಅವತರಿಸಿದ ದೇವತೆಗಳಿಗೆ ಹಂತಕನಾಗಬಲ್ಲವ ಎಂದು ಅವನನ್ನು ಭೂಭಾರಹರಣ ಕಾರ್ಯದಲ್ಲಿ ನಿಮಿತ್ತವಾಗಿ ಮಾಡಲು ಆಲೋಚಿಸಿದ.

ತೇಷಾಂ ವೃದ್ಧಿಃಸ್ಯಾತ್ ಪಾಂಡವಾರ್ಥೇ ಹತಾನಾಂ
ಮೋಕ್ಷೇಽಪಿ ಸೌಖ್ಯಸ್ಯ ನ ಸಂತತಿಶ್ಚ।
ಯೋಗ್ಯಾ ಸುರಾಣಾಂ ಕಲಿಜಾ ಸುಪಾಪಾಃ
ಪ್ರಾಯೋ ಯಸ್ಮಾತ್ ಕಲಿಜಾಃ ಸಂಭವಂತಿ ॥ ೧೩ ॥

ಪಾಂಡವರಿಗಾಗಿ ಹೋರಾಡಿ ಮಡಿದರೆ ಆ ದೇವತೆಗಳಿಗೆ ಮೋಕ್ಷದಲ್ಲಿ ಆನಂದ ವೃದ್ಧಿಯಾಗುವುದು. ಮತ್ತು ಕಲಿಯುಗದಲ್ಲಿ ಹುಟ್ಟುವ ಸಂತತಿ ಅವರಿಗೆ ಯೋಗ್ಯವೂ ಆಗುವುದಿಲ್ಲ. ಏಕೆಂದರೆ ಕಲಿಯುಗದಲ್ಲಿ ಹುಟ್ಟುವವರು ಪ್ರಾಯಃ ಮಹಾ ಪಾಪಿಗಳಾಗಿರುತ್ತಾರೆ.

ಪುಣ್ಯಕರ್ಮ ಮಾಡದಿದ್ದರೂ ದೇವತೆಗಳಿಗೆ ಮೋಕ್ಷದಲ್ಲಿ ಕ್ಲೃಪ್ತವಾದ ಆನಂದಕ್ಕೆ ಹ್ರಾಸವಿಲ್ಲ. ಆದರೂ ಪುಣ್ಯಕರ್ಮ ಮಾಡಿದರೆ ಕ್ಲೃಪ್ತವಾದ ಆನಂದವೆ ವಿಶೇಷವಾಗಿ ಉಕ್ಕುತ್ತದೆ. ಇದೇ ಆನಂದವೃದ್ಧಿ. ಪಾಂಡವರ ಪಕ್ಷದಲ್ಲಿ ನಿಂತು ಯುದ್ಧಮಾಡಿ ಮಡಿಯುವುದು ದೇವತೆಗಳಿಗೆ ಮಹಾ ಪುಣ್ಯಕರ. ಅದಕ್ಕಾಗಿ ಅವರನ್ನು ಕೌರವರ ಪಕ್ಷದಲ್ಲಿ ನಿಂತು ಕೊಲ್ಲಲು ದ್ರೋಣ ಅಶ್ವತ್ಥಾಮರು ಬೇಕು. ಕೊಲ್ಲುವವನು ಹರಿಯೆ. ಆದರೆ ನಿಮಿತ್ತಮಾತ್ರವಾಗಿ ದ್ರೋಣ ಅಶ್ವತ್ಥಾಮರು ಹೋರಾಡಬೇಕು. ಹೀಗೆ ಸಂಕಲ್ಪಿಸಿ ಪರಶುರಾಮ ದ್ರೋಣನಿಗೆ ಗೋವನ್ನು ಕೊಟ್ಟು ಕಳಿಸದೆ ಅಸ್ತ್ರವಿದ್ಯೆ ಹೇಳಿಕೊಟ್ಟ.

[1]ಕಲಿಯುಗದಲ್ಲಿ ಹುಟ್ಟುವವರೆಲ್ಲ ಪಾಪಿಗಳಲ್ಲ. ಮಧ್ವ ಶಿಷ್ಯಸಂತತಿಯವರು ಧರ್ಮಿಷ್ಠರಾಗಿರುತ್ತಾರೆ. ಅದರಿಂದ 'ಪ್ರಾಯಃ' ಎಲ್ಲರೂ ಪಾಪಿಗಳು ಎನ್ನಲಾಗಿದೆ.

---

1. ಕಲಾವಪಿ ಶುಭಾನಾಂ ಮಧ್ವಶಿಷ್ಯಸಂತತೀನಾಂ ವಿದ್ಯಮಾನತ್ವಾತ್ ಪ್ರಾಯ ಇತ್ಯುಕ್ತಂ
-ವಾದಿರಾಜೀಯ

ನ ದೇವಾನಾಮಾಶತಂ ಪೂರುಷಾ ಹಿ
ಸಂತಾನಜಾಃ ಪ್ರಾಯಶಃ ಪಾಪಯೋಗ್ಯಾಃ।
ನಾಕಾರಣಾತ್ ಸಂತತೇರಪ್ಯಭಾವೋ
ಯೋಗ್ಯಃ ಸುರಾಣಾಂ ಸದಮೋಘರೇತಸಾಮ್ ॥ ೧೪ ॥

ದೇವತೆಗಳ ಸಂತತಿಯಲ್ಲಿ ಹುಟ್ಟುವವರು ನೂರು ತಲೆಗಳವರೆಗೆ ಪ್ರಾಯಃ ಪಾಪಯೋಗ್ಯರಿರುವುದಿಲ್ಲ. ನಿರ್ದುಷ್ಟ ಅಮೋಘ ರೇತಸ್ಸುಳ್ಳ ದೇವತೆಗಳಿಗೆ ಶಾಪಾದಿ ಪ್ರಬಲಕಾರಣವಿಲ್ಲದೆ ಸಂತತಿ ನಿಲ್ಲುವುದೂ ಕೂಡುವುದಿಲ್ಲ.

ಅವ್ಯುಚ್ಛಿನ್ನೇ ಸಕಲಾನಾಂ ಸುರಾಣಾಂ ತಂತೌ ಕಲಿರ್ನೋ ಭವಿತಾ ಕಥಂಚಿತ್।
ತಸ್ಮಾದುತ್ಪಾದ್ಯಾಃ ಸರ್ವ ಏತೇ ಸುರಾಂಶಾ ಏತೇನ ಸಾಕಂ ತನಯೇನ ವೀರಾಃ ॥ ೧೫ ॥

ಎಲ್ಲ ದೇವತೆಗಳ ಸಂತತಿಯೂ ಅವಿಚ್ಛಿನ್ನವಾಗಿ ಮುಂದುವರಿದರೆ ಕಲಿಯುಗ ಸರ್ವಥಾ ಉಂಟಾಗದು. ಅದರಿಂದ ದೇವಾಂಶರಾದ ಈ ವೀರರೆಲ್ಲರೂ ದ್ರೋಣ ಅಶ್ವತ್ಥಾಮರಿಂದ ನಾಶಹೊಂದಬೇಕು.

ಏವಂ ವಿಚಿಂತ್ಯಾಪ್ರತಿಮಃ ಸ ಭಾರ್ಗವೋ ಬಭಾಷ ಈಷತ್‌ಸ್ಮಿತಶೋಚಿಷಾ ಗಿರಾ।
ಅನಂತಶಕ್ತಿಃ ಸಕಲೇಶ್ವರೋಽಪಿ ತ್ಯಕ್ತಂ ಸರ್ವಂ ನಾದ್ಯ ಮಿತ್ತಂ ಮಮಾಸ್ತಿ ॥೧೬॥

ಹೀಗೆ ಆಲೋಚಿಸಿ ಅನುಪಮನಾದ ಪರಶುರಾಮ ಅನಂತಶಕ್ತಿ ಉಳ್ಳವ ಸರ್ವೇಶ್ವರನಾಗಿದ್ದರೂ ಮಂದಹಾಸದ ಕಾಂತಿ ಬೀರುತ್ತ ಹೇಳಿದ, 'ನಾನು ಎಲ್ಲವನ್ನೂ ಕೊಟ್ಟು ಬಿಟ್ಟಿದ್ದೇನೆ. ಈಗ ನನ್ನಲ್ಲಿ ಏನೂ ಸಂಪತ್ತು ಇಲ್ಲ'.

ಆತ್ಮಾ ವಿದ್ಯಾ ಶಸ್ತ್ರಮೇತಾವದಸ್ತಿ ತೇಷಾಂ ಮಧ್ಯೇ ರುಚಿತಂ ತ್ವಂ ಗೃಹಾಣ।
ಉಕ್ತಃ ಸ ಇತ್ಥಂ ಪ್ರವಿಚಿಂತ್ಯ ವಿಪ್ರೋ ಜಗಾದ ಕಸ್ತ್ವದ್‌ಗ್ರಹಣೇ ಸಮರ್ಥಃ ॥ ೧೭ ॥

'ಈಗ ನಾನು, ನನ್ನ ಬ್ರಹ್ಮವಿದ್ಯೆ, ಆಯುಧ- ಇಷ್ಟು ಮಾತ್ರ ಇವೆ. ಅವುಗಳಲ್ಲಿ ನಿನಗೆ ಇಷ್ಟವಾದುದನ್ನು ನೀನು ಪಡೆಯಬಹುದು'. ಪರಶುರಾಮ ಹೀಗೆ ಹೇಳಿದಾಗ ದ್ರೋಣ ಆಲೋಚಿಸಿ ಹೇಳಿದ. 'ನಿನ್ನನ್ನು ಪಡೆದು ಆಳುವ ಸಮರ್ಥರು ಯಾರು?'

ಸರ್ವೇಶಿತಾ ಸರ್ವಪರಃ ಸ್ವತಂತ್ರ-
ಸ್ತ್ವಮೇವ ಕೋಽನ್ಯಃ ಸದೃಶಸ್ತವೇಶ।
ಸಾಮ್ಯಂ ತವೇಚ್ಛನ್ ಪ್ರತಿಯಾತ್ಮಧೋ ಹಿ
ಯಸ್ಮಾನ್ನ ಚೋತ್ತಾತುಮಲಂ ಕದಾಚಿತ್ ॥ ೧೮ ॥

ಸರ್ವೇಶ್ವರ ಸ್ವತಂತ್ರ ಸರ್ವೋತ್ತಮ ನೀನೆ. ಪ್ರಭು, ನಿನಗೆ ಸದೃಶನಿನ್ನೊಬ್ಬ ಯಾರು? ನಿನ್ನ ಸಾಮ್ಯವನ್ನು ಬಯಸುವವ ಅಧೋಗತಿ ಹೊಂದುತ್ತಾನೆ. ಅಲ್ಲಿಂದ ಎಂದೂ ಮೇಲೆ ಬರಲು ಶಕ್ತನಾಗುವುದಿಲ್ಲ. ಇನ್ನು ನಿನ್ನನ್ನು ಆಳಲು ಬಯಸಿದರೆ ಹೇಗೆ?

ಸರ್ವೋತ್ತಮಸ್ಯೇಶ ತವೋಚ್ಚಶಸ್ತ್ರೈಃ ಕಾರ್ಯಂ ಕಿಮಸ್ಮಾಕಮನುದ್ಬಲಾಮ್।
ವಿದ್ಯೈವ ದೇಯಾ ಭವತಾ ತತೋಽಜ ಸರ್ವಪ್ರಕಾಶಿನ್ಯಮಲಾ ಸುಸೂಕ್ಷ್ಮಾ ॥ ೧೯ ॥

ಜನನ ರಹಿತನಾದ ಪ್ರಭುವೆ, ಸರ್ವೋತ್ತಮನಾದ ನಿನ್ನ ಉನ್ನತವಾದ ಆಯುಧಗಳಿಂದ ದುರ್ಬಲರಾದ ನಮಗೆ ಏನು ಪ್ರಯೋಜನ? ಆದ್ದರಿಂದ ನಿರ್ಮಲವಾದ ಅತ್ಯಂತ ಸೂಕ್ಷ್ಮವಾದ ಸರ್ವಪ್ರಕಾಶಕವಾದ ವಿದ್ಯೆಯನ್ನು ನನಗೆ ನೀಡು.

ಶ್ರೀಹರಿಯ ಆಯುಧವನ್ನು ಎತ್ತುವುದಕ್ಕೂ ಇನ್ನೊಬ್ಬರಿಗೆ ಸಾಮರ್ಥ್ಯವಿರುವುದಿಲ್ಲ. ಅಂಥ ದುರ್ಬಲರಿಗೆ ಆ ಆಯುಧದಿಂದೇನು ಪ್ರಯೋಜನ? ಅಶ್ವತ್ಥಾಮನೊಮ್ಮೆ ದ್ವಾರಕೆಗೆ ಬಂದು ಶ್ರೀಕೃಷ್ಣನ ಸುದರ್ಶನಚಕ್ರವನ್ನು ಬೇಡಿದ. ಕೃಷ್ಣ ನಕ್ಕು 'ಎತ್ತಿಕೊಳ್ಳು' ಎಂದ. ಸರ್ವಪ್ರಯತ್ನ ಮಾಡಿದರೂ ಅಶ್ವತ್ಥಾಮನಿಗೆ ಚಕ್ರವನ್ನು ಎತ್ತಲಾಗಲಿಲ್ಲ. ನಾಚಿ ಹಿಂತಿರುಗಿದ ಎಂದು ಸೌಪ್ತಿಕಪರ್ವದಲ್ಲಿ ಹೇಳಿದೆ. ಹಾಗೇ ದ್ರೋಣನೂ ಪರಶುರಾಮನ ಪರಶುವನ್ನೋ, ಬಿಲ್ಲನ್ನೋ ಬೇಡಿದ್ದರೆ ಹಾಸ್ಯಾಸ್ಪದವಾಗುತ್ತಿತ್ತು. ಅದರಿಂದ ವಿದ್ಯೆಯನ್ನೇ ಬೇಡಿ ಪಡೆದು ಧನ್ಯನಾದ.

ಇತೀರಿತಸ್ತತ್ತ್ವವಿದ್ಯಾದಿಕಾಃ ಸ
ವಿದ್ಯಾಃ ಸರ್ವಾಃ ಪ್ರದದೌ ಸಾಸ್ತ್ರಶಸ್ತ್ರಾಃ।
ಅಬ್ದದ್ವಿಪಟ್ಕೇನ ಸಮಾಪ್ಯ ತಾಃ ಸ
ಯಯೌ ಸಖಾಯಂ ದ್ರುಪದಂ ಮಹಾತ್ಮಾ ॥ ೨೦ ॥

ದ್ರೋಣ ಹೀಗೆ ಹೇಳಿದಾಗ ಪರಶುರಾಮ ಅವನಿಗೆ ತತ್ತ್ವವಿದ್ಯೆ ಮುಂತಾದ ಸಕಲ ವಿದ್ಯೆಗಳನ್ನೂ ಜೊತೆಗೆ ಅಸ್ತ್ರಶಸ್ತ್ರ ವಿದ್ಯೆಗಳನ್ನೂ ನೀಡಿದ. ಹನ್ನೆರಡು ವರ್ಷಗಳಲ್ಲಿ ವಿದ್ಯಾಭ್ಯಾಸ ಮುಗಿಸಿ ಮಹಾತ್ಮನಾದ ದ್ರೋಣ ತನ್ನ ಮಿತ್ರನಾದ ದ್ರುಪದನ ಬಳಿಗೆ ನಡೆದ.

ದ್ರುಪದನ ಬಳಿಗೆ ದ್ರೋಣ

ದಾನೇಽರ್ಧರಾಜ್ಯಸ್ಯ ಹಿ ತತ್ಪ್ರತಿಜ್ಞಾಂ
ಸಂಸ್ಮೃತ್ಯ ಪೂರ್ವಾಮುಪಯಾತಂ ಸಖಾಯಮ್।
ಸಖಾ ತವಾಸ್ಮೀತಿ ತದೋದಿತೋಽಪಿ
ಜಗಾದ ವಾಕ್ಯಂ ದ್ರುಪದೋಽತಿದರ್ಪಾತ್ ॥ ೨೧ ॥

ಅರ್ಧರಾಜ್ಯ ಕೊಡುವೆನೆಂದು ದ್ರುಪದ ಹಿಂದೆ ಮಾಡಿದ್ದ ಪ್ರತಿಜ್ಞೆಯನ್ನು ನೆನೆದು ಮಿತ್ರ ದ್ರೋಣ ಅವನ ಬಳಿಗೆ ಬಂದ. 'ನಾ ನಿನ್ನ ಮಿತ್ರ' ಎಂದ. ಆದರೆ ದ್ರುಪದ ಬಲು ದರ್ಪದಿಂದ ಈ ಮಾತನ್ನು ಹೇಳಿದ.

ನ ನಿರ್ಧನೋ ರಾಜಸಖೋ ಭವೇತ
ಯಥೇಷ್ಟತೋ ವಿಪ್ರ ಗಚ್ಛೇತಿ ದೈವಾತ್ ।
ಇತೀರಿತೇಽಸ್ಯಾಶು ಬಭೂವ ಕೋಪೋ
ಜಿತೇಂದ್ರಿಯಸ್ಯಾಪಿ ಮುನೇರ್ಹರೀಚ್ಛಯಾ ॥ ೨೨ ॥

'ದರಿದ್ರನು ಎಂದೂ ರಾಜನಿಗೆ ಮಿತ್ರನೆನಿಸಲಾರ. ಬ್ರಾಹ್ಮಣ, ನೀನು ನಿನ್ನ ಇಷ್ಟಾನುಸಾರ ಹೊರಟುಹೋಗಬಹುದು' ಎಂದು. ದ್ರುಪದ ದೈವಾತ್ ಹೀಗೆ ಹೇಳಿದಾಗ ಹರೀಚ್ಛೆಯಿಂದ ಜಿತೇಂದ್ರಿಯನಾದ ದ್ರೋಣನಿಗೂ ಕೋಪ ಬಂದಿತು.

ಪ್ರತಿಗ್ರಹಾತ್ ಸನ್ನಿವೃತ್ತೇನ ಸೋಽಯಂ ಮಯಾ ಪ್ರಾಪ್ತೋ ಮತ್ಪಿತುಃ ಶಿಷ್ಯಕತ್ವಾತ್ ।
ಪಿತುಃ ಶಿಷ್ಯೋ ಹ್ಯಾತ್ಮ ಶಿಷ್ಯೋ ಭವೇತ ಶಿಷ್ಯಸ್ಯಾರ್ಥಃ ಸ್ವೀಯ ಏವೇತಿ ಮತ್ವಾ॥ ೨೩ ॥

ಈ ದ್ರುಪದ ನನ್ನ ತಂದೆಯ ಶಿಷ್ಯ. ತಂದೆಯ ಶಿಷ್ಯ ನನಗೂ ಶಿಷ್ಯನೆ ಆಗುತ್ತಾನೆ. ಶಿಷ್ಯನ ಸೊತ್ತು ನನ್ನದೆ ಆಗಿರುತ್ತದೆ ಎಂದು ತಿಳಿದು ಪ್ರತಿಗ್ರಹವನ್ನು ತೊರೆದ ನಾನು ಇವನ ಬಳಿಗೆ ಬಂದೆ.

ಸೋಽಯಂ ಪಾಪೋ ಮಾಮವಜ್ಞಾಯ ಮೂಢೋ
ದುಷ್ಟಂ ವಚೋಽಶ್ರಾವಯದಸ್ಯ ದರ್ಪಮ್ ।
ಹನಿಷ್ಯ ಇತ್ಯೇವ ಮತಿಂ ವಿಧಾಯ
ಯಯೌ ಕುರೂನ್ ಶಿಷ್ಯತಾಂ ನೇತುಮೇತಾನ್ ॥ ೨೪ ॥

ಮೂಢನೂ ಪಾಪಿಯೂ ಆದ ಇವನು ನನ್ನನ್ನು ಅವಮಾನಿಸಿ ಕೆಟ್ಟ ಮಾತನ್ನಾಡಿದ್ದಾನೆ. ಇವನ ದರ್ಪವನ್ನು ಮುರಿಯುವೆನು ಎಂದು ನಿರ್ಧಾರ ಮಾಡಿ ದ್ರೋಣ ಕೌರವರ ಬಳಿಗೆ ಅವರನ್ನು ಶಿಷ್ಯರನ್ನಾಗಿ ಮಾಡಿಕೊಳ್ಳಲು ಹೊರಟ.

ಹಸ್ತಿನಾವತಿಗೆ ದ್ರೋಣ

ಪ್ರತಿಗ್ರಹಾದ್ ವಿನಿವೃತ್ತಸ್ಯ ಚಾರ್ಥಃ
ಸ್ಯಾಚ್ಛಿಷ್ಯೇಭ್ಯಃ ಕೌರವೇಭ್ಯೋ ಮಮಾತ್ರ ।
ಏವಂ ಮನ್ವಾನಃ ಕ್ರೀಡತಃ ಪಾಂಡವೇಯಾನ್
ಸಧಾರ್ತರಾಷ್ಟ್ರಾನ್ ಪುರಬಾಹ್ಯತೋಽಖ್ಯತ್ ॥ ೨೫ ॥

ಪ್ರತಿಗ್ರಹವನ್ನು ತೊರೆದ ನನಗೆ ಕೌರವರು ಶಿಷ್ಯರಾದರೆ ಅವರಿಂದ ಅಭೀಷ್ಟ ಸಿದ್ಧಿಯಾದೀತು ಎಂದು ಬಗೆದು ದ್ರೋಣ ನಗರದ ಹೊರಪ್ರದೇಶದಲ್ಲಿ ಆಟವಾಡುತ್ತಿದ್ದ ಪಾಂಡವರನ್ನೂ ಕೌರವರನ್ನೂ ಕಂಡ.

ವಿಕ್ರೀಡತೋ ಧರ್ಮಸೂನೋಸ್ತದೈವ
ಸಹಾಂಗುಲೀಯೇನ ಚ ಕಂದುಕೋಽಪತತ್।
ಕೂಪೇ ನ ಶೇಕುಃ ಸಹಿತಾಃ ಕುಮಾರಾ
ಉದ್ಧರ್ತುಮೇನಂ ಪವಾನಾತ್ಮಜೋಽವದತ್ ॥ ೨೬ ॥

ಆಗಲೇ ಆಟವಾಡುತ್ತಿದ್ದ ಧರ್ಮರಾಜನ ಉಂಗುರವೂ ಚೆಂಡೂ ಬಾವಿಯಲ್ಲಿ ಬಿದ್ದಿತ್ತು. ಕುಮಾರರೆಲ್ಲ ಸೇರಿದರೂ ಅವುಗಳನ್ನು ಎತ್ತಲು ಶಕ್ತರಾಗಿರಲಿಲ್ಲ. ಆಗ ಭೀಮ ಹೇಳಿದ.

ನಿಷ್ಪತ್ಯ ಚೋದ್ಧೃತ್ಯ ಸಮುತ್ಪತಿಷ್ಯೇ
ಕೂಪಾದಮುಷ್ಮಾದ್ ಭೃಶನೀಚಾದಪಿ ಸ್ಮ।
ಸಕಂದುಕಾಂ ಮುದ್ರಿಕಾಂ ಪಶ್ಯತಾದ್ಯ
ಸರ್ವೇ ಕುಮಾರಾ ಇತಿ ವೀರ್ಯಸಂಶ್ರಯಾತ್ ॥ ೨೭ ॥

'ಕುಮಾರರೆ, ನಾನು ನನ್ನ ಶಕ್ತಿಯನ್ನು ಉಪಯೋಗಿಸಿ ಬಾವಿಯಲ್ಲಿ ಮುಳುಗಿ ಬಹು ಆಳವಾದ ಈ ಬಾವಿಯಿಂದಲೂ ಚೆಂಡನ್ನು ಮತ್ತು ಉಂಗುರವನ್ನು ಎತ್ತಿಕೊಂಡು ಮೇಲೆ ಬರುತ್ತೇನೆ, ಎಲ್ಲರೂ ನೋಡಿರಿ.'

ತದಾ ಕುಮಾರಾನವದತ್ ಸ ವಿಪ್ರೋ ಧಿಗಸ್ತ್ರಬಾಹ್ಯಾಂ ಭವತಾಂ ಪ್ರವೃತ್ತಿಮ್।
ಜಾತಾಃ ಕುಲೇ ಭರತಾನಾಂ ನ ವಿತ್ಥ ದಿವ್ಯಾನಿ ಚಾಸ್ತ್ರಾಣಿ ಸುರಾರ್ಚಿತಾನಿ ॥ ೨೮ ॥

ಆಗ ಕುಮಾರರಿಗೆ ದ್ರೋಣ ನುಡಿದ 'ಅಸ್ತ್ರವನ್ನು ಬಿಟ್ಟು ಪ್ರಯತ್ನಿಸುವ ನಿಮ್ಮ ಪ್ರವೃತ್ತಿಗೆ ಧಿಕ್ಕಾರ. ನೀವು ಭರತನ ವಂಶದಲ್ಲಿ ಹುಟ್ಟಿದ್ದೂ ದೇವತೆಗಳು ಪೂಜಿಸುವ ದಿವ್ಯ ಅಸ್ತ್ರಶಸ್ತ್ರಗಳನ್ನು ತಿಳಿದಿಲ್ಲ!'

ಇತೀರಿತಾ ಅಸ್ತ್ರವಿದಂ ಕುಮಾರಾ ವಿಜ್ಞಾಯ
ವಿಪ್ರಂ ಸುರಪೂಜ್ಯಪೌತ್ರಮ್।
ಸಂಪ್ರಾರ್ಥಯಾಮಾಸುರಥೋದ್ಧೃತಿಂ ಪ್ರತಿ
ಪ್ರಧಾನಮುದ್ಯಾಯುತಕಂದುಸ್ಯ ॥ ೨೯ ॥

ದ್ರೋಣ ಹೀಗೆ ಹೇಳಿದಾಗ ಕುಮಾರರು ಅವನನ್ನು ಅಸ್ತ್ರವೇತ್ತನಿರಬಹುದೆಂದು ತಿಳಿದು ಉತ್ತಮವಾದ ಉಂಗುರವನ್ನೂ ಚೆಂಡನ್ನೂ ಎತ್ತಿಕೊಡಲು ಅವನನ್ನೆ ಕೇಳಿಕೊಂಡರು.

ಸ ಚಾಶ್ವಿಷೀಕಾಭಿರಥೋತ್ತರೋತ್ತರಂ
ಸಂಪ್ರಾಸ್ಯ ದಿವ್ಯಾಸ್ತ್ರಬಲೇನ ಕುಂದುಕಮ್ ।
ಉದ್ಧೃತ್ಯ ಮುದ್ರೋದ್ಧರಣಾರ್ಥಿನಃ ಪುನ
ರ್ಜಗಾದ ಭುಕ್ತಿರ್ಮಮ ಕಲ್ಪ್ಯತಾಮಿತಿ ॥ ೩೦ ॥

ದ್ರೋಣ ಬೇಗನೆ ದಿವ್ಯಾಸ್ತ್ರ ಬಲದಿಂದ ಹುಲ್ಲುಕಡ್ಡಿಗಳನ್ನು ಮೇಲಿಂದ ಮೇಲೆ ಎಸೆದು ಅವುಗಳ ಮೂಲಕ ಚೆಂಡನ್ನೆತ್ತಿದ. ಕುಮಾರರು ಪುನಃ ಉಂಗುರವನ್ನೂ ಎತ್ತಲು ಬೇಡಿದಾಗ ದ್ರೋಣ 'ನನಗೆ ಜೀವನೋಪಾಯದ ವ್ಯವಸ್ಥೆ ಮಾಡಿ ಕೊಡಿರಿ' ಎಂದ.

ಯಥೇಷ್ಟವಿತ್ತಾಶನಪಾನಮಸ್ಯ
ಧರ್ಮಾತ್ಮಜಃ ಪ್ರತಿಜಜ್ಞೇ ಸುಶೀಘ್ರಮ್ ।
ತಥೈವ ತೇನೋದ್ಧೃತಮಂಗುಲೀಯಂ
ತ್ರಿವರ್ಗಮುಖ್ಯಾತ್ಮಜವಾಕ್ಯತೋಽನು ॥ ೩೧ ॥

ಧರ್ಮರಾಜ ಬೇಗನೆ, ದ್ರೋಣನಿಗೆ ಯಥೇಚ್ಛ ಧನಸಂಪತ್ತನ್ನೂ ಅನ್ನಪಾನಗಳನ್ನೂ ವ್ಯವಸ್ಥೆ ಮಾಡಿಕೊಡುವೆನೆಂದು ಆಶ್ವಾಸನೆ ನೀಡಿದ. ಧರ್ಮರಾಜನು ಹೀಗೆ ಆಶ್ವಾಸನೆ ನೀಡಿದೊಡನೆ ದ್ರೋಣ ಉಂಗುರವನ್ನೂ ಹಾಗೇ ಎತ್ತಿಕೊಟ್ಟ.

'ತ್ರಿವರ್ಗಮುಖ್ಯಾತ್ಮಜ'ನೆಂದರೆ ಧರ್ಮ ಅರ್ಥ ಕಾಮ ಎಂಬ ತ್ರಿವರ್ಗದಲ್ಲಿ ಮುಖ್ಯವಾದ ಧರ್ಮಕ್ಕೆ ಅಭಿಮಾನಿ ಯಮಧರ್ಮರಾಜ. ಅವನ ಆತ್ಮಜ ಯುಧಿಷ್ಠಿರ ಎಂದರ್ಥ. ಧರ್ಮದಿಂದಲೆ ಅರ್ಥಕಾಮಗಳು ಲಭಿಸುವುದರಿಂದ ಧರ್ಮ ಮುಖ್ಯ. ಪ್ರಕೃತ ದ್ರೋಣನಿಗೂ ಅರ್ಥಕಾಮಗಳ ಭರವಸೆ ಕೊಟ್ಟವನು ಧರ್ಮರಾಜ. ಅದರ ಔಚಿತ್ಯವನ್ನು ಶ್ರೀಮದಾಚಾರ್ಯರು ಈ 'ತ್ರಿವರ್ಗಮುಖ್ಯಾತ್ಮಜ' ಎಂಬ ಬಳಸುಮಾತಿನಿಂದ ಸೂಚಿಸಿದ್ದಾರೆ.

ಪಪ್ರಚ್ಛುರೇನಂ ಸಹಿತಾಃ ಕುಮಾರಾಃ
ಕೋಽಸೀತಿ ಸೋಽಪ್ಯಾಹ ಪಿತಾಮಹೋ ವಃ ।
ವಕ್ತೇತಿ ತೇ ದುದ್ರುವುರಾಶು ಭೀಷ್ಮಂ
ದ್ರೋಣೋಽಯಮಿತ್ಯೇವ ಸ ತಾಂಸ್ತದೋಚೇ ॥ ೩೨ ॥

ಆಗ ಕುಮಾರರೆಲ್ಲರೂ ಸೇರಿ ದ್ರೋಣನನ್ನು ನೀನಾರೆಂದು ಕೇಳಿದರು. ದ್ರೋಣ ಹೇಳಿದ, 'ನಿಮ್ಮ ತಾತ ಹೇಳುತ್ತಾನೆ, ಕೇಳಿ. 'ಕುಮಾರರು ಬೇಗನೆ ತಾತನಾದ ಭೀಷ್ಮನ ಬಳಿಗೆ ಓಡಿದರು. ಆಗ ಭೀಷ್ಮ ಅವರಿಗೆ 'ಈತ ದ್ರೋಣ' ಎಂದ.

ಕುಮಾರರ ಜೊತೆಗೆ ಅಶ್ವತ್ಥಾಮನಿರಲಿಲ್ಲವೆ? ಅವನಿದ್ದಾಗ ಕುಮಾರರು ಭೀಷ್ಮರಲ್ಲಿ ದ್ರೋಣರ ಪರಿಚಯ ಕೇಳಬೇಕಿತ್ತೇ? ಎಂಬ ಪ್ರಶ್ನೆಗೆ ವಾದಿರಾಜೀಯದಲ್ಲಿ

ಹೀಗೆ ಸಮಾಧಾನವಿದೆ - ದ್ರೋಣ ಪರಶುರಾಮರಲ್ಲಿ ಹನ್ನೆರಡು ವರ್ಷ ದೀರ್ಘಕಾಲ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿ ಅಶ್ವತ್ಥಾಮನೆ ಶಿಲೋಂಛವೃತ್ತಿಯಿಂದ ತಾಯಿಯ ಪೋಷಣೆ ಮಾಡಬೇಕಾಯಿತು. ಅದರಿಂದ ಅವನು ರಾಜಕುಮಾರರ ಜೊತೆಗೆ ಆಟದಲ್ಲಿಸೇರಿಕೊಳ್ಳುತ್ತಿರಲಿಲ್ಲ. ಹೀಗಾಗಿ ದ್ರೋಣ ಬಂದಾಗ ಕುಮಾರರ ನಡುವೆ ಅಶ್ವತ್ಥಾಮನಿರಲಿಲ್ಲ.

ನ ರಾಜಗೇಹಂ ಸ ಕದಾಚೇದಿತಿ
ತೇನಾದೃಷ್ಟಃ ಸ ಕುಮಾರೈಃ ಪುರಾತಃ।
ಭೀಷ್ಮೋ ವಿದ್ಯಾಸ್ತೇನ ಸಹೈವ ಚಿಂತಯ-
ನ್ನಸ್ತ್ರಪ್ರಾಪ್ತಿಂ ತಸ್ಯ ಶುಶ್ರಾವ ರಾಮಾತ್ ॥ ೩೩ ॥

ದ್ರೋಣ ಎಂದೂ ಅರಮನೆಗೆ ಹೋಗುತ್ತಿರಲಿಲ್ಲ. ಅದರಿಂದ ಕುಮಾರರು ಹಿಂದೆ ಎಂದೂ ಅವನನ್ನು ಕಂಡಿರಲಿಲ್ಲ. ಆದರೆ ಭೀಷ್ಮ ದ್ರೋಣನೊಡನೆ ಶಾಸ್ತ್ರಾರ್ಥ ವಿಚಾರ ಮಾಡುತ್ತಿದ್ದುದನ್ನು ಚಾರರ ಮೂಲಕ ಕೇಳಿ ತಿಳಿದಿದ್ದ.

ಕುಮಾರರಿಗೆ ಅಶ್ವತ್ಥಾಮ ಸ್ನೇಹಿತನಾದರೂ ದ್ರೋಣನ ಮುಖಪರಿಚಯವೆ ಇಲ್ಲದಂತಾಗಿರಲು ಏನು ಕಾರಣವೆಂದು ಇಲ್ಲಿ ನಿರೂಪಿತವಾಗಿದೆ. ದ್ರೋಣ ಪ್ರತಿಗ್ರಹವರ್ಜಿತನಾದ್ದರಿಂದ ಅರಮನೆಗೆ ಹೋಗುತ್ತಿದ್ದಿಲ್ಲ. ಹೋದರೆ ಪ್ರತಿಗ್ರಹ ಮಾಡಬೇಕಾಗುತ್ತದೆ ಎಂದು. ಅದರಿಂದ ದ್ರೋಣರೊಡನೆ ಶಾಸ್ತ್ರಾರ್ಥ ವಿಚಾರವಿನಿಮಯ ಮಾಡಬೇಕೆಂದರೆ ಸ್ವಯಂ ಭೀಷ್ಮನೆ ಅರಮನೆಯಿಂದ ದ್ರೋಣರ ಎಲೆಮನೆಗೆ ಬರುತ್ತಿದ್ದ. ಕುಮಾರರಿಗೆ ದ್ರೋಣನ ಪರಿಚಯವಾಗಲು ಅವಕಾಶವಿರಲಿಲ್ಲ.

ಶ್ರುತ್ವಾ ವೃದ್ಧಂ ಕೃಷ್ಣವರ್ಣಂ ದ್ವಿಜಂ ತಂ
ಮಹಾಸ್ತ್ರವಿದ್ಯಾಮಪಿ ತಾಂ ಮಹಾಮತಿಃ।
ದ್ರೋಣಂ ಜ್ಞಾತ್ವಾತಸ್ಯ ಶಿಷ್ಯತ್ವ ಏತಾನ್
ದದೌ ಕುಮಾರಾಂಸತ್ರ ಗತ್ವಾಸ್ವಯಂ ಚ ॥ ೩೪ ॥

ಮಹಾಜ್ಞಾನಿಯಾದ ಭೀಷ್ಮ ಆ ಬ್ರಾಹ್ಮಣ ಕಪ್ಪುಬಣ್ಣದವ, ವೃದ್ಧನೆಂದು ಕೇಳಿ, ಅವನ ಆ ಮಹಾ ಅಸ್ತ್ರವಿದ್ಯೆಯನ್ನೂ ಕೇಳಿ, ಆತ ದ್ರೋಣನೆ ಎಂದು ತಿಳಿದು, ತಾನೆ ಅಲ್ಲಿಗೆ ಹೋಗಿ ಕುಮಾರರನ್ನು ಅವನಲ್ಲಿ ವಿದ್ಯಾಭ್ಯಾಸಕ್ಕೆ ಒಪ್ಪಿಸಿಕೊಟ್ಟ.

ಕೇವಲ ಹುಲ್ಲುಕಡ್ಡಿಗಳಿಂದಲೆ ಬಾವಿಯಿಂದ ಉಂಗುರ ಚೆಂಡುಗಳನ್ನು ಎತ್ತಬಲ್ಲ ಮಹಾ ಅಸ್ತ್ರವಿದ್ಯೆ ಇದೆ ಎಂದರೆ ಅವನು ದ್ರೋಣನೆ ಇರಬೇಕೆಂದು ಊಹಿಸಿದ ಭೀಷ್ಮ.

ದ್ರೋಣನ ಮೆಚ್ಚಿನ ಶಿಷ್ಯ ಅರ್ಜುನ

ದ್ರೋಣೋಽಥ ತಾನವದದ್ ಯೋ ಮದಿಷ್ಟಂ
ಕರ್ತುಂ ಪ್ರತಿಜ್ಞಾಂ ಪ್ರಥಮಂ ಕರೋತಿ।
ತಂ ಧನ್ವಿನಾಂ ಪ್ರವರಂ ಸಾಧಯಿಷ್ಯ
ಇತ್ಯರ್ಜುನಸ್ತಾಮಕರೋತ್ ಪ್ರತಿಜ್ಞಾಮ್ ॥ ೩೫ ॥

ದ್ರೋಣ ಕುಮಾರರಿಗೆ ಹೇಳಿದ, 'ಯಾರು ಮೊದಲಿಗೆ ನನ್ನ ಇಷ್ಟವನ್ನು ಸಾಧಿಸಿಕೊಡಲು ಪ್ರತಿಜ್ಞೆಮಾಡುವನೋ ಅವನನ್ನು ನಾನು ಧನುರ್ಧಾರಿಗಳಲ್ಲಿ ಮೊದಲಿಗರನ್ನಾಗಿ ಮಾಡುವೆನು' ಎಂದು. ಆಗ ಅರ್ಜುನ ಆ ಪ್ರತಿಜ್ಞೆಯನ್ನು ಮಾಡಿದ.

ಉನ್ಮಾದನಾದೀನಿ ಸ ವೇದ ಕೃಷ್ಣಾದಸ್ತ್ರಾಣ್ಯನಾಪತ್ಸು ನ ತಾನಿ ಮುಂಚೇತ್।
ಇತ್ಯಾಜ್ಞಯಾ ಕೇಶವಸ್ಯಾಪರಾಣಿ ಪ್ರಯೋಗಯೋಗ್ಯಾನಿ ಸದೇಚ್ಛತಿ ಸ್ಮ ॥ ೩೬ ॥

ಅರ್ಜುನ ಉನ್ಮಾದನಾದಿ ಅಸ್ತ್ರಗಳನ್ನು ಶ್ರೀಕೃಷ್ಣನಿಂದಲೆ ತಿಳಿದಿದ್ದ. ಆದರೆ ಅವುಗಳನ್ನು ಆಪತ್ತಿನಲ್ಲಿ ಹೊರತು ಬೇರೆಕಾಲದಲ್ಲಿ ಪ್ರಯೋಗಿಸುವಂತಿಲ್ಲ. ಅದರಿಂದ ಕೃಷ್ಣನ ಅನುಮತಿಯಿಂದಲೆ ಸದಾ ಪ್ರಯೋಗಕ್ಕೆ ಯೋಗ್ಯವಾದ ಅಸ್ತ್ರಗಳನ್ನು ದ್ರೋಣನಿಂದ ಕಲಿಯಲು ಬಯಸಿದ.

ಭೀಷ್ಮಾದಿಭಿರ್ಭವಿತಾ ಸಂಗರೋ ನ
ಸದ್ಯಾ ನಾಹಂ ಗುರುಭಿರ್ನಿತ್ಯಯೋದ್ಧಾ।
ಭವೇಯಮೇಕಃ ಫಲ್ಗುನೋಽಸ್ತ್ರಜ್ಞ ಏಷಾಂ
ನಿವಾರಕಶ್ಚೇನ್ಮಮ ಧರ್ಮಲಾಭಃ ॥ ೩೭ ॥

ಭೀಮ ಪ್ರತಿಜ್ಞೆಯನ್ನು ಮಾಡಲಿಲ್ಲ. ಏಕೆಂದರೆ, 'ಭೀಷ್ಮಾದಿಗಳೊಡನೆ ನಮಗೆ ಯುದ್ಧವಾಗಲಿದೆ. ಆಗ ನಾನು ಆ ಹಿರಿಯರೊಡನೆ ಎಂದೂ ಯುದ್ಧ ಮಾಡಲಾರೆನು. ಆಗ ಅಸ್ತ್ರಜ್ಞನಾದ ಒಬ್ಬ ಅರ್ಜುನ ಅವರನ್ನು ಇದಿರಿಸುವವನಾಗಿದ್ದರೆ ನನಗೆ ಪುಣ್ಯ ಲಾಭವಾಗುವುದು.' ಅರ್ಜುನನಿಗಿಂತ ಹೆಚ್ಚು ಸಮರ್ಥನಾದ ಭೀಮ ಪ್ರತಿಜ್ಞೆ ಮಾಡದೆ ಏಕೆ ಸುಮ್ಮನಿದ್ದನೆಂದರೆ ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ಭೀಷ್ಮಾದಿಗಳೊಡನೆ ಹೋರಾಡುವ ಪ್ರಸಂಗ ಬರುತ್ತದೆ. ಯದ್ಯಪಿ 'ನಾರಾಯಣಧ್ವಿಟ್' 'ತದನುಬಂಧಿ'ಗಳಿಬ್ಬರ ನಿಗ್ರಹವೂ ಕ್ಷತ್ರಿಯರಿಗೆ ಪರಮಧರ್ಮವಾದ್ದರಿಂದ ಭೀಷ್ಮಾದಿಗಳು ದುರ್ಯೋಧನಾದಿಗಳ ಅನುಬಂಧಿಗಳಾಗಿದ್ದು ನಿಗ್ರಹಯೋಗ್ಯರೇ. ಆದರೆ ಅವರು ಸ್ವಭಾವತಃ ದುಷ್ಟರಾಗಿದ್ದರೆ ಮಾತ್ರ ಸ್ವತಃ ನಿಗ್ರಹ ಮಾಡಲು ಯೋಗ್ಯರೆನಿಸುವರು. ಭೀಷ್ಮಾದಿಗಳು ಸ್ವಭಾವತಃ

ದುಷ್ಟರಲ್ಲ. ಭೂಭಾರಹರಣ ಕಾರ್ಯದಲ್ಲಿ ಶ್ರೀಹರಿಗೆ ಸೇವೆ ಮಾಡುವ ಸಜ್ಜನರು ಅವರು. ಮತ್ತು ಗುರುಗಳು. ಅದರಿಂದ ಅವರನ್ನು ಸ್ವತಃ ನಿಗ್ರಹಿಸದೆ ಇನ್ನೊಬ್ಬರ ಮೂಲಕ ನಿಗ್ರಹಿಸಿದರೆ ಹೆಚ್ಚು ಪುಣ್ಯಕರವಾಗುವುದು. ಅದಕ್ಕೆ ಅರ್ಜುನನನ್ನು ಭೀಷ್ಮಾದಿಗಳಿಗೆ ಪ್ರತಿದ್ವಂದ್ವಿಯನ್ನಾಗಿ ಮಾಡಬೇಕು ಎಂದು ಭೀಮ ಅವನಿಂದಲೆ ಪ್ರತಿಜ್ಞೆ ಮಾಡಿಸುತ್ತಾನೆ, ತಾನು ಮಾಡುವುದಿಲ್ಲ.

ಇಲ್ಲಿ ಭೀಮ ಭೀಷ್ಮಾದಿಗಳನ್ನು ನಿಗ್ರಹಿಸದಿರುವುದು ಪುಣ್ಯಕರವೆನ್ನುತ್ತಿದ್ದಾನೆ. ಗೀತಾತಾತ್ಪರ್ಯದಲ್ಲಿ ವಿಷ್ಣುದ್ವೇಷಿಗಳ ಅನುಬಂಧಿಗಳನ್ನು ನಿಗ್ರಹಿಸುವುದು ಪರಮ ಪುಣ್ಯಕರ ಎಂದಿದೆ. ಪರಸ್ಪರ ವಿರೋಧವಲ್ಲವೆ ಎಂಬ ಶಂಕೆಯನ್ನು ಎತ್ತಿಕೊಂಡು ಜನಾರ್ದನೀಯದಲ್ಲಿ ಮೇಲಿನಂತೆ ಸಮಾಧಾನಿಸಲಾಗಿದೆ.[1]

ನ ಬುದ್ಧಿಪೂರ್ವಂ ವರ ಇಂದಿರಾಪತೇ-
ರನ್ಯತ್ರ ಮೇ ಗ್ರಾಹ್ಯ ಇತಶ್ಚ ಜಿಷ್ಣುಃ।
ಕರೋತು ಗುರ್ವರ್ಥಮಿತಿ ಸ್ಮ ಚಿಂತಯನ್
ಭೀಮಃ ಪ್ರತಿಜ್ಞಾಂ ನ ಚಕಾರ ತತ್ರ ॥ ೩೮ ॥

ಶ್ರೀಹರಿಯಿಂದ ಹೊರತು ಬೇರೆಯವರಿಂದ ವರವೂ ನನಗೆ ಬುದ್ಧಿಪೂರ್ವಕ ಸ್ವೀಕಾರಾರ್ಹವಲ್ಲ. ಅದರಿಂದಲೂ ಅರ್ಜುನನೇ ಗುರುವಿಗಾಗಿ ಪ್ರತಿಜ್ಞೆ ಮಾಡಲಿ ಎಂದು ಬಗೆದು ಭೀಮ ಆಗ ಪ್ರತಿಜ್ಞೆ ಮಾಡಲಿಲ್ಲ.

ಹಿರಿಯರು ತಾವಾಗಿ ಕೊಟ್ಟಿದ್ದನ್ನು ಸ್ವೀಕರಿಸಬಹುದು, ಬೇಡಿ ಪಡೆಯಬಾರದು. ಇದು ಭೀಮನಂಥ ಋಜುಯೋಗಿಗಳ ಲಕ್ಷಣ.

ತತ್ಪ್ರೇರಿತೇನಾರ್ಜುನೇನ ಪ್ರತಿಜ್ಞಾಕೃತಾ ಯದಾ ವಿಪ್ರವರಸ್ತತಃ ಪರಮ್ ।
ಸ್ನೇಹಂ ನಿತಾಂತಂ ಸುರರಾಜ ಸೂನೌ ಕೃತ್ವಾಮಹಾಸ್ತ್ರಾಣಿ ದದೌ ಸ ತಸ್ಯ ॥೩೯॥

ಭೀಮನಿಂದ ಪ್ರೇರಿತನಾಗಿ ಅರ್ಜುನ ಪ್ರತಿಜ್ಞೆ ಮಾಡಿದಾಗ ಬ್ರಾಹ್ಮಣೋತ್ತಮನಾದ ದ್ರೋಣ ಅರ್ಜುನನಲ್ಲಿ ಹೆಚ್ಚು ಪ್ರೀತಿ ಮಾಡಿ ಅವನಿಗೆ ಮಹಾ ಅಸ್ತ್ರಗಳನ್ನು ಉಪದೇಶಿಸಿದ.

---

1. ನನು ಕ್ಷತ್ರಿಯಾಣಾಂ ವಿಶೇಷತೋಽಪಿ ಪರಮಧರ್ಮಂ ನಾರಾಯಣದ್ವಿಟ್ ತದನುಬಂಧಿ ನಿಗ್ರಹಮಿತಿ ಗೀತಾತಾತ್ಪರ್ಯ ವಿರೋಧ ಇತಿ ಚೇನ್ನ। ತಾತ್ಪರ್ಯೇ ವಿಷ್ಣುದ್ವಿಟ್‌ತದನುಬಂಧಿ ನಿಗ್ರಹಮಾತ್ರಂ ಧರ್ಮ ಇತ್ಯುಕ್ತಂ। ನತು ಸ್ವತ ಏವೇತಿ ನಿಯಮಃ। ನಿಗ್ರಹಸ್ಯ ಪರತೋಽಪಿ ಸಂಭವಾತ್। ಯಥಾ ದುಷ್ಟಸ್ತ್ರೀ ಕಿತವಾದೀನಾಂ ನಿಗ್ರಹಃ ಪರತ ಏವ ಧರ್ಮಃ। ಅತ ಏವಾತ್ರ ಗುರುಭಿರ್ನಿತ್ಯಯೋದ್ಧಾ ಅಸ್ತ್ರಜ್ಞ ಇತಿ ವಿಶೇಷಣಾನಿ। ತತ್ರತು ನಾರಾಯಣದ್ವಿಟ್ ತದನುಬಂಧಿ ನಿಗ್ರಹಮಿತಿ ಸಾಮಾನ್ಯೋಕ್ತಿಃ। -ಜನಾರ್ದನೀಯ

ಸ ಪಕ್ಷಪಾತಂ ಚ ಚಕಾರ ತಸ್ಮಿನ್ ಕರೋತಿ ಚಾಸ್ಯೋರುತರಾಂ ಪ್ರಶಂಸಾಮ್।
ರಹಸ್ಯವಿದ್ಯಾಶ್ಚ ದದಾತಿ ತಸ್ಯ ನಾನ್ಯಸ್ಯ ಕಸ್ಯಾಪಿ ತಥಾ ಕಥಂಚಿತ್ ॥ ೪೦ ॥

ಅಂದಿನಿಂದ ದ್ರೋಣ ಅರ್ಜುನನ ಪಕ್ಷಪಾತಿಯಾದ. ಅವನ ಪ್ರಶಂಸೆಯನ್ನೇ ಹೆಚ್ಚಾಗಿ ಮಾಡಿದ. ಗೋಪ್ಯವಾದ ಮಂತ್ರಗಳನ್ನು ಅವನಿಗೇ ಉಪದೇಶಿಸಿದ. ಹಾಗೆ ಬೇರೆ ಯಾರಿಗೂ ಯಾವ ರೀತಿಯಲ್ಲಿಯೂ ಮಾಡಲಿಲ್ಲ.

ಭೀಮಃ ಸಮಸ್ತಂ ಪ್ರತಿಭಾಬಲೇನ ಜಾನನ್ ಸ್ನೇಹಂ ತ್ವದ್ವಿತೀಯಂ ಕನಿಷ್ಠೇ।
ದ್ರೋಣಸ್ಯ ಕೃತ್ವಾ ಸಕಲಾಸ್ತ್ರವೇದಿನಂ ಕರ್ತುಂ ಪಾರ್ಥಂ ನಾರ್ಜುನವಚ್ಚಕಾರ॥೪೧ ॥

ಎಲ್ಲ ಅಸ್ತ್ರವನ್ನೂ ಪ್ರತಿಭಾ ಬಲದಿಂದಲೆ ತಿಳಿದಿದ್ದರಿಂದಲೂ ಭೀಮ ತಮ್ಮನಾದ ಅರ್ಜುನನಲ್ಲಿ ದ್ರೋಣನಿಗೆ ಅನುಪಮ ಪ್ರೀತಿ ಉಂಟುಮಾಡಿ ಅವನನ್ನು ಸರ್ವಾಸ್ತ್ರಕೋವಿದನನ್ನಾಗಿ ಮಾಡುವ ಉದ್ದೇಶದಿಂದ ಅರ್ಜುನನಂತೆ ತಾನು ಪ್ರತಿಜ್ಞೆ ಮಾಡಲಿಲ್ಲ.

ನೈವಾತಿಯತ್ನೇನ ದದರ್ಶ ಲಕ್ಷ್ಯಂ
ಶುಶ್ರೂಷಾಯಾಂ ಪಾರ್ಥಮಗ್ರೇ ಕರೋತಿ।
ಸ್ವಬಾಹುವೀರ್ಯಾದ್ ಭಗವತ್ಪ್ರಸಾದಾ-
ನ್ನಿಹನ್ಮಿ ಶತ್ರೂನ್ ಕಿಮನೇನ ಚೇತಿ ॥ ೪೨ ॥

ಭೀಮ ಬಹುಪ್ರಯತ್ನದಿಂದ ಲಕ್ಷ್ಯವನ್ನು ನೋಡುತ್ತಲೂ ಇರಲಿಲ್ಲ. ಗುರು ಶುಶ್ರೂಷೆಯಲ್ಲಿಯೂ ಅರ್ಜುನನನ್ನು ಮುಂದೆ ಮಾಡುತ್ತಿದ್ದ. 'ನಾನು ನನ್ನ ಬಾಹುಬಲದಿಂದಲೂ ಗುರ್ವನುಗ್ರಹದಿಂದಲೂ ಶತ್ರುಗಳನ್ನು ಕೊಲ್ಲುವೆ. ಪ್ರತಿಜ್ಞೆ ಮಾಡಿ ಅಸ್ತ್ರೋಪದೇಶ ಪಡೆಯುವದರಿಂದೇನು?' ಎಂದು.

ತದಾ ಸಮೀಯುಃ ಸಕಲಾಃ ಕ್ಷಿತೀ-
ಪುತ್ರಾ ದ್ರೋಣಾತ್ ಸಕಲಾಸ್ತ್ರಾಣ್ಯವಾಪ್ತುಮ್।
ದದೌ ಸ ತೇಷಾಂ ಪರಮಾಸ್ತ್ರಾಣಿ ವಿಪ್ರೋ
ರಾಮಾದವಾಪ್ತಾನ್ಯಗತಾನಿ ಚಾನ್ಯೈಃ ॥ ೪೩ ॥

ಆಗ ಎಲ್ಲ ರಾಜಕುಮಾರರೂ ದ್ರೋಣನಿಂದ ಸಕಲ ಅಸ್ತ್ರಗಳನ್ನೂ ಕಲಿಯಲು ಬಂದರು. ದ್ರೋಣ ಪರಶುರಾಮರಿಂದ ತಾನು ತಿಳಿದಿದ್ದ, ಅನ್ಯರು ತಿಳಿಯದಿದ್ದ ಉತ್ತಮ ಅಸ್ತ್ರಗಳನ್ನು ಅವರಿಗೆ ಕಲಿಸಿದ.

ಅಸ್ತ್ರಾಣಿ ಚಿತ್ರಾಣಿ ಮಹಾಂತಿ ದಿವ್ಯಾ
ನ್ಯನ್ಯೈರನೃಪೈರ್ಮನಸಾಪ್ಯಸ್ಮೃತಾನಿ।

ಅವಾಪ್ಯ ಸರ್ವೇ ತನಯಾ ನೃಪಾಣಾಂ
ಶಕ್ತಾಬಭೂವುರ್ನ ಯಥೈವ ಪೂರ್ವೇ ॥ ೪೪ ॥

ಬೇರೆ ರಾಜರುಗಳಿಂದ ಮನಸ್ಸಿನಲ್ಲಿಯೂ ಚಿಂತಿಸಲಾಗದಿದ್ದ ವಿಚಿತ್ರ ಮಹಾ ದಿವ್ಯಾಸ್ತ್ರಗಳನ್ನು ಪಡೆದು ಎಲ್ಲ ರಾಜಕುಮಾರರು ಹಿಂದಿನ ರಾಜರುಗಳಂತೆಯೆ ಆಗದೆ ಅವರಿಗಿಂತಲೂ ಹೆಚ್ಚು ಸಮರ್ಥರಾದರು.

ನೈತಾದೃಶಾಃ ಪೂರ್ವಮಾಸನ್ನರೇಂದ್ರಾ
ಅಸ್ತ್ರೇ ಬಲೇ ಸರ್ವವಿದ್ಯಾಸು ಚೈವ।
ದೌಷ್ಯಂತಿ ಮಾಂಧಾತೃಮರುತ್ತಪೂರ್ವಾ-
ಶ್ಚೈತತ್ಸಮಾ ನಾಸುರುದಾರವೀರ್ಯಾಃ ॥ ೪೫ ॥

ಹಿಂದೆ ಎಂದೂ ಅಸ್ತ್ರದಲ್ಲಿ ಬಲದಲ್ಲಿ ಸಕಲ ವಿದ್ಯೆಗಳಲ್ಲಿ ಇಂಥ ರಾಜರೆ ಇರಲಿಲ್ಲ. ಮಹಾ ಬಲಶಾಲಿಗಳೆನಿಸಿದ್ದ ಭರತ ಮಾಂಧಾತೃ ಮರುತ್ತ ಮುಂತಾದವರೂ ಈ ರಾಜಕುಮಾರರಿಗೆ ಸಮಾನರಾಗಿರಲಿಲ್ಲ.

ಕರ್ಣ ಏಕಲವ್ಯರಿಗೆ ಅಸ್ತ್ರನಿರಾಕರಣೆ

ತದಾ ಕರ್ಣೋಽಥೈಕಲವ್ಯಶ್ಚ ದಿವ್ಯಾನ್ಯಸ್ತ್ರಾಣ್ಯಾಪ್ತುಂ ದ್ರೋಣಸಮೀಪಮೀಯತುಃ।
ಸೂತೋ ನಿಷಾದ ಇತಿ ನೈತಯೋರದಾದಸ್ತ್ರಂ ವಿಪ್ರಃ ಸ ತು ರಾಮಶಿಷ್ಯಃ ॥ ೪೬ ॥

ಆಗ ಕರ್ಣನೂ ಏಕಲವ್ಯನೂ ದಿವ್ಯಾಸ್ತ್ರಗಳನ್ನು ಪಡೆಯಲು ದ್ರೋಣನ ಬಳಿಗೆ ಬಂದರು. ಒಬ್ಬ ಸೂತ, ಇನ್ನೊಬ್ಬ ಬೇಡ ಎಂದು ಇಬ್ಬರಿಗೂ ದ್ರೋಣ ಅಸ್ತ್ರಗಳನ್ನು ನೀಡಲಿಲ್ಲ.

ಕರ್ಣ ಹುಟ್ಟಿನಿಂದ ಕುಂತೀಪುತ್ರನಾಗಿದ್ದು ಕ್ಷತ್ರಿಯನಾಗಿದ್ದರೂ ಕ್ಷತ್ರಿಯ ಸಂಸ್ಕಾರವಿಲ್ಲದೆ ಸೂತನಮಗನಾಗಿ ಬೆಳೆದವ. ಏಕಲವ್ಯನೂ ವಸುದೇವನ ತಮ್ಮನಾದ ದೇವಶ್ರವನ ಮಗನಾಗಿದ್ದು ಯಾವುದೋ ಕಾರಣದಿಂದ ತಂದೆಯಿಂದ ಪರಿತ್ಯಕ್ತನಾಗಿ ಬೇಡರ ಕುಲದಲ್ಲಿ ಬೆಳೆದವ. ಇದರಿಂದ ಇಬ್ಬರಿಗೂ ದ್ರೋಣರು ವಿದ್ಯೆಯನ್ನು ನಿರಾಕರಿಸಿದರು.

ವಸ್ತುತಃ ಅವರು ಅರ್ಜುನನಿಗೆ ಪ್ರತಿಸ್ಪರ್ಧಿಗಳಾದಾರು. ತನ್ನ ಪ್ರತಿಜ್ಞೆ ಹಾಳಾದೀತು ಎನ್ನುವ ಭಯ ಕಾರಣವೆನ್ನಬಹುದು. ಅದರಿಂದಲೇ ಏಕಲವ್ಯನ ಹೆಬ್ಬೆರಳು ಕಡಿದ ಬಳಿಕ ಇನ್ನು ಅರ್ಜುನನೊಡನೆ ಸ್ಪರ್ಧೆ ಅಸಂಭವವೆಂದು ಮನಗಂಡೇ ದ್ರೋಣರು ಏಕಲವ್ಯನಿಗೆ ರಹಸ್ಯವಾಗಿ ಧನುರ್ವಿದ್ಯೆ ಕಲಿಸಲು ಹೋದರು.

ಪರಶುರಾಮರ ಬಳಿಗೆ ಕರ್ಣ

ಕರ್ಣೋಽನವಾಪ್ಯ ನಿಜಮೀಪ್ಸಿತಮುಚ್ಚಮಾನೋ
ಯಸ್ಮಾದವಾಪ ಪುರುಷೋತ್ತಮತೋಽಸ್ತ್ರವೃಂದಮ್।
ವಿಪ್ರೋಽಪ್ಯಯಂ ತಮಜಮೇಮಿ ಭೃಗೋಃ ಕುಲೋತ್ಥ
ಮಿತ್ಥಂ ವಿಚಿಂತ್ಯ ಸ ಯಯೌ ಭೃಗುಪಾಶ್ರಮಾಯ ॥ ೪೭ ॥

ಬಹಳ ಸ್ವಾಭಿಮಾನಿಯಾದ ಕರ್ಣ ದ್ರೋಣನಿಂದ ತನ್ನ ಅಭೀಷ್ಟವನ್ನು ಪಡೆಯದಿದ್ದಾಗ 'ಈ ದ್ರೋಣನೂ ಯಾವ ಪರಶುರಾಮರಿಂದ ಅಸ್ತ್ರ ಸಮೂಹವನ್ನು ಪಡೆದನೋ ಭೃಗುಕುಲದಲ್ಲಿ ಅವತರಿಸಿದ ಆ ಹರಿಯನ್ನೇ ನಾನೂ ಆಶ್ರಯಿಸುತ್ತೇನೆ' ಎಂದು ಆಲೋಚಿಸಿ ಪರಶುರಾಮರ ಆಶ್ರಮಕ್ಕೆ ಹೋದ.

ಸ ಸರ್ವವೇತ್ತುಶ್ಚ ವಿಭೋರ್ಭಯೇನ
ವಿಪ್ರೋಽಹಮಿತ್ಯವದದಸ್ತ್ರವರಾತಿಲೋಭಾತ್।
ಜಾನನ್ನಪಿ ಪ್ರದದಾವಸ್ಯ ರಾಮೋ
ದಿವ್ಯಾನ್ಯಸ್ತ್ರಾಣ್ಯಖಿಲಾನ್ಯವ್ಯಯಾತ್ಮಾ ॥ ೪೮ ॥

ಕರ್ಣ ಉತ್ತಮ ಅಸ್ತ್ರಗಳ ಅತಿಲೋಭದಿಂದಲೂ ಭಯದಿಂದಲೂ ಸರ್ವಜ್ಞರಾದ ಪರಶುರಾಮರ ಮುಂದೆ 'ನಾನು ಬ್ರಾಹ್ಮಣ' ಎಂದ. ಪರಶುರಾಮರು 'ಈತ ಸೂತ'ನೆಂದು ತಿಳಿದೂ ಅವನಿಗೆ ಎಲ್ಲ ದಿವ್ಯ ಅಸ್ತ್ರಗಳನ್ನೂ ಉಪದೇಶಿಸಿದರು.

ಅಸ್ತ್ರಜ್ಞಚೂಡಾಮಣಿಮಿಂದ್ರಸೂನುಂ ವಿಶ್ವಸ್ಯ ಹಂತುಂ ಧೃತರಾಷ್ಟ್ರಪುತ್ರಃ।
ಏನಂ ಸಮಾಶ್ರಿತ್ಯ ದೃಢೋ ಭವೇತೇತ್ಯದಾಜ್ಞಾತ್ಸ್ವಮಸ್ತ್ರಮಸ್ಮೈ ರಮೇಶಃ ॥ ೪೯ ॥

ಅಸ್ತ್ರಜ್ಞ ಚೂಡಾಮಣಿಯಾದ ಅರ್ಜುನನನ್ನು ಕೊಲ್ಲಲು ದುರ್ಯೋಧನ ಇವನನ್ನು ನಂಬಿ ಆಶ್ರಯಿಸಿ ದೃಢನಾಗಲಿ ಎಂದು ಭಾವಿಸಿ ಅವನಿಗೆ ಪರಶುರಾಮರು ತಿಳಿದೇ ಅಸ್ತ್ರವನ್ನು ನೀಡಿದರು.

ಜ್ಞಾನಂ ಚ ಭಾಗವತಮಪ್ಯಪರಾಶ್ಚ ವಿದ್ಯಾ
ರಾಮಾದವಾಪ್ಯ ವಿಜಯಂ ಧನುರಗ್ರ್ಯಾಯಾನಮ್।
ಅಬ್ದೈಶ್ಚತುರ್ಭಿರಥ ಚ ನ್ಯವಸತ್ ತದಂತೇ
ಹಾತುಂ ನ ಶಕ್ತ ಉರುಗಾಯಮಿಮಂ ಸ ಕರ್ಣಃ ॥ ೫೦ ॥

ನಾಲ್ಕು ವರ್ಷಕಾಲ ಪರಶುರಾಮರಿಂದ ಪರಮಾತ್ಮ ಜ್ಞಾನವನ್ನೂ ಬೇರೆ ವಿದ್ಯೆಗಳನ್ನೂ ಜಯಪ್ರದವಾದ ಬಿಲ್ಲನ್ನೂ ಒಳ್ಳೆಯ ರಥವನ್ನೂ ಪಡೆದು ಕರ್ಣ ಮತ್ತೂ ಹರಿಯನ್ನು ಬಿಡಲಾಗದೆ ಬಳಿಯಲ್ಲಿ ವಾಸಮಾಡಿದ.

ನಾಲ್ಕು ವರ್ಷಕಾಲ ಎಲ್ಲ ವಿದ್ಯೆಗಳನ್ನು ಕರ್ಣ ಪಡೆದುದು ನಿಜ. ಆದರೆ ಇನ್ನೂ ಗುರುಗಳು ಬ್ರಹ್ಮಾಸ್ತ್ರೋಪದೇಶವನ್ನೇ ಮಾಡಿಲ್ಲ. ಗುರುಗಳ ವಿರಹವನ್ನು ಸಹಿಸ ಲಾಗದಂಥ ಸ್ವಾಭಾವಿಕ ಪ್ರೀತಿಯ ಜೊತೆಗೆ ಬ್ರಹ್ಮಾಸ್ತ್ರದ ಆಸೆಯೂ ಒಂದು ಅಮುಖ್ಯ ಕಾರಣವೆನ್ನಬಹುದು. ಮಹಾಭಾರತ ಶಾಂತಿಪರ್ವದಲ್ಲಿ ಮಾತ್ರ-

ತಸ್ಮೈ ಸ ವಿಧಿವತ್ ಕೃತ್ಸ್ನಂ ಬ್ರಹ್ಮಾಸ್ತ್ರಂ ಸನಿವರ್ತನಂ ಪ್ರೋವಾಚಾಖಿಲಮವ್ಯಕ್ತಂ।

ಎಂದು ಬ್ರಹ್ಮಾಸ್ತ್ರವನ್ನೂ ನೀಡಿದಂತೆ ಕಾಣುತ್ತದೆ. ಆದರೆ 'ಬ್ರಹ್ಮಾಸ್ತ್ರ' ಶಬ್ದವನ್ನು ರೂಢಾರ್ಥದಲ್ಲಿಟ್ಟುಕೊಳ್ಳದೆ, ಬ್ರಹ್ಮ ಎಂದರೆ ವೇದಮಂತ್ರ, ಅಸ್ತ್ರರೂಪವಾದ ವೇದಮಂತ್ರವೇ ಬ್ರಹ್ಮಾಸ್ತ್ರ ಅಂದರೆ ಆಗ್ನೇಯಾದಿ ಅಸ್ತ್ರಮಂತ್ರಗಳನ್ನು ಮಾತ್ರ ನೀಡಿದರೆನ್ನಬೇಕು. ಏಕೆಂದರೆ ಲಕ್ಷಾಲಂಕಾರದಲ್ಲಿ ವಾದಿರಾಜರು ಕರ್ಣನಿಗೆ ಬ್ರಹ್ಮಾಸ್ತ್ರೋಪದೇಶವಿರಲಿಲ್ಲ ಎಂದಿದ್ದಾರೆ- ಕರ್ಣ ಶಸ್ತ್ರಯುದ್ಧದಲ್ಲಿ ಮಡಿದು ಪುನೀತನಾಗಿ ಸ್ವರ್ಗಪಡೆಯಬೇಕೆಂದು ಹರಿಸಂಕಲ್ಪವಿದ್ದುದರಿಂದ ಕ್ಷತ್ರಿಯ ಜಾತಿಯವನಾಗಿ ಹುಟ್ಟಿದ. ಆದರೆ ಕುಂತಿ ಇನ್ನೂ ಅವಿವಾಹಿತ ಕನ್ಯೆಯಾಗಿದ್ದಾಗ ಹುಟ್ಟಿ ಕ್ಷತ್ರಿಯನೆಂಬ ಪ್ರಸಿದ್ಧಿ ಹೊಂದದೆ ಬ್ರಹ್ಮಾಸ್ತ್ರದಿಂದ ವಂಚಿತನಾದ. ಪ್ರಸಿದ್ಧಿ ಇರುತ್ತದ್ದರೆ ದ್ರೋಣರೋ ಪರಶುರಾಮರೋ ಬ್ರಹ್ಮಾಸ್ತ್ರನೀಡುತ್ತಿದ್ದರು. ಹಾಗೆ ನೀಡಿದ್ದರೆ ಬ್ರಹ್ಮಾಸ್ತ್ರದಿಂದ ಕರ್ಣ ತನ್ನನ್ನು ರಕ್ಷಿಸಿಕೊಂಡು ಬೇರೆಯವರನ್ನೇ ಕೊಲ್ಲುತ್ತಿದ್ದ.[1]

ಅಂಕೇ ನಿಧಾಯ ಸ ಕದಾಚಿದಮುಷ್ಯ ರಾಮಃ
ಶಿಶ್ಯೇ ಶಿರೋ ವಿಗತನಿದ್ರ ಉದಾರಬೋಧಃ।
ಸಂಸುಪ್ತವತ್ಸುರವರಃ ಸುರಕಾರ್ಯಹೇತೋ
ರ್ದಾತುಂ ಚ ವಾಲಿನಿಧನಸ್ಯ ಫಲಂ ತದಸ್ಯ ॥ ೫೧ ॥

---

1. ಕ್ಷತ್ರಂ ಸ್ವರ್ಗಂ ಕಥಂ ಗಚ್ಛೇಚ್ಛಸ್ತ್ರಪೂತಮಿತಿ ಪ್ರಭೋ।
ಸಂಘರ್ಷ ಜನನಸ್ತಸ್ಮಾತ್ ಕನ್ಯಾಗರ್ಭೋ ವಿನಿರ್ಮಿತಃ ॥

ಇತ್ಯತ್ರಾಯಂ ಭಾವಃ। ಕರ್ಣಸ್ಯ ಕ್ಷತ್ರಿಯಾಯಾಂ ಜನಾನಾಭಾವೇ ಕ್ಷತ್ರಂ ಶಸ್ತ್ರಪೂತಂ ಸ್ವರ್ಗಂ ಗಚ್ಛೇದಿತಿ ಪ್ರಮೇಯಂ ನ ಸಿದ್ಧ್ಯೇತ್। ಅತಃ ಕ್ಷತ್ರಿಯಾಯಾಂ ಜನನಮಾವಶ್ಯಕಂ। ತಚ್ಚಾರ್ಜುನಾದಿವತ್ ಸ್ಪಷ್ಟಂ ಕುಂತ್ಯಾ ಜನನೇ ಕ್ಷತ್ರಿಯತ್ವಸ್ಯ ಸುಪ್ರಸಿದ್ಧತ್ವಾತ್ ದ್ರೋಣಾದ್ವಾ ಪರಶುರಾಮಾದ್ವಾ ಬ್ರಹ್ಮಕ್ಷತ್ರಯೋರುಭಯೋರಪಿ ಯೋಗ್ಯಂ ಬ್ರಹ್ಮಾಸ್ತ್ರಂ ಲಭೇತೈವ। ಬ್ರಹ್ಮಾಸ್ತ್ರಲಾಭೇ ಚ ಕರ್ಣಸ್ಯ ನ ಕುತಶ್ಚಿತ್ ಶಸ್ತ್ರಘಾತಃ ಸ್ಯಾತ್। ಪ್ರತ್ಯುತ ಸ್ವಶತ್ರುಮೇವ ತೇನ ಹನ್ಯಾತ್। ಅತಶ್ಚ ಕರ್ಣಸ್ಯ ಶಸ್ತ್ರಘಾತಸಾಧ್ಯ ಸ್ವರ್ಗೋಽಪಿ ನ ಸ್ಯಾತ್। ಕನ್ಯಾಗರ್ಭಾಜ್ಜನನೇ ತು ಕ್ಷತ್ರಜಾತಿರಪಿ ಜಾತಾ, ಪುನಃ ಸೂತಪುತ್ರತ್ವಪ್ರಸಿದ್ಧೌ ಬ್ರಹ್ಮಾಸ್ತ್ರಲಾಭೋಽಪಿ ನಾಭೂತ್। ಅತಃ ಕ್ಷತ್ರಜಾತಿಮತಃ ಕರ್ಣಸ್ಯ ಶಸ್ತ್ರಪೂತಂ ಮರಣಮಪಿ ನ್ಯಾಯಪ್ರಾಪ್ತಂ ಇತ್ಯುಭಯಲಾಭಾಯ ಕನ್ಯಾಯಾಂ ಜನನಂ ದೇವೈರ್ನಿರ್ಮಿತಂ ಇತಿ ವಕ್ತುರ್ನಾರದಸ್ಯ ಹೃದಯಮಿತಿ। -ಲಕ್ಷಾಲಂಕಾರ

ಒಮ್ಮೆ ಪರಶುರಾಮರು ಕರ್ಣನ ತೊಡೆಯ ಮೇಲೆ ತಲೆಯಿಟ್ಟು ಮಲಗಿದರು. ನಿದ್ದೆ ಇಲ್ಲದ ಉತ್ತಮಜ್ಞಾನರೂಪನಾದ ಆ ದೇವೋತ್ತಮ ದೇವಕಾರ್ಯಕ್ಕಾಗಿ ಮತ್ತು ಸುಗ್ರೀವಾವತಾರದಲ್ಲಿ ವಾಲಿಯನ್ನು ಕೊಲ್ಲಿಸಿದ್ದಕ್ಕೆ ಫಲಕೊಡುವುದಕ್ಕಾಗಿ ನಿದ್ದೆ ಮಾಡುತ್ತಿರುವಂತೆ ಮಲಗಿದ್ದ.

ತತ್ರಾಸ ರಾಕ್ಷಸವರಃ ಸ ತು ಹೇತಿನಾಮಾ
ಕಾಲೇ ಮಹೇಂದ್ರಮನುಪಾಸ್ಯ ಹಿ ಶಾಪತೋಽಸ್ಯ।
ಕೀಟಸ್ತಮಿಂದ್ರ ಉತ ತತ್ರ ಸಮಾವಿವೇಶ
ಕರ್ಣಸ್ಯ ಶಾಪಮುಪಪಾದಯಿತುಂ ಸುತಾರ್ಥೇ ॥ ೫೨ ॥

ಹೇತಿ ಎಂಬ ಉತ್ತಮ ರಾಕ್ಷಸ ಸಕಾಲದಲ್ಲಿ ಇಂದ್ರನ ಸೇವೆ ಮಾಡದಿದ್ದುದಕ್ಕಾಗಿ ಅವನ ಶಾಪದಿಂದ ಕೀಟನಾಗಿ ಅಲ್ಲಿ ಹುಟ್ಟಿದ್ದ. ತನ್ನ ಮಗನಾದ ಅರ್ಜುನನ ಹಿತಕ್ಕಾಗಿ ಕರ್ಣನಿಗೆ ಪರಶುರಾಮರಿಂದ ಶಾಪಕೊಡಿಸುವ ಉದ್ದೇಶದಿಂದ ಇಂದ್ರ ಆ ಕೀಟದಲ್ಲಿ ಆವೇಶಗೊಂಡ.

ಹೇತಿ ರಾಕ್ಷಸನೇ ಆಗಿದ್ದರೂ ಪ್ರಹ್ಲಾದಾದಿಗಳಂತೆ ಸಜ್ಜೀವನಾಗಿದ್ದ ಎನ್ನುತ್ತದೆ
–ವಾದಿರಾಜೀಯ.

ಮಹಾಭಾರತ ಶಾಂತಿಪರ್ವದಲ್ಲಿ ಈ ರಾಕ್ಷಸನ ಹೆಸರು ದಂಶ. ಅವನು ಭೃಗುಮುನಿಯ ಪತ್ನಿಯನ್ನು ಅಪಹರಿಸಿ ಅವನ ಶಾಪದಿಂದ ಅಲರ್ಕ ಎಂಬ ಕೀಟವಾಗಿ ಹುಟ್ಟಿ ಪರಶುರಾಮನ ದೃಷ್ಟಿಗೋಚರನಾದೊಡನೆ ಶಾಪಮುಕ್ತಿ ಹೊಂದಿದನೆಂದು ಹೇಳಿದೆ. ಕೀಟ ಜನ್ಮಕ್ಕೆ ಇದೂ ಒಂದು ನಿಮಿತ್ತ ಮುಖ್ಯಕಾರಣ ಇಂದ್ರನ ಶಾಪವೆಂದಿಟ್ಟುಕೊಳ್ಳಬೇಕು.

'ಅಲರ್ಕ' ಎಂಬುದು ಎಂಟುಕಾಲುಗಳಿದ್ದು ಸೂಜಿಯಂತೆ ತೀಕ್ಷ್ಣವಾದ ರೋಮಗಳಿಂದ ಆವೃತ್ತವಾಗಿದ್ದು ಆಕಾರದಲ್ಲಿ ಮುಳ್ಳು ಹಂದಿಯಂತಿರುವ, ರಕ್ತಮಾಂಸ ಮೇದಸ್ಸುಗಳನ್ನುಂಡು ಬದುಕುವ ಕೀಟವೆಂದು ಮಹಾಭಾರತ ವರ್ಣಿಸಿದೆ.

ಕರ್ಣಃ ಸಕೀಟತನುಗೇನ ಕಿರೀಟಿನೈವ
ಹ್ಯೂರೋರಧಸ್ತಲತ ಔಪರಿಗಾತ್ವಚಶ್ಚ।
ವಿದ್ಧಃ ಶರೇಣ ಸ ಯಥಾ ರುಧಿರಸ್ಯ ಧಾರಾಂ
ಸುಸ್ರಾವ ತಂ ವಿಗತ ನಿದ್ರ ಇವಾಹ ರಾಮಃ ॥ ೫೩ ॥

ಕೀಟ ಶರೀರದಲ್ಲಿದ್ದ ಹೇತಿಯೊಂದಿಗೆ ಇಂದ್ರ ಕರ್ಣನ ತೊಡೆಯ ಕೆಳಭಾಗದಿಂದಾರಂಭಿಸಿ ಮೇಲ್ಭಾಗದ ಚರ್ಮದವರೆಗೂ ಬಾಣದಂತೆ ಕೊರೆದು ಗಾಯ ಮಾಡಿದ. ಆಗ ರಕ್ತದ ಕೋಡಿ ಹರಿಯಿತು. ಪರಶುರಾಮರು ಅದರಿಂದ ಎಚ್ಚೆತ್ತವನಂತೆ ಎದ್ದು ಕೇಳತೊಡಗಿದರು.

ಕಿಂ ತ್ವಂ ನ ಚಾಲಯಸಿ ಮಾಂ ರುಧಿರಪ್ರಸೇಕೇ
ಪ್ರಾಪ್ತೇಽಪಿ ಪಾವನವಿರೋಧಿನಿ ಕೋಽಸಿ ಚೇತಿ।
ತಂ ಪ್ರಾಹ ಕರ್ಣ ಇಹ ನೈವ ಮಯಾ ವಿಧೇಯೋ
ನಿದ್ರಾವಿರೋಧ ಇತಿ ಕೀಟ ಉಪೇಕ್ಷಿತೋ ಮೇ ॥ ೫೪ ॥

'ಅಪವಿತ್ರ ರಕ್ತ ಸ್ಪರ್ಶವಾಗುತ್ತಿದ್ದರೂ ನೀನು ನನ್ನನ್ನು ಏಕೆ ಅಲ್ಲಾಡಿಸಲಿಲ್ಲ? ಯಾರು ನೀನು?' ಪರಶುರಾಮ ಹೀಗೆ ಕೇಳಿದಾಗ ಕರ್ಣನೆಂದ, 'ನಾನು ನಿಮಗೆ, ಈ ಗಾಢ ನಿದ್ರಾಕಾಲದಲ್ಲಿ ನಿದ್ರಾಭಂಗವನ್ನು ಮಾಡಬಾರದೆಂದು ಕೀಟವನ್ನು ಸುಮ್ಮನೆಬಿಟ್ಟೆ.'

ರಕ್ತದ ಕೋಡಿ ಹರಿದರೂ ಆ ನೋವನ್ನು ಸಹಿಸಬೇಕಾದರೆ ನೀನು ಬ್ರಾಹ್ಮಣನಲ್ಲ. ಕ್ಷತ್ರಿಯನೆ ಇರಬೇಕು. ಯಾರು ನೀನು? ಎಂಬುದು ಪರಶುರಾಮರ ಪ್ರಶ್ನೆ.

ಜಾತ್ಯಾಸ್ಮಿ ಸೂತ ಉತ ತೇ ತನಯೋಽಸ್ಮಿ ಸತ್ಯಂ
ತೇನಾಸ್ಮಿ ವಿಪ್ರ ಇತಿ ಭಾರ್ಗವವಂಶಜೋಽಹಮ್।
ಅಗ್ರೇಽಬ್ರುವಂ ಭವತ ಈಶ ನ ಹಿ ತ್ವದನ್ಯೋ
ಮಾತಾ ಪಿತಾ ಗುರುತರೋ ಜಗತೋಽಪಿ ಮುಖ್ಯಃ ॥ ೫೫ ॥

''ಜನ್ಮತಃ ನಾನು ಸೂತನಾಗಿದ್ದೇನೆ. ತಮ್ಮ ಮಗನೂ ಆಗಿರುವುದರಿಂದ ಭಾರ್ಗವಗೋತ್ರೋತ್ಪನ್ನ ಬ್ರಾಹ್ಮಣನೆಂದು ತಮ್ಮ ಮುಂದೆ ಹೇಳಿದ್ದೆ. ಅದೂ ಸತ್ಯವೆ. ಏಕೆಂದರೆ ನಿಮಗಿಂತ ಬೇರೆ ಜಗತ್ತಿಗೆ ಮುಖ್ಯವಾಗಿ ತಾಯಿ ತಂದೆ ಮತ್ತು ಮಹಾಗುರು ಇನ್ನೊಬ್ಬನಿಲ್ಲ ತಾನೆ?'

ಇತ್ಯುಕ್ತಮಾತ್ರವಚನೇ ಸ ತು ಕೀಟಕೋಽಸ್ಯ
ರಾಮಸ್ಯ ದೃಷ್ಟಿವಿಷಯತ್ವತ ಏವ ರೂಪಮ್।
ಸಂಪ್ರಾಪ್ಯ ನೈಜಮತಿಪೂರ್ಣಗುಣಸ್ಯ ತಸ್ಯ
ವಿಷ್ಣೋರನುಗ್ರಹತ ಆಪ ವಿಮಾನಗಃ ಸ್ವಃ ॥ ೫೬ ॥

ಹೀಗೆ ಕರ್ಣ ಹೇಳಿದ ಮಾತ್ರಕ್ಕೆ ಪರಶುರಾಮರ ದೃಷ್ಟಿಗೋಚರವಾದ ಕೀಟ ತನ್ನ ನಿಜರೂಪ ತಳೆದು ಅತ್ಯಂತ ಪೂರ್ಣಗುಣರಾದ ಆ ಪರಶುರಾಮರ ಅನುಗ್ರಹದಿಂದ ವಿಮಾನವೇರಿ ಸ್ವರ್ಗ ಪಡೆಯಿತು.

ಭೃಗುಮುನಿ ದಂಶರಾಕ್ಷಸನಿಗೆ ಕೀಟವಾಗೆಂದು ಶಾಪವಿತ್ತ ಬಳಿಕ ಪರಶುರಾಮರಿಂದ ನಿನಗೆ ಶಾಪಮುಕ್ತಿ ಎಂದೂ ಹೇಳಿದಂತೆ ಕಾಣುತ್ತದೆ. ಶಾಂತಿಪರ್ವದಲ್ಲಿ.

ಅಥಾಹ ರಾಮಸ್ತಮಸತ್ಯವಾಚಂ ನ ತೇ ಸಕಾಶೇ ಮಮ ವಾಸಯೋಗ್ಯತಾ।
ತಥಾಪಿ ತೇ ನೈವ ವೃಥಾ ಮದೀಯಾ ಭಕ್ತಿರ್ಭವೇಜ್ಜೇಷ್ಯಸಿ ಸರ್ವ ಶತ್ರೂನ್ ॥ ೫೭ ॥

ಸುಳ್ಳು ಹೇಳಿದ ಕರ್ಣನಿಗೆ ಪರಶುರಾಮರು ಶಪಿಸಿದರು – 'ನಿನಗೆ ನನ್ನ ಬಳಿ ಇರಲು ಯೋಗ್ಯತೆ ಇಲ್ಲ. ಆದರೂ ನಿನಗೆ ನನ್ನಲ್ಲಿರುವ ಭಕ್ತಿ ಎಂದೂ ವ್ಯರ್ಥವಾಗದು. ಅದರಿಂದ ನೀನು ಎಲ್ಲ ಶತ್ರುಗಳನ್ನು ಗೆಲ್ಲುವೆ.

ಅಸ್ಪರ್ಧಮಾನಂ ನ ಕಥಂಚನ ತ್ವಾಂ ಚೇತಾ ಕಶ್ಚಿತ್ ಸ್ಪರ್ಧಮಾನಸ್ತು ಯಾಸಿ।
ಪರಾಭೂತಿಂ ನಾತ್ರ ವಿಚಾರ್ಯಮಾಸ್ತಿ ಪ್ರಮಾದೀ ತ್ವಂ ಭವಿತಾ ಚಾಸ್ತ್ರಸಂಘೇ ॥ ೫೮ ॥

'ನೀನು ಸ್ಪರ್ಧಿಸದಿರುವಾಗ ಯಾರೂ ಯಾವ ರೀತಿಯಿಂದಲೂ ನಿನ್ನನ್ನು ಗೆಲ್ಲಲಾರದು. ಸ್ಪರ್ಧಿಸಿದರೆ ಪರಾಜಯ ಹೊಂದುವಿ, ಅಸ್ತ್ರ ಸಮೂಹವನ್ನೂ ಮರೆಯುವಿ, ಇದರಲ್ಲಿ ವಿಚಾರಿಸುವುದೇನಿಲ್ಲ.

ಯಾಹೀತಿ ತೇನೋಕ್ತ ಉದಾರಕರ್ಮಣಾ
ಕರ್ಣೋ ಯಯೌ ತಂ ಪ್ರಣಮ್ಯೇಶಿತಾರಮ್।
ತಥೈಕಲವ್ಯೋಽಪಿ ನಿರಾಕೃತೋಽಮುನಾ
ದ್ರೋಣೇನ ತಸ್ಯ ಪ್ರತಿಮಾಂ ವನೇಽರ್ಚಯತ್ ॥ ೫೯ ॥

'ಹೊರಟು ಹೋಗು' ಎಂದು ಉನ್ನತಕಾರ್ಯ ಮಾಡುವ ಪರಶುರಾಮರು ಹೇಳಿದಾಗ ಕರ್ಣ ಆ ಪ್ರಭುವನ್ನು ನಮಿಸಿ ಹೊರಟುಹೋದ. ಹೀಗೇ ಏಕಲವ್ಯನೂ ದ್ರೋಣನಿಂದ ತಿರಸ್ಕೃತನಾಗಿ ಅವನ ಪ್ರತಿಮೆಯನ್ನು ಕಾಡಿನಲ್ಲಿ ಪೂಜಿಸುತ್ತಿದ್ದ.

ಏಕಲವ್ಯನ ಗುರುಭಕ್ತಿ

ತತಃ ಕದಾಚಿದ್ ಧೃತರಾಷ್ಟ್ರಪುತ್ರೈಃ
ಪಾಂಡೋಃ ಸುತಾ ಮೃಗಯಾಂ ಸಂಪ್ರಯಾತಾಃ।
ಅಗ್ರೇ ಗಚ್ಛನ್ ಸಾರಮೇಯೋ ರುರಾವ
ಧರ್ಮಾತ್ಮಜಸ್ಯಾತ್ರ ವನೇ ಮೃಗಾರ್ಥೀ ॥ ೬೦ ॥

ಒಂದು ದಿನ ಕೌರವರೊಂದಿಗೆ ಪಾಂಡವರು ಬೇಟೆಗೆ ಹೊರಟರು. ಕಾಡಿನಲ್ಲಿ ಮುಂದೆ ಹೋಗುತ್ತಿದ್ದ ಧರ್ಮರಾಜನ ಬೇಟೆನಾಯಿ ಮೃಗಾರ್ಥಿಯಾಗಿ ಬೊಗಳಿತು.

ಶ್ರುತ್ವಾ ರಾವಂ ಸಾರಮೇಯಸ್ಯ ದೂರಾ
ಚ್ಛರೈರ್ಮುಖಂ ಶಬ್ದವೇಧೀ ಪುಪೂರೇ।

ಸ ಏಕಲವ್ಯೋ ವ್ರಣಮಸ್ಯ ನಾಕರೋತ್
ಶ್ವಾ ಪೂರಿತಾಸ್ಯಃ ಪಾಂಡವಾನಭ್ಯಯಾತ್ ಸಃ ॥ ೬೧ ॥

ದೂರದಿಂದ ನಾಯಿ ಬೊಗಳುವ ಶಬ್ದ ಕೇಳಿ ಶಬ್ದವೇಧಿಯಾದ ಏಕಲವ್ಯ ಬಾಣಗಳಿಂದ ನಾಯಿಯ ಬಾಯಿಯನ್ನು ತುಂಬಿಸಿದ. ಗಾಯ ಉಂಟುಮಾಡಲಿಲ್ಲ. ಬಾಯಿ ತುಂಬ ಬಾಣವಿಟ್ಟುಕೊಂಡು ನಾಯಿ ಪಾಂಡವರ ಬಳಿಗೆ ಬಂದಿತು.

ಏಕಲವ್ಯ ನಾಯಿಯನ್ನು ಕಣ್ಣಿಂದ ನೋಡದೆಯೆ ಕೇವಲ ಶಬ್ದ ಬಂದ ದಿಕ್ಕಿಗೆ ಸರಿಯಾಗಿ ಒಟ್ಟಿಗೆ ಏಳು ಬಾಣ ಎಸೆದಿದ್ದ. ಹೀಗೆ ಶಬ್ದಾನುಸಾರವಾಗಿ ಲಕ್ಷ್ಯವನ್ನು ವೇಧಿಸುವುದು ಶಬ್ದವೇಧ ವಿದ್ಯೆ. ಲಕ್ಷ್ಯವನ್ನು ಕಣ್ಣಾರೆ ಕಂಡು ವೇಧಿಸಿದರೆ ಲಕ್ಷ್ಯವೇಧವೆನಿಸುವುದು.

ದೃಷ್ಟ್ವಾ ಚಿತ್ರಂ ಕುರವಃ ಪಾಂಡವಾಶ್ಚ
ದ್ರಷ್ಟುಂ ಕರ್ತಾರಂ ಮಾರ್ಗಯಾಮಾಸುರತ್ರ।
ದ್ರೋಣಾಕೃತಿಂ ಮಾರ್ತಿಕೀಂ ಪೂಜಯಂತಂ
ದದೃಶುಶ್ಚೈನಂ ಧನುರೇವಾಭ್ಯಸಂತಮ್ ॥ ೬೨ ॥

ಕೌರವರೂ ಪಾಂಡವರೂ ಈ ವಿಚಿತ್ರವನ್ನು ಕಂಡು ಅದರ ಕರ್ತನನ್ನು ಕಾಣಲು ಕಾಡಿನಲ್ಲಿ ಅನ್ವೇಷಣೆ ಮಾಡಿದರು. ಮಣ್ಣಿನ ದ್ರೋಣಮೂರ್ತಿಯನ್ನು ಪೂಜಿಸುತ್ತ ಬಿಲ್ಲನ್ನು ಅಭ್ಯಾಸಮಾಡುತ್ತಿದ್ದ ಏಕಲವ್ಯನನ್ನು ಕಂಡರು.

ಪೈಶಾಚಮೇವೈಷ ಪಿಶಾಚಕೇಭ್ಯಃ
ಪೂರ್ವಂ ವಿವೇದಾಸ್ತ್ರವೃಂದಂ ನಿಷಾದಃ।
ದಿವ್ಯಾನ್ಯಸ್ತ್ರಾಣ್ಯಾಪ್ತುಮೇತಾಂ ಚ ಶಿಕ್ಷಾಂ
ದ್ರೋಣಂ ಸದಾ ಪೂಜಯತಿ ಸ್ಮ ಭಕ್ತ್ಯಾ ॥ ೬೩ ॥

ಬೇಡನಾದ ಈ ಏಕಲವ್ಯ ಹಿಂದೆ ಪಿಶಾಚಿಗಳಿಂದಲೆ ಪೈಶಾಚಾಸ್ತ್ರಗಳ ಸಮೂಹವನ್ನು ಚೆನ್ನಾಗಿ ತಿಳಿದಿದ್ದ. ಈಗ ದಿವ್ಯ ಅಸ್ತ್ರಗಳನ್ನೂ ತಿಳಿಯಬೇಕೆಂದು ಈ ಶಿಕ್ಷಣಕ್ಕಾಗಿ ದ್ರೋಣನನ್ನು ಸದಾ ಭಕ್ತಿಯಿಂದ ಪೂಜಿಸುತ್ತಿದ್ದ.

ದೃಷ್ಟ್ವಾ ವಿಶೇಷಂ ತಮಮುಷ್ಯ ಪಾರ್ಥೋ
ದ್ರೋಣಾಯೋಚೇ ತ್ವದ್ವಟೋ ಮೇ ಮೃಷಾಸೀತ್।
ಇತ್ಯುಕ್ತ ಏನಂ ತ್ವಭಿಗಮ್ಯ ದಕ್ಷಿಣಾಂ
ವಿಪ್ರೋ ಯಯಾಚೇ ದಕ್ಷಿಣಾಂಗುಷ್ಠಮೇವ ॥ ೬೪ ॥

ಏಕಲವ್ಯನ ಈ ವಿಶೇಷ ವಿದ್ಯೆಯನ್ನು ನೋಡಿ ಅರ್ಜುನ ದ್ರೋಣನಿಗೆ ಹೇಳಿದ, 'ನನಗೆ ನೀವು ಕೊಟ್ಟ ಮಾತು ಸುಳ್ಳಾಯಿತು' ಹೀಗೆ ಹೇಳಿದಾಗ ದ್ರೋಣ ಏಕಲವ್ಯನ ಬಳಿಗೆ ಬಂದು ಬಲಗೈ ಹೆಬ್ಬೆಟ್ಟನ್ನು ಗುರುದಕ್ಷಿಣೆಯಾಗಿ ಕೇಳಿದ.

ತಸ್ಯ ಪ್ರಸಾದೋಪಚಿತೋರುಶಿಕ್ಷೋ ನಿಷಾದೋಽದಾದ್ ದಕ್ಷಿಣಾಂಗುಷ್ಠಮಸ್ಯೈ।
ತತಃ ಪರಂ ನಾಸ್ಯ ಬಭೂವ ಶಿಕ್ಷಾ ಸನ್ಮುಷ್ಟಿಹೀನಸ್ಯ ಸಮಾರ್ಜುನೇನ ॥ ೬೫ ॥

ದ್ರೋಣನ ಅನುಗ್ರಹದಿಂದ ಹೆಚ್ಚಿನ ಉತ್ತಮ ಶಿಕ್ಷಣ ಹೊಂದಿದ್ದ ಏಕಲವ್ಯ ಅವನಿಗೆ ಬಲಗೈ ಹೆಬ್ಬೆರಳನ್ನು ದಕ್ಷಿಣೆಯಾಗಿ ಕೊಟ್ಟ ಇದಾದ ಬಳಿಕ ಸರಿಯಾದ ಮುಷ್ಟಿ ಬಲವಿಲ್ಲದ ಏಕಲವ್ಯನಿಗೆ ಅರ್ಜುನನಿಗೆ ಸಾಟಿಯಾದ ಧನುರ್ವಿದ್ಯೆ ಇಲ್ಲದಾಯಿತು.

ಏಕಲವ್ಯನ ಶಬ್ದವೇಧ ವಿದ್ಯೆ ಅರ್ಜುನನಲ್ಲಿರಲಿಲ್ಲವೆಂದು ತಿಳಿಯಬಾರದು. ಅರ್ಜುನ ವಿದ್ಯಾಭ್ಯಾಸದ ಪ್ರಾರಂಭದಲ್ಲಿಯೇ ರಾತ್ರಿಯಲ್ಲಿ ಏಕಾಂಗಿಯಾಗಿ ಧನುರ್ವಿದ್ಯೆ ಅಭ್ಯಾಸ ಮಾಡುತ್ತಿದ್ದನಂತೆ. ಅದು ಶಬ್ದವೇಧ ವಿದ್ಯೆಯೆ. ಅದು ಅರ್ಜುನನಲ್ಲಿ ಇಲ್ಲದಿರುತ್ತಿದ್ದರೆ ಅದನ್ನು ದ್ರೋಣರು ಉಪದೇಶಿಸಿ ಏಕಲವ್ಯನಿಗಿಂತ ಹೆಚ್ಚುಗಾರಿಕೆಯನ್ನು ಅರ್ಜುನನಲ್ಲಿ ತರುತ್ತಿದ್ದರು. ಏಕಲವ್ಯನ ಹೆಬ್ಬೆರಳನ್ನು ಕಿತ್ತುಕೊಳ್ಳುವ ಪ್ರಮೇಯವಿರಲಿಲ್ಲ. ಅದರಿಂದ ಅರ್ಜುನನಲ್ಲಿಯೂ ಏಕಲವ್ಯನ ಬಿಲ್ಲುಗಾರಿಕೆ ಎಲ್ಲ ಇದ್ದಿತು. ಆದರೆ ಏಕಲವ್ಯ ಅರ್ಜುನನಿಗೆ ಸಮನೆನಿಸಬಾರದೆಂದು ಹೆಬ್ಬೆರಳನ್ನು ತೆಗೆಸಿದರು. ಅಂದಿನಿಂದ ಏಕಲವ್ಯನಿಗೆ ಮುಷ್ಟಿಬಲ ಕಡಿಮೆಯಾಯಿತು. ಅರ್ಜುನನಿಗೆ ಆತ ಸಾಟಿಯಾಗಲಿಲ್ಲ. ಬೇಡನೆಂದು ಏಕಲವ್ಯನನ್ನು ತಿರಸ್ಕರಿಸಿ, ಆತ ಸ್ವಪ್ರಯತ್ನದಿಂದ ಬಿಲ್ಲುವಿದ್ಯೆ ಸಂಪಾದಿಸಿದರೆ ದ್ರೋಣರು ಅವನಿಗೆ ತಮ್ಮಲ್ಲಿದ್ದ ಭಕ್ತಿಯನ್ನು ದುರುಪಯೋಗಪಡಿಸಿಕೊಂಡರೆಂದು ಆಕ್ಷೇಪ ಬರಬಹುದು. ಆದರೆ ಮಹಾಭಾರತದ ಪ್ರಕಾರ ದ್ರೋಣರು ಏಕಲವ್ಯನನ್ನು ಸರ್ವಥಾ ತಿರಸ್ಕರಿಸಲಿಲ್ಲ. ಬ್ರಾಹ್ಮಣ ಕ್ಷತ್ರಿಯ ಶಿಷ್ಯರ ನಡುವೆ ಬೇಡನೊಬ್ಬನಿಗೆ ವೇದಮಂತ್ರೋಪದೇಶ ಕೊಡಲಾರದೆ, 'ನೀನು ನನ್ನ ಶಿಷ್ಯನೆ. ನನ್ನ ಅನುಗ್ರಹದಿಂದ ನಿನಗೆ ಬಿಲ್ಲುವಿದ್ಯೆ ಸಿದ್ಧಿಸುತ್ತದೆ ಮನೆಗೆ ಹೋಗು' ಎಂದು ಹರಸಿ ಕಳಿಸಿದ್ದರು. ಆ ಅನುಗ್ರಹದಿಂದಲೆ ಏಕಲವ್ಯ ವಿದ್ಯೆ ಗಳಿಸಿದ್ದ-

ಶಿಷ್ಯೋಽಸಿ ಮಮ ನೈಷಾದೇ ಪ್ರಯೋಗೇ ಬಲವತ್ತರಃ।
ನಿವರ್ತಸ್ವ ಗೃಹಾನೇವ ಅನುಜ್ಞಾತೋಽಸಿ ನಿತ್ಯಶಃ॥ (ಆದಿ.1.143-42)

ಹೆಬ್ಬೆರಳನ್ನು ತೆಗೆಸಿದಾಗಲೂ ದ್ರೋಣರು ಅವನಿಗೆ ಅನುಗ್ರಹವನ್ನೇ ಮಾಡಿದರು ಎಂದು ಮುಂದಿನ ಶ್ಲೋಕದಲ್ಲಿಯೇ ನಿರ್ಣಯ ಹೇಳುತ್ತಿದೆ.

ಏಕಲವ್ಯನಿಗೆ ವಿದ್ಯಾದಾನ

ಪುನಃ ಕೃಪಾಲೂ ರೈವತಪರ್ವತೇ ತಂ ದ್ರೋಣಃ ಪ್ರಾದಾದಸ್ತ್ರವರಾಣಿ ತಸ್ಮೈ।
ಏಕಾಂತ ಏವಾಸ್ಯ ಭಕ್ತ್ಯಾ ಸುತುಷ್ಟೋ ಧನ್ವಿಶ್ರೇಷ್ಠಂ ಕೃತವಾನರ್ಜುನಂ ಚ ॥ ೬೬ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀ ಮನ್ಮಹಾಭಾರತತಾತ್ಪರ್ಯನಿರ್ಣಯೇ
ಪಾಂಡವಶಸ್ತ್ರಾಭ್ಯಾಸೋ ನಾಮ ಪಂಚದಶೋಧ್ಯಾಯಃ ॥

ಕೃಪಾಳುವಾದ ದ್ರೋಣನೇ ಪುನಃ ಏಕಲವ್ಯನ ಭಕ್ತಿಗೆ ಮೆಚ್ಚಿ ರೈವತ ಪರ್ವತದಲ್ಲಿ ಏಕಾಂತದಲ್ಲಿ ಅವನಿಗೆ ಉತ್ತಮ ಅಸ್ತ್ರಗಳನ್ನು ಉಪದೇಶಿಸಿದ. ಅವನನ್ನು ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡಿದ. ಅರ್ಜುನನನ್ನು ಅವನಿಗಿಂತ ಶ್ರೇಷ್ಠ ಧನುರ್ಧರನನ್ನಾಗಿ ಮಾಡಿದ.

ವೈದಿಕ ಅಸ್ತ್ರಮಂತ್ರಗಳಿಲ್ಲದ ಬೇರೆ ಧನುರ್ವಿದ್ಯೆಯನ್ನು ಹೇಳಿಕೊಟ್ಟು ಅರ್ಜುನನಿಗೆ ಎರಡನೆಯವನನ್ನಾಗಿ ಏಕಲವ್ಯನನ್ನು ಸಿದ್ಧಗೊಳಿಸಿದ್ದರು ದ್ರೋಣರು. ಇದು ಅವರ ಶಿಷ್ಯವಾತ್ಸಲ್ಯದ್ಯೋತಕ.

ಶ್ರೀಮದಾನಂದತೀರ್ಥಭಗವತ್ಪಾದರು ರಚಿಸಿದ ಶ್ರೀಮನ್ಮಹಾಭಾರತ
ತಾತ್ಪರ್ಯ ನಿರ್ಣಯದಲ್ಲಿ ಪಾಂಡವಶಸ್ತ್ರಾಭ್ಯಾಸವೆಂಬ
ಹದಿನೈದನೇ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೬

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಭೂಯಸ್ತ್ವಾಗತಮಾಹವೇ ಸಹ ಜರಾಸಂಧಂ ನೃಪೈರ್ನೀತಯೇ
ಜ್ಞಾತ್ವಾಗಾತ್ ಸಹಜಾನ್ವಿತೋಽತಿಗಹನಂ ಗೋಮಂತಮತ್ರಾಗತಾತ್ ।
ತಾರ್ಕ್ಷ್ಯೋಲ್ಲಬ್ಧಕಿರೀಟ ಉನ್ನತಗಿರೇರಾಪ್ಲುತ್ಯ ಜಿತ್ವಾರಿಪೂನ್
ಹತ್ವಾಸ್ವೀಯಸೃಗಾಲಮಾತ್ಮನಗರೀಂ ಪ್ರಾಪ್ತಃ ಸ ನೋಽವ್ಯಾದ್ಧರಿಃ ॥ ೧೬ ॥

ಜರಾಸಂಧ ಪುನಃ ರಾಜರುಗಳೊಂದಿಗೆ ಯುದ್ಧಕ್ಕೆ ಬಂದುದನ್ನು ತಿಳಿದು ಶ್ರೀಕೃಷ್ಣ ನೀತಿಯನ್ನು ತೋರುವುದಕ್ಕಾಗಿ ಬಲರಾಮನೊಂದಿಗೆ ಅತಿದಟ್ಟವಾದ ಗೋಮಂತಕ್ಕೆ ಪಲಾಯನ ಮಾಡಿದ. ಅಲ್ಲಿಗೆ ಬಂದ ಗರುಡನಿಂದ ಕಿರೀಟವನ್ನು ಪಡೆದು ಎತ್ತರದ ಬೆಟ್ಟದಿಂದ ಕೆಳಗೆ ಧುಮುಕಿ ಶತ್ರುಗಳನ್ನು ಗೆದ್ದು ತನ್ನ ಸಂಬಂಧಿಯಾದ ಸೃಗಾಲ ವಾಸುದೇವನನ್ನು ಕೊಂದು ತನ್ನ ಪಟ್ಟಣಕ್ಕೆ ಬಂದ. ಆ ಹರಿ ನಮ್ಮನ್ನು ಕಾಪಾಡಲಿ.

ಹದಿನಾರನೆಯ ಅಧ್ಯಾಯ

ಸೃಗಾಲವಧ

ಗೋಮಂತಶಿಖರದಲ್ಲಿ ಕೃಷ್ಣರಾಮರು

॥ ಹರಿಃ ಓಂ ॥

ಕಾಲೇ ತ್ವೇತಸ್ಮಿನ್ ಭಯ ಏವಾಖಿಲೈಶ್ಚ
ನೃಪೈರ್ಯುಕ್ತೋ ಮಾಗಧೋ ಯೋದ್ಧುಕಾಮಃ।
ಪ್ರಾಯಾದ್ ಯದೂಂಸ್ತತ್ರ ನಿತ್ಯಾವ್ಯಯಾತಿ-
ಬಲೈಶ್ವರ್ಯೋಽಪೀಚ್ಛಯಾಗಾತ್ ಸ ಕೃಷ್ಣಃ ॥ ೧ ॥

ರಾಜಕುಮಾರರು ದ್ರೋಣರ ಬಳಿ ಅಸ್ತ್ರಶಿಕ್ಷಣ ಪಡೆಯುತ್ತಿದ್ದ ಕಾಲದಲ್ಲಿ ಜರಾಸಂಧ ಪುನಃ ಎಲ್ಲ ರಾಜರುಗಳಿಂದೊಡಗೂಡಿ ಯುದ್ಧಮಾಡಲು ಬಯಸಿ ಯಾದವರ ಮೇಲೆ ದಾಳಿ ಮಾಡಿದ. ಆಗ ಕೃಷ್ಣ ನಿತ್ಯ ಅವಿನಾಶಿ ಬಲಸಾಮರ್ಥ್ಯಗಳುಳ್ಳವನಾದರೂ ಸ್ವೇಚ್ಛೆಯಿಂದಲೆ ಪಲಾಯನ ಮಾಡಿದ.

ಸಂದರ್ಶಯನ್ ಬಲಿನಾಮಲ್ಪಸೇನಾ-
ದ್ಯುಪಸ್ಕರಾಣಾಂ ಬಹುಲೋಪಸ್ಕರೈಶ್ಚ
ಪ್ರಾಪ್ತೇ ವಿರೋಧೇ ಬಲಿಭಿರ್ನೀತಿಮಗ್ರ್ಯಂ
ಯಯೌ ಸರಾಮೋ ದಕ್ಷಿಣಾಶಾಂ ರಮೇಶಃ ॥ ೨ ॥

ಸೈನ್ಯ ಮುಂತಾದ ಯುದ್ಧಸಾಧನಗಳು ಕಡಿಮೆಯಾಗಿಉಳ್ಳ ಬಲಿಷ್ಠರು ಬಹಳ ಸಾಧನ ಉಳ್ಳ ಬಲಿಷ್ಠರೊಡನೆ ವಿರೋಧ ಉಂಟಾದಾಗ ಅನುಸರಿಸಬೇಕಾದ ಉತ್ಕೃಷ್ಟ ನೀತಿಯನ್ನು ತೋರಿಸಲು ಕೃಷ್ಣ ಬಲರಾಮನೊಡನೆ ದಕ್ಷಿಣ ದಿಕ್ಕಿಗೆ ಪಲಾಯನ ಮಾಡಿದ.

ಸೋಽನಂತವೀರ್ಯಃ ಪರಮೋಽಭಯೋಽಪಿ
ನೀತ್ಯೈಗಚ್ಛನ್ ಜಾಮದಗ್ನ್ಯಂ ದದರ್ಶ।
ಕ್ರೀಡಾರ್ಥಮೇಕೋಽಪಿ ತತೋಽತಿದುರ್ಗಂ
ಶ್ರುತ್ವಾಗೋಮಂತಂ ತತ್ರ ಯಯೌ ಸಹಾಗ್ರಜಃ ॥ ೩ ॥

ಕೃಷ್ಣ ಅನಂತಶಕ್ತಿಶಾಲಿ, ಸರ್ವೋತ್ತಮ, ನಿರ್ಭೀತ. ಆದರೂ ಲೋಕಕ್ಕೆ ನೀತಿಯನ್ನು ಕಲಿಸುವುದಕ್ಕಾಗಿ ಪಲಾಯನ ಮಾಡುತ್ತ ದಾರಿಯಲ್ಲಿ ಪರಶುರಾಮನನ್ನು ಕಂಡ. ಇಬ್ಬರೂ ಒಂದೇ ಆದರೂ ಲೀಲೆಗಾಗಿ ಬೇರೆ ಎಂಬಂತೆ ತೋರಿಕೊಂಡು 'ಗೋಮಂತ ಪರ್ವತವು

ಶತ್ರುಗಳಿಗೆ ಅಗಮ್ಯವಾದ ಸ್ಥಾನ' ಎಂದು ಪರಶುರಾಮನಿಂದ ಕೇಳಿ ತಿಳಿದು ಬಲರಾಮನೊಡನೆ ಅಲ್ಲಿಗೆ ಹೋದ.

ಕೃಷ್ಣರಾಮರು ಮೊದಲಿಗೆ ಕರವೀರಪುರ (ಕೊಲ್ಲಾಪುರ)ಕ್ಕೆ ಬಂದು ಅಲ್ಲಿ ವೇಣಾನದೀ ತೀರದ ಆಶ್ರಮದಲ್ಲಿ ಪರಶುರಾಮನನ್ನು ಕಂಡರು. ಪರಶುರಾಮ ಕೃಷ್ಣರಾಮರನ್ನು ಕಾಣುವುದಕ್ಕಾಗಿಯೆ ಶಿಷ್ಯರನ್ನು ಬಿಟ್ಟು ಶೂರ್ಪಾರಕದಿಂದ ಒಬ್ಬನೆ ಕರವೀರ ಪುರಕ್ಕೆ ಬಂದಿದ್ದ. ಶೂರ್ಪಾರಕವೆಂದರೆ ಸಮುದ್ರರಾಜ ಪರಶುರಾಮನಿಗೆ ಬಿಟ್ಟುಕೊಟ್ಟ ದೇಶ. ಪರಶುರಾಮಕ್ಷೇತ್ರ. ಈಗಿನ ಕೊಂಕಣಸೀಮೆ. ಇಲ್ಲಿ ತೀರ್ಥಸ್ನಾನ ಮಾಡಿ ಒಂದು ಪಕ್ಷಕಾಲ ನಿರಾಹಾರವಿದ್ದರೆ ಮುಂದಿನ ಜನ್ಮದಲ್ಲಿ ರಾಜಕುಮಾರನಾಗಿ ಹುಟ್ಟುತ್ತಾನೆ ಎಂದು ಅನುಶಾಸನಪರ್ವ (25-50)ದಲ್ಲಿ ಹೇಳಿದೆ.

ಆಗ ಕರವೀರಪುರದಲ್ಲಿ ಶೃಗಾಲವಾಸುದೇವ ಆಳುತ್ತಿದ್ದ. ಆತ ಮಹಾಕ್ರೂರಿ. ಮತ್ಸರಿ. ತನ್ನ ಮಕ್ಕಳನ್ನೇ ದ್ವೇಷಿಸುವವ. ಯಾದವರ ಪರಮಶತ್ರು. ಆದರಿಂದ ಜರಾಸಂಧನೊಡನೆ ಗಿರಿಯುದ್ಧ (ಗೆರಿಲ್ಲಾ) ಮಾಡಲು ಸಹ್ಯಪರ್ವತದ ನಡುವಿನ ಬಲು ಎತ್ತರದ ಗೋಮಂತ ಪರ್ವತವೆ ಒಳ್ಳೆಯದು ಎನ್ನುತ್ತ ಪರಶುರಾಮ ಕೃಷ್ಣರಾಮರನ್ನು ಗೋಮಂತ ಪರ್ವತದ ಪ್ರವರ್ಷಣ ಶಿಖರಕ್ಕೆ ಕರೆದೊಯ್ದು ಭೂಭಾರಹರಣ ಮಾಡಿರೆಂದು ಹೇಳಿ ಹಿಂತಿರುಗಿದ.

ಬಲಿ ಚಕ್ರವರ್ತಿ ಕಿರೀಟ ಕದ್ದ

ತದಾ ದುಗ್ಧಾಬ್ಧೌಸಂಸ್ಥಿತಿಸ್ಥೈಃ ಸುರಾದ್ಯೈಃ
ಪೂಜಾಂ ಪ್ರಾಪ್ತುಂ ಸ್ಥಾನಮೇಷಾಂ ಚ ಯೋಗ್ಯಮ್ ।
ಮುಕ್ತಸ್ಥಾನಾದಾಪ ನಾರಾಯಣೋಽಜೋ
ಬಲಿಶ್ಚಾಗಾತ್ ತತ್ರ ಸಂದ್ರುಷ್ಟಮೀಶಮ್ ॥ ೪ ॥

ಆಗ ಕ್ಷೀರಸಾಗರದಲ್ಲಿ ಅಮುಕ್ತದೇವಾದಿಗಳಿಂದ ಸೇವೆ ಕೈಗೊಳ್ಳಲು ಅವರಿಗೆ ಯೋಗ್ಯವಾದ ಅಮುಕ್ತಸ್ಥಾನಕ್ಕೆ ಮುಕ್ತಸ್ಥಾನದಿಂದ ನಾರಾಯಣ ಬಂದ. ಆ ಸರ್ವೇಶ್ವರನನ್ನು ಕಾಣಲು ಅಲ್ಲಿಗೆ ಬಲಿಯೂ ಬಂದ.

ತತ್ರಾಸುರವೇಶಮಮುಷ್ಯ ವಿಷ್ಣುಃ
ಸಂದರ್ಶಯನ್ ಸುಪಿಹೀನೋಽಪಿ ನಿತ್ಯಮ್ ।
ಸಂಸುಪ್ತವಚ್ಛಿಶ್ಯ ಉದಾರಕರ್ಮಾ
ಸಂಜ್ಞಾಯೈ ದೇವಾನಾಂ ಮುಖಮೀಕ್ಷ್ಯಾಪ್ರಮೇಯಃ ॥ ೫ ॥

ಅಲ್ಲಿ ಉತ್ಕೃಷ್ಟ ಕಾರ್ಯಗಳನ್ನೇ ಮಾಡುವ ಅಪ್ರಮೇಯವಾದ ವಿಷ್ಣು ಬಲಿಗೆ ಅಸುರಾವೇಶವಿದ್ದುದನ್ನು ತೋರಿಸುವುದಕ್ಕೆ ತಾನೆಂದೂ ನಿದ್ದೆ ಇಲ್ಲದವನಾದರೂ ದೇವತೆಗಳಿಗೆ ಸನ್ನೆಗಾಗಿ ಮುಖನೋಡಿ ನಿದ್ದೆ ಮಾಡುವವನಂತೆ ಮಲಗಿದ.

ದೇವಾಶ್ಚ ತದ್ಭಾವವಿದೋಽಖಿಲಾಶ್ಚ ನಿಮೀಲಿತಾಕ್ಷಾಃ ಸಯನೇಷು ಶಿಶ್ಯಿರೇ।
ತದಾ ಬಲಿಸ್ತಸ್ಯ ವಿಷ್ಣೋಃ ಕಿರೀಟಮಾದಾಯಾಗಾಜ್ಜಹಸುಃ ಸರ್ವದೇವಾಃ ॥ ೬ ॥

ದೇವತೆಗಳೆಲ್ಲರೂ ಹರಿಯ ಅಭಿಪ್ರಾಯ ತಿಳಿದು ಕಣ್ಣುಮುಚ್ಚಿ ಹಾಸಿಗೆಗಳಲ್ಲಿ ಮಲಗಿದರು. ಆಗ ಬಲಿ ವಿಷ್ಣುವಿನ ಕಿರೀಟವನ್ನು ಎತ್ತಿಕೊಂಡು ಹೊರಟುಹೋದ. ಎಲ್ಲ ದೇವತೆಗಳೂ ನಕ್ಕರು.

ನಾರಾಯಣೇ ಸರ್ವದೇವೈಃ ಸಮೇತೇ
ಬ್ರಹ್ಮಾದಿಭೀರ್ಹಾಸಮಾನೇ ಸುಪರ್ಣಃ।
ಗತ್ವಾಪಾತಾಲಂ ಯುಧಿ ಜಿತ್ವಾ ಬಲಿಂ ಚ
ಕಿರೀಟಮಾದಾಯಾಭ್ಯಯಾದ್ ಯತ್ರ ಕೃಷ್ಣಃ ॥ ೭ ॥

ಶ್ರೀಹರಿಯೂ ಬ್ರಹ್ಮಾದಿ ಸಕಲ ದೇವತೆಗಳೂ ನಗುತ್ತಿದ್ದಾಗ ಗರುಡ ಪಾತಾಳಕ್ಕೆ ಹೋಗಿ ಯುದ್ಧದಲ್ಲಿ ಬಲಿಯನ್ನು ಗೆದ್ದು ಕಿರೀಟವನ್ನು ಹಿಡಿದುಕೊಂಡು ಕೃಷ್ಣನಿರುವಲ್ಲಿಗೆ ಬಂದ.

ತತ್ತಸ್ಯ ಶೀರ್ಷ್ಣಿ ಪ್ರತಿಮುಚ್ಯ ನತ್ವಾ
ಖಿಗಃ ಸ್ತುತ್ವಾದೇವದೇವಂ ರಮೇಶಮ್ ।
ಸ್ಮೃತ ಆಗಚ್ಛೇತ್ಯೇವ ವಿಸರ್ಜಿತೋಽಮುನಾ
ಯಯೌ ದುಗ್ಧಾಬ್ಧಿಂ ಯತ್ರ ನಾರಾಯಣೋಽಸೌ ॥ ೮ ॥

ಗರುಡ ಕಿರೀಟವನ್ನು ಕೃಷ್ಣನ ತಲೆಯ ಮೇಲಿಟ್ಟು ದೇವದೇವನಾದ ಆ ರಮೇಶನನ್ನು ನಮಿಸಿ ಸ್ತೋತ್ರಮಾಡಿದ. 'ನೆನೆದೊಡನೆ ಬಾ' ಎಂದು ಹೇಳಿ ಕೃಷ್ಣ ಅವನನ್ನು ಕಳಿಸಿದ. ಅವನು ಅಲ್ಲಿಂದ ಕ್ಷೀರಸಾಗರಕ್ಕೆ ಆ ನಾರಾಯಣನಿರುವಲ್ಲಿಗೆ ಹಾರಿಹೋದ.

ಕಿರೀಟಂ ತತ್ ಕೃಷ್ಣಮೂರ್ಧ್ನಿ ಪ್ರವಿಷ್ಟಂ
ತತ್ತುಲ್ಯಮಾಸೀತ್ ತಸ್ಯರೂಪೇಷ್ವಭೇದಾತ್ ।
ತದಿಚ್ಛಯಾ ಚೈವ ನಾರಾಯಣಸ್ಯ
ಶೀರ್ಷ್ಣ್ಯಪ್ಯಾಸೀದ್ ಯುಗಪದ್ ದುಗ್ಧವಾಧ್ರ್ಯೌ ॥ ೯ ॥

ಕೃಷ್ಣನ ತಲೆಯ ಮೇಲೆ ಆ ಕಿರೀಟ ಕುಳಿತು ಅದಕ್ಕೆ ಸಮವಾಯಿತು. ಏಕೆಂದರೆ ಹರಿಯ

ರೂಪಗಳಲ್ಲಿ ಭೇದವಿಲ್ಲ. ಅದರಿಂದ ಕೃಷ್ಣನ ಇಚ್ಛೆಯಿಂದಲೆ ಕ್ಷೀರಸಾಗರದಲ್ಲಿ ನಾರಾಯಣನ ತಲೆಯ ಮೇಲೂ ಏಕಕಾಲದಲ್ಲಿ ಅದೇ ಕಿರೀಟವಿತ್ತು.

ಬಲರಾಮನ ಪತ್ನಿಯರು

ಪೂರ್ವಂ ಪ್ರಾಪ್ತಾನ್ಯೇವ ದಿವ್ಯಾಯುಧಾನಿ
ಪುನರ್ವೈಕುಂಠ ಲೋಕಮಿತಾನಿ ಭೂಯಃ।
ತದಾವತೇರೂ ರೌಹಿಣೇಯಸ್ಯ ಚೈವಂ
ಭಾರ್ಯಾಪ್ಯಾಗಾದ್ವಾರುಣೀ ನಾಮ ಪೂರ್ವಾ ॥ ೧೦ ॥

ಹಿಂದೆ ಬಂದಿದ್ದ ಕೃಷ್ಣನ ದಿವ್ಯಾಯುಧಗಳು ತಿರುಗಿ ವೈಕುಂಠಲೋಕಕ್ಕೆ ಹೋಗಿದ್ದವು. ಅವು ಈಗಲೂ ಬಂದಿಳಿದುವು. ಬಲರಾಮನಿಗೆ ಹಾಗೇ ಅವನ ದಿವ್ಯಾಯುಧಗಳು ಬಂದಿಳಿದುವು. ಹಿಂದೆ ಅವನ ಪತ್ನಿಯಾಗಿದ್ದ ವಾರುಣೀ ಎಂಬವಳೂ ಬಂದಳು.

ಜರಾಸಂಧನೊಡನೆ ಮೊದಲಬಾರಿ ಮಾಡಿದ ಯುದ್ಧದಲ್ಲಿ ಕೃಷ್ಣರಾಮರಿಗೆ ಅವರ ಮೂಲರೂಪದ ದಿವ್ಯಾಯುಧಗಳು ಬಂದಿದ್ದುವು. ಯುದ್ಧವು ಮುಗಿದಾಗ ಹಾಗೇ ಹಿಂದೆ ಹೋಗಿದ್ದವು. ಈಗ ಅವು ತಿರುಗಿ ಬಂದಿಳಿದುವು. ಬಲರಾಮನಿಗೆ ಅವನ ಮೂಲರೂಪದಲ್ಲಿ ಪತ್ನಿಯಾಗಿದ್ದ ವಾರುಣೀದೇವಿ ಈಗ ಮೂಲರೂಪದಿಂದಲೆ ಬಲರಾಮನ ಬಳಿಗೆ ಬಂದಳು.

ಶೈವಾಪರಂ ರೂಪಮಾಸ್ಥಾಯ ಚಾಗಾತ್
ಶ್ರೀರಿತ್ಯಾಖ್ಯಂ ಸೇಂದಿರಾವೇಶಮಗ್ರ್ಯಮ್ ।
ಕಾಂತಿಶ್ಚಾಗಾತ್ ತಸ್ಯ ಸೋಮಸ್ಯ ಚಾನ್ಯಾ
ಭಾರ್ಯಾದ್ವಯೋಃ ಪೂರ್ವತನಾ ಸುರೂಪಾ ॥ ೧೧ ॥

ವಾರುಣಿಯೇ ರಮಾವೇಶಯುಕ್ತವಾದ ಉತ್ತಮವಾದ ಶ್ರೀ ಎಂಬ ಹೆಸರಿನ ಇನ್ನೊಂದು ರೂಪ ತಾಳಿಯೂ ಬಲರಾಮನ ಬಳಿಗೆ ಬಂದಳು. ಕಾಂತಿ ಎಂಬ ಹೆಸರಿನ ಬಲರಾಮನ ಪತ್ನಿಯೂ ನಾಗಲೋಕದಿಂದ ಬಂದಳು. ಚಂದ್ರನ ಮಡದಿಯಾದ ಕಾಂತಿಯೂ ಬಂದಳು. ಅವಳು ಇನ್ನೊಬ್ಬಳು ಪತ್ನಿ. ಇವರಿಬ್ಬರಲ್ಲಿ ಮೊದಲಿನವಳು ಹೆಚ್ಚು ಸುಂದರಿ.

ಶ್ರೀಶ್ಚ ಪದ್ಮಾಲಯಾ ದೇವೀ ನಿಧೇಯಾ ವೈಷ್ಣವೋರಸಿ।
ರೌಹಿಣೇಯೋರಸಿ ಶುಭಾ ಮಾಲೇವಾಮಲತಾಂ ಗತಾ ॥

'ವಿಷ್ಣುವಿನ ಉರಸ್ಥಳದಲ್ಲಿರುವ ಶ್ರೀದೇವಿ ಬಲರಾಮನ ಎದೆಯಲ್ಲಿ ಶೋಭಿಸಿದಳು' ಎಂದು ಹರಿವಂಶ ಹೇಳುತ್ತಿದೆ. ಇಲ್ಲಿ ಶ್ರೀದೇವಿ ಸಾಕ್ಷಾತ್

ರಮೆಯಲ್ಲ. ರಮಾವೇಶಯುಕ್ತಳಾದ ವಾರುಣಿಯ ಒಂದಂಶವೆಂದು ತಾತ್ಪರ್ಯ.

'ಕಾಂತಿಶ್ಚ ಶಶಿನಃ ಪ್ರಿಯಾ' ಚಂದ್ರನ ಮಡದಿಯಾದ ಕಾಂತಿದೇವಿಯೂ ಬಂದಳು' ಎಂದೂ ಹರಿವಂಶ ಹೇಳುತ್ತಿದೆ. ಚಂದ್ರನ ಮಡದಿ ಬಲರಾಮನ ಮಡದಿಯಾಗುವುದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಜನಾರ್ದನೀಯ ವರದರಾಜೀಯಗಳಲ್ಲಿ 'ಸೋಮಸ್ಯ ಭಾರ್ಯಾ ಕಾಂತಿರನ್ಯಾ' 'ಸೋಮನ ಮಡದಿಯಾದ ಕಾಂತಿ ಬೇರೆ. ಬಲರಾಮನ ಮಡದಿಯಾದ ಕಾಂತಿಯೆ ಬೇರೆ' ಎಂದು ನಿರ್ಣಯವನ್ನು ಅರ್ಥೈಸಿ ಸಮಾಧಾನ ನೀಡಿದೆ.[1]

ಆದರೆ ವಾದಿರಾಜೀಯದಲ್ಲಿ 'ಸೋಮಸ್ಯ ಭಾರ್ಯಾ ಕಾಂತಿರನ್ಯಾ ಪತ್ನೀ' 'ಸೋಮನ ಮಡದಿಯಾದ ಕಾಂತಿ ಬಲರಾಮನ ಇನ್ನೊಬ್ಬಳು ಮಡದಿ' ಎಂದು ಸ್ಪಷ್ಟ ಹೇಳಿದೆ.[2] ಅವರ ಅಭಿಪ್ರಾಯದಲ್ಲಿ ಚಂದ್ರಪತ್ನಿ ಬಲರಾಮನ ಪತ್ನಿಯಾಗಬಹುದು. ದೇವತಾಸ್ತ್ರೀಯರಿಗೆ ತಮ್ಮ ಪತಿಗಿಂತ ಉತ್ತಮರ ಸಂಗದಿಂದ ದೋಷವಿಲ್ಲ. ಇದು ಹರಿವಂಶದಲ್ಲಿ ಸ್ಪಷ್ಟವಿದೆ. ಅಲ್ಲಿ ಸೋಮನ ಮಡದಿ ಕಾಂತಿದೇವಿ ಬಲರಾಮನ ಮುಂದೆ, 'ಚಂದ್ರನಿಗಿಂತ ಶ್ರೇಷ್ಠನಾದ ನಿನ್ನಲ್ಲಿ ನಾನು ಅನುರಕ್ತಳಾಗಿ ಬಂದಿದ್ದೇನೆ' ಎನ್ನುತ್ತಾಳೆ-

ಅಹಂ ಚಂದ್ರಾದಪಿ ಗುರುಂ ಸಹಸ್ರಶಿರಸಂ ಪ್ರಭುಂ ।
ಸ್ವೈರ್ಗುಣೈರನುರಕ್ತಾತ್ವಾಂ ಯಥೈವ ಮದಿರಾ ತಥಾ ॥

ನಿರ್ಣಯದಲ್ಲಿ ಕೂಡ 'ಶಶಾಂಕಪೂರ್ವೋದ್ರಿಕ್ತಕಾಂತಿಃ' ಎಂಬಲ್ಲಿ ಇದೇ ಅಭಿಪ್ರಾಯ ಸೂಚಿತವಾಗುತ್ತಿದೆ.

'ಇವರಿಬ್ಬರಲ್ಲಿ ಮೊದಲನೆಯವಳು ಹೆಚ್ಚು ಸುಂದರಿ' ಎನ್ನುವಲ್ಲಿ 'ಇವರಿಬ್ಬರು ಯಾರು? ವಾರುಣಿ ಕಾಂತಿಯರು ಎಂದು ಜನಾರ್ದನೀಯ. ಶ್ರೀ ಕಾಂತಿಯರೆಂದು ವರದರಾಜೀಯ. ಇಬ್ಬರು ಅಭಿಪ್ರಾಯದಲ್ಲಿಯೂ

---

1. ಕಾಂತಿಶ್ಚ ಶಶಿನಃ ಪ್ರಿಯೇತಿ ಹರಿವಂಶೇ। ಅತ್ರ ರಾಮಭಾರ್ಯೇತಿ ಕಥ ಮುಕ್ತೇತ್ಯತ ಆಹ ಸೋಮಸ್ಯೇತಿ। ಸೋಮಸ್ಯ ಭಾರ್ಯಾ ಕಾಂತಿರನ್ಯಾ। ರಾಮಭಾರ್ಯಾಯಾಃ ಕಾಂತ್ಯಾಃ ಭಿನ್ನಾ।
-ಜನಾರ್ದನೀಯ

ನೇಯಂ ಸೋಮಸ್ಯ ಭಾರ್ಯಾ ಕಾಂತಿರಿತಿ ಭ್ರಮಿತವ್ಯಮಿತ್ಯಾಹ ಸೋಮಸ್ಯೇತಿ। ಸೋಮಸ್ಯ ಭಾರ್ಯಾ ಕಾಂತಿರನ್ಯಾ। ಬಲಭದ್ರ ಭಾರ್ಯಾ ಕಾಂತಿರ್ಭಿನ್ನಾ। -ವರದರಾಜೀಯ

2. ಸೋಮಸ್ಯ ಭಾರ್ಯಾ ಕಾಂತಿರನ್ಯಾ ಪತ್ನೀ। -ವಾದಿರಾಜೀಯ

ವಾರುಣೀ ಶ್ರೀ ಇಬ್ಬರೊಂದೇ ಆದ್ದರಿಂದ 'ಇಬ್ಬರಲ್ಲಿ' ಎನ್ನುವುದು ಕೂಡುತ್ತದೆ. ವಾದಿರಾಜೀಯದಲ್ಲಿ 'ಇಬ್ಬರು ಕಾಂತಿಯರೇ ಇದ್ದಾರೆ, ಅವರಲ್ಲಿ ಎರಡನೆಯವಳು ಸೋಮನ ಮಡದಿ ಕಾಂತಿ. ಅವಳಿಗಿಂತ ಮೊದಲಿನವಳು ಶೇಷಪತ್ನಿ ಕಾಂತಿ ಹೆಚ್ಚು ಸುಂದರಿ' ಎಂದಿದೆ.[1]

ತಾಭೀ ರಾಮೋ ಮುಮುದೇ ತತ್ರ ತಿಷ್ಠನ್
ಶಶಾಂಕಪೂಗೋದ್ರಿಕ್ತ ಕಾಂತಿಃ ಸುಧಾಮಾ ।
ತಸ್ಯಾ ವಾರುಣ್ಯಾಃ ಪ್ರತಿಮಾ ಪೇಯರೂಪಾ
ಕಾದಂಬರೀ ವಾರುಣೀಂ ತಾಂ ಪಪೌ ಸಃ ॥ ೧೨ ॥

ಚಂದ್ರ ಸಮೂಹಕ್ಕಿಂತ ಹೆಚ್ಚಿನ ಕಾಂತಿಯುಳ್ಳ ಬಲರಾಮ ಆ ಗೋಮಂತ ಪರ್ವತದಲ್ಲಿದ್ದು ವಾರುಣೀ ಶ್ರೀಕಾಂತಿಯರೊಡನೆ ಆನಂದಿಸಿದ. ವಾರುಣಿಯ ಪ್ರತೀಕವೆ ಪೇಯರೂಪವಾದ ಕಾದಂಬರಿ. ಬಲರಾಮ ಆ ಕಾದಂಬರಿಯನ್ನು ಕುಡಿದ.

ಶೇಷನ ಪತ್ನಿವಾರುಣೀದೇವಿ 'ವಾರುಣೀ' ಎಂಬ ಮದ್ಯಕ್ಕೆ ಅಭಿಮಾನಿನಿ. ಈ ಮದ್ಯ ಕದಂಬ ವೃಕ್ಷದಿಂದ ಅಂದರೆ ಈಚಲು ಮರದಿಂದ ಒಸರುವ ರಸದಿಂದ ತಯಾರಿಸಿದ್ದು. ಅದರಿಂದ ಅದಕ್ಕೆ ಕಾದಂಬರೀ ಎಂಬ ಹೆಸರೂ ಇದೆ. 'ಕದ್ ಅಂಬರ' ಅಂದರೆ ನೀಲಾಂಬರನಾದ ಬಲರಾಮನಿಗೆ ಪ್ರಿಯವಾದ್ದರಿಂದಲೂ 'ಕಾದಂಬರೀ' ಎಂದು ಹೆಸರು. ಕ್ಷೀರಸಮುದ್ರ ಮಥನ ಕಾಲದಲ್ಲಿ ವರುಣನ ಮಗಳಾಗಿ ಜನಿಸಿದ ವಾರುಣಿಯಿಂದ ಅಭಿಮನ್ಯಮಾನವಾದ್ದರಿಂದ 'ವಾರುಣಿ' ಎಂದೂ ಹೆಸರು.[2]

---

1. ದ್ವಯೋರ್ವಾರುಣಕಾಂತ್ಯೋರ್ಮಧ್ಯೇ ಪೂರ್ವತನಾ ಜ್ಯೇಷ್ಠಾ ವಾರುಣೀ ಸುರೂಪಾ ಸುಂದರರೂಪಾ। -ಜನಾರ್ದನೀಯ
ದ್ವಯೋಃ ಶ್ರೀಕಾಂತ್ಯೋರ್ಮಧ್ಯೇ ಪೂರ್ವತನಾ ಶ್ರೀಃ ಸುರೂಪಾ ಸುಂದರರೂಪೇತ್ಯರ್ಥಃ। -ವರದರಾಜೀಯ
ದ್ವಯೋಃ ಕಾಂತ್ಯೋರ್ಮಧ್ಯೇ ಇಯಂ ಕಾಂತಿಃ ಪೂರ್ವತನಾ ಜ್ಯೇಷ್ಠಾ ಸುರೂಪಾ ಚೇತ್ಯನ್ವಯಃ। -ವಾದಿರಾಜೀಯ

2. ತಸ್ಯಾಃ ಪೂರ್ವೋಕ್ತಾಯಾ ವಾರುಣ್ಯಾಃ ಪ್ರತಿಮಾ ಅಭಿಮನ್ಯಮಾನ ಸ್ವರೂಪಾ ಪೇಯರೂಪಾ ಪಾನಯೋಗ್ಯಮದ್ಯಸ್ವರೂಪಾ ಯಾ ಕಾದಂಬರೀ ಕದಂಬ ಕೋಟರಾದುತ್ಪನ್ನಾ ತಾಂ ವಾರುಣೀಂ ಸಮುದ್ರೋತ್ಪನ್ನತ್ವಾದ್ ವಾರುಣೀನಾಮ್ನೀಂ ವರುಣಾತ್ಮಜಾಮಿತ್ಯರ್ಥಃ ಶೇಷಭಾರ್ಯಾಯಾ ವಾರುಣ್ಯಾ ಅಭಿಮನ್ಯಮಾನತ್ವಾತ್ ವಾರುಣೀನಾಮ್ನೀಂ ಕಾದಂಬರೀಂ ಪಪಾವಿತಿ ಯೋಜನಾ।
ಕದಂಬ ಕೋಟರಾಜ್ಜಾತಾ ನಾಮ್ನಾ ಕಾದಂಬರೀತಿ ಸಾ ।
ವಾರುಣೀ ರೂಪಿಣೀ ತತ್ರ ದೇವಾನಾಮಮೃತಾರಣೀ ॥ -ಇತಿ ಹರಿವಂಶೇ ।

ಜರಾಸಂಧ ಯುದ್ಧ

ಏವಂ ತಯೋಃ ಕ್ರೀಡತೋಃ ಸ್ವೈರಮತ್ರ
ರಾಜನ್ಯವೃಂದಾನುಗತೋ ಜರಾಸುತಃ।
ಗಿರಿಂ ಗೋಮಂತಂ ಪರಿವಾರ್ಯಾದಹತ್ ತಂ
ದೃಷ್ಟ್ವಾದೇವೌ ಪುಪ್ಲವತುರ್ಬಲಾಢ್ಯೌ ॥ ೧೩ ॥

ಹೀಗೆ ಕೃಷ್ಣರಾಮರು ಸ್ವೇಚ್ಛಾನುಸಾರ ಗೋಮಂತಶಿಖರದಲ್ಲಿ ವಿಹರಿಸುತ್ತಿದ್ದಾಗ ರಾಜರುಗಳ ಸಮೂಹ ಸಮೇತನಾಗಿ ಜರಾಸಂಧ ಗೋಮಂತ ಪರ್ವತವನ್ನು ಸುತ್ತುವರಿದು ಸುಟ್ಟ. ಅದನ್ನು ನೋಡಿ ಬಲಾಢ್ಯರಾದ ಕೃಷ್ಣರಾಮರು ಕೆಳಗೆ ಹಾರಿದರು.

ಗಿರಿಸ್ತಾಭ್ಯಾಂ ಪೀಡಿತಃ ಸನ್ನಿಮಗ್ನೋ
ಭೂಮೌ ಪದ್ಭ್ಯಾಂ ಯೋಜನೈಕಾದಶಂ ಸಃ।
ನಿಷ್ಪೀಡಿತಾಜ್ವಲಧಾರೋದ್ಗತಾಸ್ಮಾದ್
ವಹ್ನಿಂ ವ್ಯಾಪ್ತಂ ಶಮಯಾಮಾಸ ಸರ್ವಮ್ ॥ ೧೪ ॥

ಅವರ ಪಾದಗಳ ಒತ್ತಡದಿಂದ ಬೆಟ್ಟ ಹನ್ನೊಂದು ಯೋಜನದಷ್ಟು ನೆಲದೊಳಗೆ ಹುದುಗಿತು. ಬೆಟ್ಟವನ್ನು ಒತ್ತಿದ್ದರಿಂದ ನೀರಧಾರೆ ಮೇಲೆದ್ದು ಬಂದು ಹಬ್ಬಿದ್ದ ಎಲ್ಲ ಬೆಂಕಿಯನ್ನೂ ಆರಿಸಿತು.

ಬೆಟ್ಟದ ಶಿಖರದಿಂದ ಕೃಷ್ಣರಾಮರು ಬೆಟ್ಟದ ಮೇಲೆ ಜಿಗಿದಾಗ ಆ ಭಾರಕ್ಕೂ ವೇಗಕ್ಕೂ ಬೆಟ್ಟ ನೆಲದೊಳಗೆ ಹುದುಗಿತು. ನೆಲದಡಿಯಿಂದ ನೀರನ್ನು ಕಾರಂಜಿಯಂತೆ ಮೇಲೆ ತಂದಿತು. ಅದರಿಂದ ಬೆಂಕಿ ಆರಿತು.

ಸೇನಾಂ ಪ್ರವಿಷ್ಟೌ ಸರ್ವ ರಾಜನ್ಯವೃಂದಂ ವ್ಯಮಥ್ನಾತಾಂ ದೇವವರೌ ಸ್ವಶಸ್ತ್ರೈಃ।
ತತ್ರೈವ ಹಂಸೋ ಡಿಭಿಕಶ್ಚ ಕಲವ್ಯಃ ಸಕೀಚಕಸ್ತೌ ಶಿಶುಪಾಲಪೌಂಡ್ರಕೌ ॥ ೧೫ ॥

ಭೌಮಾತ್ಮಜೋ ದಂತವಕ್ರಶ್ಚ ರುಕ್ಮೀ
ಸೌಭಾಧಿಪೋ ಮೈಂದಮೈಂದಾನುಜೌ ಚ।
ಅನ್ಯೇಚ ಯೇ ಪಾರ್ಥಿವಾಃ ಸರ್ವ ಏವ
ಕ್ರೋಧಾತ್ ಕೃಷ್ಣಂ ಪರಿವಾರ್ಯಾಭ್ಯವರ್ಷನ್ ॥ ೧೬ ॥

ಸುರಾ ಹಲಿಪ್ರಿಯಾ ಹಾಲಾ ಪರಿಸ್ರುದ್ ವರುಣಾತ್ಮಜಾ।
ಗಂಧೋತ್ತಮಾ ಪ್ರಸನ್ನೇರಾ ಕಾದಂಬರ್ಯಃ ಪರಿಸ್ರುತಾ ॥ -ಇತ್ಯಮರಃ
ಕುತ್ಸಿತಂ ಚ ತದ್ ಅಂಬರಂ ಚ ನೀಲವಸ್ತ್ರಮಿತ್ಯರ್ಥಃ। ತದಸ್ಯಾಸ್ತೀತಿ ಕದಂಬರಃ।
ತಸ್ಯೇಯಂ ಕಾದಂಬರೀತಿ ಕ್ಷೀರಸ್ವಾಮಿನಾ ವ್ಯಾಖ್ಯಾತಂ ॥ -ಜನಾರ್ದನೀಯ

ಶಸ್ತ್ರೈರಸ್ತ್ರೈ ರ್ದ್ರುಮಪೂಗೈಃ ಶಿಲಾಭಿರ್ಭಕ್ತಾಶ್ಚಯೇ ಶಲ್ಯಬಾಹ್ಲೀಕಮುಖ್ಯಾಃ।
ಸಸೋಮದತ್ತಾಃ ಸೌಮದತ್ತಿರ್ವಿರಾಟಃ ಪಾಂಚಾಲರಾಜಶ್ಚ ಜರಾಸುತಸ್ಯ।
ಭಯಾತ್ ಕೃಷ್ಣಂ ಶರವರ್ಷೈರವರ್ಷನ್ ಕಾರಾಗೃಹೇ ವಾಸಿತಾ ಮಾಗಧೇನ ॥ ೧೭ ॥

ದೇವೋತ್ತಮರಾದ ಕೃಷ್ಣರಾಮರು ಜರಾಸಂಧನ ಸೈನ್ಯವನ್ನು ಹೊಕ್ಕು ತಮ್ಮ ಶಸ್ತ್ರಗಳಿಂದ ಎಲ್ಲ ರಾಜರುಗಳ ಸಮೂಹವನ್ನೂ ಪುಡುಗೈಯಲು ತೊಡಗಿದರು. ಆಗಲೆ ಹಂಸ ಡಿಭಿಕ ಏಕಲವ್ಯ ಕೀಚಕ ಶಿಶುಪಾಲ ಪೌಂಡ್ರಕ, ಭಗದತ್ತ, ದಂತವಕ್ರ, ರುಕ್ಮಿ, ಸಾಲ್ವ, ಮೈಂದ ವಿವಿದ ಮತ್ತು ಬೇರೆ ಎಲ್ಲ ರಾಜರು ಕ್ರೋಧದಿಂದ ಕೃಷ್ಣನನ್ನು ಸುತ್ತುವರಿದು ಶಸ್ತ್ರಾಸ್ತ್ರಗಳ ಮರಕಲ್ಲುಗಳ ಸಮೂಹಗಳನ್ನು ಮಳೆಗರೆದರು. ಶಲ್ಯ ಬಾಹ್ಲೀಕ ಮುಂತಾದವರೂ ಸೋಮದತ್ತ ಭೂರಿಶ್ರವ ವಿರಾಟ ದ್ರುಪದರೂ ಕೃಷ್ಣನ ಭಕ್ತರೇ ಆಗಿದ್ದರೂ ಜರಾಸಂಧನಿಂದ ಹಿಂದೆ ಕಾರಾಗೃಹದಲ್ಲಿ ಇಡಲ್ಪಟ್ಟವರಾದ್ದರಿಂದ ಅವನ ಭಯದಿಂದ ಕೃಷ್ಣನ ಮೇಲೆ ಬಾಣಗಳ ಮಳೆ ಸುರಿದರು.

ಹಂಸ ಡಿಭಿಕ ಏಕಲವ್ಯ ಮುಂತಾದವರು ಕೃಷ್ಣದ್ವೇಷಿಗಳು ಸ್ವಾಭಾವಿಕ ಕೋಪದಿಂದ ಕೃಷ್ಣನೊಡನೆ ಯುದ್ಧ ಮಾಡಿದರು. ಭಗದತ್ತ ಮೈಂದ ವಿವಿದರು ಸಜ್ಜೀವರಾದರೂ ಅಸುರಾವೇಶದಿಂದ ಕೋಪದಿಂದಲೆ ಯುದ್ಧಮಾಡಿದರು. ಶಲ್ಯಬಾಹ್ಲೀಕಾದಿಗಳು ಭಕ್ತರು. ಕೇವಲ ಜರಾಸಂಧನ ಭಯದಿಂದಲೇ ಯುದ್ಧಮಾಡಿದರು.

ಸರ್ವಾನೇತಾನ್ ಶರವರ್ಷೇಣ ಕೃಷ್ಣೋ
ವಿಸೂತವಾಜಿಧ್ವಜಶಸ್ತ್ರವರ್ಮಣಃ।
ಕೃತ್ವಾವಮಚ್ಛೋಣಿತಾನಾರ್ತರೂಪಾನ್
ವಿದ್ರಾವಯಾಮಾಸ ಹರಿರ್ಯಥಾ ಮೃಗಾನ್ ॥ ೧೮ ॥

ಶ್ರೀಕೃಷ್ಣ ಬಾಣಗಳ ಮಳೆಯಿಂದ ಇವರೆಲ್ಲರನ್ನೂ ಸಾರಥಿ ಕುದುರೆ ಧ್ವಜ ಶಸ್ತ್ರ ಕವಚ ರಹಿತರಾಗುವಂತೆ, ರಕ್ತ ಕಾರುವಂತೆ, ನೋವಿನಿಂದ ನರಳುವಂತೆ, ಮಾಡಿ ಸಿಂಹ ಮೃಗಗಳನ್ನು ಓಡಿಸುವಂತೆ ಓಡಿಸಿದ.

ಹತ್ವಾಸೇನಾಂ ವಿಂಶದಕ್ಷೌಹಿಣೀಂ ತಾಂ ತ್ರಿಭಿರ್ಯುಕ್ತಾಂ ರುಕ್ಮಿಣಂ ನೈವ ಕೃಷ್ಣಃ।
ರುಕ್ಮಿಣ್ಯರ್ಥೇ ಪೀಡಯಾಮಾಸ ಶಸ್ತ್ರಾಣ್ಯಸ್ಯ ಚ್ಛಿತ್ವಾವಿರಥಂ ದ್ರಾವಯಾನಃ ॥ ೧೯ ॥

ಕೃಷ್ಣ ಆ ಇಪ್ಪತ್ತಮೂರು ಅಕ್ಷೋಹಿಣಿ ಸೈನ್ಯವನ್ನು ಸಂಹರಿಸಿ ರುಕ್ಮಿಯನ್ನು ಶಸ್ತ್ರ ರಥಗಳಿಂದ ರಹಿತನನ್ನಾಗಿ ಮಾಡಿ ಓಡಿಸಿದ. ರುಕ್ಮಿಣಿಯ ಸಲುವಾಗಿ ಅವನನ್ನು ಹೆಚ್ಚು ಪೀಡಿಸಲಿಲ್ಲ.

ಜರಾಸುತೋ ರೌಹಿಣೇಯೇನ ಯುದ್ಧಂ
ಚಿರಂ ಕೃತ್ವಾತನ್ಮುಸಲೇನ ಪೋಥಿತಃ।
ವಿಮೋಹಿತಃ ಪ್ರಾಪ್ತಸಂಜ್ಞಶ್ಚಿರೇಣ
ಕ್ರುದ್ಧೋ ಗದಾಂ ತದುರಸ್ಯಭ್ಯಪಾತಯತ್ ॥ ೨೦ ॥

ಜರಾಸಂಧ ಬಲರಾಮನೊಡನೆ ದೀರ್ಘಕಾಲ ಯುದ್ಧ ಮಾಡಿ ಅವನ ಮುಸಲದ ಏಟಿಗೆ ಮೂರ್ಛಿತನಾದ. ಸಾವಕಾಶವಾಗಿ ಚೇತರಿಸಿಕೊಂಡು ಕ್ರುದ್ಧನಾಗಿ ಬಲರಾಮನ ಎದೆಯ ಮೇಲೆ ಗದೆಯನ್ನೆಸೆದ.

ತೇನಾऽಹತಃ ಸುಭೃಶಂ ರೌಹಿಣೇಯಃ
ಪಪಾತ ಮೂರ್ಛಾಭಿಗತಃ ಕ್ಷಣೇನ।
ಅಜೇಯತ್ವಂ ತಸ್ಯ ದತ್ತಂ ಹಿ ಧಾತ್ರಾ
ಪೂರ್ವಂ ಗೃಹೀತೋ ವಿಷ್ಣುನಾ ರಾಮಗೇನ ॥ ೨೧ ॥

ಜರಾಸಂಧ ಬಲವಾಗಿ ಹೊಡೆದಾಗ ಕ್ಷಣದಲ್ಲಿ ಬಲರಾಮ ಮೂರ್ಛೆಗೊಂಡು ಬಿದ್ದ. ಏಕೆಂದರೆ ಬ್ರಹ್ಮ ಜರಾಸಂಧನಿಗೆ ಅಜೇಯತ್ವ ವರ ನೀಡಿದ್ದ. ಹಿಂದೆ ಜರಾಸಂಧನನ್ನು ಸೆರೆಹಿಡಿದಿದ್ದುದು ಬಲರಾಮನಲ್ಲಿ ಆವಿಷ್ಟನಾದ ವಿಷ್ಣು.

ತಥಾಕೃತೇ ಬಲಭದ್ರೇ ತು ಕೃಷ್ಣೋ
ಗದಾಮಾದಾಯ ಸ್ವಾಮಗಾನ್ಮಾಗಧೇಶಮ್।
ತತಾಡ ಜತ್ರೌ ಸ ತಯಾಭಿತಾಡಿತೋ
ಜಗಾಮ ಗಾಂ ಮೂರ್ಛಯಾಭಿಪ್ಲುತಾಂಗಃ ॥ ೨೨ ॥

ಬಲರಾಮ ಹಾಗೆ ಬಿದ್ದಾಗ ಕೃಷ್ಣ ತನ್ನ ಗದೆಯನ್ನೆತ್ತಿ ಜರಾಸಂಧನ ಮೇಲೇರಿ ಹೋದ. ಹೆಗಲಿನ ಸಂದಿಗೆ ಹೊಡೆದ. ಆ ಗದೆಯ ತೀವ್ರವಾದ ಏಟಿನಿಂದ ಮೈಯೆಲ್ಲ ರಕ್ತಸಿಕ್ತನಾಗಿ ಮೂರ್ಛೆಯಿಂದ ನೆಲಕ್ಕೊರಗಿದ ಜರಾಸಂಧ.

ಅಥೋತ್ತಸ್ಥೌ ರೌಹಿಣೇಯಃ ಸಹೈವ
ಸಮುತ್ತಸ್ಥೌ ಮಾಗಧೋऽಪ್ಯಗ್ರ್ಯವೀರ್ಯಃ।
ಕ್ರುದ್ಧೋ ಗೃಹೀತ್ವಾ ಮೌಲಿಮಸ್ಯಾಶು ರಾಮೋ
ವಧಾಯೋದ್ಯಚ್ಛನ್ಮುಸಲಂ ಬಾಹುಶಾಲೀ ॥ ೨೩ ॥

ಬಳಿಕ ಬಲರಾಮನೆದ್ದ. ಜೊತೆಗೆ ಮಹಾ ಪರಾಕ್ರಮಿ ಜರಾಸಂಧನೂ ಎದ್ದ. ಬಾಹುಶಾಲಿಯಾದ ಬಲರಾಮ ಕ್ರುದ್ಧನಾಗಿ ಬೇಗನೆ ಅವನ ತಲೆ ಕೂದಲನ್ನು ಹಿಡಿದು ಕೊಲ್ಲುವುದಕ್ಕಾಗಿ ಮುಸಲವನ್ನೆತ್ತಿದ.

ಅಥಾಬ್ರವೀದ್ ವಾಯುರೇನಂ ನ ರಾಮ
ತ್ವಯಾ ಹಂತುಂ ಶಕ್ಯತೇ ಮಾಗಧೋಽಯಮ್ ।
ವೃಥಾ ನ ತೇ ಬಾಹುಬಲಂ ಪ್ರಯೋಜ್ಯ
ಮಮೋಘಂ ತೇ ಯದ್ ಬಲಂ ತದ್ವದಸ್ತ್ರಮ್ ॥ ೨೪ ॥

ಅನ್ಯೋ ಹಂತಾ ಬಲವಾನಸ್ಯ ಚೇತಿ ಶ್ರುತ್ವಾಯಯೌ ಬಲಭದ್ರೋ ವಿಮುಚ್ಯ ।
ಜರಾಸುತಂ ಪುನರುದ್ಯಚ್ಛಮಾನಂ ಜಘಾನ ಕೃಷ್ಣೋ ಗದಯಾ ಸ್ವಯೈವ ॥ ೨೫ ॥

ಆಗ ವಾಯು ಬಲರಾಮನಿಗೆ ಅಶರೀರವಾಣಿಯಿಂದ ನುಡಿದ, 'ಬಲರಾಮ, ಈ ಜರಾಸಂಧನನ್ನು ಕೊಲ್ಲುವುದು ನಿನ್ನಿಂದಾಗದು. ವ್ಯರ್ಥವಾಗಿ ನೀನು ನಿನ್ನ ಬಾಹು ಬಲವನ್ನೂ ಶಸ್ತ್ರವನ್ನೂ ಪ್ರಯೋಗಿಸಬೇಡ. ಏಕೆಂದರೆ ನಿನ್ನ ಬಲ ಅಮೋಘ. ಅಸ್ತ್ರವೂ ಅಮೋಘ. ಇವನನ್ನು ಕೊಲ್ಲುವವನು ನಿನಗಿಂತ ಬಲಿಷ್ಠನಿನ್ನೊಬ್ಬನಿದ್ದಾನೆ' ಎಂದು. ಇದನ್ನು ಕೇಳಿ ಬಲರಾಮ ಜರಾಸಂಧನನ್ನು ಬಿಟ್ಟು ಹೊರಟುಹೋದ. ಪುನಃ ಯುದ್ಧ ಮಾಡಲು ಯತ್ನಿಸಿದ ಜರಾಸಂಧನನ್ನು ಕೃಷ್ಣ ಗದೆಯಿಂದ ಹೊಡೆದ, ಕೊಲ್ಲಲಿಲ್ಲ.

ತೇನಾಹತಃ ಸ್ರಸ್ತಸಮಸ್ತಗಾತ್ರಃ
ಪಪಾತ ಮೂರ್ಛಾಭಿಗತಃ ಸ ರಾಜಾ ।
ಚಿರಾತ್ ಸಂಜ್ಞಾಂ ಪ್ರಾಪ್ಯ ಚಾಂತರ್ಹಿತೋಽಸೌ
ಸಂಪ್ರಾದ್ರವದ್ ಭೀತಭೀತಃ ಸಲಜ್ಜಃ
ಯಯೌ ಶಿಷ್ಟೈ ರಾಜಭಿಃ ಸಂಯುತಶ್ಚ
ಪುರಂ ಜೀವೇತ್ಯೇವ ಕೃಷ್ಣೇನ ಮುಕ್ತಃ ॥ ೨೬ ॥

ಕೃಷ್ಣನ ಏಟಿಗೆ ರಾಜಾ ಜರಾಸಂಧನ ಎಲ್ಲ ಅಂಗಗಳೂ ಕುಸಿದವು. ಆತ ಮೂರ್ಛೆಗೊಂಡು ಬಿದ್ದ. ದೀರ್ಘಕಾಲದ ಬಳಿಕ ಎಚ್ಚರಗೊಂಡು ಬಲು ಭೀತನಾಗಿ ನಾಚಿ, ಉಳಿದ ರಾಜರೊಂದಿಗೆ ತಲೆ ಮರೆಸಿಕೊಂಡು ಪಲಾಯನ ಮಾಡಿದ. ತನ್ನ ಪಟ್ಟಣ ಸೇರಿದ. 'ಬದುಕಿಕೋ ಹೋಗು' ಎಂದು ಹೇಳಿ ಕೃಷ್ಣ ಅವನನ್ನು ಬಿಟ್ಟಿದ್ದ.

ಪುನರ್ಯುದ್ಧಂ ಬಹುಶಃ ಕೇಶವೇನ
ಕೃತ್ವಾಪಿತೋ ರಾಜಗಣೈಃ ಸಮೇತಃ ।
ಕೃಷ್ಣೋ ಜಿತ್ವಾ ಮಾಗಧಂ ರೌಹಿಣೇಯ
ಯುಕ್ತೋ ಯಯೌ ದಮಘೋಷೇಣ ಸಾರ್ಧಮ್ ॥ ೨೭ ॥

ಜರಾಸಂಧ ಪುನಃ ಅನೇಕಬಾರಿ ರಾಜಸಮೂಹದೊಂದಿಗೆ ಬಂದು ಕೃಷ್ಣನೊಡನೆ ಯುದ್ಧಮಾಡಿ ಸೋತ. ಕೃಷ್ಣ ಹೀಗೆ ಜರಾಸಂಧನನ್ನು ಗೆದ್ದು ಬಲರಾಮ ಸಮೇತನಾಗಿ ದಮಘೋಷನೊಂದಿಗೆ ಹೊರಟ.

ದಮಘೋಷನ ಭಕ್ತಿ

ಪಿತೃಷ್ವಸಾಯಾಃ ಪತಿನಾ ತೇನ ಚೋಕ್ತಃ
ಪೂರ್ವಂ ಜಿತೇನಾಪಿ ಯುಧಿ ಸ್ಮಬಾಂಧವಾತ್ ।
ಯಾಮಃ ಪುರಂ ಕರವೀರಾಖ್ಯಮೇವ
ಮಹಾಲಕ್ಷ್ಮ್ಯಾಃ ಕ್ಷೇತ್ರಸಂದರ್ಶನಾಯ ॥ ೨೮ ॥

ಶ್ರುತ್ವಾವಾಕ್ಯಂ ತಸ್ಯ ಯುದ್ಧೇ ಜಿತಸ್ಯ
ಪ್ರೀತ್ಯಾ ಯುಕ್ತಸ್ಯಾತ್ಮನಾ ತದ್ಯುತೋಽಗಾತ್ ॥ ೨೯ ॥

ಕೃಷ್ಣನ ಸೋದರತ್ತೆಯರಲ್ಲಿ ಒಬ್ಬಳ ಪತಿ ದಮಘೋಷ. ಅವನು ಹಿಂದೆ ಯುದ್ಧದಲ್ಲಿ ಕೃಷ್ಣನಿಂದ ಪರಾಜಿತನಾಗಿದ್ದರೂ, ಬಂಧುಸ್ನೇಹದಿಂದ ಮಹಾಲಕ್ಷ್ಮ್ಯಾಯ ಕ್ಷೇತ್ರ ಸಂದರ್ಶನಕ್ಕಾಗಿ ಕರವೀರ ಪಟ್ಟಣಕ್ಕೆ ಹೋಗೋಣವೆಂದಾಗ, ಯುದ್ಧದಲ್ಲಿ ಪರಾಜಿತನಾಗಿದ್ದೂ ಪ್ರೀತಿಯಿಂದ ಅವನು ಹೇಳಿದ ಮಾತನ್ನು ಕೇಳಿ ಕೃಷ್ಣ ಅವನೊಡನೆ ಹೊರಟ.

ಕೃಷ್ಣನ ಸೋದರತ್ತೆಯಾದ ಶ್ರುತಶ್ರವೆಯ ಪತಿ, ಶಿಶುಪಾಲನ ತಂದೆ ದಮಘೋಷ. ದಮಘೋಷನಿಗೆ ತಾನು ಕೃಷ್ಣನೊಡನೆ ಯುದ್ಧಮಾಡಿ ಸೋತುದರಿಂದ ಯುದ್ಧಾಪರಾಧ ಪ್ರಯುಕ್ತ ಭಯವೂ ಇದ್ದಿತು ಎಂದು 'ಭೀತ್ಯಾ' ಎಂಬ ವರದರಾಜೀಯ ಪಾಠದಲ್ಲಿ ಅಭಿಪ್ರಾಯ ಗ್ರಹಿಸಬೇಕು.

'ಪ್ರೀತ್ಯಾ' ಎಂಬ ವಾದಿರಾಜೀಯ ಪಾಠದಲ್ಲಿ ಕೃಷ್ಣನೊಡನೆ ಯುದ್ಧಮಾಡಿ ಸೋತಿದ್ದರೂ ಕೋಪ ಮತ್ಸರವಿಲ್ಲದೆ ಸ್ವಾಭಾವಿಕವಾಗಿ ಪ್ರೀತಿಯುಕ್ತನಾಗಿಯೇ ಇದ್ದ ದಮಘೋಷ ಎಂದು ಗ್ರಹಿಸಬೇಕು. ಜನಾರ್ದನೀಯದಲ್ಲಿ ಎರಡೂ ಪಾಠ ಸ್ವೀಕೃತವಾಗಿದೆ.

ಗಂಧರ್ವೋಽಸೌ ದನುನಾಮ ನರೋಽಭೂತ್
ತಸ್ಮಾತ್ ಕೃಷ್ಣೇ ಭಕ್ತಿಮಾಂಶ್ಚಾಸ ರಾಜಾ ।
ಪುರಂ ಪ್ರಾಪ್ತಾಂಸ್ತಾನ್ ಸ ವಿಜ್ಞಾಯ ಪಾಪಃ
ಸೃಗಾಲಾಖ್ಯೋ ವಾಸುದೇವಃ ಕ್ರುಧಾಗಾತ್ ॥ ೩೦ ॥

ಈ ದಮಘೋಷ ರಾಜ ಹಿಂದೆ ದನು ಎಂಬ ಗಂಧರ್ವ. ಈಗ ಮನುಷ್ಯನಾಗಿ ಹುಟ್ಟಿದ್ದ. ಅದರಿಂದ ಕೃಷ್ಣನಲ್ಲಿ ಭಕ್ತಿ ಉಳ್ಳವನಾಗಿದ್ದ. ಪಾಪಿಯಾದ ಸೃಗಾಲ ವಾಸುದೇವ ತನ್ನ ಪಟ್ಟಣಕ್ಕೆ ಕೃಷ್ಣ ಮುಂತಾದವರು ಬಂದುದನ್ನು ತಿಳಿದು ಕೋಪದಿಂದ ಯುದ್ಧಕ್ಕೆ ಬಂದ.

'ದನು' ಎಂದು ತ್ರಿಜಟಾಪುತ್ರನಾದ ದನುರಾಕ್ಷಸನನ್ನು ಇಟ್ಟುಕೊಳ್ಳ ಬಾರದೆಂಬ ಅಭಿಪ್ರಾಯದಿಂದ 'ಗಂಧರ್ವ' ಎಂದಿದೆ' ಎನ್ನುತ್ತದೆ. ಜನಾರ್ದನೀಯ. ಆದರೆ, ಹರಿಕಥಾಮೃತಾಸಾರದಲ್ಲಿ ಹೇಳಿದೆ-

ಸದ್ವಿನುತ ದಮಘೋಷಕ ಕಬಂ
ಧದ್ವಯರು ಗಂಧರ್ವದನು.... (23-40)

ಅದರ ವ್ಯಾಖ್ಯಾನವಾದ ವ್ಯಾಸದಾಸ ಸಿದ್ಧಾಂತ ಕೌಮುದಿಯಲ್ಲಿಯೂ

ದಮಘೋಷಕಬಂಧೌ ದ್ವೌದನುಗಂಧರ್ವ ಉಚ್ಯತೇ

ಎಂದಿದೆ ನಾರಾಯಣ ಪಂಡಿತಾಚಾರ್ಯರ ಅಂಶಾವೇಶಾವತಾರ ವರ್ಣನೆ-

ಕಬಂಧೋ ದನುಗಂಧರ್ವಃ... ।
ದಮಘೋಷೋ ದನುರ್ನಾಮ ಗಂಧರ್ವಃ ಪ್ರಾಗುದಾಹೃತಃ।

ಅದರಿಂದ ತ್ರಿಜಟಾಪುತ್ರ ಕಬಂಧರಾಕ್ಷಸ ರಾಜಾದಮಘೋಷರಿಬ್ಬರೂ ದನು ಎಂಬ ಗಂಧರ್ವನ ಅವತಾರಗಳು.

ಸೃಗಾಲ ವಸುದೇವಪುತ್ರನಾದರೂ ಹಿಂದೆ ಅವನು ಮಧುದಾನವನ ಮಗ. ಕುವಲಯಾಶ್ವನಿಂದ ಹತನಾದ ಧುಂಧು ಎಂಬ ದಾನವ. ವಸುದೇವ ಕರವೀರಪುರಕ್ಕೆ ಯಾತ್ರಾರ್ಥಿಯಾಗಿ ಹೋಗಿದ್ದಾಗ ಕರವೀರಪುರದ ರಾಜ ತನ್ನ ಮಗಳನ್ನು ಅವಳಲ್ಲಿ ಹುಟ್ಟುವ ಗಂಡು ಮಗುವನ್ನು ತನಗೆ ಕೊಡಬೇಕೆಂಬ ಒಪ್ಪಂದದ ಮೇರೆಗೆ ಮದುವೆ ಮಾಡಿಕೊಟ್ಟ. ಹೀಗೆ ಹುಟ್ಟಿದ ಸೃಗಾಲನನ್ನು ವಸುದೇವ ರಾಜನಿಗೆ ಕೊಟ್ಟು ಮಥುರೆಗೆ ಬಂದು ದೇವಕಿ ಮುಂತಾದವರನ್ನು ಮದುವೆಯಾದ. ಆಗ ಕಂಸ ವಸುದೇವದೇವಕಿಯರನ್ನು ಕಾರಾಗೃಹದಲ್ಲಿಟ್ಟ. ಸೃಗಾಲ ತನ್ನ ತಾಯಿಯನ್ನು ವಸುದೇವ ಪರಿತ್ಯಾಗ ಮಾಡಿದನೆಂದು ತಪ್ಪು ತಿಳಿದು ಎಲ್ಲ ಯಾದವರನ್ನು ದ್ವೇಷಿಸತೊಡಗಿದ.

ಸೃಗಾಲ ವಧ

ಸೂರ್ಯಪ್ರದತ್ತಂ ರಥಮಾರುಹ್ಯ ದಿವ್ಯಂ
ವರಾದವಧ್ಯಸ್ತಿಗ್ಮರುಚೇಃ ಸ ಕೃಷ್ಣಮ್ ।
ಯೋದ್ಧುಂ ಯಯಾವಮುಚಾಚ್ಛಾಸ್ತ್ರಸಂಘಾನ್
ಶಿರಸ್ತ್ಯಾಥಾಶು ಜಹಾರ ಕೃಷ್ಣಃ ॥ ೩೧ ॥

ಸೂರ್ಯನ ವರದಿಂದ ಅವಧ್ಯನಾದ ಸೃಗಾಲ ಸೂರ್ಯನಿತ್ತ ದಿವ್ಯರಥವನ್ನೇರಿ ಕೃಷ್ಣನೊಡನೆ ಯುದ್ಧಮಾಡಲು ಹೋದ. ಅಸ್ತ್ರ ಸಮೂಹಗಳನ್ನೆಸೆದ. ಕೃಷ್ಣ ಬೇಗನೆ ಅವನ ಶಿರವನ್ನು ತರಿದ.

ದ್ವಿಧಾ ಕೃತ್ವಾದೇಹಮಸ್ಯಾರಿಣಾ ಚ
ಪುತ್ರಂ ಭಕ್ತಂ ತಸ್ಯ ರಾಜ್ಯೇಽಭಿಷಿಚ್ಯ।
ಸ ಶಕ್ರದೇವಂ ಮಣಿಭದ್ರಃ ಪುರಾ ಯೋ
ಯಯೌ ಪುರೀಂ ಸ್ವಾಂ ಸಹಿತೋಽಗ್ರಜೇನ ॥ ೩೨ ॥

ಶ್ರೀಕೃಷ್ಣ ಚಕ್ರದಿಂದ ಸೃಗಾಲನ ದೇಹವನ್ನು ಎರಡಾಗಿ ಸೀಳಿದ. ಅವನ ಮಗನೂ ತನ್ನ ಭಕ್ತನೂ ಆದ ಶಕ್ರದೇವನನ್ನು ರಾಜ್ಯದಲ್ಲಿ ಅಭಿಷೇಕಮಾಡಿ ಬಲರಾಮ ಸಮೇತನಾಗಿ ತನ್ನ ಪಟ್ಟಣಕ್ಕೆ ಹೋದ. ಶಕ್ರದೇವ ಹಿಂದೆ ಮಣಿಭದ್ರನೆಂಬ ಒಬ್ಬ ದೇವ.

ನೀತಿಂ ಬಲಿಷ್ಠಸ್ಯ ವಿಹಾಯ ಸೇನಾಂ
ದೂರಾದ್ ಯುದ್ಧಂ ದರ್ಶಯಿತ್ವೈವ ಗುಪ್ತ್ಯೈ।
ಸ್ವಸೇನಾಯಾಃ ಸರ್ವ ಪೂರ್ಣಾತ್ಮಶಕ್ತಿಃ
ಪುನಃ ಪುರೀಂ ಪ್ರಾಪ್ಯ ಸಂಪೂಜಿತೋಽವಸತ್ ॥ ೩೩ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಸೃಗಾಲವಧೋ ನಾಮ
ಷೋಡಶೋಽಧ್ಯಾಯಃ ॥

ಸರ್ವವಿಷಯದಲ್ಲಿಯೂ ಪೂರ್ಣಸ್ವರೂಪಶಕ್ತಿಉಳ್ಳ ಕೃಷ್ಣ ತನ್ನ ಸೈನ್ಯದ ರಕ್ಷಣೆಗಾಗಿ ಬಲಿಷ್ಠನ ಸೈನ್ಯವನ್ನು ಬಿಟ್ಟು ದೂರ ಹೋಗಿ ಯುದ್ಧ ಮಾಡುವುದೇ ಸರಿಯಾದ ನೀತಿ ಎಂದು ತೋರಿಸಿ ಪುನಃ ಪಟ್ಟಣವನ್ನು ಸೇರಿ ಎಲ್ಲರ ಆದರಕ್ಕೆ ಪಾತ್ರನಾಗಿ ವಾಸ ಮಾಡಿದ.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ರಚಿಸಿದ
ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಸೃಗಾಲ ವಧವೆಂಬ
ಹದಿನಾರನೆ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೭

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಭಗ್ನಾಶಾನ್ ನೃಪತೀನರೀನ್ ವ್ಯಧಿತ ಯಃ ಸ್ವರ್ಗಾಧಿಪಾಗ್ರ್ಯಾಸನೇ
ಲಗ್ನೋ ಭೀಷ್ಮಕ ಸತ್ಕೃತೋಽಥ ಯವನಂ ಜಘ್ನೇ ಸತೀಮಾತ್ಮನಃ।
ನಿಘ್ನಾಂ ಯೋಽಕೃತ ರುಕ್ಮಿಣೀಂ ಸಮಜಯದ್ ದುರ್ಗರ್ವಿರುಕ್ಮಾದಿಕಾನ್
ವಿಘ್ನಂ ಸತ್ರಜಿದಾತ್ಮಜಾಪತಿರಸೌ ಮೇ ಘ್ನನ್ ಭವೇತ್ ಸರ್ವದಾ ॥ ೧೭ ॥

ಶ್ರೀಕೃಷ್ಣ ದೇವೇಂದ್ರನ ಉತ್ತಮ ಆಸನದಲ್ಲಿ ಕುಳಿತು ಶತ್ರು ರಾಜರ ಆಸೆಯನ್ನು ವಿಫಲಗೊಳಿಸಿದ. ಭೀಷ್ಮಕರಾಜನಿಂದ ಸತ್ಕರಿಸಲ್ಪಟ್ಟ ಕಾಲಯವನನ್ನೂ ಕೊಂದ. ತನ್ನ ಸತಿಯಾದ ರುಕ್ಮಿಣಿಯನ್ನು ತನ್ನವಳನ್ನಾಗಿ ಮಾಡಿಕೊಂಡ. ಸತ್ಯಭಾಮೆಯನ್ನು ಮದುವೆಯಾದ. ದುರ್ವಾಸರ ತಪಸ್ಸಿಗೆ ವಿಘ್ನರೂಪರಾಗಿದ್ದ ಹಂಸಡಿಭಕರನ್ನೂ ನಾಶಪಡಿಸಿದ. ಇಂಥ ಕೃಷ್ಣ ನನಗೆ ಸದಾ ವಿಘ್ನಪರಿಹಾರಕನೆನಿಸಲಿ.

ಹದಿನೇಳನೆಯ ಅಧ್ಯಾಯ

ಹಂಸಡಿಭಿಕವಧ

ಕುಂಡಿನಪುರಕ್ಕೆ ಶ್ರೀಕೃಷ್ಣ

॥ ಹರಿಃ ಓಂ॥

ಗತೇऽಥ ಚೇದಿಪೇ ಸ್ವಕಂ ಪುರಂ ಜನಾರ್ದನೋऽಶೃಣೋತ್ ।
ರಮೈವ ರುಕ್ಮಿಣೇತಿ ಯೋದ್ಯತಾಂ ಸ್ವಯಂವರಾಯ ತಾಮ್ ॥ ೧ ॥

ಚೇದಿರಾಜ ದಮಘೋಷ ತನ್ನ ಪಟ್ಟಣಕ್ಕೆ ಹೋದಾಗ ಶ್ರೀಕೃಷ್ಣ ರುಕ್ಮಿಣೀ ಎಂಬ ಹೆಸರಿನಿಂದ ಅವತರಿಸಿದ ರಮೆ ಸ್ವಯಂವರಕ್ಕೆ ಉದ್ಯುಕ್ತಳಾಗಿರುವಳೆಂದು ಕೇಳಿ ತಿಳಿದ.

'ರಮೈವ' ಎಂದು ಏವಕಾರದಿಂದ ಸಾಕ್ಷಾತ್ ರಮೆಯೇ ರುಕ್ಮಿಣಿ ಹೊರತು ಬಲರಾಮನ ಮಡದಿ ಶ್ರೀದೇವಿಯಂತೆ ಆವೇಶ ಮಾತ್ರವಲ್ಲ ಎಂದು ಸೂಚಿತವಾಗುತದೆ.

ಸ ರುಕ್ಮಿನಾಮಕೋऽಗ್ರಜಃ ಶ್ರಿಯೋ ದ್ವಿಷನ್ ರಮಾಪತಿಮ್ ।
ಹರೇಃ ಪ್ರದಾತುಮುದ್ಯತಾನ್ ನ್ಯವಾರಯದ್ದರಿಪ್ರಿಯಾಮ್ ॥ ೨ ॥

ರುಕ್ಮಿಣಿಯ ಅಣ್ಣನಾದ ರುಕ್ಮಿ ಎಂಬ ಹೆಸರಿನವ ಕೃಷ್ಣನನ್ನು ದ್ವೇಷಿಸುತ್ತ ಹರಿಯ ಪ್ರೇಯಸಿಯನ್ನು ಹರಿಗೆ ಕೊಡಲು ಉದ್ಯುಕ್ತರಾದ ಭೀಷ್ಮಕ ಮುಂತಾದವರನ್ನು ತಡೆದ.

ರುಕ್ಮಿಣಿ ಸ್ವತಃ ಸ್ವಯಂವರಕ್ಕೆ ಉದ್ಯುಕ್ತಳಾಗಲಿಲ್ಲ. ರುಕ್ಮಿ ಅವಳನ್ನು ಸ್ವಯಂವರದ ನೆಪದಿಂದ ಶಿಶುಪಾಲನಿಗೆ ಕೊಡಲು ಬಯಸಿದ. ರುಕ್ಮಿ ಶುಚಿ ಎಂಬ ವಹ್ನಿಪುತ್ರನ ಆವೇಶಯುಕ್ತನಾಗಿ ಹುಟ್ಟಿದ ಇಲ್ವಲನೆಂಬ ರಾಕ್ಷಸನೆಂದು ಹಿಂದೆ ಹೇಳಿದ. ಈತ ದ್ರುಮನೆಂಬ ಕಿಂಪುರುಷನಿಂದ ಧನುರ್ವೇದ ಕಲಿತವ. ಇಂದ್ರನ 'ವಿಜಯ' ಎಂಬ ಧನುಸ್ಸನ್ನು ಪಡೆದವ. ಈ ಧನುಸ್ಸು ವರುಣನ ಗಾಂಡೀವಕ್ಕೂ ವಿಷ್ಣುವಿನ ಶಾರ್ಂಗಕ್ಕೂ ಸಾಟಿ ಎನ್ನಲಾಗಿದೆ.

ಪ್ರಘೋಷಿತೇ ಸ್ವಯಂವರೇऽಥ ತೇನ ಮಾಗಧಾದಯಃ ।
ಸಮೀಯುರುಗ್ರಪೌರುಷಾಃ ಸಸಾಲ್ವಪೌಂಡ್ರಚೇದಿಪಾಃ ॥ ೩ ॥

ರುಕ್ಮಿ ಸ್ವಯಂವರವನ್ನು ಘೋಷಿಸಿದಾಗ ಭಯಂಕರ ಪೌರುಷ ಉಳ್ಳ ಜರಾಸಂಧಾದಿಗಳು ಸಾಲ್ವಪೌಂಡ್ರಕ ಶಿಶುಪಾಲ ಸಮೇತರಾಗಿ ಬಂದರು.

ತದಾ ಜಗಾಮ ಕೇಶವೋ ಜವೇನ ಕುಂಡಿನಂ ಪುರಮ್ ।
ಸ್ಮೃತೋಽಥ ತೇನ ಪಕ್ಷಿರಾಟ್ ಸಮಾಜಗಾಮ ಕೇಶವಮ್ ॥ ೪ ॥

ಕೃಷ್ಣ ನೆನೆದೊಡನೆ ಗರುಡ ಅವನ ಬಳಿಗೆ ಬಂದ. ಅವನನ್ನೇರಿ ವೇಗದಿಂದ ಕೃಷ್ಣ ಕುಂಡಿನಪುರಕ್ಕೆ ಬಂದ.

ಕುಂಡಿನಪುರ ಭೀಷ್ಮಕನು ಆಳುವ ವಿದರ್ಭ ದೇಶದ ರಾಜಧಾನಿ.

ರಾಜರುಗಳ ಮಂತ್ರಾಲೋಚನೆ

ಪತತ್ರ ವಾಯುನಾಽಸ್ಯ ತೇ ನರೇಶ್ವರಾಃ ಪ್ರಪಾತಿತಾಃ ।
ಯದೇದೃಶಂ ಪತತ್ರಿಣೋ ಬಲಂ ಹರೇಃ ಕಿಮುಚ್ಯತೇ ॥ ೫ ॥

'ಗರುಡನ ರೆಕ್ಕೆಗಳ ಗಾಳಿಯಿಂದಲೇ ರಾಜರುಗಳು ಬಿದ್ದರು. ಗರುಡನಿಗೇ ಇಂಥ ಬಲವೆಂದ ಮೇಲೆ ಇನ್ನು ಕೃಷ್ಣನ ಬಲವನ್ನು ಏನೆನ್ನಬೇಕು?

ಕಿಮತ್ರ ನಃ ಕೃತಂ ಭವೇತ್ ಸುಖಾಯ ಹೀತಿ ತೇಽಬ್ರುವನ್ ।
ಅಥಾಬ್ರವೀಜ್ಜರಾಸುತೋ ಜಯೀ ಪಯೋಬ್ಧಿಮಂದಿರಃ ॥ ೬ ॥

ಕಿಲೈಷ ಪಕ್ಷಿವಾಹನೋ ಯತಶ್ಚ ನಾನ್ಯಥಾ ಭವೇತ್ ।
ಜಿತಾ ವಯಂ ಚ ಸರ್ವಶೋಽಮುನೈಕಲೇನ ಸಂಯುಗೇ ॥ ೭ ॥

ಅನೇಕಶೋ ನ ಸಂಗತೈರ್ಜಿತಃ ಕದಾಚಿದೇಷ ಹಿ ।
ಅಮುಷ್ಯ ಚಾಗ್ರಜಃ ಪುರಾ ನಿಹಂತುಮುದ್ಯತೋ ಹಿ ಮಾಮ್ ॥ ೮ ॥

ಅದೃಶ್ಯ ವಾಕ್ಯತೋಽತ್ಯಜತ್ ಪ್ರತಾಡನಾತ್ ಸುಪೀಡಿತಮ್ ।
ಕಿಮಸ್ಯ ತೂಚ್ಯತೇ ಬಲಂ ವಯಂ ತೃಣೋಪಮಾಃ ಕೃತಾಃ ।
ಸಮಶ್ನುತೋ ಮೃಧೇ ಮೃಧೇ ಹಿ ಯೇನ ಚಾಕ್ಷತೇನ ಹಿ ॥ ೯ ॥

'ಈಗ ನಾವೇನು ಮಾಡಿದರೆ ಒಳ್ಳೆಯದಾದೀತು?' ಎಂದು ರಾಜರುಗಳು ಪರಸ್ಪರ ಕೇಳತೊಡಗಿದರು. ಆಗ ಜರಾಸಂಧ ಹೇಳಿದ, 'ಸದಾ ವಿಜಯಿಯಾಗುತ್ತಿರುವ ಶ್ರೀಕೃಷ್ಣ ವಿಷ್ಣುವೇ ಇರಬೇಕು. ಏಕೆಂದರೆ ಇವನು ಪಕ್ಷಿವಾಹನನಾಗಿದ್ದಾನೆ. ವಿಷ್ಣುವಲ್ಲದಿರುತ್ತಿದ್ದರೆ ಪಕ್ಷಿವಾಹನನಾಗಿರುತ್ತಿದ್ದಿಲ್ಲ. ಏಕಾಕಿಯಾದ ಈತನಿಂದ ನಾವೆಲ್ಲರೂ ಯುದ್ಧದಲ್ಲಿ ಅನೇಕ ಬಾರಿ ಸೋತಿದ್ದೇವೆ. ನಾವೆಲ್ಲ ಸೇರಿದರೂ ಅವನನ್ನು ಎಂದೂ ಸೋಲಿಸಲಾಗಲಿಲ್ಲ. ಅವನ ಅಣ್ಣ ಹಿಂದೆ ನನ್ನನ್ನು ಕೊಲ್ಲಲು ಉದ್ಯುಕ್ತನಾಗಿದ್ದ. ಹೊಡೆತದಿಂದ ಬಹಳ ಪೀಡಿತನಾಗಿದ್ದ ನನ್ನನ್ನು ಆಗ ಅಶರೀರವಾಣಿಯಿಂದ ಬಿಟ್ಟುಬಿಟ್ಟ. ಇನ್ನು ಶ್ರೀಕೃಷ್ಣನ ಬಲವನ್ನು ಏನು ಹೇಳಲಿ?

ಇವನು ತಾನು ಗಾಯಗೊಳ್ಳದೆ ಪ್ರತಿ ಯುದ್ಧದಲ್ಲಿಯೂ ನಮ್ಮೆಲ್ಲರನ್ನೂ ತೃಣಸಮಾನರನ್ನಾಗಿ ಮಾಡಿದ್ದಾನೆ.

ಕಿಮತ್ರ ಕುರ್ವತಾಂ ಸುಖಂ ಭವೇದುದೀರ್ಣಸಂಕಟೇ।
ಇತಿ ಬ್ರುವನ್ನವಾಙ್ಮುಖಂ ನೃಪಶ್ಚಕಾರ ವಿಚ್ಛವಿಃ ॥ ೧೦ ॥

'ಈಗ ಮಹಾಸಂಕಟ ಪ್ರಾಪ್ತವಾಗಿರುವಾಗ ನಾವು ಏನು ಮಾಡಿದರೆ ಸುಖವಾದೀತು?' ಹೀಗೆ ಹೇಳುತ್ತ ಜರಾಸಂಧ ಕಳೆಗುಂದಿ ಮೋರೆ ತಗ್ಗಿಸಿದ.

ಶಿಶುಪಾಲ ದಂತವಕ್ರರ ಹರಿಭಕ್ತಿ

ಅಥಾಹ ಚೇದಿಭೂಪತಿಃ ಸದಂತವಕ್ರಕೋ ವಚಃ।
ಪುರಾ ಹರೇರ್ಹಿ ಪಾರ್ಷದಃ ಪ್ರಸನ್ನಬುದ್ಧಿರೇಕದಾ ॥ ೧೧ ॥

ಆಗ ಶಿಶುಪಾಲ ದಂತವಕ್ರರು ಮಾತನಾಡಿದರು. ಇವರು ಹಿಂದೆ ಹರಿಯ ಪರವಾರದವರಾಗಿದ್ದರು. ಅದರಿಂದ ಒಮ್ಮೊಮ್ಮೆ ನಿರ್ಮಲ ಚಿತ್ತರಾಗುತ್ತಿದ್ದರು.

ಹರಿವಂಶದಲ್ಲಿ ಸುನೀಥ ಹೇಳುತ್ತಾನೆ. 'ಸ್ವಯಂವರ ಒಂದು ಉತ್ಸವ. ಅದರಲ್ಲಿ ನಾವು ರಾಜರು ಯುದ್ಧವನ್ನು ಬಯಸುವುದು ಸರಿಯಲ್ಲ.' ದಂತವಕ್ರ ಹೇಳುತ್ತಾನೆ. 'ನಾವೆಲ್ಲ ಮಹಾತ್ಮನಾದ ಕೃಷ್ಣನಿಗೆ ಅರ್ಘ್ಯ ಆಚಮನಗಳನ್ನಿತ್ತು ಆತಿಥ್ಯ ಮಾಡೋಣ.' ಇಲ್ಲಿ ಸುನೀಥ ಎಂಬುದು ಶಿಶುಪಾಲನ ನಾಮಾಂತರ. ಕಂಪನ ತಮ್ಮ ಸುನೀಥ ಬೇರೆ.

ಶೃಣುಷ್ವ ರಾಜಸತ್ತಮ ಪ್ರಭುಂ ಶಿವಸ್ವಯಂಭುವೋಃ।
ಹರಿಂ ವದಂತಿ ಕೇಚಿದಪ್ಯದೋ ಭವೇನ್ನ ವೈ ಮೃಷಾ ॥ ೧೨ ॥

ರಾಜಶ್ರೇಷ್ಠನಾದ ಜರಾಸಂಧನೆ, ಕೇಳು. ಹರಿಯೇ ಶಿವ ಬ್ರಹ್ಮರಿಗೂ ಪ್ರಭುವೆಂದು ಕೆಲವರು ಹೇಳುತ್ತಾರೆ. ಅದು ಸುಳ್ಳಾಗಿರಲಾರದು.

ತಥಾವಯೋಶ್ಚ ದರ್ಶನೇ ಭವೇತ್ ಕದಾಚಿದೂರ್ಜಿತಾ।
ಅಮುಷ್ಯ ಭಕ್ತಿರನ್ಯಥಾ ಪುನಶ್ಚ ಜಾಯತೇ ಕ್ರುಧಾ ॥ ೧೩ ॥

ಹಾಗೇ ಕೃಷ್ಣನನ್ನು ನೋಡಿದಾಗ ನಮಗಿಬ್ಬರಿಗೂ ಕೆಲವೊಮ್ಮೆ ಅವನಲ್ಲಿ ಒಳ್ಳೆಯ ಭಕ್ತಿ ಮೂಡುತ್ತದೆ. ಅನಂತರ ಪುನಃ ಭಕ್ತಿಯ ಅಭಾವ. ದ್ವೇಷವೂ ಉಂಟಾಗುತ್ತದೆ.

ನ ಕಾರಣಂ ಚ ವಿದ್ಮಹೇ ನ ಸಂಶಯಃ ಪರೋ ಹರಿಃ।
ವ್ರಜಾಮ ತಂ ಸುಖಾರ್ಥಿನೋ ವಯಂ ವಿಹಾಯ ಶತ್ರುತಾಮ್ ॥ ೧೪ ॥

ಇದಕ್ಕೆ ಕಾರಣ ನಮಗೆ ತಿಳಿದಿಲ್ಲ. ಕೃಷ್ಣ ಸರ್ವೋತ್ತಮನೆಂಬುದರಲ್ಲಿ ಮಾತ್ರ ಸಂಶಯವಿಲ್ಲ. ಸುಖವನ್ನು ಬಯಸುವ ನಾವು ಶತ್ರುತ್ವವನ್ನು ತೊರೆದು ಅವನನ್ನು ಸೇರೋಣ.

ಇದಂ ಹಿ ನಃ ಶುಭಪ್ರದಂ ನ ಚಾನ್ಯಥಾ ಶುಭಂ ಕ್ವಚಿತ್ ।
ಇತೀರಿತೋ ಜರಾಸುತೋ ದದರ್ಶ ತೌ ದಹನ್ನಿವ ॥ ೧೫ ॥

ಇದೇ ನಮಗೆ, ಶುಭದಾಯಕವಾದೀತು. ಬೇರೆ ರೀತಿಯಿಂದ ನಮಗೆ ಎಲ್ಲಿಯೂ ಶುಭವಾಗದು'. ಹೀಗೆ ಹೇಳಿದಾಗ ಜರಾಸಂಧ ಅವರಿಬ್ಬರನ್ನೂ ಸುಟ್ಟುಬಿಡುವಂತೆ ನೋಡಿದ.

ಅಥ ಪ್ರಹಸ್ಯ ಸೌಭರಾಡ್ವಚೋ ಜಗಾದ ಮಾಗಧಮ್ ।
ವಿನಿಂದ್ಯ ತೌ ಕ್ರುಧಾ ಸ್ಫುರನ್ ಕ್ರುಧಾ ಸ್ಫುರಂತಮೀಕ್ಷ್ಯ ಚ ॥ ೧೬ ॥

ಸಾಲ್ವ ಕೋಪದಿಂದ ನಡುಗುತ್ತ ಶಿಶುಪಾಲ ದಂತವಕ್ರರನ್ನು ನಿಂದಿಸಿ ಅಪಹಾಸ ಮಾಡಿ, ಕೋಪದಿಂದ ನಡುಗುತ್ತಿದ್ದ ಜರಾಸಂಧನನ್ನು ನೋಡಿ ನುಡಿದ.

ನ ತನ್ಮೃಷಾ ಹರಿಃ ಸ್ವಯಂ ಜನಾರ್ದನೋ ವಧಾಯ ನಃ ।
ಪ್ರಜಾತ ಏಷ ಯಾದವೋ ವಯಂ ಚ ದಾನವೇಶ್ವರಾಃ ॥ ೧೭ ॥

ಕೃಷ್ಣ ಸ್ವಯಂ ಹರಿ ಎಂಬುದು ಸುಳ್ಳಲ್ಲ. ನಾವು ಹಿಂದೆ ದಾನವರಿಗೆ ಅಧಿಪತಿಗಳು. ಅದರಿಂದ ನಮ್ಮ ನಾಶಕ್ಕಾಗಿ ಈ ಕೃಷ್ಣ ಹುಟ್ಟಿದ್ದಾನೆ.

ಸ್ವಧರ್ಮ ಏಷ ನಃ ಸದಾ ದೃಢಪ್ರತೀಪತಾ ಹರೌ ।
ಸ್ವಧರ್ಮಿಣೋ ಹತಾ ಅಪಿ ಪ್ರಯಾಮ ಸದ್ಗತಿಂ ಧ್ರುವಮ್ ॥ ೧೮ ॥

ಹರಿಯಲ್ಲಿ ಸದಾ ದೃಢವಾದ ದ್ವೇಷ ನಮಗೆ ಸ್ವಧರ್ಮ. ಈ ಸ್ವಧರ್ಮದಲ್ಲಿದ್ದು ನಾವು ಹತರಾದರೂ ನಿಶ್ಚಯವಾಗಿ ಸದ್ಗತಿ ಹೊಂದುತ್ತೇವೆ.

ಶಿವಶ್ಚನಃ ಪರಾಗತಿರ್ಗುರುರ್ಭವಾನರಿರ್ಹರಿಃ ।
ಇತೀರಿತಃ ಸ ಮಾಗಧೋ ಜಗಾದ ಸಾಧುಸಾಧ್ವಿತಿ ॥ ೧೯ ॥

ನಮಗೆ ಶಿವನೆ ಪರದೇವತೆ. ನೀನೇ ಗುರು. ಹರಿ ಶತ್ರು.' ಸಾಲ್ವ ಹೀಗೆ ಹೇಳಿದಾಗ ಜರಾಸಂಧ 'ಇದು ಸರಿಯಾದ ಮಾತು, ಸರಿಯಾದ ಮಾತು' ಎಂದ.

ತಥೈವ ರುಕ್ಮಿ ಪೂರ್ವಕಾಃ ಕರೂಶಚೇದಿಪೌ ಚ ತೌ ।
ವಿನಿಶ್ಚಯಂ ಕುಬುದ್ಧಯೋ ಯುಧೇ ಚ ಚಕ್ರುರೂರ್ಜಿತಮ್ ॥ ೨೦ ॥

ಹಾಗೇ ರುಕ್ಮಿ ಮುಂತಾದವರೂ ದಂತವಕ್ರ ಶಿಶುಪಾಲರೂ ಹೇಳಿದರು. ಬಳಿಕ ದುರ್ಬುದ್ಧಿಯುಳ್ಳ ಜರಾಸಂಧಾದಿಗಳು ಕೃಷ್ಣನೊಡನೆ ಯುದ್ಧ ಮಾಡಬೇಕೆಂದು ದೃಢ ನಿಶ್ಚಯ ಕೈಗೊಂಡರು.

ಸದಾ ಪ್ರತೀಪಕಾರಿಣೌ ಭವಾವ ಕೃಷ್ಣ ಇತ್ಯಪಿ।
ಗುರೋಃ ಪ್ರಸಾದಮಾಪ್ನುತಾಂ ಕರೂಶಚೇದಿಭೂಭೃತೌ ॥ ೨೧ ॥

'ನಾವಿಬ್ಬರೂ ಕೃಷ್ಣನಿಗೆ ಸದಾ ವಿರೋಧಕಾರಿಗಳಾಗುವೆವು' ಎಂದು ಶಿಶುಪಾಲ ದಂತವಕ್ರರು ಪ್ರತಿಜ್ಞೆಗೈದು ಗುರು ಜರಾಸಂಧನ ಅನುಗ್ರಹಕ್ಕೆ ಪಾತ್ರರಾದರು.

ಕೃಷ್ಣನಿಗೆ ಆಸನವಿಲ್ಲ?

ಪುನಶ್ಚತೇ ತ್ವಮಂತ್ರಯನ್ ಸಹೈವ ಪಾಪಬುದ್ಧಯಃ।
ಧ್ರುವಂ ಸಮಾಗತೋ ಹರಿರ್ಲಭೇತ ರುಕ್ಮಿಣೀಮಿಮಾಮ್ ॥ ೨೨ ॥

ಪುನಃ ಪಾಪಬುದ್ಧಿಗಳಾದ ಜರಾಸಂಧಾದಿಗಳು ಜೊತೆಗೂಡಿ ವಿಚಾರ ಮಾಡಿದರು. ಕೃಷ್ಣ ಸ್ವಯಂವರಕ್ಕೆ ಬಂದರೆ ನಿಶ್ಚಯವಾಗಿಯೂ ರುಕ್ಮಿಣಿಯನ್ನು ಪಡೆಯುತ್ತಾನೆ.

ಅಯಂ ತ್ರಿಲೋಕ ಸುಂದರಃ ಸುರೂಪಿಣೀ ಚ ರುಕ್ಮಿಣೀ।
ಮುಖೇನ ಬಾಹುನಾಪ್ಯಯಂ ಸಮಸ್ತಲೋಕಜಿದ್ ವಶೀ ॥ ೨೩ ॥

ಕೃಷ್ಣ ಮೂರುಲೋಕದಲ್ಲಿ ಸುಂದರ. ರುಕ್ಮಿಣಿಯೂ ತ್ರಿಲೋಕ ಸುಂದರಿ. ಕೃಷ್ಣ ಮುಖದಿಂದ ಸಮಸ್ತಲೋಕವನ್ನು ವಶೀಕರಿಸಿದ್ದಾನೆ. ಬಾಹುವಿನಿಂದಲೂ ಸಮಸ್ತಲೋಕವನ್ನು ಗೆದ್ದಿದ್ದಾನೆ.

ಮುಖದಿಂದ ಅಂದರೆ ಮುಖದ ಕಾಂತಿಯಿಂದ ಎಲ್ಲ ಲೋಕವನ್ನು ವಶೀಕರಿಸಿದ್ದಾನೆ. ಅಥವಾ ತನ್ನ ಮುಖಕಾಂತಿಯಿಂದ ಲೋಕದ ಎಲ್ಲರ ಮುಖಕಾಂತಿಯನ್ನು ಮೀರಿಸಿ ಗೆದ್ದಿದ್ದಾನೆ ಎನ್ನುತ್ತದೆ ಜನಾರ್ದನೀಯ. ವಾಗ್ ಯುದ್ಧದಲ್ಲಿ ಎಲ್ಲರನ್ನೂ ಗೆದ್ದಿದ್ದಾನೆ ಎನ್ನುತ್ತದೆ ವರದರಾಜೀಯ.

ಸಮಸ್ತವೇದಿನಾಂ ವರಂ ಜಿತಾರಿಮಗ್ರ್ಯ ರೂಪಿಣಮ್।
ಸಮಸ್ತಯೋಷಿತಾಂ ವರಾ ವ್ರಜೇತ ರುಕ್ಮಿಣೀ ಧ್ರುವಮ್ ॥ ೨೪ ॥

'ಸರ್ವಜ್ಞರಲ್ಲಿ ಶ್ರೇಷ್ಠ, ಶತ್ರುಗಳನ್ನು ಗೆದ್ದವ, ಅತಿಸುಂದರ - ಇಂಥ ಕೃಷ್ಣನನ್ನು ಎಲ್ಲ ಸ್ತ್ರೀಯರಲ್ಲಿ ಉತ್ತಮಳಾದ ರುಕ್ಮಿಣಿ ನಿಶ್ಚಿತವಾಗಿ ಸೇರುತ್ತಾಳೆ.

ವಯಂ ಚ ಮಾನಸಂಕ್ಷಯಂ ನಿತಾಂತಮಾಪ್ನುಮಸ್ತದಾ।
ನ ಶಕ್ನುಮೋ ನಿವಾರಿತುಂ ಶರೈರಮುಂ ಕಥಂಚನ ॥ ೨೫ ॥

'ಆಗ ನಾವು ಮಾನಹಾನಿಯನ್ನು ಹೊಂದಬೇಕಾಗುವುದು. ನಾವು ಬಾಣಗಳಿಂದ ಅವನನ್ನು ಯಾವ ರೀತಿಯಿಂದಲೂ ತಡೆಯಲು ಶಕ್ತರಾಗಲಾರೆವು.

ಅತಃ ಸ್ವಯಂವರೇ ಯಥಾ ನ ಸಂಗಮೋ ಹರೇರ್ಭವೇತ್।
ತಥಾ ವಿಧಾನಮೇವ ನಃ ಸುನೀತಿರೂರ್ಜಿತಾ ಧ್ರುವಮ್ ॥ ೨೬ ॥

'ಅದರಿಂದ ಸ್ವಯಂವರದಲ್ಲಿ ಕೃಷ್ಣನ ಸಮಾಗಮವಾಗದಂತೆ ಮಾಡುವುದೇ ನಿಶ್ಚಿತವಾಗಿ ನಮಗೆ ಉತ್ತಮ ನೀತಿಯೆನಿಸುತ್ತದೆ.

ಅತೋ ನ ದೇಯಮಸ್ಯ ನಃ ಸುಭೂಭುಜಾಂ ಸಮಾಗಮೇ।
ಕ್ವಚಿದ್ ಕದಾಚಿದಾಸನಂ ನ ಚಾರ್ಘ್ಯ ಪೂರ್ವಕೋ ವಿಧಿಃ ॥ ೨೭ ॥

'ಅದರಿಂದ ನಮ್ಮ ರಾಜರುಗಳ ಸಂಮೇಳನದಲ್ಲಿ ಕೃಷ್ಣನಿಗೆಂದೂ ಎಲ್ಲಿಯೂ ಆಸನ ನೀಡಬಾರದು. ಅರ್ಘ್ಯಾದಿ ಉಪಚಾರವನ್ನೂ ನೀಡಬಾರದು.

ನ ಚಾಸ್ಯತಿ ಕ್ಷಿತೌ ಕ್ವಚಿತ್ ವಿಮಾನಿತಃ ಪುರೋ ಹಿ ನಃ।
ವರಾಸನಸ್ಥ ಭೂಭುಜಾಂ ಸ ಮಾನಿತೋ ಹಿ ದೈವತೈಃ ॥ ೨೮ ॥

'ಉತ್ತಮ ಆಸನದಲ್ಲಿ ಕುಳಿತಿರುವ ರಾಜರುಗಳಾದ ನಮ್ಮ ಮುಂದೆ ಕೃಷ್ಣ ಅಪಮಾನಿತನಾಗಿ ಎಲ್ಲಿಯೂ ನೆಲದಲ್ಲಿ ಕುಳಿತುಕೊಳ್ಳಲಾರ. ಏಕೆಂದರೆ ಅವನು ದೇವತೆಗಳಿಂದ ಮಾನಿತನಾದವ.

ಸ ದರ್ಪಮಾನಸಂಯುತಃ ಕ್ರುಧಾ ಪ್ರಯಾಸ್ಯತಿ ಧ್ರುವಮ್।
ಪುರೀಂ ಸ್ವಕಾಂ ತತೋ ವಯಂ ವಿಧೇಮ ಚ ಸ್ವಯಂವರಮ್ ॥ ೨೯ ॥

'ಗರ್ವ ಅಭಿಮಾನಯುಕ್ತನಾದ ಕೃಷ್ಣ ನಿಶ್ಚಿತವಾಗಿ ಕೋಪದಿಂದ ತನ್ನ ಪಟ್ಟಣಕ್ಕೆ ಹೊರಟು ಹೋಗುವನು. ಬಳಿಕ ನಾವು ಸ್ವಯಂವರವನ್ನು ನಡೆಸೋಣ.'

ಕೃಷ್ಣ ಎಲ್ಲಿಯೂ ಪಟ್ಟಾಭಿಷಿಕ್ತನಾದ ರಾಜನಾಗಿರಲಿಲ್ಲ. ಅದರಿಂದ ರಾಜಯೋಗ್ಯವಾದ ಸಿಂಹಾಸನದ ಗೌರವವನ್ನು ನಿರಾಕರಿಸುವುದು ನ್ಯಾಯವೆ ಆಗುತ್ತದೆ ಎಂಬುದು ರಾಜರುಗಳು ಹೂಡಿದ ಉಪಾಯ.

ಇತಿ ಸ್ಮ ಸರ್ವ ಭೂಭುಜಾಂ ವಿನಿಶ್ಚಯಂ ಸಕೈಶಿಕಃ।
ಕ್ರಥೋಕವಗಮ್ಯ ಭೀಷ್ಮಕಾನುಜೋಕಭ್ಯಯಾದ್ಧರಿಂ ದ್ರುತಮ್ ॥ ೩೦ ॥

ಹೀಗೆ ಎಲ್ಲ ರಾಜರು ಕೈಗೊಂಡ ನಿರ್ಣಯವನ್ನು ಭೀಷ್ಮಕರಾಜನ ತಮ್ಮಂದಿರಾದ ಕ್ರಥ ಕೈಶಿಕರು ತಿಳಿದು ಬೇಗನೆ ಕೃಷ್ಣನ ಬಳಿಗೆ ಹೋದರು.

ರಾಜರುಗಳ ಈ ನಿರ್ಣಯದಿಂದ ಭೀಷ್ಮಕ ಬಹಳ ನೊಂದುಕೊಂಡ. ಕೃಷ್ಣನಿಗಾಗಿ ಬೇರೆಯೆ ಒಂದು ಮನೆಯನ್ನೂ ಕಟ್ಟಿಸಿದ. ಬಳಿಕ ಅವನ ಅಪೇಕ್ಷೆಯಂತೆ ಅವನ ತಮ್ಮಂದಿರಾದ ಕ್ರಥಕೈಶಿಕರು ಕೃಷ್ಣನ ಬಳಿಗೆ ಹೋಗಿ ಜರಾಸಂಧನ ಮಾತನ್ನು ತಿಳಿಸಿದರು. ತಮ್ಮ 'ಕ್ರಥ' ಮತ್ತು 'ಕೈಶಿಕ' ಎಂಬ ರಾಜ್ಯಗಳನ್ನು ಸಮರ್ಪಿಸಿ ಪಟ್ಟಾಭಿಷೇಕ ಮಾಡುತ್ತೇವೆ ಎಂದರು.

ಪ್ರಣಮ್ಯ ಪಾದಪದ್ಮಯೋರ್ನಿಜಂ ಗೃಹಂ ಪ್ರವೇಶ್ಯ ಚ।
ಮಹಾಸನಂ ಪ್ರದಾಯ ತೌ ಪ್ರಚಕ್ರತುರ್ವ ರಾರ್ಚನಮ್ ॥ ೩೧ ॥

ಕ್ರಥ ಕೈಶಿಕರು ಕೃಷ್ಣನ ಪಾದಕಮಲಗಳಿಗೆ ವಂದಿಸಿ ತಮ್ಮ ಮನೆಯಲ್ಲಿ ಪ್ರವೇಶಮಾಡಿಸಿ ದೊಡ್ಡ ಆಸನವನ್ನಿತ್ತು ಉತ್ತಮ ಸತ್ಕಾರ ಮಾಡಿದರು.

'ತಮ್ಮ ಮನೆ' ಅಂದರೆ ಕೃಷ್ಣನಿಗಾಗಿ ಅವರು ಕಟ್ಟಿಸಿದ ಮನೆ.

ಶ್ರೀಕೃಷ್ಣ ಪಟ್ಟಾಭಿಷೇಕ

ಅಥಾಗಮಚ್ಛತಕ್ರತೋರ್ವಚಃ ಪ್ರಗೃಹ್ಯ ಭೂಭುಜಃ।
ಜರಾಸುತಾದಿಕಾನ್ ಪುಮಾನುವಾಚ ಚಾರ್ಥವದ್ ವಚಃ ॥ ೩೨ ॥

ಆಗ ಒಬ್ಬ ದೇವದೂತ ಇಂದ್ರನ ಸಂದೇಶವನ್ನು ಹೊತ್ತು ಬಂದ. ಜರಾಸಂಧಾದಿ ರಾಜರುಗಳಿಗೆ ಅರ್ಥಗರ್ಭಿತವಾದ ಮಾತನ್ನಾಡಿದ.

ಇಂದ್ರ ಜರಾಸಂಧಾದಿಗಳಿಗೆ ನೀಡಿದ ಆಜ್ಞೆಯನ್ನು ಲೇಖಬದ್ಧಗೊಳಿಸಿ ಆ ಪತ್ರವನ್ನು ಚಿನ್ನದ ಹರಿವಾಣದಲ್ಲಿಟ್ಟು ದೂತನ ಮೂಲಕ ಕ್ರಥಕೈಶಿಕರಿಗೆ ಕಳಿಸಿದ. ಕೈಶಿಕ ಅದನ್ನು ರಾಜರ ಮುಂದೆ ಓದಿ ಹೇಳಿದ ಎನ್ನುತ್ತದೆ ಹರಿವಂಶ.

ಅಹಂ ಪ್ರಿಯಃ ಶಚೀಪತೇಃ ಸದಾಸ್ಯ ಚಾಕ್ಷಿಗೋಚರಃ।
ಸುರೇಂದ್ರ ಆಜ್ಞಯಾವದನ್ನೃಪಾನ್ ವ ಈಶ್ವರೋ ಹಿ ಸಃ ॥ ೩೩ ॥

'ನಾನು ದೇವೇಂದ್ರನಿಗೆ ಪ್ರೀತಿಪಾತ್ರ. ಸದಾ ಅವನ ಕಣ್ಣ ಮುಂದಿರುವವ. ದೇವೇಂದ್ರ ನಿಮಗೆ ಒಡೆಯ. ಆದ್ದರಿಂದ ಅವನು ರಾಜರಾದ ನಿಮಗೆ ಆಜ್ಞಾರೂಪವಾಗಿ ಹೀಗೆ ಹೇಳಿದ್ದಾನೆ.

ದೇವೇಂದ್ರನಿಗೆ ಪ್ರಿಯವಾದ ದೂತ ಹರಿವಂಶ ಪ್ರಕಾರ **ಚಿತ್ರಾಂಗದನೆಂಬ** ಗಂಧರ್ವ.

ಸಮಸ್ತರಾಜಸತ್ಪತಿರ್ಹರಿರ್ನ ಚಾನ್ಯ ಇತ್ಯಪಿ।
ವರಾಭಿಷೇಕಮೀಶಿತುಃ ಕುರುಧ್ವಮಾಶ್ವಸಂಶಯಮ್ ॥ ೩೪ ॥

'ಎಲ್ಲ ರಾಜರಿಗೆ ಉತ್ತಮ ಪ್ರಭು ಶ್ರೀಕೃಷ್ಣ ಬೇರೆ ಯಾರೂ ಅಲ್ಲ. ಇದರಲ್ಲಿ ಸಂಶಯಪಡದೆ ಪ್ರಭುವಿಗೆ ಉತ್ತಮವಾದ ಅಭಿಷೇಕವನ್ನು ಬೇಗನೆ ಮಾಡಿರಿ.

ಹರಿವಂಶದಲ್ಲಿ

ನಚಧಿಕಾರೋ ದೇವಾನಾಂ ರಾಜೇಂದ್ರಸ್ಯಾಭಿಷೇಚನೇ।

ನರರಿಗೆ ರಾಜನೆಂದು ಸುರರು ಅಭಿಷೇಕ ಮಾಡುವುದು ಸಲ್ಲದು. ಅದರಿಂದ ನರರಾದ ನೀವೆ ಅಭಿಷೇಕ ಮಾಡಬೇಕು ಎನ್ನುತ್ತಾನೆ ಇಂದ್ರ.

ಅತೋಽನ್ಯಥಾ ಶಿರಸ್ಯಹಂ ನಿಪಾತಯಾಮಿ ವೋಽಶನಿಮ್।
ಇತೀದಮಿಂದ್ರಶಾಸನಂ ಕುರುಧ್ವಮಿತ್ಯಸೌ ಯಯೌ ॥ ೩೫ ॥

'ಹಾಗೆ ಮಾಡದಿದ್ದಲ್ಲಿ ನಿಮ್ಮ ತಲೆಯ ಮೇಲೆ ವಜ್ರಾಯುಧವನ್ನು ಹಾಕುತ್ತೇನೆ.' ಇದು ಇಂದ್ರನ ಶಾಸನ. ಅದರಂತೆ ನಡೆಯಿರಿ' ಎಂದು ಹೇಳಿ ದೇವದೂತ ಹೊರಟುಹೋದ.

ತದೀರಿತಂ ನಿಶಮ್ಯ ತೇ ಪುನಃ ಸುತಪ್ತಚೇತಸಃ।
ಬಭೂವುರೂಚಿರೇ ವಚಃ ಸುಗರ್ವಿತೋ ಹಿ ವಾಸವಃ ॥ ೩೬ ॥

ದೂತನ ಮಾತನ್ನು ಕೇಳಿ ರಾಜರು ಪುನಃ ಸಂತಪ್ತ ಚಿತ್ತರಾದರು. 'ಇಂದ್ರ ಬಹಳ ಗರ್ವಿಷ್ಠನಾಗಿದ್ದಾನೆ' ಎಂದುಕೊಂಡರು.

ಪುರಾ ಬಿಭೇತಿ ನಃ ಸದಾ ಪ್ರತಿಪ್ರತಿ ಸ್ಮ ವಾಸವಃ।
ಉತಾದ್ಯ ಕೃಷ್ಣಸಂಶ್ರಯಾದ್ ದೃಢಂ ವಿಭೀಷಯತ್ಯಸೌ ॥ ೩೭ ॥

'ಹಿಂದೆ ಯಾವಾಗಲೂ ದೇವೇಂದ್ರ ನಮಗೆ ಒಬ್ಬೊಬ್ಬರಿಗೂ ಹೆದರುತ್ತಿದ್ದ. ಈಗ ಕೃಷ್ಣನ ಸಹಾಯದಿಂದ ಅವನು ನಮ್ಮನ್ನೆ ಚೆನ್ನಾಗಿ ಹೆದರಿಸುತ್ತಿದ್ದಾನೆ!

ಅದೃಶ್ಯ ಏವ ದೇವರಾಡ್ ಯದಿ ಸ್ಮ ವಜ್ರಮುತ್ಸೃಜೇತ್।
ಭವೇಮ ಪೀಡಿತಾ ವಯಂ ವರಾದಮೃತ್ಯವೋಽಪಿ ಹಿ ॥ ೩೮ ॥

'ಅದೃಶ್ಯನಾಗಿಯೇ ಒಂದುವೇಳೆ ದೇವೇಂದ್ರ ವಜ್ರಾಯುಧವನ್ನೆಸೆದನೆಂದರೆ ನಾವು ವರದಿಂದ ಮರಣರಹಿತರಾಗಿದ್ದರೂ ಪೀಡಿತರಾಗಬಹುದು.

ಪುರಾ ದಿವಿ ಸ್ಥಿತಸ್ಯ ಚ ಪ್ರಮರ್ದನೇ ವಯಂ ಕ್ಷಮಾಃ।
ಉತಾದ್ಯ ಯದ್ಯಮುಂ ವಯಂ ವ್ರಜೇಮ ಕೃಷ್ಣಏಷ್ಯತಿ ॥ ೩೯ ॥

'ಹಿಂದೆ ಅವನು ಸ್ವರ್ಗದಲ್ಲಿದ್ದಾಗ ಅವನನ್ನು ಮರ್ದಿಸಲು ನಾವು ಶಕ್ತರಾಗಿದ್ದೆವು. ಆದರೆ ಈಗ ಅವನ ಮೇಲೆ ದಾಳಿ ಮಾಡಿದರೆ ಕೃಷ್ಣ ಬಂದುಬಿಡುತ್ತಾನೆ!

ಅತೋಽಭಿಷೇಚನಾದ್ ಯದೀಹ ಶಾರ್ಙ್ಗಿಣಃ ಶಚೀಪತಿಃ।
ನ ವಜ್ರಮುತ್ಸೃಜೇತ್ ತದಾಭಿಷೇಚಯಾಮ ತಂ ವಯಮ್ ॥ ೪೦ ॥

'ಅದರಿಂದ ಕೃಷ್ಣನಿಗೆ ಅಭಿಷೇಕ ಮಾಡುವುದರಿಂದ ಇಂದ್ರ ನಮ್ಮ ಮೇಲೆ ವಜ್ರಾಯುಧವನ್ನು ಪ್ರಯೋಗಿಸುವುದಿಲ್ಲವೆಂದಾದರೆ ನಾವು ಅವನಿಗೆ ಅಭಿಷೇಕ ಮಾಡೋಣ.

ಅತೋಽನ್ಯಥಾ ದನುರ್ಯಥಾ ವರಾದಮೃತ್ಯುಕೋಽಪಿ ಸನ್।
ಸುರೇಂದ್ರವಜ್ರಾತಾಡಿತೋ ಬಭೂವ ಕುಕ್ಷಿಗಾಸ್ಯಯುಕ್ ॥ ೪೧ ॥

ತಥೈವ ಕೃಷ್ಣಸಂಶ್ರಯಾತ್ ಸ ನಃ ಶಚೀಪತಿರ್ನಯೇತ್।
ಇತಿ ಸ್ಮ ನಿಶ್ಚಿತಾ ನೃಪಾನಯಾತಯಂತ ಶೌರಯೇ ॥ ೪೨ ॥

'ಹಾಗೆ ಮಾಡದಿದ್ದರೆ ದನು ವರದಿಂದ ವರುಣ ರಹಿತನಾಗಿದ್ದರೂ ದೇವೇಂದ್ರನ ವಜ್ರಾಯುಧಪ್ರಹಾರದಿಂದ ಹೇಗೆ ಅವನ ಮುಖ ಹೊಟ್ಟೆಯೊಳಗೆ ಸೇರಿಹೋಯಿತೋ ಹಾಗೆಯೆ ಕೃಷ್ಣನ ಆಶ್ರಯದಿಂದ ಇಂದ್ರ ನಮ್ಮನ್ನೂ ಅಂಥ ಏನಾದರೊಂದು ಅವಸ್ಥೆಗೆ ತಳ್ಳುತ್ತಾನೆ' ಎಂದು ನಿಶ್ಚಯ ಮಾಡಿಕೊಂಡು ರಾಜರನ್ನು ಕೃಷ್ಣನ ಅಭಿಷೇಕಕ್ಕಾಗಿ ಕಳಿಸಿದರು, ತಾವು ಮಾತ್ರ ಅಹಂಕಾರದಿಂದ ಹೋಗಲಿಲ್ಲ.

ಸಮಸ್ತಶೋ ಜರಾಸುತಾದಿಭಿಃ ಕೃತೇಽಭಿಷೇಚನೇ।
ಅತೀವ ಭಗ್ನಮಾನಕಾನ್ನ ಚಾನುಯಾತಿ ಕಶ್ಚನ ॥ ೪೩ ॥

'ಜರಾಸಂಧಾದಿಗಳು ಎಲ್ಲರೂ ಅಭಿಷೇಕ ಮಾಡಿದರೆ ಬಹು ಅಪಮಾನಿತರಾದ ಅವರನ್ನು ಯಾರೊಬ್ಬನೂ ಅನುಸರಿಸಲಾರ.

ಜರಾಸಂಧಾದಿಗಳ ನಾಯಕತ್ವದಲ್ಲಿ ದುಷ್ಟರಾಜರು ಕೃಷ್ಣದ್ವೇಷ ಮಾಡಿ ಮಡಿಯಬೇಕು. ಜರಾಸಂಧಾದಿಗಳು ಅಪಮಾನಿತರಾಗಿ ಆ ರಾಜರುಗಳ ದೃಷ್ಟಿಯಲ್ಲಿ ಕಡಿಮೆಯವರಾಗಿ ಹೋದರೆ ಇದು ಶಕ್ಯವಿಲ್ಲ. ಅದರಿಂದ ಜರಾಸಂಧ ರುಕ್ಮಿ ಶಿಶುಪಾಲ ಸಾಲ್ವ ಈ ನಾಲ್ವರು ಕೃಷ್ಣನಿಗೆ ಅಭಿಷೇಕ

ಮಾಡುವುದು ಕೃಷ್ಣನಿಗೆ ಬೇಕಾಗಿರಲಿಲ್ಲ. ಇದನ್ನು ತಿಳಿದಿದ್ದ ಇಂದ್ರ ಈ ನಾಲ್ವರಿಗೆ ಆಜ್ಞೆ ನೀಡಿರಲಿಲ್ಲ.

ಸಮಾಶ್ರಯಂ ಚ ಕೇಶವಂ ತದೈವ ಜೀವನಾರ್ಥಿನಃ।
ಪ್ರಕುರ್ಯುರಾಸುರಾ ಅಪೀತಿ ದೇವಕಾರ್ಯಸಂಕ್ಷಯಃ ॥ ೪೪ ॥

'ಆಗ ಬದುಕುವ ಆಸೆಯಿಂದ ಅಸುರರೂ ಕೃಷ್ಣನನ್ನು ಶರಣಾಗಬಹುದು. ಅದರಿಂದ ದೇವಕಾರ್ಯ ಕೆಡುವುದು.'

ಜರಾಸಂಧಾದಿ ನಾಲ್ವರೂ ಕೃಷ್ಣನಿಗೆ ಅಭಿಷೇಕ ಮಾಡಿದರೆ ಅಸುರರು ಅವರ ಸಾಮರ್ಥ್ಯದಲ್ಲಿ ವಿಶ್ವಾಸ ತಾಳದೆ, ಕೃಷ್ಣನನ್ನೆ ಶರಣುಹೊಂದುತ್ತಾರೆ. ಹಾಗೆ ಮಾಡದಿದ್ದರೆ ತಾವು ಬದುಕುವುದೇ ಕಷ್ಟವೆಂದುಕೊಳ್ಳುತ್ತಾರೆ. ಆಗ ಕೃಷ್ಣ ಅವರನ್ನು ಕೊಲ್ಲುವಂತಿಲ್ಲ, ದೇವತೆಗಳು ಬಯಸುವ ಭೂಭಾರಹರಣ ಕಾರ್ಯ ಕೆಡುತ್ತದೆ.

ಇತೀಕ್ಷ್ಯ ಪಾಕಶಾಸನೋಽವದಜ್ಜರಾಸುತಾದಿಕಾನ್।
ಸುರುಕ್ಮಿಸಾಲ್ವಚೇದಿಪೋ ನ ಯಾತು ಮಾಗಧೋ ಹರಿಮ್ ॥ ೪೫ ॥

ಹೀಗೆ ಆಲೋಚಿಸಿ ಇಂದ್ರ ಜರಾಸಂಧಾದಿಗಳಿಗೆ, 'ಜರಾಸಂಧ ರುಕ್ಮಿ ಸಾಲ್ವ ಶಿಶುಪಾಲರು ಕೃಷ್ಣಾಭಿಷೇಕಕ್ಕೆ ಹೋಗುವುದು ಬೇಡ' ಎಂದು ಹೇಳಿದ.

ಜರಾಸಂಧಃ ಸುನೀಥಶ್ಚ ರುಕ್ಮೀ ಚೈವ ಮಹಾರಥಃ
ಸಾಲ್ವಃ ಸೌಭಪತಿಶ್ಚೈವ ಚತ್ವಾರೋ ರಾಜಸತ್ತಮಾಃ
ರಂಗಸ್ಯಾಶೂನ್ಯ ಹೇತೋರ್ಹಿ ತಿಷ್ಠಂತು ಇಹ ಪಾರ್ಥಿವಾಃ।

'ಜರಾಸಂಧ ಶಿಶುಪಾಲ ರುಕ್ಮಿ ಸಾಲ್ವ ಈ ನಾಲ್ವರು ರಂಗ ಶೂನ್ಯವಾಗದಿರಲು ಇಲ್ಲಿಯೆ ಇರಲಿ.' ಎಂದು ಹರಿವಂಶದಲ್ಲಿ ಅಶರೀರವಾಣಿ ಇಂದ್ರಾಜ್ಞೆಯನ್ನು ತಿಳಿಸುತ್ತದೆ. ಇಲ್ಲಿ ರಂಗ ಶೂನ್ಯವಾಗದಿರಲಿ ಎನ್ನುವುದು ನೆಪಮಾತ್ರ. ಇಂದ್ರನ ಅಂತರ್ಯ ಬೇರೆಯೆ ಇತ್ತೆಂದು ನಿರ್ಣಯ ಹೇಳುತ್ತಿದೆ.

ತತಸುತ್ತಾನ್ ವಿನಾ ಪರೇಽಧಿರಾಜರಾಜ ಇತ್ಯಮುಮ್।
ತದಾಭಿಷೇಕ್ತುಮುದ್ಯತಾ ನೃಪಾಃ ಸುರೇಶಶಾಸನಾತ್ ॥ ೪೬ ॥

ಬಳಿಕ ಇಂದ್ರನಾಜ್ಞೆಯಂತೆ ಜರಾಸಂಧಾದಿ ನಾಲ್ವರನ್ನು ಬಿಟ್ಟು ಉಳಿದ ರಾಜರು ಕೃಷ್ಣನನ್ನು ರಾಜಾಧಿರಾಜನೆಂದು ಅಭಿಷೇಕ ಮಾಡಲು ಉದ್ಯುಕ್ತರಾದರು.

ತತಃ ಶಚೀಪತಿರ್ನಿಜಂ ವರಾಸನಂ ಹರೇರದಾತ್ ।
ವಿವೇಶ ತತ್ರ ಕೇಶವೋ ನಭಸ್ತಲಾವತಾರಿತೇ ॥ ೪೭ ॥

ಆಗ ಇಂದ್ರ ತನ್ನ ಉತ್ತಮ ಆಸನವನ್ನು ಕೃಷ್ಣನಿಗಾಗಿ ಕಳಿಸಿಕೊಟ್ಟ ಆಕಾಶದಿಂದ ಇಳಿದುಬಂದ ಆ ಆಸನದಲ್ಲಿ ಕೃಷ್ಣ ಕುಳಿತುಕೊಂಡ.

ಹರಿವಂಶದಲ್ಲಿ ಕ್ರಥ ತನ್ನ ಸಿಂಹಾಸನದಲ್ಲಿ ಕೃಷ್ಣನನ್ನು ಕೂಡಿಸಲು ಉದ್ಯುಕ್ತನಾದಾಗ ದೇವದೂತ ಚಿತ್ರಾಂಗದ ಹೇಳಿದ, 'ನೀನು ಕುಳಿತ ಆಸನವನ್ನು ಕೃಷ್ಣನಿಗೆ ಕೊಡಬೇಡ. ಅನ್ಯರು ಕುಳಿತ ಆಸನ ಅವನಿಗೆ ಉಚಿತವಲ್ಲ. ದೇವೇಂದ್ರ ಕಳಿಸುವ ವಿಶ್ವಕರ್ಮ ನಿರ್ಮಿತ ದಿವ್ಯರತ್ನ ಸಿಂಹಾಸನದಲ್ಲಿ ಕುಳ್ಳಿರಿಸು' ಎಂದು. ದೇವೇಂದ್ರ ದ್ವಾದಶಾದಿತ್ಯರಲ್ಲಿ ಒಬ್ಬ ಭೀಷ್ಮಕ ಮಿತ್ರನೆಂಬ ಆದಿತ್ಯನ ಅವತಾರ. ಇಂದ್ರಸಖನೆಂದು ಮಹಾಭಾರತ ಹೇಳಿದ್ದರಿಂದ ಇಂದ್ರನ ಮಿತ್ರನೂ ಆಗಿದ್ದಾನೆ. ಕೃಷ್ಣನಂತೂ ವಿಷ್ಣುವೆಂಬ ಆದಿತ್ಯನ ಅವತಾರ. ಹೀಗಾಗಿ ಭೀಷ್ಮಕನಿಗೆ ಕೃಷ್ಣ ಅಳಿಯನಾಗಬೇಕು. ಅದಕ್ಕೆ ಕೃಷ್ಣ ಸಿಂಹಾಸನದಲ್ಲಿ ಅಭಿಷಿಕ್ತನಾದ ಒಬ್ಬ ರಾಜನಾಗಲೆಂದು ಇಂದ್ರ ಬಯಸಿದ್ದು ಸ್ವಾಭಾವಿಕ. ಅದರಿಂದ ಕೃಷ್ಣನಿಗೆ ಸಿಂಹಾಸನ ಕಳಿಸಿಕೊಟ್ಟ ಇಂದ್ರ.

ಕರೇ ಪ್ರಗೃಹ್ಯ ಕೇಶವೋ ನ್ಯವೇಶಯತ್ ಸಹಾಸನೇ ।
ಪತತ್ರಿಪುಂಗವಂ ಚ ತೌ ಸ ಭೀಷ್ಮಕಾನುಜೌ ಪ್ರಭುಃ ॥ ೪೮ ॥

ಪ್ರಭು ಶ್ರೀಕೃಷ್ಣ ಗರುಡನನ್ನೂ ಕ್ರಥಕೈಶಿಕರನ್ನೂ ಕೈಯಲ್ಲಿ ಹಿಡಿದು ತನ್ನೊಡನೆ ಆಸನದಲ್ಲಿ ಕುಳ್ಳಿರಿಸಿಕೊಂಡ.

ವೈನತೇಯಶ್ಚ ಬಲವಾನ್ ಕಾಮರೂಪೀ ನರಾಕೃತಿಃ ।
ದಕ್ಷಿಣಂ ಪಾರ್ಶ್ವಮಾಶ್ರಿತ್ಯ ಆಸನಸ್ಥೋ ಮಹಾಬಲಃ ।

ಎಂದು ಮುಂತಾಗಿ ಹರಿವಂಶ ಹೇಳುವಂತೆ ಕಾಮರೂಪಿ ಗರುಡ ಮನುಷ್ಯಾಕೃತಿಯಾಗಿ ಕೃಷ್ಣನ ಬಲಭಾಗದಲ್ಲಿ ಆಸನದಲ್ಲಿ ಕುಳಿತ. ಕ್ರಥಕೈಶಿಕರೂ ವೃಷ್ಣಿ ಅಂಧಕವಂಶದ ಸಾತ್ಯಕಿ ಮುಂತಾದ ವೀರರೂ ಎಡಭಾಗದಲ್ಲಿ ಕುಳಿತರು.

ಅಥಾಖಿಲಾ ನರೇಶ್ವರಾ ಮುನೀಂದ್ರಸಂಯುತಾ ಹರಿಮ್ ।
ಸುಶಾತಕೌಂಭಕುಂಭಕೈಃ ಪ್ರಚಕ್ರುರಾಭಿಷೇಕಿಮ್ ॥ ೪೯ ॥

ಬಳಿಕ ಎಲ್ಲ ರಾಜರೂ ಋಷಿಶ್ರೇಷ್ಠರಿಂದೊಡಗೂಡಿ ಸುವರ್ಣಕಲಶ ಜಲದಿಂದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿದರು.

ವಿರಿಂಚಶರ್ವಪೂರ್ವಕೈರಭಿಷ್ಟುತಃ ಸುರಾದಿಭಿಃ।
ಸಮಸ್ತದೇವಗಾಯಕೈಃ ಪ್ರಗೀತ ಆಸ ಕೇಶವಃ ॥ ೫೦ ॥

ಬ್ರಹ್ಮರುದ್ರಾದಿ ದೇವತೆಗಳು ಮುಂತಾದವರು ಕೃಷ್ಣನನ್ನು ಸ್ತುತಿಸಿದರು, ಎಲ್ಲ ಗಂಧರ್ವರು ಹಾಡಿದರು.

ಭೀಷ್ಮಕನಿಗೆ ವಿಶ್ವರೂಪದರ್ಶನ

ಅಥಾಹ ಭೀಷ್ಮಕಂ ಪ್ರಭುಃ ಸ್ವಯಂವರಃ ಕಿಲ ತ್ವಯಾ।
ಅಭೀಪ್ಸಿತಃ ಸುತಾಕೃತೇ ಶುಭಾಯ ತೇ ಭವೇನ್ನಸಃ ॥ ೫೧ ॥

ಬಳಿಕ ಪ್ರಭು ಶ್ರೀಕೃಷ್ಣ ಭೀಷ್ಮಕನಿಗೆ ಹೇಳಿದ, 'ನೀನು ನಿನ್ನ ಮಗಳಿಗೆ ಸ್ವಯಂವರ ಮಾಡಲು ಬಯಸಿದೆಯಂತೆ. ಅದು ನಿನಗೆ ಮಂಗಳಕರವಾಗದು'.

ಸಮುದ್ರರಾಜ ಲಕ್ಷ್ಮ್ಯಾಸ್ವಯಂವರವೇರ್ಪಡಿಸಿದುದು. ಜನಕರಾಜ ಸೀತಾಸ್ವಯಂವರವೇರ್ಪಡಿಸಿದುದು ಹೇಗೆ ಮಂಗಳಕರವಾಗಿತ್ತೆನ್ನುವುದು ಮುಂದೆ ಸ್ಪಷ್ಟವಿದೆ. ಭೀಷ್ಮಕ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಲು ಸಿದ್ಧನಾದ್ದರಿಂದ ಈ ಸ್ವಯಂವರ ಅಮಂಗಳಕರ.

ಇಯಂ ರಮಾ ತವಾತ್ಮಜಾ ಬಭೂವ ತಾಂ ಹರೇರ್ನಚ।
ದದಾತಿ ಚೇತ್ ತದಾ ಪಿತಾ ನಿರಿಂದಿರೋ ವ್ರಜೇದಧಃ ॥ ೫೨ ॥

ಈಕೆ ಮಹಾಲಕ್ಷ್ಮಿ ನಿನ್ನ ಮಗಳಾಗಿ ಜನಿಸಿದ್ದಾಳೆ. ಅವಳನ್ನು ನಾರಾಯಣನಿಗೆ ಕೊಡದಿದ್ದರೆ ಕನ್ಯಾಪಿತನಾದ ನೀನು ಅಲಕ್ಷ್ಮೀಕನಾಗಿ ಅಧೋಗತಿ ಹೊಂದುವಿ.

ಹಿತಾಯ ಚೈತದೀರಿತಂ ತವಾನ್ಯಥಾ ಚಿಂತಯ।
ನ ಯೋಷಿದಿಚ್ಛಯಾ ತ್ವಹಂ ಬ್ರವೀಮಿ ಪಶ್ಯ ಯಾದೃಶಃ ॥ ೫೩ ॥

ಇದು ನಿನಗೆ ಒಳ್ಳೆಯದಕ್ಕಾಗಿ ಹೇಳಿದುದು. ಅನ್ಯಥಾ ತಿಳಿಯಬೇಡ. ಹೆಣ್ಣಿನಾಸೆಯಿಂದ ನಾನು ಈ ರೀತಿ ಹೇಳುತ್ತಿಲ್ಲ. ನೋಡು ನಾನು ಎಂಥವನೆಂದು.

ಉದೀರ್ಯ ಚೈವಮೀಶ್ವರಶ್ಚಕಾರ ಹಾವಿರಾತ್ಮನಃ।
ಸ ವಿಶ್ವರೂಪಮುತ್ತಮಂ ವಿಸಂಖ್ಯಶೀರ್ಷಬಾಹುಕಮ್ ॥ ೫೪ ॥

ಅನಂತತೇಜ ಆತತಂ ವಿಸಂಖ್ಯರೂಪಸಂಯುತಮ್ ।
ವಿಚಿತ್ರಮೌಲಿಕುಂಡಲಾಂಗದೋರುಹಾರನೂಪುರಮ್ ॥ ೫೫ ॥

ಜ್ವಲತ್ಕೌಸ್ತುಭಪ್ರಭಾಪ್ರಭಾಸಕಂ ಶುಭಾಂಬರಮ್ ।
ಪ್ರಪಸ್ಯ ಯಾದೃಶಾಃ ಸ್ತ್ರಿಯೋ ಮಮೇತ್ಯದರ್ಶಯತ್ ಶ್ರಿಯಮ್ ॥ ೫೬ ॥

ಹೀಗೆ ಹೇಳಿ ಶ್ರೀಕೃಷ್ಣ ತನ್ನ ಉತ್ತಮವಾದ ವಿಶ್ವರೂಪವನ್ನು ತೋರಿದ. ಅದು ಅಸಂಖ್ಯ ತಲೆ ತೋಳುಗಳುಳ್ಳದು, ಅಪರಿಮಿತ ತೇಜಸ್ಸು ಉಳ್ಳದು, ಸರ್ವತ್ರ ವ್ಯಾಪಿಸಿದೆ. ಅಸಂಖ್ಯ ರೂಪಯುಕ್ತವಾಗಿದೆ. ಸುಂದರ ಕಿರೀಟ ಕುಂಡಲ ಕೇಯೂರ ಉತ್ತಮಹಾರ ನೂಪುರಗಳುಳ್ಳದು. ಬೆಳಗುವ ಕೌಸ್ತುಭದ ಪ್ರಭೆಗೂ ಪ್ರಭೆ ನೀಡುವಂಥಹದು. ಉತ್ತಮ ವಸ್ತ್ರ ಧರಿಸಿದುದು. 'ನೋಡು ನನ್ನ ಪತ್ನಿಯರು ಎಂಥವರು' ಎನ್ನುತ್ತ ಲಕ್ಷ್ಮೀದೇವಿಯನ್ನು ತೋರಿದ.

ಅನಂತರೂಪಿಣೇಂ ಪರಾಂ ಮನುಷ್ಯದೃಷ್ಟಿತೋಽಧಿಕಾಮ್ ।
ಸ ರುಕ್ಮಿಣೀತನೋರಪಿ ವ್ಯದರ್ಶಯಚ್ಚದೇವತಾಃ ॥ ೫೭ ॥

ಅನಂತ ಸೌಂದರ್ಯವತಿಯಾದ ಅನಂತರೂಪಿಣಿ ಮಹಾಲಕ್ಷ್ಮ್ಯಾಯ ರೂಪ ಮನುಷ್ಯ ದೃಷ್ಟಿಯಿಂದ ರುಕ್ಮಿಣಿಯ ರೂಪಕ್ಕಿಂತಲೂ ಹೆಚ್ಚು ಕಂಗೊಳಿಸುತ್ತಿತ್ತು. ಕೃಷ್ಣ ತನ್ನ ಅಂಗಗಳನ್ನು ಆಶ್ರಯಿಸಿದ್ದ ದೇವತೆಗಳನ್ನೂ ವಿಶ್ವರೂಪದಲ್ಲಿ ತೋರಿದ.

ಹರಿಯ ವಿಶ್ವರೂಪ ಮತ್ಸ್ಯಕೂರ್ಮಾದ್ಯನಂತರೂಪ ಯುಕ್ತವಾಗಿತ್ತು. ಮಹಾಲಕ್ಷ್ಮ್ಯಯ ವಿಶ್ವರೂಪವೂ ಹಾಗೇ ಅನಂತರೂಪಯುಕ್ತ. ರುಕ್ಮಿಣಿಗಿಂತ ಲಕ್ಷ್ಮಿ ಸುಂದರಿ ಎಂದುದು ಕೇವಲ ಮನುಷ್ಯದೃಷ್ಟಿಯಿಂದ. ವಾಸ್ತವದಲ್ಲಿ ರುಕ್ಮಿಣಿಗೂ ಲಕ್ಷ್ಮಿಗೂ ಏನೂ ಭೇದವಿಲ್ಲ. ಕೃಷ್ಣ ತನಗೆ ಹೆಣ್ಣಿನಾಸೆ ಇಲ್ಲ ಎಂದು ತೋರಿಸಲು ವಿಶ್ವರೂಪದಲ್ಲಿ ಅನಂತವಾದ ಎದೆಗಳಲ್ಲಿ ಅನಂತ ತೊಡೆಗಳಲ್ಲಿ ಅನಂತಪಾದಮೂಲಗಳಲ್ಲಿ ಸೇವಿಸುತ್ತಿರುವ ಅನಂತ ಸೌಂದರ್ಯಉಳ್ಳ ಅನಂತ ಲಕ್ಷ್ಮೀರೂಪಗಳನ್ನು ತೋರಿದ ಎಂದು ವಾದಿರಾಜೀಯದಲ್ಲಿ ವಿವರಣೆ ಇದೆ.[1]

---

1. 'ಅನಂತರೂಪಿಣೇಂ' ರೂಪಂ ಸ್ವಭಾವೇ ಸೌಂದರ್ಯ ಇತಿ ವಚನಾತ್ ಅನಂತ ಸೌಂದರ್ಯವತೀಂ, ಸ್ವರುಕ್ಮಿಣೀತನೋರಪಿ ಮನುಷ್ಯದೃಷ್ಟಿತಃ ಅಧಿಕಾಂ, ನತು ಸ್ವಭಾವತಃ ಉಭಯೋರೈಕ್ಯೇನ ನೀಚೋಚ್ಚಭಾವಾಯೋಗಾತ್। ಏತಾದೃಶೀಂ ಶ್ರಿಯಮದರ್ಶಯದಿತಿ ಪೂರ್ವೇಣಾನ್ವಯಃ ಯದ್ವಾ ಯಾದೃಶಃ ಸ್ತ್ರಿಯಃ, ಬಹುವಚನಪ್ರಯೋಗಾತ್ ಉರಸಿ ಅಂಕಯೋಃ ಅಸಂಖ್ಯಾತಪಾದಸೇವಾರ್ಥಂ ಚ ಅನಂತರೂಪಿಣೇಮಿತ್ಯರ್ಥಃ। -ವಾದಿರಾಜೀಯ

ತದದ್ಭುತಂ ಸಮೀಕ್ಷ್ಯ ತು ಪ್ರಭೀತ ಆಸ ಭೀಷ್ಮಕಃ।
ಪಪಾತ ಪಾದಯೋರ್ವಿಭೋಃ ಕರೋಮಿ ತತ್ ತಥೇತಿ ಚ ॥ ೫೮ ॥

ಅದ್ಭುತವಾದ ಆ ವಿಶ್ವರೂಪವನ್ನು ಕಂಡು ಭೀಷ್ಮಕ ಬಹಳ ಭಯಪಟ್ಟ. ಪ್ರಭುವಿನ ಪಾದಗಳಲ್ಲಿ ಬಿದ್ದ. ನೀನು ಹೇಳಿದಂತೆ ಮಾಡುವೆನೆಂದ.

ಪುನಶ್ಚ ವಿಶ್ವರೂಪತಾಂ ವಿಧಾಯ ಪದ್ಮಲೋಚನಃ।
ಜಗಾಮ ಪಕ್ಷಿವಾಹನಃ ಪುರೀಂ ಸ್ವಬಾಹುಪಾಲಿತಾಮ್ ॥ ೫೯ ॥

ಕೃಷ್ಣ ವಿಶ್ವರೂಪವನ್ನು ಮರೆಮಾಡಿ ಗರುಡನ ಹೆಗಲೇರಿ ತನ್ನ ಬಾಹುಬಲದಿಂದ ರಕ್ಷಿತವಾದ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಅಪಾಂಪತಿಶ್ಚ ಮೈಥಿಲಃ ಸ್ವಯಂವರಂ ಕೃತಾವಪಿ।
ಹರಿಂ ವಿನಿಶ್ಚಯಾದಿಯಂ ವ್ರಜೇದಿತಿ ಸ್ಮ ಚಕ್ರತುಃ ॥ ೬೦ ॥

ಸಮುದ್ರರಾಜನೂ ಜನಕನೂ ಸ್ವಯಂವರವನ್ನು ಏರ್ಪಡಿಸಿದ್ದರು. ಆದರೂ ಅವರು ಕನ್ಯೆ ನಿಶ್ಚಯವಾಗಿ ಹರಿಯನ್ನೇ ಸೇರುವಳೆಂದು ಹಾಗೆ ಮಾಡಿದ್ದರು.

ಸ್ವಯಂವರಃ ಕ್ಷತೇರ್ಭುಜಾಂ ಸ್ವಧರ್ಮ ಇತ್ಯತೋ ದ್ವಯೋಃ।
ನ ದೋಷ ಆಸ ಭೀಷ್ಮಕೋ ನ ಕೇಶವಾರ್ಥಮೈಚ್ಛತ ॥ ೬೧ ॥

ಸ್ವಯಂವರ ಕ್ಷತ್ರಿಯರಿಗೆ ಸ್ವಧರ್ಮವಾದುದರಿಂದ ಅವರಿಬ್ಬರಿಗೂ ಸ್ವಯಂವರ ದೋಷವೆನಿಸಲಿಲ್ಲ. ಆದರೆ ಭೀಷ್ಮಕ ಕೃಷ್ಣನಿಗಾಗಿ ಸ್ವಯಂವರವನ್ನು ಮಾಡಲು ಬಯಸಲಿಲ್ಲ.

ಸಮುದ್ರರಾಜ ವರುಣ, ತನ್ನ ಮಗಳು ಸಾಕ್ಷಾತ್ ಲಕ್ಷ್ಮಿ ಅವಳು ನಾರಾಯಣನನ್ನೆ ವರಿಸುವಳೆಂದು ತಿಳಿದಿದ್ದ. ಜನಕರಾಜನೂ ಹಾಗೇ ತನ್ನ ಮಗಳು ಸೀತೆ ಸಾಕ್ಷಾತ್ ಲಕ್ಷ್ಮಿ ಅವಳು ಸಾಕ್ಷಾತ್ ಹರಿಯೇ ಆದ ರಾಮನನ್ನೇ ಸೇರುವಳೆಂದು ತಿಳಿದಿದ್ದ. ಅದರಿಂದ ಸ್ವಯಂವರ ದೋಷವೆನಿಸಲಿಲ್ಲ. ಕ್ಷತ್ರಿಯರಿಗೆ ಸ್ವಯಂವರ ಸ್ವಧರ್ಮ. ವರಣನೂ ದೇವತೆಗಳಲ್ಲಿ ಕ್ಷತ್ರಿಯ. ಜನಕನೂ ಕ್ಷತ್ರಿಯ. ಭೀಷ್ಮಕ ಕ್ಷತ್ರಿಯನೇ ಆಗಿದ್ದರೂ ಮಗಳಾದ ರುಕ್ಮಿಣಿಯನ್ನು ಸಾಕ್ಷಾತ್ ಲಕ್ಷ್ಮಿ ಎಂದೂ, ಕೃಷ್ಣನನ್ನೇ ಸೇರಬೇಕಾದವಳೆಂದೂ ತಿಳಿಯದೆ ಶಿಶುಪಾಲ ಮದುವೆಯಾಗಲಿ ಎಂದು ಸ್ವಯಂವರವೇರ್ಪಡಿಸಿದ. ಇದು ಕನ್ಯಾಪಿತನಾದ ಅವನಿಗೆ ಮಹಾ ಅನರ್ಥಕರ ಎಂದು ಶ್ರೀಕೃಷ್ಣ ಎಚ್ಚರಿಸಿದ.[1]

---

1. ಅನನ್ಯಯೋಗ್ಯಾ ಶ್ರೀಶ್ಚೇತ್ ಜ್ಞಾನಿನಾ ವರುಣೇನ ಮಿಥಿಲೇನ ಚ ದೇವಾನಾ ರಾಜ್ಞಾಂ ಚ ಮೇಲನಂ ಕೃತ್ವಾ ಲಕ್ಷ್ಮ್ಯಾಃ ಸೀತಾಯಾಶ್ಚ ಕುತಃ ಸ್ವಯಂವರಃ ಕೃತ ಇತ್ಯತ ಆಹ ಅಪಾಂ ಪತಿರಿತಿ। ಸ್ವಯಂವರಂ

ಅತೋ ಹರೌ ಪ್ರಬೋಧ್ಯ ತಂ ಗತೇ ಕೃಪಾಲುಸತ್ತಮೇ।
ವಶೀಕೃತೇ ಚ ಭೀಷ್ಮಕೇ ನೃಪಾಸ್ತ್ವಮಂತ್ರಯನ್ ಪುನಃ ॥ ೬೨ ॥

ಆದರಿಂದ ಪರಮಕೃಪಾಳುವಾದ ಶ್ರೀಕೃಷ್ಣ ಭೀಷ್ಮಕನನ್ನು ಎಚ್ಚರಿಸಿ ಹೋದಮೇಲೆ ಭೀಷ್ಮಕ ಕೃಷ್ಣನಿಗೆ ವಶವರ್ತಿಯಾದಾಗ ರಾಜರು ಪುನಃ ಮಂತ್ರಾಲೋಚನೆ ಮಾಡಿದರು.

ಜರಾಸಂಧನ ಸಂತಾಪ

ಯಶಶ್ಚ ಧರ್ಮಮುತ್ತಮಂ ವಿಧಿತ್ಸತಾ ವೃಕೋದರೇ।
ನ ಕೇಶವೇನ ಸೂದಿತೋ ಜರಾಸುತೋ ಹಿ ಮನ್ಯತೇ ॥ ೬೩ ॥

ಶ್ರೀಕೃಷ್ಣ ಭೀಮನಿಗೆ ಉತ್ತಮ ಕೀರ್ತಿಯನ್ನೂ ಪುಣ್ಯವನ್ನೂ ಉಂಟುಮಾಡಲು ಬಯಸಿದ್ದರಿಂದ ಜರಾಸಂಧನನ್ನು ಕೊಲ್ಲದೆ ಬಿಟ್ಟಿದ್ದ. ಆದರೆ ಜರಾಸಂಧ ಹೀಗೆ ಆಲೋಚಿಸಿದ.

ವರಾಚ್ಛಿವಸ್ಯ ಮಾಮಯಂ ನ ಹಂತುಮೀಷ್ಟ ಉತ್ತಮಾತ್।
ಅತಃ ಶಿವಪ್ರಸಾದತೋ ಜಿತೋಽಪಿ ಜೇಷ್ಯ ಉತ್ತರಮ್ ॥ ೬೪ ॥

'ಉತ್ತಮವಾದ ಶಿವನ ವರವಿದ್ದ ಕಾರಣ ಕೃಷ್ಣ ನನ್ನನ್ನು ಕೊಲ್ಲಲು ಶಕ್ತನಾಗುತ್ತಿಲ್ಲ. ಆದರಿಂದ ಈಗ ನಾನು ಸೋತಿದ್ದರೂ ಮುಂದೆ ಶಿವನ ಅನುಗ್ರಹದಿಂದ ಗೆಲ್ಲುವೆ' ಎಂದು.

ಮೃಧೇಮೃಧೇ ಜಿತೋಽಪಿ ಸನ್ ದೃಢಾಶಯಾ ಪುನಃಪುನಃ।
ಸಮೀಹತೇ ಯುಧೇ ಶಿವಂ ನ ಚಾವಮನ್ಯತೇ ಕ್ವಚಿತ್ ॥ ೬೫ ॥

ಜರಾಸಂಧ ಪ್ರತಿ ಯುದ್ಧದಲ್ಲಿಯೂ ಕೃಷ್ಣನ ಕೈಯಲ್ಲಿ ಸೋತಿದ್ದರೂ ಬಲವಾದ ಆಸೆಯಿಂದ ಪುನಃ ಪುನಃ ಯುದ್ಧ ಮಾಡಲು ಬಯಸಿದನೇ ಹೊರತು ಶಿವನನ್ನು ಎಂದೂ ಕಡಿಮೆಯವನೆಂದು ತಿಳಿಯಲಿಲ್ಲ.

ಅತಃ ಪುನಶ್ಚ ಭೂಮಿಪಾನುವಾಚ ಬಾರುಹದ್ರಥಃ।
ಧಿಗೇವ ಪೌರುಷಂ ಹಿ ನೋ ಯದೇಷ ನೋಽಜಯತ್ ಸದಾ ॥ ೬೬ ॥

ಕೃತಾವಪೀತ್ಯತ್ರ ಸ್ವಯಂವರ ಮುದ್ದಿಶ್ಯ ಕೃತೌ ಪ್ರಯತ್ನೇಽಪಿ। ಯದ್ವಾ ಕೃಚ್ಛ್ರಬ್ದಾತ್ ಕೃತಾಮಿತಿ ದ್ವಿವಚನ ಪ್ರಯೋಗಃ। ಸ್ವಯಂವರಂ ಕೃತೌಕುರ್ವಾಣಾವಪಿ ಇಯಂ ರಮಾ ಹರಿಂ ವ್ರಜೇದಿತಿ ವಿನಿಶ್ಚಿತ ಯಾದೇವ ಚಕ್ರತುರಿತ್ಯನ್ವಯಃ। ದೇವೇಷ್ವಪಿ ವಾಯು ಸೋಮಾದಿತ್ಯಾನಾಂ ಕ್ಷತ್ರಿಯತ್ವಾದ್ ಆದಿತ್ಯಗಣಸ್ಥೋ ವರುಣೋಽಪಿ ಕ್ಷತ್ರಿಯ ಇತಿ ಭಾವೇನೋಕ್ತಂ ಸ್ವಯಂವರಃ ಕ್ಷತೇಭುಧಜಾಮಿತಿ।

-ವಾದಿರಾ ರೀಜೀಯ

ಅದರಿಂದ ಪುನಃ ಜರಾಸಂಧ ರಾಜರುಗಳಿಗೆ ಹೇಳಿದ, 'ನಮ್ಮ ಪೌರುಷಕ್ಕೆ ಧಿಕ್ಕಾರ! ಏಕೆಂದರೆ ಕೃಷ್ಣ ನಮ್ಮನ್ನು ಸದಾ ಗೆಲ್ಲುತ್ತಲೇ ಬಂದಿದ್ದಾನೆ.

ಅಭೂಪತೇರ್ನ ಚಾಸನಂ ಪ್ರದೇಯಮಿತ್ಯುದಾಹೃತಮ್ ।
ಅಮುಷ್ಯ ನಸ್ತದನ್ಯಥಾ ಬಭೂವ ಚಿಂತಿತಂ ನೃಪಾಃ ॥ ೬೭ ॥

'ರಾಜರೆ, ರಾಜನಲ್ಲದವನಿಗೆ ಆಸನ ಕೊಡಕೂಡದೆಂದು ನಾವು ಹೇಳಿದೆವು. ಆದರೆ ನಮ್ಮ ಆಲೋಚನೆ ಕೃಷ್ಣನ ವಿಷಯದಲ್ಲಿ ತಿರುವು ಮುರುವಾಯಿತು.

ಅಯಂ ನೃಪೋತ್ತಮಾಂಗಣೇ ಮಹೇಂದ್ರಪ್ರೀತಮಾರುಹತ್ ।
ಸಮಸ್ತರಾಜರಾಜತಾಮವಾಪ ನೋಽಪ್ಯನಿಚ್ಛತಾಮ್ ॥ ೬೮ ॥

'ಕೃಷ್ಣ ರಾಜರ ಓಲಗಶಾಲೆಯಲ್ಲಿ ದೇವೇಂದ್ರನಿತ್ತ ಸಿಂಹಾಸನವೇರಿದ. ಎಲ್ಲ ರಾಜರಿಗೂ ರಾಜನಾದ. ನಾವು ಯಾವುದನ್ನು ಆಗಬಾರದೆಂದು ಕೊಂಡಿದ್ದೆವೋ ಅದು ಆಯಿತು.

ಅತಃ ಪುನಃ ಕಥಂ ಹರಿಂ ವಯಂ ಜಯೇಮ ಚಿಂತ್ಯತಾಮ್ ।
ಯಥಾ ಚ ಭೀಷ್ಮಕಾತ್ಮಜಾಮವಾಪ್ನುಯಾಚ್ಚ ಚೇದಿರಾಟ್ ॥ ೬೯ ॥

'ಅದರಿಂದ ಪುನಃ ನಾವು ಕೃಷ್ಣನನ್ನು ಹೇಗೆ ಗೆಲ್ಲೋಣ? ಶಿಶುಪಾಲ ರುಕ್ಮಿಣಿಯನ್ನು ಹೇಗೆ ಹೊಂದಿಯಾನು? ಎಂಬುದನ್ನು ಚಿಂತಿಸೋಣ.

ಅಯಂ ಹಿ ದತ್ತಪುತ್ರಕೋ ಮಮೌರಸಾದ್ ವಿಶಿಷ್ಯತೇ ।
ಅತೋ ನಿವೇಶ್ಯ ಏಷ ಮೇ ಸುರೂಪಿಣೇ ಚ ರುಕ್ಮಿಣೇ ॥ ೭೦ ॥

ಈ ಶಿಶುಪಾಲ ನನಗೆ ದತ್ತುಪುತ್ರ. ಔರಸಪುತ್ರನಿಗಿಂತ ಹೆಚ್ಚು ಪ್ರಿಯ. ಅದರಿಂದ ನಾನು ಇವನಿಗೆ ವಿವಾಹ ಮಾಡಬೇಕು. ರುಕ್ಮಿಣಿಯೂ ಸುಂದರಿಯಾಗಿದ್ದಾಳೆ.

ಶಿವಾಗಮೇಷು ಶಿಷ್ಯಕಾಃ ಸರುಕ್ಮಿಸಾಲ್ವಪೌಂಡ್ರಕಾಃ ।
ಮಮಾಖಿಲಾ ನೃಪಾಸ್ತತಃ ಕುರುಧ್ವಮೇತದೇವ ಮೇ ॥ ೭೧ ॥

ಶಿವಾಗಮಗಳಲ್ಲಿ ನೀವು ರುಕ್ಮಿ ಸಾಲ್ವ ಪೌಂಡ್ರಕ ಮುಂತಾದ ಎಲ್ಲ ರಾಜರುಗಳೂ ನನಗೆ ಶಿಷ್ಯರು. ಅದರಿಂದ ನೀವೆಲ್ಲರೂ ನನ್ನ ಈ ಅಭೀಷ್ಟವನ್ನು ಪೂರೈಸಿಕೊಡಬೇಕು.

ಚೇದಿರಾಜ ದಮಘೋಷನಿಗೆ ವಸುದೇವನ ಸೋದರಿಯಾದ ಶ್ರುತಶ್ರವೆಯಲ್ಲಿ ಜನಿಸಿದವ ಶಿಶುಪಾಲ. ದಮಘೋಷತ್ಮಜ, ಶ್ರೌತಶ್ರವಸ, ಸುನೀಥ,

ಚೈದ್ಯ, ಚೇದಿರಾಜ ಮುಂತಾದ ಹೆಸರುಗಳಿಂದ ಪ್ರಸಿದ್ಧ. ಚೇದಿರಾಜವಂಶದ ಸಂಬಂಧಿಯಾದ್ದರಿಂದ ಮಗಧರಾಜ ಬೃಹದ್ರಥನೆ ಶಿಶುಪಾಲನನ್ನು ಮಗನಂತೆ ನೋಡಿಕೊಳ್ಳುತ್ತಿದ್ದ. ಬಳಿಕ ಬೃಹದ್ರಥನ ಮಗನಾದ ಜರಾಸಂಧನ ಕೈಯಲ್ಲಿ ಶಿಶುಪಾಲನನ್ನು ಧಮಘೋಷನೆ ಕೊಟ್ಟು, ಈತನನ್ನು ಮಗನಂತೆ ನೋಡಿಕೊಳ್ಳು, ಮದುವೆ ಮಾಡಿಸು ಎಂದಿದ್ದ. ಅದರಿಂದ ಜರಾಸಂಧ ಅವನನ್ನು ದತ್ತುಪುತ್ರನೆಂದೇ ಸ್ವೀಕರಿಸಿದ. ಜರಾಸಂಧನ ಔರಸಪುತ್ರ ಸಹದೇವ. ಸಹದೇವನಿಗಿಂತಲೂ ಶಿಶುಪಾಲನಲ್ಲಿ ಜರಾಸಂಧನಿಗೆ ಹೆಚ್ಚು ಪ್ರೀತಿ. ಶಿಶುಪಾಲನೂ ಅಷ್ಟೇ ನಿಷ್ಠೆಯಿಂದ ಜರಾಸಂಧನ ಅನುಯಾಯಿಯಾಗಿದ್ದ. ಅವನ ಪ್ರಧಾನ ಸೇನಾಧಿಪತಿಯಾಗಿದ್ದ.

ಇತೀರಿತೇ ತು ಸೌಭರಾಟ್ ಜಗಾದ ರುಕ್ಮಿಸಂವಿದಾ।
ಸ್ವಯಂವರೋ ನಿವರ್ತಿತಃ ಸ್ವಸಾರಮೇಷ ದಾಸ್ಯತಿ ॥ ೭೨ ॥

ಜರಾಸಂಧ ಹೀಗೆ ಹೇಳಿದಾಗ ರುಕ್ಮಿಯ ಅನುಮತಿಯಿಂದ ಸಾಲ್ವ ನುಡಿದ- 'ಸ್ವಯಂವರವನ್ನು ಕೈಬಿಡಲಾಗಿದೆ. ಇನ್ನು ರುಕ್ಮಿ ತಂಗಿಯನ್ನು ತಾನೆ ಶಿಶುಪಾಲನಿಗೆ ಕೊಡುತ್ತಾನೆ' ಎಂದು.

ನ ಚಾತಿವರ್ತಿತುಂ ಕ್ಷಮಃ ಪಿತಾಸ್ಯ ಚೇದಿಪಾಯ ತಾಮ್ ।
ಪ್ರದಾತುಕಾಮಮಾತ್ಮಜಂ ವಯೋಗತಸ್ತಥಾ ಬಲಃ ॥ ೭೩ ॥

ಮಗನು ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಲು ಬಯಸಿದರೆ ವೃದ್ಧನೂ ದುರ್ಬಲನೂ ಆದ ತಂದೆ ಅವನಿಗೆ ವಿರುದ್ಧವಾಗಿ ವರ್ತಿಸಲು ಸಮರ್ಥನಾಗಲಾರ.

ಸಾಲ್ವನ ಸಮಾಧಾನ

ಸ್ವಯಂ ತು ಕೃಷ್ಣ ಏತ್ಯ ನೋ ವಿಜಿತ್ಯ ಕನ್ಯಕಾಂ ಹರೇತ್ ।
ತತೋಽಸ್ಯ ಪೂರ್ವಮೇವ ನೋ ಹ್ಯಭಾವತಾ ಕೃತಾ ಶುಭಾ ॥ ೭೪ ॥

ಆದರೆ ಸ್ವಯಂ ಕೃಷ್ಣ ಬಂದು ನಮ್ಮನ್ನು ಪರಾಭವಗೊಳಿಸಿ **ಕನ್ಯೆಯನ್ನು** ಅಪಹರಿಸಬಹುದು. ಅದಕ್ಕೆ ಮೊದಲೇ ಅವನ ನಾಶಮಾಡಿದರೆ **ಅದು ನಮಗೆ** ಒಳ್ಳೆಯದಾಗುವುದು.

ಉಪಾಯ ಏಷ ಚಿಂತಿತೋ ಮಯಾತ್ರ ಮಾಗಧೇಶ್ವರ।
ಮುನಿಂ ಹಿ ಗರ್ಗನಾಮಕಂ ಹ್ಯಮುಷ್ಯ ಶಾಲ ಆಕ್ಷಿಪತ್ ॥ ೭೫ ॥

ಮಗಧಾಧಿಪತಿ, ಈ ಬಗ್ಗೆ ನಾನೊಂದು ಉಪಾಯವನ್ನು ಯೋಚಿಸಿದ್ದೇನೆ. ಗರ್ಗನೆಂಬ ಮುನಿಯನ್ನು ಅವನ ಭಾವ ಗೇಲಿ ಮಾಡಿದ.

ಯದಾಸ್ಯ ಷಂಢತೋದಿತಾ ಮುನೇಃ ಪುರೋಹಿತಸ್ಯ ಚ।
ಪರೇಣ ವೃಷ್ಣಯೋಽಹಸಂಶ್ಚುಕೋಪ ಗರ್ಗ ಏಷು ಹಿ ॥ ೭೬ ॥

ಪುರೋಹಿತನಾದ ಗರ್ಗಮುನಿಯನ್ನು ನಪುಂಸಕನೆಂದು ಅವನು ಗೇಲಿ ಮಾಡಿದಾಗ ಕೃಷ್ಣನೂ ಸೇರಿದಂತೆ ಎಲ್ಲ ಯಾದವರೂ ನಕ್ಕರು. ಗರ್ಗ ಅವರಲ್ಲಿ ಕುಪಿತನಾದ.

ಚಕಾರ ಚ ಪ್ರತಿಶ್ರವಂ ಸಮಾರ್ಜಯೇ ಸುತಂ ದ್ರುತಮ್ ।
ಅಕೃಷ್ಣತಾಂ ಯ ಅನಯೇದ್ ಭುವೋಽಪಿ ವೃಷ್ಣಿನಾಶಕಃ ॥ ೭೭ ॥

ಗರ್ಗ ಪ್ರತಿಜ್ಞೆ ಮಾಡಿದ 'ಭೂಮಿಯಲ್ಲಿ ಕೃಷ್ಣನಿಲ್ಲದಂತೆ ಮಾಡಬಲ್ಲ ಯಾದವ ಕುಲನಾಶಕನಾದ ಒಬ್ಬ ಮಗನನ್ನು ಬೇಗನೆ ಸಂಪಾದಿಸುತ್ತೇನೆ' ಎಂದು.

ಮದುವೆಯಾದರೂ ನೈಷ್ಠಿಕ ಬ್ರಹ್ಮಚರ್ಯದಲ್ಲಿದ್ದ ಗರ್ಗ ಮುನಿಯನ್ನು ಅವನ ಭಾವಮೈದುನನಾದ ಒಬ್ಬ ಯಾದವ ಅಸಹನೆಯಿಂದ ಷಂಡನೆಂದು ಗೇಲಿ ಮಾಡುತ್ತಿದ್ದ. ಒಮ್ಮೆ ಕೃಷ್ಣನಿರುವಾಗ, ಎಲ್ಲ ಯಾದವರ ಮುಂದೆ ಹಾಗೇ ಗೇಲಿ ಮಾಡಿದ. ಎಲ್ಲ ಯಾದವರೊಡನೆ ಕೃಷ್ಣನೂ ನಕ್ಕ. ಅದರಿಂದ ಮುನಿಗೆ ಕೃಷ್ಣನ ಮೇಲೆಯೇ ಕೋಪ.

ಯತೋ ಹಿ ಕೃಷ್ಣಸಂಶ್ರಯಾದ್ ಬತಾಪಹಾಸಿತಾ ವಯಮ್ ।
ಇತಿ ಬ್ರುವನ್ ವನಂ ಯಯೌ ತಪಶ್ಚ ತೈವಮಾಚರತ್ ॥ ೭೯ ॥

'ಏಕೆಂದರೆ ಕೃಷ್ಣನ ಆಶ್ರಯದ ಬಲದಿಂದಾಗಿ ನಾನು ಅಪಹಾಸ್ಯಕ್ಕೀಡಾದೆ' ಹೀಗೆ ಹೇಳುತ್ತ ಗರ್ಗಮುನಿ ಕಾಡಿಗೆ ಹೋಗಿ ಶಿವನನ್ನು ಕುರಿತು ತಪಸ್ಸು ಮಾಡಿದ.

ಸ ಚೂರ್ಣಮಾಯಸಂ ತ್ವದನ್ ದದರ್ಶ ಚಾಬ್ದತಃ ಶಿವಮ್ ।
ವರಂ ತತೋಽಭಿಪೇದಿವಾನ್ ಸುತಂ ಹರೇರಭಾವದಮ್ ॥ ೮೯ ॥

ಕಬ್ಬಿಣದ ಪುಡಿಯನ್ನು ತಿನ್ನುತ್ತ ಗರ್ಗ ತಪಸ್ಸು ಮಾಡಿ ಒಂದು ವರ್ಷದಲ್ಲಿ ಶಿವನನ್ನು ಸಾಕ್ಷಾತ್ಕರಿಸಿಕೊಂಡ. ಕೃಷ್ಣಾಭಾವವನ್ನುಂಟುಮಾಡಬಲ್ಲ ಮಗನನ್ನು ಹೊಂದುವಂತೆ ಶಿವನಿಂದ ವರವನ್ನೂ ಪಡೆದ.

ಸ ವಿಷ್ಣುದೈವತೋಽಪಿ ಸನ್ ಪ್ರವಿಷ್ಟ ಉಲ್ಬಣಾಸುರೈಃ।
ವ್ಯಧಾದ್ಧರೇಃ ಪ್ರತೀಪಕಂ ವ್ರತಂ ತು ನೈಷ್ಠಿಕಂ ಜಹೌ ॥ ೮೦ ॥

ಗರ್ಗಮುನಿ ವಿಷ್ಣುಭಕ್ತನೇ ಆಗಿದ್ದರೂ ಕ್ರೂರ ಅಸುರರ ಆವೇಶ ಹೊಂದಿ ಕೃಷ್ಣನಿಗೆ ವಿರೋಧ ಮಾಡಿದ. ನೈಷ್ಠಿಕ ಬ್ರಹ್ಮಚರ್ಯವ್ರತವನ್ನೂ ತೊರೆದ.

ತಮಾರ ಚಾಸುರಾಪ್ಸರಾ ಬಲಿಷ್ಠಪುತ್ರಕಾಮ್ಯಯಾ।
ಪ್ರವಿಶ್ಯ ಗೋಪಿಕಾಂಗನಾಸಮೂಹಮಧ್ಯಮಲ್ಪಕಾ ॥ ೮೧ ॥

ಒಬ್ಬಳು ಕ್ರೂರ ಅಸುರ ಜಾತಿಯ ಅಪ್ಸರೆ ಬಲಿಷ್ಠನಾದ ಪುತ್ರನನ್ನು ಪಡೆಯುವ ಬಯಕೆಯಿಂದ ಗೋಪಾಂಗನೆಯರ ಗುಂಪಿನ ನಡುವೆ ಸೇರಿಕೊಂಡು ಗರ್ಗಮುನಿಯ ಬಳಿಗೆ ಬಂದಳು.

ಈ ಅಪ್ಸರೆ 'ಗೋಪಾಲಿ' ಎಂಬ ಹೆಸರಿನವಳು. ಗೋಪಾಂಗನೆಯ ವೇಷವನ್ನೇ ಧರಿಸಿದ್ದಳು. 'ಗೋಪಾಲೀತ್ವಪ್ಸರಾಸತ್ರ ಗೋಪಸ್ತ್ರೀವೇಷ ಧಾರಿಣೀ' ಎನ್ನುತ್ತದೆ ಹರಿವಂಶ.

ಸ ಯಾವನೇನ ಭೂಭೃತಾ ಹಿ ಗೋಪಿಕಾರ್ಚಿತಃ।
ಅಪುತ್ರಕೇಣ ಜಾನತಾ ಮುನೇರ್ಮನೋಽನುಚಿಂತಿತಮ್ ॥ ೮೨ ॥

ಗರ್ಗಮುನಿಯ ಮನೋಭಿಲಾಷೆಯನ್ನರಿತಿದ್ದ ಸಂತತಿಹೀನ ಯವನ ರಾಜನೊಬ್ಬ ಅವನನ್ನು ಗೋಪಿಕೆಯರ ಮೂಲಕ ಉಪಚರಿಸಿದ.

ಯವನರಾಜ ಮುನಿಯಲ್ಲಿ 'ನಿನ್ನ ಮಗುವನ್ನು ನನಗೆ ಕೊಡಬೇಕು' ಎಂದು ಬೇಡಿ ಅವನ ಮನ ಒಲಿಸಿ ವಶೀಕರಿಸುವುದಕ್ಕೆ ಗೋಪಸ್ತ್ರೀಯರನ್ನು ನೇಮಿಸಿದ. ಆ ಸ್ತ್ರೀಯರಲ್ಲಿ ಒಬ್ಬಳಾಗಿ ಗೋಪಾಲಿಯೂ ಸೇರಿಕೊಂಡಳು.

ಸ ಚಾಪ್ಸರಸ್ತನೌ ಸುತಂ ನಿಷಿಚ್ಯ ಯಾವನಾಯ ಚ।
ದದೌ ವಿಮೋಹಿತಃ ಕ್ರುಧಾ ಕಿಮೇತದೀಶವೈರಿಣಃ ॥ ೮೩ ॥

ಕೃಷ್ಣನ ಮೇಲಿನ ಕ್ರೋಧದಿಂದ ಮೈಮರೆತಿದ್ದ ಗರ್ಗಮುನಿ ಅಪ್ಸರೆಯ ಉದರದಲ್ಲಿ ಗರ್ಭಾಧಾನ ಮಾಡಿ ಯವನ ರಾಜನಿಗೆ ಕೊಟ್ಟ. ಶಿವದ್ವೇಷಿಗೆ ಇದೇನೂ ಆಶ್ಚರ್ಯವಲ್ಲ.

'ಶಿವದ್ವೇಷಿಯಾದ ಕೃಷ್ಣ ಆ ದ್ವೇಷದ ಫಲವಾಗಿ ತನ್ನ ಪುರೋಹಿತನಿಂದಲೆ ತನಗೊಬ್ಬ ಮೃತ್ಯುವನ್ನು ಹುಟ್ಟಿಸಿಕೊಂಡ. ಶಿವದ್ವೇಷಿಗೆ ಇಂಥ ಅನರ್ಥ ಬರುವುದು ಏನೂ ಆಶ್ಚರ್ಯವಲ್ಲ' ಎಂದು ಶಿವಭಕ್ತನಾದ ಸಾಲ್ವ ಹೇಳುತ್ತಿದ್ದಾನೆ.

ಸ ಆಶ್ರಮಾಚ್ಚ ನೈಷ್ಠಿಕಾದ್ ವಿದೂಷಿತಃ ಪ್ರತೀಪಕೃತ್।
ಹರೇಶ್ಚ ತಾಪಮೇಯಿವಾನ್ ಜಗರ್ಹ ಚಾತ್ಮಶೇಮುಷೀಮ್ ॥ ೮೪ ॥

ಗರ್ಗಮುನಿ ನೈಷ್ಠಿಕ ಬ್ರಹ್ಮಚರ್ಯದಿಂದ ಭ್ರಷ್ಠನಾದ. ಕೃಷ್ಣನಿಗೂ ವಿರೋಧ ಮಾಡಿದ. ಅದರಿಂದ ಪಶ್ಚಾತ್ತಾಪಪಟ್ಟು ತನ್ನ ಬುದ್ಧಿಯನ್ನು ತಾನೆ ಜರಿದ.

ಜಗಾಮ ಚಾರಣಂ ಹರಿಂ ಪ್ರಪಾಹಿ ಮಾಂ ಸುಪಾಪಿನ್ ।
ಇತಿ ಸ್ಮ ವಿಷ್ಣ್ವನುಜ್ಞಯಾ ಚಕಾರ ವೈಷ್ಣವಂ ತಪಃ ॥ ೮೫ ॥

ಮಹಾಪಾಪಿಯಾದ ನನ್ನನ್ನು ಕಾಪಾಡು ಎನ್ನುತ್ತ ಗರ್ಗಮುನಿ ಕೃಷ್ಣನನ್ನು ಶರಣು ಹೊಂದಿದ. ಕೃಷ್ಣನ ಅನುಮತಿಯಿಂದ ವೈಷ್ಣವ ತಪವನ್ನಾಚರಿಸಿದ.

ಕುತೋ ಹಿ ಭಾಗ್ಯಮಾಪತೇನ್ಮುನೇಃ ಶಿವಾರ್ಚನೇ ಸದಾ ।
ಭವಾದೃಶಾ ಹಿ ದಾನವಾಃ ಸ್ಥಿರಾಃ ಶಿವಾರ್ಚನೇ ಸದಾ ॥ ೮೬ ॥

ಸದಾ ಶಿವಾರ್ಚನೆಯನ್ನೇ ಮಾಡುತ್ತಿರುವ ಭಾಗ್ಯಮುನಿಗೆ ಎಲ್ಲಿಂದ ಬಂದೀತು? ನಿನ್ನಂಥ ದಾನವರೇ ಶಿವಾರ್ಚನೆಯಲ್ಲಿ ಸದಾ ಸ್ಥಿರವಾಗಿರುವವರು.

ಸುತೋಽಸ್ಯ ಕಾಲನಾಮಕೋ ಬಭೂವ ಕೃಷ್ಣಮರ್ದಿತುಮ್ ।
ಸದೈವ ಕಾಲಕಾಂಕ್ಷಣಾತ್ ಸ ಯಾವನಾಭಿಷೇಚಿತಃ ॥ ೮೭ ॥

ಗರ್ಗಮುನಿಯ ಮಗ ಕೃಷ್ಣನನ್ನು ಕೊಲ್ಲಲು ಸದಾ ಕಾಲ ಪ್ರತೀಕ್ಷೆ ಮಾಡಿದ್ದರಿಂದ 'ಕಾಲ' ಎಂದೇ ಹೆಸರು ಪಡೆದ. ಯವನರಾಜನಿಂದ ಪಟ್ಟಾಭಿಷಿಕ್ತನಾದ.

ಗರ್ಗಮುನಿ ಕಪ್ಪಾದ ಕಬ್ಬಿಣದ ಚೂರ್ಣವನ್ನು ತಿಂದು ಹುಟ್ಟಿಸಿದ ಮಗ, ಸ್ವತಃ ದುಂಬಿಯಂತೆ ಕಪ್ಪಾಗಿದ್ದ. ಅದರಿಂದಲೂ 'ಕಾಲ'ನೆನಿಸಿದನೆಂದು ವಿಷ್ಣುಪುರಾಣ ಹೇಳಿದೆ.

ತವೈವ ಶಿಷ್ಯ ಏಷ ಜಾತಿ ಭಕ್ತಿಮಾನ್ ಹಿ ಶಂಕರೇ ।
ಪ್ರಭೂತ ಸೇನಯಾ ಯುತೋ ಬಲೋದ್ಧತಶ್ಚ ಸರ್ವದಾ ॥ ೮೮ ॥

ಜರಾಸಂಧ, ಈ ಕಾಲಯಾವನ ನಿನ್ನ ಶಿಷ್ಯನೇ. ಶಿವನಲ್ಲಿ ಬಹಳ ಭಕ್ತಿ ಇಟ್ಟುಕೊಂಡವ. ಬಹುಸೈನ್ಯ ಸಮೇತನಾಗಿದ್ದು ಸದಾ ಬಲದರ್ಪಿತನಾಗಿರುತ್ತಾನೆ.

ತಮೇವ ಯಾಮಿ ಶಾಸನಾತ್ ತವೋಪನೀಯ ಸತ್ವರಮ್ ।
ವಿಕೃಷ್ಣಕಂ ವಿಧಾಯ ಚ ಕ್ಷಿತೇಸ್ತಲಂ ರಮಾಮಹೇ ॥ ೮೯ ॥

ನಾನು ನಿನ್ನಾಜ್ಞೆಯಿಂದ ಕಾಲಯಾವನನ ಬಳಿಗೆ ಹೋಗುತ್ತೇನೆ. ಅವನನ್ನು ನಿನ್ನ ಬಳಿಗೆ ತಂದೊಪ್ಪಿಸುತ್ತೇನೆ. ಅವನ ಮೂಲಕ ನಾವು ಭೂತಲದಲ್ಲಿ ಕೃಷ್ಣನಿಲ್ಲದಂತೆ ಮಾಡಿ ಸುಖದಿಂದಿರೋಣ.

ತತಶ್ಚ ರುಕ್ಮಿಣೀಂ ವಯಂ ಪ್ರದಾಪಯಾಮ ಚೇದಿಪೇ।
ವಿನಾಸ್ಯ ದೇವಪಕ್ಷಿಣೋ ಯಥೇಷ್ಟಮಾಸ್ಮ ಸರ್ವದಾ ॥ ೯೦ ॥

ಒಳಿಕ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಿಸೋಣ. ದೇವಪಕ್ಷದವರನ್ನೂ ನಾಶಪಡಿಸಿ ಸದಾ ಇಚ್ಛಾನುಸಾರ ಇರೋಣ.

ಇತೀರಿತೋ ಜರಾಸುತೋ ಬಭೂವ ದುರ್ಮನಾ ಭೃಶಮ್।
ಕಿರೀಟಮಂಡಿತಂ ಶಿರಶ್ಚಕಾರ ಚಾಶ್ವವಾಗ್ ಭೃಶಮ್ ॥ ೯೧ ॥

ಸಾಲ್ವ ಹೀಗೆ ಹೇಳಿದೊಡನೆ ಬಹಳ ದುಃಖಿತನಾದ ಜರಾಸಂಧ ಕಿರೀಟದಿಂದ ಅಲಂಕೃತವಾದ ತನ್ನ ತಲೆಯನ್ನು ಬಹಳ ತಗ್ಗಿಸಿಕೊಂಡ.

ಕರಂ ಕರೇಣ ಪೀಡಯನ್ನಿಶಾಮ್ಯ ಚಾತ್ಮನೋ ಭುಜೌ।
ಜಗಾದ ಕಾರ್ಯಸಿದ್ಧಯೇ ಕಥಂ ಪ್ರಯಾಚಯೇ ಪರಮ್ ॥ ೯೨ ॥

ಜರಾಸಂಧ ತನ್ನ ಕೈಯನ್ನು ಕೈಯಿಂದ ಹೊಸೆಯುತ್ತ ತನ್ನ ತೋಳುಗಳನ್ನು ದಿಟ್ಟಿಸುತ್ತ 'ನನ್ನ ಕಾರ್ಯ ಸಾಧಿಸಿಕೊಳ್ಳಲು ನಾನು ಇನ್ನೊಬ್ಬನನ್ನು ಹೇಗೆ ಯಾಚಿಸಲಿ?' ಎಂದ.

ಸುದುರ್ಗಕಾರ್ಯ ಸಂತತಿಂ ಹ್ಯಗುಃ ಸ್ಮ ಮದ್ಭುಜಾಶ್ರಯಾಃ।
ಸಮಸ್ತಭೂತಲೇ ನೃಪಾಃ ಸ ಚಾಹಮೇಷ ಮಾಗಧಃ ॥ ೯೩ ॥

ಅತ್ಯಂತ ದುರ್ಗಮವಾದ ಅನೇಕ ಕಾರ್ಯಗಳನ್ನು ಇಡೀ ಭೂಮಂಡಲದಲ್ಲಿರುವ ರಾಜರುಗಳು ನನ್ನ ಬಾಹುಗಳ ಆಶ್ರಯದಿಂದ ಸಾಧಿಸಿಕೊಂಡಿದ್ದಾರೆ. ಅವನೆ ಈ ಜರಾಸಂಧ, ನಾನು.

ಕದಾಪ್ಯಚೀರ್ಣಮದ್ಯ ತತ್ ಕಥಂ ಕರೋಮಿ ಕೇವಲಮ್।
ಗಿರೀಶಪಾದಸಂಶ್ರಯಃ ಪ್ರಭುಃ ಸಮಸ್ತಭೂಭೃತಾಮ್ ॥ ೯೪ ॥

ಕೇವಲ ಶಿವನ ಪಾದವನ್ನೆ ಆಶ್ರಯಿಸಿದವ, ಎಲ್ಲ ರಾಜರುಗಳಿಗೊಡೆಯ ಈ ಜರಾಸಂಧ, ಎಂದೂ ಮಾಡದಿದ್ದ ಯಾಚನೆಯನ್ನು ಇಂದು ನಾನು ಹೇಗೆ ಮಾಡಲಿ?

ಜರಾಸಂಧನ ಸ್ವಾಭಿಮಾನಕ್ಕೆ ಧಕ್ಕೆಯುಂಟು ಮಾಡುವ ಪ್ರಸಂಗವಿದು. ಅವನೆಂದೂ ತನ್ನ ಕಾರ್ಯಕ್ಕೆ ಇನ್ನೊಬ್ಬನ ಸಹಾಯ ಯಾಚಿಸಿದವನಲ್ಲ.

ಇತೀರಿತಃ ಸೌಭರಾಟ್ ಜಗಾದ ವಾಕ್ಯಮುತ್ತರಮ್।
ಭವಾನಪಿ ಸ್ಮ ಮುಹ್ಯತೇ ಕಿಮಸ್ಮದಾದಯಃ ಪ್ರಭೋ ॥ ೯೫ ॥

ಹೀಗೆ ಹೇಳಿದಾಗ ಸಾಲ್ವ ಉತ್ತರವಾಗಿ ನುಡಿದ, ಪ್ರಭು, ನೀನೆ ಹೀಗೆ ಮುಗ್ಧನಾಗುವುದಾದರೆ ನಮ್ಮಂಥವರ ಪಾಡೇನು?

ಸ್ವಶಿಷ್ಯಕೈಃಕೃತಂ ತು ಯತ್ ಕಿಮನ್ಯ ಸಾಧಿತಂ ಭವೇತ್ ।
ಸ್ವಶಿಷ್ಯದಾಸವರ್ಗಕೈಃ ಸಮರ್ಥಯಂತಿ ಭೂಭುಜಃ ॥ ೯೬ ॥

ನಮ್ಮ ಶಿಷ್ಯರಿಂದ ಕಾರ್ಯಸಾಧನೆಯಾದರೆ ಅದು ಅನ್ಯರಿಂದ ಸಾಧಿತವೆಂದಾಗುವುದೆ? ರಾಜರುಗಳು ತಮ್ಮ ಶಿಷ್ಯರ ದಾಸರ ಸಮೂಹಗಳಿಂದಲೆ ತಮ್ಮ ಎಲ್ಲ ಕಾರ್ಯ ಸಾಧಿಸಿಕೊಳ್ಳುತ್ತಾರೆ ತಾನೆ?

ಅಪಿ ಸ್ಮ ತೇ ಬಲಾಶ್ರಯಪ್ರವೃತ್ತಯೋಽಸ್ಮದಾದಯಃ ।
ಪುಮಾನ್ ಕುಠಾರ ಸಂಗ್ರಹಾದಶಕ್ತ ಈರ್ಯತೇ ನು ಕಿಮ್ ॥ ೯೭ ॥

ನಮ್ಮಂಥವರು ನಿನ್ನ ಬಲವನ್ನಾಶ್ರಯಸಿಯೆ ಪ್ರವೃತ್ತಿ ಮಾಡುವವರು. ಮರ ಕಡಿವ ಮನುಷ್ಯ ಕೊಡಲಿಯನ್ನು ಹಿಡಿದ ಮಾತ್ರಕ್ಕೆ ಆತ ಮರ ಕಡಿಯಲು ಅಶಕ್ತನೆನಿಸುವನೆ?

ಕುಠಾರ ಸಮ್ಮಿತೋ ಹ್ಯಸೌ ತವೈವ ಯಾವನೇಶ್ವರಃ ।
ವಿನಾ ಭವದ್ಬಲಂ ಕ್ವಚಿತ್ ಪ್ರವರ್ತಿತುಂ ನಹಿ ಕ್ಷಮಃ ॥ ೯೮ ॥

ಮರ ಕಡಿವವನಿಗೆ ಕೊಡಲಿಯಂತೆಯೆ ನಿನಗೆ ಈ ಯವನರಾಜ. ನಿನ್ನ ಬಲ ಒಂದಿಲ್ಲದೆ ಯಾವ ಕಾರ್ಯದಲ್ಲಿಯೂ ಸ್ವತಃ ಪ್ರವೃತ್ತಿ ಮಾಡಲು ಸಮರ್ಥನಲ್ಲ.

ವರೋ ಹಿ ಕೃಷ್ಣಮರ್ದನೇ ವೃತೋಽಸ್ಯ ಕೇವಲಂ ಶಿವಾತ್ ।
ತದನ್ಯ ಶತ್ರುಪೀಡನಾತ್ ತ್ವಮೇವ ಚಾಸ್ಯ ರಕ್ಷಕಃ ॥ ೯೯ ॥

ಕಾಲಯಾವನನಿಗೆ ಕೃಷ್ಣನನ್ನು ಮರ್ದಿಸುವ ವಿಷಯದಲ್ಲಿ ಮಾತ್ರ ಗರ್ಗಮುನಿ ಶಿವನಿಂದ ವರ ಪಡೆದ. ಅವನ ಬೇರೆ ಶತ್ರುಗಳ ನಿಗ್ರಹ ಮಾಡುವವನು ನೀನೆ. ಅದರಿಂದ ಅವನಿಗೆ ರಕ್ಷಕ ನೀನೆ ತಾನೆ?

ತವಾಖಿಲೈರಜೇಯತಾ ಶಿವಪ್ರಸಾದತೋಽಸ್ತಿ ಹಿ ।
ವಿಶೇಷತೋ ಹರೇರ್ಜಯೇ ವರಾದಯಂ ವಿಮೃಗ್ಯತೇ ॥ ೧೦೦ ॥

ಶಿವವರದಿಂದ ನೀನು ಎಲ್ಲರಿಗೂ ಅಜೇಯನಾಗಿರುವಿ ತಾನೆ? ವಿಶೇಷವಾಗಿ ಕೃಷ್ಣಮರ್ದನಕ್ಕೆ ವರವಿರುವುದರಿಂದ ಕಾಲಯವನನ್ನು ಅರಸುತ್ತೇವೆ, ಅಷ್ಟೇ.

ಇತೀರಿತೇಽಪ್ಯತೃಪ್ತವತ್ ಸ್ಥಿತೇ ತು ಬಾರುಹದ್ರಥೇ ।
ಜಗಾಮ ಸೌಭಮಾಸ್ಥಿತಃ ಸ ಸೌಭರಾಟ್ ಚ ಯಾವನಮ್ ॥ ೧೦೧ ॥

ಹೀಗೆ ಹೇಳಿದರೂ ಜರಾಸಂಧನಿಗೆ ತೃಪ್ತಿಯಾದಂತಿರಲಿಲ್ಲ. ಆಗ ಸಾಲ್ವ ತಾನೆ ಸೌಭವಿಮಾನವನ್ನೇರಿ ಕಾಲಯಾವನನ ಬಳಿಗೆ ತೆರಳಿದ.

ಜರಾಸಂಧನಿಗೆ ತಾನೇ ಹೋಗಿ ಕಾಲಯಾವನನ ಬಳಿ ಸಹಾಯ ಯಾಚನೆ ಮಾಡಲು ಸಂಕೋಚ. ಅವನಿಂದ ಸಹಾಯ ಬರಬೇಕೆಂಬಾಸೆ ಬಹಳ ಇದೆ. ಇದನ್ನರಿತು ಸಾಲ್ವ ಜರಾಸಂಧನ ಪರವಾಗಿ ತಾನೇ ಹೊರಟ.

ಕಾಲಯಾವನ

ಸ ಕಾಲಯಾವನೋಽಥ ತಂ ಜರಾಸುತಾಂತಿಕಾಗತಮ್ ।
ನಿಶಮ್ಯ ಭಕ್ತಿಪೂರ್ವಕಂ ಪ್ರಣಮ್ಯ ಚಾರ್ಚಯದ್ ದ್ರುತಮ್ ॥ ೧೦೨ ॥

ಕಾಲಯಾವನ ಜರಾಸಂಧನ ಕಡೆಯಿಂದ ಬಂದ ಸಾಲ್ವನನ್ನು ಕಂಡೊಡನೆ ಭಕ್ತಿಪೂರ್ವಕ ನಮಿಸಿ ಸತ್ಕರಿಸಿದ.

ಜರಾಸುತೋ ಹಿ ದೈವತಂ ಸಮಸ್ತಕೇಶವದ್ವಿಷಾಮ್ ।
ಇತಿ ಪ್ರಣಮ್ಯ ತಾಂ ದಿಶಂ ತದೀಯಮಾಶ್ವಪೂಜಯತ್ ॥ ೧೦೩ ॥

ಜರಾಸಂಧ ಎಲ್ಲ ವಿಷ್ಣುದ್ವೇಷಿಗಳಿಗೂ ಆರಾಧ್ಯ ದೈವ. ಅದರಿಂದ ಅವನಿರುವ ದಿಕ್ಕನ್ನೇ ನಮಿಸಿ ಅವನ ಭಕ್ತನಾದ ಸಾಲ್ವನನ್ನು ಬೇಗನೆ ಸತ್ಕರಿಸಿದ.

ತದೀರಿತಂ ನಿಶಮ್ಯ ಚ ದ್ರುತಂ ತ್ರಿಕೋಟಿಸಂಖ್ಯಯಾ ।
ಅಕ್ಷೌಹಿಣೀಕಯಾ ಯುತಃ ಸ್ವಸೇನಯಾ ನಿರಾಕ್ರಮತ್ ॥ ೧೦೪ ॥

ಸಾಲ್ವ ಹೇಳಿದ ಮಾತನ್ನು ಕೇಳಿ ಕಾಲಯಾವನ ಬೇಗನೆ ಮೂರು ಕೋಟಿ ಅಕ್ಷೌಹಿಣೀ ಸಂಖ್ಯೆಯ ತನ್ನ ಸೈನ್ಯ ಸಮೇತನಾಗಿ ಹೊರಟ.

ತದಶ್ವಮೂತ್ರವಿಷ್ಠಯಾ ಬಭೂವ ನಾಮತಃ ಶಕೃತ್ ।
ನದೀ ಸುವೇಗಗಾಮಿನೀ ಕಲೌ ಚ ಯಾ ವಹೇದ್ ದ್ರುತಮ್ ॥ ೧೦೫ ॥

ಕಾಲಯಾವನನ ಕುದುರೆಗಳ ಮೂತ್ರ ಮತ್ತು ಲದ್ದಿಗಳಿಂದ ಬಲುವೇಗದಿಂದ ಹರಿವ 'ಶಕೃತ್' ಎಂಬ ಹೆಸರಿನ ನದಿ ಉಂಟಾಯಿತು. ಕಲಿಯುಗದಲ್ಲಿ ಅದು ವೇಗವಾಗಿ ಹರಿಯುತ್ತದೆ.

ಪುನಃ ಪುನರ್ನದೀಭವಂ ನಿಶಾಮ್ಯ ದೇಶಸಂಕ್ಷಯಮ್ ।
ತದನ್ಯ ದೇಶ ಮೂತ್ರಿತಂ ವ್ಯಶೋಷಯದ್ದಿಮಾರುತಃ ॥ ೧೦೬ ॥

ಪುನಃ ಪುನಃ ನದಿಗಳುಂಟಾಗಿ ದೇಶ ನಾಶವಾಗುವುದನ್ನು ಕಂಡು ವಾಯುದೇವ ಆ ಕುದುರೆಗಳು ಬೇರೆ ಕಡೆ ಮೂತ್ರಿಸಿದ್ದನ್ನು ಒಣಗಿಸಿದ.

ದ್ವಾರಕಾನಿರ್ಮಾಣ

ಹರಿಶ್ಚ ವೈನತೇಯ ಯುಗ್ ವಿಚಾರ್ಯ ರಾಮಸಂಯುತಃ।
ಸದಾತಿ ಪೂರ್ಣಸಂವಿದಪ್ಯಜೋಽಥ ಲೀಲಯಾಽಸ್ಮರತ್ ॥ ೧೦೭ ॥

ಜನನ ರಹಿತನಾದ ಶ್ರೀಕೃಷ್ಣ ಸದಾ ಅತ್ಯಂತ ಪರಿಪೂರ್ಣ ಜ್ಞಾನ ಉಳ್ಳವನಾದರೂ ಲೀಲೆಯಿಂದ ಬಲರಾಮನಿಂದೊಡಗೂಡಿ ಗರುಡನಿಂದಲೂ ಕೂಡಿ ಹೀಗೆ ವಿಚಾರಮಾಡಿ ದೇವಶಿಲ್ಪಿಯನ್ನು ಸ್ಮರಿಸಿದ.

ಯುಯುತ್ಸುರೇಷ ಯಾವನಃ ಸಮೀಪಮಾಗತೋಽದ್ಯ ನಃ।
ಯುಯುತ್ಸತಾಮನೇನ ನೋ ಜರಾಸುತೋಽಭಿಯಾಸ್ಯತಿ ॥ ೧೦೮ ॥

'ಈ ಯಾವನ ಈಗ ಯುದ್ಧ ಮಾಡಲು ಬಯಸಿ ನಮ್ಮ ಸಮೀಪಕ್ಕೆ ಬಂದಿದ್ದಾನೆ. ನಾವು ಇವನೊಂದಿಗೆ ಯುದ್ಧಮಾಡಲು ಬಯಸಿದರೆ ಜರಾಸಂಧನೂ ಬರುತ್ತಾನೆ.

ಸ ಯಾದವಾನ್ ಹನಿಷ್ಯತಿ ಪ್ರಭಂಗತಸ್ತು ಕೋಪತಃ।
ಪುರಾ ಜಯಾಶಯಾ ಹಿ ನೌ ಯದೂನ್ ನ ಜಘ್ನಿವಾನಸೌ ॥ ೧೦೯ ॥

ಜರಾಸಂಧ ತನಗಾದ ಪರಾಭವದ ಕೋಪದಿಂದ ಯಾದವರನ್ನು ಕೊಲ್ಲುವನು. ಹಿಂದೆ ಜಯವಾದೀತೆಂಬ ಆಶೆ ಇದ್ದುದರಿಂದ ಅವನು ಯಾದವರನ್ನು ಕೊಲ್ಲಲಿಲ್ಲ.

ನಿರಾಶಕೋಽದ್ಯ ಯಾದವಾನಪಿ ಸ್ಮ ಪೀಡಯಿಷ್ಯತಿ।
ಅತಃ ಸಮುದ್ರಮಧ್ಯಗಾಪುರೀವಿಧಾನಮದ್ಯ ಮೇ ॥ ೧೧೦ ॥

ಪ್ರರೋಚತೇ ನಿಧಾನಮಪ್ಯಮುತ್ರ ಸರ್ವಸಾತ್ವತಾಮ್।
ಉದೀರ್ಯ ಚೈವಮೀಶ್ವರೋಽಸ್ಮರತ್ ಸುರೇಶವರ್ಧಕಿಮ್ ॥ ೧೧೧ ॥

ಈಗ ಹತಾಶನಾದ ಜರಾಸಂಧ ಯಾದವರನ್ನು ಪೀಡಿಸುವನು. ಅದರಿಂದ ಈಗ ಸಮುದ್ರ ಮಧ್ಯದಲ್ಲಿ ವಿಶಾಲವಾದ ಪಟ್ಟಣ ನಿರ್ಮಿಸುವುದೂ ಅದರಲ್ಲಿ ಎಲ್ಲ ಯಾದವರನ್ನು ಇರಿಸುವುದೂ ನನಗೆ ಸರಿಕಾಣುತ್ತದೆ.' ಹೀಗೆ ಹೇಳಿ ಶ್ರೀಕೃಷ್ಣ ದೇವಶಿಲ್ಪಿಯನ್ನು ಸ್ಮರಿಸಿದ.

ಸ ಭೌವನಃ ಸಮಾಗತಃ ಕುಶಸ್ಥಲೀಂ ವಿನಿರ್ಮಮೇ।
ನಿರಂಬುಕೇ ತು ಸಾಗರೇ ಜನಾರ್ದನಾಜ್ಞಯಾ ಕೃತೇ ॥ ೧೧೨ ॥

ಶ್ರೀಕೃಷ್ಣನ ಆಜ್ಞೆಯಿಂದ ಸಾಗರ ಬತ್ತಿ ಸರಿದಾಗ ವಿಶ್ವಕರ್ಮ ಬಂದು ದ್ವಾರಕಾಪುರಿಯನ್ನು ನಿರ್ಮಾಣಮಾಡಿದ.

ವಿಶ್ವಕರ್ಮ ಸಪ್ತಮ ವಸುವಾದ 'ವಸ್ತು'ವಿನಿಂದ ಬೃಹಸ್ಪತಿಯ ಸೋದರಿ ಬ್ರಹ್ಮವಾದಿನಿಯಾದ ಲಾವಣ್ಯಮಯಿಯಲ್ಲಿ ಜನಿಸಿದವ. 'ತ್ವಷ್ಟೃ' 'ಭೌವನ' ಇವನಿಗೆ ನಾಮಾಂತರಗಳು.

ದ್ವಾರಕೆಗೆ ಕುಶಸ್ಥಲಿ ಎಂಬುದು ನಾಮಾಂತರ. ಇದು ಹಿಂದೆ ರೇವತರಾಜನ ರಾಜಧಾನಿಯಾಗಿತ್ತು. ಕೊನೆಯಲ್ಲಿ ಯಕ್ಷರಿಂದ ನಾಶ ಹೊಂದಿತ್ತು. ಈಗ ಅದೇ ಸ್ಥಳದಲ್ಲಿ ದ್ವಾರಕಾ ನಿರ್ಮಾಣವಾಯಿತು.

ಮಹೋದಕಸ್ಯ ಮಧ್ಯತಶ್ಚಕಾರ ತಾಂ ಪುರೀಂ ಶುಭಾಮ್ ।
ದ್ವಿಷಟ್ಕಯೋಜನಾಯತಾಂ ಪಯೋಬ್ಧಿಮಧ್ಯಗೋಪಮಾಮ್ ॥ ೧೧೩ ॥

ವಿಶ್ವಕರ್ಮ ಮಹಾ ಉದಕದ ನಡುವೆ ಹನ್ನೆರಡು ಯೋಜನ ಉದ್ದದ ದ್ವಾರಕಾಪುರಿಯನ್ನು ನಿರ್ಮಿಸಿದ. ಅದು ಕ್ಷೀರಸಾಗರದ ನಡುವಿನ ಶ್ವೇತ ದ್ವೀಪದಂತೆ ಮಂಗಳಕರವಾಗಿತ್ತು.

ಚಕಾರ ಲಾವಣೋದಕಂ ಜನಾರ್ದನೋಽಮೃತೋಪಮಮ್ ।
ಸಭಾಂ ಸುಧರ್ಮನಾಮಕಂ ದದೌ ಸಮೀರಣೋಽಸ್ಯ ಚ ॥ ೧೧೪ ॥

ಶ್ರೀಕೃಷ್ಣ ಉಪ್ಪುನೀರನ್ನು ಅಮೃತಕ್ಕೆ ಸಮವಾಗುವಂತೆ ಮಾಡಿದ. ವಾಯುದೇವ ಸುಧರ್ಮ ಎಂಬ ಹೆಸರಿನ ಸಭಾಗೃಹವನ್ನು ತಂದುಕೊಟ್ಟ.

ದೇವಲೋಕದ ಸುಧರ್ಮಸಭೆ ನೂರೈವತ್ತು ಯೋಜನ ಉದ್ದ ನೂರು ಯೋಜನ ಅಗಲ, ಐದು ಯೋಜನ ಎತ್ತರದ್ದು. ದ್ವಾರಕಾನಗರಿ ಹನ್ನೆರಡು ಯೋಜನ ಉದ್ದ. ಎಂಟು ಯೋಜನ ಅಗಲ. ಅದರಿಂದ ಒಂದು ಯೋಜನ ಉದ್ದಗಲದ ಸುಧರ್ಮಸಭೆಯ ಒಂದು ಅಂಶವನ್ನು ವಾಯುದೇವ ದ್ವಾರಕೆಗೆ ತಂದು ಕೊಟ್ಟನೆಂದು ಹರಿವಂಶ ಹೇಳಿದೆ.

ಶತಕ್ರತೋ ನಭಾಂ ತು ತಾಂ ಪ್ರದಾಯ ಕೇಶವಾಯ ಸಃ ।
ನಿಧೀನ್ ಸಮರ್ಪ್ಯ ಸರ್ವಶೋ ಯಯೌ ಪ್ರಣಮ್ಯ ತಂ ಪ್ರಭುಮ್ ॥ ೧೧೫ ॥

ವಾಯುದೇವ ಇಂದ್ರನಿಂದ ಆ ಸಭಾಗೃಹವನ್ನು ತಂದು ಕೊಟ್ಟು ಎಲ್ಲ ನಿಧಿಗಳನ್ನು ಸಮರ್ಪಿಸಿ ಆ ಪ್ರಭುವನ್ನು ನಮಸ್ಕರಿಸಿ ಹೊರಟುಹೋದ.

ಮಹಾಪದ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ, ಖರ್ವ ಎಂಬ ಕುಬೇರನ ಎಲ್ಲ ನವನಿಧಿಗಳನ್ನೂ ವಾಯು ತಂದಿತ್ತ.

ಸಮಸ್ತದೇವತಾಗಣಾಃ ಸ್ವಕೀಯಮಾರ್ಪಯನ್ ಹರೌ।
ವಿಮುಚ್ಯ ಪಕ್ಷಿಪುಂಗವಂ ಸ ಯೋದ್ಧುಮೇಚ್ಛದಚ್ಯುತಃ ॥ ೧೧೬ ॥

ಹೀಗೆ ಎಲ್ಲ ದೇವತಾ ಸಮೂಹಗಳೂ ತಮ್ಮ ಉತ್ತಮ ವಸ್ತುಗಳನ್ನು ಕೃಷ್ಣನಲ್ಲಿ ಸಮರ್ಪಿಸಿದರು. ಶ್ರೀಕೃಷ್ಣ ಗರುಡನನ್ನು ಕಳಿಸಿಕೊಟ್ಟು ಕಾಲಯವನನೊಡನೆ ಯುದ್ಧ ಮಾಡಲು ಸಂಕಲ್ಪಿಸಿದ.

ಸಮಸ್ತಮಾಧುರಾನ್ ಪ್ರಭುಃ ಕುಶಸ್ಥಲೀಸ್ಥಿತಾನ್ ಕ್ಷಣಾತ್।
ವಿಧಾಯ ಬಾಹುಯೋಧಕಃ ಸ ಯಾವನಂ ಸಮಭ್ಯಯಾತ್ ॥ ೧೧೭ ॥

ಪ್ರಭು ಶ್ರೀಕೃಷ್ಣ ತನ್ನ ಅಚಿಂತ್ಯಾದ್ಭುತಶಕ್ತಿಯಿಂದ ಮಧುರೆಯ ಎಲ್ಲ ಪ್ರಜೆಗಳನ್ನೂ ಕ್ಷಣದಲ್ಲಿ ದ್ವಾರಕೆಯಲ್ಲಿ ತಂದಿರಿಸಿ ಬಾಹು ಯುದ್ಧಮಾಡಲು ಯಾವನನ ಬಳಿಗೆ ಹೊರಟ.

ಅನಂತಶಕ್ತಿರಪ್ಯಜಃ ಸುನೀತಿ ದೃಷ್ಟಯೇ ನೃಣಾಮ್।
ವ್ಯವಾಸಯನ್ನಿಜಾನ್ ಜನಾನ್ ಸ ಲೀಲಯೈವ ಕೇವಲಮ್ ॥ ೧೧೮ ॥

ಅನಂತಶಕ್ತಿ ಉಳ್ಳವನಾದರೂ ಶ್ರೀಕೃಷ್ಣ ಮಾನವರಿಗೆ ಉತ್ತಮ ರಾಜನೀತಿಯನ್ನು ತೋರುವುದಕ್ಕಾಗಿ ಕೇವಲ ಲೀಲೆಯಿಂದಲೆ ತನ್ನ ಮಥುರೆಯ ಪ್ರಜೆಗಳನ್ನು ದ್ವಾರಕೆಗೆ ವಲಸೆ ಹೋಗುವಂತೆ ಮಾಡಿದ.

ಅನಾದ್ಯನಂತಕಾಲಕಂ ಸಮಸ್ತಲೋಕ ಮಂಡಲಮ್।
ಯದೀಕ್ಷಯೈವ ರಕ್ಷ್ಯತೇ ಕಿಮಸ್ಯ ವೃಷ್ಣಿರಕ್ಷಣಮ್ ॥ ೧೧೯ ॥

ಅನಾದಿ ಅನಂತಕಾಲದಲ್ಲಿರುವ ಸಮಸ್ತ ಲೋಕ ಸಮೂಹವನ್ನು ಇಚ್ಛಾಮಾತ್ರದಿಂದ ರಕ್ಷಿಸುವ ಕೃಷ್ಣನಿಗೆ ಯಾದವರ ರಕ್ಷಣೆ ಏನು ಮಹಾ?

ಕಾಲಯಾವನ ಯುದ್ಧ

ನಿರಾಯುಧಂ ಚ ಮಾಮಯಂ ವರಾಚ್ಛಿವಸ್ಯ ನ ಕ್ಷಮಃ।
ಸಮಸ್ತಸೇನಯಾ ಯುತೋಽಪಿ ಯೋದ್ಧುಮಿತ್ಯದರ್ಶಯತ್ ॥ ೧೨೦ ॥

ಕಾಲಯವನ ಎಲ್ಲ ಸೈನ್ಯದಿಂದ ಯುಕ್ತನಾಗಿದ್ದರೂ, ಅವನಿಗೆ ಶಿವನ ವರವಿದ್ದರೂ, ನಿರಾಯುಧನಾದ ನನ್ನೊಡನೆ ಯುದ್ಧ ಮಾಡಲು ಶಕ್ತನಾಗುವುದಿಲ್ಲ ಎಂಬುದನ್ನು ತೋರಿದ, ಬಾಹುಯುದ್ಧಕ್ಕೆ ಸಿದ್ಧನಾದ ಕೃಷ್ಣ.

ಹಿಂದೆ ಜರಾಸಂಧನ ಇಪ್ಪತ್ತಮೂರು ಅಕ್ಷೌಹಿಣಿ ಸೇನೆಯೊಡನೆ ಯುದ್ಧಕ್ಕೆ ವೈಕುಂಠದಿಂದ ದಿವ್ಯ ಆಯುಧಗಳನ್ನು ಕೃಷ್ಣ ತರಿಸಿದ್ದ. ಜೊತೆಗೆ ಬಲರಾಮನಿದ್ದ. ಯಾದವ ಸೈನ್ಯವಿತ್ತು. ಈಗ ಮೂರು ಕೋಟಿ ಅಕ್ಷೌಹಿಣಿ ಸೈನ್ಯವಿದೆ. ತಾನು ಏಕಾಕಿ ನಿರಾಯುಧನಾಗಿ ಬರುತ್ತಿದ್ದಾನೆ ಕೃಷ್ಣ.

ಸ ಕೃಷ್ಣಪನ್ನಗಂ ಘಟೇ ನಿಧಾಯ ಕೇಶವೋಽರ್ಪಯತ್ ।
ನಿರಾಯುಧೋಽಪ್ಯಹಂ ಕ್ಷಮೋ ನಿಹಂತುಮಪ್ರಿಯಾನಿತಿ ॥ ೧೨೧ ॥

ಘಟಂ ಪಿಪೀಲಿಕಾಗಣೈಃ ಪ್ರಪೂರ್ಯ ಯಾವನೋಽಸ್ಯ ಚ ।
ಬಹುತ್ವತೋ ವಿಜೇಷ್ಯ ಇತ್ಯಹಿಂ ಮೃತಂ ವ್ಯದರ್ಶಯತ್ ॥ ೧೨೨ ॥

ಶ್ರೀಕೃಷ್ಣ ಕೃಷ್ಣಸರ್ಪವನ್ನು ಒಂದು ಕೊಡದಲ್ಲಿರಿಸಿ ಕಾಲಯವನನಿಗೆ ಕಳಿಸಿಕೊಟ್ಟ. ಇದು ನಿರಾಯುಧನಾದರೂ ನಾನೊಬ್ಬನೇ ಶತ್ರುಗಳನ್ನು ಸಂಹರಿಸಲು ಶಕ್ತ ಎಂದು ತೋರುವುದಕ್ಕಾಗಿ. 'ನನ್ನ ಸೈನಿಕರು ಬಹಳ ಇರುವುದರಿಂದ ನಾನೆ ಗೆಲ್ಲುವೆನೆಂದು' ತೋರಿಸಲು ಕಾಲಯವನ ಆ ಕೊಡವನ್ನು ಇರುವೆಯ ಸಮೂಹಗಳಿಂದ ತುಂಬಿ ಹಾವು ಸತ್ತಿದ್ದನ್ನು ತೋರಿಸಿದ.

ಸರ್ಪವನ್ನು ಇರುವೆಗಳಿಂದ ಕಾಲಯವನನು ಕೊಲ್ಲುತ್ತಾನೆ ಎಂಬುದು ಕೃಷ್ಣನಿಗೂ ಗೊತ್ತು. ಆದರೆ ಕಾಲಯವನನಿಗೆ ತಾನು ಬಹಳ ಸೈನ್ಯದ ಬಲದಿಂದ ಕೃಷ್ಣನನ್ನು ಕೊಲ್ಲಬಲ್ಲೆನೆಂದು ಧೈರ್ಯ ವಿಶ್ವಾಸಗಳು ಬರಲಿ ಎಂದೇ ಕೃಷ್ಣ ಹಾಗೆ ಮಾಡಿದ್ದನೆನ್ನುತ್ತಾರೆ ಸತ್ಯಾಭಿವೀಯರು.[1]

ಕಿಮತ್ರ ಸತ್ಯಮಿತ್ಯಹಂ ಪ್ರದರ್ಶಯಿಷ್ಯ ಇತ್ಯಜಃ ।
ಉದೀರ್ಯ ದೂತಮಭ್ಯಯಾತ್ ಸ ಯಾವನಂ ಪ್ರಬಾಧಿತುಮ್ ॥ ೧೨೩ ॥

ಇವುಗಳಲ್ಲಿ ಯಾವುದು ನಿಜವಾಗುವುದೆಂಬುದನ್ನು ನಾನು ಕೃತಿಯಲ್ಲಿ ಮಾಡಿ ತೋರಿಸುವೆನೆಂದು ಕೃಷ್ಣ ದೂತನಿಗೆ ಹೇಳಿ ಯಾವನನೊಡನೆ ಯುದ್ಧಮಾಡಲು ಹೊರಟ.

ಶ್ರೀಕೃಷ್ಣ ತಾನು ಕೃಷ್ಣಸರ್ಪದಂತೆ ಏಕಾಕಿಯಾಗಿ ಆಯುಧಗಳನ್ನು ಧರಿಸದೆ ಎಂಥ ಮಹಾಶತ್ರುವನ್ನೂ ಮುಗಿಸಬಲ್ಲೆ ಎಂಬುದನ್ನು ತೋರುವುದಕ್ಕಾಗಿ

---

1. ಯದ್ಯಪಿ ಕೃಷ್ಣಃ ಕೃಷ್ಣಸರ್ಪಪ್ರೇಷಣಾನಂತರಂ ಕೃಷ್ಣಸರ್ಪಃ ಪಿಪೀಲಿಕಾಗಣೈಃ ಮೃತೋ ಭವಿಷ್ಯತೀತಿ ಜಾನಾತಿ। ತಥಾಪಿ ಕಾಲಯವನಸ್ಯ ಯಥಾ ಪಿಪೀಲಿಕಾಗಣೈಃ ಕೃಷ್ಣಸರ್ಪೋ ಮೃತೋ ಜಾತಃ, ಏವಂ ಮದೀಯ ಬಹು ಸೇನಯಾ ಕೃಷ್ಣೋ ಮೃತೋ ಭವಿಷ್ಯತೀತಿ ದುರ್ಬುದ್ಧ್ಯುತ್ಪತ್ತ್ಯಾ ಯುದ್ಧೇ ನಿಃಶಂಕ ಪ್ರವೃತ್ಯರ್ಥಂ ಕೃಷ್ಣಸರ್ಪ ಪ್ರೇಷಣೆ ಕೃತವಾನಿತಿ ದ್ರಷ್ಟವ್ಯಂ। -ಸತ್ಯಾಭಿನವೀಯ

ಕೃಷ್ಣಸರ್ಪವನ್ನು ಕಳಿಸಿದ್ದ. ಯಾವನ ಈ ಅಭಿಪ್ರಾಯವನ್ನು ತಿಳಿದು, ಕೃಷ್ಣಸರ್ಪ ಎಷ್ಟೇ ಪ್ರಬಲವಾಗಿದ್ದರೂ ಬಹುಸಂಖ್ಯೆಯಲ್ಲಿರುವ ಇರುವೆಗಳು ಕಚ್ಚಿ ಸಾಯಿಸಬಲ್ಲವು. ಹಾಗೆ ಬಹುಸಂಖ್ಯೆಯ ಸೈನ್ಯಬಲ ಉಳ್ಳ ನಾನು ಬಲಿಷ್ಠನಾದ ಕೃಷ್ಣನನ್ನು ನಾಶಪಡಿಸಬಲ್ಲೆ ಎಂದು ತೋರುವುದಕ್ಕಾಗಿ ಇರುವೆಗಳನ್ನು ಕೊಡದಲ್ಲಿ ತುಂಬಿಸಿ ಹಾವನ್ನು ಸಾಯಿಸಿದ ಮಾತ್ರಕ್ಕೆ ಕೇವಲ ಆ ದೃಷ್ಟಾಂತ ಮಾತ್ರದಿಂದ ಏನೂ ಸಿದ್ಧವಾಗದು. ಎರಡರಲ್ಲಿ ಯಾವುದು ನಿಜವಾಗುವುದು ಎಂಬುದನ್ನು ತೋರಿಸುವೆನೆನ್ನುತ್ತ ಕೃಷ್ಣಯುದ್ಧಕ್ಕೆ ಹೊರಟ.

ಇಲ್ಲಿ ಕಾಲಯವನ ಕೃಷ್ಣಸರ್ಪವನ್ನು ಇರುವೆಗಳಿಂದ ಸಾಯಿಸಿದ್ದು ಬುದ್ಧಿವಂತಿಕೆ ಏನಲ್ಲ. ಅದು ಅವನ ದಡ್ಡತನವನ್ನೇ ತೋರಿಸಿತು. ಏಕೆಂದರೆ ಗರ್ಗಮುನಿ ಶಿವನಿಂದ ವರವಾಗಿ ಪಡೆದಿದ್ದು ಕೃಷ್ಣಾಭಾವ ಉಂಟುಮಾಡುವ ಮಗನನ್ನು ಕೃಷ್ಣಾಭಾವ ಈಗಾಗಲೇ ಕಾಲಯವನನ ಕೈಯಿಂದ ಆಗಿಹೋಗಿದೆ. ಕೃಷ್ಣಸರ್ಪದ ಸಂಹಾರವೂ ಕೃಷ್ಣಾಭಾವವೇ ತಾನೆ? ಹೀಗಾಗಿ ಶಿವವರ ನಿಜವಾಯಿತು. ಇನ್ನು ಕೃಷ್ಣನನ್ನು ಶಿವವರ ಏನೂ ಮಾಡಲಾರದು. ಅಂತೂ ಕಾಲಯವನನ ದಡ್ಡತನದಿಂದ ಕೃಷ್ಣಸರ್ಪ ಹತವಾಗುವುದರ ಮೂಲಕ ಶಿವನ ವರ ಫಲಿಸಿತು. ಕಾಲಯವನನಿಗೆ ಮಾತ್ರ ಆ ವರ ವ್ಯರ್ಥವೇ ಆಯಿತು ಈ ಉದ್ದೇಶದಿಂದಲೆ ಕೃಷ್ಣ ಕೃಷ್ಣಸರ್ಪವನ್ನು ಕಳಿಸಿದ್ದ ಎನ್ನುತ್ತದೆ ವಾದಿರಾಜೀಯ.[1]

---

1. ನ ಚ ವಾಚ್ಯಂ ಕೃಷ್ಣ ಪ್ರೇಷಿತ ಸರ್ಪಸ್ಯ ಕಾಲಯಾವನೇನ ಪಿಪೀಲಿಕಾಪುಂಜೈಃ ನಾಶಿತತ್ವಾತ್ ತದೀಯಮೇವ ಕೌಶಲಮಧಿಕಮಿತಿ। ಸರ್ವಜ್ಞೋಽಪಿ ಭಗವಾನ್ ಶ್ರೀಕೃಷ್ಣೋ ನೀತಿವ್ಯಾಜೇನ ಭುವೋಽ ಕೃಷ್ಣತಾಂ ಯ ಅನಯೇತ್ ತಂ ಸುತಂ ಸಮಾರ್ಜಯ ಇತಿ ಮುನಿ ಸಂಕಲ್ಪಸ್ಯ, ಹರಿಷದೋಕ್ತ ಕೃಷ್ಣಾಭಾವದಂ ಸುತಂ ಯಾಹೀತಿ ಶಿವವರಸ್ಯ ಚಾನ್ಯಥೀಕರಣಾಯ ಕೃಷ್ಣಸರ್ಪಂ ಪ್ರೇಷಿತವಾನ್। ಹರ್ಯಭಾವಸ್ಯ ಮುನಿನಾಽಪ್ಯಾರ್ಥಿತತ್ವಾತ್ ಹರಿಪದೇನಾಪಿ ಕೃಷ್ಣ ಏವೋಚ್ಯತೇ। ಅತ ಏವ ವಿಕೃಷ್ಣಕಂ ಕ್ಷಿತೇಸ್ತಲಮಿತಿ ಸಾಲ್ವಸ್ಯಾಪ್ಯುಕ್ತಿಃ। ಏವಂ ಚ ಕೃಷ್ಣ ಪನ್ನಗಮಿತ್ಯುಕ್ತ ಕೃಷ್ಣಸರ್ಪಸ್ಯಾಪಿ ಕೃಷ್ಣಪದವಾಚ್ಯತ್ವಾತ್ತ ಕಾಲಯಾವನೇನ ಪಿಪೀಲಿಕಾಭಿಸ್ತನ್ನಾಶೇ ಕಾರಿತೇ ಸತಿ ಭುವಿ ಕಸ್ಯಚಿತ್ ಕೃಷ್ಣಭಾವಸ್ಯ ಚ ತೇನೈವ ಸಂಪಾದಿತತ್ವಾತ್ ಮುನಿಸಂಕಲ್ಪಃ ಶಿವವರಶ್ಚ ತತ ಏವ ಸಂಪಾದಿತೋ ಭವೇತ್। ತಸ್ಯ ಪರಾಭವಂ ಚ ಪ್ರಾಗೇವ ಸ್ವಲೀಲಾ ಕೌಶಲೇನ ಶ್ರೀಕೃಷ್ಣಃ ಸಾಧಿತವಾನ್। ಅತಃ ಶ್ರೀಕೃಷ್ಣಸ್ಯೈವ ನೀತಿರಸದೃಶೀ। ಅನ್ಯಥಾ ಕಾಪ್ಯದರ್ಶಿತ ನೀತಿ ಮತ್ಸ್ಯೈವ ಕುತೋ ದರ್ಶಯೇತ್। ತಸ್ಮಾತ್ ಸರ್ವಜ್ಞ ಚೂಡಾಮಣಿರ್ಭಗವಾನೇವೇತಿ ಯುಕ್ತಮುತ್ಪಶ್ಯಾಮಃ॥ ಕಿಮತ್ರ ಸತ್ಯಮಿತ್ಯತ್ರ, ಅತ್ರ ಬಹುಭಿಃ ಪ್ರಬಲಸ್ಯಾಪ್ಯೇಕಸ್ಯ ಹನನಂ ಕರ್ತುಂ ಶಕ್ಯತ ಇತಿ ತವ ಕಾಲಯವನೇನ ಕೃತೇ ಪಿಪೀಲಿಕಾಪೂರಣಾಖ್ಯೇ ಕರ್ಮಣಿ, ಬಲವತ್ಯೈಕೇನ ಬಹೂನಾಂ ಹನನಂ ಕರ್ತುಂ ಶಕ್ಯತ ಇತಿ ಮಯಾ ಕೃತೇ ಚ ಕರ್ಮಣಿ ಕಿಂ ಸತ್ಯಮಿತ್ಯೇತದಹಂ ಕರ್ಮಣೈವ ಪ್ರದರ್ಶಯಿಷ್ಯೇ। ಬಲವತ್ಯೈಕೇನೈವ

ಸ ಬಾಹುನೈವ ಕೇಶವೋ ವಿಜಿತ್ಯ ಯಾವನಂ ಪ್ರಭುಃ।
ನಿಹತ್ಯ ಸರ್ವಸೈನಿಕಾನ್ ಸ್ವಮಸ್ಯ ಯಾಪಯತ್ ಪುರೀಮ್ ॥ ೧೨೪ ॥

ಪ್ರಭು ಶ್ರೀಕೃಷ್ಣ ಬಾಹುಬಲದಿಂದಲೆ ಯಾವನನನ್ನು ಗೆದ್ದು ಎಲ್ಲ ಸೈನಿಕರನ್ನೂ ಕೊಂದು ಅವನ ಸಂಪತ್ತನ್ನು ದ್ವಾರಕೆಗೆ ಕಳಿಸಿಕೊಟ್ಟ

ಮಹಾಸ್ತ್ರಶಸ್ತ್ರಸಂಚಯಾನ್ ಸೃಜಂತಮಾಶು ಯಾವನಮ್।
ನ್ಯಪಾತಯದ್ ರಥೋತ್ತಮತ್ ತಲೇನ ಕೇಶವೋಽರಿಹಾ ॥ ೧೨೫ ॥

ಮಹಾ ಅಸ್ತ್ರಶಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಯಾವನನನ್ನು ಶತ್ರುನಾಶಕನಾದ ಶ್ರೀಕೃಷ್ಣ ಬೇಗನೆ ಹಸ್ತಲದಿಂದಲೆ ಉತ್ತಮವಾದ ರಥದಿಂದ ಕೆಳಗೆ ಉರುಳಿಸಿದ.

ಮುಚುಕುಂದ ವರದ ಶ್ರೀಕೃಷ್ಣ

ವಿವಾಹನಂ ನಿರಾಯುಧಂ ವಿಧಾಯ ಬಾಹುನಾ ಕ್ಷಣಾತ್।
ವಿಮೂರ್ಛಿತಂ ನ ಚಾಹನತ್ ಸುರಾರ್ಥಿತಂ ಸ್ಮರನ್ ಹರಿಃ ॥ ೧೨೬ ॥

ಶ್ರೀಕೃಷ್ಣ ಬಾಹುಬಲದಿಂದಲೆ ಕಾಲಯವನನನ್ನು ಕ್ಷಣದಲ್ಲಿ ವಾಹನ ಆಯುಧರಹಿತನನ್ನಾಗಿ ಮಾಡಿ ಮೂರ್ಛೆಗೊಳಿಸಿದ. ಕೊಲ್ಲಲಿಲ್ಲ. ದೇವತೆಗಳ ಪ್ರಾರ್ಥನೆಯನ್ನು ಸ್ಮರಿಸಿದ.

ಪುರಾ ಹಿ ಯೌವನಾಶ್ವಜೇ ವರಪ್ರದಾಃ ಸುರೇಶ್ವರಾಃ।
ಯಯಾಚಿರೇ ಜನಾರ್ದನಂ ವರಂ ವರಪ್ರದೇಶ್ವರಮ್ ॥ ೧೨೭ ॥

ಹಿಂದೆ ಮುಚುಕುಂದನಿಗೆ ವರವಿತ್ತ ದೇವತೆಗಳು ವರದಾಯಕರಿಗೊಡೆಯನಾದ ಹರಿಯಲ್ಲಿ ವರ ಬೇಡಿದರು.

ಇಕ್ಷ್ವಾಕುವಂಶದ ಯುವನಾಶ್ವನ ಮಗ ಮಾಂಧಾತ, ಅವನ ಮಗ ಮುಚುಕುಂದ. ಹರಿಯ ವರ ಬಲದಿಂದ ದೇವಾಸುರ ಸಂಗ್ರಾಮದಲ್ಲಿ ಅಸುರರ ನಾಶ ಮಾಡಿದವ. ದೇವತೆಗಳು 'ನಿನಗೆ ಬೇಕಾದ ವರ ಕೇಳು' ಎಂದರೆ ನಿಷ್ಕಾಮ ಕರ್ಮಿಯಾದ ಮುಚುಕುಂದ ಮೋಕ್ಷ ಹೊರತು

ಮಯಾ ಕಾಲಯಾವನಸ್ಯ ಬಹುತರ ತತ್ಸೇನಾಯಾಶ್ಚ ಹನನೇ ಕೃತೇ ಮತ್ಕೃತಮೇವ ಸತ್ಯ ಭವಿಷ್ಯತಿ। ಬಹುಸೇನಾವತಾ ತವ ಕಾಲಯಾವನೇನ ಮಮ ಪರಾಭವಃ ಕಾರಿತ ಶ್ಚೇತ್ ತತ್ಕೃಮೇವ ಸತ್ಯಂ ಭವಿಷ್ಯತೀತಿ ಭಾವಃ। ಇದಂ ತು ನಿದರ್ಶನಂ ಮಯಾ ಪ್ರಯೋಜನಾಂತರ ಸಂಪಾದನಾರ್ಥಮೇವ ಕೃತಂ। ಅತಸ್ತವ ದೃಷ್ಟಾಂತ ಮಾತ್ರೇಣ ನಾರ್ಥಸಿದ್ಧಿರಿತಿ ಭಾವಃ। -ವಾದಿರಾಜೀಯ

ಬೇರೇನೂ ಬೇಡವೆಂದ. ಮೋಕ್ಷವನ್ನು ಹರಿಯೊಬ್ಬನೆ ಕೊಡಬಲ್ಲ. ನಾವು ಕೊಡಬಹುದಾದುದನ್ನು ಕೇಳು ಎಂದು ಅವರು ಆಗ್ರಹಿಸಿದಾಗ ಕೊನೆಗೆ ಮುಚುಕುಂದ ಕೇಳಿದ, 'ನನಗೆ ನಿದ್ದೆಕೊಡಿ, ನಿದ್ರಾಭಂಗ ಮಾಡುವವ ನನ್ನ ನೇತ್ರಾಗ್ನಿಯಿಂದ ಉರಿದು ಬೂದಿಯಾಗಲಿ' ಎಂದು. ದೇವತೆಗಳು ತಥಾಸ್ತು ಎಂದರು. ಆದರೂ ಅವನು ಮಾಡಿದ ಸೇವೆಗೆ ಇದು ತಕ್ಕಫಲವಲ್ಲ. ತಕ್ಕಫಲವನ್ನು ನೀನೇ ನೀಡೆಂದು ಹರಿಯಲ್ಲಿ ದೇವತೆಗಳು ಪ್ರಾರ್ಥಿಸಿದರು. ಇದನ್ನು ಈಗ ಕೃಷ್ಣ ನೆನೆದು ಮುಚುಕುಂದನಿಂದಲೆ ಕಾಲಯವನನ ಸಂಹಾರ ಮಾಡಿಸಿ ಅವನಿಗೆ ವಿಶೇಷ ಪುಣ್ಯ ಬರುವಂತೆ ಮಾಡುವೆನೆಂದು ಬಗೆದು ಕಾಲಯವನನನ್ನು ಕೊಲ್ಲದೆ ತಾನು ಭಯದಿಂದ ಪಲಾಯನ ಮಾಡುವವನಂತೆ ತೋರಿಕೊಂಡ.

ಅನರ್ಥಕೋ ವರೋಽಮುನಾ ವೃತೋಽಪಿ ಸಾರ್ಥಕೋ ಭವೇತ್ ।
ಅರಿಂ ಭವಿಷ್ಯಯಾವನಂ ದಹತ್ವಯಂ ತವೇಶ್ವರ ॥ ೧೨೮ ॥

'ಪ್ರಭು, ಮುಚುಕುಂದ ನಿರರ್ಥಕವಾದ ವರವನ್ನು ಬೇಡಿದ್ದಾನೆ. ಅದು ಸಾರ್ಥಕವಾಗಲಿ. ಮುಂದೆ ಹುಟ್ಟಲಿರುವ ನಿನ್ನ ಶತ್ರುವಾದ ಕಾಲಯವನನ್ನು ಈತ ಸುಡಲಿ' ಎಂದು.

ತಥಾಸ್ತ್ವಿತಿ ಪ್ರಭಾಷಿತಂ ಸ್ವವಾಕ್ಯಮೇವ ಕೇಶವಃ ।
ಋತಂ ವಿಧಾತುಮಭ್ಯಯಾತ್ ಸ ಯೌವನಾಶ್ವಜಾಂತಿಕಮ್ ॥ ೧೨೯ ॥

'ಹಾಗೇ ಆಗಲಿ' ಎಂದು ಕೃಷ್ಣ ತಾನು ಹೇಳಿದ ಮಾತನ್ನು ಸತ್ಯವನ್ನಾಗಿ ಮಾಡಲು ಮುಚುಕುಂದನ ಬಳಿಗೆ ಧಾವಿಸಿದ.

ಸಸಂಜ್ಞಕೋಽಥ ಯಾವನೋ ಧರಾತಲಾತ್ ಸಮುತ್ಥಿತಃ ।
ನಿಪಾತ್ಯ ಯಾಂತಮೀಶ್ವರಂ ಸ ಪೃಷ್ಠತೋಽನ್ವಯಾತ್ ಕ್ರುಧಾ ॥ ೧೩೦ ॥

ಬಳಿಕ ಮೂರ್ಖೆಯಿಂದ ಎಚ್ಚರಗೊಂಡ ಯಾವನ ನೆಲದಿಂದ ಎದ್ದು ತನ್ನನ್ನು ಕೆಡೆಹಾಕಿ ಓಡಿ ಹೋಗುತ್ತಿದ್ದ ಕೃಷ್ಣನನ್ನು ಕೋಪದಿಂದ ಬೆನ್ನಟ್ಟಿಹೋದ.

ಹರಿರ್ಗುಹಾಂ ನೃಪಸ್ಯ ತು ಪ್ರವಿಶ್ಯ ಸಂವ್ಯವಸ್ಥಿತಃ ।
ಸ ಯಾವನಃ ಪದಾಹನನ್ನೃಪಂ ಸ ತಂ ದದರ್ಶ ಹ ॥ ೧೩೧ ॥

ಕೃಷ್ಣ ಮುಚುಕುಂದನ ಗುಹೆಯನ್ನು ಪ್ರವೇಶಿಸಿ ಅಡಗಿದ. ಯಾವನ ಮುಚುಕುಂದನನ್ನು ಕಾಲಿಂದ ಒದ್ದ. ಒಡನೆ ಮುಚುಕುಂದ ಕಣ್ತೆರೆದು ಅವನನ್ನು ಕಂಡ.

ಕೃಷ್ಣನೆ ಮಲಗುವ ಸೋಗಿನಿಂದ ತನ್ನನ್ನು ವಂಚಿಸುತ್ತಿದ್ದಾನೆ ಎಂದು ಭ್ರಮೆಯಿಂದ ಯಾವನ ಮುಚುಕುಂದನಿಗೆ ಒದ್ದ. ಅಸುರರಿಗೆ ಎಲ್ಲ ಕಡೆ ಅವರ ಮಿಥ್ಯಾಜ್ಞಾನವೆ ಹೀಗೆ ಅನರ್ಥ ಕಾರಣವಾಗುತ್ತದೆ.

ಸ ತಸ್ಯ ದೃಷ್ಟಿಮಾತ್ರತೋ ಬಭೂವ ಭಸ್ಮಸಾತ್ ಕ್ಷಣಾತ್ ।
ಸ ಏವ ವಿಷ್ಣುರವ್ಯಯೋ ದದಾಹ ತಂ ಹಿ ವಹ್ನಿವತ್ ॥ ೧೩೨ ॥

ಮುಚುಕುಂದನ ದೃಷ್ಟಿ ಮಾತ್ರದಿಂದ ಯಾವನ ಕ್ಷಣದಲ್ಲಿ ಬೂದಿಯಾದ. ನಾಶರಹಿತನಾದ ಕೃಷ್ಣನ ಬೆಂಕಿಯಂತೆ ಅವನನ್ನು ಸುಟ್ಟಿದ್ದ.

ವರಾಚ್ಛಿವಸ್ಯ ದೈವತೈರವಧ್ಯದಾನವಾನ್ ಪುರಾ ।
ಹರೇರ್ವರಾನ್ನಿಹತ್ಯ ಸ ಪ್ರಪೇದ ಆಶ್ವಿಮಂ ವರಮ್ ॥ ೧೩೩ ॥

ಸುದೀರ್ಘಸುಪ್ತಿಮಾತ್ಮನಃ ಪ್ರಸುಪ್ತಿಭಂಗಕೃತ್ ಕ್ಷಯಮ್ ।
ಸ್ವದೃಷ್ಟಿಮಾತ್ರತಸ್ತತೋ ಹತಃ ಸ ಯಾವನಸ್ತದಾ ॥ ೧೩೪ ॥

ಶಿವ ವರದಿಂದ ದೇವತೆಗಳಿಗೆ ಅವಧ್ಯರಾದ ದಾನವರನ್ನು ಹಿಂದೆ ಹರಿಯ ವರದಿಂದ ಮುಚುಕುಂದ ಕೊಂದು, ನನಗೆ ಬಹಳ ದೀರ್ಘವಾದ ನಿದ್ರೆ ಬೇಕು, ನನಗೆ ನಿದ್ರಾಭಂಗ ಮಾಡುವವ ನನ್ನ ದೃಷ್ಟಿ ಮಾತ್ರದಿಂದ ನಾಶ ಹೊಂದಬೇಕು ಎಂದು ವರಪಡೆದಿದ್ದ. ಅದರಿಂದ ಯಾವನ ಆಗ ಹತನಾದ.

ಅತಶ್ಚ ಪುಣ್ಯಮಾಪ್ತವಾನ್ ಸುರಪ್ರಸಾದತೋಽಕ್ಷಯಮ್ ।
ಸ ಯೌವನಾಶ್ವಜೋ ನೃಪೋ ನ ದೇವತೋಷಣಂ ವೃಥಾ ॥ ೧೩೫ ॥

ಅದರಿಂದ ದೇವತೆಗಳ ಅನುಗ್ರಹದಿಂದ ಮುಚುಕುಂದ ಮಹಾರಾಜ ಅನಂತಪುಣ್ಯ ಭಾಗಿಯಾದ. ಏಕೆಂದರೆ ದೇವತೆಗಳನ್ನು ಒಲಿಸಿಕೊಳ್ಳುವುದು ಎಂದು ವ್ಯರ್ಥವಾಗುವುದಿಲ್ಲ.

ಹಿರಣ್ಯಕಶಿಪು ರಾವಣಾದಿಗಳು ಬ್ರಹ್ಮರುದ್ರಾದಿ ದೇವತೆಗಳನ್ನು ಒಲಿಸಿಕೊಂಡುದುದು ವ್ಯರ್ಥವಾದುದು ಕಂಡಿದೆ. ಆದರೆ ತಾರತಮ್ಯ ಜ್ಞಾನಪೂರ್ವಕವಾಗಿ ದೇವತೆಗಳನ್ನು ಆರಾಧಿಸಿ ಒಲಿಸಿಕೊಳ್ಳಬೇಕು. ಆಗ ಅದು ವ್ಯರ್ಥವಾಗುವುದಿಲ್ಲ ಎಂದು ವಾದಿರಾಜೀಯ.

ತತೋ ಹರಿಂ ನಿರೀಕ್ಷ್ಯ ಸ ಸ್ತುತಿಂ ವಿಧಾಯ ಚೋತ್ತಮಾಮ್ ।
ಹರೇರನುಜ್ಞಯಾ ತಪಶ್ಚಕಾರ ಮುಕ್ತಿಮಾಪ ಚ ॥ ೧೩೬ ॥

ಬಳಿಕ ಮುಚುಕುಂದ ಕೃಷ್ಣನನ್ನು ಕಂಡು ಉತ್ತಮವಾದ ಸ್ತುತಿಮಾಡಿ ಕೃಷ್ಣನ ಅನುಜ್ಞೆಯಿಂದ ತಪಸ್ಸು ಮಾಡಿದ. ಮುಕ್ತಿಯನ್ನು ಪಡೆದ.

ತತೋ ಗುಹಾಮುಖಾದ್ಧರಿರ್ವಿನಿಃಸೃತೋ ಜರಾಸುತಮ್ ।
ಸಮಸ್ತಭೂಪಸಂಯುತಂ ಜಿಗಾಯ ಬಾಹುನೇಶ್ವರಃ ॥ ೧೩೭ ॥

ಬಳಿಕ ಮುಚುಕುಂದನ ಗುಹಾದ್ವಾರದಿಂದ ಪ್ರಭು ಶ್ರೀಕೃಷ್ಣ, ಹೊರಗೆ ಬಂದು ಜರಾಸಂಧನನ್ನು ಎಲ್ಲ ರಾಜರ ಸಮೇತ ಬಾಹುವಿನಿಂದಲೇ ಪರಾಭವಗೊಳಿಸಿದ.

ತಲೇನ ಮುಷ್ಟಿಭಿಸ್ತಥಾ ಮಹೀರುಹೈಶ್ಚ ಚೂರ್ಣಿತಾಃ ।
ನಿಪೇತುರಸ್ಯ ಸೈನಿಕಾಃ ಸ್ವಯಂ ಚ ಮೂರ್ಛಿತೋಽಪತತ್ ॥ ೧೩೮ ॥

ಶ್ರೀಕೃಷ್ಣನ ಅಂಗೈ ಅಂಗಾಲುಗಳಿಂದ ಮುಷ್ಟಿಗಳಿಂದಲೂ ಮರಗಳಿಂದಲೂ ಪುಡಿಯಾಗಿ ಜರಾಸಂಧನ ಸೈನಿಕರು ನೆಲಕ್ಕೊರಗಿದರು. ಸ್ವತಃ ಜರಾಸಂಧನೂ ಮೂರ್ಛಿತನಾಗಿ ಬಿದ್ದ.

ಸ ಸಾಲ್ವಪೌಂಡ್ರಚೇದಿಪಾನ್ನಿಪಾತ್ಯ ಸರ್ವಭೂಭುಜಃ ।
ಸ ಪುಪ್ಲುವೇ ಜನಾರ್ದನಃ ಕ್ಷಣೇನ ತಾಂ ಕುಶಸ್ಥಲೀಮ್ ॥ ೧೩೯ ॥

ಶ್ರೀಕೃಷ್ಣ ಸಾಲ್ವಪೌಂಡ್ರಕ ಶಿಶುಪಾಲ ಮುಂತಾದ ಎಲ್ಲ ರಾಜರನ್ನೂ ಕ್ಷಣದಲ್ಲಿ ಕೆಡಹಿ ದ್ವಾರಕೆಗೆ ಹಾರಿದ.

ಸಸಂಜ್ಞಕಾಃ ಸಮುತ್ಥಿತಾಸ್ತತೋ ನೃಪಾಃ ಪುನರ್ಯಯುಃ ।
ಜಿಗೀಷವೋಽಥ ರುಕ್ಮಿಣೀಂ ವಿಧಾಯ ಚೇದಿಪೇ ಹರಿಮ್ ॥ ೧೪೦ ॥

ಎಚ್ಚರಗೊಂಡು ಎದ್ದ ರಾಜರು ಕೃಷ್ಣನನ್ನು ಪರಾಭವಗೊಳಿಸುವ ಬಯಕೆಯಿಂದ ರುಕ್ಮಿಣಿಯನ್ನು ಶಿಶುಪಾಲನಿಗೇ ಕೊಡುವುದೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು ಪುನಃ ಕುಂಡಿನಪುರಕ್ಕೆ ಹೋದರು.

ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಬಿಟ್ಟರೆ ಕೃಷ್ಣನ ಪ್ರತಿಷ್ಠೆಗೆ ಕುಂದು ಬರುವುದು. ಈ ರೀತಿಯಲ್ಲಾದರೂ ಕೃಷ್ಣನಿಗೆ ಪರಾಭವ ಉಂಟುಮಾಡಿ ಸೇಡು ತೀರಿಕೊಳ್ಳುವ ಬಯಕೆಯಿಂದ ಜರಾಸಂಧಾದಿಗಳು ಪುನಃ ಕುಂಡಿನಪುರಕ್ಕೆ ತೆರಳಿದರು.

ರುಕ್ಮಿಣಿಯ ಪ್ರಣಯ ಪತ್ರ

ಸಮಸ್ತರಾಜಮಂಡಲೇ ವಿನಿಶ್ಚಯಾದುಪಾಗತೇ ।
ಸಭೀಷ್ಮಕೇ ಚ ರುಕ್ಮಿಣೀಂ ಪ್ರದಾತುಮುದ್ಯತೇ ಮುದಾ ॥ ೧೪೧ ॥

ಸಮಸ್ತಲೋಕಯೋಷಿತಾಂ ವರಾ ವಿದರ್ಭನಂದನಾ ।
ದ್ವಿಜೋತ್ತಮಂ ಹರೇಃ ಪದೋಃ ಸಕಾಶಮಾಶ್ವಯಾಪಯತ್ ॥ ೧೪೨ ॥

ಎಲ್ಲ ರಾಜರ ಸಮೂಹವೂ ಹೀಗೆ ನಿಶ್ಚಯ ಮಾಡಿಕೊಂಡು ಬಂದು ಭೀಷ್ಮಕನಿಂದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಿಸಲು ಸಂತೋಷದಿಂದ ಉದ್ಯುಕ್ತವಾಗಿತ್ತು. ಆಗ ಸಕಲ ಲೋಕಗಳ ಸ್ತ್ರೀಯರಲ್ಲಿ ಉತ್ತಮಳಾದ ರುಕ್ಮಿಣಿ ಬೇಗನೆ ಒಬ್ಬ ದ್ವಿಜೋತ್ತಮನನ್ನು ಶ್ರೀಕೃಷ್ಣನ ಚರಣ ಸನ್ನಿಧಿಗೆ ಕಳಿಸಿದಳು.

ದ್ವಿಜೋತ್ತಮನೆಂದರೆ ರಾಜಪುರೋಹಿತನ ಪುತ್ರನೆಂದು ಪದ್ಮಪುರಾಣ ಹೇಳುತ್ತಿದೆ. ರುಕ್ಮಿಣಿ ತಾನು ಶ್ರೀಕೃಷ್ಣನನ್ನೆ ಮನಸ್ಸಿನಿಂದ ವರಿಸಿದ್ದೇನೆ ಎಂದೂ, ತಾನು ಶಿಶುಪಾಲನ ಪಾಲಾಗದಂತೆ ಸಕಾಲದಲ್ಲಿ ಬಂದು ಕುಲದೇವಿಯ ಯಾತ್ರೆಯ ಕಾಲದಲ್ಲಿ ತನ್ನನ್ನು ಅಪಹರಣಗೈಯಬೇಕೆಂದೂ ಪತ್ರ ಬರೆದು ಅದನ್ನು ಉತ್ತಮ ಬ್ರಾಹ್ಮಣನ ಕೈಯಲ್ಲಿ ಕೃಷ್ಣನಿಗೆ ಕಳಿಸಿಕೊಟ್ಟಳು. ಅಂದಿನಿಂದ ಕನ್ಯಾಘಟನೆಯನ್ನು ಪ್ರಾಯಃವೈದಿಕರೇ ಮಾಡಿಸುವ ರೂಢಿಬಂದಿತೆಂದು ಸತ್ಯಧರ್ಮರು ಹೇಳಿದ್ದಾರೆ. ಈ ಬ್ರಾಹ್ಮಣೋತ್ತಮರೆ ಶ್ರೀವಾದಿರಾಜರಾಗಿ ಅವತರಿಸಿದರೆಂದು ಸ್ವಾಪ್ನವೃಂದವನಾಖ್ಯಾನ ಹೇಳಿದೆ.

ರುಕ್ಮಿಣಿ ಪತ್ರ ಬರೆದ ಅಂತ ಹರಿವಂಶ ವಿಷ್ಣುಪುರಾಣಗಳಲ್ಲಿ ಇಲ್ಲ. ನಿರ್ಣಯದಲ್ಲಿಯೂ ಕಾಣುವುದಿಲ್ಲ. ನಿರ್ಣಯ ಟೀಕೆಗಳೂ ಹೇಳುತ್ತಿಲ್ಲ. ಭಾಗವತ ಶ್ರೀಧರೀಯ ಪಾಠದಲ್ಲಿ ಇಲ್ಲ. ವಿಜಯಧ್ವಜೀಯ ಪಾಠದಲ್ಲಿ ಇದೆ. ನಿರ್ಣಯಕ್ಕೆ ಅವಿರುದ್ಧವಾಗಿರುವುದರಿಂದ ರುಕ್ಮಿಣೀಶ ವಿಜಯದಲ್ಲಿಯೂ ಇರುವುದರಿಂದ ಗ್ರಾಹ್ಯ.

ನಿಶಮ್ಯ ತದ್ವಚೋ ಹರಿಃ ಕ್ಷಣಾದ್ ವಿದರ್ಭಕಾನಗಾತ್ ।
ತಮನ್ವಯಾದ್ಬಲಾಯುಧಃ ಸಮಸ್ಯ ಯಾದವೈಃ ಸಹ ॥ ೧೪೩ ॥

ಶ್ರೀಕೃಷ್ಣ ರುಕ್ಮಿಣಿಯ ಮಾತನ್ನು ಕೇಳಿ ತಕ್ಷಣವೆ ಕುಂಡಿನಪುರಕ್ಕೆ ಹೊರಟ. ಬಲರಾಮ ಎಲ್ಲ ಯಾದವರೊಡನೆ ಅವನನ್ನು ಹಿಂಬಾಲಿಸಿದ.

ರುಕ್ಮಿಣಿಯ ಪತ್ರವನ್ನು ವಾಚಕನಿಂದ ಓದಿಸಿ ಕೇಳಿ ಕೃಷ್ಣ ಒಡನೆ ಕುಂಡಿನಪುರಕ್ಕೆ ಹೊರಟ, ಎನ್ನುತ್ತದೆ ಭಾಗವತ.

ರುಕ್ಮಿಣೀಹರಣ

ಸಮಸ್ತರಾಜಮಂಡಲಂ ಪ್ರಯಾಂತಮೀಕ್ಷ್ಯ ಕೇಶವಮ್ ।
ಸುಯತ್ತಮಾತ್ತಕಾರ್ಮುಕಂ ಬಭೂವ ಕನ್ಯಕಾವನೇ ॥ ೧೪೪ ॥

ಕೃಷ್ಣ ರುಕ್ಮಿಣೀವಿವಾಹಕ್ಕೆ ಹೋಗುವುದನ್ನು ಕಂಡು ಎಲ್ಲ ರಾಜರ ಸಮೂಹ ಬಿಲ್ಲನ್ನೆತ್ತಿಕೊಂಡು ಕನ್ಯೆಯ ರಕ್ಷಣೆಯಲ್ಲಿ ದೃಢಪ್ರಯತ್ನ ಕೈಗೊಂಡಿತು.

ಕೃಷ್ಣವಿವಾಹಕ್ಕೆ ಹೊರಟಿದ್ದನ್ನು ರಾಜರುಗಳು ಕಂಡರೆಂದರೆ ಗೂಢಚಾರರ ಮೂಲಕ 'ಕಂಡ'ರು. ಏಕೆಂದರೆ ಗೂಢಚಾರರೇ ರಾಜರಿಗೆ ಕಣ್ಣುಗಳು.

ಪುರಾ ಪ್ರದಾನತಃ ಸುರೇಕ್ಷಣಾಚ್ಛಲಾದ್ ಬಹಿರ್ಗತಾಮ್ ।
ರಥೇ ನ್ಯವೇಶಯದ್ಧರಿಃ ಪ್ರಪಶ್ಯತಾಂ ಚ ಭೂಭೃತಾಮ್ ॥ ೧೪೫ ॥

ಕನ್ಯಾದಾನಕ್ಕಿಂತ ಮೊದಲಿಗೆ ಕುಲದೇವತಾ ದರ್ಶನದ ನೆಪದಿಂದ ನಗರದಿಂದ ಹೊರಕ್ಕೆ ಬಂದಿದ್ದ ರುಕ್ಮಿಣಿಯನ್ನು ರಾಜರುಗಳು ನೋಡುತ್ತಿದ್ದಂತೆಯೆ ಕೃಷ್ಣ ಎತ್ತಿಕೊಂಡು ರಥದಲ್ಲಿ ಕೂಡಿಸಿದ.

ಇಲ್ಲಿ ರಾಜರುಗಳು ನೋಡುತ್ತಿದ್ದುದು ಕಣ್ಣಾರೆ. ಒಂದು ಕ್ಷಣ ಮನ್ಮಥ ಅವರನ್ನು ಪರವಶರನ್ನಾಗಿ ಮಾಡಿದ್ದರಿಂದ ಸುಮ್ಮನಿದ್ದರೆಂದು ರುಕ್ಮಿಣೀಶ ವಿಜಯದಲ್ಲಿ ಹೇಳಿದೆ.

ಜರಾಸುತಾದಯೋ ರುಷಾ ತಮಭ್ಯಯುಃ ಶರೋತ್ತಮೈಃ ।
ವಿಧಾಯ ತಾನ್ನಿರಾಯುಧಾನ್ ಜಗಾಮ ಕೇಶವಃ ಶನೈಃ ॥ ೧೪೬ ॥

ಜರಾಸಂಧ ಮುಂತಾದವರು ಕ್ರೋಧದಿಂದ ಉತ್ತಮ ಬಾಣಗಳನ್ನೆಸೆಯುತ್ತ ಕೃಷ್ಣನ ಮೇಲೇರಿ ಬಂದರು. ಕೃಷ್ಣ ಅವರನ್ನು ನಿರಾಯುಧರನ್ನಾಗಿ ಮಾಡಿ ನಿರ್ಭಯವಾಗಿ ನಿಧಾನವಾಗಿ ಹೊರಟುಹೋದ.

ಪುನರ್ಗೃಹೀತ ಕಾರ್ಮುಕಾನ್ ಹರಿಂ ಪ್ರಯಾತುಮುದ್ಯತಾನ್ ।
ನ್ಯವಾರಯದ್ಬಲಾಯುಧೋ ಬಲಾದ್ ಬಲೋರ್ಜಿತಾಗ್ರಣೀಃ ॥ ೧೪೭ ॥

ರಾಜರು ಪುನಃ ಬಿಲ್ಲು ಹಿಡಿದು ಕೃಷ್ಣನ ಮೇಲೆ ಆಕ್ರಮಣಕ್ಕೆ ಉದ್ಯತರಾದಾಗ ಬಲಿಷ್ಠರಲ್ಲಿ ಅಗ್ರಗಣ್ಯನೆನಿಸಿದ ಬಲರಾಮ ಬಲಾತ್ಕಾರದಿಂದ ಅವರನ್ನು ತಡೆದ.

ತದಾ ಸಿತಃ ಶಿರೋರುಹೋ ಹರೇರ್ಹಲಾಯುಧೇ ಸ್ಥಿತಃ ।
ಪ್ರಕಾಶಮಾವಿಶದ್ ಬಲಂ ವಿಜೇತುಮತ್ರ ಮಾಗಧಮ್ ॥ ೧೪೮ ॥

ಆಗ ಜರಾಸಂಧನನ್ನು ಪರಾಭವಗೊಳಿಸುವುದಕ್ಕಾಗಿ ಬಲರಾಮನಲ್ಲಿದ್ದ ಹರಿಯ ಶುಕ್ಲಕೇಶರೂಪ ಸ್ಪಷ್ಟವಾಗಿ ಬಲರಾಮನಲ್ಲಿ ಆವೇಶಗೊಂಡಿತ್ತು.

ಸ ತಸ್ಯ ಮಾಗಧೋ ರಣೇ ಗದಾಪ್ರಹಾರಚೂರ್ಣಿತಃ।
ಪಪಾತ ಭೂತಲೇ ಬಲೋ ವಿಜಿತ್ಯ ತಂ ಯಯೌ ಪುರೀಮ್ ॥ ೧೪೯ ॥

ಜರಾಸಂಧ ಬಲರಾಮನ ಗದಾಪ್ರಹಾರದಿಂದ ಜರ್ಜರಿತನಾಗಿ ನೆಲದಲ್ಲಿ ಒರಗಿದ. ಬಲರಾಮ ಹೀಗೆ ಅವನನ್ನು ಪರಾಭವಗೊಳಿಸಿ ದ್ವಾರಕೆಗೆ ತೆರಳಿದ.

ವರೋರುವೇಷಸಂಯುತೋಽಥ ಚೇದಿರಾಟ್ ಸಮಭ್ಯಯಾತ್।
ತಮಾಸಸಾದ ಸಾತ್ಯಕಿರ್ನದನ್ ಮೃಗಾಧಿಪೋ ಯಥಾ ॥ ೧೫೦ ॥

ಬಳಿಕ ಮದುಮಗನ ಒಳ್ಳೆಯ ವೇಷದಿಂದ ಯುಕ್ತನಾಗಿದ್ದ ಶಿಶುಪಾಲ ಬಂದ. ಸಾತ್ಯಕಿ ಸಿಂಹದಂತೆ ಗರ್ಜಿಸುತ್ತ ಅವನನ್ನು ಇದಿರಿಸಿದ.

ಚಿರಂ ಪ್ರಯುಧ್ಯ ತಾವುಭೌ ವರಾಸ್ತ್ರಶಸ್ತ್ರವರ್ಷಿಣೌ।
ಕ್ರುಧಾ ನಿರೀಕ್ಷ್ಯ ತಸ್ಥತುಃ ಪರಸ್ಪರಂ ಸ್ಫುರತ್ತನೂ ॥ ೧೫೧ ॥

ಉತ್ತಮ ಅಸ್ತ್ರಶಸ್ತ್ರಗಳನ್ನು ಸುರಿಸುತ್ತ ಅವರಿಬ್ಬರೂ ದೀರ್ಘಕಾಲ ಯುದ್ಧಮಾಡಿ ಕ್ರೋಧದಿಂದ ಮೈಯಲ್ಲಿ ನಡುಗುತ್ತ ಪರಸ್ಪರ ದಿಟ್ಟಿಸುತ್ತ ನಿಂತರು.

ಸಮಾನಭಾವಮಕ್ಷಮೀ ಶಿನೇಃ ಸುತಾತ್ಮಜಃ ಶರಮ್।
ಅಥೋದ್ಬಬರ್ಹ ತಂ ಶರಂ ಬಲಾನ್ಮಮೋಚ ವಕ್ಷಸಿ ॥ ೧೫೨ ॥

ಶತ್ರು ತನಗೆ ಸಮಾನನೆನಿಸುವುದನ್ನು ಸಹಿಸದ ಸಾತ್ಯಕಿ ಬಾಣವನ್ನೆತ್ತಿಕೊಂಡ. ಬಲವಾಗಿ ಶಿಶುಪಾಲನ ಎದೆಯ ಮೇಲೆ ಅದನ್ನು ಎಸೆದ.

ಸ ತೇನ ತಾಡಿತೋಽಪತದ್ ವಿಸಂಜ್ಞಕೋ ನೃಪಾತ್ಮಜಃ।
ವಿಜಿತ್ಯ ತಂ ಸ ಸಾತ್ಯಕಿರ್ಯಯೌ ಪ್ರಹೃಷ್ಟಮಾನಸಃ ॥ ೧೫೩ ॥

ಶಿಶುಪಾಲ ಆ ಬಾಣದ ಆಘಾತಕ್ಕೆ ಮೂರ್ಛಿತನಾಗಿ ಬಿದ್ದ. ಹೀಗೆ ಶಿಶುಪಾಲನನ್ನು ಪರಾಭವಗೊಳಿಸಿ ಸಾತ್ಯಕಿ ಸಂತುಷ್ಟ ಮನಸ್ಕನಾಗಿ ಹೊರಟುಹೋದ.

ರುಕ್ಮಿಯ ಪರಾಭವ

ಅಥಾಪರೇ ಚ ಯಾದವಾ ವಿಜಿತ್ಯ ತದ್ಬಲಂ ಯಯುಃ।
ಪುರೈವ ರುಕ್ಮಿಪೂರ್ವಕಾಃ ಪ್ರಜಗ್ಮುರಚ್ಯುತಂ ಪ್ರತಿ ॥ ೧೫೪ ॥

ಬಳಿಕ ಬೇರೆ ಯಾದವರೂ ಶಿಶುಪಾಲನ ಸೈನ್ಯವನ್ನು ಪರಾಭವಗೊಳಿಸಿ ಹೋದರು. ಇದಕ್ಕೆ ಮೊದಲೇ ರುಕ್ಮಿ ಮುಂತಾದವರು ಕೃಷ್ಣನನ್ನು ಬೆನ್ನಟ್ಟಿ ಬಂದಿದ್ದರು.

ಸಹೈಕಲವ್ಯಪೂರ್ವಕೈಃ ಸಮೇತ್ಯ ಭೀಷ್ಮಕಾತ್ಮಜಃ।
ಹರಿಂ ವವರ್ಷ ಸಾಯಕೈಃ ಸ ಸಿಂಹವನ್ನ್ಯವರ್ತತ ॥ ೧೫೫ ॥

ಏಕಲವ್ಯ ಮುಂತಾದವರೊಡಗೂಡಿ ರುಕ್ಮಿ ಕೃಷ್ಣನ ಮೇಲೆ ಬಾಣಗಳ ಮಳೆಗರೆದ. ಕೃಷ್ಣ ಸಿಂಹದಂತೆ ಹಿಂದೆ ತಿರುಗಿ ನಿಂತ.

ಅಕ್ಷೌಹಿಣೀತ್ರಯಂ ಹರಿಸ್ತದಾ ನಿಹತ್ಯಸಾಯಕೈಃ।
ಅವಾಹನಾಯುಧಂ ವ್ಯಧಾನ್ನಿಷಾದಪಂ ಶರೈಃ ಕ್ಷಣಾತ್ ॥ ೧೫೬ ॥

ಮೂರು ಅಕ್ಷೋಹಿಣಿ ಸೇನೆಯನ್ನು ಬಾಣಗಳಿಂದ ಸಂಹರಿಸಿ, ಏಕಲವ್ಯನನ್ನು ಕ್ಷಣದಲ್ಲಿ ವಾಹನ ಆಯುಧರಹಿತನನ್ನಾಗಿ ಮಾಡಿದ ಶ್ರೀಕೃಷ್ಣ

ಶರಂ ಶರೀರನಾಶಕಂ ಸಮಾದದಾನಮೀಶ್ವರಮ್।
ಸ ಏಕಲವ್ಯ ಆಶು ತಂ ವಿಹಾಯ ದುದ್ರುವೇ ಭಯಾತ್ ॥ ೧೫೭ ॥

ಶರೀರ ನಾಶಕವಾದ ಬಾಣವನ್ನು ಕೃಷ್ಣ ಎತ್ತಿಕೊಳ್ಳುವುದನ್ನು ಕಂಡು ಏಕಲವ್ಯ ಭಯದಿಂದ ಅವನನ್ನು ಬಿಟ್ಟು ಬೇಗನೆ ಓಡಿದ.

ಧನುರ್ಭೃತಾಂ ವರೇ ಗತೇ ರಣಂ ವಿಹಾಯ ಭೂಭೃತಃ।
ಕರೂಶರಾಜಪೂರ್ವಕಾಃ ಕ್ಷಣಾತ್ ಪ್ರದುದ್ರುವುರ್ಭಯಾತ್ ॥ ೧೫೮ ॥

ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಏಕಲವ್ಯ ಯುದ್ಧವನ್ನು ಬಿಟ್ಟು ಓಡಿದಾಗ ದಂತವಕ್ರ ಮುಂತಾದ ರಾಜರೂ ತಕ್ಷಣವೆ ಭಯದಿಂದ ಪಲಾಯನ ಮಾಡಿದರು.

ಅಥಾಸಸಾದ ಕೇಶವಂ ರುಷಾ ಸ ಭೀಷ್ಮಕಾತ್ಮಜಃ।
ಶರಾಂಬುಧಾರ ಆಶು ತಂ ವಿವಾಹನಂ ವ್ಯಧಾದ್ಧರಿಃ ॥ ೧೫೯ ॥

ಆಗ ರುಕ್ಮಿ ರೋಷದಿಂದ ಬಾಣಗಳ ಮಳೆಗರೆಯುತ್ತಾ ಕೃಷ್ಣನ ಮುಂದೆ ಬಂದ. ಕೃಷ್ಣ ಅವರನ್ನು ಬೇಗನೆ ವಿರಥನನ್ನಾಗಿಸಿದ.

ಚಕರ್ತ ಕಾರ್ಮುಕಂ ಪುನಃ ಸ ಖಡ್ಗ ಚರ್ಮಭೃದ್ಧರೇಃ।
ರಥಂ ಸಮಾರುಹಚ್ಛರೈಶ್ಚಕರ್ತ ಖಡ್ಗಮೀಶ್ವರಃ ॥ ೧೬೦ ॥

ರುಕ್ಮಿಯ ಬಿಲ್ಲನ್ನು ಕೃಷ್ಣ ಕಡಿದ. ರುಕ್ಮಿ ಪುನಃ ಖಡ್ಗ ಚರ್ಮಗಳನ್ನು ಧರಿಸಿ ಕೃಷ್ಣನ ರಥದ ಮೇಲೇರಿ ಬಂದ. ಕೃಷ್ಣ ಅವನ ಖಡ್ಗವನ್ನೂ ಬಾಣಗಳಿಂದ ತುಂಡರಿಸಿದ.

ಶರೈರ್ವಿತಸ್ತಿಮಾತ್ರಕೈರ್ವಿಧಾಯ ತಂ ನಿರಾಯುಧಮ್ ।
ಪ್ರಿಯಾವಚಃ ಪ್ರಪಾಲಯನ್ ಜಘಾನ ನೈನಮೀಶ್ವರಃ ॥ ೧೬೧ ॥

ಗೇಣುದ್ದದ ಬಾಣಗಳಿಂದಲೆ ಕೃಷ್ಣ ರುಕ್ಮಿಯನ್ನು ನಿರಾಯುಧಗೊಳಿಸಿದ. ಪ್ರಿಯೆಯ ಮಾತನ್ನು ನಡೆಸಿಕೊಡುವುದಕ್ಕಾಗಿ ರುಕ್ಮಿಯನ್ನು ಕೊಲ್ಲದೆ ಬಿಟ್ಟ.

ರುಕ್ಮಿ ಎಷ್ಟಾದರೂ ರುಕ್ಮಿಯ ಒಡಹುಟ್ಟಿದ ಅಣ್ಣ. ಲೋಕ ರೀತಿಯಿಂದ ಅವಳು ಅವನನ್ನು ಕೃಷ್ಣನ ಕೈಯಲ್ಲಿ ಸಾಯಗೊಡಲಾರಳು. ಅದರಿಂದ 'ಕೊಲ್ಲಬೇಡ' ಎಂದಳು. ಕೃಷ್ಣ ಆ ಮಾತನ್ನು ನಡೆಸಿಕೊಟ್ಟ.

ನಿಬಧ್ಯ ಪಂಚಚೂಡಿನಂ ವಿಧಾಯಂ ತಂ ವ್ಯಸರ್ಜಯತ್ ।
ಜಗಜ್ಜನಿತ್ರಯೋರಿದಂ ವಿಡಂಬನಂ ರಮೇಶಯೋಃ ॥ ೧೬೨ ॥

ಕೃಷ್ಣ ರುಕ್ಮಿಯನ್ನು ಬಂಧಿಸಿ ಪಂಚಶಿಖಿನನ್ನಾಗಿ ಮಾಡಿಬಿಟ್ಟು ಬಿಟ್ಟ ಜಗದ ತಾಯಿತಂದೆಯರಾದ ರುಕ್ಮಿಣೀ ಕೃಷ್ಣರಿಗೆ ಇದು ಕೇವಲ ಲೋಕವಿಡಂಬನ.

'ಇದು' ಎಂದರೆ ಕೃಷ್ಣ ರುಕ್ಮಿಯನ್ನು ಕೊಲ್ಲಲು ಉದ್ಯುಕ್ತನಾಗುವುದು, ರುಕ್ಮಿಣಿ ಬೇಡವೆನ್ನುವುದು. ಇಂಥ ಅಭಿಪ್ರಾಯ ಭೇದ ರಮಾನಾರಾಯಣರಲ್ಲಿ ಎಂದೂ ಇಲ್ಲ. ಇದು ಕೇವಲ ಲೋಕರೀತಿಯ ಅನುಕರಣೆಯಷ್ಟೆ. ಕೃಷ್ಣ ರುಕ್ಮಿಯನ್ನು ಬಲಾತ್ಕಾರವಾಗಿ 'ಪಂಚಶಿಖಿ'ನನ್ನಾಗಿ ಮಾಡಿದ್ದು ಐದು ಜುಟ್ಟುಗಳನ್ನಿಟ್ಟು ತಲೆ ಬೋಳಿಸಿದುದು, ಮಹಾ ಅಪಮಾನಕರ. ಐದು ಜುಟ್ಟುಗಳನ್ನಿಟ್ಟುದು ಹರಿವಂಶದಲ್ಲಿ ಉಕ್ತವಾಗಿದೆ. ಭಾಗವತದಲ್ಲಿ ವಿರೂಪಗೊಳಿಸಿದನೆಂದು ಮಾತ್ರ ಹೇಳಿದೆ. ಹರಿವಂಶಾನುಸಾರ ಐದು ಜುಟ್ಟುಗಳನ್ನಿಟ್ಟುದೇ ವಿರೂಪತೆ ಎಂದು ಸತ್ಯಧರ್ಮರು ಹೇಳುತ್ತಾರೆ. ರುಕ್ಮಿಣೀಶ ವಿಜಯದಲ್ಲಿ ತಲೆ ಬೋಳಿಸಿದನೆಂದು ಹೇಳಿ ಯಾರಿಂದ ಲಕ್ಷ್ಮಿ ದೂರ ತೊಲಗುವಳೋ ಅವನು ತಲೆಬೋಳಿಸಿಕೊಳ್ಳುವುದೆ ಯುಕ್ತ. 'ರುಕ್ಮಿ' ಎಂದರೆ ಚಿನ್ನ ಉಳ್ಳವ, ಶ್ರೀಮಂತ, ಅವನಿಂದ ರುಕ್ಮಿಣೀ ರೂಪಿ ರಮೆ ದೂರ ಹೋದುದರಿಂದ ಅವನ ತಲೆ ಬೋಳಿಸಿದ ಕೃಷ್ಣ ಎಂದು ಹೇಳಿದೆ-

'ಅಚೀಕ್ಲಪನ್ಮುಂಡಿತ ಮೂರ್ಧಜಂ ತಂ'

ಸದೈಕಮಾನಸಾವಪಿ ಸ್ವಧರ್ಮಶಾಸಕೌ ನೃಣಾಮ್ ।
ರಮಾ ಹರಿಶ್ಚತತ್ರ ತೌ ವಿಜಹ್ರತುಶ್ಚ ರುಕ್ಮಿಣಾ ॥ ೧೬೩ ॥

ರುಕ್ಮಿಣೀ ಕೃಷ್ಣರು ಸದಾ ಒಂದೇ ಮನಸ್ಸಿನವರಾದರೂ ಗೃಹಸ್ಥರಿಗೆ ಸ್ವಧರ್ಮವನ್ನು ತೋರುತ್ತ ರುಕ್ಮಿಯೊಂದಿಗೆ ಆಟವಾಡಿದರು.

ಅಥಾಸಸಾದ ಸೌಭರಾಟ್ ಹರಿಂ ಶರಾಂಬುವರ್ಷಣಃ।
ಹರಿಃ ಶರಂ ಯಮೋಽಪಮಂ ಮುಮೋಚ ತಸ್ಯ ವಕ್ಷಸಿ ॥ ೧೬೪ ॥

ಬಳಿಕ ಸಾಲ್ವ ಬಾಣಗಳ ಮಳೆಗರೆಯುತ್ತ ಕೃಷ್ಣನ ಬಳಿಗೆ ಬಂದ. ಕೃಷ್ಣ ಯಮನಂಥ ಭಯಂಕರ ಬಾಣವನ್ನು ಅವನ ಎದೆಗೆ ಎಸೆದ.

ಶರೇಣ ತೇನ ಪೀಡಿತಃ ಪಪಾತ ಮಂದಚೇಷ್ಟಿತಃ।
ಚಿರಾತ್ ಸ ಸಂಜ್ಞಾಕ್ಷೋಽಗಮತ್ ತ್ರಿನೇತ್ರತೋಷಣೇಚ್ಛಯಾ ॥ ೧೬೫ ॥

ಸಾಲ್ವ ಆ ಬಾಣದಿಂದ ಗಾಯಗೊಂಡು ನಿಶ್ಚೇಷ್ಟನಾಗಿ ಬಿದ್ದ. ಬಳಿಕ ನಿಧಾನವಾಗಿ ಎಚ್ಚರಗೊಂಡು ಶಿವನನ್ನು ಒಲಿಸಿಕೊಳ್ಳುವ ಬಯಕೆಯಿಂದ ಅರಣ್ಯಕ್ಕೆ ನಡೆದ.

ಸಮಸ್ತರಾಜಸನ್ನಿಧಾವಯಾದವೀಂ ಮಹೀಮಿಮಾಮ್।
ಕರಿಷ್ಯ ಇತ್ಯುದೀರ್ಯ ಸ ವ್ಯಧಾತ್ತಪೋಽತಿದುಶ್ಚರಮ್ ॥ ೧೬೬ ॥

ಎಲ್ಲ ರಾಜರ ಸಮಕ್ಷಮದಲ್ಲಿ 'ನಾನು ಈ ಭೂಮಿಯ ಮೇಲೆ ಯಾದವರನ್ನು ಇಲ್ಲದಂತೆ ಮಾಡುವೆನು' ಎಂದು ಹೇಳಿ ಅತಿ ದುಷ್ಕರವಾದ ತಪಸ್ಸನ್ನು ಮಾಡತೊಡಗಿದ.

ಅಥೋ ವಿವೇಶ ಕೇಶವಃ ಪುರೀಂ ಕುಶಸ್ಥಲೀಂ ಪ್ರಭುಃ।
ಪ್ರಿಯಾಯುತೋಽಬ್ಜಜಾದಿಭಿಃ ಸಮೀಡಿತಃ ಸುರೇಶ್ವರೈಃ ॥ ೧೬೭ ॥

ಬಳಿಕ ಪ್ರಭು ಶ್ರೀಕೃಷ್ಣ ಪ್ರಿಯೆಯಾದ ರುಕ್ಮಿಣಿಯೊಂದಿಗೆ ಬ್ರಹ್ಮಾದಿ ದೇವತೆಗಳಿಂದ ಸ್ತೋತ್ರ ಮಾಡಿಸಿಕೊಳ್ಳುತ್ತ ದ್ವಾರಕಾಪುರಿಯನ್ನು ಪ್ರವೇಶಿಸಿದ.

ಬಲರಾಮ ರೇವತೀ ವಿವಾಹ

ಪುರಾ ತತೋ ಹಲಾಯುಧಃ ಪ್ರಿಯಾಂ ನಿಜಾಂ ಪುರಾಪಿ ಹಿ।
ಸ ವಾರುಣೀಸಮಾಹ್ವಯಾಮವಾಪ ರೇವತೀಂ ಪ್ರಭುಃ ॥ ೧೬೮ ॥

ಇದಕ್ಕಿಂತ ಹಿಂದೆಯೆ ಪ್ರಭು ಬಲರಾಮ ಮೊದಲೂ ತನಗೆ ವಾರುಣಿ ಎಂಬ ಹೆಸರಿನ ಪತ್ನಿಯಾಗಿದ್ದ ರೇವತಿಯನ್ನು ಮದುವೆಯಾಗಿದ್ದನು.

ಪತಿಂ ಯಥಾನುರೂಪಿಣಂ ತದೀಯಮೇವ ಪೂರ್ವಕಮ್।
ಪಿತಾ ತದೀಯ ಐಚ್ಛತ ಪ್ರವೇತ್ತುಮಬ್ಜಸಂಭವಾತ್ ॥ ೧೬೯ ॥

ರೇವತಿಯ ತಂದೆ ಕಕುದ್ಮಿ ಅವಳಿಗೆ ಪೂರ್ವಜನ್ಮದಲ್ಲಿಯೂ ಪತಿಯಾಗಿದ್ದ ಅನುರೂಪನಾದ ಪತಿಯನ್ನು ಬ್ರಹ್ಮನಿಂದ ತಿಳಿಯಲು ಬಯಸಿದ.

ರೇವತಿಯ ತಂದೆ ರಾಜಾ ಕಕುದ್ಮಿ. ಈತ ಕುಶಸ್ಥಲಿಯನ್ನಾಳಿದ ರಾಜಾ ರೇವತನ ನೂರುಮಂದಿ ಮಕ್ಕಳಲ್ಲಿ ಜ್ಯೇಷ್ಠಪುತ್ರ. ರೈವತ ಎಂಬುದು ಇವನ ನಾಮಾಂತರ.

ಸ ತತ್ಸದೋಗತೋ ವರಾತ್ ತದೀಯತಃ ಪ್ರಗೀತಿಕಾಮ್ ।
ನಿಶಮ್ಯ ನಾವಿದದ್ ಗತಂ ಯುಗೋರುಕಾಲಪರ್ಯಯಮ್ ॥ ೧೭೦ ॥

ಕಕುದ್ಮಿ ಬ್ರಹ್ಮನ ವರದಿಂದ ಬ್ರಹ್ಮನ ಓಲಗಕ್ಕೆ ಹೋಗಿ ಸಂಗೀತ ಶ್ರವಣಮಾಡುತ್ತ ಯುಗರೂಪ ಕಾಲವೆ ಬಹಳ ಉರುಳಿದುದನ್ನೂ ತಿಳಿಯಲಿಲ್ಲ.

ಹಾಹ ಹೂಹೂ ಗಂಧರ್ವರ ಗಾನ ಆಗ ಮೇರುಶಿಖರದ ಬ್ರಹ್ಮಸದನದಲ್ಲಿ ನಡೆದಿತ್ತು. ಗಾಂಧಾರ ಗ್ರಾಮದ ಆ ಗಾನ ದೇವತೆಗಳಿಗೇ ಯೋಗ್ಯ, ಅದ್ಭುತ, ಮಾನವರನ್ನು ಕ್ಷಣದಲ್ಲಿ ಮೈಮರೆಸಿ ಬಿಡುತ್ತದೆ. ಮತ್ತು ಬ್ರಹ್ಮಸದನದ ಕಾಲಮಾನವು ಬಹಳ ದೀರ್ಘವಾಗಿದ್ದು ಅಲ್ಲಿಯ ಒಂದುಕ್ಷಣ ಇಲ್ಲಿ ಅನೇಕ ಯುಗವಾಗಿರುತ್ತದೆ. ಅಂದರೆ, ಬ್ರಹ್ಮನ ಒಂದು ಹಗಲು ಮಾನವನಿಗೆ ನಾನೂರ ಮೂವತ್ತೆರಡು ಕೋಟಿ ವರ್ಷ, ಒಂದು ಸಾವಿರ ಮಹಾಯುಗಗಳು. ಅದರಿಂದ ಕಕುದ್ಮಿಗೆ ಅನೇಕ ಯುಗಗಳು ಕ್ಷಣದಂತೆ ಕಳೆದುಹೋದುವು.

ನರಾನಯೋಗ್ಯಗೀತಿಕಾ ವಿಮೋಹಯೇತ್ ತತೋ ನೃಪಃ ।
ಸ ಮೂಢಬುದ್ಧಿರಂತತೋಽಲ್ಪಕಾಲ ಇತ್ಯಮನ್ಯತ ॥ ೧೭೧ ॥

ಮಾನವರನ್ನು ಅವರಿಗೆ ಯೋಗ್ಯವಲ್ಲದ ಸಂಗೀತ ಮೈಮರೆಸುತ್ತದೆ. ಅದರಿಂದ ರಾಜಾ ಕಕುದ್ಮಿ ಬುದ್ಧಿಮೋಹ ಹೊಂದಿ ಆ ಸಂಗೀತದ ಕೊನೆಯಲ್ಲಿ ಸ್ವಲ್ಪವೇ ಕಾಲ ಕಳೆದಿದೆ ಎಂದುಕೊಂಡ.

ಸ ಮೂರ್ಛಿತಃ ಪ್ರಬೋಧಿತೋಽಬ್ಜಜೇನ ತಂ ತ್ವಪೃಚ್ಛತ ।
ಸುತಾಪತಿಂ ಬಲಂ ಚ ಸೋಽಬ್ರವೀದ್ ಯುಗಾತ್ಯಯೇ ಬಹೌ ॥ ೧೭೨ ॥

ಮೈಮರೆತಿದ್ದ ಅವನನ್ನು ಬ್ರಹ್ಮ ಎಚ್ಚರಿಸಿದ. ಆಗ, ಬಹು ಯುಗಗಳು ಕಳೆದಿದ್ದಾಗ, ಅವನು ತನ್ನ ಮಗಳಿಗೆ ಪತಿಯಾಗುವವನು ಯಾರೆಂದು ಕೇಳಿದ. 'ಬಲರಾಮ' ಎಂದ ಬ್ರಹ್ಮ.

ಬಹುಯುಗಗಳೆಂದರೆ ಇಪ್ಪತ್ತೇಳು ಚತುರ್ಯುಗಗಳು ಕಳೆದಿದ್ದವು. ಇಪ್ಪತ್ತೆಂಟನೆ ದ್ವಾಪರಯುಗ ನಡೆಯುತ್ತಿತ್ತು.

ಸ ರೈವತೋ ಬಲಾಯ ತಾಂ ಪ್ರದಾಯ ಗಂಧಮಾದನಮ್ ।
ಗತೋಽತ್ರ ಚೀರ್ಣಸತ್ತಪಾ ಅವಾಪ ಕೇಶವಾಂತಿಕಮ್ ॥ ೧೭೩ ॥

ಆ ರೈವತ ರಾಜ ಬಲರಾಮನಿಗೆ ರೇವತಿಯನ್ನಿತ್ತು ಗಂಧಮಾದನ ಪರ್ವತಕ್ಕೆ ಹೋಗಿ ತಪಸ್ಸು ಮಾಡಿ ಹರಿಯ ಸನ್ನಿಧಿಯನ್ನು ಸೇರಿದ.

ಬಲೋಽಪಿ ತಾಂ ಪುರಾತನಪ್ರಮಾಣಸಮ್ಮಿತಾಂ ಪ್ರಭುಃ।
ಹಲೇನ ಚಾತ್ಮನಾ ಸಮಾಂ ಚಕಾರ ಸತ್ಯವಾಂಛಿತಃ ॥ ೧೭೪ ॥

ಸತ್ಯಸಂಕಲ್ಪನಾದ ಪ್ರಭು ಬಲರಾಮ ಪೂರ್ವಯುಗದ ಪ್ರಮಾಣಕ್ಕೆ ಸಮಳಾಗಿದ್ದ ರೇವತಿಯನ್ನು ಹಲಾಯುಧದಿಂದ ಜಗ್ಗಿ ತನಗೆ ಸಮಳನ್ನಾಗಿ ಮಾಡಿಕೊಂಡ.

ತಯಾ ರತಃ ಸುತಾವುಭೌ ಶಠೋಲ್ಮುಕಾಭಿಧಾವಧಾತ್ ।
ಪುರಾರ್ಯಮಾಂಶಕೌ ಸುರಾವುದಾರಚೇಷ್ಟಿತೋ ಬಲಃ ॥ ೧೭೫ ॥

ಉತ್ತಮ ಕಾರ್ಯಗಳನ್ನೇ ಮಾಡುವ ಬಲರಾಮ ರೇವತಿಯೊಡನೆ ರಮಿಸಿ ಶಠ ಉಲ್ಮುಕ ಎಂಬ ಇಬ್ಬರು ಮಕ್ಕಳನ್ನು ಹುಟ್ಟಿಸಿದ. ಅವರು ಹಿಂದೆ ಅರ್ಯಮ ಮತ್ತು ಅಂಶ ಎಂಬ ಇಬ್ಬರು ದೇವತೆಗಳು.

ಧಾತಾರ್ಯಮಾ ಚ ಮಿತ್ರಶ್ಚವರುಣೋಽಶೋ ಭಗಸ್ತಥಾ।
ಇಂದ್ರೋ ವಿವಸ್ವಾನ್ ಪೂಷಾಚ ತ್ವಷ್ಟಾ ಚ ಸವಿತಾ ತಥಾ।
ಕಥಿತೋ ವಿಷ್ಣುರಿತ್ಯೇಷ ಕಾಶ್ಯಪೇಯೋ ಗಣಸ್ತಥಾ।

ಧಾತ, ಆರ್ಯಮ, ಮಿತ್ರ, ವರುಣ, ಅಂಶ, ಭಗ, ಇಂದ್ರ, ವಿವಸ್ವಾನ್, ಪೂಷ, ತ್ವಷ್ಟ, ಸವಿತ, ವಿಷ್ಣು ಎಂದು ಹರಿವಂಶದಲ್ಲಿ ಹೇಳಿದ ದ್ವಾದಶಾದಿತ್ಯದಲ್ಲಿ ಇಬ್ಬರು ಅರ್ಯಮ ಅಂಶ ಎಂಬುವರು ಶಠ ಉಲ್ಮುಕರಾಗಿ ಜನಿಸಿದರು.

ರುಕ್ಮಿಣೀ ವಿವಾಹ

ಜನಾರ್ದನಶ್ಚ ರುಕ್ಮಿಣೀಕರಂ ಶುಭೇ ದಿನೇಽಗ್ರಹೀತ್ ।
ಮಹೋತ್ಸವಸ್ತದಾಭವತ್ ಕುಶಸ್ಥಲೀನಿವಾಸಿನಾಮ್ ॥ ೧೭೬ ॥

ಶ್ರೀಕೃಷ್ಣನು ಒಂದು ಶುಭದಿನದಲ್ಲಿ ರುಕ್ಮಿಣಿಯ ಪಾಣಿಗ್ರಹಣ ಮಾಡಿದ. ಆಗ ದ್ವಾರಕವಾಸಿಗಳಿಗೆ ಮಹಾಸಂಭ್ರಮವಾಯಿತು.

ಚತುರ್ಮುಖೇಶಪೂರ್ವಕಾಃ ಸುರಾ ವಿಯತ್ಯವಸ್ಥಿತಾಃ।
ಪ್ರತುಷ್ಟುವುರ್ಜನಾರ್ದನಂ ರಮಾಸಮೇತಮವ್ಯಯಮ್ ॥ ೧೭೭ ॥

ಬ್ರಹ್ಮರುದ್ರಾದಿ ದೇವತೆಗಳು ಆಕಾಶದಲ್ಲಿ ನಿಂತು ನಾಶರಹಿತನಾದ ರುಕ್ಮಿಣೀಸಮೇತನಾದ ಕೃಷ್ಣನನ್ನು ಸ್ತೋತ್ರಗೈದರು.

ಮುನೀಂದ್ರ ದೇವಗಾಯಕಾದಯೋಽಪಿ ಯಾದವೈಃ ಸಹ।
ವಿಚೇರುರುತ್ತಮೋತ್ಸವೇ ರಮಾರಮೇಶಯೋಗಿನಿ ॥ ೧೭೮ ॥

ರುಕ್ಮಿಣೀಕೃಷ್ಣರ ವಿವಾಹ ಮಹೋತ್ಸವದಲ್ಲಿ ಋಷಿಗಳು ಗಂಧರ್ವರು ಮುಂತಾದವರು ಯಾದವರೊಂದಿಗೆ ಓಡಾಡಿದರು.

ಸುರಾಂಶಕಾಶ್ಚ ಯೇ ನೃಪಾಃ ಸಮಾಹುತಾ ಮಹೋತ್ಸವೇ।
ಸಪಾಂಡವಾಃ ಸಮಾಯಯುರ್ಹರಿಂ ರಮಾಸಸಮಾಯುತಮ್ ॥ ೧೭೯ ॥

ದೇವಾಂಶ ಸಂಭೂತರಾದ ಪಾಂಡವರು ಮುಂತಾದ ರಾಜರು ಮಹೋತ್ಸವದಲ್ಲಿ ಆಹ್ವಾನಿತರಾಗಿ ರುಕ್ಮಿಣೀ ಸಮೇತನಾದ ಕೃಷ್ಣನ ಬಳಿಗೆ ಬಂದರು.

ಸಮಸ್ತಲೋಕಸುಂದರೌ ಯುತೌ ರಮಾರಮೇಶ್ವರೌ।
ಸಮೀಕ್ಷ್ಯ ಮೋದಮಾಯಯುಃ ಸಮಸ್ತಲೋಕಸಜ್ಜನಾಃ ॥ ೧೮೦ ॥

ಸರ್ವಲೋಕ ಸುಂದರರಾದ ರುಕ್ಮಿಣೀಕೃಷ್ಣರನ್ನು ಜೊತೆಯಾಗಿ ನೋಡಿ ಸಕಲ ಲೋಕಗಳ ಸಜ್ಜನರು ಆನಂದಪಟ್ಟರು.

ಪ್ರದ್ಯುಮ್ನನ ಜನನ

ತಯಾ ರಮನ್ ಜನಾರ್ದನೋ ವಿಯೋಗಶೂನ್ಯಯಾ ಸದಾ।
ಅಧತ್ತ ಪುತ್ರಮುತ್ತಮಂ ಮನೋಭವಂ ಪುರಾತನಮ್ ॥ ೧೮೧ ॥

ಶ್ರೀಕೃಷ್ಣ ನಿತ್ಯಾವಿಯೋಗಿನಿಯಾದ ರುಕ್ಮಿಣಿಯೊಡನೆ ರಮಿಸಿ ಹಿಂದೆಯೂ ಮನ್ಮಥನೆಂಬ ಪುತ್ರನೇ ಆಗಿದ್ದ ಉತ್ತಮ ಪುತ್ರನನ್ನು ಹುಟ್ಟಿಸಿದ.

ಚತುಸ್ತನೋರ್ಹರೇಃ ಪ್ರಭೋಸ್ಸ್ಮತೀಯರೂಪಸಂಯುತಃ।
ತತಸ್ತದಾಹ್ವಯೋಽಭವತ್ ಸ ರುಕ್ಮಿಣೇಸುತೋ ಬಲೀ ॥ ೧೮೨ ॥

ಬಲಿಷ್ಠನಾದ ಆ ರುಕ್ಮಿಣೀಪುತ್ರ ವಾಸುದೇವಾದಿ ಚತುರ್ಮೂರ್ತಿಯಾದ ಹರಿಯ ಮೂರನೇ ರೂಪದಿಂದ ಯುಕ್ತನಾದ್ದರಿಂದ ಆ ರೂಪದ ಹೆಸರಿನವನಾದ.

ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂದು ಚತುರ್ಮೂರ್ತಿಯಾದ ಹರಿಯ ಮೂರನೇ ರೂಪ ಪ್ರದ್ಯುಮ್ನ. ಅವನು ರುಕ್ಮಿಣೀ ಪುತ್ರನಾಗಿ ಜನಿಸಿದ ಮನ್ಮಥದಲ್ಲಿ ಆವಿಷ್ಟನಾದ್ದರಿಂದ ಆ ಪುತ್ರ ಪ್ರದ್ಯುಮ್ನನೆನಿಸಿದ.

ಶಂಬರಾಸುರ ವಧೆ

ಪುರೈವ ಮೃತ್ಯವೇಽವದತ್ತಮೇವ ಶಂಬರಸ್ಯ ಹ।
ಪ್ರಜಾತಮಬ್ಜಜಾಂಕಜಸ್ತವಾಂತಕೋಽಯಮಿತ್ಯಪಿ ॥ ೧೮೩ ॥

ಪ್ರದ್ಯುಮ್ನ ಹುಟ್ಟುವುದಕ್ಕೆ ಮೊದಲೇ ನಾರದರು ಶಂಬರಾಸುರನಿಗೆ ಈತ ನಿನಗೆ ಮೃತ್ಯುವಾಗಲಿರುವನೆಂದಿದ್ದರು. ಹುಟ್ಟಿದ ಮೇಲೂ 'ಈತ ನಿನ್ನ ಮೃತ್ಯು' ಎಂದರು.

'ಕೃಷ್ಣನಿಂದ ರುಕ್ಮಿಣಿಯಲ್ಲಿ ಪ್ರದ್ಯುಮ್ನನೆಂಬ ಮಗ ಹುಟ್ಟುತ್ತಾನೆ. ಅವನಿಂದ ನಿನಗೆ ಮರಣ' ಎಂದು ನಾರದರು ಶಂಬರಾಸುರನಿಗೆ ಹಿಂದೆಯೆ ಭವಿಷ್ಯನುಡಿದಿದ್ದರು. ಬಳಿಕ ಪ್ರದ್ಯುಮ್ನ ಹುಟ್ಟಿದ ಮೇಲೂ 'ನಿನ್ನ ಮೃತ್ಯು ಪ್ರದ್ಯುಮ್ನ ಹುಟ್ಟಿದ್ದಾನೆ' ಎಂದರು, ಎಂದು ಜನಾರ್ದನೀಯದಲ್ಲಿ ವ್ಯಾಖ್ಯಾನವಿದೆ. ಕಶ್ಯಪರಿಂದ ದನುವಿನಲ್ಲಿ ಹುಟ್ಟಿದ ಮಹಾದಾನವರಲ್ಲಿ ಮೊದಲಿನವ ವಿಪ್ರಚಿತ್ತಿ. ಎರಡನೆಯವನೇ ಈ ಶಂಬರ. ಇವನು ಮಾಯೆಯಲ್ಲಿ ನಿಪುಣ.

ಸ ಮಾಯಯಾ ಹರೇಃ ಸುತಂ ಪ್ರಗೃಹ್ಯ ಸೂತಿಕಾಗೃಹಾತ್ ।
ಅವಾಕ್ಷಿಪನ್ಮಹೋದಧಾವುಪೇಕ್ಷಿತೋಽರಿಪಾಣಿನಾ ॥ ೧೮೪ ॥

ಶಂಬರ ಮಾಯೆಯಿಂದ ಪ್ರದ್ಯುಮ್ನನನ್ನು ಪ್ರಸವ ಗೃಹದಿಂದಲೆ ಎತ್ತಿ ತಂದು ಸಮುದ್ರದಲ್ಲಿ ಎಸೆದ. ಆಗ ಕೃಷ್ಣ ಅವನನ್ನು ಉಪೇಕ್ಷಿಸಿ ಬಿಟ್ಟಿದ್ದ.

ಮಗುವಿಗೆ ಇನ್ನೂ ಏಳು ದಿವಸವಾಗಿರಲಿಲ್ಲ. ನಡುರಾತ್ರಿ ಶಂಬರ ಮಾಯೆಯಿಂದ ಮಗುವನ್ನೆತ್ತಿ ಸಮುದ್ರದಲ್ಲಿ ಎಸೆದಿದ್ದ. ಇದಕ್ಕೆ ಪ್ರಚೋದನೆ ನಾರದರಿಂದ ದೊರಕಿತ್ತು. ಈ ಮಗು ಪ್ರದ್ಯುಮ್ನ ನಿನಗೆ ಮೃತ್ಯುವಾಗಲಿದ್ದಾನೆ ಎಂದಿದ್ದರು. ಇದು ಶಂಬರನಿಂದ ಅಪರಾಧ ಮಾಡಿಸಿ ಪ್ರದ್ಯುಮ್ನನ ಕೈಯಿಂದ ಅವನನ್ನು ಕೊಲ್ಲಿಸಬೇಕೆನ್ನುವ ಅಭಿಪ್ರಾಯದಿಂದ. ಕೃಷ್ಣನೂ ಈ ಅಭಿಪ್ರಾಯದಿಂದಲೆ ಏನೂ ತಿಳಿಯದವನಂತಿದ್ದು ಶಂಬರನನ್ನು ಉಪೇಕ್ಷಿಸಿ ಬಿಟ್ಟಿದ್ದ.

ತಮಗ್ರಸಜ್ಜಲೇಚರಃ ಸ ದಾಶಹಸ್ತಮಾಗತಃ
ಕುಮಾರಮಸ್ಯ ತೂದರೇ ನಿರೀಕ್ಷ್ಯ ಶಂಬರೇ ದದುಃ ॥ ೧೮೫ ॥

ವಿಪಾಟ್ಯ ಮತ್ಸ್ಯಕೋದರಂ ಸ ಶಂಬರಃ ಕುಮಾರಕಮ್ ।
ನ್ಯವೇದಯನ್ಮನೋಭವಪ್ರಿಯಾಕರೇ ಸುರೂಪಿಣಮ್ ॥ ೧೮೬ ॥

ಪ್ರದ್ಯುಮ್ನನನ್ನು ಒಂದು ಮೀನು ನುಂಗಿತು. ಮೀನು ಬೆಸ್ತನ ಕೈಗೆ ಸಿಕ್ಕಿತು. ಅವರು ಮೀನಿನ ಹೊಟ್ಟೆ ಬಗಿದು ಅದರೊಳಗೆ ಮಗುವಿರುವುದನ್ನು ಕಂಡು ಶಂಬರನಿಗೆ ಕೊಟ್ಟರು. ಮುದ್ದಾದ ಆ ಮಗುವನ್ನು ಶಂಬರ ರತಿಯ ಕೈಯಲ್ಲಿತ್ತ.

ಅನಂಗತಾಮುಪಾಗತೇ ಪುರಾ ಹರೇಣ ಸಾಂಗಜೇ ।
ವಂಶ ವಿರಿಂಚಶಾಪತೋ ಜಗಾಮ ಶಂಬರಸ್ಯ ಹಿ ॥ ೧೮೭ ॥

ಹಿಂದೆ ಶಿವನಿಂದ ಮನ್ಮಥ ಸುಟ್ಟು ಅನಂಗನೆನಿಸಿದಾಗ ರತಿ ಬ್ರಹ್ಮಶಾಪ ಪ್ರಯುಕ್ತ ಶಂಬರನ ವಶವಾಗಿದ್ದಳು.

ಪುರಾ ಹಿ ಪಂಚಭರ್ತೃಕಾಂ ನಿಶಮ್ಯ ಕಂಜಜೋದಿತಾಮ್ ।
ಜಹಾಸ ಪಾರ್ಷತಾತ್ಮಜಾಂ ಶಶಾಪ ತಾಂ ತತಸ್ತ್ವಜಃ ॥ ೧೮೮ ॥

ಭವಾಸುರೇಣ ದೂಷಿತೇತಿ ಸಾ ತತೋ ಹಿ ಮಾಯಯಾ ।
ಪಿಧಾಯ ತಾಂ ನಿಜಾಂ ತನುಂ ಜಗಾಮ ಚಾನ್ಯಯಾಽಸುರಮ್ ॥ ೧೮೯ ॥

ಹಿಂದೆ ದ್ರೌಪದಿಗೆ ಐದು ಮಂದಿ ಪತಿಗಳೆಂದು ಬ್ರಹ್ಮ ಹೇಳಿದ್ದನ್ನು ಕೇಳಿ ರತಿ ನಕ್ಕಿದ್ದಳು. ಆಗ 'ನೀನು ಅಸುರನಿಂದ ದೂಷಿತಳಾಗೆ'ದು ಬ್ರಹ್ಮ ಅವಳಿಗೆ ಶಾಪವಿತ್ತ. ಅವಳು ಮಾಯೆಯಿಂದ ತನ್ನ ನಿಜರೂಪವನ್ನು ಮರೆಮಾಡಿ ಬೇರೆ ರೂಪದಿಂದ ಶಂಬರನ ಸಂಗ ಮಾಡಿದಳು.

ಬ್ರಹ್ಮನ ಶಾಪ ಪ್ರಯುಕ್ತ ರತಿ ಶಂಬರನಿಂದ ಅಪಹೃತಳಾಗಿ ಮಾಯಾವತಿ ಎಂಬ ಹೆಸರಿನಿಂದ ಅವನ ರಾಣಿಯಾದಳು. ಆದರೆ ಅವಳು ನಿಜರೂಪದಲ್ಲಿ ತನ್ನ ಶೀಲ ಕಾಪಾಡಿಕೊಂಡಿದ್ದಳು. ಮಾಯೆಯಿಂದ ತನ್ನಂತಿರುವ ಇನ್ನೊಂದು ರೂಪದಿಂದ ಅಸುರನ ಬಳಿ ಇದ್ದಳು. ಶಿವನ ವರಬಲದಿಂದ ಪ್ರದ್ಯುಮ್ನ ಬರುವನೆಂದು ತಿಳಿದು ಅವನಿಗಾಗಿ ಕಾದಿದ್ದಳು. ಮೀನಿನ ಹೊಟ್ಟೆಯಲ್ಲಿ ಸಿಕ್ಕಿದ ಮಗು ಮನ್ಮಥನ ಅವತಾರವೆಂದು ನಾರದರು ಮಾಯಾವತಿಗೆ ರಹಸ್ಯವಾಗಿ ತಿಳಿಸಿದರು. ಅದರಿಂದ ಅವಳು ಮಗುವನ್ನು ಚೆನ್ನಾಗಿ ಆರೈಕೆ ಮಾಡಿದಳು.

ಗೃಹೇಽಪಿ ಸಾಽಸುರೇ ಸ್ಥಿತಾ ನಿಜಸ್ವರೂಪತೋಽಸುರಮ್ ।
ನ ಗಚ್ಛತಿ ಸ್ಮ ಸಾ ಪತಿಂ ನಿಜಂ ಸಮೀಕ್ಷ್ಯ ಹರ್ಷಿತಾ ॥ ೧೯೦ ॥

ಶಂಬರನ ಅರಮನೆಯಲ್ಲಿದ್ದರೂ ರತಿ ನಿಜಸ್ವರೂಪದಿಂದ ಅಸುರನ ಸಂಗ ಮಾಡುತ್ತಿರಲಿಲ್ಲ. ಅವಳು ಪತಿಯನ್ನು ಕಂಡು ಹರ್ಷಿತಳಾದಳು.

ರಸಾಯನೈಃ ಕುಮಾರಕಂ ವ್ಯವರ್ಧಯದ್ ರತಿಃ ಪತಿಮ್ ।
ಸ ಪೂರ್ಣಯೌವನೋಽಭವಚ್ಚತುರ್ಭಿರೇವ ವತ್ಸರೈಃ ॥ ೧೯೦ ॥

ಪತಿಯಾದ ಕುಮಾರನನ್ನು ರತಿ ರಸಾಯನಗಳಿಂದ ಬೆಳೆಸಿದಳು. ನಾಲ್ಕೇ ವರ್ಷಗಳಲ್ಲಿ ಅವನು ಪೂರ್ಣಯೌವನ ಭರಿತನಾದ.

ಪತಿಗೆ ತಾನು ತಾಯಾಗಿ ಸ್ತನಪಾನ ಮಾಡಿಸದೆ, 'ಮಗು'! ಎಂದೂ ಕರೆಯದೆ, ದಾದಿಯ ಕೈಯಲ್ಲಿ ಕೊಟ್ಟು ಅವಳ ಎದೆ ಹಾಲಿಂದಲೂ ರಸಾಯನ ದ್ರವ್ಯಗಳಿಂದಲೂ ಪತಿಯನ್ನು ಬೆಳೆಸಿದಳು ರತಿ. ನಾಲ್ಕು ವಯಸಿನ ಮಗು ಹದಿನಾರು ವಯಸಿನವನಂತಾದ.

ಪತಿಂ ಸುಪೂರ್ಣಯೌವನಂ ನಿರೀಕ್ಷ್ಯತಾಂ ವಿಲಜ್ಜತೀಮ್ ।
ಉವಾಚ ಕಾರ್ಷ್ಣಿರಂಬ ತೇ ಕುಚೇಷ್ಟಿತಂ ಕಥಂ ತ್ವಿತಿ ॥ ೧೯೨ ॥

ಪೂರ್ಣ ಯೌವನ ಭರಿತನಾದ ಪತಿಯನ್ನು ಕಂಡು ಲಜ್ಜಿತಳಾಗುತ್ತಿದ್ದ ರತಿಗೆ ಪ್ರದ್ಯುಮ್ನ 'ಅಮ್ಮ, ಏಕೆ ನಿನ್ನ ಈ ಕುಚೇಷ್ಟೆ ಎಂದ.

'ನೀನು ನನ್ನನ್ನು ಕಂಡು ಕಾಮ ವಿಕಾರಕ್ಕೊಳಗಾಗುತ್ತಿರುವುದನ್ನು ಕಂಡರೆ ನನಗೆ ಸಂಶಯ ಉಂಟಾಗುತ್ತಿದೆ. ನಾನು ನಿನ್ನ ಮಗ ಹೌದೆ ಅಲ್ಲವೇ?' ಎಂದು ಕೇಳುತ್ತಾನೆ ಪ್ರದ್ಯುಮ್ನ-

ಯದಿ ತೇಽಹಂ ಸುತಃ ಸೌಮ್ಯೇ ಯದಿ ವಾ ನಾತ್ಮಜಃ ಶುಭೇ।
ಕಥಿತಂ ತತ್ವ ಮಿಚ್ಛಾಮಿ ಕಿಮಿದಂ ತೇ ಚಿಕೀರ್ಷಿತಂ? -ಹರಿವಂಶ

ಜಗಾದ ಸಾಖಿಲಂ ಪತೌ ತದಾಸ್ಯ ಜನ್ಮ ಜಾಗತಿಮ್ ।
ತತೋಽಗ್ರಹೀತ್ ಸ ತಾಂ ಪ್ರಿಯಾಂ ರತಿಂ ರಮಾಪತೇಃ ಸುತಃ ॥ ೧೯೩ ॥

ಆಗ ರತಿ ಪ್ರದ್ಯುಮ್ನನಿಗೆ ತಾನು ಅಲ್ಲಿಗೆ ಬಂದ ಬಗೆಯನ್ನೂ ಅವನ ಜನ್ಮ ಮತ್ತು ಆಗಮನವನ್ನೂ ಪೂರ್ಣವಾಗಿ ಹೇಳಿದಳು. ಅದರಿಂದ ಅವನು ಪ್ರಿಯೆಯಾದ ಆ ರತಿಯನ್ನು ಸ್ವೀಕರಿಸಿದ.

ದದೌ ಚ ಮಂತ್ರಮುತ್ತಮಂ ಸಮಸ್ತಮಾಯಿನಾಶಕಮ್ ।
ಭೃಗೂತ್ಥರಾಮದೈವತಂ ರತಿರ್ಹರೇಃ ಸುತಾಯ ಸಾ ॥ ೧೯೪ ॥

ಸಮಸ್ತ ಮಾಯಾವಿಗಳನ್ನು ನಾಶಪಡಿಸಬಲ್ಲ ಪರಶುರಾಮ ದೇವತಾಕವಾದ ಉತ್ತಮ ಮಂತ್ರವನ್ನು ರತಿ ಪ್ರದ್ಯುಮ್ನನಿಗೆ ನೀಡಿದಳು.

ತತಃ ಸ್ವದಾರಧರ್ಷಕಂ ಸಮಾಹ್ವಯದ್ ಯುಧೇಽಗಜಃ।
ಸ ಶಂಬರಂ ಸ ಚೈತ್ಯ ತಂ ಯುಯೋಧ ಶಕ್ತಿತೋ ಬಲೀ ॥ ೧೯೫ ॥

ಬಳಿಕ ಪ್ರದ್ಯುಮ್ನ ತನ್ನ ಪತ್ನಿಯನ್ನು ಬಲಾತ್ಕರಿಸಿದ ಶಂಬರನನ್ನು ಯುದ್ಧಕ್ಕೆ ಕರೆದ. ಬಲಿಷ್ಠನಾದ ಆತ ಬಂದು ಪ್ರದ್ಯುಮ್ನನೊಡನೆ ಬಲವಾಗಿ ಕಾದಿದ.

ಸ ಚರ್ಮಖಿಡ್ಗಧಾರಿಣಂ ವರಾಸ್ತ್ರಶಸ್ತ್ರಪಾದಪೈಃ।
ಯದಾ ನ ಯೋದ್ಧುಮಾಶಕದ್ಧರೇಃ ಸುತಂ ನ ದೃಶ್ಯತೇ ॥ ೧೯೬ ॥

ಶಂಬರ ಉತ್ತಮ ಅಸ್ತ್ರಶಸ್ತ್ರಗಳಿಂದಲೂ ವೃಕ್ಷಗಳಿಂದಲೂ ಖಿಡ್ಗಚರ್ಮಧಾರಿ ಪ್ರದ್ಯುಮ್ನನೊಡನೆ ಕಾದಾಡಲು ಸ್ವಲ್ಪವೂ ಶಕ್ತನಾಗದಿದ್ದಾಗ ಅದೃಶ್ಯನಾದ.

ಸಹಸ್ರಮಾಯಮುಲ್ಬಣಂ ತ್ವದೃಶ್ಯಮಂಬರಾದ್ ಗಿರೀನ್।
ಸೃಜಂತಮೇತ್ಯ ವಿದ್ಯಯಾ ಜಘಾನ ಕೃಷ್ಣನಂದನಃ ॥ ೧೯೭ ॥

ಕ್ರೂರನಾದ ಶಂಬರ ಸಾವಿರಾರು ಮಾಯೆಗಳುಳ್ಳವ. ಅದೃಶ್ಯನಾಗಿ ಆಕಾಶದಿಂದ ಬೆಟ್ಟಗಳನ್ನು ಎಸೆಯತೊಡಗಿದ. ಆದರೆ ಪ್ರದ್ಯುಮ್ನ ವಿದ್ಯೆಯ ಬಲದಿಂದ ಅವನನ್ನು ಹೊಡೆದ.

ವಿದ್ಯೆ ಎಂದರೆ ವೈಷ್ಣವ ಮಂತ್ರ. ಪರಶುರಾಮ ದೇವತಾಕವಾದ ಈ ಮಂತ್ರವನ್ನು ರತಿ ಅವನಿಗೆ ಕೊಟ್ಟಿದ್ದಳು.

ಸ ವಿದ್ಯಯಾ ವಿನಾಶಿತೋರುಮಾಯ ಆಶು ಶಂಬರಃ।
ನಿಕೃತ್ತಕಂಧರೋಽಪತದ್ ವರಾಸಿನಾಮುನಾ ಕ್ಷಣಾತ್ ॥ ೧೯೮ ॥

ವಿದ್ಯೆಯಿಂದ ಶಂಬರನ ಎಲ್ಲ ಮಾಯೆಗಳೂ ಬೇಗನೆ ನಾಶವಾದವು. ಒಡನೆ ಶಂಬರ ಪ್ರದ್ಯುಮ್ನನ ಉತ್ತಮ ಖಿಡ್ಗದಿಂದ ಶಿರಶ್ಛೇದ ಹೊಂದಿ ಬಿದ್ದ.

ನಿಹತ್ಯ ತಂ ಹರೇಃ ಸುತಸ್ತಯೈವ ವಿದ್ಯಯಾಂಬರಮ್।
ಸಮಾಸ್ಥಿತಃ ಸ ಭಾರ್ಯಯಾ ಸಮಂ ಕುಶಸ್ಥಲೀಂ ಯಯೌ ॥ ೧೯೯ ॥

ವಿದ್ಯೆಯಿಂದ ಶಂಬರನನ್ನು ಕೊಂದು ಅದೇ ವಿದ್ಯೆಯಿಂದ ಆಕಾಶವೇರಿ ಪತ್ನಿಯೊಡನೆ ದ್ವಾರಕೆಗೆ ತೆರಳಿದ ಪ್ರದ್ಯುಮ್ನ.

ಸಮಸ್ತವೇದಿನೋಽರ್ಮನಿರ್ನರಾನ್ ವಿಡಂಬಮಾನಯೋಃ।
ರಮಾರಮೇಶಯೋಃ ಸುತಂ ಜಗಾದ ತಂ ಸ್ಮ ನಾರದಃ ॥ ೨೦೦ ॥

ಸರ್ವಜ್ಞರಾದರೂ ಮಾನವರನ್ನು ಅನುಕರಣ ಮಾಡುತ್ತಿದ್ದ ರುಕ್ಮಿಣೀ ಕೃಷ್ಣರಿಗೆ ನಾರದರು ಪ್ರದ್ಯುಮ್ನನನ್ನು 'ಈತ ನಿಮ್ಮ ಮಗನೇ' ಎಂದರು.

ಸ ರುಕ್ಮಿಣೀಜನಾರ್ದನಾದಿಭಿಃ ಸರಾಮಯಾದವೈಃ।
ಪಿತಾಮಹೇನ ಚಾದರಾತ್ ಸುಲಾಲಿತೋಽವಸತ್ ಸುಖಿಮ್ ॥ ೨೦೧ ॥

ಪ್ರದ್ಯುಮ್ನ ರುಕ್ಮಿಣೀಕೃಷ್ಣರಿಂದಲೂ ಬಲರಾಮನಿಂದಲೂ ಯಾದವರಿಂದಲೂ ಮತ್ತು ತಾತನಾದ ವಸುದೇವನಿಂದಲೂ ಆದರಪೂರ್ವಕ ಲಾಲಿತನಾಗಿ ಸುಖದಿಂದ ಬೆಳೆದ.

ಸ್ಯಮಂತಕೋಪಾಖ್ಯಾನ

ತತಃ ಪುರಾ ಸ್ಯಮಂತಕಂ ಹ್ಯವಾಪ ಸೂರ್ಯಮಂಡಲೇ।
ಸ್ಥಿತಾದ್ಧರೇಃ ಸ ಸತ್ರಜಿತ್ ಸದಾತ್ರ ಕೇಶಾವಾರ್ಚಕಃ ॥ ೨೦೨ ॥

ಹಿಂದೆ ಸೂರ್ಯ ಮಂಡಲಾಂತರ್ಗತನಾದ ನಾರಾಯಣನಿಂದ ಅವನ ಆರಾಧಕನಾದ ಸತ್ರಜಿತ್ ಸ್ಯಮಂತಕಮಣಿಯನ್ನು ಪಡೆದಿದ್ದ.

ಯದು ಮಹಾರಾಜನಿಗೆ ಸಹಸ್ರದ ಪಯೋದ ಕ್ರೋಷ್ಟ ನೀಲ ಅಂಜಿಕ ಎಂದು ಐದು ಮಂದಿ ಮಕ್ಕಳು. ಅವರಲ್ಲಿ ಸಹಸ್ರದನ ಪರಂಪರೆಯಲ್ಲಿ ಕಾರ್ತವೀರ್ಯಾರ್ಜುನ ಮಧು ವೃಷಣರು ಬರುತ್ತಾರೆ. ಅದರಿಂದ ಅವರ ಪರಂಪರೆಯನ್ನು ಹೈಹಯರು ಮಾಧವರು ವೃಷ್ಣಿಗಳು ಎನ್ನುತ್ತಾರೆ. ಕ್ರೋಷ್ಟನಿಗೆ ಯುಧಾಜಿತ್. ದೇವಮೀಢುಷ, ವೃಜನೀವಾನ, ಅನಮಿತ್ರರು ನಾಲ್ವರು ಮಕ್ಕಳು. ಯುಧಾಜಿತನ ಮಗ ವೃಷ್ಣಿ ವೃಷ್ಣಿಯ ಮಗ ಶ್ವಫಲ್ಕ. ಅವನ ಮಗ ಅಕ್ರೂರ. ಅನಮಿತ್ರನ ಮಗ ಶಿನಿ, ಶಿನಿಯ ಮಗ ಸತ್ಯಕ. ಅವನ ಮಗ ಯುಯುಧಾನ. ಇವನಿಗೇ ಸಾತ್ಯಕಿ ಎಂದು ಇನ್ನೊಂದು ಹೆಸರು. ದೇವಮೀಢುಷನ ಮಗ ಶೂರ. ಮಧುರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡವ. ಶೂರನ ಮಗ ವಸುದೇವ ವೃಜಿನೀವಾನನ ಪರಂಪರೆಯಲ್ಲಿ ಶಶಬಿಂದು ಮರುತ್ತ ಚೇದಿ ದಶಾರ್ಹ ಸತ್ವಾನ್ ಅಂಧಕ ಮುಂತಾದ ರಾಜರು ಬರುತ್ತಾರೆ. ಅವರ ಪರಂಪರೆಯವರನ್ನು ದಾಶಾರ್ಹರು, ಅಂಧಕರು, ಸಾತ್ವತರು ಎನ್ನುತ್ತಾರೆ. ಅನಮಿತ್ರನ ಮಗ ನಿಘ್ನ. ಅವನಿಗೆ ಸತ್ರಾಜಿತ್ ಪ್ರಸೇನ ಇಬ್ಬರು ಮಕ್ಕಳು. ಅಂಧಕನ ಪರಂಪರೆಯಲ್ಲಿ ಹೃದಿಕನಿಗೆ ಕೃತವರ್ಮ ಶತಧನ್ವ ಮುಂತಾದವರು ಮಕ್ಕಳು.

ಸತ್ರಾಜಿತನಿಗೆ ಸೂರ್ಯ ಪ್ರಾಣಮಿತ್ರನಂತಿದ್ದ. ಪ್ರತಿದಿನ ಸೌಮ್ಯರೂಪದಿಂದ ಬಳಿಗೆ ಬಂದು ಸಂಲಾಪ ಮಾಡಿ ಹೋಗುತ್ತಿದ್ದ. ಒಂದುದಿನ ಪ್ರಖರವಾದ ತೇಜಸ್ಸಿನಿಂದ ಹೊಳೆಯುತ್ತಲೆ ಇದಿರು ಬಂದು ನಿಂತ. 'ಆಕಾಶದಲ್ಲಿ ಹೊಳೆಯುವಂತೆಯೇ ನನ್ನ ಮುಂದೆಯೂ ಹೊಳೆಯುತ್ತ ನಿಂತರೆ ನೀನು ನನಗೆ ಮಿತ್ರನಾಗಿದ್ದೇನು ಪ್ರಯೋಜನ?' ಎಂದ ಸತ್ರಾಜಿತ್. 'ಅದು ನನ್ನ ತೇಜಸ್ಸಲ್ಲ. ಸ್ಯಮಂತಕ ಮಣಿಯದು' ಎನ್ನುತ್ತ ಅದನ್ನು ಸೂರ್ಯ ಸತ್ರಾಜಿತನಿಗೆ ಕೊಟ್ಟು ಹೋದ. ಅದನ್ನು ಧರಿಸಿದಾಗ ಸತ್ರಾಜಿತ ಸೂರ್ಯನಂತೆಯೆ ಹೊಳೆಯುತ್ತಿದ್ದ ಎನ್ನುತ್ತದೆ ಹರಿವಂಶ.

ಸದಾಸ್ಯ ವಿಷ್ಣುಭಾವಿನೋಽಪ್ಯತೀವ ಲೋಭಮಾಂತರಮ್ ।
ಪ್ರಕಾಶಯನ್ ರಮಾಪತಿರ್ಯಯಾಚ ಈಶ್ವರೋ ಮಣಿಮ್ ॥ ೨೦೩ ॥

ಸತ್ರಾಜಿತ ಸದಾ ವಿಷ್ಣುಭಕ್ತನಾಗಿದ್ದರೂ ಅವನ ಹೃದಯದಲ್ಲಿ ಬಹಳ ಲೋಭವಿದ್ದಿತು. ಅದನ್ನು ಪ್ರಕಟಪಡಿಸುವುದಕ್ಕಾಗಿ ಕೃಷ್ಣ ಸ್ಯಮಂತಕಮಣಿಯನ್ನು ಬೇಡಿದ.

ಸ ತಂ ನ ದತ್ತವಾಂಸ್ತತೋಽನುಜೋ ನಿಬದ್ಧ್ಯ ತಂ ಮಣಿಮ್ ।
ವನಂಗತಃ ಪ್ರಸೇನಕೋ ಮೃಗಾಧಿಪೇನ ಸೂದಿತಃ ॥ ೨೦೪ ॥

ಸತ್ರಾಜಿತ ಕೃಷ್ಣನಿಗೆ ಸ್ಯಮಂತಕಮಣಿಯನ್ನು ಕೊಡಲಿಲ್ಲ. ಅವನ ತಮ್ಮ ಪ್ರಸೇನ ಆ ಮಣಿಯನ್ನು ಧರಿಸಿ ಕಾಡಿಗೆ ಹೋಗಿ ಸಿಂಹದಿಂದ ಹತನಾದ.

ಪೂಜಾರ್ಹವಾದ ಆ ಮಣಿಯನ್ನು ಶುಚಿರ್ಭೂತನಾಗೇ ಧರಿಸಬೇಕಾಗಿತ್ತು. ಹಾಗೆ ಧರಿಸಿದರೆ ಹಸಿವು ಬಾಯಾರಿಕೆ ರೋಗಾದಿ ಭಯಗಳಿಲ್ಲ. ಪೂಜಿಸಿದರೆ ಪ್ರತಿದಿನ ಎಂಟು ಭಾರ ಚಿನ್ನವನ್ನು ಸುರಿಸುತ್ತಿತ್ತು. ಅದಕ್ಕೆ ಪೂಜೆ ನಡೆಯುವ ರಾಜ್ಯದಲ್ಲಿಯೆ ದುರ್ಭಿಕ್ಷೆಯಾಗಲಿ ರೋಗವಾಗಲಿ ಯಾವ ಅನಿಷ್ಟವೇ ಆಗಲಿ ಉಂಟಾಗುತ್ತಿರಲಿಲ್ಲ. ಅಶುಚಿಯಾಗಿ ಧರಿಸಿದರೆ ವಿಪರೀತವಾಗಿ ಅನರ್ಥ ಉಂಟಾಗುತ್ತಿತ್ತು. ಪ್ರಸೇನ ಬೇಟೆಯಾಡುವಾಗ ಅಶುಚಿಯಾಗಿದ್ದು ಮಣಿಯನ್ನು ಧರಿಸಿದ್ದರಿಂದ ಸಿಂಹ ಅವನನ್ನು ಕೊಂದಿತು.

ತದಾ ಸ ಸತ್ಯಜಿದ್ಧರಿಂ ಶಶಂಸ ಸೋದರಾಂತಕಮ್ ।
ಉಪಾಂಶು ವರ್ತ್ಮನಾ ತತೋ ಹರಿಃ ಸಯಾದವೋ ಯಯೌ ॥ ೨೦೫ ॥

ಆಗ ಸತ್ರಜಿತ್ ತನ್ನ ಸೋದರನನ್ನು ಮಣಿಗಾಗಿ ಕೃಷ್ಣನೇ ಕೊಂದಿರಬೇಕೆಂದು ಮೆಲ್ಲಗೆ ಹೇಳತೊಡಗಿದ. ಅದರಿಂದ ಶ್ರೀಕೃಷ್ಣ ಯಾದವರೊಂದಿಗೆ ಪ್ರಸೇನ ಹೋದ ದಾರಿಯಿಂದ ಕಾಡಿಗೆ ಹೊರಟ.

ವನೇ ಸ ಸಿಂಹಸೂದಿತಂ ಪದೈಃ ಪ್ರದರ್ಶ್ಯ ವೃಷ್ಣಿನಾಮ್ ।
ಪ್ರಸೇನಮಕ್ಷಪಾತಿತಂ ಸ ಸಿಂಹಮಪ್ಯದರ್ಶಯತ್ ॥ ೨೦೬ ॥

ಶ್ರೀಕೃಷ್ಣ ಕಾಡಿನಲ್ಲಿ ಪ್ರಸೇನ ಸಿಂಹದಿಂದ ಹತನಾಗಿದ್ದುದನ್ನು ಹೆಜ್ಜೆಗಳ ಗುರುತಿಂದ ಯಾದವರಿಗೆ ತೋರಿಸಿ ಸಿಂಹ ಕರಡಿಯಿಂದ ಹತವಾಗಿದ್ದುದನ್ನೂ ಹಾಗೇ ತೋರಿಸಿದ.

ಜಾಂಬವತೀಕಲ್ಯಾಣ

ತತೋ ನಿಧಾಯ ತಾನ್ ಬಿಲಂ ಸ ಜಾಂಬವತ್ಪರಿಗ್ರಹಮ್ ।
ವಿವೇಶ ತತ್ರ ಸಂಯುಗಂ ಬಭೂವ ತೇನ ಚೇಶಿತುಃ ॥ ೨೦೭ ॥

ಬಳಿಕ ಯಾದವರನ್ನು ಹೊರಗೆ ನಿಲ್ಲಿಸಿ ಶ್ರೀಕೃಷ್ಣ ಜಾಂಬವಂತನ ಮನೆಯಾದ ಗುಹೆಯನ್ನು ಪ್ರವೇಶಿಸಿದ. ಅಲ್ಲಿ ಜಾಂಬವಂತನೊಡನೆ ಕೃಷ್ಣನಿಗೆ ಯುದ್ಧ ನಡೆಯಿತು.

ಯುಯೋಧ ಮಂದಮೇವ ಸ ಪ್ರಭುಃ ಸ್ವಭಕ್ತ ಇತ್ಯಜಃ।
ಚಕಾರ ಚೋಗ್ರಮಂತತಃ ಪ್ರಕಾಶಯನ್ ಸ್ವಮಸ್ಯ ಹಿ ॥ ೨೦೮ ॥

ಜಾಂಬವಂತ ತನ್ನ ಭಕ್ತನೆಂದು ಶ್ರೀಕೃಷ್ಣ ಮೊದಲಿಗೇ ಮೆತ್ತಗೇ ಯುದ್ಧ ಮಾಡಿದ. ಕೊನೆಯಲ್ಲಿ ತನ್ನ ಸ್ವರೂಪವನ್ನು ತೋರುವುದಕ್ಕಾಗಿ ಭಯಂಕರ ಯುದ್ಧ ಮಾಡಿದ.

ಸ ಮುಷ್ಟಿಪಿಷ್ಟವಿಗ್ರಹೋ ನಿತಾಂತಮಾಪದಂ ಗತಃ।
ಜಗಾಮ ಚೇತಸಾ ಕರಣಂ ರಘೂತ್ತಮಂ ನಿಜಂ ಪತಿಮ್ ॥ ೨೦೯ ॥

ಕೃಷ್ಣನ ಮುಷ್ಟಿಯಿಂದ ಮೈ ಜರ್ಜರಿತವಾಗಿ ಬಹಳ ಪ್ರಾಣಾಪಾಯ ಸ್ಥಿತಿ ಬಂದಾಗ ಜಾಂಬವಂತ ತನ್ನ ಸ್ವಾಮಿಯಾದ ಶ್ರೀರಾಮನನ್ನು ಮನಸ್ಸಿನಲ್ಲಿ ಶರಣುಹೊಂದಿದ.

ಸ್ಮೃತಿಂ ಗತೇ ತು ರಾಘವೇಂ ತದಾಕೃತಿಂ ಯದೂತ್ತಮೇ।
ಸಮಸ್ತಭೇದವರ್ಜಿತಾಂ ಸಮೀಕ್ಷ್ಯ ಸೋಕಯಮಿತ್ಯವೈತ್ ॥ ೨೧೦ ॥

ಜಾಂಬವಂತ ಶ್ರೀರಾಮನನ್ನು ಸ್ಮರಿಸಿದಾಗ ಸಕಲಭೇದವರ್ಜಿತವಾದ ಶ್ರೀರಾಮನ ಆಕೃತಿಯನ್ನು ಕೃಷ್ಣನಲ್ಲಿ ಕಂಡು ಅವನೇ ಇವನೆಂದು ತಿಳಿದ.

ಕೃಷ್ಣನೊಬ್ಬ ಮಾನವನೆಂದೇ ಜಾಂಬವಂತ ತಿಳಿದಿದ್ದ. ಆದರೆ ಅವನು ಭಗವಂತನ ಒಂದು ಸ್ವರೂಪಾವತಾರ. ಭಗವಂತನ ಸ್ವರೂಪ ಅವತಾರ ಗುಣಕರ್ಮಾದಿಗಳೆಲ್ಲ ಪರಸ್ಪರ ಸಕಲ ಭೇದ ವರ್ಜಿತ. ರಾಮನ ಆಕೃತಿ ಕೃಷ್ಣನಲ್ಲಿ ತೋರಿದಾಗ ಜಾಂಬವಂತನಿಗೆ ಜ್ಞಾನೋದಯವಾಯಿತು.

ತತಃ ಕ್ಷಮಾಪಯನ್ ಸುತಾಂ ಪ್ರದಾಯ ರೋಹಿಣೀಂ ಶುಭಾಮ್ ।
ಮಣಿಂ ಚ ತಂ ನುನಾವ ಸ ಪ್ರಪನ್ನ ಆಶು ಪಾದಯೋಃ ॥ ೨೧೧ ॥

ಬಳಿಕ ಜಾಂಬವಂತ ಬೇಗನೆ ಕೃಷ್ಣನಲ್ಲಿ ಕ್ಷಮೆ ಬೇಡುತ್ತ ಪಾದಗಳಲ್ಲಿ ಬಿದ್ದ. ಮಂಗಳಕರವಾದ ರೋಹಿಣಿ ಎಂಬ ಮಗಳನ್ನು ಸ್ಯಮಂತಕಮಣಿಯನ್ನೂ ಕೊಟ್ಟು ಸ್ತೋತ್ರ ಮಾಡಿದ.

ರೋಹಿಣಿ ಜಾಂಬವಂತನ ಮಗಳಾದ್ದರಿಂದ ಜಾಂಬವತೀ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಕರಡಿಯ ಮಗಳಾದ ಅವಳದು ಮಾನವಾಕೃತಿಯೆ.

ವಿಧಾಯ ಚಕ್ರದಾರಿತಂ ಸುಜೀರ್ಣದೇಹಮಸ್ಯ ಸಃ।
ಯುವಾನಮಾಶು ಕೇಶವಶ್ಚಕಾರ ವೇದನಾಂ ವಿನಾ ॥ ೨೧೨ ॥

ಶ್ರೀಕೃಷ್ಣ ಜಾಂಬವಂತನ ಜೀರ್ಣಶಿಥಿಲವಾದ ಶರೀರವನ್ನು ನೋವಾಗದಂತೆ ಚಕ್ರದಿಂದ ಸೀಳಿ ಬೇಗನೆ ಯುವಕನನ್ನಾಗಿ ಮಾಡಿದ.

ವಿಧಾಯ ಭಕ್ತವಾಂಛಿತಂ ಪ್ರಿಯಾಸಹಾಯ ಈಶ್ವರಃ।
ಪ್ರಗೃಹ್ಯ ತಂ ಮಹಾಮಣಿಂ ವಿನಿರ್ಯಯೌ ಗುಹಾಮುಖಾತ್ ॥ ೨೧೩ ॥

ಶ್ರೀಕೃಷ್ಣ ಹೀಗೆ ಭಕ್ತನ ಬಯಕೆಯನ್ನು ಪೂರೈಸಿ ಆ ಮಹಾಮಣಿಯನ್ನು ತೆಗೆದುಕೊಂಡು ಪ್ರಿಯೆಯೊಡನೆ ಗುಹಾದ್ವಾರದಿಂದ ಹೊರಗೆ ಬಂದ.

ಗುಹಾಂ ಪ್ರವಿಷ್ಟಮೀಶ್ವರಂ ಬಹೂನ್ಯಹಾನ್ಯನಿರ್ಗತಮ್ ।
ಪ್ರತೀಕ್ಷ್ಯ ಯಾದವಾಸ್ತು ಯೇ ಗತಾ ಗೃಹಂ ತದಾऽಹೃಷುಃ ॥ ೨೧೪ ॥

ಗುಹೆಯನ್ನು ಪ್ರವೇಶಿಸಿದ ಕೃಷ್ಣ ಬಹುದಿನಗಳಾದರೂ ಹೊರಗೆ ಬಾರದಿದ್ದಾಗ ಕಾದು ಕೊನೆಗೆ ಮನೆಗೇ ಹಿಂತಿರುಗಿದ್ದರು ಯಾದವರು. ಕೃಷ್ಣ ತಿರುಗಿ ಬಂದಾಗ ಹರ್ಷಗೊಂಡರು.

ಸತ್ಯಭಾಮಾ ಪರಿಣಯ

ಸ ದುರ್ಯಶೋ ರಮಾಪತಾವನೂಚ್ಯ ಮಿಥ್ಯಯಾ ತಪನ್ ।
ಸ್ವಪಾಪಹಾನಿಕಾಂಕ್ಷಯಾ ದದೌ ಸುತಾಂ ಜನಾರ್ದನೇ ॥ ೨೧೬ ॥

ಸತ್ರಾಜಿತ ಕೃಷ್ಣನ ಮೇಲೆ ನಿಷ್ಕಾರಣವಾಗಿ ಅಪಕೀರ್ತಿ ಹೊರಿಸಿ ಪಶ್ಚಾತ್ತಾಪಗೊಂಡು ತನ್ನ ಪಾಪ ಶೋಧನೆಯ ಇಚ್ಛೆಯಿಂದ ಮಗಳನ್ನು ಕೃಷ್ಣನಿಗಿತ್ತ.

ಸತ್ರಾಜಿತನಿಗೆ ಹತ್ತುಮಂದಿ ಹೆಂಡಂದಿರು. ಅವರಲ್ಲಿ ನೂರು ಮಂದಿ ಗಂಡುಮಕ್ಕಳು. ಮೂರುಮಂದಿ ಹೆಣ್ಣುಮಕ್ಕಳು–ಸತ್ಯಭಾಮಾ, ವ್ರತಿನೀ, ಪ್ರಸ್ವಾಪಿನೀ ಎಂದು. ಅವರಲ್ಲಿ ಸತ್ಯಭಾಮೆಯನ್ನು ಕೃಷ್ಣನಿಗೆ ಮದುವೆ ಮಾಡಿಕೊಟ್ಟ ಸತ್ರಾಜಿತ.

ಮಣಿಂ ಚ ತಂ ಪ್ರದಾಯ ತಂ ನನಾಮ ಚ ಕ್ಷಮಾಪಯನ್ ।
ಮಣಿಂ ಪುನರ್ದದೌ ಹರಿರ್ಮುದಾ ಸತ್ಯಭಾಮಯಾ ॥ ೨೧೭ ॥

ಸತ್ರಾಜಿತ ಮಣಿಯನ್ನು ಕೃಷ್ಣನಿಗೆ ಕೊಟ್ಟು ಕ್ಷಮೆ ಬೇಡುತ್ತ ನಮಿಸಿದ. ಆದರೆ ಕೃಷ್ಣ ಮಣಿಯನ್ನು ತಿರುಗಿ ಸತ್ರಾಜಿತನಿಗೇ ಕೊಟ್ಟ ಸತ್ಯಭಾಮೆಯಿಂದಲೆ ಸಂತುಷ್ಟನಾದ.

ರಮೈವ ಸಾ ಹಿ ಭೂರಿತಿ ದ್ವಿತೀಯ ಮೂರ್ತಿರುತ್ತಮಾ ।
ಬಭೂವ ಸತ್ರಜಿತ್ಸುತಾ ಸಮಸ್ತಲೋಕಸುಂದರೀ ॥ ೨೧೮ ॥

ಭೂ ಎಂದು ಉತ್ತಮವಾದ ಎರಡನೇ ರೂಪದ ರಮೆಯೆ ಸಕಲ ಲೋಕಸುಂದರಿಯಾದ ಸತ್ಯಭಾಮೆಯಾಗಿ ಸತ್ರಾಜಿತನ ಮಗಳಾಗಿ ಅವತರಿಸಿದ್ದಳು.

ರಮಾದೇವಿಯ ಮುಖ್ಯ ರೂಪಗಳು ಮೂರು ಶ್ರೀ ಭೂ ದುರ್ಗಾ ಎಂದು. ಶ್ರೀರೂಪವೆ ರುಕ್ಮಿಣಿ. ಭೂರೂಪ ಸತ್ಯಭಾಮಾ. ದುರ್ಗೆ ಯಶೋದೆಯಲ್ಲಿ ಅವತರಿಸಿ ಕನ್ಯಾಕುಮಾರಿಯಾಗಿಯೇ ಉಳಿದಳು. ಹೀಗೆ ರುಕ್ಮಿಣೀ ಸತ್ಯಭಾಮೆಯರಿಬ್ಬರೂ ರಮಾಸ್ವರೂಪರು. ಅವರಲ್ಲಿ ಸ್ವಲ್ಪವೂ ಭೇದವಿಲ್ಲ. ಅವರು ಸವತಿ ಮಾತ್ಸರ್ಯದಿಂದ ಜಗಳಾಡುವುದು ಎಲ್ಲ ನಟನೆ.

ತತೋ ಹಿ ಸಾ ಚ ರುಕ್ಮಿಣೀ ಪ್ರಿಯೇ ಪ್ರಿಯಾಸು ತೇಽಧಿಕಮ್ ।
ಜನಾರ್ದನಸ್ಯ ತೇ ಹರೇಃ ಸದಾವಿಯೋಗಿನೀ ಯತಃ ॥ ೨೧೯ ॥

ಅದರಿಂದ ಸತ್ಯಭಾಮೆಯೂ ರುಕ್ಮಿಣಿಯೂ ನಿತ್ಯಾವಿಯೋಗಿನಿಯಾದ ರಮೆಯೆ ಆಗಿದ್ದು ಕೃಷ್ಣನಿಗೆ ಅವನ ಪತ್ನಿಯರಲ್ಲೆಲ್ಲ ಹೆಚ್ಚು ಪ್ರೀತಿಪಾತ್ರರು.

ಜಾಂಬವತಿ ಮುಂತಾದ ಷಣ್ಮಹಿಷಿಯರಾಗಲಿ ಉಳಿದ ಹದಿನಾರು ಸಾವಿರದ ನೂರು ಮಂದಿ ಮಹಿಷಿಯರಾಗಲಿ ಯಾರೂ ರಮಾ ಸ್ವರೂಪರಲ್ಲ. ಅವರ ಶರೀರ ರುಕ್ಮಿಣಿ ಸತ್ಯಭಾಮೆಯರಂತೆ ಚಿನ್ಮಯವಲ್ಲ. ಪ್ರಾಕೃತ, ಪಾಂಚಭೌತಿಕ. ರಮೆಯ ಆವೇಶ ಪಾತ್ರರಾದ್ದರಿಂದ ಕೃಷ್ಣನ ಅಂಗಸಂಗಕ್ಕೆ ಯೋಗ್ಯರಾಗಿದ್ದರು.

ಅವಾಪ ಸಾಂಬನಾಮಕಂ ಸುತಂ ಚ ರೋಹಿಣೇ ಹರೇಃ।
ಚತುರ್ಮುಖಾಂಶ ಸಂಯುತಂ ಕುಮಾರಮೇವ ಷಣ್ಮುಖಿಮ್ ॥ ೨೨೦ ॥

ಜಾಂಬವತಿ ಕೃಷ್ಣನಿಂದ ಸಾಂಬನೆಂಬ ಮಗನನ್ನು ಪಡೆದಳು. ಅವನು ಹಿಂದೆ ಷಣ್ಮುಖ ಮತ್ತು ಸನತ್ಕುಮಾರ ರೂಪನಾಗಿದ್ದ ಸ್ಕಂದನ ಹಾಗೂ ಚತುರ್ಮುಖನ ಅಂಶಯುಕ್ತನಾಗಿ ಜನಿಸಿದ.

ಹಂಸಡಿಭಿಕ ವಧ

ಇತಿ ಪ್ರಶಾಸತಿ ಪ್ರಭೌ ಜಗಜ್ಜನಾರ್ದನೇಽಖಿಲಮ್।
ಅಗಣ್ಯ ಸದ್ಗುಣಾರ್ಣವೇ ಕದಾಚಿದಾಯಯೌ ದ್ವಿಜಃ ॥ ೨೨೧ ॥

ಅಗಣಿತ ಸದ್ಗುಣ ಸಾಗರನಾದ ಶ್ರೀಕೃಷ್ಣ ಹೀಗೆ ಜಗತ್ತನ್ನು ಆಳುತ್ತಿದ್ದಾಗ ಒಮ್ಮೆ ಒಬ್ಬ ಬ್ರಾಹ್ಮಣ ಬಂದ.

ಜನಾರ್ದನಃ ಸ ನಾಮತೋ ರಮೇಶಪಾದ ಸಂಶ್ರಯಃ।
ಸ ಮಾನಿತಶ್ಚ ವಿಷ್ಣುನಾ ಪ್ರಣಮ್ಯ ವಾಕ್ಯಮಬ್ರವೀತ್ ॥ ೨೨೨ ॥

ಆ ಬ್ರಾಹ್ಮಣನ ಹೆಸರು ಜನಾರ್ದನ. ಶ್ರೀಕೃಷ್ಣನ ಪಾದಗಳನ್ನೆ ಆಶ್ರಯಿಸಿದವ. ಕೃಷ್ಣ ಅವನನ್ನು ಆದರಿಸಿದಾಗ ಅವನು ನಮಸ್ಕರಿಸಿ ಹೇಳಿದ.

ಕ್ಷಮಸ್ವಮೇ ವಚಃ ಪ್ರಭೋ ಬ್ರವೀಮ್ಯತೀವ ಪಾತಕಂ।
ಯತಃ ಸುಪಾಪದೂತಕಸ್ತತೋ ಹಿ ತಾದೃಶಂ ವಚಃ ॥ ೨೨೩ ॥

'ಪ್ರಭು, ನಾನು ಹೇಳುವುದನ್ನು ಕ್ಷಮಿಸು. ಮಹಾಪಾಪಿಯೊಬ್ಬನ ದೂತನಾಗಿರುವುದರಿಂದ ಮಹಾಪಾಪಕರವಾದ ಮಾತನ್ನಾಡುತ್ತಿದ್ದೇನೆ.

ನ ತೇಽಸ್ಯ ಗೋಚರಂ ಕ್ವಚಿತ್ ತಥಾಪಿ ಚಾಜ್ಞಯಾ ವದೇ।
ವದೇತಿ ಚೋದಿತೋಽಮುನಾ ದ್ವಿಜೋ ಜಗಾದ ಮಾಧವಮ್ ॥ ೨೨೪ ॥

'ನಿನಗೆ ತಿಳಿಯದಿರುವುದು ಎಲ್ಲಿಯೂ ಇಲ್ಲ. ಆದರೂ ನೀನು ಹೇಳು ಎಂದರೆ ಹೇಳುತ್ತೇನೆ' ಎಂದ. ಶ್ರೀಕೃಷ್ಣ 'ಹೇಳು' ಎಂದ. ಬ್ರಾಹ್ಮಣ ಕೃಷ್ಣನಿಗೆ ಹೀಗೆ ಹೇಳಿದ.

ಸುತೌ ಹಿ ಸಾಲ್ವಭೂಪತೇರ್ಬಭೂವತುಃ ಶಿವಾಶ್ರಯೌ।
ಶಿವಪ್ರಸಾದ ಸಂಭವೌ ಪಿತುಸ್ತಪೋಬಲೇನ ತೌ ॥ ೨೨೫ ॥

ಸಾಲ್ವರಾಜನಿಗೆ ಇಬ್ಬರು ಮಕ್ಕಳು ಹುಟ್ಟಿದರು. ಅವರು ತಂದೆಗೆ ತಪೋ ಬಲದಿಂದ ಲಭಿಸಿದ ಶಿವಾನುಗ್ರಹದಿಂದ ಹುಟ್ಟಿದವರು. ಶಿವನನ್ನೇ ಆಶ್ರಯಿಸಿದವರು.

ಸಾಲ್ವದೇಶದ ರಾಜ ಬ್ರಹ್ಮದತ್ತ. ಅವನಿಗೂ ಅವನ ಮಿತ್ರನಾದ ಮಿತ್ರಸಹನೆಂಬ ಬ್ರಾಹ್ಮಣನಿಗೂ ಮಕ್ಕಳಿರಲಿಲ್ಲ. ಬಳಿಕ ಬ್ರಹ್ಮದತ್ತ ಶಿವನಿಂದ ಹಂಸ ಡಿಭಿಕರನ್ನೂ, ಮಿತ್ರ ಸಹ ಹರಿಯಿಂದ ಜನಾರ್ದನನನ್ನೂ ಮಕ್ಕಳಾಗಿ ಪಡೆದರು. ಮೂವರು ಮಕ್ಕಳೂ ಜೊತೆಗೇ ಬೆಳೆದರು. ಹಂಸಡಿಭಿಕರು ಶಿವನನ್ನೊಲಿಸಿ ವರ ಪಡೆದರು. ಜನಾರ್ದನ ಹರಿಯನ್ನೆ ಉಪಾಸನೆ ಮಾಡಿದ.

ಅಜೇಯತಾಮವಧ್ಯತಾಂ ಶಿವಾದ್ ವರಂ ಸಮಾಪತುಃ।
ಜರಾಸುತಸ್ಯ ಶಿಷ್ಯಕೌ ತಪೋಬಲೇನ ಕೇವಲಮ್ ॥ ೨೨೬ ॥

ಮಹೋದರಂ ಚ ಕುಂಡಧಾರಿಣಂ ಚ ಭೂತಮಾವುಭೌ।
ತಥಾಜಿತಾವವಧ್ಯಕೌ ದಿದೇಶ ಶಂಕರಸ್ತಯೋಃ ॥ ೨೨೭ ॥

ಹಂಸಡಿಭಿಕರು ಶಿವನಿಂದ ಅಜೇಯತ್ವ ಅವಧ್ಯತ್ವ ವರ ಪಡೆದರು. ಜರಾಸಂಧನ ಶಿಷ್ಯರಾದರು. ಅವರ ತಪೋ ಬಲದಿಂದಲೆ ಶಿವ ಅವರಿಗೆ ಅವರಂತೆಯೆ ಅಜೇಯ ಅವಧ್ಯರಾದ ಮಹೋದರ ಕುಂಡಧಾರಿಗಳೆಂಬ ಎರಡು ಭೂತಗಳನ್ನು ಕೊಟ್ಟ

ತಯೋಃ ಸಹಾಯ ಏವ ತೌ ವರಾಚ್ಛಿವಸ್ಯ ಭೂತಕೌ।
ಅಜೇಯತಾಮವಾಪತುರ್ನ ಚಾನ್ಯಥಾಮರಾವಪಿ ॥ ೨೨೮ ॥

ಆ ಭೂತಗಳು ಸ್ವತಃ ಅಮರರಾಗಿದ್ದರೂ, ಹಂಸಡಿಭಿಕರ ಸಹಾಯಕ್ಕಾಗಿ ಶಿವನ ವರವಿದ್ದುದರಿಂದ ಅಜೇಯತ್ವವನ್ನು ಹೊಂದಿದ್ದುವು. ಬೇರೆ ರೀತಿಯಿಂದಲ್ಲ.

ಭೂತಗಳೂ ದೇವಯೋನಿಯಲ್ಲಿ ಹುಟ್ಟಿರುವುದರಿಂದ ಸ್ವಭಾವತಃ ಅಮರರೆ. ಆದರೆ ಸ್ವಭಾವತಃ ಅಜೇಯರಲ್ಲ. ಅಜೇಯತ್ವ ಶಿವ ವರದಿಂದಲೆ ಬಂದುದು. ಬೇರೆ ರೀತಿಯಿಂದಲ್ಲ.

ಅಜೇಯತಾಮವಧ್ಯತಾಮವಾಪ್ಯ ತಾವುಭೌ ಶಿವಾತ್।
ಪಿತುಶ್ಚ ರಾಜಸೂಯಿತಾಂ ಸಮಿಚ್ಛತೋ ಮದೋದ್ಧತೌ ॥ ೨೨೯ ॥

ಶಿವನಿಂದ ಅಜೇಯತ್ವವನ್ನೂ ಅವಧ್ಯತ್ವವನ್ನೂ ಹೊಂದಿ ಮದೋದ್ಧತರಾಗಿರುವ ಹಂಸಡಿಭಿಕರು ತಂದೆಯಿಂದ ರಾಜಸೂಯಯಾಗ ಮಾಡಿಸಲು ಬಯಸಿದ್ದಾರೆ.

ಜರಾಸುತೋ ಗುರುತ್ವತೋ ವಿರೋದ್ಧುಮತ್ರ ನೇಚ್ಛತಿ।
ನೃಪಾಂಸ್ತು ದೇವಪಕ್ಷಿಣೋ ವಿಜಿತ್ಯ ಕರ್ತು ಮಿಚ್ಛತಃ ॥ ೨೩೦ ॥

ಜರಾಸಂಧ ಗುರುವಾದ್ದರಿಂದ ಇದರಲ್ಲಿ ವಿರೋಧ ಮಾಡಲು ಬಯಸುವುದಿಲ್ಲ. ಏಕೆಂದರೆ ಹಂಸಡಿಭಿಕರು ದೇವಪಕ್ಷದ ರಾಜರನ್ನೆ ಮುಖ್ಯವಾಗಿ ಗೆದ್ದು ಯಾಗ ಮಾಡಲು ಬಯಸಿದಾರೆ.

ಸ್ವಯಂ ಹಿ ರಾಜಸೂಯಿತಾಂ ಜರಾಸುತೋ ನ ಮನ್ಯತೇ।
ಯತೋ ಹಿ ವೈಷ್ಣವಂ ಕ್ರತುಂ ತಮಾಹುರೀಶ ವೈದಿಕಾಃ ॥ ೨೩೧ ॥

ಪ್ರಭು ಕೃಷ್ಣ ಸ್ವತಃ ಜರಾಸಂಧ ರಾಜಸೂಯ ಮಾಡಲೊಲ್ಲ. ಏಕೆಂದರೆ ವೈದಿಕರು ಅದನ್ನು ವೈಷ್ಣವ ಯಾಗವೆನ್ನುತ್ತಾರೆ.

ಇಮೌ ಪಿತುರ್ಯಶೋಽಥಿನೌ ಪರಾಭವಾಯ ತೇ ತಥಾ।
ಸಮಿಚ್ಛತೋಽಚ್ಯುತ ಕ್ರತುಂ ಭವಂತಮೂಚತುಶ್ಚ ತೌ ॥ ೨೩೨ ॥

ಸಮುದ್ರಸಂಶ್ರಯೋ ಭವಾನ್ ಬಹೂನ್ ಪ್ರಗೃಹ್ಯ ಲಾವಣಾನ್।
ಸುಭಾರಕಾನುಪೈಹಿ ನಾವಿತಿ ಕ್ಷಮಸ್ವಮೇ ವಚಃ ॥ ೨೩೩ ॥

ಈ ಹಂಸಡಿಭಿಕರು ತಂದೆಗೆ ಕೀರ್ತಿ ಬರಲೆಂದು ಆಶಿಸಿ ನಿನ್ನನ್ನು ಪರಾಭವಗೊಳಿಸುವುದಕ್ಕಾಗಿ ವೈಷ್ಣವಯಾಗ ಮಾಡಲು ಬಯಸಿದ್ದಾರೆ. ಅವರು ನಿನಗೆ ಹೇಳಿದರು- 'ಸಮುದ್ರವಾಸಿಯಾದ್ದರಿಂದ ನೀನು ನಮಗೆ ಬಹಳ ಉಪ್ಪಿನ ಮೂಟೆಗಳನ್ನು ಹೊತ್ತು ತಾ' ಎಂದು. ನನ್ನ ಮಾತನ್ನು ಕ್ಷಮಿಸು.

ಅವೈಷ್ಣವರಾದ ಹಂಸಡಿಭಿಕರು ಏಕೆ ವೈಷ್ಣವ ಯಾಗಕ್ಕೆ ತೊಡಗಿದರೆಂದರೆ ಇದು ವಿಷ್ಣುಪ್ರೀತ್ಯರ್ಥವಲ್ಲ ಈ ನೆಪದಿಂದ ವಿಷ್ಣುವಿಗೇ ಪರಾಭವ ಉಂಟುಮಾಡುವುದಕ್ಕಾಗಿ. ಕಂಸನ ಬಿಲ್ಲಹಬ್ಬದ ಆಮಂತ್ರಣಕ್ಕೆ ದೂತನಾಗಿ ಅಕ್ರೂರ ಬಂದಂತೆ ಹಂಸನ ಯಾಗಕ್ಕೆ ಕಪ್ಪಕೇಳಲು ದೂತನಾಗಿ ಜನಾರ್ದನ ಬಂದಿದ್ದ. ಹಂಸನಿಗೆ ಜನಾರ್ದನ ಹುಟ್ಟಿನಿಂದಲೂ ಮಿತ್ರನಾದ್ದರಿಂದ ಮೈತ್ರಿಯ ಆಣೆಯಿಟ್ಟು ಜನಾರ್ದನನನ್ನು ಕಳಿಸಿದ್ದ ಹಂಸ. ಈ ನೆಪದಿಂದಲಾದರೂ ಕೃಷ್ಣನ ದರ್ಶನವಾಗುವುದಿಲ್ಲ! ಎಂಬ ಭಾವ ಜನಾರ್ದನನದು. ಅಕ್ರೂರನಂತೆಯೆ! ಹರಿವಂಶ ಪ್ರಕಾರ ಈ ಜನಾರ್ದನ ನಿತ್ಯವೂ ತಾನು ಕೃಷ್ಣನನ್ನು ಕಾಣುವೆ, ನಾಳೆ ಅಥವಾ ನಾಳಿದ್ದು ಹೋಗಿಯೇ ತೀರುತ್ತೇನೆ ಎಂದು ಸಂಕಲ್ಪ ಮಾಡುತ್ತಿದ್ದನಂತೆ. ಅವನಿಗೆ ಪ್ರಿಯವಾದ

ಕೆಲಸವನ್ನು ಹಂಸ ಕೊಟ್ಟನೆಂದು ಕುದುರೆ ಏರಿ ಬೇಗನೆ ಬಂದ. ಆದರೆ ಹಂಸನ ಕೆಟ್ಟ ಸಂದೇಶವನ್ನು ನಾಲಿಗೆಯಿಂದ ಉಚ್ಚರಿಸಲು ಬಾರಿ ಬಾರಿಗೆ ಕ್ಷಮೆ ಬೇಡಿದ.

ಉದೀರ್ಯ ತಂ ನನಾಮ ಸ ಪ್ರ ಚಾಹಸನ್ ಸ್ಮ ಯಾದವಾಃ।
ಹರಿಸ್ತು ಸಾತ್ಯಕಿಂ ವಚೋ ಜಗಾದ ಮೇಘನಿಸ್ವನಃ ॥ ೨೩೪ ॥

ಜನಾರ್ದನ ಹೀಗೆ ಹೇಳಿ ಕೃಷ್ಣನನ್ನು ನಮಸ್ಕರಿಸಿದ. ಯಾದವರು ಜೋರಾಗಿ ನಕ್ಕರು. ಶ್ರೀಕೃಷ್ಣ ಗುಡುಗಿನಂಥ ಧ್ವನಿಯಿಂದ ಸಾತ್ಯಕಿಗೆ ಹೀಗೆ ಹೇಳಿದ.

ಪ್ರಯಾಹಿ ಸಾತ್ಯಕೇ ವಚೋ ಬ್ರವೀಹಿ ಮೇ ನೃಪಾಧಮೌ।
ಸಮೇತ್ಯ ವಾಂ ವರಾಯುಧೈಃ ಕರಂ ದದಾಮ್ಯಸಂಶಯಮ್ ॥ ೨೩೫ ॥

'ಸಾತ್ಯಕಿ, ಹೋಗು, ನೃಪಾಧಮರ ಬಳಿಗೆ ಹೋಗಿ, 'ನಿಮಗೆ ನಿಶ್ಚಯವಾಗಿ ಒಳ್ಳೆಯ ಆಯುಧಗಳಿಂದ ಕಪ್ಪ ಕೊಡುವೆನೆಂದು' ನನ್ನ ಮಾತನ್ನು ಹೇಳು',

ಉಪೈತಮಾಶು ಸಂಯುಗಾರ್ಥಿನೌ ಚ ಪುಷ್ಕರಂ ಪ್ರತಿ।
ಇತೀರಿತಃ ಶಿನೇಃ ಸುತೋ ಜಗಾಮ ವಿಪ್ರಸಂಯುತಃ ॥ ೨೩೬ ॥

'ಯುದ್ಧಾರ್ಥಿಗಳಾಗಿ ನೀವು ಬೇಗ ಪುಷ್ಕರಕ್ಕೆ ಬನ್ನಿ'. ಕೃಷ್ಣ ಹೀಗೆ ಹೇಳಿದೊಡನೆ ಸಾತ್ಯಕಿ ಜನಾರ್ದನನೊಂದಿಗೆ ಹೊರಟ.

ಉಪೇತ್ಯ ತೌ ಹರೇರ್ವಚೋ ಜಗಾದ ಸಾತ್ಯಕಿರ್ಬಲೀ।
ವಿಧಾಯ ತೌ ತೃಣೋಪಮೌ ಗಿರಾ ಜಗಾಮ ಕೇಶವಮ್ ॥ ೨೩೭ ॥

ಹಂಸಡಿಭಿಕರ ಬಳಿಗೆ ಬಂದು ಬಲಿಷ್ಠನಾದ ಸಾತ್ಯಕಿ ಕೃಷ್ಣನ ಮಾತನ್ನು ಹೇಳಿದ. ಮಾತಿನಿಂದ ಅವರನ್ನು ತೃಣಸಮಾನರನ್ನಾಗಿ ಮಾಡಿ ಕೃಷ್ಣನ ಬಳಿಗೆ ಬಂದ.

ತತಃ ಪುರೈವ ತಾವುಭೌ ದ್ವಿಜಂ ಹರಸ್ವರೂಪಿಣಮ್।
ಸುದುಃಖಿವಾಸ ನಾಮಕಂ ಪ್ರಚಕ್ರತುಸ್ತೃಣೋಪಮಮ್ ॥ ೨೩೮ ॥

ಅದಕ್ಕಿಂತ ಮೊದಲೆ ಆ ಹಂಸಡಿಭಿಕರು ರುದ್ರಸ್ವರೂಪರಾದ ದುರ್ವಾಸಮುನಿಯನ್ನು ತೃಣಸಮಾನರನ್ನಾಗಿ ಮಾಡಿದ್ದರು.

ದಶತ್ರಿಕೈಃ ಶತೈರ್ವೃತೋ ಯತೀಶ್ವರೈಃ ಸ ಸರ್ವವಿತ್।
ವಿಪಾಟಿತಾತ್ಮಕೌಪಿನಾದಿ ಸರ್ವಮಾತ್ರಕೋಽಭವತ್ ॥ ೨೩೯ ॥

ಮೂರುಸಾವಿರ ಮಂದಿ ಯತೀಶ್ವರರಿಂದ ಕೂಡಿದ ಸರ್ವಜ್ಞರಾದ ದುರ್ವಾಸರ ಕೌಪೀನಾದಿ ಸರ್ವ ವಸ್ತುಗಳನ್ನೂ ಹಂಸಡಿಭಿಕರು ನಾಶಮಾಡಿದ್ದರು.

ಕೋ ನಾಮಾಸೌ ಮಹಾಭೂತಃ ಕಾಷಾಯೀ ವರ್ಣವಿತ್ತಮಃ।
ಕಶ್ಚಾಯಮಾಶ್ರಮೋ ನಾಮ ವಿಹಾಯ ಚ ಗೃಹಾಶ್ರಮಂ॥

ಯಾರು ಈ ಮಹಾಭೂತ? ಕೆಂಪು ಬಟ್ಟೆ ಉಟ್ಟಿದ್ದಾನೆ. ವರ್ಣಧರ್ಮ ತಿಳಿದಿದ್ದೂ ವರ್ಣದ ಚಿಹ್ನೆಯಾದ ಯಜ್ಞೋಪವೀತಾದಿಗಳನ್ನು ಬಿಟ್ಟಿದ್ದಾನೆ! ಇದೆಂಥ ಆಶ್ರಮ? ಗೃಹಸ್ಥಾಶ್ರಮವನ್ನು ಬಿಟ್ಟು ಬೇರೆ ಒಂದು ಆಶ್ರಮ ಉಂಟೆ? ಎಂದು ಹಂಸಡಿಭಿಕರು ಮೀಮಾಂಸಾರೀತ್ಯಾ ಯತ್ಯಾಶ್ರಮವನ್ನು ನಿಂದಿಸಿದರು. ಜನಾರ್ದನ ವೇದಾಂತರೀತ್ಯಾ ಯತ್ಯಾಶ್ರಮವನ್ನು ಶಾಸ್ತ್ರಸಂಮತವೆಂದು ಪ್ರತಿಪಾದಿಸಿದ. ಆದರೂ ಅವರು ಒಪ್ಪದೆ, ದುರ್ವಾಸರ ಕೌಪೀನವನ್ನು ಸೆಳೆದು ಹರಿದುಹಾಕಿದರು. ದುರ್ವಾಸರು ಶಾಪದಿಂದ ಅವರನ್ನು ಭಸ್ಮಮಾಡಲಿಲ್ಲ. ಒಂದು ಕಣ್ಣಿಂದ ಅವರನ್ನು ಸುಟ್ಟು ಬಿಡುವಂತೆ, ಇನ್ನೊಂದು ಕಣ್ಣಿಂದ ಜನಾರ್ದನನನ್ನು ಸೌಮ್ಯವಾಗಿ ನೋಡುತ್ತ ಹಂಸಡಿಭಿಕರಿಗೆ 'ನಿಮ್ಮನ್ನು ಕೃಷ್ಣನೆ ಶಿಕ್ಷಿಸುತ್ತಾನೆ' ಎಂದರು. ಜನಾರ್ದನನಿಗೆ 'ನಿನ್ನಲ್ಲಿ ಕೃಷ್ಣಭಕ್ತಿವರ್ಧಿಸಲಿ. ಇಂದಲ್ಲ ನಾಳೆ ನಿನಗೆ ಕೃಷ್ಣದರ್ಶನ ಲಭಿಸುವುದು' ಎಂದು ಅನುಗ್ರಹಿಸಿ ಶಿಷ್ಯರೊಂದಿಗೆ ದ್ವಾರಕೆಗೆ ನಡೆದರು. ಹಂಸಡಿಭಿಕರ ಅಪರಾಧವನ್ನು ತಿಳಿಸಿ ಕೃಷ್ಣನಿಂದ ಸತ್ಕೃತರಾದರು. ಹೊಸದಾದ ನಯವಾದ ರೇಶಿಮೆಯ ಕೌಪೀನಗಳನ್ನು ಪಡೆದು ಹಿಂತಿರುಗಿದರು. ಇತ್ತ ಜನಾರ್ದನ ಹಂಸಡಿಭಿಕರಿಗೆ ದುರ್ವಾಸಾದಿಗಳು ಕೃಷ್ಣನ ಬಳಿಗೆ ಹೋದುದನ್ನು ನೆನಪಿಸಿ ನೀವು ಕೃಷ್ಣನನ್ನು ಗೆದ್ದು ರಾಜಸೂಯ ಯಾಗ ಮಾಡಲಾರಿರಿ ಎಂದು ಎಚ್ಚರಿಸಿದ. ಆದರೂ ಅವರು ಅಹಂಕಾರದಿಂದ ನಮ್ಮ ಯಾಗಕ್ಕೆ ಕೃಷ್ಣ ಉಪ್ಪಿನ ಕರ ಕೊಡಲಿ ಎನ್ನಲು ತೊಡಗಿದರು.

ವರಾತ್ ಸ್ವಸಂಭವಾದಸೌ ನ ಶಾಪಶಕ್ತಿಮಾನಭೂತ್।
ತತಃ ಸಮಸ್ತ ಭಂಜನೋರುಶಕ್ತಿಮಾಪ ಕೇಶವಮ್ ॥ ೨೪೦ ॥

ರುದ್ರಸ್ವರೂಪರಾದ ದುರ್ವಾಸರು ತಾವೇ ಕೊಟ್ಟ ವರವಿದ್ದುದರಿಂದ ಹಂಸಡಿಭಿಕರಿಗೆ ಶಾಪಕೊಡಲು ಶಕ್ತರಾಗಿರಲಿಲ್ಲ. ಅದರಿಂದ ಸರ್ವ ನಾಶಮಾಡುವ ಮಹಾಶಕ್ತಿಉಳ್ಳ ಕೃಷ್ಣನನ್ನೇ ಶರಣು ಹೊಂದಿದರು.

ಸ ತಾನ್ ಸಮರ್ಚ್ಯ ಮಾಧವಃ ಪ್ರದಾಯ ಚೋರುಮಾತ್ರಕಾಃ।
ಯಯೌ ಚ ತೈಃ ಸಮನ್ವಿತೋ ವಧಾಯ ಸಾಲ್ವಪುತ್ರಯೋಃ ॥ ೨೪೧ ॥

ಶ್ರೀಕೃಷ್ಣ ಆ ಯತೀಶ್ವರರಿಗೆ ಸತ್ಕರಿಸಿ ಉತ್ತಮವಾದ ಕೌಪೀನ ದಂಡ ಕಮಂಡಲು ಮುಂತಾದುವನ್ನು ಕೊಟ್ಟು ಅವರೆಲ್ಲರನ್ನೂ ಕೂಡಿಕೊಂಡು ಸಾಲ್ವಪುತ್ರರ ವಧೆಗಾಗಿ ಹೊರಟ.

ತಮತ್ರಿಜಂ ಹರಾತ್ಮಕಂ ಯತೋ ಹಿ ವೇದ ಮಾಗಧಃ।
ತತೋಽತ್ಯಜತ್ ಸ್ವಶಿಷ್ಯಕೌ ನಿಶಮ್ಯ ತತ್ಪ್ರತೀಪಕೌ ॥ ೨೪೨ ॥

ದುರ್ವಾಸರು ರುದ್ರಾವತಾರರೆಂದು ಜರಾಸಂಧನಿಗೆ ಗೊತ್ತು. ಅದರಿಂದ ಹಂಸಡಿಭಿಕರು ತನ್ನ ಶಿಷ್ಯರೇ ಆದರೂ ದುರ್ವಾಸರಿಗೆ ವಿರೋಧಿಗಳಾದರೆಂದು ಕೇಳಿ ತಿಳಿದು ಅವರನ್ನು ಪರಿತ್ಯಜಿಸಿದ್ದ.

'ನಾಕರೋನ್ನೃಪಸಾಹಾಯ್ಯಂ ಪಾಪಂ ಮೇ ಭವಿತೇತಿ ಹ।'

ಹಂಸಡಿಭಿಕರಿಗೆ ತಾನು ಸಹಾಯ ಮಾಡಿದರೆ ಪಾಪ ಬಂದೀತೆಂದು ಜರಾಸಂಧ ಸಹಾಯಕ್ಕೆ ಬರಲಿಲ್ಲ ಎಂದಿದೆ ಹರಿವಂಶ. ಪಾಪ ಹೇಗೆ ಎಂದರೆ ಶಿವಾವತಾರರಾದ ದುರ್ವಾಸರಿಗೆ ದ್ರೋಹ ಬಗೆದ ಹಂಸಡಿಭಿಕರಿಗೆ ತಾನು ಸಹಾಯ ಮಾಡಿದರೆ ಅದು ಶಿವದ್ರೋಹವಾಗುವುದು ಎಂದು. ಅದಕ್ಕಾಗಿಯೇ ಕೃಷ್ಣ ದುರ್ವಾಸರನ್ನು ಜೊತೆಗೇ ಕರೆದುಕೊಂಡು ಪುಷ್ಕರಕ್ಕೆ ಬಂದಿದ್ದ.

ಹರೌ ತು ಪುಷ್ಕರಂ ಗತೇ ಮುನೀಶ್ವರೈಃ ಸಮನ್ವಿತೇ।
ಸಮೀಯತುಶ್ಚ ತಾವುಭಾವಥಾತ್ರ ಹಂಸಡೀಭಿಕೌ ॥ ೨೪೩ ॥

ಶ್ರೀಕೃಷ್ಣ ಮುನೀಶ್ವರರೊಂದಿಗೆ ಪುಷ್ಕರಕ್ಕೆ ಹೋದಾಗ ಹಂಸಡಿಭಿಕರಿಬ್ಬರೂ ಅಲ್ಲಿಗೆ ಬಂದರು.

ಡಿಬಿಕ, ಡಿಭಿಕ, ಡಿಭಕ, ಡಿಂಭಕ ಎಂದು ಅನೇಕ ಹೆಸರುಗಳು ಮಹಾಭಾರತ ಹರಿವಂಶಾದಿಗಳಲ್ಲಿ ಕಾಣುತ್ತಿದ್ದರೂ ಡೀಭಿಕ ಎಂಬ ಹೆಸರು ಕಾಣುವುದಿಲ್ಲ. ವಾದಿರಾಜರ ಅಭಿಪ್ರಾಯದಲ್ಲಿ ಇದು ಛಂದಸ್ಸಿಗಾಗಿ ಮಾಡಿದ ವ್ಯತ್ಯಾಸ. ಇದು ಪ್ರಮಾಣಿಕಾ ವೃತ್ತ.

'ಪ್ರಮಾಣಿಕಾ ಜರೌ ಲಗೌ'

ಪ್ರತಿಪಾದದಲ್ಲಿ ಜಗಣ ರಗಣ ಲಘು ಗುರುಗಳು ಕ್ರಮವಾಗಿ ಬರಬೇಕು. ಪ್ರಕೃತ,

ಆಥಾತ್ರ ಹಂಸಡೀಭಿಕೌ

ಎಂಬ ನಾಲ್ಕನೇ ಪಾದದಲ್ಲಿ 'ಆಥಾತ್ರ' ಎಂಬುದು ಮಧ್ಯಗುರುವಾದ್ದರಿಂದ ಜಗಣವಾಗಿದೆ. 'ಹಂಸಡೀ' ಎಂಬುದು ಮಧ್ಯಲಘುವಾದ್ದರಿಂದ ರಗಣ. 'ಭ' ಎಂಬುದು ಲಘು, 'ಕೌ' ಎಂಬುದು ಗುರು. ಇಲ್ಲಿ 'ಡೀ' ಎಂಬುದು ಲಘುವಾಗಿ ಇಟ್ಟುಕೊಂಡರೆ 'ಹಂಸಡಿ' ಆದಿಗುರುವಾಗಿ ಭಗಣವಾಗುತ್ತದೆ. ರಗಣವಾಗುವುದಿಲ್ಲ. ಆದಕ್ಕಾಗಿ ಡಿಭಿಕನನ್ನೆ ಡೀಭಿಕನೆಂದು ಶ್ರೀಮದಾಚಾರ್ಯರು ಕರೆದಿದ್ದಾರೆ. ಇದು ಶ್ಲೋಕರಚನೆಯಲ್ಲಿ ಅಶಕ್ತಿದ್ಯೋತಕವೆನ್ನಬಾರದು. ಮುಂದೆ ಡಿಭಿಕ ನಾಶಹೊಂದುತ್ತಾನೆ. ಮಾತ್ರವಲ್ಲ ಆತ ನಾಮಾವಶೇಷನೂ ಆಗದೆ ಅವನ ನಾಮವೂ ನಾಶ ಹೊಂದುತ್ತದೆ. ಅಂದರೆ ಕೀರ್ತಿ ಇಲ್ಲವಾಗುತ್ತದೆ ಎಂಬುದನ್ನು ಸೂಚಿಸಲು ಅವನ ನಾಮವನ್ನು ವಿಕಾರಗೊಳಿಸಿ ಉಚ್ಚರಿಸಿದ್ದಾರೆ.[1]

ಸ ಬ್ರಹ್ಮದತ್ತನಾಮಕೋಽತ್ರ ತತ್ತಿತಾಪ್ಯುಪಾಯಯೌ।
ಸಮಾಗತೌ ಚ ಭೂತಕೌ ಶಿವಸ್ಯ ಯೌ ಪುರಸ್ಸರೌ ॥ ೨೪೪ ॥

ಹಂಸಡಿಭಿಕರ ತಂದೆ ಬ್ರಹ್ಮದತ್ತನೆಂಬುವನೂ ಅಲ್ಲಿಗೆ ಬಂದ. ಶಿವನ ಮುಂಭಾಗದಲ್ಲಿ ಪರಿವಾರವಾಗಿ ಸಂಚರಿಸುವ ಎರಡು ಭೂತಗಳೂ ಬಂದುವು.

ವಿಚಕ್ರನಾಮಕೋಽಸುರಃ ಪುರಾ ವಿರಿಂಚತೋ ವರಮ್।
ಅವಧ್ಯತಾಮಜೇಯತಾಮವಾಪ್ಯ ಬಾಧತೇ ಸುರಾನ್ ॥ ೨೪೫ ॥

ವಿಚಕ್ರನೆಂಬ ಅಸುರ ಹಿಂದೆ ಬ್ರಹ್ಮನಿಂದ ಅವಧ್ಯತ್ವ, ಅಜೇಯತ್ವ ವರವನ್ನು ಪಡೆದು ದೇವತೆಗಳನ್ನು ಬಾಧಿಸುತ್ತಿದ್ದ.

ಸ ಚಾಭವತ್ ತಯೋಃ ಸಖಾ ಸಹಾಯಕಾಮ್ಯಯಾಽಗಮತ್।
ಹಿಡಿಂಬ ರಾಕ್ಷಸೋಽಪಿ ಯಃ ಪುರಾಽಽಪ ಶಂಕರಾದ್ ವರಮ್ ॥ ೨೪೬ ॥

ನ ಜೇಯಸೇ ನ ವಧ್ಯಸೇ ಕುತಶ್ಚನೇತಿ ತೋಷಿತಾತ್।
ಸ ಚೈತಯೋಃ ಸಖಾಽಭವತ್ ಸಮಾಜಗಾಮ ತತ್ರ ಚ ॥ ೨೪೭ ॥

ವಿಚಕ್ರ ಹಂಸಡಿಭಿಕರ ಮಿತ್ರನಾಗಿದ್ದ. ಅದರಿಂದ ಅವನು ಅವರಿಗೆ ಸಹಾಯ ನೀಡುವ

---

1. ಇತಃ ಪರಂ ತಾಸ್ಯ ನಾಮ್ನೋಽಪಿ ನಾಶೋ ಭವಿಷ್ಯತೀತಿ ಸೂಚನಾಯ ಡಿಭಿಕನಾಮ್ನ ಏವ ವಿಕಾರಃ ಕೃತಃ ವಾದಿರಾಜೀಯ

ಬಯಕೆಯಿಂದ ಬಂದ. ಹಿಡಿಂಬ ರಾಕ್ಷಸನೂ ಅಲ್ಲಿಗೆ ಬಂದ. ಅವನೂ ಹಿಂದೆ ಶಿವನನ್ನು ಒಲಿಸಿಕೊಂಡು 'ನೀನು ಯಾರಿಂದಲೂ ಪರಾಭವ ಹೊಂದುವುದೂ ಇಲ್ಲ ಮರಣ ಹೊಂದುವುದೂ ಇಲ್ಲ' ಎಂದು ವರವನ್ನು ಪಡೆದಿದ್ದ ಹಂಸಡಿಭಿಕರ ಮಿತ್ರನಾಗಿದ್ದ.

ಅಕ್ಷೌಹಿಣೀ ದಶಾತ್ಮಕಂ ಬಲಂ ತಯೋರ್ಬಭೂವ ಹ।
ವಿಚಕ್ರಗಂ ಷಡಾತ್ಮಕಂ ತಥೈಕಮೇವ ರಾಕ್ಷಸಮ್ ॥ ೨೪೮ ॥

ಹಂಸಡಿಭಿಕರಿಗೆ ಹತ್ತು ಅಕ್ಷೌಹಿಣಿ ಸೈನ್ಯವಿದ್ದಿತು. ವಿಚಕ್ರನಲ್ಲಿ ಆರು ಅಕ್ಷೌಹಿಣಿ, ಹಿಡಿಂಬ ರಾಕ್ಷಸನಲ್ಲಿಯೂ ಒಂದು ಅಕ್ಷೌಹಿಣಿ ಇದ್ದಿತು.

ದ್ವಿರಷ್ಟಸೇನಯಾ ಯುತೌ ಸಹೈಕಯೈವ ತೌ ನೃಪೌ।
ಸಮೀಯತುರ್ಯುಧೇ ಹರಿಂ ಹರಿಶ್ಚ ತೌ ಸಸಾರ ಹ ॥ ೨೪೯ ॥

ಹೀಗೆ ಒಟ್ಟು ಹದಿನೇಳು ಅಕ್ಷೌಹಿಣಿ ಸೈನ್ಯದಿಂದ ಯುಕ್ತರಾಗಿದ್ದ ಹಂಸಡಿಭಿಕರು ಯುದ್ಧಕ್ಕಾಗಿ ಶ್ರೀಕೃಷ್ಣನ ಮೇಲೇರಿ ಬಂದರು. ಕೃಷ್ಣನೂ ಅವರ ಮೇಲೇರಿ ಹೋದ.

ಅಥ ದ್ವಯೋರ್ದ್ವಯೋರಭೂದ್ ರಣೋ ಭಯಾನಕೋ ಮಹಾನ್।
ಹರಿರ್ವಿಚಕ್ರಮೇಯಿವಾನ್ ಬಲಶ್ಚ ಹಂಸಮುದ್ಧತಮ್ ॥ ೨೫೦ ॥

ಬಳಿಕ ಮಹಾಭಯಂಕರವಾದ ದ್ವಂದ್ವ ಯುದ್ಧ ನಡೆಯಿತು. ಶ್ರೀಕೃಷ್ಣ ವಿಚಕ್ರನ ಮೇಲೇರಿ ಹೋದ. ಬಲರಾಮ ಉದ್ಧತನಾದ ಹಂಸನನ್ನು ಇದಿರಿಸಿದ.

ತದಾಸ್ಯ ಜಾನುಜಂ ಯಯೌ ಶಿನಿಪ್ರವೀರ ಆಯುಧೀ।
ಗದಶ್ಚ ನಾಮತೋಽನುಜೋ ಹರೇಃ ಸ ರೋಹಿಣೀಸುತಃ ॥ ೨೫೧ ॥

ಪುರಾ ಸ ಚಂಡಕೋ ಗಣೋ ಹರೇರ್ನಿವೇದಿತಾಶನಃ।
ಸಮಾಹ್ವಯದ್ ರಣಾಯ ವೈ ತಯೋಃ ಸ ತಾತಮೇವ ಹಿ ॥ ೨೫೨ ॥

ಡಿಭಿಕನನ್ನು ಆಯುಧಪಾಣಿಯಾದ ಸಾತ್ಯಕಿ ಇದಿರಿಸಿದ. ಶ್ರೀಕೃಷ್ಣನ ತಮ್ಮ ಗದನೆಂಬುವನು ರೋಹಿಣಿಯ ಮಗ. ಹಿಂದೆ ವೈಕುಂಠದ ದ್ವಾರಪಾಲಕರಲ್ಲಿ ಮೊದಲನೆಯವನಾದ ಚಂಡನಾಗಿದ್ದ. ಕೆಲವೊಮ್ಮೆ ಲೀಲೆಯಿಂದ ಹರಿ ಹಸಿದಾಗ ದಧ್ಯನ್ನ ಭೋಜನ ನೀಡುತ್ತಿದ್ದವ.[1] ಅವನು ಹಂಸಡಿಭಿಕರ ತಂದೆಯಾದ ಬ್ರಹ್ಮದತ್ತನನ್ನು ಯುದ್ಧಕ್ಕೆ ಆಹ್ವಾನಿಸಿದ.

---

1. ಕದಾಚಿದ್ ವೈಕುಂಠನಗರಾತ್ ಬಹಿರ್ಗಮನೇ ಲೀಲಯಾ ಬುಭುಕ್ಷತೋ ಹರೇರ್ನಿವೇದಿತಸ್ವ ಸಂಗೃಹೀತ ದಧ್ಯೋದನಃ। -ವಾದಿರಾಜೀಯ

ವಸುದೇವನ ಇನ್ನೊಬ್ಬಳು ಮಡದಿಯಾದ ದೇವರಕ್ಷಿತೆಗೂ ಗದನೆಂಬ ಮಗನಿದ್ದನೆಂದು ಭಾಗವತ ಹೇಳುತ್ತದೆ. (9.21.51) ವಿಷ್ಣುಪುರಾಣ ಪ್ರಕಾರ (4.15.24) ಭದ್ರಾ ಎಂಬ ಮಡದಿಗೂ ಗದನೆಂಬ ಮಗನಿದ್ದ.

ಅಕ್ಷೌಹಿಣೀತ್ರಯಾನ್ವಿತಾಃ ಸಮಸ್ತಯಾದವಾಸ್ತದಾ।
ತ್ರಿಲೋಚನಾನುಗೌ ಚ ತೌ ನ್ಯವಾರಯನ್ ಸರಾಕ್ಷಸೌ ॥ ೨೫೩ ॥

ಮೂರು ಅಕ್ಷೌಹಿಣೀ ಸೈನ್ಯಉಳ್ಳ ಸಕಲ ಯಾದವರು ಶಿವನ ಅನುಚರರಾದ ಭೂತಗಳನ್ನೂ ಹಿಡಿಂಬ ರಾಕ್ಷಸನನ್ನೂ ಇದಿರಿಸಿದರು.

ಹರಿರ್ವಿಚಕ್ರ ಮೋಜಸಾ ಮಹಾಸ್ತ್ರಶಸ್ತ್ರವರ್ಷಿಣಮ್।
ವಿವಾಹನಂ ನಿರಾಯುಧಂ ಕ್ಷಣಾಚ್ಚಕಾರ ಸಾಯಕೈಃ ॥ ೨೫೪ ॥

ಶ್ರೀಕೃಷ್ಣ ಪರಾಕ್ರಮದಿಂದ ಮಹಾ ಅಸ್ತ್ರಶಸ್ತ್ರಗಳನ್ನು ಮಳೆಗರೆಯುತ್ತಿದ್ದ ವಿಚಕ್ರನನ್ನು ಬಾಣಗಳಿಂದ ತಕ್ಷಣವೆ ವಿರಥನನ್ನಾಗಿ ನಿರಾಯುಧನನ್ನಾಗಿ ಮಾಡಿದ.

ಪುನಶ್ಚ ಪಾದಪಾನ್ ಗಿರೀನ್ ಪ್ರಮುಂಚತೋಽರಿಣಾಽರಿಹಾ।
ಶಿರೋ ಜಹಾರ ದೇವತಾ ವಿನೇದುರತ್ರ ಹರ್ಷಿತಾಃ ॥ ೨೫೫ ॥

ಪುನಃ ವಿಚಕ್ರ ಮರಗಳನ್ನೂ ಬೆಟ್ಟಗಳನ್ನೂ ಪ್ರಯೋಗಿಸಿದಾಗ ಶತ್ರುನಾಶಕನಾದ ಶ್ರೀಕೃಷ್ಣ ಚಕ್ರದಿಂದ ಅವನ ಶಿರವನ್ನು ತರಿದ. ದೇವತೆಗಳು ಹರ್ಷಿತರಾಗಿ ಜಯಕಾರ ಮಾಡಿದರು.

ಪ್ರಸೂನವರ್ಷಿಭಿಃ ಸ್ತುತಶ್ಚತುರ್ಮುಖಾದಿಭಿಃ ಪ್ರಭುಃ।
ಸಸಾರ ತೌ ಹರಾನುಗೌ ಪ್ರಭಕ್ಷ್ಯಕೌ ಸ ಸಾತ್ವತಾಮ್ ॥ ೨೫೬ ॥

ಬ್ರಹ್ಮಾದಿ ದೇವತೆಗಳು ಕೃಷ್ಣನಿಗೆ ಪುಷ್ಪವೃಷ್ಟಿ ಮಾಡಿ ಸ್ತೋತ್ರಗೈದರು. ಬಳಿಕ ಕೃಷ್ಣ ಯಾದವರನ್ನು ಭಕ್ಷಿಸುತ್ತಿದ್ದ ಭೂತಗಳನ್ನು ಇದಿರಿಸಿದ.

ಸಮಸ್ತಯಾದವಾನ್ ರಣೇ ವಿಧೂಯ ತೌ ಜನಾರ್ದನಮ್।
ಉಪೇತ್ಯ ಚಾಂಸಗೌ ಹರೇರದಂಶತಾಂ ಸುಕರ್ಣಕೌ ॥ ೨೫೭ ॥

ಆ ಭೂತಗಳು ಯುದ್ಧದಲ್ಲಿ ಸಮಸ್ತ ಯಾದವರನ್ನೂ ಓಡಿಸಿ ಕೃಷ್ಣನ ಬಳಿಗೆ ಬಂದು ಅವನ ಹೆಗಲ ಮೇಲೇರಿ ಸುಂದರವಾದ ಅವನ ಕಿವಿಗಳನ್ನು ಕಚ್ಚಿದುವು.

ಸ ತೌ ಭುಜಪ್ರವೇಗತೋ ವಿಧೂಯ ಶಂಕರಾಲಯೇ।
ನ್ಯಪಾತಯದ್ ಬಲಾರ್ಣವೋಽಮಿತಸ್ಯ ಕಿಂ ತದುಚ್ಯತೇ ॥ ೨೫೮ ॥

ಬಲಸಾಗರನಾದ ಕೃಷ್ಣ ಭುಜಗಳನ್ನು ರಭಸದಿಂದ ಕೊಡಹಿ ಅದರ ವೇಗದಿಂದ ಆ ಭೂತಗಳನ್ನು ಶಿವನ ಕೈಲಾಸದಲ್ಲಿ ಎಳೆದು ಬೀಳಿಸಿದ. ಅಮಿತಶಕ್ತಿಯುಳ್ಳ ಶ್ರೀಕೃಷ್ಣನಿಗೆ ಇದೇನು ಆಶ್ಚರ್ಯ?

ಕೈಲಾಸ ಶಿಖರದಲ್ಲಿ ನಿಂತು ಆ ಭೂತಗಳು ಕೃಷ್ಣನ ಈ ಲೀಲೆಗೆ ಪರಮಾಶ್ಚರ್ಯಗೊಂಡುವು ಎಂದು ಹರಿವಂಶ ಹೇಳಿದೆ.

ಪ್ರಭಕ್ಷಯಂತ ಮೋಜಸಾ ಹಿಡಿಂಬ ಮುದ್ಧತಂ ಬಲಮ್ ।
ಸಹೋಗ್ರಸೇನಕೋ ಯಯೌ ಪಿತಾ ಹರೇಃ ಶರಾನ್ ಕ್ಷಿಪನ್ ॥ ೨೫೯ ॥

ಯಾದವ ಸೈನ್ಯವನ್ನು ಸ್ವಶಕ್ತಿಯಿಂದ ಹಿಡಿದು ತಿನ್ನುತ್ತಿದ್ದ ಉದ್ಧತನಾದ ಹಿಡಿಂಬನನ್ನು ವಸುದೇವ ಮತ್ತು ಉಗ್ರಸೇನರು ಬಾಣಗಳನ್ನೆಸೆಯುತ್ತ ಇದಿರಿಸಿದರು.

ತಯೋ ರಥೌ ಸಹಾಯುಧೌ ಪ್ರಭಕ್ಷ್ಯ ರಾಕ್ಷಸೋ ಬಲೀ ।
ಪ್ರಗೃಹ್ಯ ತಾವಭಾಷತ ಪ್ರಯಾತಮಾಶು ಮೇ ಮುಖಿಮ್ ॥ ೨೬೦ ॥

ಬಲಿಷ್ಠನಾದ ಆ ರಾಕ್ಷಸ ಅವರ ರಥಗಳನ್ನು ಆಯುಧ ಸಮೇತ ಭಕ್ಷಿಸಿ ಅವರನ್ನು ಹಿಡಿದು ಹೇಳಿದ 'ಬೇಗನೆ ನನ್ನ ಬಾಯನ್ನು ಸೇರಿಕೊಳ್ಳಿ'.

ತದಾ ಗದಾವರಾಯುಧಃ ಸಹೈವ ಹಂಸಭೂಭೃತಾ ।
ಪ್ರಯುಧ್ಯಮಾನ ಅಯಯೌ ವಿಹಾಯ ತಂ ಹಲಾಯುಧಃ ॥ ೨೬೧ ॥

ಆಗ ಉತ್ತಮ ಗದಾಯುಧ ಧರಿಸಿ ಹಂಸರಾಜನೊಡನೆ ಯುದ್ಧ ಮಾಡುತ್ತಿದ್ದ ಬಲರಾಮ ಅವನನ್ನು ಬಿಟ್ಟು ಬಂದ.

ತಮಾಗತಂ ಸಮೀಕ್ಷ್ಯ ತೌ ವಿಹಾಯ ರಾಕ್ಷಸಾಧಿಪಃ ।
ಉಪೇತ್ಯ ಮುಷ್ಟಿನಾऽಹನದ್ ಬಲಂ ಸ ವಕ್ಷಸಿ ಕ್ರುಧಾ ॥ ೨೬೨ ॥

ಬಲರಾಮ ಬಂದುದನ್ನು ಕಂಡು ರಾಕ್ಷಸಾಧಿಪ ಅವರನ್ನು ಬಿಟ್ಟುಬಂದು, ಕ್ರೋಧದಿಂದ ಬಲರಾಮನನ್ನು ಎದೆಯಲ್ಲಿ ಮುಷ್ಟಿಯಿಂದ ತಿವಿದ.

ಉಭೌ ಹಿ ಬಾಹುಶಾಲಿನಾವಯುಧ್ಯತಾಂ ಚ ಮುಷ್ಟಿಭಿಃ ।
ಚಿರಂ ಪ್ರಯುಧ್ಯ ತಂ ಬಲೋऽಗ್ರಹೀತ್ಸ ಜಂಘಯೋರ್ವಿಭುಃ ॥ ೨೬೩ ॥

ಇಬ್ಬರೂ ಬಾಹುಶಾಲಿಗಳು. ಮುಷ್ಟಿಕಾಳಗ ಮಾಡಿದರು. ಬಹಳ ಹೊತ್ತು ಯುದ್ಧಮಾಡಿದ ಬಳಿಕ ಸಮರ್ಥನಾದ ಬಲರಾಮ ರಾಕ್ಷಸನನ್ನು ಮೊಣಕಾಲುಗಳಲ್ಲಿ ಹಿಡಿದ.

ಅಥೈನಮುದ್ಧತಂ ಬಲಾದ್ ಬಲಃ ಸ ದೂರ ಅಕ್ಷಿಪತ್ ।
ಪಪಾತ ಪಾದಯೋಜನೇ ಸ ನಾಜಗಾಮ ತಂ ಪುನಃ ॥ ೨೬೪ ॥

ಬಲರಾಮ ಉದ್ಧತನಾದ ರಾಕ್ಷಸನನ್ನು ಸ್ವಶಕ್ತಿಯಿಂದ ದೂರದಲ್ಲಿ ಎಸೆದ. ರಾಕ್ಷಸ ಕಾಲುಯೋಜನದಷ್ಟು ದೂರದಲ್ಲಿ ಬಿದ್ದ. ತಿರುಗಿ ಆತ ಬಲರಾಮನ ಬಳಿಗೆ ಬರಲಿಲ್ಲ.

ವಿಹಾಯ ಸೈನಿಕಾಂಶ್ಚತೌ ನೃಪೌ ಯಯೌ ವನಾಯ ಸಃ ।
ನಿಹತ್ಯ ತಸ್ಯ ರಾಕ್ಷಸಾನ್ ಹಲಾಯುಧೋ ನನಾದ ಹ ॥ ೨೬೫ ॥

ಹಿಡಿಂಬ ತನ್ನ ಸೈನಿಕರನ್ನೂ ಹಂಸಡಿಭಿಕರನ್ನೂ ಬಿಟ್ಟು ಕಾಡಿಗೆ ಹೊರಟುಹೋದ. ಇತ್ತ ಬಲರಾಮ ಅವನ ಕಡೆಯ ರಾಕ್ಷಸರನ್ನು ಕೊಂದು ಸಿಂಹನಾದಗೈದ.

ಗದಸ್ತು ಸಾಲ್ವಭೂಭೃತಾ ವಯೋಗತೇನ ಯೋಧಯನ್ ।
ವಿವಾಹನಂ ನಿರಾಯುಧಂ ಚಕಾರ ಸೋಽಪ್ಯಪಾದ್ರವತ್ ॥ ೨೬೬ ॥

ಗದ ವಯೋವೃದ್ಧನಾದ ಸಾಲ್ವರಾಜನೊಡನೆ ಹೋರಾಡುತ್ತ ಅವನನ್ನು ವಿರಥನನ್ನಾಗಿಯೂ ನಿರಾಯುಧನನ್ನಾಗಿಯೂ ಮಾಡಿದ. ಸಾಲ್ವರಾಜನೂ ಪಲಾಯನ ಮಾಡಿದ.

ಶಾಲ್ವ ಅಥವಾ ಸಾಲ್ವ ಒಂದು ದೇಶದ ಹೆಸರು. ಅದರ ಅಧಿಪತಿಯಾದ ಬ್ರಹ್ಮದತ್ತನನ್ನು ಇಲ್ಲಿ ಸಾಲ್ವರಾಜನೆನ್ನಲಾಗಿದೆ. ಇವನ ಹಿರಿಯ ರಾಣಿಯ ಮಗ ಸೌಭಾಧಿಪತಿಯೂ ಸಾಲ್ವನೆನಿಸಿದ್ದಾನೆ. ಜರಾಸಂಧ ಶಿಶುಪಾಲ ರುಕ್ಮಿಗಳೊಡನೆ ಇವನೂ ಸೇರಿ ಕೃಷ್ಣ ದ್ವೇಷ ಮಾಡಿದ್ದಾನೆ. ಬ್ರಹ್ಮದತ್ತನ ಕಿರಿಯರಾಣಿಯ ಮಕ್ಕಳು ಹಿಂಸ ಡಿಭಿಕರು. ರಾಜ್ಯ ವಿಭಾಗದಲ್ಲಿ ಅವರಿಗೆ ಪರಂಪರಾಗತವಾದ ಸಾಲ್ವ ದೇಶಾಧಿಪತ್ಯ ದೊರಕದಿದ್ದುದರಿಂದ ಅವರನ್ನು ಸಾಲ್ವರೆಂದು ವ್ಯವಹರಿಸಿಲ್ಲ.

ಹಿರಿಯ ರಾಣಿಯ ಮಗನನ್ನು ಹಾಗೆ ಕರೆದಿದೆ ಎಂದು ವಾದಿರಾಜೀಯ ಹೇಳಿದೆ.[1]

---

1. ಬ್ರಹ್ಮದತ್ತಸ್ಯ ಸಾಲ್ವೋ ಜ್ಯೇಷ್ಠ ಪತ್ನೀ ಸುತಃ ಹಂಸ ಡಿಭಿಕೌ ತು ಕನಿಷ್ಠ ಪತ್ನೀಸುತೌ ಜ್ಯೇಷ್ಠಾದ್ ವಿಭಕ್ತರಾಜ್ಯೌ। ಜ್ಯೇಷ್ಠಸ್ಯ ಸೌಭಾಧಿಪತೇಃ ಸಾಲ್ವವಿಷಯಾಧಿಪತ್ಯಮೇವ ನ್ಯಾಯಪ್ರಾಪ್ತತ್ವಾದಾಗತಂ। ಅತಸ್ತಸ್ಯಾಪಿ ಸಾಲ್ವ ನಾಮಃ ಅನಯೋಸ್ತು ಸಾಲ್ವವಿಷಯಾಧಿಪತ್ಯಾಭಾವತ್ ತನ್ನಾಮಾಪಿ ನಾಸ್ತೀತಿ ಜ್ಞೇಯಂ। -ವಾದಿರಾಜೀಯ

ಸುತೇನ ತಸ್ಯ ಕನ್ಯಸಾ ಯುಯೋಧ ಸಾತ್ಯಕೀ ರಥೀ।
ವರಾಸ್ತ್ರಶಸ್ತ್ರಯೋಧಿನೌ ವಿಜಹ್ರತುಶ್ಚ ತಾವುಭೌ ॥ ೨೬೭ ॥

ಡಿಭಿಕನೊಂದಿಗೆ ರಥಿಕನಾದ ಸಾತ್ಯಕಿ ಹೋರಾಡಿದ. ಉತ್ತಮ ಅಸ್ತ್ರ ಶಸ್ತ್ರಗಳಿಂದ ಹೋರಾಡುತ್ತ ಅವರಿಬ್ಬರೂ ಕ್ರೀಡಿಸಿದರು.

ಚಿರಂ ಪ್ರಯುದ್ಧ್ಯ ಸಾತ್ಯಕಿಃ ಸ ಹಂಸಕನ್ಯಸಾ ಬಲೀ।
ಶತಂ ಸಪಂಚಕಂ ರಣೇ ಚಕರ್ತ ತಸ್ಯ ಧನ್ವಿನಾಮ್ ॥ ೨೬೮ ॥

ಬಲಿಷ್ಠನಾದ ಸಾತ್ಯಕಿ ಬಹು ಹೊತ್ತಿನವರೆಗೆ ಡಿಭಿಕನೊಡನೆ ಯುದ್ಧಮಾಡಿ ಅವನ ಕಡೆಯ ಒಂದು ನೂರ ಐದು ಮಂದಿ ಧನುರ್ಧಾರಿಗಳನ್ನು ನಾಶಪಡಿಸಿದ.

ಸ ಖಿಡ್ಗಚರ್ಮಭೃದ್ರಣೇಽಭ್ಯಯಾತ್ ಸುತಾತ್ಮಜಂ ಶಿನೇಃ।
ಸ ಚೈನಮಭ್ಯಯಾತ್ತಥಾ ವರಾಸಿ ಚರ್ಮಭೃದ್ ವಿಭೀಃ ॥ ೨೬೯ ॥

ಡಿಭಿಕ ಕತ್ತಿ ಗುರಾಣಿ ಹಿಡಿದು ಯುದ್ಧದಲ್ಲಿ ಸಾತ್ಯಕಿಯನ್ನಿದಿರಿಸಿದ. ಭಯರಹಿತನಾದ ಸಾತ್ಯಕಿಯೂ ಉತ್ತಮವಾದ ಕತ್ತಿ ಗುರಾಣಿಗಳನ್ನು ಹಿಡಿದು ಡಿಭಿಕನನ್ನು ಇದಿರಿಸಿದ.

ದ್ವಿಷೋಡಶಪ್ರಭೇದಕಂ ವರಾಸಿಯುದ್ಧಮಶ್ರಮೌ।
ಪ್ರದರ್ಶ್ಯ ನಿರ್ವಿಶೇಷಕಾವುಭೌ ವ್ಯವಸ್ಥಿತೌ ಚಿರಮ್ ॥ ೨೭೦ ॥

ಮೂವತ್ತೆರಡು ಬಗೆಯ ಶ್ರೇಷ್ಠವಾದ ಕತ್ತಿ ಕಾಳಗವನ್ನು ಆಯಾಸವಿಲ್ಲದೆ ಬಹು ಹೊತ್ತು ಪ್ರದರ್ಶಿಸಿ ಇಬ್ಬರೂ ಸೋಲದೆ ಒಂದೇ ರೀತಿ ನಿಂತರು.

ಪರಸ್ಪರಾಂತರೇಷಿಣೌ ನ ಚಾಂತರಂ ವ್ಯಪಶ್ಯತಾಮ್।
ತತೋ ವಿಹಾಯ ಸಂಗರಂ ಗತೌ ನಿರರ್ಥಕಂ ತ್ವಿತಿ ॥ ೨೭೧ ॥

ಪರಸ್ಪರ ಸೋಲಿಸಲು ಅವಕಾಶವನ್ನು ಅನ್ವೇಷಣೆ ಮಾಡಿಯೂ ಅವಕಾಶವನ್ನು ಕಾಣದೆ ಹೋದರು. ಬಳಿಕ ಯುದ್ಧವನ್ನು ನಿರರ್ಥಕವೆಂದು ಬಿಟ್ಟುಹೋದರು.

ತತಃ ಸ ಹಂಸಸಂಯುತೋ ಜಗಾಮ ಯೋದ್ದುಮಚ್ಯುತಮ್।
ಕ್ಷಣೇನ ತೌ ನಿರಾಯುಧೌ ಚಕಾರ ಕೇಶವಃ ಶರೈಃ ॥ ೨೭೨ ॥

ಬಳಿಕ ಡಿಭಿಕ ಹಂಸನೊಡಗೂಡಿ ಕೃಷ್ಣನೊಡನೆ ಯುದ್ಧಮಾಡಲು ಹೋದ. ಕೃಷ್ಣ ಅವರನ್ನು ಬಾಣಗಳಿಂದ ತಕ್ಷಣವೆ ನಿರಾಯುಧರನ್ನಾಗಿ ಮಾಡಿದ.

ಹತಂ ಚ ಸೈನ್ಯಮೇತಯೋಶ್ಚತುರ್ಥಭಾಗಶೇಷಿತಮ್ ।
ಕ್ಷಣೇನ ಕೇಶವೇನ ತದ್ಭಯಾದಪೇಯತುಶ್ಚ ತೌ ॥ ೨೭೩ ॥

ಹಂಸಡಿಭಿಕರ ಸೈನ್ಯ ಕೃಷ್ಣನಿಂದ ತಕ್ಷಣವೇ ನಾಶವಾಗಿ ಕಾಲುಭಾಗ ಮಾತ್ರ ಉಳಿಯಿತು. ಆಗ ಅವರು ಕೃಷ್ಣನಿಗೆ ಹೆದರಿ ಪಲಾಯನ ಮಾಡಿದರು.

ಸ ಪುಷ್ಕರೇಕ್ಷಣಸ್ತದಾ ಸುರೈರ್ನುತೋಽಥ ಪುಷ್ಕರೇ ।
ಉವಾಸ ತಾಂ ನಿಶಾಂ ಪ್ರಭುಃ ಸಯಾದವೋಽಮಿತಪ್ರಭಃ ॥ ೨೭೪ ॥

ಅಮಿತಕಾಂತಿಯುಳ್ಳ ಪ್ರಭು ಶ್ರೀಕೃಷ್ಣ ದೇವತೆಗಳಿಂದ ಹೊಗಳಿಸಿಕೊಂಡು ಯಾದವರೊಂದಿಗೆ ಆರಾತ್ರಿ ಪುಷ್ಕರದಲ್ಲಿಯೆ ವಾಸಮಾಡಿದ.

ಪರೇ ದಿನೇ ಜನಾರ್ದನೋ ನೃಪಾತ್ಮಜೌ ಪ್ರವಿದ್ಯುತೌ ।
ಯಮುಷ್ಣಸುಸ್ತಟೇ ಪ್ರಭುಃ ಸಮಾಸಸಾದ ಪೃಷ್ಠತಃ ॥ ೨೭೫ ॥

ಓಡಿಹೋದ ಹಂಸಡಿಭಿಕರನ್ನು ಮರುದಿನ ಶ್ರೀಕೃಷ್ಣ ಯಮುನಾನದೀತೀರದಲ್ಲಿ ಕಂಡು ಬೆನ್ನಟ್ಟಿದ.

ಸ ರೌಹಿಣೇಯಸಂಯುತಃ ಸಮನ್ವಿತಶ್ಚ ಸೇನಯಾ ।
ಸ್ವಶಿಷ್ಟಸೇನಯಾ ವೃತೌ ಪಲಾಯಿನಾವವಾರಯತ್ ॥ ೨೭೬ ॥

ತಮ್ಮ ಅಳಿದುಳಿದ ಸೈನ್ಯದಿಂದೊಡಗೂಡಿ ಪಲಾಯನ ಮಾಡುತ್ತಿದ್ದ ಹಂಸಡಿಭಿಕರನ್ನು ಸೈನ್ಯ ಸಮೇತನಾದ ಬಲರಾಮಯುಕ್ತನಾದ ಕೃಷ್ಣ ತಡೆದ.

ನಿವೃತ್ಯ ತೌ ಸ್ವಸೇನಯಾ ಶರೋತ್ತಮೈರ್ವವರ್ಷತುಃ ।
ಸುಕೋಪಿತೌ ಸಮಸ್ತಶೋ ಯದೂನವಾರ್ಯಪೌರುಷೌ ॥ ೨೭೭ ॥

ತಡೆಯಲಾಗದ ಪೌರುಷಯುಳ್ಳ ಹಂಸಡಿಭಿಕರು ಬಹಳ ಕೋಪಗೊಂಡು ತಮ್ಮ ಸೈನ್ಯದೊಡನೆ ಹಿಂತಿರುಗಿ ಎಲ್ಲ ಯಾದವರ ಮೇಲೆ ಉತ್ತಮ ಬಾಣಗಳ ಮಳೆಗರೆದರು.

ಅಥಾಽಸಸಾದ ಹಂಸಕೋ ಹಲಾಯುಧಂ ಮಹಾಧನುಃ ।
ಅನಂತರೋಽಸ್ಯ ಸಾತ್ಯಕಿಂ ಗದಂ ಚ ಸರ್ವಸೈನಿಕಾನ್ ॥ ೨೭೮ ॥

ಮಹಾಧನುರ್ಧಾರಿ ಹಂಸ ಬಲರಾಮನನ್ನು ಇದಿರಿಸಿದ. ಡಿಭಿಕ ಸಾತ್ಯಕಿಯನ್ನೂ ಗದನನ್ನೂ ಎಲ್ಲ ಸೈನಿಕರನ್ನೂ ಇದಿರಿಸಿದ.

ಸ ಸಾತ್ಯಕಿಂ ನಿರಾಯುಧಂ ವಿವಾಹನಂ ವಿವರ್ಮಕಮ್ ।
ವ್ಯಧಾದ್ ಗದಂ ಚ ತೌರಣಂ ವಿಹಾಯ ಹಾಪಜಗ್ಮತುಃ ॥ ೨೭೯ ॥

ಡಿಭಿಕ ಸಾತ್ಯಕಿಯನ್ನೂ ಗದನನ್ನೂ ನಿರಾಯುಧ, ವಿರಥ, ಕವಚರಹಿತರನ್ನಾಗಿ ಮಾಡಿದ. ಅವರು ಯುದ್ಧವನ್ನು ಬಿಟ್ಟು ದೂರ ಸರಿದರು.

ವಿಧೂಯ ಸೈನಿಕಾಂಶ್ಚ ಸ ಪ್ರಗೃಹ್ಯ ಚಾಪಮಾತತಮ್ ।
ಹರಿಂ ಜಗಾಮ ಚೋನ್ನದನ್ ಮಹಾಸ್ತ್ರಶಸ್ತ್ರವರ್ಷಣಃ ॥ ೨೮೦ ॥

ಡಿಭಿಕ ಯಾದವ ಸೈನಿಕರನ್ನು ಓಡಿಸಿ ಬಲು ದೊಡ್ಡ ಬಿಲ್ಲನ್ನು ಹಿಡಿದು ಮಹಾ ಅಸ್ತ್ರಶಸ್ತ್ರಗಳನ್ನು ಮಳೆಗರೆಯುತ್ತ ಸಿಂಹನಾದ ಮಾಡುತ್ತ ಕೃಷ್ಣನ ಮೇಲೇರಿ ಹೋದ.

ತಮಾಶು ಕೇಶವೋಽರಿಹಾ ಸಮಸ್ತಸಾಧನೋಜ್ಝಿತಮ್ ।
ಕ್ಷಣಾಚ್ಚಕಾರ ಸೋಽಪ್ಯಗಾದ್ ವಿಸೃಜ್ಯ ತಂ ಹಲಾಯುಧಮ್ ॥ ೨೮೧ ॥

ಶತ್ರುನಾಶಕನಾದ ಕೃಷ್ಣ ಡಿಭಿಕನನ್ನು ಬೇಗನೆ ಕ್ಷಣದಲ್ಲಿ ಸಮಸ್ತ ಸಾಧನ ರಹಿತನನ್ನಾಗಿ ಮಾಡಿದ. ಅವನು ಕೃಷ್ಣನನ್ನು ಬಿಟ್ಟು ಬಲರಾಮನ ಬಳಿಗೆ ಹೋದ.

ಹಲಾಯುಧೋ ನಿರಾಯುಧಂ ವಿಧಾಯ ಹಂಸಮೋಜಸಾ ।
ವಿಕೃಷ್ಟಚಾಪಮಾಗತಂ ದದರ್ಶ ತಸ್ಯ ಚಾನುಜಮ್ ॥ ೨೮೨ ॥

ಆತ್ತ ಬಲರಾಮ ಹಂಸನನ್ನು ಸ್ವಶಕ್ತಿಯಿಂದ ನಿರಾಯುಧನನ್ನಾಗಿ ಮಾಡಿ, ಹೆದೆ ಏರಿಸಿದ ಬಿಲ್ಲನ್ನು ಹಿಡಿದು ಬಂದಿದ್ದ ಡಿಭಿಕನನ್ನು ಕಂಡ.

ಸ ಹಂಸ ಆಶು ಕಾರ್ಮುಕಂ ಪುನಃ ಪ್ರಗೃಹ್ಯ ತಂ ಬಲಮ್ ।
ಯದಾಽಸಸಾದ ಕೇಶವೋ ನ್ಯವಾರಯತ್ತಮೋಜಸಾ ॥ ೨೮೩ ॥

ಹಂಸ ಬೇಗನೆ ಬಿಲ್ಲು ಹಿಡಿದು ಪುನಃ ಬಲರಾಮನತ್ತ ಬರುತ್ತಿದ್ದಂತೆ ಕೃಷ್ಣ ಅವನನ್ನು ಬಲವಾಗಿ ತಡೆದ.

ಶಿನೇಃ ಸುತಾತ್ಮಜೋಽಪ್ಯಸೌ ವಿಹಾಯ ಹಂಸಕಾನುಜಮ್ ।
ರಥಾಂತರಂ ಸಮಾಸ್ಥಿತೋ ಜಗಾಮ ತಾತಮಸ್ಯ ಚ ॥ ೨೮೪ ॥

ಸಾತ್ಯಕಿಯೂ ಡಿಭಿಕನನ್ನು ಬಿಟ್ಟು ಬೇರೆ ರಥವೇರಿ ಬ್ರಹ್ಮದತ್ತನನ್ನು ಇದಿರಿಸಿದ.

ವಯೋಗತಃ ಪಿತಾ ತಯೋರ್ಯುಯೋಧ ತೇನ ವೃಷ್ಣಿನಾ ।
ಶರಂ ಚ ಕಂಠಕೂಬರೇ ವ್ಯಸರ್ಜಯತ್ಸ ಸಾತ್ಯಕೇಃ ॥ ೨೮೫ ॥

ವಯೋವೃದ್ಧನಾದ ಬ್ರಹ್ಮದತ್ತ ಸಾತ್ಯಕಿಯೊಡನೆ ಹೋರಾಡಿದ. ಅವನು ಸಾತ್ಯಕಿಯ ಕುತ್ತಿಗೆ ಎದೆಗಳ ನಡುವಿನ ಭಾಗಕ್ಕೆ ಬಾಣ ಎಸೆದ.

ಸ ಸಾತ್ಯಕಿರ್ದೃಢಾಹತೋ ಜಗಾಮ ಮೋಹಮಾಶು ಚ।
ಸುಲಬ್ಧಸಂಜ್ಞ ಉತ್ಥಿತಃ ಸಮಾದದೇಽರ್ಧಚಂದ್ರಕಮ್ ॥ ೨೮೬ ॥

ಬಲವಾದ ಆ ಏಟಿಗೆ ಸಾತ್ಯಕಿ ಮೂರ್ಛೆಗೊಂಡ. ಆದರೆ ಬೇಗನೆ ಎಚ್ಚರಗೊಂಡು ಎದ್ದು ಅರ್ಧಚಂದ್ರಾಕಾರದ ಬಾಣವನ್ನು ಕೈಗೆತ್ತಿಕೊಂಡ.

ಸ ತೇನ ತಚ್ಛಿರೋ ಬಲೀ ಚಕರ್ತ ಶುಕ್ಲಮೂರ್ಧಜಂ।
ಯದಂಬಯಾಭಿಕಾಮಿತಂ ಪುರಾ ಪಪಾತ ತತ್ ಕ್ಷಿತೌ ॥ ೨೮೭ ॥

ಬಲಿಷ್ಠನಾದ ಸಾತ್ಯಕಿ ಆ ಬಾಣದಿಂದ ಬ್ರಹ್ಮದತ್ತನ ಬಿಳಿಕೂದಲಿನ ತಲೆಯನ್ನು ಕತ್ತರಿಸಿದ. ಹಿಂದೆ ಅಂಬೆ ಬಯಸಿದ್ದುದು ಈಗ ನೆಲದಲ್ಲಿ ಬಿದ್ದಿತು.

ಹಿಂದೆ ಕಾಶಿರಾಜನ ಮಗಳಾದ ಅಂಬೆ ಸಾಲ್ವ ಬ್ರಹ್ಮದತ್ತನನ್ನು ಮನಸ್ಸಿನಿಂದ ವರಿಸಿದ್ದಳು. ಅವನೂ ಅವಳನ್ನು ಮದುವೆಯಾಗಲು ಹೊರಟಿದ್ದ. ನಡುವೆ ಭೀಷ್ಮ ಬಂದು ಅವಳನ್ನು ಅಪಹರಿಸಿದ್ದರಿಂದ ಆ ಮದುವೆ ನಡೆಯಲಿಲ್ಲ. ಆದರೆ ಅಸುರನಾದ ಬ್ರಹ್ಮದತ್ತ ದೇವಸ್ತ್ರೀಯಾದ ಅಂಬೆಯನ್ನು ಮದುವೆ ಮಾಡಿಕೊಳ್ಳಲು ಹೊರಟಿದ್ದುದು ಮಹಾ ಅಪರಾಧ. ಅದಕ್ಕೆ ತಕ್ಕ ಶಿಕ್ಷೆಯನ್ನು ಸಾತ್ಯಕಿ ಈಗ ಮಾಡಿದಂತಾಯಿತು ಎನ್ನುತ್ತದೆ ವಾದಿರಾಜೀಯ.[1]

ನದಂಶ್ಚ ಸಾತ್ಯಕಿರ್ಹರೇರ್ಜಗಾಮ ಪಾರ್ಶ್ವಮುದ್ಧತಃ।
ಬಲೋಽಪಿ ಹಂಸಕಾನುಜಂ ಯಯೋಧ ಸೇನಯಾ ಯುತಮ್ ॥ ೨೮೮ ॥

ಸಾತ್ಯಕಿ ದರ್ಪದಿಂದ ಸಿಂಹನಾದ ಮಾಡುತ್ತ ಕೃಷ್ಣನ ಬಳಿಗೆ ಹೋದ. ಬಲರಾಮ ಸೇನಾಸಹಿತನಾದ ಡಿಭಿಕನೊಡನೆ ಕಾದಿದ.

ಹರಿಸ್ತು ಹಂಸಮುಲ್ಬಣೈಃ ಶರೈಃ ಸಮರ್ದಯನ್ ಬಲಂ।
ಜಘಾನ ತಸ್ಯ ಸರ್ವಶೋ ನ ಕಶ್ಚಿದತ್ರ ಶೇಷಿತಃ ॥ ೨೮೯ ॥

ಶ್ರೀಕೃಷ್ಣ ಹಂಸನನ್ನು ಉಗ್ರವಾದ ಬಾಣಗಳಿಂದ ಚೆನ್ನಾಗಿ ಗಾಯಗೊಳಿಸಿ ಅವನ ಸೈನ್ಯವನ್ನು ಪೂರ್ಣವಾಗಿ ನಾಶಪಡಿಸಿದ. ಆದರಲ್ಲಿ ಯಾರೊಬ್ಬನೂ ಉಳಿಯಲಿಲ್ಲ.

---

1. ದೇವಸ್ತ್ರೀವಿವಾಹೋದ್ಯೋಗಕರಂ ಶಿರಃ ಪತಿತಮಿತಿ ಸೂಚನಾಯ ಯದಂಬಯಾಭಿಕಾಮಿತಮಿತ್ಯುಕ್ತಂ। -ವಾದಿರಾಜೀಯ

ಸ ಏಕ ಏವ ಕೇಶವಂ ಮಹಾಸ್ತ್ರಮುಕ್ ಸಸಾರ ಹ।
ನಿವಾರ್ಯ ತಾನಿ ಸರ್ವಶೋ ಹರಿರ್ನಿಜಾಸ್ತ್ರಮಾದದೇ ॥ ೨೯೦ ॥

ಹಂಸ ಏಕಾಂಗಿಯಾಗಿಯೇ ಮಹಾ ಅಸ್ತ್ರಗಳನ್ನು ಪ್ರಯೋಗಿಸುತ್ತ ಕೃಷ್ಣನನ್ನು ಇದಿರಿಸಿದ. ಕೃಷ್ಣ ಆ ಎಲ್ಲ ಅಸ್ತ್ರಗಳನ್ನೂ ತಡೆದು ತನ್ನದೇ ಆದ ವೈಷ್ಣವಾಸ್ತ್ರವನ್ನು ಎತ್ತಿಕೊಂಡ.

ಸ ವೈಷ್ಣವಾಸ್ತ್ರಮುದ್ಯತಂ ನಿರೀಕ್ಷ್ಯ ಯಾನತೋ ಮಹೀಮ್।
ಗತಃ ಪರಾದ್ರವದ್ ಭಯಾತ್ ಪಪಾತ ಯಾಮುನೋದಕೇ ॥ ೨೯೧ ॥

ವೈಷ್ಣವಾಸ್ತ್ರ ಹೊರಡುವುದನ್ನು ಕಂಡು ಭಯದಿಂದ ಹಂಸ ರಥದಿಂದ ನೆಲಕ್ಕೆ ಧುಮುಕಿ ಓಡಿದ. ಯಮುನೆಯ ನೀರಿಗೆ ಹಾರಿದ.

ಯುದ್ಧದಲ್ಲಿ ವೈಷ್ಣಾವಾಸ್ತ್ರದಿಂದ ಮಡಿದಿದ್ದರೆ ವೀರ ಸ್ವರ್ಗವಾದರೂ ಸಿಗುತ್ತಿತ್ತು. ಅಂಥ ಅವಕಾಶವನ್ನು ತಪ್ಪಿಸಿಕೊಂಡು ಹಂಸ ಯಮುನೆಯ ನೀರಿಗೆ ಹಾರಿದ. ಅದು ಕಾಳಿಯನ ಮಡುವಾಗಿತ್ತು. ಯುದ್ಧನಡೆದ ಪ್ರದೇಶ ಗೋವರ್ಧನ ಪರ್ವತ ಎಂದು ಹರಿವಂಶ ಹೇಳಿದೆ.

ವರಾಸ್ತ್ರಪಾಣಿರೀಶ್ವರಃ ಪದಾಹನಚ್ಛಿರಸ್ಯಮುಮ್।
ಸ ಮೂರ್ಛಿತೋ ಮುಖೇಽಪತನ್ಮಹಾಭುಜಂಗಮಸ್ಯ ಹಿ ॥ ೨೯೨ ॥

ಶ್ರೀಕೃಷ್ಣ ಉತ್ತಮ ಅಸ್ತ್ರಗಳನ್ನು ಕೈಯಲ್ಲಿ ಧರಿಸಿ ಕಾಲಿಂದ ಹಂಸನನ್ನು ಒದ್ದ. ಹಂಸಮೂರ್ಛಿತನಾಗಿ ದೊಡ್ಡ ಹಾವಿನ ಬಾಯಲ್ಲಿ ಬಿದ್ದ.

ನೀರಿಗೆ ಹಾರಿದ ಹಂಸನ ಮೇಲೆ ಕೃಷ್ಣ ಹಾರಿ ಕಾಳಿಯನ ಹೆಡೆಯನ್ನು ತುಳಿದಂತೆ ಹಂಸನ ತಲೆಯನ್ನು ತುಳಿದ. ಆಗ ಮುಳುಗಿದ ಹಂಸ ಯಾರಿಗೂ ಕಾಣಲೇ ಇಲ್ಲ. ಹಾವಿನ ಹೊಟ್ಟೆಯನ್ನು ಸೇರಿ ಪಾತಾಳಕ್ಕೆ ಹೋದನೆನ್ನುತ್ತಾರೆ ಕೆಲವರು ಎನ್ನುತ್ತದೆ ಹರಿವಂಶ.

ಸ ಧಾರ್ತರಾಷ್ಟ್ರಕೋದರೇ ಯಥಾ ತಮೋಽಧಮೇಯಿವಾನ್।
ತಥಾ ಸುದುಃಖಿ ಸಂಯುತೋ ವಸನ್ ಮನೋಃ ಪರಂ ಮ್ರಿಯೇತ್ ॥ ೨೯೩ ॥

ಹಂಸ ಧೃತರಾಷ್ಟ್ರ ಎಂಬ ಮಹಾನಾಗನ ಹೊಟ್ಟೆಯಲ್ಲಿ ಸೇರಿ ಅಂಧತಮಸ್ಸನ್ನು ಹೊಂದಿದವನಂತೆ ಬಹುದುಃಖಿಯುಕ್ತನಾಗಿ ವಾಸಮಾಡುತ್ತ ಈ ಮನ್ವಂತರದ ಕೊನೆಯಲ್ಲಿ ಸಾಯುತ್ತಾನೆ.

'ಧೃತರಾಷ್ಟ್ರ' ಎಂಬುವನು ಭಾರತದಲ್ಲಿ

'ಕೌರವ್ಯೋ ಧೃತರಾಷ್ಟ್ರಶ್ಚ ಶಂಖಪಿಂಡಶ್ಚ ವೀರ್ಯವಾನ್'

ಎನ್ನುವಂತೆ ಪ್ರಧಾನನಾಗರಲ್ಲಿ ಒಬ್ಬ

ತತೋಽಧಮೇವ ತತ್ತಮೋ ಹರೇರ್ದ್ವಿಡೇತಿ ನಿಶ್ಚಯಾತ್ ।
ತದಾಽಸ್ಯಜಾನುಜೋಽಗ್ರಜಂ ವಿಮಾರ್ಗಯನ್ ಜಲೇಽಪತತ್ ॥ ೨೯೪ ॥

ವಿಹಾಯ ರೋಹಿಣೇಸುತಂ ಜಲೇ ನಿಮಜ್ಯ ಮಾರ್ಗಯನ್ ।
ಅಪಶ್ಯಮಾನ ಆತ್ಮನೋ ವ್ಯಪಾಟಿಯಚ್ಚ ಕಾಕುದಮ್ ॥ ೨೯೫ ॥

ಬಳಿಕ ಆ ವಿಷ್ಣುದ್ವೇಷಿ ನಿಶ್ಚಯವಾಗಿ ಅಂಧತಮಸ್ಸನ್ನೇ ಹೊಂದುತ್ತಾನೆ. ಅದೇ ಸಮಯದಲ್ಲಿ ಅವನ ತಮ್ಮ ಡಿಭಿಕನೂ ಬಲರಾಮನನ್ನು ಬಿಟ್ಟು ಹಂಸನನ್ನು ಹುಡುಕುತ್ತ ನೀರಿಗೆ ಹಾರಿದ. ನೀರಲ್ಲಿ ಮುಳುಗಿ ಹುಡುಕಿ ಕಾಣದೆ ತನ್ನ ಕಿರುನಾಲಿಗೆಯನ್ನು ಕಿತ್ತುಕೊಂಡ.

ವಿಹಾಯ ದೇಹಮುಲ್ಬಣಂ ತಮೋಽವತೀರ್ಯ ಚಾಗ್ರಜಮ್ ।
ಪ್ರತೀಕ್ಷಮಾಣ ಉಲ್ಬಣಂ ಸಮತ್ತಿ ತತ್ ಸುಖೇತರಮ್ ॥ ೨೯೬ ॥

ಡಿಭಕ ಶರೀರ ತ್ಯಾಗಮಾಡಿ ಭಯಂಕರವಾದ ತಮಸ್ಸಿನಲ್ಲಿ ಇಳಿದು ಅಣ್ಣನನ್ನು ಪ್ರತೀಕ್ಷೆ ಮಾಡುತ್ತ ಭಯಂಕರ ದುಃಖವನ್ನು ಉಣ್ಣುತ್ತಾನೆ.

ತತಃ ಸಮೂಲಮಾಕೃಷ್ಯ ಜಿಹ್ವಾಂ ಸಾಹಸಕೃತ್ ಸ್ವಯಂ ।
ಮಮಾರಾಂತರ್ಜಲೇ ರಾಜನ್ ಡಿಂಭಕೋ ನರಕಾಯ ವೈ ॥

'ಡಿಂಭಕ ತನ್ನ ನಾಲಿಗೆಯನ್ನು ಮೂಲಸಹಿತ ಸೆಳೆದು ಕಿತ್ತು ಆತ್ಮಹತ್ಯೆ ಮಾಡಿಕೊಂಡು ನೀರೊಳಗೆ ಶರೀರ ತ್ಯಾಗ ಮಾಡಿದ. ನರಕವನ್ನೇ ಸೇರಿದ' ಎಂದು ಹರಿವಂಶ ಹೇಳಿದೆ.

ತತೋ ಹರಿರ್ಬಲೈರ್ಯುತೋ ಬಲಾನ್ವಿತೋ ಮುನೀಶ್ವರೈಃ ।
ಸಮಂ ಕುಶಸ್ಥಲೀಂ ಯಯೌ ಸ್ತುತಃ ಕ ಶಂಕರಾದಿಭಿಃ ॥ ೨೯೭ ॥

ಬಳಿಕ ಶ್ರೀಕೃಷ್ಣ ಸೈನ್ಯ ಸಮೇತನಾಗಿ ಬಲರಾಮನಿಂದಲೂ ಯತೀಶ್ವರರಿಂದಲೂ ಕೂಡಿಕೊಂಡು ಬ್ರಹ್ಮರುದ್ರಾದಿಗಳಿಂದ ಹೊಗಳಿಸಿಕೊಳ್ಳುತ್ತ ದ್ವಾರಕೆಗೆ ತೆರಳಿದ.

ಈ ನಡುವೆ ಗೋವರ್ಧನ ಪರ್ವತದಲ್ಲಿ ಕೃಷ್ಣರಾಮರು ತಾವು ಹಿಂದೆ ಓಡಾಡುತ್ತಿದ್ದ ಸ್ಥಳವೆಂದು ಸ್ವಲ್ಪಕಾಲ ಇದ್ದರು. ಅಲ್ಲಿಗೆ ಗೋಪಗೋಪಿಯರೊಂದಿಗೆ ನಂದಗೋಪ ಯಶೋದೆಯರೂ ಬಂದು ಕೃಷ್ಣರಾಮರನ್ನು ಕಾಣುತ್ತಾರೆ. ಬಳಿಕ ಕೃಷ್ಣರಾಮರು ದ್ವಾರಕೆಗೆ

ಹೋಗುತ್ತಾರೆ. ಈ ವೃತ್ತಾಂತದೊಂದಿಗೇ ಹರಿವಂಶಗ್ರಥ ಸಮಾಪ್ತಿ. ಮುಂದೆ ಹರಿವಂಶ ಶ್ರವಣವಿಧಿ ಫಲ ಮುಂತಾದವುಗಳ ವರ್ಣನೆ.

ಸ್ವಕೀಯಪಾದಪಲ್ಲವಾಶ್ರಯಂ ಜನಂ ಪ್ರಹರ್ಷಯನ್ ।
ಉವಾಸ ನಿತ್ಯಸತ್ಸುಖಾರ್ಣವೋ ರಮಾಪತಿರ್ಗೃಹೇ ॥ ೨೯೮ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯೇ ಹಂಸಡಿಭಿಕವಧೋ
ನಾಮ ಸಪ್ತದಶೋಧ್ಯಾಯಃ ॥

ಚಿಗುರೆಲೆಯಂಥ ತನ್ನ ಪಾದಗಳನ್ನಾಶ್ರಯಿಸಿದ ಜನರಿಗೆ ಹರ್ಷನೀಡುತ್ತ ನಿತ್ಯ ನಿರ್ದುಷ್ಟಾನಂದ ಸಾಗರನಾದ ರಮಾರಮಣ ಶ್ರೀಕೃಷ್ಣ ತನ್ನ ಮನೆಯಲ್ಲಿ ವಾಸ ಮಾಡಿದ.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ರಚಿತವಾದ
ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಹಂಸಡಿಭಿಕವಧವೆಂಬ
ಹದಿನೇಳನೆ ಅಧ್ಯಾಯ ಮುಗಿಯಿತು.

ಶ್ರೀಮದಾನಂದತೀರ್ಥ ಭಗವತ್ಪಾದಪ್ರಣೀತಃ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯಃ

ಅಧ್ಯಾಯ - ೧೮

ಶ್ರೀ ರಾಘವೇಂದ್ರ ಯತಿ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ

ಭಾವಸಂಗ್ರಹ

ಅಸ್ತ್ರಕ್ಷ್ಮೇಷ್ವಧಿಕೋಽರ್ಜುನೋಽಥ ಯದನುಕ್ರೋಶೇನ ಭೀಮಂ ವಿನಾ
ಸದ್ಧರ್ಮೇ ನಿರತಂ ದದೌ ಸ್ವಗುರುವೇ ಬದ್ಧ್ವಾನೃಪಂ ಪಾರ್ಷತಂ।
ಪುತ್ರೌ ಸ ದ್ರುಪದೋಽಪಿ ವಿಹ್ನಿವಿಬುಧಸ್ತ್ರೀರೂಪಕೌ ಪ್ರಾಪ್ತವಾನ್
ಇಷ್ಟಾಂ ಧರ್ಮಜ ಆಪ ರಾಜ್ಯಪದವೀಂ ಸ ಪ್ರೀಯತಾಂ ಮೇ ಹರಿಃ ॥ ೧೮ ॥

ಶುದ್ಧವಾದ ಭಾಗವತ ಧರ್ಮದಲ್ಲಿ ನಿರತನಾದ ಭೀಮನನ್ನು ಬಿಟ್ಟರೆ ಅಸ್ತ್ರವೇತ್ತರಲ್ಲಿ ಅರ್ಜುನನೇ ಮೇಲೆನಿಸಿದ. ಮತ್ತು ದ್ರುಪದನನ್ನು ಬಂಧಿಸಿ ತನ್ನ ಗುರುವಿಗೆ ತಂದೊಪ್ಪಿಸಿದ. ಆ ದ್ರುಪದ ಅಗ್ನಿ ಮತ್ತು ದೇವಸ್ತ್ರೀರೂಪರಾದ ಮಕ್ಕಳನ್ನು ಪಡೆದ. ಧರ್ಮರಾಜ ಇಷ್ಟವಾದ ಯುವರಾಜ ಪದವಿಯನ್ನು ಪಡೆದ. ಇದೆಲ್ಲ ಕೃಷ್ಣನ ದಯೆಯಿಂದಾಯಿತು. ಅಂಥ ಹರಿ ನನಗೆ ಒಲಿಯಲಿ.

ಹದಿನೆಂಟನೇ ಅಧ್ಯಾಯ

ಭೀಮಾರ್ಜುನ ದಿಗ್ವಿಜಯ

ಭೀಮಸೇನನ ಭಾಗವತ ಧರ್ಮ

॥ ಹರಿಃ ಓಂ ॥

ಯದಾ ರಾಮಾದವಾಪ್ತಾನಿ ದಿವ್ಯಾಸ್ತ್ರಾಣಿ ಪ್ರಪೇದಿರೇ।
ದ್ರೋಣಾತ್ ಕುಮಾರಾಸ್ತೇಷ್ವಾಸೀತ್ ಸರ್ವೇಷ್ವಪ್ಯಧಿಕೋಽರ್ಜುನಃ॥ ೧ ॥

ದ್ರೋಣರು ಪರಶುರಾಮರಿಂದ ಪಡೆದ ದಿವ್ಯಾಸ್ತ್ರಗಳನ್ನು ರಾಜಕುಮಾರಿಗೆ ಕಲಿಸಿದಾಗ ಅವರೊಳಗೆ ಅಸ್ತ್ರಜ್ಞಾನದಲ್ಲಿ ಅರ್ಜುನ ಎಲ್ಲರೊಳಗೆ ಮಿಗಿಲೆನಿಸಿದ.

ನಿಜಪ್ರತಿಭಯಾ ಜಾನನ್ ಸರ್ವಾಸ್ತ್ರಾಣಿ ತತೋಽಧಿಕಮ್ ।
ನಾಸ್ತ್ರಯುದ್ಧಂ ಕ್ವಚಿದ್ ಭೀಮೋ ಮನ್ಯತೇ ಧರ್ಮಮಂಜಸಾ ॥ ೨ ॥

ಭೀಮಸೇನ ಸ್ವಪ್ರತಿಭೆಯಿಂದಲೆ ಎಲ್ಲ ಅಸ್ತ್ರಗಳನ್ನೂ ಇನ್ನೂ ಹೆಚ್ಚು ತಿಳಿದವನು. ಆದರೆ ಯಾವ ಪ್ರಸಂಗದಲ್ಲಿಯೂ ಅಸ್ತ್ರಯುದ್ಧವನ್ನು ಉತ್ತಮ ಧರ್ಮವೆಂದು ಅವನು ಬಗೆದಿರಲಿಲ್ಲ.

ನ ಹಿ ಭಾಗವತೋ ಧರ್ಮೋ ದೇವತಾಭ್ಯುಪಯಾಚನಮ್ ॥ ೩ ॥

ಜ್ಞಾನಭಕ್ತೀ ಹರೇಸ್ಪ್ರೀತಿಂ ವಿನಾ ವಿಷ್ಣೋರಪಿ ಕ್ವಚಿತ್ ।
ನಾಕಾಂಕ್ಷ್ಯಂ ಕಿಮುತಾನ್ಯೇಭ್ಯೋ ಹ್ಯಸ್ತ್ರಂ ಕಾಮ್ಯಫಲಪ್ರದಮ್ ॥ ೪ ॥

ಶುದ್ಧೇ ಭಾಗವತೇ ಧರ್ಮೇ ನಿರತೋ ಯದ್ವೃಕೋದರಃ।
ನೈಕಾಮ್ಯಕರ್ಮತೃತ್ ತಸ್ಮಾನ್ನಾಯಾಚದ್ ದೇವಮಾನುಷಾನ್ ॥ ೫ ॥

ಹರಿಶ್ಚನಾರ್ಥಿತಸ್ತೇನ ಕದಾಚಿತ್ ಕಾಮ್ಯಲಿಪ್ಸಯಾ।
ಭಿಕ್ಷಾಮಂಟಶ್ಚಹುಂಕಾರಾತ್ ಕರವದ್ ವೈಶ್ಯತೋಽಗ್ರಹೀತ್ ॥ ೬ ॥

ಅಸ್ತ್ರಮಂತ್ರಗಳಿಂದ ಆಯಾ ಅಸ್ತ್ರದೇವತೆಗಳನ್ನು ಯಾಚಿಸುವುದು ಶುದ್ಧ ಭಾಗವತ ಧರ್ಮವಲ್ಲ. ವಿಷ್ಣುವಿನಿಂದಲೂ ಜ್ಞಾನ ಭಕ್ತಿ ಹರಿಪ್ರೀತಿಗಳನ್ನು ಹೊರತು ಬೇರೇನನ್ನೂ ಬಯಸಬಾರದು ಎಂದಮೇಲೆ ಕಾಮ್ಯ ಫಲಪ್ರದವಾದ ಅಸ್ತ್ರವನ್ನು ಅನ್ಯರಿಂದ ಬಯಸುವುದು ಸರ್ವಥಾ ಯುಕ್ತವಾಗದು. ಭೀಮಸೇನ ಶುದ್ಧಭಾಗವತ ಧರ್ಮದಲ್ಲಿ

ನಿರತನಾದವನು. ಕಾಮ್ಯಕರ್ಮ ಮಾಡದವನು. ಅದರಿಂದ ದೇವತೆಗಳನ್ನಾಗಲಿ ಮನುಷ್ಯರನ್ನಾಗಲಿ ಎಂದೂ ಬೇಡುತ್ತಿರಲಿಲ್ಲ. ಕಾಮ್ಯಫಲದಾಸೆಯಿಂದ ಅವನು ಹರಿಯನ್ನು ಎಂದೂ ಬೇಡುತ್ತಿರಲಿಲ್ಲ. ಭಿಕ್ಷಾಟನ ಮಾಡುವಾಗಲೂ ವೈಶ್ಯರಿಂದ ವಸೂಲಿ ಮಾಡುವಂ ಹುಂಕಾರದಿಂದಲೆ ಭಿಕ್ಷೆ ಸ್ವೀಕರಿಸುತ್ತಿದ್ದ.

ಯುದ್ಧದಲ್ಲಿ ಅಸ್ತ್ರಗಳ ಬಳಕೆ ಶುದ್ಧ ಭಾಗವತಧರ್ಮಕ್ಕೆ ಅನುಗುಣವಲ್ಲ. ಏಕೆಂದರೆ ಅಸ್ತ್ರಪ್ರಯೋಗಕಾಲದಲ್ಲಿ ಆಯಾ ಅಸ್ತ್ರದೇವತೆಯನ್ನು ಧ್ಯಾನಿಸಿ ಶತ್ರುಸಂಹಾರ ಮಾಡೆಂದು ಬೇಡಬೇಕಾಗುತ್ತದೆ. ಇದು ಅನ್ಯದೇವೋಪಾಸನೆಯೂ ಹೌದು. ಕಾಮ್ಯಕರ್ಮವೂ ಹೌದು. ಅದರಿಂದ ಅಸ್ತ್ರಯುದ್ಧವನ್ನೇ ಮಾಡದ ಭೀಮ ದ್ರೋಣರಲ್ಲಿ ಅಸ್ತ್ರೋಪದೇಶವನ್ನು ಬೇಡುವುದಿಲ್ಲ. ಮತ್ತು ಸರ್ವಜ್ಞನಾದ್ದರಿಂದ ಅಸ್ತ್ರವಿದ್ಯೆ ಎಲ್ಲವೂ ಕರಗತವಾಗಿರುವಾಗ ಉಪದೇಶವೇಕೆ? ಏಕಚಕ್ರಾನಗರಿಯಲ್ಲಿ ಪಾಂಡವರು ಬ್ರಾಹ್ಮಣವೇಷದಿಂದ ವಾಸಮಾಡುತ್ತ ಭಿಕ್ಷಾಟನೆಗೆ ಹೋಗುತ್ತಿದ್ದರು. ಆಗಲೂ ಭೀಮ ಭಿಕ್ಷೆ ಬೇಡುತ್ತಿರಲಿಲ್ಲ. ಬಕಾಸುರನನ್ನು ಕೊಂದು ಊರನ್ನು ಕಾಪಾಡಿದ್ದರಿಂದ ಊರಿಗೆ ಅಧಿಪತಿ ಅವನೆ ಆಗಿದ್ದ. ಆದರಿಂದ ರಾಜ ವೈಶ್ಯರಿಂದ ಕರ ವಸೂಲಿ ಮಾಡುವಂತೆ ಆಜ್ಞೆಮಾಡಿಯೆ ಭಿಕ್ಷೆಪಡೆಯುತ್ತಿದ್ದ. ಮನೆಯಂಗಳದಲ್ಲಿನಿಂತು ಒಮ್ಮೆ ಹುಂಕಾರ ಮಾಡಿದರೆ ಜನರು ಅರಿತು ತಾವೆ ಭಯಭಕ್ತಿಯಿಂದ ಭಿಕ್ಷೆ ಹಾಕುತ್ತಿದ್ದರು. ಇಲ್ಲಿ ರಾಜಮರ್ಯಾದೆ ಇದೆ ಹೊರತು ಯಾಚಕ ವೃತ್ತಿ ಇಲ್ಲ.

ನಾನ್ಯದೇವಾ ನತಾಸ್ತೇನ ವಾಸುದೇವಾನ್ನ ಪೂಜಿತಾಃ।
ನ ಪ್ರತೀಪಂ ಹರೇಃ ಕ್ವಾಪಿ ಸ ಕರೋತಿ ಕಥಂಚನ ॥ ೭ ॥

ಹರಿಯನ್ನದೆ ಅನ್ಯ ದೇವತೆಗಳನ್ನು ಭೀಮನೆಂದೂ ನಮಿಸಲಿಲ್ಲ. ಪೂಜಿಸಲೂ ಇಲ್ಲ. ಹರಿಗೆ ಯಾವ ಕಾಲದಲ್ಲಿಯೂ ಯಾವ ರೀತಿಯಲ್ಲಿಯೂ ವಿರೋಧ ಮಾಡಲಿಲ್ಲ.

ಅನುಪಸ್ಕಾರಿಣೋ ಯುದ್ಧೇ ನಾಭಿಯಾತಿ ಹ್ಯುಪಸ್ಕರೀ।
ನಾಪಯಾತಿ ಯುಧಃ ಕ್ವಾಪಿ ನ ಕ್ವಚಿಚ್ಛದ್ಮವಾಚರೇತ್ ॥ ೮ ॥

ಭೀಮ ಯುದ್ಧದಲ್ಲಿ ಆಯುಧ ಹಿಡಿದು ನಿರಾಯುಧರ ಮೇಲೆ ಏರಿ ಹೋಗಲಿಲ್ಲ. ಯುದ್ಧದಿಂದ ಎಂದೂ ಹಿಮ್ಮೆಟ್ಟಲಿಲ್ಲ. ಎಂದೂ ಕಪಟವನ್ನಾಚರಿಸಲಿಲ್ಲ.

ನ ಚೌರ್ಧ್ವದೈಹಿಕಾನುಜ್ಞಾಮವೈಷ್ಣವ ಕೃತೇಽಕರೋತ್।
ನ ಕರೋತಿ ಸ್ವಯಂ ನೈಷಾಂ ಪ್ರಿಯಮಪ್ಯಾಚರೇತ್ ಕ್ವಚಿತ್ ॥ ೯ ॥

ಭೀಮ ವಿಷ್ಣುದ್ವೇಷಿಗಳ ಅಂತ್ಯಕ್ರಿಯೆ ಮಾಡಲು ಇತರರಿಗೆ ಅನುಮತಿ ನೀಡುತ್ತಿರಲಿಲ್ಲ. ತಾನೂ ಮಾಡುತ್ತಿರಲಿಲ್ಲ. ಅವರಿಗೆ ಪ್ರಿಯವನ್ನೂ ಎಂದೂ ಆಚರಿಸುತ್ತಿರಲಿಲ್ಲ.

ಸಖ್ಯಂ ನಾವೈಷ್ಣವೈಶ್ಚಕ್ರೇ ಪ್ರತೀಪಂ ವೈಷ್ಣವೇ ನ ತು।
ಪರೋಕ್ಷೇಽಪಿ ಹರೇರ್ನಿಂದಾಂ ಕೃತ್ತೋ ಜಿಹ್ವಾಂ ಛಿನತ್ತಿ ಚ ॥ ೧೦ ॥

ಭೀಮ ಅವೈಷ್ಣವರೊಡನೆ ಗೆಳೆತನವನ್ನು ಮಾಡುವುದಿಲ್ಲ. ವೈಷ್ಣವರಲ್ಲಿ ವಿರೋಧವನ್ನೂ ಮಾಡುವುದಿಲ್ಲ. ಪ್ರತ್ಯಕ್ಷ ಹಾಗಿರಲಿ ಪರೋಕ್ಷದಲ್ಲಿಯೂ ಹರಿನಿಂದೆ ಮಾಡುವವನ ನಾಲಿಗೆ ಸೀಳಿ ಹಾಕುತ್ತಾನೆ.

ನಿಂದಾಂ ಭಗವತಃ ಶೃಣ್ವನ್ ತತ್ಪರಸ್ಯ ಜನಸ್ಯ ವಾ।
ತತೋ ನಾಪೈತಿ ಯಃ ಸೋಽಪಿ ಯಾತ್ಯಧಃ ಸುಕೃತಾಚ್ಚ್ಯುತಃ ॥

ಎಂದು ವಿಷ್ಣುವೈಷ್ಣವ ನಿಂದೆಯನ್ನು ಕೇಳುವುದು ನಿಷಿದ್ಧವಾಗಿದೆ. ಶಕ್ಯವಿದ್ದರೆ ನಿಂದೆಯನ್ನು ತಡೆಯಬೇಕು. ಇಲ್ಲದಿದ್ದರೆ ಅಲ್ಲಿಂದ ಎದ್ದು ಹೋಗಬೇಕು. ಸರ್ವಶಕ್ತನಾದ ಭೀಮ ತಡೆದು ನಿಲ್ಲಿಸುತ್ತಿದ್ದ.

ಪ್ರತೀಪಕಾರಿಣೋ ಹಂತಿ ವಿಷ್ಣೋರ್ವೈತಾನಜೀಘನತ್।
ನ ಸಂಶಯಂ ಕದಾಪ್ಯೇಷ ಧರ್ಮೇ ಜ್ಞಾನೇಽಪಿ ವಾಕರೋತ್ ॥ ೧೧ ॥

ವಿಷ್ಣುವಿಗೆ ವಿರೋಧಮಾಡುವವರನ್ನು ತಾನೂ ಕೊಲ್ಲುತ್ತಿದ್ದ. ಇನ್ನೊಬ್ಬರಿಂದಲೂ ಕೊಲ್ಲಿಸುತ್ತಿದ್ದ. ಶುದ್ಧ ಭಾಗವತ ಧರ್ಮದ ವಿಷಯದಲ್ಲಾಗಲಿ ಹರಿಸರ್ವೋತ್ತಮತ್ವಾದಿ ತತ್ವಜ್ಞಾನದ ವಿಷಯದಲ್ಲಿಯಾಗಲಿ ಎಂದೂ ಸಂಶಯ ಮಾಡುತ್ತಿರಲಿಲ್ಲ.

ಭೀಮಸೇನನ ಅಸ್ತ್ರಯುದ್ಧ

ವಿದ್ಯೋಪಜೀವನಂ ನೈವ ಚಕಾರಾಪದ್ಯಪಿ ಕ್ವಚಿತ್।
ಅತೋ ನ ಧರ್ಮನಹುಷೌ ಪ್ರತ್ಯುವಾಚ ಕಥಂಚನ ॥ ೧೨ ॥

ಭೀಮ ಆಪತ್ತಿನಲ್ಲಾದರೂ ಎಂದೂ ವಿದ್ಯೆಯಿಂದ ಉಪಜೀವನ ಮಾಡುತ್ತಿರಲಿಲ್ಲ. ಅದರಿಂದ ಯಮನ ಪ್ರಶ್ನೆಗಳಿಗಾಗಲಿ ನಹುಷನ ಪ್ರಶ್ನೆಗಳಿಗಾಗಲಿ ಯಾವ ವಿಧದಿಂದಲೂ ಉತ್ತರಿಸಲಿಲ್ಲ.

ವನಪರ್ವದಲ್ಲಿ ಪಾಂಡವರನ್ನು ಯಮ ಪರೀಕ್ಷಿಸುವುದಕ್ಕಾಗಿ ಒಂದು ಕೊಳದ ಬಳಿ ಯಕ್ಷರೂಪದಿಂದ ಅದೃಶ್ಯನಾಗಿ ನಿಂತು, ನೀರು ಕುಡಿಯಲು ಒಬ್ಬೊಬ್ಬರಾಗಿ ಬಂದ ಪಾಂಡವರಿಗೆ, 'ನಿಲ್ಲು, ಇದು ನನ್ನ ಕೊಳ. ನನ್ನ

ಪ್ರಶ್ನೆಗಳಿಗೆ ಉತ್ತರ ನೀಡಿದ ಬಳಿಕ ನೀರು ಕುಡಿ. ಇಲ್ಲವಾದರೆ ನೀರು ಕುಡಿದ ಮಾತ್ರಕ್ಕೆ ಸಾಯುವೆ' ಎಂದ. ತಮ್ಮಂದಿರೆಲ್ಲರೂ ಉತ್ತರ ಕೊಡದೆ ನೀರು ಕುಡಿದು ಬಿದ್ದಾಗ ಯುಧಿಷ್ಠರನೊಬ್ಬನೆ ಪ್ರಶ್ನೆಗಳೆಲ್ಲಕ್ಕೂ ಉತ್ತರ ನೀಡಿ ಯಮನನ್ನು ಸಂತೋಷಗೊಳಿಸಿ ತಮ್ಮಂದಿರನ್ನು ಎಬ್ಬಿಸಿದ. ಮಹಾಭಾರತದಲ್ಲಿ ಭೀಮ ಅಹಂಕಾರದಿಂದ ಪ್ರಶ್ನೆಗೆ ಉತ್ತರಿಸಲಿಲ್ಲ ಎಂದಂತೆ ಕಾಣುತ್ತದೆ. ವಸ್ತುತಃ ಪ್ರಶ್ನೆಗಳಿಗೆ ಉತ್ತರಿಸಿ ಜೀವ ಉಳಿಸಿಕೊಳ್ಳಲು ಒಪ್ಪಲಿಲ್ಲ. ಈ ವಿದ್ಯೋಪಜೀವನ ಬ್ರಾಹ್ಮಣನಿಗೇ ಸಲ್ಲದು. ಇನ್ನು ಕ್ಷತ್ರಿಯನಿಗೆ ಏನು ಹೇಳಬೇಕು? ಅದರಿಂದಲೇ ಭೀಮ ಉತ್ತರಿಸಲಿಲ್ಲ. ಮೂರ್ಛಿತನಾಗಿ ಬಿದ್ದಂತೆ ತೋರಿಕೊಂಡ. ಎಂದು ನಿರ್ಣಯ ಹೇಳುತ್ತಿದೆ.

ಅಗಸ್ತ್ಯರ ಶಾಪದಿಂದ ಹಾವಾಗಿ ಬಿದ್ದಿದ್ದ ನಹುಷನೊಮ್ಮೆ ವನವಾಸ ಕಾಲದಲ್ಲಿ ಭೀಮನನ್ನು ಹಿಡಿದು ತೆಕ್ಕೆಹಾಕಿ ಕೆಲವು ಪ್ರಶ್ನೆಗಳಿಗೆ ಉತ್ತರಿಸಿದರೆ ಬಿಡುವೆನೆಂದ. ಭೀಮ ಉತ್ತರಿಸಲಿಲ್ಲ. ಕೊನೆಗೆ ಧರ್ಮರಾಜನೆ ಉತ್ತರಿಸಿದ. ಇಲ್ಲಿ ಭಾರತದಲ್ಲಿ ಭೀಮ ತಾನು ಹಾವಿನ ತೆಕ್ಕೆಯಲ್ಲಿ ಸಿಕ್ಕಿಕೊಂಡುದು ಅದೃಷ್ಟವಶದಿಂದ ಎಂದು ಸುಮ್ಮನಿದ್ದನಂತೆ. ವಸ್ತುತಃ ನಹುಷನಲ್ಲಿ ಸೇರಿಕೊಂಡಿದ್ದ ಎಲ್ಲ ದೇವತೆಗಳ ಋಷಿಗಳ ಅದೃಷ್ಟವೆಲ್ಲ ಭೀಮನಿಗೆ ಬರಬೇಕಾಗಿತ್ತು. ಅದರಿಂದ 'ಅದೃಷ್ಟವಶ'ದಿಂದ ಹಾವಿನ ತೆಕ್ಕೆಯಲ್ಲಿ ಸಿಕ್ಕಿಕೊಂಡಿದ್ದ. ವಿದ್ಯೋಪಜೀವನವನ್ನೊಪ್ಪದೆ ಉತ್ತರಿಸಲು ನಿರಾಕರಿಸಿ ಎಲ್ಲ ಅದೃಷ್ಟವನ್ನೂ ಪಡೆದಿದ್ದ.

ಆಜ್ಞಯೈವ ಹರೇರ್ದ್ರೌಣೇರಸ್ತ್ರಾಣ್ಯಸ್ತ್ರೈರಶಾಮಯತ್ ।
ಅದೃಶ್ಯೋಽಲಂಬುಸೋ ಭಗ್ನೋ ನಾನ್ಯತ್ರ ತು ಕಥಂಚನ ॥ ೧೩ ॥

ಶ್ರೀಹರಿಯ ಅನುಮತಿ ಇದೆ ಎಂದೇ ಭೀಮ ಅಶ್ವತ್ಥಾಮನ ಅಸ್ತ್ರಗಳನ್ನು ಪ್ರತ್ಯಸ್ತ್ರಗಳಿಂದ ಶಮನಗೊಳಿಸಿದ. ಅದೃಶ್ಯನಾದ ಅಲಂಬುಸನನ್ನೂ ಅಸ್ತ್ರದಿಂದ ಪರಾಭವಗೊಳಿಸಿದ, ಹೊರತು, ಬೇರೆ ಸಂದರ್ಭಗಳಲ್ಲಿ ಸರ್ವಥಾ ಅಸ್ತ್ರಯುದ್ಧ ಮಾಡಲಿಲ್ಲ.

ಕರ್ಣಪರ್ವದಲ್ಲಿ ಭೀಮ ಅಶ್ವತ್ಥಾಮರ ಅದ್ಭುತವಾದ ಅಸ್ತ್ರಯುದ್ಧವನ್ನು ಕಂಡು ಸಿದ್ಧರು ಹೊಗಳುತ್ತಾರೆ-

ಅಹೋ ಜ್ಞಾನೇನ ಸಂಪನ್ನೌ ಉಭೌ ಬ್ರಾಹ್ಮಣ ಕ್ಷತ್ರಿಯೌ ।

'ಭೀಮ ಅಶ್ವತ್ಥಾಮರಿಬ್ಬರ ಅಸ್ತ್ರಜ್ಞಾನವೂ ಅದ್ಭುತ!'

ಭೀಮನ ಸರ್ವಜ್ಞತ್ವ ಕಲಿಯದೇ ಬಂದ ವಿದ್ಯೆ ಇಲ್ಲಿ ಪ್ರಕಟವಾಗಿದೆ.

ಮಹಾಭಾರತ ಪ್ರಚಲಿತ ಪಾಠದಲ್ಲಿ ಇಬ್ಬರು ಅಲಂಬುಷರು ಬರುತ್ತಾರೆ. ಒಬ್ಬ ಋಷ್ಯಶೃಂಗನೆಂಬ ರಾಕ್ಷಸನ ಮಗ. ಏಕಚಕ್ರಾ ನಗರದಲ್ಲಿ ಭೀಮನಿಂದ ಹತನಾದ ಬಕಾಸುರ ಇವನ ಸೋದರ. ಇವನಿಗೆ ಸಾಲಕಟಂಕಟ ಎಂದು ಇನ್ನೊಂದು ಹೆಸರು. ಕುರುಕ್ಷೇತ್ರ ಯುದ್ಧದಲ್ಲಿ ಘಟೋತ್ಕಚನ ಕೈಯಲ್ಲಿ ಸಾಯುತ್ತಾನೆ. ಇನ್ನೊಬ್ಬ ಜಟಾಸುರನ ಮಗ. ಇವನನ್ನೂ ಕುರುಕ್ಷೇತ್ರದಲ್ಲಿ ಘಟೋತ್ಕಚನೆ ಕೊಲ್ಲುತ್ತಾನೆ. ನಿರ್ಣಯ ಪ್ರಕಾರ ಮೊದಲನೆಯವನು 'ಅಲಂಬುಸ'. ಎರಡನೆಯವನು 'ಅಲಂಬಲ'. ಅಲಂಬುಸ ಭೀಮನೊಡನೆ ಯುದ್ಧದಲ್ಲಿ ಸೋತು ಅದೃಶ್ಯನಾಗಿ ವಂಚಿಸಲು ತೊಡಗಿದಾಗ ಭೀಮ ಹರೀಚ್ಛೆಯಂತೆ ತ್ವಾಷ್ಟ್ರ ಅಸ್ತ್ರವನ್ನು ಪ್ರಯೋಗಿಸಿ ಅವನನ್ನು ಪರಾಭವಗೊಳಿಸುತ್ತಾನೆ.

ನ ಹ್ಯಸ್ತ್ರಯುದ್ಧೇ ಸದೃಶೋ ದ್ರೌಣೇರಸ್ಯರ್ಜುನಾದೃತೇ।
ಸರ್ವವಿತ್ತ್ವಂ ತತೋ ಭೀಮೇ ಪ್ರದರ್ಶಯಿತುಮೀಶ್ವರಃ।
ಆದಾದಾಜ್ಞಾಮಸ್ತ್ರಯುದ್ಧೇ ತಥೈವಾಲಂಬುಸಂ ಪ್ರತಿ ॥ ೧೪ ॥

ಅರ್ಜುನ ಹೊರತು ಇನ್ನೊಬ್ಬ ಅಸ್ತ್ರಯುದ್ಧದಲ್ಲಿ ಅಶ್ವತ್ಥಾಮನಿಗೆ ಸಮಾನನಿರಲಿಲ್ಲ. ಅದರಿಂದ ಭೀಮನಲ್ಲಿ ಅರ್ಜುನನಿಗಿಂತಲೂ ಹೆಚ್ಚಿನ ಸರ್ವಜ್ಞತ್ವವನ್ನು ಲೋಕಕ್ಕೆ ತೋರಿಸಲು ಶ್ರೀಕೃಷ್ಣ ಅಶ್ವತ್ಥಾಮನೊಡನೆಯೂ ಅಲಂಬುಸನೊಡನೆಯೂ ಅಸ್ತ್ರಯುದ್ಧ ಮಾಡುವಲ್ಲಿ ಭೀಮನಿಗೆ ಅನುಮತಿ ನೀಡಿದ್ದ.

ಪ್ರತ್ಯಕ್ಷೀಭೂತದೇವೇಷು ಬಂಧುಜ್ಯೇಷ್ಠೇಷು ವಾ ನತಿಮ್।
ಮರ್ಯಾದಾಸ್ಥಿತಯೇಽಶಾಸದ್ ಭಗವಾನ್ ಪುರುಷೋತ್ತಮಃ ॥ ೧೫ ॥

ಪ್ರತ್ಯಕ್ಷರಾಗಿ ಬರುವ ದೇವತೆಗಳಲ್ಲಿಯೂ ವಯಸ್ಸಿನಲ್ಲಿ ಹಿರಿಯರಾದ ಬಂಧುಗಳಲ್ಲಿಯೂ ನಮಸ್ಕಾರ ಸಲ್ಲಿಸುವುದನ್ನು ಲೋಕಮರ್ಯಾದೆಯ ಉಳಿವಿಗಾಗಿ ಕೃಷ್ಣ ತಾನೇ ಮಾಡಿ ತೋರಿಸಿದ್ದ.

ಕೃಷ್ಣ ಲೋಕಮರ್ಯಾದೆಯ ಉಳಿವಿಗಾಗಿ ದೇವತೆಗಳಿಗೂ ಗುರುಹಿರಿಯರಿಗೂ ನಮಿಸುತ್ತಿದ್ದ. ಆದರೆ ನಮನ ಅವರಿಗೆ ಅಲ್ಲ. ಅವರೊಳಗೆ ಇರುವ ತನಗೇ ತಾನು ನಮಿಸುತ್ತಿದ್ದ.

ತತ್ರಾಪಿ ವಿಷ್ಣುಮೇವಾಸೌ ನಮೇನ್ನಾನ್ಯಂ ಕಥಂಚನ।
ಆಜ್ಞಯೈವಾಸ್ತ್ರದೇವಾಂಶ್ಚ ಪ್ರೇರಯಾಮಾಸ ನಾರ್ಥನಾತ್ ॥ ೧೬ ॥

ಭೀಮ ಅವರಲ್ಲಿಯೂ ವಿಷ್ಣುವನ್ನೇ ನಮಿಸುತ್ತಿದ್ದ. ಹೊರು ಇನ್ನೊಬ್ಬನನ್ನು ಯಾವ

ರೀತಿಯಿಂದಲೂ ಅಲ್ಲ. ರುದ್ರಾದಿ ಅಸ್ವಾಭಿಮಾನಿ ದೇವತೆಗಳನ್ನೂ ಕೂಡ ಶತ್ರುನಿಗ್ರಹಕ್ಕೆ ಭಟರಿಗೆ ಆಜ್ಞೆ ಮಾಡುವಂತೆ ಆಜ್ಞೆ ಮಾಡಿಯೇ ಕಳಿಸುತ್ತಿದ್ದ. ಪ್ರಾರ್ಥನೆ ಮಾಡಿ ಅಲ್ಲ.

ಹಾಗಾದರೆ ಸದಾ ಅಸ್ತ್ರಯುದ್ಧವನ್ನೇ ಮಾಡಬಹುದಿತ್ತು. ಎಂದರೆ ಅದು ಸರಿಯಲ್ಲ. ನಾರಾಯಣ ದ್ವಿಟ್ ತದನುಬಂಧಿನಿಗ್ರಹವನ್ನು ಸದಾ ತಾನೇ ಮಾಡಬೇಕು. ಕೆಲವೊಮ್ಮೆ ಕಾರಣಾಂತರದಿಂದ ಇನ್ನೊಬ್ಬರಿಂದ ಮಾಡಿಸಬಹುದು. ಅದರಿಂದ ಭೀಮ ಕೆಲವೊಮ್ಮೆ ಮಾತ್ರ ಅಸ್ತ್ರದೇವತೆಗಳ ಮೂಲಕ ಆ ಕೆಲಸ ಮಾಡಿಸಿದ.

ದ್ರೌಪದಿಯ ಧರ್ಮನಿಷ್ಠೆ

ಅನ್ವೇನಮೇವ ತದ್ಧರ್ಮೇ ಕೃಷ್ಣೈಕಾ ಸಂಸ್ಥಿತಾ ಸದಾ।
ಧೃತರಾಷ್ಟ್ರಾದಪಿ ವರಂ ತತೋ ನಾತ್ಮಾರ್ಥಮಗ್ರಹೀತ್ ॥ ೧೭ ॥

ಭೀಮನ ಅನಂತರ ಅವನನ್ನು ಅನುಸರಿಸಿದ್ದ ದ್ರೌಪದಿಯೊಬ್ಬಳೆ ವಿಷ್ಣು ಪ್ರೀತಿಕರವಾದ ಧರ್ಮದಲ್ಲಿ ಸದಾ ಇರುತ್ತಿದ್ದವಳು. ಧೃತರಾಷ್ಟ್ರನಿಂದಲೂ ಅವಳು ತನಗಾಗಿ ವರವನ್ನು ಪಡೆಯಲಿಲ್ಲ.

ಮೊದಲಿನ ಜೂಜಿನಲ್ಲಿ ಪಾಂಡವರು ರಾಜ್ಯಸಮೇತವಾಗಿ ತಮ್ಮನ್ನೆ ಸೋತಾಗ ಭೀಮನೇನು ಮಾಡುವನೋ ಎಂಬ ಭಯದಿಂದ ವಿದುರನ ಸಲಹೆಯಂತೆ ದ್ರೌಪದಿಗೆ ಧೃತರಾಷ್ಟ್ರ ವರನೀಡಲು ಉದ್ಯುಕ್ತನಾಗುತ್ತಾನೆ. ಆಗ ದ್ರೌಪದಿ ರಾಜ್ಯಸಮೇತ ಪಾಂಡವರನ್ನು ಬಿಟ್ಟು ಕೊಡಲು ಕೇಳಿದಳು. ಇದು ಭಾಗವತ ಧರ್ಮಕ್ಕೆ ವಿರುದ್ಧವಲ್ಲ. ಏಕೆಂದರೆ ವಸ್ತುತಃ ಇದು ವರವೆ ಅಲ್ಲ. ಜೂಜಾಟ ಅಧರ್ಮ. ಅದರಲ್ಲಿ ಸೋತುದು ಸೋತಂತೆಯೆ ಅಲ್ಲ. ಅದರಿಂದ ವರ ಪಡೆಯುವ ಪ್ರಶ್ನೆಯೆ ಬರುವುದಿಲ್ಲ. ನ್ಯಾಯವಾಗಿ ತನ್ನದನ್ನು ತಾನು ಪಡೆದಿದ್ದಾಳೆ ದ್ರೌಪದಿ. ಅವಳು ಪತಿಗಳಿಂದ ಅಥವಾ ಭಗವಂತನಿಂದ ಹೊರತು ಇನ್ಯಾರಿಂದಲೂ ವರ ಪಡೆಯುವುದಿಲ್ಲ.

ನಾಶಪದ್ ಧಾರ್ತರಾಷ್ಟ್ರಾಂಶ್ಚ ಮಹಾಪದ್ಯಪಿ ಸಾ ತತಃ।
ನ ವಾಚಾ ಮನಸಾ ವಾಪಿ ಪ್ರತೀಪಂ ಕೇಶವೇಽಚರತ್ ॥ ೧೮ ॥

ಅನ್ಯೇ ಭಾಗವತತ್ವೇಽಪಿ ಛಿನ್ನಧರ್ಮಾಃ ಕ್ವಚಿತ್ ಕ್ವಚಿತ್ ॥ ೧೯ ॥

ದ್ರೌಪದಿ ವಿಷ್ಣುಧರ್ಮದಲ್ಲಿ ಭೀಮನನ್ನೆ ಅನುಸರಿಸಿದ್ದುದರಿಂದ ಮಹಾ ಆಪತ್ತಿನಲ್ಲಿಯೂ ಅವಳು ಕೌರವರನ್ನು ಶಪಿಸಲಿಲ್ಲ. ಮಾತಿನಿಂದಾಗಲಿ ಮನಸ್ಸಿನಿಂದಾಗಲಿ

ಕೃಷ್ಣನಲ್ಲಿ ವಿರೋಧವಾಚರಿಸಲಿಲ್ಲ. ಬೇರೆ ಎಲ್ಲರೂ ವಿಷ್ಣುವಿನಲ್ಲಿ ಭಕ್ತರೆ ಆಗಿದ್ದರೂ ಅಲ್ಲಲ್ಲಿ ಕೆಲವುಕಡೆ ಭಾಗವತ ಧರ್ಮಕ್ಕೆ ವಿರುದ್ಧವಾಗಿಯೂ ನಡೆದುದುಂಟು.

ಇದಂ ತು ಮಹಾದಾಶ್ಚರ್ಯಂ ಸಭಾಮಧ್ಯೇ ವೃಕೋದರಃ।
ಸ್ವಭಾರ್ಯಾಯೈ ದ್ರುಹ್ಯತೋಽಪಿ ಸೇಹೇ ಸ್ನೇಹೇನ ಕೇಶವೇ॥

'ಇದಂತೂ ಮಹಾಶ್ಚರ್ಯದ ಸಂಗತಿ. ಏನೆಂದರೆ ಸಭೆಯ ನಡುವೆ ತನ್ನ ಮಡದಿಯ ಮಾನಹರಣ ಯತ್ನ ನಡೆಯುತ್ತಿದ್ದರೂ ಹರಿಸಂಕಲ್ಪಕ್ಕೆ ತಲೆಬಾಗಿ ಭೀಮ ಸುಮ್ಮನಿದ್ದ' ಎಂದು ಸರಸಭಾರತಿಯಲ್ಲಿ ವಾದಿರಾಜರು ಹೇಳುವಂತೆ ಹರಿ ಅಕ್ಷಯಾಂಬರ ನೀಡುವ ಸಂಕಲ್ಪ ಮಾಡಿದ್ದರಿಂದ ಅವನ ಇಚ್ಛೆಯಂತೆಯೆ ನಡೆಯುವ ಭೀಮ ಸುಮ್ಮನಿದ್ದ. ಭೀಮನ ಇಚ್ಛೆಯಂತೆ ದ್ರೌಪದಿಯೂ ಕೌರವರನ್ನು ಶಪಿಸದೆ ಸುಮ್ಮನಿದ್ದಳು.

ದೇವತೆಗಳಲ್ಲಿ ಭಿನ್ನಭಕ್ತಿ

ಸ್ಯಮಂತಕಾರ್ಥೇ ರಾಮೋಽಪಿ ಕೃಷ್ಣಸ್ಯ ವಿಮನಾಭವತ್।
ಅವಮೇನೇಽರ್ಜುನಃ ಕೃಷ್ಣಂ ವಿಪ್ರಸ್ಯ ಶಿಶುರಕ್ಷಣೇ ॥ ೨೦ ॥

ಬಲರಾಮ ಸ್ಯಮಂತಕ ಮಣಿಯ ಸಲುವಾಗಿ ಕೃಷ್ಣನಲ್ಲಿ ವೈಮನಸ್ಯ ತಾಳಿದ. ಅರ್ಜುನ ಬ್ರಾಹ್ಮಣ ಪುತ್ರರಕ್ಷಣ ಸಂದರ್ಭದಲ್ಲಿ ಕೃಷ್ಣನನ್ನು ಅವಮಾನಿಸಿದ.

ಶತಧನ್ವ ಸ್ಯಮಂತಕಮಣಿಗಾಗಿ ಸತ್ಯಭಾಮಾದೇವಿಯ ತಂದೆಯಾದ ಸತ್ರಾಜಿತನನ್ನು ಕೊಂದ. ಕೃಷ್ಣ ತನ್ನನ್ನು ಬೆನ್ನಟ್ಟಿ ಬರುತ್ತಿದ್ದಾನೆ ಎಂದು ತಿಳಿದು ಮಣಿಯನ್ನು ಅಕ್ರೂರನ ಕೈಯಲ್ಲಿತ್ತು ಮಿಥಿಲೆಯ ಕಡೆಗೆ ಓಡಿದ. ಕೃಷ್ಣ ಅವನನ್ನು ಹಿಡಿದು ಕೊಂದು ಮಣಿಗಾಗಿ ಶೋಧಿಸಿದರೆ ಅದು ಸಿಗಲಿಲ್ಲ. ಬಲರಾಮನಲ್ಲಿ ಹಾಗೇ ಹೇಳಿದ. ಆದರೆ ಬಲರಾಮ ನಂಬಲಿಲ್ಲ. ಕೋಪದಿಂದ ಮಿಥಿಲಾಪಟ್ಟಣದಲ್ಲಿಯೆ ಮೂರು ವರ್ಷಕಾಲವಿದ್ದ. ದ್ವಾರಕೆಗೆ ಬರಲಿಲ್ಲ. ಮುಂದೆ ಮಣಿ ಅಕ್ರೂರನಲ್ಲಿತ್ತೆಂದು ತಿಳಿದ ಬಳಿಕ ಅವನ ಮನಸ್ಸು ತಿಳಿಯಾಯಿತು.

ಒಬ್ಬ ಬ್ರಾಹ್ಮಣನ ಮಡದಿ ಹೆತ್ತಾಗಲೆಲ್ಲ ಮಕ್ಕಳು ಅದೃಶ್ಯವಾಗುತ್ತಿದ್ದವು. ಅರ್ಜುನ ರಕ್ಷಣೆ ಮಾಡುವೆನೆಂದ. 'ಬಲರಾಮ ಕೃಷ್ಣರಂಥವರಿಗೇ ಇದು ಸಾಧ್ಯವಾಗಲಿಲ್ಲ' ಎಂದು ಬ್ರಾಹ್ಮಣ ಹೇಳಿದಾಗ ಅರ್ಜುನ 'ನಾನು ಆ ಬಲರಾಮನಂತೆ ಅಲ್ಲ ಕೃಷ್ಣನಂತೆಯೂ ಅಲ್ಲ ಗಾಂಡೀವನನ್ನು ಹಿಡಿದು ಶಿವನನ್ನು ಯುದ್ಧದಲ್ಲಿ ಮೆಚ್ಚಿಸಿದ ಮೂರುಲೋಕದ ಗಂಡು ನಾನು', ಎಂದು ಹೇಳುತ್ತ ಕೃಷ್ಣನನ್ನು ಅವಮಾನಿಸಿದ.

ಪ್ರದ್ಯುಮ್ನ ಉದ್ಧವಃ ಸಾಂಬೋಽನಿರುದ್ಧಾದ್ಯಾಶ್ಚ ಸರ್ವಶಃ।
ಹರೇರಿಷ್ಟಂ ಸುಭದ್ರಾಯಾಃ ಫಲ್ಗುನೇ ದಾನಮಂಜಸಾ॥
ಜ್ಞಾತ್ವಾಪಿ ರುರುಧುಃ ಸಮ್ಯಕ್ ಸಾತ್ಯಕಿಃ ಕೃಷ್ಣಸಮ್ಮಿತಮ್ ॥ ೨೧ ॥

ಕದಾಚಿನ್ಮನ್ಯತೇ ಪಾರ್ಥಂ ಧರ್ಮಜೋಽಪಿ ನರಂ ಹರಿಮ್।
ಮತ್ವಾ ಬಿಭೇಜ್ಜರಾಸಂಧವಧೇ ಕೃಷ್ಣಮುದೀರಿತುಮ್ ॥ ೨೨ ॥

ಪ್ರದ್ಯುಮ್ನ ಉದ್ಧವ ಸಾಂಬ ಅನಿರುದ್ಧ ಮೊದಲಾದವರೆಲ್ಲರೂ ಸುಭದ್ರೆಯನ್ನು ಅರ್ಜುನನಿಗೆ ಕೊಡುವುದು ಕೃಷ್ಣನಿಗೆ ಇಷ್ಟವೆಂದು ಚೆನ್ನಾಗಿ ತಿಳಿದೂ ಬಹಳ ಅಡ್ಡಿ ಮಾಡಿದರು. ಸಾತ್ಯಕಿ ಕೆಲವೊಮ್ಮೆ ಅರ್ಜುನ ಕೃಷ್ಣನಿಗೆ ಸಮಾನನೆಂದು ತಿಳಿದ. ಧರ್ಮರಾಜನೂ ಕೃಷ್ಣನನ್ನು ಮಾನವನೆಂದು ಬಗೆದು ಜರಾಸಂಧವಧೆಗೆ ಹೋಗೆನ್ನಲು ಭಯಪಟ್ಟ.

ಬಂಧನಂ ಶಂಕಮಾನೋ ಹಿ ಕೃಷ್ಣಸ್ಯ ವಿದುರೋಽಪಿ ತು।
ಕೌರವೇಯ ಸಭಾಮಧ್ಯೇ ನಾವತಾರಮರೋಚಯತ್ ॥ ೨೩ ॥

ಕೃಷ್ಣನನ್ನು ಕೌರವರು ಬಂಧಿಸಬಹುದೆಂದು ಭಯಪಟ್ಟ ವಿದುರ, ಕೌರವರ ಸಭೆಗೆ ಅವನು ಬರುವುದನ್ನು ಇಷ್ಟಪಡಲಿಲ್ಲ.

ಕೃಷ್ಣ ಸಂಧಾನಕ್ಕೆ ಬಂದಾಗ ವಿದುರ 'ಕೌರವ ಮಹಾದುಷ್ಟ. ಅವನಲ್ಲಿ ಸಂಧಾನ ಪ್ರಯತ್ನ ವ್ಯರ್ಥವಾಗುತ್ತದೆ. ಹೋಗಬೇಡ' ಎಂದು ಸಲಹೆ ಮಾಡಿದ. ವಸ್ತುತಃ ಕೃಷ್ಣನನ್ನು ಕೌರವರು ಕಟ್ಟಿಹಾಕುವರೆಂಬ ಭೀತಿಯಿಂದ ಅವನು ಹಾಗೆ ಹೇಳಿದ. ಇದು ಕೃಷ್ಣನಲ್ಲಿ ಅಶಕ್ತಿಯನ್ನು ಶಂಕಿಸಿದುದರ ಪರಿಣಾಮ.

ನಕುಲಃ ಕರದಾನಾಯ ಪ್ರೇಷಯಾಮಾಸ ಕೇಶವೇ।
ಅವಮೇನೇ ಹರೇರ್ಬುದ್ಧಿಂ ಸಹದೇವಃ ಕುಲಕ್ಷಯಾತ್ ॥ ೨೪ ॥

ನಕುಲ ಕಪ್ಪನೀಡಲು ಕೃಷ್ಣನಿಗೆ ಹೇಳಿಕಳಿಸಿದ. ಸಹದೇವನೂ ಕುಲಕ್ಷಯವನ್ನು ಕಂಡು ಕೃಷ್ಣನ ಬುದ್ಧಿಯನ್ನು ಅವಮಾನಿಸಿದ.

ಧರ್ಮರಾಜನ ರಾಜಸೂಯಕ್ಕೆ ಪಶ್ಚಿಮ ದೇಶಗಳ ದಿಗ್ವಿಜಯಕ್ಕೆ ಹೊರಟ ನಕುಲ ಕೃಷ್ಣನಿಗೂ ಕಪ್ಪಕೊಡೆಂದು ಹೇಳಿ ಕಳಿಸಿದ. ಸಾಲ್ವರಾಜನ ರಾಜಸೂಯಕ್ಕೆ ಕೃಷ್ಣ ಕಪ್ಪಕೊಡಬೇಕೆಂದು ಹಂಸಡಿಭಿಕರು ಹೇಳಿಕಳಿಸಿದರು. ಹಾಗೇ ನಕುಲನೂ ಮಾಡಿದ! ಸಹದೇವನೂ ಕುರುಕುಲ

ಕ್ಷಯವಾದಾಗ ಕೃಷ್ಣನ ಬುದ್ಧಿ ಇಷ್ಟೇ ಎಂದು ಅವಮಾನಿಸಿದ. ರಾಜನೀತಿಯಲ್ಲಿ ಕೃಷ್ಣನಿಗಿಂತ ತಾನು ಮೇಲೆಂದು ಬಗಿದ.

ದೇವಕೀವಸುದೋವಾದ್ಯಾ ಮೇನಿರೇ ಮಾನುಷಂ ಹರಿಮ್ ।
ಭೀಷ್ಮಸ್ತು ಭಾರ್ಗವಂ ರಾಮಮವಮೇನೇ ಯುಯೋಧ ಚ ॥ ೨೫ ॥

ದೇವಕೀ ವಸುದೇವ ಮುಂತಾದವರು ಕೃಷ್ಣನನ್ನು ಮನುಷ್ಯನೆಂದು ತಿಳಿದಿದ್ದರು. ಭೀಷ್ಮ ಪರಶುರಾಮನನ್ನು ಅವಮಾನಿಸಿದ. ಯುದ್ಧವನ್ನು ಮಾಡಿದ.

ಅಂಬೆಯನ್ನು ಮದುವೆಯಾಗೆಂದು ಗುರುವಾದ ಪರಶುರಾಮ ಹೇಳಿದರೂ ಭೀಷ್ಮ ಅದರಂತೆ ನಡೆಯದೆ ಅವಮಾನಿಸಿದ. ಯುದ್ಧವನ್ನೂ ಮಾಡಿ ಗುರುವನ್ನು ಸೋಲಿಸಿದೆನೆಂದುಕೊಂಡ!

ದ್ರೋಣಕರ್ಣದ್ರೌಣೇಕೃಪಾಃ ಕೃಷ್ಣಾಭಾವೇ ಮನೋ ದಧುಃ।
ದೇವಾಃ ಶಿವಾದ್ಯಾ ಅಪಿ ತು ವಿರೋಧಂ ಚಕ್ರೇ ಕ್ವಚಿತ್ ॥ ೨೬ ॥

ದ್ರೋಣ ಕರ್ಣ ಅಶ್ವತ್ಥಾಮ ಕೃಪರು ಕೃಷ್ಣನನ್ನು ಇಲ್ಲದಂತೆ ಮಾಡಬೇಕೆಂದು ಬಗೆದರು. ರುದ್ರಾದಿ ದೇವತೆಗಳೂ ಕೆಲವೊಮ್ಮೆ ಕೃಷ್ಣನಲ್ಲಿ ವಿರೋಧ ಮಾಡಿದರು.

ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನ ಸಾರಥಿಯಾದ ಕೃಷ್ಣನ ಮೇಲೆ ಬಾಣಪ್ರಯೋಗ ಮಾಡಿದರು ದ್ರೋಣ ಕರ್ಣ ಮುಂತಾದವರು. ಸಾರಥಿಯನ್ನು ಕೊಂದು ರಥಿಕನನ್ನು ಗೆಲ್ಲುವುದು ಅವರ ಯುದ್ಧನೀತಿಯಾಗಿತ್ತು.

ಗೋವರ್ಧನೋದ್ಧಾರ ಪಾರಿಜಾತಾಪಹರಣದ ಸಂದರ್ಭಗಳಲ್ಲಿ ರುದ್ರಾದಿ ದೇವತೆಗಳು ಅಜ್ಞಾನದಿಂದ ಕೃಷ್ಣನೊಡನೆ ಯುದ್ಧ ಮಾಡಿದರು.

ಋಷಿಮಾನುಷಗಂಧರ್ವಾ ವಕ್ತವ್ಯಾಃ ಕಿಮತಃ ಪರಮ್ ।
ಜನ್ಮಜನ್ಮಾಂತರಾಜ್ಞಾನಾದವಜಾನಂತಿ ಯತ್ ಸದಾ ॥ ೨೭ ॥

ಋಷಿ ಮನುಷ್ಯ ಗಂಧರ್ವರ ಬಗ್ಗೆ ಇನ್ನೇನು ಹೇಳಬೇಕು? ಏಕೆಂದರೆ ಅವರು ಜನ್ಮಜನ್ಮಾಂತರಗಳಲ್ಲಿ ಸದಾ ಇರುವ ಅನಾದಿಯಾದ ಅಜ್ಞಾನದಿಂದ ಹರಿಯನ್ನು ಆಗಾಗ ತಿರಸ್ಕರಿಸುತ್ತಾರೆ.

ಜನ್ಮಜನ್ಮಾಂತರಗಳಲ್ಲಿ ತಿರಸ್ಕರಿಸುವುದಿಲ್ಲ. ಜನ್ಮಜನ್ಮಾಂತರಗಳಲ್ಲಿ ಬಿಡದೆ ಜೊತೆಗಿರುವ ಅನಾದಿ ಅಜ್ಞಾನದಿಂದ ಇನ್ನೂ ಬಿಡುಗಡೆ ಹೊಂದದಿರುವ ಸಂಸಾರಿ ಜೀವರು, ಅವರು ದೇವತೆಗಳಿರಲಿ, ಋಷಿಗಳಿರಲಿ, ಯಾರೇ

ಇರಲು, ಅಜ್ಞಾನ ಪ್ರಯುಕ್ತವಾಗಿ ಕೆಲವೊಮ್ಮೆ ಹರಿಯಲ್ಲಿ ಅನ್ಯಥಾಜ್ಞಾನ ಪಡೆಯುತ್ತಾರೆ.[1] ವಾಯು ಭಾರತಿಯರಿಗೆ ಅಜ್ಞಾನ ದಗ್ಧಪಟದಂತೆ ಕಾರ್ಯಕಾರಿಯಾಗದಿರುವುದರಿಂದ, ಮಹಾಲಕ್ಷ್ಮಿಗೆ ಅಜ್ಞಾನವೆ ಇಲ್ಲದಿರುವುದರಿಂದ ಅನ್ಯಥಾ ಜ್ಞಾನವಿಲ್ಲ. ಅದರಿಂದ ಅವರು ಅಚ್ಛಿನ್ನಭಕ್ತರು. ಬೇರೆ ಎಲ್ಲರೂ ಛಿನ್ನಭಕ್ತಿಯವರು.

ಪರಶುಕ್ಲತ್ರಯರು

ತಸ್ಮಾದೇಕೋ ವಾಯುರೇವ ಧರ್ಮೇ ಭಾಗವತೇ ಸ್ಥಿತಃ।
ಲಕ್ಷ್ಮೀಃ ಸರಸ್ವತೀ ಚೇತಿ ಪರಶುಕ್ಲತ್ರಯಂ ಸ್ಮೃತಮ್ ॥ ೨೮ ॥

ಅದರಿಂದ ವಾಯು ಒಬ್ಬನೆ ವಿಷ್ಣುಪ್ರೀತಿಕರವಾದ ಧರ್ಮದಲ್ಲಿ ಸ್ಥಿರವಾಗಿ ನಿಲ್ಲುವವನು. ಹಾಗೇ ಲಕ್ಷ್ಮಿಯೂ ಸರಸ್ವತಿಯೂ. ಅದರಿಂದ ಇವರು ಮೂವರು ಪರಶುಕ್ಲತ್ರಯರು.

ವಾಯು ಭಾರತಿ ಎನ್ನದೆ ವಾಯು ಸರಸ್ವತಿ ಎಂದುದು 'ವಾಯು' ಪದದಿಂದ ಬ್ರಹ್ಮ ಮತ್ತು ಇತರ ಋಜುಯೋಗಿಗಳನ್ನು 'ಸರಸ್ವತಿ' ಪದದಿಂದ ಭಾರತಿ ಮತ್ತು ಇತರ ಋಜು ಪತ್ನಿಯರನ್ನೂ ಗ್ರಹಿಸಬೇಕೆಂದು ಸೂಚಿತವಾಗುತ್ತದೆ.

ಪರ=ಪರಮಾತ್ಮನಲ್ಲಿ, ಶುಕ್ಲ=ಶುದ್ಧ ಮನಸ್ಸಿನವರಾದ, ತ್ರಯ=ಮೂವರು, ಪರಶುಕ್ಲತ್ರಯರು. ಮೊದಲನೆಯವಳು ಲಕ್ಷ್ಮಿ ಎರಡನೆಯವರು ಋಜುಯೋಗಿಗಳು, ಮೂರನೆಯವರು ಅವರ ಪತ್ನಿಯರು.

ಸರ್ವಮೇತಚ್ಚ ಕಥಿತಂ ತತ್ರ ತತ್ರಾಮಿತಾತ್ಮನಾ।
ವ್ಯಾಸೇನೈವ ಪುರಾಣೇಷು ಭಾರತೇ ಚ ಸ್ವಸಂವಿದಾ ॥ ೨೯ ॥

ಇದೆಲ್ಲವೂ ಪುರಾಣಗಳಲ್ಲಿ ಭಾರತದಲ್ಲಿ ಅಲ್ಲಲ್ಲಿ ಸರ್ವಜ್ಞ ವೇದವ್ಯಾಸರು ತಮ್ಮ ಸ್ವರೂಪಜ್ಞಾನದಿಂದ ಹೇಳಿದುದೇ ಆಗಿದೆ.

ಅಸ್ತ್ರವಿದ್ಯಾ ಪ್ರದರ್ಶನ

ಯದಾ ತೇ ಸರ್ವಶಸ್ತ್ರಾಸ್ತ್ರವೇದಿನೋ ರಾಜಪುತ್ರಕಾಃ।
ಬಭೂವೂ ರಂಗಮಧ್ಯೇ ತಾನ್ ಭಾರದ್ವಾಜೋ ವ್ಯದರ್ಶಯತ್ ॥ ೩೦ ॥

---

1. ಜನ್ಮಜನ್ಮಾಂತರೇ ಸದಾ ಸರ್ವದಾ ವಿದ್ಯಮಾನಾದಜ್ಞಾನಾತ್ ಅವಜಾನಂತಿ ಕದಾಚಿತ್ ಕದಾಚಿದವಜಾನಂತಿ। –ವಾದಿರಾಜೀಯ

ರಾಜಕುಮಾರರು ಸಕಲಶಾಸ್ತ್ರಪಾರಂಗತರಾದಾಗ ಅವರ ಪಾಂಡಿತ್ಯ ಪರೀಕ್ಷೆಗೆ ದ್ರೋಣರು ಅವರನ್ನು ರಂಗಸ್ಥಳದ ನಡುವೆ ಪ್ರದರ್ಶಿಸಿದರು.

ರಕ್ತಚಂದನ ಸತ್ಪುಷ್ಪವಸ್ತ್ರಶಸ್ತ್ರಗುಡೋದನೈಃ।
ಸಂಪೂಜ್ಯ ಭಾರ್ಗವಂ ರಾಮಮನುಜಜ್ಞೇ ಕುಮಾರಕಾನ್ ॥ ೩೧ ॥

ದ್ರೋಣರು ಪ್ರಾರಂಭದಲ್ಲಿ ಕೆಂಪು ಗಂಧ ಒಳ್ಳೆಯ ಹೂಗಳು ವಸ್ತ್ರಗಳು ಆಯುಧಗಳು ಮತ್ತು ಬೆಲ್ಲದ ಭಕ್ಷ್ಯಗಳಿಂದ ಗುರು ಪರಶುರಾಮರನ್ನು ಪೂಜಿಸಿ ಕುಮಾರರಿಗೆ ತಮ್ಮ ವಿದ್ಯಾ ಕೌಶಲ ಪ್ರದರ್ಶನಮಾಡಲು ಆಜ್ಞಾಪಿಸಿದರು.

ತೇ ಭೀಷ್ಮದ್ರೋಣವಿದುರಗಾಂಧಾರೀಧೃತರಾಷ್ಟ್ರಕಾನ್।
ಸರಾಜಮಂಡಲಾನ್ ನತ್ವಾಕುಂತೀಂ ಚಾದರ್ಶಯತ್ ಶ್ರಮಮ್ ॥ ೩೨ ॥

ರಾಜಕುಮಾರರು ಭೀಷ್ಮ ದ್ರೋಣ ವಿದುರ ಗಾಂಧಾರಿ ಧೃತರಾಷ್ಟ್ರರನ್ನೂ ಕುಂತಿಯನ್ನೂ ರಾಜರುಗಳ ಸಮೂಹಗಳನ್ನೂ ನಮಿಸಿ ತಾವು ಕಲಿತ ವಿದ್ಯೆಗಳನ್ನು ಪ್ರದರ್ಶಿಸಿದರು.

ಸರ್ವೈಃಪ್ರದರ್ಶಿತೇಽಸ್ತ್ರೇ ತು ದ್ರೋಣಾದಾತ್ತಮಹಾಸ್ತ್ರವಿತ್।
ದ್ರೌಣಿರಸ್ತ್ರಾಣ್ಯಮೇಯಾನಿ ದರ್ಶಯಾಮಾಸ ಚಾಧಿಕಮ್ ॥ ೩೩ ॥

ಎಲ್ಲರೂ ಅಸ್ತ್ರವಿದ್ಯೆಯನ್ನು ಪ್ರದರ್ಶಿಸಿದಾಗ ದ್ರೋಣರಿಂದ ಮಹಾಸ್ತ್ರಗಳನ್ನು ಕಲಿತಿದ್ದ ಅಶ್ವತ್ಥಾಮ ಎಲ್ಲರಿಗಿಂತ ಅಧಿಕವಾಗಿ ಅಪರಿಮಿತ ಅಸ್ತ್ರಗಳನ್ನು ಪ್ರದರ್ಶಿಸಿದ.

ತತೋಽಪ್ಯತಿತರಾಂ ಪಾರ್ಥೋ ದಿವ್ಯಾಸ್ತ್ರಾಣಿ ವ್ಯದರ್ಶಯತ್।
ಅವಿಧ್ಯನ್ಲಾಶಕೇ ಪಾದೇ ಪಕ್ಷಿಣಃ ಪಕ್ಷ್ಮ ಏವ ಚ।
ಏವಮಾದೀನಿ ಚಿತ್ರಾಣಿ ಬಹೂನ್ಯೇಷ ವ್ಯದರ್ಶಯತ್ ॥ ೩೪ ॥

ಅಶ್ವತ್ಥಾಮನಿಗಿಂತಲೂ ಅತ್ಯಧಿಕವಾಗಿ ಅರ್ಜುನ ದಿವ್ಯಾಸ್ತ್ರಗಳನ್ನು ಪ್ರದರ್ಶಿಸಿದ. ಹಾರುವ ನೊಣದ ಕಾಲಿಗೂ, ಹಕ್ಕಿಯ ಕಣ್ಣುರೆಪ್ಪೆಗೂ ಗುರಿಇಟ್ಟ ಬಾಣದಿಂದ ಹೊಡೆದ. ಇವೇ ಮೊದಲಾದ ಬಹಳ ವಿಚಿತ್ರ ಕೌಶಲಗಳನ್ನು ಅರ್ಜುನ ಪ್ರದರ್ಶಿಸಿದ.

ಕರ್ಣನ ರಂಗಪ್ರವೇಶ

ತದೈವ ಕರ್ಣ ಆಗತ್ಯ ರಾಮೋಪಾತ್ತಾಸ್ತ್ರಸಂಪದಮ್।
ದರ್ಶಯನ್ನಧಿಕಃ ಪಾರ್ಥಾದಭೂದ್ ರಾಜನ್ಯಸಂಸದಿ ॥ ೩೫ ॥

ಅದೇ ಸಮಯದಲ್ಲಿ ಕರ್ಣನು ಬಂದು ಪರಶುರಾಮರಿಂದ ಕಲಿತಿದ್ದ ಅಸ್ತ್ರಸಂಪತ್ತನ್ನು ರಾಜರುಗಳ ಸಂಮುಖದಲ್ಲಿ ಪ್ರದರ್ಶಿಸಿ ಅರ್ಜುನನಿಗಿಂತ ಮೇಲೆನಿಸಿದ.

ಕುಂತೀ ನಿಜಂ ಸುತಂ ಜ್ಞಾತ್ವಾಲಜ್ಜಯಾ ನಾವದಚ್ಚ ತಮ್ ।
ಪಾರ್ಥೋಽಸಹಂಸ್ತಂ ಯುದ್ಧಾಯೈವಾಹ್ವಯಾಮಾಸ ಸಂಸದಿ ॥ ೩೬ ॥

ಕುಂತಿ ಕರ್ಣನನ್ನು ತನ್ನ ಮಗನೆಂದು ತಿಳಿದರೂ ಲಜ್ಜೆಯಿಂದ ಮಗನೆಂದು ಕರೆದು ಮಾತಾಡಲಿಲ್ಲ. ಅರ್ಜುನ ಕರ್ಣನ ಪಾಂಡಿತ್ಯವನ್ನು ಸಹಿಸದೆ ಸಭೆಯಲ್ಲಿ ಅವನನ್ನು ಯುದ್ಧಕ್ಕೆ ಆಹ್ವಾನಿಸಿದ.

ರಣಾಯಾಕ್ಷತ್ರಿಯಾಹ್ವಾನಂ ಜಾನನ್ ಧರ್ಮಪ್ರತೀಪಕಮ್ ।
ಭೀಮೋ ನಿವಾರ್ಯ ಬೀಭತ್ಸುಂ ಕರ್ಣಾಯಾದಾತ್ ಪ್ರತೋದಕಮ್ ॥ ೩೭ ॥

ಕ್ಷತ್ರಿಯನಲ್ಲದವನನ್ನು ಯುದ್ಧಕ್ಕೆ ಕರೆಯುವುದು ಧರ್ಮವಿರುದ್ಧವಾಗುವುದು ಎಂದು ತಿಳಿದ ಭೀಮ ಅರ್ಜುನನ್ನು ತಡೆದು ನಿಲ್ಲಿಸಿ ಕರ್ಣನ ಕೈಗೆ ಚಾಬುಕನ್ನು ನೀಡಿದ.

ಅಕ್ಷತ್ರ ಸಂಸ್ಕಾರ ಯುತೋ ಜಾತೋಽಪಿ ಕ್ಷತ್ರಿಯೇ ಕುಲೇ ।
ನ ಕ್ಷತ್ರಿಯೋ ಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮಃ ॥ ೩೮ ॥

'ಬ್ರಾಹ್ಮಣನಾಗಿ ಹುಟ್ಟಿಯೂ ಉಪನಯನಾದಿ ಸಂಸ್ಕಾರವಿಲ್ಲದಿದ್ದರೆ ಬ್ರಾಹ್ಮಣನೆನಿಸುವುದಿಲ್ಲ ಹೇಗೋ ಹಾಗೇ ಕ್ಷತ್ರಿಯಕುಲದಲ್ಲಿ ಹುಟ್ಟಿದವನೂ ಕ್ಷತ್ರಿಯ ಸಂಸ್ಕಾರ ಉಳ್ಳವನಾಗದಿದ್ದರೆ ಕ್ಷತ್ರಿಯನೆನಿಸುವುದಿಲ್ಲ' ಎಂದ.

ಕರ್ಣ ಹುಟ್ಟಿನಿಂದ ಕ್ಷತ್ರಿಯನೆನ್ನುವುದು ಸರ್ವಜ್ಞನಾದ ಭೀಮನಿಗೆ ತಿಳಿದೇ ಇದೆ. ಆದರೂ ಕೈಗೆ ಸೂತಜಾತಿಗೆ ಉಚಿತವಾದ ಚಾಬೂಕನ್ನು ಕೊಟ್ಟಿದ್ದು ಕರ್ಣನಿಗೆ ಕ್ಷತ್ರಿಯ ಸಂಸ್ಕಾರವಿಲ್ಲವೆಂಬ ಅಭಿಪ್ರಾಯದಿಂದ. 'ನೀನು ಕ್ಷತ್ರಿಯನಲ್ಲ ಸೂತ. ಆದ್ದರಿಂದ ಯುದ್ಧಕ್ಕೆ ತೊಡಗಬೇಡ, ಸಾರಥಿತನ ಮಾಡು' ಎಂದು ಭೀಮ ಹೇಳುತ್ತಿದ್ದಾನೆ. ಕರ್ಣನಿಗೆ ಏನೂ ಹೇಳಲೂ ತೋಚುತ್ತಿಲ್ಲ. ನಿರುತ್ತರನಾಗಿದ್ದಾನೆ.

ನಿರುತ್ತರೇ ಕೃತೇ ಕರ್ಣೇ ಭೀಮೇನೈವ ಸುಯೋಧನಃ ।
ಅಭ್ಯಷೇಚಯದಂಗೇಷು ರಾಜಾನಂ ಪಿತ್ರನುಜ್ಞಯಾ ॥ ೩೯ ॥

ಧೃತರಾಷ್ಟ್ರಃ ಪಕ್ಷಪಾತಾತ್ ಪುತ್ರಸ್ಯಾನುವಶೋಽಭವತ್ ॥ ೪೦ ॥

ಭೀಮ ಹೀಗೆ ಕರ್ಣನನ್ನು ನಿರುತ್ತರಗೊಳಿಸಿದಾಗ ಸುಯೋಧನ ತಂದೆಯಿಂದ

ಅನುಜ್ಞೆಪಡೆದು ಕರ್ಣನನ್ನು ಅಂಗರಾಜ್ಯದಲ್ಲಿ ರಾಜನನ್ನಾಗಿ ಅಭಿಷೇಕ ಮಾಡಿದ. ಧೃತರಾಷ್ಟ್ರ ಮಗನಲ್ಲಿ ಪಕ್ಷಪಾತದಿಂದ ಅವನಿಗೆ ವಶನಾಗಿದ್ದ.

ಕರ್ಣ ಕ್ಷತ್ರಿಯನಲ್ಲದಿದ್ದರೂ ಪಟ್ಟಾಭಿಷಿಕ್ತನಾದ ರಾಜನಾದರೆ ಆಗ ಯುದ್ಧಮಾಡಲು ಅರ್ಹನಾಗುತ್ತಾನೆ ಎಂದು ದುರ್ಯೋಧನ ಅವನನ್ನು ರಾಜನನ್ನಾಗಿ ಮಾಡಿದ.

ಅಭಿಷಿಕ್ತೇ ತದಾ ಕರ್ಣೇ ಪ್ರಾಯಾದಧಿರಥಃ ಪಿತಾ।
ಸರ್ವರಾಜಸದೋಮಧ್ಯೇ ವವಂದೇ ತಂ ವೃಷಾ ತದಾ।
ತುತುಷುಃ ಕರ್ಮಣಾ ತಸ್ಯ ಸಂತಃ ಸರ್ವೇ ಸಮಾಗತಾಃ ॥ ೪೧ ॥

ಕರ್ಣ ಪಟ್ಟಾಭಿಷಿಕ್ತನಾದಾಗ ಅವನ ತಂದೆ ಅಧಿರಥ ಬಂದ. ಎಲ್ಲ ರಾಜರ ಸಭೆಯ ನಡುವೆ ಅವನನ್ನು ಕರ್ಣ ವಂದಿಸಿದ. ಅವನ ಈ ನಡತೆಯಿಂದ ನೆರೆದಿದ್ದ ಎಲ್ಲ ಸಜ್ಜನರೂ ಸಂತುಷ್ಟರಾದರು.

ಕರ್ಣ ತಾನು ಈಗ ರಾಜ, ಅಧಿರಥನೊಬ್ಬಸೂತನೆಂದು ಸಂಕೋಚಪಡದೆ ಸಾಕಿದ ತಂದೆ ಎಂಬ ಗೌರವ ಭಾವನೆಯಿಂದ ಸಮಸ್ತ ರಾಜರ ನಡುವೆ ಅಧಿರಥನನ್ನು ನಮಿಸಿದ. ಕರ್ಣನ ಈ ಸದ್ಗುಣಕ್ಕೆ ಸಜ್ಜನರು ಮಾರುಹೋದರು.

ಭೀಮ ದುರ್ಯೋಧನರ ರಂಗಪ್ರವೇಶ

ಭೀಮ ದುರ್ಯೋಧನೌ ತತ್ರ ಶಿಕ್ಷಾಸಂದರ್ಶನಚ್ಛಲಾತ್।
ಸಮಾದಾಯ ಗದೇ ಗುರ್ವೀ ಸಂರಂಭಾದಭ್ಯುದೀಯತುಃ ॥ ೪೨ ॥

ಆಗ ತಮ್ಮ ವಿದ್ಯಾಭ್ಯಾಸ ಕೌಶಲ ಪ್ರದರ್ಶನದ ನೆಪದಿಂದ ಭೀಮ ದುರ್ಯೋಧನರು ಭಾರವಾದ ಗದೆಯನ್ನೆತ್ತಿಕೊಂಡು ಕೋಪದಿಂದ ಪರಸ್ಪರ ಎದುರಿಗೆ ಬಂದರು.

ದೇವಾಸುರಮನುಷ್ಯಾದಿ ಜಗದೇತಚ್ಚರಾಚರಮ್।
ಸರ್ವಂ ತದಾ ದ್ವಿಧಾಭೂತಂ ಭೀಮದುರ್ಯೋಧನಾಶ್ರಯಾತ್ ॥ ೪೩ ॥

ಆಗ ಭೀಮ-ದುರ್ಯೋಧನ ಪಕ್ಷಗಳನ್ನು ಹಿಡಿದು ದೇವಮಾನವ ಮಾನವ ಮುಂತಾದ ಈ ಚರಾಚರ ಪ್ರಪಂಚವೆಲ್ಲವೂ ಎರಡು ತಂಡವಾಯಿತು.

ದೇವಾ ದೇವಾನುಕೂಲಾಶ್ಚ ಭೀಮಮೇವ ಸಮಾಶ್ರಿತಾಃ।
ಅಸುರಾ ಅಸುರಾಶ್ಚೈವ ದುರ್ಯೋಧನ ಸಮಾಶ್ರಯಾಃ ॥ ೪೪ ॥

ದೇವತೆಗಳೂ ದೇವತೆಗಳಿಗೆ ಅನುಕೂಲರಾದವರೂ ಭೀಮನ ಪಕ್ಷವನ್ನೇ ಹಿಡಿದರು. ಅಸುರರೂ ಅವರ ಕಡೆಯವರೂ ದುರ್ಯೋಧನನ ಪಕ್ಷ ಹಿಡಿದರು.

ದ್ವಿಧಾಭೂತಾ ಮನುಷ್ಯಾಶ್ಚ ದೇವಾಸುರ ವಿಭೇದತಃ।
ಜಯ ಭೀಮ ಮಹಾಬಾಹೋ ಜಯ ದುರ್ಯೋಧನೇತಿ ಚ ॥ ೪೫ ॥

ಮನುಷ್ಯರೂ ಕೂಡ ತಮ್ಮ ತಮ್ಮ ದೇವ ದಾನವ ಸ್ವಭಾವಾನುಸಾರವಾಗಿ ಭೀಮ ದುರ್ಯೋಧನರ ಪಕ್ಷ ಹಿಡಿದು ಎರಡು ತಂಡಗಳಾದರು. ಮಹಾಬಾಹು ಭೀಮ! ನಿನಗೆ ಜಯವಾಗಲಿ! ಮಹಾಬಾಹು ದುರ್ಯೋಧನ! ನಿನಗೆ ಜಯವಾಗಲಿ! ಎಂದರು.

ಹುಂಕಾರಾಂಶ್ಚೈವ ಫಟ್ಕಾರಾಂಶ್ಚಕ್ರುರ್ದೇವಾಸುರಾ ಅಪಿ
ದೃಷ್ಟ್ವಾ ಜಗತ್ ಸುಸಂರಬ್ಧಂ ದ್ರೋಣೋಽಥ ದ್ವಿಜಸತ್ತಮಃ ॥ ೪೬ ॥

ನೇದಂ ಜಗದ್ ವಿನಶ್ಯೇತ ಭೀಮದುರ್ಯೋಧನಾಶ್ರಯಾತ್
ಇತಿ ಪುತ್ರೇಣ ತೌ ವೀರೌ ನ್ಯವಾರಯದರಿಂದಮೌ ॥ ೪೭ ॥

ಸ್ವಕೀಯಾಯಾಂ ಸ್ವಕೀಯಾಯಾಂ ಯೋಗ್ಯತಾಯಾಂ ನ ತು ಕ್ವಚಿತ್।
ಯುವಯೋಃ ಸಮ ಇತ್ಯುಕ್ತ್ವಾ ದ್ರೌಣಿರೇತೌ ನ್ಯವಾರಯತ್ ॥ ೪೮ ॥

ದೇವತೆಗಳೂ ಅಸುರರೂ ಪರಸ್ಪರ ಕೋಪದ ಸಿಂಹನಾದ ಮಾಡಿದರು. ಭುಜ ತಟ್ಟಿಕೊಂಡರು. ಹೀಗೆ ಜಗತ್ತೇ ಉದ್ವೇಗಗೊಂಡುದನ್ನು ನೋಡಿ ಬ್ರಾಹ್ಮಣೋತ್ತಮರಾದ ದ್ರೋಣರು 'ಈ ಜಗತ್ತು ಭೀಮ ದುರ್ಯೋಧನರ ಪಕ್ಷ ಹಿಡಿದು ಪರಸ್ಪರ ಹೋರಾಡಿ ನಾಶವಾಗದಿರಲಿ' ಎಂದು ಮಗನಾದ ಅಶ್ವತ್ಥಾಮನ ಮೂಲಕ, ಶತ್ರುಸಂಹಾರಕರಾದ ಆ ಇಬ್ಬರು ವೀರರನ್ನು ತಡೆದು ನಿಲ್ಲಿಸಿದರು. ನಿಮ್ಮ ನಿಮ್ಮ ಯೋಗ್ಯತೆಯಲ್ಲಿ ನಿಮಗೆ ಸಮಾನರು ಎಲ್ಲೂ ಇಲ್ಲ ಎಂದು ಹೇಳುತ್ತ ಅಶ್ವತ್ಥಾಮ ಇಬ್ಬರನ್ನೂ ತಡೆದ.

ಸಾತ್ವಿಕರಲ್ಲಿ ಭೀಮನಿಗೆ ಎಣೆಯಿಲ್ಲ, ತಾಮಸರಲ್ಲಿ ದುರ್ಯೋಧನನಿಗೆ ಸಮನಿಲ್ಲ ಎಂಬುದು ಅಶ್ವತ್ಥಾಮನ ಅಂತರ್ಯವಾಗಿತ್ತು.

ದ್ರೋಣಾಜ್ಞಯಾ ವಾರಿತೌ ತೌ ಯಯತುಃ ಸ್ವಂ ಸ್ವಮಾಲಯಮ್ ॥೪೯ ॥

ಸುರಾಸುರಾನ್ ಸುಸಂರಬ್ಧಾನ್ ಕಾಲೇನ ದ್ರಕ್ಷ್ಯಥೇತಿ ಚ।
ಬ್ರಹ್ಮಾ ನಿವಾರ್ಯ ಸಸುರೋ ಯಯೌ ಸೇಶಃ ಸ್ವಮಾಲಯಮ್ ॥ ೫೦ ॥

ದ್ರೋಣರ ಆಜ್ಞೆಯಿಂದ ತಡೆದು ನಿಂತ ಭೀಮ-ದುರ್ಯೋಧನರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. 'ಸ್ವಲ್ಪಕಾಲಾನಂತರ ಇವರ ಪರಸ್ಪರ ಯುದ್ಧವನ್ನೂ ಜಯಾಪಜಯಗಳನ್ನೂ ನೋಡುವಿರಿ' ಎನ್ನುತ್ತ ಬ್ರಹ್ಮದೇವ ಮೇಲೆ ಆಕಾಶದಲ್ಲಿ ನೆರೆದಿದ್ದ ದೇವಾಸುರರನ್ನು ತಡೆದು ರುದ್ರನಿಂದೊಡಗೂಡಿ ದೇವತೆಗಳಿಂದ ಸಹಿತನಾಗಿ ತನ್ನ ಲೋಕಕ್ಕೆ ಹಿಂತಿರುಗಿದ.

ದ್ರೋಣರ ಆಜ್ಞೆಯಿಂದ ಭೀಮದುರ್ಯೋಧನರು ತಡೆದು ನಿಂತರು ಎನ್ನುವುದು ಕೇವಲ ನೆಪಮಾತ್ರ. ವಸ್ತುತಃ ಭೀಮ ಇದು ಕೌರವರನ್ನು ಕೊಲ್ಲುವ ಕಾಲವಲ್ಲ ಎಂದು ಹರೀಚ್ಛೆಯಂತೆ ತಡೆದುಕೊಂಡ. ದುರ್ಯೋಧನ ಭೀಮನ ಭಯದಿಂದಲೆ ತಡೆದುಕೊಂಡ.

ಅರ್ಜುನನಿಗೆ ಭೀಮರಕ್ಷೆ

ಕರ್ಣಂ ಹಸ್ತೇ ಪ್ರಗೃಹ್ಯೈವ ಧಾರ್ತಾರಾಷ್ಟ್ರೋ ಗೃಹಂ ಯಯೌ।
ಪಾರ್ಥಂ ಹಸ್ತೇ ಪ್ರಗೃಹ್ಯೈವ ಭೀಮಃ ಪ್ರಾಯಾತ್‌ಸ್ವಮಾಲಯಮ್ ॥ ೫೧ ॥

ಕರ್ಣನ ಕೈಹಿಡಿದು ದುರ್ಯೋಧನ ಮನೆಗೆ ಹೋದ. ಅರ್ಜುನನ ಕೈಹಿಡಿದು ಭೀಮ ತನ್ನ ಮನೆಗೆ ಹೋದ.

ಪಾರ್ಥೇನ ಕರ್ಣೋ ಹಂತವ್ಯ ಇತ್ಯಾಸೀದ್ ಭೀಮನಿಶ್ಚಯಃ।
ವೈಪರಿತ್ಯೇನ ತಸ್ಯಾಸೀದ್ ದುರ್ಯೋಧನವಿನಿಶ್ಚಯಃ ॥ ೫೨ ॥

ತದರ್ಥಂ ನೀತಿಮತುಲಾಂ ಚಕ್ರತುಸ್ತಾವುಭಾವಪಿ ॥ ೫೩ ॥

ಅರ್ಜುನನಿಂದ ಕರ್ಣ ಹತನಾಗಬೇಕೆಂಬುದು ಭೀಮನ ನಿಶ್ಚಯ. ಇದಕ್ಕೆ ವಿಪರೀತವಾಗಿ ಕರ್ಣನಿಂದ ಅರ್ಜುನ ಹತನಾಗಬೇಕೆಂದು ದುರ್ಯೋಧನ ತೀರ್ಮಾನಿಸಿದ್ದ.

ಅದಕ್ಕಾಗಿ ಅವರಿಬ್ಬರೂ ಅಸದೃಶವಾದ ಉಪಾಯಗಳನ್ನು ಕೈಗೊಂಡರು.

ತಥೋತ್ಕರ್ಷೇ ಫಲ್ಗುನಸ್ಯ ಯಶಸೋ ವಿಜಯಸ್ಯ ಚ।
ಉದ್ಯೋಗ ಆಸೀದ್ ಭೀಮಸ್ಯ ಧಾರ್ತರಾಷ್ಟ್ರಸ್ಯ ಚಾನ್ಯಥಾ ॥ ೫೪ ॥

ಅರ್ಜುನನಿಗೆ ಯಶಸ್ಸು ಮತ್ತು ವಿಜಯ ದಿನೇದಿನೇ ಹೆಚ್ಚುವಂತೆ ಭೀಮನ ಯತ್ನ ನಡೆದಿತ್ತು. ಕರ್ಣನಿಗೆ ಯಶಸ್ಸು ವಿಜಯ ಹೆಚ್ಚುವಂತೆ ದುರ್ಯೋಧನನ ಪ್ರಯತ್ನವಾಗಿತ್ತು.

ಭೀಮಾರ್ಥಂ ಕೇಶವೋಽನ್ಯೇ ಚ ದೇವಾಃ ಫಲ್ಗುನಪಕ್ಷಿಣಃ।
ಆಸನ್ ಯಥೈವ ರಾಮಾದ್ಯಾಃ ಸಂಗ್ರಹೇಣ ಹನೂಮತಃ
ಸುರಾಃ ಸುಗ್ರೀವಪಕ್ಷಸ್ಥಾಃ ಪೂರ್ವಮಾಸಂಸ್ತಥೈವ ಹಿ ॥ ೫೫ ॥

ತದರ್ಥಮೇವ ಭೀಮಸ್ಯ ಹ್ಯನುಜತ್ವಂ ಸುರೇಶ್ವರಃ
ಆಪ ಪೂರ್ವಾನುತಾಪೇನ ತೇನ ಭೀಮಸ್ತಥಾಕರೋತ್ ॥ ೫೬ ॥

ದುರ್ಯೋಧನಾರ್ಥಂ ಕರ್ಣಸ್ಯ ಪಕ್ಷಿಣೋ ದೈತ್ಯದಾನವಾಃ।
ಆಸುಃ ಸರ್ವೇ ಗ್ಲಹಾವೇತಾವಾಸತುಃ ಕರ್ಣಫಲ್ಗುನೌ ॥ ೫೭ ॥

ಹೇಗೆ ಹಿಂದೆ ಹನುಮಂತ ಪರಿಗ್ರಹಿಸಿದನೆಂದು ರಾಮಾದಿ ದೇವತೆಗಳು ಸುಗ್ರೀವನ ಪಕ್ಷ ವಹಿಸಿದರೋ ಹಾಗೇ ಭೀಮನ ಸಂತೋಷಕ್ಕಾಗಿ ಕೃಷ್ಣನೂ ಬೇರೆ ದೇವತೆಗಳೂ ಅರ್ಜುನಪಕ್ಷವನ್ನು ವಹಿಸಿದರು. ಅದಕ್ಕಾಗಿಯೆ ಹಿಂದೆ ತಾನ ಮಾಡಿದ ಅಪರಾಧಕ್ಕೆ ಪಶ್ಚಾತ್ತಾಪಪಟ್ಟು ಇಂದ್ರ ಭೀಮನ ತಮ್ಮನಾಗಿ ಅವತರಿಸಿದ್ದ. ಅದರಿಂದ ಭೀಮ ಅವನಿಗೆ ಅಭಯವನ್ನಿತ್ತ. ದುರ್ಯೋಧನನ ಸಂತೋಷಕ್ಕಾಗಿ ದೈತ್ಯದಾನವರೆಲ್ಲರೂ ಕರ್ಣನ ಪಕ್ಷ ವಹಿಸಿದರು. ಹೀಗೆ ಯುದ್ಧವೆಂಬ ಜೂಜಿನಲ್ಲಿ ಕರ್ಣಾರ್ಜುನರು ಪಣವಾದರು.

ಗುರುದಕ್ಷಿಣೆ – ಕೌರವರ ಪರಾಭವ

ಅಥ ಪೃಷ್ಟೋ ದಕ್ಷಿಣಾರ್ಥಂ ದ್ರೋಣ ಆಹ ಕುಮಾರಕಾನ್।
ಬಧ್ವಾಪಾಂಚಾಲರಾಜಾನಂ ದತ್ತೇತ್ಯೂಚುಸ್ತಥೇತಿ ತೇ ॥ ೫೮ ॥

ಬಳಿಕ ಗುರುದಕ್ಷಿಣೆ ಏನೆಂದು ಹೇಳಲು ಕುಮಾರರು ಕೇಳಿಕೊಂಡಾಗ ದ್ರೋಣರು ಗುರುದಕ್ಷಿಣೆಗಾಗಿ ಪಾಂಚಾಲರಾಜನನ್ನು ಸೆರೆಹಿಡಿದು ತಂದುಕೊಡಿರಿ ಎಂದರು. ಕುಮಾರರು ಹಾಗೇ ಆಗಲಿ ಎಂದರು.

ತೇ ಧಾರ್ತರಾಷ್ಟ್ರಾಃಕರ್ಣೇನ ಸಹಿತಾಃ ಪಾಂಡವಾ ಅಪಿ।
ಯಯುರ್ದ್ರೋಣೇನ ಸಹಿತಾಃ ಪಾಂಚಾಲನಗರಂ ಪ್ರತಿ ॥ ೫೯ ॥

ಕರ್ಣ ಸಹಿತರಾದ ಕೌರವರೂ ಪಾಂಡವರೂ ದ್ರೋಣರೊಂದಿಗೆ ಪಾಂಚಾಲ ನಗರಕ್ಕೆ ಹೋದರು.

ಅಥಾಹ ಭೀಮಃ ಸಾಮರ್ಥ್ಯವಿವೇಕಾಭೀಪ್ಸಯಾ ಗುರುಮ್ ॥ ೬೦ ॥

ಗರ್ವ ಏಷ ಕುಮಾರಾಣಾಮನಿವಾರ್ಯೋ ದ್ವಿಜೋತ್ತಮ।
ಗಚ್ಛಂತ್ವೇತೇಽಗ್ರತೋ ನೈಷಾಂ ವಶಗೋ ದ್ರುಪದೋ ಭವೇತ್ ॥ ೬೧ ॥

ನಿವೃತ್ತೇಷ್ವಕೃತಾರ್ಥೇಷು ವಯಂ ಬಧ್ವಾರಿಪುಂ ತವ
ಆನಯಾಮೋ ನ ಸಂದೇಹ ಇತಿ ತಸ್ಯೌಸಸೋದರಃ ॥ ೬೨ ॥

ಪಾಂಡವ ಕೌರವರೊಳಗೆ ಯಾರು ಸಮರ್ಥರು ಯಾರು ಅಸಮರ್ಥರೆಂಬುದು ಬೆಳಕಿಗೆ ಬರಲೆಂಬ ಬಯಕೆಯಿಂದ ಭೀಮಸೇನ ಗುರುದ್ರೋಣರಿಗೆ ಹೇಳಿದ– 'ಬ್ರಾಹ್ಮಣೋತ್ತಮ, ಈ ಕುಮಾರರ ದುರಹಂಕಾರ ತಡೆಯಲು ಅಸಾಧ್ಯವಾಗಿದೆ. ಇವರೇ

ಮುಂದೆ ಹೋಗಲಿ. ದ್ರುಪದ ಇವರಿಗೆ ವಶನಾಗುವುದಿಲ್ಲ. ತಮ್ಮ ಕಾರ್ಯದಲ್ಲಿ ಅಯಶಸ್ವಿಗಳಾಗಿ ಇವರು ಹಿಂತಿರುಗಿ ಬಂದಾಗ ನಾವು ನಿಮ್ಮ ಶತ್ರುವನ್ನು ಕಟ್ಟಿ ತರುವೆವು. ಇದರಲ್ಲಿ ಸಂಶಯವಿಲ್ಲ'. ಹೀಗೆ ಹೇಳಿ ಸೋದರರೊಡನೆ ನಗರದ ಹೊರಗೇ ಉಳಿದ, ಭೀಮ.

ಸದ್ರೋಣಕೇಷು ಪಾರ್ಥೇಷು ಸ್ಥಿತೇಷ್ವನ್ಯೇ ಸಸೂತಜಾಃ।
ಯಯುರಾತ್ತಪ್ರಹರಣಾಃ ಪಾಂಚಾಲಾಂತಃಪುರಂ ದ್ರುತಮ್ ॥ ೬೩ ॥

ದ್ರೋಣರೊಡನೆ ಪಾಂಡವರು ಹಿಂದೆ ಉಳಿದಿದ್ದಾಗ ಕೌರವರು ಕರ್ಣನೊಂದಿಗೆ ಆಯುಧ ಎತ್ತಿಕೊಂಡು ಪಾಂಚಾಲರಾಜನ ಪಟ್ಟಣದೊಳಗೆ ಬೇಗನೆ ನುಗ್ಗಿದರು.

ಕುಮಾರಾನ್ ಗ್ರಹಣೇಪ್ಸುಂಸ್ತಾನುಪಯಾತಾನುದೀಕ್ಷ್ಯ ಸಃ।
ಅಕ್ಷೌಹಿಣೀತ್ರಿತಯಯುಕ್ ನಿಃಸೃತೋ ದ್ರುಪದೋ ಗೃಹಾತ್ ॥ ೬೪ ॥

ಕುಮಾರರು ತನ್ನನ್ನು ಸೆರೆಹಿಡಿಯಲು ಬಯಸಿ ಬರುತ್ತಿದ್ದಾರೆ ಎಂಬುದನ್ನು ತಿಳಿದು ದ್ರುಪದ ಮೂರು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಅರಮನೆಯಿಂದ ಹೊರಗೆ ಹೊರಟ.

ತೇ ಶರೈರಭಿವರ್ಷಂತಃ ಪರಿವಾರ್ಯ ಕುಮಾರಕಾನ್।
ಅರ್ದಯಾಮಾಸುರುದ್ವೃತ್ತಾನ್ ಸ್ತ್ರಿಯೋ ಬಾಲಾಶ್ಚ ಸರ್ವಶಃ ॥ ೬೫ ॥

ಪಾಂಚಾಲರು ಕುಮಾರರನ್ನು ಸುತ್ತುವರಿದು ಬಾಣಗಳ ಮಳೆಗರೆಯುತ್ತ ಪೀಡಿಸಿದರು. ಉದ್ಧತರಾದ ಕುಮಾರರನ್ನು ಎಲ್ಲ ಹೆಂಗಸರೂ ಮಕ್ಕಳೂ ಕೂಡ ಪೀಡಿಸಿದರು.

ಹರ್ಮ್ಯಸಂಸ್ಥಾಃಸ್ತ್ರಿಯೋ ಬಾಲಾ ಗ್ಲಾವಭಿರ್ಮುಸಲೈರಪಿ।
ಅತ್ಯರ್ಥಮರ್ದಯಾಮಾಸುಃ ಕುಮಾರಾನ್ ಸುಸುಖೈಧಿತಾನ್ ॥ ೬೬ ॥

ಉಪ್ಪರಿಗೆಗಳಲ್ಲಿ ನಿಂತ ಹೆಂಗಸರು ಮಕ್ಕಳು ಸುಖವಾಗಿ ಬೆಳೆದಿದ್ದ ಕುಮಾರರನ್ನು ಕಲ್ಲು ಒನಕೆಗಳಿಂದ ಬಹಳವಾಗಿ ಪೀಡಿಸಿದರು.

ದ್ರುಪದಸ್ಯ ವರೋ ಹ್ಯಸ್ತಿ ಸೂರ್ಯದತ್ತಸ್ತಪೋಬಲಾತ್।
ಆ ಯೋಜನಾತ್ ಪುರಮುಪ ನ ತ್ವಾಂ ಜೇಷ್ಯತಿ ಕಶ್ಚನ ॥ ೬೭ ॥

ದ್ರುಪದನಿಗೆ ತಪೋಬಲದಿಂದ ಸೂರ್ಯನಿತ್ತದ್ದ ವರವಿತ್ತು 'ನಗರದ ಸಮೀಪದಲ್ಲಿ ಒಂದು ಯೋಜನದೊಳಗೆ ಯಾರೂ ನಿನ್ನನ್ನು ಗೆಲ್ಲಲಾರರು' ಎಂದು.

ಇತಿ ತೇನ ವರೇಣೈವ ಸುಖಸಂವರ್ಧಿತಾಶ್ಚತೇ।
ಭಗ್ನಾಃ ಕುಮಾರಾ ಆವೃತ್ಯ ದುದ್ರುವುರ್ಯತ್ರ ಪಾಂಡವಾಃ ॥ ೬೮ ॥

ಆ ವರ ಬಲದಿಂದಲೆ ಸುಖವಾಗಿ ಬೆಳೆಸಲ್ಪಟ್ಟ ಕುಮಾರರು ಪರಾಜಿತರಾಗಿ ಹಿಂತಿರುಗಿ ಪಾಂಡವರಿದ್ದಲ್ಲಿಗೆ ಧಾವಿಸಿದರು.

ಸ್ತ್ರೀಬಾಲವೃದ್ಧಸಹಿತೈಃ ಪಾಂಚಾಲೈರಪ್ಯನುದ್ರುತಾಃ।
ಭೀಮಾರ್ಜುನೇತಿ ವಾಶಂತೋ ಯಯುರ್ಯತ್ರ ಸ್ಮ ಪಾಂಡವಾಃ ॥ ೬೯ ॥

ಹೆಂಗಸರು ಮಕ್ಕಳು ಮುದುಕರಿಂದೊಡಗೂಡಿ ಪಾಂಚಾಲರು ಬೆನ್ನಟ್ಟಿ ಬರುತ್ತಿದ್ದಂತೆ ಭೀಮ! ಅರ್ಜುನ! ಕಾಪಾಡಿ ಎಂದು ಕೂಗುತ್ತಾ ಪಾಂಡವರಿದ್ದಲ್ಲಿಗೆ ಓಡಿದರು, ಕುಮಾರರು.

ಸೂರ್ಯನ ವರವಾದ್ದರಿಂದ ಸೂರ್ಯಾಂಶನಾದ ಕರ್ಣನಿಗೆ ಅದನ್ನು ಮೀರಲಾಗಲಿಲ್ಲ. ದುರ್ಯೋಧನಾದಿಗಳು ಬಲಿಷ್ಠ ಅಸುರರಾಗಿದ್ದರೂ ಮನುಷ್ಯರಾಗಿ ಹುಟ್ಟಿದ್ದರಿಂದ ಶಕ್ತಿಹ್ರಾಸವಾಗಿತ್ತು. ಅದರಿಂದ ಸೂರ್ಯನ ವರ ಬಲದಿಂದ ಹೆಂಗಸರು ಮಕ್ಕಳೂ ಅವರನ್ನು ಪೀಡಿಸಿದರು.

ಭೀಮಾರ್ಜುನ ವಿಜಯ

ತಾನ್ ಪ್ರಭಗ್ನಾನ್ ಸಮಾಲೋಕ್ಯ ಭೀಮಃ ಪ್ರಹರತಾಂ ವರಃ।
ಅರುರೋಹ ರಥಂ ವೀರಃ ಪುರ ಅತ್ತ ಶರಾಸನಃ ॥ ೭೦ ॥

ಕುಮಾರರು ಬಹಳ ಪರಾಜಿತರಾದುದನ್ನು ಕಂಡು ಯೋಧರಲ್ಲಿ ಶ್ರೇಷ್ಠನಾದ ವೀರ ಭೀಮಸೇನ ಬಿಲ್ಲು ಬಾಣ ಹಿಡಿದು ಮುಂಭಾಗದಲ್ಲಿ ರಥವೇರಿದ.

ತಮನ್ವಯಾದಿಂದ್ರಸೂನುರ್ಯಮೌ ತಸ್ಯೈವ ಚಕ್ರಯೋಃ।
ಯುಧಿಷ್ಠಿರಸ್ತು ದ್ರೋಣೇನ ಸಹ ತಸ್ಥೌ ನಿರೀಕ್ಷಕಃ ॥ ೭೧ ॥

ಅವನ ಹಿಂದೆ ಅರ್ಜುನ ರಥವೇರಿ ಹೊರಟ. ಅರ್ಜುನನ ರಥದ ಬಳಿ ಚಕ್ರರಕ್ಷಕರಾಗಿ ನಕುಲ ಸಹದೇವರು ಹೊರಟರು. ಯುಧಿಷ್ಠಿರ ದ್ರೋಣನೊಂದಿಗೆ ಯುದ್ಧ ನಿರೀಕ್ಷಕನಾಗಿ ನಿಂತ.

ಇದು ವಾದೀರಾಜೀಯಕ್ಕೆ ಅನುಸಾರವಾದ ಅನುವಾದ.[1]

ಮಹಾಭಾರತದಲ್ಲಿಯೂ

---

1. ತಸ್ಯ ಅರ್ಜುನಸ್ಯ ಚಕ್ರಯೋಃ ರಥಚಕ್ರಯೋಃ ಸಮೀಪ ಏವಾನ್ವಗಾತಾಂ। -ವಾದಿರಾಜೀಯ

'ಮಾದ್ರೇಯೌ ಚಕ್ರರಕ್ಷೌತು ಭವತಃ ಫಲ್ಗುನಸ್ಯತೌ।

'ಅರ್ಜುನರಥಕ್ಕೆ ಚಕ್ರರಕ್ಷಕರು ನಕುಲಸಹದೇವರು' ಎಂದು ಹೇಳಿದೆ.

ಜನಾರ್ದನೀಯ ವರದರಾಜೀಯಗಳ ಪ್ರಕಾರ ಭೀಮನ ರಥಕ್ಕೆ ಚಕ್ರರಕ್ಷಕರು ನಕುಲ ಸಹದೇವರು.[1]

ಆಯಾಂತಮಗ್ರತೋ ದೃಷ್ಟ್ವಾ ಭೀಮಮಾತ್ತಶರಾಸನಮ್।
ದುದ್ರುವುಃ ಸರ್ವಪಾಂಚಾಲಾ ವಿವಿಶುಃ ಪುರಮೇವ ಚ ॥ ೭೨ ॥

ಮುಂಚೂಣಿಯಲ್ಲಿ ಬಿಲ್ಲು ಬಾಣ ಹಿಡಿದು ಭೀಮಸೇನ ಬರುತ್ತಿದ್ದುದನ್ನು ಕಂಡು ಎಲ್ಲ ಪಾಂಚಾಲರೂ ಭಯದಿಂದ ಓಡಿದರು. ತಮ್ಮ ಪಟ್ಟಣವನ್ನು ಹೊಕ್ಕರು.

ದ್ರುಪದಸ್ತ್ವಭ್ಯಯಾದ್ ಭೀಮಂ ಸಪುತ್ರಃ ಸಹ ಸೇನಯಾ।
ಚಕ್ರರಕ್ಷೌಚ ತಸ್ಯಾಸ್ತಾಂ ಯುಧಾಮನ್ಯೂತ್ತಮೌಜಸೌ ॥ ೭೩ ॥

ದ್ರುಪದ ಮಕ್ಕಳೊಡನೆ ಸೈನ್ಯ ಸಮೇತನಾಗಿ ಭೀಮನನ್ನು ಇದಿರಿಸಿದ. ಅವನಿಗೆ ಯುಧಾಮನ್ಯು ಉತ್ತಮೌಜರು ಚಕ್ರರಕ್ಷಕರಾಗಿದ್ದರು.

ಧಾತ್ರರ್ಯಮಾವೇಶಯುತೌ ವಿಶ್ವಾವಸು ಪರಾವಸೂ।
ಸುತೌ ತಸ್ಯ ಮಹಾವೀರ್ಯೌ ಸತ್ಯಜಿತ್ ಪೃಷ್ಠತೋಽಭವತ್ ॥ ೭೪ ॥

ಆ ಇಬ್ಬರು ದ್ರುಪದ ಪುತ್ರರು ಧಾತೃ ಅರ್ಯಮರೆಂಬ ಆದಿತ್ಯರ ಆವೇಶಯುಕ್ತರಾದ ವಿಶ್ವಾವಸು ಪರಾವಸುಗಳೆಂಬ ಗಂಧರ್ವರು ಮಹಾವೀರ್ಯಶಾಲಿಗಳು. ರಥದ ಹಿಂದೆ ರಕ್ಷಕನಾಗಿ ಸತ್ಯಜಿತ್ ಇದ್ದ.

ಸ ಮಿತ್ರಾಂಶಯುತೋ ವೀರಶ್ಚಿತ್ರಸೇನೋ ಮಹಾರಥಃ।
ಅಗ್ರತಸ್ತು ಶಿಖಂಡ್ಯಾಗಾದ್ ರಥೋದಾರಃ ಶರಾನ್ ಕ್ಷಿಪನ್ ॥ ೭೫ ॥

ಸತ್ಯಜಿತ್ ಮಿತ್ರನೆಂಬ ಆದಿತ್ಯನ ಅಂಶದಿಂದ ಯುಕ್ತನಾದ ಚಿತ್ರಸೇನ ಗಂಧರ್ವ, ವೀರ, ಮಹಾರಥ. ಮುಂಭಾಗದಲ್ಲಿ ಶ್ರೇಷ್ಠವಾದ ರಥದಲ್ಲಿ ಬಾಣಗಳನ್ನು ಎಸೆಯುತ್ತ ಶಿಖಂಡಿ ಬಂದ.

---

1. **ತಸ್ಯ ಭೀಮಸ್ಯ ಚಕ್ರಯೋಃ** ರಥ ಚಕ್ರಯೋಃ ಸಮೀಪೇನ ಜಗ್ಮತುರಿತಿ ಶೇಷಃ। **-ಜನಾರ್ದನೀಯ**
ಯಮೌ ತಸ್ಯ ಭೀಮಸ್ಯೈವ ಚಕ್ರಯೋ ರಥಚಕ್ರಯೋಃ ಸಮೀಪೇ **ಗತಾವಿತ್ಯರ್ಥಃ**॥
-ವರದರಾಜೀಯ

ಜನಮೇಜಯಸ್ತಮನ್ವೇವ ಪೂರ್ವಂ ಚಿತ್ರರಥೋ ಹಿ ಯಃ।
ತ್ವಷ್ಟುರಾವೇಶಸಂಯುಕ್ತಃ ಸ ಶರಾನಭ್ಯವರ್ಷತ ॥ ೭೬ ॥

ಶಿಖಂಡಿಯ ಹಿಂದಿನಿಂದ ಜನಮೇಜಯ ಬಾಣಗಳ ಮಳೆಗರೆದ. ಅವನು ಹಿಂದೆ ಚಿತ್ರರಥನೆಂಬ ಗಂಧರ್ವ. ತ್ವಷ್ಟ್ರು ಎಂಬ ಆದಿತ್ಯನ ಆವೇಶದಿಂದ ಕೂಡಿದ್ದ.

ತಾವುಭೌ ವಿರಥೌ ಕೃತ್ವಾ ವಿಚಾಪೌ ಚ ವಿವರ್ಮಕೌ।
ಭೀಮೋ ಜಘಾನ ತಾಂ ಸೇನಾಂ ಸವಾಜಿರಥಕುಂಜರಾಮ್ ॥ ೭೭ ॥

ಭೀಮಸೇನ ಶಿಖಂಡಿ ಜನಮೇಜಯರ ರಥಗಳನ್ನು ಮುರಿದ. ಬಿಲ್ಲುಗಳನ್ನು ಕಡಿದ. ಕವಚಗಳನ್ನು ಭೇದಿಸಿದ. ಅಶ್ವರಥ ಗಜಗಳಿಂದ ಕೂಡಿದ ಆ ಸೈನ್ಯವನ್ನು ಸಂಹರಿಸಿದ.

ಅಥೈನಂ ಶರವರ್ಷೇಣ ಯುಧಾಮನ್ಯೂತ್ತಮೌಜಸೌ।
ಅಭೀಯತುಸ್ತೌ ವಿರಥೌಚಕ್ರೇ ಭೀಮೋ ನಿರಾಯುಧೌ ॥ ೭೮ ॥

ಬಳಿಕ ಯುಧಾಮನ್ಯು ಉತ್ತಮೌಜರು ಭೀಮನನ್ನು ಬಾಣಗಳ ಮಳೆಯಿಂದ ಇದಿರಿಸಿದರು. ಅವರನ್ನು ಭೀಮ ರಥರಹಿತರನ್ನಾಗಿ ನಿರಾಯುಧರನ್ನಾಗಿ ಮಾಡಿದ.

ದ್ರುಪದನ ಬಂಧನ

ಹಸ್ತಪ್ರಾಪ್ತಂ ಚ ಪಾಂಚಾಲಂ ನಾಗ್ರಹೀತ್ಸ ವೃಕೋದರಃ।
ಗುರ್ವರ್ಥಮರ್ಜುನಸ್ಯೋರ್ವೀಂ ಪ್ರತಿಜ್ಞಾಂ ಕರ್ತುಮಪ್ಯೃತಾಮ್
ಮಾನಭಂಗಾಯ ಕರ್ಣಸ್ಯ ಪಾರ್ಥಮೇವ ನ್ಯಯೋಜಯತ್ ॥ ೭೯ ॥

ಕೈಗೆ ಸಿಗುವಂತಿದ್ದ ದ್ರುಪದನನ್ನು ಭೀಮ ಸೆರೆ ಹಿಡಿಯಲಿಲ್ಲ. ಗುರುದ್ರೋಣರಿಗಾಗಿ ಅರ್ಜುನ ಗೈದಿದ್ದ ಮಹಾ ಪ್ರತಿಜ್ಞೆಯನ್ನು ಸತ್ಯಗೊಳಿಸುವುದಕ್ಕಾಗಿ ಮತ್ತು ಕರ್ಣನ ಮಾನ ಕಳೆಯುವುದಕ್ಕಾಗಿ ಅರ್ಜುನನನ್ನು ಆ ಕಾರ್ಯಕ್ಕಾಗಿ ಬಿಟ್ಟ

ಭೀಮನೆ ದ್ರುಪದನನ್ನು ಸೆರೆಹಿಡಿದಿದ್ದರೆ ಕರ್ಣನ ಮಾನ ಹೋಗುತ್ತಿರಲಿಲ್ಲ. ತನಗೆ ಪ್ರತಿಸ್ಪರ್ಧಿಯಾದ ಅರ್ಜುನ ಹಾಗೆ ಮಾಡಿದ್ದರಿಂದ ಮಾನ ಹೋಯಿತು.

ಸ ಶರಾನ್ ಕ್ಷಿಪತಸ್ತಸ್ಯ ಪಾಂಚಾಲಸ್ಯಾರ್ಜುನೋ ದ್ರುತಮ್।
ಪುಪ್ಲುವೇ ಸ್ಯಂದನೇ ಚಾಪಂ ಛಿತ್ವಾತಂ ಚಾಗ್ರಹೀತ್ ಕ್ಷಣಾತ್ ॥ ೮೦ ॥

ಅರ್ಜುನ ತನ್ನ ಮೇಲೆ ಬಾಣಗಳನ್ನು ಎಸೆಯುತ್ತಿದ್ದ ದ್ರುಪದನ ರಥದೊಳಗೆ ಹಾರಿದ. ಅವನ ಬಿಲ್ಲನ್ನು ಮುರಿದು ಕ್ಷಣದಲ್ಲಿ ಸೆರೆಹಿಡಿದ.

ಸಿಂಹೋ ಮೃಗಮಿವಾದಾಯ ಸ್ವರಥಂ ಚಾಭಿಪೇದಿವಾನ್ ।
ಅಥ ಪ್ರಕುಪಿತಂ ಸೈನ್ಯಂ ಫಲ್ಗುನಂ ಪರ್ಯವಾರಯತ್ ॥ ೮೧ ॥

ಸಿಂಹ ಜಿಂಕೆಯನ್ನು ಹಿಡಿದು ತರುವಂತೆ ಅರ್ಜುನ ದ್ರುಪದನನ್ನು ಹಿಡಿದು ತಂದು ತನ್ನ ರಥಕ್ಕೆ ಹಾರಿದ. ಆಗ ಬಹುಕೋಪಗೊಂಡ ಸೈನ್ಯ ಅರ್ಜುನನನ್ನು ಸುತ್ತುವರಿಯಿತು. ಜಘಾನ ಭೀಮಸ್ತರಸಾ ತತ್ಸೈನ್ಯಂ ಶರವೃಷ್ಟಿಭಿಃ ।

ಅಥ ಸತ್ಯಜಿದಭ್ಯಾಗಾತ್ ಪಾರ್ಥಂ ಮುಂಚನ್ ಶರಾನ್ ಬಹೂನ್ ॥ ೮೨ ॥

ಭೀಮ ಆ ಸೈನ್ಯವನ್ನು ಬಾಣವೃಷ್ಟಿಗಳಿಂದ ಬೇಗನೆ ಸಂಹರಿಸತೊಡಗಿದ. ಆಗ ಸತ್ಯಜಿತ್ ಬಹಳ ಬಾಣಗಳನ್ನು ಎಸೆಯುತ್ತ ಅರ್ಜುನನ ಮುಂದೆ ಬಂದ.

ತಮರ್ಜುನಃ ಕ್ಷಣೇನೈವ ಚಕ್ರೇ ವಿರಥ ಕಾರ್ಮುಕಮ್ ।
ಘ್ನಂತಂ ಭೀಮಂ ಪುನಃ ಸೈನ್ಯಮರ್ಜುನಃ ಪ್ರಾಹ ಮಾ ಭವಾನ್ ॥ ೮೩ ॥

ಸೇನಾಮರ್ಹತಿ ರಾಜ್ಞೋಽಸ್ಯ ವೀರ ಹಂತುಮಶೇಷತಃ।
ಸಂಬಂಧಯೋಗ್ಯಸಾತ್ತಸ್ಯ ಸಖಾಯಂ ನಃ ಸುಧಾರ್ಮಿಕಃ ॥ ೮೪ ॥

ನೇಷ್ಯಾಮ ಏನಮೇವಾತೋ ಗುರೋರ್ವಚನಗೌರವಾತ್।
ಸ್ನೇಹಪಾಶಂ ತತಶ್ಚಕ್ರೇ ಬೀಭತ್ಸೌ ದ್ರುಪದೋಽಧಿಕಮ್ ॥ ೮೫ ॥

ಅರ್ಜುನ ಕ್ಷಣದಲ್ಲಿ ಅವನನ್ನು ರಥರಹಿತ ಚಾಪರಹಿತನನ್ನಿಗಿ ಮಾಡಿದ ಭೀಮ ಮತ್ತೂ ಮತ್ತೂ ಸೈನ್ಯವನ್ನು ಸಂಹರಿಸುತ್ತಿದ್ದುದನ್ನು ಕಂಡು ಅರ್ಜುನ ನುಡಿದ, 'ವೀರನೆ, ಈ ರಾಜನ ಸೈನ್ಯವನ್ನು ಪೂರ್ತಿ ಸಂಹರಿಸಬೇಡ. ಈತ ಬಹಳ ಧಾರ್ಮಿಕ. ನಮ್ಮ ತಂದೆಯ ಸ್ನೇಹಿತ. ನಮಗೆ ವಿವಾಹ ಸಂಬಂಧಕ್ಕೆ ಯೋಗ್ಯ. ಅದರಿಂದ ನಾವು ಗುರುಗಳ ಮಾತಿನಲ್ಲಿ ಗೌರವಭಾವದಿಂದ ದ್ರುಪದನನ್ನು ಮಾತ್ರ ಹಿಡಿದು ಒಯ್ಯೋಣ.' ಅದರಿಂದ ದ್ರುಪದ ಅರ್ಜುನನಲ್ಲಿ ಅಧಿಕವಾಗಿ ಸ್ನೇಹಪಾಶಪಿಟ್ಟುಕೊಂಡ.

ಹೀಗೆ ಅರ್ಜುನನಲ್ಲಿ ದ್ರುಪದನಿಗೆ ಹೆಚ್ಚು ಪ್ರೀತಿ ಬೆಳೆಯಬೇಕು, ಅವನು ಅರ್ಜುನನಿಗಾಗಿ ದ್ರೌಪದಿಗೆ ಜನ್ಮ ನೀಡಬೇಕು ಎಂಬ ದೂರಾಲೋಚನೆಯಿಂದಲೆ ಭೀಮ ದ್ರುಪದನ ಸೈನ್ಯವನ್ನು ನಿರ್ದಾಕ್ಷಿಣ್ಯತೆಯಿಂದ ಕೊಲ್ಲುವಂತೆ ತೋರಿಕೊಂಡ. ಮತ್ತು ಆ ಮೂಲಕ ಸೂರ್ಯರ ವರ ತನ್ನನ್ನು ಏನೂ ಮಾಡಲಾರದು ಎಂಬುದನ್ನು ತೋರಿಸಿದ. ಮನುಷ್ಯನಾಗಿ ಹುಟ್ಟಿದರೂ ಅವನಿಗೆ ಮೂಲರೂಪದ ಶಕ್ತಿ ಜ್ಞಾನಾದಿಗಳೇ ಇರುತ್ತವೆ.

ತತಃ ಸೇನಾಂ ವಿಹಾಯೈವ ಭೀಮೋ ಬೀಭತ್ಸುಮನ್ವಗಾತ್ ।
ಮುಕ್ತಾ ಕಥಂಚಿದ್ ಭೀಮಾಸ್ಯಾತ್ ಸಾ ಸೇನಾ ದುದ್ರುವೇ ಭಯಾತ್ ॥ ೮೬ ॥

ಬಳಿಕ ಸೈನ್ಯವನ್ನು ಬಿಟ್ಟು ಭೀಮ ಅರ್ಜುನನ್ನು ಹಿಂಬಾಲಿಸಿದ. ಹೀಗೆ ಭೀಮನ ಬಾಯಿಂದ ಹೇಗೋ ತಪ್ಪಿಸಿಕೊಂಡು ಸೈನ್ಯ ಭಯದಿಂದ ಪಲಾಯನ ಮಾಡಿತು.

ದ್ರೋಣರಿಗೆ ರಾಜ್ಯ ಲಾಭ

ದ್ರುಪದಂ ಸ್ಥಾಪಯಾಮಾಸಾಥಾರ್ಜುನೋ ದ್ರೋಣಸನ್ನಿಧೌ ।
ಪಪ್ರಚ್ಛೈನಂ ತದಾ ದ್ರೋಣಃ ಸಖ್ಯಮಸ್ತ್ಯುತನೇತಿ ವಾ ॥ ೮೭ ॥

ಅರ್ಜುನ ದ್ರೋಣರ ಬಳಿ ದ್ರುಪದನನ್ನು ತಂದು ನಿಲ್ಲಿಸಿದ. ದ್ರೋಣರು ಆಗ ದ್ರುಪದನನ್ನು ಕೇಳಿದರು. 'ಈಗ ಹೇಳು, ನಮ್ಮೊಳಗೆ ಸಖ್ಯವಿದೆಯೆ, ಇಲ್ಲವೆ?'

ಅಸ್ತೀದಾನೀಮಿತಿ ಪ್ರಾಹ ದ್ರುಪದೋಽಗಿರಸಾಂ ವರಮ್ ।
ಅಥಾಹ ದ್ರುಪದಂ ದ್ರೋಣಃ ಸಖ್ಯಮಿಚ್ಛೇಽಕ್ಷಯಂ ತವ ॥ ೮೮ ॥

'ಈಗ ಇದೆ' ಎಂದ ದ್ರುಪದ. ದ್ರೋಣರು ಹೇಳಿದರು, 'ನಿನ್ನ ಶಾಶ್ವತವಾದ ಸಖ್ಯವನ್ನೇ ನಾನು ಬಯಸುವೆನು.'

ನ ಹ್ಯರಾಜ್ಞೋ ಭವೇತ್ ಸಖ್ಯಂ ತವೇತೀದಂ ಕೃತಂ ಮಯಾ ।
ನ ವಿಪ್ರಧರ್ಮೋ ಯುದ್ಧಮತಸ್ತ್ವಂ ನ ಮಯಾ ಧೃತಃ ॥ ೮೯ ॥

'ರಾಜನಲ್ಲದವನೊಡನೆ ನಿನಗೆ ಸಖ್ಯವಿರುವುದಿಲ್ಲವೆಂದು ನಾನು ಈ ಕಾರ್ಯಮಾಡಿದೆ. ಯುದ್ಧ ಬ್ರಾಹ್ಮಣನಿಗೆ ಧರ್ಮವಲ್ಲ. ಅದರಿಂದ ನಾನು ಸ್ವತಃ ನಿನ್ನನ್ನು ವಶಪಡಿಸಿಕೊಳ್ಳಲಿಲ್ಲ.

ಶಿಷ್ಯೈರೇತತ್ ಕಾರಿತಂ ಮೇ ತವ ಸಖ್ಯಮಭೀಪ್ಸತಾ ।
ಅತಃ ಸಖ್ಯಾರ್ಧಮೇವಾದ್ಯತ್ವದ್ರಾಜ್ಯಾರ್ಧೋ ಹೃತೋ ಮಯಾ ॥ ೯೦ ॥

'ಶಿಷ್ಯರಿಂದ ಈ ಕೆಲಸವನ್ನು ನನಗಾಗಿ ಮಾಡಿಕೊಂಡೆ. ಏಕೆಂದರೆ ನಾನು ನಿನ್ನ ಸಖ್ಯವನ್ನು ಬಯಸಿದ್ದೇನೆ. ಅದರಿಂದ ಸಖ್ಯಕ್ಕಾಗಿಯೆ ಇದೀಗ ನಿನ್ನ ರಾಜ್ಯದ ಒಂದು ಭಾಗವನ್ನು ನಾನು ಅಪಹರಿಸಿದ್ದೇನೆ.

ಅರ್ಧರಾಜ್ಯವೆನ್ನದೆ ರಾಜ್ಯಾರ್ಧವೆಂದುದರಿಂದ ರಾಜ್ಯದ ಒಂದು ಭಾಗವೆಂದೇ ಅರ್ಥ. ಅರ್ಧಾಂಶವೆಂದಲ್ಲ.

ಗಂಗಾಯಾ ದಕ್ಷಿಣೇ ಕೂಲೇ ತ್ವಂ ರಾಜೈವೋತ್ತರೇ ತ್ವಹಮ್।
ನ ಹ್ಯರಾಜತ್ವಏಕಸ್ಯ ಸಖ್ಯಂ ಸ್ಯಾದಾವಯೋಃ ಸಖೋ ॥ ೯೦ ॥

ಮಿತ್ರ, ಗಂಗೆಯ ದಕ್ಷಿಣ ತೀರದಲ್ಲಿ ನೀನೆ ರಾಜ. ಉತ್ತರ ತೀರದಲ್ಲಿ ನಾನು. ನಮ್ಮಿಬ್ಬರೊಳಗೆ ಒಬ್ಬನು ರಾಜನಲ್ಲದಿದ್ದರೆ ಸಖ್ಯ ಚಿರಕಾಲ ಉಳಿಯಲಾರದು ತಾನೆ?

ದ್ರೋಣರು ಪುನಃ ಪುನಃ ದ್ರುಪದನನ್ನು ಮೂದಲಿಸುತ್ತಾರೆ. ಪರಶು ರಾಮರ ಶಿಷ್ಯರಾದ್ದರಿಂದ ದುಷ್ಟಕ್ಷತ್ರಿಗೆ ಶಾಸನ ಮಾಡುವುದು ಅವರ ಉದ್ದೇಶ. ವೈಯಕ್ತಿಕ ದ್ವೇಷವಲ್ಲ.

ಇತ್ಯುಕ್ತ್ವೋನ್ಮುಚ್ಯ ತಂ ದ್ರೋಣೋ ರಾಜ್ಯಾರ್ಧಂ ಗೃಹ್ಯ ಚಾಮುತಃ।
ಯಯೌ ಶಿಷ್ಯೈರ್ನಾಗಪುರಂ ನ್ಯವಸತ್ ಸುಖಮತ್ರ ಚ ॥ ೯೨ ॥

ದ್ರೋಣರು ಹೀಗೆ ಹೇಳಿ ದ್ರುಪದನನ್ನು ಬಂಧಮುಕ್ತನನ್ನಾಗಿ ಮಾಡಿ ಅವನ ರಾಜ್ಯದ ಒಂದು ಭಾಗವನ್ನು ಸ್ವೀಕರಿಸಿ ಶಿಷ್ಯರೊಡನೆ ಹಸ್ತಿನಾಪುರಕ್ಕೆ ಹೋದರು. ಅಲ್ಲಿ ಸುಖವಾಗಿ ವಾಸಮಾಡಿದರು.

ದ್ರೋಣರು ರಾಜ್ಯವನ್ನು ಬಯಸಿದ್ದರೆ ಗಂಗೆಯ ಉತ್ತರತೀರದಲ್ಲಿ ತಮ್ಮ ರಾಜ್ಯವಾಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅವರ ಹೆಸರಿನಲ್ಲಿ ದ್ರುಪದನೇ ರಾಜ್ಯವಾಳಿದನೆಂದು ಕಾಣುತ್ತದೆ. ಶ್ರೀಮದಾಚಾರ್ಯರಿಗೆ ತುರುಷ್ಕರಾಜ 'ರಾಜ್ಯಾರ್ಧಂ ಸಪದಿ ಸಮರ್ಪಯಾಂಬಭೂವ' ಎಂಬಂತೆ ಅರ್ಧರಾಜ್ಯ ನೀಡಿದರೂ ಶ್ರೀಮದಾಚಾರ್ಯರು ರಾಜ್ಯವಾಳಲಿಲ್ಲ. ಹಾಗೇ ದ್ರೋಣರೂ. ದ್ರುಪದನ ಅಹಂಕಾರ, ದರ್ಪ ಮುರಿಯಿತೆಂದು ತೃಪ್ತರಾಗಿ ಹಸ್ತಿನಾವತಿಯಲ್ಲಿಯೆ ಸುಖವಾಗಿ ವಾಸಮಾಡಿದರು.

ವಾದಿರಾಜರ ಕನ್ನಡ ತಾತ್ಪರ್ಯನಿರ್ಣಯದಲ್ಲಿಯೂ 'ಆತನ ಅರ್ಧರಾಜ್ಯಕೊಂಡು ಬಿಟ್ಟುಕೊಟ್ಟನು' ಎಂದು ಸ್ಪಷ್ಟವಾಗಿ ಹೇಳಿದೆ.

ದ್ರೋಣರ ಕ್ಷಾತ್ರವೃತ್ತಿ

ಬ್ರಾಹ್ಮಣ್ಯ ತ್ಯಾಗಭೀರುಃ ಸನ್ ನಾಗೃಹ್ಣಾದ್ ಧನುರಪ್ಯಸೌ।
ಧಾರ್ತರಾಷ್ಟ್ರೈಸ್ತು ಭೀಮಸ್ಯ ಭಯಾತ್ ಪಾದೌ ಪ್ರಣಮ್ಯ ಚ ॥ ೯೩ ॥

ಶರಣಾರ್ಥಂ ಯಾಚಿತತ್ವಾತ್ ಸಪುತ್ರೋ ಯುಯುಧೇ ಪರೈಃ।
ಏವಂ ಹರೀಚ್ಛಯೈವಾಸೌ ಕ್ಷಾತ್ರಂ ಧರ್ಮಮುಪೇಯಿವಾನ್ ॥ ೯೪ ॥

ಬ್ರಾಹ್ಮಣವನ್ನು ಬಿಟ್ಟಂತಾದೀತೆಂದು ಭಯಪಟ್ಟು ದ್ರೋಣರು ಎಂದೂ ಸ್ವತಃ ಬಿಲ್ಲನ್ನೆತ್ತಿಕೊಳ್ಳಲಿಲ್ಲ. ಕೌರವರು ಭೀಮನ ಭಯದಿಂದ ಕಾಲಿಗೆ ಬಿದ್ದು ರಕ್ಷಣೆಗಾಗಿ ಬೇಡಿದ್ದರಿಂದ ದ್ರೋಣರು ಅಶ್ವತ್ಥಾಮನಿಂದ ಕೂಡಿಕೊಂಡು ಪಾಂಡವರೊಡನೆ ಯುದ್ಧಮಾಡಿದರು. ಹೀಗೆ ಹರೀಚ್ಛೆಯಿಂದಲೆ ಅವರು ಕ್ಷಾತ್ರಧರ್ಮವನ್ನು ಕೈಗೊಂಡರು. ಶರಣಾಗತ ರಕ್ಷಣೆಗಾಗಿಯೇ ದ್ರೋಣರು ಕ್ಷಾತ್ರವೃತ್ತಿಯನ್ನು ಅವಲಂಬಿಸಿ ಕುರುಕ್ಷೇತ್ರದಲ್ಲಿ ಯುದ್ಧಮಾಡಿದರು. ಹರೀಚ್ಛೆಯೂ ಹಾಗೇ ಇದ್ದಿತು. ಅಂದರೆ, ಪರಶುರಾಮರು ದ್ರೋಣರಿಗೆ ಶಸ್ತ್ರಾಸ್ತ್ರ ಕಲಿಸಿದ್ದುದೂ ಇದೇ ಉದ್ದೇಶದಿಂದ. ಭೂಭಾರ ಹರಣಕಾರ್ಯದಲ್ಲಿ ದ್ರೋಣರು ಶ್ರೀಕೃಷ್ಣನಿಗೆ ಗಣನೀಯವಾದ ಸೇವೆ ಸಲ್ಲಿಸಲಿ ಎಂದು. ಅದರಿಂದ ಪಾಂಡವರೊಡನೆ ಯುದ್ಧಮಾಡಿದರೂ ಅವರಿಗೆ ಪಾಪ ಬರಲಿಲ್ಲ. ಪಾಂಡವರಿಗೆ ಜಯವಾಗಲಿ ಎಂದು ಹರಸಿಯೇ ಯುದ್ಧಮಾಡಿದ್ದರು ಅವರು.

ಧೃಷ್ಟದ್ಯುಮ್ನ ದ್ರೌಪದಿಯರ ಜನನ

ದ್ರುಪದಸ್ತು ದಿವಾರಾತ್ರಂ ತಪ್ಯಮಾನಃ ಪರಾಭವಾತ್।
ಭೀಮಾರ್ಜುನಬಲಂ ದೃಷ್ಟ್ವಾಚ್ಛೈಚ್ಛತ್ ಪಾಂಡವಸಂಶ್ರಯಮ್ ॥ ೯೫ ॥

ಸಂಬಂಧೀತ್ಯರ್ಜುನವಚಶ್ಚಿಕೀರ್ಷುಃ ಸತ್ಯಮೇವ ಚ।
ಮಾರ್ದವಂ ಚಾರ್ಜುನೇ ದೃಷ್ಟ್ವಾಸುತಾಮೈಚ್ಛತ್ ತದರ್ಥತಃ ॥ ೯೬ ॥

ದ್ರುಪದ ತನಗೆ ದ್ರೋಣರಿಂದ ಉಂಟಾದ ಪರಾಭವದಿಂದ ಹಗಲು ರಾತ್ರಿ ಬೇಯುತ್ತಿದ್ದ. ಭೀಮಾರ್ಜುನರ ಬಲವನ್ನು ಕಣ್ಣಾರೆ ಕಂಡು ಪಾಂಡವರ ಆಶ್ರಯ ಪಡೆಯಲೂ ಬಯಸಿದ್ದ. ತಾನು ಸಂಬಂಧಕ್ಕೆ ಯೋಗ್ಯನೆಂದು ಅರ್ಜುನನಾಡಿದ ಮಾತನ್ನು ನಿಜಗೊಳಿಸಲು ಬಯಸಿದ್ದ. ಅದರಿಂದ ಅರ್ಜುನನ ಮೃದುಸ್ವಭಾವವನ್ನು ಮೆಚ್ಚಿ ಅವನಿಗಾಗಿ ಒಬ್ಬ ಮಗಳನ್ನು ಪಡೆಯಲು ಬಯಸಿದ.

ಪುತ್ರಂ ಚ ದ್ರೋಣ ಹಂತಾರಮಿಚ್ಛನ್ ವಿಪ್ರವರೌ ಯಯೌ।
ಯಾಜೋಪಯಾಜಾವಾನೀಯಾಥಾರ್ಬುದೇನ ಗವಾಂ ನೃಪಃ ॥ ೯೭ ॥

ಚಕಾರೇಷ್ಟಿಂ ಚ ತದ್ಭಾರ್ಯಾ ದ್ವಿಜಾಭ್ಯಾಮತ್ರ ಚಾಹುತಾ।
ದ್ರುಪದಾತ್ ಸುತ ಲಬ್ಧ್ಯರ್ಥಂ ಸಾಹಂಕಾರಾದ್ವ್ಯಲಂಬಯತ್ ॥ ೯೮ ॥

ದ್ರೋಣನನ್ನು ಕೊಲ್ಲಬಲ್ಲ ಒಬ್ಬ ಮಗನನ್ನೂ ಬಯಸಿ ದ್ರುಪದ ಯಾಜ ಉಪಯಾಜರೆಂಬ ಬ್ರಾಹ್ಮಣಶ್ರೇಷ್ಠರನ್ನು ಆಶ್ರಯಿಸಿದ. ಹತ್ತು ಕೋಟಿ ಗೋದಾನ ಮಾಡಿ

ಅವರನ್ನು ಕರೆಸಿಕೊಂಡು ಇಷ್ಟಿಯನ್ನು ಮಾಡಿದ. ರಾಣಿಗೆ ದ್ರುಪದನಿಂದ ಪುತ್ರ ಲಾಭವಾಗಲಿ ಎಂದು ಅವರು ಯಜ್ಞಶಾಲೆಗೆ ರಾಣಿಯನ್ನು ಕರೆಸಿದರು. ಅವಳು ಅಹಂಕಾರದಿಂದ ವಿಲಂಬ ಮಾಡಿದಳು.

ಪುತ್ರಕಾಮೇಷ್ಟಿ ಮುಗಿದ ಬಳಿಕ ಹವಿಃಶೇಷವನ್ನು ರಾಣಿ ಉಣಬೇಕು. ಅದರಿಂದ ಗರ್ಭಶುದ್ಧಿಯಾಗಿ ದ್ರುಪದನಿಂದ ಪುತ್ರೋತ್ಪತ್ತಿಯಾಗುತ್ತದೆ ಎಂಬ ಅಭಿಪ್ರಾಯದಿಂದ ಋತ್ವಿಜರು ಅವಳನ್ನು ಕರೆಸಿದರು. ಆದರೆ ರಾಣಿ ಅಹಂಕಾರದಿಂದ ಬೇಗನೆ ಬಾರದ ಅವರನ್ನು ಕಾಯಿಸಿದಳು. 'ಋತ್ವಿಜರು ಎಷ್ಟು ಯಾಗ ಮಾಡಿದರೇನು? ತಾನು ಗರ್ಭಧರಿಸಿದರೆ ತಾನೇ ದ್ರುಪದನಿಗೆ ಮಕ್ಕಳಾಗುವರು?' ಎನ್ನುವ ಅಹಂಕಾರ. ಮತ್ತು 'ಈ ಋತ್ವಿಜರು ಹತ್ತು ಕೋಟಿ ಗೋವುಗಳಿಗೆ ತಮ್ಮನ್ನು ಮಾರಿಕೊಂಡವರು. ನಾವು ಅವರನ್ನು ಕೊಂಡುಕೊಂಡೆವು' ಎನ್ನುವ ಅಹಂಕಾರವೂ ಇತ್ತು.

ಕಿಮೇತಯೇತ್ಯವಜ್ಞಾಯ ತಾವುಭೌ ವಿಪ್ರಸತ್ತಮೌ।
ಅಜುಹ್ವತಾಂ ತತ್ಪುತ್ರಾರ್ಥಂ ಪತ್ನ್ಯಾ ಪ್ರಾಶ್ಯಂ ಹವಿಸ್ತದಾ ॥ ೯೯ ॥

'ಈ ರಾಣಿಯಿಂದೇನು?' ಎಂದು ತಿರಸ್ಕಾರ ಮಾಡಿ ಆ ಇಬ್ಬರು ಬ್ರಾಹ್ಮಣೋತ್ತಮರು ದ್ರುಪದನ ಪುತ್ರೋತ್ಪತ್ತಿಗೆ ಪತ್ನಿ ಸೇವಿಸಬೇಕಾಗಿದ್ದ ಹವಿಸ್ಸನ್ನು ಅಗ್ನಿಯಲ್ಲಿ ಹೋಮಿಸಿದರು.

ಪತ್ನಿ ಸೇವಿಸಬೇಕಾಗಿದ್ದ ಹವಿಸ್ಸೆಂದರೆ ಹವಿಃಶೇಷ. ಅದನ್ನು ಉಣಲು ಪತ್ನಿ ಬೇಗನೆ ಬರಲಿಲ್ಲ. ಅವಳಿಗೆ ಅಹಂಕಾರವೆಂದು ತಿಳಿದು ಈ ರಾಣಿಯ ಸಹಾಯವಿಲ್ಲದೆ ಕೇವಲ ಮಂತ್ರ ಬಲದಿಂದಲೇ ಮಕ್ಕಳನ್ನು ಹುಟ್ಟಿಸುವೆವೆಂದು ಬ್ರಾಹ್ಮಣರು ರಾಣಿ ಸೇವಿಸಬೇಕಾಗಿದ್ದ ಈ ಹವಿಃಶೇಷವನ್ನೂ ಅಗ್ನಿಯಲ್ಲಿಯೇ ಮಂತ್ರಪೂರ್ವಕವಾಗಿ ಹಾಕಿದರು.

ಹುತೇ ಹವಿಷಿ ಮಂತ್ರಾಭ್ಯಾಂ ವೈಷ್ಣವಾಭ್ಯಾಂ ತದೈವ ಹಿ।
ದೀಪ್ತಾಂಗಾರ ನಿಭೋ ವಹ್ನಿಃ ಕುಂಡಮಧ್ಯಾತ್ಸಮುತ್ಥಿತಃ ॥ ೧೦೦ ॥

ಕಿರೀಟೀ ಕುಂಡಲೀ ದೀಪ್ತೋ ಹೇಮಮಾಲೀ ವರಾಸಿಮಾನ್।
ರಥೇನಾದಿತ್ಯವರ್ಣೇನ ನದನ್ ದ್ರುಪದಮಾದ್ರವತ್ ॥ ೧೦೧ ॥

ವೈಷ್ಣವ ಮಂತ್ರಗಳಿಂದ ಹವಿಸ್ಸನ್ನು ಹೋಮಿಸಿದಾಗ ತಕ್ಷಣ ಕುಂಡದ ಮಧ್ಯದಿಂದ ಉರಿವ ಕೆಂಡದಂಥ ಮೈಬಣ್ಣದ, ಕಿರೀಟ ಕುಂಡಲಗಳನ್ನೂ ಚಿನ್ನದ ಹಾರಗಳನ್ನೂ ಧರಿಸಿ ಶ್ರೇಷ್ಠವಾದ ಖಡ್ಗವನ್ನು ಹಿಡಿದ ಅಗ್ನಿದೇವ ಎದ್ದು ಬಂದ. ಸೂರ್ಯನಂತೆ ಬೆಳಗುವ ರಥದೊಂದಿಗೆ ಸಿಂಹನಾದ ಮಾಡುತ್ತ ದ್ರುಪದನ ಬಳಿಗೆ ಬಂದ.

ದೃಷ್ಟತ್ವಾದ್ ದ್ಯೋತನತ್ವಾಚ್ಚ ಧೃಷ್ಟದ್ಯುಮ್ನ ಇತೀರಿತಃ।
ಮುನಿಭಿರ್ದ್ರುಪದೇನಾಪಿ ಸರ್ವವೇದಾರ್ಥ ತತ್ವವಿತ್ ॥ ೧೦೨ ॥

ದಿಟ್ಟತನವಿದ್ದುದರಿಂದಲೂ ಕಾಂತಿಯುಕ್ತನಾದ್ದರಿಂದಲೂ ಧೃಷ್ಟದ್ಯುಮ್ನ ಎಂದು ಮುನಿಗಳಿಂದಲೂ ದ್ರುಪದನಿಂದಲೂ ಕರೆಸಿಕೊಂಡ ಅಗ್ನಿದೇವ ಸರ್ವವೇದಾರ್ಥ ವೇತ್ತನಾಗಿದ್ದ. 'ಧೃಷ್ಟ' ಎಂದರೆ ದಿಟ್ಟತನದವ. ಪರರನ್ನು ಬಲಾತ್ಕರಿಸಬಲ್ಲವ. ಕ್ಷತ್ರಿಯರಿಗೆ ಇದೊಂದು ದೊಡ್ಡ ಗುಣ. 'ದ್ಯುಮ್ನ' ಎಂದರೆ ಕಾಂತಿಯುಕ್ತ. ಅದರಿಂದ 'ಧೃಷ್ಟದ್ಯುಮ್ನ' ಎಂದು ಮುನಿಗಳು ಆದರದಿಂದ ಕರೆದರು. ದ್ರುಪದನೂ ಆ ಹೆಸರನ್ನೇ ನಾಮಕರಣ ಮಾಡಿದ.

ಅನ್ವೇನಂ ಭಾರತೀ ಸಾಕ್ಷಾದ್ವೇದಿಮಧ್ಯಾತ್ ಸಮುತ್ಥಿತಾ।
ಪ್ರಾಣೋ ಹಿ ಭರತೋ ನಾಮ ಸರ್ವಸ್ಯ ಭರಣಾತ್ ಶ್ರುತಃ ॥ ೧೦೩ ॥

ತದ್ಭಾರ್ಯಾ ಭಾರತೀ ನಾಮ ವೇದರೂಪಾ ಸರಸ್ವತೀ।
ಶಂರೂಪಮಾಶ್ರಿತಾ ವಾಯುಂ ಶ್ರೀರಿತ್ಯೇವ ಚ ಕೀರ್ತಿತಾ ॥ ೧೦೪ ॥

ಧೃಷ್ಟದ್ಯುಮ್ನನ ಅನಂತರ ಸಾಕ್ಷಾತ್ ಭಾರತೀದೇವಿ ದ್ರೌಪದಿಯಾಗಿ ಯಜ್ಞವೇದಿಕೆಯ ಮಧ್ಯದಿಂದ ಎದ್ದು ಬಂದಳು. ಎಲ್ಲರನ್ನೂ ರಕ್ಷಿಸುವುದರಿಂದ 'ಭರತ'ನೆಂದು ಪ್ರಸಿದ್ಧನಾದವ ಪ್ರಾಣ. ಭರತನ ಪತ್ನಿಯಾದ್ದರಿಂದ ಇವಳು 'ಭಾರತಿ'. ಅವಳೆ ವೇದಾಭಿಮಾನಿನಿಯಾದ್ದರಿಂದ 'ಸರಸ್ವತಿ'. ಸುಖರೂಪನಾದ ವಾಯುವನ್ನು ಆಶ್ರಯಿಸಿದವಳಾದ್ದರಿಂದ 'ಶ್ರೀ' ಎಂದೂ ಅವಳೇ ಕರೆಸಿಕೊಂಡಿದ್ದಾಳೆ.

> ಎಲ್ಲ ಜೀವರ ಸ್ವರೂಪಶರೀರ ಬಾಹ್ಯಶರೀರಗಳಲ್ಲಿ ಶ್ವಾಸಕಾರ್ಯ ನಡೆಸುತ್ತ ರಕ್ಷಿಸುವುದರಿಂದ ವಾಯು 'ಭರತ'ನೆನಿಸಿದ್ದಾನೆ. ಅವನು ಸುಖರೂಪ. ಕೇವಲ ಸುಖಪ್ರಾರಬ್ಧ ಪ್ರಯುಕ್ತ ವೃತ್ತಿಸುಖವಿದೆ. ಸ್ವರೂಪ ಸುಖವೂ ವ್ಯಕ್ತ. ಲಿಂಗ ಶರೀರವಿದ್ದರೂ ದುಃಖಾದಿಕಾರ್ಯಕಾರಿಯಾಗದೆ ದಗ್ಧಪಟದಂತಿರುವುದರಿಂದ ದುಃಖಪೀಡಿತನಾಗದೆ ಸಂಸಾರದಲ್ಲಿದ್ದರೂ ಸದಾ ಸುಖಿಯೇ ಆಗಿದ್ದಾನೆ. 'ಶಂ' ಎಂದರೆ ಸುಖ, ಸುಖರೂಪನಾದ ವಾಯು. ಅವನನ್ನು ಆಶ್ರಯಿಸಿದವಳಾದ್ದರಿಂದ ಭಾರತಿಯೇ ಶ್ರೀ ಎನಿಸುತ್ತಾಳೆ. ಅಥವಾ ಅವನೊಡನೆ ರಮಿಸುವುದರಿಂದ ಶ್ರೀ ಎನಿಸುತ್ತಾಳೆ.[1]

---

1. ಶಕಾರಸ್ಯಾವೃತ್ತ್ಯಾಂ ಶಂ ಸುಖರೂಪಂ ವಾಯುಂ ಶ್ರಿತಾ ಶ್ರೀರಿತ್ಯರ್ಥಃ ಶಂ ಶ್ರಿತೇತಿ ಛಂದಸಿ ಸಮಾನೇ ಪೂರ್ವಲೋಪ ಇತಿ ವಚನಾತ್ ಪೂರ್ವಶಕಾರಸ್ಯ ಲೋಪೇ ಶ್ರೀರಿತ್ಯೇವ ಶಬ್ದಸ್ವರೂಪಮುರ್ವರಿತಮಿತಿ ಜ್ಞೇಯಂ। ಯದ್ವಾ ಶಂರೂಪೇಣ ವಾಯುನಾ ರಮತ ಇತಿ ಶ್ರೀಃ ಆಶ್ರಿತೇತಿ ತು ಫಲಿತ ಕಥನಂ॥ –ವಾದಿರಾಜೀಯ

ಆವೇಶಯುಕ್ತಾ ಶಚ್ಯಾಶ್ಚ ಶ್ಯಾಮಲಾಯಾಸ್ತಥೋಷಸಃ।
ತಾಶ್ಚೇಂದ್ರ ಧರ್ಮನಾಸತ್ಯ ಸಂಶ್ರಯಾತ್ ಶ್ರಿಯ ಈರಿತಾಃ ॥ ೧೦೫ ॥

ದ್ರೌಪದಿ ಶಚಿ ಶ್ಯಾಮಲೆ ಉಷೆಯರ ಆವೇಶದಿಂದ ಕೂಡಿದ್ದಳು. ಆ ಶಚಿ ಶ್ಯಾಮಲೆ ಉಷೆಯರೂ ಕೂಡ ಇಂದ್ರ ಧರ್ಮ ಅಶ್ವಿನೀದೇವತೆಗಳನ್ನು ಆಶ್ರಯಿಸಿದ್ದರಿಂದ ಶ್ರೀ ಎನಿಸಿದ್ದಾರೆ.

ತಾಂಚಾಪ್ಯೇಷಾಂ ಯೋಷಿತಂ ಲೋಕಕಾಂತಾಂ
ಶ್ರಿಯಂ ಭಾರ್ಯಾಂ ವ್ಯದಧಾನ್ಮಾನುಷೇಷು ॥
ಸ್ವರ್ಗಶ್ರೀಃಪಾಂಡವಾರ್ಥಂ ತು ಸಮುತ್ಪನ್ನಾ ಮಹಾಮಖೇ।

ಎಂದು ಮಹಾಭಾರತ (ಆದಿ. 214-30,66) ಹೇಳುವಂತೆ ಸ್ವರ್ಗದಲ್ಲಿದ್ದ ಶ್ರೀಯೆ ದ್ರೌಪದಿಯಾಗಿ ಜನಿಸಿದಳು. ಪಾರ್ವತಿ ಹೊರತು ಉಳಿದ ಭಾರತಿ ಶಚಿ ಶ್ಯಾಮಲೆ ಉಷೆಯರು ನಾಲ್ವರೂ ಮನುಷ್ಯರಾಗಿ ಹುಟ್ಟಿದ ವಾಯು ಇಂದ್ರ ಯಮ ಅಶ್ವನೀದೇವತೆಗಳನ್ನು ಮದುವೆಯಾಗಿ ಆಶ್ರಯಿಸಿರುವುದರಿಂದ ಶ್ರೀ ಎನಿಸಿದ್ದಾರೆ. ತಮ್ಮ ಪತಿಗಳು ಬೇರೆಬೇರೆ ಮನ್ವಂತರಗಳಲ್ಲಿ ಇಂದ್ರಪದವಿಯನ್ನಾಳಿದಾಗ ತಾವು ರಾಣಿಯರಾಗಿ ಸ್ವರ್ಗಶ್ರೀ ಎನಿಸಿದ್ದಾರೆ. ಇಷ್ಟು ವ್ಯತ್ಯಾಸ ಭಾರತಿ 'ಶ್' – ಸುಖರೂಪನಾದ ವಾಯುವಿನೊಡನೆ 'ರೀ' – ರಮಿಸುವುದರಿಂದ 'ಶ್ರೀ' ಎನಿಸಿದ್ದಾಳೆ. ಶಚಿ ಮುಂತಾದವರು ಆ 'ಶ್ರ'ಯಿಸಿದುದರಿಂದ 'ಶ್ರೀ' ಎನಿಸಿದ್ದಾರೆ.

ಸಾ ಕೃಷ್ಣಾನಾಮತಶ್ಚಾಸೀದುತ್ಕೃಷ್ಟತ್ವಾದ್ದ್ರಿಯೋಷಿತಾಮ್।
ಕೃಷ್ಣಾಸಾ ವರ್ಣತಶ್ಚಾಸೀದುತ್ಕೃಷ್ಟಾನಂದಿನೀ ಚ ಸಾ ॥ ೧೦೬ ॥

ಸ್ತ್ರೀಯರಲ್ಲೆಲ್ಲ ಉತ್ಕೃಷ್ಟಳಾದ್ದರಿಂದ ದ್ರೌಪದಿ 'ಕೃಷ್ಣೆ' ಎನಿಸಿದಳು. ವರ್ಣದಿಂದಲೂ ಕೃಷ್ಣೆ. ಉತ್ಕೃಷ್ಟವಾದ ಆನಂದ ಉಳ್ಳವಳಾದ್ದರಿಂದಲೂ ಕೃಷ್ಣೆ.

ದ್ರುಪದನ ಮಗಳಾದ್ದರಿಂದ ದ್ರೌಪದಿ, ದ್ರುಪದನಿಗೆ ಇನ್ನೊಂದು ಹೆಸರು ಯಜ್ಞಸೇನ. ಅವನ ಮಗಳಾದ್ದರಿಂದ ಯಾಜ್ಞಸೇನಿ. ಪಾಂಚಾಲ ರಾಜನ ಮಗಳಾದ್ದರಿಂದ ಪಾಂಚಾಲಿ. ಆದರೆ ಮುನಿಗಳೂ ದ್ರುಪದನೂ ಇಟ್ಟ ಹೆಸರು 'ಕೃಷ್ಣಾ' ಎಂದು. ನಿರುಕ್ತಿಗೆ ಅನುಸಾರವಾಗಿ 'ಉತ್ಕೃಷ್ಟಾ' ಎಂಬ ಶಬ್ದ 'ಉತ್' ಎಂಬ ಉಪಸರ್ಗವನ್ನು ಕಳೆದುಕೊಂಡು 'ಕೃಷ್ಟಾ' ಎಂಬಲ್ಲಿ 'ಟ'ಕಾರವನ್ನು 'ಣ'ಕಾರವಾಗಿ ಮಾಡಿಕೊಂಡು 'ಕೃಷ್ಣಾ' ಎಂದಾಗುವುದು. ಅದರಿಂದ ಸ್ತ್ರೀಯರಲ್ಲೆಲ್ಲ ಉತ್ಕೃಷ್ಟಳೆಂದರ್ಥ. 'ಸರ್ವಯೋಷಿದ್ವರಾ ಕೃಷ್ಣಾ' ಎನ್ನುತ್ತದೆ ಮಹಾಭಾರತ. ಕೃಷ್ಣವರ್ಣದವಳಾದ್ದರಿಂದಲೂ 'ಕೃಷ್ಣೆ'. 'ಣಶ್ಚ

ನಿರ್ವೃತಿವಾಚಕಃ' ಎಂಬಂತೆ ಣಕಾರಕ್ಕೆ ಆನಂದ ಎಂದರ್ಥ. 'ಕೃಷ್' ಅಂದರೆ ಕೃಷ್ಟ, ಉತ್ಕೃಷ್ಟವಾದ 'ಣ' ಆನಂದ ಉಳ್ಳವಳು ಎಂಬ ಅರ್ಥದಲ್ಲಿಯೂ 'ಕೃಷ್ಣೆ'. ಹೀಗೆ ಮೂರು ಬಗೆಯಿಂದಲೂ ಭಾರತಿ ಕೃಷ್ಣೆಎನಿಸಿದಳು. ಉಳಿದ ದೇವಿಯರು ಕೃಷ್ಣವರ್ಣಪ್ರಯುಕ್ತ ಕೃಷ್ಣೆಯರು.[1]

ಉತ್ಪತ್ತಿತಶ್ಚ ಸರ್ವಜ್ಞಾ ಸರ್ವಾಭರಣಭೂಷಿತಾ।
ಸಂಪ್ರಾಪ್ತಯೌವನೈವಾಸೀದಜರಾ ಲೋಕಸುಂದರೀ ॥ ೧೦೭ ॥

ದ್ರೌಪದಿ ಹುಟ್ಟಿನಿಂದಲೇ ಸರ್ವಜ್ಞಳೂ ಸರ್ವಾಭರಣ ಭೂಷಿತಳೂ ಯೌವನ ಭರಿತಳೂ ಜರೆ ಇಲ್ಲದವಳೂ ಲೋಕಸುಂದರಿಯೂ ಆಗಿದ್ದಳು.

ಉಮಾಂಶಯುಕ್ತಾನಿತರಾಂ ಸರ್ವಲಕ್ಷಣ ಸಂಯುತಾ ॥ ೧೦೮ ॥

ಪೂರ್ವಂ ಹ್ಯುಮಾ ಚ ದೇವ್ಯಸ್ತಾಃ ಕದಾಚಿದ್ ಭರ್ತೃಭಿರ್ಯುತಾಃ।
ವಿಲಾಸಂ ದರ್ಶಯಾಮಾಸುರ್ಬ್ರಹ್ಮಣಃ ಪಶ್ಯತೋಽಧಿಕಮ್ ॥ ೧೦೯ ॥

ಶಶಾಪ ತಾಸ್ತದಾ ಬಹ್ಮಾ ಮಾನುಷೀಂ ಯೋನಿಮಾಪ್ಸ್ಯಥ।
ತತ್ರಾನ್ಯಗಾಶ್ಚ ಭವತೇತ್ಯೇವಂ ಶಪ್ತಾಃ ಸುರಾಂಗನಾಃ ॥ ೧೧೦ ॥

ವಿಚಾರ್ಯ ಭಾರತೀಮೇತ್ಯ ಸರ್ವಮಸ್ಯೈ ನಿವೇದ್ಯ ಚ।
ಸಹಸ್ರವತ್ಸರಂ ಚೈನಾಂ ಶುಶ್ರೂಷಿತ್ವಾಬಭಾಷಿರೇ ॥ ೧೧೧ ॥

ದ್ರೌಪದಿ ಪಾರ್ವತಿಯ ಅಂಶದಿಂದಲೂ ಯುಕ್ತಳಾಗಿದ್ದಳು. ಬಲು ಚೆನ್ನಾಗಿ ಸಕಲ ಲಕ್ಷಣಗಳಿಂದ ಯುಕ್ತಳೂ ಆಗಿದ್ದಳು. ಹಿಂದೆ ಪಾರ್ವತಿಯೂ ಶಚೀ ಮುಂತಾದ ದೇವಿಯರೂ ಒಮ್ಮೆ ಬ್ರಹ್ಮನು ನೋಡುತ್ತಿದ್ದಂತೆಯೆ ತನ್ನ ಪತಿಗಳೊಡನೆ ಬಹಳ ವಿಲಾಸವನ್ನು ಪ್ರದರ್ಶಿಸಿದರು. ಬ್ರಹ್ಮ ಅವರನ್ನು 'ಮನುಷ್ಯ ಜನ್ಮ ಹೊಂದಿರಿ. ಮನುಷ್ಯ ಜನ್ಮದಲ್ಲಿ ಪರಪುರುಷ ಸ್ಪರ್ಶಿಗಳಾಗಿರಿ' ಎಂದು ಶಪಿಸಿದ. ಹೀಗೆ ಶಪ್ತರಾದ ದೇವಾಂಗನೆಯರು ವಿಚಾರಮಾಡಿ ಭಾರತೀದೇವಿಯ ಬಳಿಗೆ ಬಂದು ಎಲ್ಲವನ್ನೂ ಹೇಳಿಕೊಂಡು ಸಾವಿರವರ್ಷಕಾಲ ಸೇವೆ ಮಾಡಿ ಹೇಳಿದರು.

---

1. ಯೋಷಿತಾಂ ಮಧ್ಯೇ ಉತ್ಕೃಷ್ಟತ್ವಾತ್ ಕೃಷ್ಣಾ। ನಿರುಕ್ತತ್ವಾತ್ ಸವರ್ಣತ್ವಾತ್ ಟಕಾರಸ್ಯ ಣಕಾರಃ। ನಿರುಕ್ತತ್ವಾದೇವೋಪಪದ ಲೋಪಶ್ಚೇತಿ ಭಾವೇನೋಕ್ತಂ ಸಾ ಕೃಷ್ಣಾ ನಾಮತಶ್ಚಾಸೀದ್ ಉತ್ಕೃಷ್ಟತ್ವಾದ್ಧಿ ಯೋಷಿತಾಂ ಇತಿ। ವರ್ಣತಃ ಕೃಷ್ಣೇತಿ ತು ಸ್ಪಷ್ಟಂ। ಣಶ್ಚ ನಿರ್ವೃತಿ ವಾಚಕ ಇತಿ ವಚನಾತ್ ಉತ್ಕೃಷ್ಟಂ ಣಂ ಸುಖಂ ಯಸ್ಯಾಃ ಸಾ ಕೃಷ್ಣೇತಿ ಚ ಭಾವೇನೋಕ್ತಂ ಉತ್ಕೃಷ್ಟಾನಂದಿನೀ ಚ ಸೇತಿ। ಏವಂ ಚ ಭಾರತೀತ್ರೇಧಾಪಿ ಕೃಷ್ಣಪದವಾಚ್ಯಾ। ಇತಾರಾಸಾಂ ತು ಕೃಷ್ಣಾ ಸಾ ವರ್ಣತಶ್ಚಾಸೀದಿತಿ ವದತಾ ಗ್ರಂಥಕಾರೇಣೈವ ವರ್ಣತಃ ಕೃಷ್ಣಾಶಬ್ದವಾಚ್ಯತ್ವಮುಕ್ತಪ್ರಾಯಮಿತಿ ಜ್ಞೇಯಂ ॥ –ವಾದಿರಾಜೀಯ

'ನಿತರಾಂ' 'ಬಲು ಚೆನ್ನಾಗಿ' ಎಂಬುದನ್ನು 'ಪಾರ್ವತಿಯ ಅಂಶದಿಂದ ಯುಕ್ತಳಾಗಿದ್ದಳು' ಎಂಬಲ್ಲಿಗೆ ಅನ್ವಯಿಸಿಕೊಂಡು, 'ಶಚಿ ಮುಂತಾದ ದೇವಿಯರಿಗಿಂತ ಬಲು ಚೆನ್ನಾಗಿ ಪಾರ್ವತಿಯ ಅಂಶದಿಂದ ಯುಕ್ತಳಾಗಿದ್ದಳು ಭಾರತಿ' ಎಂದು ವರದರಾಜೀಯ ಜನಾರ್ದನೀಯಗಳು ಹೇಳಿವೆ.[1] ವಾದಿರಾಜೀಯದಲ್ಲಿ 'ಅತಿತರಾಂ' ಎಂಬ ಪಾಠವಿಟ್ಟುಕೊಂಡು ಅದನ್ನು 'ಸಕಲ ಲಕ್ಷಣಗಳಿಂದ ಯುಕ್ತಳಾಗಿದ್ದಳು' ಎಂಬಲ್ಲಿ ಅನ್ವಯ ಮಾಡಬೇಕೆಂದಿದೆ.[2] ಮುಂದೆ ನಿರ್ಣಯದಲ್ಲಿಯೆ,

'ಭಾರತ್ಯೈವ ತು ಪಾರ್ವತೀ ಸಂಯುಕ್ತಾ ವ್ಯವಹಾರೇಷು'(8.149) ಭೋಜನ ಅಭ್ಯಂಜನಾದಿ ವ್ಯವಹಾರಗಳಲ್ಲಿ ಮಾತ್ರವೆ ಪಾರ್ವತಿ ಉಳಿದ ದೇವಿಯರೊಡನೆ ಕೂಡಿದ್ದಳು. ಹೊರತು ರತಿಕ್ರೀಡಾದಿ ವ್ಯವಹಾರಗಳಲ್ಲಿ ಅಲ್ಲವೆಂದು ಹೇಳಿದ್ದರಿಂದ ವಾದಿರಾಜೀಯದಲ್ಲಿ ಹೇಳಿದ ಅನ್ವಯವೇ ಹೆಚ್ಚು ಸ್ವರಸವೆಂದು ಕಾಣುತ್ತದೆ.[3]

ದ್ರುಪದೈಷಾ ತತೋ ಜಜ್ಞೇ ಸುತಾ ತೇ ದೇವರೂಪಿಣೀ।
ಪಂಚಾನಾಂ ಸಹಿತಾ ಕೃಷ್ಣಾರೂಪಾ ಪಾರ್ವತ್ಯನಿಂದಿತಾ ॥

ಎಂಬ ಮಹಾಭಾರತವಚನ ಪಾರ್ವತಿಯೆ ದ್ರೌಪದಿಯಾಗಿ ಜನಿಸಿದಳೆಂದು ಹೇಳುವಂತೆ ಕಾಣುತ್ತದೆ. ವಸ್ತುತಃ ಪಾರ್ವತಿಯೆ ಅಲ್ಲ. ಪಾರ್ವತಿಯೆ ಒಂದು ಅಂಶ ಆವೇಶಗೊಂಡಿದೆ ಎಂದು ಶ್ರೀಮದಾಚಾರ್ಯರು ಹೇಳುತ್ತಿದ್ದಾರೆ.

'ಪಾರ್ವತಿಯೂ ಶಚೀ ಮುಂತಾದ ದೇವಿಯರೂ ವಿಲಾಸ ಪ್ರದರ್ಶನ ಮಾಡಿದರು' ಎನ್ನುವಲ್ಲಿ ಶಚೀ ಮುಂತಾದ ದೇವಿಯರೆಂದರೆ ಶಚೀ ಶ್ಯಾಮಲಾ ಉಷಾದೇವಿಯರು ಹೊರತು ಭಾರಿಯಲ್ಲ.[4]

ದೇವಿ ನೋ ಮಾನುಷಂ ಪ್ರಾಪ್ಯಮನ್ಯಗಾತ್ವಂ ಚ ಸರ್ವಥಾ।
ತತ್ರಾಪಿ ಮಾರುತಾದನ್ಯಂ ನ ಸ್ಪೃಶೇಮ ಕಥಂಚನ ॥ ೧೧೨ ॥

---

1. ನಿತರಾಂ ಶಚ್ಯಾದ್ಯಪೇಕ್ಷಯಾತಿಶಯೇನೋಮಾಂಶಯುಕ್ತಾ। -ವರದರಾಜೀಯ, ಜನಾರ್ದನೀಯ
2. ಉಮಾಂಶ ಯುಕ್ತಾತಿತರಾಮಿತ್ಯತ್ರ ಅತಿತರಾಮಿತ್ಯಸ್ಯ ಸರ್ವಲಕ್ಷಣ ಸಂಯುತೇತ್ಯುತ್ತರವಾಕ್ಯೇನ ಸಂಬಂಧಃ। -ವಾದಿರಾಜೀಯ
3. ಸಂಯುಕ್ತಾ ವ್ಯವಹಾರೇಷು ಪ್ರವರ್ತೇತ ನ ಚಾನ್ಯಥೇತ್ಯತ್ರ ವ್ಯವಹಾರೇಷು ಭೋಜನಾಭ್ಯಂಜನಾದಿ ವ್ಯವಹಾರೇಷು। ಅನ್ಯಥಾ ರಮಣಾದಿರೂಪ ಪ್ರಕಾರಾಂತರೇಣ ನ ಚೇತ್ಯರ್ಥಃ। ವಾದಿರಾಜೀಯ
4. ಉಮಾ ಚ ದೇವ್ಯಸ್ತಾ ಇತ್ಯತ್ರ ಶಚೀಶ್ಯಾಮಲೋಷಾರೂಪ ದೇವ್ಯಃ ನ ತು ಭಾರತೀ। -ವಾದಿರಾಜೀಯ

ದೇವಿ, ನಮಗೆ ಮನುಷ್ಯ ಜನ್ಮ ಬರಲಿದೆ. ಪರಪುರುಷಸ್ಪರ್ಶವೂ ಸರ್ವಥಾ ಉಂಟಾಗಲಿದೆ. ಆಗಲೂ ವಾಯುವಿಗಿಂತ ಬೇರೆಯವರನ್ನು ಯಾವ ರೀತಿಯಿಂದಲೂ ಸ್ಪರ್ಶಿಸಲಾರೆವು.

ದೊಡ್ಡ ಸಭೆಯಲ್ಲಿ ಸ್ವೈರಿಣಿಯರಂತೆ ನಡೆದುಕೊಂಡುದರಿಂದ ಪರಪುರುಷ ಸ್ಪರ್ಶವಾಗಲಿ ಎಂದು ದೇವಿಯರಿಗೆ ಬ್ರಹ್ಮಶಾಪ ಬಂದಿತ್ತು ಹೊರತು ಪರಪುರುಷ ಸಂಗವಾಗಲಿ ಎಂದಲ್ಲ. ಹಾಗಿರುತ್ತಿದ್ದರೆ 'ಅನ್ಯರ ರಮಣಿಯರಾಗಿರಿ' ಎಂದು ಸ್ಪಷ್ಟವಾಗೇ ಹೇಳಬಹುದಿತ್ತು. ಹೀಗೆ 'ಪರಪುರುಷ ಸ್ಪರ್ಶವಾಗಲಿ' ಎಂದು ಮಾತ್ರ ಶಾಪ ಬಂದುದರಿಂದ ವಾಯುವಿಗಿಂತ ಬೇರೆಯವರನ್ನು 'ಸ್ಪರ್ಶಿಸಲಾರೆವು' ಎಂದೇ ಭಾರತಿಯಲ್ಲಿ ವರವನ್ನು ಬೇಡುತ್ತಿದ್ದಾರೆ. ಬ್ರಹ್ಮನು ನೀಡಿದ ಪರಪುರುಷ ಸ್ಪರ್ಶಶಾಪ ವಾಯುಸ್ಪರ್ಶ ಮಾತ್ರದಿಂದಲೇ ನಿಜವೆನಿಸಲಿ. ಅನ್ಯ ಪುರುಷ ಸ್ಪರ್ಶವಾಗುವುದು ಬೇಡ. ಜನರ ಕಣ್ಣಿಗೆ ಕಾಣದಿರುವುದೂ ಸ್ಪರ್ಶಕ್ಕೆ ಸಂಭಾಷಣೆಗೆ ಸಿಗದಿರುವುದೂ ದೇವತೆಗಳ ಧರ್ಮವೆಂದುದರಿಂದ ಮನುಷ್ಯರ ಸ್ಪರ್ಶವೂ ದೇವತೆಗಳಿಗೆ ಮಹಾದೋಷ ವಾಯುವಿಗೆ ಪಾರ್ವತೀ ಮುಂತಾದವರು ಸೊಸೆಯ ಸ್ಥಾನದಲ್ಲಿರುವುದರಿಂದ ಕೆಲವೊಮ್ಮೆ ಭಾರತಿಯೊಡನೆ ವಾಯು ಕ್ರೀಡಿಸುವ ಕಾಲದಲ್ಲಿ ಅವನ ಸ್ಪರ್ಶ ತಮಗಾದರೂ ಅದು ಮಗಳನ್ನು ತಂದೆ ಸ್ಪರ್ಶಿಸುವಂತೆ ದೋಷವಾಗುವುದಿಲ್ಲ ಎಂಬ ಅಭಿಪ್ರಾಯದಿಂದ 'ವಾಯುವನ್ನು ಹೊರತು ಅನ್ಯರನ್ನು ಸ್ಪರ್ಶಿಸಲಾರೆವು' ಎನ್ನುತ್ತಿದ್ದಾರೆ.[1]

ಪಂಚದ್ರೌಪದೀ ಜನ್ಮಾಂತರಗಳು

ಬ್ರಹ್ಮಣ್ಯೈವ ಚ ಶಪ್ತಾಃ ಸ್ಮಃ ಪೂರ್ವಂ ಚಾನ್ಯತ್ರ ಲೀಲಯಾ।
ಏಕದೇಹತ್ವಮಾಪ್ಯೈನಂ ಯದಾ ವಂಚಯಿತುಂ ಗತಾಃ ॥ ೧೧೩ ॥

---

1. ಮಹಾಸಭಾಯಾಂ ಸ್ವೈರಿಣೀವದಾಚರಣಾತ್ ತತ್ರಾನ್ಯಗಾಶ್ಚ ಭವತೇತ್ಯುಕ್ತಂ। ಅನ್ಯಾನ್ ಗಚ್ಛಂತೀತಿ ಅನ್ಯಗಾಃ ಪರಪುರುಷ ಸ್ಪರ್ಶ ಮಾತ್ರವತ್ಯ ಇತ್ಯರ್ಥಃ। ನ ತು ತೈಃ ಸಹ ರಂತವ್ಯಮಿತಿ ಶಾಪಃ। ತಥಾ ಸತಿ ಸ್ಪಷ್ಟ ಮನ್ಯರಮಣ್ಯೋ ಭವತೇತ್ಯೇವ ವದೇತ್। ಅತ ಏವ ಮಾರುತಾದನ್ಯಂ ನ ಸ್ಪೃಶೇಮೇತಿ ವದಿಷ್ಯಂತಿ। ಅದೃಶ್ಯತ್ವಮಸಂಸ್ಪರ್ಶೋ ಹ್ಯಸಂಭಾಷಣಮೇವ ಚೇತಿ ವಚನಾತ್ ಮಾನುಷ ಸಂಸ್ಪರ್ಶೋಽಪಿ ದೇವಾನಾಂ ಮಹಾದೋಷಃ। ಸ್ನುಷಾಸ್ಥಾನೀಯಾನಾಂ ಸಾಕ್ಷಾದ್ ವಾಯುಪತ್ನ್ಯಾಸ್ತ್ವಯಾ ಸಹ ಸ್ಥಿತಾನಾಮಸ್ಮಾಕಂ ಕದಾಚಿತ್ ತ್ವಯಾಸಹ ರಮಮಾಮೇನ ವಾಯುನಾ ಸಹ ಸ್ಪರ್ಶೋಽಪಿ ಪುತ್ರ್ಯಾಃಪಿತುಃ ಸ್ಪರ್ಶವತ್ ನ ದೋಷ ಇತಿ ಭಾವೇನಾಹುಃ ಮಾರುತಾದನ್ಯಂ ನ ಸ್ಪೃಶೇಮ ಕಥಂಚನೇತಿ। -ವಾದಿರಾಜೀಯ

ಹಿಂದೆ ಇನ್ನೊಂದು ಸಂದರ್ಭದಲ್ಲಿ ನಾವು ವಿನೋದದಿಂದ ಒಂದೇ ದೇಹದಲ್ಲಿ ಜೊತೆಗಿದ್ದು ಬ್ರಹ್ಮನನ್ನು ವಂಚಿಸಲು ಹೋದಾಗ ಅವನಿಂದ ಶಪ್ತರಾದೆವು.

ಒಂದೇ ದೇಹದಲ್ಲಿ ನಾವು ನಾಲ್ವರೂ ಇದ್ದು ಬ್ರಹ್ಮನ ಮುಂದೆ ಸುಳಿದಾಡಬೇಕು. ಬ್ರಹ್ಮನಿಗೆ ಇದು ತಿಳಿಯುವುದಿಲ್ಲ. ಆಗ ನಾವು ನಗಬೇಕು ಎಂದು ವಿನೋದದಿಂದ ವಂಚನೆಯ ಆಟವಾಡಲು ಹೋದಾಗ ದೇವಿಯರಿಗೆ ಬ್ರಹ್ಮಶಾಪ ನೀಡಿದ್ದ.

ಏಕದೇಹಾ ಮಾನುಷತ್ವಮಾಪ್ಸ್ಯಥ ತ್ರಿಶ ಉದ್ಧಾತಾಃ।
ತ್ರಿಶೋ ಮದ್ವಂಚನಾಯೇತಾ ಇತಿ ತೇನೋದಿತಾ ವಯಮ್ ॥ ೧೧೪ ॥

'ಉದ್ಧತರಾಗಿ ನೀವು ಮೂರು ಬಾರಿ ನನ್ನನ್ನು ವಂಚಿಸಲು ಬಂದಿರಿ. ಅದರಿಂದ ಮೂರು ಬಾರಿ ಒಂದೇ ದೇಹದಲ್ಲಿ ಮನುಷ್ಯ ಜನ್ಮ ಪಡೆಯಿರಿ' ಹೀಗೆ ಬ್ರಹ್ಮ ನಮಗೆ ಶಾಪ ನೀಡಿದ್ದಾನೆ.

ಒಮ್ಮೆ ವಂಚನೆ ಮಾಡಿದಾಗ ವಿನೋದವೆಂದು ಬ್ರಹ್ಮ ಸುಮ್ಮನಿದ್ದ. ಎರಡನೆ ಬಾರಿಯೂ ಸಹನೆ ಮಾಡಿದ. ಮೂರನೇ ಬಾರಿ ಕುಪಿತನಾಗಿ ಮೂರು ಮನುಷ್ಯ ಜನ್ಮ ಬರಲೆಂದು ಶಪಿಸಿದ.

ಅತಸ್ತ್ವಯೈಕ ದೇಹತ್ವಮಿಚ್ಛಾಮೋ ದೇವಿ ಜನ್ಮಸು।
ಚತುರ್ಷ್ವಪಿ ಯತೋಽಸ್ಮಾಕಂ ಶಾಪದ್ವಯ ನಿಮಿತ್ತತಃ ॥ ೧೧೫ ॥

ಚತುರ್ಜನ್ಮ ಭವೇದ್ಭೂಮೌ ತ್ವಾಂ ನಾನ್ಯೋ ಮಾರುತಾದ್ ವ್ರಜೇತ್।
ನಿಯಮೋಽಯಂ ಹರೇರ್ಯಸ್ಮಾದನಾದಿರ್ನಿತ್ಯ ಏವ ಚ ॥ ೧೧೬ ॥

ನಮಗೆ ಬ್ರಹ್ಮನ ಎರಡು ಶಾಪಗಳಿರುವುದರಿಂದ ನಾಲ್ಕು ಜನ್ಮಗಳು ಭೂಮಿಯಲ್ಲಿ ಸಂಭವಿಸುವ ಪ್ರಯುಕ್ತ ನಾಲ್ಕು ಜನ್ಮಗಳಲ್ಲಿಯೂ ನಿನ್ನ ಜೊತೆಗೇ ಒಂದು ದೇಹದಲ್ಲಿ ಜನಿಸಲು ನಾವು ಬಯಸುವೆವು. ಏಕೆಂದರೆ ನಿನ್ನನ್ನು ವಾಯುವಿಗಿಂತ ಬೇರೆ ಯಾರೂ ಹೊಂದಲಾರ. ಇದು ಹರಿ ಮಾಡಿರುವ ಅನಾದಿನಿತ್ಯವಾದ ನಿಯಮ.

ಇದು ಯಥಾಶ್ರುತ ಅನುವಾದ. ಜನಾರ್ದನೀಯ ಪ್ರಕಾರ 'ನಾಲ್ಕು ಜನ್ಮಗಳಲ್ಲಿಯೂ' ಏಕದೇಹತ್ವವನ್ನು ದೇವಿಯರು ಪ್ರಾರ್ಥಿಸುತ್ತಿದ್ದಾರೆ ಎಂದು ಭ್ರಮಿಸಕೂಡದು. ನಾಲ್ಕು ಜನ್ಮಗಳ ಪೈಕಿ ಮೂರು ಜನ್ಮಗಳಲ್ಲಿ...

ಏಕದೇಹತ್ವವೂ ಆ ಮೂರು ಜನ್ಮಗಳ ಪೈಕಿ ಒಂದರಲ್ಲಿ ಪರಪುರುಷ ಸಂಪರ್ಕವೂ ಬರಲಿ ಎನ್ನುತ್ತಿದ್ದಾರೆ.[1]

ವರದರಾಜೀಯ ಪ್ರಕಾರ ನಾಲ್ಕೂ ಜನ್ಮಗಳಲ್ಲಿ ಏಕದೇಹತ್ವವನ್ನು ಪ್ರಾರ್ಥಿಸುತ್ತಿದ್ದಾರೆ. ಇದು ಏಕದೇಹತ್ವನಿಯಮ ಒಂದಿದ್ದು ಅದು ಸಿದ್ಧಿಸಬೇಕೆಂದಲ್ಲ. ಸ್ತ್ರೀತ್ವ ಪ್ರಯುಕ್ತ ಪರಪುರುಷಸ್ಪರ್ಶಭಯವಿದೆ ಎಂದು. ನಾಲ್ಕು ಜನ್ಮಗಳಲ್ಲಿಯೂ ಪರಪುರುಷ ಸ್ಪರ್ಶ ನಿಯಮವೂ ಇಲ್ಲ. ಏಕೆಂದರೆ ಹಾಗೇನೂ ಶಾಪವಿಲ್ಲ.[2]

ವಾದಿರಾಜೀಯ ಪ್ರಕಾರವೂ ನಾಲ್ಕು ಜನ್ಮಗಳಲ್ಲಿ ಏಕದೇಹತ್ವವನ್ನು ಪ್ರಾರ್ಥಿಸುತ್ತಿದ್ದಾರೆ. ಮೂರು ಬಾರಿ ಒಂದೇ ದೇಹದಲ್ಲಿದ್ದು ಬ್ರಹ್ಮನನ್ನು ವಂಚಿಸಲು ಬಂದುದರಿಂದ ಮೂರು ಬಾರಿ ಏಕದೇಹರಾಗಿ ಹುಟ್ಟಿರೆಂದು ಶಾಪವೆ ಹೊರತು ಆ ಜನ್ಮಗಳಲ್ಲಿಯೂ ಪರಪುರುಷ ಸ್ಪರ್ಶವಾಗಬೇಕೆಂದು ಶಾಪವಿಲ್ಲ. ಆದರೂ ಆ ಜನ್ಮಗಳಲ್ಲಿ ಭಾರತಿಯನ್ನು ಜೊತೆಗೆ ಜನಿಸಲು ಏಕೆ ಪ್ರಾರ್ಥಿಸಿದರು? ನಾಲ್ಕನೆ ಜನ್ಮದಲ್ಲಿ ಪರಪುರುಷ ಸ್ಪರ್ಶಶಾಪವಿದ್ದರೂ ಏಕದೇಹರಾಗಿರೆಂದು ಶಾಪವಿಲ್ಲ. ಅದು ಹಿಂದಿನ ಮೂರು ಜನ್ಮಗಳಿಗೆ ಮಾತ್ರ ಸಂಬಂಧಿಸಿದೆ. ಆದರೂ ಭಾರತೀಯ ಜೊತೆಗೆ ಏಕದೇಹತ್ವವನ್ನು ಏಕೆ ಬಯಸಿದರು? ಈ ಎರಡು ಪ್ರಶ್ನೆಗಳನ್ನು ಎತ್ತಿಕೊಂಡು ವಾದಿರಾಜರು ಸಮಾಧಾನ ನೀಡುತ್ತಾರೆ–

ಮೂರು ಏಕದೇಹಜನ್ಮಗಳಲ್ಲಿ ಪರಪುರುಷ ಸ್ಪರ್ಶಶಾಪವಿಲ್ಲದಿದ್ದರೂ ದೇವತಾಸ್ತ್ರೀಯರಾದ ಪ್ರಯುಕ್ತ ಅತಿ ಮನೋಹರವಾದ ಅವರ ಶರೀರವನ್ನು ರಾವಣಾದಿಗಳಂತಹ ಸ್ತ್ರೀಲಂಪಟರು ಯಾರಾದರೂ ಬಲಾತ್ಕಾರದಿಂದ ಸ್ಪರ್ಶಿಸಬಹುದೆಂಬ ಭೀತಿಯಿಂದ ಭಾರತಿಯೂ ತಮ್ಮ ಜೊತೆಗೆ ಒಂದೇ ಶರೀರದಲ್ಲಿ ಜನಿಸಲೆಂದು ಬೇಡಿಕೊಂಡರು. ನಾಲ್ಕನೆ ಜನ್ಮದಲ್ಲಿ ತಮಗಾಗಿ ಭಾರತೀವಾಯುಗಳು ಅನೇಕ ಶರೀರದಲ್ಲಿ ಜನಿಸುವಂತೆ ಮಾಡುವುದು ಅನುಚಿತ ಮತ್ತು ಮೂರು ಜನ್ಮಗಳಲ್ಲಿ

---

1. ಚತುರ್ಷು ಜನ್ಮಸು ಮಧ್ಯೇ ಜನ್ಮತ್ರಯೇ ತ್ವಯಾ ಸಹ ಏಕದೇಹತ್ವಮಿಚ್ಛಾನು ಇತ್ಯನ್ವಯಃ। ಚತುರ್ಷ್ವಪಿ ಜನ್ಮಸು ಏಕದೇಹತ್ವಂ ಶಚ್ಯಾದಿಭಿರ್ವಾಂಛಿತಮಿತಿ ನ ಭ್ರಮಿತವ್ಯಂ। ತಥಾಚ ಏಕದೇಹತ್ವೇನ ತ್ರಿ ಜನ್ಮಸು ಮಧ್ಯೇ ಏಕತಮೇ ಅನ್ಯಗಾತ್ವಂ ಭವಿಷ್ಯತೀತಿ ಭಾವಃ। –ಜನಾರ್ದನೀಯ
2. ಅತ್ರ ಚತುರ್ಷು ಜನ್ಮಸು ಏಕದೇಹತ್ವ ಪ್ರಾರ್ಥನಂ ಸ್ತ್ರೀತ್ವಾದನ್ಯಪುರುಷ ಸಂಸ್ಪರ್ಶಭೀತ್ಯೈವ। ನ ತು ಏಕದೇಹತ್ವ ನಿಯಮಸಿದ್ಧ್ಯರ್ಥಂ। ಅತ ಏವ ಚತುರ್ಷ್ವಪಿ ಜನ್ಮಸು ಅನ್ಯಪುರುಷಗಾಮಿತ್ವ ನಿಯಮೋಽಪಿ ನಾಸ್ತಿ। ತಥೈವಾಶಪತ್ತಾವಿತಿ ಭಾವಃ। –ವರದರಾಜೀಯ

ಏಕಶರೀರತ್ವ ಅಭ್ಯಾಸವಾಗಿ ಹೋಗಿದೆ. ಅದರಿಂದ ಏಕದೇಹತ್ವವಿರಲಿ ಎಂದರು. ಅಥವಾ ಎಲ್ಲ ದೇವಿಯರೂ ಏಕದೇಹರಾಗಿ ಪತಿಪ್ರಾಪ್ತಿವರವನ್ನು ಬೇಡಿದ್ದರಿಂದ ಶಿವನೂ ಏಕದೇಹದಲ್ಲಿಯೆ ಪತಿಪ್ರಾಪ್ತಿಯಾಗಲೆಂದು ವರವಿತ್ತ. ಅದರಿಂದಲೂ ದ್ರೌಪದೀ ಜನ್ಮದಲ್ಲಿ ಏಕದೇಹತ್ವ ಉಂಟಾಯಿತು.

ರುದ್ರನು ನೀಡಿದ ಪತಿಪ್ರಾಪ್ತಿವರದಿಂದ ಬ್ರಹ್ಮನೀಡಿದ್ದ ಶಾಪ ನಿವೃತ್ತಿ ಹೊಂದಿದೆ. ಇಲ್ಲದಿದ್ದರೆ ಬ್ರಹ್ಮ ಕುಪಿತನಾಗಿ ರುದ್ರನಿಗೆ ಏಕೆ ಶಾಪವಿತ್ತ? ಅದರಿಂದ ಪರಪುರುಷಸ್ಪರ್ಶ ಭಯಕ್ಕೆ ಅವಕಾಶವಿಲ್ಲದಿರುವಾಗ ಭಾರತಿಯೊಂದಿಗೆ ಏಕದೇಹರಾಗಿ ಜನಿಸಲು ದೇವಿಯರು ಏಕೆ ಬಯಸಿದರು? ಈ ಪ್ರಶ್ನೆಗೂ 'ನಾಲ್ಕು ಜನ್ಮಗಳಲ್ಲಿಯೂ ನಿನ್ನೊಡನೆ ಏಕದೇಹರಾಗಿ ಜನಿಸುವೆವು' ಎಂದು ಹಿಂದೆ ಅವರೇ ಹೇಳಿದ ಮಾತನ್ನು ಉಳಿಸುವುದಕ್ಕಾಗಿ ಎಂದೂ, ದಿವ್ಯವಾದ ರೂಪಸೌಂದರ್ಯಕ್ಕೆ ಮರುಳಾಗಿ ಪರಪುರುಷರು ಸ್ಪರ್ಶಿಸುವ ಭಯವಿದ್ದೇ ಇದೆ, ಅದರ ಪರಿಹಾರಕ್ಕಾಗಿ ಎಂದೂ ಸಮಾಧಾನ.[1]

ಅತಸ್ತ್ವಯೈಕದೇಹಾ ನೋ ನಾನ್ಯ ಆಪ್ನೋತಿ ಮಾರುತಾತ್।
ಇತೀರಿತೇ ತಥೇತ್ಯುಕ್ತ್ವಾ ಪಾರ್ವತ್ಯಾದಿ ಯುತೈವ ಸಾ
ವಿಪ್ರಕನ್ಯಾऽ ಭವತ್ ತತ್ರ ಚತಸ್ರಃ ಪಾರ್ವತೀಯುತಾಃ ॥ ೧೧೭ ॥

---

1. ನನ್ವೇಕ ದೇಹತ್ವ ಜನ್ಮಸು ಅನ್ಯಗಾಮಿತ್ವ ಶಾಪಾಭಾವತ್ ಕುತೋ ಭಾರತೀ ಪ್ರಾರ್ಥನಂ? ಚತುರ್ಥ ಜನ್ಮನಿ ಪಶ್ಚಾತ್ತನಾನ್ಯಗಾಮಿತ್ವ ಶಾಪೇ ಸತ್ಯಪಿ ಏಕದೇಹತ್ವಶಾಪಸ್ಯ ತ್ರಿಶ ಇತಿ ನಿರ್ಗೀತತ್ವೇನ ಕುತೋ ದೇಹೈಕ್ಯಮಿತಿ ಚೇತ್ ಸತ್ಯಂ। ಶಾಪಾ ಭಾವೇऽಪಿ ದೇವಸ್ತ್ರೀತ್ವೇನ ಅತಿ ಮನೋಹರ ತನುತ್ವಾತ್ ರಾವಣಾದಿವತ್ ಕಾಮೀ ಕೋऽಪಿ ಮಾನವೋऽಸ್ಮಾನ್ ಬಲಾತ್ ಸ್ಪ್ರಕ್ಷ್ಯತೀತಿ ಭಿಯಾ ಭಾರತೀಪ್ರಾರ್ಥನಂ। ಚತುರ್ಥ ಜನ್ಮನಿ ಸಾರ್ಧಂ ಭಾರತ್ಯಾ ವಾಯೋಶ್ಚ ಬಹುಮಾನುಷದೇಹೇಷು ಮಾನುಷತ್ವಪ್ರಾಪಣಮನುಚಿತಮಿತಿ ಭೀತ್ಯಾ ಸ್ವಯಮೇವ ಭಾರತ್ಯಾ ಸಹ ಪೂರ್ವಾಭ್ಯಸ್ತೈಕ ದೇಹತ್ವಂ ಸಂಪಾದ್ಯ ಜಾತಾ। ಯದ್ವಾ ಏಕದೇಹೇ ಸ್ಥಿತ್ಯೈವ ಪತಿ ಪ್ರಾರ್ಥನಾತ್ ಶಿವೋऽಪಿ ಏಕದೇಹತಯೈವ ಸ್ವಪತಿ ಪ್ರಾಪ್ತಿವರಂ ದದೌ। ಅತೋऽಪಿ ದ್ರೌಪದೀ ಜನ್ಮನಿ ಪಂಚಾನಾಮೇಕ ದೇಹತ್ವಮಿತಿ ಜ್ಞೇಯಂ। ಶಿವೇನ ಬ್ರಹ್ಮಶಾಪಂ ವಿಮೋಚ್ಯ ಸ್ವಪತಿಸಂಯೋಗವರೇ ದತ್ತೇ ಸತಿ ಪುನರನ್ಯಗಾಮಿತ್ವ ಶಂಕಾಭಾವೇऽಪಿ 'ಅತಸ್ತ್ವಯೈಕದೇಹತ್ವಮಿಚ್ಛಾಮೋ ದೇವಿ ಜನ್ಮಸು ಚತುರ್ಷ್ವಪಿ' ಇತಿ ಪ್ರಾಗುಕ್ತ ಸತ್ಯ ಸಂರಕ್ಷಣಾಯ, ಮೋಹನರೂಪತ್ವೇನ ಕಸ್ಯಚಿತ್ ಕಾಮಿನಃ ಸ್ಪರ್ಶ ಶಂಕಾನಿವಾರಣಾರ್ಥಂ ಚ ಏಕಸ್ಮಿನ್ನೇವ ದೇಹೇ ಭಾರತ್ಯಾ ಸಹೈವ ಚತುರ್ವಾರಂ ಜನ್ಮೇತಿ ಸರ್ವತ್ರ ಸಮಾಧಾನ ಸಂಭವಾತ್। ಬ್ರಹ್ಮಶಾಪಸ್ಯ ವಿಮೋಚನಾಭಾವೇ ಕುಪಿತೋ ಬ್ರಹ್ಮಾ ಶಿವಸ್ಯ ಕುತಃ ಶಾಪಂ ದದ್ಯಾತ್? ವಿರುದ್ಧಫಲಂ ಚ ಕಥಮೇಕತ್ರ ಸ್ಯಾದಿತಿ ಯುಕ್ತಿರಪ್ಯನುಸಂಧೇಯಾ। -ವಾದಿರಾಜೀಯ

ಏಕದೇಹಸ್ಥಿತಾಶ್ಚಕ್ರುರ್ಹರೀಶಾಯ ತಪೋ ಮಹತ್ ।
ತದ್ದೇಹಸ್ಥಾ ಭಾರತೀ ತು ರುದ್ರದೇಹಸ್ಥಿತಂ ಹರಿಮ್ ।
ತೋಷಯಾಮಾಸ ತಪಸಾ ಕರ್ಮೈಕ್ಯಾರ್ಥಂ ಧೃತವ್ರತಾ ॥ ೧೧೮ ॥

'ಅದರಿಂದ ನಿನ್ನ ಜೊತೆಗೆ ನಾವು ಏಕದೇಹಿಗಳಾದರೆ ವಾಯು ಹೊರತು ಇನ್ನಾರೂ ನಮ್ಮನ್ನು ಹೊಂದಲಾರ' - ಹೀಗೆ ದೇವಿಯು ಹೇಳಿದಾಗ 'ಹಾಗೇ ಆಗಲಿ' ಎಂದು ಹೇಳಿ ಭಾರತೀದೇವಿ ಪಾರ್ವತಿ ಮುಂತಾದವರಿಂದ ಯುಕ್ತಳಾಗಿಯೆ ಒಬ್ಬ ಬ್ರಾಹ್ಮಣನ ಮಗಳಾಗಿ ಜನಿಸಿದಳು. ಆ ಜನ್ಮದಲ್ಲಿ ಪಾರ್ವತಿ ಮುಂತಾದ ನಾಲ್ವರು ದೇವಿಯರು ಏಕದೇಹಿಗಳಾಗಿ ಶಿವನನ್ನು ಒಲಿಸಲು ದೊಡ್ಡ ತಪಸ್ಸನ್ನು ಮಾಡಿದರು. ಕರ್ಮೈಕ್ಯಕ್ಕಾಗಿ ಆ ದೇಹದಲ್ಲಿದ್ದ ಭಾರತಿಯೂ ವ್ರತನಿಷ್ಠಳಾಗಿ ಶಿವನ ಶರೀರದಲ್ಲಿದ್ದ ಹರಿಯನ್ನು ಒಲಿಸಿಕೊಂಡಳು.

ಒಂದು ಶರೀರದಲ್ಲಿ ಅನೇಕ ಜೀವರಿದ್ದರೆ ಅವರೆಲ್ಲ ಸೇರಿ ಒಂದೇ ಕರ್ಮಮಾಡಬೇಕಾಗುತ್ತದೆ. ಬೇರೆಬೇರೆ ಕರ್ಮ ಮಾಡಲು ಯತ್ನಿಸಿದರೆ ಶರೀರ ಉಳಿಯಲಾರದು. ಆದರಿಂದ ನಾಲ್ವರು ದೇವಿಯರು ತಪಸ್ಸು ಮಾಡುವಾಗ ಜೊತೆಗೆ ಕರ್ಮೈಕ್ಯಕ್ಕಾಗಿ ಭಾರತಿ ತಾನೂ ತಪಸ್ಸುಮಾಡಿದಳು. ಅವಳದೂ ತಪಸ್ಸು ಇವರದೂ ತಪಸ್ಸು ಎಂದು ಕರ್ಮೈಕ್ಯವಾಯಿತು ಹೊರತು ಅವಳ ತಪಸ್ಸು ಬೇರೆ ಇವರ ತಪಸ್ಸು ಬೇರೆ. ಇವರು ಶಿವನನ್ನು ಆರಾಧಿಸಿದರು. ಅವಳು ಶಿವನಲ್ಲಿ ವಿಷ್ಣುವನ್ನು ಆರಾಧಿಸಿದಳು. ಎರಡು ತಪಸ್ಸುಗಳಿಗೂ ಪತಿಪ್ರಾಪ್ತಿರೂಪವಾದ ಫಲ ಒಂದೇ ಆದ್ದರಿಂದ ಕರ್ಮೈಕ್ಯ.

ವಿಪ್ರ ಕನ್ಯೆಯ ಬಗ್ಗೆ ಮಹಾಭಾರತ - 'ಒಂದು ತಪೋವನದಲ್ಲಿ ಮಹಾತ್ಮನಾದ ಒಬ್ಬಮುನಿ ಇದ್ದ. ಇವನ ಕನ್ಯೆ ಒಳ್ಳೆಯ ರೂಪವತಿ. ಆದರೂ ಯೋಗ್ಯನಾದ ವರ ಸಿಗಲಿಲ್ಲ. ಆದಕ್ಕೆ ಶಿವನ ಕುರಿತು ಉಗ್ರವಾದ ತಪಸ್ಸು ಮಾಡಿದಳು.'

ಗರುಡಪುರಾಣ - 'ತ್ರೇತಾಯುಗದಲ್ಲಿ ಹನುಮದವತಾರಕಾಲದಲ್ಲಿ ಶಿವನೆಂಬ ಮುನಿಯ ಕನ್ಯೆಯಾಗಿ ಭಾರತಿಯೂ ನಾಲ್ವರು ದೇವಿಯರೂ ಜೊತೆಗೆ ಅವತರಿಸಿದರು.'

ತಸ್ಯೈ ಸ ರುದ್ರದೇಹಸ್ಥೋ ಹರಿಃ ಪ್ರಾದಾದ್ ವರಂ ಪ್ರಭುಃ ।
ಅನಂತತೋಷಣಂ ವಿಷ್ಣೋಃ ಸ್ವಭರ್ತ್ರಾ ಸಹ ಜನ್ಮಸು ॥ ೧೧೯ ॥

ಸರ್ವೇಷ್ವಪೀತಿ ಚಾನ್ಯಾಸಾಂ ದದೌ ಶಂಕರ ಏವ ಚ ।
ವರಂ ಸ್ವಭರ್ತೃ ಸಂಯೋಗಂ ಮಾನುಷೇಷ್ವಪಿ ಜನ್ಮಸು ॥ ೧೨೦ ॥

ಭಾರತಿಗೆ ರುದ್ರದೇಹಸ್ಥನಾದ ಹರಿ ವರವನ್ನಿತ್ತ- 'ಎಲ್ಲ ಜನ್ಮಗಳಲ್ಲಿಯೂ ನೀನು ನಿನ್ನ ಪತಿಯೊಂದಿಗೆ ನನ್ನನ್ನು ಬಹಳ ತೃಪ್ತಿಪಡಿಸುವಿ' ಎಂದು. ಬೇರೆ ದೇವಿಯರಿಗೆ ಶಿವನೆ ಮನುಷ್ಯ ಜನ್ಮಗಳ ಪೈಕಿ ಒಂದರಲ್ಲಿ ತಮ್ಮ ಪತಿಗಳ ಸಮಾಗಮದ ವರವನ್ನಿತ್ತ.

ಭಾರತಿ ಕಾಮ್ಯವರವನ್ನು ಬೇಡುವುದಿಲ್ಲವಾದ್ದರಿಂದ ಪತಿಯೊಂದಿಗೆ ಹರಿಯ ಆರಾಧನೆ ಮಾಡುವ ಅವಕಾಶವನ್ನೇ ಬೇಡಿದ್ದಳು. ಅದನ್ನೇ ಅವಳಿಗೆ ಹರಿಕೊಟ್ಟ ಬೇರೆ ದೇವಿಯರು ಪತಿಪ್ರಾಪ್ತಿಯನ್ನೇ ಬೇಡಿದ್ದರು. ಅದನ್ನೇ ಅವರಿಗೆ ಶಿವ ನೀಡಿದ. ಪತಿಪ್ರಾಪ್ತಿ ಎಂದರೆ ಭಾರತಿಯ ವಿಷಯದಲ್ಲಿ ಕೇವಲ ಪತಿಯ ಪ್ರಾಪ್ತಿಯಲ್ಲ. ಪತಿಯೊಂದಿಗೆ ಹರಿಸೇವೆ ಗೈವ ಅವಕಾಶ ಪ್ರಾಪ್ತಿ. ಉಳಿದ ದೇವಿಯರ ವಿಷಯದಲ್ಲಿ ಪತಿಪ್ರಾಪ್ತಿಯೆಂದರೆ ಪತಿಯ ಪ್ರಾಪ್ತಿ.

ಭಾರತಿಗೆ ವಾಯುವಿನೊಡನೆ ಸಮಾಗಮವಾದಾಗ ಅದೇ ಶರೀರದಲ್ಲಿರುವ ದೇವಿಯರಿಗೂ ವಾಯುವಿನ ಸಂಗವಾಗುವುದರಿಂದ ಅವರ ಪಾತಿವ್ರತ್ಯಕ್ಕೆ ಭಂಗ ಬರಲಾರದೆ? ವಾಯುವಿಗೂ ಪರಸ್ತ್ರೀಸಂಘ ದೋಷ ಬರಲಾರದೆ? ಎಂಬ ಪ್ರಶ್ನೆ ಬಂದರೆ ವಾದಿರಾಜೀಯದಲ್ಲಿ ನೀಡಿದ ಸಮಾಧಾನ-

ವಾಯು ಭಾರತಿಯೊಡನೆ ಮಾತ್ರವೆ ರಮಿಸುತ್ತಾನೆ. ದೇವಿಯರೊಡನೆ ಅಲ್ಲ. 'ಅನ್ಯಗಾಶ್ಚ ಭವತ' ಎಂಬ ಬ್ರಹ್ಮಶಾಪವಚನಕ್ಕೆ ಪರಪುರುಷಸಂಗ ಮಾಡಿರೆಂದರ್ಥವಲ್ಲ. 'ಪರಪುರುಷ ಸ್ಪರ್ಶ ಮಾತ್ರ ನಿಮಗೆ ಆಗಲಿ' ಎಂದರ್ಥ. ಸಂಗವೆಂದರ್ಥವಿಟ್ಟುಕೊಂಡರೂ ಆ ಶಾಪ ಶಿವ ನೀಡಿದ ಪತಿಸಮಾಗಮ ವರದಿಂದಲೆ ನಿವೃತ್ತಿ ಹೊಂದಿದೆ. ಮತ್ತು ವಾಯು ಎಂದೂ ಪರಿನಾರೀಸಂಗದಂಥ ನಿಷಿದ್ಧಕರ್ಮ ಮಾಡುವವನಲ್ಲ. ಭೀಮನನ್ನು ಹುಟ್ಟಿಸುವುದಕ್ಕಾಗಿ ವಾಯು ಕುಂತಿಯ ಬಳಿಗೆ ಬಂದಾಗಲೂ ಅವಳ ಸ ಗ ಮಾಡದೆ ಕೇವಲ ಉದರಸ್ಪರ್ಶವನ್ನೇ ಮಾಡಿದ್ದಾನೆ. ಪ್ರಕೃತದಲ್ಲಿ ಶಚಿ ಮುಂತಾದ ದೇವಿಯರು ವಾಯುವಿಗೆ ಸೊಸೆಯ ಸ್ಥಾನದಲ್ಲಿರುವವರು. ಅವರ ಶೀಲವನ್ನು ಅವನು ಹಾಳು ಮಾಡುವನೆ? ಅದರಿಂದ ಆಚಾರ್ಯರು ಮುಂದೆ ಹೇಳುತ್ತಾಳೆ - 'ಅನ್ಯ ದೇವಿಯರಿಗೆ ನಿದ್ರೆ ಬರಿಸಿ ವಾಯು ಭಾರತಿಯೊಂದಿಗೆ ರಮಿಸಿದ' ಎಂದು.[1]

---

1. **ಭೀಮೋಽಪಿ ದ್ರೌಪದೀದೇಹೇ ಭಾರತೀಮೇವ ರಮಯತಿ। ನ ಶಚ್ಯಾದ್ಯಾಃ ಪರನಾರೀಃ। ಪ್ರಾಚೀನಾನ್ಯಗಾಮಿತ್ವಶಾಪಸ್ಯ ಅಭಿನವ ಸ್ಪರ್ಶಿಸಂಯೋಗಾಖ್ಯ ಶಿವವರೇಣ ತಿರಸ್ಕೃತತ್ವೇನ ಅನ್ಯಗಮನೇ ಕಾರಣಾಭಾವತ್। 'ಇತೀರಿತೇ ಪೃಥಯಾಹೂತ ವಾಯು ಸಂಸ್ಪರ್ಶ ಮಾತ್ರಾತ್**

ತತಸ್ತದೈವ ದೇಹಂ ತಾ ವಿಸೃಜ್ಯ ನಲನಂದಿನೀ।
ಬಭೂವುರಿಂದ್ರಸೇನೇತಿ ದೇಹೈಕ್ಯೇನ ಸುಸಂಗತಾಃ ॥ ೧೨೧ ॥

ಬಳಿಕ ಬೇಗನೆ ಆ ದೇವಿಯರು ವಿಪ್ರಕನ್ಯಾಶರೀರವನ್ನು ತೊರೆದು ಏಕದೇಹಿಗಳಾಗಿಯೆ ನಲಮಹಾರಾಜನ ಕುಮಾರಿಯಾಗಿ ಜನಿಸಿದರು. ಬಳಿಕ ಆ ಶರೀರವನ್ನೂ ತೊರೆದು ಏಕದೇಹರಾಗಿ ಇಂದ್ರಸೇನೆ ಎಂಬ ಹೆಸರಿನವರಾಗಿಯೂ ಜನಿಸಿದರು.

ದೇಹಮನ್ಯಂ ಗತಾಯಾಸ್ತೇ ಯಥೋಕ್ತಂ ತದ್ ಭವಿಷ್ಯತಿ। 'ಮುಂದಿನ ಜನ್ಮದಲ್ಲಿ ನಿಮಗೆ ನನ್ನ ಈ ವರ ಫಲಿಸುವುದು' ಎಂದೇ ಶಿವ ನುಡಿದಿದ್ದ. ಅದರಿಂದ ದೇವಿಯರು ವಿಪ್ರಕನ್ಯಾ ಜನ್ಮದಲ್ಲಿ ಮದುವೆ ಇಲ್ಲದೆಯೆ ಶರೀರತ್ಯಾಗ ಮಾಡಿದರು. ಬಳಿಕ ನಲಮಹಾರಾಜನಿಗೆ ದಮಯಂತಿಯಲ್ಲಿ ಹುಟ್ಟಿದ ಇಂದ್ರಸೇನ ಮತ್ತು ಇಂದ್ರಸೇನಾ ಎಂಬ ಅವಳಿ ಮಕ್ಕಳಲ್ಲಿ ಒಬ್ಬಳಾಗಿ ಇಂದ್ರಸೇನೆ ಎಂಬ ಹೆಸರಿನಿಂದ ಜನಿಸಿದಳು. ಇದು ಎರಡನೆ ಜನ್ಮ ಮುಂದೆ ದ್ರೌಪದಿ ಜನ್ಮವೆ ಜನಾರ್ದನೀಯ ವರದರಾಜೀಯಗಳ ಪ್ರಕಾರ ಮೂರನೆ ಜನ್ಮ. ನಾಲ್ಕನೆ ಜನ್ಮವನ್ನು ನಿರ್ಣಯ ಇಲ್ಲಿ ಹೇಳಿಲ್ಲ. ಮುಂದೆ ಅಲ್ಲಲ್ಲಿ ಹೇಳುತ್ತಿದೆ. ದೇವಕಿ ಎಂದು ಶ್ಯಾಮಲೆ, ಚಿತ್ರಾಂಗದೆ ಎಂದು ಶಚಿ, ಜರಾಸಂಧ ಕನ್ಯೆಯಾಗಿ ಉಷೆ ನಾಲ್ಕನೆ ಜನ್ಮ ಪಡೆದರು ಎನ್ನುತ್ತಾರೆ[1]. ತಾಮ್ರಪರ್ಣೀಯ ವ್ಯಾಖ್ಯಾನದಲ್ಲಿ 'ಕಲಿಯುಗದಲ್ಲಿ ಶ್ರೀಮದಾಚಾರ್ಯರ ಅವತಾರ ಕಾಲದಲ್ಲಿ ದ್ರೌಪದಿ ಕನ್ಯಾಣಿಯಾಗಿ ಅವತರಿಸಿದಳು. ಇದನ್ನು

ಅಭವದ್ ಬಲದ್ವಯೀ' ಇತಿ ವಚನಾತ್ ಯೋ ವಾಯುಃ ಪುತ್ರ ಜನನಾರ್ಥಂ ಕುಂತೀ ಸಮೀಪಂ ಪ್ರತ್ಯಾಗತೋಽಪಿ ಕುಂತ್ಯಾ ಉದರಮೇವ ಪಸ್ಪರ್ಶ, ನ ತು ರೇಮೇ, ಸೋಽಯಂ ನಿರವದ್ಯ ಶಿರೋಮಣಿರ್ವಾಯುರೂಪೋ ಭೀಮೋ ನ ನಿರ್ಮಿತ್ತಂ ಸ್ನುಷಾ ಏವ ನ ದೂಷಯೇದಿತಿ ವಕ್ತವ್ಯಂ? ಅತಃ ಪಾರ್ವತ್ಯಾ ಅಪಿ ವಕ್ಷ್ಯಮಾಣ ಬ್ರಹ್ಮಶಾಪಾನ್ನ ಸ್ವಪತಿಸಂಯೋಗೋ ನಾಪ್ಯನ್ಯ ಪತಿ ಸಂಯೋಗ ಇತಿ ತತ್ಪಾತಿವ್ರತ್ಯಂ ನ ಕೋಽಪಿ ತ್ಯಾಜಯೇದಿತಿ ಸರ್ವಮವದಾತಂ। ಅತ ಏವ ಭೀಮಸ್ಯ ದ್ರೌಪದ್ಯಾ ಸಹ ಏಕಾಕಿತಯಾ ರತಿಕಾಲೇ 'ಅನ್ಯಾ ದೇವೀಃ ಸ್ಥಾಪಯಿತ್ವಾ ಶರೀರ' ಇತಿ ಸ್ವಯಮೇವ ವಕ್ಷ್ಯತ್ಯಾಚಾರ್ಯಃ। -ವಾದಿರಾಜೀಯ

1. ಇಂದ್ರಸೇನೇತಿ ನಾಮ್ನಾ ನಲನಂದಿನೀ ನಲನಾಮ್ನಃ ಪುತ್ರೀ ಬಭೂವುಃ। ನ ಚಾತ್ರ ನಲನಂದಿನೀಂದ್ರ ಸೇನಾಖ್ಯಂ ದೇಹದ್ವಯಮಿತಿ ಶಂಕ್ಯಂ। ಇಂದ್ರಸೇನೇತೀತೀತಿಕರಣೇನ ನಲನಂದಿನ್ಯಾಮಿಂದ್ರಸೇನಾ ಶಬ್ದಾಭಿದೇಯತ್ವಸ್ಯ ಪ್ರತೀತೇಃ। ಪದಾರ್ಥವಿಪರ್ಯಾಸೇ ಹೀತಿಕರಣಃ ಪ್ರಯುಜ್ಯತೇ। ಮೃತ್ತಿಕೇತ್ಯೇವ ಸತ್ಯಮಿತಿವತ್। ನಲನಂದಿನೀ ದೇಹಸ್ಯ ಕಾರ್ಯಾಂತರಾನುಕ್ತೇಶ್ಚ। ತಸ್ಮಾನ್ನಲನಂದಿನ್ಯಾ ಏವೇಂದ್ರಸೇನೇತಿ ಸಂಜ್ಞಾ। ನ ತು ದೇಹದ್ವಯಂ। ಇಂದ್ರಸೇನೇತಿ ನಾಮ್ನಾ ನಲಸ್ಯ ರಾಜ್ಞೋ ನಂದಿನೀ ಪುತ್ರೀ ಬಭೂವುಃ। -ಜನಾರ್ದನೀಯ

ನಿರ್ಣಯದಲ್ಲಿ ಮುಂದೆ 'ತದೈವ ಕೃಷ್ಣಾಪಿ ಭುವಿ ಪ್ರಜಾತಾ' ಎಂದು ಹೇಳಿದೆ ಎನ್ನುತ್ತಾರೆ. ನಾಲಾಯನಿಯೂ ಇಂದ್ರಸೇನೆಯೂ ಒಬ್ಬಳೆ ಎನ್ನಲು ಮಹಾಭಾರತದ ಈ ಶ್ಲೋಕವನ್ನು ಉದಾಹರಿಸುತ್ತಾರೆ-

ಇಂದ್ರಸೇನೇತಿ ವಿಖ್ಯಾತಾ ಪುರಾ ನಾಲಾಯನೀ ಶುಭಾ।
ಮೌದ್ಗಲ್ಯಂ ಪತಿಮಾಸಾದ್ಯ ಚಚಾರ ವಿಗತಜ್ವರಾ ॥

'ಹಿಂದೆ ಇಂದ್ರಸೇನೆ ಎಂಬ ಹೆಸರಿನಿಂದ ಪ್ರಸಿದ್ಧಳಾದ ನಲಕುಮಾರಿ ಮುದ್ಗಲನನ್ನು ಮದುವೆಯಾಗಿ ಸುಖದಿಂದಿದ್ದಳು.'[1]

ವಾದಿರಾಜೀಯದಲ್ಲಿ ದ್ರೌಪದಿಯ ನಾಲ್ಕನೆ ಜನ್ಮ. ನಿರ್ಣಯ ಶ್ಲೋಕಕ್ಕೆ 'ದೇವಿಯರು ಎರಡನೆ ಜನ್ಮದಲ್ಲಿ ನಳಕುಮಾರಿಯಾದರು. ಆ ದೇಹವನ್ನು ಸ್ವೇಚ್ಛೆಯಿಂದ ತೊರೆದು ಮೂರನೆ ಜನ್ಮದಲ್ಲಿ ಪುನಃ ಇಂದ್ರಸೇನೆಯಾದ ರೆಂದರ್ಥ. ಹೊರತು ನಲಕುಮಾರಿಯೆ ಇಂದ್ರಸೇನೆ ಎಂದಲ್ಲ. ಹಾಗೆ ಗ್ರಹಿಸಿದರೆ ಶ್ರೀಮದಾಚಾರ್ಯರು ಮೂರು ಜನ್ಮಗಳನ್ನು ಹೇಳಲು ಹೊರಟು ವಿಪ್ರಕನ್ಯೆ, ಇಂದ್ರಸೇನೆ ಎಂದು ಎರಡೇ ಜನ್ಮ ಹೇಳಿದಂತಾಗಿ ಗ್ರಂಥದಲ್ಲಿ ನ್ಯೂನತೆ ಬರುತ್ತದೆ. ಗ್ರಂಥಕಾರರಿಗೆ ಅಸಾಮರ್ಥ್ಯ ಪ್ರಕಟವಾಗುತ್ತದೆ' ಎಂದಿದೆ.[2]

ಇಲ್ಲಿ 'ನಳಕುಮಾರಿಯೆ ಇಂದ್ರಸೇನೆ ಎಂದಲ್ಲ' ಎಂದರೆ 'ನಳಕುಮಾರಿ ಒಬ್ಬಳೆ ಇಂದ್ರಸೇನೆ ಎಂಬ ಹೆಸರಿನವಳಲ್ಲ. ಇನ್ನೊಬ್ಬಳೂ ಆ ಹೆಸರಿನವಳಿದ್ದಾಳೆ' ಎನ್ನುವ ಅಭಿಪ್ರಾಯವಿದೆ. ಅದರಿಂದ ನಿರ್ಣಯದಲ್ಲಿ ಜನಾರ್ದನೀಯ ಮುಂತಾದ ಟೀಕೆಗಳು ಹೇಳುವಂತೆ 'ಇಂದ್ರಸೇನೆ ಎಂಬ ಹೆಸರಿನ ನಳಕುಮಾರಿಯಾಗಿ ಹುಟ್ಟಿದರು' ಎಂಬ ಅರ್ಥವೂ ವಾದಿರಾಜರಿಗೆ ಸಮ್ಮತ. ಜೊತೆಗೆ, ಇಂದ್ರಸೇನೆ ಎಂಬ ಹೆಸರಿನವಳಾಗಿಯೂ ಜನಿಸಿದಳೆಂದು ಅರ್ಥ ವಿವಕ್ಷಿತವಾಗಿದೆ. ಏಕೆಂದರೆ

---

1. ವಿಪ್ರಕನ್ಯೇತಿ ಪ್ರಥಮಂ ಜನ್ಮ ತತ್ರ ನ ಸ್ವಪುರುಷ ಸಂಯೋಗಃ ನಲನಂದಿನೀತಿ ದ್ವಿತೀಯಂ। ತತ್ರ ಮುದ್ಗಲಸ್ಥವಾಯು ಸಂಯೋಗಃ। ದ್ರೌಪದೀತಿ ತೃತೀಯಂ। ತತ್ರ ಪಾರ್ವತ್ಯತಿರಿಕ್ತಾನಾಂ ಸ್ವಪತಿ ಮಾತ್ರಸಂಯೋಗಃ। ಪಾರ್ವತ್ಯಾಸ್ತು ತಸ್ಯಾಪ್ಯಭಾವಃ। ಕಲಿಯುಗೇ ಭಗವತ ಆಚಾರ್ಯಸ್ಯಾವತಾರ ಸಮಯೇ ಚತುರ್ಥಜನ್ಮ। ಯದ್ವಕ್ಷ್ಯತಿ - 'ತದೈವ ಕೃಷ್ಣಾಪಿ ಭುವಿ ಪ್ರಜಾತೇ'ತಿ। ಸಾ ತು ಕಲ್ಯಾಣೀತಿ, ತಸ್ಯಾಶ್ಚ ವಿಪ್ರಕನ್ಯಾವನ್ನ ವಿವಾಹ ಇತಿ ಸಂಪ್ರದಾಯ ವಿದಃ। ತಥಾ ಚ ಕಥಂ ಜನ್ಮ ಚತುಷ್ಟಯಾನುಕ್ತಿ ದೋಷ ಇತ್ಯಲಂ। -ತಾಮ್ರಪರ್ಣೀಯ

2. ದ್ವಿತೀಯ ಜನ್ಮನಿ ನಳನಂದಿನೀ ಬಭೂವುಃ। ತಂ ಚ ದೇಹಂ ಸ್ವೇಚ್ಛಯೈವ ವಿಸೃಜ್ಯ ತೃತೀಯ ಜನ್ಮನಿ ಪುನರಿಂದ್ರಸೇನೇತಿ ಬಭೂವುರಿತ್ಯರ್ಥಃ। ನ ತು ನಳನಂದಿನ್ಯೇವೇಂದ್ರಸೇನಾ। ತಥಾ ಸತ್ಯಾರಬ್ಧತ್ರಿತ್ವಸ್ಯಾಂತಗಮನಾಭಾವೇನ ಗ್ರಂಥಕರ್ತುರಕೌಶಲಪ್ರಸಂಗಾತ್। -ವಾದಿರಾಜೀಯ

ಮಹೇಂದ್ರಮುನಿ ಸಾರ್ಧಂ ಪರ್ಯಧಾವದ್ ರಿರಂಸಯಾ (ಆದಿ 212.17)

'ಮುದ್ಗಲಮುನಿ ಇಂದ್ರಸೇನೆಯೊಡನೆ ವಿಹಾರ ಮಾಡಿದ' ಎನ್ನುವ ಮಹಾಭಾರತ ಶ್ಲೋಕಕ್ಕೆ ಲಕ್ಷಾಲಂಕಾರದಲ್ಲಿ 'ಇಂದ್ರಸೇನೆಯೊಡನೆ ಎಂದರೆ ನಲಕುಮಾರಿಯೊಡನೆ' ಎಂದು ವ್ಯಾಖ್ಯಾನಿಸಲಾಗಿದೆ. ಅದರಿಂದ ನಳಕುಮಾರಿಗೆ ಇಂದ್ರಸೇನೆ ಎಂಬ ಹೆಸರುಂಟೆನ್ನುವಲ್ಲಿ ವಿವಾದವಿಲ್ಲ. ಇನ್ನೊಬ್ಬಳು ಇಂದ್ರಸೇನೆಯೂ ಇರುವಳು, ಅವಳೆ ಮೂರನೆಯ ಜನ್ಮ. ದ್ರೌಪದಿ ನಾಲ್ಕನೆ ಜನ್ಮ ಎನ್ನುವುದು ವಿವಕ್ಷಿತವಾಗಿದೆ.

'ಇಂದ್ರಸೇನೇತಿ ವಿಖ್ಯಾತಾ ಪುರಾ ನಾಲಾಯನೀ ಶುಭಾ'

ಎನ್ನುವ ಮಹಾಭಾರತವಚನಕ್ಕೆ ಲಕ್ಷಾಲಂಕಾರ ಹೀಗೆ ವ್ಯಾಖ್ಯಾನಿಸಿದೆ-

'ಹಿಂದೆ ಮೊದಲನೆ ಜನ್ಮದಲ್ಲಿ ನಾಲಾಯನಿ ಎಂದೂ ಅನಂತರ ಜನ್ಮದಲ್ಲಿ ಇಂದ್ರಸೇನೆಯೆಂದೂ ಹುಟ್ಟಿದಳು. ಮೊದಲನೆ ಜನ್ಮದಲ್ಲಿ ನಲಪುತ್ರಿಯಾದ್ದರಿಂದ ನಾಲಾಯನಿ, ನಲನಂದಿನಿ ಎಂದು ಪ್ರಸಿದ್ಧಳಾದಾಗ ಅವಳಿಗೆ ಮುದ್ಗಲ ಪತಿ. ಬಳಿಕ ಎರಡನೆ ಜನ್ಮದಲ್ಲಿ ಇಂದ್ರಸೇನೆ ಎನಿಸಿದಾಗ ಮೌದ್ಗಲ್ಯ. ಅಂದರೆ ಮದ್ಗಲನ ಪುತ್ರ ಪತಿ.[1]

ವಾದಿರಾಜರ ಕನ್ನಡ ತಾತ್ಪರ್ಯನಿರ್ಣಯದಲ್ಲಿಯೂ 'ನಳನಂದಿನಿ ಎಂತ ನಳರಾಯನ ಮಗಳಾದಂಥಾಕಿಯಾಗಿ ಅವತರಿಸಿದಳು. ಆ ತರುವಾಯ ಇಂದ್ರಸೇನಾ ಎಂಬ ನಾಮ ಉಳ್ಳಾಕಿಯಾಗಿ ಏಕದೇಹ ಉಳ್ಳ ಭಾರತಿ ಅವತರಿಸಿದಳು' ಎಂದಿದೆ. ಮಹಾಭಾರತದಲ್ಲಿ

ಏಷಾ ನಾಲಾಯನೀ ಪೂರ್ವಂ ಮೌದ್ಗಲ್ಯಂ ಸ್ಥವಿರಂ ಪತಿಂ।
ಆರಾಧಯಾಮಾಸ ತದಾ ಕುಷ್ಠಿನಂ ತಮನಿಂದಿತಾ॥ (ಆದಿ 212.4)

'ನಲಕುಮಾರಿ ವೃದ್ಧನಾದ ಕುಷ್ಠರೋಗಿಯಾದ ಮೌದ್ಗಲ್ಯನನ್ನು ಮದುವೆಯಾಗಿ ಸೇವಿಸಿದಳು.'

ಇಂದ್ರಸೇನೇತಿ ವಿಖ್ಯಾತಾ ಪುರಾ ನಾಲಾಯನೀ ಶುಭಾ।
ಮೌದ್ಗಲ್ಯಂ ಪತಿಮಾಸಾದ್ಯ ಚಚಾರ ವಿಗತಜ್ವರಾ॥ (ಆದಿ 213.4)

---

1. ಪುರಾ ಪೂರ್ವಜನ್ಮನಿ ಪೂರ್ವೋಕ್ತಪ್ರಕಾರೇಣ ನಾಲಾಯನೀತಿ ವಿಶ್ರುತಾ। ಪಶ್ಚಾತ್ತ ಸೈವೇಂದ್ರಸೇನೇತಿ ವಿಖ್ಯಾತಾ ಜಾತಾ। ಪೂರ್ವಜನ್ಮನಿ ನಾಲಾಯನೀತಿ ವಿಶ್ರುತಾ। ನಲಪುತ್ರೀತ್ವಾತ್ ನಾಲಾಯನೀ ನಲನಂದಿನೀತಿ ಚ ವಿಶ್ರುತಾ। ತಸ್ಯಾ ಮುದ್ಗಲಃ ಪತಿಃ ದ್ವಿತಿಯೇ ಜನ್ಮನೀಂದ್ರಸೇನಾ। ತಸ್ಯಾ ಮೌದ್ಗಲ್ಯಃ ಮುದ್ಗಲಪುತ್ರಃ ಪತಿಃ -ಲಕ್ಷಾಲಂಕಾರ

'ಹಿಂದೆ ನಲಕುಮಾರಿಯಾಗಿದ್ದು ಬಳಿಕ ಇಂದ್ರಸೇನೆಯಾಗಿ ಹುಟ್ಟಿ ಪ್ರಸಿದ್ಧಳಾದ ಭಾರತಿ ಮೌದ್ಗಲ್ಯನನ್ನು ಮದುವೆಯಾಗಿ ಸುಖವಾಗಿದ್ದಳು.'

ಹೀಗೆ ಎರಡೂ ಕಡೆ 'ಮೌದ್ಗಲ್ಯ' ಎಂದಿದೆ. ಮೊದಲನೆ ಶ್ಲೋಕದಲ್ಲಿ ಪ್ರಾಯಃ 'ಮುದ್ಗಲ' ಎಂದು ಸರಿಯಾದ ಪಾಠ. ಅಥವಾ 'ಮುದ್ಗಲ ಏವ ಮೌದ್ಗಲ್ಯಃ' ಎಂದು ಸ್ವಾರ್ಥೇಷ್ಯಞ್ ಪ್ರತ್ಯಯ. ಅದರಿಂದ ನಾಲಾಯನಿಗೆ ಮುದ್ಗಲ ಪತಿ. ಇಂದ್ರಸೇನೆಗೆ ಮುದ್ಗಲ ಪುತ್ರನಾದ್ದರಿಂದ ಮೌದ್ಗಲ್ಯ ಎನಿಸಿದ ಒಬ್ಬ ಮುನಿ ಪತಿ ಎನ್ನುವುದು ಕೂಡುತ್ತದೆ.

ನಿರ್ಣಯದಲ್ಲಿ ಮುದ್ಗಲನ ಕಥೆ ಇದೆ. ಅವನ ಪುತ್ರನ ಬಗ್ಗೆ ಏನೂ ಹೇಳಿಲ್ಲ. ಪ್ರಾಯಃ ಮುದ್ಗಲನ ಕಥೆಯೆ ಅವನ ಪುತ್ರನ ಬಗ್ಗೆಯೂ ಪುನರಾವೃತ್ತಿ ಹೊಂದಿತ್ತು. ಮತ್ತು ನಲನಂದಿನಿ, ಇಂದ್ರಸೇನಾ, ದ್ರೌಪದಿ ಎಂದು ಎಲ್ಲ ಮೂರು ಜನ್ಮಗಳಲ್ಲಿಯೂ ಭಾರತಿಗೆ ವಾಯುವಿನೊಂದಿಗೆ ಹರಿಸೇವೆ ಮಾಡುವ ಅವಕಾಶ ಲಭಿಸಿತ್ತು.

ತದಾಽಽಸೀನ್ಮುದ್ಗಲೋ ನಾಮ ಮುನಿಸ್ತಪಸಿ ಸಂಸ್ಥಿತಃ।
ಚಕಮೇ ಪುತ್ರಿಕಾಂ ಬ್ರಹ್ಮೇತ್ಯಶೃಣೋತ್ ಸ ಕಥಾಂತರೇ ॥ ೧೨೨ ॥

ಆಗ ಮುದ್ಗಲನೆಂಬ ಮುನಿ ತಪಸ್ಸು ಮಾಡುತ್ತಿದ್ದ. ಅವನು ಬ್ರಹ್ಮನು ತನ್ನ ಮಗಳನ್ನು ಮೋಹಿಸಿದನೆಂದು ಒಂದು ಕಥೆಯಲ್ಲಿ ಕೇಳಿದ.

ಅಪಾಹಸತ್ ಸೋಽಬ್ಜಯೋನಿಂ ಶಶಾಪೈನಂ ಚತುರ್ಮುಖಃ।
ಭಾರತ್ಯಾದ್ಯಾಃ ಪಂಚ ದೇವೀರ್ಗಚ್ಛ ಮಾನಿನ್ನಭೂತಯೇ ॥ ೧೨೩ ॥

ಮುದ್ಗಲ ಬ್ರಹ್ಮನನ್ನು ಅಪಹಾಸ ಗೈದ. ಅದರಿಂದ ಬ್ರಹ್ಮ ಅವನಿಗೆ 'ಅಹಂಕಾರಿಯೆ, ನೀನು ಭಾರತೀ ಮುಂತಾದ ಐದು ಮಂದಿ ದೇವಿಯರ ಸಂಗ ಮಾಡು. ಅದು ನರಕಾದಿ ಅನರ್ಥ ಸಾಧನ' ಎಂದು ಶಾಪ ನೀಡಿದ್ದ.

ಅಸುರಮೋಹನಾರ್ಥವಾಗಿ ಹರಿಯಾಜ್ಞೆಯಂತೆ ಬ್ರಹ್ಮ ಮಗಳನ್ನು ಮೋಹಿಸಿದಂತೆ ತೋರಿಕೊಂಡಿದ್ದ. ಅದನ್ನು ತಿಳಿಯದೆ ಮುದ್ಗಲ ಬ್ರಹ್ಮನಿಗಿಂತ ತಾನೆ ಮೇಲು ಎಂದುಕೊಂಡು ಅಪಹಾಸ್ಯದ ನಗು ನಕ್ಕ. ಅದಕ್ಕೆ ಬ್ರಹ್ಮ ಶಪಿಸಿದ.

ಇತೀರಿತಸ್ತಂ ತಪಸಾ ತೋಷಯಾಮಾಸ ಮುದ್ಗಲಃ।
ಶಾಪಾನುಗ್ರಹಮಸ್ಯಾಥ ಚಕ್ರೇ ಕಂಜಸಮುದ್ಭವಃ ॥ ೧೨೪ ॥

ಹೀಗೆ ಶಾಪ ಪಡೆದ ಮುದ್ಗಲ ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡ. ಅದರಿಂದ ಬ್ರಹ್ಮ ಅವನಿಗೆ ಶಾಪಕ್ಕೆ ಪ್ರತಿಯಾಗಿ ಅನುಗ್ರಹ ಮಾಡಿದ.

ನ ತ್ವಂ ಯಾಸ್ಯಸಿ ತಾ ದೇವೀರ್ಮಾರುತಸ್ತ್ವಚ್ಛರೀರಗಃ।
ಯಾಸ್ಯತಿ ತ್ವಂ ತದಾ ಮೂರ್ಛಾಂಗತೋ ನೈವ ವಿಬುಧ್ಯಸೇ ॥ ೧೨೫ ॥

'ನೀನು ಆ ದೇವಿಯರ ಸಂಗ ಮಾಡುವುದಿಲ್ಲ. ನಿನ್ನ ಶರೀರದಲ್ಲಿದ್ದು ವಾಯು ಇಂದ್ರಸೇನೆಯ ಸಂಗ ಮಾಡುತ್ತಾನೆ. ನೀನು ಆಗ ಮೂರ್ಛೆ ಹೊಂದಿರುತ್ತಿ. ನೀನೇನೂ ತಿಳಿಯುವುದಿಲ್ಲ.

ನ ಚ ಪಾಪಂ ತತಸ್ತೇ ಸ್ಯಾದಿತ್ಯುಕ್ತೇ ಚೈನಮಾವಿಶತ್।
ಮಾರುತೋಽಥೇಂದ್ರಸೇನಾಂ ಚ ಗೃಹೀತ್ವಾಥಾಭವದ್ ಗೃಹೀ ॥ ೧೨೬ ॥

ಆದರಿಂದ ನಿನಗೆ ಪಾಪ ಬರಲಾರದು ಎಂದು ಬ್ರಹ್ಮ ಮುದ್ಗಲನಿಗೆ ಅನುಗ್ರಹಿಸಿದಾಗ ವಾಯು ಮುದ್ಗಲನನ್ನು ಪ್ರವೇಶಿಸಿದ. ಬಳಿಕ ಇಂದ್ರಸೇನೆಯನ್ನು ಮದುವೆಯಾಗಿ ಗೃಹಸ್ಥನಾದ.

ಇಲ್ಲಿ 'ವಾಯು ನಿನ್ನ ಶರೀರದಲ್ಲಿದ್ದು ಸಂಗ ಮಾಡುತ್ತಾನೆ' ಎಂದು ಮಾತ್ರ ಹೇಳಿದೆ. ಆದರೆ 'ಪಂಚದೇವಿಯರನ್ನು ಸಂಗ ಮಾಡುತ್ತಾನೆ' ಎಂದು ಅನ್ವಯಿಸಿಕೊಳ್ಳುವುದು ಉಚಿತವಲ್ಲ. 'ಪಂಚದೇವಿಯರನ್ನು ನೀನು ಕೂಡುವುದಿಲ್ಲ' ಎಂದು ಒಮ್ಮೆ ಅನ್ವಯವಾಗಿರುತ್ತದೆ. ತಿರುಗಿ ಅನ್ವಯಿಸುವ ಅವಶ್ಯಕತೆ ಇಲ್ಲ. ವಾಯುವಿಗೆ ಪಂಚದೇವಿ ಸಂಗವಾಗಬೇಕೆಂದು ಶಾಪವೂ ಇಲ್ಲ. ಆದರಿಂದ 'ಮಾರುತೋಽಥೇಂದ್ರ ಸೇನಾಂಚ' 'ರೇಮೇ ಚ ಸ ತಯಾ' ಎಂದು ಮುಂದಿನ ಶ್ಲೋಕದಲ್ಲಿ 'ವಾಯು ಇಂದ್ರಸೇನೆಯನ್ನು ಮದುವೆಯಾದ. ಅವಳೊಡನೆ ವಿಹರಿಸಿದ' ಎನ್ನುತ್ತ ಏಕವಚನದಿಂದ ವಾಯು ಇಂದ್ರಸೇನಾ ನಾಮಕಳಾದ ಭಾರತಿಯೊಬ್ಬಳನ್ನೆ ಮದುವೆಯಾಗಿ ಅವಳೊಡನೆ ವಿಹರಿಸಿದ ಎಂದು ಹೇಳಿದ್ದರಿಂದ ಪ್ರಕೃತದಲ್ಲಿಯೂ 'ವಾಯು ಇಂದ್ರಸೇನೆಯನ್ನು ಕೂಡುತ್ತಾನೆ' ಎಂದೇ ಅನ್ವಯ ಹೇಳಬೇಕು. ಆದರಿಂದ ವಾಯುವಿಗೆ ಪರನಾರೀ ಸಂಗವಾಯಿತೆಂಬ ಶಂಕೆಗೆ ಅವಕಾಶವಿಲ್ಲ.[1]

---

1. ಮಾರುತ್ತ್ವಚ್ಛರೀರಗಃ ಯಾಸ್ಯತೀತಿ ವಚನಸ್ಯ ಸಾಮಾನ್ಯವಚನತ್ವೇನ 'ತಾ ದೇವೀ'ರಿತ್ಯನುಕರ್ಷೇ ಕಾರಣಾಭಾವಾತ್, ಮುದ್ಗಲವತ್ ತಾ ದೇವೀರ್ಗಚ್ಛೇತಿ ವಾಯೋಃ ಶಾಪಾಭಾವೇನ ಚ ಇಂದ್ರ ಸೇನಾಮಿತಿ ವಕ್ಷ್ಯಮಾಣಪದಾಕರ್ಷಣೇನ ಭಾರತೀರೂಪಾಮಿಂದ್ರಸೇನಾಂ ಯಾಸ್ಯತೀತಿ ಸಂಬಂಧಸಂಭವಾತ್ ಅತ್ರಾಪಿ ವಾಯೋರ್ನ ಪರಸ್ತ್ರೀಗಮನಂ ಶಂಕ್ಯಂ। ಅತ ಏವೇಂದ್ರಸೇನಾಂ ಗೃಹೀತ್ವೇತಿ ರೇಮೇ ಚ ಸ ತಯಾ ಸಾರ್ಧಮಿತಿ ಚ ಸ್ಥಾನ ದ್ವಯೇಽಪ್ಯೇಕ ವಚನಮೇವ। ನ ತು ತಾಭಿರಿತಿ ಬಹುವಚನಂ। -ವಾದಿರಾಜೀಯ

ಮಹಾಭಾರತದಲ್ಲಿ ಮುದ್ಗಲಮುನಿ ಕುಷ್ಠರೋಗದಿಂದ ಬಳಲುವಂತೆ ತೋರಿಕೊಂಡು ಇಂದ್ರಸೇನೆಯ ಪತಿನಿಷ್ಠೆಯನ್ನು ಪರೀಕ್ಷಿಸಿ ಪ್ರತ್ಯಕ್ಷ ಕಂಡು ಐದು ದಿವ್ಯರೂಪಗಳನ್ನು ಧರಿಸಿ ಅವಳೊಡನೆ ಸ್ವರ್ಗಾದಿ ಸಕಲ ಲೋಕಗಳಲ್ಲಿ ವಿಹರಿಸಿದ. ಬಳಿಕ ತೃಪ್ತನಾಗಿ ಅವಳನ್ನು ತೊರೆದು ಹೋದನೆಂದಿದೆ. ವಸ್ತುತಃ ಇಂದ್ರಸೇನೆಯನ್ನು ಮದುವೆಯಾದುದು ಮುದ್ಗಲನಲ್ಲಿ ಆವಿಷ್ಟನಾದ ವಾಯು ಮುದ್ಗಲ ಆಗ ತನ್ನ ಶರೀರದಲ್ಲಿ ಮೂರ್ಛಿತನಾಗಿದ್ದ. ಇಂದ್ರಸೇನೆಯನ್ನು ತೊರೆದು ಹೋಗುವ ಕಾಲದಲ್ಲಿ ವಾಯು ಅವನನ್ನು ಎಚ್ಚರಿಸಿ ಹೋದ. ಹೀಗೆ ಮುದ್ಗಲನಿಗೆ ಸ್ವೋತ್ತಮ ಸ್ತ್ರೀಯರ ಸಂಗವಾಗಲಿಲ್ಲ. ವಾಯುವೂ ಇಂದ್ರಸೇನೆಯಲ್ಲಿ ಮುಂದೆ, ದ್ರೌಪದೀ ಶರೀರದಲ್ಲಿ ಹೇಳುವಂತೆ ಬೇರೆ ದೇವಿಯರನ್ನು ಮೂರ್ಛೆಗೊಳಿಸಿ ಭಾರತಿಯನ್ನೇ ಮದುವೆಯಾಗಿ ವಿಹಾರ ಮಾಡಿದ.

ರೇಮೇ ಚ ಸ ತಯಾ ಸಾರ್ಧಂ ದೀರ್ಘಕಾಲಂ ಜಗತ್ಪ್ರಭುಃ।
ತತೋ ಮುದ್ಗಲಮುದ್ಭೋಧ್ಯ ಯಯೌ ಚ ಸ್ವಂ ನಿಕೇತನಮ್ ॥ ೧೨೭ ॥

ಜಗದೊಡೆಯನಾದ ವಾಯು ದೀರ್ಘಕಾಲ ಇಂದ್ರಸೇನೆಯೊಡನೆ ವಿಹರಿಸಿ ಮುದ್ಗಲನನ್ನು ಎಚ್ಚರಿಸಿ ತನ್ನ ಲೋಕಕ್ಕೆ ತೆರಳಿದ.

ಬ್ರಹ್ಮಶಾಪ - ಶಿವ ವರ

ತತೋ ದೇಶಾಂತರಂ ಗತ್ವಾತಪಶ್ಚಕ್ರೇ ಸ ಮುದ್ಗಲಃ।
ಸೇಂದ್ರಸೇನಾ ವಿಯುಕ್ತಾಥ ಭರ್ತ್ರಾಚಕ್ರೇ ಮಹತ್ತಪಃ ॥ ೧೨೮ ॥

ಬಳಿಕ ಮುದ್ಗಲ ದೇಶಾಂತರಕ್ಕೆ ಹೋಗಿ ತಪಸ್ಸು ಮಾಡಿದ. ಇಂದ್ರಸೇನೆ ಪತಿಯಿಂದ ವಿಯುಕ್ತಳಾಗಿ ಮಹಾತಪಸ್ಸನ್ನಾಚರಿಸಿದಳು.

ತದ್ದೇಹಗಾ ಭಾರತೀ ತು ಕೇಶವಂ ಶಂಕರೇ ಸ್ಥಿತಮ್।
ತೋಷಯಾಮಾಸ ತಪಸಾ ಕರ್ಮೈಕ್ಯಾರ್ಥಂ ಹಿ ಪೂರ್ವವತ್ ॥ ೧೨೯ ॥

ಇಂದ್ರಸೇನೆಯ ಶರೀರದಲ್ಲಿದ್ದ ಭಾರತಿ ಶಿವನಲ್ಲಿ ಅಂತರ್ಗತನಾದ ಹರಿಯನ್ನು ತಪಸ್ಸಿನಿಂದ ಒಲಿಸಿಕೊಂಡಳು. ಇದು ಹಿಂದಿನಂತೆಯೆ ಕರ್ಮೈಕ್ಯಕ್ಕಾಗಿ.

ಉಮಾದ್ಯಾ ರೌದ್ರಮೇವಾತ್ರ ತಪಶ್ಚಕ್ರುರ್ಯಥಾ ಪುರಾ।
ಪ್ರತ್ಯಕ್ಷೇ ಚ ಶಿವೇ ಜಾತೇ ತದ್ದೇಽಹಸ್ಥೇ ಚ ಕೇಶವೇ ॥ ೧೩೦ ॥

ಪೃಥಕ್ ಪೃಥಕ್ ಸ್ವಭರ್ತ್ರಾರ್ಪ್ಯೈತಾಃ ಪಂಚಾಪ್ಯೇಕದೇಹಗಾಃ।
ಪ್ರಾರ್ಥಯಾಮಾಸುರಭವತ್ ಪಂಚ ಕೃತ್ವೋ ವಚೋ ಹಿ ತತ್ ॥ ೧೩೧ ॥

ಪಾರ್ವತಿ ಮುಂತಾದ ದೇವಿಯರು ಹಿಂದಿನಂತೆಯೆ ಶಿವನನ್ನು ಕುರಿತು ತಪಸ್ಸು ಮಾಡಿದರು. ವಟು ರೂಪದಿಂದ ಶಿವನೂ ಅವನೊಳಗಿನ ಹರಿಯೂ ಪ್ರತ್ಯಕ್ಷನಾದಾಗ ಒಂದೇ ಶರೀರದಲ್ಲಿದ್ದ ಐದು ದೇವಿಯರೂ ತಮ್ಮ ಪತಿಗಳನ್ನು ಹೊಂದುವುದಕ್ಕೆ ಬೇರೆಬೇರೆಯಾಗಿ ವರವನ್ನು ಬೇಡಿದರು. ಅದರಿಂದ ವರವನ್ನು ಬೇಡುವ ಮಾತು ಐದು ಬಾರಿ ಕೇಳಿಸಿತು.

ವಿಪ್ರಕನ್ಯೆಯಾಗಿ ತಪಸ್ಸು ಮಾಡಿ ವರ ಪಡೆದಾಗಿತ್ತು. ಆದರೂ 'ಮುಂದಿನ ಜನ್ಮದಲ್ಲಿ ಪತಿಪ್ರಾಪ್ತಿ' ಎಂದು ಸಾಮಾನ್ಯವಾಗಿ ಆ ವರವಿತ್ತು. ಅದರಿಂದ ನಾಲಾಯನೀ ಜನ್ಮದಲ್ಲಿಯೂ, ಇಂದ್ರಸೇನಾ ಜನ್ಮದಲ್ಲಿಯೂ ಪತಿಪ್ರಾಪ್ತಿ ಶಚಿ ಮುಂತಾದವರಿಗೆ ಆಗಲೆ ಇಲ್ಲ. ಇನ್ನು ಮುಂದಿನ ದ್ರೌಪದೀ ಜನ್ಮದಲ್ಲಾದರೂ ಪತಿ ಪ್ರಾಪ್ತಿಯಾಗಲೆಂದು ತಿರುಗಿ ವಿಶೇಷವಾಗಿ ತಪಸ್ಸು ಮಾಡಿದರು.

ಶಿವದೇಹಸ್ಥಿತೋ ವಿಷ್ಣುರ್ಭಾರತ್ಯೈತು ದದೌ ಪತಿಮ್।
ಅನ್ಯಾಸಾಂ ಶಿವ ಏವಾಥ ಪ್ರದದೌ ಚತುರಃ ಪತೀನ್ ॥ ೧೩೨ ॥

ಶಿವದೇಹಾಂತರ್ಗತನಾದ ವಿಷ್ಣು ಭಾರತಿಗೆ ಪತಿಪ್ರಾಪ್ತಿ ವರ ನೀಡಿದ. ಬೇರೆ ದೇವಿಯರಿಗೆ ಶಿವನೆ ನಾಲ್ಕು ಪತಿಗಳನ್ನು ವರವಾಗಿ ಇತ್ತ.

ದೇವ್ಯಶ್ಚತಸ್ರಸ್ತುತದಾ ದತ್ತಮಾತ್ರೇ ವರೇಽಮುನಾ।
ದೇವಾನಾಮವತಾರಾರ್ಥಂ ಪಂಚದೇವ್ಯಃ ಸ್ಮ ಇತ್ಯಥ ॥ ೧೩೩ ॥

ನಾಜಾನನ್ನೇಕದೇಹತ್ವಾಚ್ಚಿದ್ಯೋಗಾತ್ ಕ್ಷೀರ ನೀರವತ್।
ತಾಃ ಶ್ರುತ್ವಾಸ್ವಪತಿಂ ದೇವಿ ನ ಚಿರಾತ್ ಪ್ರಾಪ್ಸ್ಯಸೀತಿ ಚ ॥ ೧೩೪ ॥

ವಿಷ್ಣೂಕ್ತಂ ಶಂಕರೋಕ್ತಂ ಚ ಚತ್ವಾರಃ ಪತಯಃ ಪೃಥಕ್।
ಭವಿಷ್ಯಂತೀತ್ಯಥೈಕಸ್ಯಾಂ ಮೇನಿರೇ ಪಂಚ ಭರ್ತೃತಾಮ್ ॥ 135 ॥

ಶಿವನೂ ವಿಷ್ಣುವೂ ವರವನ್ನು ಕೊಟ್ಟಾಗ ದೇವಿಯರು ತಾವು ದೇವತೆಗಳ ಅವತಾರಕ್ಕಾಗಿ ಹುಟ್ಟಿದ ಬೇರೆ ಬೇರೆ ಐದು ಮಂದಿ ದೇವಿಯರೆಂಬುದನ್ನು ಮರೆತಿದ್ದರು. ಏಕೆಂದರೆ ಒಂದೇ ದೇಹದಲ್ಲಿ ಹಾಲು ನೀರುಗಳಂತೆ ಆ ಚೇತನರು ಒಂದಾಗಿ ಬೆರೆತಿದ್ದರು.

'ದೇವಿ, ನೀನು ನಿನ್ನ ಪತಿಯನ್ನು ಬೇಗನೆ ಪಡೆಯುವಿ' ಎಂದು ಒಮ್ಮೆ ವಿಷ್ಣು ಹೇಳಿದ್ದನ್ನೂ ನಾಲ್ಕು ಬಾರಿ ಶಿವ ಹೇಳಿದ್ದನ್ನೂ ಕೇಳಿ ನಾಲ್ಕು ಮಂದಿ ಪತಿಗಳು ಬೇರೆ ಸಿಗುವರು ಬೇರೆ ಬೇರೆಯಾಗಿ ಒಬ್ಬಳಿಗೇ ಐದು ಮಂದಿ ಪತಿಗಳೆಂದು ತಪ್ಪಾಗಿ ತಿಳಿದರು.

ಯಮ ವಾಯು ಇಂದ್ರ ಅಶ್ವಿನಿ ಶಿವರ ಅವತಾರಗಳಿಗಾಗಿ ಹುಟ್ಟಿದವರು ತಾವು ಐದು ಮಂದಿ ದೇವಿಯರೆಂಬುದನ್ನು ಮರೆತು ಪ್ರತಿಯೊಬ್ಬರೂ ನಾನು ಒಬ್ಬಳೇ ಈ ಶರೀರದಲ್ಲಿದ್ದೇನೆ ಎಂದು ತಿಳಿದರು. ಈ ಭ್ರಮ ಸರ್ವಜ್ಞರಾದ ಭಾರತಿಗೆ ಇರಲಿಲ್ಲ. ಇತರ ದೇವಿಯರಿಗೆ ಮಾತ್ರ ಇದ್ದಿತು ಎಂದು ವಾದಿರಾಜೀಯ ಹೇಳಿದೆ.[1]

ನಾನೊಬ್ಬಳೆ ಎಂಬ ಭ್ರಮದಿಂದ ಅತ್ತಳು. ಅದರಿಂದ ಇಂದ್ರನಿಗೆ ರುದ್ರಶಾಪ. ರುದ್ರ ಸುಳ್ಳಾಡಿದನೆಂದು ಅವನಿಗೆ ಬ್ರಹ್ಮನ ಶಾಪ. ಅದರಿಂದ ಅರ್ಜುನ ಅಶ್ವತ್ಥಾಮಾದಿ ರೂಪಗಳಿಂದ ದೇವತೆಗಳ ಅವತಾರ. ಹೀಗೆ ಪರಮಾತ್ಮನ ದೇವತೆಗಳ ಅವತಾರಕ್ಕಾಗಿ ದೇವಿಯರಿಗೆ ಇಂಥ ಭ್ರಮ ಉಂಟುಮಾಡಿದ ಎಂದು ಇನ್ನೊಂದು ಬಗೆಯ ವಿವರಣೆ ಜನಾರ್ದನೀಯ ವರದರಾಜೀಯ ತಾಮ್ರಪರ್ಣೀಯಗಳಲ್ಲಿ ಸಿಗುತ್ತದೆ.[2]

ಪಂಚೇಂದ್ರೋಪಾಖ್ಯಾನ

ರುರುದುಶ್ಚೈಕದೇಹಸ್ಥಾವಿಕೈವಾಹಮಿತಿ ಸ್ಥಿತಾಃ।
ಅಥಾಪ್ಯಗಾನ್ಮಹೇಂದ್ರೋಽತ್ರ ಸೋಽಬ್ರವೀತ್ ತಾಂ ವರಸ್ತ್ರಿಯಮ್ ॥ ೧೩೬ ॥

ಕಿಮರ್ಥಂ ರೋದಿಷೀತ್ಯೇವ ಸಾಬ್ರವೀದ್ ವಟುರೂಪಿಣಮ್।
ಶಂಕರಂ ದರ್ಶಯಿತ್ವೈವ ಪಂಚಭರ್ತೃತ್ವಮೇಷ ಮೇ ॥ ೧೩೭ ॥

ವರಾರ್ಥಮರ್ಥಿತಃ ಪ್ರಾದಾದಿತಿ ತಂ ಶಿವ ಇತ್ಯಥ।
ಅಜಾನನ್ ಶಕ್ರ ಆಹೋಚ್ಚೈಃ ಕಿಮೇತದ್ ಭುವನತ್ರಯೇ।
ಮತ್ಪಾಲಿತೇ ಯೋಷಿತಂ ತ್ವಂ ವೃಥಾ ಶಪಸಿ ದುರ್ಮತೇ ॥ ೧೩೮ ॥

---

1. ರುರುದುಃ ಸರ್ವಜ್ಞಭಾರತೀವ್ಯತಿರಿಕ್ತಾಃ ಪಾರ್ವತ್ಯಾದ್ಯಾಃ। -ವಾದಿರಾಜೀಯ
2. ಅಹಮೇಕೈವೇತಿ ಜ್ಞಾನಾದ್ರೋದನಂ। ತೇನೇಂದ್ರಸ್ಯ ರುದ್ರಶಾಪಃ। ತತೋ ರುದ್ರಸ್ಯ ಮೃಷಾವಚನಂ। ತೇನ ರುದ್ರಸ್ಯ ಬ್ರಹ್ಮದತ್ತ ಶಾಪಃ। ತತೋಽರ್ಜುನಾಶ್ವತ್ಥಾಮಾದಿರೂಪೇಣ ದೇವಾನಾಮವತಾರಾರ್ಥಂ ಅಜ್ಞಾನಂ ತಾಸಾಮಿತ್ಯರ್ಥಃ। -ಜನಾರ್ದನೀಯ, ವರದರಾಜೀಯ
ಈಶ್ವರ ಏವ ಮೋಹಯಾಮಾಸೇತಿ ಭಾವಃ। -ತಾಮ್ರಪರ್ಣೀಯ

ಒಂದು ದೇಹದಲ್ಲಿರುವ ದೇವಿಯರು 'ನಾನೊಬ್ಬಳೆ' ಎಂದು ತಿಳಿದು ಅತ್ತರು. ಆಗ ದೇವೇಂದ್ರ ಅಲ್ಲಿಗೆ ಬಂದ. 'ಏಕೆ ಅಳುವೆ?' ಎಂದು ಆ ಉತ್ತಮ ಸ್ತ್ರೀಯನ್ನು ಕೇಳಿದ. ಅವಳು ವಟುರೂಪಿ ಶಿವನನ್ನು ತೋರಿಸಿ ಹೇಳಿದಳು. 'ಪತಿಪ್ರಾಪ್ತಿಗಾಗಿ ನಾನು ಬೇಡಿದಾಗ ಇವನು ನನಗೆ ಐದು ಮಂದಿ ಪತಿಗಳಾಗುವರೆಂದು ವರ ನೀಡಿದ'. ಆ ವಟುವನ್ನು ಶಿವನೆಂದರಿಯದೆ ಇಂದ್ರ ಗಟ್ಟಿಯಾಗಿ ನುಡಿದ, 'ದುರ್ಬುದ್ಧಿಯವನೆ, ಇದೇನು, ನಾನು ಈ ಮೂಲೋಕವನ್ನು ಆಳುತ್ತಿರುವಾಗ ಒಂದು ಹೆಣ್ಣನ್ನು ವಿನಾಕಾರಣ ಶಪಿಸುತ್ತಿರುವೆ?'

ಒಬ್ಬ ಸ್ತ್ರೀಗೆ ಐದು ಮಂದಿ ಪತಿಗಳೆಂದರೆ ಅದು ವ್ಯಭಿಚಾರವೆ ಆಯಿತು. ಅದರಿಂದ ಇದು ವರವಲ್ಲ ಶಾಪ ಎಂದು ಪಾರ್ವತಿ ಮುಂತಾದ ದೇವಿಯರು ಅತ್ತರು. ಭಾರತಿಗೆ ಭ್ರಮೆ ಇಲ್ಲ. ಆದರೂ ಅಜ್ಞಲೋಕಾಪವಾದ ಭಯದಿಂದ ಕಣ್ಣೀರಿಟ್ಟಳು. ಶೋಕದಿಂದಲ್ಲ. ಒಮ್ಮೆ ದೇವತೆಗಳು ನೈಮಿಶಾರಣ್ಯದಲ್ಲಿ ಸತ್ರಯಾಗ ಮಾಡಿದರು. ಆಗ ದೇವತೆಗಳೆಲ್ಲ ಅಲ್ಲಿಗೆ ಬಂದಿದ್ದಾಗ ಗಂಗಾನದಿಯಲ್ಲಿ ಅತ್ಯದ್ಭುತವಾದ ಬಂಗಾರದ ಕಮಲಗಳು ತೇಲಿ ಬರುತ್ತಿದ್ದುದನ್ನು ಕಂಡರು. ಎಲ್ಲಿಂದ ಕಮಲಗಳು ಬರುತ್ತಿವೆ ಎಂದು ಅನ್ವೇಷಣ ಮಾಡುತ್ತ ಇಂದ್ರ ಗಂಗೋತ್ರಿಗೆ ಬಂದ. ಅಲ್ಲಿ ಇಂದ್ರಸೇನೆ ಜಲಪಾನಕ್ಕೆ ಬಂದು ಕಣ್ಣೀರಿಡುತ್ತ ನಿಂತುದನ್ನು ಕಣ್ಣೀರಿನಿಂದ ಕಮಲಗಳು ಹುಟ್ಟುವುದನ್ನು ಕಂಡು 'ಏಕೆ ಅಳುತ್ತಿ?' ಎಂದು ಕೇಳುತ್ತಾನೆ. ಮಹಾಭಾರತದಲ್ಲಿ ಈ ಕಥೆ ಬಂದುದರ ಉದ್ದೇಶವನ್ನು ಲಕ್ಷಾಲಂಕಾರ ಹೀಗೆ ಹೇಳುತ್ತದೆ. –ಇಂದ್ರಸೇನೆ ಭಾರತೀದೇವಿ. ಬೇರೆ ದೇವಿಯರಿಗೆ ಭ್ರಮಜನ್ಯವಾದ ಶೋಕವಿದ್ದರೂ ಅವರದು ಕೇವಲ ಆವೇಶವಾದುದರಿಂದ ಭಾರತಿಯೇ ಕಣ್ಣೀರು ಹರಿಸಿದಳು. ಅವಳ ಕಣ್ಣೀರು ಶೋಕದ್ದಲ್ಲ. ಶೋಕದ್ದಾಗಿದ್ದರೆ ಬಿಸಿಯಾಗಿದ್ದು ಶೋಷಕವಾಗಿರಬೇಕಿತ್ತು. ಜಗತ್ತಿಗೆ ಆಶ್ಚರ್ಯ ಉಂಟುಮಾಡುವ ಕಮಲವನ್ನು ಹುಟ್ಟಿಸುತ್ತಿರಲಿಲ್ಲ. ಹೀಗೆ ಭಾರತಿಗೆ ಶೋಕವಿಲ್ಲವೆಂಬುದನ್ನು ತಿಳಿಸುವುದಕ್ಕಾಗಿ ಈ ಕಥೆ ಹೊರಟಿದೆ.[1]

'ಸಕೃದುಕ್ತಂ ತ್ವಯಾ ನೈತತ್' ನೀನು ಒಂದೇ ಬಾರಿ ಪತಿಂ ದೇಹಿ ಎನ್ನದೆ ಐದು ಬಾರಿ ನುಡಿದೆ. ಅದರಿಂದ ಐದು ಮಂದಿ ಪತಿಗಳಾದ ಮಾತ್ರಕ್ಕೆ ವ್ಯಭಿಚಾರ ದೋಷಕ್ಕೆ ಪ್ರಸಕ್ತಿ ಇಲ್ಲ ಎಂದು ಶಿವ ಇಂದ್ರಸೇನೆಯನ್ನು ಸಮಾಧಾನಪಡಿಸಲು ಯತ್ನಿಸುತ್ತಾನೆ. ನೀನು ಒಬ್ಬಳೆ ಆಗಿದ್ದರೆ ಒಮ್ಮೆ 'ಪತಿಂ

---

1. ಇಂದ್ರಸೇನಾರೋದನಂ ವಸ್ತುಸ್ಥಿತ್ಯಾ ದೋಷಾಭೇವೇऽಪಿ ಅಜ್ಞಾಲೋಕಾಪವಾದ ಭಯಾದೇವ। ನ ತು ಶೋಕಾತ್। ಶೋಕಜತ್ವೇ ಉಷ್ಣಸ್ಯ ತಸ್ಯ ಅಶ್ರುಣಃ ಶೋಷಕತ್ವೇನ ಜಗದ್ವಿಸ್ಮಾಪಕ ಪದ್ಮೋದಯಹೇತುತ್ವವಿರೋಧಾತ್। –ಲಕ್ಷಾಲಂಕಾರ

ದೇಹಿ' ಎನ್ನುತ್ತಿದ್ದಿ. ಅನೇಕ ಬಾರಿ ಹೇಳಿದ್ದು ನಿನ್ನಲ್ಲಿ ಅನೇಕ ಮಂದಿಗಳಿದ್ದಾರೆ ಎನ್ನುವುದಕ್ಕೆ ಸೂಚಕವಾಗಿದೆ. ಅದರಿಂದ ನೀವು ನಿಮ್ಮ ಪತಿಗಳೊಂದಿಗೆ ರಮಿಸುವುದರಿಂದ ಅಧರ್ಮವಾಗುವುದಿಲ್ಲ ಎಂಬುದು ಶಿವನ ಹಾರ್ದವಾಗಿದೆ. ಇಲ್ಲದಿದ್ದರೆ ಐದು ಬಾರಿ ವರಪುರುಷ ಸಂಗವನ್ನು ಬೇಡಿದರೆ ದೋಷವಿಲ್ಲ ಎಂದಂತಾದೀತು ಎಂದು ಲಕ್ಷಾಲಂಕಾರ ಹೇಳಿದೆ. ಹೀಗೆ ಶಿವ ಸಮಾಧಾನಗೊಳಿಸಿದರೂ ದೇವಿಯರು ಅಳುವುದನ್ನು ನಿಲ್ಲಿಸಲಿಲ್ಲ ಎಂದರೆ ಇದು ಭಗವಂತನೆ ಉಂಟು ಮಾಡಿದ ಭ್ರಮೆ ಎನ್ನಬೇಕಾಗುತ್ತದೆ.

ಇತೀರಿತೇ ಶಿವಃ ಪ್ರಾಹ ಪತ ಮಾನುಷಮಾಪ್ನುಹಿ ॥ ೧೩೯ ॥

ಹೀಗೆ ಹೇಳಿದಾಗ ಶಿವನೆಂದ, 'ನೀನು ಸ್ವರ್ಗದಿಂದ ಚ್ಯುತನಾಗು, ಮನುಷ್ಯನಾಗಿ ಹುಟ್ಟು.'

ಅಸ್ಯಾಶ್ಚ ಭರ್ತಾ ಭವಸಿ ತ್ವಾಮೇವೈಷಾ ವರಿಷ್ಯತಿ ॥ ೧೪೦ ॥
ಪಶ್ಯಾತ್ರ ಮದವಜ್ಞಾನಾತ್ ಪತಿತಾಂಸ್ತ್ವದೃಶಾನ್ ಸುರಾನ್।
ಗಿರೇರಧಸ್ತಾದಸ್ಯೈವೇತ್ಯುಕ್ತೋಽಸೌ ಪಾಕಶಾಸನಃ।
ಉದ್ಬಬರ್ಹ ಗಿರಿಂ ತಂ ತು ದದರ್ಶಾತ್ರ ಚ ತಾನ್ ಸುರಾನ್ ॥ ೧೪೧ ॥

ಇವಳಿಗೆ ನೀನು ಪತಿಯಾಗುವೆ. ನಿನ್ನನ್ನೆ ಇವಳು ವರಿಸುವಳು. ನನ್ನನ್ನು ಅಪಮಾನಿಸಿದ ಕಾರಣ ಸ್ವರ್ಗದಿಂದ ಪತಿತರಾಗಿರುವ ನಿನ್ನಂತ ದೇವತೆಗಳನ್ನು ಇಲ್ಲಿ ಇದೇ ಪರ್ವತದ ಕೆಳಗೆ ನೋಡು' ಹೀಗೆ ಶಿವ ಹೇಳಿದಾಗ ಇಂದ್ರ ಆ ಬೆಟ್ಟವನ್ನೆತ್ತಿದ. ಅಲ್ಲಿ ಆ ದೇವತೆಗಳನ್ನು ಕಂಡ.

'ನಿನ್ನನ್ನೇ ಇವಳು ವರಿಸುವಳು' ಎಂಬ ಶಿವನ ವಚನದಂತೆಯೆ ಮುಂದೆ ಸ್ವಯಂವರದಲ್ಲಿ ಪಣವನ್ನು ಗೆದ್ದ ಅರ್ಜುನನ್ನೇ ದ್ರೌಪದಿ ವರಿಸುವಳು.

ಪೂರ್ವೇಂದ್ರಾನ್ ಮಾರುತವೃಷನಾಸತ್ಯಾಂಶ್ಚತುರಃ ಸ್ಥಿತಾನ್।
ಮಾನುಷೇಷ್ವವತಾರಾಯ ಮಂತ್ರಂ ರಹಸಿ ಕುರ್ವತಃ ॥ ೧೪೨ ॥

ಹಿಂದಿನ ಮನ್ವಂತರಗಳಲ್ಲಿ ಇಂದ್ರಪದವಿಯನ್ನಾಳಿದ್ದ ವಾಯು ಯಮ ಮತ್ತು ಇಬ್ಬರು ಅಶ್ವಿನೀದೇವತೆಗಳು ಎಂದು ನಾಲ್ವರು ಮನುಷ್ಯರಲ್ಲಿ ಅವತರಿಸಲು ರಹಸ್ಯವಾಗಿ ಮಂತ್ರಾಲೋಚನೆ ಮಾಡುತ್ತ ಅಲ್ಲಿ ಕುಳಿತಿದ್ದರು.

ಹಿಂದಿನ ಮನ್ವಂತರಗಳೆಂದರೆ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ರೈವತ, ತಾಪಸ, ಚಾಕ್ಷುಷ - ಈ ಆರು ಮನ್ವಂತರಗಳು. ಇವುಗಳಲ್ಲಿ

ಸ್ವಾಯಂಭುವ ಮನ್ವಂತರದಲ್ಲಿ ಇಂದ್ರಪದವಿ ಆಳಿದವ ಯಜ್ಞನಾಮಕನಾದ ಹರಿಯೆ. ಆರನೆಯದಾದ ಚಕ್ಷುಷ್ಟ ಮನ್ವಂತರದಲ್ಲಿ ಈಗಿನ ಏಳನೆಯ ಮನ್ವಂತರದ ಪುರಂದರನೆ ಮಂದ್ರದ್ಯಮ್ನ ನಾಮಕ ಇಂದ್ರನಾಗಿದ್ದ. ಈಗ ಶಿವನಶಾಪಕ್ಕೆ ಒಳಗಾಗುತ್ತಿರುವವನು ಈ ಇಂದ್ರನೆ. ಉಳಿದ ಇಂದ್ರರು. ಅಂದರೆ ಸ್ವಾರೋಚಿಷ ಮನ್ವಂತರದ ರೋಚನ ನಾಮಕ ವಾಯು, ಉತ್ತಮ ಮನ್ವಂತರದ ಇಂದ್ರಜಿತ್ ನಾಮಕಯ ಯಮ, ರೈವತ ತಾಪಸ ಮನ್ವಂತರಗಳ ತ್ರಿಶಿಖ ವಿಭು ನಾಮಕರಾದ ಅಶ್ವಿನೀದೇವತೆಗಳು - ಇವರು ನಾಲ್ವರು ಭೂಮಿಯಲ್ಲಿ ಅವತರಿಸಲು ಮಂತ್ರಾಲೋಚನೆ ಮಾಡುತ್ತಿದ್ದರು. ಶಿವಶಾಪದಿಂದ ಸ್ವರ್ಗಚ್ಯುತರಾಗಿರಲಿಲ್ಲ.

ತತೋ ವರೇಣ್ಯಂ ವರದಂ ವಿಷ್ಣುಂ ಪ್ರಾಪ್ಯ ಸ ವಾಸವಃ।
ತತ್ಪ್ರಸಾದಾನ್ನರಾಂಶೇನ ಯುಕ್ತೋ ಭೂಮಾವಜಾಯತ ॥ ೧೪೩ ॥

ಬಳಿಕ ದೇವೇಂದ್ರ ವರದಾಯಕನಾದ ಸರ್ವೋತ್ತಮನಾದ ಹರಿಯನ್ನು ತಪಸ್ಸಿನಿಂದ ಒಲಿಸಿಕೊಂಡು ಅವನ ಅನುಗ್ರಹದಿಂದ ನರಾಂಶಯುಕ್ತನಾಗಿ ಭೂಮಿಯಲ್ಲಿ ಹುಟ್ಟಿದ.

'ವಿಷ್ಣೋರ್ವಾಯೋರನಂತಸ್ಯ ತ್ರಿಭಿರಂಶೈರ್ನರಃ ಸ್ಮೃತ।'

ವಿಷ್ಣುವಾಯು ಅನಂತ ಈ ಮೂವರ ಅಂಶಗಳಿಂದ ಧರ್ಮ ಮತ್ತು ಮೂರ್ತಿ ದಂಪತಿಗಳಲ್ಲಿ ನರನೆಂಬ ಮುನಿ ಜನಿಸಿದ್ದ. ಅವನ ಅಂಶಗಳೆಂದರೆ ವಿಷ್ಣು ವಾಯು ಅನಂತ ಇವರೊಂದಿಗೆ ಇಂದ್ರ ಅರ್ಜುನನಾಗಿ ಅವತರಿಸಿದ.

ಶಿವನಿಗೆ ಬ್ರಹ್ಮಶಾಪ

ಮದವಜ್ಞಾನಿಮಿತ್ತೇನ ಪತಿತಾ ಇತಿ ತಾನ್ ಸುರಾನ್।
ಮಾರುತಾದೀನ್ ಮೃಷಾವಾದೀರಿತಿ ಬ್ರಹ್ಮಾ ಶಿವಂ ತದಾ ॥ ೧೪೪ ॥

ಶಶಾಪ ಮಾನುಷೇಷ ತ್ವಂ ಕ್ಷಿಪ್ರಂ ಜಾತಃ ಪರಾಭವಮ್।
ಶಕ್ರಾನ್ನರತನೋರ್ಯಾಸಿ ಯಸ್ಮೈ ತ್ವಂ ತು ಮೃಷಾವದಃ ॥ ೧೪೫ ॥

'ತನ್ನನ್ನು ಅಪಮಾನಿಸಿದ ಪ್ರಯುಕ್ತ ಆ ವಾಯು ಮುಂತಾದ ದೇವತೆಗಳು ಸ್ವರ್ಗದಿಂದ ಚ್ಯುತರಾಗಿದ್ದಾರೆ' ಎಂದು ಸುಳ್ಳು ಹೇಳಿದಿ ಎಂದು ಕೋಪದಿಂದ ಬ್ರಹ್ಮ ಶಿವನನ್ನು ಶಪಿಸಿದ, 'ನೀನು ಕೂಡಲೆ ಮನುಷ್ಯನಾಗಿ ಹುಟ್ಟಿ ಮನುಷ್ಯನಾಗಿ ಹುಟ್ಟುವ ಇಂದ್ರನಿಂದ ಪರಾಭವ ಹೊಂದುವಿ, ನೀನು ಅವನ ಮುಂದೆ ಸುಳ್ಳಾಡಿರುವಿ.'

ಮಚ್ಛಪಾತ್ತಾಂ ಚ ದೇವೀನಾಮವಿಚಾರ್ಯ ಮಯಾ ಯತಃ।
ಪತಿಯೋಗವರಂ ಪ್ರಾದಾ ನಾವಾಪ್ಸ್ಯಸಿ ತತಃ ಪ್ರಿಯಾಮ್ ॥ ೧೪೬ ॥

ಮಾನುಷೇಷು ತತಃ ಪಶ್ಚಾದ್ ಭಾರತೀದೇಹನಿರ್ಗತಾಮ್ ।
ಸ್ವಲೋಕೇ ಪ್ರಾಪ್ಸ್ಯಸಿ ಸ್ವಾರ್ಥೇ ವರೋಽಯಂತೇ ಮೃಷಾ ಭವೇತ್ ॥ ೧೪೭ ॥

ನನ್ನಿಂದ ಶಪ್ತರಾದ ದೇವಿಯರಿಗೆ ನೀನು ನನ್ನೊಡನೆ ವಿಚಾರಿಸದೆ ಪತಿಪ್ರಾಪ್ತಿವರ ನೀಡಿರುವಿ. ಅದರಿಂದ ನೀನು ಮನುಷ್ಯ ಜನ್ಮದಲ್ಲಿ ನಿನ್ನ ಸತಿಯನ್ನು ಹೊಂದಲಾರೆ. ಅವಳು ಭಾರತೀದೇಹದಿಂದ ನಿರ್ಗಮಿಸಿದ ಬಳಿಕ ನಿನ್ನ ಲೋಕದಲ್ಲಿ ಅವಳನ್ನು ಹೊಂದುವಿ. ನೀನು ದೇವಿಯರಿಗೆ ಕೊಟ್ಟ ವರ ನಿನ್ನ ವಿಷಯದಲ್ಲಿ ವಿಫಲವಾಗುವುದು.

ನೀನು ಅಶ್ವತ್ಥಾಮನಾಗಿ ಹುಟ್ಟಿದಾಗ ವಿವಾಹವಿಲ್ಲದೆ ಬ್ರಹ್ಮಚಾರಿಯಾಗೇ ಇರುತ್ತಿ. ಇಂದ್ರಾವತಾರನಾದ ಅರ್ಜುನನಿಂದ ಪರಾಭವ ಹೊಂದುತ್ತಿ. ಪಾರ್ವತಿಯು ದ್ರೌಪದೀದೇಹದಿಂದ ನಿನ್ನಿಂದ ವಿಯುಕ್ತಳಾಗಿಯೇ ಇರುವಳು ಎಂದು ಬ್ರಹ್ಮಶಾಪ.

ಏಷಾ ಸಾ ದ್ರೌಪದೀ ನಾಮ ಪಂಚದೇವೀತನುರ್ಭವೇತ್ ।
ಮೃಷಾ ವಾಗ್ ಯೇಷು ತೇ ಪ್ರೋಕ್ತಾ ಮಾರುತಾದ್ಯಾಸ್ತತೇಽಖಿಲಾಃ ॥ ೧೪೮ ॥

ತಾಸಾಂ ಪತಿತ್ವಮಾಪ್ಸ್ಯಂತಿ ಭಾರತ್ಯೈವ ತು ಪಾರ್ವತೀ।
ಸಂಯುಕ್ತಾವ್ಯವಹಾರೇಷು ಪ್ರವರ್ತೇತ ನ ಚಾನ್ಯಥಾ ॥ ೧೪೯ ॥

'ಐದು ಮಂದಿ ದೇವಿಯರ ಅವತಾರ ಭೂತಳಾದ ಈ ಇಂದ್ರಸೇನೆ ದ್ರೌಪದಿ ಎನಿಸಿ ಜನಿಸುವಳು. ನೀನು ಯಾರ ವಿಷಯದಲ್ಲಿ ಸುಳ್ಳಾಡಿದೆಯೋ ಆ ದೇವತೆಗಳು ವಾಯು ಮುಂತಾದವರೆಲ್ಲರೂ ಆ ದೇವಿಯರ ಪತಿಗಳಾಗುವರು. ಪಾರ್ವತಿ ಭಾರತಿಯೊಡನೆ ಕೂಡಿಕೊಂಡು ಬೇರೆ ಎಲ್ಲ ವ್ಯವಹಾರಗಳಲ್ಲಿ ಮಾತ್ರವೇ ಪ್ರವೃತ್ತಿ ಮಾಡುವಳು. ತನ್ನ ಪಾತಿವ್ರತ್ಯಕ್ಕೆ ಭಂಗ ತರುವ ವ್ಯವಹಾರಗಳಲ್ಲಿ ಅಲ್ಲ.

ಏತೇ ಹಿ ಮಾರುತಾದ್ಯಾಸ್ತೇ ದೇವಕಾರ್ಯಾರ್ಥ ಗೌರವಾತ್ ।
ಜಾತಾ ಇತಿ ಶ್ರುತಿಸತ್ತ್ರ ನಾವಜ್ಞಾತೇಽತ್ರಕಾರಣಮ್ ॥ ೧೫೦ ॥

'ಈ ವಾಯು ಮುಂತಾದ ದೇವತೆಗಳು ದೇವಕಾರ್ಯ ರೂಪವಾದ ಫಲದಲ್ಲಿ ಗೌರವ ಬುದ್ಧಿಯಿಂದ ಮಾನವರಾಗಿ ಹುಟ್ಟಿದರೆಂದು ಶ್ರುತಿ ಇದೆ. ಅವರು ಹುಟ್ಟುವುದಕ್ಕೆ ನಿನ್ನನ್ನು ಅಪಮಾನಿಸಿದುದು ಕಾರಣವಲ್ಲ.

ದೀರ್ಘಕಾಲಂ ಮನುಷ್ಯೇಷು ತತಸ್ತ್ವಂ ಸ್ಥಿತಿಮಾಪ್ಸ್ಯಸಿ।
ಇತ್ಯುಕ್ತ್ವಾಪ್ರಯಯೌ ಬ್ರಹ್ಮಾ ಸೋಽಶ್ವತ್ಥಾಮಾ ಶಿವೋಽಭವತ್ ॥ ೧೫೧ ।

ಪಂಚದೇವಿತನುಸ್ತ್ವೇಷಾ ದ್ರೌಪದೀ ನಾಮ ಚಾಭವತ್ ॥ ೧೫೨ ॥

'ಅದರಿಂದ ದೀರ್ಘಕಾಲ ನೀನು ಮನುಷ್ಯನಾಗಿ ಇರುತ್ತಿ.' ಹೀಗೆ ಹೇಳಿ ಬ್ರಹ್ಮ ಹೊರಟುಹೋದ. ಬಳಿಕ ಶಿವ ಅಶ್ವತ್ಥಾಮನಾಗಿ ಜನಿಸಿದ. ಪಂಚದೇವಿಯರ ಅವತಾರಭೂತಳಾದ ಇಂದ್ರಸೇನೆ ದ್ರೌಪದಿಯಾಗಿ ಜನಿಸಿದಳು.

ಭಾರತಿಯೊಂದಿಗೆ ಶಚೀ ಮುಂತಾದವರಿಗೆ ವಿಪ್ರಕನ್ಯೆ ಇಂದ್ರಸೇನೆ ದ್ರೌಪದಿ ಎಂದು ಮೂರು ಜನ್ಮಗಳು ಬಂದುದು ಏಕದೇಹದಿಂದ ಬ್ರಹ್ಮನನ್ನು ವಂಚಿಸಿದ್ದರ ಫಲ. ಭಾರತಿಯನ್ನು ಬಿಟ್ಟು ಬೇರೆಯಾಗಿ ಸ್ವಪತಿ ಪ್ರಾಪ್ತಿಗೋಸ್ಕರ ನಾಲ್ಕನೆ ಜನ್ಮವೂ ಅವರಿಗೆ ಉಂಟು. ಶ್ಯಾಮಲೆ ದೇವಕಿಯಾಗಿ, ಶಚಿ ಚಿತ್ರಾಂಗದೆಯಾಗಿ ಮತ್ತು ಉಷೆ ಜರಾಸಂಧನ ಕನ್ಯೆಯಾಗಿ – ಹೀಗೆ ಮೂವರೂ ನಾಲ್ಕನೆ ಬಾರಿ ಜನಿಸಿದರು. ಬೇರೆಬೇರೆ ಶರೀರದಿಂದ ಬ್ರಹ್ಮನ ಮುಂದೆ ವಿಲಾಸ ತೋರಿದ್ದರ ಫಲ ಈ ನಾಲ್ಕನೆ ಜನ್ಮ. 'ತತ್ರಾನ್ಯಗಾಶ್ಚಭವತ' ಎಂದು ಬ್ರಹ್ಮ ನೀಡಿದ ಪರಪುರುಷಗಾಮಿತ್ವ ಶಾಪ ಏಕದೇಹಜನ್ಮದಲ್ಲಿ ಅನುಭೂತವಾಗಿದೆ. ಪಾರ್ವತಿಗೆ ಪ್ರತ್ಯೇಕ ಜನ್ಮವಾಗದಿದ್ದುದು 'ಭಾರತ್ಯೈವ ತು ಪಾರ್ವತೀ' 'ಪಾರ್ವತಿ ಭಾರತಿಯ ಜೊತೆಗೇ ಹುಟ್ಟಬೇಕು' ಎಂದು ಬ್ರಹ್ಮಶಾಪವಿದ್ದುದರಿಂದ ಬ್ರಹ್ಮನಿತ್ತ ಪರಪುರುಷಗಾಮಿತ್ವ ಶಾಪ ಮತ್ತು ಶಿವನಿತ್ತ ಸ್ವಪತಿ ಪ್ರಾಪ್ತಿ ವರಗಳು ಸಾಮಾನ್ಯ ವಚನ ರೂಪದವುಗಳಾದ್ದರಿಂದ ಪರಸ್ಪರ ವಿರೋಧವಿಲ್ಲದೆ ಎಲ್ಲಿಯಾದರೂ ಪರ್ಯವಸಾನ ಹೊಂದ ಬಲ್ಲುವು. ಅದರಿಂದ ವಿಪ್ರಕನ್ಯಾಜನ್ಮದಲ್ಲಿ ಸ್ವಪತಿಪ್ರಾಪ್ತಿ ಇಲ್ಲ. ಇಂದ್ರಸೇನಾ ಜನ್ಮದಲ್ಲಿ ಪರಪುರುಷಗಾಮಿತ್ರ. ದ್ರೌಪದೀಜನ್ಮದಲ್ಲಿ ಸ್ವಪತಿಪ್ರಾಪ್ತಿಯೂ ಉಂಟು. ಪರಪುರುಷಗಾಮಿತ್ವವೂ ಉಂಟು – ಹೀಗೆ ವರದರಾಜೀಯ ಹೇಳಿದೆ.[1]

---

1. ಏವಂಚ ಭಾರತೀಸಂಸೃಷ್ಟತಯಾ ವಿಪ್ರಕನ್ಯೇಂದ್ರಸೇನಾದ್ರೌಪದೀಜನ್ಮತ್ರಯಮೇಕದೇಹಕೃತ ವಂಚನಫಲಂ। ಭಾರತ್ಯ ಸಂಸೃಷ್ಟತಯಾ ಪೃಥಕ್ ಸ್ವಪತಿ ಪ್ರಾಪ್ತ್ಯರ್ಥಂ ದೇವಕ್ಯಾದಿರೂಪೇಣ ಜನ್ಮ ಚತುರ್ಥಂ ಪೃಥಗ್ ದೇಹೇಕೃತೇ ವಿಲಾಸ ದರ್ಶನ ಫಲಂ। ತತ್ರಾನ್ಯಗಾಮಿತ್ವಶಾಪ ಏಕದೇಹತ್ವೇನಾನುಭೂತಃ। ತತ್ರಾನ್ಯಗಾಶ್ಚ ಭವತೇತ್ಯುಕ್ತತ್ವಾತ್। ಪಾರ್ವತ್ಯಾಃ ಪೃಥಗ್ ಜನ್ಮಾಭಾವಸ್ತು ಭಾರತ್ಯೈವ ತು ಪಾರ್ವತೀತಿ ಬ್ರಹ್ಮವಚನ ಬಲಾತ್। ಬ್ರಹ್ಮಶಿವಾಭ್ಯಾಂ ದತ್ತಯೋಃ ವರಶಾಪಯೋಃ ಪರಪುರುಷಗಾಮಿತ್ವ ಸ್ವಭರ್ತೃ ಗಾಮಿತ್ವರೂಪಯೋಃ ಸಾಮಾನ್ಯೋಕ್ತ್ಯಾ ದತ್ತಯೋಃ ಕ್ವಚಿತ್ ಪರ್ಯವಸಾನೋಪಪತ್ತೇಃ ವಿಪ್ರ ಕನ್ಯಾಜನ್ಮನಿ ಸ್ವಪರಪುರುಷಸಂಯೋಗಾಭಾವಃ। ಇಂದ್ರಸೇನಾರೂಪೇ ಪರಪುರುಷಗಾಮಿತ್ವಂ ಮಾತ್ರಂ। ದ್ರೌಪದೀರೂಪೇ ಸ್ವಪರ ಪುರುಷೋಭಯ ಸಂಯೋಗ ಇತಿ ಸರ್ವಮವದಾತಂ। –ವರದರಾಜೀಯ

ದೇವಕಿ ಎಂದು ಶ್ಯಾಮಲೆಗೆ ನಾಲ್ಕನೆ ಜನ್ಮ. ಚಿತ್ರಾಂಗದೆ ಎಂದು ಶಚಿಗೆ. ಜರಾಸಂಧಕನ್ಯೆ ಎಂದು ಉಷೆಗೆ. ಹೀಗೆ ಪಾರ್ವತಿಗೂ ನಾಲ್ಕನೆ ಜನ್ಮವಿದೆ ಎಂದು ತಿಳಿಯಬೇಕು. ಇಲ್ಲದಿದ್ದರೆ ಅಶ್ವತ್ಥಾಮನಿಗೆ ಪತ್ನೀವಿಯೋಗ ಶಾಪವಿಲ್ಲವಾದೀತು. ಏಕೆಂದರೆ ಪತ್ನಿ ಇದ್ದು ಅವಳ ಸಮಾಗಮವಾಗದಿರುವುದೇ ಪತ್ನೀ ವಿಯೋಗವೆನಿಸುತ್ತದೆ. ಪತಿ ಪ್ರಾಪ್ತಿ ರೂಪವಾದ ಎರಡು ವರಗಳಿಗೆ ದ್ರೌಪದೀ ದೇಹದಲ್ಲಿಯೂ ದೇವಕೀ ಮುಂತಾದ ಪ್ರತ್ಯೇಕ ಅವತಾರದಲ್ಲಿಯೂ ಫಲಕಂಡಿದೆ ಎಂದು ತಿಳಿಯಬೇಕು – ಹೀಗೆ ಜನಾರ್ದನೀಯ ಹೇಳಿದೆ.[1]

ಬ್ರಹ್ಮ ಶಾಪಕ್ಕೂ ರುದ್ರವರಕ್ಕೂ ವಿರೋಧವಿಲ್ಲದಂತೆ ಪರ್ಯವಸಾನ ಮಾಡುವುದಾದರೆ ರುದ್ರ ವರದಿಂದ ಬ್ರಹ್ಮ ಏಕೆ ಕುಪಿತನಾದ? ಎಂಬ ಪ್ರಶ್ನೆ ಸಹಜ. ದ್ರೌಪದೀ ಜನ್ಮದಲ್ಲಿ ಸ್ವಪತಿ ಪ್ರಾಪ್ತಿರೂಪವಾದ ಶಿವವರಕ್ಕೂ ಅವಕಾಶ. ಪರಪುರುಷ ಸಂಗರೂಪವಾದ ಬ್ರಹ್ಮಶಾಪಕ್ಕೂ ಅವಕಾಶವೆನ್ನುವುದಾದರೆ ಅವುಗಳಿಗೆ ವಿರೋಧವೆ ಇಲ್ಲವೆಂದಂತಾಯಿತು. ವಸ್ತುತಃ ಏಕದೇಹದಲ್ಲಿ ಒಬ್ಬಳಿಗೆ ಪತಿ ಪ್ರಾಪ್ತಿ ಎಂಬುದು ಉಳಿದವರಿಗೆ ಪರಪುರುಷ ಸಂಯೋಗವಿಲ್ಲದೆ ಶಕ್ಯ ಇಲ್ಲದ ಪ್ರಯುಕ್ತ ಶಿವನ ವರ ಬ್ರಹ್ಮಶಾಪಕ್ಕೆ ಅನುಕೂಲವೆ ಆದಂತಾಯಿತು. ಅದರಿಂದ ಬ್ರಹ್ಮನಿಗೆ ಕೋಪವೇಕೆ ಬಂದಿತೆನ್ನುವ ಪ್ರಶ್ನೆ ಇನ್ನೂ ದೃಢವಾಗುತ್ತದೆ. ಇದಕ್ಕೆ ತಾಮ್ರಪರ್ಣೀಯದಲ್ಲಿ ಹೀಗೆ ಸಮಾಧಾನ – ಮೂರು ಜನ್ಮಗಳಲ್ಲಿ ಏಕದೇಹತ್ವ ಮನುಷ್ಯತ್ವಗಳೊಂದಿಗೆ ಪತಿವಿಯೋಗವೂ ಬ್ರಹ್ಮಶಾಪದಲ್ಲಿ ಸೇರಿತ್ತು ಎಂದಿಟ್ಟುಕೊಳ್ಳಬೇಕು. ಅದಕ್ಕೆ ಪತಿಪ್ರಾಪ್ತಿರೂಪವಾದ ವರ ವಿರೋಧಿಯಾಗುತ್ತದೆ.

ದ್ರೌಪದೀ ದೇಹದಲ್ಲಿ ವಾಯು ಮುಂತಾದವರು ಅವಳಿಗೆ ಪತಿಗಳಾಗುವರು ಎಂದು ಬ್ರಹ್ಮನು ಹೇಳಿದ್ದು ಶಿವನಿಗೆ ಹೇಗೆ ಅನಿಷ್ಟ? ಶಿವ ನೀಡಿದ ಪತಿಪ್ರಾಪ್ತಿಗೆ ಅದು ಅನುಕೂಲವೆ ಆಗಿದೆ ತಾನೆ? ಎಂದರೆ ಈ ಪ್ರಶ್ನೆಗೂ ತಾಮ್ರಪರ್ಣೀಯದಲ್ಲಿ ಹೀಗೆ ಸಮಾಧಾನ – ಶಿವ ನಾಲ್ವರು ದೇವಿಯರಿಗೆ

---

1. ದೇವಕೀತಿ ಶ್ಯಾಮಲಾಯಾಶ್ಚತುರ್ಥಂ ಜನ್ಮ। ಚಿತ್ರಾಂಗದೇತಿ ಶಚ್ಯಾಃ। ಜರಾಸಂಧ ತನ್ಯಾ ರೂಪಮುಷಾಯಾಃ। ಏವಂ ಪಾರ್ವತ್ಯಾ ಅಪಿ ಚತುರ್ಥಂ ಜನ್ಮಸ್ತೀತಿ ಬೋಧ್ಯಂ। ಅನ್ಯಥಾ ದ್ರೌಪ್ಯಾಃ ಸ್ತ್ರೀವಿಯೋಗಲಕ್ಷಣಶಾಪೋ ನ ಸ್ಯಾತ್। ಸತ್ಯಾಂ ಸ್ತ್ರಿಯಾಂ ತದಲಾಭಸ್ಯೈವ ಸ್ತ್ರೀವಿಯೋಗತ್ವಾತ್। ಪತಿಯೋಗ ಪ್ರಾಪ್ತಿ ರೂಪವರದ್ವಯಸ್ಯ ದ್ರೌಪದೀದೇಹೇ ದೇವತ್ವಾದಿಶರೀರಾವತಾರೇ ಚ ಫಲಂ ಜ್ಞೇಯಂ। – ಜನಾರ್ದನೀಯ

ಬೇರೆಬೇರೆ ಶರೀರಗಳಲ್ಲಿ ಪತಿಪ್ರಾಪ್ತಿಯಾಗಲಿ ಎಂದೇ ವರ ನೀಡಿದ್ದ. ಏಕದೇಹದಲ್ಲಿ ಅಲ್ಲ. ಬ್ರಹ್ಮ ಏಕದೇಹದಲ್ಲಿ ಪತಿಪ್ರಾಪ್ತಿಯಾಗಲಿ ಎನ್ನುತ್ತಿದ್ದಾನೆ. ಅದು ಶಿವನಿಗೆ ಅನಿಷ್ಟ ಎಂದು.[1]

ವಾದಿರಾಜೀಯ ಪ್ರಕಾರ ವಿಪ್ರಕನ್ಯಾ, ನಾಲಾಯನಿ, ಇಂದ್ರಸೇನಾ ಎಂಬ ಮೂರು ಜನ್ಮಗಳಲ್ಲಿ ಕೇವಲ ಏಕದೇಹತ್ವ ಶಾಪವಿದ್ದಿತ್ತು. ದ್ರೌಪದಿ ನಾಲ್ಕನೆ ಜನ್ಮ. ಅದರಲ್ಲಿ ಕೇವಲ ಪರಪುರುಷ ಸಂಗ ಶಾಪ. ಅದನ್ನು ಶಿವವರ ಸುಳ್ಳಾಗಿಸಿದ. ಏಕೆಂದರೆ ದ್ರೌಪದಿಗೆ ಐವರು ಪತಿಗಳನ್ನು ಶಿವ ನೀಡಿದ್ದಾನೆ. ಏಕದೇಹದಲ್ಲಿ ಒಬ್ಬಳಿಗೆ ಪತಿಪ್ರಾಪ್ತಿಯಾದರೆ ಉಳಿದವರಿಗೆ ಪರಪುರುಷ ಸಂಗವಾಗುವುದಿಲ್ಲವೆ ಎಂಬುದನ್ನು ನಿರ್ಣಯದಲ್ಲಿಯೆ ಮುಂದೆ ಪರಿಹಾರ ಮಾಡಿದ್ದಾರೆ. ಶಿವ ಬೇರೆ ಬೇರೆ ಶರೀರಗಳಲ್ಲಿ ಪತಿಪ್ರಾಪ್ತಿಯಾಗಲಿ ಎಂದು ವರ ನೀಡಲೆ ಇಲ್ಲ. ಒಂದೇ ದೇಹವಾದರೂ ಅದರಲ್ಲಿ ಐವರು ದೇವಿಯರಿರುವುದರಿಂದಲೆ ಪಂಚಪತಿತ್ವ ದೋಷವಾಗುವುದಿಲ್ಲ ಎಂದು ಶಿವ ಇಂದ್ರಸೇನೆಗೆ ಸಂತೈಸುವ ಅಂಶ ಲಕ್ಷಾಲಂಕಾರದಲ್ಲಿ ಸ್ಪಷ್ಟವಿದೆ.

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ।
ಉಕ್ತೋಽರ್ಥಃ ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ ॥ ೧೫೩ ॥

ನಾವು ಹೇಳಿದ ಈ ಪ್ರಮೇಯವೆಲ್ಲವೂ ವೇದಗಳಲ್ಲಿ ಪುರಾಣಗಳಲ್ಲಿ ಮತ್ತು ಮಹಾಭಾರತದಲ್ಲಿ ತಿಳಿದು ಬರುತ್ತದೆ. ಹಿಂದೆ ಹೇಳಿದ ಪ್ರಮೇಯಗಳೂ ಹಾಗೆಯೇ.

ಮಹಾಭಾರತದಲ್ಲಿ (ಆದಿ 184-14) ವೇದವ್ಯಾಸರು ದ್ರುಪದನಿಗೆ ಹೀಗೆ ಹೇಳುತ್ತಾರೆ- 'ದ್ರುಪದ, ಭಾರತೀದೇವಿಯು ಪಂಚಪತಿಪತ್ನಿತ್ವವನ್ನು ಹೊಂದಿಯೂ ತನ್ನ ಪಾತಿವ್ರತ್ಯ ಉಳಿಸಿಕೊಳ್ಳುವುದಕ್ಕಾಗಿ ಒಂದು ಶರೀರದಲ್ಲಿ ಎಲ್ಲ ದೇವಿಯರೂ ಸೇರಿ ಐದು

---

1. ನನು ಚತುರ್ಮುಖ ಶಾಪಾನುಸಾರೇಣೇಂದ್ರಸೇನಾದೇಹೇಽನ್ಯಗಾತ್ವಾಸ್ಯ ಪ್ರಾಪ್ತತ್ವಾತ್ ತದನಂತರ ಭಾವಿ ರುದ್ರವರಸ್ಯ ಕಥಂ ತಚ್ಛಾಪವಿಘಟಕತ್ವಂ? ಯೇನ ಮಚ್ಛಪಾನಾಂ ಇತ್ಯಾದಿ ಘಟತೇ। ಸ್ವಪತಿವಿಯೋಗಸ್ಯ ಬ್ರಹ್ಮಣಾನಾದಿಷ್ಟತ್ವಾದಿತಿ ಚೇನ್ನ। ಜನ್ಮತ್ರಯೇ ಏಕದೇಹಸ್ಥಿತತಯಾ ಮಾನುಷ್ಯಪತಿ ವಿಯೋಗಾದೇಶಾಭಿಪ್ರಾಯಕತ್ವಾತ್। ಅನ್ಯಥೈಕದೇಹಸ್ಥಿತಾನಾಂ ಮಧ್ಯೇ ಏಕಸ್ಯಾ ಭರ್ತೃಸಂಯೋಗ ಸ್ಯಾನ್ಯಾಸಾಮನ್ಯಗಾಮಿತ್ವಂ ವಿನಾನುಪಪತ್ತೇಃ ಏಕಸ್ಮಿನ್ ದೇಹೇಽನ್ಯಗಾತ್ವಂ ಸ್ಯಾದಿತಿ ಸ್ಪೋಕ್ತಿರ್ವಂಧ್ಯಾ ಸ್ಯಾತ್। ದ್ರೌಪದೀದೇಹೇ ತು ವಿಶೇಷಂ ವಕ್ಷ್ಯತೀತಿ ಜ್ಞೇಯಂ। ಮೃಷೇತಿ। ನ ಚ ನೇದಂ ರುದ್ರಸ್ಯಾನಿಷ್ಟಂ। ಸ್ವಪತಿಸಂಯೋಗ ವರಾಪ್ರತಿಬಂಧಕತ್ವಾದಿತಿ ವಾಚ್ಯಂ। ವಿವಿಕ್ತ ದೇಹೇಷು ಸ್ವಪತಿಸಂಯೋಗವರಸ್ಯ ರುದ್ರದತ್ತತ್ವೇನ ಪ್ರತಿಬಂಧಕತ್ವಾತ್। ಅತ ಏವ ಚಿತ್ವಾರಃ ಪತಯಃ ಪೃಥಗಿತ್ಯಸ್ಯ ಪೃಥಗ್ದೇಹೇಪೀತ್ಯರ್ಥಮಾಹುಃ। ಅತ ಏವ ರುದ್ರವರ ವಿರೋಧಿತಯಾ ಸೇಂದ್ರಸೇನಾ ದ್ರೌಪದೀನಾಮ್ನಾ ಪಂಚದೇವೀತನುರ್ಭವೇದಿತಿ ಜ್ಞೇಯಂ। -ತಾಮ್ರಪರ್ಣೀಯ

ಮಂದಿಯಾಗುವಂತೆ ಪಾರ್ವತಿಯ ಜೊತೆಗಿದ್ದು ಕೃಷ್ಣೆಯ ರೂಪದಿಂದ ನಿನ್ನ ಮಗಳಾಗಿ ಆವಿರ್ಭವಿಸಿದ್ದಾಳೆ. ಲೋಕದ ನಿಂದೆಗೆ ಪಾತ್ರಳಾಗದಂಥ ದೇವಸ್ವರೂಪಿಣಿ ಇವಳು'.. ಇದರ ವಿವರಣೆ ಮಾಡುತ್ತ ದ್ರೌಪದಿಯ ನಿರ್ದೋಷತ್ವವನ್ನು ಸಮರ್ಥಿಸುವುದಕ್ಕಾಗಿ ಶ್ರೀಮದಾಚಾರ್ಯರು ಇಲ್ಲಿ ಪಂಚದ್ರೌಪದೀಕಥೆಯನ್ನು ವಿಸ್ತಾರವಾಗಿ ನಿರೂಪಿಸಿದ್ದಾರೆ ಎನ್ನುತ್ತದೆ ವಾದಿರಾಜೀಯ.[1]

ಮುಮುದುಃ ಸರ್ವಪಾಂಚಾಲಾ ಜಾತಯೋಃ ಸುತಯೋಸ್ತಯೋಃ ॥ ೧೫೪ ॥

ಮಾನುಷಾನ್ನೋಪಭೋಗೇನ ಸಂಸರ್ಗಾನ್ಮಾನುಷೇಷು ಚ।
ಮನುಷ್ಯಪುತ್ರತಾಯಾಶ್ಚ ಭಾವೋ ಮಾನುಷ ಏತಯೋಃ।
ಅಭೂನ್ನಿತಿತರಾಮಾಸೀತ್ ತದಯೋನಿತ್ವಹೇತುತಃ ॥ ೧೫೫ ॥

ದ್ರುಪದನಿಗೆ ಆ ಇಬ್ಬರು ಮಕ್ಕಳು ಹುಟ್ಟಿದಾಗ ಪಾಂಚಾಲದೇಶದ ಎಲ್ಲ ಜನರೂ ಸಂತಸಪಟ್ಟರು. ಆ ಮಕ್ಕಳು ಮನುಷ್ಯರ ಮಕ್ಕಳಾದುದರಿಂದ, ಮನುಷ್ಯರ ಅನ್ನ ಉಂಡುದರಿಂದ ಮತ್ತು ಮನುಷ್ಯರ ಸಹವಾಸ ಮಾಡಿದ್ದರಿಂದ ಅವರಲ್ಲಿ ಸ್ವಲ್ಪಮಟ್ಟಿಗೆ ಮನುಷ್ಯ ಸ್ವಭಾವ ಕಂಡು ಬಂದಿತು. ಹೆಚ್ಚಾಗಿ ಅಲ್ಲ. ಏಕೆಂದರೆ ಅವರು ಮನುಷ್ಯ ಯೋನಿಯಲ್ಲಿ ಹುಟ್ಟಿರಲಿಲ್ಲ.

> ಧೃಷ್ಟದ್ಯುಮ್ನ ಅಗ್ನಿಕುಂಡದಿಂದ, ದ್ರೌಪದಿ ಯಜ್ಞವೇದಿಕೆಯಿಂದ ಪ್ರಾದುರ್ಭವಿಸಿದ ಪ್ರಯುಕ್ತ ಅವರು ಅಯೋನಿಜರು. ಮನುಷ್ಯ ಯೋನಿಜರಲ್ಲ. ಮನುಷ್ಯರಲ್ಲ. ಬ್ರಹ್ಮನ ಶಾಪದಿಂದ ದ್ರೌಪದಿ ಮನುಷ್ಯಳಾಗಿ ಹುಟ್ಟಬೇಕಾಗಿತ್ತು. ಇದಕ್ಕೆ ನಿರ್ಣಯ ಕೊಡುವ ಸಮಾಧಾನ ಹೀಗೆ - ಮನುಷ್ಯ ಯೋನಿಯಲ್ಲಿ ಜನಿಸದಿದ್ದರೂ ಮನುಷ್ಯರಾದ

---

1. 'ದ್ರುಪದೈಷಾ ತತೋ ಜಜ್ಞೇ ಸುತಾ ತೇ ದೇವರೂಪಿಣೀ। ಪಂಚಾನಾಂ ಸಹಿತಾ ಕೃಷ್ಣಾರೂಪಾ ಪಾರ್ವತ್ಯನಿಂದಿತಾ' ಇತ್ಯಾದಿ ಮೂಲ ಭಾರತ ವಾಕ್ಯಾರ್ಥ ಪ್ರಪಂಚನಾಯ ದ್ರೌಪದ್ಯಾ ನಿರವದ್ಯತ್ವ ಸಮರ್ಥನಾಯ ಚ ಸವಿಸ್ತರಂ ಪಂಚದ್ರೌಪದೀಕಥಾನಿರೂಪಣಂ ಕೃತಮಾಚಾರ್ಯೈರಿತಿ ಜ್ಞೇಯಂ। -ವಾದಿರಾಜೀಯ

ತತಸ್ತದರ್ಥಂ। ಅಪರಿಹಾರ್ಯವರಪ್ರಾಪ್ತಪಂಚಪತಿಸಂಬಂಧೇಽಪಿ ಸ್ವಪಾತಿವ್ರತ್ಯಾಪ್ರಚ್ಯುತ್ಯರ್ಥ ಮಿತ್ಯರ್ಥಃ। ಪಂಚನಾಂ ಪಂಚಭಿಃ ಆತ್ಮನಾ ಸಹ ಪಂಚಭಿರ್ದೇವೀಭಿಃ ಸಹಿತಾ ಸತೀ। ಪಾರ್ವತೀ ಗಂಗಾಸಂಬಂಧೇನ ಗಂಗಾಶಬ್ದವಾಚ್ಯತೀರವತ್ ಪಾರ್ವತೀಸಂಬಂಧೇನ ಪಾರ್ವತೀಶಬ್ದಾಚ್ಯಾ। ದೇವೀಚತುಷ್ಟಯಸ್ಯ ಪ್ರಸಿದ್ಧತ್ವಾತ್ ಪಂಚಮದೇವಿಸ್ಫೋರಣಾಯೇದಮುಕ್ತಂ। ಅನಿಂದಿತಾ ಪಂಚದೇವೀಸಾಹಿತ್ಯೇನ ಜನನಾತ್ ಪಂಚಪತಿತ್ವಪ್ರಾಪ್ತನಿಂದಾರಹಿತಾ ಕೃಷ್ಣಾರೂಪಾ ದ್ರೌಪದೀರೂಪಾ ದೇವರೂಪಿಣೀ ಏಷಾ ತೇ ಸುತಾ ಯಜ್ಞವೇದ್ಯಾಂ ಜಜ್ಞೇ -ಭಾರತಾರ್ಥ

ದ್ರುಪದಪಾರ್ವತಿಯರ ಮಗಳೆನಿಸಿದರು. ಮನುಷ್ಯರಿಗೆ ಯೋಗ್ಯವಾದ ಅನ್ನ ಉಂಡಳು. ಮತ್ತು ಮನುಷ್ಯರ ಸಹವಾಸ ಮಾಡಿದಳು. ಅದರಿಂದ ಸ್ವಲ್ಪ ಮಾನವ ಸ್ವಭಾವ ಕಂಡುಬಂದಿತು. ಬೇರೆ ದೇವತೆಗಳಂತೆ ಬಹಳವಾಗಿ ಅಲ್ಲ. ಆದರೂ ಅಷ್ಟರಿಂದಲೆ ಬ್ರಹ್ಮನ ಶಾಪ ಫಲಿಸಿತು ಎನ್ನುತ್ತದೆ ತಾಮ್ರಪರ್ಣೀಯ.[1]

ಯಾಜೋಪಯಾಜೌ ತಾವೇವ ದಯಿತಾ ದ್ರುಪದಸ್ಯ ಚ।
ಮಾತೃಸ್ನೇಹಾರ್ಥಮನಯೋರ್ಯಾಚೇ ದದತುಶ್ಚ ತೌ ॥ ೧೫೬ ॥

ದ್ರುಪದರಾಜನ ಪತ್ನಿ ಆ ಮಕ್ಕಳಿಗೆ ತನ್ನಲ್ಲಿ ಮಾತೆ ಎಂಬ ಪ್ರೀತಿ ಉಂಟಾಗುವುದಕ್ಕಾಗಿ ಯಾಜ ಉಪಯಾಜರನ್ನೇ ಬೇಡಿದಳು. ಅವರು ಆ ಅಭೀಷ್ಟವನ್ನು ನೀಡಿದರು.

ಜಾತಮಾತ್ಮನಿಹಂತಾರಂ ಭಾರದ್ವಾಜೋ ನಿಶಮ್ಯ ತಮ್ ।
ಯಶೋಽರ್ಥಮಸ್ತ್ರಾಣೆ ದದಾವಗ್ರಹೀತ್ ಸೋಽಪಿ ಲೋಭತಃ।
ರಾಮಾಸ್ತ್ರಾಣಾಂ ದುರ್ಲಭತ್ವಾತ್ ತ್ರಿದಶೇಷ್ವಪಿ ವೀರ್ಯವಾನ್ ॥ ೧೫೭ ॥

ದ್ರೋಣರು ತನ್ನನ್ನು ಕೊಲ್ಲುವುದಕ್ಕಾಗಿ ಜನಿಸಿದವ ಧೃಷ್ಟದ್ಯುಮ್ನ ಎಂದು ಕೇಳಿಯೂ ಕೀರ್ತಿಯ ಸಲುವಾಗಿ ಅವನಿಗೆ ಅಸ್ತ್ರಗಳನ್ನು ಉಪದೇಶಿಸಿದರು. ಅವನು ಸ್ವತಃ ವೀರ್ಯಶಾಲಿಯಾಗಿದ್ದರೂ ಲೋಭದಿಂದ ಆ ಅಸ್ತ್ರಗಳನ್ನು ಸ್ವೀಕರಿಸಿದ. ಏಕೆಂದರೆ ಪರಶುರಾಮರ ಆ ಅಸ್ತ್ರಗಳು ದೇವತೆಗಳಲ್ಲಿಯೂ ದುರ್ಲಭ.

ಭೀಮಾರ್ಜುನ ದ್ವಿಗ್ವಿಜಯ

ಭೀಮಾರ್ಜುನಾಭ್ಯಾಂ ಬದ್ಧಂ ತು ಶ್ರುತ್ವಾಪಾಂಚಾಲಭೂಪತಿಮ್ ।
ಪ್ರಾಹಿಣೋತ್ ಕೃತವರ್ಮಾಣಂ ಪಾಂಡವಾನಾಂ ಜನಾರ್ದನಃ ॥ ೧೫೮ ॥

ಪಾಂಡವೇಷ್ವತುಲಾಂ ಪ್ರೀತಿಂ ಲೋಕೇ ಖ್ಯಾಪಯಿತುಂ ಪ್ರಭುಃ ॥ ೧೫೯ ॥

ದ್ರುಪದರಾಜ ಭೀಮಾರ್ಜುನರಿಂದ ಬಂಧಿತನಾದುದನ್ನು ಕೇಳಿ ಪ್ರಭು ಶ್ರೀಕೃಷ್ಣ ಪಾಂಡವರ ಬಳಿಗೆ ಕೃತವರ್ಮನನ್ನು ಕಳಿಸಿಕೊಟ್ಟ. ಇದು ತನಗೆ ಪಾಂಡವರಲ್ಲಿ ಅನುಪಮವಾದ ಪ್ರೀತಿ ಇದೆ ಎಂಬುದನ್ನು ಲೋಕದಲ್ಲಿ ಖ್ಯಾತವಾಗುವಂತೆ ಮಾಡುವುದಕ್ಕಾಗಿ.

---

1. ನನು ದ್ರೌಪದ್ಯಾ ವೇದಿಮಧ್ಯಾದುತ್ಥಿತತ್ವಾತ್ ಬ್ರಹ್ಮಶಾಪ ಮೋಘತಾ। ಕಥಂ ಕೃಷ್ಣಾ ಧೃಷ್ಟದ್ಯುಮ್ನಯೋಃ ಮನುಷ್ಯತ್ವವ್ಯವಹಾರ ಇತ್ಯತ ಆಹ ಮಾನುಷೇತಿ। -ತಾಮ್ರಪರ್ಣೀಯ

ಪಾಂಡವರನ್ನು ತನ್ನ ಪರವಾಗಿ ಅಭಿನಂದಿಸಲು ಶ್ರೀಕೃಷ್ಣ ಕೃತವರ್ಮನನ್ನು ಕಳಿಸಿಕೊಟ್ಟ.

ಸಮ್ಮಾನ್ಯ ಪಾಂಡವಾನ್ ಸೋಽಪಿ ಶೂರಾನುಜ ಸುತಾಸುತಃ।
ತೈರ್ಮಾನಿತಃ ಕೃಷ್ಣಭಕ್ತ್ಯಾ ಭ್ರಾತೃತ್ವಾಚ್ಚ ಹರಿಂ ಯಯೌ ॥ ೧೬೦ ॥

ಕೃತವರ್ಮ ಪಾಂಡವರನ್ನು ಸನ್ಮಾನಿಸಿದ. ಅವನು ಶೂರಸೇನ ರಾಜನ ತಮ್ಮನ ಮಗಳ ಮಗ. ಪಾಂಡವರಿಗೆ ಸೋದರ. ಈ ಕಾರಣದಿಂದಲೂ ಕೃಷ್ಣನ ಮೇಲಿನ ಭಕ್ತಿಭಾವದಿಂದ ಪಾಂಡವರು ಅವನನ್ನು ಸತ್ಕರಿಸಿದರು. ಬಳಿಕ ಅವನು ಕೃಷ್ಣನ ಬಳಿಗೆ ಹಿಂತಿರುಗಿದ.

ಶೂರನ ತಮ್ಮನ ಮಗಳು ಕೃತವರ್ಮನ ತಾಯಿ. ಶೂರನ ಮಗಳು ಕುಂತಿ ಪಾಂಡವರ ತಾಯಿ. ಹೀಗಾಗಿ ಅಕ್ಕತಂಗಿಯರ ಮಕ್ಕಳಾದ್ದರಿಂದ ಪಾಂಡವರೂ ಕೃತವರ್ಮನೂ ಸೋದರರಾದರು.

ತತಃ ಪ್ರಭೃತಿ ಸಂತ್ಯಜ್ಯ ದೇವಪಕ್ಷಾ ಜರಾಸುತಮ್।
ಪಾಂಡವಾನಾಶ್ರಿತಾ ಭೂಪಾ ಜ್ಞಾತ್ವಾ ಭೈಮಾರ್ಜುನಂ ಬಲಮ್।
ವಿಶೇಷತಶ್ಚ ಕೃಷ್ಣಸ್ಯ ವಿಜ್ಞಾಯ ಸ್ನೇಹಮೇಷು ಹಿ ॥ ೧೬೧ ॥
ಪರಾಜಿತಾಶ್ಚ ಬಹುಶಃ ಕೃಷ್ಣೇನಾಚಿಂತ್ಯ ಕರ್ಮಣಾ ॥ ೧೬೨ ॥
ಪ್ರತಾಪಾದೇವ ತೇ ಪೂರ್ವಂ ಜರಾಸಂಧವಶಂ ಗತಾಃ ॥ ೧೬೩ ॥

ನ ಸ್ನೇಹಾತ್ ತದ್ ಬಲಂ ಜ್ಞಾತ್ವಾಪಾರ್ಥಾನಾಂ ಕೇಶವಸ್ಯ ಚ।
ಜನ್ಮಾಂತರಾಭ್ಯಾಸವಶಾತ್ ಸ್ನಿಗ್ಧಾಃಕೃಷ್ಣೇ ಚ ಪಾಂಡುಷ
ಜರಾಸಂಧ ಭಯಂ ತ್ಯಕ್ತ್ವಾ ತಾನೇವ ಚ ಸಮಾಶ್ರಿತಾಃ ॥ ೧೬೪ ॥

ಅಂದಿನಿಂದ ದೇವತೆಗಳ ಪಕ್ಷದವರಾದ ರಾಜರುಗಳು ಭೀಮಾರ್ಜುನರ ಬಲವನ್ನು ಕಂಡು ಮತ್ತು ವಿಶೇಷವಾಗಿ ಪಾಂಡವರಲ್ಲಿ ಕೃಷ್ಣನಿಗೆ ಪ್ರೀತಿ ಇರುವುದನ್ನು ಕಂಡು ಜರಾಸಂಧನನ್ನು ತೊರೆದು ಪಾಂಡವರನ್ನು ಆಶ್ರಯಿಸಿದರು. ಅವರೆಲ್ಲರೂ ಹಿಂದೆ ಅನೇಕ ಬಾರಿ ಅಚಿಂತ್ಯಕಾರ್ಯಗಳನ್ನು ಮಾಡುವ ಕೃಷ್ಣನಿಂದ ಪರಾಜಿತರಾಗಿದ್ದರು. ಆದರೂ ಜರಾಸಂಧನ ಪ್ರತಾಪಕ್ಕೆ ಹೆದರಿಯೇ ಅವನ ವಶದಲ್ಲಿದ್ದರು, ಪ್ರೀತಿಯಿಂದಲ್ಲ. ಜನ್ಮಾಂತರ ಸಂಸ್ಕಾರದಿಂದ ಕೃಷ್ಣನಲ್ಲಿಯೂ ಪಾಂಡವರಲ್ಲಿಯೂ ಪ್ರೀತಿಯುಕ್ತರಾಗಿಯೇ ಇದ್ದ ಅವರು ಈಗ ಪಾಂಡವರ ಮತ್ತು ಕೃಷ್ಣನ ಬಲವನ್ನು ಅರಿತ ಮೇಲೆ ಜರಾಸಂಧನ ಭಯವನ್ನು ತೊರೆದು ಅವರನ್ನೇ ಆಶ್ರಯಿಸಿದರು.

ಅಪಿ ತಂ ಬಹುಶಃ ಕೃಷ್ಣವಿಜಿತಂ ನೈವ ತತ್ಯಜುಃ।
ಆಸುರಾಃ ಪೂರ್ವಸಂಸ್ಕಾರಾತ್ ಸಂಸ್ಕಾರೋ ಬಲವಾನ್ ಯತಃ ॥ ೧೬೫ ॥

ಜರಾಸಂಧ ಅನೇಕ ಬಾರಿ ಕೃಷ್ಣನಿಂದ ಪರಾಜಿತನಾಗಿದ್ದರೂ ಅಸುರರು ಪೂರ್ವಜನ್ಮ ಸಂಸ್ಕಾರದಿಂದಲೆ ಅವನನ್ನು ಬಿಡಲಿಲ್ಲ. ಏಕೆಂದರೆ ಸಂಸ್ಕಾರ ಬಲವತ್ತಾಗಿರುತ್ತದೆ.

ದೇವಾ ಹಿ ಕಾರಣಾದನ್ಯಾನಾಶ್ರಯಂತೋಽಪಿ ನಾಂತರಮ್ ।
ಸ್ನೇಹಂ ತ್ಯಜಂತಿ ದೇವೇಷು ತಥಾನ್ಯೇಷ್ವಪಿ ಚ ಸ್ಫುಟಮ್ ॥ ೧೬೬ ॥

ದೇವತೆಗಳು ಕಾರಣಾಂತರದಿಂದ ಅಸುರರನ್ನು ಆಶ್ರಯಿಸಿದರೂ ದೇವತೆಗಳಲ್ಲಿ ಅಂತರಂಗದ ಸ್ನೇಹವನ್ನು ಬಿಡಲಾರರು. ಹಾಗೇ ಅಸುರರೂ ಅಸುರರ ಮೇಲಿನ ಸ್ನೇಹವನ್ನು ಬಿಡಲಾರರು.

ಧೃತರಾಷ್ಟ್ರೋ ಬಲಂ ಜ್ಞಾತ್ವಾ ಬಹುಶೋ ಭೀಮಪಾರ್ಥಯೋಃ ।
ದೈವತ್ವಾಚ್ಚಸ್ವಭಾವೇನ ಜ್ಯೇಷ್ಠತ್ವಾದ್ ಧರ್ಮಜಸ್ಯ ಚ ।
ಸುಪ್ರೀತ ಏವ ತಂ ಚಕ್ರೇ ಯೌವರಾಜ್ಯೇಽಭಿಷೇಕಿಣಮ್ ॥ ೧೬೭ ॥

ಧೃತರಾಷ್ಟ್ರ ಭೀಮಾರ್ಜುನರ ಬಲವನ್ನು ಅನೇಕ ಪ್ರಸಂಗಗಳಲ್ಲಿ ಅರಿತುಕೊಂಡು, ಸ್ವತಃ ದೇವತೆಯಾದ್ದರಿಂದ ಸ್ವಭಾವದಿಂದಲೂ, ಧರ್ಮರಾಜ ಮಕ್ಕಳಲ್ಲಿ ಹಿರಿಯನಾದ್ದರಿಂದಲೂ ಪ್ರೀತಿಪೂರ್ವಕವಾಗಿಯೇ ಅವನನ್ನು ಯುವರಾಜ ಪದವಿಯಲ್ಲಿ ಅಭಿಷೇಕ ಮಾಡಿದ.

ಭೀಮಾರ್ಜುನಾವಥೋ ಜಿತ್ವಾ ಸರ್ವದಿಕ್ಷು ಚ ಭೂಪತೀನ್ ।
ಚಕ್ರತುಃ ಕರದಾನ್ ಸರ್ವಾನ್ ಧೃತರಾಷ್ಟ್ರಸ್ಯ ದುರ್ಜಯೌ ॥ ೧೬೮ ॥

ಬಳಿಕ ಯಾರಿಗೂ ಸೋಲದಿದ್ದ ಭೀಮಾರ್ಜುನರು ಎಲ್ಲ ದಿಕ್ಕುಗಳಲ್ಲಿ ರಾಜರನ್ನು ಗೆದ್ದು ಅವರು ಧೃತರಾಷ್ಟ್ರನಿಗೆ ಕಪ್ಪಕೊಡುವಂತೆ ಮಾಡಿದರು.

ತಯೋಃ ಪ್ರೀತೋಽಭವತ್ ಸೋಽಪಿ ಪೌರಜಾನಪದಾಸ್ತಥಾ ।
ಭೀಷ್ಮದ್ರೋಣ ಮುಖಾಃ ಸರ್ವೇಽಪ್ಯತಿಮಾನುಷ ಕರ್ಮಣಾ ॥ ೧೬೯ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯೇ ಭೀಮಾರ್ಜುನ
ದಿಗ್ವಿಜಯೋ ನಾಮ ಅಷ್ಟಾದಶೋಽಧ್ಯಾಯಃ ॥

ಭೀಮಾರ್ಜುನರ ಅತಿಮಾನುಷ ಕರ್ಮದಿಂದ ಧೃತರಾಷ್ಟ್ರ ಸಂತುಷ್ಟನಾದ. ಎಲ್ಲ ನಾಗರಿಕರೂ ದೇಶವಾಸಿಗಳೂ ಭೀಷ್ಮ ದ್ರೋಣಾದಿಗಳೂ ಸಂತುಷ್ಟರಾದರು.

ಶ್ರೀಮದಾನಂದತೀರ್ಥ ಭಗವತ್ಪಾದರು ರಚಿಸಿದ ಮಹಾಭಾರತ
ತಾತ್ಪರ್ಯನಿರ್ಣಯದಲ್ಲಿ ಭೀಮಾರ್ಜುನ ದಿಗ್ವಿಜಯವೆಂಬ
ಹದಿನೆಂಟನೆ ಅಧ್ಯಾಯ ಮುಗಿಯಿತು.

ಶ್ರೀಪುದಾನಂದತೀರ್ಥಭಗವತ್ಪಾದರು ರಚಿಸಿದ

ಸರ್ವಮೂಲ ಗ್ರಂಥಗಳು

(ಕನ್ನಡ ಅನುವಾದ ವಿವರಣೆ ಸಹಿತ)

ಸಂಪುಟ-೮

ಮಹಾಭಾರತತಾತ್ಪರ್ಯನಿರ್ಣಯ

ಭಾಗ - ೨

(೧೦ನೇ ಅಧ್ಯಾಯದಿಂದ ೧೮ನೇ ಅಧ್ಯಾಯದವರೆಗೆ)

